ಡಾ. ಎಂ. ಎಂ. ಕಲಬುರ್ಗಿ
ಸಮಗ್ರ ಸಾಹಿತ್ಯ

ಸಂಪುಟ
೧೦

ವಚನ ಸಾಹಿತ್ಯ : ಭಾಗ-೨



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೧೦ : ವಚನ ಸಾಹಿತ್ಯ : ಭಾಗ-೨

❖

- ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ
- ಸಿದ್ಧರಾಮಯ್ಯದೇವರ ವಚನಗಳು

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಗುರುಲಿಂಗ ಕಾಪಸೆ

ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೮

COMPLETE WORK OF DR. M.M.KALBURGI
VOLUME - 10 : VACHANA SAHITY : BHAGA-2
Edited by : Dr. Gurulinga Kapase, Dharwad

Published by : Dr. P.G. Halakatti Research Centre
B.L.D.E. Association, Vijayapur, Karnatak

©

First Edition : 2020
Pages : xxxvi + 872=908

Copies: 1000
Price Rs: 450/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೧೦-ವಚನ ಸಾಹಿತ್ಯ : ಭಾಗ-೨

ಸಂಪಾದಕರು : ಡಾ. ಗುರುಲಿಂಗ ಕಾಪಸೆ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೨೦
ಪುಟಗಳು: xxxvi + ೮೭೨=೯೦೮

ಪ್ರತಿಗಳು: ೧೦೦೦
ಬೆಲೆ ರೂ: ೪೫೦/-

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು-ನುಡಿ-ಸಂಸ್ಕೃತಿ-ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ-ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ-ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ-೧, ೩೧. ಮಾರ್ಗ-೨, ೩೨. ಮಾರ್ಗ-೩, ೩೩. ಮಾರ್ಗ-೪, ೩೪. ಮಾರ್ಗ-೫, ೩೫. ಮಾರ್ಗ-೬, ೩೬. ಮಾರ್ಗ-೭, ೩೭. ಮಾರ್ಗ-೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ-೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ-೨, ೫೦. ವಚನ ಸಂಕಲನ ಸಂಪುಟ-೪, ೫೧. ವಚನ ಸಂಕಲನ ಸಂಪುಟ-೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ-೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ-೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ-೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ-೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ-೨, ೯೧. ಬಸವ ಮಾರ್ಗ-೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧-೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ-೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು-ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಚೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ–ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪–೭–೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩–೯–೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ —ಸಂ. ಶಶಿಧರ ತೋಡ್ಕರ

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ —ಸಂ. ಡಾ. ಗುರುಪಾದ ಮರಿಗುದ್ದಿ

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ —ಸಂ. ಡಾ. ಎಸ್. ಕೆ. ಕೊಪ್ಪಾ

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ
೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ —ಸಂ. ಡಾ. ಪಂಡಿತ ರಾಠೋಡ

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ —ಸಂ. ಡಾ. ಪಂಡಿತ ರಾಠೋಡ

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ —ಸಂ. ಡಾ. ವೀರಣ್ಣ ರಾಜೂರ

೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ

೨. ಶಬ್ದಮಣಿದರ್ಪಣ ಸಂಗ್ರಹ

೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ

೪. ಆದಯ್ಯನ ಲಘುಕೃತಿಗಳು

೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ

೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ಗುಂಡಬಸವೇಶ್ವರ ಪುರಾಣ

೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ-೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ
೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ-೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ-೧
೨. ಕಿತ್ತೂರ ಸಂಸ್ಥಾನ ಸಾಹಿತ್ಯ-೨
೩. ಕಿತ್ತೂರ ಸಂಸ್ಥಾನ ಸಾಹಿತ್ಯ-೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ-೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ
೩. ಮಡಿವಾಳಪ್ಪ ಸಾಸನೂರ ಬದುಕು-ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ-೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ-೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ-೪ –ಸಂ. ಡಾ. ವಿ.ಎಸ್. ಮಾಳಿ

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ-೧ –ಸಂ. ಡಾ. ಕೆ. ರವೀಂದ್ರನಾಥ

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ-೨ –ಸಂ. ಡಾ. ಕೆ. ರವೀಂದ್ರನಾಥ

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ **–ಸಂ. ಡಾ. ಕೆ. ರವೀಂದ್ರನಾಥ**
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ **–ಸಂ. ಡಾ. ಕೆ. ರವೀಂದ್ರನಾಥ**
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ **–ಸಂ. ಡಾ. ಕೆ. ರವೀಂದ್ರನಾಥ**
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಚಿತ್ರ **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಪತ್ರ–ವರದಿಗಳು **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಆಡಿಯೋ–ವಿಡಿಯೋ **–ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ-ವಿಶ್ವಾಸ-ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ-ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ-ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ-ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.

❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಗುರುಲಿಂಗ ಕಾಪಸೆ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಗುರುಲಿಂಗ ಕಾಪಸೆ

ಕನ್ನಡ ಸಾಹಿತ್ಯದ ಮಹತ್ವದ ಭಾಗವಾಗಿರುವ 'ವಚನಸಾಹಿತ್ಯ' ಕಳೆದ ಶತಮಾನದಲ್ಲಿ ಸಂಶೋಧಕರ, ವಿಮರ್ಶಕರ, ಸಂಸ್ಕೃತಿ ಚಿಂತಕರ, ಹಾಗೆಯೇ ಅಧ್ಯಾತ್ಮಿಕ ಸಾಧಕರ ಗಮನವನ್ನು ತೀವ್ರವಾಗಿ ಸೆಳೆದುಕೊಂಡಿತು. ಈ ಸಾಹಿತ್ಯದಲ್ಲಿ ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಚಿಂತನೆಗಳಿರುವಂತೆ ವರ್ಣವ್ಯವಸ್ಥೆ, ವರ್ಗವ್ಯವಸ್ಥೆ, ಲಿಂಗತಾರತಮ್ಯಗಳನ್ನು ವಿರೋಧಿಸುವಂಥ ಕ್ರಾಂತಿಕಾರಿ ವಿಚಾರಗಳಿವೆ. ಮಾನವ ಸಮಾನತೆಯನ್ನು ಬಯಸುವ ಪ್ರಗತಿಪರರು ಇಲ್ಲಿಯ ವಿಚಾರಧಾರೆಗೆ ಮನಸೋಲುವುದು ಸಹಜ. ಇಲ್ಲಿಯವರೆಗೆ ಛಂದೋಬದ್ಧವಾದ ಹಳೆಗನ್ನಡದ ಜಾಯಮಾನದಲ್ಲಿ ಸೃಷ್ಟಿಯಾಗುತ್ತಿದ್ದ ಸಾಹಿತ್ಯ ಸರಳಗನ್ನಡದ ಗದ್ಯಕ್ಕೆ ಹತ್ತಿರವಾಗಿ ನವೀನ ರೂಪವನ್ನು ಪಡೆದುಕೊಂಡಿತು. ಪಂಡಿತಮಾನ್ಯವೆನಿಸುತ್ತಿದ್ದ ಸಾಹಿತ್ಯ ಶ್ರೀಸಾಮಾನ್ಯನ ಹತ್ತಿರಕ್ಕೆ ಬರುವಂತಾಯಿತು. ಈ ಎಲ್ಲ ಬದಲಾವಣೆ ಸಹಜವೆನಿಸುವಂತಿದ್ದರೂ ಅದೊಂದು ಕ್ರಾಂತಿಕಾರಕ ಅನುಭವವೇ ಆಗಿತ್ತು. ಸಾಹಿತ್ಯದಿಂದ ದೂರವಿದ್ದ ಶ್ರೀಸಾಮಾನ್ಯರು, ಮಹಿಳೆಯರು ಬರೆಯುವಂತಾದುದು ದಾಖಲೆಯಾಗುವಂತಹ ಪರಿವರ್ತನೆಯೇ. ಒಟ್ಟಂದದಲ್ಲಿ ಕನ್ನಡ ಸಾಹಿತ್ಯವು ವಿಶ್ವಸಾಹಿತ್ಯಕ್ಕೆ ನೀಡಿದ ಕೊಡುಗೆಯಿದೆಂದು ಪಾಶ್ಚಾತ್ಯ ವಿದ್ವಾಂಸರ ಪ್ರಶಂಸೆಗೂ 'ವಚನಸಾಹಿತ್ಯ' ಪಾತ್ರವಾಯಿತು.

ತಾಡವೋಲೆಗಳಲ್ಲಿ–ಮಠಮಂದಿರಗಳಲ್ಲಿ–ಸಿಕ್ಕುಕೊಂಡಿದ್ದ ಈ ಸಾಹಿತ್ಯ ಬೆಳಕಿಗೆ ಬರುವಂತೆ ಮಾಡಿದವರಲ್ಲಿ ಇಂದು 'ವಚನಪಿತಾಮಹ' ಎಂದು ಗುರುತಿಸಲ್ಪಡುವ ಡಾ. ಫ.ಗು. ಹಳಕಟ್ಟಿಯವರು ಪ್ರಮುಖರು. ಅವರದು ಸಮರ್ಪಣಭಾವದ ತಪಸ್ಸು. ಅವರ ಆ ಕಾರ್ಯ ಕನ್ನಡ ವಿದ್ವಾಂಸರ ಗಮನವನ್ನು ತೀವ್ರವಾಗಿ ಸೆಳೆದುಕೊಂಡಿತು. ವಚನಸಾಹಿತ್ಯದ ಸಂಗ್ರಹ, ಸಂಪಾದನ, ವ್ಯಾಖ್ಯಾನ ಇತ್ಯಾದಿಗಳು ಆ ಮುಂದಿನ ದಿನಗಳಲ್ಲಿ ನಡೆಯುತ್ತಲೇ ಬಂದವು. ಬರುತ್ತಲೂ ಇವೆ.

ಈ ಕಾರ್ಯದಲ್ಲಿ ಆಧುನಿಕ ವಿದ್ವಾಂಸರಲ್ಲಿ, ಸಂಶೋಧಕರಲ್ಲಿ ಎದ್ದು ಕಾಣುವ ಹೆಸರು ಡಾ. ಎಂ.ಎಂ. ಕಲಬುರ್ಗಿಯವರದು. ಅವರು ಕಳೆದ ಮೂರು–ನಾಲ್ಕು ದಶಕಗಳ ಅವಧಿಯಲ್ಲಿ ಮಾಡಿದ ಕಾರ್ಯ ಅವಿಸ್ಮರಣೀಯವಾಗಿದೆ. ಶಾಸನಶಾಸ್ತ್ರ, ಲಿಪಿಶಾಸ್ತ್ರ, ಸಂಪಾದನಾ ಶಾಸ್ತ್ರ, ಶಿಷ್ಟ ಸಾಹಿತ್ಯ, ಜನಪದ ಸಾಹಿತ್ಯ–ಇತ್ಯಾದಿ ಕ್ಷೇತ್ರಗಳಲ್ಲಿ ಅವರು ಮಾಡಿದ ಕಾರ್ಯ ಕಣ್ಣುಕುಕ್ಕಿಸುವಂತಿದೆ.

ಸೃಜನಶೀಲ ಸಾಹಿತ್ಯಕ್ಕೂ ಅಂದರೆ, ಕವಿತೆ–ನಾಟಕ–ಇತ್ಯಾದಿಗಳಿಗೂ ಅವರ ಕೊಡುಗೆಯಿದೆ. ಒಟ್ಟು ನಲವತ್ತು ಸಂಪುಟಗಳಲ್ಲಿ ಪ್ರಕಟವಾಗುತ್ತಿರುವ ಅವರ ಸಾಹಿತ್ಯದಲ್ಲಿ ಈ 'ಚೆನ್ನಬಸವಣ್ಣನವರ ಷಟ್ಸ್ಥಲ ಮಹಾಸಂಪುಟ' ಮತ್ತು 'ಸಿದ್ಧರಾಮಯ್ಯದೇವರ ವಚನಗಳು' ಎಂಬ ಕೃತಿಗಳ ಸಂಯುಕ್ತ ಸಂಪುಟವೂ ಒಂದು. ಸಂಯೋಜನೆಯ ದೃಷ್ಟಿಯಿಂದ ಸಂಪಾದಕ ಮಂಡಲಿಯವರು ಮಾಡಿಕೊಂಡ ಹೊಂದಾಣಿಕೆಯಿದು.

ಈ ಎರಡೂ ಗ್ರಂಥಗಳು ಈ ಮೊದಲು ಬೇರೆ ಬೇರೆ ಪ್ರಕಾಶನದಿಂದ ಪ್ರಕಟವಾಗಿವೆ:

೧. ಚೆನ್ನಬಸವಣ್ಣನವರ ಷಟ್ಸ್ಥಲ ಮಹಾಸಂಪುಟ : ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ.

೨. ಸಿದ್ಧರಾಮಯ್ಯದೇವರ ವಚನಗಳು: ಕನ್ನಡ ಸಾಹಿತ್ಯ ಪರಿಷತ್ತು–ಚಾಮರಾಜಪೇಟೆ, ಬೆಂಗಳೂರು. ಈ ಗ್ರಂಥದ ಸಂಪಾದಕರು : ಡಾ. ಎಂ.ಎಂ.ಕಲಬುರ್ಗಿ ಮತ್ತು ಡಾ. ಸಾ.ಶಿ. ಮರುಳಯ್ಯ.

'ಚೆನ್ನಬಸವಣ್ಣನವರ ಷಟ್ಸ್ಥಲ ಮಹಾಸಂಪುಟ' ದಲ್ಲಿ ಮೂರು ಭಾಗಗಳಿವೆ: ಈ ವಿಷಯವನ್ನು ಗ್ರಂಥದ ಪ್ರಾರಂಭದಲ್ಲಿ ಪ್ರಕಟಿಸಲಾಗಿದೆ. ಅದು ಹೀಗಿದೆ: "ಇದು ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ. ಮೂರು ಬಗೆಯ ಷಟ್‌ಸ್ಥಲ ಕ್ರಮದ ಮೂರು ವಚನ ಕೃತಿಗಳ ಸಂಯುಕ್ತ ಸಂಪುಟವಿದು. ಈ ಮೊದಲು ಪ್ರಕಟವಾಗಿದ್ದ 'ಅನುಭಾವ ಷಟ್‌ಸ್ಥಲದ ವಚನಗಳು' ಕೃತಿಯನ್ನು ಒಳಗೊಂಡು ಇನ್ನೆರಡು ಹೊಸಕೃತಿಗಳು ಇಲ್ಲಿ ಮೊದಲು ಕತ್ತಲೆಯಿಂದ ಬೆಳಕಿಗೆ ಬರುತ್ತಲಿವೆ. ಇದರಿಂದಾಗಿ ಚೆನ್ನಬಸವಣ್ಣನವರ ೮೧ ರಷ್ಟು ಹೊಸ ವಚನಗಳು ಮೊದಲ ಸಲ ಬೆಳಕು ಕಾಣುತ್ತಲಿವೆ." ಸಂಪಾದಕರ ಈ ಟಿಪ್ಪಣಿ ಗಮನಿಸುವಂತಹದು.

ಡಾ. ಕಲಬುರ್ಗಿಯವರು ಬರೆದ ಪ್ರಸ್ತಾವನೆ ಸಂಶೋಧನಾತ್ಮಕವಾಗಿಯೂ ಇದೆ; ವಿದ್ವತ್ಪೂರ್ಣವಾಗಿಯೂ ಇದೆ. ಅಕ್ಕನಾಗಲಾಂಬೆ ಬಸವಣ್ಣನವರ ಅಕ್ಕ ಎಂಬುದು ಇಲ್ಲಿವರೆಗೂ ಪ್ರಚಲಿತವಾಗಿರುವ ವಿಷಯ. ಆದರೆ ಆಕೆ ಅವರ ತಂಗಿ ಎಂಬುದು ಎರಡು ಮಹತ್ವದ ಕೃತಿಗಳಿಂದ ತಿಳಿದುಬರುತ್ತದೆ. ೧. ಭೀಮಕವಿಯು 'ನಿಜವನಿತೆ ಗಂಗಾದೇವಿಯುಂ ತನ್ನನುಜೆ ನಾಗಲದೇವಿಯುಂ' ಕೂಡಿಕೊಂಡು ಕೂಡಲಸಂಗಮಕ್ಕೆ ಬಸವಣ್ಣ ಹೋದನೆಂದು ಹೇಳುತ್ತಾನೆ. ೨. ಪ್ರಸಾದಿ ಮಹಾದೇವಯ್ಯ 'ತನ್ನ ಕಿರಿಯಳಪ್ಪ ನಾಗಲಾಂಬಿಕೆ ಸಹಿತ' ಬಸವಣ್ಣನವರು ಕಪ್ಪಡಿಸಂಗಮಕ್ಕೆ ಹೋದರೆಂದು ಸ್ಪಷ್ಟವಾಗಿ ತಿಳಿಸುತ್ತಾನೆ. 'ಅಕ್ಕ' ಗೌರವ ಸೂಚಕಪದವಾಗಿ ಬಳಸಿರುವ ಸಾಧ್ಯತೆಯನ್ನು ಡಾ. ಕಲಬುರ್ಗಿ ಸೂಚಿಸುತ್ತಾರೆ.

ನಾಗಲಾಂಬಿಕೆ ಚೆನ್ನಬಸವಣ್ಣನವರ ತಾಯಿ, ತಂದೆ ಶಿವದೇವನೆಂಬುದು ಸಿಂಗಿರಾಜ ಪುರಾಣ ಮತ್ತು ದೇವಾಂಗ ದಾಸಿಮಯ್ಯ ಪುರಾಣ ಹೇಳುವುದನ್ನು ಡಾ. ಕಲಬುರ್ಗಿಯವರು ಗಮನಿಸಿದ್ದಾರೆ.

ಸ್ಥಲಗಳ ವಿಷಯದಲ್ಲಿಯೂ ಚೆನ್ನಬಸವಣ್ಣನವರ ಅಭಿಪ್ರಾಯ ಒಪ್ಪುವಂತಹದಾಗಿದೆ. ಉಳಿದಂತೆ ಪ್ರಸ್ತಾವನೆಯಲ್ಲಿ ಸಂಶೋಧನೆ ಹಾಗೂ ಚಿಂತನೆ ಎರಡೂ ಸ್ವೀಕಾರಾರ್ಹವಾಗಿವೆ.

ಡಾ. ಕಲಬುರ್ಗಿಯವರು 'ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ'ಕ್ಕೆ ಬರೆದ ಪ್ರಸ್ತಾವನೆಯೇ ಬೇರೆ, 'ಸಿದ್ಧರಾಮಯ್ಯ ದೇವರವಚನಗಳು' ಗ್ರಂಥಕ್ಕೆ ಬರೆದ ಪ್ರಸ್ತಾವನೆಯೇ

ಬೇರೆ. ಅಲ್ಲಿ ಐತಿಹಾಸಿಕ ವಿಚಾರಗಳು ಮಹತ್ವದವಾದರೆ ಇಲ್ಲಿ ತತ್ವವಿಚಾರಗಳು ಗಮನಸೆಳೆಯುತ್ತವೆ. ಚೆನ್ನಬಸವಣ್ಣ ಧಾರ್ಮಿಕ ಹಿನ್ನೆಲೆಯಲ್ಲಿ ಯೋಚನೆ ಮಾಡಿದರೆ, ಸಿದ್ಧರಾಮ ಆಧ್ಯಾತ್ಮಿಕ ಸಾಧನೆಯಲ್ಲಿ ಚಿಂತನೆ ಮಾಡುತ್ತಾನೆ. ಇದರಲ್ಲಿ ಅವನ ಯೋಗಿಕ ದೃಷ್ಟಿ ಕೂಡ ಮುಂದೆಬರುತ್ತದೆ.

ಯೋಗಿಗಳು ಗುರುತಿಸುವ "ಆಧಾರ, ಸ್ವಾದಿಷ್ಟ, ಅನಾಹತ, ವಿಶುದ್ಧಿ ಆಜ್ಞೆಯೆಂದೆಂಬವರೆಲ್ಲಾ ಆಧಾರ ಸ್ವಾದಿಷ್ಟ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೇಯವಾವುದು ಬಲ್ಲರೆ ಹೇಳಿರೆ" ಎಂಬ ಪ್ರಶ್ನೆಯನ್ನು ಮುಂದಿಟ್ಟ ಸಿದ್ಧಗುರುವಿನ ವಚನವೊಂದಕ್ಕೆ ತಾನೇ ಉತ್ತರಿಸುತ್ತಾ 'ಆದಿಯುಳ್ಳುದೆ ಆಧಾರ' ಅಂದರೆ ಭಕ್ತಿಯನ್ನೇ ಮೂಲ ಧಾತುವನ್ನಾಗಿಸಿಕೊಂಡದ್ದು ಆಧಾರ, 'ಅನಾಹತವ ಕೂಡಿಪ್ಪುದೆ ಸ್ವಾದಿಷ್ಟ' ಅಂದರೆ ಅಂಗಲಿಂಗ ಸಹಯೋಗ ಸಾಮರಸ್ಯವೇ ಅನಾಹತ ಮತ್ತು ಸ್ವಾದಿಷ್ಟಗಳು, ಅವು ಭಿನ್ನಚಕ್ರಗಳೇನಲ್ಲ 'ಮಣಿಯ ಬೆಳಗಲಿಪ್ಪುದೇ ಮಣಿಪೂರಕ'. ಇಲ್ಲಿನ ಮಣಿ ಕೋಟಿ ದಿನಮಣಿ ಪ್ರಭಾಪೂರ್ಣ ಪರಶಿವ ಪರಂಜ್ಯೋತಿ. ಆ ಬೆಳಗಿನೊಳಗಣ ಬೆಳಗಿನಲ್ಲಿ ಆತ್ಮ ತನ್ನ ತಾ ಬೆಳಗಿಸಿಕೊಂಬುದೇ ಮಣಿಪೂರಕ. 'ಆವುದಲ್ಲವೆಂಬುದನತಿಗಳೆದುದೇ ವಿಶುದ್ಧಿ' ಅಂದರೆ ಅಹುದು ಅಲ್ಲ ಎಂಬವುಗಳಾಚೆಗಿನ ಸ್ಥಿತಿ. ಅರ್ಥಾತ್ ಅರಿವರತು ಮರಹು ನಷ್ಟವಾಗಬೇಕೆಂಬ ಭಾವದ ಬಯಲಾವಸ್ಥೆ. ಅದೇ ವಿಶುದ್ಧಿ. 'ಜೀವಂಗಳ ಮೇಲೆ ದಯವುಳ್ಳುದೆ ಆಜ್ಞೆ'. ಅಹುದು, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ದಯಾಗುಣವೇ ಆಜ್ಞಾಚಕ್ರ. ಇಂತಪ್ಪುದೀ ಯೋಗ. ಇದು ಸಿದ್ಧರಾಮ ಯೋಗದ ಚಕ್ರಗಳಿಗೆ ನೀಡಿದ ಅರ್ಥ. ಇದು ರಾಜಯೋಗಕ್ಕಿಂತ ಬಿನ್ನವಾದುದು. ಆದರೆ ಶಿವಯೋಗಕ್ಕೆ ಹತ್ತಿರವಾದುದು.

ಸಿದ್ಧರಾಮನ ಅಂಕಿತ ಕಪಿಲಸಿದ್ಧ ಮಲ್ಲಿಕಾರ್ಜುನ. ಈ ಮಲ್ಲಿಕಾರ್ಜುನ ಶ್ರೀಶೈಲ ಮಲ್ಲಿಕಾರ್ಜುನನೇ. 'ಕಪಿಲಸಿದ್ಧ' ಎಂಬ ಪದವನ್ನು ಡಾ. ಕಲಬುರ್ಗಿಯವರು ವಿಶೇಷ ರೀತಿಯಲ್ಲಿ ಅರ್ಥೈಸುತ್ತಿರುವುದು ಲಕ್ಷಿಸುವಂತಹುದು. "ಕಪಿಲಸಿದ್ಧ ಅಂದರೆ ಗೋವಿನ ರೂಪದ ಸಿದ್ಧಪುರುಷ. ಸಿದ್ಧರಾಮ ಕೃಷಿ ಮತ್ತು ಪಶುಪಾಲನೆ ಕಾಯಕವನ್ನು ಒಲಿದವನು. ಕಾಯಕದಲ್ಲೇ ತನ್ನ ಆರಾಧ್ಯ ದೈವವನ್ನು ಕಂಡವನು. ಅವನ ವಚನಗಳಲ್ಲಿ ಅನೇಕ ಕಡೆಗಳಲ್ಲಿ ಕೃಷಿ ಪ್ರತಿಮೆಗಳು ಬರುತ್ತವೆ. ಆ ಎಡೆಗಳಲ್ಲೆಲ್ಲಾ ತನ್ನನ್ನು ಕಾಯಕಯೋಗಿಯಾಗಿ ಗುರುತಿಸಿಕೊಂಡಿದ್ದಾನೆ. ಅವನ ಆತ್ಮಾನುಸಂಧಾನಕ್ಕೆ ಪಾತ್ರವಾದ ಕಪಿಲೆ ಅಥವಾ ಕವಿಲೆ. ಆ ಕವಿಲೆ ಸಿದ್ಧನೇ ಅವನ ಆರಾಧ್ಯ ದೈವ." ಹೀಗೆ ಪ್ರತಿಪಾದಿಸುವ ಡಾ. ಕಲಬುರ್ಗಿಯವರ ವಿವರಣೆ ತರ್ಕಸಮ್ಮತವಾದುದು. ಆದರೆ ಸಿದ್ಧರಾಮನ ಆರಾಧ್ಯದೈವ ಕಪಿಲಸಿದ್ಧ ಮಲ್ಲಿಕಾರ್ಜುನನೇ.

ಹನ್ನೆರಡನೆಯ ಶತಮಾನದ ಪ್ರಮುಖ ವಚನಕಾರ ಸಿದ್ಧರಾಮ. ಆದರೆ ಅವನ ವಚನಗಳಿಗೆ ಪದ್ಯದ ಲಯವಿರುವುದನ್ನು ಗುರುತಿಸಬಹುದು. ಅಷ್ಟೇ ಅಲ್ಲ ಅವನು ಛಂದೋಬದ್ಧ 'ತ್ರಿವಿಧಿ'ಗಳನ್ನೂ ಬರೆದಿದ್ದಾನೆ. ಈ ಸಂಗ್ರಹದಲ್ಲಿ ಅವನ್ನೂ ಗುರುತಿಸಬಹುದು. ಷಟ್ಪದ ಕುರಿತೂ ಡಾ. ಕಲಬುರ್ಗಿಯವರು ಈ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದೂ ಗಮನಾರ್ಹವಾಗಿದೆ. ಸಿದ್ಧರಾಮನ ವ್ಯಕ್ತಿ ವೈಶಿಷ್ಟ್ಯದ ದೃಷ್ಟಿಯಿಂದಲೂ ವಚನ ಸಾಹಿತ್ಯದ ಪ್ರಯೋಗ ದೃಷ್ಟಿಯಿಂದಲೂ ಡಾ. ಕಲಬುರ್ಗಿಯವರ ಇಲ್ಲಿಯ ಪ್ರಸ್ತಾವನೆ ಗಮನಾರ್ಹವಾದದ್ದು ಎನಿಸುತ್ತದೆ.

ವಚನ ಸಾಹಿತ್ಯದಲ್ಲಿ ಹಾಗೂ ಶರಣರ ಬದುಕಿನಲ್ಲಿ ಚೆನ್ನಬಸವಣ್ಣ, ಸಿದ್ಧರಾಮರಿಬ್ಬರೂ ಅತ್ಯಂತ ಮಹತ್ವದ ವ್ಯಕ್ತಿಗಳೇ. ಈ ಇಬ್ಬರ ವಚನಗಳನ್ನು ಒಂದು ಸಂಪುಟದಲ್ಲಿ ತರುವುದರಲ್ಲಿ ಒಂದು ವಿಶೇಷತೆಯಿದೆ ಎನಿಸುತ್ತದೆ. ಚೆನ್ನಬಸವಣ್ಣ ತತ್ತ್ವನಿಷ್ಠ ವಿಚಾರವಾದಿ, ಸಿದ್ಧರಾಮ ಯೋಗನಿಷ್ಠ ಚಿಂತಕ. ಚೆನ್ನಬಸವಣ್ಣ ಬಸವಣ್ಣನವರ ಸೋದರಳಿಯ ಹಾಗೂ ಅವರ ಪ್ರಭಾವಲಯದಲ್ಲಿ ಬೆಳೆದವನಾದರೂ ಸ್ವತಂತ್ರ ವಿಚಾರವಾದಿ, ಸಿದ್ಧರಾಮ ನಾಥಪಂಥೀಯ ಹಿನ್ನೆಲೆಯುಳ್ಳವನು. ಅವನು ಜನಿಸಿದ್ದು ರೇವಣಸಿದ್ಧರ ಅನುಗ್ರಹದಿಂದ. ಮಂಗಳವೀಡು, ಸೊನ್ನಲಗಿ ನಾಥ ಪರಿಸರಕ್ಕೆ ಹತ್ತಿರವಾದವು. ರೇವಣಸಿದ್ಧರು ಸಿದ್ಧಪುರುಷರಾದರೂ ಗೃಹಸ್ಥರು. ಅವರು ಬಸವಕಾಲೀನ ಶರಣರಿಗಿಂತ ಹಿರಿಯ ತಲೆಮಾರಿನವರು. ಯೋಗಸಿದ್ಧರು. ಭೂತ–ಭವಿಷತ್‌ಗಳನ್ನು ತಿಳಿದವರು. ಅವರ ಮಗನಾಗಿದ್ದ ರುದ್ರಮುನಿ ಬಸವಣ್ಣ ರೂಪಿಸಿದ ಶರಣಸಮುದಾಯದಲ್ಲಿ ಬೆರೆತವರು. ಕಲ್ಯಾಣದ ಕ್ರಾಂತಿಯ ನಂತರ ಚದುರಿದ ಶರಣರಲ್ಲಿ ಅವರೂ ಒಬ್ಬರಾಗಿದ್ದರು. ಅವರು ಕೆಲಕಾಲ ಮಲಪ್ರಭೆಯ ತಟದಲ್ಲಿರುವ ಹುಣಸಿಕಟ್ಟಿಯಲ್ಲಿ ತಪಸ್ಸು ಮಾಡಿದ್ದು ತಿಳಿದುಬರುತ್ತದೆ. ಅದೇನೇ ಇರಲಿ, ಚೆನ್ನಬಸವಣ್ಣನವರು ಉಳವಿಕಡೆಗೆ ಹೊರಟಾಗ ಅವರ ಜೊತೆಗೆ ರುದ್ರಮುನಿಗಳು ಇರಬೇಕು.

ಸಿದ್ಧರಾಮನು ಚೆನ್ನಬಸವಣ್ಣನವರಿಂದ ದೀಕ್ಷಿತನಾಗಿ ಶಿವಯೋಗಿಯಾಗಿ ಬೆಳೆದವನು. ಈ ದೃಷ್ಟಿಯಿಂದ ಚೆನ್ನಬಸವಣ್ಣ ಗುರುಸ್ಥಾನದಲ್ಲಿದ್ದವರು. ಸಿದ್ಧರಾಮ ಅವರ ಶಿಷ್ಯನೆ. ಈ ಗುರು–ಶಿಷ್ಯರ ವಚನಗಳು ಈಗ ಒಂದೆಡೆ ಬರುತ್ತಿರುವುದು ವಿಶೇಷವೆನಿಸುತ್ತದೆ. ವಚನ ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಒಂದೇ ಧೋರಣೆಯ ಎರಡು ಭಿನ್ನ ನಿಲುವುಗಳು ಈ ಸಂಪುಟದಲ್ಲಿ ದೊರೆಯುತ್ತವೆ. ಈ ಭಿನ್ನತೆಯಲ್ಲಿ ತಾಕಲಾಟಗಳಿಲ್ಲ. ಕಾಯಕನಿಷ್ಠೆಗೆ, ಷಟ್‌ಸ್ಥಲ ಸಾಧನೆಗೆ, ಯೋಗ ಜೀವನಕ್ಕೆ ಮಾರ್ಗದರ್ಶನ ನೀಡುವ ವಿಚಾರಗಳು ಇಲ್ಲಿರುವುದನ್ನು ಕಾಣಬಹುದು. ಸಾಹಿತ್ಯಿಕ ದೃಷ್ಟಿಯಿಂದಲೂ ಇವರಿಬ್ಬರ ವಚನಗಳು ಗಮನಾರ್ಹವಾದವುಗಳೇ ಆಗಿವೆ. ವಚನ ಶಾಸ್ತ್ರವೂ ಅಹುದು, ಸಾಹಿತ್ಯವೂ ಅಹುದು. ಈ ಇಬ್ಬರಲ್ಲಿ ವೈಚಾರಿಕ ನಿಲುವುಗಳೂ ಇವೆ. ಈ ಇಬ್ಬರ ವಚನಗಳು ವಚನಸಾಹಿತ್ಯದ ಅಭ್ಯಾಸಿಗಳಿಗೆ ಮಾರ್ಗದರ್ಶನ ನೀಡುತ್ತವೆಂದು ನಂಬಲಾಗಿದೆ.

* * *

ಸಂಪಾದನೆಯ ಕಾರ್ಯದಲ್ಲಿ ಸಹಕರಿಸಿದ ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ ಅವರಿಗೆ, ಪೂರಕ ಸಾಹಿತ್ಯ ಒದಗಿಸಿದ ಬಿ. ಎಲ್.ಡಿ. ಇ. ಶಿಕ್ಷಣ ಸಂಸ್ಥೆಯ ಫ.ಗು. ಹಳಕಟ್ಟಿ ಕೇಂದ್ರದ ನಿರ್ದೇಶಕರಾದ ಡಾ. ಎಂ. ಎಸ್. ಮದಭಾವಿಯವರಿಗೆ, ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರಿಗೆ, ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಅವರಿಗೆ, ಸುಂದರವಾಗಿ ಸಂಪುಟ ಮುದ್ರಿಸಿದ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಅವರಿಗೆ ಕೃತಜ್ಞತೆಗಳು.

❖❖

*

ಪರಿವಿಡಿ

ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನಸಾಹಿತ್ಯ ಪ್ರಕಟಣ ಮಾಲೆ-೩೪

ಚೆನ್ನಬಸವಣ್ಣನವರ
ಷಟ್ಸ್ಥಲವಚನ ಮಹಾಸಂಪುಟ

ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

ಪ್ರಕಾಶಕರು
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ
೧೯೯೦

ಇದು ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ. ಮೂರು ಬಗೆಯ 'ಷಟ್ಸ್ಥಲ ಕ್ರಮ'ದ ಮೂರು ವಚನಕೃತಿಗಳ ಸಂಯುಕ್ತ ಸಂಪುಟವಿದು. ಈ ಮೊದಲು ಪ್ರಕಟವಾಗಿದ್ದ 'ಅನುಭಾವಷಟ್ಸ್ಥಲದ ವಚನಂಗಳು' ಕೃತಿಯನ್ನೂ ಒಳಗೊಂಡು ಇನ್ನೆರಡು ಹೊಸಕೃತಿಗಳು ಇಲ್ಲಿ ಮೊದಲಸಲ ಕತ್ತಲೆಯಿಂದ ಬೆಳಕಿಗೆ ಬರುತ್ತಲಿವೆ. ಇದರಿಂದಾಗಿ ಚೆನ್ನಬಸವಣ್ಣನವರ ೮೧ ರಷ್ಟು ಹೊಸ ವಚನಗಳು ಮೊದಲ ಸಲ ಬೆಳಕು ಕಾಣುತ್ತಲಿವೆ.

ಪ್ರಸ್ತಾವನೆ

ಎಂ.ಎಂ.ಕಲಬುರ್ಗಿ

ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ–ಈ ಮೂವರು ಹನ್ನೆರಡನೆಯ ಶತಮಾನದ ಶರಣಸಿದ್ಧಾಂತದ ಮೂರು ಪ್ರಮುಖಲಕ್ಷಣಗಳನ್ನು ಪ್ರತಿನಿಧಿಸುತ್ತಾರೆ. ಪ್ರಧಾನವಾಗಿ ಬಸವಣ್ಣನವರದು ಸಾಮಾಜಿಕಸಿದ್ಧಾಂತ, ಪ್ರಭುದೇವರದು ಆಧ್ಯಾತ್ಮಿಕಸಿದ್ಧಾಂತ, ಚೆನ್ನಬಸವಣ್ಣನವರದು ಧಾರ್ಮಿಕಸಿದ್ಧಾಂತ. ಇಲ್ಲಿ ಬಸವಣ್ಣನವರು ಮನುಷ್ಯನ ಸಾಮಾಜಿಕ ಜೀವನದ ಬಗ್ಗೆ, ಪ್ರಭುದೇವರು ಮನುಷ್ಯನ ಆಧ್ಯಾತ್ಮಿಕ ಜೀವನದ ಬಗ್ಗೆ ಹೆಚ್ಚು ಮಾತನಾಡಿದರೆ, ಚೆನ್ನಬಸವಣ್ಣನವರು ಲಿಂಗಾಯತ ಮನುಷ್ಯನ ತಾತ್ವಿಕಜೀವನದ ಬಗ್ಗೆ ಹೆಚ್ಚು ಮಾತನಾಡುತ್ತಾರೆ. ಹೀಗಾಗಿ ಕೆಲವೇ ವಚನಗಳನ್ನು ಹೊರತೆಗೆದರೆ ಬಸವಣ್ಣ, ಪ್ರಭುದೇವರ ರಚನೆಗಳು ಕ್ರಮವಾಗಿ ಶುದ್ಧ ಸಾಮಾಜಿಕ, ಶುದ್ಧ ಆಧ್ಯಾತ್ಮಿಕ ವಚನಸಂಪುಟಗಳಾಗಿ ಪರಿಣಮಿಸುತ್ತವೆ. ಕೆಲವೇ ಸಾಮಾಜಿಕ, ಆಧ್ಯಾತ್ಮಿಕ ವಚನಗಳನ್ನು ಹೊರತೆಗೆದರೆ ಚೆನ್ನಬಸವಣ್ಣನವರ ಕೃತಿ ಶುದ್ಧ ಲಿಂಗಾಯತ ಧಾರ್ಮಿಕ ವಚನಸಂಪುಟವಾಗಿ ಪರಿಣಮಿಸುತ್ತದೆ. ಈ ಕಾರಣದಿಂದಾಗಿ ಚೆನ್ನಬಸವಣ್ಣನವರಿಗೆ ಲಿಂಗಾಯತ ಧಾರ್ಮಿಕ ಪರಂಪರೆಯಲ್ಲಿ ಎಲ್ಲರಿಗಿಂತ ಮಿಗಿಲಾದ ಸ್ಥಾನಕೊಡುತ್ತ ಬರಲಾಗಿದೆ. ಇದರ ಫಲವಾಗಿ ಲಿಂಗಾಯತದ ಇತಿಹಾಸದುದ್ದಕ್ಕೂ ಬಸವಣ್ಣ, ಪ್ರಭುದೇವರ ಚಿಂತನೆಗಳು ಹಿಂದೆಬಿದ್ದು, ಚೆನ್ನಬಸವಣ್ಣನವರ ಚಿಂತನೆಗಳು ಮುನ್ನಡೆದು ಬಂದಿವೆ. ಬಸವಣ್ಣ, ಪ್ರಭುದೇವರ ವಚನಗಳಲ್ಲಿ ಶುದ್ಧ ಮಾನವತೆಯ ಚಿಂತನವಿರುವುದರಿಂದ ಅವು ಧಾರ್ಮಿಕರು ಮಾಡಬಹುದಾದ ಪಾಠಾಂತರ ದಾಳಿಯಿಂದ ದೂರ ಉಳಿದಿವೆ. ಚೆನ್ನಬಸವಣ್ಣನವರ ವಚನಗಳು ಧಾರ್ಮಿಕಚಿಂತನೆಗಳಾದುದರಿಂದ ಸಹಜವಾಗಿಯೇ ಎಲ್ಲ ಧಾರ್ಮಿಕ ಕೃತಿಗಳಿಗೆ ಅಂಟಬಹುದಾದ ಪಾಠಾಂತರ ದೋಷಗಳು ಇವರ ಚಿಂತನೆಗೂ ಕಾಲಕ್ರಮದಲ್ಲಿ ಅಂಟಿಕೊಂಡಿವೆ.

ಪರಿಸರ–ಚರಿತ್ರೆ

ಅಕಾಯಚರಿತ್ರೆ ಶರಣರ ಆದರ್ಶ. ಅವರು ತಮ್ಮ ಕಾಯಚರಿತ್ರೆಯನ್ನು ಬರೆಯಲಿಲ್ಲ, ಕವಿಗಳಿಂದ ಬರೆಯಿಸಲೂ ಇಲ್ಲ. ಮುಂಬರುವ ಪೀಳಿಗೆಗೆ ಆದರ್ಶವಾಗಿರಲೆಂದು ಆಮೇಲೆ ಬಂದ ಲಿಂಗಾಯತ ಕವಿಗಳು ಮಾತ್ರ ಶರಣರ ಚರಿತ್ರೆಯನ್ನು ಬರೆಯುತ್ತ ಬಂದರು. ಆದರೆ ಚರಿತ್ರೆಗಿಂತ ಮಿಗಿಲಾದ ಪುರಾಣಪ್ರಜ್ಞೆ ಮತ್ತು ಹದಿನೈದನೆಯ ಶತಮಾನದಲ್ಲಿ ಶರಣರ ಚರಿತ್ರೆಗೆ

ಕೊಟ್ಟ ಹೊಸತಿರುವು, ಇವುಗಳ ಜೊತೆ ಆಕರಗಳ ಅಭಾವ, ಈ ಅಭಾವವನ್ನು ಕಲ್ಪನೆಯಿಂದ ತುಂಬಿಕೊಂಡ ಪ್ರಮಾದ ಇತ್ಯಾದಿಗಳು ಸೇರಿಕೊಂಡು, ಲಿಂಗಾಯತ ಕವಿಗಳಿಂದ ಶರಣರ ಚರಿತ್ರೆಯ ವಿಷಯವಾಗಿ ಅನೇಕ ಗೊಂದಲಗಳು (confusions) ತಲೆಯೆತ್ತಿ ನಿಂತವು.

ಶರಣರ ಜೀವನಚರಿತ್ರೆಗೆ ಸಂಬಂಧಿಸಿದ ಆಕರಗಳು ನೋಡಲಿಕ್ಕೆ ವಿಪುಲವಾಗಿದ್ದರೂ ಅದರಲ್ಲಿ ಉಪಯೋಗಕ್ಕೆ ಬಾರದ ಸಾಮಗ್ರಿಯೇ ಹೆಚ್ಚು, ಉಪಯೋಗಕ್ಕೆ ಬರುವ ಸಾಮಗ್ರಿ ಕಡಿಮೆ. ಈ ಕಡಿಮೆ ಸಾಮಗ್ರಿಯಾದರೂ ವೈರುಧ್ಯಗಳಿಂದ ಕೂಡಿರುವುದರಿಂದ ಸಂಶೋಧಕನಿಗೆ ಸಾಮಗ್ರಿಯೇ ಒಂದು ಸಮಸ್ಯೆಯಾಗಿ ನಿಲ್ಲುತ್ತದೆ. ಇದನ್ನು ಬಿಡಿಸಲು ಹೋದರೆ ಅನೇಕ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಕೆಲವೊಮ್ಮೆ ಚರಿತ್ರೆಯ ಕೆಲವು ಮಗ್ಗಲುಗಳನ್ನು ಕಟ್ಟುವುದಕ್ಕೆ ಈ ಸಾಮಗ್ರಿ ಸಾಲದೇ ಹೋಗುತ್ತದೆ. ಇಂಥ ತೊಂದರೆಗಳ ಮಧ್ಯದಲ್ಲಿ ನಿಂತು ಲಭ್ಯ ಆಕರಗಳ ಸಹಾಯದಿಂದ ಚೆನ್ನಬಸವಣ್ಣನವರ ಚರಿತ್ರೆಯನ್ನು ಹೀಗೆ ರೂಪಿಸಬಹುದು:

ಪ್ರಸಿದ್ಧ ಶರಣರ ಜೊತೆ ಅಪ್ರಸಿದ್ಧ ಶರಣರನ್ನೂ ಕುರಿತು ಕಾವ್ಯ ಬರೆದಿರುವ ಚರಿತ್ರೆಯುಗದ ಹರಿಹರ-ರಾಘವಾಂಕರು ಸುಪ್ರಸಿದ್ಧ ಶರಣರಾದ ಚೆನ್ನಬಸವಣ್ಣನವರ, ಅವರ ತಾಯಿ ನಾಗಲಾಂಬಿಕೆಯವರ ಚರಿತ್ರೆ ಹೋಗಲಿ, ತಪ್ಪಿಯೂ ಇವರಿಬ್ಬರ ಹೆಸರನ್ನು ಹೇಳಿಲ್ಲ.[೧] ಈ ಮೌನಕ್ಕೆ ಕಾರಣ ಗೊತ್ತಾಗುತ್ತಿಲ್ಲ. 'ಪುರಾಣ ಯುಗ'ದ ಭೀಮಕವಿ (ಕ್ರಿ.ಶ. ೧೩೬೮)ಯ 'ಬಸವ ಪುರಾಣ'ದಲ್ಲಿ ಚೆನ್ನಬಸವಣ್ಣನವರ ವಿಷಯ ಬಂದರೂ ತೀರ ಆನುಷಂಗಿಕ, ತೀರ ಸ್ವಲ್ಪ. ಶರಣರ ಸಾಹಿತ್ಯ ಮತ್ತು ಚರಿತ್ರೆಗಳ ಪುನರುಜ್ಜೀವನ ಸಂದರ್ಭವಾದ ಹದಿನೈದನೆಯ ಶತಮಾನದಲ್ಲಿಯೂ ಚೆನ್ನಬಸವಣ್ಣನವರನ್ನು ಕುರಿತು ಸ್ವತಂತ್ರಕೃತಿ ಹುಟ್ಟದಿರುವುದು ಆಶ್ಚರ್ಯದ ಸಂಗತಿಯಾಗಿದೆ. ಇದನ್ನು ಗಮನಿಸಿದ ವಿರೂಪಾಕ್ಷ ಪಂಡಿತ (೧೫೮೪) ತನ್ನ ಚೆನ್ನಬಸವ ಪುರಾಣದಲ್ಲಿ "ಧರೆಯೊಳಗೆ ಸಕಲ ಶರಣರ ಕಥೆಗಳಂ ಕವೀಶ್ವರರೊಲ್ದು ಪೇಳ್ದರೀ ಚೆನ್ನಬಸವೇಶ್ವರನ ಚರಿತೆಯನದೊರ್ವರುಂ ಪೇಳ್ದುದಿಲ್ಲ" ಎಂಬ ಪೀಠಿಕೆ ಹಾಕಿಕೊಂಡು, ೧೫೮೪ರಷ್ಟು ತಡವಾಗಿ ಚೆನ್ನಬಸವಣ್ಣನವರನ್ನು ಕುರಿತು ಕೃತಿ ರಚಿಸುತ್ತಾನೆ. ಇವನನ್ನು ಬಿಟ್ಟರೆ ಮುಂದೆ ಮತ್ತೆ ಯಾರೊಬ್ಬರೂ ಚೆನ್ನಬಸವಣ್ಣನವರ ವಿಷಯವಾಗಿ ಕೃತಿ ರಚಿಸುವ ಗೋಜಿಗೆ ಹೋಗಲಿಲ್ಲವೆಂಬುದೂ ಕುತೂಹಲದ ಸಂಗತಿಯಾಗಿದೆ. ಕಳೆದ ೮೦೦ ವರ್ಷಗಳ ಅವಧಿಯಲ್ಲಿ ಬಸವಣ್ಣನವರನ್ನು ಕುರಿತು ನೂರಾರು, ಪ್ರಭುದೇವ ಸಿದ್ಧರಾಮರನ್ನು ಕುರಿತು ಹತ್ತಾರು ಕೃತಿಗಳು ಹುಟ್ಟಿದರೆ ಚೆನ್ನಬಸವಣ್ಣನವರನ್ನು ಕುರಿತು ಒಂದೇ ಒಂದು ಕೃತಿ ಹುಟ್ಟಿತು; ಅದೂ ಹೆಸರಿಗೆ ಮಾತ್ರ ಚೆನ್ನಬಸವ ಪುರಾಣ. ಹೀಗೇಕಾಯಿತು? ಎಂಬ ಪ್ರಶ್ನೆಗೆ ಸಂಶೋಧಕರು ಉತ್ತರವನ್ನು ಶೋಧಿಸಬೇಕಾಗಿದೆ.

ಬಾಗೇವಾಡಿ :

ಬಾಗೇವಾಡಿಯ ಮಾದರಸ ಮಾದಲಾಂಬಿಕೆಯರ ಮಗಳೂ ಬಸವಣ್ಣನವರ ಸಹೋದರಿಯೂ ಆದ ನಾಗಲಾಂಬಿಕೆ ಚೆನ್ನಬಸವಣ್ಣನವರ ತಾಯಿ. ಹರಿಹರ ಇವಳ ಹೆಸರನ್ನೇ

---

೧. ಹರಿಹರನು ಸಿದ್ಧರಾಮನನ್ನೂ ಕುರಿತು ರಗಳೆ ಬರೆದಿಲ್ಲ. ಏಕಾಂತ ರಾಮಯ್ಯನ ರಗಳೆಯಲ್ಲಿ ಸಿದ್ಧರಾಮನ ಪ್ರಸ್ತಾಪವನ್ನಾದರೂ ಮಾಡುತ್ತಾನೆ, ಚೆನ್ನಬಸವಣ್ಣನ ಹೆಸರನ್ನೇ ಎತ್ತುವುದಿಲ್ಲ. ಸಿದ್ಧರಾಮನನ್ನು ಕುರಿತು ಸ್ವತಂತ್ರಕಾವ್ಯ ಬರೆದಿರುವ ರಾಘವಾಂಕನೂ ಚೆನ್ನಬಸವಣ್ಣನ ಹೆಸರು ಎತ್ತುವದಿಲ್ಲ.

ಎತ್ತುವದಿಲ್ಲ. ಹೆಸರು ಹೇಳುವ ಪಾಲ್ಕುರಿಕೆ ಸೋಮನಾಥ ಇವಳನ್ನು ಬಸವಣ್ಣನವರ ಸೋದರಿಯೆಂದು ಕರೆಯುವನೇ ಹೊರತು, ಅಕ್ಕನೋ ತಂಗಿಯೋ ಸ್ಪಷ್ಟಪಡಿಸುವುದಿಲ್ಲ. ಈ ಕವಿಗಳನ್ನು ಬಿಟ್ಟರೆ ಬಸವಪುರಾಣದ ಭೀಮಕವಿ, ಶೂನ್ಯಸಂಪಾದನೆಯ ಪ್ರಸಾದಿ ಮಹಾದೇವಯ್ಯಗಳು ಇವಳು ಬಸವಣ್ಣನ ತಂಗಿಯೆಂದೇ ಹೇಳುತ್ತಾರೆ. ಭೀಮಕವಿಯು (೪-೪೯) "ನಿಜವನಿತೆ ಗಂಗಾದೇವಿಯುಂ ತನ್ನನುಜೆ ನಾಗಲದೇವಿಯುಂ" ಸಹಿತ ಬಸವಣ್ಣ ಕೂಡಲಸಂಗಮಕ್ಕೆ ಹೋದನೆನ್ನುತ್ತ ಅನುಜೆ (=ತಂಗಿ) ಪದ ಬಳಸಿರುವನೇ ಹೊರತು, ಅಗ್ರಜೆ, (=ಅಕ್ಕ) ಪದವನ್ನಲ್ಲ. ಪ್ರಸಾದಿ ಮಹಾದೇವಯ್ಯನಂತೂ "ತನ್ನಿಂ ಕಿಱಿಯಳಪ್ಪ ನಾಗಲಾಂಬಿಕೆ ಸಹಿತ" ಬಸವಣ್ಣನವರು ಕಪ್ಪಡಿ ಸಂಗಮಕ್ಕೆ ಹೋದರೆಂದು ಸ್ಪಷ್ಟವಾಗಿಯೇ ಹೇಳುತ್ತಾನೆ. ಇಷ್ಟು ಮಹತ್ವದ ಕೃತಿಗಳೇ, ಅದರಲ್ಲಿಯೂ ಪ್ರಾಚೀನತಮಕೃತಿಗಳೇ ನೇರವಾಗಿ ಅವಳನ್ನು ತಂಗಿ ಎಂದಿರುವುದು ಗಮನಾರ್ಹವೆನಿಸಿದೆ. ಬಹುಶಃ ತಂಗಿಯಾಗಿರುವ ಅವಳನ್ನು ಪ್ರೀತಿ-ಗೌರವ ಕಾರಣವಾಗಿ 'ಅಕ್ಕ' ಎಂಬ ವಿಶೇಷಣ ಬಳಸಿ ಅಕ್ಕ+ನಾಗಮ್ಮನೆಂದೇ ಕರೆಯುತ್ತಿರಬಹುದು, ಮಹಾದೇವಿಯನ್ನು 'ಅಕ್ಕ + ಮಹಾದೇವಿ' ಎಂದು ಕರೆದಂತೆ. ಆದರೆ ೧೫ನೆಯ ಶತಮಾನದ ತರುವಾಯ ಬಂದ ಲಕ್ಕಣ್ಣ ದಂಡೇಶ, ಚಾಮರಸ, ಸಿಂಗಿರಾಜ ಮೊದಲಾದವರು ಇಲ್ಲಿಯ 'ಅಕ್ಕ' ಎಂಬ 'ವಿಶೇಷಣ'ವನ್ನು ವಾಚ್ಯಾರ್ಥದಲ್ಲಿ ಸ್ವೀಕರಿಸಿ, ಅವಳನ್ನು ಬಸವಣ್ಣನವರ ಅಕ್ಕನೆಂದೇ ತಪ್ಪಾಗಿ ಭಾವಿಸಿರಬಹುದೇ?

ಉಪನಯನ ಸಂದರ್ಭದಿಂದಲೇ ಬಸವಣ್ಣನವರ ಜೀವನದಲ್ಲಿ ಹೋರಾಟ ಪ್ರಾರಂಭವಾಗುತ್ತದೆ. ಇದರಿಂದಾಗಿ ಅವರು ಅಗ್ರಹಾರದ ಬ್ರಾಹ್ಮಣರ ವಿರೋಧ ಕಟ್ಟಿಕೊಳ್ಳಬೇಕಾಯಿತು. ಹರಿಹರ ಹೇಳುವಂತೆ ಎಳೆವಯಸ್ಸಿನಲ್ಲಿಯೇ ತಂದೆ ತಾಯಿಗಳು ತೀರಿಕೊಳ್ಳುವಲ್ಲಿ ಹಿರಿಯರ ಹಿಡಿತದಿಂದ ಮುಕ್ತನಾದ ಬಸವಣ್ಣ, ತನ್ನ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿರಬಹುದು. ಇದರಿಂದ ಬ್ರಾಹ್ಮಣರ ವಿರೋಧ ಮತ್ತೂ ವರ್ಧಿಸಿತು. ಆಗ ಈ ತಬ್ಬಲಿ ಮಕ್ಕಳು ಬಾಗೇವಾಡಿ ಅಗ್ರಹಾರದಿಂದ ಬಹಿಷ್ಕಾರಕ್ಕೆ ಗುರಿಯಾಗಿರಬಹುದು.

ಒಡೆಯರು ಬಂದರೆ ಗುಡಿ ತೋರಣವ ಕಟ್ಟಿ,
ನಂಟರು ಬಂದರೆ ಸಮಯವಿಲ್ಲೆನ್ನಿ.
ಅಂದೇಕೆ ಬಾರರು? ನೀರಿಂಗೆ ನೇಣಿಂಗೆ ಹೊಱಗಾದಂದು,
ಸಮಯಾಚಾರಕ್ಕೆ ಒಳಗಾದಂದು.
ಪರುಷ ಮುಟ್ಟಲು ಕಬ್ಬುನ ಸುವರ್ಣವಾಯಿತ್ತು,
ಬಳಿಕ ಬಂಧುಗಳುಂಟೆ? ಕೂಡಲಸಂಗಮದೇವಾ.

ಇತ್ಯಾದಿ ವಚನಗಳಲ್ಲಿ ಬಹಿಷ್ಕಾರಕ್ಕೆ ಗುರಿಯಾಗಿರಬಹುದಾದ ಧ್ವನಿ ಕೇಳಿಸುತ್ತದೆ. ಈ ರೀತಿ ಬಹಿಷ್ಕೃತನಾದ ಬಸವಣ್ಣ ಬ್ರಾಹ್ಮಣರನ್ನು ತ್ಯಜಿಸಿ, ತನ್ನ ಸಹೋದರಿಯೊಂದಿಗೆ ಬಾಗೇವಾಡಿಯಲ್ಲಿಯ 'ಸಮಯಾಚಾರ' ಸಮಾಜವನ್ನು ಪ್ರವೇಶಿಸಿದನೆಂದು ಕಾಣುತ್ತದೆ. ಈ ಸನ್ನಿವೇಶವನ್ನು ಬಸವಪುರಾಣ ಹೀಗೆ ಚಿತ್ರಿಸುತ್ತದೆ :

. . . . ಬಸವಂ ನಿಜಸಹೋದರಿ
ಯೆನಿಪ ನಾಗಾಂಬಿಕೆಯು ತಾನುಂ
ತನಗೆಯಲ್ಲಿರಲಾಗದೆನುತೆಯ್ತಂದು ಮಹಮನೆಯ
ಮನೆಗೆ ಬರುತಿರೆ ಭಕ್ತರೆಲ್ಲರು
ಮನಮೊಸೆದಿವಂ ತಮ್ಮ ಮಗನೆಂ
ದೆನುತ ತಮ್ಮತ್ತಲು ತೆಗೆದುಕೊಂಡರು . . . . . . (೩-೪೮)

ಎಂಬ ಪದ್ಯ ಬ್ರಾಹ್ಮಣರನ್ನು ಬಿಟ್ಟು ಬಸವಣ್ಣನವರು ಸೋದರಿಯೊಂದಿಗೆ ಬಾಗೇವಾಡಿಯಲ್ಲಿಯೇ ಇದ್ದ 'ಮಹಮನೆ'ಗೆ ಹೋದರೆಂದೂ ಅಲ್ಲಿಯ 'ಭಕ್ತರು' ಅವರನ್ನು ಬರಮಾಡಿಕೊಂಡರೆಂದೂ ತಿಳಿಸುತ್ತದೆ. ಹೀಗೆ ಬರಮಾಡಿಕೊಂಡ 'ಸಮಾಯಾಚಾರ' ಬಹುಶಃ ಕಾಳಾಮುಖ ಶೈವಪಂಥವೇ ಆಗಿರಬಹುದು.[೨] ಬಾಗೇವಾಡಿಯಲ್ಲಿ ಕಾಳಾಮುಖ ಸಮಾಜವನ್ನು ಪ್ರವೇಶಮಾಡಿರಬಹುದಾದ ಕಾರಣದಿಂದಾಗಿಯೇ ಬಸವಣ್ಣನವರಿಗೆ ಕಾಳಾಮುಖದ ಕೇಂದ್ರವಾಗಿದ್ದ ಕೂಡಲಸಂಗಮದಲ್ಲಿ ಸಾಧನಕನೆಂದು ಪ್ರವೇಶ ಪಡೆಯಲು ಅನುಕೂಲವಾಗಿರಬೇಕು.

ಕೂಡಲಸಂಗಮದಲ್ಲಿ ಶೈವನಾಗಿರುವಾಗಲೇ ಬಸವಣ್ಣ ವಚನ ರಚಿಸಲು ಪ್ರಾರಂಭಿಸಿರಬಹುದೆಂದು ಶ್ರೀ ಫ.ಗು.ಹಳಕಟ್ಟಿ ಮೊದಲಾದವರು ಸಕಾರಣ ತರ್ಕಿಸಿದ್ದಾರೆ. ಈಗ ಅವನ ಮುದ್ರಿಕೆ ಸ್ಥಾವರಲಿಂಗ ಸೂಚಕವಾದ 'ಕೂಡಲಸಂಗಮದೇವಾ' ಎಂಬುದೇ ಆಗಿರಬೇಕು.[೩] ಬಸವಣ್ಣನವರ ವಚನಗಳಲ್ಲಿ ಕೆಲವೊಮ್ಮೆ ವಿಚಾರಗಳ ವೈರುಧ್ಯ ತೋರಿ ಬರುವುದಕ್ಕೆ, ಕೆಲವು ವಚನಗಳನ್ನು ಆತ ಶೈವನಾಗಿದ್ದ ಅವಧಿಯಲ್ಲಿ ಬರೆದುದೇ ಕಾರಣವಾಗಿರಬೇಕು.

ಹೀಗೆ ಬ್ರಾಹ್ಮಣ್ಯವನ್ನು ದಾಟಿ ಶೈವಕ್ಕೆ ಬಂದ ಬಸವಣ್ಣನವರು ಆ ಧರ್ಮದಲ್ಲಿಯೂ ಇದ್ದ ಕಂದಾಚಾರಕ್ಕೆ ಜಿಗುಪ್ಸೆಗೊಂಡು, ಅದನ್ನು ದಾಟಿ ಶರಣಧರ್ಮಕ್ಕೆ ಸಮಗ್ರರೂಪ ಕೊಟ್ಟರೆಂದು ತೋರುತ್ತದೆ. ಆದುದರಿಂದ ಬಸವಣ್ಣನವರು ಒಮ್ಮೆ ಬಾಗೇವಾಡಿಯಲ್ಲಿ, ಇನ್ನೊಮ್ಮೆ ಬಹುಶಃ ಕೂಡಲಸಂಗಮದಲ್ಲಿ ಹೀಗೆ ಎರಡು ಸಲ ಮತದ ಗೆರೆಯನ್ನು ದಾಟಿದರೆಂದು ಕಾಣುತ್ತದೆ. ಕೂಡಲಸಂಗಮದಲ್ಲಿ ಚೆನ್ನಬಸವಣ್ಣನವರ ಪ್ರಸ್ತಾಪವನ್ನು ನಮ್ಮ ಒಂದೂ ಕಾವ್ಯಗಳು ಮಾಡುವುದಿಲ್ಲ. ಆದುದರಿಂದ ಅವರು ಕೂಡಲಸಂಗಮದಲ್ಲಿ ಹುಟ್ಟಿದರೆಂದು ಕೆಲವು ವಿದ್ವಾಂಸರು ಹೇಳುವುದು ಕಲ್ಪನೆಯೆನಿಸುತ್ತದೆ.

---

೨. ಎರಡು ಸಮೀಕರಣದ ಬಗ್ಗೆ ನನಗೆ ಇನ್ನೂ ಸಂದೇಹವಿದೆ. 'ಸಮಯಾಚಾರ'ಪದದ ಅರ್ಥವನ್ನು ಶೋಧಿಸಬೇಕಾಗಿದೆ. ಶಿವಭಕ್ತನೊಬ್ಬ ಶೂದ್ರನೊಂದಿಗೆ ಊಟ ಮಾಡಿದ ಕಥೆಯನ್ನೊಳಗೊಂಡ ಶಿವಾಧಿಕ್ಯ ಪುರಾಣ(ಅಪ್ರಕಟಿತ)ಕ್ಕೆ 'ಸಮಯಾಚಾರಮತದ ಪುರಾಣ' ಎಂಬ ಹೆಸರಿದೆ. ಆದುದರಿಂದ 'ಸಮಯಾಚಾರ'ವೆಂಬುದು ಜಾತಿಮುಕ್ತ ಸಮಾಜವನ್ನು ಸೂಚಿಸುವುದೆ? ವಿಚಾರಿಸಬೇಕು.

೩. ಶಿವಾನುಭವ ೧೬-೧೦, ಪು. ೪೮೯.

ಕಲ್ಯಾಣ :

ಕಲ್ಯಾಣದ ನಿಜಘಟನೆಗಳನ್ನು ಕಂಡುಹಿಡಿಯುವ, ಅವುಗಳನ್ನು ಕಾಲಕ್ರಮದಲ್ಲಿ ಹೊಂದಿಸುವ ಕೆಲಸ ಇನ್ನೂ ಸರಿಯಾಗಿ ನಡೆದಿಲ್ಲ, ಕೊನೆಯ ಪಕ್ಷ ಈ ಆಂದೋಲನದ ಕೇಂದ್ರಬಿಂದುವಾದ ಬಸವಣ್ಣನ ಜೀವನದ ಘಟನೆಗಳು ಮತ್ತು ಅವುಗಳ ಕಾಲಕ್ರಮ ಸ್ಪಷ್ಟವಾದರೆ, ಅವನ ಸುತ್ತ ಹೆಣೆದುಕೊಂಡಿವರ ಚರಿತ್ರೆಯ ಚೌಕಟ್ಟನ್ನೂ ಸರಿಯಾಗಿ ಹೊಂದಿಸಲು ಸಾಧ್ಯವಾಗುತ್ತದೆ.

ಬಸವಣ್ಣ ಹುಟ್ಟಿದುದು ೧೧೦೬ ಎಂದು ಕೆಲವರು, ೧೧೩೨ ಎಂದು ಕೆಲವರು ಹೇಳುತ್ತಲಿದ್ದಾರೆ. ಇದೇ ರೀತಿ ಐಕ್ಯಮಿತಿಯ ಬಗೆಗೆಯೂ ಭಿನ್ನಾಭಿಪ್ರಾಯಗಳಿವೆ. ಬಿಜ್ಜಳ-ಬಸವಣ್ಣ ಸ್ವಲ್ಪ ಹೆಚ್ಚು ಕಡಿಮೆ ಸಮವಯಸ್ಕರೆಂಬ ಅಭಿಪ್ರಾಯವಿದೆ. ಹಾಗಿದ್ದರೆ ೧೧೩೬ ರ ಸುಮಾರಿಗೆ ಮಾಂಡಲಿಕನಾಗಿರುವ ಬಿಜ್ಜಳ ೧೧೦೬ರ ಸುಮಾರಿಗೆ ಹುಟ್ಟಿರುವುದು ಸ್ವಾಭಾವಿಕ. ಸಮವಯಸ್ಸಿನ ಬಸವಣ್ಣನು ಹೆಚ್ಚು ಕಡಿಮೆ ಇದೇ ವರ್ಷದಲ್ಲಿ ಜನಿಸಿರುವುದು ಸಹಜ. ಇದು ನಿಜವಿದ್ದರೆ ೧೧೪೮ರ ಶಾಸನದಲ್ಲಿ ಉಲ್ಲೇಖಗೊಂಡ ಜೇಡರ ದಾಸಿಮಯ್ಯನು ಬಸವಣ್ಣನವರಿಗಿಂತ ಪ್ರಾಚೀನನಾಗಿರಲಿಕ್ಕಿಲ್ಲ. ವಯಸ್ಸಿನಲ್ಲಿ ಸ್ವಲ್ಪ ದೊಡ್ಡವನಿರಬೇಕು. ಈ ಕಾರಣಕ್ಕಾಗಿಯೇ ಶೂನ್ಯಸಂಪಾದನೆಕಾರ ಜೇಡರದಾಸಿಮಯ್ಯನನ್ನು ಅನುಭವಮಂಟಪದಲ್ಲಿ ಗೋಷ್ಠಿಯ ಸದಸ್ಯನನ್ನಾಗಿ ಚಿತ್ರಿಸಿದಂತಿದೆ.

ಎರಡನೆಯದಾಗಿ, ವಚನಗಳಲ್ಲಿ ಆಗಾಗ ಬರುವ ಶರಣರ ಉಲ್ಲೇಖಗಳು ಕೆಲವೊಮ್ಮೆ ಅವರ ಪ್ರಾಚೀನತೆಯ ಸೂಚನೆಗಿಂತ ಪರಸ್ಪರ ಗೌರವದ ಸೂಚನೆಗಳಾಗಿವೆ. ಚೆನ್ನಬಸವಣ್ಣನಂಥ ಕಿರಿಯನನ್ನು ಹಿರಿಯರಾದ ಶಂಕರದಾಸಿಮಯ್ಯ, ಡೋಹರ ಕಕ್ಕಯ್ಯ, ಜೇಡರ ದಾಸಿಮಯ್ಯನ ಹೆಂಡತಿಯಾದ ದುಗ್ಗಳೆ, ಇಷ್ಟೆಯೇಕೆ ತಾಯಿಯಾದ ನಾಗಲಾಂಬಿಕೆ ಸಹ ಸ್ತುತಿಸುವುದನ್ನು ನೋಡಿದರೆ, ಜೇಡರ ದಾಸಿಮಯ್ಯನ ವಚನದಲ್ಲಿ ಬರುವ "ಕೀಳು ಡೋಹರ ಕಕ್ಕ, ಕೀಳು ಮಾದರ ಚೆನ್ನ" ಎಂಬ ಉಲ್ಲೇಖವನ್ನೂ ನಿರ್ದಿಷ್ಟವಾಗಿ ವಯಸ್ಸಿಗೆ ಅನ್ವಯಿಸಬಾರದೆಂದು ತೋರುತ್ತದೆ. ಮೂರನೆಯದಾಗಿ

೧. ಅಪ್ಪನು ಡೋಹಾರ ಕಕ್ಕಯ್ಯನಾಗಿ,
ಮುತ್ತಯ್ಯ ಚೆನ್ನಯ್ಯನಾದರೆ ಆನು ಬದುಕೆನೆ ? (೩೪೫)

೨. ಅಪ್ಪನು ನಮ್ಮ ಮಾದಾರ ಚೆನ್ನಯ್ಯ,
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ,
ಚಿಕ್ಕಯ್ಯನೆಮ್ಮಯ್ಯ ಕಾಣಿರಯ್ಯ,
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ (೩೫೧)

೩. ಹಿರಿಯಯ್ಯ ಶ್ವಪಚಯ್ಯ, ಕಿಜೆಯಯ್ಯ ಡೋಹಾರ ಕಕ್ಕಯ್ಯ (೩೫೩)

೪. ಕಕ್ಕಯ್ಯ ಹಿರಿಯಯ್ಯ, ಚಿಕ್ಕಯ್ಯ ಚೆನ್ನಯ್ಯ (೩೫೫)

ಎಂದು ಬಸವಣ್ಣನವರು ಹೇಳುವುದನ್ನು ಕೆಲವರು ವಾಚ್ಯಾರ್ಥದಲ್ಲಿ ಸ್ವೀಕರಿಸಿ, ಡೋಹಾರ ಕಕ್ಕಯ್ಯ, ಮಾದಾರ ಚೆನ್ನಯ್ಯ ಮೊದಲಾದವರು ಬಸವಣ್ಣನವರಿಗೆ ಅಪ್ಪ, ಅಜ್ಜನ ವಯಸ್ಸಿನವರಿರಬಹುದೆಂದು ಭಾವಿಸಿದ್ದಾರೆ. ಆಶ್ಚರ್ಯದ ಸಂಗತಿ ಯೆಂದರೆ ಬಸವಣ್ಣನವರು ತಮ್ಮ ಯಾವುದೇ ವಚನದಲ್ಲಿ ಸಿರಿಯಾಳ, ಮರುಳ ಶಂಕರದೇವ ಮೊದಲಾದ ಮೇಲುವರ್ಗದವರನ್ನು ಬಾಯಿತಪ್ಪಿಯೂ ಅಪ್ಪ, ಅಜ್ಜ, ಅಣ್ಣ ಎಂದು ಕರೆದಿಲ್ಲ. ಈ ಪದಗಳನ್ನು ಕೇವಲ ಕೆಳವರ್ಗದಿಂದ ಬಂದ ಶರಣರಿಗೆ ಮಾತ್ರ ಬಳಸಿರುವುದರಿಂದ, ಪತಿತರ ಬಗೆಗೆ ಅಧಿಕ ಗೌರವ ತೋರುವುದೇ ಈ ಪದ ಬಳಕೆಯ ಹಿಂದಿರುವ ಉದ್ದೇಶವೆಂದು ಸ್ಪಷ್ಟವಾಗುತ್ತದೆ. ಆದುದರಿಂದ ಜೇಡರ ದಾಸಿಮಯ್ಯ, ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ ಮೊದಲಾದವರು ಬಸವಣ್ಣನವರಿಗಿಂತ ಪ್ರಾಚೀನರು; ಬಹಳ ಹಿರಿಯರು ಆಗಿರಲಿಕ್ಕಿಲ್ಲ. ಈ ದೃಷ್ಟಿಯಿಂದ ನೋಡಿದರೆ ಶಂಕರದಾಸಿಮಯ್ಯ, ಜೇಡರದಾಸಿಮಯ್ಯ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಬಸವಣ್ಣ ಮೊದಲಾದವರು ಹೆಚ್ಚು ಕಡಿಮೆ ಒಂದೆ ತಲೆಮಾರಿನವರೆನಿಸುತ್ತದೆ. ಇವರಿಗೆ ಕಿರಿಯ ತಲೆಮಾರಿನ ವ್ಯಕ್ತಿಯಾಗಿದ್ದಾನೆ, ಬಸವಣ್ಣನವರ ಸೋದರಳಿಯ ಚೆನ್ನಬಸವಣ್ಣ.

ನಾಗಲಾಂಬಿಕೆ ಚೆನ್ನಬಸವಣ್ಣನವರ ತಾಯಿ. ಈ ವಿಷಯವನ್ನು ಎಲ್ಲ ಲಿಂಗಾಯತ ಕೃತಿಗಳು ಏಕಮತದಿಂದ ಸಾರುತ್ತವೆ. ಸ್ವತಃ ಚೆನ್ನಬಸವಣ್ಣನವರು ನಾಗಲಾಂಬಿಕೆಯನ್ನು "ಅವ್ವೆ" ಎಂದು ಎರಡುಸಲ ತಮ್ಮ ವಚನಗಳಲ್ಲಿ ಉಲ್ಲೇಖಿಸಿದ್ದಾರೆ. ಬಹುಮುಖ್ಯ ಸಂಗತಿಯೆಂದರೆ ಈ ಕೆಳಗಿನ ಘಟ್ಟಿವಾಳಯ್ಯನ ವಚನವೊಂದು ಈ ಸಂಗತಿಯನ್ನು ದಾಖಲಿಸಿದ ಸಮಕಾಲೀನ ಆಕರವಾಗಿದೆ.

> ಕರವೂರ ನಿರಂಹಕಾರ-ಸುಜ್ಞಾನಿದೇವಿಯರ
> ಬಸುಱಲ್ಲಿ ಬಂದರೆನ್ನಬಹುದೇ ಪ್ರಭುದೇವರು ?
> ಮಂಡಗೆಯ ಮಾದಿರಾಜ-ಮಾದಲಾಂಬಿಕೆಯಮ್ಮನವರ
> ಬಸುಱಲ್ಲಿ ಬಂದರೆನ್ನಬಹುದೇ ಬಸವೇಶ್ವರನು ?
> ಅಕ್ಕನಾಗಲಾಂಬಿಕೆಯಮ್ಮನವರ ಬಸುಱಲ್ಲಿ
> ಬಂದರೆನ್ನಬಹುದೇ ಚೆನ್ನಬಸವೇಶ್ವರನು ?
> ಮೊರಡಿಯ ಮುದ್ದಗೌಡ-ಸುಗ್ಗಲೆಯ
> ಬಸುಱಲ್ಲಿ ಬಂದರೆನ್ನಬಹುದೇ ಸಿದ್ಧರಾಮೇಶ್ವರನ ?
> ಇವರು ಒಬ್ಬರಿಂದಾದವರಲ್ಲ, ತಮ್ಮಿಂದ ತಾವಾದರು
> ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು.
>
> (ಮಿಶ್ರಸ್ತೋತ್ರದ ವಚನ-೭೫)

ಈ ವಚನ ಚೆನ್ನಬಸವಣ್ಣನವರ ವಿಷಯದಲ್ಲಿ ತಾಯಿಯ ಹೆಸರನ್ನು ಮಾತ್ರ ತಿಳಿಸುತ್ತದೆ. ಇಂಥ ಸಂದರ್ಭದಲ್ಲಿ ಚೆನ್ನಬಸವಣ್ಣನವರ ತಂದೆ ಶಿವದೇವನೆಂದು ಇತ್ತೀಚಿನ ಸಿಂಗಿರಾಜ ಪುರಾಣ ಮತ್ತು ಇನ್ನೂ ಇತ್ತೀಚಿನ ದೇವಾಂಗ ದಾಸಿಮಯ್ಯನ ಪುರಾಣ (ಸಾಂಗತ್ಯ)ಗಳು ಹೇಳುತ್ತವೆ. ಸಿಂಗಿರಾಜಪುರಾಣವು ವಿಜಯನಗರ ಸಾಮ್ರಾಜ್ಯ ಪತನವಾದ ಬಳಿಕ ಅಂದರೆ ೧೬ನೆಯ ಶತಮಾನದ

ಪ್ರಾರಂಭದಲ್ಲಿ ಬರೆದ ಕೃತಿಯೆಂದು ಆಂತರಿಕ ಆಧಾರಗಳಿಂದ ಶ್ರೀ ಎಚ್. ದೇವೀರಪ್ಪನವರು ಪ್ರತಿಪಾದಿಸಿದುದು ಸರಿಯೆಂದು ತೋರುತ್ತದೆ. ನಾಲ್ಕುನೂರು ವರ್ಷ ಎಲ್ಲ ಕಾವ್ಯಗಳೂ ಮೌನವಾಗಿರುವಾಗ ಸಿಂಗಿರಾಜ ಪುರಾಣ ಮಾತ್ರ ತಡವಾಗಿಯಾದರೂ ಶಿವದೇವನ ಹೆಸರನ್ನು ಹೇಳಿದೆ. ಈ ಕೃತಿಯನ್ನು ಅನುಸರಿಸಿಯೇ ದೇವಾಂಗ ದಾಸಿಮಯ್ಯನ ಪುರಾಣ ಶಿವದೇವನ ಹೆಸರನ್ನು ಹೇಳಿರಬೇಕು. ಒಟ್ಟಿನಲ್ಲಿ ಈ ಎರಡು ಕಾವ್ಯಗಳು ಚೆನ್ನಬಸವಣ್ಣನವರ ತಾಯಿ ನಾಗಲಾಂಬಿಕೆ, ತಂದೆ ಶಿವದೇವ ಎಂದು ತಿಳಿಸುತ್ತವೆ.

ಕಲ್ಯಾಣದಲ್ಲಿ ಶರಣರು ನಡೆಸಿದ ಚಳುವಳಿಯ ಅವಧಿ ೧೨ ವರುಷವೆಂದು ಕೆಲವರು, ೩೬ ವರ್ಷವೆಂದು ಕೆಲವರು ಅಭಿಪ್ರಾಯ ಪಟ್ಟಿರುವರು. ಇತ್ತೀಚೆಗೆ ಎರಡನೆಯ ಅಭಿಪ್ರಾಯ ಹೆಚ್ಚು ಮಾನ್ಯತೆ ಪಡೆಯುತ್ತಲಿದೆ. ಚೆನ್ನಬಸವಣ್ಣನಿಗೆ ೨ ಪಟ್ಟವೆಂಬ ಪ್ರತೀತಿ ಇರುವುದರಿಂದ ಕಲ್ಯಾಣದಲ್ಲಿ ಹುಟ್ಟಿದ ಅವರ ಜೀವಿತ ಕಾಲಾವಧಿ ೨೪ ವರ್ಷವೆನ್ನಬೇಕಾಗುತ್ತದೆ.

ವಚನ ರಚನೆ, ಅನುಭಾವ ಗೋಷ್ಠಿಯಲ್ಲಿ ಪಾಲ್ಗೊಳ್ಳುವಿಕೆ, ಷಟ್ಸ್ಥಲ ಸಿದ್ಧಾಂತದ ನವೀಕರಣಗಳನ್ನು ಬಿಟ್ಟರೆ, ಚೆನ್ನಬಸವಣ್ಣನವರ ಜೀವನದಲ್ಲಿ ಜರುಗಿದ ಇನ್ನೊಂದು ಮುಖ್ಯಘಟನೆಯೆಂದರೆ ಸಿದ್ಧರಾಮನಿಗೆ ಲಿಂಗದೀಕ್ಷೆ ಕೊಟ್ಟುದು. ಬಸವಣ್ಣನವರ ತರುವಾಯ ಇವರು ಬಿಜ್ಜಳನಲ್ಲಿ ದಂಡನಾಯಕರಾಗಿದ್ದರೆಂದೂ ತಿಳಿದುಬರುತ್ತದೆ.

ಉಳಿವೆ :

ಕಲ್ಯಾಣದ ಕೊನೆಯ ಘಟನೆಗಳು ಇನ್ನೂ ಅಸ್ಪಷ್ಟವಾಗಿ ಉಳಿದಿವೆ. ಒಂದು ಮಾತು ನಿಜ. ಶರಣರು ಉಳಿವೆಗೆ ಧಾವಿಸಿದ ಗಂಡಾಂತರ ಪ್ರಸಂಗದಲ್ಲಿ ಆ ಸಮೂಹದ ನೇತೃತ್ವ ವಹಿಸಿದವರು ಚೆನ್ನಬಸವಣ್ಣನವರು. ಶರಣರು ಪ್ರಯಾಣ ಮಾಡಿದ ಈ ಮಾರ್ಗವನ್ನು "ದಂಡಿನ ದಾರಿ" ಎಂದು ಜನತೆ ಅಲ್ಲಲ್ಲಿ ಈಗಲೂ ಕರೆಯುತ್ತಾರೆ. ಈ ದಾರಿಯನ್ನು ಉದ್ದಕ್ಕೂ ಗೊತ್ತು ಹಚ್ಚುವುದು ಇನ್ನೂ ಸಾಧ್ಯವಾಗಿಲ್ಲ. ಹೀಗಿದ್ದೂ ಅನೇಕ ಕೃತಿಗಳ ಸಹಾಯದಿಂದ ವಿದ್ವಾಂಸರು ಈ ದಾರಿಯನ್ನು ಹೀಗೆ ರೇಖಿಸಿದ್ದಾರೆ :

ಕಲ್ಯಾಣ–ತೊರಗಲ್ಲು–ಕಡಕೋಳ–ಮೊದಲೂರು–ಮುರಗೋಡ–ಮೂಗಬಸವ–ನಾಗಲಾಪುರ–ಹುಣಸೀಕಟ್ಟಿ–ಕಾದರವಳ್ಳಿ ವರೆಗೆ ಬಂದ ಶರಣ ಸಮೂಹದ ಒಂದು ಭಾಗ ಕಕ್ಕೇರಿ–ಲಿಂಗನಮಠ–ಜಂಗಮಹಟ್ಟಿ–ಜಗಳಬೆಟ್ಟ–ಸಾಂಬ್ರಾಣಿ ವರೆಗೆ ಬಂದು, ಇನ್ನೊಂದು ಭಾಗ ನಂದಿಹಳ್ಳಿ–ಕಿತ್ತೂರು–ಧಾರವಾಡ–ಸತ್ತೂರ ವರೆಗೆ ಬಂದು, ಆಮೇಲೆ ಎರಡೂ ಭಾಗಗಳು ಮೇಲುಗೈಯಲ್ಲಾಪುರದಲ್ಲಿ ಒಂದುಗೂಡಿ ಉಳಿವೆಗೆ ಬಂದವು.

ಈ ವಿಷಯವಾಗಿ ಧಾರವಾಡದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದಲ್ಲಿರುವ ಸೋದೆಯ ಅರಸು ಸದಾಶಿವರಾಯನ "ಉಳುವೆ ಮಹಾತ್ಮೆ" ಎಂಬ ಕೃತಿ ಸ್ವಲ್ಪ ಹೆಚ್ಚಿನ ಬೆಳಕು ಚೆಲ್ಲುತ್ತದೆ. ಕಲ್ಯಾಣ–ಪರವತಾಬಾದಿ–ಪೇರಜಾಬಾದಿ–ಕೋಳಕೂರು–ಬಡದಳ–ಸತ್ತಿಗ್ಗೆರ–ಮುರಗೋಡ–ಹುಬ್ಬಳ್ಳಿ–ಬಂಕಾಪುರ–ಹಾನಗಲ್ಲು–ಮಳುಗೆ–ಜಾಂಗಲಿಕ್ಷೇತ್ರ–ಸೋದೆ–ತುಂಬೆಬೀಡು–ಯಲ್ಲಾಪುರ–ಬೆನಕನ ಘಟ್ಟ–ಮಲ್ಲಾಪುರ–ಬಿದುರೆ–ಹೆಬ್ಬಳಪಳ್ಳಿ–ಉಳಿವೆ ಎಂಬ ವಿವರ ಈ

ಕೃತಿಯಲ್ಲಿದೆ. ಈವರೆಗೆ ಗೊತ್ತಾಗದೆ ಇದ್ದ ಮಲಪ್ರಭೆಯ ಉತ್ತರದ ಅಂದರೆ ಗುಲ್ಬರ್ಗಾ ಜಿಲ್ಲೆಯ ಪರವತಾಬಾದಿ, ಪೇರಜಾಬಾದಿ, ಕೋಳಕೂರು, ಬಡದಳ ಗ್ರಾಮಗಳನ್ನು ಮೊದಲ ಸಲ ಸೂಚಿಸುವುದಲ್ಲದೆ, ದಕ್ಷಿಣದ ಗ್ರಾಮಗಳ ವಿಷಯವಾಗಿಯೂ ಈ ಕೃತಿ ಕೆಲವು ಸಲ ಭಿನ್ನಾಭಿಪ್ರಾಯ ತಾಳುತ್ತದೆ. ಈ ಊರುಗಳ ಹೆಸರಿನ ಸಹಾಯದಿಂದ 'ದಂಡಿನ ದಾರಿ'ಯನ್ನು ಶೋಧಿಸುವದು ಅವಶ್ಯವಿದೆ. ಹೀಗೆ ಚೆನ್ನಬಸವಣ್ಣನವರು ಎಳೆ ವಯಸ್ಸಿನಲ್ಲಿಯೇ ಶರಣಸಮೂಹದ ಸಂರಕ್ಷಣೆಯ ಹೊಣೆ ಹೊತ್ತು ಉಳಿವೆ ವರೆಗೆ ಬಂದು, ಅಲ್ಲಿಯೇ ಲಿಂಗೈಕ್ಯರಾದರು.

ಲಿಂಗಾಯತಧರ್ಮ

ಭಾರತೀಯರ ಅಧ್ಯಾತ್ಮಿಕ ಚಿಂತನೆ ಪ್ರಾರಂಭವಾದುದು, ಮೂಲತಃ ಆಶ್ರಮದಲ್ಲಿ. ಕುಟುಂಬ ಕಟ್ಟಿಕೊಂಡು ಆಶ್ರಮದಲ್ಲಿ ಬಾಳುತ್ತಿದ್ದ ಋಷಿಗಳು ಮತ್ತು ಕುಟುಂಬ ಜೀವನವನ್ನು ತ್ಯಜಿಸಿ ಆಶ್ರಮವಾಸಿಯಾಗಿದ್ದ ಸನ್ಯಾಸಿಗಳು ಈ ಸಿದ್ಧಾಂತವನ್ನು ರೂಪಿಸಿದರು. ಹೀಗಾಗಿ ಭಾರತೀಯ ಅಧ್ಯಾತ್ಮವೆಂಬುದು ಮೂಲತಃ ಆಶ್ರಮ ಜೀವನದ ಸೃಷ್ಟಿಯೇ ಹೊರತು, ಸಮಾಜಜೀವನದ ಸೃಷ್ಟಿಯಲ್ಲ. ಆಶ್ರಮವೆಂಬುದು ಸಾಮಾಜಿಕ ಜಟಿಲ ಸಮಸ್ಯೆಗಳಿಂದ ಮುಕ್ತವಾದ ಒಂದು ಏಕಾಂತ ಸ್ಥಳ. ಇಲ್ಲಿ ನೆಲೆನಿಂತವರಿಗೆ ಮುಖ್ಯಸಮಸ್ಯೆಯೆಂದರೆ ತಮ್ಮೊಳಗಿನ ವ್ಯಕ್ತಿಗತ (Individual) ವಿಕಾರಗಳ ಪರಿಹಾರ. ಆದುದರಿಂದ ಸಹಜವಾಗಿಯೇ ಇಲ್ಲಿಯ ಅಧ್ಯಾತ್ಮದ ಸ್ವರೂಪ ವ್ಯಕ್ತಿಗತವಾದುದು, ಅಂದರೆ ವ್ಯಕ್ತಿತ್ವವನ್ನು ಶಿವತ್ವದ ನೆಲೆಗೆ ಎತ್ತರಿಸಿಕೊಳ್ಳುವುದು. ಕಾಲಕ್ರಮದಲ್ಲಿ ನಮ್ಮ ಅಧ್ಯಾತ್ಮ ಚಿಂತನೆ ಆಶ್ರಮದಿಂದ ಮಠಕ್ಕೆ ಅಂದರೆ ಅರಣ್ಯಮಧ್ಯದಿಂದ ಸಮಾಜಮಧ್ಯಕ್ಕೆ ಬಂದರೂ ಮೊದಲಿನ ವ್ಯಕ್ತಿಗತ (Individual) ಸಿದ್ಧಾಂತ ಚಿಂತನಕ್ರಮ ಮುಂದುವರಿಯಿತೇ ಹೊರತು, ಜೊತೆಗೆ ಸಾಮಾಜಿಕ (Social) ಸಿದ್ಧಾಂತ ಚಿಂತನಕ್ರಮ ಬೆಳೆದು ಬರಲೇ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ವ್ಯಕ್ತಿಗತ ಸಿದ್ಧಾಂತದ ಜೊತೆಗೆ ಸಾಮಾಜಿಕ ಸಿದ್ಧಾಂತವನ್ನೂ ರೂಪಿಸಿದ ಪ್ರಥಮ ಶ್ರೇಯಸ್ಸು ಭಾರತದಲ್ಲಿ ಬುದ್ಧನಿಗೆ, ದ್ವಿತೀಯ ಆದರೆ ಅದ್ವಿತೀಯ ಶ್ರೇಯಸ್ಸು ಶಿವಶರಣರಿಗೆ ಸಲ್ಲುತ್ತದೆ. ಬುದ್ಧ ಸಾಮಾಜಿಕ ಸಿದ್ಧಾಂತದ ಕೆಲವು ಮಗ್ಗಲುಗಳನ್ನು ಬೋಧೆಮಾಡಿದ, ಆಚರಣೆಯಲ್ಲಿಯೂ ತಂದ. ಬಸವಣ್ಣ ಎಲ್ಲ ಮಗ್ಗಲುಗಳನ್ನು ಕಂಡುದಲ್ಲದೆ, ಅವುಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಒಂದು ಆಂದೋಲನವನ್ನೇ ಕೈಗೆತ್ತಿಕೊಂಡ. ಏಕೆಂದರೆ ವ್ಯಕ್ತಿ ಸುಧಾರಿಸಿದರೆ ಸಮಾಜ ಸುಧಾರಿಸುವುದು ಎಷ್ಟು ಸತ್ಯವೋ, ಸಮಾಜ ಸುಧಾರಿಸಿದರೆ ವ್ಯಕ್ತಿ ಸುಧಾರಿಸುವುದೂ ಅಷ್ಟೇ ಸತ್ಯವೆಂಬ ತತ್ವವನ್ನು ಅವನು ಪೂರ್ಣಪ್ರಮಾಣದಲ್ಲಿ ಕಂಡವನಾಗಿದ್ದನು. ಆದುದರಿಂದ ಬುದ್ಧನಿಗಿಂತ ಬಸವ ಹೆಚ್ಚು ರಭಸದಿಂದ ಸಮಾಜಸುಧಾರಣೆಯಲ್ಲಿ ಹೆಜ್ಜೆಹಾಕಿದ. ಈ ಸುಧಾರಣೆಯ ಅಂಗವಾಗಿ ಕೊನೆಯ ದಿನಗಳಲ್ಲಿ ಹರಳಯ್ಯ ಮಧುವಯ್ಯಗಳ ಮಕ್ಕಳ ಅಂತರ್ಜಾತಿ ವಿವಾಹ ಘಟಿಸಿತೆಂದೂ, ಆ ಕಾರಣಕ್ಕಾಗಿ ಕಲ್ಯಾಣದಲ್ಲಿ ಕ್ರಾಂತಿ ಸಂಭವಿಸಿತೆಂದೂ ಈ ವರೆಗೆ ನಂಬುತ್ತ ಬರಲಾಗಿದೆ. ಆದರೆ ಮತಾಂತರಗೊಂಡ 'ಬೃಹತ್ ವೀರಶೈವಸಮಾಜ'ದಲ್ಲಿ ೩೬ ವರ್ಷ ಹೋಗಲಿ, ೧೨ ವರ್ಷ ಕಳೆದರೂ ಹರಳಯ್ಯ ಮಧುವಯ್ಯರ ಘಟನೆಗೆ ಮೊದಲು ಒಂದೂ ಮದುವೆ ಜರುಗಲಿಲ್ಲವೆ? ಶರಣರ ಕ್ರಾಂತಿ ಕೇವಲ ಘೋಷಣೆಯ ಮಟ್ಟದಲ್ಲಿ ಉಳಿದು ಆಚರಣೆಯಲ್ಲಿ ಇಳಿದು ಬರಲಿಲ್ಲವೆ? ಆಚರಣೆಯಲ್ಲಿ ಇಳಿದು ಬಂದರೂ ಮತಾಂತರಗೊಂಡವರು, ತಮ್ಮ ತಮ್ಮ ಮೂಲಜಾತಿಗಳಲ್ಲಿಯೇ

ಅಂದು ಮದುವೆಗಳನ್ನು ಏರ್ಪಡಿಸುತ್ತಿದ್ದ ಪಕ್ಷದಲ್ಲಿ ಬಸವಣ್ಣ ಹೊಸದನ್ನು ಏನು ಮಾಡಿದಂತಾಯಿತು? ಎಂಬ ಪ್ರಶ್ನೆಗಳು ತಲೆಯೆತ್ತುತ್ತವೆ. ಬಸವಣ್ಣ ಮಾತಿನ ಮಹಾ ಪುರುಷನಲ್ಲ, ಕೃತಿಯ ಮಹಾಪುರುಷ. ಆದುದರಿಂದ ೩೬ (೧೨?) ವರ್ಷಗಳ ಕಾಲ ವ್ಯಾಪ್ತಿಯಲ್ಲಿ ಬೇರೆ ಬೇರೆ ಜಾತಿಗಳಿಂದ ಬಂದ ಶರಣಸಮಾಜದಲ್ಲಿ ರಕ್ತಸಂಬಂಧ ಅನೇಕ ಸಂಖ್ಯೆಯಲ್ಲಿ ಜರುಗಿರುವ ಸಾಧ್ಯತೆಯಿದೆ. ಹೀಗಾಗಿ ಭಾರತದಲ್ಲಿ ಪರಂಪರಾಗತವಾಗಿ ಬಂದ 'ವ್ಯಕ್ತಿಗತ ಸಿದ್ಧಾಂತ'ಕ್ಕೆ 'ಸಾಮಾಜಿಕ ಸಿದ್ಧಾಂತ'ವನ್ನು ಜೋಡಿಸಿದ, ಅದನ್ನು ತೀವ್ರಗತಿಯಲ್ಲಿ ಆಚರಣೆಗೆ ತಂದ ಕೀರ್ತಿ ಶರಣರಿಗೆ ಸಲ್ಲುತ್ತದೆ. ಈ ವ್ಯಕ್ತಿಗತ ಸಿದ್ಧಾಂತವನು 'ಲಿಂಗವ್ಯಸನ'ವೆಂದೂ ಸಾಮಾಜಿಕ ಸಿದ್ಧಾಂತವನ್ನು 'ಜಂಗಮಪ್ರೇಮ'ವೆಂದೂ ಬಸವಣ್ಣನವರು ಕರೆದಿದ್ದಾರೆ. ಈ ಲಿಂಗವ್ಯಸನದಿಂದ ವ್ಯಕ್ತಿ (=ಅಂಗ) ಲಿಂಗವೇ ಆಗುತ್ತಾನೆ, ಜಂಗಮ (=ಸಮಾಜ) ಪ್ರೇಮದಿಂದ ಸಮಾಜದ ಘಟಕವೇ ಆಗುತ್ತಾನೆ. ಇವುಗಳಲ್ಲಿ ಅಂಗವು ಲಿಂಗವಾಗುವ ವಿಕಾಸ ಕ್ರಮದ ಹಂತಗಳನ್ನೇ 'ಷಟ್‌ಸ್ಥಲ'ವೆಂದು ಲಿಂಗಾಯತ ಕರೆಯುತ್ತದೆ. ಇದು ವ್ಯಕ್ತಿಗತ ಸಿದ್ಧಾಂತವಾಗಿದ್ದು, ಲಿಂಗೋಪಾಸನೆಯ ಮೂಲಕ ಲಿಂಗವಾಗುವ ಈ ಉಪಕ್ರಮವನ್ನು 'ಲಿಂಗವಿಡಿದು ಲಿಂಗಸಿದ್ಧಿ' ಎಂದು ಲಿಂಗಾಯತದಲ್ಲಿ ಗುರುತಿಸಲಾಗಿದೆ.

ಲಿಂಗವಿಡಿದು ಲಿಂಗಸಿದ್ಧಿ

ಆತ್ಮ(=ಲಿಂಗ) ಮೂಲತಃ ಶುದ್ಧವಾದುದು. ಸರ್ವವ್ಯಾಪಕತ್ವ, ಸರ್ವಜ್ಞತ್ವ, ಸರ್ವಕರ್ತೃತ್ವ ಲಕ್ಷಣವುಳ್ಳದು. ಆಣವ, ಮಾಯಾ, ಕಾರ್ಮಿಕ ಮಲಗಳ ಆವರಣದಿಂದಾಗಿ ಇದಕ್ಕೆ ಅಲ್ಪವ್ಯಾಪಕತ್ವ, ಅಲ್ಪಜ್ಞತ್ವ, ಅಲ್ಪಕರ್ತೃತ್ವ ಸ್ಥಿತಿ ಪ್ರಾಪ್ತವಾಗುತ್ತದೆ. ಈಗ ಲಿಂಗ (=ಆತ್ಮ) ಮಲಿನಗೊಂಡು ಅಂಗವಾಗುತ್ತದೆ. ಅಂಗವು ಈ ಮಾಲಿನ್ಯವನ್ನು ಕಳೆದುಕೊಳ್ಳುತ್ತ ಲಿಂಗವಾಗುದ ದೃಷ್ಟಿಕೋನವನ್ನು ಗುರು ದಯಪಾಲಿಸುತ್ತಾನೆ; ಜೊತೆಗೆ ಉಪಾಸನಾ ಸಾಧನವಾಗಿ ಇಷ್ಟಲಿಂಗವನ್ನು ಕರುಣಿಸುತ್ತಾನೆ.

ಇಷ್ಟಲಿಂಗವು ವ್ಯಕ್ತಿಯ ಆತ್ಮಲಿಂಗದ ಪ್ರತೀಕ. ಇದರ ಅನುಸಂಧಾನವೆಂದರೆ ಆತ್ಮಾನುಸಂಧಾನವೇ ಆಗಿದ್ದು, ಇದರಿಂದ ಉಪಾಸಕ ಕ್ರಮೇಣ ಆತ್ಮ ಶುದ್ಧಿಯನ್ನು ಸಂವರ್ಧಿಸಿಕೊಳ್ಳುತ್ತಾನೆ. ಇಲ್ಲಿ ಹಂತಹಂತವಾಗಿ ವ್ಯಕ್ತಿತ್ವದ ಉದಾತ್ತೀಕರಣ ಕ್ರಿಯೆ ಜರುಗುತ್ತದೆ. ಅಂದರೆ ಕ್ರಮೇಣ ಶ್ರದ್ಧಾ, ನಿಷ್ಠಾ, ಅವಧಾನ, ಅನುಭಾವ, ಆನಂದ, ಸಮರಸ ಭಾವಗಳನ್ನು ಬೆಳೆಸಿಕೊಳ್ಳುತ್ತಾನೆ. ಈ ಭಾವಗಳಿಗೆ ಅನುಗುಣವಾಗಿ ವ್ಯಕ್ತಿ ಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಸ್ಥಿತಿಗಳನ್ನು ಪಡೆಯುತ್ತಾನೆ. ಭಕ್ತ–ಮಹೇಶ ಸ್ಥಿತಿಗಳನ್ನು ಪಡೆಯುವಲ್ಲಿ ಸ್ಥೂಲತನುಚೈತನ್ಯವು ಇಷ್ಟಲಿಂಗವಾಗುತ್ತದೆ. ಪ್ರಸಾದಿ–ಪ್ರಾಣಲಿಂಗಿ ಸ್ಥಿತಿಗಳನ್ನು ಪಡೆಯುವಲ್ಲಿ ಸೂಕ್ಷ್ಮತನುಚೈತನ್ಯವು ಪ್ರಾಣಲಿಂಗವಾಗುತ್ತದೆ. ಶರಣ–ಐಕ್ಯಸ್ಥಿತಿಗಳನ್ನು ಪಡೆಯವಲ್ಲಿ ಕಾರಣತನುಚೈತನ್ಯವು ಭಾವಲಿಂಗವಾಗುತ್ತದೆ. ಇಷ್ಟಲಿಂಗಾತ್ಮಕ ಸ್ಥೂಲತನು ಚೈತನ್ಯವೇ 'ಕ್ರಿಯೆ'. ಪ್ರಾಣ ಲಿಂಗಾತ್ಮಕ ಸೂಕ್ಷ್ಮತನುಚೈತನ್ಯವೇ 'ಜ್ಞಾನ'. ಈ ಕ್ರಿಯೆ ಮತ್ತು ಜ್ಞಾನಗಳ ಸಮರಸಾತ್ಮಕ ಕಾರಣತನುಚೈತನ್ಯವೇ ಭಾವಲಿಂಗ. ಈ ಭಾವಲಿಂಗಕ್ಕೆ ಅನುಗುಣವಾಗಿ ಬಾಳುವವನೇ ಅನುಭಾವಿ, ಅವನ ಸ್ಥಿತಿಯೇ ಅನುಭಾವ. ಈ ಸಾಮರಸ್ಯಸ್ಥಿತಿಯನ್ನೇ ಲಿಂಗಾಯತರಲ್ಲಿ ಕ್ರಿಯಾಜ್ಞಾನಸಾಮರಸ್ಯ, ಲಿಂಗಾಂಗಸಾಮರಸ್ಯ, ಲಿಂಗೈಕ್ಯವೆಂದು ಕರೆಯುತ್ತಾರೆ. ಇದೇ "ಲಿಂಗವಿಡಿದು ಲಿಂಗಸಿದ್ಧಿ"ಯೆನಿಸುತ್ತದೆ. ಇಲ್ಲಿ ಅಂಗವು

ಆಚರಣೆ (ಸಾಧನೆ)ಯ ಮೂಲಕ ಕ್ರಮವಾಗಿ ಐಕ್ಯಸ್ಥಿತಿ ಪಡೆಯುವುದರಿಂದ ಇದಕ್ಕೆ 'ಆಚರಣೆಯ ಸ್ಥಲ' (ಸಾಧನೆಯ ಸ್ಥಲ) ಇಲ್ಲವೆ 'ಅಂಗಸ್ಥಲ' ವೆಂದು ಕರೆಯುತ್ತಾರೆ.

ಲಿಂಗಾಯತನಾದವನು ಕ್ರಮೇಣ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಹಂತಗಳನ್ನೇರಿ ಕೊನೆಗೆ ಐಕ್ಯಸ್ಥಿತಿ ಪಡೆಯಬೇಕೆಂಬುದು ಬಸವಣ್ಣನವರ ಷಟ್‌ಸ್ಥಲ ಪ್ರತಿಪಾದನೆಯಾಗಿದ್ದಿತು, ಚೆನ್ನಬಸವಣ್ಣ ಇದರಿಂದ ಭಿನ್ನನಾಗುತ್ತಾನೆ, ಯಾವುದೇ ವ್ಯಕ್ತಿ ಹುಟ್ಟುತ್ತಲೇ ಮೇಲೆ ಹೇಳಿದ ಆರರಲ್ಲಿ ಯಾವುದೋ ಒಂದು ಸ್ಥಲಮನೋಧರ್ಮದವನಿರುತ್ತಿದ್ದು, ಅವನು ಆಯಾ ಸ್ಥಲಮನೋಧರ್ಮದಿಂದಲೇ ಭಕ್ತ, ಮಹೇಶಾದಿ ೬ ಸ್ಥಲಗಳನ್ನು ಏರಬೇಕೆಂದು ಪ್ರತಿಪಾದಿಸುತ್ತಾನೆ, ಚೆನ್ನಬಸವಣ್ಣ. ಇದನ್ನು ಬಸವಣ್ಣನವರು ಒಪ್ಪುತ್ತಾರೆ, ಈ ವಿಚಾರಗಳನ್ನು ತಿಳಿಸುವ ಬಸವಣ್ಣ, ಚೆನ್ನಬಸವಣ್ಣನವರ ವಚನಗಳು ಹೀಗಿವೆ :

ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ
ಮೆಲ್ಲಮೆಲ್ಲನೆ ಮಾಹೇಶ್ವರನೆನಿಸಿಕೊಂಬೆ
ಮೆಲ್ಲಮೆಲ್ಲನೆ ಪ್ರಸಾದಿಯೆನಿಸಿಕೊಂಬೆ
ಮೆಲ್ಲಮೆಲ್ಲನೆ ಪ್ರಾಣಲಿಂಗಿಯೆನಿಸಿಕೊಂಬೆ
ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ
ಮೆಲ್ಲಮೆಲ್ಲನೆ ಐಕ್ಯನೆನಿಸಿಕೊಂಬೆ
ಮೆಲ್ಲಮೆಲ್ಲನೆ ಷಡುಸ್ಥಲವ ಮೀಱಿ
ನಿರವಯಸ್ಥಲವನೈದುವೆ ಕೂಡಲಸಂಗಮದೇವಾ.

ಬಸವಣ್ಣನವರು ಮೊದಮೊದಲು ಪ್ರತಿಪಾದಿಸುತ್ತಿದ್ದ ಷಟ್‌ಸ್ಥಲ ಪದ್ಧತಿಯಿದು. ಚೆನ್ನಬಸವಣ್ಣನವರು ಇದನ್ನು ಖಂಡಿಸುತ್ತ,

ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ ಮಾಹೇಶ್ವರ,
ಮೆಲ್ಲಮೆಲ್ಲನೆ ಪ್ರಸಾದಿ, ಮೆಲ್ಲಮೆಲ್ಲನೆ ಪ್ರಾಣಲಿಂಗಿ,
ಮೆಲ್ಲಮೆಲ್ಲನೆ ಶರಣ, ಮೆಲ್ಲಮೆಲ್ಲನೆ ಐಕ್ಯರಾದೆವೆಂಬರು ನಿಮ್ಮ ಶರಣರು
ತಾವೇನು ಮರುಜವಣಿಯ ಕೊಂಡರೆ?
ಆವ ಸ್ಥಲದಲಿ ನಿಂದರೆಯೂ
ಆ ಸ್ಥಲದಲಿ ಷಡುಸ್ಥಲವಡಗದಿದ್ದರೆ
ಆ ಭಕ್ತಿಯ ಬಾಯಲ್ಲಿ ಹುಡಿಹೊಯ್ಯನೆ ಕೂಡಲ ಚೆನ್ನಸಂಗಮದೇವ?

ಎಂದು ಷಟ್‌ಸ್ಥಲದಲ್ಲಿ ಹೊಸಪದ್ಧತಿಯನ್ನು ಪ್ರತಿಪಾದಿಸುತ್ತಾರೆ, ಇದನ್ನು ಬಸವಣ್ಣನವರು ಒಪ್ಪುತ್ತ ಮೆಲ್ಲಮೆಲ್ಲನೆ ಭಕ್ತಾದ್ಯೈಕ್ಯಾಂತವಾದೆಹೆನೆಂದು

ತಾಮಸಜ್ಞಾನದಲ್ಲಿರಲು

ಅದಕ್ಕೆ 'ನೀನು ನಿತ್ಯವ ಪಡೆದು ಬಂದೆಯಾ' ಎಂದು

ನಿಂದ ಸ್ಥಲದಲ್ಲಿಯೆ ನಿಜಷಡುಸ್ಥಲವಡಗದಿದ್ದಡೆ

ಜಂಗಮದಾಸೋಹವೇಕೆಂದು ಹೇಳಿ ನಿಜವ ಕರುಣಿಸಿದನಾಗಿ

ಲಿಂಗಜಂಗಮದ ಭೇದವ ಚೆನ್ನಬಸವಣ್ಣ ಬಲ್ಲ . . . (ಬ.ವ. ೧೨೭೪)

ಎಂದು ಹೇಳುತ್ತಿದ್ದು, ಈ ಹೊಸ ಪದ್ಧತಿಯ ಪ್ರಕಾರ ಷಡುಸ್ಥಲದ ಸಂಯೋಜನೆ ಹೀಗಿದೆ:

ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕಾರುಣ್ಯಸ್ಥಲ, ವಿಭೂತಿಸ್ಥಲ, ಪಂಚಾಕ್ಷರಿಸ್ಥಲ, ಲಿಂಗಧಾರಣಸ್ಥಲ, ತಾಮಸನಿರಸನ ಸ್ಥಲ, ಎಂಬ ಸ್ಥಲಗಳು ಪೀಠಿಕೆಯಾಗಿ ಬಂದ ಬಳಿಕ, ಮೇಲೆ ಹೇಳಿದ ಹೊಸ ಪದ್ಧತಿಯ ಷಟ್‌ಸ್ಥಲ ವಿಚಾರ ಹೀಗೆ ನಿರೂಪಿಸಲ್ಪಟ್ಟಿದೆ :

೧ **ಭಕ್ತಸ್ಥಲ** : ಭಕ್ತನ ಜ್ಞಾನಿಸ್ಥಲ, ಭಕ್ತನ ಭಕ್ತಸ್ಥಲ, ಭಕ್ತನ ಮಾಹೇಶ್ವರಸ್ಥಲ, ಭಕ್ತನ ಪ್ರಸಾದಿಸ್ಥಲ, ಭಕ್ತನ ಪ್ರಾಣಲಿಂಗಿಸ್ಥಲ, ಭಕ್ತನ ಶರಣಸ್ಥಲ, ಭಕ್ತನ ಐಕ್ಯಸ್ಥಲ.

೨ **ಮಾಹೇಶ್ವರಸ್ಥಲ** : ಮಾಹೇಶ್ವರನ ಜ್ಞಾನಿಸ್ಥಲ, ಮಾಹೇಶ್ವರನ ಮಾಹೇಶ್ವರಸ್ಥಲ, ಮಾಹೇಶ್ವರನ ಭಕ್ತಸ್ಥಲ, ಮಾಹೇಶ್ವರನ ಪ್ರಸಾದಿಸ್ಥಲ, ಮಾಹೇಶ್ವರನ ಪ್ರಾಣಲಿಂಗಿಸ್ಥಲ. ಮಾಹೇಶ್ವರನ ಶರಣಸ್ಥಲ, ಮಾಹೇಶ್ವರನ ಐಕ್ಯಸ್ಥಲ.

೩ **ಪ್ರಸಾದಿಸ್ಥಲ** : ಪ್ರಸಾದಿಯ ಜ್ಞಾನಿಸ್ಥಲ, ಪ್ರಸಾದಿಯ ಪ್ರಸಾದಿಸ್ಥಲ, ಪ್ರಸಾದಿಯ ಭಕ್ತಸ್ಥಲ, ಪ್ರಸಾದಿಯ ಮಾಹೇಶ್ವರಸ್ಥಲ, ಪ್ರಸಾದಿಯ ಪ್ರಾಣಲಿಂಗಿಸ್ಥಲ, ಪ್ರಸಾದಿಯ ಶರಣಸ್ಥಲ, ಪ್ರಸಾದಿಯ ಐಕ್ಯಸ್ಥಲ.

೪ **ಪ್ರಾಣಲಿಂಗಿಸ್ಥಲ** : ಪ್ರಾಣಲಿಂಗಿಯ ಜ್ಞಾನಿಸ್ಥಲ, ಪ್ರಾಣಲಿಂಗಿಯ ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಿಯ ಭಕ್ತಸ್ಥಲ, ಪ್ರಾಣಲಿಂಗಿಯ ಮಾಹೇಶ್ವರಸ್ಥಲ, ಪ್ರಾಣಲಿಂಗಿಯ ಪ್ರಸಾದಿಸ್ಥಲ, ಪ್ರಾಣಲಿಂಗಿಯ ಶರಣಸ್ಥಲ, ಪ್ರಾಣಲಿಂಗಿಯ ಐಕ್ಯಸ್ಥಲ.

೫ **ಶರಣಸ್ಥಲ** : ಶರಣನ ಜ್ಞಾನಿಸ್ಥಲ, ಶರಣನ ಶರಣಸ್ಥಲ, ಶರಣನ ಭಕ್ತಸ್ಥಲ, ಶರಣನ ಮಾಹೇಶ್ವರಸ್ಥಲ, ಶರಣನ ಪ್ರಸಾದಿಸ್ಥಲ, ಶರಣನ ಪ್ರಾಣಲಿಂಗಿಸ್ಥಲ, ಶರಣನ ಐಕ್ಯಸ್ಥಲ.

೬ **ಐಕ್ಯಸ್ಥಲ** : ಐಕ್ಯನ ಜ್ಞಾನಿಸ್ಥಲ, ಐಕ್ಯನ ಐಕ್ಯಸ್ಥಲ, ಐಕ್ಯನ ಭಕ್ತಸ್ಥಲ, ಐಕ್ಯನ ಮಾಹೇಶ್ವರಸ್ಥಲ, ಐಕ್ಯನ ಪ್ರಸಾದಿಸ್ಥಲ, ಐಕ್ಯನ ಪ್ರಾಣಲಿಂಗಿಸ್ಥಲ, ಐಕ್ಯನ ಶರಣಸ್ಥಲ.

ಶರಣನಾದವನ ಮನಸ್ಥಿತಿ ಈ ಆರರಲ್ಲಿ ಯಾವುದೇ ಒಂದು ಸ್ಥಲವನ್ನು ಸ್ಥಾಯಿಯಾಗಿಟ್ಟುಕೊಂಡು ಆರು ಹಂತಗಳಲ್ಲಿ ವಿಕಾಸಗೊಳ್ಳುತ್ತ, ಅಂತಿಮ ಹಂತಪಡೆಯುತ್ತದೆ. ಇದನ್ನು ಮಿಶ್ರಷಡುಸ್ಥಲವೆಂದು ಕರೆಯುತ್ತಾರೆ. ಈ ಷಡುಸ್ಥಲವನ್ನು ಪ್ರಥಮವಾಗಿ ಪ್ರತಿಪಾದಿಸಿದನಾಗಿ ಚೆನ್ನಬಸವಣ್ಣನಿಗೆ "ಷಡುಸ್ಥಲ ಚಕ್ರವರ್ತಿ" ಎಂಬ ಗೌರವ ಪ್ರಾಪ್ತವಾಗಿದೆ.

ಲಿಂಗಭೋಗೋಪಭೋಗ

ಮೇಲೆ ವಿವರಿಸಿದ ಭಕ್ತನ ಐಕ್ಯಸ್ಥಿತಿ, ಮಾಹೇಶ್ವರನ ಐಕ್ಯಸ್ಥಿತಿ, ಪ್ರಸಾದಿಯ ಐಕ್ಯಸ್ಥಿತಿ, ಪ್ರಾಣಲಿಂಗಿಯ ಐಕ್ಯಸ್ಥಿತಿ, ಶರಣನ ಐಕ್ಯಸ್ಥಿತಿ, ಐಕ್ಯನ ಶರಣಸ್ಥಿತಿ–ಈ ಆರರಲ್ಲಿ ಒಂದು ಸ್ಥಿತಿ ಪಡೆದವನೇ ಶರಣ. ಅಂಗವು ಲಿಂಗವಾದ ಸ್ಥಿತಿಯಿದು. ಈಗ ಆತನದು ಲಿಂಗಭೋಗೋಪಭೋಗ ಜೀವನ. ಅಂದರೆ ವ್ಯಕ್ತಿಯು ಲೋಕವನ್ನು ನೇತ್ರ, ಶ್ರೋತ್ರ, ನಾಸಿಕ, ಜಿಹ್ವೆ, ತ್ವಚೆಗಳೆಂಬ ಐದು ಇಂದ್ರಿಯಗಳ ಮೂಲಕ ಭೋಗಿಸುತ್ತಿದ್ದು, ಈ ಇಂದ್ರಿಯ ಗುಣಗಳನ್ನು ಲಿಂಗವನ್ನಾಗಿ ಮಾಡಿಕೊಂಡರೆ ಅಲ್ಲಿ ನಡೆಯುವ ಭೋಗಕ್ರಿಯೆ ಲಿಂಗಭೋಗವಾಗುತ್ತದೆ. ನಾಸಿಕ ಚೈತನ್ಯ ಆಚಾರಲಿಂಗವಾಗಿ ಗಂಧವನ್ನು, ಜಿಹ್ವಾಚೈತನ್ಯ ಗುರುಲಿಂಗವಾಗಿ ರಸವನ್ನು, ನೇತ್ರಚೈತನ್ಯ ಶಿವಲಿಂಗವಾಗಿ ರೂಪವನ್ನು, ತ್ವಕ್‌ಚೈತನ್ಯ ಜಂಗಮಲಿಂಗವಾಗಿ ಸ್ಪರ್ಶವನ್ನು, ಶ್ರೋತ್ರಚೈತನ್ಯ ಪ್ರಸಾದಲಿಂಗವಾಗಿ ಶಬ್ದವನ್ನು ಭೋಗಿಸುತ್ತದೆ. ಇವೆಲ್ಲವುಗಳಿಗೆ ಕೇಂದ್ರವಾದ ಹೃದಯಚೈತನ್ಯ ಮಹಾಲಿಂಗವಾಗಿ ಇವೆಲ್ಲವನ್ನು ಭೋಗಿಸುತ್ತದೆ. ಇದನ್ನೇ ಲಿಂಗಭೋಗೋಪಭೋಗ ಎನ್ನುವುದು. ವಚನ ಸಾಹಿತ್ಯದಲ್ಲಿ ಈ ವಿಷಯವನ್ನು–

> ಎನ್ನ ಶ್ರೋತ್ರದ ಕೊನೆಯಲ್ಲಿರ್ದು ಸುಶಬ್ದವನಜೀವಾತನು ನೀನೆ,
> ಎನ್ನ ತ್ವಕ್ಕಿನ ಕೊನೆಯಲ್ಲಿರ್ದು ಸುಸ್ಪರ್ಶನವ ಮುಟ್ಟುವಾತನು ನೀನೆ,
> ಎನ್ನ ನೇತ್ರದ ಕೊನೆಯಲ್ಲಿರ್ದು ಸುರೂಪವನಜೀವಾತನು ನೀನೆ,
> ಎನ್ನ ಜಿಹ್ವೆಯ ಕೊನೆಯಲ್ಲಿರ್ದು ಸುರುಚಿಯನಜೀವಾತನು ನೀನೆ,
> ಎನ್ನ ಘ್ರಾಣದ ಕೊನೆಯಲ್ಲಿರ್ದು ಸುವಾಸನೆಯನಜೀವಾತನು ನೀನೆ,
> ಎನ್ನ ಸರ್ವಾಂಗದಲ್ಲಿರ್ದು ಸರ್ವಭೋಗೋಪಭೋಗವ
> ಭೋಗಿಸುವಾತನು ನೀನೆ, ಕೂಡಲ ಚೆನ್ನಸಂಗಮದೇವಾ.

ಎಂಬಂಥ ಅನೇಕ ವಚನಗಳ ಮೂಲಕ ಪ್ರತಿಪಾದಿಸಲಾಗಿದೆ. ವ್ಯಕ್ತಿಯು ಲೋಕಾನುಭವವನ್ನು ಇಲ್ಲಿ ಶಿವಾನುಭವರೂಪದಿಂದ ಪಡೆಯುವುದರಿಂದ ಇದನ್ನು "ಅನುಭಾವಸ್ಥಲ" ಪದ್ಧತಿಯೆಂದೂ ಕರೆಯುತ್ತಾರೆ. ೩೬ ಸ್ಥಲಗಳ ಮಿಶ್ರಣ ಕಾರಣವಾಗಿ 'ಮಿಶ್ರ ಷಡುಸ್ಥಲ'ವೆಂದೂ ಕರೆಯುತ್ತಾರೆ.

ಒಟ್ಟಿನಲ್ಲಿ 'ಲಿಂಗವಿಡಿದು ಲಿಂಗಸಿದ್ಧಿ' ತತ್ವ 'ಆಚರಣೆ'ಯಾದರೆ 'ಲಿಂಗಭೋಗೋಪಭೋಗ 'ತತ್ವ'ವು 'ಸಂಬಂಧ'ವೆನಿಸುತ್ತದೆ. ಈ ಎರಡೂ ಸಿದ್ಧಾಂತಗಳನ್ನು ಪ್ರತಿಪಾದಿಸುವ ವಚನ ಸಂಕಲನಗಳಿಗೆ "ಆಚರಣೆಯ ಸಂಬಂಧದ ವಚನ" ಎಂದು ಕರೆಯಲಾಗುತ್ತದೆ. ಕನ್ನಡದಲ್ಲಿ ಇಂಥ ಅನೇಕ ವಚನ ಕಟ್ಟುಗಳು ಸಿಗುತ್ತವೆ.

ಪರಿಷ್ಕರಣ

ಕೂಡಲಸಂಗಮಾವಧೂತನ "ಶಿಖಾರತ್ನಪ್ರಕಾಶವು" ಹೆಸರಿನ ಬಾಲಸಂಗಯ್ಯನ ವಚನಕೃತಿಯೊಂದಿಗೆ ವಚನಸಾಹಿತ್ಯದ ಪ್ರಕಟಣೆ ೧೮೮೩ರಿಂದ ಪ್ರಾರಂಭವಾಯಿತು. ಆಮೇಲೆ ಈ ಪ್ರಕಟನಕಾರ್ಯ ವ್ಯಾಪಕವಾಗಿ ಬೆಳೆಯುತ್ತ ನಡೆದು, ಅಲ್ಲಿ–

೧. ಪ್ರಾರಂಭದ ಪ್ರಯತ್ನಗಳು

೨. ವಿಜಾಪುರದ ಶಿವಾನುಭವ ಗ್ರಂಥಮಾಲೆಯ ಪ್ರಕಟಣೆಗಳು

೩. ಧಾರವಾಡ ಕನ್ನಡ ಅಧ್ಯಯನಪೀಠದ ಪ್ರಕಟಣೆಗಳು

೪. ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಯ ಪ್ರಕಟಣೆಗಳು.

ಎಂಬ ನಾಲ್ಕು ಪ್ರಮುಖ ಘಟ್ಟಗಳು ಕಾಣಿಸಿಕೊಂಡಿವೆ.

ಗ್ರಂಥಸಂಪಾದನ ಪ್ರಸಂಗದಲ್ಲಿ ಶಿಷ್ಟಸಾಹಿತ್ಯದ ಸಂಪಾದನೆಗೆ ಬಳಸುವ ಸೂತ್ರಗಳನ್ನೇ ವಚನಸಾಹಿತ್ಯ ಸಂಪಾದನೆಗೂ ವಿದ್ವಾಂಸರು ಅನ್ವಯಿಸುತ್ತಲಿದ್ದಾರೆ. ಇದು ಸಮರ್ಪಕ ವಿಧಾನವಲ್ಲವೆಂದು ಕಾಣುತ್ತದೆ. ಹಸ್ತಪ್ರತಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸಂಗ್ರಹಿಸಿದಷ್ಟೂ ಶಿಷ್ಟಸಾಹಿತ್ಯಸಂಪಾದನೆ ಹೆಚ್ಚು ಶುದ್ಧವಾಗುತ್ತಿದ್ದರೆ, ವಚನಸಾಹಿತ್ಯಸಂಪಾದನೆ ಹೆಚ್ಚು ಅಶುದ್ಧವಾಗುವ ಸಂಭವವಿದೆ. ಏಕೆಂದರೆ ಇಲ್ಲಿ ವಿಭಿನ್ನ ಸಂಪ್ರದಾಯದ ಎಲ್ಲ ಹಸ್ತಪ್ರತಿಗಳಿಂದ ಪಾಠಗಳನ್ನು ಆಯ್ದುಕೊಂಡು, ನಮ್ಮದೇ ಆದ ಬೇರೊಂದು ಪಾಠ ರೂಪಿಸುವ ಅಪಾಯವಿದೆ. ಆದುದರಿಂದ ವಚನಗಳನ್ನು ಪರಿಷ್ಕರಿಸುವಲ್ಲಿ ಒಂದು ಉತ್ತಮ ಹಸ್ತಪ್ರತಿಯನ್ನು ಆಯ್ದುಕೊಂಡು ಅಲ್ಲಿಯ ವಚನಗಳ ಶಿಲ್ಪಕ್ಕೆ ಭಂಗ ಬರದಂತೆ ಅಂದರೆ ಅವರ ಪಾಠಸಂಪ್ರದಾಯಕ್ಕೆ ಧಕ್ಕೆ ಆಗದಂತೆ ಭಾಷಿಕ ದೋಷಗಳನ್ನು ದೂರ ಮಾಡಬೇಕು. ಅವಶ್ಯವಿದ್ದಲ್ಲಿ ಮಾತ್ರ ಅದೇ ಕುಟುಂಬದ ಬೇರೊಂದು ಹಸ್ತಪ್ರತಿಯಿಂದ ಪಾಠಾಂತರ ಗುರುತಿಸಿಕೊಂಡು, ಆ ವಚನವನ್ನು ಸುಧಾರಣೆ ಮಾಡಿಕೊಳ್ಳಬೇಕು, ಸರಿಯಾದ ಅರ್ಥಕೊಡುವ ಮಟ್ಟಕ್ಕೆ ಅದನ್ನು ತಂದು ನಿಲ್ಲಿಸಬೇಕು. ವಚನ ಸಾಹಿತ್ಯಸಂಪಾದನೆಯಲ್ಲಿ ಇದೇ ಸರಿಯಾದ ವಿಧಾನವಾಗಿದೆ. ಪ್ರಸ್ತುತ ಕೃತಿಯನ್ನು ಈ ವಿಧಾನದ ಆದರ್ಶದಲ್ಲಿ ಪರಿಷ್ಕರಿಸಲಾಗಿದೆ. ವಚನದ ಪಾಠಸಂಪ್ರದಾಯವನ್ನು ರಕ್ಷಿಸಲಾಗಿದೆ. ಹೀಗಾಗಿ ಒಂದೇ ವಚನ ಇಲ್ಲಿಯ ಮೂರೂ ಕೃತಿಗಳಲ್ಲಿ ಬೇರೆ ಬೇರೆ ಪಾಠಗಳಿಂದ ಕಂಡುಬುರುವುದು ಸಹಜವಾಗಿದೆ. ಪ್ರಸ್ತುತ "ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ" ಹೆಸರಿನ ಕೃತಿಯಲ್ಲಿ ಮೂರು ಕೃತಿಗಳನ್ನು ಈ ರೀತಿಯಿಂದ ಸಂಪಾದಿಸಿ ಕೊಡಲಾಗಿದ್ದು, ಅವುಗಳ ವಿವರ ಹೀಗಿದೆ :

೧. ಚೆನ್ನಬಸವರಾಜದೇವರ ಷಡುಸ್ಥಲವಚನ :

ಭಕ್ತನ ಭಕ್ತ, ಭಕ್ತನ ಮಾಹೇಶ್ವರ . . . ಈ ರೀತಿ ಸ್ಥಲವಿವೇಚನೆಯುಳ್ಳ ೮೭೧ ವಚನಗಳ ಸಂಕಲನವಿದು, ಸುಮಾರು ೮ ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ VIII-11 ರಲ್ಲಿ "ಚೆನ್ನಬಸವರಾಜದೇವರ ಷಡುಸ್ಥಲದ ವಚನ" ಎಂಬ ಹೆಸರಿನ ಈ ತಾಳೆಗರಿ ಪ್ರತಿ (ನಂ. ಕೆ.೧೨೦೬ / ೧. ಗರಿ ೬೪. ೧೩" x ೨.೨೫") ನನ್ನ ಗಮನಕ್ಕೆ ಬಂದಿತು. ಚೆನ್ನಬಸವಣ್ಣನವರ ಷಟ್ಸ್ಥಲವಚನ ಕಟ್ಟುಗಳಲ್ಲಿಯೇ ಇದು ದೊಡ್ಡ ಗಾತ್ರದ್ದಾಗಿದೆ. ಈ ಅಂಶ ನನ್ನ ಗಮನವನ್ನು ಬಲವಾಗಿ ಸೆಳೆಯಿತು. ವಚನ ಸಂಖ್ಯಾದೃಷ್ಟಿಯಿಂದ ಬಸವಣ್ಣ, ಪ್ರಭುದೇವರ ಷಟ್ಸ್ಥಲವಚನ ಕಟ್ಟುಗಳಿಗೆ ಸಮಾನವಾಗಿರುವ ಈ ಸಂಕಲನವನ್ನು ಪ್ರಕಟಿಸುವದು ಅವಶ್ಯವೆನಿಸಿ ಹಲವು ವರ್ಷಗಳ ಹಿಂದೆಯೇ ಮೈಸೂರಿನಿಂದ ತರಿಸಿಕೊಂಡು, ಪ್ರತಿಮಾಡಿಕೊಂಡು, 'ಮೂ' ಎಂಬ ಸಂಕೇತಕೊಟ್ಟು ಇದನ್ನು ಆಧಾರ ಪ್ರತಿಯೆಂದು ಇಟ್ಟುಕೊಳ್ಳಲಾಯಿತು. ಆಮೇಲೆ ಶರಣಸ್ಥಲದ

ವರೆಗೆ ಮಾತ್ರ ಇರುವ ಈ ಸಂಪ್ರದಾಯದ ತಾಳೆಗರಿಯ ಒಂದು ಅಪೂರ್ಣ ಪ್ರತಿ (ನಂ.೧೫೬) ಧಾರವಾಡದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಂಡಾರದಲ್ಲಿರುವ ವಿಷಯವು ತಿಳಿದುಬಂದಿತು. ಇದನ್ನು 'ಅ' ಸಂಕೇತದಿಂದ ಅವಶ್ಯವೆನಿಸಿದಲ್ಲಿ ಮಾತ್ರ ಬಳಸಿಕೊಳ್ಳಲಾಗಿದೆ.[೪] ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಚೆನ್ನಬಸವಣ್ಣನವರ ವಚನಗಳು (ದ್ವಿ. ಆ.) ಕೃತಿಯ ಪಾಠಗಳನ್ನೂ ಅವಶ್ಯವಿರುವಲ್ಲಿ ಸ್ವೀಕರಿಸಲಾಗಿದೆ.

ಇಲ್ಲಿಯ ಸುಮಾರು ೮೧ ವಚನಗಳು ಹೊಸವು. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಚೆನ್ನಬಸವಣ್ಣನವರ ವಚನಗಳ ದ್ವಿತೀಯ ಆವೃತ್ತಿಯಲ್ಲಿ ಸಿಗುವ ಸಮಾನ ವಚನಗಳನ್ನು ಈ ಪರಿಷ್ಕರಣದಲ್ಲಿ ಆಯಾ ವಚನದ ಮುಂದೆ ಚೌಕಕಂಸಿನಲ್ಲಿ ಸೂಚಿಸಲಾಗಿದೆ. ಹಾಗೆ ಸೂಚಿಸುವುದನ್ನು ಹೊಸ ವಚನಗಳೆಂದು ಭಾವಿಸಬೇಕು.

೨. ಚೆನ್ನಬಸವೇಶ್ವರದೇವರು ನಿರೂಪಿಸಿದ ಅನುಭಾವಷಟ್ಸ್ಥಲದ ವಚನಂಗಳು :

ಭಕ್ತನ ಆಚಾರಲಿಂಗ, ಭಕ್ತನ ಶಿವಲಿಂಗ . . . ಈ ರೀತಿ 'ಅನುಭಾವಸ್ಥಲ' ಪದ್ಧತಿಯಲ್ಲಿ ವಚನಗಳನ್ನು ಸಂಕಲಿಸಿದ ಷಡುಸ್ಥಲಕೃತಿಯಿದು. ಚೆನ್ನಬಸವಣ್ಣನವರ ಷಟ್‌ಸ್ಥಲವಚನ ಕಟ್ಟುಗಳಲ್ಲಿಯೇ ಹೆಚ್ಚು ಜನಪ್ರಿಯವಾಗಿರುವ ಇದರ ಅನೇಕ ಪ್ರತಿಗಳು ಹುಟ್ಟಿಕೊಂಡಿವೆ. ಈ ಕೃತಿಯನ್ನು ೧೯೧೪ರಲ್ಲಿ ಬಳ್ಳಾರಿಯ ಶಿವಲಿಂಗ ಶೆಟ್ರು,[೫] ೧೯೨೬ರಲ್ಲಿ ಶ್ರೀ ಹಳಕಟ್ಟಿಯವರು ಪ್ರಕಟಿಸಿದ ಬಳಿಕ ಬಹಳ ದಿನಗಳ ವರೆಗೆ ಪ್ರಕಟವಾಗಿರಲಿಲ್ಲ. ಡಾ. ಆರ್.ಸಿ.ಹಿರೇಮಠರು ಪ್ರಕಟಿಸಿದ್ದರೂ ಮಧ್ಯೆ ಮಧ್ಯೆ ಹೊಸದಾಗಿ ಲಭಿಸಿದ ವಚನಗಳನ್ನು ಸೇರಿಸಿರುವುದರಿಂದ ಈ ಕಟ್ಟಿನ ಮೂಲ ಚೌಕಟ್ಟು ತನ್ನ ಸ್ವರೂಪವನ್ನು ಕಳೆದುಕೊಂಡಿದ್ದಿತು, ೩೨೨ (೨೩೨?) ವಚನಗಳ ಈ ಕೃತಿ ಪರಿಷ್ಕರಣಕ್ಕಾಗಿ ಕನ್ನಡ ಅಧ್ಯಯನಪೀಠದ ತಾಳೆಗರಿ ಪ್ರತಿ (ನಂ. ೨೫. ಗರಿ ೬೮, ೧.೫" x ೮") ಯನ್ನು 'ಮೂ' ಸಂಕೇತದಿಂದ ಆಧಾರ ಪ್ರತಿಯಾಗಿ ಇಟ್ಟುಕೊಳ್ಳಲಾಗಿದೆ. ಇದಕ್ಕೆ ಅವಶ್ಯವೆನಿಸಿದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಯಾದ ಚೆನ್ನಬಸವಣ್ಣನವರ ವಚನಗಳು (ದ್ವಿ. ಆ.) ಕೃತಿಯನ್ನು ಭಿನ್ನಪಾಠಗಳಿಗಾಗಿ ಬಳಸಿಕೊಳ್ಳಲಾಗಿದೆ. ಈ ಆವೃತ್ತಿಯಲ್ಲಿ ಸಿಗುವ ಸಮಾನ ವಚನಗಳನ್ನು ಪ್ರಸ್ತುತ ಪರಿಷ್ಕರಣದ ವಚನಗಳ ಮುಂದೆಯೇ ಚೌಕ ಕಂಸಿನಲ್ಲಿ ತೋರಿಸಲಾಗಿದೆ.

೩. ಚೆನ್ನಬಸವಣ್ಣನವರ ಷಡುಸ್ಥಲ ನಿರ್ಣಯ :

ಭಕ್ತ, ಮಾಹೇಶ್ವರ, ಪ್ರಸಾದಿ . . . ಹೀಗೆ ಸರಳವಾಗಿ ಆರು ಸ್ಥಲಗಳಲ್ಲಿ ಚೆನ್ನಬಸವಣ್ಣನವರ ೧೨೪ ವಚನಗಳನ್ನು ಸಂಕಲಿಸಿದ ಇನ್ನೊಂದು ಬಗೆಯ ಷಟ್‌ಸ್ಥಲ ಕೃತಿಯಿದು. ಕನ್ನಡ ಅಧ್ಯಯನ

---

೪. ಈ ಬಗೆಯ ಕಾಗದ ಪ್ರತಿ ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿಯೂ ಇರುವ ಸಾಧ್ಯತೆಯಿದೆ.(ಮೂರುಸಾವಿರ ಮಠದ ಹಸ್ತಪ್ರತಿ ಸೂಚಿ, ಸಂಖ್ಯೆ ೩೫೩ ನೋಡಿರಿ)

೫. ೧೯೧೪ರಲ್ಲಿ ಶ್ರೀ ಕಮಡಳ್ಳಿಮಠ ಈಶ್ವರಯ್ಯ ಅವರು ಬಳ್ಳಾರಿಯ ಕರ್ನಾಟಕ ಬುಕ್ ಡಿಪೋ ಮೂಲಕ "ಚೆನ್ನಬಸವಣ್ಣನವರ ವಚನಗಳು" ಕೃತಿಯನ್ನು ಪ್ರಕಟಿಸಿದ್ದಾರೆ. ಶಿವಲಿಂಗಶೆಟ್ರ ಪ್ರಕಟನೆ ಮತ್ತು ಇದು ಒಂದೇ ಆಗಿರಬಹುದೇ? ನೋಡಿ : ಕನ್ನಡ ಗ್ರಂಥ ಸೂಚಿ, ಸಂಪುಟ ೩, ಮೈಸೂರು ವಿಶ್ವವಿದ್ಯಾಲಯ, ಪುಟ ೧೬೪, ೧೬೫.

ಪೀಠದ ತಾಳೆಗರಿ (ನಂ. ೧೫೩. ಗರಿ ೨೨. ೧೦.೫" x ೧.೭೫") ಪ್ರತಿಯನ್ನು 'ಮೂ' ಸಂಕೇತದಿಂದ ಆಧಾರಪ್ರತಿಯನ್ನಾಗಿ ಇಟ್ಟುಕೊಳ್ಳಲಾಗಿದೆ. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಕಾಗದಪ್ರತಿ (ನಂ. ೭೫೭–II. ಪತ್ರ ೧೫. ೬.೨೫" x ೪")ಯನ್ನು 'ಅ' ಸಂಕೇತದಿಂದ ಪಾಠಾಂತರಕ್ಕೆ ಅವಶ್ಯವಿದ್ದಲ್ಲಿ ಮಾತ್ರ ಬಳಸಿಕೊಳ್ಳಲಾಗಿದೆ.[೬] ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಚೆನ್ನಬಸವಣ್ಣನವರ ವಚನಗಳು ಕೃತಿಯನ್ನು (ದ್ವಿ. ಆ) ಪಾಠಾಂತರಕ್ಕಾಗಿ ಬಳಸಿಕೊಳ್ಳಲಾಗಿದ್ದು, ಈ ಆವೃತ್ತಿಯಲ್ಲಿ ಕಂಡುಬರುವ ಸಮಾನ ವಚನಗಳನ್ನು ಪ್ರಸ್ತುತ ಪರಿಷ್ಕರಣದ ಆಯಾ ವಚನಗಳ ಮುಂದೆಯೇ ಚೌಕ ಕಂಸಿನಲ್ಲಿ ತೋರಿಸಲಾಗಿದೆ. ಹಾಗೆ ತೋರಿಸದವು ಹೊಸ ವಚನಗಳೆಂದು ಭಾವಿಸಬೇಕು.

ವಚನ ಸಾಹಿತ್ಯದಲ್ಲಿ ಸಿದ್ಧರಾಮನ ಹೆಸರಿನಲ್ಲಿ ಪ್ರಕ್ಷಿಪ್ತ ವಚನಗಳ ಸಂಖ್ಯೆ ಅಧಿಕವಾಗಿದ್ದರೆ, ಚೆನ್ನಬಸವಣ್ಣನವರ ವಚನಗಳಿಗೆ ಪಾಠಾಂತರ ಪ್ರಮಾಣ ಹೇರಳವಾಗಿದೆ. ಸಿದ್ಧರಾಮ ಶೈವದಿಂದ ಲಿಂಗಾಯತಕ್ಕೆ ಬಂದ ವಿಷಯವಾಗಿ ಇತಿಹಾಸದುದ್ದಕ್ಕೂ ಬೆಳೆದು ಬಂದಿರಬಹುದಾದ ವಾದ–ಪ್ರತಿವಾದಗಳ ಸಮರ್ಥನೆಗಾಗಿ ಪಕ್ಷ–ಪ್ರತಿಪಕ್ಷದವರು ಕೂಟವಚನಗಳನ್ನು ಹೇರಳ ಸಂಖ್ಯೆಯಲ್ಲಿ ಹುಟ್ಟಿಸಿದರೆಂದು ತೋರುತ್ತದೆ. ಚೆನ್ನಬಸವಣ್ಣನವರ ವಚನಗಳಿಗೆ ಕೂಟವಚನಗಳಿಗಿಂತ ಹೇರಳ ಭಿನ್ನಪಾಠ ಹುಟ್ಟಲು ಬೇರೆ ಕಾರಣವಿದೆ. ಈ ಪ್ರಸ್ತಾವನೆಯ ಪ್ರಾರಂಭದಲ್ಲಿ ಹೇಳಿದಂತೆ ಚೆನ್ನಬಸವಣ್ಣನವರ ವಚನಗಳ ಮುಖ್ಯವಸ್ತು ಧಾರ್ಮಿಕ ತತ್ವ. ಧರ್ಮದ ವಾರಸುದಾರರು ಕಾಲಕ್ಕೆ ತಕ್ಕಂತೆ ಮತ್ತು ತಮ್ಮ ಅಭಿರುಚಿಗೆ ತಕ್ಕಂತೆ ಇಲ್ಲಿಯ ಪಾಠಗಳನ್ನು ಲೋಪ, ಆಗಮ, ಆದೇಶ ರೂಪಗಳಲ್ಲಿ ಮಾರ್ಪುಗೊಳಿಸುತ್ತ ಬಂದುದೇ ಇದಕ್ಕೆ ಕಾರಣವಾಗಿರಬಹುದು. ಆದುದರಿಂದ ಚೆನ್ನಬಸವಣ್ಣನವರ ವಚನಗಳು ಸಂಕ್ಷಿಪ್ತ ಪಾಠಸಂಪ್ರದಾಯ, ವಿಸ್ತಾರ ಪಾಠಸಂಪ್ರದಾಯ ಇತ್ಯಾದಿ ರೀತಿಗಳಲ್ಲಿ ರೂಪಗೆಡುತ್ತ ಬಂದವು. ಮೇಲಾಗಿ ಎಲ್ಲರ ವಚನಗಳಿಗಿಂತ ಚೆನ್ನಬಸವಣ್ಣನವರ ವಚನಗಳು ಧಾರ್ಮಿಕ ಸಂದರ್ಭದಲ್ಲಿ ಹೆಚ್ಚು ಪ್ರಯೋಜನವೆನಿಸುವುದರಿಂದ ಅವುಗಳ ಲಿಪಿಕರಣ ಕಾರ್ಯವೂ ಪದೇ ಪದೇ ನಡೆದಿದೆ. ಈಗ ಲಿಪಿಕಾರರ ಅಜ್ಞಾನ, ಅನ್ಯಥಾಜ್ಞಾನ, ಅನವಧಾನಗಳಿಂದಾಗಿಯೂ ಈ ಪಾಠಾಂತರ ಕ್ರಿಯೆ ವರ್ಧಿಸಿದೆ.

ವಚನಗಳಲ್ಲಿ ಬಳಕೆಯಾಗಿರುವ ಸಂಸ್ಕೃತಶ್ಲೋಕಗಳ ಪ್ರಕ್ಷಿಪ್ತತೆ, ಪಾಠಾಂತರ ಇನ್ನೊಂದು ಸಮಸ್ಯೆಯೆನಿಸಿದೆ. ವಚನಗಳ ವಿಚಾರವನ್ನು ಸಮರ್ಥಿಸಲು ಅವುಗಳ ಒಡಲಲ್ಲಿ ಶರಣರೇ ಸಂಸ್ಕೃತಶ್ಲೋಕ ಬಳಸಿದುದುಂಟು. ಇನ್ನೂ ಸಮರ್ಥಿಸಲು ತರುವಾಯದವರು ಬೇರೆ ಕೆಲವು ಹೊಸ ಶ್ಲೋಕಗಳನ್ನು ಸೇರಿಸಿರುವ ಸಂಭವವುಂಟು. ಇದಕ್ಕೆ ವಿರುದ್ಧವಾಗಿ ಸಂಸ್ಕೃತಜ್ಞಾನವಿಲ್ಲದ ಲಿಪಿಕಾರರು ಮೂಲ ಶ್ಲೋಕಗಳನ್ನು ಕೈಬಿಟ್ಟಿರುವುದುಂಟು; ತಪ್ಪು ತಪ್ಪಾಗಿ ಲಿಪಿಸಿರುವುದುಂಟು. ೧೫೬ನೆಯ ನಂಬರಿನ ಪ್ರತಿಯಲ್ಲಿ ಸಂಸ್ಕೃತಶ್ಲೋಕಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಿದೆ. ಈ ಬಗೆಯ ಪ್ರತಿ ಇದೊಂದೇ ಇರುವುದರಿಂದ ಈ ಉಪಕ್ರಮ ವಿಶ್ವಾಸಾರ್ಹವಾದುದಲ್ಲವೆನಿಸುತ್ತದೆ.

---

೬. ಈ ಬಗೆಯ ಕಾಗದ ಪ್ರತಿ ಗದುಗಿನ ತೋಂಟದಾರ್ಯ ಮಠದಲ್ಲಿ (ಬಿ. ೧೭೮)ತಾಳೆ ಪ್ರತಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ (ಸೂಚಿ VIII–೬೨೨) ಇರುವುದಾಗಿ ತಿಳಿದುಬರುತ್ತದೆ.

ಸಾಮಾನ್ಯವಾಗಿ ಎಲ್ಲ ಪ್ರತಿಗಳಲ್ಲಿ ಸಂಸ್ಕೃತ ಶ್ಲೋಕಗಳಿರುವುದರಿಂದ ಈ ಸಂಪ್ರದಾಯದ ಹಸ್ತಪ್ರತಿಗಳೇ ಪ್ರಾಮಾಣಿಕವಾಗಿರಬಹುದು. ಹೀಗಾಗಿ ಈ ಸಂಪ್ರದಾಯದ ಕೆ. ೧೨೦೬/೧ ಪ್ರತಿಯನ್ನೇ ನಾವು ಒಪ್ಪಿಕೊಂಡಿದ್ದೇವೆ. ಲಿಪಿಕಾರರ ಅಜ್ಞಾನದಿಂದಾಗಿ ಈ ಮೂರು ಕೃತಿಗಳಲ್ಲಿ ಒಂದೂ ಶ್ಲೋಕ ಶುದ್ಧರೂಪದಲ್ಲಿ ಕಂಡುಬರುವುದಿಲ್ಲ. ತುಂಬ ನಿಷ್ಪ್ರಯೋಜಕವಾಗಿರುವ ಈ ಅಶುದ್ಧ ಶ್ಲೋಕಗಳನ್ನು ಅಡಿಯಲ್ಲಿಯೂ ಕೊಡದೆ ಇವುಗಳ ಸ್ಥಾನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ 'ಚೆನ್ನಬಸವಣ್ಣನವರ ವಚನಗಳು' ಗ್ರಂಥದ ದ್ವಿತೀಯ ಆವೃತ್ತಿಯಲ್ಲಿ ಕಂಡು ಬರುವ ಪರಿಷ್ಕೃತ ಶ್ಲೋಕಗಳನ್ನು ಸ್ವೀಕರಿಸಿದ್ದೇವೆ. ಇಷ್ಟಾಗಿಯೂ ಉಳಿದುಕೊಂಡ ಕೆಲವು ಶ್ಲೋಕಗಳನ್ನು ಪರಿಷ್ಕರಿಸುವುದು ನಮಗೆ ಅಸಾಧ್ಯವೆನಿಸಿದ ಕಾರಣ ಹಾಗೇ ಇಟ್ಟುಕೊಂಡಿದ್ದೇವೆ.

ಪಾಠಾಂತರಕ್ಕೆ ಸಂಬಂಧಪಟ್ಟಂತೆ ಇನ್ನೊಂದು ಸಮಸ್ಯೆಯೆಂದರೆ ಮುದ್ರಿಕೆ ಪಲ್ಲಟ. ಇದರಿಂದಾಗಿ ಕೆಲವೊಮ್ಮೆ ಬಸವಣ್ಣನವರ ವಚನಗಳು ಚೆನ್ನಬಸವಣ್ಣನವರ ಹೆಸರಿನಲ್ಲಿ, ಚೆನ್ನಬಸವಣ್ಣನವರ ವಚನಗಳು ಬಸವಣ್ಣನವರ ಹೆಸರಿನಲ್ಲಿ ಕಂಡುಬರುತ್ತವೆ. ಈ ಪ್ರಮಾದ ಕಾರಣವಾಗಿ ಬಸವಣ್ಣನವರ ಕೆಲವು ವಚನಗಳು ಇಲ್ಲಿ 'ಕೂಡಲ ಚೆನ್ನಸಂಗಮದೇವಾ' ಮುದ್ರಿಕೆಯಿಂದ ಸೇರಿಕೊಂಡಿವೆ. ಸಂಕಲನದ ಮೂಲ ಚೌಕಟ್ಟಿಗೆ ಭಂಗಬರಬಾರದೆಂದು ಅಡಿಯಲ್ಲಿ ನಿಜವಾದ ವಚನಕಾರನ ಸೂಚನೆ ಕೊಟ್ಟು ಅವುಗಳನ್ನು ಹಾಗೆಯೇ ಇಟ್ಟುಕೊಂಡಿದ್ದೇವೆ.

ಇದಲ್ಲದೆ ಚೆನ್ನಬಸವಣ್ಣನವರ ಕೆಲವು ವಚನಗಳು ಎರಡು ಕಡೆ ಬಂದಿವೆ. ಮೂಲ ಶಿಲ್ಪವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಅವುಗಳನ್ನೂ ಹಾಗೆಯೇ ಇಟ್ಟುಕೊಳ್ಳಲಾಗಿದೆ.

ಇದೆಲ್ಲವನ್ನು ಮೀರಿಯೂ ಎದುರಾಗುವ ಭಿನ್ನಪಾಠಗಳ ಸಮಸ್ಯೆಯಂತೂ ಅನಿವಾರ್ಯ ಸ್ವರೂಪದ್ದು. ಇಂಥಲ್ಲಿ ಲಿಂಗಾಯತತತ್ವ, ಶರಣರ ಶೈಲಿಗಳನ್ನು ಗಮನಿಸಿ ಪರಿಷ್ಕರಣಕಾರ್ಯವನ್ನು ಪೂರೈಸಿದ್ದೇವೆ. ಇಷ್ಟಾಗಿಯೂ ಅನೇಕ ಪಾಠ ಸಮಸ್ಯೆಗಳು ಇಲ್ಲಿ ಉಳಿದುಕೊಂಡಿರುವುದು ಸಹಜ. ಎರಡು ಕಣ್ಣೇಕೆ, ನಾಲ್ಕು ಕಣ್ಣಿನಿಂದ ಓದಿದರೂ ಅಲ್ಲಲ್ಲಿ ಹೆಚ್ಚಿನ ತಪ್ಪು ಉಳಿದಿವೆ. ವಿದ್ವಾಂಸರು ಇದನ್ನೆಲ್ಲವನ್ನು ಮನ್ನಿಸಬೇಕಾಗಿ ವಿನಂತಿ.

ಉಳಿದಿರುವ ಕೆಲಸ

ಚೆನ್ನಬಸವಣ್ಣನವರ 'ಷಟ್ಸ್ಥಲ ವಚನ ಕಟ್ಟು'ಗಳು (ಅ) ಭಕ್ತ, ಮಾಹೇಶ್ವರ, ಪ್ರಸಾದಿ..... ಹೀಗೆ ಆರು ಸ್ಥಲಗಳಲ್ಲಿ, (ಆ) ಭಕ್ತನ ಭಕ್ತ, ಭಕ್ತನ ಮಾಹೇಶ್ವರ, . . .ಹೀಗೆ ೩೬ ಸ್ಥಲಗಳಲ್ಲಿ, (ಇ) ಭಕ್ತನ ಆಚಾರಲಿಂಗ, ಭಕ್ತನ ಶಿವಲಿಂಗ..... ಹೀಗೆ ೩೬ ಸ್ಥಲಗಳಲ್ಲಿ ಸಿಗುತ್ತವೆ. ಇಲ್ಲಿಯ 'ಅ' ಮಾದರಿಗೆ ಪ್ರಭುದೇವರ, 'ಆ' ಮಾದರಿಗೆ ಬಸವಣ್ಣನವರ ವಚನ ಕಟ್ಟು ಸಿಗುತ್ತಿದ್ದರೆ, ಮೂರೂ ಮಾದರಿಗಳಲ್ಲಿ ಚೆನ್ನಬಸವಣ್ಣನವರ ವಚನ ಕಟ್ಟು ಸಿಗುವುದು ವಿಶೇಷ ಸಂಗತಿಯಾಗಿದೆ. ಪ್ರಸ್ತುತ ಸಂಪುಟದಲ್ಲಿ ಇಂಥ ಮೂರು ಕಟ್ಟುಗಳನ್ನು ಪರಿಷ್ಕರಿಸಿ ಕೊಡಲಾಗಿದೆ. ಇವುಗಳನ್ನು ಬಿಟ್ಟರೂ ಒಮ್ಮೆಯೂ ಪ್ರಕಟವಾಗದ, ಪ್ರಕಟಿಸಲೇಬೇಕಾದ ಚೆನ್ನಬಸವಣ್ಣನವರ ಕೃತಿಗಳು ಹೀಗಿವೆ:

I. (೧) ಚೆನ್ನಬಸವಣ್ಣನವರ ೨೫೦ ವಚನಗಳನ್ನು ಚೆನ್ನವೀರಣ್ಣೊಡೆಯನು (೧೬೫೦) 'ಮಿಶ್ರಷಟ್ಸ್ಥಲದ ವಚನ' ಹೆಸರಿನಲ್ಲಿ ಸಂಕಲಿಸಿರುವುದಾಗಿ ಕರ್ನಾಟಕ ಕವಿಚರಿತೆ (ದ್ವಿತೀಯ

ಸಂಪುಟ-೧೯೭೩. ಪು.೩೮೫) ತಿಳಿಸುತ್ತದೆ. ಈ ಕಟ್ಟು ಈಗ ಲಭ್ಯವಿಲ್ಲ ಶೋಧಿಸಬೇಕು. (೨) ಮದ್ರಾಸ ಓರಿಯಂಟಲ್ ಮ್ಯಾನುಸ್ಕ್ರಿಪ್ಟ ಲೈಬ್ರರಿಯಲ್ಲಿ ಚೆನ್ನಬಸವಣ್ಣನವರ ೧೮೦ ವಚನಗಳ ತಾಳೆಗರಿ ಪ್ರತಿ ಇರುವುದಾಗಿ ಆ ಸಂಸ್ಥೆಯ, ಹಸ್ತಪ್ರತಿ ಸೂಚಿ (IV-೫೬೦)ಯಲ್ಲಿ ಹೇಳಲಾಗಿದೆ. ಈ ಪ್ರತಿ ಈಗ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿದ್ದು, ಎಲ್ಲ ಗರಿಗಳು ಹುಳು ಕೊರೆದು ಹಾಳಾಗಿವೆ, ಆರು ಸ್ಥಲಗಳಲ್ಲಿ ಕ್ರಮವಾಗಿ ೪೨, ೩೫, ೭೯, ೧೦, ೧೨, ೨ ಹೀಗೆ ೧೮೦ ವಚನಗಳಿವೆ. ಇವುಗಳಲ್ಲಿ ಕೆಲವು ಹೊಸ ವಚನಗಳಿರುವುದನ್ನು ಗಮನಿಸಿದ್ದೇವೆ. (೩) ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಚೆನ್ನಬಸವಣ್ಣನವರ 'ಮಿಶ್ರಷಟ್ಸ್ಥಲದ ವಚನ', ಹೆಸರಿನ ಕೃತಿ (ಸೂಚಿ VII-೪೯೪) ಇರುವುದಾಗಿ ತಿಳಿದು ಬರುತ್ತದೆ. ಇದರಲ್ಲಿ ೪೭ ವಚನಗಳಿವೆ.[೭] ಅಪ್ರಕಟಿತ ಈ ಮೂರು ಷಟ್ಸ್ಥಲಕೃತಿಗಳನ್ನು ಸಂಯುಕ್ತಸಂಪುಟವಾಗಿ ಪ್ರಕಟಿಸುವುದು ಅವಶ್ಯವಿದೆ.

II. ಚೆನ್ನಬಸವಣ್ಣನವರು ರಚಿಸಿದ, ಅವರ ವಚನಗಳಿಂದ ಬೇರೊಬ್ಬರು ಸಂಕಲಿಸಿದ ಷಟ್ಸ್ಥಲೇತರ ಕೆಲವು ಕೃತಿಗಳನ್ನು ಈಗಾಗಲೇ ವಿದ್ವಾಂಸರು ಪ್ರಕಟಿಸಿದ್ದಾರೆ. ಇವಲ್ಲದೆ ಈ ಬಗೆಯ ಸಣ್ಣ ಪುಟ್ಟ ಬೇರೆ ಕೃತಿಗಳು ಸಿಗುವ ಸೂಚನೆಗಳಿವೆ. ಇವೆಲ್ಲವುಗಳನ್ನು ಸಂಕಲಿಸಿ ಇನ್ನೊಂದು ಸಂಯುಕ್ತಸಂಪುಟವನ್ನು ಪ್ರಕಟಿಸುವುದು ಅವಶ್ಯವಿದೆ. ಈ ಎರಡು ಕೆಲಸಗಳು ಕೈಗೂಡಿದರೆ ಚೆನ್ನಬಸವಣ್ಣನವರ ಸಮಗ್ರ ಸಾಹಿತ್ಯ ಪ್ರಕಟವಾದಂತಾಗುತ್ತದೆ.

ಕೃತಜ್ಞತೆ

ಉಳಿವೆಯ ಶ್ರೀ ಚೆನ್ನಬಸವೇಶ್ವರ ಟ್ರಸ್ಟಿನ ಸದಸ್ಯರ ಅಪೇಕ್ಷೆಯಂತೆ ೧೨ ವರ್ಷಗಳ ಹಿಂದೆ "ಚೆನ್ನಬಸವೇಶ್ವರದೇವರು ನಿರೂಪಿಸಿದ ಅನುಭಾವ ಷಟ್ಸ್ಥಲದ ವಚನಂಗಳು" ಕೃತಿಯನ್ನು ಸಂಪಾದಿಸಿ, ಹಸ್ತಪ್ರತಿಯನ್ನು ಅವರಿಗೆ ಒಪ್ಪಿಸಿದ್ದೆನು. ಅದು ಈ ವರೆಗೆ ಪ್ರಕಟವಾಗಲೇ ಇಲ್ಲ. ೮ ವರ್ಷಗಳ ಹಿಂದೆ 'ಚೆನ್ನಬಸವಣ್ಣನವರ ಷಡುಸ್ಥಲವಚನ' ಹೆಸರಿನ ಬೇರೊಂದು ಕೃತಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಲಭಿಸಿದಾಗ ಒಂದಲ್ಲ, ಎರಡೂ ಕೃತಿಗಳನ್ನು ಪ್ರಕಟಿಸುವ ಆಸೆ ಚಿಗುರಿತು. ನಾಲ್ಕು ವರ್ಷಗಳ ಹಿಂದೆ 'ಚೆನ್ನಬಸವಣ್ಣನವರ ಷಡುಸ್ಥಲದ ನಿರ್ಣಯ' ಹೆಸರಿನ ಬೇರೊಂದು ಕೃತಿ ನನ್ನ ಗಮನಕ್ಕೆ ಬಂದಾಗ ಎರಡಲ್ಲ, ಮೂರು ಕೃತಿಗಳನ್ನು ಪ್ರಕಟಿಸುವ ಅಪೇಕ್ಷೆ ಕವಲೊಡೆಯಿತು. ಹೀಗೆ ೧೨ ವರ್ಷಗಳ ಸಂಕಲ್ಪ ಗದುಗಿನ ಶ್ರೀ ತೋಂಟದಾರ್ಯಮಠದ ವೀರಶೈವ ಅಧ್ಯಯನಸಂಸ್ಥೆಯ ಮೂಲಕ ಈಗ ಈಡೇರುತ್ತಲಿದೆ.

ಗದುಗಿನ ಶ್ರೀ ತೋಂಟದಾರ್ಯಮಠದ ವೀರಶೈವ ಅಧ್ಯಯನಸಂಸ್ಥೆ ಎಂಟು ವರ್ಷಗಳ ಹಿಂದೆ ಕೈಗೆತ್ತಿಕೊಂಡಿರುವ "ಸಮಗ್ರ ವೀರಶೈವ ಅಪ್ರಕಟಿತ ಸಾಹಿತ್ಯ ಪ್ರಕಟನ ಯೋಜನೆ" ಒಂದು ಅಪೂರ್ವ ಸಾಹಸವಾಗಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸುವುದರ ಮೂಲಕ ಒಮ್ಮೆಯೂ

---

೭. ಈ ಬಗೆಯ ಇನ್ನೊಂದು ಪ್ರತಿ ಲಂಡನ್ನಿನ "ಬ್ರಿಟಿಶ ಲೈಬ್ರರಿ ರೆಫರನ್ಸ ಡಿವಿಜನ್"ದಲ್ಲಿ ಇದ್ದಂತಿದೆ. ಅದರ ನಂ. Oriental 9656

ಪ್ರಕಟವಾಗದೆ ಉಳಿದಿದ್ದ ಪ್ರಾಚೀನ ವಚನಸಂಕಲನಗಳು ಪ್ರಥಮ ಸಲ ಪ್ರಕಟವಾಗುತ್ತಿರುವುದು ಈ ಶತಮಾನದ ವಚನಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿಯೇ ಒಂದು ಮಹತ್ವದ ಸಾಧನೆಯಾಗಿದೆ. ಈಗ "ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ" ಹೆಸರಿನ ಕೃತಿ ಈ ಮಾಲೆಗೆ ಸೇರುತ್ತಲಿದೆ. ಮೂರು ಕೃತಿಗಳ ಸಂಯುಕ್ತಸಂಪುಟವಿದು. ಇವುಗಳಲ್ಲಿ "ಚೆನ್ನಬಸವೇಶ್ವರದೇವರು ನಿರೂಪಿಸಿದ ಅನುಭಾವ ಷಟ್ಸ್ಥಲದ ವಚನಂಗಳು" ಕೃತಿ ಈ ಮೊದಲು ಪ್ರಕಟವಾಗಿದ್ದು, ಮಿಕ್ಕ ಎರಡು ಕೃತಿಗಳು ಪ್ರಥಮ ಬಾರಿಗೆ ಬೆಳಕು ಕಾಣುತ್ತಲಿವೆ. ಪ್ರಯೋಜನ ದೃಷ್ಟಿಯಿಂದ ಮೂರನ್ನೂ ಇಲ್ಲಿ ಸಂಗ್ರಹಿಸಿಕೊಡಲಾಗಿದೆ.

ಈ ಗ್ರಂಥ ಪ್ರಕಟನೆಗೆ ಅವಕಾಶ ಮಾಡಿಕೊಟ್ಟ ವೀರಶೈವ ಅಧ್ಯಯನ ಸಂಸ್ಥೆಯ ಪ್ರೇರಕಶಕ್ತಿಯಾದ ಪೂಜ್ಯ ಜಗದ್ಗುರು ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸನ್ನಿಧಿಗೆ ಪ್ರಣಾಮಗಳು. ಹಸ್ತಪ್ರತಿಗಳನ್ನು ಪೂರೈಸಿದ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡದ ಕನ್ನಡ ಅಧ್ಯಯನಪೀಠ, ಕನ್ನಡ ಸಂಶೋಧನ ಸಂಸ್ಥೆಗಳಿಗೂ, ಅಂದವಾಗಿ ಮುದ್ರಿಸಿಕೊಟ್ಟ ಧಾರವಾಡದ ವಿಜಯ ಮುದ್ರಾಣಾಲಯದ ವಿಜಯ ಹೊಸಕೇರಿ ಅವರಿಗೂ ಶುದ್ಧಪ್ರತಿಯನ್ನು ಸಿದ್ಧಪಡಿಸಿಕೊಟ್ಟ ಲಲಿತಾ ಗೌಳಿ ಅವರಿಗೂ ಅಕಾರಾದಿ ಮೊದಲಾದವುಗಳನ್ನು ಸಿದ್ಧಪಡಿಸುವಲ್ಲಿ ಸಹಾಯಮಾಡಿದ ವಿಜಯಶ್ರೀ ಹಿರೇಮಠ, ಬಿ.ವಿ.ಕೋರಿ ಅವರಿಗೂ ಕೃತಜ್ಞತೆಗಳು.

❖❖

*

ಪರಿವಿಡಿ

ಪ್ರಥಮ ಸಂಪುಟ

ಚೆನ್ನಬಸವರಾಜದೇವರ ಷಡುಸ್ಥಲವಚನ

ಭಕ್ತಸ್ಥಲ

[೧]ಪಿಂಡಸ್ಥಲ[೧]

೧

[೨]ಫಲದೊಳಗಣ ಮಧುರಗೋಪ್ಯ[೨]ದಂತಿ[೩]ದ್ದಿ[೩]ತ್ತು,
ಚಂದ್ರಕಾಂತ[೨]ದ ಉದಕದ[೨] ತೆಱನಂತಿ[೩]ದ್ದಿ[೩]ತ್ತು,
ಮಯೂರನ ತತ್ತಿಯ ಚಿತ್ರದಂತಿ[೩]ದ್ದಿ[೩]ತ್ತು,
ಶಿಶುಕಂಡ ಕನಸಿನ ಪರಿಯಂತಿ[೩]ದ್ದಿ[೩]ತ್ತು,
ಇದು ಕಾರಣ, ಕೂಡಲ ಚೆನ್ನಸಂಗಯ್ಯ[೪]
ಸದ್ಗುರು[೨] ಚಿತ್ತದ ಪ[೨]ದದಂತಿ[೩]ದ್ದಿ[೩]ತ್ತು. । ೧ । [೨]

ಪಿಂಡಜ್ಞಾನ[೫]ಸ್ಥಲ[೫] :

೨

ಒಂದೊಂದೂ ಇಲ್ಲದಂದು, ನಂದಿವಾಹನರಿಲ್ಲದಂದು,
ಹಿಂದೆ ಹದಿನಾಲ್ಕು ಭುವನವಿಲ್ಲದಂದು,
ಅಂದಾ[೬]ರು[೬] ಲಿಂಗವ ಕಂಡವರೊಳರೆ?
ಅಂದಾ[೬]ರು[೬] ಲಿಂಗವ ಕಂಡು ಹೇಳಿದವರೊಳರೆ?
ನಿರಂ[೭]ಥ[೭] ತಮಂಧವಿಲ್ಲದಂದು[೮] ಕೂಡಲ ಚೆನ್ನಸಂಗನಲ್ಲಿ
ಬಸವಣ್ಣನೊಬ್ಬನೆ ಉದಯವಾದ. । ೨ । [೧೨]

ಗರಿಯ ಪ್ರಾರಂಭದ ಭಾಗ ಮುರಿತು ಹೋಗಿದೆ. ಆಮೇಲೆ ಭಕ್ತಿಸ್ಥಲ ಎಂಬ ಪಾಠವಿದೆ. (ಸಂ) ೧–೧ x(ಮೂ)೨–೨ x (ಮೂ) ೩–೩ ದ್ದು (ಮೂ), ೪+ ನಲ್ಲಿ (ಮೂ), ೫–೫ x (ಮೂ), ೬–೬ ರೂ (ಮೂ), ೭–೭ ದಾ (ಮೂ), ೮+ ಅಂದು (ಮೂ).

೩

ಬಯಲು ಮೂರ್ತಿಯಾಗಿ ನಿಂದನೊಬ್ಬ ಶರಣ.
ಆತನ ವಿದ್ಯಾಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ,
ಆತನ ಶಾಂತಿಸೈರಣೆಯಿಂದ ಹುಟ್ಟಿದಾತ ವಿಷ್ಣು,
ಆತನ ಕೋಪಕ್ರೋಧದಿಂದ ಹುಟ್ಟಿದಾತ ರುದ್ರ,
ಈ ಮೂವರ ಪೀಠವಂತಿರಲಿ, ಆ ಶರಣನನಜಿದು ಶರಣೆನುತ್ತಿದ್ದೆನು,
ಕೂಡಲ ಚೆನ್ನಸಂಗಮದೇವಾ. ।೩। [೧೩]

೪

[೧]ಕಳಾ[೧]ಧರ ಧರೆ ವಾರಿಧಿ ಸಹಿತ ಆರೂ ಇಲ್ಲದಂದು,
ಪ್ರಮಥನೊಬ್ಬನಿದ್ದನೊಂದನಂತಕಾಲ,
ಧರೆ ಅಂಬರ ವಾರಿಧಿ ಸಹಿತ ಆರೂ ಇಲ್ಲದಂದು,
ನಿರವಯ ನಿರ್ಮಾಯನಾಗಿದ್ದನೊಂದು ಕೋಟ್ಯನುಕೋಟಿ ವರುಷ.
ಅಲ್ಲಿ ಅನಾಗತವುಂಟು.
ಮನವು ಮಹವನಕ್ಕಾಡಿತತ್ತಲೆ[೨][ಯಾ][೨]ಗಿ,
ಮತ್ತಂತಲ್ಲಿಯೆ ನಿರಾಳವ ಬೆರಸಿ, ಬಯಲು ಬೆಸಲಾಯಿತ್ತು.
ನರರು ಸುರರು ಮೊದಲಾದ
ಚೌರಾಸಿ [೩]ಲಕ್ಷ[೩] ಜೀವರಾಶಿಗಳುದಯಿಸಿ[೩]ದವ[೩]ಯ್ಯಾ,
ಅಂದೀ ಧರೆಯ ಕೂಡಲ ಚೆನ್ನಸಂಗಯ್ಯಾ
ನಮ್ಮ ಬಸವಣ್ಣ ನೆನೆದಡೆ, ।೪। [೧೪]

೫

ಆದಿ ಬಸವಣ್ಣ, ಅನಾದಿ ಲಿಂಗವೆಂದೆಂಬರು,
ಹುಸಿ ಹುಸಿ! ಈ ನುಡಿಯ ಕೇಳಲಾಗದು.
ಆದಿ ಲಿಂಗ, ಅನಾದಿ ಬಸವಣ್ಣನು:
ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು,
ಜಂಗಮವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು,
ಪ್ರಸಾದವು ಬಸವಣ್ಣನನುಕರಿಸಲಾಯಿತ್ತು.

೧–೧ ಕಾಲಾಂ (ಮೂ), ೨–೨ ವಾ(ಮೂ), ೩–೩ x (ಮೂ).

ಇಂತೀ ತ್ರಿವಿಧಕ್ಕೆ ಬಸವಣ್ಣನೆ ಕಾರಣನೆಂದಱಿದೆನಯ್ಯಾ
ಕೂಡಲ ಚೆನ್ನಸಂಗಮದೇವಾ. ।೫। [೨೫]

೬

ಅಂಧಕಾಸುರನ ಕೊಲುವಲ್ಲಿ [೧]ನೀಲ[೧]ಲೋಹಿತನೆಂಬ ಗಣೇಶ್ವರ,
ತ್ರಿಪುರವ ದಹನವ ಮಾಡುವಲ್ಲಿ ಸ್ಕಂದನೆಂಬ ಗಣೇಶ್ವರ,
ಗಜಾಸುರನ ಕೊಂದು ಚರ್ಮವ ಹೊದೆವಲ್ಲಿ ಉಗ್ರನೆಂಬ ಗಣೇಶ್ವರ,
ಬ್ರಹ್ಮಕಪಾಲವಿಡಿದು ವಿಷ್ಣು [೨]ಕಂಕಾಳ[೨]ವನಿಕ್ಕಿದಲ್ಲಿ
ನೀಲಕಂಠನೆಂಬ ಗಣೇಶ್ವರ,
ಪ್ರಾಣಲಿಂಗಸಂಗದಲ್ಲಿ ವೃಷಭನೆಂಬ ಗಣೇಶ್ವರ,
ಜಂಗಮದ ಪೂರ್ವಾಶ್ರಯವ ಕಳೆದು ಪುನರ್ಜಾತನೆನಿಸಿ,
ಪ್ರಾಣಲಿಂಗವಾದ ಬಳಿಕ ಕೂಡಲ ಚೆನ್ನಸಂಗನಲ್ಲಿ
ಬಸವನೆಂಬ ಗಣೇಶ್ವರ.[೩] ।೬। [೧೬?]

೭

ಪ್ರಾಣಲಿಂಗದ ಪೂರ್ವಾಶ್ರಯವ ಕಳೆಯಲೆಂದು ಲಿಂಗಪ್ರಾಣಿಯಾದ.
ಲಾಂಛನದ ಪೂರ್ವಾಶ್ರಯವ ಕಳೆಯಲೆಂದು ಜಂಗಮಪ್ರೇಮಿಯಾದ.
ಪ್ರಸಾದದ ಪೂರ್ವಾಶ್ರಯವ ಕಳೆಯಲೆಂದು ಪ್ರಸಾದಿಯಾದ.
ತ್ರಿವಿಧದ ಪೂರ್ವಾಶ್ರಯವ ಕಳೆಯಲೆಂದು ಮಹಾಗುರುವಾಗಿ,
ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣನಾದ. ।೭। [೨೭]

೮

ಲಿಂಗದ ಪೂರ್ವಾಶ್ರಯವ ಕಳೆದು, ಇದು ಪ್ರಾಣಲಿಂಗವೆಂದು
ತೋಱಿಬಂದನಯ್ಯಾ, ಬಸವಣ್ಣನು!
ಲಾಂಛನದ ಪೂರ್ವಾಶ್ರಯವ ಕಳೆದು, ಇದು ಲಿಂಗಜಂಗಮವೆಂದು
ತೋಱಿಬಂದನಯ್ಯಾ ಬಸವಣ್ಣನು!
[೪]ಪ್ರಸಾದದ ಪೂರ್ವಾಶ್ರಯವ ಕಳೆದು, ಇದು [೪]ಪ್ರಸಾದವೆಂದು
ಸಯವ ಮಾಡಿ ತೋಱಿಬಂದನಯ್ಯಾ ಬಸವಣ್ಣನು!

೧-೧x(ಮೂ), ೨-೨ ಕಂಕಣ(ಮೂ),೩ ಈ ವಚನ ಕ.ವಿ. ಆವೃತ್ತಿಯಲ್ಲಿ ತುಂಬಾ ವಿಸ್ತಾರವಾಗಿದೆ.(ಸಂ)೪-೪ x(ಮೂ),

ಲಿಂಗಜಂಗಮದ ಪ್ರಸಾದದ ಪೂರ್ವಾಶ್ರಯವ ಕಳೆಯಲೆಂದು
ಮರ್ತ್ಯಕ್ಕೆ ೧ಮೈಗಾಣಿಸಿದ೧
ಕೂಡಲ ಚೆನ್ನಸಂಗನಲ್ಲಿ ಬಸವಣ್ಣನು. । ೮ । [೫೭]

೯
ನಿರಾಲಂಬದಲ್ಲಿ ನಿಜಲಿಂಗ ನಾನೆಂಬ ಮಹದಹಂಕಾರವೆ
ಸಂಸಾರಿಯಾಗಿ ಬಂದು ಬಳಲುವ ಭ್ರಾಂತು
ಇನ್ನಾರಿಗೆ೨[ಯೂ]೨ ತಿಳಿಯದಯ್ಯಾ,
ಇನ್ನಾರು ಪರಿಹರಿಸುವರಯ್ಯಾ ಬಸವಣ್ಣನಲ್ಲದೆ?
ಇದು ಕಾರಣ, ಬಸವಣ್ಣನ ಶ್ರೀಪಾದವ ತೋಱಿ ಬದುಕಿಸಾ
ಕೂಡಲ ಚೆನ್ನಸಂಗಮದೇವಾ. । ೯ । [೨೪]

೧೦
ಮೀನಜ ರೋಮಜ ಋಷಿಯರು ಮೊದಲಾದ
ಅನಂತಕೋಟಿ ಬ್ರಹ್ಮರಿಲ್ಲದಂದು,
ಅಲ್ಲಿಂದತತ್ತ ಏಕೋಲಿಂಗನೊಬ್ಬನೇ ಶರಣ,
ಗುರುವೆ, ಪರಮಗುರುವೆ, ನೀನೆ ೨ಗತಿ೨ ಅಯ್ಯಾ!
ಆದಿ ಕುಳಕ್ಕೆ ಮೂಲಿಗನಾಗಿ ಸುಳುಹ ತೋಱಿ ಪಾವನವ ಮಾಡಬಂದೆ,
ಬಹುಮುಖಜೀವಿಗಳಿಗೆ ಬಹುಮುಖಪ್ರಸಾದವ ತೋಱಿದೆಯಯ್ಯಾ!
ಭುವನವ ಸಲಹಲೆಂದು ಆದಿಯ ಲಿಂಗವ
ಅನಾದಿಯ ಶರಣನ ಕೈಯಲಿ ಕೊಟ್ಟಿರಿ.
ಆ ಲಿಂಗವನು ನೀ ಪುಟ್ಟಿಸಿದ ಘಟಕ್ಕೆ ಕಾರುಣ್ಯವ ಮಾಡಿ ಸಲಹಯ್ಯಾ,
ಕೂಡಲಚೆನ್ನಸಂಗಮದೇವಾ. । ೧೦ ।[೧೭]

೧೧
ವಾಯ೩ದ೩ ಮಾಯದಲ್ಲಿ ಹುಟ್ಟಿದ ಕಷ್ಟದಳವನೆ ಬಿಟ್ಟು
ನಿಷ್ಠೆಯಿಂದ ನಿಮ್ಮ ಶ್ರೀಚರಣಕ್ಕೆಱಗಿದೆನು.

೧–೧ ಜನಿಸಿದನಯ್ಯಾ (ಮೂ), ೨–೨ x(ಮೂ), ೩–೩ ತ (ಮೂ)

ಪ್ರಸಾದವ ಕಾರುಣ್ಯವ ಮಾಡು ಗುರುವೆ
[೧]ಕೂಡಲ ಚೆನ್ನಸಂಗಮದೇವಾ.[೧] ।೧೧।

೧೨

ಅಂಜದಿರಿ ಅಂಜದಿರಿ ಅನಿಮಿಷನಂತೆ ಬೇಡುವ ನಾನಲ್ಲ,
ನಿಮಗಾದಿಯ ಶಿಶು ನಾನೆ ಅಯ್ಯಾ. ಅದೆಂತೆಂದರೆ:
ಅಂಜನೆಗೆ ಜಲಗರ ಬೆಳೆಯಿತ್ತೆಂದು, ಅಂಜಿ ಹೇಮರಸವ ಕುಡಿದಲ್ಲಿ
ಒಳಗಿದ್ದ ಕಪಿ ಶೃಂಗಾರ[೨]ವಾಗನೆ?[೨]
ಕೆಡುವುದೇ ಶಿವಪಿಂಡವು? ಮಱವುದೇ ಶಿವಜ್ಞಾನವು?
ಹಿಂದೆ ಏಳುನೂಱು ವರುಷ ಮಂಡೋದರಿಯ ಬಸುಱಲ್ಲಿದ್ದು
ಉದಯಂಗೆಯ್ಯನೆ ಇಂದ್ರಜಿತು?
ಎಂದು ನೀವು ಹೊಟ್ಟೆಗೆ ವಿಭೂತಿಯ ಪಟ್ಟವ ಕಟ್ಟಿದಂದೆ
ಅನುಗ್ರಹವಾಯಿತ್ತು.
ಕೂಡಲಚೆನ್ನಸಂಗಮದೇವಾ
ನಿಮ್ಮ ತೊತ್ತಿನ ತೊತ್ತು ನಾನು ಚೆನ್ನಬಸವಣ್ಣನು.[೩] ।೧೨।[೫೮]

೧೩

ಹಸ್ತಮಸ್ತಕ ಸಂಯೋಗವಾಗದ ಮುನ್ನ ಯೌವನ ಮಥನವಾಯಿತ್ತು.
ಆವುದ ಅಂತರಂಗವೆಂಬೆನು, ಆವುದ ಬಹಿರಂಗವೆಂಬೆನು,
ಆವುದು ಆತ್ಮಸಂಗವೆಂಬೆನು,

೧-೧ x(ಮೂ), ಈ ಮುದ್ರಿಕೆಯನ್ನು ಭಕ್ತ್ಯಾನಂದ ಸುಧಾರ್ಣವದಿಂದ ಸ್ವೀಕರಿಸಲಾಗಿದೆ. (ಸಂ). ೧೧ನೆಯ ವಚನದ '... ಗುರುವೆ' ಎಂಬುದಕ್ಕೆ 'ಮೂ' ಪ್ರತಿಯಲ್ಲಿ ಈ ಕೆಳಗಿನ ಬಸವಣ್ಣನವರ ವಚನ ಸೇರಿಕೊಂಡಿದೆ. ಓಹೋ, ನಮಃ ಶಿವಾಯ, ನಾನೊಬ್ಬರಿಗುಪದೇಶವ ಮಾಡಲಮ್ಮೆನು. ಮುನ್ನಲಾದವರು ತಮ್ಮಿಂದ ತಾವಾದ ನಿಜಲಿಂಗೈಕ್ಯರು, ನಾನೇನೂ ಮಾಡಿತಿಲ್ಲ ಕಿಂಕಿಲನಾಗಿ ಅಱಸುವಂದು, ಕಾಲಾಗ್ನಿರುದ್ರನಾಜ್ಞೆಯಿಂದ ಭೃತ್ಯನಾಗಿ ಬಂದಿರ್ದು ಕರ್ತನಾದೆನೆಂದರೆ ಕರ್ತ ನಗುವನು. ತತ್ವವ ಹಿಡಿದವರಿಗೆ ತೊತ್ತಾಗಿ ನಡೆವೆನು. ಅಮರಗಣಂಗಳು ಸಾಕ್ಷಿಯಾಗಿ ಕೂಡಲಸಂಗಮದೇವರ ಮುಂದೆ ಭಾಷೆ ಪ್ರಸಾದವನಿಕ್ಕಲಮ್ಮೆನಯ್ಯಾ, ಚೆನ್ನ ಬಸವಣ್ಣಾ. ।೧೧। ೨-೨ ವ ಮಾಡನೆ (ಮೂ), ೩+ ಕಾಣಾ ಸಂಗನಬಸವಣ್ಣ (ಅ).

ಹಸ್ತಮಸ್ತಕ ಸಂಯೋಗವೆ ⁽ಬಹಿರಂಗ,⁾ ಮನಸಂಯೋಗವೆ ಅಂತರಂಗ,
ಕೂಡಲ ಚೆನ್ನಸಂಗಯ್ಯನಲ್ಲಿ ಆತ್ಮಸಂಗವಾಯಿತ್ತು. ।೧೩ ।[೧೮]

೧೪

ಬಸವಣ್ಣಾ, ಓಂಕಾರದಿಂದತತ್ತ ನೀನೆ;
ಬಸವಣ್ಣಾ, ನಾದಬಿಂದುಕಳೆಗಳಿಂದತ್ತತ್ತ ನೀನೆ;
ಬಸವಣ್ಣಾ, ಪ್ರಥಮಾಚಾರ್ಯ ನೀನೆ;
ಬಸವಣ್ಣಾ, ಲಿಂಗಾಚಾರ್ಯ ನೀನೆ;
ಬಸವಣ್ಣಾ, ಜಂಗಮಾಚಾರ್ಯ ನೀನೆ;
ಬಸವಣ್ಣಾ, ಪ್ರಸಾದಾಚಾರ್ಯ ನೀನೆ;
ಬಸವಣ್ಣಾ, ಎನಗೆ ಸರ್ವಾಚಾರ್ಯ ನೀನೆ;
ನೀನೇ ಗತಿಮತಿಯಾಗಿ ಎನ್ನನುಳುಹಿದ ಕಾರಣ.
ಕೂಡಲ ಚೆನ್ನಸಂಗಮದೇವಾ,
ಆವ ವರ್ಣವಿಲ್ಲದಂದು
'ಓಂ ನಮಃ ಶಿವಾಯ' ಎನುತಿರ್ದೆನು. ।೧೪ ।[೨೮]

೧೫

ನಮಃ ಶಿವಾಯ ಲಿಂಗವು, ಓಂ ನಮಃ ಶಿವಾಯ ಬಸವಣ್ಣನು.
ನಮಃ ಶಿವಾಯ ಲಿಂಗವು. ಓಂ ನಮಃ ಶಿವಾಯ ಬಸವಣ್ಣನು.
ನೀನೆ ಎನ್ನ ಮನಸ್ಥಳದಲ್ಲಿ ನಿಂದು ಬೆಳಗಿ ತೋಜಿದೆಯಾಗಿ,
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಆದಿಯಾಧಾರವಿಲ್ಲದಂದು
'ಓಂ ನಮಃ ಶಿವಾಯ' ಎನುತಿರ್ದೆನು. ।೧೫ ।[೧೯]

೧೬

ಬಿತ್ತಿದ ಬೀಜದ ಫಲವು ವಿಪರೀತ ನೋಡಾ,
ತನ್ನಲ್ಲಿ ತಾನೆಯಾಗಿ ಆಗಮವನಜಿಯದು,
ತಾನೆ ಸ್ವಯಂಕೃತ ಸಹಜ.
ಕೂಡಲ ಚೆನ್ನಸಂಗಯ್ಯನಲ್ಲಿ ಚೆನ್ನಬಸವಣ್ಣನು. ।೧೬ ।[೨೦]

೧-೧ x (ಮೂ).

೧೭

ಆನು ಶುದ್ಧ ಧವಳಿತನು.
ಎನಗೆ ಅನಾದಿ ಬಂದು ಹೊದ್ದಿದ ಕಾರಣವೇನಯ್ಯಾ?
ಜಲವ ಮೊಗೆಯ ಬಂದೆನೇಕಯ್ಯಾ?
ಗಿಡುವ ಹಱಿಯ ಬಂದೆನೇಕಯ್ಯಾ?
ಎಲ್ಲರ ನಡುವೆ ಕುಳ್ಳಿರ್ದು ಗೀತವ ಹಾಡ ಬಂದೆನೇಕಯ್ಯಾ?
ಬಸವಣ್ಣ, ಚೆನ್ನಬಸವಣ್ಣಯೆಂಬೆರಡು ಶಬ್ದವೇಕಾದವು ಹೇಳಾ
ಕೂಡಲ ಚೆನ್ನಸಂಗಮದೇವಾ. । ೧೭ । [೨೧]

ಸಂಸಾರಹೇಯ[೧]ಸ್ಥಲ:[೧]

೧೮

ಅಸ್ತಿಭಾತಿಯೆಂಬ [೨]ಎನ್ನ[೨] ಸತ್ಯದಲ್ಲಿ ನಾಮರೂಪೆಂಬ
ಹುಸಿಯೆಂತು ಜನಿಸಿತೆಂದಱಿಯೆನಯ್ಯಾ.
ಇಲ್ಲದ ಹೆಸರುಳ್ಳ ಚಿತ್ತಾರದಂತೆ ದೇಹನಾಮವೀತೆಱನೆಂದಱಿಯದೆ
ತೊಳಲಿ ಬಳಲುತ್ತಿದ್ದೆನಯ್ಯಾ. ಕೂಡಲ ಚೆನ್ನಸಂಗಯ್ಯಾ
ಸಂಸಾರ ಬಂಧನಯೆನಗಿದೇ ಕಂಡಯ್ಯಾ. । ೧೮ । [೩೬]

೧೯

ಹೆಗ್ಗಣವನಿಕ್ಕಿ ನೆಲಗಟ್ಟ [೩]ಘಟ್ಟಿಸಿದಂತೆ[೩]
ಎನ್ನ ಕಾಯಗುಣ, ಅಹಂಕಾರ, ಪ್ರಬೋಧೆಗಳಯ್ಯಾ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳನಿಕ್ಕಿ
ಎನ್ನ ಮಾಡಿದಿರಿ, ಎನ್ನ ಬಾಧಿಸಲೆಂದು.
ಲಿಂಗಯ್ಯ ತಂದೆ, [೪]ಆಧಿವ್ಯಾಧಿ[೪]ಗಳೆಲ್ಲವ ಕಳೆದು
ನಿರ್ವಾಣವಪ್ಪ ಪಥವ ಕರುಣಿಸಯ್ಯಾ
ಕೂಡಲ ಚೆನ್ನಸಂಗಮದೇವಾ. । ೧೯ । [೩೧]

೧–೧ x (ಮೂ), ೨–೨ x (ಮೂ), ೩–೩ ಕಟ್ಟಿದಂತೆ (ಮೂ), ೪–೪ ಅದೆ ಬಾಧೆ (ಮೂ).

ಗುರುಕರುಣಸ್ಥಲ :

೨೦
ಶ್ರೀಗುರುಲಿಂಗವು ಶಿಷ್ಯನ ಬರವ ಕಂಡು,
ಬಂದು ಪಾದದ ಮೇಲೆ ಬೀಳುವಾತ ಗುರುಲಿಂಗ,
ಮಂಡೆಯ ಹಿಡಿದೆತ್ತುವಾತ ಶಿಷ್ಯ.
ಶ್ರೀಗುರುಲಿಂಗವು ಶಿಷ್ಯನ ಸಿಂಹಾಸನದಲ್ಲಿ ಕುಳ್ಳಿರಿಸಿ,
ಪಾದಾರ್ಚನೆಯ ಮಾಡುವಾತ ಗುರುಲಿಂಗ,
ಮಾಡಿಸಿಕೊಂಬಾತ ಶಿಷ್ಯ.
ಶ್ರೀಗುರುಲಿಂಗವು ಶಿಷ್ಯನಾರೋಗಣೆಯ ಮಾಡುತ್ತಿದ್ದಾನೆಂದು
ಬಂದು ಪ್ರಸಾದವ ಕೊಂಬಾತ ಗುರುಲಿಂಗ, ಇಕ್ಕುವಾತ ಶಿಷ್ಯ.
ಇದು ಕಾರಣ ದ್ವಿವಿಧ ಸಂ[ಬಂ]ಧ ಸನುಮತವಾಯಿತ್ತು,
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. । ೨೦ ।

೨೧
ಕೃತಯುಗ ತ್ರೇತಾಯುಗ ದ್ವಾಪರ ಕಲಿಯುಗವಿಲ್ಲದಲ್ಲಿಂದತ್ತ ನೋಡಾ,
ಧರೆಯು ಬ್ರಹ್ಮಾಂಡವು ಮೂರುತಿಗೊಳ್ಳದಲ್ಲಿಂದತ್ತ ನೋಡಾ,
ಘನಪ್ರಸಾದವ ಸಾಧಿಸಿ ತಂದು, ಎನ್ನ ಕೈಯಲಿ ನಿಕ್ಷೇಪವ ಕೊಟ್ಟನಯ್ಯಾ
ಕೂಡ ಚೆನ್ನಸಂಗಾ ನಿಮ್ಮ ಶರಣನು. । ೨೧ । [೧೫]

೨೨
ಹರ ತನ್ನ ರೂಪ ತೋಱಬೇಕೆಂದು ಗುರುರೂಪಾಗಿ ಬಂದು,
ಮನಸ್ಥಲಕ್ಕೆ ಮಂತ್ರವಾದ, ತನುಸ್ಥಲಕ್ಕೆ ಪ್ರಸಾದವಾದ,
ಕರಸ್ಥಲಕ್ಕೆ ಲಿಂಗವಾದ.
ಇಂತೀ ತ್ರಿವಿಧದಲ್ಲಿ ತ್ರಿವಿಧಸಾಹಿತ್ಯವಾದನಯ್ಯಾ
ಕೂಡಲ ಚೆನ್ನಸಂಗನ ಬಸವಣ್ಣನು. । ೨೨ । [1][೫೨]

೨೩
ಭಾವದಲ್ಲಿ ಗಮನ, ಪ್ರಾಣದಲ್ಲಿ ಲೋಭ,
ಜಿಹ್ವೆಯಲ್ಲಿ ರುಚಿ, ಶ್ರೋತ್ರದಲ್ಲಿ ಕುಶಬ್ದ,

---
೧. ಈ ವಚನ 'ಅ' ಪ್ರತಿಯಲ್ಲಿ ಇಲ್ಲ (ಸಂ).

ನಾಸಿಕದಲ್ಲಿ ದುರ್ಗಂಧ, ನೋಟದಲ್ಲಿ ಕಾಮ, ಶಬ್ದದಲ್ಲಿ ವಿರೋಧ,
ಇಂಥ ಭವಿಯ ಕಳೆದು ಭಕ್ತನ ಮಾಡಿದ ಪರಿಯೆಂತೆಂದರೆ:
ಕಾಮನ ಸುಟ್ಟ ವಿಭೂತಿಯೂ ಅಲ್ಲ, ಜವನ ಸುಟ್ಟ ವಿಭೂತಿಯೂ ಅಲ್ಲ,
[೧]ತ್ರಿಪುರವ[೧] ಸುಟ್ಟ ವಿಭೂತಿಯೂ ಅಲ್ಲ.
ಆದಿಯಾಧಾರವಿಲ್ಲದಂದಿನ ವಿಭೂತಿಯ ತಂದು, ಪಟ್ಟವ ಕಟ್ಟಿದರೆ
ಭಾವಕ್ಕೆ ಗುರುವಾಯಿತ್ತು,
ಪ್ರಾಣಕ್ಕೆ ಲಿಂಗವಾಯಿತ್ತು, ಜಿಹ್ವೆಗೆ ಪ್ರಸಾದವಾಯಿತು,
ಶ್ರೋತ್ರಕ್ಕೆ ಶಿವಮಂತ್ರವಾಯಿತ್ತು. ನಾಸಿಕಕ್ಕೆ ಸುಗಂಧವಾಯಿತ್ತು,
ನೋಟಕ್ಕೆ ಜಂಗಮವಾಯಿತ್ತು, ಶಬ್ದಕ್ಕೆ ಸಂಭಾಷಣೆಯಾಯಿತ್ತು,
ಇಂತು ಪೂರ್ವಗುಣಂಗಳೆಲ್ಲವ ಕಳೆದು ಸ್ವಸ್ಥಾನವಾಯಿತ್ತಾಗಿ,
ಕೂಡಲ ಚೆನ್ನಸಂಗಾ
ನಿಮ್ಮ ಶರಣ ಸರ್ವಾಂಗಲಿಂಗಿಯಾ[೨][ದ].[೨] । ೨೩ । [೫೪]

೨೪

ಮಾಂಸಪಿಂಡವೆಂದೆನ್ನದೆ ಮಂತ್ರಪಿಂಡವೆಂದೆನಿಸಿ[೩]ದ[೩] ಬಸವಣ್ಣ,
ವಾಯುಪ್ರಾಣಿಯೆಂದೆನಿಸದೆ ಲಿಂಗಪ್ರಾಣಿಯೆನಿಸಿ[೩]ದ[೩] ಬಸವಣ್ಣ,
[೪]ಜಗ[೪]ಭರಿತನೆಂಬ ಶಬ್ದಕ್ಕೆ ಅಂಗವಿಸ[೫]ದೆ, ಶರಣಭರಿತಲಿಂಗವೆಂದೆನಿಸಿದ,
ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣನು. । ೨೪ । [೫೫]

೨೫

ಚರಣವಿಡಿದಂಗೆ ಕರುಣಿ ಕಂದೆಱವೆಯ ಮಾಡಬೇಕೆಂದು,
ಮಱಹಿಂದ ಬಂದ ಕಾಯದ ಕರ್ಮವ ಕಳೆದು,
ಗುರುಲಿಂಗವು ಕರುಣಿಸಿ ಕಂದೆಱವೆಯ ಮಾಡಿದ
ಪ್ರಾಣಲಿಂಗಸಂಬಂಧವೆಂತಿದ್ದುತೆಂದರೆ :
ಆಲಿ ನುಂಗಿದ ನೋಟದಂತೆ, ಬಯಲು ನುಂಗಿದ ಬ್ರಹ್ಮಾಂಡದಂತೆ,
ಮುತ್ತು ನುಂಗಿದ ಉದಕದಂತೆ, ಪುಷ್ಪ ನುಂಗಿದ ಪರಿಮಳದಂತೆ
ಇಪ್ಪ ಮಹಾನುಭಾವದ ನುಡಿಗೆ ಗುರಿಯಾದೆನಾಗಿ,
ಎನ್ನ ಒಡಲ ಪರ್ಯಾಯ ಕೆಟ್ಟಿತ್ತಯ್ಯಾ
ಕೂಡಲ ಚೆನ್ನಸಂಗಮದೇವಾ. । ೨೫ । [೧೦೬]

೧-೧x(ಮೂ). ೨-೨ ದೆ (ಮೂ). ೩-೩ ದೆ (ಮೂ). ೪-೪ ಜಂಗಮ (ಮೂ). ೫ + ವಿಸ(ಮೂ).

೨೬

ಪ್ರಥಮ ಗುರು ಕಾ[೧]ಣಲಿ[೧]ಕೆಯಾಗಿ ಕರ್ಮಂಗಳು ಬೆದಱಿ ಬೆಚ್ಚಿದವು,
ಹುಸಿಯಾಮಿಷ ತಾಮಸ ಕುಟಿಲಂಗಳು
ತಮಗೆ ನಿಂದಿರೆ ತಾವಿಲ್ಲೆನುತ್ತಿದ್ದವು,
ಸದ್ಗುರುಕಾರುಣ್ಯ ಹಸ್ತಮಸ್ತಕಸಂಯೋಗದಲ್ಲಿ
ಪೂರ್ವಗುಣವಳಿದು ಪುನರ್ಜಾತನಾಗಿ,
ಕರಣಾದಿಗಳ ಕಳೆದು ಶಿವಲಿಂಗದಲ್ಲಿ ಉಳಿದು,
ಅನುಪಮ ಸುಖಸಾರಾಯ ಶರಣನೆನಿಸಿ,
ಇದನಱಿದು ಲಿಂಗದಲ್ಲಿದ್ದೆ. [೨]ಇದನಱಿದು[೨] ಜಂಗಮದಲ್ಲಿ ಕರುಣವ ಪಡೆದು,
ಭವಿಯನೊಲ್ಲೆನೆಂದು ಬೇಱೆ ನಿಂದ ಕಾರಣ
ಕೂಡಲ ಚೆನ್ನಸಂಗಮದೇವಾ
ನಿಮ್ಮ ಶರಣ ಭವಕಲ್ಪಿತವ ಕಳೆದ. । ೨೬ । [೬೬೩]

೨೭

ಒಮ್ಮೆಯೂ ಶ್ರೀಗುರುವಿನ ಚರಣವ ನೆನೆಯಲೊಡನೆ
ಭವಬಂಧನ ಬಿಡುವುದು.
ಗುರುವೇ ಶರಣು, ಗುರುಲಿಂಗವೇ ಶರಣು.
ಹರಿಬ್ರಹ್ಮಾದಿಗಳಿಗಗೋಚರ, ಕೂಡಲ ಚೆನ್ನಸಂಗನ
ತೋಱಿದ ಗುರುವೇ ಶರಣು. । ೨೭ । [೫೬]

ಭಕ್ತ ಜ್ಞಾನಿ [೩]ಸ್ಥಲ[೩]

೨೮

ಗುರುಲಿಂಗವೊಂದೆಯೆಂಬ ಸಂತೆಯ ಸುದ್ದಿಯ,
ಬಾಲಭಾಷೆಯ ಕೇಳಲಾಗದು.
ಲಿಂಗಸಹಿತ ಪ್ರಸಾದಭೋಗ, ಲಿಂಗಸಹಿತ ನಿದ್ರೆ,
ಗುರು ಲಿಂಗವೊಂದೆಯೆಂದು ಕಂಡರೆ
ಅಘೋರನರಕ ಕೂಡಲ ಚೆನ್ನಸಂಗಮದೇವಾ. । ೨೮ । [೧೮೪]

೧-೧ ಣಿ (ಮೂ). ೨-೨ ಅರಿದು (ಮೂ), ೩-೩ x (ಮೂ).

೨೯
ಗುರುಶಿಷ್ಯ ಸಂಬಂಧವನು ಏನೆಂದುಪಮಿಸುವೆನಯ್ಯ!
ಒಂದಾಗಿ ಹೋಗಲುಬಾರದು, ಅವರಿದ್ದೂರಲಿರಲಾಗದು,
ಗಣತಿಂಥಿಣಿಯಲ್ಲಿ ಕುಳ್ಳಿರಲಾಗದು,
ಅವರ ಸಪಜ್ತೆಯಲ್ಲಿ ಲಿಂಗಾರ್ಚನೆಯ ಮಾಡಲಾಗದು,
ಅವರಂಥವರಿಂಥವರೆಂದು ಕನಸಿನಲ್ಲಿ [೧]ಮನಸಿನಲ್ಲಿ[೧] ನೆನೆದಡೆ
ಅಘೋರನರಕ ಕೂಡಲ ಚೆನ್ನಸಂಗಯ್ಯಾ. । ೨೯ । [೧೮೫]

೩೦
ಗುರುಲಿಂಗದಲ್ಲಿ ಇಲ್ಲದ ಒಲವು ಪರದೈವದಲಾದೂದೆಂಬಿರಿ,
ಶರಣು ಶರಣೆನಲಱಿಯದೆ ಬಱುದೊಱೆವೋದಿರಲ್ಲ,
ಜನನಮರಣರಹಿತ ಕೂಡಲ ಚೆನ್ನಸಂಗನ ಶರಣರಿಗೆ
ಶರಣೆನ್ನದೆ ಬಱುದೊಱೆವೋದಿರಲ್ಲ. । ೩೦ । [೧೮೬]

೩೧
ಆಡಿನ ಕೊರಳಲ್ಲಿ ಮೊಲೆಯಿದ್ದರೇನು ಅಮೃತವುಂಟೆ?
ಭಕ್ತನಾದಲ್ಲಿ ಫಲವೇನು ಶಿವಪದವನಱಿಯದನ್ನಕ್ಕ?
ದಕ್ಕಾಲಿ ಬಿದ್ದ ಕಣ್ಣಿನಂತೆ ಜಂಗಮದ ಮೇಲೆ ಹರುಷವಿಲ್ಲದ ನೋಟ,
ಕೂಡಲ ಚೆನ್ನಸಂಗನ ಶರಣನ ಬೆರಸದ ಹರುಷ[೨]
ಅರಸಿಯ ನೋಟದಂತೆ. । ೩೧ । [೬೮]

೩೨
ಸುರಾಭಾಂಡಕ್ಕೆ ಹೊಱಗೆ ವಿಭೂತಿಯ ಹೂಸಿದಡೊಳಗು
ಶುದ್ಧವಾಗಬಲ್ಲುದೆ ?
ಗುರುಕಾರುಣ್ಯ ನೆಲೆಗೊಂಡು, ಗುರುಲಿಂಗಜಂಗಮ
ತ್ರಿವಿಧವೊಂದೆಂದು ಕಾಣದನ್ನಕ್ಕ ಕೂಡಲ ಚೆನ್ನಸಂಗಮದೇವರಲ್ಲಿ
ಸದಾಚಾರವೆಲ್ಲರಿಗೆ ಸೂಱೆಯೆ? । ೩೨ । [೬೦]

೧–೧ x (ಮೂ). ೨+ದ(ಮೂ).

೩೩
ಹಸಿವಿನ ಹಂಗಿಗೆ ಭವಿಪಾಕಕಿಚ್ಚೈಯ ಮಾಡುವರು,
[೧]ಮಥನದ ಹಂಗಿಗೆ ಭವಿಯ ಸಂಗಕ್ಕಿಚ್ಚೈಯ ಮಾಡುವರ,[೧]
ಶ್ರೋತ್ರ ನೇತ್ರದ ಸುಖವ ಭುಂಜಿಸುವನ್ನಕ್ಕ
ಭಕ್ತನೆಂತೆಂಬೆ? ಲಿಂಗೈಕ್ಯನೆಂತೆಂಬೆ ?
ಕೂಡಲ ಚೆನ್ನಸಂಗಯ್ಯಾ
ಅವರು ಸಮಯಾಚಾರಕ್ಕೆ ದೂರ ನೋಡಯ್ಯಾ. । ೩೩ । [೬೯]

೩೪
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಭವಿಯೊಡನೆ ಸಂಗವು ಭಂಗವೆಂದಱಿಯರು.
ಭವಿಯೊಡನೆ ಸಂಗ[೨]ವ ಮಾಡುವರು[೨] ಕೂಡಲ ಚೆನ್ನಸಂಗಯ್ಯಾ
ಅವರತ್ತಲೂ ಅಲ್ಲ, ಇತ್ತಲೂ ಅಲ್ಲ. । ೩೪ । [೮೪]

೩೫
[೩]ಅ[೩]ಂಗಭವಿಗೆ ಆಚಾರನಾಸ್ತಿ, ಲಿಂಗಭವಿಗೆ ಜಂಗಮನಾಸ್ತಿ,
ಪ್ರಾಣಭವಿಗೆ ಪ್ರಸಾದನಾಸ್ತಿ,
ಈ ತ್ರಿವಿಧನಾಸ್ತಿಗೆ ಇಹಪರವಿಲ್ಲಯ್ಯಾ
ಕೂಡಲ ಚೆನ್ನಸಂಗಯ್ಯಾ. । ೩೫ । [೯೬]

೩೬
ಭಕ್ತಿವಿಶೇಷವಳವಡದಯ್ಯಾ! ವಿಷ[೪]ದ ಕೊ[೪]ಡನುವ ತುಡುಕಲೆ ಬಾರದು.
ಅಂಗಕ್ಕೆ ಹಿತವಲ್ಲ, ಸಿಂಗ ನೋಡಯ್ಯ ವಿಷ,
ಮಾಯಾವಿಚಿತ್ರ ಕೂಡಲ ಚೆನ್ನಸಂಗಯ್ಯನಲ್ಲಿ
ಸದಾಚಾರಸಂಬಂಧವು. । ೩೬ । [೭೦]

೩೭
ಅಱಿವಱಿತು ಮಱಹು [೫]ದಿಟ[೫]ವಾದವರನೇನೆಂಬೆ?
ಅಱಿವನಱಿಯದೆ ಮಱೆವ ನೆಱೆ ಸಂಸಾರಿಗಳನೇನೆಂಬೆ?

೧–೧ x (ಮೂ), ೨–೨ x (ಮೂ), ೩–೩ x (ಮೂ), ೪–೪ x (ಮೂ), ೫–೫ ನಷ್ಟ(ಮೂ).

ಅಂಗವಿಕಾರದ ಹಂಗಿನೊಳಗಿದ್ದು
ಕೂಡಲ ಚೆನ್ನಸಂ¹[ಗಾ ಎಂ]¹ಬವರನೇನೆಂಬೆ? ।೩೭। [೯೫]

೩೮
ಮಡಿಲಲ್ಲಿ ಸುತ್ತಿದ ಹಾವಿನಂತೆ ಮಡಿಲಲ್ಲಿ ಕಟ್ಟಿದರೇನು?
ಕೊರಳಲ್ಲಿ ಸುತ್ತಿದ ಹಾವಿನಂತೆ ಕೊರಳಲ್ಲಿ ಕಟ್ಟಿದರೇನು?
ಕಳವು ಹಾದರ ಭವಿಯ ಸಂಗ ಅನ್ಯದೈವವ ಬಿಡದನ್ನಕ್ಕ
ಲಿಂಗಭಕ್ತನೆನಿಸಲು ಬಾರದಯ್ಯ.
ಅನಾಚಾರದಿಂ ನರಕ, ಆಚಾರದಿಂ ಸ್ವರ್ಗ,
ಕೂಡಲ ಚೆನ್ನಸಂಗಯ್ಯನೊಲ್ಲ ಭೂಮಿಭಾರಕರ. ।೩೮। [೮೫]

೩೯
ಕಬ್ಬುನದ ಸೊಣಗನ ತಂದು ಪರುಷವ ಮುಟ್ಟಿಸಲು,
ಸುವರ್ಣದ ಸೊಣಗನಪ್ಪುದು, ಪರುಷವಾಗದು ನೋಡಾ,
ಲೋಕದ ಮಾನವನ ತಂದು ಭಕ್ತನ ಮಾಡಿದರೆ
ವೇಷಲಾಂಛನವಹುದು, ಭಕ್ತನಾಗ ನೋಡಾ,
ಗುರುಲಿಂಗಂ ಚರಲಿಂಗ ಭಾವಲಿಂಗಂ ಪ್ರಸಾದಕಂ ।
ಚತುರ್ವಿಧಾತ್ಮಕ ಜ್ಞಾನಂ ಲಿಂಗಭಕ್ತಸ್ಯ ಲಕ್ಷಣಂ ॥
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಮಜ್ಜನಕ್ಕೆಱೆವ ಭವಿಗಳನೆಂತು ಭಕ್ತರೆಂಬೆ! ।೩೯। [೬೧]

೪೦
ಸಂಶಯವುಳ್ಳನಕ ಸಂಸಾರಿ²ಯೇ² ಅಯ್ಯಾ,
ಲಿಂಗಭಕ್ತನಲ್ಲ, ಜಂಗಮಪ್ರೇಮಿಯಲ್ಲ, ಪ್ರಸಾದಿಯಲ್ಲ,
ಕೂಡಲ ಚೆನ್ನಸಂಗಯ್ಯನಲ್ಲಿ ಸದ್ಭಕ್ತರೆಂತೆಂಬೆ ? ।೪೦।

೪೧
ಸಮಯವುಳ್ಳನಕ ಸಂಸಾರಿಯಲ್ಲದೆ
ಲಿಂಗಭಕ್ತನಲ್ಲ, ಜಂಗಮಪ್ರೇಮಿಯಲ್ಲ,

೧–೧ ಗನೆಂ (ಮೂ), ೨–೨ ಯೋ(ಮೂ).

ಉಭಯ ಸಂದೇಹವುಳ್ಳನಕ ಕೂಡಲ ಚೆನ್ನಸಂಗಯ್ಯನಲ್ಲಿ
ಭಕ್ತರೆಂತಪ್ಪರಯ್ಯಾ? ।೪೧।[1] [೭೭]

೪೨
ಹಲವು ಕಾಲ ಹಂಸೆಯ ಸಂಗದಲ್ಲಿದ್ದರೆ ಬಕನು ಶುಚಿಯಾಗಬಲ್ಲುದೆ?
ನಿಧಿನಿಧಾನದೊಳಗಿದ್ದರೇನು ಪಾಷಾಣ ಹೊನ್ನಾಗಬಲ್ಲುದೆ?
ಕಲ್ಪತರುಗಳ ಸಂಗದಲ್ಲಿದ್ದರೇನು ಕೊರಡು ಫಲವಾಗಬಲ್ಲುದೆ?
ಕಾಶೀಕ್ಷೇತ್ರದಲ್ಲಿ ಶುನಕನಿದ್ದರೇನು ಅದರ ಕ್ಷೀರ ಪಂಚಾಮೃತವಾಗಬಲ್ಲುದೆ?
ಖಂಡುಗ ಹಾಲೊಳಗೆ ಇದ್ದಿಲ ಹಾಕಿದರೇನು ಬಿಳಿದಾಗಬಲ್ಲುದೆ?
ಇದು ಕಾರಣ ಕೂಡಲ ಚೆನ್ನಸಂಗನ ಶರಣರ ಸನ್ನಿಧಿಯಲಿದ್ದರೇನು
ಅಸಜ್ಜನ ಸದ್ಭಕ್ತನಾಗಬಲ್ಲನೆ? ।೪೨। [೭೪]

೪೩
ಭಕ್ತರಾದೆವೆಂದು ಯುಕ್ತಿಗೆಟ್ಟು ನುಡಿವರು; ಭಕ್ತಿಜನ್ಮವೆಲ್ಲರಿಗೆಲ್ಲಿಯದೊ?
ಗುರುವಿನಲ್ಲಿ ತನುವಂಚನೆ, ಲಿಂಗದಲ್ಲಿ ಮನವಂಚನೆ,
ಜಂಗಮದಲ್ಲಿ ಧನವಂಚನೆವುಳ್ಳನ್ನಕ ಭಕ್ತನೆ?
ಗುರುವಿನಲ್ಲಿ ಚಾರಿತ್ರವ. ಲಿಂಗದಲ್ಲಿ ಲಕ್ಷಣವ,
ಜಂಗಮದಲ್ಲಿ ಜಾತಿಯನಜಿಸುವನ್ನಕ ಭಕ್ತನೆ ? ಅಲ್ಲ, ಅವನು ದೋಷಾರ್ಥಿ,
ಭಕ್ತಶ್ಚ ಪ್ರತಿಪಕ್ಷಶ್ಚ ಸದಾಚಾರೇಣ ವರ್ಜಿತಃ।
ಗುರುಲಿಂಗಜಂಗಮದ್ವೇಷೀ ಯೋ ನರಸ್ಸದುರಾತ್ಮಕಃ॥
ಇದು ಕಾರಣ,
ಕೂಡಲ ಚೆನ್ನಸಂಗಮದೇವಾ
ಭಕ್ತಿಜನ್ಮವೆಲ್ಲರಿಗೆಲ್ಲಿಯದು? ।೪೩। [೫೯]

೪೪
ಹದಿರು ಸೂಳೆಗೆ, [2]ಕಟಕಿ ವಿದ್ಯಾವಂತಂಗೆ,[2]
ವಾದು ವಾದನೆ ಹಾವಡಿಗಂಗೆ, [3]ಶಿವಭಕ್ತರಿಗುಂಟೆ ಅಯ್ಯಾ?
ಒಬ್ಬರಿಗೊಬ್ಬರು[3] ಮಚ್ಚರಿಸಬೇಕೆಂದು ಕೊಟ್ಟನೆ ಶ್ರೀಗುರು ಲಿಂಗವನು?
ಶಿವಶಿವಾ ಭಕ್ತರು ಲಿಂಗಜಂಗಮವೊಂದೆಂದು [4]ಕಾಣದಿರ್ದರೆ,[4]
ಅಘೋರನರಕ ಕೂಡಲ ಚೆನ್ನಸಂಗಯ್ಯಾ. ।೪೪। [೩೪೬]

---

೧ 'ಅ' ಪ್ರತಿಯಲ್ಲಿ ಈ ವಚನವಿಲ್ಲ. ೪೦ನೆಯ ವಚನದೊಂದಿಗೆ ಹೋಲಿಸಿರಿ (ಸಂ). ೨–೨ ಕವುಲೆ ವಿಡಾವಂತಂಗೆ (ಮೂ). ೩–೩ x (ಮೂ). ೪–೪ ದ (ಮೂ).

೪೫

ಅರ್ಥದ ಮದ, ಅಹಂಕಾರದ ಮದ, ಕುಲಮದ ಬಿಡದು,
ಸಮಾಯಾಚಾರ ಸಮಯಭಕ್ತಿ ಇನ್ನಾರಿಗೆಯೂ ಅಳವಡದು ನೋಡಾ,
ಮಾತಿನ ಮಾತಿನ ಮಿಂಚಿನ ಥಾಳಕರಿಗೆ ಸಮಯಭಕ್ತಿ ಇನ್ನೆಲ್ಲಿಯದೊ
ಕೂಡಲ ಚೆನ್ನಸಂಗಯ್ಯಾ? । ೪೫ । [೩೪೭]

೪೬

ಬ್ರಹ್ಮೋಪದೇಶವಾಯಿತ್ತೆಂದು ಬ್ರಹ್ಮರೊಡನೆ [೧]ಧಿಕ್ಕಾರ[೧] ಬೇಡ,
ಶಿವಜ್ಞಾನದೀಪ್ತಿ ತೋರಿತ್ತೆಂದು ಶಿವಶರಣರೊಡನೆ ಧಿಕ್ಕರಿಸಬೇಡ,
ಕಾಲಜ್ಞಾನವಾಯಿತ್ತೆಂದು ಕರ್ಮವ ಹಳಿಯಬೇಡ,
ಈ ತ್ರಿವಿಧೋತ್ಪಾತ ಸಲ್ಲದು.
ಕೂಡಲ ಚೆನ್ನಸಂಗಮದೇವ ಸಾಕ್ಷಿಯಾಗಿ
ಇವರೆಲ್ಲರೂ ಸಜ್ಜನಶುದ್ಧಶಿವಾಚಾರಕ್ಕೆ ಸಲ್ಲರು. । ೪೬ । [೩೪೮]

೪೭

ಮಜ್ಜನಕ್ಕೆಱೆವುದ ಮಾದ ಬಳಿಕ ಮನ ಮತ್ತೊಂದಕ್ಕೆಱಗದಿರಬೇಕು,
ಪೂಜೆಯ ಪೂಜಿಸಿ ಮಾದ ಬಳಿಕ ಪರರ ಬೋಧಿಸಲಾಗದು.
ಆರೋಗಣೆ ಅವಸರ ಮಾದ ಬಳಿಕ
ಅಂಗಭೋಗಂಗಳ ನೆಱೆ ಮಾಣಬೇಕು.
ಆನೀನೆಂಬ ಭ್ರಾಂತುಳ್ಳನ್ನಕ್ಕರ
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಬೇಕು.
ಕೂಡಲ ಚೆನ್ನಸಂಗಯ್ಯಾ,
ಇವ ಮಾಡದಿದ್ದರೆ ನಾಯಕನರಕ. । ೪೭ । [೧೦೬೯]

೪೮

ಪೃಥ್ವಿಯ ಪೂರ್ವಾಶ್ರಯ ರಂಗವಲ್ಲಿಯಲ್ಲಿ ಹೋಹುದು.
ಅಪ್ಪುವಿನ ಪೂರ್ವಾಶ್ರಯ ಶಬ್ದದಿಂದ ಹೋಹುದು.
[೨]ಅಗ್ನಿಯ ಪೂರ್ವಾಶ್ರಯ ಧೂಪದಿಂದ ಹೋಹುದು.

೧–೧ ದಿಕ್ಕಾರಣ (ಮೂ), ೨+ ಚಂದ್ರಸೂರ್ಯ ಅತ್ತ (ಮೂ).

ವಾಯುವಿನ ಪೂರ್ವಾಶ್ರಯ ಧ್ಯಾನದಿಂದ ಹೋಹುದು.
ಆಕಾಶದ ಪೂರ್ವಾಶ್ರಯ ಮಂತ್ರದಿಂದ ಹೋಹುದು.
ಚಂದ್ರ ಸೂರ್ಯ ಆತ್ಮನ ಪೂರ್ವಾಶ್ರಯ
ಮಾಡುವ ಕಿಂಕಿಲದಿಂದ ಹೋಹುದು.
ಇದು ಕಾರಣ ಭಕ್ತ[೧] ಕಾಯ ಮಮಕಾಯ
ಕೂಡಲ ಚೆನ್ನಸಂಗಮದೇವ. । ೪೮ । [೨೪೧]

೪೯
ಪರುಷದ ಪರ್ವತದಲ್ಲಿ ಕಬ್ಬುನಂಗಳುಂಟೆ?
ಅಷ್ಟವಿಧಾರ್ಚನೆ ಷೋಡಶೋಪಚಾರ
ಸನ್ನಿಹಿತಂಗೆ ಅವಗುಣಂಗಳುಂಟೆ?
ಭಕ್ತಕಾಯ ಮಮಕಾಯ
ಕೂಡಲ ಚೆನ್ನಸಂಗಮದೇವ. । ೪೯ । [೨೪೨]

೫೦
ಪಾತಾಳದಗ್ಘಣಿಯ ನೇಣಿಲ್ಲದೆ ತೆಗೆಯಬಹುದೆ,
ಸೋಪಾನದ ಬಲದಿಂದಲ್ಲದೆ?
ಶಬ್ದಸೋಪಾನವ ಕಟ್ಟಿ ನಡಯಿಸಿದರು ಪುರಾತರು,
ದೇವಲೋಕಕ್ಕೆ ಬಟ್ಟೆ ಕಾಣಿರೋ.
ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು
ಗೀತಮಾತೆಂಬ ಜ್ಯೋತಿಯ ಬೆಳಗಿ ಕೊಟ್ಟರು,
ಕೂಡಲ ಚೆನ್ನಸಂಗನ ಶರಣರು. । ೫೦ । [೬೬೬]

೫೧
ನಾನಾ ಜನ್ಮಾಂತರದಿಂದ ಮಾನವರಾಗಿ ಪುಟ್ಟಿ,
ಜಪದಿಂದ ಧ್ಯಾನದಿಂದ ತಪದಿಂದ ಸಮಾಧಿಯಿಂದ
ದೇವಾ, ನಿಮ್ಮನಱಿದೆನೆಂದು ಬಳಲುತ್ತಿದ್ದರು.

೧+ನ (ಮೂ).

⁽¹ಪುಣ್ಯ⁽¹ ಪಾಪಂಗಳು ಕೆಟ್ಟಲ್ಲದೆ,
ನಿಮ್ಮ ಭಕ್ತರಾಗರಯ್ಯಾ
ಕೂಡಲ ಚೆನ್ನಸಂಗಮದೇವಾ. । ೫೧ । [೭೩]

೫೨
ಪಂಚಾಮೃತವನುಂಡಡೇನು? ಮಲಮೂತ್ರ ವಿಷಯ ಘನವಕ್ಕು.
ಭ್ರಾಂತು ಬೇಡ ಮರುಳೆ, ಬಿಡುವುದು ಕಾಯ ಗುಣವ.
ಆಸೆ ಆಮಿಷ ಅಶನ ವ್ಯಸನದಲ್ಲಿ ಹಿರಿಯರು ಗರುವರುಂಟೆ?
ಭ್ರಾಂತು ಬೇಡ ಮರುಳೆ, ಬಿಡುವುದು ಕಾಯಗುಣ[ವ].
ಈ ಭೇದವ ಭೇದಿಸ ಬಲ್ಲಡೆ ಕೂಡಲ ಚೆನ್ನಸಂಗನ ಶರಣ
ಸಾಣೆಯಲ್ಲಿ ಸವೆದ ಶ್ರೀಗಂಧದಂತಿರಬೇಕು. । ೫೨ । [೬೭]

೫೩
ತನುವಿನಲ್ಲಿ ತನು ಸವೆದು, ಮನದಲ್ಲಿ ಮನ ಸವೆದು, ಧನದಲ್ಲಿ ಧನ ಸವೆದು,
ಲಜ್ಜೆಗೆಟ್ಟು ನಾಣುಗೆಟ್ಟು ಕಿಂಕಿಲನಾಗಿರಬೇಕು.
ಲಿಂಗಜಂಗಮವನೊಲಿಸುವಂಗೆ ಇದು ಚಿಹ್ನವಯ್ಯಾ,
ಪ್ರಸಾದಸಾಹಿತ್ಯವಾಗಿ ಉಲುಹಡಗಿರಬೇಕು,
ಕೂಡಲ ಚೆನ್ನಸಂಗಯ್ಯನಲ್ಲಿ ಏಕಾರ್ಥವಾಗಿರಬೇಕು. । ೫೩ । [೧೭೭]

೫೪
ಆಚಾರವು ಅಗೋಚರ ನೋಡಯ್ಯಾ,
ಮಾಡಿದಲ್ಲದೆ ಇಲ್ಲ. ಒಡಲುವಿಡಿದಾಡಿದರೆ ಹಿಡಿಯಲಿಲ್ಲಯ್ಯಾ.
ಇವನೀಸುವ ಕಳೆದು ಕೂಡಲ ಚೆನ್ನಸಂಗಾ
ಬಸವಣ್ಣ ಬಲ್ಲ, ನೋಡಯ್ಯಾ. । ೫೪ । [೭೯]

೫೫
ವರ್ಮವಱಿದು ಮಾಡುವಂಗೆ ಕರ್ಮವಿಲ್ಲ,
ಹೆಮ್ಮೆಯಲ್ಲಿ ಮಾಡಿದವನ ವಿಧಿಯ ನೋಡಾ.

೧–೧ x (ಮೂ).

ಸಜ್ಜನ ಸದಾಚಾರವಱಿದು ಮಾಡುವನು
ಕೂಡಲ ಚೆನ್ನಸಂಗಯ್ಯನಲ್ಲಿ ನಮ್ಮ ಬಸವಣ್ಣನು. । ೫೫ । [೬೮೭]

೫೬

ಮಾಡುವರಯ್ಯಾ ಮಾಡುವರಯ್ಯಾ ಮರುಳುಗೊಂಡಂತೆ,
ವರ್ಮವಱಿಯದೆ ಮಾಟ ಸಯದಾನದ ಕೇಡು, ಕರ್ಮದ ಬೆಳಸು.
ಕೂಡಲ ಚೆನ್ನಸಂಗನ ಶರಣರ ಅನುವಱಿಯದೆ
ಮಾಡುವ ಮಾಟ ಭವಮಾಟ. । ೫೬ । [೬೮೮]

೫೭

ಅನ್ನವನಿಕ್ಕಿದರೆ ಪುಣ್ಯವಹುದು, ವಸ್ತ್ರವ ಕೊಟ್ಟರೆ ಧರ್ಮವಹುದು,
ಹಣವ ಕೊಟ್ಟರೆ ಶ್ರೀಯಹುದು.
ತ್ರಿಕರಣ ಶುದ್ಧವಾಗಿ ನೆನದರೆ ಮುಕ್ತಿಯಹುದು,
ಕೂಡಲ ಚೆನ್ನಸಂಗಯ್ಯನ. । ೫೭ । [೬೮೯]

೫೮

ಲಿಂಗ ಬಂದು ಮನವನಿಂಬುಗೊಂಬುದು,
ಜಂಗಮ ಬಂದು ಧನವನಿಂಬುಗೊಂಬುದು,
ಪ್ರಸಾದ ಬಂದು ತನುವನಿಂಬುಗೊಂಬುದು,
[ಈ] ತ್ರಿವಿಧವು ತಾನೆ, ಕೂಡಲ ಚನ್ನಸಂಗಾ
ನೀನೊಲಿದ ಶರಣಂಗೆ[೧]ದೃಷ್ಟ. । ೫೮ । [೬೭೦]

೫೯

ಉದಯಮುಖದಲ್ಲಿ ಲಿಂಗದರುಶನ,
ಹಗಲಿನ ಮುಖದಲ್ಲಿ ಜಂಗಮ ದರುಶನ,
ಲೇಸು, ಲೇಸು, ಲಿಂಗವಂತಂಗೆ ಇದೇ ಪಥವು, ಸದ್ಭಕ್ತಂಗೆ ಇದೇ ಪಥವು.
ಲೇಸು ಲೇಸು ಕೂಡಲ ಚೆನ್ನಸಂಗಯ್ಯನಲ್ಲಿ,
ಅಚ್ಚ ಲಿಂಗೈಕ್ಯಂಗೆ. । ೫೯ । [೧೩೫]

೧ + ಇದು (ಮೂ)

೬೦

ಲಿಂಗವನಜಿವರೆ ಮನ ನಿಚ್ಚಣಿಗೆ,
ಜಂಗಮವನಜಿವರೆ ಧನ ನಿಚ್ಚಣಿಗೆ,
ಪ್ರಸಾದವನಜಿವರೆ ತನು ನಿಚ್ಚಣಿಗೆ,
ಈ ತ್ರಿವಿಧವನಜಿವರೆ ತ್ರಿವಿಧ ನಿಚ್ಚಣಿಗೆ.
ಇದು ಕಾರಣ ಕೂಡಲ ಚೆನ್ನಸಂಗನ
ಶರಣಂಗಲ್ಲದಿಲ್ಲ[೧]ವೀ ಸಂಪತ್ತು.[೧] । ೬೦ । [೮೧]

೬೧

ಲಿಂಗಪ್ರೇಮಿಗಳು ಜಂಗಮದನುವನಜಿವರೆ?
ಜಂಗಮಪ್ರೇಮಿಗಳು ಲಿಂಗದನುವನಜಿವರೆ?
ಪ್ರಸಾದಪ್ರೇಮಿಗಳು ಲೋಕದ ಸಂಗವ ಬಲ್ಲರೆ?
ಲಿಂಗಪ್ರೇಮಿಗಳೂ [೨]ಅಲ್ಲ,[೨] ಜಂಗಮಪ್ರೇಮಿಗಳೂ ಅಲ್ಲ,
ಪ್ರಸಾದಪ್ರೇಮಿಗಳೂ ಅಲ್ಲದ ಜೀವಿಗಳಿಗೆ ಭಕ್ತಿಯೆಲ್ಲಿಯದು?
ಕೂಡಲ ಚೆನ್ನಸಂಗಮದೇವಾ. । ೬೧ । [೭೬]

೬೨

ಮಾಡುವರಯ್ಯಾ ಮಾಡುವರಯ್ಯಾ ಉದ್ದೇಶಕ್ಕೆ ಭಕ್ತಿಯ,
ಎಡೆಯಲೆ ಆಯಿತ್ತು, ಎಡೆಯಲೆ ಹೋಯಿತ್ತೆಂಬ[೩]ವಂಗೆ ಬಂದಿತ್ತೆ ಭಕ್ತಿ?[೩]
[೪]ಕಳಶ[೪] ಪುರಾಯವಹನ್ನಬರ ಮಾಡದಿದ್ದರೆ
ಭಕ್ತಿಗೆ ಭಂಗವಯ್ಯಾ ಕೂಡಲ ಚೆನ್ನಸಂಗಯ್ಯಾ. । ೬೨ । [೭೮]

೬೩

ಅವಸರವಜಿದು ಸಮಯಾಚಾರವ ಮಾಡಬೇಕಯ್ಯಾ,
ಅವಸರವಜಿದು ಸಮಯಭಕ್ತಿ ಸಂಬಂಧವ ಮಾಡಬೇಕಯ್ಯಾ,
ಅವರಸರವಜಿದು ಮಾಡಬೇಕು, ಬಂದವಸರವ ತಪ್ಪಿಸಬಾರದು.
ಕೂಡಲ ಚೆನ್ನಸಂಗನ ಸಮಯಾಚಾರಕ್ಕೆ
ಇದೇ ಮುಕ್ತಿ. । ೬೩ । [೧೬೨]

೧–೧x(ಮೂ), ೨–೨ x(ಮೂ), ೩–೩ ನಿಂದೆಗೆ ಬಂದ ಭಕ್ತಿ (ಮೂ), ೪–೪ ಕಳ(ಅ).

[೧]ಭಕ್ತನ ಭಕ್ತಸ್ಥಲ[೧]

೬೪

ತನುಗುಣ ಸಂಕರದಿಂದ ಪ್ರಸಾದಸಂಗ ಕೆಟ್ಟಿತ್ತು,
ಮನಗುಣ ಸಂಕರದಿಂ[ದ] ಲಿಂಗಸಂಗ ಕೆಟ್ಟಿತ್ತು,
ಲೋಭಗುಣ ಸಂಕರದಿಂದ ಜಂಗಮಸಂಗ ಕೆಟ್ಟಿತ್ತು.
ಈ ತ್ರಿವಿಧದ ಆಗುಚೇಗೆಯನಱಿಯದ ಕಾರಣ
ಭವಘೋರ ನರಕಕ್ಕೊಳಗಾದರು,
ಇದು ಕಾರಣ ಕೂಡಲ ಚೆನ್ನಸಂಗಯ್ಯಾ, ಈ ತ್ರಿವಿಧದ ಅನುವ ಬಲ್ಲ
ಬಸವಣ್ಣಂಗೆ ನಮೋ ನಮೋ. । ೬೪ । [೧೭೬]

೬೫

[೨]ಭಕ್ತ[೨] ಶಾಂತನಾಗಿರಬೇಕು,
ತನ್ನ ಕುಱಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು,
ಭೂತಹಿತವಹ ವಚನವ ನುಡಿಯಬೇಕು,
ಜಂಗಮದಲ್ಲಿ ನಿಂದೆಯಿಲ್ಲದೆ ಸಕಲಪ್ರಾಣಿಗಳ
ತನ್ನಂತೆ ಭಾವಿಸೂದು ಮಾಡಬೇಕು,
ತನುಮನಧನವ ಗುರುಲಿಂಗಜಂಗಮಕ್ಕೆ ಸವೆಸಲೇಬೇಕು,
ಅಪಾತ್ರದಾನವ ಮಾಡಲಾಗದು,
ಸಕಲೇಂದ್ರಿಯಗಳ ತನ್ನ ವಶವ ಮಾಡಬೇಕು,
ಇದೇ ಮೊದಲಲ್ಲಿ ಬೇಹ ಶೌಚ ನೋಡಾ.
ಲಿಂಗವ ಪೂಜಿಸಿ ಪ್ರಸಾದವ ಪಡೆವರೆ ಎನಗಿದೇ [೩]ಸಾಧನ[೩]
ಕೂಡಲ ಚೆನ್ನಸಂಗಮದೇವಾ. । ೬೫ । [೮೨]

೬೬

ಭಕ್ತನೆಂತೆಂಬೆನಯ್ಯಾ ಭಕ್ತಿಸ್ಥಲವೆನಗೆ ಮುನ್ನಿಲ್ಲ,
ಯುಕ್ತನೆಂತೆಬೆನಯ್ಯಾ ಯುಕ್ತಿಸ್ಥಲವೆನಗೆ ಮುನ್ನಿಲ್ಲ,
ಮುಕ್ತನೆಂತೆಂಬೆನಯ್ಯಾ ಮುಕ್ತಿಸ್ಥಲವೆನಗೆ ಮುನ್ನಿಲ್ಲ,
ಕೂಡಲ ಚೆನ್ನಸಂಗನ ಶರಣರಿಗೆ
ನಮೋ ನಮೋಯೆಂದು ಬದುಕುವೆ. । ೬೬ । [೧೧೧೭]

೧–೧ ಭಕ್ತನು (ಮೂ), ೨–೨ x (ಮೂ), ೩–೩ ಪ್ರಸಾದ (ಮೂ).

೬೭

ಉಭಯಾರ್ಥದಿಂದ ಲಿಂಗವ ನೋಡುವರೆ
ಗುರುವಿಂದ ಬಿಟ್ಟು ಬೇಱೆ ಘನವಿಲ್ಲಯ್ಯ,
ಗುರುವಿಂದ ಬಿಟ್ಟು ಬೇಱೆ ತೋರಲಿಲ್ಲಯ್ಯಾ.
ಉಭಯಾರ್ಥದಿಂದ ಲಿಂಗವ ನೋಡುವರೆ
ಜಂಗಮದಿಂದತಿಶಯವೇನೂ ಇಲ್ಲಯ್ಯ.
ಉಭಯಾರ್ಥದಲ್ಲಿ ಲಿಂಗವ ನೋಡುವರೆ
ಉಭಯ ಸ್ಥಳದ ಕುಳವನಱಿಯಬೇಕು.
ಉಭಯಾರ್ಥದಿಂದ ಲಿಂಗವ ನೋಡುವರೆ
ಉಭಯ ಸಂಕೀರ್ಣ ಮನವ ತಾಳಲಾಗದು.
ಉಭಯಾರ್ಥದಿಂದ ಕೂಡಲ ಚೆನ್ನಸಂಗಾ
ನಿಮ್ಮ ಶರಣರಿಗೆ ಶರಣೆಂಬೆನಯ್ಯಾ. । ೬೭ । [೧೩೧]

೬೮

ಉದರ ನಿಮಿತ್ತವಿಡಿದು ಉದರವ ಹೊರೆವವನಲ್ಲ.
ಚದುರ ಕಾಣೆ ಭೋ, ಹದಿರಿಸಬಲ್ಲ,
ಲಿಂಗಜಂಗಮವೆಂಬ ಕುಳದಾಗಮ ಸಾರವಿಡಿದಾಡುವ ಚದುರ ಕಾಣೆ ಭೋ!
ಚದುರ ಬಿದಿರ ಬಿತ್ತುವ
ಕೂಡಲ ಚೆನ್ನಸಂಗಯ್ಯಾ ನಿಮ್ಮ [1]ಶರಣನು.[1] । ೬೮ । [೧೧೮]

೬೯

ತನುವಿಲ್ಲದ ಭಕ್ತ, ಮನವಿಲ್ಲದ ಭಕ್ತ, ಧನವಿಲ್ಲದ ಭಕ್ತ,
ಪಂಚೇಂದ್ರಿಯ ಸುಖವಿಲ್ಲದ ಭಕ್ತ, ಕಾಲವಿಲ್ಲದ ಭಕ್ತ,
ಕರ್ಮವಿಲ್ಲದ ಭಕ್ತ, ಕಲ್ಪಿತವೆಂಬುದನಱಿಯದ ಭಕ್ತ,
ಅಶನವನಱಿಯದ ಭಕ್ತ, ವ್ಯಸನವನಱಿಯದ ಭಕ್ತ,
ಹುಸಿ ನುಸುಳು ಅರಿಷಡ್ವರ್ಗಂಗಳನಱಿ[2]ಯದ[2] ಭಕ್ತ,
ಲಿಂಗಕ್ಕೆ ಆಧಾರ ಭಕ್ತ, ಜಂಗಮಕ್ಕೆ ಆಧಾರ ಭಕ್ತ, ಪ್ರಸಾದಕ್ಕೆ ಆಧಾರ ಭಕ್ತ,
ಕೂಡಲಚೆನ್ನಸಂಗಯ್ಯನಲ್ಲಿ
ಎನ್ನ ಮಾತಾಪಿತನೀ ಸದ್ಭಕ್ತ. । ೬೯ । [೧೨೦]

೧-೧ x (ಮೂ), ೨-೨ ಹ (ಮೂ).

೨೦

ಸೂಸದ ಮಚ್ಚು ಅಚ್ಚೊತ್ತಿದಂ[೧]ತಿದ್ದರೆ[೧]
ಲಿಂಗವೆಂಬೆ, ಜಂಗಮವೆಂಬೆ, ಪ್ರಸಾದಿಯೆಂಬೆ,
ಸ್ವಯಂಕೃತ[೨] ಸಹಜ[೨]ಭಾವ
ಕೂಡಲ ಚೆನ್ನಸಂಗಯ್ಯ.[೩] । ೨೦ । [೨೮೧]

೨೧

ಲಿಂಗದಲ್ಲಿ ಸಾಹಿತ್ಯನು, ಜಂಗಮದಲ್ಲಿ ಸನುಮತನು,
ಪ್ರಸಾದದಲ್ಲಿ ಸ[೪]ನ್ನಿಹಿ[೪]ತನು.
ಈ ತ್ರಿವಿಧಸಂಬಂಧ ಸಾರಾಯವ ಬಲ್ಲ
ಬಸವಣ್ಣಂಗಲ್ಲದೆ ಮತ್ತಾರಿಗೆಯೂ ಆಗದು,
ಕೂಡಲ ಚೆನ್ನಸಂಗಯ್ಯನ ದಯದಿಂದ
ಆನು ಬದುಕಿದೆನು. । ೨೧ । [೧೭೫]

೨೨

ಭಕ್ತನೆಂಬ ನಾಮಧಾರಕಂಗೆ ಆವುದು ಪಥವೆಂದರೆ;
ಗುರುಭಕ್ತನಾದರೆ ಜಂಗಮವನಾರಾಧಿಸುವುದು,
ಗುರುಶಿಷ್ಯರಿಬ್ಬರ ಗುರುತ್ವವ ಮಾಡಿದನಾಗಿ.
ಆಚಾರಭಕ್ತನಾದರೆ ಜಂಗಮವನಾರಾಧಿಸುವುದು,
ಗುರುಶಿಷ್ಯರಿಬ್ಬರ ಸದಾಚಾರದಲ್ಲಿ ನಿಲಿಸಿದನಾಗಿ.
ಲಿಂಗಭಕ್ತನಾದರೆ ಜಂಗಮವನಾರಾಧಿಸುವುದು,
ಗುರು ತನ್ನ ಲಿಂಗವ ಶಿಷ್ಯಂಗೆ ಕೊಟ್ಟು ವ್ರತಗೇಡಿಯಾಗಿ ಹೋಹಲ್ಲಿ
ಆ ಗುರು ಸಹಿತ ಶಿಷ್ಯಂಗೆ ಸ್ವಾಯತವ ಮಾಡಿದನಾಗಿ.
ಪ್ರಸಾದಭಕ್ತನಾದರೆ ಜಂಗಮನಾರಾಧಿಸುವುದು,
ಗುರುಶಿಷ್ಯ ಸಂಬಂಧದಲ್ಲಿ ಪ್ರಸಾದೋದ್ಭವವ ತೋಱಿದನಾಗಿ.

೧-೧ ತೆ (ಮೂ), ೨-೨ x (ಮೂ), ೩ + "ನ ದಯದಿಂದ ಆನು ಬದುಕಿದೆನು" - ಇಷ್ಟು ಬರೆದು ೧ಮೂ' ಪ್ರತಿಯಲ್ಲಿ ಕಾಟು ಹಾಕಿದಂತಿದೆ (ಸಂ). ೪-೪ ನುಮ (ಮೂ).

ಇಂತು ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯಂಗೆ
ಜಂಗಮಸಹಿತ ಮಾಡುವುದು ಸದಾಚಾರ, ಜಂಗಮ ವಿರಹಿತ ಅನಾಚಾರ.
ಇಂತು ಶಿವನಲ್ಲಿ ಏಕಾರ್ಥವಾದ ಕಾರಣ
ಜಂಗಮಪ್ರಾಣಿಯಾದ ಜಂಗಮಪ್ರಸಾದಿ ಬಸವಣ್ಣ.
ಆ ಬಸವಣ್ಣನ ಪ್ರಸಾದದಿಂದ ಬದುಕಿದೆ ಕಾಣಾ
ಕೂಡಲ ಚೆನ್ನಸಂಗಯ್ಯಾ ।೭೨। [೧೭೮]

೭೩

ಜಂಗಮ ಬರಬೇಕೆಂದು ಲಿಂಗಾರ್ಚನೆಯ ಮಾಡೂದು.
ಆ ಜಂಗಮ ಬಂದರೆ ತನ್ನ ಲಿಂಗಾರ್ಚನೆಯ ಮಾಣಬೇಕು,
ಮಾದು ಜಂಗಮಾರ್ಚನೆಯ ಮಾಡಬೇಕು.
ಲಿಂಗದಲೇನುಂಟು, ಜಂಗಮದಲೇನುಂಟೆಂದರೆ:
ಲಿಂಗದಲ್ಲಿ ಫಲವುಂಟು ಪದವುಂಟು ಕುಲವುಂಟು ಛಲವುಂಟು ೧ಭವವುಂಟು.೧
ಜಂಗಮದಲ್ಲಿ ಫಲವಿಲ್ಲ ಪದವಿಲ್ಲ ಕುಲವಿಲ್ಲ ಛಲವಿಲ್ಲ ಭವವಿಲ್ಲ.
ಇದು ಕಾರಣ ಕೂಡಲ ಚೆನ್ನಸಂಗಮದೇವಾ
ಜಂಗಮವೇ ಲಿಂಗವೆಂದು ನಂಬಿದನಾಗಿ
ಬಸವಣ್ಣ ಸ್ವಯಂಲಿಂಗವಾದ. ।೭೩। [೧೫೧]

೭೪

ಶಿವಸಾಧ್ಯವೆಂದು, ಶಿವವೇದ್ಯವೆಂದು, ಶಿವಸತ್ಯವೆಂದು,
ಶಿವಸಹಜವೆಂದು, ಶಿವನಿರುತವೆಂದು,
"ಯದ್ಭಾವಃ ತದ್ಭವತಿ" ಎಂಬ ಭಾವಬಲಿದು,
ಬಂದವರನೆ ಶಿವನೆಂದು ನಂಬೂದು.
ಎಂದುದಾಗಿ, ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಲಿಂಗಾನುಭಾವಿಗಳ ಬರವಿಂಗೆ ಇಂಬುಗೊಡುವುದಲ್ಲದೆ
"ಯತ್ರ [ಜೀವಃ] ತತ್ರ [ಶಿವಃ]" ನೆಂದು
ನುಡಿವರೆ ಭಕ್ತನಲ್ಲಯ್ಯಾ. ।೭೪। [೨೭೭]

೧-೧ x (ಮೂ)

೭೫

ಒಡೆಯರು ಮನೆಗೆ ಬಂದುದ ಕಂಡು
ತೆಱಹು ಮಱಹಾಗಿಪ್ಪನೆ ಭಕ್ತನು? ಭೀಷ್ಮಿಸಿ ಕೊಂಡಿಹನೆ ಭಕ್ತನು?
ಜಂಗಮಪ್ರೀತಂಗೆ ಜಡಮತಿಗಳುಂಟೆ?
ನಿಮ್ಮ ಒಕ್ಕುದ ಕೊಂಡು ಇಂಥ ಮಹಾಮಹಿಮರ ತೋಱಯ್ಯಾ
ಕೂಡಲ ಚೆನ್ನಸಂಗಯ್ಯಾ. । ೭೫ । [೨೬೪]

೭೬

ಜಂಗಮವ ಕಾಣುತ ಅಹಂಕಾರದೊಳಗಿಪ್ಪ
ಅನಿತ್ಯದೇಹಿಯನೇನೆಂಬೆ ಶಿವನೇ!
ಲಿಂಗಸ್ಥಲಕ್ಕೆ ಸಲ್ಲರು, ಗುರು ಹೇಳಿತ್ತ ಮಱೆದರು.
ಭಸ್ಮಾಂಗಮಾಗತಂ ದೃಷ್ಟ್ವಾ ಆಸನಂ ಪರಿತ್ಯಜೇತ್ ।
ಸ್ವಧರ್ಮಾಃ ಪಿತೃಧರ್ಮಾಶ್ಚ ಸರ್ವಧರ್ಮೋಃ ವಿನಶ್ಯತಿ ॥
ಕುಲೀನಮಕುಲೀನಂ ವಾ ಭೂತಿರುದ್ರಾಕ್ಷಧಾರಿಣಂ ।
ದೃಷ್ಟ್ವೋನ್ನತಾಸನೇ ತಿಷ್ಠನ್ ಶ್ವಾನಯೋನಿಷು ಜಾಯತೇ ॥
ಇದು ಕಾರಣ ಕೂಡಲ ಚೆನ್ನಸಂಗಾ
ಭಸ್ಮಾಂಗಿಯ ಕಂಡರೆ, ನಮೋ ನಮೋ ಎಂಬೆನು. । ೭೬ । [೨೬೫]

[೧]ಭಕ್ತನ ಮಾಹೇಶ್ವರಸ್ಥಲ:[೧]

೭೭

ಪವನಸಾಧಕರೆಲ್ಲ ಕಳವಳಿಸಿ ಹೋದರು.
ತನುಸಾಧಕರೆಲ್ಲ ಬುದ್ಧಿಗೇಡರಾದರು. ತತ್ವಸಾಧಕರೆಲ್ಲ ಭಕ್ತಿಹೀನರಾದರು.
ಲಿಂಗಸಾಧಕರೆಲ್ಲ ಅಂಗಹೀನರಾದರು. ಪ್ರಸಾದಸಾಧಕರೆಲ್ಲ ವ್ರತಗೇಡಿಗಳಾದರು.
ಕೂಡಲ ಚೆನ್ನಸಂಗಯ್ಯಾ,
ನಿಮ್ಮಲ್ಲಿ ಬಸವಣ್ಣ ಜಂಗಮಸಾಧಕನಾಗಿ
ಸ್ವಯಲಿಂಗವಾದ. । ೭೭ । [೨೩೭]

೧–೧ ಭಕ್ತನ ಮಾಹೇಶ್ವರನು (ಮೂ).

೭೮

ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ ಕ್ಷೇತ್ರತೀರ್ಥಕ್ಕೆ ಹೋಗಲೇಕಯ್ಯ!
ಅಂಗದ ಮೇಲಣ ಲಿಂಗ [೧]ರಂಗದ[೧] ಕಲ್ಲ ತಾಗಿದರೆ
ಆವುದ ಘನವೆಂಬೆನಾವುದ ಕಿಜಿದೆಂಬೆ !
ತಾಳಸಂಪುಟಕ್ಕೆ ಬಾರದ ಘನವ[೨]ನಜೆಯದೆ ಕೆಟ್ಟರು.[೨]
ಜಂಗಮದರ್ಶನ ಶಿರಮುಟ್ಟಿ ಪಾವನ, ಲಿಂಗದರ್ಶನ ಕರಮುಟ್ಟಿ ಪಾವನ.
ಹತ್ತಿರಿದ್ದ ಲಿಂಗವ ಹುಸಿಮಾಡಿ, ದೂರಲಿದ್ದ ಲಿಂಗಕ್ಕೆ ನಮಸ್ಕರಿಸುವ
ವ್ರತಗೇಡಿಯ ತೋಱದಿರಯ್ಯಾ
ಕೂಡಲ ಚೆನ್ನಸಂಗಯ್ಯಾ. ।೭೮। [೨೩೯]

೭೯

[೩]ಆಜ್ಯೆ[೩] ಪೂಜೆಯೆಂತಿದ್ದರೇನು, ಮನದ ಓಜೆ ನೆಲೆಗೊಳ್ಳದನ್ನಕ್ಕ?
ಜಲ [೪]ಚಾಂಡಾ[೪]ಲವಾದರೆ ತಾವರೆ ನೆಲೆಗೊಂಬುದೇ?
[೫]ಮನ ಚಾಂಡಾಲವಾದರೆ ಲಿಂಗ ನೆಲೆಗೊಂಬುದೇ?[೫]
ಭಾವವಿಟ್ಟ ಕರುವಿನಂತೆ ಅಲ್ಲಿಪ್ಪನೆ ಶಿವನು?
ಥಳಥಳಿಸದು, ಹೊಳೆಹೊಳೆಯದು, ಕೆರಕು ಕಲ್ಲಿನಂತೆ ಇಪ್ಪುದಯ್ಯಾ ಪರುಷವು,
ಆ ಪರುಷದಂತುವನಾರು ಬಲ್ಲರು?
ಹೆಮ್ಮೆಗೆರಗುವರಲ್ಲದೆ ಆ ಘನವನೆತ್ತಬಲ್ಲರು?
ಕೂಡಲ ಚೆನ್ನಸಂಗನ ಶರಣರ ಅಂತಕ ಬೊಂತಕನೆನಬೇಡ,
ಅವರಂತುವನಾ ಶಿವನೇ ಬಲ್ಲ. ।೭೯। [೨೩೩]

೮೦

ಸಿರಿವಂತ ಶಿಷ್ಯಂಗೆ ಗುರು ದರಿದ್ರನಾದರೆ
ಅಭಿಮಾನದಿಂದ ಅವಿಶ್ವಾಸವ ಮಾಡುವ ನರಕಿಯನೆನ್ನತ್ತ ತೋಱದಿರಯ್ಯಾ.
[೬]ಜಂಗಮವೆ ಲಿಂಗ[೬], ಲಿಂಗವೆ ಜಂಗಮವೆಂದ ಬಳಿಕ ಅಲ್ಲಿ
ಸು[೭][ಖಿ][೭] ಸಾಮಾನ್ಯರೆಂಬ ಪಾಪಿಯ ಮುಖವನೆನ್ನತ್ತ ತೋಱದಿರಯ್ಯಾ.
ಕೂಡಲಚೆನ್ನಸಂಗಾ ನಿಮ್ಮಾಣೆ. ।೮೦। [೧೯೫]

೧–೧x(ಮೂ), ೨–೨x(ಮೂ), ೩–೩ ಯಾಜೆ (ಮೂ), ೪–೪ ಬಾಂದಾ (ಮೂ), ೫–೫x(ಮೂ). ೬–೬x (ಮೂ), ೭–೭ ಖ (ಮೂ),

೮೧

ಗುರುವ ನರನೆಂದೆನಾದರೆ ಹಿಂದಣ ಭವಮಾಲೆ ಹಿಂಗದು.
ಗುರು ಶಬ್ದಕ್ಕೆ [೧][ದೊ]ೀ[೧]ಷವ ಮಾಡಿದೆನಾದರೆ, ಶ್ವಾನನ ಬಳಗದಂತಪ್ಪೆನು.
ಗುರೂಪದೇಶವ ಮೀಱಿದೆನಾದರೆ ಎನಗೆ ಏಳೇಳು ಭವಕರ್ಮ ಹಿಂಗದು.
ಇದು ಕಾರಣ ಗುರುಲಿಂಗವು ಭರ್ಗೋದೇವನೆಂಬೆನು.
ಕೂಡಲ ಚೆನ್ನಸಂಗಯ್ಯಾ, ಇವ ನಂಬದಿದ್ದರೆ ಭವ ಹಿಂಗದು. । ೮೧ । [೧೮೭]

೮೨

ಗುರುವಚನವನುದಾಸೀನವ ಮಾಡಿ, ಗುರುಲಿಂಗಕ್ಕೆ ವಂಚಿಸುವವನ
ಮುಖವ ನೋಡೆನೋಡೆನವನ ಕೂಡೆ ಮಾತಾಡೆನಾಡೆನವನಿದಿರಿನಲ್ಲಿ
ನಿಂದಿರೆ ಪಾಪಿಯಂತಿರಲಿ.
ಇದು ಕಾರಣ, ಕೂಡಲ ಚೆನ್ನಸಂಗಯ್ಯನ ವಚನ
'ವದಂತಿ ನ ವದಂತಿ' ಎಂದುದಾಗಿ. । ೮೨ ।[೨] [೧೮೮]

೮೩

ತನುವನೊಪ್ಪಿಸಿದನಯ್ಯಾ ಭಕ್ತನು, ತನ್ನ ಮನವನೊಪ್ಪಿಸಿದನಯ್ಯಾ ಭಕ್ತನು,
ತನ್ನ ಧನವನೊಪ್ಪಿಸಿದನಯ್ಯಾ ಭಕ್ತ[ನು],
ತನ್ನ ಅಂತರಂಗದಾತ್ಮಸುಖಕ್ಕೆ ಈ ತ್ರಿವಿಧವನು
ಶ್ರೀಗುರು ಹೇಳಿದಂತುಟ ಬಿಟ್ಟ ವ್ರತಗೇಡಿಯ ತೋಱದಿರು
ಕೂಡಲ ಚೆನ್ನಸಂಗಮದೇವಾ. । ೮೩ । [೧೯೧]

೮೪

ತನುಮನಧನವ[೩]ನಿತ್ತೆ[೩]ವೆಂಬವರೆಲ್ಲ.
ತನುಮನಧನವ[೪]ನಿತ್ತೆ[೪]ವೆಂಬವರ ಮಾತ ಕೇಳಬಹುದೇ?
ಅಂಬಲಿಯನೆಱಿದವರೆಲ್ಲ ಭಕ್ತರೆ? ಕಂಬಳಿಯ ಕೊಟ್ಟವರೆಲ್ಲ ಭಕ್ತರೆ?
ಧರ್ಮ ಅರ್ಥ ಕಾಮ ಮೋಕ್ಷ ಚತುರ್ವಿಧಪದವಲ್ಲದೆ.
ತನುಮನಧನವ ನೆಱೆಯಿತ್ತು, ತನ್ನ ಹಱಿವಱಿಯದನ್ನಕ
ಕೂಡಲ ಚೆನ್ನಸಂಗಯ್ಯನಲ್ಲಿ ಅದೆಂತು ಸದ್ಭಕ್ತರೆಂಬೆ? । ೮೪ । [೯೬೧]

೧-೧ ರೋ (ಮೂ), ೨ ಈ ವಚನ 'ಮೂ'ದಲ್ಲಿ ಇಲ್ಲ, 'ಅ' ದಿಂದ ಸ್ವೀಕರಿಸಲಾಗಿದೆ. (ಸಂ) ೩-೩ ಮಿಥ್ಯ (ಮೂ), ೪-೪ ತ್ಯ (ಮೂ)

೮೫

ಮಾಡುವ ದಾಸೋಹ[೧] ಕಿಂಕುರ್ವಾಣದಿಂದಾ[೨]ದಡೆ[೨]
ಭಕ್ತನ ಆವ ಅವಗುಣಂಗಳು ಮುಟ್ಟಲಮ್ಮವಯ್ಯಾ.
ಅರ್ಥ ಪ್ರಾಣ ಅಭಿಮಾನ ತ್ರಿಸ್ಥಾನ ಶುದ್ಧವ ಮಾಡುವಲ್ಲಿ
ನಿರಾಭಾರಿ ಮಹೇಶ್ವರನ ಕೂಡಿಕೊಂಡಿಪ್ಪ
ಕೂಡದ ಚೆನ್ನಸಂಗಮದೇವ. । ೮೫ । [೨೫೬]

೮೬

ಉದಾಸೀ[೩]ನವಂ[೩] ಮಾಡಿದರೆ ಮುಟ್ಟಲಾಗದು, ಅದು ಅನರ್ಪಿತವೆನಿಸೂದು.
ವಿನಯದಿಂದ ನೀಡಿದರೆ ಮುಟ್ಟುವುದು, ಅರ್ಪಿತವ ಮಾಡುವುದು.
ಕೂಡಲ ಚೆನ್ನಸಂಗಯ್ಯಾ
ಅಂತಪ್ಪ ಲಿಂಗಾಭಿಮಾನಿಯನೆನಗೆ ತೋಱಯ್ಯಾ. । ೮೬ । [೨೩೧]

೮೭

ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ. ಅದಾವಂಗೆ ಅಳವಡುವುದು?
ನಿಧಾನ ತಪ್ಪಿ ಬಂದರೆ ಒಲ್ಲೆನೆಂಬವರಿಲ್ಲ,
ಪ್ರಮಾದ ವಶ ಬಂದರೆ ಹುಸಿಯೆಂಬವರಿಲ್ಲ.
ನಿರಾಶೆ, ನಿರ್ಭಯ ಕೂಡಲ ಚೆನ್ನಸಂಗಾ ನೀನೊಲಿದ ಶರಣಂಗಲ್ಲದಿಲ್ಲ. । ೮೭ ।[೪]

೮೮

ಸೂತಕವುಳ್ಳನ್ನಕ ಲಿಂಗಾರ್ಚನೆಯಿಲ್ಲ,
ಪಾತಕವುಳ್ಳನ್ನಕ ಜಂಗಮಾರ್ಚನೆಯಿಲ್ಲ.
ಸೂತಕ ವಿರಹಿತ ಲಿಂಗಾರ್ಚನೆ, ಪಾತಕ ವಿರಹಿತ ಜಂಗಮಾರ್ಚನೆ.
ಇಂತು ಸೂತಕ ಪಾತಕ ಎರಡೂಯಿಲ್ಲ
ಕೂಡಲ ಚೆನ್ನಸಂಗನ ಶರಣಂಗೆ. । ೮೮ । [೨೦೨]

೧+ ವ(ಮೂ), ೨–೨ ದ (ಮೂ), ೩–೩ ನಂ (ಮೂ) ೪ ಈ ವಚನ ಬಸವಣ್ಣನವರ ಹೆಸರಿನಲ್ಲಿಯೂ ಸಿಗುತ್ತದೆ (ಸಂ).

೮೯
ನಾನು ಮೆಟ್ಟುವ ಭೂಮಿಯ ಭಕ್ತನ ಮಾಡಿದಲ್ಲದೆ ಮೆಟ್ಟೆನಯ್ಯಾ.
ನಾ ನೋಡುತಿಹ ಆಕಾಶದ ಚಂದ್ರಸೂರ್ಯರ
ಭಕ್ತನ ಮಾಡಿದಲ್ಲದೆ ನಾ ನೋಡೆನಯ್ಯಾ.
ಜಲವ ಭಕ್ತನ ಮಾಡಿದಲ್ಲದೆ ನಾನು ಬಳಸೆನಯ್ಯಾ.
ನಾನು ಕೊಂಬ ಹದಿನೆಂಟು ಧಾನ್ಯವ ಭಕ್ತನ ಮಾಡಿದಲ್ಲದೆ
ಕೊಳ್ಳೆನು ಕೂಡಲ ಚೆನ್ನಸಂಗಾ ನಿಮ್ಮಾಣೆ. । ೮೯ । [೨೨೯]

೯೦
ಲಿಂಗೈಕ್ಯವಿಲ್ಲದವರನೊಲ್ಲ ಲಿಂಗಧಾರಿ.
ಲಿಂಗಾರ್ಚನೆಯ ಕಾಲದಲ್ಲಿ, ಪ್ರಸಾದಭೋಗದ ಕಾಲದಲ್ಲಿ,
ಅಂಗದ ಮೇಲೆ ಲಿಂಗವಿಲ್ಲದ ಭವಿಯ ನೇಮಸ್ತನೆಂದುಕೊಂಡರೆ
ಪಂಚಮಹಾಪಾತಕ
ಎಂದುದಾಗಿ ಭವಿಮಾರ್ಗ ನೇಮಸ್ತಗುಂಟಾಗಿ,
ಭವಿಯ ಸಂಗವ ಕಳೆದ ಲಿಂಗೈಕ್ಯರನಲ್ಲದೊಲ್ಲ
ಕೂಡಲ ಚೆನ್ನಸಂಗಯ್ಯ. । ೯೦ । [೨೦೩]

೯೧
ಜಲ ಗಂಧ ಅಕ್ಷತೆ ಪುಷ್ಪ ಧೂಪ ದೀಪ ನೈವೇದ್ಯ
ತಾಂಬೂಲ ಪಂಚವರ್ಣದ ಪತ್ರೆಪುಷ್ಪದ ಪೂಜೆಯ ರಚನೆಯ ಮಾಡುವೆನಯ್ಯಾ.
ಅಷ್ಟವಿಧಾರ್ಚನೆ ಷೋಡಶೋಪಚಾರ ಮುಖ್ಯವಾಗಿ ಮಾಡುವೆನಯ್ಯಾ.
ಸಕಲಕ್ಷೇಮದಿಂದ ನಡೆದು ನಿಮ್ಮಲ್ಲಿಗೆ ಸಾರುವೆನು
ಕೂಡಲ ಚೆನ್ನಸಂಗಯ್ಯಾ. । ೯೧ । [೨೧೩]

೯೨
ಹದಿನಾಱು ತೆಱದಿಂದ ಭಕ್ತಿಯ ಮಾಡುವೆನು,
ಷೋಡಶೋಪಚಾರಂಗಳನೆ ಮಾಡುವೆನು,
ಬಂದುದಕ್ಕೆ ಪರಿಣಾಮವ ಕೊಡುವೆನು, ಇದ್ದುದಕ್ಕೆ ಇಂಬುಗೊಡುವೆನು,
ಆಯತದಿಂದ ಲಿಂಗಾರ್ಚನೆಯ ಮಾಡುವೆನು.

ಸ್ವಾಯತದಿಂದ ಲಿಂಗಭೋಗೋಪಭೋಗವ ಮಾಡುವೆನು.
ಅನರ್ಪಿತಂಗಳ ಮುಟ್ಟಲೀಯದೆ, *ಗುರು ಪ್ರಸಾದಕ್ಕೆ ೧ತನುವ೧ ಇಂಬು ಕೊಟ್ಟು
ಲಿಂಗಪ್ರಸಾದಕ್ಕೆ ೨ಮನವ೨ ಇಂಬು ಕೊಟ್ಟು,
ಜಂಗಮಪ್ರಸಾದಕ್ಕೆ ೩ಪ್ರಾಣವ೩ ಇಂಬು ಕೊಟ್ಟು*
ಇಂತೀ ತ್ರಿವಿಧನಿರ್ಣಯದಲ್ಲಿ ನೇಮಿಸಿ ನಡೆವೆ,
ಕೂಡಲ ಚೆನ್ನಸಂಗಯ್ಯಾ ನೀವು ಮುಂತಾಗಿ. ।೯೨। [೨೨೫]

೯೩

ಕೆಱೆಯಲ್ಲಿ ಕಂಡರೆ ಉದಕವೆಂಬೆ, ಮನೆಗೆ ಬಂದರೆ ಅರ್ಘ್ಯಣೆಯೆಂಬೆ,
ಅಂಗಡಿಯಲ್ಲಿ ಕಂಡರೆ ಭಕ್ತವೆಂಬೆ, ಮನೆಗೆ ಬಂದರೆ ಸಯದಾನವೆಂಬೆ.
ಮಾಡು೪[ವೆ]೪ ನೀಡು೫[ವೆ],೫ ನೀಡುವಲ್ಲಿ ಬೋನವೆಂಬೆ?
ಪ್ರಸಾದವೆಂದು, ಅಂಜಿ ಎಂಜಲೆಂದರೆ
ಅಂದೇ ವ್ರತಗೇಡಿ ಕೂಡಲ ಚೆನ್ನಸಂಗಯ್ಯಾ. ।೯೩। [೨೩೦]

ಭಕ್ತನ ಪ್ರಸಾದಿ ೬ಸ್ಥಲ:೬

೯೪

ಲಿಂಗಸಾಹಿತ್ಯ ಮಡಿವಾಳ, ಜಂಗಮಸಾಹಿತ್ಯ ೭ಬಸವಣ್ಣ,೭
ಇವರಿಬ್ಬರ ಪ್ರಸಾದಸಾಹಿತ್ಯ ನಾನೇ ಕೂಡಲ ಚೆನ್ನಸಂಗಯ್ಯಾ. ।೯೪। [೨೪೯]

೯೫

ಮೊದಲಲ್ಲಿ ಮನದಲಚ್ಚೊತ್ತಿದ ಕಾರಣ ಎಚ್ಚಱಿಕೆಯಾಯಿತ್ತು,
ಗುರುಕಾರುಣ್ಯದಿಂದ ಆಚಾರದಱಿವಾಯಿತ್ತು,
ಜಂಗಮದಿಂದ ತಿಳಿದ ತಿಳಿವಿನಲ್ಲಿ ಪ್ರಸಾದ ಸಾಧ್ಯವಾಯಿತ್ತು,
ಕೂಡಲ ಚೆನ್ನಸಂಗನ ಶರಣರಲ್ಲಿ ೮ಏಕಾರ್ಥ೮ವಾಯಿತ್ತು. ।೯೫। [೩೩೬]

೧-೧ ಪ್ರಾಣವ (ಮೂ), ೨-೨ (ಮೂ), ೩-೩ (ಮೂ), *-* ಈ ಮೂರು ವಾಕ್ಯಗಳಲ್ಲಿ 'ಗುರು ಪ್ರಸಾದ' .... ವಾಕ್ಯ 'ಮೂ'ದಲ್ಲಿ ಕೊನೆಗೆ ಬಂದಿದೆ (ಸಂ). ೪-೪ ವ (ಮೂ), ೫-೫ ವ(ಮೂ), ೬-೬ x(ಮೂ), ೭-೭ ಮಡಿವಾಳ, ಮಡಿವಾಳ ಸಾಹಿತ್ಯ ಬಸವಣ್ಣ (ಮೂ). ೮-೮ x(ಮೂ)

೯೬

ವೇದವಂತಿರಲಿ, ಶಾಸ್ತ್ರ ಮುನ್ನವೆ ಸಾಕು, ಸಾಧಿಸಿದನು ಸಜ್ಜನ ಸಾರಾಯವನು.
ಲಿಂಗ ಜಂಗಮದ ಪ್ರಸಾದವೆ ಪ್ರಾಣವೆಂದು,
ಇವಱಿಲ್ಲಿ ಸಜ್ಜನ ಸದರ್ಥ ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣನು । ೯೬ ।[೨೩೬]

೯೭

ಮೀಱಿದ ಕ್ರೀಯ ಸಂಪಾದಿಸನಾಗಿ, ದ್ವೈತಿಯಲ್ಲ ಅದ್ವೈತಿಯಲ್ಲ.
ಮೀಱಿ ಮೀಱಿ ಹದುಳಿಗನಾಗಿ, ಸ್ವರ್ಗಿಯಲ್ಲ, ಅಪವರ್ಗಿಯಲ್ಲ.
ಕೂಡಲ ಚೆನ್ನಸಂಗಯ್ಯನಲ್ಲಿ ಸ್ವಾಯತವಾದ ಪ್ರಸಾದಿಬಸವಣ್ಣನು. । ೯೭ । [೨೩೬]

೯೮

ಪ್ರಾತಃಕಾಲದಲಗ್ರೋದಕವನು ತಂದು ಲಿಂಗದ ಅನುವನಱಿವನು,
ಪಾದೋದಕವನು ತಟ್ಟದೆ ಮುಟ್ಟದೆ ಕೊಂಬನು.
ತನಗೋಸುಗರವೆಂದಱಿ[೧]ಯದೆ[೧] ಲಿಂಗದವಸರವೆಂದಱಿದು,
ಮಹಾಮಜ್ಜನಾದಿಗಳಂ ಮಾಡಿಸಿ,
ಲಿಂಗ ಸನ್ನಿಧಿಯಲು ಲಿಂಗೋದಕವ ಗ್ರಹಿಸುವ ಪ್ರಸಾದಿ.
ಲಿಂಗದಿಚ್ಛೆಯಾರೋಗಣೆಯಂ ಮಾಡಿಸಿ, ಪ್ರಸಾದದಱಿವನೊಮ್ಮೆ ಅಱಿವನು.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಪ್ರಸಾದಿಗೆ ನಮೋ ನಮೋ. । ೯೮ । [೨೪೮]

೯೯

ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ.
ಈ ತ್ರಿವಿಧ ನಿಕ್ಷೇಪ. ಇದು ಕಾರಣ ಕೂಡಲಚೆನ್ನಸಂಗ,
[೨]ಲಿಂಗತ್ರಿವಿಧದಲ್ಲಿ ಪ್ರಸಾದತ್ರಿವಿಧನೆಂದೆನಿಸುವನು.[೨] । ೯೯ । [೨೫೭]

೧-೧ ದು(ಮೂ), ೨-೨ ತ್ರಿವಿಧದಲ್ಲಿ (ಮೂ).

೧೦೦

ತನುವಿನ ಸ್ವಾರ್ಥಕ್ಕೆ ಪದಾರ್ಥದ ಪೂರ್ವಾಶ್ರಯವ ಕಳೆದು,
ಲಿಂಗಕ್ಕೆ ಕೊಟ್ಟು ಕೊಂಬುದು ಶುದ್ಧ.
ಮನದ ಸ್ವಾರ್ಥಕ್ಕೆ ರುಚಿಯ ಪೂರ್ವಾಶ್ರಯವ ಕಳೆದು,
ಲಿಂಗಕ್ಕೆ ಕೊಟ್ಟು ಕೊಂಬುದು ಸಿದ್ಧ.
ಈ ಉಭಯ ಕ್ರಿಯಾಭಾವವಳಿದುಳಿದ ಪ್ರಸಿದ್ಧಪ್ರಸಾದವ
ಕೂಡಲ ಚೆನ್ನಸಂಗಾ ನಿಮ್ಮ ಶರಣಬಲ್ಲ. । ೧೦೦ ।[೨೫೪]

೧೦೧

ಲಿಂಗಪ್ರಸಾದ ಭವಕ್ಕೆ ಬೀಜ, ಜಂಗಮಪ್ರಸಾದ ಭವಂ ನಾಸ್ತಿ.
[೧]ವಾಸನೆಯೆ ಲಿಂಗಭಕ್ತಿ, ನಿರ್ವಾಸನೆಯೆ ಜಂಗಮಭಕ್ತಿ.[೧]
ಜಂಗಮಪ್ರಸಾದವಲ್ಲದೆ ಕೊಂಡೆನಾದಡೆ
ಅಘೋರ ನಾಯಕನರಕ ಕೂಡಲ ಚೆನ್ನಸಂಗಮದೇವಾ. । ೧೦೧ ।[೨೫೨]

೧೦೨

ಜಂಗಮವಾರೋಗಿಸಿ ಮಿಕ್ಕುದು ಲಿಂಗಕ್ಕೋಗರ,
ಲಿಂಗವಾರೋಗಿಸಿ ಮಿಕ್ಕುದು ಪ್ರಸಾದ. ನೀಡಬಹುದು.
ಜಂಗಮಮುಖದ[೨]ಲ್ಲಿ ಓಗರವಾಯಿತ್ತು.[೩]
ಲಿಂಗಮುಖದಲ್ಲಿ ಪ್ರಸಾದವಾಯಿತ್ತು.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿನಗೆ ಎನಗೆ ಜಂಗಮದ ಪ್ರಸಾದ. । ೧೦೨ ।[೬೧೦]

೧೦೩

ಉಭಯಲಿಂಗ ಪ್ರಸಾದದುದಯವ ಲಿಂಗಪ್ರಸಾದಿಗಳೆ ಬಲ್ಲರು.
ನಾನೆತ್ತ ಬಲ್ಲೆನಯ್ಯಾ ದೇವಾ,
ಕ್ರೀಯ ಮೀಜಿದ ಸಂಬಂಧವ[೪][ನು],[೪] ವಿಧಿನಿಷೇಧಕ್ರಿಯೆಗೆ ಹೊಜಿಗಾದುದನು.
ಶ್ರುತಿ ಸ್ಮೃತಿ ಪುರಾಣದೊಳಗಲ್ಲ,
ಕೂಡಲ ಚೆನ್ನಸಂಗನ ಪ್ರಸಾದ. । ೧೦೩ ।[೫೩೪]

೧–೧ ವಾಸನೆ ಲಿಂಗ, ಶಿವನೆ ಭಕ್ತ (ಮೂ), ೨–೨ ಲಘ್ಘಣಿಯಾಯಿತ್ತು (ಮೂ), ೩+ ನೀಡಬಾರದು ಓಗರವಾಯಿತ್ತು, ನೀಡಬಾರದು (ಮೂ), ೪–೪ x(ಮೂ).

೧೦೪

ಆದಿಯ ಪ್ರಸಾದವನಜಿಯರು, ಅನಾದಿಯ ಪ್ರಸಾದಕ್ಕೆ ಹಸ್ತವನಿಡುವರಯ್ಯಾ.
ಅನಾದಿ[೧] ಪ್ರಸಾದವನಜಿ[೧]ಯದೆ ಗಣಪ್ರಸಾದಕ್ಕೆ ಹಸ್ತವನಿಡುವರಯ್ಯಾ.
ಗಣಪ್ರಸಾದವನಜಿಯದೆ ಸಮಯಪ್ರಸಾದಕ್ಕೆ ಹಸ್ತವನಿಡುವರಯ್ಯಾ.
ಸಮಯಪ್ರಸಾದವನಜಿಯದೆ ಜಂಗಮಪ್ರಸಾದಕ್ಕೆ ಹಸ್ತವನಿಡುವರಯ್ಯಾ.
ಜಂಗಮಪ್ರಸಾದಿಯಾದಾತನು ಆ ಜಂಗಮದ ಮುಖವ ನೋಡಿ.
ಮನವು ತಲ್ಲೀಯವಾಗಿ ಕರಗದಿದ್ದರೆ ಆತ ಪ್ರಸಾದಿಯೆ?
ಪರುಷವಿರಲು ಕಬ್ಬುನಕ್ಕೆ ಕೈಯ್ಯನಿಡುವರೆ?
ಇದು ಕಾರಣ ಕೂಡಲ ಚೆನ್ನಸಂಗಾ
ನಿಮ್ಮ ಪ್ರಸಾದಿಯ ಪ್ರಸಾದವ ವೇಧಿಸುತ್ತಿದ್ದೆ[೨][ನು][೨] । ೧೦೪ ।[೩] [೨೫೫]

೧೦೫

ಕಂಗಳ ಮುಂ[೪][ದೆ][೪] ಶ್ರೀಗುರುಲಿಂಗ ಹಿಂಗಿದರೆ
ವ್ರತಕ್ಕೆ ಭಂಗವಾದಹುದೆಂದು
ತಂದುಕೊಟ್ಟ ಶ್ರೀಗುರು ಕರಸ್ಥಲದಲ್ಲಿ ಪ್ರಾಣಲಿಂಗವ.
ಆ ಲಿಂಗವ ಮುಟ್ಟಲೊಡನೆ ತನು ಪ್ರಸಾದವಾಯಿತ್ತು.
ಮನ ಪ್ರಸಾದವಾಯಿತ್ತು, ಧನ ಪ್ರಸಾದವಾಯಿತ್ತು.
ಇಂತು ಸರ್ವಾಂಗಪ್ರಸಾದವಾಯಿತ್ತು. ಕೂಡಲ ಚೆನ್ನಸಂಗಯ್ಯಾ. । ೧೦೫ ।

ಭಕ್ತನ ಪ್ರಾಣಲಿಂಗಿ [೫]ಸ್ಥಲ:[೫]

೧೦೬

ಗುರುಕೊಟ್ಟ ಲಿಂಗ ತನ್ನ ನಚ್ಚಿ[೬][ನಿಂದ][೬] ಆಯತವಾಯಿತ್ತಯ್ಯಾ,
ಪ್ರಾಣ ನಚ್ಚನಿಂದ ಸ್ವಾಯತವಾಯಿತ್ತಯ್ಯಾ.
ಉಭಯ ನಚ್ಚಿನಿಂದ ಸಂಗವಾಯಿತ್ತು,
ಕೂಡಲ ಚೆನ್ನಸಂಗಾ ನಿಮ್ಮಲ್ಲಿ. ।೧೦೬ । [೨೮೩]

೧–೧ x (ಮೂ), ೨–೨ x (ಮೂ), ೩. ೧೦೪ ಮತ್ತು ೧೧೩ ಒಳಗೊಂಡು, ಇವುಗಳ ಮಧ್ಯದ ವಚನಗಳು 'ಅ' ಪ್ರತಿಯಲ್ಲಿ ಇಲ್ಲ (ಸಂ), ೪–೪ ದ (ಮೂ), ೫–೫ x (ಮೂ), ೬–೬ ನ ಲಿಂಗ(ಮೂ).

೧೦೭

ಒಂದಾಗಿ ತೋಱಿದರೆ ಮೂಱಾಗಿ ವಿವರಿಸುವೆ:
ಲಿಂಗವೆಂಬೆ, ಜಂಗಮವೆಂಬೆ, ಪ್ರಸಾದವೆಂಬೆ,
ಮನೋಮೂರ್ತಿಯಾಗಿ ತೋಱಿದೆ, ಕೂಡಲ ಚೆನ್ನಸಂಗಯ್ಯಾ. ।೧೦೭। [೯೩೭]

೧೦೮

ಲಿಂಗಪ್ರಣಾಮವ ಮಾಡುವೆ, ಲಿಂಗಾಲೋಕನವ ಮಾಡುವೆ,
ಜಂಗಮಪ್ರಣಾಮವ ಮಾಡುವೆ, ಜಂಗಮಸಂಭಾಷಣೆಯ ಮಾಡುವೆ,
ಪ್ರಸಾದಪ್ರಣಾಮವ ಮಾಡುವೆ, ಪ್ರಸಾದಭೋಗವ ಮಾಡುವೆ.
ಈ ತ್ರಿವಿಧಾಲೋಕನವ ಮಾಡುವೆ,
ಕೂಡಲ ಚೆನ್ನಸಂಗಾ ನೀ ಮಾಡಿಸಲು. । ೧೦೮ ।[೨೮೫]

೧೦೯

ಲಿಂಗದಲುದಯ, ಜಂಗಮದಲನುಭಾವ.
ಮತ್ತೊಂದ ಮತ್ತೊಂದನಱಿ[1]ಯ[1]ನಯ್ಯಾ ಶರಣ,
ಕೂಡಲ ಚೆನ್ನಸಂಗಯ್ಯನಲ್ಲಿ ದ್ವಿವಿಧಸಂಪನ್ನನಾಗಿ, ಅಯ್ಯಾ. ।೧೦೯। [೧೨೫೫]

೧೧೦

ಲಿಂಗಕ್ಕೆಂದು ಮಾಡಿದ ಬೋನವ
ಜಂಗಮಕ್ಕೆ ನೀಡಬಾರದೆಂಬ ಕರ್ಮಿಯ ನೋಡಾ.
ಲಿಂಗಾರ್ಪಿತಂ ನ ಕರ್ತವ್ಯಂ ಕರ್ತವ್ಯಂ ಜಂಗಮಾರ್ಪಿತಂ ।
ಲಿಂಗಜಂಗಮಯೋರ್ಮಧ್ಯೇ ಜಂಗಮಸ್ತು ವಿಶೇಷತಃ ॥
ಇದು ಕಾರಣ ಆ ಜಂಗಮವೇ ಲಿಂಗ
ಕೂಡಲ ಚೆನ್ನಸಂಗಮದೇವಾ. । ೧೧೦ ।[೯೭೨]

೧೧೧

ಆಚಾರವಿಡಿದು ಲಿಂಗ, ಅನುಭಾವವಿಡಿದು ಜಂಗಮ.
ತನುವಿನ ಪ್ರಾಣ ಆಚಾರ, ಮನದ ಪ್ರಾಣ ಅನುಭಾವ.

೧-೧ ಯೆ (ಮೂ)

ಇದು ಕಾರಣ ಕೂಡಲ ಚೆನ್ನಸಂಗಮದೇವಾ,
ಲಿಂಗವನೂ ಜಂಗಮವನೂ ಬೇಱಿಱಿಸಲಿಲ್ಲ. । ೧೧೧ ।[೨೮೦]

೧೧೨
ಜಂಗಮವೇ ಲಿಂಗವೆಂಬರಯ್ಯಾ.
ಲಿಂಗ[೧]ಜಂಗಮ[೧]ವೆಂಬ ಸಂದಿಲ್ಲದ ಮುನ್ನ ಎರಡೆಂಬರಯ್ಯಾ.
ಏಕೋಗ್ರಾಹಕ[೨]ನಾಗಿ[೨] ಕೂಡಲ ಚೆನ್ನಸಂಗಯ್ಯ ಬೇಱಿಲ್ಲ. । ೧೧೨ । [೮೭೮]

೧೧೩
ತನುಮನಧನವು ತ್ರಿಸ್ಥಾನ ಸಂಗವಾಯಿತ್ತಾಗಿ, ಭಕ್ತಿಮದವೇಱಿತ್ತಾಗಿ,
ಸದ್ಭಕ್ತಿಸಂಭಾಷಣೆ ಕ್ರೀಯನಱಿದು ತೂರ್ಯಾತೂರ್ಯಗೊಂಡಿತ್ತಾಗಿ,
ಲಿಂಗದಲ್ಲಿ ಅಱಿ[೩][ವ],[೩] ಜಂಗಮದಲ್ಲಿ ಮ[೪][ಱೆ][೪]ವ
ಕೂಡಲ ಚೆನ್ನಸಂಗ ತಾನಾಗಿ. । ೧೧೩ ।[೫] [೫೧೧]

೧೧೪
ಜಾಗ್ರಸ್ವಪ್ನದಲ್ಲಿ ಲಿಂಗಜಂಗಮವ[೬]ನ[೬]ಲ್ಲದೆ ಅಱಿಯನು,
[೭]ಗಣ[೭]ತಿಂಥಿಣಿಯ ಭಕ್ತಿಸಾಗರದೊಳಾಡುವ,
ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣನು. । ೧೧೪ ।[೨೮೮]

೧೧೫
ಲಿಂಗದಿಂದೊದವಿದ ಜಂಗಮು, ಜಂಗಮದಿಂದೊದವಿದ ಲಿಂಗವು,
ಉಪಮೆಗೆ ತಂದು ಎರಡೆನಬಹುದೆ ಮಹಾಘನವ?
ಜಂಗಮ ಸಜ್ಜನ ಸಹಜ ಶಿವೈಕ್ಯನನೇನೆಂದುಪಮಿಸಬಹುದು? ಹೇಳಾ,
ಕೂಡಲ ಚೆನ್ನಸಂಗಮದೇವಾ ಜಂಗಮಪ್ರಾಣಿ ಬಸವರಾಜನು. । ೧೧೫ ।

ಭಕ್ತ ಶರಣ [೮]ಸ್ಥಲ:[೮]

೧೧೬
ಪೂರ್ವಿಕ ಪೂಜಕ, ಅಪೂರ್ವಿಕ ಭಕ್ತ;
ಕರ್ಮಿ ಪೂಜಕ, ನಿಷ್ಕರ್ಮಿ ಭಕ್ತ;

೧–೧x(ಮೂ). ೨–೨ ವಾ (ಮೂ), ೩–೩ ವು (ಮೂ). ೪–೪ ರಿ (ಮೂ). ೫. ೧೦೪ ಮತ್ತು ೧೧೩ ಒಳಗೊಂಡು, ಇವುಗಳ ಮಧ್ಯದ ವಚನಗಳು 'ಅ' ಪ್ರತಿಯಲ್ಲಿ ಇಲ್ಲ (ಸಂ). ೬–೬x(ಮೂ), ೭–೭x(ಮೂ).೮–೮x(ಮೂ)

ಲಿಂಗ ಪೂಜಕ, ಜಂಗಮ ಭಕ್ತ.
ತನುಗುಣಪೂರ್ವಸೂತಕ [೧]ವಿರಹಿತ,[೧]
ಕೂಡಲ ಚೆನ್ನಸಂಗಯ್ಯನಲ್ಲಿ ಆತನೆ ಅಚ್ಚಶರಣ. ।೧೧೬।[೫೧೨]

೧೧೭
ಅಂಗದಲ್ಲಿ ಲೀಯವಾದವರು ಅಂಗದ ನುಡಿಗಡಣವೆ ನೋಡಾ,
ಲಿಂಗದಲ್ಲಿ ಲೀಯವಾದವರು ಲಿಂಗದ ನುಡಿಗಡಣವೆ ನೋಡಾ,
ಆವ ಸ್ಥಳದಲ್ಲಿ ನಿಂದವರು ಆ ಸ್ಥಳವನೆ ನುಡಿವರು ನೋಡಾ,
ಕೂಡಲ ಚೆನ್ನಸಂಗನ ಶರಣರು
ಆ ಲಿಂಗದ ನಡೆ, ಆ ಲಿಂಗದ ನುಡಿಗಡಣವೆ ನೋಡಾ. ।೧೧೭।[೩೦೯]

೧೧೮
ಪೃಥ್ವಿಯಂತಹ ಭಕ್ತ, ಉದಕದಂತಹ ಮಾಹೇಶ್ವರ, ಅಗ್ನಿಯಂತಹ ಪ್ರಸಾದಿ,
ವಾಯುವಿನಂತಹ ಪ್ರಾಣಲಿಂಗಿ, ಆಕಾಶದಂತಹ ಶರಣ, ಚಂದ್ರನಂತಹ ನೇಮಸ್ತ,
ಸೂರ್ಯನಂತಹ ಅನುಭವಿ, ಆತ್ಮನಂತಹ ಐಕ್ಯ.
ಇಂತೀ ಅಷ್ಟತನು ಗಟ್ಟಿಗೊಂಡು,
ಕೂಡಲ ಚೆನ್ನಸಂಗನ ಶರಣನು ಅನಂತಕುಳರಹಿತನು. ।೧೧೮।[೩೧೭]

೧೧೯
ಆಚಾರವಂಗಸಂಬಂಧವಾದಲ್ಲಿ ಶ್ರೀಗುರು[೨][ಲಿಂಗ][೨] ಸನ್ನಿಹಿತ,
ಅಜೀವು ಮನಸಂಬಂಧವಾದಲ್ಲಿ ಶಿವಲಿಂಗಸನ್ನಿಹಿತ,
ಉಭಯ ಲಿಂಗಸಂಬಂಧವಾದಲ್ಲಿ ಜಂಗಮ[೩]ಲಿಂಗ[೩] ಸನ್ನಿಹಿತ.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಲಿಂಗತ್ರಿವಿಧ ಸಂಪನ್ನ ಶರಣ. ।೧೧೯।[೩೦೮]

೧೨೦
ಗುರುವಿನಲ್ಲಿ ಸದಾಚಾ[ರಿ], ಲಿಂಗದಲ್ಲಿ ಶಿವಾಚಾ[ರಿ],
ಜಂಗಮದಲ್ಲಿ ಸಮಯಾಚಾ[೪][ರಿ],[೪] ಪ್ರಸಾದದಲ್ಲಿ ಬ್ರಹ್ಮಚಾರಿ,
ಆಚಾರದಲ್ಲಿ ವಿಚಾರಿ ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೧೨೦।[೩೭೨?]

೧–೧x(ಮೂ), ೨–೨x(ಮೂ), ೩–೩x(ಮೂ), ೪–೪ ರ (ಮೂ), ಶರಣಸ್ಥಲದ ೧೮೧ ನೆಯ ವಚನದೊಂದಿಗೆ ಈ ವಚನವನ್ನು ಹೋಲಿಸಿರಿ (ಸಂ).

೧೨೧

ಮರಕ್ಕೆ ಬಿತ್ತು ಹುಟ್ಟಿದರೇನಯ್ಯಾ? ಬಿತ್ತಿಂಗೆ ಮರ ಹುಟ್ಟಿದರೇನಯ್ಯಾ?
ಮರದ ಬೆಳಸಿನ ಫಲದ ಪರಿಯ ಬೆಸಗೊಳಲಿಲ್ಲ.
ಸಸಿ ಪಲ್ಲವಿಸಿ ತ್ರಿವಿಧವಾಯಿತ್ತು,
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗಯ್ಯಾ. । ೧೨೧ ।[೩೨೦]

೧೨೨

ಜಾತಿಸೂತಕ ಬಿಡದು, ಜನನಸೂತಕ ಬಿಡದು,
ಪ್ರೇತಸೂತಕ ಬಿಡದು, ರಜಸ್ಸೂತಕ ಬಿಡದು, [೧]ಎಂಜಲು ಸೂತಕ ಬಿಡದು[೧],
ಭ್ರಾಂತುಸೂತಕ ಬಿಡದು, ವರ್ಣಸೂತಕ ಬಿಡದು.
ಇವರೆಂತು ಭಕ್ತರಹರು?
ಹೂಸಿ ಹುಂ[೨]ಡ[೨]ನ ಮಾಡಿದಲ್ಲಿ, ಬಾಯಿಗೆ ಬೆಲ್ಲವ ತೊಡೆದಲ್ಲಿ
ಸದ್ಗುರುಲಿಂಗವು ಮೂಗಕೊಯ್ಯದೆ ಮಾಬನೆ?
ಕಾಡು ಕಿಚ್ಚಿನ ಕೈಯಲ್ಲಿ ಕರಡದ ಹುಲ್ಲ ಕೊಯಿಸಿದಂತಿರಬೇಕು ಭಕ್ತಿ.
ಹಿಂದೆ ಮೆದೆಯಿಲ್ಲ, ಮುಂದೆ ಹುಲ್ಲಿಲ್ಲ.
ಇದು ಕಾರಣ ಕೂಡಲ ಚೆನ್ನಸಂಗನ ಭಕ್ತಿಸ್ಥಲ
ನಿಮ್ಮ ಶರಣಂಗಲ್ಲದೆ ಅಳವಡದು. । ೧೨೨ ।[೩೧೬]

೧೨೩

ತರುಮರಾದಿಗಳಲ್ಲಿಗೆ ಹೋಗಿ ಅನಂತಕಾಲ ತಪಸ್ಸಿಹುದರಿಂದ
ಒಂದು ದಿನ ಗುರುಚರಣಸೇವೆ ಸಾಲದೆ?
ಅನಂತಕಾಲ ಗುರುಚರಣಸೇವೆಯ ಮಾಡೂದ[೩]ರಿಂದ[೩]
ಒಂದು ದಿನ ಲಿಂಗಪೂಜೆ ಸಾಲದೆ?
ಅನಂತಕಾಲ ಲಿಂಗಪೂಜೆಯ ಮಾಡೂದ[೩]ರಿಂದ[೩]
ಒಂದು ದಿನ ಜಂಗಮತೃಪ್ತಿ ಸಾಲದೆ?
ಅನಂತಕಾಲ ಜಂಗಮತೃಪ್ತಿಯ ಮಾಡೂದ[೩]ರಿಂದ[೩]
ಒಂದು ನಿಮಿಷ ನಿಮ್ಮ ಶರಣರ ಅನುಭಾವ ಸಾಲದೆ
ಕೂಡಲಚೆನ್ನಸಂಗಮದೇವಾ? । ೧೨೩ ।[೮೪೩]

೧–೧ x (ಮೂ), ೨–೨ ದ (ಮೂ), ೩–೩ ನು (ಮೂ)

೧೨೪

ಕಾಮಿಸಿದಲ್ಲದೆ ಕೊಡದು ಕಾಮಧೇನು, ಕಲ್ಪಿಸಿದಲ್ಲದೆ ಕೊಡದು ಕಲ್ಪವೃಕ್ಷ,
ಚಿಂತಿಸಿದಲ್ಲದೆ ಕೊಡದು ಚಿಂತಾಮಣಿ, ಭಾವಿಸಿದಲ್ಲದೆ ಕೊಡನು ಶಿವನು.
ಕಾಮಿಸದೆ ಕಲ್ಪಿಸದೆ ಚಿಂತಿಸದೆ ಭಾವಿಸದೆ ಕೊಡಬಲ್ಲರು,
ಕೂಡಲ ಚೆನ್ನಸಂಗಾ ನಿಮ್ಮ ಶರಣರು. । ೧೨೪ ।[೩೧೧]

೧೨೫

ಶ್ರೀಗುರುಲಿಂಗಜಂಗಮಕ್ಕೆ ಅರ್ಚನೆ ಪೂಜನೆ ದಾಸೋಹವನು
ಧರ್ಮವ ಕಾಮಿಸಿ ಮಾಡಿದರೆ ಧರ್ಮವಪ್ಪುದು,
ಅರ್ಥವ ಕಾಮಿಸಿ ಮಾಡಿದರೆ ಅರ್ಥವಪ್ಪುದು,
ಕಾಮವ ಕಾಮಿಸಿ [೧]ಮಾಡಿ[೧]ದರೆ ಕಾಮವಪ್ಪುದು,
ಮೋಕ್ಷವ ಕಾಮಿಸಿ [೨]ಮಾಡಿ[೨]ದರೆ ಮೋಕ್ಷವಪ್ಪುದು,
ಸಾಲೋಕ್ಯವ ಕಾಮಿಸಿ [೨]ಮಾಡಿ[೨]ದರೆ ಸಾಲೋಕ್ಯವಪ್ಪುದು,
ಸಾಮಿಪ್ಯವ ಕಾಮಿಸಿ [೨]ಮಾಡಿ[೨]ದರೆ ಸಾಮಿಪ್ಯವಪ್ಪುದು,
ಸಾರೂಪ್ಯವ ಕಾಮಿಸಿ [೨]ಮಾಡಿ[೨]ದರೆ ಸಾರೂಪ್ಯವಪ್ಪುದು,
ಸಾಯುಜ್ಯವ ಕಾಮಿಸಿ [೨]ಮಾಡಿ[೨]ದರೆ ಸಾಯುಜ್ಯವಪ್ಪುದು,
ಕಾಮಧೇನುವ ಕಾಮಿಸಿ [೨]ಮಾಡಿ[೨]ದರೆ ಕಾಮಧೇನುವಪ್ಪುದು,
ಕಲ್ಪತರುವ ಕಾಮಿಸಿ [೨]ಮಾಡಿ[೨]ದರೆ ಕಲ್ಪತರುವಪ್ಪುದು,
ಚಿಂತಾಮಣಿಯ ಕಾಮಿಸಿ [೨]ಮಾಡಿ[೨]ದರೆ ಚಿಂತಾಮಣಿಯಪ್ಪುದು,
ಪರುಷವ ಕಾಮಿಸಿ [೨]ಮಾಡಿ[೨]ದರೆ ಪರುಷವಪ್ಪುದು,
ಆವುದನಾವುದ ಕಾಮಿಸಿದರೆ ಕಾಮಿಸಿದ ಫಲ ತಪ್ಪದು.
ಕಾಮಿಸಿದ ನಿಷ್ಕಾಮ ದಾಸೋಹ
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. । ೧೨೫ ।[೩೧೦]

೧೨೬

ಸುಖಶೀಲ ಲಿಂಗಧ್ಯಾನ, ಸಮಶೀಲ ಜಂಗಮಪ್ರೇಮ,
ಮಹಾಶೀಲವವರೆಂದಂತೆಯೆಂಬುದು,
ಈ ತ್ರಿವಿಧವನಜಿದಡೆ ಕೂಡಲ ಚೆನ್ನಸಂಗನೆಂಬೆನು. । ೧೨೬ ।[೫೧೩]

೧–೧x(ಮೂ). ೨–೨x(ಮೂ).

೧೨೭

ಮನವಚನಕಾಯದಲ್ಲಿ ಆಸೆಯಿಲ್ಲದ ಶರಣ,
ಅರ್ಥ ಪ್ರಾಣ ಅಭಿಮಾನದಲ್ಲಿ ಲೋಭವಿಲ್ಲದ ಶರಣ,
ವಾಕ್ಕು ಪಾಣಿ ಪಾಯು ಪಾದ ಗುಹ್ಯವೆಂಬ ಕರ್ಮೇಂದ್ರಿಯಂಗಳನು
ಹೊದ್ದಲೀಯದ ಶರಣ,
ಲಿಂಗಜಂಗಮದ ಪ್ರಸಾದಸಾರಾಯ ಶರಣ,
ಕೂಡಲ ಚೆನ್ನಸಂಗ[1]ನ[1] ಅನುಭಾವಸಾರಾಯ ಶರಣ. । ೧೨೭ ।[೩೦೭]

೧೨೮

ಕಾಯದಿಂದ ಲಿಂಗದರುಶನ, ಕಾಯದಿಂದ ಜಂಗಮದರುಶನ,
ಕಾಯದಿಂದ ಪ್ರಸಾದಸಂಪತ್ತು.
ಕೂಡಲ ಚೆನ್ನಸಂಗಯ್ಯಾ
ಆ ಕಾಯದಲ್ಲಿ ನಿಮ್ಮುವ ಕಂಡೆನಯ್ಯಾ. । ೧೨೮ ।[೩೦೪]

೧೨೯

ಭೂಮಿ ನಷ್ಟವಾದರೆ ಜಲಕ್ಕಿಂಬಿಲ್ಲ, ಜಲ ನಷ್ಟವಾದರೆ ಇಂದ್ರಿಯಕ್ಕಿಂಬಿಲ್ಲ,
ಇಂದ್ರಿಯ ನಷ್ಟವಾದರೆ ಜಂಗಮಕ್ಕಿಂಬಿಲ್ಲ, ಜಂಗಮ ನಷ್ಟವಾದರೆ ಲಿಂಗಕ್ಕಿಂಬಿಲ್ಲ.
ಇದು ಕಾರಣ ಕರಣಾದಿಗಳಂ ಬಿಡದೆ ಆನು ವ್ರತಿಯೆಂಬವರ ತೋಱಯ್ಯಾ
ಕೂಡಲ ಚೆನ್ನಸಂಗಮದೇವಾ. । ೧೨೯ ।[೩೧೩]

೧೩೦

ಮುಖಲಿಂಗದರುಶನ ಜಂಗಮದಲ್ಲಿ, ಭಾವಲಿಂಗದರುಶನ [2]ಮನ[2]ದಲ್ಲಿ,
ಸ್ವಯಲಿಂಗದರುಶನ ಕಾಯದಲ್ಲಿ,
ಈ ತ್ರಿವಿಧಲಿಂಗದರುಶನ ಜ್ಞಾನದಲ್ಲಿ.
ಇದು ಕಾರಣ ಕೂಡಲ ಚೆನ್ನಸಂಗನಲ್ಲಿ, ಜಂಗಮಲಿಂಗದರುಶನ
ಬಸವಣ್ಣಂಗಲ್ಲದೆ ಉಳಿದವರಾರಿಗೆಯೂ ಅಳವಡದು. । ೧೩೦ ।[೩೨೧]

೧-೧ x(ಮೂ), ೨-೨ ಸ್ಥಾವರ (ಮೂ)

೧೩೧
ಬಸವ ಮೈದೊಡಿಗೆ, ಸಂಗಯ್ಯ ಮ¹[ದು]¹ವಣಿಗ,
ವಸುಧೆಯ ಭಕ್ತರೆಲ್ಲರು ಮದವಳಿಗೆಯರಾಗಿ
ಅಂಗವಿಸಿಂ ಭೋ! ಶುದ್ಧಶಿವಾಚಾರಿಗಳೆಲ್ಲ.
ಕೂಡಲ ಚೆನ್ನಸಂಗಯ್ಯನು ಒಬ್ಬನೆ ಅಚಳ,
ನಾವೆಲ್ಲರೂ ನಿತ್ಯಮುತ್ತೈದೆಯರಾಗಿ. ।೧೩೧ ।[೩೨೨]

೧೩೨
ಶಿಲೆಯೆಂಬ ಪೂರ್ವಾಶ್ರಯವ ಕಳೆದು ಲಿಂಗವೆಂದ,
ನರನೆಂಬ ಪೂರ್ವಾಶ್ರಯವ ಕಳೆದು ಗುರುವೆಂದ,
ಜಾತಿಸೂತಕದ ಪೂರ್ವಾಶ್ರಯವ ಕಳೆದು ಜಂಗಮವೆಂದ,
ಎಂಜಲೆಂಬ ಪೂರ್ವಾಶ್ರಯವ ಕಳೆದು ಪ್ರಸಾದವೆಂದ.
ಇಂತೀ ಚತುರ್ವಿಧ ಪೂರ್ವಾಶ್ರಯವ ಕಳೆಯಬಲ್ಲನಾಗಿ
ಕೂಡಲ ಚೆನ್ನಸಂಗಯ್ಯನಲ್ಲಿ ಶರಣ ಸ್ವತಂತ್ರ. ।೧೩೨ ।

೧೩೩
ಅರ್ಥ ಪ್ರಾಣ ಅಭಿಮಾನದಲ್ಲಿ ಆನು ಶರಣನೆಂಬನ್ನಕ ಅಭೇದ್ಯವಯ್ಯಾ.
ಲಿಂಗಜಂಗಮ ಶರಣು, ಶಿವಸಂಗನಬಸವ ಶರಣಯ್ಯಾ.
ಕೂಡಲ ಚೆನ್ನಸಂಗನ ಶರಣಸತಿ ಲಿಂಗಪತಿ² ಪರಿಪೂರ್ಣನಾಗಿ. ।೧೩೩ ।[೩೧೯]

೧೩೪
ಧರೆಯಗಲದ ಜಲಕೆ ಕಜೆಯ ನೂಲಿನ ಜಾಲ,
ಕಜೆಯ ಕಬ್ಬಿಲ ಹೊಕ್ಕು ಸೇದುತಿರಲು, ಕರದ ಕೈಯಲಿ ಗಾಣ.
ಸೂಕ್ಷ್ಮವಿಚಾರದಲ್ಲಿ
ಅಜೆದುಕೊಂಬಡೆ ಗಾಣ ಹೊಜಗಾಯಿತ್ತು,
ಹರಿವ ಜಲಗಳು ಬತ್ತಿ ಕೆಲಕೆ ಉಷ್ಣವು ತೋಜೆ,
ಬಿಳಿಯ ಮಳಲಲ್ಲಿಗಲ್ಲಿಗೆ ಕಾಣಬರಲು,
ಕಜೆಯ ಕಬ್ಬಿಲ ಬಂದು, ³ತಡಿಯ³ ಮೆಟ್ಟಿ ನೋಡಿ ಕಾಣದೆ,

೧-೧ ದ (ಮೂ). ೨+ ಪತಿ (ಮೂ). ೩-೩ ಉರಿಯ (ಮೂ).

ಜಾಲವ ಹೊತ್ತುಕೊಂಡು ಹೋಹಾಗ,
ಹೊಂಗಜೆಯ ಬಿಲ್ಲಕೋಲನೊಂದು ಕೈಯಲಿ ಹಿಡಿದು,
ಒಂದು ಕೈಯಲಿ ಬಿದಿರಕ್ಕಿವಿಡಿದು,
ದಂಗಟನ ಪುಣುಜೆಯರು ಮುಂದೆ ಬಂದಾಡಲು,
ಕಂಗಳ ಮುತ್ತು ಸಡಿಲಿ ಪಾದದ ಮೇಲೆ ಬೀಳಲು,
ಅಂಗಯ್ಯವೊಳಗೊಂದು ಅರಿದಲೆ ಮೂಡಿರಲು
ದಂಗಟನ ಹೊತ್ತುಕೊಂಡಾಡು[೧]ವಾಗಲ್ಲಿ[೧]
ಶೃಂಗಾರ ಸಯವಾಯಿತ್ತು. ಕೂಡಲ ಚೆನ್ನಸಂಗಯ್ಯನಲ್ಲಿ
ಭಕ್ತ್ಯಂಗನೆಯ ನಾವು ಕಂಡೆವಯ್ಯಾ. ।೧೩೪।[೩೧೮]

ಭಕ್ತನ [೨]ಐಕ್ಯಸ್ಥಲ :[೨]

೧೩೫
ಒಡಲಿಲ್ಲದ ಗುರುವಿಂಗೆ, ಒಡಲಿಲ್ಲದ ಭಕ್ತಂಗೆ,
ಒಡಲಿಲ್ಲದ ಪ್ರಸಾದ [೩]ಸಂಬಂಧಿಗೆ,[೩]
ಕೂಡಲ ಚೆನ್ನಸಂಗಯ್ಯ ನಿಂದ ನಿಲವಿಂಗೆ,
ಹಿಂದಿಲ್ಲ ಮುಂದಿಲ್ಲ ಒಂದೂ ಇಲ್ಲ ಶರಣಂಗೆ. ।೧೩೫।[೩೩೮]

೧೩೬
ಲಿಂಗಜಂಗಮ ಸನುಮತವಾದ ಕ್ರೀಯನು ಅಹುದಾಗದೆಂಬ ಸಂದೇಹಬೇಡ.
ಕ್ರೀವಿಡಿದು [೪]ತ[೪]ನುವ ಗಮಿಸೂದು, ಅಜೆವುವಿಡಿಮ ಮನವ ಗಮಿಸೂದು.
ಕ್ರಿಯಾದ್ವೈತಂ ನ ಕರ್ತವ್ಯಂ ಭಾವಾದ್ವೈತಂ ಸಮಾಚರೇತ್ ।
ಕ್ರಿಯಾಂ ನಿರ್ವಹತೇ ಯಸ್ತು ಭಾವಶುದ್ಧಂ ತು ಶಾಂಕರಿ ॥
ಎಂದುದಾಗಿ, ಅನುಭಾವದಿಂದ ಸಕಳೇಂದ್ರಿಯಂಗಳು
ಕೂಡಲ ಚೆನ್ನಸಂಗಯ್ಯನಲ್ಲಿ[೫][ಯೆ][೫] ತದ್ರೂಪು. ।೧೩೬।[೬] [೩೨೭]

೧-೧ ತಿರಲು (ಮೂ) ೨-೨ ಭಕ್ತ (ಮೂ). ೩-೩ ಸಂದುಂದಿಗೆ (ಮೂ). ೪-೪ ರ (ಮೂ), ೫-೫ ಯ (ಮೂ),
೬ ಈ ವಚನ ಮುದ್ರಿತ ಪ್ರತಿಯಲ್ಲಿ "ಗುರುಲಿಂಗಜಂಗಮ ಸಮ್ಮತವಾದ..." ಎಂದು ಪ್ರಾರಂಭವಾಗುತ್ತದೆ. (ಸಂ).

೧೩೭
ಮಾಟವಿಲ್ಲದ ಕೂಟವದೇಕೋ, ಕೂಟವಿಲ್ಲದ ಮಾಟವದೇಕೋ,
ಮಾಟಕೂಟವೆರಡಱನುವಱಿಯಬೇಕು.
ಸಟೆಯಿಲ್ಲದೆ ದಿಟಘಟಿಸಿ ಸಯವಾಗಬೇಕು.
ಕೂಟಮಾಟವೆರಡಱ ಅನುಮತದಿಂದ ಭಕ್ತಿ.
ಇದೇ [1]ಮಾಟಕೂಟ[1] ಕೂಡಲ ಚೆನ್ನಸಂಗಯ್ಯಾ ನಿಮ್ಮಲ್ಲಿ. ।೧೩೭।[೩೨೮]

೧೩೮
ಸೂತಕವಿರಹಿತ ಲಿಂಗಾರಾಧನೆ ತನುಮೂರ್ತಿಯಾದಲ್ಲಿ ಲಿಂಗೈಕ್ಯ,
ಪಾತಕವಿರಹಿತ ಜಂಗಮಾರಾಧನೆ ಮನಮೂರ್ತಿಯಾದಲ್ಲಿ ಲಿಂಗೈಕ್ಯ,
ಸೂತಕ ಪಾತಕವೆಂಬ ಉಭಯ ಸಂಗ ಹಿಂಗಿತ್ತು,
ಕೂಡಲ ಚೆನ್ನಸಂಗಾ ನಿಮ್ಮ ಲಿಂಗೈಕ್ಯಂಗೆ. ।೧೩೮।[೩೨೯]

೧೩೯
ಅತಿಬಳ ಪ್ರಬಳಿತ ಜಂಗಮ ಸಂಸಾರಿಯಾದ ಕಾರಣ,
ಭಕ್ತ ನಿಸ್ಸಂಸಾರಿಯಾದ ಕಾರಣ,
ಈ ಸಂಸಾರಿಯ ವೈರಾಗ್ಯವೂ ಆ ಸಂಸಾರಿಯ ನಿಷ್ಠೆಯೂ
ಒಂದಾದರೆ ತೆಱಹಿಲ್ಲ, ಕೂಡಲ ಚೆನ್ನಸಂಗಾ ನಿಮ್ಮಲ್ಲಿ. ।೧೩೯।[೬೯೦]

೧೪೦
"ಅಕಾಯೋ ಭಕ್ತಕಾಯಶ್ಚ ಮಮ ಕಾಯಸ್ತು ಭಕ್ತಿಮಾನ್"
ಎಂಬ ಶ್ರುತಿಯನೋ[2]ದು[2]ವರೆ ಎಂತು ಭಕ್ತಂಗೆ?
"ಮಹಂತೋ ಲಿಂಗರೂಪೇಣ ಮಹಂತೋ ಜಂಗಮಸ್ತಥಾ"
ಎಂಬ ಶ್ರುತಿಯನೋ[2]ದು[2]ವರೆ ಎಂತು ಜಂಗಮಕ್ಕೆ?
ಇಂತೆರಡೊಂದಾದರೆ ತೆಱಹಿಲ್ಲ
ಕೂಡಲ ಚೆನ್ನಸಂಗಾ ನಿಮ್ಮಲ್ಲಿ. ।೧೪೦।[೬೯೧]

೧-೧ x (ಮೂ). ೨-೨ ಡು(ಮೂ).

೧೪೧

ಮೊದಲಲಿ ಅಚ್ಚೊತ್ತಿದ ಕಾರಣ ಎಚ್ಚಱಿಕೆಯಾಯಿತ್ತು.
ಗುರುಕಾರುಣ್ಯದಿಂದ ಅಱಿವಾಯಿತ್ತು, ಆಚಾರವಾಯಿತ್ತು.
ಜಂಗಮದಿಂದ ತಿಳಿದ ತಿಳಿವಿನಲ್ಲಿ ಪ್ರಸಾದ ಸಾಧ್ಯವಾಯಿತ್ತು.
ಕೂಡಲ ಚೆನ್ನಸಂಗಯ್ಯನಲ್ಲಿ ಏಕಾರ್ಥವಾಯಿತ್ತು. । ೧೪೧ ।

೧೪೨

ವ್ಯವಹಾರವ ಮುಂದುಗೊಂಡಿದ್ದೆನಯ್ಯಾ,
ಆನು ವ್ಯವಹಾರವ ಮುಂದುಗೊಂಡಿದ್ದೆನಯ್ಯಾ,
ಮೊದಲುಗೆಡದೆ ಹರದೆನಗಾಯಿತಯ್ಯಾ.
ಭವಗೇಡಿ ಲಿಂಗೈಕ್ಯರ ಒಡನಾಡಿ ಅವರ ಪರಿಗಳು ಎನ್ನ ಹತ್ತಿತಯ್ಯಾ.
ಕೂಡಲ ಚೆನ್ನಸಂಗಯ್ಯಾ
ಭಕ್ತರೆನ್ನ ಮರುಳು ಮಾಡಿತ್ತನೇನೆಂಬೆ. । ೧೪೨ ।[1][೩೩೩]

❖❖

೧+ ಶ್ರೀ ಗುರು ಬಸವಲಿಂಗಾಯನಮಃ । ಭಕ್ತಸ್ಥಳಂ ಸಮಾಪ್ತಃ ಶ್ರೀ ಶ್ರೀ ಶ್ರೀ (ಮೂ)

ಮಾಹೇಶ್ವರಸ್ಥಲ

[೧]ಮಾಹೇಶ್ವರನ ಜ್ಞಾನಿಸ್ಥಲ :[೧]

೧೪೩

ಜಗದ ಕರ್ತ ಜಗದ ಸ್ಥಿತಿ[೨]ಗತಿ[೨]ಯ ನಡೆಸುವ ಪರಿಯನು
ಆವಂಗೆ ಆವಂಗೆ ಅಱಿಯಬಾರ[೩]ದು.[೩]
ಅಕಟಕಟಾ ದೇವದಾನವಮಾನವರೆಲ್ಲ ಅಹಂಯೆಂದು ಅಹಂಕಾರದಿ ಕೆಟ್ಟರಲ್ಲ.
ಆ ಮಹಾಕರ್ತನು ತನ್ನ ಶಕ್ತಿಯ ವಿನೋದಕ್ಕೆ ರಚಿಸಿದ ರಚನೆ:
ಮೂವರು ಪ್ರಧಾನರು, ಒಂಬತ್ತು ಪ್ರಜೆ ಪಸಾಯಿತರು,
ಪದಿನಾಲ್ಕು ನಿಯೋಗಿಗಳು, ಇಪ್ಪತ್ತೇಳು ಅನುಚರರು,
ಅಷ್ಟತನುಗಳಿಂದಾದ ಜಗಸ್ಥಿತಿಯ ನಡೆಸುವರು.
ಆ ಮಹಾಕರ್ತನು ಕಟ್ಟಿದ ಕಟ್ಟಳೆಯಲು ಆಯುಷ್ಯ
ನಿಮಿಷ ಮಾತ್ರ ಹೆಚ್ಚಿಸಬಾರದು, ಕುಂದಿಸಬಾರದು ನೋಡಾ.
ಭಾಷೆಯಲಿ ಅಣುಮಾತ್ರವ ಹೆಚ್ಚಿಸಬಾರದು, ಕುಂದಿಸಬಾರದು ನೋಡಾ.
ಇದನಾವಂಗೆಯೂ ಅಱಿಯಬಾರದು.
ಇದ ಬಲ್ಲರೆ ಎಮ್ಮ ಶರಣರೆ ಬಲ್ಲರು,
ಕೂಡಲ ಚೆನ್ನಸಂಗಮದೇವಾ. ।೧। [೫೪೭]

೧೪೪

ಭವಿ ಮಾಡಲಿಕೆ ಪೃಥ್ವಿಯಾಯಿತ್ತು, ಅಪ್ಪು, ತೇಜ, ವಾಯು, ಭವಿ ಮಾಡಲಿಕೆ ಆಕಾಶವಾಯಿತ್ತು,
ಭವಿ ಮಾಡಲಿಕೆ ಚಂದ್ರಸೂರ್ಯರಾದರು,

೧–೧ ಶ್ರೀ ಗುರು ಶಾಂತಲಿಂಗಾಯ ನಮಃ। ।ಮಹೇಶ್ವರ ಸ್ಥಳ ಅಜ್ಞಾನಿ ॥ (ಮೂ). ೨–೨x (ಮೂ). ೩–೩ x(ಮೂ).

ವಿಷ್ಣುವಾದ, ರುದ್ರನಾದ, ದೇವರ್ಕಳಾದರು.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
[೧]ಭವಿ[೧]ಯಿಂದಾಯಿತ್ತು ಸಕಲ ಜಗವೆಲ್ಲ. । ೨ । [೫೪೮]

೧೪೫
ಶಿವನಲ್ಲದೆ ಮತ್ತೆ ದೈವವಿಲ್ಲೆಂಬುದಕ್ಕೆ ಶ್ರುತಿ:
"ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ", ಎನುತ
ಕೂಡಲ ಚೆನ್ನಸಂಗಯ್ಯ[೨][ನ][೨] ವೇದಿಸಿ[೩]ಹೆ[೩]ವೆನುತ ವೇದಂಗಳಾದವು. । ೩ ।

೧೪೬
"ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ"
ಎಂಬ ಶ್ರುತಿಯನಜೆದು ಮತ್ತೆ ದೈವವುಂಟೆಂಬ ವಿಪ್ರರು ನೀವು ಕೇಳೀ.
"ಓಂ ನಿಧನಪತಯೇ ನಮಃ ಓಂ ನಿಧನಪತಾಂತಿಕಾಯ ನಮಃ,
ಓಂ ಊರ್ಧ್ವಾಯ ನಮಃ ಓಂ ಊರ್ಧ್ವಲಿಂಗಾಯ ನಮಃ,
ಓಂ ಹಿರಣ್ಯಾಯ ನಮಃ ಓಂ ಹಿರಣ್ಯಲಿಂಗಾಯ ನಮಃ,
ಓಂ ಸುವರ್ಣಾಯ ನಮಃ ಓಂ ಸುವರ್ಣಲಿಂಗಾಯ ನಮಃ,
ಓಂ ದಿವ್ಯಾಯ ನಮಃ ಓಂ ದಿವ್ಯಲಿಂಗಾಯ ನಮಃ"
ಎಂದುದಾಗಿ
"ಏತತ್ ಸೋಮಸ್ಯ ಸೂರ್ಯಸ್ಯ ಸರ್ವಲಿಂಗಂ ಸ್ಥಾಪಯೇತ್ ।
ಇತಿ ಓಂ ಪಾಣಿಮಂತ್ರ ಪವಿತ್ರಂ" ಎಂದುದಾಗಿ
ಇದನಜೆದು ಮತ್ತೆ ದೈವವುಂಟೆಂಬ ದ್ವಿಜರೆಲ್ಲರೂ
ಭ್ರಮಿತರು ಕೂಡಲ ಚೆನ್ನಸಂಗಮದೇವಾ. । ೪ । [೪೮೯]

೧೪೭
[೪]ಶಿವಾಯ[೪] ವಿಷ್ಣುರೂಪಾಯ ಶಿವರೂಪಾಯ ವಿಷ್ಣವೇ ।
ಶಿವಸ್ಯ ಹೃದಯಂ ವಿಷ್ಣುರ್ವಿಷ್ಣೋಶ್ಚ ಹೃದಯಂ ಶಿವಃ ॥
ಯಥಾ ಶಿವಮಯೋ ವಿಷ್ಣುರೇವಂ ವಿಷ್ಣುಮಯಃ ಶಿವಃ ।
ಇಂತೆಂಬ ಪಾತಕರು ನೀವು ಕೇಳಿಭೋ

೧-೧ x (ಮೂ), ೨-೨ x (ಮೂ), ೩-೩ ಹಿ (ಮೂ) ೪-೪ x (ಮೂ).

ಓಂ ಭೂಃ ಓಂ ಭುವಃ ಓಂ ಸ್ವಃ ಓಂ ಮಹಃ ।
ಓಂ ಜನಃ ಓಂ ತಪಃ ಓಂ ಸತ್ಯಂ ಓಂ ತತ್ಸವಿತುರ್ವರೇಣ್ಯಂ ॥
ಭರ್ಗೋದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್ ।
ಇಂತೆಂಬ ಶ್ರುತಿಯೊಳಗೆ ಆ ಶಬ್ದವುಳ್ಳರೆ ತೋಱಿರೇ.
ಹಿಂದನಱಿಯರು, ಮುಂದ ವಿಚಾರಿಸರು.
ಇಂತಪ್ಪ ಅಂತ್ಯಜರನೇನೆಂಬೆ ಕೂಡಲ ಚೆನ್ನಸಂಗಮದೇವಾ. । ೫ । [೪೯೦]

೧೪೮

ಅನಲನೇ ಗುರುವೆಂದು ಇದಿರಾಸನವೇಱಿ
ಭಾಷೆಗೆ ತಪ್ಪುವ ಪಾತಕರ ವಿಧಿಗಿನ್ನೆಂತೋ.
"ವರ್ಣಾನಾಂ ಬ್ರಾಹ್ಮಣೋ ಗುರುಃ"
ಎಂದು ವರ್ಣವನಱಿಸುವ ಕುನ್ನಿಗಳ ವಿಧಿ[1]ಗಿನ್ನೆಂತೋ[1]
"ಓಂ ಭೂಃ ಓಂ ಭುವಃ ಓಂ ಸ್ವಃ ಓಂ ಮಹಃ ।
ಓಂ ಜನಃ ಓಂ ತಪಃ ಓಂ ಸತ್ಯಂ ಓಂ ತತ್ಸವಿತುರ್ವರೇಣ್ಯಂ ॥
ಭರ್ಗೋದೇವಾ" ಎಂದು ಮಱಿದವರ ಕೂಡಲ ಚೆನ್ನಸಂಗಯ್ಯನು
ಇಱಿದಿಱಿದು ಸುಟ್ಟು ಮಱಿವನಲ್ಲದೆ ಮೆಱಿವನೆ? । ೬ । [೩೯೨]

೧೪೯

ಭೈರವನನಾರಾಧಿಸಿ ಬಾಹಿರವೋದರಯ್ಯಾ,
ಮೈಲಾರನನಾರಾಧಿಸಿ[2] ಕುರುಳು ಬೆರಳ ಕಡಿಸಿಕೊಂಡು ನಾಯಾಗಿ ಬಗಳುತಿಪ್ಪರು,
ಜಿನನನಾರಾಧಿಸಿ ಲಜ್ಜೆದೊಱಿದರು ನೋಡಾ.
ನಮ್ಮ ಕೂಡಲ ಚೆನ್ನಸಂಗಯ್ಯನನಾರಾಧಿಸಿ ದೇವಾ,
ಭ[3]ಕ್ತಿ[3]ಯೆಂದೆನಿಸಿಕೊಂಬರು ನೋಡಯ್ಯಾ. । ೭ । [೪೨೯]

೧೫೦

ಉಣ್ಣೆ ಕೆಚ್ಚಲ ಹತ್ತಿದ್ದರೇನು ಕ್ಷೀರವದಕುಂಟೆ?
ತಗಣೆ ತನುವ ಹತ್ತಿದ್ದರೇನು ಅಂಗನೆಯರ ಸುರತದ ಸುಖವ ಬಲ್ಲುದೆ?
ಗಿಳಿ ಓದಿದರೇನು ಲಿಂಗವೇದಿಯಪ್ಪುದೆ?

೧-೧ ಯೆಂತು (ಮೂ). ೨+ ದವರಿಗೆ (ಮೂ), ೩-೩ ಕ್ತಾ (ಮೂ).

[೧]ಹೇಸರ[೧] ಏಸು ದೊಡ್ಡದಾದರೇನು ತೇಜಿಯಾಗಬಲ್ಲುದೆ?
ತತ್ವದ ಮಾತು ಅಂಗಸಂಗಿಗಳಿಗೇಕೆ? ಭರ್ಗನ ಸಂಗ ಭವಿಗೇಕೆ?
ಪಚ್ಚೆಯ ಪವಳದ ಗುಡಿ[೨]ಗೂಡಾರವೇಕೆ ಗೂಗೆಗೆ?
ಗವುಡರ ಮನೆಯ ತೊತ್ತಿಂಗೆ ಬಲ್ಲಹನಾಣೆಯೇಕೆ?
ಕೀಳು ಕುಲದೈವಕ್ಕೆಱಗಿ ನರಕಕ್ಕಿಳಿದ ದುರಾಚಾರಿಗಳಿಗೆ
ಶಿವಾಚಾರವಳವಡುವುದೆ, ಕೂಡಲ ಚೆನ್ನಸಂಗಮದೇವಾ? ।೮। [೪೩೧]

೧೫೧

ಇತಿಹಾಸೇಷು ವೇದೇಷು ಪುರಾಣೇಷು ಪುರಾತನೈಃ ।
ಮಹರ್ಷಿಭಿರ್ಮಹಾದೇವೊ ಮಹನೀಯ ಪ್ರತಿಷ್ಠಿತಃ ॥
ಇಂತೆಂದು[೩]ದಾಗಿ[೩] ಪುರಾತನರಲ್ಲಿ ಆದ್ಯಂತರಾಗಿದ್ದ ಮಹಾಋಷಿಗಳೆಲ್ಲರೂ
ರತ್ನ ಸುವರ್ಣ ರಜತ ತಾಮ್ರ ಚಂದ್ರಕಾಂತ ಸ್ಫಟಿಕ ಪವಳ ಲಿಂಗಂಗಳನಾರಾಧಿಸಿ,
ಅಗಸ್ತ್ಯದಧೀಚಿ ಕಂ[೪]ಕ[೪]ದ ಬಾಣಾಸುರ ಪುರಂದರ ಬ್ರಹ್ಮ ವಿಷ್ಣು ದೂರ್ವಾಸ
ನಂದಿಕೇಶ್ವರ ಸ್ಕಂದ ಭೃಂ[೫]ಗಿ[೫]ರಿಟಿ ವೀರಭದ್ರಾದಿ ಗಣಂಗಳೆಲ್ಲರೂ
ರುದ್ರೇಣ ದೀಕ್ಷಿತೋ ಭೂತ್ವಾ ಸ್ಕಂದಃ ಶಿವಸಮುದ್ಭವಃ ।
ಶಿವಾಚಾರರಹಸ್ಯಸ್ಯ ಪಾತ್ರತಾಂ ಪರಮಾಂ ಗತಃ ॥
ಇದನಱಿದು ಪರಶುರಾಮ ಪರಾಶರ ವಶಿಷ್ಠ ವಾಲ್ಮೀಕಿ
ಕಮಲಾಕರ ವಿಶ್ವಾಮಿತ್ರ ಮಹಾಮುನಿಗಳೆಲ್ಲರೂ
ಪಾಣಿನಿಶ್ಚ ಕಣಾದಶ್ಚ ಕಪಿಲೋ ಗೌತಮಾದಯಃ ।
ಪ್ರಸಾದಸೇವನಾದ್ಧ್ಯಾನಾದರ್ಚನಾದ್ಧಾರಣಾದಪಿ ॥
ಇಂತೆಂದುದಾಗಿ ಇದು ಕಾರಣ ಕೂಡಲ ಚೆನ್ನಸಂಗಮದೇವರನಾರಾಧಿಸಿ,
ಪ್ರಸಾದ ಪಾದೋದಕವ ಕೊಂಡು ಅತಿಶುದ್ಧರಾದರು
ಎಲ್ಲಾ ದೇವರುಗಳು, ಎಲ್ಲಾ ಋಷಿಜನಂಗಳು. ।೯। [೪೩೨]

೧೫೨

‘ಬ್ರಹ್ಮಣಿಚರ ಬ್ರಹ್ಮಣಾ’ ಎಂದೆಂಬಲ್ಲಿ ಬ್ರಹ್ಮವೆಂದೆಂಬುದು
ಎಮ್ಮ ಶಿವಲಿಂಗ ಕಾಣಿರೋ
‘ಓಂ ತಸ್ಯ ತೃತೀಯಂ ಜನೇತಿ’ ಎಂಬುದಾಗಿ ವಿಪ್ರ ದ್ವಿಜನಲ್ಲ.
‘ದ್ವಿಜಸ್ತಸ್ಮೈ ಸಮರ್ಪ್ಯತೇ ಶೈವಮಂತ್ರಂ ಪ್ರಶಸ್ತಂ’ ಎಂಬುದಾಗಿ ವಿಪ್ರ ದ್ವಿಜನಲ್ಲ.

೧-೧ ಯೆಸರಿ (ಮೂ). ೨+ ಯು(ಮೂ), ೩-೩ x(ಮೂ), ೪-೪ x(ಮೂ), ೫-೫ ಕಿ x(ಮೂ).

ತತ್ಸರ್ವೇ ಯೇ ನಿಜಾಃ ಪ್ರಾಣಾ ಜಂತೂನಾಂ ಸಮಜಂತುಷು ।
ದ್ವಿತೀಯೇ ಮಂತ್ರತಾ ಶೈವೇಽದ್ವಿತೀಯ ಇತ್ಯುಚ್ಯತೇ ಬುಧೈಃ ॥
ಎಂದುದಾಗಿ ವಿಪ್ರ ದ್ವಿಜನಲ್ಲ.
ಇದು ಕಾರಣ ಕೂಡಲ ಚೆನ್ನಸಂಗನ ಶರಣರೇ ವಿಪ್ರೋತ್ತಮರು. । ೧೦ ।

೧೫೩

ಹಾರುವನ ಭಕ್ತಿ ಪ್ರಾಣ ಹಾರುವನ್ನಕ, ಪ್ರಾಣ ಹಾರಿದಡೆ ಭಕ್ತಿ ಹುರುಳಿಲ್ಲ.
ನೋಡಲಿಲ್ಲ ನುಡಿಸಲಿಲ್ಲ ಬಿಚ್ಚಿದಡತ್ತಿಯ ಹಣ್ಣು, ಸಂಪಾದಿಸಲಿಲ್ಲ.
ಪ್ರಾಣಲಿಂಗ ಪ್ರಸಾದವ ಮುಂದಿಟ್ಟುಕೊಂಡು,
"ಪ್ರಾಣಾಯ ಸ್ವಾಹಾ ವ್ಯಾನಾಯ ಸ್ವಾಹಾ
[1]ಅಪಾ[1]ನಾಯ ಸ್ವಾಹಾ ಉದಾನಾಯ ಸ್ವಾಹಾ ಸಮಾನಾಯ ಸ್ವಾಹಾ"
ಎಂಬ ನರಕಿಗಳ ಮೆಚ್ಚ ಕೂಡಲ ಚೆನ್ನಸಂಗಮದೇವ. । ೧೧ । [೪೨೮]

೧೫೪

ದ್ವಿಜರು ಪ್ರತಿಸಾಂವತ್ಸರಿಕ ಶ್ರಾದ್ಧವ ಮಾಡುವಲ್ಲಿ:
"ವಿಶ್ವೇದೇವಾನುಜ್ಞಯಾ ಪಿತೃಕಾರ್ಯೇ ಪ್ರವರ್ತನೇತ್"
ಎಂಬ ವಚನವಿಡಿದು
"ಗಯಾಯಾಂ ಶ್ರೀರುದ್ರಪಾದೇ ದತ್ತಮಸ್ತು"
ಎಂದು ಪಿಂಡವನಿಟ್ಟು,
ವಸುರುದ್ರಾರ್ಕರೂಪೇಣ ಮಧ್ಯ ಪಿಂಡಸ್ತು ಪುತ್ರತಃ ।
ವೇದೋಕ್ತರುದ್ರನಿರ್ಮಾಲ್ಯಂ ಕಿಂ ಪುನರ್ಬಹುಭಾಷಣೇ ॥
ಎಂದು ರುದ್ರಪಿಂಡದಿಂ ಜ[2][ಪಿ][2]ಸಿ,
"ಜನ್ಮನಾ ಜಾಯತೇ ಶೂದ್ರಃ" ಎನಿಸಿಹನೆಂಬ ಶ್ರುತಿಯ ತೊಡೆದು,
ಸಾವಿತ್ರ ಪ್ರದಾನ ಗಾಯತ್ರಿ ಉಪದೇಶವಂ ಮಾಡಿ,
"ಮಾನಸ್ತೋಕೇ ತನಯೇ" ಎಂಬ ಮಂತ್ರದಿಂ
"ತ್ರಿಯಾಯುಷಂ ಜಮದಗ್ನಿ" ಎಂದು ವಿಭೂತಿಯನಿಟ್ಟು,
ರುದ್ರಮುಖದಿಂದ ಬ್ರಹ್ಮರಾಗಿ, ಶಿವನಿರ್ಮಾಲ್ಯ ಪಾದೋದಕ ಪ್ರಸಾದಮಂ
ಧರಿಸಲಾಗದೆಂಬ ಶ್ರುತಿಬಾಹ್ಯಶಾಪಹತರನೇನೆಂಬೆನಯ್ಯಾ
ಕೂಡಲ ಚೆನ್ನಸಂಗಮದೇವಾ. । ೧೨ । [೪೩೫]

೧–೧ ಪ (ಮೂ), ೨–೨ ನಿ (ಮೂ).

೧೫೫

ಆದಿ ಸಂಬಂಧವಂ ಬಿಟ್ಟು ಅಪರ ಸಂಬಂಧವಂ ಹಿಡಿದು
ಅಕ್ಕಟಾ ಕೆಟ್ಟರಲ್ಲಾ ದ್ವಿಜರೆಲ್ಲರು.
ಸಪ್ತವ್ಯಾಧರುಗಳು ದಶಾರಣ್ಯದಲಿ ಪಿತೃಸಂಕಲ್ಪವ ಮಾಡಿದರೆಂಬುದ ಕೇಳಿ
ಅಕ್ಕಟಾ ಕೆಟ್ಟರಲ್ಲಾ ದ್ವಿಜರೆಲ್ಲರು.
ಸಪ್ತವ್ಯಾಧಾ ದಶಾರ್ಣೇಷು ಮೃಗಾಃ ಕಾಲಂಜರೇ ಗಿರೌ ।
ಚಕ್ರವಾಕಾಸ್ಸರದ್ವೀಪೇ ಹಂಸಾಃ ಸರಸಿ ಮಾನಸೇ ॥
ಯೇ ಸ್ಮ ಜಾತಾಃ ಕುರುಕ್ಷೇತ್ರೇ ಬ್ರಾಹ್ಮಣಾ ವೇದಪಾರಗಾಃ ।
ಪ್ರಸ್ಥಿತಾ ದೀರ್ಘಮಧ್ವಾನಂ ಯೂಯಂ ತೇಭ್ಯೋऽವಸೀದಥ ॥
ಅಮೂರ್ತಾನಾಂ ಚ ಮೂರ್ತಾನಾಂ ಪಿತೃಣಾಂ ದೀಪ್ತತೇಜಸಾಂ ।
ನಮಸ್ಯಾಮಿ ಸದಾ ತೇಷಾಂ ಧ್ಯಾಯಿನಾಂ ಯೋಗಚಕ್ಷುಷಾಂ ॥
ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಂಚಭಿರೇವ ಚ ।
ಹೂಯತೇ ಚ ಪುನರ್ದ್ವಾಭ್ಯಾಂ ಸ ಮೇ ವಿಷ್ಣುಃ ಪ್ರಸೀದತು ॥
ಇದು ಕಾರಣ ಆದಿ ಸಂಬಂಧವಂ ಬಿಟ್ಟು
ಅಪರ ಸಂಬಂಧವಂ ಹೊದ್ದಿದ ದ್ವಿಜರೆಲ್ಲರೂ
[೧]ಬೂದಿಯೊಳಗೆ ಹೋಮವ ಬೇಳಿ[೧]ದಂತಾದರಯ್ಯಾ
ಕೂಡಲ ಚೆನ್ನಸಂಗಮದೇವಾ. । ೧೩ । [೪೬೩]

೧೫೬

ಶ್ರುತಿಸಾಕ್ಷಿಯಾದ ಸಮ್ಯಕ್‌ಗುಣಂಗಳಂ ಬೊಮ್ಮವೆಂಬ
[೨]ಸಂಬಂಧವೆಂಬ[೨] ಬ್ರಹ್ಮವಿತ್ತುಗಳು ನೀವು ಕೇಳಿ ಭೋ!
ಓಂ ಪೃಥ್ವೀತೇ ಪಾತ್ರಂ ದ್ಯೌರಪಿಧಾನಂ
ಬ್ರಾಹ್ಮಣಸ್ತ್ವಾಂ ಮುಖೇ ಅಮೃತಂ ಜುಹೋಮಿ,
ಬ್ರಾಹ್ಮಣಂ ತ್ವಾ ವಿದ್ಯಾವತಾಂ ಪ್ರಾಣಾಪಾನಯೋರ್ಜುಹೋಮಿ,
ಅಕ್ಷತಮಸಿ ಮಾಮಕ್ಷೇಷ್ಠಾಃ ಅಹಂ ಅಸ್ಮಿನ್ ಲೋಕೇ ॥
ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ ।
ಸಮೂಳ್ಹಮಸ್ಯ ಪಾಂಸುರೇ । ಶ್ರೀ ವಿಷ್ಣೋ ಕವ್ಯಂ ರಕ್ಷಸ್ವ ॥
ಎಂದು[ದು] ವೇದ.
ಆ ವೇದವನೋದಿ ಅರ್ತಿಯಲ್ಲಿ ಸುರೆ ಮಾಂಸವ [೩][ಹೇಸಿ][೩] ತಿಂಬ
ದ್ವಿಜರ ಮೆಚ್ಚುವರೆ ಕೂಡಲ ಚೆನ್ನಸಂಗನ ಶರಣರು? । ೧೪ ।

೧-೧ x(ಮೂ) ೨-೨ ಸಂಪತ್ತೆಂಬ (ಅ), ೩-೩ ಹೊಲಿಸಿ (ಮೂ).

೧೫೭

ಹಣವ ಕೊಟ್ಟು ಹಾದರವನಾಡುವುದಱಿಂದ
ತಾರವ ಕೊಟ್ಟು ಸೂಳೆಗೆಯ್ಯಬಾರದೆ?
ಧರ್ಮವ ಮಾಡುವಲ್ಲಿ ಕರ್ಮವುಂಟೆ?
ಧರ್ಮ ಕರ್ಮದ ಭೇದವನಱಿದು ಮಾಡಲಱಿಯರು,
ಅಡಗುಗಡಿವಂಗೆ, ಸುರೆಯ ಕುಡಿವಂಗೆ ಕೊಡಬಾರದು. ಕೊಟ್ಟರೆ ಅಫಲ ತಪ್ಪದು
ಕೂಡಲ ಚೆನ್ನಸಂಗಯ್ಯಾ. । ೧೫ । [೩೫೫]

೧೫೮

ಅನ್ನಪಾನ ಐಶ್ವರ್ಯಪಾನ ವೇಶ್ಯಾಪಾನ, ಅಂಗಭಂಗಿ ಮನಭಂಗಿ ಕಾಮಭಂಗಿ.
ತ್ರಿಭಂಗಿ, ತ್ರಿಸುರೆಯ ಕುಡಿದವರು
ನಿಮ್ಮ ನಿಜವನೆತ್ತ ಬಲ್ಲರು? ಕೂಡಲ ಚೆನ್ನಸಂಗಮದೇವಾ. । ೧೬ । [೩೮೮]

೧೫೯

ಮದ್ಯಪಾನಿಗೆ ಲಿಂಗಸಾಹಿತ್ಯವ ಮಾಡಿದಾತ
ಹಿಂಗದೆ ನರಕದಲಾ[೧]ಳು[೧]ತ್ತಿಪ್ಪನು.
ಮಾಂ[೨]ಸಾಹಾ[೨]ರಿಗೆ ಲಿಂಗಸಾಹಿತ್ಯವ ಮಾಡಿದಾತ[೩]ನ[೩]
[೪]ವಂ[೪]ಶಕ್ಷಯವೆಂದುದು.
ಜೂಜುಗಾಱಂಗೆ ಲಿಂಗಸಾಹಿತ್ಯವ ಮಾಡಿದಾತ
ರೌರವನರಕಕ್ಕೆ ಹೋಹನು.
ಸೂಳೆಗೆ ಲಿಂಗಸಾಹಿತ್ಯವ ಮಾಡಿದಾತ
ಏಳೇಳು ಜನ್ಮದಲ್ಲೂ ಶ್ವಾನನ ಗರ್ಭದಲ್ಲಿ ಬರುತಿಪ್ಪನು.
ಅಂಗಹೀನಂಗೆ ಲಿಂಗಸಾಹಿತ್ಯವ ಮಾಡಿದಾತ
ಲಿಂಗದ್ರೋಹಿ, ಆತನ ಮುಖವ ನೋಡಲಾಗದು.
ಮದ್ಯಪಾನೀ ಮಾಂಸಭಕ್ಷೀ ಶಿವದೀಕ್ಷಾವಿವರ್ಜಿತಃ ।
ದ್ಯೂತೀ ವೇಶ್ಯಾಂಗಹೀನಶ್ಚ ತದ್ಗುರೋರ್ದರ್ಶನಂ ತ್ಯಜೇತ್ ॥
ಇದು ಕಾರಣ ಕೂಡಲ ಚೆನ್ನಸಂಗನಲ್ಲಿ
ವಿಚಾರಿಸದೆ [೫]ಲಿಂಗವ[೫] ಕೊಟ್ಟ ಗುರುವಿಂಗೆ ನರಕ ತಪ್ಪದು. । ೧೭ । [೩೯೯]

೧-೧ ಡು (ಮೂ). ೨-೨ ಸಧಾ (ಮೂ), ೩-೩ x (ಮೂ), ೪-೪ ಅವರಮ (ಮೂ), ೫-೫ x (ಮೂ)

೧೬೦

ತನ್ನ ಮನೆಯ ಹೊಗದ ಗುರುವಿನ ಕೈಯಲಿ ಕಾರುಣ್ಯವ ಹಡೆವ ಶಿಷ್ಯ,
ತಾ ಹೊಗದ ಮನೆಯಲುಪದೇಶವ ಮಾಡುವ ಗುರು–
ನಾಮಧಾರಕ ಶಿಷ್ಯಾಣಾಂ ನಾಮಧಾರೀ ಗುರುಃಸ್ತಥಾ ।
ಅಂಧಕೋಽಂಧಕರಾಸಕ್ತೋ ಭವೇತಾಂ ಪತಿತಾವುಭೌ ॥
ಇವರಿಬ್ಬರ ಭಕ್ತರೆಂದವರ ಕೂಡಲ ಚೆನ್ನಸಂಗಯ್ಯ
ನಾಯಕನರಕದೊಳಗಿಕ್ಕುವ. ।೧೮। [೬೩೦]

೧೬೧

ಪಿತನಾಚಾರವನುದ್ಧರಿಸುವಾತ ಪುತ್ರನಲ್ಲದೆ
ಗತಿಗೆಡಿಸುವಾತ ಪುತ್ರನಲ್ಲ.
ತಂದೆಯ ಅಂಗದ ಮೇ[1]ಲ[1]ಣ ಲಿಂಗವ ಹಿಂಗಿಸಿ
ಅವರ ಭೂತಪ್ರಾಣಿಯ ಮಾಡಿ ಕಳುಹಿದಾತ ಪುತ್ರನೆ? ಅಲ್ಲ,
ಅವ ದುರಾತ್ಮನು.
ತಂದೆಯ ಬಱುಕಾಯವ ಮಾಡಿ ಭಕ್ತನಾದಾತ ಪುತ್ರನೇ? ಅಲ್ಲ.
ಅವ ಜ್ಞಾನಶೂನ್ಯನು.
ಇಲ್ಲಿ 'ಭೂನರಕಂ ವ್ರಜೇತ್' ಎಂಬ ಶ್ರುತಿಯ ಕೇಳಿ, ವಿಸ್ತರಿಸಿ ನೋಡಿ ನೋಡಿ,
ಕುಳ್ಳಿರಿಸಿ, ಅವನ ಭಕ್ತನ ಮಾಡಿದಾತನು ಪಂಚಮಹಾಪಾತಕ.
ಅಲ್ಲಿಗೆ ಹೋದಾತ ಭೂತಪ್ರಾಣಿ, ಭಕ್ತನಾದಾತ ಪ್ರೇತಲಿಂಗ ಸಂಸ್ಕಾರಿ.
ಭಕ್ತನ ಮಾಡಿದವರಿಗೆ ರೌರವನರಕ,
ಭೂತಲಿಂಗೇನ ಸಂಸ್ಕಾರೀ ಭೂತಪ್ರಾಣಿಷು ಜಾಯತೇ ।
ಪ್ರಭಾತೇ ತನ್ಮುಖಂ ದೃಷ್ಟ್ವಾ ಕೋಟಿಜನ್ಮನಿ ಶೂಕರಃ ॥
ಎಂದುದಾಗಿ, ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
[2][ತ್ರಿಜನಕೆ][2] ತಪ್ಪದು ಅಘೋರನರಕ. ।೧೯। [೬೯೭]

೧೬೨

ತದ್ದಿನವ ಮಾಡುವ ಕ್ರೂರಕರ್ಮಿಯ ಮನೆಯಲ್ಲಿ
ಮದ್ಯಮಾಂಸವಲ್ಲದೆ ಲಿಂಗಕ್ಕೋಗರವಿಲ್ಲ.
ಹರಸಿಕೊಂಡು ಮಾಡುವ ಭಕ್ತನ ಮನೆಯಲು

೧–೧ x (ಮೂ), ೨–೨ ತ್ರೈಜಗಕೆ (ಮೂ).

ದಂಡಕ್ಕಿಕ್ಕುವು[೧]ದ[೧]ಲ್ಲದೆ ಲಿಂಗಕ್ಕೋಗರವಿಲ್ಲ.
ವರುಷಕ್ಕೊಂದು ತಿಥಿಯೆಂದು ಕೂಟಕ್ಕಿಕ್ಕಲು
ಕೀರ್ತಿ[೨]ವಾರ್ತೆ[೨]ಗೆ ಸಲುವುದಲ್ಲದೆ ಲಿಂಗಕ್ಕೋಗರವಿಲ್ಲ.
ತದ್ದಿನಂ ದಿನದೋಷಂ ಸ್ಯಾತ್ ರಕ್ತಮಾಂಸ ಸುರಾನ್ವಿತಂ ।
ಸಸಂಕಲ್ಪಂ ವಿಕಲ್ಪಂ ಚ ನರಕೇ ಕಾಲಮಕ್ಷಯಂ ॥
ಈ ತ್ರಿವಿಧವಿಡಿದು ಮಾಡುವಾತ ಭಕ್ತನಲ್ಲ,
ಅಲ್ಲಿ ಹೊಕ್ಕು ಮಾಡಿಸಿಕೊಂಬವರು ಜಂಗಮವಲ್ಲ.
ಕೂಡಲ ಚೆನ್ನಸಂಗಯ್ಯಾ ಈ ತ್ರಿವಿಧವು ನರಕಕ್ಕೆ ಭಾಜನ. । ೨೦ । [೬೨]

೧೬೩
ಓಲೆಯಕಾಱ ಭಕ್ತನಾದರೆ ಮನ[೩]ದ[೩] ಕ್ರೋಧ ಬಿಡದು.
ಒಕ್ಕಲಿಗ ಭಕ್ತನಾದರೆ ಅವನ ಪೂರ್ವಾಶ್ರಯ ಬಿಡದು.
ಹಾರುವ ಭಕ್ತನಾದರೆ ಜಾತಿಸೂತಕ ಬಿಡದು.
ಬೆವಹಾರಿಯ ಭಕ್ತಿಯೊಂದು ಶಬ್ದದಲ್ಲಿ ಹೋಯಿತ್ತು.
ಅರಸಿನ ಭಕ್ತಿ [೪]ಅ[೪]ರಸಿ ನೋಡಲಿಲ್ಲ.
ಸೂಳೆಯ ಭಕ್ತಿ ಹದಿನೆಂಟು ಜಾತಿಯ ಎಂಜಲ ತಿಂದಿತ್ತು.
ಕೂಡಲ ಚೆನ್ನಸಂಗಯ್ಯಾ ಮಜ್ಜನಕ್ಕೆಱೆವ ಭವಿಗಳನೇನೆಂಬೆ? । ೨೧ । [೩೮೪]

೧೬೪
ದಾಸಿಯ ಸಂಗದಿಂದ ಮಜ್ಜನವಂತರಿಸಿತ್ತು,
[೫]ಲೇ[೫]ಸಿಯ ಸಂಗದಿಂದ ಪ್ರಸಾದವಂತರಿಸಿತ್ತು,
ಪರಸ್ತ್ರೀಯ ಸಂಗದಿಂದ ದೇವರ ಕಾರುಣ್ಯವಂತರಿಸಿತ್ತು.
ಈ ತ್ರಿವಿಧ ನಾಸ್ತಿಯಾದಂಗಲ್ಲದೆ ಭಕ್ತಿಯಿಲ್ಲ
ಕೂಡಲ ಚೆನ್ನಸಂಗಮದೇವಾ. । ೨೨ । [೬೩]

೧೬೫
ಭವಿವಿರಹಿತ ಮಜ್ಜನಕ್ಕೆಱೆದೆವೆಂಬರು,
ಶ್ವಾನ ಮುಟ್ಟಿದ ಎಂಜಲ ಮನಮುಟ್ಟಿ ಉಣ್ಣೆವೆಂಬರು,
ಭವಿಯಿಂದ ಕಷ್ಟವಲ್ಲಾ.

೧–೧ ನ (ಮೂ), ೨–೨ x (ಮೂ), ೩–೩ ಕ್ಕೆ (ಮೂ), ೪–೪ ಬೆ (ಮೂ), ೫–೫ ವೇ (ಅ).

ಅನ್ಯದೈವವ ಪೂಜಿಸುವ ಸತಿ ಮನೆಯೊಳಗಿದ್ದರೆ ಶ್ವಾನನಿಂದ ಕಷ್ಟವಲ್ಲಾ.
ಭವಿಮಿಶ್ರವಾದ ಮನುಷ್ಯರು ಮನೆಯೊಳಗಿದ್ದರೆ ಶ್ವಾನದಿಂದ ಕಷ್ಟವಲ್ಲಾ.
ಶ್ವಾನ ಭವಿಗಳೆದೆವೆಂಬರು. ಅವೆಲ್ಲಿಗೆಯೂ ಹೋಗವು.
ಶ್ವಾನ ಭವಿಗಳೆಂಬುಭಯವರ್ಗ ಕಳೆದಲ್ಲದೆ
ಕೂಡಲ ಚೆನ್ನಸಂಗನ ಹೊದ್ದಬಾರದು. । ೨೩ । [೩೮೦]

೧೬೬
ಭವಿವಿರಹಿತ ಭಕ್ತನೆಂಬರು, ಭವಿವಿರಹಿತ ಭಕ್ತನಾದ ಪರಿಯೆಂತೋ?
ಭವಿಪಾಕಂ ನಿವೇದ್ಯಂ ಸ್ಯಾತ್ ಬಂಧನಂ ಭವಿಸಂಗಿನಾಂ ।
ಸರ್ವಲೋಕಸ್ತು ಉಚ್ಛಿಷ್ಟಂ ಸಂಸಾರೋ ಹಿ ತಟಾಕವತ್ ॥
ಇದನಱಿದು ಊರೆಲ್ಲಾ ಒಂದೆ ತಳಿಗೆಯಲುಂಡು
ಬೇಱೆ ಬೇಱೆ ಕೈತೊಳೆದಂತೆ ಕೂಡಲ ಚೆನ್ನಸಂಗಮದೇವಾ. । ೨೪ । [೩೮೩]

೧೬೭
ಶಿವಮಂತ್ರಸಂಸ್ಕಾರವಿಲ್ಲದ ತನುಭವಿಗಳು ತನ್ನ ಲಿಂಗಕ್ಕೆ ಮಾಡುವನ್ನಕ
ಭವಿಮಿಶ್ರವ ಕಳೆದೆವೆಂ[1]ದೆಂ[1]ತೆನಬಹುದು.
ಶಿವಸಂಸ್ಕಾರವಾಗಿ ಜಾತಿಸೂತಕ ಪ್ರೇತಸೂತಕ ರಜಸ್ಸೂತಕ
ಎಂಜಲು ಸೂತಕವೆಂಬ ಪಂಚಸೂತಕವುಳ್ಳ ಭವಿಗಳು
ತನ್ನ ಲಿಂಗಕ್ಕೆ ಮಾಡುವನ್ನಕ ಭವಿಮಿಶ್ರವ ಕಳೆದೆವೆಂ[2]ದೆಂ[2]ತೆನಬಹುದು,
ತನುಭವಿಯ ಹಸ್ತವೆ ಪಂಚಮಹಾಪಾತಕ,
ಮನಭವಿಯ ಹಸ್ತವೆ ಅಘೋರನರಕ,
ಭವೀನಾಂ ಪಾಪದೃಷ್ಟೀನಾಂ ನ ಕಿಂಚತ್ಪರಮಂ ಪದಂ ।
ಎಂಬುದನಱಿದು ಇಂತಪ್ಪ ಭವಿಗಳನೊಳಗಿಟ್ಟುಕೊಂಡು
ಎನಗೆ ಭವಿಮಿಶ್ರವಿಲ್ಲೆಂಬ ಲಜ್ಜೆಗೆಟ್ಟ ದುರಾಚಾರಿಗಳ
ಸಜ್ಜನ ಸದ್ಭಕ್ತರು ಮೆಚ್ಚರು ಕೂಡಲ ಚೆನ್ನಸಂಗಮದೇವಾ. । ೨೫ । [೩೬೭]

೧೬೮
ಸದ್ಭಕ್ತರ ಬಸುಱಲ್ಲಿ ಹುಟ್ಟಿದ ಮಕ್ಕಳು ಭವಿಯನಾಚರಿಸಿದಡೆ
ಪಂಚಮಹಾಪಾತಕವೆಂದುದು ವಚನ.

೧-೧ ಬಂ (ಮೂ), ೨-೨x (ಮೂ).

ತಿಲಷೋಡಶ ಭಾಗಂ ಚ ತೃಣಾಗ್ರಾಂಬುಕಣೋಪಮಂ ।
ಪಾದೋದಕಂ ಪ್ರಸಾದಾನ್ನಂ ನಾಶನಾನ್ನರಕಂ ವ್ರಜೇತ್ ॥
ಎಂದುದಾಗಿ, ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣರಿಗೆ ಸಂತಾನ ಅಭಿವೃದ್ಧಿಯಾಗದಿರಲಿ. । ೨೬ । [೩೬೮]

೧೬೯

ಭವಿಪಾಕವನುಂಡರೆ ಪ್ರಥಮ ಪಾತಕ,
ಪರಧನ ಪರಸತಿಗಳುಪಿದರೆರಡನೆಯ ಪಾತಕ,
ಜಂಗಮನಿಂದೆಯ ಮಾಡಿದರೆ ಮೂಱನೆಯ ಪಾತಕ,
ಗುರುವಾಜ್ಞೆಯ ಮೀಱಿದರೆ ನಾಲ್ಕನೆಯ ಪಾತಕ,
ಶಿವನಿಂದೆಯ ಮಾಡಿದಡೈದನೆಯ ಪಾತಕ.
ಪಂಚಮಹಾಪಾತಕ[1]ಕ್ಕಂಜೂದು[1] ಭಕ್ತಂಗಲ್ಲದೆ ಭವಿಗೆಲ್ಲಿಯದು
ಕೂಡಲ ಚೆನ್ನಸಂಗಮದೇವಾ. । ೨೭ । [೩೮೨]

೧೭೦

ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತ್ತೆಂಬರು,
ಕೊಂಬಲ್ಲಿ ಕೊಡುವಲ್ಲಿ [2]ಕುಲವನಱಸುವರು.
ಏನೆಂಬೆನಯ್ಯ? ಒಚ್ಚೊಚ್ಚಿ ಭಕ್ತರ: ಏನೆಂಬನಯ್ಯ? ಒಚ್ಚೊಚ್ಚಿ ಭವಿಗಳ.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಭಕ್ತಕಾಯ ಮಮಕಾಯವೆಂತೆಂಬರು. । ೨೮ । [೯೩೬]

೧೭೧

ಲಿಂಗದಲ್ಲಿ ಕಠಿಣವಾರ್ತೆ, ಜಂಗಮದಲ್ಲಿ ಜಾತಿವಾರ್ತೆ,
ಪ್ರಸಾದದಲ್ಲಿ ಅಪವಿತ್ರವಾರ್ತೆಯ ಕೇಳಲಾಗದು ಶಿವ, ಶಿವ!
ಕೂಡಲ ಚೆನ್ನಸಂಗಮದೇವನು ಅಘೋರನರಕದಲಿಕ್ಕುವ. । ೨೯ । [೪೨೫]

೧೭೨

ಶ್ರೀಗುರುಕರುಣಕಟಾಕ್ಷೆಯಲ್ಲಿ ಉತ್ಪತ್ಯವಾದ ಅಜಾತಂಗೆ
ಜಾತಿಸೂತಕ, ಜನನಸೂತಕ, ಪ್ರೇತಸೂತಕ, ರಜಸ್ಸೂತಕವುಂಟೆಂಬವಂಗೆ

೧–೧ x (ಮೂ), ೨ +ತ್ರಿ (ಮೂ).

ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪ್ರಸಾದವಿಲ್ಲವಯ್ಯಾ
ಕೂಡಲ ಚೆನ್ನಸಂಗಯ್ಯಾ. । ೩೦ । [೧೨೩]

೧೭೩

ಅಂಗ[೧]ದ ಮೇಲೆ ಲಿಂಗ[೨]ಧಾರಿ[೨]ಯಾದ ಬಳಿಕ ಮರಳಿ ಭವಿ ನಂಟನೆಂದು ಬೆರಸಿದರೆ
ಕೊಂಡಮಾಟಿಂಗೆ ಹೋಹುದು ತಪ್ಪದು.
ಹಸಿಯ ಮಣ್ಣಿನಲ್ಲಿ ಮಾಡಿದ ಮಡಕೆ ಅಗ್ನಿ ಮುಖದಿಂದಾದ ಬಳಿಕ
ಅದು ತನ್ನ ಪೂರ್ವಕುಲವ ಬೆರಸೂದೆ?
ಅಗ್ನಿದಗ್ಧಘಟಃ ಪ್ರಾಹುರ್ನ ಭೂಯೋ ಮೃತ್ತಿಕಾಯತೇ ।
ತಚ್ಛಿವಾಚಾರಸಂಗೇನ ನ ಪುನರ್ಮಾನುಷೋ ಭವೇತ್ ॥
ಇದು ಕಾರಣ ಪೂರ್ವನಾಸ್ತಿಯಾದ ಶರಣನಪೂರ್ವ
ಕೂಡಲ ಚೆನ್ನಸಂಗಮದೇವಾ. । ೩೧ । [೪೨೪]

೧೭೪

ಅ[೩]ಟ್ಟು[೩]ದನಡುವರೆ? ಸುಟ್ಟುದ ಸುಡುವರೆ ?
ಬೆಂದ ನುಲಿಯ ಸಂದಿಸಬಹುದೆ ?
ಪಂಚಾಕ್ಷರಿಯಲ್ಲಿ ದಗ್ಧವಾದ ನಿರ್ದೇಹಿಗೆ ಸಂದೇಹವುಂಟೆ ?
ದಗ್ಧಸ್ಯ ದಹನಂ ನಾಸ್ತಿ ಪಕ್ವಸ್ಯ ಪಚನಂ ಯಥಾ ।
ಜ್ಞಾನಾಗ್ನಿದಗ್ಧದೇಹಸ್ಯ ನ ಪುನರ್ದಹನಕ್ರಿಯಾ ॥
ಇದು ಕಾರಣ ಕೂಡಲ ಚೆನ್ನಸಂಗನ ಶರಣರು
ಭ್ರಾಂತು ಸೂತಕಕ್ರಿಯಾವಿರಹಿತರು. । ೩೨ । [೫೨೦]

೧೭೫

ಅಂಗಾಶ್ರ[೪]ಯ[೪]ವಳಿದು ಲಿಂಗಾಶ್ರಯವಾದ ಬಳಿಕ
ಅಂಗಕ್ಕೆ ಲಿಂಗಾಚಾರವಲ್ಲದೆ ಅಂಗ್ರಕ್ರೀಯೆಂಬುದನಜಿದಂಗವಿಸರು ನೋಡಾ!
ಅಂಗದಲ್ಲಿ ನಿಷ್ಠೆವಂತರಾದ ಬಳಿಕ
ಅನ್ಯನಾಮವಿಡಿದು ಬಳಲುವ ಬಳಲಿಕೆ ಇನ್ನೆಲ್ಲಿಯದೋ. ಇದು ಕಾ[೫]ರ[೫]ಣ
ಕೂಡಲ ಚೆನ್ನಸಂಗನ ಶರಣರು ಅನ್ಯವನಾಚರಿಸುವರಲ್ಲ. । ೩೩ । [೮೬]

೧–೧ x(ಅ), ೨–೨ ಪ್ರಾಣಿ (ಮೂ), ೩–೩ ಟ್ಟ (ಮೂ), ೪–೪ ಮ (ಮೂ), ೫–೫ x(ಮೂ).

೧೭೬

ಉಪದೇಶವ ಮಾಡಿದ ಗುರುವೊಂದೆ, ಲಿಂಗವೊಂದೆಯಲ್ಲದೆ
ಸತಿಗೊಂದು ಲಿಂಗ, ಸುತಗೊಂದು ಲಿಂಗ,
ಸೋದರಗೊಂದು ಲಿಂಗ, ದಾಸಿಗೊಂದು ಲಿಂಗ?
ಇಂತು ಒಂದು ಮನೆಗೆ ಗುರುಲಿಂಗವನೆರಡು ಮಾಡಿದರೆ
ಮೆಚ್ಚರು, ನಮ್ಮ ಕೂಡಲ ಚೆನ್ನಸಂಗನ ಶರಣರು. । ೩೪ । [೪೨೩]

೧೭೭

ಉದಯಕಾಲ, ವಿಚಿತ್ರಕಾಲ, ಅಸ್ತಮಾನಕಾಲದಲ್ಲಿ
ತನ್ನ ಇಷ್ಟಲಿಂಗಕ್ಕೆ ಷೋಡಶೋಪಚಾರವ ಮಾ[೧][ಡದ][೧]ವನು
ಭಕ್ತನಲ್ಲ, ಶರಣನಲ್ಲ, ಲಿಂಗೈಕ್ಯನಲ್ಲ.
ಅವನು ಕೇಳಾ! ಪಂಚಮಹಾಪಾತಕ, ವಿಘಾತ [೨]ಕ,[೨]ಲಿಂಗಚೋರಕ,
ಇಂತೆಂದುದು ಕೂಡಲ ಚೆನ್ನಸಂಗನ ವಚನ. । ೩೫ । [೪೨೨]

೧೭೮

ತಮ್ಮಾಚಾರಕ್ಕೆ, ಅನ್ಯರ ಭಕ್ತಿಗೆ, ಪ್ರಾಣಲಿಂಗಸಂಬಂಧವ ಮಾಡುವರಯ್ಯಾ.
ಹೊದ್ದಿತ್ತಲ್ಲಾ ಗುರುವಚನಕ್ಕೆ ಭಂಗ.[೩] ಅದೇಕೆಯೆಂದರೆ:
ಏಕಕಾಲ ಲಿಂಗಾರ್ಚನೆ ತಡೆದರೆ ರೌರವ ನರಕವೆಂದುದಾಗಿ.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಉಪದೇಶವ ಮಾಡುವುದು ರೌರವನರಕವೆಂದುದಾಗಿ. । ೩೬ । [೮೬೨]

೧೭೯

ಸೋಮವಾರ ಮಂಗಳವಾರ[೪]ವೆಂದು[೪] ಮಾಡುವ ಭಕ್ತ
ಲಿಂಗಭಕ್ತಂಗೆ ನಾನೆಂತು ಸರಿಯೆಂಬೆನಯ್ಯಾ ?
ದಿನ ಶ್ರೇಷ್ಠವೊ? ಲಿಂಗ ಶ್ರೇಷ್ಠವೊ ?
ದಿನ ಶ್ರೇಷ್ಠವೆಂದು ಮಾಡುವ
ಪಂಚಮಹಾಪಾತಕರ ಮುಖವ ನೋಡಲಾಗದು.
ಸೋಮೇ ಭೌಮೇ ವ್ಯತೀಪಾತೇ ಸಂಕ್ರಾಂತಿ ಶಿವರಾತ್ರಿಯೋಃ ।
ಏಕಭುಕ್ತೋಪವಾಸೇನ ನರಕೇ ಕಾಲಮಕ್ಷಯಂ ॥

೧-೧ ಡು (ಮೂ). ೨-೨ x (ಮೂ). ೩ + ಹೊದ್ದಿತ್ತಲ್ಲಾ (ಮೂ). ೪-೪ ಶಿವರಾತ್ರಿಯೆಂದು (ಮೂ).

ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಇಂಥವರ ಮುಖವ ನೋಡಲಾಗದು. । ೩೭ । [೪೨೧]

೧೮೦
ಶೀಲ ಶೀಲವೆಂದು [1]ಗರ್ವಿಸಿ[1] ನುಡಿವುತಿಪ್ಪರು, ಶೀಲವಾವುದೆಂದಱಿಯರು.
ಇದ್ದುದ ವಂಚನೆಯ ಮಾಡಿದಿಪ್ಪುದೆ ಶೀಲ,
ಇಲ್ಲದಿದ್ದುದಕ್ಕೆ[2]ಕ[3]ಡನ ಬೇಡದಿಪ್ಪುದೆ ಶೀಲ,
ಪರಧನಪರಸತಿಗೆಳಸದಿಪ್ಪುದೆ ಶೀಲ,
ಪರದೈವ ಪರಸಮಯಕ್ಕೆಳಸದಿಪ್ಪುದೆ ಶೀಲ,
ಗುರುನಿಂದೆ ಶಿವನಿಂದೆ ಜಂಗಮನಿಂದೆಯ ಕೇಳದಿಪ್ಪುದೆ ಶೀಲ,
ಕೂಡಲ ಚೆನ್ನಸಂಗನ ಶರಣರ ಬರವಿಂಗೆ
ಮುಯ್ಯಾಂತು ಪರಿಣಾಮಿಸಬಲ್ಲರೆ ಅಚ್ಚಶೀಲ. । ೩೮ । [೫೭೧]

೧೮೧
ತನು ಮನ ಧನಕ್ಕೆ ಆಸೆಮಾಡುವಾತನ ಬಸವಣ್ಣನ ಸಂತತಿಯೆಂತೆನಬಹುದು?
ವಧುವಿಂಗೆ ಆಸೆ ಮಾಡುವರನು ಬಲ್ಲಾಳನ ಸಂತತಿಯೆಂತೆನಬಹುದು?
ಮಕ್ಕಳಿಗೆ ಆಸೆ ಮಾಡುವರ ಸಿರಿಯಾಳನ ಸಂತತಿಯೆಂತೆನಬಹುದು?
ಎನಲಾಗದು, ಎನಿಸಿಕೊಳಲಾಗದು.
ಎಂದಾತಂಗೆಯೂ ಎನಿಸಿಕೊಂಡಾತಂಗೆಯೂ
ನರಕ ತಪ್ಪದು, ಕೂಡಲ ಚೆನ್ನಸಂಗಮದೇವಾ. । ೩೯ । [೪೪೫]

೧೮೨
ವೀರನಾದರೆ ಅಲಗಿನ ಮೊನೆಯಲ್ಲಿ ಕಾಣಬಹುದು,
ಧೀರನಾದರೆ ತನ್ನ ಸೋಂಕಿನಲ್ಲಿ ಅಱಿಯಬಹುದು,
ಭಕ್ತನಾದರೆ ತಾಗು ನಿರೋಧದಲ್ಲಿ ಅಱಿಯಬಹುದು,
ಕೂಡಲ ಚೆನ್ನಸಂಗಯ್ಯಾ
ಸುಜ್ಞಾನಿಯಾದರೆ ಸುಳುಹಿನಲ್ಲಿ ಅರಿಯಬಹುದು. । ೪೦ । [೩೯೧]

೧೮೩
ರಣವನರ್ಚಿಸಿ, ಭೂತಕ್ಕೆ ಬಲಿಯ ಕೊಡುವ
ಕಲಿಯ ಮನ[3] ಮೊ[4]ನೆಯ ಮೇಲೆ ಇಪ್ಪಂತೆ

೧-೧ ಗರ್ಭೀಕರಿಸಿ (ಮೂ), ೨-೨ ದ (ಮೂ), ೩ + ದ(ಮೂ), ೪-೪ ಕೊ (ಮೂ).

ಸಮಯಾಚಾರವ ಮಾಡಬೇಕು.
ಮಾಡಿಹೆನೆಂಬುದು ಸಾಮಾನ್ಯವೆ ?
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಸಮಯಭಕ್ತಿ ಸಂದಿತ್ತು ಸಂಗನಬಸವಣ್ಣಂಗೆ. । ೪೧ । [೪೦೧]

೧೮೪
ಗುರುವಿನಲ್ಲಿ ಸದಾಚಾರಿ, ಲಿಂಗದಲ್ಲಿ ಶಿವಾಚಾರಿ, ಜಂಗಮದಲ್ಲಿ ಸಮಯಾಚಾರಿ.
ಇಂತೀ ತ್ರಿವಿಧಾಚಾರ ಸಂಬಂಧವಾದ ಬಳಿಕ
ತನ್ನ ಶೀಲಕ್ಕೆ[೧] ಸಮಶೀಲವಾಗದವರ
ಮನೆಯಲನುಸರಿಸಿ ನ[೨]ಡೆದಡೆ,[೨] ಕೂಡಲ ಚೆನ್ನಸಂಗನ ಶರಣ
ಪೂರ್ವಾಚಾರ್ಯ ಸಂಗನಬಸವಣ್ಣ ಮೆಚ್ಚ ಕಾಣಿರಣ್ಣಾ. । ೪೨ । [೩೭೨]

೧೮೫
ಅಂಗದ ಮೇಲೆ ಲಿಂಗಪ್ರತಿಷ್ಠೆಯನೆ ಮಾಡಿ
ಹಿಂಗಿದಡೆ ಪ್ರಥಮಪಾತಕ.
ಭವಿಪಾಕಕ್ಕೆಳಸಿದಡೆರಡನೆಯ ಪಾತಕ,
ಪ್ರತುಮಾದಿಗಳಿಗೆಱಗಿದಡೆ ಮೂಱನೆಯ ಪಾತಕ,
ಪ್ರಸಾದಸ್ಥಲವನಱಿಯದಿದ್ದಡೆ ನಾಲ್ಕನೆಯ ಪಾತಕ,
ಸುಳುಹಡಗಿ ಲಿಂಗಲೀಯವ ಮಾಡದಿದ್ದಡೆ[೩] ಐದನೆಯ ಪಾತಕ.
ಇಂತೀ ಪಂಚಮಹಾಪಾತಕವ ಕಳೆಯಬಲ್ಲಡೆ[೪] ತಿಳಿಯಬೇಕು–
ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣನಾಗಬಲ್ಲಡೆ. । ೪೩ । [೮೬೩]

[೫]ಮಾಹೇಶ್ವರನ ಮಾಹೇಶ್ವರಸ್ಥಲ :[೫]

೧೮೬
ಶ್ರೀಗುರುಸ್ವಾಮಿ ಶಿಷ್ಯನನ[೬]ನು[೬]ಗ್ರಹಿಸುವ ಪರಿಯೆಂತೆಂದರೆ:
ಆಚಾರಸ್ಥಲ ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ
ಅರ್ಪಿತಸ್ಥಲ ಪ್ರಸಾದಸ್ಥಲವೆಂದು ಕರುಣಿಸುವುದು ದೀಕ್ಷೆ.
ಈ ಕ್ರಮವಱಿದು ಮಹಾಪ್ರಸಾದವೆಂದು ಕೈಕೊಂಡ ಬಳಿಕ

೧+ ಶೀಲ (ಮೂ), ೨–೨ ಡದೆ (ಮೂ), ೩+ ಲರಿಯದಿದ್ದಡೆ (ಮೂ), ೪+ ತಿಳಿಯಬಲ್ಲಡೆ (ಮೂ), ೫–೫ ಮಾಹೇಶ್ವರ ಸ್ಥಳ (ಮೂ), ೬–೬ ವ (ಮೂ).

ಪರಪಾಕಂ ನ ಕರ್ತವ್ಯಂ ಲಿಂಗನ್ಯೈವೇದ್ಯ ಕಿಲ್ಬಿಷಂ ।
ಸ್ವಯಂಪಾಕಂ ಪವಿತ್ರಾಣಾಂ ಲಿಂಗನ್ಯೈವೇದ್ಯಮುತ್ತಮಂ ॥
ಎಂದುದಾಗಿ ಒಡಲ ಕಕ್ಕುಲತೆಗೆ, ಭಕ್ತನ ದಾಕ್ಷಿಣ್ಯಕ್ಕೆ
ಅನ್ಯದೈವಭವಿ-ನೇಮಸ್ತರುಳ್ಳಲ್ಲಿ ಹೊಕ್ಕರೆ,
ಕೂಡಲ ಚೆನ್ನಸಂಗಾ ಅವರಂದೆ ದೂರ. ।೪೪। [೩೭೩]

೧೪೭

ಭಕ್ತಂಗಾಗಲಿ, ಜಂಗಮಕ್ಕಾಗಲಿ,
ಸದಾಚಾರವುಳ್ಳವರಿಗೆ ಅನಾಯತ ಹೊದ್ದಬಾರದು.
ಅನಾಯತವೆಂಬುದೆ ಅನುಸರಣೆ, ಅನುಸರಣೆಯೆಂಬುದೆ ಅಂಗದಿಚ್ಛೆ,
ಅಂಗದಿಚ್ಛೆಯೆಂಬುದೆ ಅನಾಚಾರ, ಅನಾಚಾರವೆಂಬುದೆ ಪಾತಕ,
ಆ ಪಾತಕವೆ ನರಕ.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಸದಾಚಾರವುಳ್ಳವರು ಅನುಸರಿಸಿ ನಡೆದರೆ ನಾಯಕನರಕ. ।೪೫। [೩೭೪]

೧೪೮

ಭವಿಯ ಕಳೆದು, ಭವಿಯ ಬೋಧಿಸಿ ಬೇಡುವರು ಸಂಬಂಧಿಗಳಲ್ಲ.
ರವಿಯ ಕಪ್ಪ ಕಳೆಯಲಜಿಯದವರು ಸಂಬಂಧಿಗಳಲ್ಲ.
ಭವಿಯ ಕಳೆದು ಭಕ್ತನ ಮಾಡುವವರು[೧] ಭಕ್ತರಲ್ಲ, ಸಂಬಂಧಿಗಳಲ್ಲ.
ಇಂತೀ ಸಾರಾಯವಾರಿಗೂ ಅಳವಡದಾಗಿ ಕೊಂಡ ವ್ರತವನನುಸರಿಸಿ ನಡೆದು,
ನಿಂದೆಗೆ ಬಂದ ಸಂದೇಹಿಯನೆಂತು ಸಂಬಂಧಿಯೆಂಬೆ
ಕೂಡಲ ಚೆನ್ನಸಂಗಯ್ಯಾ? ।೪೬। [೩೭೮]

೧೪೯

ನೊಸಲಲೊಂದು ಕಣ್ಣು, ಮಕುಟವರ್ಧನರಾದರೇನವರು ?
ಅಂಗಸಂಬಂಧ ಲಿಂಗಸಂಬಂಧವಿಲ್ಲದವರ ಮನೆಯಲು ಮಾಡಿದ ಪಾಕ[೨]ವ ಕೊಂಡರೆ[೨]
ಶ್ವಾನಜನ್ಮನರಕ ತಪ್ಪದಾಗಿ ಬಲ್ಲವರೊಲ್ಲರು.
ಶಿವಭಕ್ತರಲ್ಲದವರ ಮನೆಯಲುಂಡರೆ
ಜನ್ಮಜನ್ಮಾಂತರ ಶ್ವಾನಯೋನಿಯಲ್ಲಿ ಬಪ್ಪುದು ತಪ್ಪದು.

೧+ ಅವರು (ಮೂ), ೨-೨ x (ಮೂ).

ಎಲೆ ಶಿವನೆ ನೀನಿಲ್ಲದವರ ಮನೆಯಲು ಸಿಂಗಿ,
ಎನ್ನ ಮನವು ಸೊಗಸದಯ್ಯಾ ಕೂಡಲ ಚೆನ್ನಸಂಗಮದೇವಾ. । ೪೭ । [೩೭೫]

೧೯೦
ಬೀದಿಯ ಬಸವಂಗೆ ದೇವಾಲಯದ ಪಶುವಿಂಗೆ ಹುಟ್ಟಿದ ಕಱು
ಬಸವಗಳಪ್ಪುವೆ, ಲಿಂಗಮುದ್ರೆಯನೊತ್ತದನ್ನಕ?
ಭಕ್ತಂಗೆ ಭಕ್ತೆಗೆ ಹುಟ್ಟಿದರೆಂದರೆ
ಬಱಿಯ ಗುರುಕಾರುಣ್ಯದಲ್ಲಿ ಭಕ್ತರಪ್ಪರೆ, ಅಂಗದ ಮೇಲೆ ಲಿಂಗವಿಲ್ಲದನ್ನಕ?
ಅವರನೊಳಗಿಟ್ಟುಕೊಂಡು ನಡೆದರೆ
ಭಕ್ತಿಹೀನರೆನಿಸಿತ್ತು, ಕೂಡಲ ಚೆನ್ನಸಂಗನ ವಚನ. । ೪೮ । [೩೭೬]

೧೯೧
ಹುಟ್ಟಿದ ಮಕ್ಕಳು ಪ್ರಬುದ್ಧರಾದಲ್ಲದೆ ಲಿಂಗಸ್ವಾಯತವ
ಮಾಡಬಾರದೆಂಬ ಯುಕ್ತಿಶೂನ್ಯರ ನೋಡಿರೇ.
ಅಳುಪಿ ತಾಯಿ ತಂದೆ ಅವರೊಡನುಂಡರೆ
ಅವರನಚ್ಚ ವ್ರತಗೇಡಿಗಳೆಂಬೆ ಕೂಡಲ ಚೆನ್ನಸಂಗಯ್ಯಾ. । ೪೯ । [೩೮೬]

೧೯೨
ಹುಟ್ಟಿದ ಶಿಶು ಧರಣಿಯ ಮೇಲೆ ಬಿದ್ದಂತೆ
ವಿಭೂತಿಯ ಪಟ್ಟ[೧]ವಂ ಕಟ್ಟಿ,[೧] ಲಿಂಗಸ್ವಾಯತವ ಮಾಡಿ,
ಪ್ರಸಾದದೆಣ್ಣೆ ಬೆಣ್ಣೆ ಹಾಲನೆಱೆ[೨]ದು ಸಲಹೂದೆ ಅದು ಸದಾಚಾರ.
ಆ ಮಗುವಿಂಗೆ ಈಱೆಲುಗುಳಿ ಭೂತ ಸೋಂಕಿತ್ತೆಂದು ಮಾಡುವ ಭಕ್ತಂಗೆ
ಗುರುವಿಲ್ಲ, ಲಿಂಗವಿಲ್ಲ, ಅವ ಪಂಚಮಹಾಪಾತಕ ನೋಡಾ.
ಇದನಱಿದಾತ ಎನ್ನ ಮಾತಾಪಿತನು,
ನಿಮ್ಮ ನಚ್ಚಿದ ಮಚ್ಚು ಅಚ್ಚೊತ್ತಿದಂತಿರಬೇಕು
ಕೂಡಲ ಚೆನ್ನಸಂಗಯ್ಯಾ. । ೫೦ । [೩೭೭]

೧೯೩
ಗುರುವೆಂಬ ತಂದೆ[೨]ಗೆ[೨] ಶಿಷ್ಯನೆಂಬ ಮ[೩]ಗಳು[೩] ಹುಟ್ಟಿ,
ಲಿಂಗವೆಂಬ ಗಂಡನ ತಂದು, ಮದುವೆಯ ಮಾಡಿದ ಬಳಿಕ
ಇನ್ನಾರೊಡನೆ ಸರಸವನಾಡಲೇಕಯ್ಯಾ ?

೧–೧ x (ಮೂ), ೨–೨ x (ಮೂ), ೩–೩ ಗುವು (ಮೂ).

ನಾಚಬೇಕು ಲಿಂಗದೆಡೆಯಲ್ಲಿ, ನಾಚಬೇಕು ಜಂಗಮದೆಡೆಯಲ್ಲಿ,
ನಾಚಬೇಕು ಪ್ರಸಾದದೆಡೆಯಲ್ಲಿ,
ನಾಚಿದಡೆ ಭಕ್ತನೆಂಬೆನು, ಯುಕ್ತನೆಂಬೆನು, ಶರಣನೆಂಬೆನು,
ನಾಚದಿದ್ದರೆ ಮಿಟ್ಟೆಯ ಭಂಡರೆಂಬೆನು
ಕೂಡಲ ಚೆನ್ನಸಂಗಮದೇವಾ. । ೫೧ । [೪೫೪]

೧೯೪
ಪತಿವ್ರತೆಯಾದಡೆ ಪರಪುರುಷರ ಸಂಗವೇತಕೆ?
ಲಿಂಗಸಂಗಿಯಾದಡೆ ಅನಂಗಸಂಗವೇತಕೆ?
[1]ಕಂಡ[1] ಕಂಡವರ ಹಿಂದೆ ಹರಿವ [2]ಚಾಂಡಾ[2]ಳಗಿತ್ತಿಯಂತೆ:
ಒಬ್ಬರ ಕೈವಿಡಿದು, ಒಬ್ಬರಿಗೆ ಮಾತಕೊಟ್ಟು,
ಒಬ್ಬರಿಗೆ ಸನ್ನೆಗೆ[3]ಯ್ವ[3] ಬೋಸರಿಗಿತ್ತಿಯಂತೆ
ಪ್ರಾಣಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಹರಿಸಿ ಹೊಡವಂಟುಕೊಳಲೇಕೆ?
ಪಾದೋದಕ ಪ್ರಸಾದಜೀವಿಯಾದ ಬಳಿಕ ಅನ್ಯರಿಗೆ ಕೈಯಾನಲೇಕೆ?
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಇಂತಪ್ಪ ಪಾಪಿಗಳನೆನಗೆ ತೋಱದಿರಯ್ಯಾ. । ೫೨ । [೨೪೦]

೧೯೫
ಅಷ್ಟತನುಮೂರ್ತಿಯೆಂಬ ಮಾತಿನ ಪಾತಕವ ಕೇಳಲಾಗದು.
ಪೃಥ್ವಿಯಂತೆ ಕಠಿಣವುಳ್ಳಾತನೆ? ಅಪ್ಪುವಿನಂತೆ ಓಟ ಭರತವುಳ್ಳಾತನೆ?
ತೇಜದಂತೆ ತೃಣಕಾಷ್ಠವಿಲ್ಲ[4]ದಿ[4]ರೆ ನಂದುವಾತನೆ?
ವಾಯುವಿನಂತೆ ಚಲೆವುಳ್ಳಾತನೆ? ಆಕಾಶದಂತೆ ಬಯಲಾದಾತನೆ?
ಸೋಮಸೂರ್ಯರಂತೆ ದಿವಾರಾತ್ರಿಯ ನಡೆಸುವಾತನೆ?
ಜೀವಾತ್ಮನಂತೆ ಜನನ ಮರಣವುಳ್ಳಾತನೆ?
ಇದು ಕಾರಣ ಕೂಡಲ ಚೆನ್ನಸಂಗಯ್ಯಾ ನೀ ನಿನ್ನಂತೆ,
ಇವರೆಲ್ಲರೂ ನೀನಿರಿಸಿದಂತೆ. । ೫೩ । [೪೯೪]

೧೯೬
ಸರ್ವವೂ ಶಿವನಿಂದ ಉದ್ಭವಿಸುವವೆಂದರೆ, ಉದ್ಭವಿಸುವವೆಲ್ಲ[5]ವೂ[5] ಶಿವನೆ?
ಸಕಲ ಬೀಜವ ಬಿತ್ತುವನೊಕ್ಕಲಿಗನೆಂದರೆ ಆ ಬೆಳೆ ತಾನೊಕ್ಕಲಿಗನೆ?

೧+ x(ಮೂ), ೨-೨ ತಾಂಡಾ(ಮೂ), ೩-೩ ಯ್ಯ (ಮೂ), ೪-೪ ದ (ಮೂ), ೫-೫ ರೂ (ಮೂ).

ಮಡಕೆಯ ಕುಂಬಾಱ ಮಾಡುವನೆಂದರೆ, ಆ ಮಡಕೆ ತಾ ಕುಂಬಾಱನೆ?
ಕಬ್ಬುನವ ಕಮ್ಮಾಱ ಮಾಡುವನೆಂದರೆ, ಆ ಕಬ್ಬುನ ತಾ ಕಮ್ಮಾಱನೆ?
ಈ ಪರಿಯಲಿ ಸಕಲ ಜಗತ್ತಿನ ಸಚರಾಚರವನು ಮಾಡುವನೆಂದರೆ,
ಆ ಸಚರಾಚರವು ಶಿವನೆ?
ಅಹಂಗಾದರೆ ಅಷ್ಟಾದಶವರ್ಣವೇಕಾದವು?
ಚೌರಾಸಿಲಕ್ಷ ಜೀವರಾಶಿಗಳೇಕಾದವು?
ಸುಖ-ದುಃಖ ಸ್ವರ್ಗ-ನರಕಂಗಳೇಕಾದವು?
ಉತ್ತಮ-ಮಧ್ಯಮ-ಕನಿಷ್ಠಂಗಳೇಕಾದವು?
ಪುಣ್ಯ-ಪಾಪ ಭವಿ-ಭಕ್ತರೆಂದೇಕಾದವು?
ಇದು ಕಾರಣ ಸದಾಚಾರ ಸದ್ಭಕ್ತಿಯಲ್ಲಿ[೧]ಪ್ಪಾತನೆ ಶಿವ,[೧]
ಅಂತಲ್ಲದೆ ಸರ್ವವೂ ಶಿವನೆಂದರೆ
ಅಘೋರನರಕ ಕೂಡಲ ಚೆನ್ನಸಂಗಯ್ಯಾ. । ೫೪ । [೪೯೫]

೧೯೭
ಯತ್ರ ಜೀವಸ್ತತ್ರ ಶಿವನೆಂಬ ಬಾಲಭಾಷೆಯ ಕೇಳಲಾಗದು.
ಶಿವಶಿವಾ ಯತ್ರಜೀವಸ್ತತ್ರ ಶಿವನಾದರೆ ಜೀವಂಗೆ ಮರಣವೇಕೋ?
ಯತ್ರಜೀವಸ್ತತ್ರ ಶಿವನಾದರೆ ಜನನ ಸ್ಥಿತಿ ಮರಣ ರುಜೆ ಸಂಸಾರಬಂಧನವೇಕೋ?
ಯತ್ರ ಜೀವಸ್ತತ್ರ ಶಿವನಾದರೆ ಪುಣ್ಯಪಾಪ ಪ್ರಳಯಕಾಲ ಕಲ್ಪಿತ[೨]ವೇಕೋ?[೨]
ಇದು ಕಾರಣ ಯತ್ರಜೀವಸ್ತತ್ರ ಶಿವನಲ್ಲ.
ಉತ್ಪತ್ತಿ ಸ್ಥಿತಿ ಪ್ರಳಯರಹಿತನು ಸದ್ಭಕ್ತರಲ್ಲಿಪ್ಪನಲ್ಲದೆ ಮತ್ತೆಲ್ಲಿಯೂ ಇಲ್ಲ,
ಕೂಡಲ ಚೆನ್ನಸಂಗಮದೇವ. । ೫೫ । [೪೭೯]

೧೯೮
ಸರ್ವಗತ [೩]ಶಿವ[೩]ನೆಂಬುದೀ ಲೋಕವೆಲ್ಲಾ. ಶಿವಶಿವಾ ನಿರ್ಬುದ್ಧಿ ಜನಂಗಳನೇನೆಂಬೆ
ಸರ್ವವೆಲ್ಲವೂ ಶಿವನಾದರೆ ಹಿಂದಣ ಯುಗಪ್ರಳಯಂಗಳೇಕಾದವು?
ಸರ್ವವೆಲ್ಲವೂ ಶಿವನಾದರೆ ಚೌರಾಸಿಲಕ್ಷ ಜೀವರಾಶಿಗಳೇಕಾದವು?
ಸೂತ್ರಧಾರಿ ನರ[೪]ರಿ[೪]ಗಾಗಿ ಯಂತ್ರವನಾಡಿಸುವಲ್ಲಿ
ಹೊಱಗಿದ್ದಾಡಿಸುವನಲ್ಲದೆ ತಾನೊಳಗಿದ್ದಾ[೫]ಡಿಸು[೫]ವನೆ?
ಅಹಂಗೆ ಶಿವನು ತನ್ನಾಧೀನವಾಗಿಪ್ಪ ತ್ರಿಜಗದ ಸಚರಾಚರಂಗಳ

೧-೧ ಪ್ಪ (ಮೂ), ೨-೨ ನೇ (ಮೂ), ೩-೩ x (ಮೂ), ೪-೪ ರೊಳ (ಮೂ), ೫-೫ ಡು (ಮೂ).

ತಾನು ಯಂತ್ರವಾಹಕನಾಗಿ ಆಡಿಸುವನಲ್ಲದೆ, ತಾನಾಡುವನೆ?
ಸರ್ವಯಂತ್ರವೂ ತಾನಾದರೆ ಸಕಲತೀರ್ಥಕ್ಷೇತ್ರಯಾತ್ರೆಗೆ ಹೋಗಲೇಕೋ?
ಇದು ಕಾರಣ ಸರ್ವವೂ ಶಿವನೆನಲಾಗದು:
ಸದಾಚಾರಸನ್ನಿಹಿತಸದ್ಭಕ್ತಿ ಲಿಂಗಜಂಗಮದೊಳಗಿಪ್ಪ,
ಮತ್ತೆಲ್ಲಿಯೂ ಇಲ್ಲ, ಕೂಡಲ ಚೆನ್ನಸಂಗಯ್ಯ. ।೫೬। [೪೭೦]

೧೯೯
ಪ್ರಣಮಮಂತ್ರವ ಕರ್ಣದಲ್ಲಿ ಹೇಳಿದಾತನೆ ಶ್ರೀಗುರುಲಿಂಗ.
ಅಂಗದ ಮೇಲೆ ಲಿಂಗಪ್ರತಿಷ್ಠೆಯ ಮಾಡಿದ ಬಳಿಕ
ಒಳಗೆ ಪ್ರಾಣಲಿಂಗವುಂಟೆಂಬ ಪಂಚಮಹಾಪಾತಕರ ನುಡಿಯ ಕೇಳಲಾಗದು
ಒಳಗಿಪ್ಪನೆ ಲಿಂಗದೇವ?
ಮಲ ಮೂತ್ರ ಮಾಂಸದ ಹೇಸಿಕೆಯೊಳಗೆ ಪ್ರಾಣವಿಪ್ಪುದಲ್ಲದೆ,
ಆ ಪ್ರಾಣನ ತಂದು ತನ್ನ ಇಷ್ಟಲಿಂಗದಲ್ಲಿರಿಸಿ
ನೆರೆಯಬಲ್ಲಾತನೆ ಪ್ರಾಣಲಿಂಗ ಸಂಬಂಧಿ.
ತನ್ನ ಇಷ್ಟಲಿಂಗದಲ್ಲಿ ದಾಸೋಹವ ಮಾಡಲಱಿಯದೆ
ಹಲವು ಬಯಕೆಯ ಬಯಸುವ ಮಿಟ್ಟೆಯ ಭಂಡರನೆನ್ನತ್ತ ತೋಱದಿರು,
ಕೂಡಲ ಚೆನ್ನಸಂಗಮದೇವಾ. ।೫೭। [೪೨೦]

೨೦೦
ಭಕ್ತರೆಲ್ಲರೂ ಕೂಡಿ[1] ಗುರೂಪದೇಶ[1] ಸಹಿತವಾಗಿ
ಪ್ರಾಣಲಿಂಗವೆಂದು ಅಪ್ಪವಿಸಿದ ಮಾತ ಮಱೆವರಲ್ಲಾ.
[2]ಸ್ಥಾವರಕ್ಕೆ ಹೋಗಿ ದಂಡಪ್ರಣಾಮವ[2] ಮಾಡುವರು, ಆವುದಾಚಾರವಯ್ಯಾ?
ತನ್ನ ಲಿಂಗವಿದ್ದಂತೆ ಅನ್ಯಲಿಂಗವ ಮುಟ್ಟಿ ದರುಶನಮಾಡುವ
ಪಾತಕರನಚ್ಚ ಶರಣರೆಂತೆಂಬೆನಯ್ಯಾ,
ಕೂಡಲ ಚೆನ್ನಸಂಗಮದೇವಾ? ।೫೮। [೪೫೫]

೨೦೧
ಗುರುಭಕ್ತಿ ಗುರುಭಜನೆಯಿಲ್ಲದವನ ಕೈಯಲು
ಕರುಣವ ಪಡೆವ ನರಕಿಯ ನೆರೆಯಲ್ಲಿರಲಾಗದಯ್ಯಾ,

೧-೧ ಗುರು (ಮೂ), ೨-೨ x (ಮೂ).

ಶಿವಭಕ್ತಿ ಶಿವಭಜನೆಯಿಲ್ಲದವನ ಕೈಯಲಿ ಕರುಣವ ಪಡೆದ
ಪಾಪಿಯ ಸಂಗವ ಮಾಡಲಾಗದು,
ಶೈವಸನ್ಯಾಸಿ ಕಾಳಾಮುಖಿಯ ಗುರುವೆಂಬ
ಅನಾಮಿಕನ [೧]ನೋಡಲಾಗದು.[೧]
ತಟ್ಟು ಮಟ್ಟಿಯನಿಟ್ಟ ಭ್ರಷ್ಟಂಗೆ ಶಿಶುವಾದ
ಕಷ್ಟಭ್ರಷ್ಟನವನ ಮುಟ್ಟಲಾಗದು,
ವಿಭೂತಿ ರುದ್ರಾಕ್ಷಿಗಳಲ್ಲಿ ಪ್ರೀತಿಯಿಲ್ಲದ ನರನ
ಗುರುವೆಂಬ ಪಾತಕನ ಮಾತು ಬೇಡ.
ಭಕ್ತರಲ್ಲದರಲ್ಲಿ ಭಕ್ತಿಯಿಲ್ಲದರಲ್ಲಿ ಭಕ್ತನಾದರೆ ಅವನ ಯುಕ್ತಿ ಬೇಡ.
ಇವೆಲ್ಲ[೨]ವೂ ಇಲ್ಲದವರಲ್ಲಿ[೨] ಕರುಣವ ಹಡೆದು
ಬಲುಹಿಂದ ನಡೆವವನ ಸೊಲ್ಲು ಬೇಡ.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಸಮಯಕ್ಕೆ ಸಮನಿಸದವನು ನಮಗೆ ಬೇಡಯ್ಯಾ. ।೫೯। [೩೫೨]

ಮಾಹೇಶ್ವರ ಭಕ್ತ[೩]ಸ್ಥಲ[೩] :

೨೦೨
ನಿಮ್ಮ ಭಕ್ತರ ಕಂಡು ಉದಾಸೀನವ ಮಾಡಿದರೆ ಒಂದನೆಯ ಪಾತಕ.
ನಿಮ್ಮ ಭಕ್ತರ ಸಮಯೋಚಿತವ ನಡೆಸದಿದ್ದರೆ ಎರಡನೆಯ ಪಾತಕ.
ನಿಮ್ಮ ಭಕ್ತರೊಡನೆ ಮಾಱುತ್ತರವ ಕೊಟ್ಟರೆ ಮೂಱನೆಯ ಪಾತಕ.
ನಿಮ್ಮ ಭಕ್ತರ ಸಕಳಾರ್ಥಕ್ಕೆ ಸಲ್ಲದಿದ್ದರೆ ನಾಲ್ಕನೆಯ ಪಾತಕ.
ನಿಮ್ಮ ಭಕ್ತರಿಗೆ ಮಾಡಿದೆನೆಂದು ಮನದಲ್ಲಿ ಹೊಳೆದರೆ ಐದನೆಯ ಪಾತಕ.
ಇಂತೀ ಪಂಚಪಾತಕವ ಕಳೆದುಳಿದ
ಕೂಡಲಚೆನ್ನಸಂಗಾ ನಿಮ್ಮ ಶರಣ. ।೬೦। [೪೧೧]

೨೦೩
ಸಂಗಾ, ನೀನಿಲ್ಲದವರಂಗಣ ಪಂಚಮಹಾಪಾತಕ, ಏಳನೆಯ ನರಕ.
ಸಂಗಾ, ನೀನಿಲ್ಲದವರಂಗಣ ಬ್ರಹ್ಮೇತಿಗೆ ಅದು ಮೊದಲು,
ಸಂಗಾ, ನೀನಿದ್ದವರಂಗಣ ಲಿಂಗಾಂಗಣ, ಅವರಂಗವು [೪]ಲಿಂಗ.[೪]
ಸಂಗಾ, ನೀನಿದ್ದವರಂಗಣವೆ ವಾರಣಾಸಿಯಿಂದಧಿಕ.

೧–೧ ಮಾತು ನೋಡಾ (ಮೂ), ೨–೨ ಗುಣವಿಲ್ಲದವರಲ್ಲಿ (ಮೂ), ೩–೩ x (ಮೂ), ೪–೪ x (ಮೂ).

ಸಂಗಾ, ನೀನಿದ್ದವರಂಗಣ ಅಮೃತ ದಿವ್ಯಕ್ಷೇತ್ರದಿಂದಧಿಕ.
ಸಂಗಾ, ಕೂಡಲ ಚೆನ್ನಸಂಗಾ,
ನಿಮ್ಮ ಶರಣರ ಸಂಗ ಸುಸಂಗವೆನಗೆ. । ೬೧ । [೪೨೭]

೨೦೪
ನೀವಲ್ಲದೆ ಬೇಱೆ ಮತ್ತನ್ಯವ ತೋಱದಿರು ಕಂಡಾ, ಲಿಂಗವೆ.
ಬೇಱೆ ಮತ್ತೊಂದುವನೆನಗೆ ತೋಱದಿರು ಕಂಡಾ, ಲಿಂಗವೆ.
ಎನ್ನ ಮನಕ್ಕೆ ಮನವೆ ಸಾಕ್ಷಿ
ಕೂಡಲ ಚೆನ್ನಸಂಗಯ್ಯಾ ನೀನೆ ಬಲ್ಲೆ. । ೬೨ । [೪೧೯]

೨೦೫
ಕರ್ಮಜಾತನ ಕಳೆದು ಗುರುಲಿಂಗ ಪುಣ್ಯಜಾತ[1]ನ[1] ಮಾಡಿದ ಬಳಿಕ,
ಶಿವನ ಕುಲವಲ್ಲದೆ ಅನ್ಯಥಾ ಕುಲ ಶರಣಂಗುಂಟೆ? ಶಿವನ ಕುಲವಲ್ಲದೆ.
ಶಿವಧರ್ಮಕುಲೇ ಜಾತಃ ಪೂರ್ವಜನ್ಮವಿವರ್ಜಿತಃ ।
ಉಮಾ ಮಾತಾ ಪಿತಾ ರುದ್ರಾ ಈಶ್ವರಂ ಕುಲಮೇವ ಚ ॥
ಕೂಡಲ ಚೆನ್ನಸಂಗಯ್ಯಾ,
ನಿಮ್ಮ ಶರಣರಿಗೆ ಪ್ರತಿಯ ಕಾಣೆ ಶಿವನ ಕುಲವಲ್ಲದೆ. । ೬೩ । [೩೭೦]

[2]ಮಾಹೇಶ್ವರನ ಪ್ರಸಾದಿಸ್ಥಲ[2]:

೨೦೬
ಲಿಂಗವಲ್ಲದೆ ಎನ್ನ ಮನಕ್ಕೆ ಸಮನಿಸದು, ಸಮನಿಸದು.
ಜಂಗಮವಲ್ಲದೆ ಎನ್ನ [3][ಧ][3]ನಕ್ಕೆ ಸಮನಿಸದು, ಸಮನಿಸದು.
ಪ್ರಸಾದವಲ್ಲದೆ ಎನ್ನ ತನುವಿಗೆ ಸಮನಿಸದು, ಸಮನಿಸದು.
ಕೂಡಲ ಚೆನ್ನಸಂಗಯ್ಯಾ, ಇದು ಸತ್ಯ ನೋಡಯ್ಯಾ,
ಸಕಳೇಂದ್ರಿಯಂಗಳು ಅನ್ಯಸಂಗಕ್ಕೆ
ಸಮನಿಸವು, ಸಮನಿಸವು. । ೬೪ । [೪೯೭]

೨೦೭
[4]ಅಱುವತ್ತುನಾಲ್ಕು[4] ಶೀಲದಲ್ಲಿ ನಡೆದು ತೋಱಿದವನೆನಗೆ ಬಸವಣ್ಣ ನೋಡಯ್ಯಾ,
ಆ ನಡೆಯನು ಹಿಡಿದು ಬಿಡದೆ ನಡೆವೆನು, ಲಿಂಗ ಜಂಗಮ ಸಾಕ್ಷಿಯಾಗಿ.

೧-೧ ವ (ಮೂ), ೨-೨ ಆ ಪ್ರಸಾದಿ (ಮೂ), ೩-೩ ಮ (ಮೂ), ೪-೪ ಮೂವತ್ತೆರಡು (ಮೂ).

ಈ ನಡೆಯನು ಹಿಡಿದು ನಡೆವೆನು, ಪ್ರಸಾದ ಸಾಕ್ಷಿಯಾಗಿ.
ದೃಢದಿಂದ ಹಿಡಿದು ಬಿಡದೆ ಕಡೆಮುಟ್ಟಿ ಸಲಿಸುವೆ,
ಕೂಡಲ ಚೆನ್ನಸಂಗಮದೇವಾ. । ೬೫ । [೪೪೬]

೨೦೮
ಲಿಂಗಪ್ರಸಾದಿಗಳಲ್ಲದವರ ಸಂಗ ಪಂಚಮಹಾಪಾತಕವೆಂದುದು ಗುರುವಚನ.
ಲಿಂಗಪ್ರಸಾದಿಗಳಲ್ಲದವರ ಸಂಗ ಭಂಗವೆಂದುದು ಲಿಂಗವಚನ.
ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ ।
ಸಂಚರಂತಿ ಮಹಾಘೋರನರಕೇ ಕಾಲಮಕ್ಷಯಂ ॥
ಎಂದುದಾಗಿ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣಂಗೆ ಶರಣೆಂದು ಶುದ್ಧ. । ೬೬ ।

೨೦೯
ಶಿವಜನ್ಮ ಶಿವಕುಲಜನಾಗಿ ಶಿವಶರಣರ ಮನೆಯ ಒಕ್ಕುದ ಕೊಂಬುದು.
ಭವಭಾರಿಯ ಮನೆಯಲು ಲಿಂಗಾರ್ಚನೆಯ ಮಾಡಲಾಗದು.
ಭವಿ ವಿರಹಿತಂ[೧] ಭವಿಪಾಕವ ತನ್ನ ಲಿಂಗಕ್ಕೆ ಕೊಟ್ಟಡೆ
ರೌರವಂ ನರಕ ನೋಡಾ.
ಅಸಂಸ್ಕಾರೀ ಕೃತಂ ಪಾಕಂ ಶಂಭೋರ್ನೈವೇದ್ಯಮೇವ ನ ।
ಅನಿವೇದ್ಯಂ ತು ಭುಂಜೀಯಾನ್ನರಕೇ ಕಾಲಮಕ್ಷಯಂ ॥
ಇದು ಕಾರಣ ಕೂಡಲ ಚೆನ್ನಸಂಗಯ್ಯಾ,
ಭವಿಯ ಸಂಗ ಪುನರಪಿಜನ್ಮ. । ೬೭ । [೩೬೬]

೨೧೦
ಲಿಂಗವಿಲ್ಲದೆ ನಡೆವನ, ಲಿಂಗವಿಲ್ಲದೆ ನುಡಿವನ, ಲಿಂಗವಿಲ್ಲದವನಂಗ ಸೂತಕ.
ಲಿಂಗಾಂಗಿ ಲೌಕಿಕವ ಮುಟ್ಟಲಾಗದು.
ಲಿಂಗವಿಲ್ಲದೆ ಗಮಿಸಿದಡೆ ಆ ನಡೆನುಡಿ ಗೊಂಪೆ ಪಾತಕ.
ಲಿಂಗವಿಲ್ಲದೆ ನುಡಿವ ಶಬ್ದವ ಕೇಳಲಾಗದು, ಶಿವಶಿವಾ!
ಲಿಂಗವಿಲ್ಲದೆ ಉಗುಳು ನುಂಗಿದರೆ ಕಿಲ್ಬಿಷ,
ಕೂಡಲ ಚೆನ್ನಸಂಗಮದೇವಾ. । ೬೮ । [೪೯೬]

೧+ಗೆ (ಮೂ).

೨೧೧
ಅಂಗಲಿಂಗಸಂಗ ಹಿಂಗಿ ಬಂದ ಸುಖವನಾರಿಗರ್ಪಿಸುವೆ?
ಹಿಂಗಲಾರದು, ಶರಣಪಥಕ್ಕೆ ಸಲ್ಲದಾಗಿ.
ಹಿಂಗಲಾಗದು, ಭಕ್ತಿಪಥಕ್ಕೆ ಸಲ್ಲದಾಗಿ.
ಕೂಡಲ ಚೆನ್ನಸಂಗಮದೇವನ ಹಿಂಗಿ ನುಂಗಿದುಗುಳವೆ ಕಿಲ್ಬಿಷ. । ೬೯ । [೫೦೩]

೨೧೨
ಗುರುವಾದಡೂ ಆಗಲಿ, ಲಿಂಗವಾದಡೆಯೂ ಆಗಲಿ,
[1]ಜಂಗಮವಾದಡೆಯೂ ಆಗಲಿ[1]
ಪಾದೋದಕ ಪ್ರಸಾದವಿಲ್ಲದ ಪಾಪಿಯ ಮುಖವ ತೋಱಿಸದಿರಯ್ಯಾ.
ಭವಭಾರಿ ಜೀವಿಯ ಮುಖವ ತೋಱಿಸದಿರಯ್ಯಾ.
ಅವರ ನಡೆವೊಂದು ನುಡಿವೊಂದು
ಹಿರಿಯತನಕ್ಕೆ ಬೆಬ್ಬಬೆಱಿತು ಉದರವ ಹೊರೆದುಕೊಂಡಿಹ
ಕ್ರೂರಕರ್ಮಿಯ ಮುಖವ ತೋಱಿಸದಿರಯ್ಯಾ,
ಕೂಡಲ ಚೆನ್ನಸಂಗಯ್ಯಾ. । ೭೦ । [೫೩೫]

೨೧೩
ಲಿಂಗಕ್ಕೆ ಗಿಣ್ಣಿಲ ಓಗರ, ಭಕ್ತಂಗೆ ತಳಿಗೆ ತುಂಬಿದ ಓಗರ, ಆನಿನ್ನೇವೆನಯ್ಯಾ!
ಲಿಂಗವ ಕಿಱಿದು ಮಾಡಿ, ಅಂಗವ ಹಿರಿದು ಮಾಡಿ, ನಾನಿನ್ನೇವೆನಯ್ಯಾ!
ಲಿಂಗಕ್ಕೆ ಬಾರದ ರುಚಿ ಕೃತ ಕಿಲ್ಬಿಷ, ಆನಿನ್ನೇವೆನಯ್ಯಾ!
ಲಿಂಗಕ್ಕೆ ಬಾರದ ಭೋಗವ ಭೋಗಿಪರ ತೋಱದಿರಯ್ಯಾ
ಕೂಡಲ ಚೆನ್ನಸಂಗಮದೇವಾ. । ೭೧ । [೫೪೦]

೨೧೪
ಅರ್ಪಿತವಲ್ಲದೊಲ್ಲೆನೆಂದು ಭಕ್ತನಟ್ಟ ಮಡಕೆವೆಱಸಿಕೊಟ್ಟ ವಿಧಿಯ ನೋಡಾ.
ಅನ್ಯರಿಗಿಕ್ಕುವರೆ ಕೂಳಹುದೆ? ಬಂದ ಜಂಗಮಕ್ಕೆ ಓಗರವಹುದೆ ?
ಇಂತು ಪ್ರಸಾದ ಬೀಸರವೋದ ವ್ರತಗೇಡಿಯ ತೋಱದಿರು,
ಕೂಡಲ ಚೆನ್ನಸಂಗಮದೇವಾ. । ೭೨ । [೫೦೪]

೧-೧ x (ಮೂ).

೨೧೫

[1]ಆರೂ ಹಿರಿಯರಲ್ಲ,[1] ಭಕ್ತಿಯ [2]ಸಾಧಿಸುವರಲ್ಲ,[2]
ಲಿಂಗಜಂಗಮಪ್ರಸಾದ ಆರಿಗೆಯೂ ಸಾರದೆ ಹೋಯಿತ್ತಯ್ಯಾ.
ಘನವ ವೇದಿಸಲಱಿಯದೆ ಘನಮಹಿಮರು [3]ಕಾಲನ ಬಾಯಿಗೆ[3]
ಗುಱಿಯಾದರಯ್ಯಾ, ಕೂಡಲ ಚೆನ್ನಸಂಗಮದೇವಾ. ।೭೩। [೫೦೫]

೨೧೬

ಪ್ರಕೃತಿವಿಡಿದಿಹುದು ಪ್ರಾಣ, ಪ್ರಾಣವಿಡಿದಿಹುದು ಜ್ಞಾನ,
ಜ್ಞಾನವಿಡಿದಿಹುದು ಗುರು.
ಸಗುಣವೆಂದು ಹಿಡಿದು ಗುರುಲಿಂಗಜಂಗಮಪ್ರಸಾದ[4]ವನು[4]
ನಿರ್ಗುಣವೆಂದು ಬಿಡುವ ಸಂದೇಹಿ ವ್ರತಗೇಡಿಗಳ ತೋಱಿಸದಿರಾ,
ಕೂಡಲ ಚೆನ್ನಸಂಗಮದೇವಾ. ।೭೪। [೫೩೬]

೨೧೭

ಅರಮನೆಯ ಕೂಳನಾದರೆಯೂ ತಂ[5]ದು,
ಒ[5]ಡಲ ಕುದಿಹಕ್ಕೆ ಲಿಂಗಾರ್ಪಿತವ ಮಾಡಿದರೆ
ಅದು ಲಿಂಗಾರ್ಪಿತವಹುದೆ? ಅಲ್ಲ, ಅದು ಅನರ್ಪಿತ.
ಅರ್ಪಿತಂ ಚ ಗುರೋರ್ವಾಕ್ಯಾತ್ಕಿಲ್ಬಿಷಂ ಸ್ಯಾದನರ್ಪಿತಂ ।
ಯದ್ಯನರ್ಪಿತಂ ಭುಂಜೀಯಾನ್ ರೌರವಂ ನರಕಂ ವ್ರಜೇತ್ ॥
ತನುಸಾಹಿತ್ಯ ಮನಸಾಹಿತ್ಯ ಧನಸಾಹಿತ್ಯ
ಲಿಂಗಸಾಹಿತ್ಯ ಪ್ರಸಾದಸಾಹಿತ್ಯವಾದ ಕಾರಣ,
ಕೂಡಲ ಚೆನ್ನಸಂಗಮದೇವರಲ್ಲಿ ಈ ಅನುವ ಬಸವಣ್ಣ ತೋಱಿದನಾಗಿ,
ಆನು ಬದುಕಿದೆನು. ।೭೫। [೫೦೬]

೨೧೮

ಲಿಂಗಗ್ರಾಹಕ ಶರಣ ಅಂಗಭೋಗಕ್ಕೆ ವಿರೋಧಿಯಯ್ಯಾ,
ಜಂಗಮಗ್ರಾಹಕ ಶರಣ ಅರ್ಥಪ್ರಾಣಾಭಿಮಾನಕ್ಕೆ ವಿರೋಧಿಯಯ್ಯಾ.
ಪ್ರಸಾದಗ್ರಾಹಕ ಶರಣ ಪ್ರಾಣ ಜೀವ ಜಿಹ್ವೆ ರುಚಿ[6]ಗೆ[6] ವಿರೋಧಿಯಯ್ಯಾ.
ಈ ತ್ರಿವಿಧಸಾಹಿತ್ಯ ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. ।೭೬। [೧೦೭೫]

೧–೧ ಆರು ಹಿರಿಯರೆಲ್ಲಾ (ಮೂ), ೨–೨ ಸಾಧಿಸುವರೆಲ್ಲಾ (ಮೂ), ೩–೩ x (ಮೂ), ೪–೪ x (ಮೂ), ೫–೫ ದೊ (ಮೂಲ), ೬–೬ x (ಮೂಲ).

೨೧೯
ಇಷ್ಟಲಿಂಗದಲ್ಲಿ ಸರ್ವಾಚಾರಸಹಿತ ಮನಸೋಂಕಿ ಆಚರಿಸುವಲ್ಲಿ,
ಅಭ್ಯಾಸಿ[೧][ಯ][೧] ಅಭ್ಯಾಸಕ್ರೀಯೆ ಬಲಿದು,
[೨]ಇಷ್ಟಲಿಂಗದಲ್ಲಿ ಸರ್ವಾಚಾರಸಹಿತ[೨] ಮನ ನೆಮ್ಮಿ ಆಚರಿಸುವಲ್ಲಿ,
ಮಾರ್ಗಕ್ರೀಯೆ ಬಲಿದು,
ಇಷ್ಟಲಿಂಗದಲ್ಲಿ ಸರ್ವಾಚಾರಸಹಿತ ಮನವಾಚರಿಸುವಲ್ಲಿ
ಮೀಜಿದ ಕ್ರೀಯೆ ಬಲಿದು, ಆ ಇಷ್ಟಲಿಂಗದಲ್ಲಿ ಸರ್ವಾಚಾರಸಹಿತ ಮನವಾಚರಿಸುವಲ್ಲಿ
ಮೀಜಿದ ಕ್ರಿಯಾನಿಷ್ಪತ್ತಿ.
ಇಂತೀ ತ್ರಿವಿಧಸ್ಥಲವನೊಳಕೊಂಡ ಮಾರ್ಗಕ್ರೀ ಲಿಂಗದಲ್ಲಿ,
ಕೂಡಲ ಚೆನ್ನಸಂಗನಲ್ಲಿ ಈ ಕಾಯಕ್ಕೆ ಪ್ರಸಾದವಾಯಿತ್ತು. ।೭೭। [೫೧೯]

[೩]ಮಾಹೇಶ್ವರನ ಪ್ರಾಣಲಿಂಗಿಸ್ಥಲ[೩] :

೨೨೦
ಅಂಗವಿರೋಧಿ ಶರಣ, ಲಿಂಗಪ್ರಾಣ ಪ್ರತಿಗ್ರಾಹಕ.
ಅರ್ಥ ಪ್ರಾಣ ಅಭಿಮಾನ ವಿರೋಧಿ ಶರಣ, ಜಂಗಮಪ್ರಾಣ ಪ್ರತಿಗ್ರಾಹಕ.
ರುಚಿವಿರೋಧಿ ಶರಣ, ಪ್ರಸಾದಪ್ರಾಣ ಪ್ರತಿಗ್ರಾಹಕ.
ಈ ತ್ರಿವಿಧವ ಮೀಜಿ ನಿಮ್ಮಲ್ಲಿ[೪] ನಿಂದ
ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೭೮। [೫೨೨]

೨೨೧
[೫]ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ
ಶ್ರೋತ್ರದಲ್ಲಿ ಅನ್ಯಶಬ್ದವ ಕೇಳನಾ ಶರಣನು.
ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ
ಅನ್ಯವ ಮುಟ್ಟನಾ ಶರಣನು,
ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ
ಅನ್ಯವ ನೋಡನಾ ಶರಣನು,
ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ
ಆಹಾರ ವ್ಯವಹಾರವನಜೆಯನಾ ಶರಣನು.
ಅಂಗದ ಮೇಲೆ ಲಿಂಗಸನ್ನಿಹಿತವಾದ ಬಳಿಕ

೧-೧ (ಮೂ), ೨-೨ ಈ ಶಬ್ದಗಳು 'ಮೂ' ದಲ್ಲಿ ಹಿಂದುಮುಂದಾಗಿವೆ (ಸಂ), ೩-೩ ಪ್ರಾಣಲಿಂಗಿ (ಮೂ), ೪+ ನಿಮ್ಮಲ್ಲಿ (ಮೂ), ೫+ ಶರಣ (ಮೂ).

ಅನ್ಯವ ಘ್ರಾಣಿಸನಾ ಶರಣನು.
ಅಂಗದ ಮೇಲೆ ಲಿಂಗ ಸನ್ನಿಹಿತವಾದ ಬಳಿಕ
ಬಱೆ ಶಬ್ದವ ನುಡಿಯನಾ ಶರಣನು,
ಅಂಗದ ಮೇಲೆ ಲಿಂಗಸನ್ನಿಹಿತನಾಗಿ
ಕೂಡಲ ಚೆನ್ನಸಂಗಯ್ಯನಲ್ಲದನ್ಯವನಱೆಯನಾ ಶರಣನು. । ೭೯ ।[೧] [೫೨]

೨೨೨
ಸದಾಚಾ[೨]ರಿ[೨]ಯಾದಡೆ : ಉಪ್ಪರಗುಡಿ ಸಿಂಧುಪತಾಕೆ,
ಒಬ್ಬರಿಗೊಬ್ಬರು ಶರಣೆಂಬುದೆ ಸರ್ವತೀರ್ಥ,
ಭಕ್ತನ ದೇಹವೆ ತ್ರಿಕೂಟಿಕಾವರ್ಣಶಿವಾಲಯ,
ಕಾಲೆ ಕಡೆದ ಕಂಬ, ಶಿರವೆ ಸುವರ್ಣದ ಕಳಶ,
ಶಿವಾಚಾರ ಪೌಳಿ ವಿಭೂತಿಯಲ್ಲಿ ಧವಳಿಸಿ,
ಪರದೈವಕ್ಕಂಜೆವೆಂಬ ಅಗುಳಿ ದಾರವಟ್ಟ ಬಿಯಗವೊಪ್ಪುತ್ತಿರೆ,
[೩]ಹಸ್ತಾ[೩]ಗ್ರ ಪೂಜೆ, ಶಾಂತವೆ ಅಗ್ಘಣಿ, ಸಜ್ಜನವೆ ಮಜ್ಜನ,
ಸದಾ ಸನ್ನಿಹಿತವೆ ಲಿಂಗಪೂಜೆ, ಸತ್ಯವೆ ಅಡ್ಡಣಿಗೆ,
ಸಮತೆ ಪರಿಯಾಣ, ಮನ ಮೀಸಲೋಗರ.
ಲಿಂಗಬಣ್ಣಿಗೆಯ ಮೇಲೋಗರದಲ್ಲಿ
ದೇವರೊಲಿದಾರೋಗಣೆಯ ಮಾಡುತ್ತಿರಲು
ಹರುಷವೆ ಹಸ್ತಮಜ್ಜನ, ಪ್ರೀತಿ ಪ್ರೇಮವೆ ಕರ್ಪುರದ ವೀಳೆಯ,
ಕಲಿತನದ ಝೋಘಂಟೆ, ಛಲಪದದ ಕಹಳೆ ಭೇರಿ,
ವೀರವಂದನೆ [೪]ಮದ್ದಳೆ,[೪] ಕೇಳಿಕೆ ಸಂಪ್ರದಾಯವು.
ಇದು ಕಾರಣ, ಕೂಡಲಚೆನ್ನಸಂಗಾ
ನಿಮ್ಮ ಶರಣ ಸರ್ವಾಂಗಲಿಂಗಿ. । ೮೦ । [೩೨]

[೫]**ಮಾಹೇಶ್ವರನ ಶರಣಸ್ಥಲ**[೫] :

೨೨೩
ಸ್ನಾನಸಂಧ್ಯಾಜಪಹೋಮಾದಿ ಕ್ರೀಗಳು ನಿಮ್ಮ ಶರಣಂಗೆ,
ನೀವಲ್ಲದಿಲ್ಲಾಗಿ ಇಲ್ಲಯ್ಯಾ.
ಅನ್ಯಕಾರ್ಯ ಅನರ್ಪಿತ ನಿಮ್ಮ ಶರಣಂಗೆ,

---

೧ ಈ ವಚನವನ್ನು ಮುದ್ರಿತ ಪ್ರತಿಯ ಹಿನ್ನೆಲೆಯಲ್ಲಿ ಸರಿಪಡಿಸಿಕೊಳ್ಳಲಾಗಿದೆ. (ಸಂ) ೨-೨ ರ ಶ್ರೀ (ಮೂ) ೩-೩ ಹಸ್ತವು (ಮೂ), ೪-೪ ಮದನಿತ (ಮೂ), ೫-೫ ಆ ಶರಣ (ಊಮ)

ಲಿಂಗವನಗಲಿ ಇರನಾಗಿ ಇಲ್ಲಯ್ಯಾ.
ಆಗಮೋಕ್ತವಹ ಅರ್ಚನೆ ಆಹ್ವಾನ ವಿಸರ್ಜನೆ ನಿಮ್ಮ ಶರಣಂಗೆ
ಅವಸಾನವಿಲ್ಲಾಗಿ ಇಲ್ಲಯ್ಯಾ.
ಇಂತಪ್ಪ ಭಕ್ತಿಯ ಪದವನಱಿಯದೆ
ಹರಿಬ್ರಹ್ಮಾದಿಗಳು ಬಂಧನಕ್ಕೊಳಗಾದರು.
ಈ ಪದವನಱಿದ ಕಾರಣ ನಿಮ್ಮ ಶರಣಂಗೆ ಭವವಿಲ್ಲ ಬಂಧನವಿಲ್ಲ,
ಕೂಡಲ ಚೆನ್ನಸಂಗಯ್ಯನಲ್ಲಿ ದಾಸೋಹಿಯಾಗಿ. ।೮೧। [೫೩೭]

೨೨೪
ಉದಯಕಾಲ ಮಜ್ಜನಕ್ಕೆಱೆಯಲಿಕ್ಕಾಗಿ,
ಉದಯಕಾಲಕರ್ಮ ಕೆಡಲಿಕ್ಕಾಗಿ.
ಮಧ್ಯಾಹ್ನಕಾಲ ಮಜ್ಜನಕ್ಕೆಱೆಯಲಿಕ್ಕಾಗಿ,
ವರ್ತಮಾನಕಾಲ ೧ಕರ್ಮವು೧ ಕೆಡಲಿಕ್ಕಾಗಿ.
ಅಸ್ತಮಾನಕಾಲ ಮಜ್ಜನಕ್ಕೆಱೆಯಲಿಕ್ಕಾಗಿ,
ಲಯಕಾಲಕರ್ಮವು ಕೆಡಲಿಕ್ಕಾಗಿ,
ಹೊತ್ತಾಱೆನ ಪೂಜೆ ಬ್ರಹ್ಮಂಗೆ,
ಮಧ್ಯಾಹ್ನದ ಪೂಜೆ ವಿಷ್ಣುವಿಂಗೆ,
ಅಸ್ತಮಾನದ ಪೂಜೆ ರುದ್ರಂಗೆ.
ಇಂತೀ ತ್ರಿವಿಧಕಾಲ ಮಜ್ಜನಕ್ಕೆಱೆದವ ಭವಭಾರಿ.
ಇಂತು ತ್ರಿವಿಧಕಾಲ ನಾಸ್ತಿಯಾಗಿ ಮಜ್ಜನಕ್ಕೆಱೆಯಬಲ್ಲನಾಗಿ
ಕೂಡಲ ಚೆನ್ನಸಂಗಯ್ಯಾ, ನಿಮ್ಮ ಶರಣ ಭವಕ್ಕೆ ಬಾರ. ।೮೨। [೫೪೫]

೨೨೫
ಸಜ್ಜ೨ನ೨ ಸದ್ಭಾವಿ ಅನ್ಯರಲ್ಲಿ ಕೈಯ್ಯಾಂತು ಬೇಡ,
ಲಿಂಗವ ಮುಟ್ಟಿದ ಕೈ ಮೀಸಲು.
ಕಂಗಳಲ್ಲಿ ಒಸೆದು ನೋಡ ಪರವಧುವ.
ಮನದಲ್ಲಿ ನೆನೆಯನನ್ಯವ, ಮಾನವಸೇವೆಯ ಮಾಡ, ಲಿಂಗವ ಬೇಡ,
ಲಿಂಗದ ಹಂಗನೊಲ್ಲ, ಕೂಡಲ ಚೆನ್ನಸಂಗಾ ನಮ್ಮ ಶರಣ. ।೮೩। [೩೭೦]

೧–೧ x (ಮೂ), ೨–೨ x (ಮೂ).

೨೨೬

ಆಳ್ದರ ಅಱುವತ್ತು ವಚನಕ್ಕೆ ದಣ್ಣಾಯಕರಿಪ್ಪತ್ತು ವಚನ,
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ,
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನವು ಆಯ್ದು ವಚನ,
ಅಜಗಣ್ಣನ ಅಯ್ದು ವಚನಕ್ಕೆ ಕೂಡಲ ಚೆನ್ನಸಂಗಮದೇವಾ,
ಮಹಾದೇವಿಯಕ್ಕಗಳದೊಂದೆ ವಚನ. । ೮೪ । [೫೪೬]

೨೨೭

ಭೂಮಿಗೆ ಕೆಸಱುಗಲ್ಲನಿಕ್ಕಿ, ಮೇರುವ ಸ್ಥಳಗೊಳಿಸಿ,
ಅಂಡಜ ಉತ್ಪತ್ಯವಾದ ಬಳಿಕ ಹಿರಿಯರನಾರುವ ಕಾಣೆ.
ನೆರೆ ತೆರೆಗಳು ತೋಱಿದವರು ಹಿರಿಯರೆಂಬೆನೆ? ಎನ್ನೆನು,
ಮತಿಗೆಟ್ಟು ಒಂದನಾಡಹೋಗಿ ಒಂಬತ್ತನಾಡುತ್ತಿದ್ದರೆ
ಹಿರಿಯರೆಂಬೆನೆ? ಎನ್ನೆನು.
ಕೂಡಲ ಚೆನ್ನಸಂಗಮದೇವರಲ್ಲಿ
ಹಿರಿಯತನದ ತೆಱನ ಚೀಲಾಳ ಬಲ್ಲ. । ೮೫ । [೫೩೮]

೨೨೮

ಹೊಱಗಣ ಭವಿಯ ಕಳೆದೆವೆಂಬರು, ಒಳಗಣ ಭವಿಯ ಕಳೆಯಲಱಿಯರು.
ಕಾಮವೆಂಬುದೊಂದು ಭವಿ, ಕ್ರೋಧವೆಂಬುದೊಂದು ಭವಿ,
ಲೋಭವೆಂಬುದೊಂದು ಭವಿ, ಮೋಹವೆಂಬುದೊಂದು ಭವಿ,
ಮದವೆಂಬುದೊಂದು ಭವಿ. ಮಚ್ಚರವೆಂಬುದೊಂದು ಭವಿ,
ಆಸೆಯೆಂಬುದೊಂದು ಭವಿ. ಆಮಿಷವೆಂಬುದೊಂದು ಭವಿ,
ಹೊನ್ನೆಂಬುದೊಂದು ಭವಿ, ಹೆಣ್ಣೆಂಬುದೊಂದು ಭವಿ,
ಮಣ್ಣೆಂಬುದೊಂದು ಭವಿ.
ಇಂತೀ ಭವಿಯ ಕಳೆದುಳಿದ ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೮೬ । [೫೪೪]

ಮಾಹೇಶ್ವರನ ಐಕ್ಯ[೧]ಸ್ಥಲ[೧] :

೨೨೯

ಕುಲವನಱಿದೆವೆಂಬರು, ಆದಿಯ ಕುಲವನಮಱಿಯದ ಕಾರಣ
ವ್ಯಾಕುಲಗೊಂಡಿತ್ತು ತ್ರೈಜಗ ನೋಡಾ.

೧–೧ x (ಮೂ).

ಕುಲವಲ್ಲಾ ಹೊನ್ನು? ಕುಲವಲ್ಲಾ ಹೆಣ್ಣು? ಕುಲವಲ್ಲಾ ಮಣ್ಣು?
ಆದಿಬಿಂದುರ್ಭವೇದ್ಬೀಜಂ ಬೀಜಮಧ್ಯಸ್ಥಿತಂ ಕುಲಂ ।
ಬೀಜಂ ನಾಸ್ತಿ ಕುಲಂ ನಾಸ್ತಿ ತಸ್ಮೈ ಶಿವಕುಲಂ ಭವೇತ್ ॥
ಎಂದುದಾಗಿ, ಹೊನ್ನು ಹೆಣ್ಣು ಮಣ್ಣು ತ್ರಿವಿಧವನತಿಗಳೆದು
ನಿರಾಕುಲನಾದ ಬಳಿಕ ಕುಲಂನಾಸ್ತಿ, ಕೂಡಲ ಚೆನ್ನಸಂಗಮದೇವಾ. ।೮೭।[೫೫೩]

೨೩೦

ಲೋಕವನು ಹೊದ್ದ, ಲೌಕಿಕವ ಬೆರಸ, ಏಕಗ್ರಾಹಿ ಶರಣ.
ಲಿಂಗವ ಪೂಜಿಸಿ ಅನ್ಯವನಱಿಯದ ಅಚ್ಚಲಿಂಗೈಕ್ಯ
ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೫೪೯ ।

೨೩೧

ಗುರುವೆನ್ನ ತನುವ ಬೆರಸಿದ ಕಾರಣ,
ಗುರುವಿನ ತನುವ ನಾ ಬೆರಸಿದ ಕಾರಣ, ಗುರು ಶುದ್ಧನಾದನಯ್ಯಾ.
ಲಿಂಗವೆನ್ನ ಮನವ ಬೆರಸಿದ ಕಾರಣ,
ಲಿಂಗದ ಮನವ ನಾ ಬೆರಸಿದ ಕಾರಣ, ಲಿಂಗ ಶುದ್ಧವಾದನಯ್ಯಾ.
ಜಂಗಮವೆನ್ನ ಜಿಹ್ವೆಯ ಬೆರೆಸಿದ ಕಾರಣ, ಜಂಗಮ ಶುದ್ಧನಾದನಯ್ಯಾ.
ಈ ಮೂವರು ತಮ್ಮಿಂದ ತಾವಾಗಲಱಿಯದೆ
ಎನ್ನ ಮುಟ್ಟಿ ಶುದ್ಧವಾದರು ಕಾಣಾ,
ಕೂಡಲ ಚೆನ್ನಸಂಗಮದೇವಾ. । ೮೯ ।[೫೫೪]

೨೩೨

ಅಂಗದಿಂದ ಲಿಂಗಸುಖ, ಲಿಂಗದಿಂದ ಅಂಗಸುಖ,
ಅಂಗಲಿಂಗಸಂಗದಿಂದ ಪರಮಸುಖ ನೋಡಯ್ಯಾ.
ಅಂಗಲಿಂಗಸಂಗದ ಸುಖವನು
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯ ಬಲ್ಲ. । ೯೦ ।[1][೫೫೦]

❖❖

೧+ ಮಾಹೇಶ್ವರ ಸ್ಥಲಂ ಸಮಾಪ್ತ ಶ್ರೀ ಶ್ರೀ ಶ್ರೀ (ಮೂ).

ಪ್ರಸಾದಿಸ್ಥಲ

[೧]ಪ್ರಸಾದಿಯ ಜ್ಞಾನಿಸ್ಥಲ:[೧]

೨೩೩

ಸದ್ಗುರುಕಾರುಣ್ಯವ ಪಡೆದು, ಪೂರ್ವಗುಣವಳಿದು,
ಪುನರ್ಜಾತ[೨]ನಾದ ಬಳಿಕ[೨] ಭಕ್ತನಾಗಿ,
ಆ ಸದ್ಗುರು, ಪರಶಿವನು, ಪ್ರಾಣಾತ್ಮನು
–ಈ ತ್ರಿವಿಧವು ಏಕಾರ್ಥವಾಗಿ ಲಿಂಗಪ್ರವೇಶವಂ ಮಾಡಿ,
ಆ ಮಹಾಲಿಂಗವನು ಸದ್ಭಕ್ತಂಗೆ ಕರುಣಿಸಿ
ಪ್ರಾಣಲಿಂಗವಾಗಿ ಬಿಜಯಂಗೆಯಿಸಿ ಕೊಟ್ಟು,
ಲಿಂಗಪ್ರಾಣ ಪ್ರಾಣಲಿಂಗ ಲಿಂಗವಂಗ ಅಂಗಲಿಂಗವೆನಿಸಿ
ಭಕ್ತಕಾಯ ಮಮಕಾಯವಾಗಿ
ಅಂಗದ ಮೇಲೆ ಲಿಂಗಸ್ಥಾಪ್ಯವಂ ಮಾಡಿ,
"ಆ ಮಹಾಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವನು ಮಾಡು"
ಎಂದು ಶ್ರೀಗುರುವಾಜ್ಞೆಯಂ ಮಾಡಲು,
"ಮಹಾಪ್ರಸಾದ"ವೆಂದು ಆಜ್ಞೆಯಂ ಕೈಕೊಂಡು
ಕ್ರಿಯಾಮಾರ್ಗದಿಂ ಮಾಡುವಲ್ಲಿ,
ದೀಪಾರಾಧನೆ ಪರಿಯಂತರ ಆಗಮಮಾರ್ಗದಲೂ ಮಾಡಿ,
ನೈವೇದ್ಯ ಕ್ರೀಯಮಾಡುವಲ್ಲಿ, ಆಗಮಮಾರ್ಗದಲೂ
ಸರ್ವರ[೩]ಸಿ[೩] ಫಲ–ಪುಷ್ಪ ಪಾಕಾದಿ ಮಹಾದ್ರವ್ಯಂಗಳನು
ಪಂಚೇಂದ್ರಿಯಂಗಳ ಪಂಚಸ್ಥಾನಪ್ರವೇಶವಾದ ಮಹಾಲಿಂಗಕ್ಕೆ ಅರ್ಪಿ[೪]ಸುವಲ್ಲಿ[೪]

೧–೧ ಶ್ರೀಗುರು ಬಸವಲಿಂಗಾಯನಮಃ ಪ್ರಸಾದಿಸ್ಥಲ, ಆ ಜ್ಞಾನಿ (ಮೂ), ೨–೨ ವ ಮಾಡಿ (ಮೂ), ೩–೩x (ಮೂ), ೪–೪ ಸಿದಲ್ಲಿ (ಮೂ).

ದ್ರವ್ಯಂಗಳ [೧]ಸು[೧]ರೂಪವನು ಶ್ವೇತ ಹರಿತ ಕೃಷ್ಣ ಕಪೋತಾದಿ
ಷಡುವರ್ಣ ಮಿಶ್ರವಾದ ಮೂವತ್ತಾಱು ಬಹುವಿಧ ವರ್ಣಂಗಳನು,
ಕಂಗ[೨]ಳಲ್ಲಿ[೨] ನೋಡಿ, ಕಂಡು, ಅಱಿದು, ಕುರೂಪ ಕಳೆದು,
[೩]ಸು[೩]ರೂಪವನು ಕಂಗಳು ಲಿಂಗಕ್ಕರ್ಪಿಸುವಲ್ಲಿ
ಸ್ವಯಭಾಜನವೋ? ಲಿಂಗಭಾಜನವೋ?
ಆ ಕಾ[೪]ಲ[೪]ದಲು ಸೂತಕವಿಲ್ಲ, ದೋಷವಿಲ್ಲ,
ರೂಪು ಲಿಂಗಕ್ಕರ್ಪಿತವಾಯಿತ್ತು.
ದ್ರವ್ಯಂಗಳ ಪವಿತ್ರ ಅಪವಿತ್ರಂಗಳನು, ವೇದನಾದ ಮಂತ್ರಂಗಳಾದಿಯಾದವನು
ಸುಶಬ್ದ ಕುಶಬ್ದಂಗಳನು ಶೋತ್ರವಱಿದು, ಶ್ರೋತ್ರ ಕೇಳಿ, ಕುಶಬ್ದವ ಕಳೆದು,
ಸುಶಬ್ದವನು ಶ್ರೋತ್ರದಿಂ ಲಿಂಗಕ್ಕರ್ಪಿಸುವಲ್ಲಿ
ಸ್ವಯಭಾಜನವೋ ಲಿಂಗಭಾಜನವೋ?
ಆ ಕಾಲದಲು ಸೂತಕವಿಲ್ಲ, ದೋಷವಿಲ್ಲ,
–ಶಬ್ದದ್ರವ್ಯಂಗಳು ಶ್ರೋತ್ರದಿಂ ಲಿಂಗಕ್ಕರ್ಪಿತವಾಯಿತ್ತು.
ದ್ರವ್ಯಂಗಳ ಸುಗಂಧ ದುರ್ಗಂಧಗಳನು ಘ್ರಾಣವಱಿದು, ಘ್ರಾಣ ವಾಸಿಸಿ,
ದುರ್ಗಂಧವ ಕಳೆದು ಸುಗಂಧವನು ಘ್ರಾಣದಿಂ ಲಿಂಗಕ್ಕರ್ಪಿಸುವಲ್ಲಿ
ಸ್ವಯಭಾಜನವೋ? ಲಿಂಗಭಾಜವನೋ?
ಆ ಕಾಲದಲು ಸೂತಕವಿಲ್ಲ ದೋಷವಿಲ್ಲ;
ಘ್ರಾಣದಿಂ ಸುಗಂಧ ಲಿಂಗಾರ್ಪಿತವಾಯಿತ್ತು.
ದ್ರವ್ಯಂಗಳ ಮೃದುಕಠಿಣ ಶೀತೋಷ್ಣಂಗಳನ್ನು ಪರುಶನದಿಂ ಪರುಶಿಸಿ
ಪರುಶನವಱಿದು ತತ್ಕಾಲೋಚಿತ ದ್ರವ್ಯಂಗಳನು
ಅನುವಱಿದು ಪರುಶನದಿಂ ಪರುಶಿಸಿ ಲಿಂಗಕ್ಕರ್ಪಿಸುವಲ್ಲಿ
ಸ್ವಯಭಾಜನವೋ? ಲಿಂಗಭಾಜನವೋ?
ಆ ಕಾಲದಲು ಸೂತಕವಿಲ್ಲ, ದೋಷವಿಲ್ಲ.
ದ್ರವ್ಯಂಗಳ ಮೃದುಕಠಿಣ ಶೀತೋಷ್ಣಂಗಳ: [೫]ಬೇರಿಚ್ಚೆ[೫]ಯಱಿದು
ಪರುಶನದಿಂ ಲಿಂಗಾರ್ಪಿತವಾಯಿತ್ತು.
ಮಹಾದ್ರವ್ಯಂಗಳ ರೂಪು ಶಬ್ದ ಗಂಧ ಮೃದು ಕಠಿಣ ಶೀತೋಷ್ಣ ಮೊದಲಾದವು
ನಾಲ್ಕು ತೆಱ ನಾಲ್ಕು ಇಂದ್ರಿಯದಿಂ ಲಿಂಗಾರ್ಪಿತವಾಯಿತ್ತು.

೧–೧ ಸ್ವ (ಮೂ), ೨–೨ ಳು (ಮೂ), ೩–೩ ಸ್ವ (ಮೂ), ೪–೪ x (ಮೂ), ೫–೫ ಬೆರೆಚ್ಚೆ (ಮೂ)

ದ್ರವ್ಯಂಗಳ [೧]ಸು[೧]ರೂಪವನು ಕಂಗಳಿಂದರ್ಪಿಸುವಂತೆ
ಶ್ರೋತ್ರ ಘ್ರಾಣ ಸ್ಪರ್ಶ ಜಿಹ್ವೆ ಮೊದಲಾದ ನಾಲ್ಕು ಇಂದ್ರಿಯಗಳಲ್ಲಿ ಅರ್ಪಿಸಬಾರದು.
ಕಂಗಳಲ್ಲಿ ರೂಪನರ್ಪಿಸಬೇಕು,
ಸುಶಬ್ದವನು ಶ್ರೋತ್ರದಿಂದರ್ಪಿಸುವಂತೆ,
ಚಕ್ಷು ಘ್ರಾಣ ಜಿಹ್ವೆ ಸ್ಪರುಶ ಮೊದಲಾದ ನಾಲ್ಕು ಇಂದ್ರಿಯಗಳಿಂದರ್ಪಿಸಬಾರದು,
ಸುಶಬ್ದವನು ಶ್ರೋತ್ರದಿಂದವೆ ಅರ್ಪಿಸಬೇಕು.
ಮೃದು ಕಠಿಣ ಶೀತೋಷ್ಣಂಗಳನು ಸ್ಪರುಶನದಿಂದರ್ಪಿಸುವಂತೆ
ನೇತ್ರ ಶ್ರೋತ್ರ ಘ್ರಾಣ ಜಿಹ್ವೆ ಮೊದಲಾದ ನಾಲ್ಕು ಇಂದ್ರಿಯಗಳಿಂದ ಅರ್ಪಿಸಬಾರದು[೨]
ಮೃದು ಕಠಿಣ ಶೀತೋಷ್ಣದ್ರವ್ಯಂಗಳನು ಸ್ಪರುಶನದಿಂದರ್ಪಿಸಬೇಕು.
ನಾಲ್ಕು ಇಂದ್ರಿಯದಿಂ ರೂಪು ಶಬ್ದ ಗಂಧ ಮೃದು ಕಠಿಣ ಶೀತೋಷ್ಣ
ದ್ರವ್ಯಂ[೩]ಗಳಿಗ[೩]ರ್ಪಿತವಾಯಿತ್ತು.
ಮಹಾದ್ರವ್ಯಂಗಳ ಸುರಸವನು ಮಹಾರುಚಿಯನು
ಜಿಹ್ವೆಯಿಂದರ್ಪಿಸುವಂತೆ ನೇತ್ರ ಶ್ರೋತ್ರ ಘ್ರಾಣ ಸ್ಪರುಶನ ಮೊದಲಾದ
ಈ ನಾಲ್ಕು ಇಂದ್ರಿಯಂಗಳಿಂದರ್ಪಿಸಬಹುದೆ? ಹೇಳಿರಣ್ಣಾ.
ಅಹಂಗಲ್ಲದೆ ಲಿಂಗಾರ್ಪಿತವಾಗದು. ಆ ಲಿಂಗದ ಆರೋಗಣೆಯಾಗದು.
ಮಹಾರಸವನು ರುಚಿಯನೂ ಜಿಹ್ವೆಯಿಂದರ್ಪಿಸುವಲ್ಲಿ
ಸೂತಕವೆಂದು ದೋಷವೆಂದು ಸ್ವಯಭಾಜನವಾಗದೆಂದು
ಭಿನ್ನಭಾಜನವಾಗಬೇಕೆಂದು ದೇವರ ಆರೋಗಣೆಗೆ ಮುನ್ನವೆ ಇದ್ದ
ಪರಿಯಾಣವ ತೆಗೆದ ಕಷ್ಟವ ನೋಡಾ! ಅಗಲನಾಜಿಡಿಗೊಂಬ ಪಾಪವ ನೋಡಾ!
ಅಕಟಕಟಾ! ಈ ಪರಿಯೆ ಲಿಂಗಾರ್ಚನೆ?
ಈ ಪರಿಯೆ ಲಿಂಗಾರ್ಪಿತವ ಮಾಡಿ ಪ್ರಸಾದವ ಹಡೆವ ಪರಿ?
ಈ ಪರಿಯೆ ಭಕ್ತಿ? ಈ ಪರಿಯೆ ಜ್ಞಾನ?
ಇಂತಲ್ಲ ಕೇಳಿರಣ್ಣಾ ಕರ್ತೃಭೃತ್ಯಸಂಬಂಧದ ಪರಿ.
ದೇವರ ಪರಿಯಾಣದಲು ದೇವರಿಗೆ ಬಂದ ಸರ್ವದ್ರವ್ಯಮಹಾರಸಂಗಳನು,
ಮಹಾರುಚಿಯನು ಭಕ್ತದೇಹಿಕ ದೇವನಾಗಿ
ದೇವರ ಜಿಹ್ವೆಯಲ್ಲಿ ದೇವಾಧಿದೇವ ಮಹಾದೇವಂಗರ್ಪಿಸಬೇಕು. ಸ್ಮೃತಿ:

೧–೧ ಸ್ವ (ಮೂ). ೨+ ಸುಗಂಧವನು ಘ್ರಾಣದಿಂದ ಅರ್ಪಿಸುವಂತೆ, ನೇತ್ರ ಶ್ರೋತ್ರ ಸ್ಪರ್ಶ ಜಿಹ್ವೆ ಮೊದಲಾದ ನಾಲ್ಕು ಇಂದ್ರಿಯಗಳಲ್ಲಿ ಅರ್ಪಿಸಬಾರದು. (ಮೂ) ೩–೩ ಳುಂಗಾ (ಮೂ)

ರೂಪಂ ಸಮರ್ಪಿತ ಶುದ್ಧಂ ರುಚಿಃ ಸಿದ್ಧಂ ತು ವಿಶ್ರುತಂ ।
ಏತತ್ಸಮಾಗತಾ ತೃಪ್ತಿಃ ಪ್ರಸಿದ್ಧ ತು ಪ್ರಸಾದಕಂ ॥
ದರ್ಪಣಂ ಧೂಪದೀಪೌ ಚ ನಾನಾರುಚಿಸುಖಂ ಬಹು ।
ಪ್ರಸಾದ ಏನ ಭೋಕ್ತವ್ಯೋ ಅನ್ಯದ್ಗೋಮಾಂಸಸನ್ನಿಭಂ ॥
ರೂಪಂ ಸಮರ್ಪಯೇದ್ದ್ರವ್ಯಂ ರುಚಿಮಪ್ಯರ್ಪಯೇತ್ತತಃ ।
ಉಭಯಾರ್ಪಣವಿಹೀನಶ್ಚೇತ್ ಪ್ರಸಾದೋ ನಿಷ್ಫಲೋ ಭವೇತ್ ॥
ನೈವೇದ್ಯಂ ಪುರತೋ ನ್ಯಸ್ತಂ ದರ್ಶನಾತ್ ಸ್ವೀಕೃತಂ ಮಯಾ ।
ರಸಾನ್ ಭಕ್ತಸ್ಯ ಜಿಹ್ವಾಗ್ರಾದಶ್ನಾಮಿ ಕಮಲೋದ್ಭವ ॥
ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧೋ ಮಹಾರುಚಿಃ ।
ತತ್ತಲ್ಲಿಂಗಮುಖೇನೈವ ಅರ್ಪಿತಂ ಸ್ಯಾತ್ಸಮರ್ಪಣಂ ॥
ಅರ್ಪಿತಾನರ್ಪಿತಂ ಸ್ಥಾನಂ ಇಂದ್ರಿಯಾದಿಂದ್ರಿಯಂ ಯಥಾ ।
ಇಂದ್ರಿಯಸ್ಥಾನತತ್ಕರ್ಮ ಸಮರ್ಪಿತಕ್ರಿಯಾರ್ಪಿತಂ ॥
.... ಜ್ಞಾನಾರ್ಪಣಕ್ರಿಯಾರ್ಪಣೇ ।
ಉಭಯಾರ್ಪಣಹೀನಸ್ಯ ಪ್ರಸಾದೋ ನಿಷ್ಫಲೋ ಭವೇತ್ ॥
ಗರ್ಭಿಣ್ಯಾ ಗರ್ಭದೇಹಸ್ಯ ಸರ್ವಭೋಗಸ್ಸಮೋ ಭವೇತ್ ।
ಲಿಂಗಿನಾಂ ಲಿಂಗಭೋಗೇನ ಪ್ರಸಾದಃ ಸಹ ಸಂಭವೇತ್ ॥
ಗರ್ಭಿಣೀಸರ್ವಭೋಗೇಷು ಶಿಶೂನಾಂ ತೃಪ್ತಿಸಂಭವಃ ।
ಲಿಂಗಿನಾಂ ಲಿಂಗಭೋಗೇಷು ಪ್ರಸಾದಸ್ಸಂಭವೇತ್ತಥಾ ॥
ಯಥಾ ಚ ಗರ್ಭಿಣೀಭೋಗೇ ಶಿಶೂನಾಂ ತೃಪ್ತಿಸಂಭವಃ ।
ತಥಾ ಲಿಂಗಸ್ಯ ಭೋಗೇಷು ಅಂಗಸ್ತೃಪ್ತಿಮವಾಪ್ನುಯಾತ್ ॥
ಗರ್ಭೀಕೃತಸ್ಯ ಪ್ರಾಣಸ್ತು ಗರ್ಭಿಣೀಭೋಗಮಾಶ್ರಿತಃ ।
ಲಿಂಗಗರ್ಭೀಕೃತೋ ಲಿಂಗೀ ಲಿಂಗಭೋಗಂ ಸಮಾಶ್ರಿತಃ ॥

ಮತ್ತೊಂದಾಗಮದಲ್ಲಿ :

ಭಕ್ತಕಾಯೋ ಮಹಾದೇವೋ ಭಕ್ತಾತ್ಮಾ ಚ ಸದಾಶಿವಃ ।
ಭಕ್ತಭೋಗೋಪಭೋಗಶ್ಚ ಭೋಗಸ್ತಸ್ಯ ವಿಧೀಯತೇ ॥
ಲಿಂಗದೇಹೀ ಶಿವಾತ್ಮಾಯಂ ಲಿಂಗಾಚಾರೋ ನ ಲೌಕಿಕಃ ।
ಸರ್ವಲಿಂಗಮಯಂ ರೂಪಂ ಲಿಂಗೇನ ಸುಮುಮಶ್ನುತೇ ॥
ಘ್ರಾಣಸ್ತಸ್ಯೈವ ಘ್ರಾಣಶ್ಚ ದೃಷ್ಟಿರ್ದೃಷ್ಟಿಃ ಶ್ರುತಿಃ ಶ್ರುತಿಃ ।
ಸ್ಪರ್ಶನಂ ಸ್ಪರ್ಶನಂ ವಿಂದ್ಯಾದ್ ಗ್ರಾಹ್ಯಂ ತದ್ಗ್ರಾಹ್ಯಮೇವ ಚ ॥

ಭುಕ್ತಂ ತದ್ಭುಕ್ತಮಾಖ್ಯಾತಂ ತೃಪ್ತಿಸ್ತತ್ತೃಪ್ತಿದೇವ ಚ ।
ತಸ್ಯೈಕಃ ಪ್ರಾಣ ಆಖ್ಯಾತ ಇತ್ಯೇತತ್ಸಹವರ್ತಿನಾಂ ॥
ಲಿಂಗದೃಷ್ಟಿನಿರೀಕ್ಷಾ ಸ್ಯಲ್ಲಿಂಗಹಸ್ತೋಪಸ್ಪರ್ಶನಂ ।
ಲಿಂಗಶ್ರೋತ್ರೇಣ ಶ್ರವಣಂ ಲಿಂಗಜಿಹ್ವಾರಸಾನ್ನವಾನ್ ॥
ಲಿಂಗಘ್ರಾಣಸ್ತು ಘ್ರಾಣಶ್ಚ ಲಿಂಗೇನ ಸಹ ವರ್ತತೇ ।
ಲಿಂಗಂ ಮನೋಗತಂ ವಾಪಿ ಇತ್ಯೇತ್ಯೈಃ ಸಹ ಭೋಜನಂ ॥
ಲೋಕಾಚಾರನಿಬದ್ಧಸ್ತು ಲೋಕಾಲೋಕವಿಸರ್ಜಿತಃ ।
ಲೋಕಾಚಾರಪರಿತ್ಯಾಗೀ ಪ್ರಾಣಲಿಂಗೀತಿ ಸಂಸ್ಮೃತಃ ॥
ನ ಪ್ರಾಣಲಿಂಗಿನಃ ಕಾಲೋ ನ ಲಿಂಗಪ್ರಾಣಿನಃ ಕ್ರಿಯಾ ।
ಕಾಲಕರ್ಮದ್ವಯಂ ನಾಸ್ತಿ ಶರಣಸ್ಯ ಪ್ರಸಾದತಃ ॥
ಇಂತೆಂದುದಾಗಿ ಇದು ಲಿಂಗಾರ್ಚನೆಯ ಪರಿ.
ಇಂತಲ್ಲದೆ ರುಚಿಯಾರ್ಪಿತಕ್ಕೆ ಮುನ್ನವೆ
ಪರಿಯಾಣವ ತೆಗೆಯಲು ಲಿಂಗಾರ್ಚನೆಯ ಕ್ರೀ ತಪ್ಪಿತ್ತು,
ಶ್ರೀಗುರುವಾಜ್ಞೆಯ ಮೀಜಿದವನು ಜ್ಞಾನಿಯಲ್ಲ, ಭಕ್ತನಲ್ಲ ಕೇಳಿರೇ.
ಆವನಾನು ಮಹಾರಾಜಂಗೆ ಆರೋಗಣೆಗೆ ಮುನ್ನವೆ ಪರಿಯಾಣವ ತೆಗೆಯಲು
ದ್ರೋಹ, ಶಾಸ್ತಿಗೊಳಗಾದರು, ಇದು [1]ದೃಷ್ಟ[1] ನೋಡಿರೆ.[2]
ರಾಜಾಧಿರಾಜ ಮಹಾರಾಜ ದೇವಾಧಿದೇವ ಮಹಾದೇವಂಗೆ ಆರೋಗಣೆಗೆ ಮುನ್ನ
ಪರಿಯಾಣವ ತೆಗೆಯಲು ಮಹಾದ್ರೋಹ.
ಇದನಜಿದು ಶ್ರೀಗುರುವಾಜ್ಞೆಯ ತಪ್ಪದೆ, ಲಿಂಗಾರ್ಚನೆಯ ಕ್ರೀ ತಪ್ಪದೆ
ದೇವರ ಪರಿಯಾಣದಲು ಮಹಾರಸದ್ರವ್ಯಪದಾರ್ಥಂಗಳನಿಟ್ಟು
ಶ್ರೀಗುರುಸಹಿತ ಜಂಗಮಸಹಿತ ಲಿಂಗಾರ್ಪಿತ ಮಾಡುವುದು.
ಪಂಚೇಂದ್ರಿಯಗಳ ಪಂಚಸ್ಥಾನ ಪ್ರವೇಶವಾದ ಮಹಾಲಿಂಗಕ್ಕೆ,
ಶಬ್ದ ಸ್ಪರ್ಶ ರೂಪು ರಸ ಗಂಧ ಮನೋವಾಕ್ಕಾಯಕ್ಕೆ ಭೋಗಿಸುವ
ಭೋಗವೆಲ್ಲವನು ಅರ್ಪಿಸೂದು.
ಮೇಲೆ ತಾಂಬೂಲದಿಂ ಅಷ್ಟವಿಧಾರ್ಚನೆ ಷೋಡಶೋಪಚಾರವನು ಮಾಡಿ,
ಲಿಂಗಾರ್ಚನೆಯಂ ಮಾಡಿ, ಪ್ರಸಾದವ ಹಡದು, ಆ ಮಹಾಪ್ರಸಾದದಿಂ
ಪ್ರಸಾದಿಯಪ್ಪುದು ಕೂಡಲ ಚೆನ್ನಸಂಗಮದೇವಾ. ।೧। [೫೭೦]

೧-೧ ದೋಷ (ಮೂ), ೨+ ಇದು (ಮೂ), ೧೩+೦ (ಮೂ).

೨೩೪

ಗುರುಕಾರುಣ್ಯವ ಪಡೆದ ಬಳಿಕ ಕೂಡೆ ಭವಿಗಳ ಬಿಡಲೇಬೇಕು.
ಲಿಂಗಸಂಗಿಯಾದ ಬಳಿಕ ದುಸ್ಸಂಗ ಹಿಂಗಲೇಬೇಕು.
ಅರ್ಪಿತವಲ್ಲದೆ ಮುಟ್ಟೆವೆಂದರೆ ತಟ್ಟುವ ಮುಟ್ಟುವ ವರ್ಮನಱಿಯಬೇಕು.
ಪ್ರಸಾದಕಲ್ಲದೆ ಬಾಯಿದೆಱೆಯೆನೆಂದರೆ ಸರ್ವಭವಿಪಾಕವ ಬಿಡಬೇಕು.
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಶಿವಾಚಾರಸಂಪತ್ತಿಲ್ಲದವರ ಮನೆಯ ಹುಗಲಾಗದು. ।೨। [೩೭೧]

೨೩೫

ಹೊನ್ನು ಭಕ್ತನೆಂಬೆನೆ ಹೊನ್ನಿನೊಳಗಣ ಮುದ್ರೆ ಭವಿ.
ಹೆಣ್ಣು ಭಕ್ತನೆಂಬೆನೆ? ಹೆಣ್ಣಿನೊಳಗಣ ವಿರಹ ಭವಿ.
ಮಣ್ಣು ಭಕ್ತನೆಂಬೆನೆ? ಮಣ್ಣಿನೊಳಗಣ ಬೆಳಸು ಭವಿ.
ಈ ತ್ರಿವಿಧಭವಿಯ ಕಳೆದು ಪ್ರಸಾದವ ಮಾಡಿ ಕೊಳಬಲ್ಲರೆ
ಕೂಡಲ ಚೆನ್ನಸಂಗನಲ್ಲಿ ಅಚ್ಚಶೀಲವಂತನೆಂಬೆ. ।೩। [೮೬೧]

೨೩೬

ಭಕ್ತಿ ಪದಾರ್ಥವನಱಿದ ಮಹೇಶ್ವರನು
ತನ್ನಲ್ಲಿ ತಾನು ಸುಯಿಧಾನಿಯಾಗಿರಬೇಕು.
ಎಲ್ಲಿ? ಲಿಂಗದಲ್ಲಿ; ಎಲ್ಲಿ? ಜಂಗಮದಲಿ; ಎಲ್ಲಿ? ಪ್ರಸಾದದಲ್ಲಿ,
ಸುಯಿಧಾನಿಯಾಗದಿದ್ದರೆ “ಶ್ವಗರ್ಭೇಷು ಜಾಯತೇ”
ಎಂದುದು ಕೂಡಲ ಚೆನ್ನಸಂಗನ ವಚನ. ।೪। [೩೬೧]

೨೩೭

ಹುಟ್ಟದ ಯೋನಿಯಿಲ್ಲ, ಮೆಟ್ಟದ ನೆಲವಿಲ್ಲ, ಉಣ್ಣದಾಹಾರವಿಲ್ಲ.
ಆವರ್ತನ, ಪರಿವರ್ತನ!
ಕಾಲಚಕ್ರ ಕರ್ಮಚಕ್ರ ಬಿಂದುಚಕ್ರ ನಾದಚಕ್ರದ ದಾರಿಯಲ್ಲಿ
ನುಗ್ಗುಂ ನುಸಿಯಾದ ಜೀವಂಗಳು ಮುಟ್ಟಬಹುದೆ ಗುರುವ?
ಅರ್ಚಿಸಬಹುದೆ ಲಿಂಗವ? ಕೊಳಬಹುದೆ ಪ್ರಸಾದವ? ಭವಂ ನಾಸ್ತಿಯಾದಂಗಲ್ಲದೆ.
ನಾನಾಯೋನಿ ಸಹಸ್ರಾಣಿ ಕೃತ್ವಾ ಚೈವಂತು ಮಾಯಯಾ ।

ಆಹಾರಂ ವಿವಿಧಾಹಾರಂ ಪೀತ್ವಾ ತು ವಿವಿಧಾಃ ಸ್ತನಾ ॥
ಎಂದುದಾಗಿ, ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ತ್ರಿಸ್ಥಾನ ಶುದ್ಧವಾದಂಗಲ್ಲದೆ [೧]ನಾನಾ ಆಹಾರ
ಕೊಟ್ಟು ಪ್ರಸಾದಿಯಾಗ.[೧] । ೫ । [೫೭೯]

೨೩೮

ಅಂಗದ ಮೇಲೆ ಲಿಂಗವಿಲ್ಲದ ಲಿಂಗಕ್ಕೆ ಬೋನವ ಮಾಡಲಾಗದು.
ಮಾಡಿದರೆ [೨]ಮಾಡಲೇಕೋ[೨]
ಅವರು ಮಾಡಿದ ಬೋನವ ಲಿಂಗಕ್ಕೆ ಕೊಟ್ಟು ಪ್ರಸಾದವೆಂದು ಕೊಂಡರೆ,
ಕುಂಭೀಪಾಕ ನಾಯಕನರಕ ಕೂಡಲ ಚೆನ್ನಸಂಗಮದೇವಾ. । ೬ । [೫೮೬]

೨೩೯

ಗುರುಕಾರುಣ್ಯವುಂಟು, ಭಕ್ತರೆಂದೆಂಬರು,
ಗುರುಕಾರುಣ್ಯವುಳ್ಳರೆ ಭಕ್ತರೆಂತಪ್ಪರಯ್ಯಾ,
ಅಂಗದ ಮೇಲೆ ಲಿಂಗವಿಲ್ಲದನ್ನಕ್ಕ?
ಪ್ರಸಾದಕಾಯವಾಗದನ್ನಕ್ಕ?
ಈ ಪಂಚಭೂತಕಾಯವ ಪ್ರಸಾದಕಾಯವೆಂದು ಹೆಸರಿಟ್ಟುಕೊಂಡು ನುಡಿವ
ಪಾತಕರ ನುಡಿಯ ಕೇಳಲಾಗದು.
ಪಂಚೇಂದ್ರಿಯ[೩]ಂಗಳ[೩] ಗುಣದಲ್ಲಿ ನಡೆವರನೊಳಗಿಟ್ಟುಕೊಂ[೪]ಡು ನಡೆದರೆ[೪]
ಭಕ್ತಿಹೀನರೆನಿಸಿತ್ತು ಕೂಡಲ ಚೆನ್ನಸಂಗನ ವಚನ. । ೭ । [೫೭೮]

೨೪೦

ಅಷ್ಟವಿಧಾರ್ಚನೆಯ ಮಾಡಬಲ್ಲರೆ ಅಂಗಸುಖಂಗಳನಱಿಯದಿರಬೇಕು.
ಲಿಂಗಾರ್ಚನೆಯ ಮಾಡಬಲ್ಲರೆ ಕಾಮಕ್ರೋಧಲೋಭ
ಮೋಹಮದಮಚ್ಚರಂಗಳಿಲ್ಲದಿರಬೇಕು.
ಪ್ರಸಾದಭೋಗವ ಮಾಡಬಲ್ಲರೆ ಹಸಿವು ತೃಷೆ ಆಪ್ಯಾಯನಂಗಳಡಗಿರಬೇಕು.
[೫]ಇಂತಲ್ಲದಡೆ[೫] ಕೂಡಲ ಚೆನ್ನಸಂಗನಲ್ಲಿ ಬಱಿ ಉಪಾಧಿಕರೆಂಬೆ. । ೮ । [೯೮೫]

೧–೧ x(ಮೂ), ೨–೨ ಲಿಕೋ (ಮೂ), ೩–೩ x(ಮೂ), ೪–೪ ಡರೆ (ಮೂ), ೫–೫ ಇದು ಕಾರಣ (ಮೂ).

೨೪೧

ಕಾಯ ಜೀವವಾಗಿ, ಜೀವ ಕಾಯವಾಗಿ,
ಕಾಯ ಜೀವವ ಮುಟ್ಟದು. ಜೀವ ಕಾಯವ ಮುಟ್ಟದು,
ಸಂಬಂಧಸಂಭ್ರಮವಡಗದು,
ಲಿಂಗವ ಪ್ರಾಣ ಮುಟ್ಟದು, ಪ್ರಾಣವ ಲಿಂಗ ಮುಟ್ಟದು.
ಪ್ರಸಾದವಿನ್ನೆಲ್ಲಿಯದೋ,
ವಾಯಕ್ಕೆ ವಾಯ! ಕೂಡಲ ಚೆನ್ನಸಂಗನೆಂಬುದು ವಾಯ. ।೯। [೯೮೬]

೨೪೨

ಅಧರ ತಾಗುವ ರುಚಿಯನು, ಉದರ ತಾಗುವ ಸುಖವನು,
ಲಿಂಗಾರ್ಪಿತವ ಮಾಡದಿದ್ದರೆ ಕೃತ ಕಿಲ್ಬಿಷ ನೋಡಾ.
ಶ್ರೋತ ನೇತ್ರ ಭುಂಜನೆಯ ಮಾಡಲಾಗದು.
ತಟ್ಟಿತ್ತು ಮುಟ್ಟಿತ್ತು ಲಿಂಗಾರ್ಪಿತವೆಂದರೆ,
ಅವನಂದೇ ವ್ರತಗೇಡಿ ಕೂಡಲ ಚೆನ್ನಸಂಗಮದೇವಾ. ।೧೦। [೫೬೪]

೨೪೩

ಶಿವಸಂಸ್ಕಾರಿಯಾಗಿ ಲಿಂಗವೆ ಪ್ರಾಣವಾಗಿದ್ದ ಬಳಿಕ
ಅಲ್ಲಲ್ಲಿಗೆ ಹರಿಯಲಾಗದು.
ಪ್ರಾಣಲಿಂಗ ಸಂಬಂಧಿಗೆ ಅದು ಪಥವಲ್ಲ.
ಅಸಂಸ್ಕಾರಿಕೃತಂ ಪಾಪಂ ಶಂಭೋರ್ನೈವೇದ್ಯಮೇವ ನ।
ಅನರ್ಪಿತಂ ತು ಭುಂಜೀಯಾತ್ ಪ್ರಸಾದೋ ನಿಷ್ಫಲೋ ಭವೇತ್ ॥
ಎಂದುದಾಗಿ, ಇದು ಕಾರಣ ಕೂಡಲ ಚೆನ್ನಸಂಗಯ್ಯ
ನಾಯಕನರಕದಲಿಕ್ಕುವನಾಗಿ. ।೧೧। [೧೦೦೧]

೨೪೪

ಭೃತ್ಯಾಚಾರಿಗಲ್ಲದೆ ಭಕ್ತ್ಯಾಚಾರವಳವಡದು.
ವೇದಶಾಸ್ತ್ರಪುರಾಣಾಗಮಂಗಳನಜೆದ ಸಂಬಂಧಿಗಲ್ಲದೆ
[೧]ವೀರಶೈವ[೧] ಅಳವಡದು. ಅದೇನು ಕಾರಣ?

೧-೧ x (ಮೂ)

ಅಱಿದು ಭವಿಪಾಕವೆಂದು ಕಳೆದ ಬಳಿಕ
ಜಂಗಮಕ್ಕೆ ನೀಡಿದರೆ ಅಧಿಕಪಾತಕ.
ಅದೆಂತೆಂದರೆ, ತನ್ನ ಲಿಂಗಕ್ಕೆ ಸಲ್ಲದಾಗಿ, ಆ ಜಂಗಮಕ್ಕೆ ಸಲ್ಲದು.
ಆ ಜಂಗಮಕ್ಕೆ ಸಲ್ಲದಾಗಿ, ತನ್ನ ಲಿಂಗಕ್ಕೆ ಸಲ್ಲದು.
ಲಿಂಗಭೋಗೋಪಭೋಗಿ ಯೋ ಭೋಗೇ ಜಂಗಮವರ್ಜಿತಃ।
ಅಂಗಹೀನಸ್ಸ ಭೋಕ್ತಾ ತು ಶ್ವಾನಗರ್ಭೇಷು ಜಾಯತೇ ॥
ಇದು ಕಾರಣ ಕೂಡಲ ಚೆನ್ನಸಂಗಮದೇವಾ
ಇಂತಪ್ಪ ದುರಾಚಾರಿಗಳ ಮುಖವ ನೋಡಲಾಗದು. । ೧೨ । [೫೩೦]

೨೪೫
ಲಿಂಗದ್ರೋ[೧]ಹ[೧]ದವನ ಮುಖವ ನೋಡಲಾಗದು.
ಮತ್ತೆ ನೋಡಬಹುದು, ಏಕೆ? ಮುಂದೆ ಗುರುವಿಪ್ಪ ಕಾರಣ.
ಗುರುವಿನಲ್ಲಿ ದ್ರೋ[೧]ಹ[೧]ದವನ ಮುಖವ ನೋಡಲಾಗದು,
ನೋಡಬಹುದು, ಏಕೆ? ಮುಂದೆ ಜಂಗಮವಿಪ್ಪ ಕಾರಣ.
ಜಂಗಮದಲ್ಲಿ ದ್ರೋ[೧]ಹ[೧]ದವನ ಮುಖವ ನೋಡಲಾಗದು,
ನೋಡಬಹುದು, ಏಕೆ? ಮುಂದೆ ಪ್ರಸಾದವಿಪ್ಪ ಕಾರಣ.
ಪ್ರಸಾದದಲ್ಲಿ ದ್ರೋ[೧]ಹ[೧]ದವನ ಮುಖವ ನೋಡಲಾಗದು,
[೨]ಮತ್ತೆ ನೋಡಬಹುದು ಪ್ರಸಾದದಿಂದ ಪರವಿಲ್ಲವಾಗಿ[೨]
ಕೂಡಲ ಚೆನ್ನಸಂಗಮದೇವಾ. । ೧೩ ।

೨೪೬
ಸಿರಿವಂತನೆಂದು ಅಡಿಗಡಿಗೆ ಕೊಂಬುದು ಉಪಜೀವಿತ ಪ್ರಸಾದ,
ಬಡವನೆಂದು [೩]ಮಱೆ[೩]ಮಗ್ಗುಲಲ್ಲಿ ಕೊಂಬುದು ತುಡುಗುಣಿ ಪ್ರಸಾದ.
ಭೀತಿಯಿಲ್ಲದೆ ಸೆಳೆದುಕೊಂಬುದು ದಳದುಳಿ ಪ್ರಸಾದ,
ಇಕ್ಕುವಾತನ ಮನದಲ್ಲಿ ಅಳುಕು ಜುಳುಕಿಲ್ಲದೆ
ಕೊಂಬಾತ ಮನದಲ್ಲಿ ಗುಡಿಗಟ್ಟಿ ಕೊಂಬುದು ಸ್ವಯಪ್ರಸಾದ,
ಇದು ಕಾರಣ ಕೂಡಲ ಚೆನ್ನಸಂಗಮದೇವಾ
ನಿಮ್ಮ ಪ್ರಸಾದಿಗಳಪೂರ್ವ. । ೧೪ । [೫೫೯]

೧-೧ ಹಾ (ಮೂ), ೨-೨ x(ಮೂ), ೩-೩ ಮರೆಯ ಮರೆಯ (ಮೂ)

೨೪೭

ಪ್ರಸಾದ ಪ್ರಸಾದವೆಂದು ಹೆಸರಿಟ್ಟು ನುಡಿವವರಿಗೆ ಪ್ರಸಾದವೆಲ್ಲಿಯದೋ?
ಮನಮುಟ್ಟಿ ಕೊಂಡುದು ಪ್ರಸಾದವಲ್ಲ, ತನುಮುಟ್ಟಿ ಕೊಂಡುದು ಪ್ರಸಾದವಲ್ಲ,
[೧]ಧನಮುಟ್ಟಿ ಕೊಂಡುದು ಪ್ರಸಾದವಲ್ಲ.[೧]
ಅವು ಏಕಾಗಿ ತ್ರಿವಿಧಸಾಹಿತ್ಯದಲ್ಲಿ ಮುಟ್ಟಿ ಕೊಂಡುದು ಪ್ರಸಾದವಲ್ಲ,
ಇಕ್ಕುವವ ಶಿವದ್ರೋಹಿ, ಕೊಂಬವ ಗುರುದ್ರೋಹಿ.
ಇದು ಕಾರಣ ಕೂಡಲ ಚೆನ್ನಸಂಗಯ್ಯನ ಪ್ರಸಾದ
ಘನಕ್ಕೆ ಮಹಾಘನವ ನಾನೇನೆಂದು ಬಣ್ಣಿಸುವೆ । ।೧೫। [೫೬೦]

೨೪೮

ಪ್ರಸಾದ ಪ್ರಸಾದವೆಂದು ಹೆಸರಿಟ್ಟುಕೊಂಡುಂಬಿರಿ,
ಪ್ರಸಾದವಾವುದು? ಓಗರವಾವುದು? ಬಲ್ಲವರು ನೀವು ಹೇಳಿರೇ.
ಕೈಯಲಿಕ್ಕಿದವ ಶಿವದ್ರೋಹಿ, ಕೈಯಾಂತು ಕೊಂಡವ ಗುರುದ್ರೋಹಿ.
ಕಾಯವ ಕಳೆದ ಕಾಯಪ್ರಸಾದಿ, ಜೀವವ ಕಳೆದ ಜೀವಪ್ರಸಾದಿ,
ಪ್ರಾಣವ ಕಳೆದ ಪ್ರಾಣಪ್ರಸಾದಿ.
ಕಾಯಜೀವ ಇಂದ್ರಿಯ ವಿರೋಧಿಗಲ್ಲದೆ ಮತ್ತಾರಿಗೂ ಆಗದು.
ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣಂಗಲ್ಲದೆ
ಮತ್ತಾರಿಗೂ ಆಗದು. ।೧೬। [೬೧೨]

೨೪೯

ಲಿಂಗಸ್ಥಲ ಜಂಗಮಸ್ಥಲ ಪ್ರಸಾದಸ್ಥಲವನಜಿದೆವೆಂದರೆ ಮತ್ತಾರಿಗೂ ಆಗದು.
ಸಾಧಿಸುವ ಸಾಧಕಂಗಲ್ಲದೆ ಮತ್ತಾರಿಗೂ ಆಗದು.
ಭೇದಿಸುವ ಭೇದಕಂಗಲ್ಲದೆ ಮತ್ತಾರಿಗೂ ಆಗದು.
ಪ್ರಸಾದಿಯ ಪ್ರಸಾದ ಕೂಡಲ ಚೆನ್ನಸಂಗಯ್ಯನಲ್ಲಿ
ಬಸವಣ್ಣಂಗಲ್ಲದೆ ಮತ್ತಾರಿಗೂ ಆಗದು. ।೧೭। [೬೨೧]

೧–೧ x (ಮೂ).

೨೫೦
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವೆಂತುಟೆಂದು ಹೇಳಿಹೆ ಕೇಳಿರೇ:
ಶುದ್ಧ ಪ್ರಸಾದವು ಗುರುವಿನಲ್ಲಿ, ಸಿದ್ಧಪ್ರಸಾದವು ಲಿಂಗದಲ್ಲಿ,
ಪ್ರಸಿದ್ಧ ಪ್ರಸಾದವು ಜಂಗಮದಲ್ಲಿ.
ಇದರೊಳಗಾವುದು ಘನವೆಂಬೆನಾವುದು ಕಿಱಿದೆಂಬೆ?
ಘನಕ್ಕೆ ಘನವಾದ [1]ಮಹಾಘನ[1] ಪ್ರಸಾದವು.
ಕೂಡಲ ಚೆನ್ನಸಂಗನಲ್ಲಿ ತ್ರಿವಿಧಪ್ರಸಾದವನು
ಸುಯಿಧಾನದಲ್ಲಿ ಕೊಳಬಲ್ಲನಯ್ಯಾ ಬಸವಣ್ಣನು. । ೧೮ । [೬೧೮]

೨೫೧
ಧನವ ಮಱೆದು ಮಾಡಿದರೆ ಜಂಗಮರೂಪವಾಗಲೇ ಬೇಕು.
ಮನವ ಮಱೆದು ಮಾಡಿದರೆ ಲಿಂಗರೂಪವಾಗಲೇ ಬೇಕು.
ತನುವ ಮಱೆದು ಮಾಡಿದರೆ ಪ್ರಸಾದರೂಪವಾಗಲೇ ಬೇಕು.
ಇಂತಿವ ಮಱೆದು ಮಾಡಿದರೆ ಬಯಲಲೊದಗಿದ ಘಟ್ಟಿಯಂತಿರಬೇಕು.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಬಸವಣ್ಣಂಗಲ್ಲದೆ ಇಲ್ಲ ನೋಡಯ್ಯಾ. । ೧೯ । [೫೬೫]

೨೫೨
ಗುರುಸಾಧಕರ ಕಾಣೆನಯ್ಯ, ಬಲ್ಲೆನೆಂಬರು ಹೊಲಬುಗೆಟ್ಟರು.
ಲಿಂಗಸಾಧಕರ ಕಾಣೆನಯ್ಯ, ಬಲ್ಲೆನೆಂಬರು ಹೊಲಬುಗೆಟ್ಟರು.
ಜಂಗಮಸಾಧಕರ ಕಾಣೆನಯ್ಯ, ಬಲ್ಲೆನೆಂಬರು ಹೊಲಬುಗೆಟ್ಟರು.
ಪಾದೋದಕ ಪ್ರಸಾದ ಉಭಯದಲ್ಲಿ [2]ನಿಂದ[2] ಕಾರಣ
ಕೂಡಲ ಚೆನ್ನಸಂಗಯ್ಯಾ,
ಈ ವಚನಸಾಧಕರ ಕಂಡು ಮನ ನಾಚಿತ್ತು. । ೨೦ । [೫೮೨]

೨೫೩
ಲಿಂಗಕ್ಕೆ ಕೊಟ್ಟು ಕೊಂಡರೆ ಪ್ರಸಾದಿ.
ಜಂಗಮವಾರೋಗಣೆಯ ಮಾಡಿ ಮಿಕ್ಕುದು ಪ್ರಸಾದ,

೧-೧ ಪ್ರಸಿದ್ಧ (ಮೂ). ೨-೨ ನಿಂದು ಇದು (ಮೂ)

ಇದೇ ಪ್ರಸಾದದಾದಿ ಕಂಡಯ್ಯಾ.
ಮುನ್ನಾದಿಯ ಪ್ರಸಾದವ ವೇದಿಸಬಲ್ಲರೆ ಇದೆ ಕಂಡಯ್ಯಾ,
ಲಿಂಗಕ್ಕೆ ಕೊಡದೆ, ಜಂಗಮಕ್ಕೆ ನೀಡದೆ ಕೊಂಡರೆ ಹುಳುಕುಂಡ[೧]ದ[೧]ಲಿಕ್ಕುವ
ನಮ್ಮ ಕೂಡಲ ಚೆನ್ನಸಂಗಮದೇವ. । ೨೧ । [೨೯೯]

೨೫೪

'ಆಯತ ಸ್ವಾಯತ ಲಿಂಗಾನುಗ್ರಹ ಕಾರಣ'ವಿಂತೆಂದುದು ಧ್ಯಾನ.
ಶಿವ ಶಿವಾ ! ಲಿಂಗಜಂಗಮಪ್ರಸಾದ ತೃಪ್ತಿ,
[೨]ಬಹು[೨]ಲಿಂಗಪ್ರಸಾದವೆ [೩]ಕಿ[೩]ಲ್ಬಿಷ.
ಇಂತೆಂದು[೪]ದು[೪] ಕೂಡಲ ಚೆನ್ನಸಂಗನ ವಚನ. । ೨೨ । [೫೯೬]

೨೫೫

ಲಿಂಗಸಾರಾಯಸುಖಸಂಗಿಗಳನುಭಾವ
ಲಿಂಗವಂತಂಗಲ್ಲದೆ ಕಾಣಬಾರದು.
ಏಕೋಲಿಂಗಪ್ರತಿಗ್ರಾಹಕನಾದರೆ
ಅನ್ಯಲಿಂಗವ ಮುಟ್ಟಲಾಗದು.
ದೃಷ್ಟಲಿಂಗವಲ್ಲದೆ ಬಹುಲಿಂಗದ ಅರ್ಪಿತ ಕಿಲ್ಬಿಷವೆಂದುದು.
ಅನರ್ಪಿತವ ಮುಟ್ಟಲಾಗದೆಂಬೆನು, ಲಿಂಗಸಜ್ಜನಿಕ[೫]ರಿಗೆ.[೫]
ಅನುಭಾವದಿಂದಲ್ಲದೆ ಲಿಂಗ ಜಂಗಮ ಪ್ರಸಾದವಱಿಯ[೬]ಬಾರದು.[೬]
ಇದು ಕಾರಣ ಕೂಡಲಚೆನ್ನಸಂಗಯ್ಯಾ
ನಿಮ್ಮ ಶರಣಸಂಬಂಧವಪೂರ್ವ. । ೨೩ ।* [೫೯೫]

೨೫೬

ಲಿಂಗವನಱಿದೆ[೭]ನೆಂದರೆ[೭] ಮನವಿಲ್ಲದಿರಬೇಕು.
ಜಂಗಮವನಱಿದೆನೆಂದರೆ ಧನವಿಲ್ಲದಿರಬೇಕು.
ಪ್ರಸಾದವನಱಿದೆನೆಂದರೆ ರುಚಿಯಿಲ್ಲದಿರಬೇಕು.
ತ್ರಿವಿಧವನಱಿದೆನೆಂದರೆ ತಾನಿಲ್ಲದಿರಬೇಕು
ಕೂಡಲ ಚೆನ್ನಸಂಗಮದೇವಾ. । ೨೪ । [೬೨೨]

೧-೧ x(ಮೂ), ೨-೨ ಬಯಲು (ಮೂ), ೩-೩x (ಮೂ), ೪-೪x(ಮೂ). ೫-೫ ರಪ್ಪೆಂದು (ಮೂ), ೬-೬ ದು (ಮೂ). * ೨೮ನೆಯ ವಚನದೊಂದಿಗೆ ಈ ವಚನ ಹೋಲಿಸಿರಿ (ಸಂ). ೭-೭ ವೆಂದು ಬಂದರೆ (ಮೂ).

೨೫೭

ಪುಷ್ಪ ಅಗ್ಘವಣಿ ಓಗರ ಅಡಿಗಡಿಗೆ ಮೀಸಲಾಗಿರಬೇಕೆಂಬುದು ಶೀಲವೆ?
ಪಂಚೇಂದ್ರಿಯ ಸಪ್ತಧಾತು ಅರಿಷಡ್ವರ್ಗವನತಿಗಳೆಯದನ್ನಕ್ಕ?
ಲಿಂಗಜಂಗಮಪ್ರಸಾದದಲ್ಲಿ ನಿಸ್ಸೂತಕವಾದಡೆ
ಆತನೇ ಪ್ರಸಾದಿ, ಕೂಡಲ ಚೆನ್ನಸಂಗಮದೇವಾ. । ೨೫ । [೫೭೭]

೨೫೮

ರೂಹಿಲ್ಲದ ನೆಳಲಿಂಗೆ ಮಳಲ ಬೊಂಬೆಯ ಮಾಡಿ,
ನಾದಬಿಂದುವಿನಲ್ಲಿ ಪುದಿಸಿ, ಆರಿಗೂ ಮೈದೋಱದೆ
ಏಡಿಸಿ ಕಾಡಿತ್ತು ಶಿವನ ಮಾಯೆ.
ಕಾಯದ ಕಳವಳಕ್ಕೆ ಮುಂದೆ ರೂಪಾಗಿ ತೋಱಿತ್ತಲ್ಲದೆ
ಅದು ತನ್ನ ಗುಣವಲ್ಲದೆ ಮುಂದೆ ತೋಱಿತ್ತಿಲ್ಲ.
ಅಂಗಭೋಗವನೆ ಕುಂದಿಸಿ ಪ್ರಸಾದವನೆ ರಚಿಸಿಹೆನೆಂಬ
ಲಿಂಗವಂತರೆಲ್ಲರೂ ಅಱಿವೆಗೊಳಗಾಗಿ ಹೋದರು.
ಅಂಗಭೋಗವೆ ಲಿಂಗಭೋಗ, ಲಿಂಗಭೋಗವೆ [೧]ಅರ್ಪಿತ[೧]
ಸ್ವಕೀಯಃ ಪಾಕಸಂಬಂಧೀ ಭೋಗೋ ಜಂಗಮವರ್ಜಿತಃ ।
ನಾಸ್ತಿ ಲಿಂಗಾರ್ಚನಂ ಚೈವ ಪ್ರಸಾದೋ ನಿಷ್ಫಲೋ ಭವೇತ್ ॥
ಲಿಂಗಕ್ಕೆಂದು ಬಂದ ರುಚಿ ಜಂಗಮಕ್ಕೆ ಬಾರದಿದ್ದಡೆ,
ಜಂಗಮಕ್ಕೆಂದು ಬಂದ ರುಚಿ ಲಿಂಗಕ್ಕೆ ಬಾರದಿದ್ದಡೆ,
ಇದು ಕಾರಣ ಕೂಡಲ ಚೆನ್ನಸಂಗಯ್ಯ
ಪಾಕಸಂಬಂಧಿಗೆ ಪ್ರಸಾದ ದೂರ. । ೨೬ । [೭೨೮]

೨೫೯

ಮುಂದುಗಾಣದ ಮಾನವರು ಮತ್ತೊಂದನಱಿಯದೆ ಕೆಟ್ಟರು.
ಲಿಂಗವ ಪೂಜಿಸಿ, ಜಂಗಮವ ವೇಧಿಸಿ,
ಪ್ರಸಾದದ ಪರಿಣಾಮವನಱಿಯದೆ ಕೆಟ್ಟು ಹೋದರಯ್ಯಾ
ಕೂಡಲ ಚೆನ್ನಸಂಗಮದೇವಾ. । ೨೭ । [೩೯೧]

೧-೧ ಅನರ್ಪಿತ (ಮೂ).

೨೬೦
ಪಾದೋದಕ ಪ್ರಸಾದ ನಿರ್ಣಯ ಅನುಭವಿಗಲ್ಲದೆ ಕಾಣಬಾರದು.
ಏಕೋಲಿಂಗ ಪ್ರತಿಗ್ರಾಹಕನಾಗಿ ಅನ್ಯಲಿಂಗವ ಮುಟ್ಟಲಾಗದು.
ಪ್ರಾಣಲಿಂಗಪ್ರಸಾದವಲ್ಲದೆ ಬಹುಲಿಂಗಪ್ರಸಾದ ಕಿಲ್ಬಿಷವೆಂದುದು [೧]ಗುರುವಚನ,[೧]
ಅನರ್ಪಿತವ ಮುಟ್ಟಲಾಗದಿದೆಂತೋ ಶರಣ ಸಜ್ಜನಿಕಂಗೆ.
ಲಿಂಗ ಜಂಗಮ ಪ್ರಸಾದನಿರ್ಣಯವ ಲಿಂಗ ಸಜ್ಜನಿಕನೆ ಬಲ್ಲನು.
ಕೂಡಲ ಚೆನ್ನಸಂಗಯ್ಯಾ, ನಿಮ್ಮ ಶರಣ ಸಂಬಂಧವಪೂರ್ವ. ।೨೮।*

೨೬೧
ಶ್ರೋತ್ರೋತ್ಪಾತವ ಕಾಯಬೇಕು ಶರಣಂಗೆ,
ನೇತ್ರೋತ್ಪಾತವ ಕಾಯಬೇಕು ಶರಣಂಗೆ,
ಘ್ರಾಣೋತ್ಪಾತವ ಕಾಯಬೇಕು ಶರಣಂಗೆ,
ಜಿಹ್ವೋತ್ಪಾತವ ಕಾಯಬೇಕು ಶರಣಂಗೆ,
ಸ್ಪರ್ಶೋತ್ಪಾತವ ಕಾಯಬೇಕು ಶರಣಂಗೆ,
ಎಲ್ಲ ಉತ್ಪಾತವ ಕಾದಲ್ಲದೆ
ಕೂಡಲ ಚೆನ್ನಸಂಗಯ್ಯನಲ್ಲಿ ಪ್ರಸಾದನಿಷ್ಠೆ ಸೂಜಿಯೆ? ।೨೯। [೭೮೦]

೨೬೨
ತನುಮುಟ್ಟದ ಮುನ್ನ ಲಿಂಗಾರ್ಪಿತವ ಮಾಡಬೇಕು,
ಮನಮುಟ್ಟದ ಮುನ್ನ ಲಿಂಗಾರ್ಪಿತವ ಮಾಡಬೇಕು,
ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ಪರುಶನ ಮುಟ್ಟದ
ಮುನ್ನ ಲಿಂಗಾರ್ಪಿತವ ಮಾಡಬೇಕು,
ಕೂಡಲ ಚೆನ್ನಸಂಗನಲ್ಲಿ ಪ್ರಸಾದಿಯಾದಡೆ. ।೩೦। [೭೨೯]

೨೬೩
ಕಂಗಳ ನೋಟ ಲಿಂಗಕ್ಕೆ ಮನಮುಟ್ಟಿದಾರೋಗಣೆಯೆಂಬುದೇನೊ?
ಸಂಕಲ್ಪ ವಿಕಲ್ಪವಿರಹಿತ ನಿಮ್ಮ ಶರಣಂಗೆ ಸೀಮೆಯೆಂಬುದೇನೊ?

೧-೧ x (ಮೂ). * ೨೩ನೆಯ ವಚನದೊಂದಿಗೆ ಈ ವಚನ ಹೋಲಿಸಿರಿ (ಸಂ).

ಕಾಯದ ಕೈಯಲು ಲಿಂಗಾರ್ಪಿತವದು ಕಿಲ್ಬಿಷ
ಕೂಡಲ ಚೆನ್ನಸಂಗಮದೇವಾ. । ೩೧ । [೫೯೪]

೨೬೪
ಅರಸು ಮನೆಯೊಳಗಿದ್ದಲ್ಲಿ ಬಾಗಿಲಿಗೆ ಪದಾರ್ಥವ ತಂದು
ಅರ್ಪಿತವೆಂದರೆ ಅರ್ಪಿತವಹುದೆ?
ಅವಸರಕ್ಕೆ ಬಂದ ಪದಾರ್ಥವ ಅರ್ಪಿತವ ಮಾಡಿ,
ಅನವಸರಕ್ಕೆ ಬಂದ ಪದಾರ್ಥವನೋಸರಿಸಿದರೆ ಆತ ಲಿಂಗಪ್ರಸಾದಿಯಲ್ಲ.
ತನ್ನ ಲಿಂಗಕ್ಕೆ ಬಾರದ ರುಚಿ ಕೃತಕಿಲ್ಬಿಷವೆಂದುದು
ಕೂಡಲ ಚೆನ್ನಸಂಗನ ವಚನ. । ೩೨ । [೫೮೯]

೨೬೫
ಪದವು ಪದಾರ್ಥವೆಂ[೧]ಬರು,[೧]
ಪದವಾವುದೆಂದಜಿಯರು, ಪದಾರ್ಥವಾವುದೆಂದಜಿಯರು,
ಪದವೇ ಲಿಂಗ, ಪದಾರ್ಥವೇ ಭಕ್ತ.
[೨]ಇದನವಜಿದು ಪದಾರ್ಥವ[೨] ತಂದು ಲಿಂಗಾರ್ಪಿತವ ಮಾಡಬಲ್ಲರೆ
ಕೂಡಿಕೊಂಡಿಪ್ಪ ನಮ್ಮ ಕೂಡಲ ಚೆನ್ನಸಂಗಮದೇವ. । ೩೩ । [೭೩೦]

೨೬೬
ಲೋಕದ ಹೊಲೆ ಉದಕದಿಂದ ಹೋಹುದೆಂಬಿರಿ,
ಉದಕದ ಹೊಲೆ ಏತರಿಂದ ಹೋಹುದು?
ವಾಕು ಪ್ರಮಾಣಿನಿಂದ ಅಗ್ಘಣಿಯೆನಿಸಿತ್ತು.
ಸಾಹಿತ್ಯವಜಿದು ಲಿಂಗಕ್ಕೆ ಓಗರವಾಯಿತ್ತು
ಕೂಡಲ ಚೆನ್ನಸಂಗಮದೇವಾ. । ೩೪ । [೫೯೭]

೨೬೭
ಲಿಂಗಪ್ರಸಾದವನುಂಬರೆಂಜಲೆಂಬರು, ಲಿಂಗವನೆಂತೊಲಿಸುವರು?
ತನುಭಾವವೆಂಜಲಾದರೇನು, ಪ್ರಸಾದವನೆಂಜಲೆಂತೆನಬಹುದು?

೧–೧ ಬರಿ (ಮೂ), ೨–೨ ಇದರದರ್ಪವ (ಮೂ).

ಜನ್ಮವುಂಟೆಂಬರು ಪಾವನವಿಡಿದು, ಮುನ್ನೊಂದು ಮೃಗದ ಮುಖದಲ್ಲಿ !
ಅನ್ಯರಿಗುಂಟೆ ಶಿವಪದವು? ಮನ್ನಿಸಲೇಕೆವೊಲ್ಲೆನಯ್ಯಾ.
ಶ್ವಪಚೋಽಪಿ ಶಿವಭಕ್ತಾನಾಂ ಲಿಂಗಾರ್ಚನಪರಂ ಪದಂ ।
ಅನ್ಯದೇವಂ ತುಂ ಜಿಹ್ವಾಗ್ರೇ ಪರಜನ್ಮವಿಮೋಕ್ಷಣಂ ॥
ಪರಬ್ರಹ್ಮ ವೇದಶಾಸ್ತ್ರೇಭ್ಯೋ ಶಿವಶಾಸ್ತ್ರೇಣ ಶಾಂಕರಿ ।
ಎಂದುದಾಗಿ, ಕರ್ಮಾದಿಗುಣಂಗಳಂ
ಕಳೆವ ಸಾಮರ್ಥ್ಯವೆನ್ನ ಲಿಂಗಕ್ಕಲ್ಲದೆ ಬೇಱುಂಟೆ?
ಇಂತೆಂದುದು ದೃಷ್ಟ, ಕೂಡಲ ಚೆನ್ನಸಂಗನ ಶರಣರಿಗಲ್ಲದಿಲ್ಲ. । ೩೫ । [೫೮೮]

೨೬೮
ಲಿಂಗದ ಪೂರ್ವಾಶ್ರಯವ ಕಳೆಯ ಬಲ್ಲಾತನೆ ಭಕ್ತ,
ಗುರುವಿನ ಪೂರ್ವಾಶ್ರಯವ ಕಳೆಯಬಲ್ಲಾತನೆ ಶಿಷ್ಯ,
ಪ್ರಸಾದದ ಪೂರ್ವಾಶ್ರಯವ ಕಳೆಯಬಲ್ಲಾತನೆ ಪ್ರಸಾದಿ,
ಇಂತೀ ತ್ರಿವಿಧದ ಪೂರ್ವಾಶ್ರಯವ ಕಳೆಯಬಲ್ಲರೆ
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯವು. । ೩೬ । [೭೭೬]

೨೬೯
ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ.
ಆವ ಪದಾರ್ಥವಾದರೇನು?
ತನ್ನಿದ್ದೆಡೆಗೆ ಬಂದುದ ಲಿಂಗಾರ್ಪಿತ ಮಾಡಿಕೊಂಬುದು.
ಕೂಡಲ ಚೆನ್ನಸಂಗನನೊಲಿ[೧]ಸ[೧] ಬಂದ
ಪ್ರಸಾದಕಾಯವ ಕೆಡಿಸಲಾಗದು. । ೩೭ ।[೨]

೨೭೦
ನಡೆವ ನುಡಿವ ಚೈತನ್ಯವುಳ್ಳನಕ್ಕ
ಒಡಲ ಗುಣಂಗಳಾರಿಗೂ ಮಾಣವು.
ನೋಡುವ ನಯನ ಕೇಳುವ ಶ್ರೋತ್ರ
ವಾಸಿಸುವ ಘ್ರಾಣ[೩]ತಾಗಿತೆನಬೇಡ.

೧-೧ ಸಿ (ಮೂ), ೨ ಈ ವಚನ ಬಸವಣ್ಣನವರ ಮುದ್ರಿಕೆಯಲ್ಲಿಯೂ ಸಿಗುತ್ತದೆ (ಸಂ), ೩+ ಗಂಧ (ಮೂ)

ನೋಡುತ ನಡೆವುತ ಕೇಳುತ ಲಿಂಗಾರ್ಪಿತವ ಮಾಡಿ
ಲಿಂಗಭೋಗೋಪಭೋಗಿ[೧]ಯಾದ[೧] ಪ್ರಸಾದಿಗಳಿಗೆ
ಸರ್ವಾಂಗಶುದ್ಧವೆಂ[೨]ಬು[೨]ದಿದೆಯಯ್ಯಾ
ಕಾಯತ್ರಯಂಗಳ ಜೀವತ್ರಯಂಗಳ ಭಾವತ್ರಯಂಗಳನೊಂದು ಮಾಡಿ
ಸುಖ-ದುಃಖ ಗುಣ-ನಿರ್ಗುಣಂಗಳ ಉಭಯಲಿಂಗದಲ್ಲಿ ಏಕವ ಮಾಡಿ
ಅಹುದಲ್ಲ ಬೇಕುಬೇಡ ಸಂಶಯವ ಕಳೆದು
ಕೂಡಲ ಚೆನ್ನಸಂಗನ ಆದಿಯ ಪುರಾತರು
ಮಾಡಿದ [೩]ಪಥ[೩]ವಿದು. । ೩೮ । [೭೭೫]

ಪ್ರಸಾದಿಯ ಪ್ರಸಾದಿ[೪]ಸ್ಥಲ:[೪]

೨೭೧
ಕಾಮಿಸಿ ಬಂದ ಪದಾರ್ಥದ ಪೂರ್ವಾಶ್ರಯವ ಕಳೆದು,
ತನ್ನ ಕಾಯವ ಮುಟ್ಟಲೀಯದೆ ಲಿಂಗಾರ್ಪಿತವ ಮಾಡುವಲ್ಲಿ ಪ್ರಸಾದಿ.
ಕಲ್ಪಿಸಿ ಬಂದ ಪದಾರ್ಥದ ಪೂರ್ವಾಶ್ರಯವ ಕಳೆದು,
ತನ್ನ ಮುಟ್ಟಲೀಯದೆ ಲಿಂಗಾರ್ಪಿತವ ಮಾಡುವಲ್ಲಿ ಪ್ರಸಾದಿ.
ಅಪ್ಪಿನ ಸೋಂಕಿನ ಸುಖದ ಸಂಯೋಗದ ಪೂರ್ವಾಶ್ರಯವ ಕಳೆದು,
ತನ್ನ ತಟ್ಟದೆ ಮುಟ್ಟದೆ ಕೊಟ್ಟು ಕೊಳಬಲ್ಲನಾಗಿ ಪ್ರಸಾದಿ,
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದಿ. । ೩೯ । [೫೬೨]

೨೭೨
ಅಚ್ಚಪ್ರಸಾದವೆಂದು ಹುಸಿದು, ತನ್ನ ಮನದ ಹವಣಿಗೆ ಗಡಣಿಸಿಕೊಂಬರು:
ತನುಮನ ಮುಟ್ಟಿದ ಓಗರ ಲಿಂಗಾರ್ಪಿತಕ್ಕೆ ಸಲ್ಲದು.
ಅನರ್ಪಿತವನುಂಡು ಅಚ್ಚಪ್ರಸಾದಿಗಳೆಂಬವರನು
ಲಿಂಗದಲ್ಲಿ ಸಮ್ಯಕ್ ಶರಣರು ಮೆಚ್ಚರು.
ಬಂದುದ ಕೂಡಲ ಚೆನ್ನಸಂಗಂಗರ್ಪಿಸಿ
ಕೊಳಬಲ್ಲಡಾತನೆ ಅಚ್ಚಪ್ರಸಾದಿ. । ೪೦ । [೭೩೧]

೧-೧ x (ಮೂ), ೨-೨ ದು (ಮೂ), ೩-೩ ಪದ (ಮೂ), ೪-೪ x (ಮೂ).

೨೭೩
ಗುಪ್ತದಲ್ಲಿ ಕೊಂಬುದು ಗೋಮಾಂಸವಯ್ಯಾ,
ಪ್ರಕಟದಲ್ಲಿ ಕೊಂಬುದು ಅಪ್ರಸಾದವಯ್ಯಾ,
ಗುಪ್ತವನೂ ಪ್ರಕಟವನೂ ಕಳೆದು
ಕೊಟ್ಟುಕೊಳಬಲ್ಲರೆ ನೆಟ್ಟನೆ ಪ್ರಸಾದಿ ಕೂಡಲ ಚೆನ್ನಸಂಗಮದೇವಾ. । ೪೧ ।

೨೭೪
ಪ್ರಕಟದಿಂದ ಕೊಂಬುದು ಪ್ರಸಾದವಲ್ಲ,
ಗುಪ್ತದಿಂದ ಕೊಂಬುದು ಪ್ರಸಾದವಲ್ಲ,
ಪ್ರಕಟದಂತುಟೆ ಪ್ರಸಾದ? ಗುಪ್ತದಂತುಟೆ ಪ್ರಸಾದ?
ಪ್ರಸಾದದಂತುವನೇನೆಂದು ಹೇಳುವೆನಯ್ಯಾ?
ಭವಭಾರಿ ಜೀವಿಗಳೊಡನೆ ಪ್ರಸಾದದಂತುವನೇನೆಂದುಪಮಿಸುವೆನು?
ನಾರೂಢಸ್ಯ ಪ್ರಸಾದೋಹಿ ನ ಗುಪ್ತಸ್ಯ ಪ್ರಸಾದಕಂ ।
ಗೋಪ್ಯಾರೂಢೋಭಯಂ ನಾಸ್ತಿ ಮಹಾಪ್ರಸಾದಸಂಗಿನಃ ॥
ಎಂದುದಾಗಿ, ಪ್ರಕಟ ಗುಪ್ತವ ಕಳೆದು ನೆಟ್ಟನೆ ಪ್ರಸಾದವ ಕೊಳಬಲ್ಲ
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದಿ. । ೪೨ । [೭೩೨]

೨೭೫
ಅರ್ಪಿತ ಅನರ್ಪಿತವೆಂಬರು ಅರ್ಪಿತವ ಮಾಡುವ ಪರಿಯೆಂತಯ್ಯಾ?
ತನು ಮುಟ್ಟಿ ಕೊಟ್ಟುದು ಲಿಂಗಾರ್ಪಿತವಲ್ಲ,
ಮನ ಮುಟ್ಟಿ ಕೊಟ್ಟುದು ಲಿಂಗಾರ್ಪಿತವಲ್ಲ,
ಅರ್ಪಿತದ ಕ್ರಮವ ಕೂಡಲ ಚೆನ್ನಸಂಗಾ ನಿಮ್ಮ ಶರಣ ಬಲ್ಲ. । ೪೩ । [೫೯೮]

೨೭೬
ಸಾರಾಯ ಪದಾರ್ಥವನಾರಯ್ಯ ¹ಬೇಕೆಂದು¹ ಶರಣ ಮರ್ತ್ಯಕ್ಕೆ ಬಂದು,
ತನ್ನ ಇಪ್ಪತ್ತೈದಿಂದ್ರಿಯಗಳ ಭಕ್ತರ ಮಾಡಿ,
ಮೆಲ್ಲ ಮೆಲ್ಲನೆ ಅವಱ ಪೂರ್ವಾಶ್ರಯವ ಕಳೆದು

೧-೧ ಬೆಂದು (ಮೂ)

ಕಲ್ಪಿತವಿಲ್ಲದೆ ಅರ್ಪಿತವ ಮಾಡಲು,
ಇಂದ್ರಿಯಂಗಳು ತಮ್ಮ ತಮ್ಮ ಮುಖದಲ್ಲಿ ಗ್ರಹಿಸಲಮ್ಮದೆ
ಕೂಡಲ ಚೆನ್ನಸಂಗಗೆ ಬೇಕೆಂದು ಹಿಡಿದು ಕೊಂಡೈದವೆ. । ೪೪ । [೬೨೬]

೨೭೭

ಭಾವದ ಕೊನೆಯ ಮೊನೆಯಲಿ ದೃಷ್ಟಿಯ ಸಂಧಿಸಿ,
ಪದಾರ್ಥದ ಪೂರ್ವಾಶ್ರಯವ ಕಳೆದನು ಶರಣನು, ಮನ ಮುಟ್ಟಲೀಯದೆ,
ಸ್ವಾಮಿಭೃತ್ಯಸಂಬಂಧಕ್ಕೆ ಗುಣವಲ್ಲೆಂ[೧]ದ[೧] ಶರಣನು, ಮನ ಮುಟ್ಟಲೀಯದೆ.
ಭಕ್ತನ ಕೈಮುಟ್ಟಿ ಪಾವನವೆಂಬ ಸಂದಣಿಯಲ್ಲಿ ಹುಗದು; ಮನ ಮುಟ್ಟಲೀಯದೆ.
ಇದು ಕಾರಣ ಕೂಡಲ ಚೆನ್ನಸಂಗನ ಬಸವಣ್ಣನ
ಪ್ರಸಾದದಲ್ಲಿ ಸುಖಿಯಾದೆ. । ೪೫ । [೬೭೨]

೨೭೮

ರೂಪು-ಕುರೂಪು, ಗಂಧ-ದುರ್ಗಂಧ,
ರಸ-ನಿರಸ, ಪರುಶ-ಅಪರುಶ, ಶಬ್ದ-ನಿಃಶಬ್ದ,
ಲಿಂಗಮುಖಕ್ಕೆ ಬಾರದದು ಕಿಲ್ಬಿಷವಯ್ಯಾ.
ಕೂಡಲ ಚೆನ್ನಸಂಗಾ ನಿಮ್ಮತ್ತ ಮುಂತಾದಲ್ಲದೆ ಎನ್ನತ್ತ ಮುಂತಾಗದು. । ೪೬ ।

೨೭೯

ಲಿಂಗಕ್ಕೆಂದು ಮಾಡುವೆನು, ಲಿಂಗಕ್ಕೆಂದು ನೀಡುವೆನು ನೋಡಯ್ಯಾ.
ಲಿಂಗಕ್ಕೆಂದು ಭಾವಿಸುವೆನು, [೨][ಅ][೨]ಂಗಗುಣಂಗಳನಱಿಯೆನಾಗಿ.
ಲಿಂಗಕ್ಕೆಂದು ಕಾಮಿಸುವೆನು, ನಿಃಕಾಮಿಯಾಗಿ.
ಲಿಂಗಕ್ಕೆಂದು ತಹೆನಲ್ಲದೆ,
ಅಂಗಕ್ಕೆಂದು ಬಯಸಿದರೆ ಲಿಂಗಾರ್ಪಿತಕ್ಕೆ ಸಲ್ಲದಾಗಿ.
ಲಿಂಗಕ್ಕೆ ಕೊಟ್ಟುಕೊಂಬೆನಲ್ಲದೆ
ಅನರ್ಪಿತವನಱಿಯೆ ಕೂಡಲ ಚೆನ್ನಸಂಗಮದೇವಾ. । ೪೭ ।

೧-೧ ದು (ಮೂ). ೨-೨ ಲಿ (ಮೂ).

೨೮೦

ಲಿಂಗಾರೋಪಿತ ಮುಖದಿಂದ ಬಂದುದು ಪಾದೋದಕ,
ಲಿಂಗಾವಧಾರಿತ ಮುಖದಿಂದ ಬಂದುದು ಲಿಂಗೋದಕ,
ಲಿಂಗಾರ್ಪಿತ ಮುಖದಿಂದ ಬಂದುದು ಪ್ರಸಾದೋದಕ,
ಪಾದೋದಕಂ ಚ ತ್ರಿವಿಧಂ ಆರೋಪ್ಯಂ ಚಾವಧಾರಿತಂ ।
ಲಿಂಗಾರ್ಪಿತ ಪ್ರಸಾದಂ ಚ ತಥಾ ಲಿಂಗೋದಕಂ ಭವೇತ್ ॥
ಇಂತು ಮಜ್ಜನ ಭೋಜನ ಅಭಿಮುಖದಿಂದ [೧]ತ್ರಿವಿಧೋದಕವನು[೧]
ಕೂಡಲ ಚೆನ್ನಸಂಗಾ ನಿಮ್ಮ ಶರಣನೇ ಬಲ್ಲ. ।೪೮। [೬೦೩

೨೮೧

ಪಾದೋದಕವಿ[೨]ಡಿ[೨]ದು ಪಾದೋದಕವನುದ್ಧರಿಸುವ ಕ್ರಮಭೇದವೇನಯ್ಯಾ?
ಲಿಂಗೋದಕವಿ[೨]ಡಿ[೨]ದು ಲಿಂಗೋದಕವನುದ್ಧರಿಸುವ ಕ್ರಮಭೇದವೇನಯ್ಯಾ?
ಪ್ರಸಾದೋದಕವಿ[೨]ಡಿ[೨]ದು ಪ್ರಸಾದೋದಕವನುದ್ಧರಿಸುವ ಕ್ರಮಭೇದವ ಭೇದಿಸಿ
ಗ್ರಹಿಸುವ ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೪೯। [೬೦೪]

ಪ್ರಸಾದಿಯ ಭಕ್ತ[೩]ಸ್ಥಲ :[೩]

೨೮೨

ರೂಪಿನ ಪೂರ್ವಾಶ್ರಯವ ಕಳೆದು
ಆಯತಕ್ಕೆ ಕೊಟ್ಟುಕೊಳಬಲ್ಲನಾಗಿ ಶುದ್ಧಪ್ರಸಾದಿ.
ರುಚಿಯ ಪೂರ್ವಾಶ್ರಯವ ಕಳೆದು
[೪]ಸ್ವಾಯತಕ್ಕೆ[೪] ಕೊಟ್ಟುಕೊಳಬಲ್ಲನಾಗಿ ಸಿದ್ಧಪ್ರಸಾದಿ,
ಈ ಉಭಯ ಕ್ರೀಯನುಭಾವವಳಿದು
ಕೂಡಲ ಚೆನ್ನಸಂಗನಲ್ಲಿ ಪ್ರಸಿದ್ಧಪ್ರಸಾದಿ. ।೫೦। [೬೧೯]

೨೮೩

ಶಿವಕ್ಷೇತ್ರದಲಾದ ಪದಾರ್ಥವ ಕಿಂಕಲದಿಂದತಿ ಪ್ರೇಮದಿಂದ
ತನುವಾ[೫][೦][೫]ಶಿಕ ಮುಟ್ಟಲೀಯದೆ ಲಿಂಗಾರ್ಪಿತವ ಮಾಡೂದು.

೧–೧ x(ಮೂ). ೨–೨ x(ಮೂ). ೩–೩ x(ಮೂ). ೪–೪ x(ಮೂ) ೫–೫ x(ಮೂ)

ಆ ಪ್ರಸಾದವ ಸತಿಸುತರಿಗೆನ್ನದೆ [೧]ಭೃತ್ಯಾಚಾರ[೧]ದಲ್ಲಿ ಗ್ರಹಿಸೂದು.
ಪ್ರಸಾದ ಬೀಸರವಾದರೆ ಭಕ್ತಿ ಸಹಜವಾಗದು,
ನಿಮಗೆಂದೆಂದೂ ದೂರ ಕೂಡಲ ಚೆನ್ನಸಂಗಮದೇವಾ. । ೫೧ । [೫೯]

೨೮೪
ಸವಿಕರದಿಂದ ಪರಿಕರದಿಂದ ರುಚಿಕರದಿಂದ ಪದಾರ್ಥಕರದಿಂದ,
ತನು ಮನ ಧನ ವಂಚನೆಯಿಲ್ಲದೆ
ಶರಣ ಮಾಡುವಲ್ಲಿ, ನೀ ನೋಡುವಲ್ಲಿ
ಕೂಡಲ ಚೆನ್ನಸಂಗಯ್ಯಾ ನಿ[೨]ಮ[೨]ಗೆ,
[೩]ಎಂದೂ[೩] ತನಗೆನ್ನದ ಕಾರಣ. । ೫೨ । [೧೦೧]

೨೮೫
ಗುರುವಿನಲ್ಲಿ ಭಕ್ತಿ, ಲಿಂಗದಲ್ಲಿ ನಿಷ್ಠೆ,
ಜಂಗಮದಲ್ಲಿ [೪]ಸುಯಿ[೪]ಧಾನ, ಅರ್ಪಿತದಲ್ಲಿ ಅವಧಾನ,
ಪ್ರಸಾದದಲ್ಲಿ ಪರಿಣಾಮ–
ಇಂತೆಂದುದು ಕೂಡಲ ಚೆನ್ನಸಂಗನ ವಚನ. । ೫೩ । [೫೮೦]

೨೮೬
ಲಿಂಗಪ್ರಸಾದಿಗಳೆಂಬರು ಬಲ್ಲರೆ ನೀವು ಹೇಳಿರೋ;
ಸಜ್ಜನ ಶುದ್ಧಶಿವಾಚರ ಸಂಪನ್ನರಪ್ಪ ಸದ್ಭಕ್ತರು
ತಮ್ಮ ಲಿಂಗಕ್ಕೆ ಗುರುಮಂತ್ರೋಪದೇಶದಿಂದ
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಿ,
ಸಕಲಪದಾರ್ಥವೆಲ್ಲವ ಪ್ರಮಾಣಿನಲ್ಲಿ ಭರಿತನಾಗಿ ಗಡಣಿಸಿ,
ತನು ಕರಗಿ ಮನ ಕರಗಿ ನಿರ್ವಾಹನಿಷ್ಪತ್ತಿಯಲಿ ಗಟ್ಟಿಗೊಂಡು,
ತಟ್ಟುವ ಮುಟ್ಟುವ ಭೇದದಲ್ಲಿಯೇ ಚಿತ್ತವಾಗಿ ಲಿಂಗಾರ್ಪಿತವ ಮಾಡೂದು,
ಆ ಪ್ರಸಾದವ ತನ್ನ ಪಂಚೇಂದ್ರಿಯ ಸಪ್ತಧಾತು ತೃಪ್ತವಾಗಿ ಭೋಗಿಸೂದು.
ಲಿಂಗಪ್ರಸಾದಗ್ರಾಹಕನ ಪರಿಯಿದು.
ಕೂಡಲ ಚೆನ್ನಸಂಗಮದೇವಾ. । ೫೪ । [೫೯೦]

೧–೧ ಭೃತ್ಯಚಾರ x (ಮೂ), ೨–೨ ವ (ಮೂ), ೩–೩ ಂದು(ಮೂ), ೪–೪ ಸಮಾ (ಮೂ).

೨೮೭

ಲಿಂಗಪ್ರಸಾದ ಸೋಂಕಿನಿಂದ ಇಱುಹೆಗೆ ರುದ್ರತ್ವವಾಯಿತ್ತು,
ಲಿಂಗಪ್ರಸಾದ ಸೋಂಕಿನಿಂದ ಬಿಬ್ಬಬಾಚಯ್ಯ ಸಯಲಿಂಗವಾದ,
ಲಿಂಗಪ್ರಸಾದ ಸೋಂಕಿನಿಂದ ವಿಷವಮೃತವ ಮಾಡಿ ಬಸವಣ್ಣ ಮೆಱೆದ.
ಲಿಂಗಪ್ರಸಾದಃ ಸಂಗ್ರಾಹ್ಯಸ್ಸರ್ವದೇವಾನುಚೇಷ್ಟಿತಃ ।
ತೇನ ಪ್ರಸಾದಮಪ್ರಾಪ್ಯ ಭವಾನ್ಮುಕ್ತಿಃ ಕಥಂ ಭವೇತ್ ॥
ಇದು ಕಾರಣ ಕೂಡಲ ಚೆನ್ನಸಂಗಯ್ಯಾ, ನಿಮ್ಮ ಪ್ರಸಾದದ ಮಹಿಮೆ
ದೇವಕ್ರಿ[೧]ಯೆಯ[೧] ಮೀಱಿದುದನೇನೆಂಬೆ. । ೫೫ । [೬೦೩]

೨೮೮

ಗುರುಪ್ರಸಾದಿಗಳಪೂರ್ವವಪೂರ್ವ, ಲಿಂಗಪ್ರಸಾದಿಗಳಪೂರ್ವವಪೂರ್ವ.
ಜಂಗಮಪ್ರಸಾದಿಗಳಪೂರ್ವವಪೂರ್ವ, ಪ್ರಸಾದಪ್ರಸಾದಿಗಳಪೂರ್ವವಪೂರ್ವ,
ಗುರುಪ್ರಸಾದಿ ಗುರುಭಕ್ತಯ್ಯ, ಲಿಂಗಪ್ರಸಾದಿ ಪ್ರಭುದೇವರು,
ಜಂಗಮಪ್ರಸಾದಿ ಬಸವಣ್ಣನು, ಪ್ರಸಾದ ಪ್ರಸಾದಿ ಬಿಬ್ಬಬಾಚಯ್ಯನು.
ಇಂತೀ ಪ್ರಸಾದಿಗಳ ಪ್ರಸಾದದಿಂದ ಬದುಕಿದೆನಯ್ಯಾ
ಕೂಡಲ ಚೆನ್ನಸಂಗಮದೇವಾ. । ೫೬ । [೬೨೪]

೨೮೯

ಶಿಷ್ಯನ ಪೂರ್ವಾಶ್ರಯವ ಗುರು[೨]ವು ಕಳೆದನೆಂಬರು,
ಆ ನುಡಿಯ ಕೇಳಲಾಗದು.
ಗುರುವಿನ ಪೂರ್ವಾಶ್ರಯವ ಶಿಷ್ಯ ಕಳೆವನಲ್ಲದೆ,
ಶಿಷ್ಯನ ಪೂರ್ವಾಶ್ರಯವ ಗುರುಕಳೆಯಲಱಿಯ.
ಶರಣನ ಪೂರ್ವಾಶ್ರಯವ ಲಿಂಗವು ಕಳೆಯಿತ್ತೆಂಬರು
[೩]ಆ ನುಡಿಯ ಕೇಳಲಾಗದು,[೩]
ಆ ಲಿಂಗದ ಪೂರ್ವಾಶ್ರಯವ ಶರಣ ಕಳೆವನಲ್ಲದೆ
ಆ ಶರಣನ ಪೂರ್ವಾಶ್ರಯವ ಲಿಂಗವು ಕಳೆಯಲಱಿಯದು.
ಭಕ್ತನ ಪೂರ್ವಾಶ್ರಯವ ಜಂಗಮ ಕಳೆಯಿತ್ತೆಂಬರು

೧-೧ ಯ (ಮೂ), ೨+ ಲಿಂಗ (ಮೂ). ೩-೩ x (ಮೂ)

[1]ಆ ನುಡಿಯ ಕೇಳಲಾಗದು,[1]
ಆ ಜಂಗಮದ ಪೂರ್ವಾಶ್ರಯವ ಭಕ್ತಕಳೆವನಲ್ಲದೆ,
ಆ ಭಕ್ತನ ಪೂರ್ವಾಶ್ರಯವ ಜಂಗಮ ಕಳೆಯಲಱಿಯ.
ಪ್ರಸಾ[2]ದಿಯ[2] ಪೂರ್ವಾಶ್ರಯವ ಪ್ರಸಾದ ಕಳೆಯಿತ್ತೆಂಬರು
[1]ಆ ನುಡಿಯ ಕೇಳಲಾದು,[1]
ಪ್ರಸಾದದ ಪೂರ್ವಾಶ್ರಯವ ಪ್ರಸಾದಿ ಕಳೆವನಲ್ಲದೆ
ಆ ಪ್ರಸಾದಿಯ ಪೂರ್ವಾಶ್ರಯವ ಪ್ರಸಾದ ಕಳೆಯಲಱಿಯದು.
ಆ ಪ್ರಸಾದದ ಪೂರ್ವಾಶ್ರಯವ ಕಳೆಯಲಿಕಾಗಿ
ಮಹಾಪ್ರಸಾದಿಯಾದ ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೫೭। [೬೨೮]

[3]ಪ್ರಸಾದಿಯ ಮಾಹೇಶ್ವರಸ್ಥಲ:[3]

೨೯೦
ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ? ಕುಲವುಂಟೆ ಜಂಗವಿದ್ದೆಡೆಯಲ್ಲಿ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ?
ಅಪವಿತ್ರದ ನುಡಿಯ ನುಡಿವ ಸೂತಕವೆ ಪಾತಕ,
ನಿಷ್ಕಳ ನಿಜೈಕ್ಯ ತ್ರಿವಿಧನಿರ್ಣಯ
ಕೂಡಲ ಚೆನ್ನಸಂಗಾ ನಿಮ್ಮ ಶರಣನು. ।೫೮।[4]

೨೯೧
ಲಿಂಗದಲ್ಲಿ ಸೂತಕವ ಹಿಡಿ[5]ವ[5]ನ್ನಕ್ಕ
ಪ್ರಾಣಲಿಂಗ ಸಂಬಂಧಿಯೆಂತೆಂಬೆ?
ಜಂಗಮದಲ್ಲಿ ಸೂಕತವ ಹಿಡಿವನ್ನಕ್ಕ
ಅನುಭಾವಿಯೆಂತೆಂಬೆ?
ಪ್ರಸಾದದಲ್ಲಿ ಸೂತಕವ ಹಿಡಿವನ್ನಕ್ಕ

೧-೧ x (ಮೂ) ೨-೨ ದದ (ಮೂ). ೩-೩ ಪ್ರಸಾದಿ ಮಹೇಶ್ವರನು (ಮೂ). ೪ ಈ ವಚನ 'ಕೂಡಲಸಂಗಾ' ಮುದ್ರಿಕೆಯಲ್ಲಿಯೂ ಸಿಗುತ್ತದೆ (ಸಂ). ೫-೫ ದ (ಮೂ).

ಸ್ವಾಮಿಭೃತ್ಯ ಸಂಬಂಧಿಯೆಂತೆಂಬೆ?
ಭಕ್ತನೆಂತೆಂಬೆ, ಪ್ರಸಾದಿಯೆಂತೆಂಬೆ,
ಕೂಡಲ ಚೆನ್ನಸಂಗನಲ್ಲಿ ಶರಣನೆಂತೆಂಬೆ? । ೫೯ । [೬೪೨]

೨೯೨

ಸತ್ಯವಿಲ್ಲದ ಭಕ್ತಿಯ ಸಾವಿರ ವರುಷ ಮಾಡಿದರೇನು?
ನಿಷ್ಠೆಯಿಲ್ಲದ ಪೂಜೆಯ[೧][ನೇಸು][೧] ಕಾಲ ಮಾಡಿದರೇನು?
ಭಾವ ನೆಲೆಗೊಳ್ಳದ ಪ್ರಸಾದವನೇಸು ಕಾಲ ಕೊಂಡಲ್ಲಿ ಫಲವೇನು?
ಅಭ್ಯಾಸವಾಯಿತ್ತಲ್ಲದೆ, ಒಬ್ಬರೊಬ್ಬರ ಕಂಡು ಮಾಡುವರಲ್ಲದೆ,
ಸಹಜವಿಲ್ಲ, ಸಮ್ಯಕವಿಲ್ಲ, ನಿಜವಿಲ್ಲ.
ಇದು ಕಾರಣ, ಇಂತಪ್ಪವರ ಭಕ್ತರೆಂದೆನಲಾಗದು,
ಕೂಡಲ ಚೆನ್ನಸಂಗಯ್ಯಾ ನೀ ಸಾಕ್ಷಿಯಾಗಿ ಛೀಯೆಂಬೆನು. । ೬೦ ।

೨೯೩

ಸಂಕರ ಸಂಕರವೆಂದು ಸಹಜವಱಿಯದೆ
ನುಡಿವ ಶ್ವಾನನ ಮಾತ ಕೇಳಲಾಗದು,
ಸಂಕರವಾವುದೆಂದಱಿಯರಾಗಿ.
ಲಿಂಗ ಸಂಕರವೋ? ಜಂಗಮ ಸಂಕರವೊ? ಪ್ರಸಾದ ಸಂಕರವೊ?
ತ್ರಿವಿಧದಲ್ಲಿ ಹೊಱಗಿಲ್ಲ.
ಆವ ಸಂಕರದಲ್ಲಿ ಆವುದಿಚ್ಛೆ? [೨]ಬಲ್ಲರೆ ನೀವು ಹೇಳಿರೇ.
ಬಱುಮಾತಿನ ಬಳಕೆಯ ಬಳಸಿ ಹಿರಿಯರಾದೆವೆಂಬ
ಮೂಗುಬ್ಬಿಗಳನೇನೆಂಬೆ, ಕೂಡಲ ಚೆನ್ನಸಂಗಮದೇವಾ. । ೬೧ ।

೨೯೪

ಲೋಕದೊಳಗಿಪ್ಪವರು, ಲೋಕದೊಳು ಸುಳಿವರು, ಲೋಕದ ಹಂಗಿಗಳು,
ಲಿಂಗದ ಶುದ್ಧಿಯ ತಾವೆತ್ತ ಬಲ್ಲರು? ಬಱಿದೆ ಹೋರುವ ಭ್ರಮಿತರು.
ಇವರ ತ್ರಿವಿಧಕ್ಕೆ ವಿರಹಿತರೆಂಬೆ ಕೂಡಲ ಚೆನ್ನಸಂಗಮದೇವಾ. । ೬೨ । [೩೫೦]

೧-೧ ನೆಷ್ಟು (ಮೂ), ೨+ ನಿ (ಮೂ).

೨೯೫

ಭಕ್ತರಾದೆವೆಂದು ಭವಿಪಾಕವನೊಲ್ಲೆವೆಂದೆಂಬರು,
ಭವಿಪಾಕವೆಂಬುದದೆಂತುಟಯ್ಯಾ?
ಅಂಗತ್ರಯಕ್ಕೆ ನೋಡಿದರೆ ಭವಿಪಾಕ,
ಲಿಂಗತ್ರಯ ನೋಟಕ್ಕೆ ಅದು ಸಲ್ಲದಾಗಿ.
ಗುರುಕಾರುಣ್ಯವುಂಟು ಭಕ್ತರೆಂದೆಂಬರು,
ಅವರಿಗಂಗತ್ರಯದ ನೋಟವಲ್ಲದೆ
ಲಿಂಗತ್ರಯದ ನೋಟವೆಲ್ಲಿಯದೊ?
ಪಂಚಭೂತಕಾಯವ ತಂದು ಭಕ್ತರೆಂದರೆ
ಪ್ರಸಾದನಾಸ್ತಿಯೆಂದುದು ಕೂಡಲ ಚೆನ್ನಸಂಗನ ವಚನ. ।೬೩। [೫೬೧]

೨೯೬

ಬಯಸಿ ಬಂದುದಂಗ ಭೋಗ, ಬಯಸದೆ ಬಂದುದು ಲಿಂಗಭೋಗ.
ಅಂಗಭೋಗ ಅನರ್ಪಿತ, ಲಿಂಗಭೋಗ ಪ್ರಸಾದ,
ಕೂಡಲ ಚೆನ್ನಸಂಗಮದೇವಾ. ।೬೪। [೫೬೮]

೨೯೭

ಕ್ರೀ[೧]ಯಿ[೧]ಲ್ಲದೆ ನಿಃಕ್ರಿಯಲ್ಲಿ ನಡೆಯ[೨]ಲೆಂತುಬಹುದು?
ಸೀಮೆಯಿಲ್ಲದೆ ನಿಸ್ಸೀಮೆಯಲ್ಲಿ ನಡೆಯಲೆಂತುಬಹುದು?
ಮೊದಲಿಲ್ಲದೆ ಲಾಭವನಱಸಬಹುದೆ?
ಹರಿವ ಮನವ ನಿಲ್ಲೆಂದು ನಿಲಿಸಿ, ಜಿಹ್ವೆಭುಂಜಕ[೩]ತನವ[೩] ಕಳೆದು
ಲಿಂಗಭೋಗೋಪಭೋಗಿಯಾದಲ್ಲದೆ ಮೆಚ್ಚುವನೆ?
ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೬೫। [೫೬೯]

೨೯೮

ಉದಯಮುಖದಲ್ಲಿ ಹುಟ್ಟಿದ ಬಿಸಿಲ ಲಿಂಗಾರ್ಪಿತವ ಮಾಡಬೇಕು.
ಅಸ್ತಮಾನಮುಖದಲ್ಲಿ ಹುಟ್ಟಿದ ನೆಳಲ ಲಿಂಗಾರ್ಪಿತವ ಮಾಡಬೇಕು.
[೪]ಅಧ ಊರ್ಧ್ವ[೪]ಮಧ್ಯವನು ಲಿಂಗಾರ್ಪಿತವ ಮಾಡಬೇಕು.
ಅಂಬರಮುಖದಲ್ಲಿ ಹುಟ್ಟಿದ ನಿರ್ಮಳೋದಕವನು ಲಿಂಗಾರ್ಪಿತವ ಮಾಡಬೇಕು.

೧–೧ ಯ (ಮೂ), ೨+ ಬಹುದೆ (ಮೂ), ೩–೩ ನ (ಮೂ), ೪–೪ ಅವರೊರ್ಧ್ವ(ಮೂ).

ಬಯಲಮುಖದಲ್ಲಿ ಹುಟ್ಟಿದ ವಾಯುವನು ಲಿಂಗಾರ್ಪಿತವ ಮಾಡಬೇಕು.
ಆವ ಪದಾರ್ಥವಾದರೇನು ಲಿಂಗಾರ್ಪಿತವ ಮಾಡಬೇಕು.
ಕೂಡಲ ಚೆನ್ನಸಂಗಯ್ಯಾ
ಲಿಂಗಾರ್ಪಿತವಲ್ಲದೆ ಕೊಂಡರೆ ಕಿಲ್ಬಿಷವೆಂದುದು. । ೬೬ । [೫೯೨]

೨೯೯

ಎಂತೆನಗೆ ತೃಷ್ಣೆ ಅಂತೆ ಲಿಂಗ ಪರುಶನ ಮಾಡುವೆ ನಾನಯ್ಯಾ,
ಎಂತೆನಗೆ ತೃಷ್ಣೆ ಅಂತೆ ಜಂಗಮ ದರುಶನ ಮಾಡುವೆ ನಾನಯ್ಯಾ,
ಎಂತೆನಗೆ ತೃಷ್ಣೆ ಅಂತೆ ಪ್ರಸಾದ ಸವಿಯ ಸವಿವೆ ನಾನಯ್ಯಾ.
ತ್ರಿವಿಧದಲ್ಲಿ ಸಂಗವಾಗಿ, ಅಂಗ[1]ಭೋ[1]ಗವ ಭಂಗಿಸಿ ಕಳೆದು
ಲೋಕ ಲೌಕಿಕವ ವಿವರಿಸಿ ಕಳೆದ
ಬಸವನ ಅಂಗ ತಾವಾದೆ[2]ವೆ[2]ಂಬ ತೃಷ್ಣೆ ಹಿರಿದು,
ಕೂಡಲ ಚೆನ್ನಸಂಗಯ್ಯಾ, ಕ್ರಮವಜೆಯೆ. । ೬೭ । [೬೪೧]

೩೦೦

ಎಡೆಗೊಡುವನಲ್ಲ, ಎಡೆಗೊಂಬವನಲ್ಲ.
ನುಡಿ ಎಡೆಯೊಳಗೆ ಮರಳುವನಲ್ಲ, ತನ್ನ ತಾನು ಮಹಾಪ್ರಸಾದಿ.
ಎಡೆಯಲ್ಲಿ ಅಂಧಃಕಾರ ರೂಪನಲ್ಲ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಇದ್ದುದನರ್ಪಿಸಬಲ್ಲನಾಗಿ ಮಹಾಪ್ರಸಾದಿ. । ೬೮ । [೬೪೭]

ಪ್ರಸಾದಿಯ ಪ್ರಾಣಲಿಂಗಿ[3]ಸ್ಥಲ:[3]

೩೦೧

ದ್ರವ್ಯರೂಪ ರೂಪಿಸುವೆ ಅರ್ಪಿತಕ್ಕೆಂದು,
ಅರ್ಪಿತ [4]ರೂಪ[4] ರೂಪಿಸುವೆ ಪ್ರಸಾದಕ್ಕೆಂದು,
ಪ್ರಸಾದ [4]ರೂಪ[4] ರೂಪಿಸುವೆ ಕಾಯಕ್ಕೆಂದು.
ಪ್ರಥಮೇ ಯೋಜಯೇ ದ್ರವ್ಯಂ ದ್ವಿತೀಯಂ ಅರ್ಪಿತಂ ತಥಾ ।
ತದರ್ಥಂತು ಶರೀರಾರ್ಥಂ ಶರೀರಂ ಪ್ರಾಣಕಾರಣಂ ॥

೧-೧ ಭಂ (ಮೂ), ೨-೨ ನೆ (ಮೂ), ೩-೩ x (ಮೂ), ೪-೪ ವ (ಮೂ).

ಎಂದುದಾಗಿ, [೧]ಕಾಯರೂಪ ರೂಪಿಸುವೆ ಪ್ರಾಣಕ್ಕೆಂದು
ಪ್ರಾಣರೂಪ ರೂಪಿಸುವೆ ಕೂಡಲ ಚೆನ್ನಸಂಗಯ್ಯಗೆಂದು.।[೧] । ೬೯ । [೭೧೫]

೩೦೨

ಕಾಲಚಕ್ರ ಕರ್ಮಚಕ್ರ ಬಿಂದುಚಕ್ರ ನಾದಚಕ್ರ– ಈ ನಾಲ್ಕು ಚಕ್ರವ
ಸಾಧಿಸಿ[೨]ಹೆ[೨]ವೆಂಬ ಹಿರಿಯರೆಲ್ಲಾ ಕೆಟ್ಟು ಹೋದರು ನೋಡಾ.
ಕಾಲಚಕ್ರವು ಘ್ರಾಣದಿಂದ ನಡೆವುದು,
ಕರ್ಮಚಕ್ರವು ನಯನದಿಂದ ನಡೆವುದು,
ನಾದಚಕ್ರ[೩]ವು[೩] ಶ್ರೋತ್ರದಿಂದ ನಡೆವುದು.
ಬಿಂದುಚಕ್ರ[೩]ವು[೩] ಜಿಹ್ವೆಯಿಂದ ನಡೆದವು.
ಕಾಲಚಕ್ರ ಗುರುಕ್ಷೇತ್ರ, ಕರ್ಮಚಕ್ರ ಲಿಂಗಕ್ಷೇತ್ರ,
ನಾದಚಕ್ರ ಜಂಗಮಕ್ಷೇತ್ರ, ಬಿಂದುಚಕ್ರ ಪ್ರಸಾದಕ್ಷೇತ್ರ.
ಈ [೪]ನಾಲ್ಕಱ[೪] ಮನದ ಕೊನೆಯ ಮೊನೆಯ ಮೇಲೆ
ಸಿಂಹಾಸನನಾಗಿಪ್ಪ ನಮ್ಮ ಕೂಡಲ ಚೆನ್ನಸಂಗಮದೇವ. । ೭೦ ।* [೭೧೧?]

೩೦೩

ನಿಮ್ಮಲ್ಲಿ ಸನ್ನಿಹಿತವಲ್ಲದ ತನುವಿನ ಭಿನ್ನಭಾವವನೇನ ಹೇಳುವೆನಯ್ಯಾ?
ಲಿಂಗ ಭಿನ್ನಭಾವದ ಮನವಿನ, [ಲಿಂಗ] ಭಿನ್ನಭಾವದ ತನುವಿನ.
ಅನ್ಯಾ[೫]ಯ[೫]ದಲ್ಲಿ ಅನರ್ಪಿತವಾಯಿತ್ತು.
ಎನ್ನಲ್ಲಿ ಅನುದಿನ ಅಗಲದಿಪ್ಪ
ಕೂಡಲ ಚೆನ್ನಸಂಗಯ್ಯನೆನ್ನ ಪ್ರಾಣನಾಥನಾಗಿ. । ೭೧ । [೭೧೭]

೩೦೪

ಸತ್ವದ ಉದಯವ ಗುರುವಿಂಗಿತ್ತು,
[೬]ರಜದ[೬] ಉದಯವ ಲಿಂಗಕ್ಕಿತ್ತು,
[೬]ತಮದ[೬] ಉದಯವ ಪ್ರಸಾದಕ್ಕಿತ್ತು,
ಇಂತಪ್ಪ ಲಿಂಗಸಂಗಿಗಳಲ್ಲಿ ಸೇರಿಸಯ್ಯಾ,
ಪಂಚೀಕೃತ ಪಂಚ ಪಂಚಕವ ಕಳೆದು

೧–೧ ಇಷ್ಟು ಭಾಗ ಮೂ ಪ್ರತಿಯಲ್ಲಿ ಬಿಟ್ಟು ಹೋಗಿದೆ (ಸಂ), ೨–೨ ಭಾ (ಮೂ), ೩–೩x (ಮೂ), ೪–೪ ನಾಲ್ಕು (ಮೂ), * ೬೯ನೆಯ ವಚನದೊಂದಿಗೆ ಹೋಲಿಸಿರಿ (ಸಂ) ೫–೫ ನ್ಯ (ಮೂ), ೬–೬ ಇವು ಮೂ ಪ್ರತಿಯಲ್ಲಿ ಸ್ಥಾನಪಲ್ಲಟವಾಗಿವೆ (ಮೂ).

ಕೂಡಲ ಚೆನ್ನಸಂಗಯ್ಯ ಎನ್ನ ಪ್ರಾಣಲಿಂಗವಾಗಿ,
ಉಳಿದ ಸುಖಂಗಳು ಕಾಡಲಮ್ಮವು ಬಳಿಕ. । ೭೨ । [೭೦೮]

೩೦೫

ಅವಸರ, ಆರೋಗಣೆ, ಆಪ್ಯಾಯನ-ತ್ರಿವಿಧವೂ
ಲಿಂಗಮುಖದಲ್ಲಿ ಅರ್ಪಿತವಾಗಿ, ಆತನ ಪ್ರಸಾದಿಯೆಂಬೆನು,
ಅವಸರ ಅನವಸರ ಆತ್ಮದಿಚ್ಛೆ ಲಿಂಗಮುಖದಲ್ಲಿ ಅರ್ಪಿತವಿಲ್ಲಾಗಿ
ಆತನನೆಂತು ಪ್ರಸಾದಿಯೆಂಬೆನು?
ಅವಸರ ಅನವಸರವಱಿದು ವೇಧಿಸಬಲ್ಲರೆ
ಆತನ ಪ್ರಸಾದಿಯೆಂಬೆನು.
"ಲಿಂಗಸ್ಯಾವಸರೇ ಯಸ್ತು ಅರ್ಚ್ಯಂ ದದ್ಯಾತ್ ಸುಖಂ ಭವೇತ್"
ಎಂದುದಾಗಿ, ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಅವಸರವಱಿದು
ಅರ್ಪಿಸುವ ಅರ್ಪಣೆ ಸದ್ಭಾವಿಗಲ್ಲದಿಲ್ಲ. । ೭೩ । [೫೨೯]

೩೦೬

ಕಾಯವೆ ಲಿಂಗಕ್ಕರ್ಪಿತ, ಅರ್ಪಿತವೆ ಪ್ರಸಾದ.
ಅದೆ ಮತ್ತೆ ಮತ್ತೆ ಅರ್ಪಿತ.
ದರುಶನದಿಂದಲಾಯಿತ್ತು, ಪರುಶನದಿಂದಲಾಯಿತ್ತು.
ಅಪ್ಪಿನ ಸೋಂಕಿನ ಸುಖವನರ್ಪಿಸಲಱಿಯದಿದ್ದರೆ ಭ್ರಾಂತಿ.
ಕೂಡಲ ಚೆನ್ನಸಂಗಯ್ಯನ
ಪ್ರಸಾದಿಯ ಪ್ರಸಾದವನತಿಗಳದಡೆ ಮುಂದೆ ಅದಕೆಂತೋ. । ೭೪ । [೭೩೩]

೩೦೭

ಕ್ಷೀರವ ಸೋಂಕಿದ ಜಲವ ಬೇಱೆ ಮಾಡಬಹುದೇ?
ಪರಿಮಳವ ಸೋಂಕಿದ ವಾಯುವ ವಿವರಿಸಲುಂಟೇ?
ಉತ್ತಮಂ ಏಕಭುಕ್ತಂ ಚ ಮಧ್ಯಮಂ ದ್ವಯಸ್ವೀಕೃತಂ ।
ಕನಿಷ್ಠೋಽನರ್ಪಿಶ್ಚೈವ ಪ್ರಸಾದೋ ನಿಷ್ಫಲೋ ಭವೇತ್ ॥
ಎಂದುದಾಗಿ ನಿರೂಪಿಂಗೆ ರೂಪನರ್ಪಣೆಯ ಮಾಡಿ,

ರುಚಿ ಪರಿಮಳ ಭಾವದತ್ತಲಿ ಅವಧಾನಿಯಾಗಿಪ್ಪ ನಿಮ್ಮ ಶರಣ.
ಬೇಱೆ ಮತ್ತೆ ವ್ಯವಧಾನವಿಲ್ಲದಂತಿಪ್ಪ ಕಾಣಾ,
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದಿ. । ೭೫ । [೭೩೪]

೩೦೮

ಕಂಗಳು ನೋಡಿದ ಪದಾರ್ಥ ಲಿಂಗಕ್ಕರ್ಪಿತವಲ್ಲ,
ಕಿವಿಗಳು ಕೇಳಿದ ಪದಾರ್ಥ ಲಿಂಗಕ್ಕರ್ಪಿತವಲ್ಲ,
ನಾಸಿಕ ಮುಟ್ಟಿದ ಪದಾರ್ಥ ಲಿಂಗಕ್ಕರ್ಪಿತವಲ್ಲ,
ಜಿಹ್ವೆ ಸೋಂಕಿದ ಪದಾರ್ಥ ಲಿಂಗಕ್ಕರ್ಪಿತವಲ್ಲ,
[೧]ಕೈಗಳು ಮುಟ್ಟಿದ ಪದಾರ್ಥ ಲಿಂಗಕ್ಕರ್ಪಿತವಲ್ಲ,[೧]
ರೂಪು ರಸ ಗಂಧ ರುಚಿ ಸ್ಪರ್ಶವನು
ಕೂಡಲ ಚೆನ್ನಸಂಗಯ್ಯಾ ನೀನಱಿಯಲು ಪ್ರಸಾದವೆನಗೆ. । ೭೬ । [೭೧೯]

೩೦೯

ಲಿಂಗಾರ್ಚನೆಯ ಮಾಡಿ ಲಿಂಗಕ್ಕರ್ಪಿಸಿದ ಪ್ರಸಾದವನಲ್ಲದೆ
ಭೋಗಿಸೆನೆಂಬ ಪ್ರಸಾದಿ ಭಕ್ತನು:
ಅನರ್ಪಿತವ ನೆನೆವ ಪರಿಯೆಂತೊ?
ಅನರ್ಪಿತವ ನೋಡುವ ಪರಿಯೆಂತೊ?
ಅನರ್ಪಿತವ ಕೇಳುವ ಪರಿಯೆಂತೊ?
ಅನರ್ಪಿತವ ವಾಸಿಸುವ ಪರಿಯೆಂತೊ?
ಅನರ್ಪಿತವ ಮುಟ್ಟುವ ಪರಿಯೆಂತೊ?
ಅನರ್ಪಿತವ ರುಚಿಸುವ ಪರಿಯೆಂತೊ?
ಅನರ್ಪಿತವ ಸುಖದುಃಖಂಗಳನನುಭವಿಸುವ ಪರಿಯೆಂತೊ?
ಈ [೨]ವ[೨]ರ್ಮಕುಳವಾರಿಗೆಯೂ ಅಱಿಯಬಾರದು.
ಕೂಡಲ ಚೆನ್ನಸಂಗಮದೇವರಱಿದಡಱಿವುದು,
ಮಱೆದಡೆ ಮಱೆವುದು. । ೭೭ । [೭೧೮]

೧-೧ x(ಮೂ), ೨-೨ ಧ (ಮೂ).

೩೧೦

ಸರ್ವಾರ್ಪಿತವ ಮಾಡಬೇಕೆಂಬರು,
ಸರ್ವೇಂದ್ರಿಯ ಸನುಮತವಾದುದನಱಿಯರು.
ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ಸ್ಪರ್ಶ ಸಹಿತ ಅರ್ಪಿತವ ಮಾಡಬೇಕು.
ಪ್ರಾಣಪ್ರಯಾಣಕಾಲೇಪಿ ಸರ್ವಭೋಗೇಷು ಯಸ್ಸದಾ ।
ಅರ್ಪಣೇ ಚಾವಧಾನೀ ಚ ಸ ಲಿಂಗೀ ಪ್ರಾಣನಾಯಕಃ ॥
ಕೂಡಲ ಚೆನ್ನಸಂಗಯ್ಯಾ
ನಿಮ್ಮ ಪ್ರಸಾದಿಗೆ ನಮೋ ನಮೋ. । ೭೮ । [೭೩೫]

೩೧೧

ಸೋಂಕಿನ ಸುಖವನರ್ಪಿತವ ಮಾಡಿ,
ಅಸೋಂಕಿನ ಸುಖವನರ್ಪಿತವ ಮಾಡದಿದ್ದಡೆ
ಪ್ರಸಾದಿಯಲ್ಲ, ಶರಣನಲ್ಲ, ಲಿಂಗೈಕ್ಯನಲ್ಲ.
ಸಂಯೋಗೇ ಚ ವಿಯೋಗೇ ಚ ಅಣುಮಾತ್ರಂ ಸುಖಾರ್ಪಣಂ ।
ಯಃ ಕುರ್ಯ್ಯಾದಿಷ್ಟಲಿಂಗೇ ತು ಸೋವಧಾನೀ ನಿರಂತರಂ ॥
ಇದು ಕಾರಣ ಕೂಡಲ ಚೆನ್ನಸಂಗಯ್ಯಾ,
೧ಭೇದವನಱಿದು ಅರ್ಪಿತವ ಮಾಡುವ೧
ನಿಮ್ಮ ಪ್ರಸಾದಿಗೆ ನಮೋ ನಮೋಯೆಂಬೆನು. । ೭೯ । [೭೩೬]

೩೧೨

ಕಣ್ಣ ಕಪ್ಪರದ ಕಾಳಿಕೆಯ ಕಳೆದು,
ತನ್ನ ಲಿಂಗಕ್ಕೆ ಕೊಡಬಲ್ಲನಾಗಿ ಲಿಂಗಪ್ರಸಾದಿ.
ನಾಸಿಕ ಕಪ್ಪರದ ಅವಗಂಧವ ಕಳೆದು,
ಲಿಂಗಕ್ಕೆ ಕೊಡಬಲ್ಲನಾಗಿ ಲಿಂಗಪ್ರಸಾದಿ.
ಜಿಹ್ವೆ ಕಪ್ಪರದ ಅವರುಚಿಯ ಕಳೆದು
ಲಿಂಗಕ್ಕೆ ಕೊಡಬಲ್ಲನಾಗಿ ಲಿಂಗಪ್ರಸಾದಿ.
೨ಸ್ಪರ್ಶ೨ ಕಪ್ಪರದಲ್ಲಿ ಸೊಪ್ಪಡಗಿದಂತೆ

೧-೧ x (ಮೂ), ೨-೨ ಪರುಶ (ಮೂ).

ಯೋಗದ ಪೂರ್ವಾಶ್ರಯವ ಕಳೆದು
ತನ್ನ ಲಿಂಗಕ್ಕೆ ಕೊಡಬಲ್ಲನಾಗಿ ಲಿಂಗಪ್ರಸಾದಿ.
ಶ್ರೋತ್ರ ಕಪ್ಪರದ ಸದೆ ಸೊಪ್ಪ ಕಳೆದು
ತನ್ನ ಲಿಂಗಕ್ಕೆ ಕೊಡಬಲ್ಲನಾಗಿ ಲಿಂಗಪ್ರಸಾದಿ.
ಜಿಹ್ವಾಗ್ರೇ ಲಿಂಗಂ ಭಕ್ತಸ್ಯ ಲಿಂಗಸ್ಯಾಗ್ರೇ ತಥಾ ರುಚಿಃ ।
ರುಚ್ಯಗ್ರೇ ತು ಪ್ರಸಾದೋಽಸ್ತಿ ಪ್ರಸಾದೋ ಮೋಕ್ಷಸಾಧನಂ ॥
ಇದು ಕಾರಣ ಕೂಡಲ ಚೆನ್ನಸಂಗಯ್ಯಾ,
ನಿಮ್ಮ ಪ್ರಸಾದಿಗೆ ನಮೋ ನಮೋಯೆಂಬೆನು. ।೮೦। [೭೨೧]

೩೧೩
ಮೈ ಶೀತೋಷ್ಣವ ಮಱೆದು, ಘ್ರಾಣ ಗಂಧವ ಮಱೆದು,
ನಯನ ನೋಟವ ಮಱೆದು, ಕಿವಿ ಶಬ್ದವ ಮಱೆದು,
ನಾಲಗೆ ರುಚಿ ಮಱೆದು,
ಅಂಡಜ ಜರಾಯುಜನೆನಿಸದೆ–
ಕೂಡಲ ಚೆನ್ನಸಂಗಯ್ಯ[೧]ನ ಉಪನಯನವಾದ ಶರಣ[೨]ನು[೨] ।೮೧। [೭೧೨]

೩೧೪
ಅಂಗದ ಕೊನೆಯಲ್ಲಿ ಲಿಂಗಮುಂತಲ್ಲದೆ ಸಂಗವ ಮಾಡನಾ ಶರಣನು,
ನಯನದ ಕೊನೆಯಲ್ಲಿ ಲಿಂಗಮುಂತಲ್ಲದೆ ಅನ್ಯವ ನೋಡನಾ ಶರಣನು,
ಶ್ರೋತ್ರದ ಕೊನೆಯಲ್ಲಿ ಲಿಂಗಮುಂತಲ್ಲದೆ ಅನ್ಯವ ಕೇಳನಾ ಶರಣನು,
ನಾಸಿಕದ ಕೊನೆಯಲ್ಲಿ ಲಿಂಗಮುಂತಲ್ಲದೆ ಪರಿಮಳವ ವೇಧಿಸ ಶರಣನು,
ಜಿಹ್ವೆಯ ಕೊನೆಯಲ್ಲಿ ಲಿಂಗಮುಂತಲ್ಲದೆ ರುಚಿಯ ನಿಶ್ವಯಿಸ ಶರಣನು,
ಕೂಡಲ ಚೆನ್ನಸಂಗಾ ನಿಮ್ಮ ಸರಣ ಸರ್ವಾಂಗಲಿಂಗಿಯಾದ. ।೮೨। [೭೩೭]

೩೧೫
ಆಯತ ಸ್ವಾಯತ [೩]ಸನ್ನಿಹಿತವ[೩]
ಅನಾಯತಗಳು ಮುಟ್ಟಲಮ್ಮವು ನೋಡಾ.

೧+ ಮ (ಮೂ), ೨–೨ ನಾಗಿ (ಮೂ), ೩–೩ ಸಂಭಾವಿತನ (ಮೂ).

ಕಂಗಳ ಕೈಗಳಲರ್ಪಿಸುವ, ಶ್ರೋತ್ರದ ಕೈಗಳಲರ್ಪಿಸುವ,
ನಾಸಿಕದ ಕೈಗಳಲರ್ಪಿಸುವ, ಜಿಹ್ವೆಯ ಕೈಗಳಲರ್ಪಿಸುವ,
[1]ತನುವಿನ ಕೈಗಳಲರ್ಪಿಸುವ,[1] [1]ಮನದ ಕೈಗಳಲರ್ಪಿಸುವ,[1]
ಕೈಗಳ ಕೈಯ್ಯಲರ್ಪಿಸುವ.
ಅಲ್ಲಲ್ಲಿ ತಾಗಿದ ಸುಖವನಲ್ಲಲ್ಲಿ ಲಿಂಗಾರ್ಪಿತವ ಮಾಡುವನಾಗಿ
ಕೂಡಲ ಚೆನ್ನಸಂಗಯ್ಯನಲ್ಲಿ ಆತ ಮಹಾಪ್ರಸಾದಿ. । ೮೩ । [೭೩೮]

೩೧೬
ಕಂಗಳಾಶ್ರಯದ ಸೋಂಕಿನ ಸುಖಸಂಬಂಧವನು
ಮಹದಾಶ್ರಯಕ್ಕೆ ತಂದು ಸೂಸಲೀಯದೆ ನಿಮಗರ್ಪಿಸುವೆ.
ನಾಸಿಕಾಶ್ರಯದ ಸೋಂಕಿನ ಸುಖಸಂಬಂಧವನು
ಮಹದಾಶ್ರಯಕ್ಕೆ ತಂದು ಸೂಸಲೀಯದೆ ನಿಮಗರ್ಪಿಸುವೆ.
ಈ ಎರಡು ಸ್ಥಾನ ಮೊದಲಾದ ಷಡುಸ್ಥಾನಾಶ್ರಯದ
ಸೋಂಕಿನ ಸುಖಸಂಬಂಧವನು ಮಹದಾಶ್ರಯಕ್ಕೆ ತಂದು
ಸೂಸಲೀಯದೆ ಷಡುವಿಧ ಲಿಂಗಂಗಳಿಗರ್ಪಿಸುವೆ,
ಆಪ್ಯಾಯನದಲ್ಲಿ ಲಂಘಿಸುವ ಸಚರಾಚರವ
ಚೈತನ್ಯದ ಮಧ್ಯಕ್ಕೆ ತಂದು ನಾನರ್ಪಿಸುವೆ.
ಇದು ಕಾರಣ ಕೂಡಲ ಚೆನ್ನಸಂಗನ ಬಸವಣ್ಣನ
ಪ್ರಸಾದದಿಂದ ಪ್ರಸಾದಿಯಾದೆನಯ್ಯಾ. । ೮೪ ।[2] [೭೨೦]

ಪ್ರಸಾದಿಯ ಶರಣ[3]ಸ್ಥಲ:[3]

೩೧೭
ಗುರುಶಿಷ್ಯ ಸಂಬಂಧವನಱಸುವ ಮಹಂತರ ನಾನೇನೆಂಬೆನಯ್ಯಾ:
ಶಿಷ್ಯಂಗೆ ಗುರು ಶಿವಸೋದರ, ಗುರುವಿಂಗೆ ಲಿಂಗ ಶಿವಸೋದರ,
ಲಿಂಗಕ್ಕೆ ಜಂಗಮ ಶಿವಸೋದರ,

೧–೧ ಈ ಎರಡು ವಾಕ್ಯಗಳು 'ಮೂ"ದಲ್ಲಿ ಸ್ಥಾನಪಲ್ಲಟವಾಗಿವೆ (ಸಂ) ೨ ಮೂ ಪ್ರತಿಯಲ್ಲಿಯ ವಚನ ತುಂಬ ಅಸ್ತವ್ಯಸ್ತವಾಗಿರುವುದರಿಂದ ಅದನ್ನು ಬಿಟ್ಟು, ಅ ಪ್ರತಿಯಿಂದ ಈ ವಚನವನ್ನು ಎತ್ತಿಕೊಳ್ಳಲಾಗಿದೆ (ಸಂ), ೩–೩ x(ಮೂ)

ಪ್ರಸಾದಕ್ಕೆ ಪರಿಣಾಮವೆ ಶಿವಸೋದರ.
ಇದು ಕಾರಣ, ಗುರುವಿನಲ್ಲಿ ಗುಣವ, ಲಿಂಗದಲಿ ಸ್ಥಲವ,
ಜಂಗಮದಲ್ಲಿ ಕುಲವ, ಪ್ರಸಾದದಲ್ಲಿ ರುಚಿಯ,
ಪರಿಣಾಮದಲ್ಲಿ ಕುಱುಹನಱಸುವ ಪಾತಕರ ತೋಱದಿರು
ಕೂಡಲ ಚೆನ್ನಸಂಗಮದೇವಾ. । ೮೫ । [೭೬೩]

೩೧೮
ಅಜಾತಲಿಂಗ ಸುಕ್ಷೇತ್ರ[೧]ದಲ್ಲಿ[೧] ಪವಿತ್ರಶರಣ,
ಪದಾರ್ಥವ ಬಿತ್ತಿ ಪ್ರಸಾದ ಬೆಳೆವ,
ಅಂದಂದಿಗೆ ಹೊಸಫಲವನುಂಬ, ಅನ್ಯವ ಮುಟ್ಟನಾ ಶರಣ.
ಕೂಡಲ ಚೆನ್ನಸಂಗನ ಶರಣ ಮರ್ತ್ಯನೆಂದರೆ ನರಕ ತಪ್ಪದು. । ೮೬ । [೭೪೧]

೩೧೯
ಗುರುಸಾಹಿತ್ಯವಾದವರಂತಿರಲಿ,
ಲಿಂಗಸಾಹಿತ್ಯವಾದವರಂತಿರಲಿ,
ಜಂಗಮಸಾಹಿತ್ಯವಾದವರಂತಿರಲಿ,
ಪ್ರಸಾದಸಾಹಿತ್ಯವಾದವರಂತಿರಲಿ,
ಕೂಡಲ ಚೆನ್ನಸಂಗಯ್ಯಾ
ಇಂದ್ರಿಯ ಸಾಹಿತ್ಯ ಬಸವಣ್ಣಂಗಲ್ಲದಿಲ್ಲ. । ೮೭ । [೭೬೧]

೩೨೦
ಲಿಂಗವಿದ್ದ ಕಾಯದಲ್ಲಿ ಕಾಮವಿಲ್ಲ, ಕ್ರೋಧವಿಲ್ಲ, ಲೋಭವಿಲ್ಲ,
ಮೋಹವಿಲ್ಲ, ಮದವಿಲ್ಲ, ಮತ್ಸರವಿಲ್ಲ, ಆಸೆ ರೋಷ ಹರುಷವಿಲ್ಲ,
ಮನಬುದ್ಧಿ ಚಿತ್ತಹಂಕಾರ ಮಾಯಾಪಾಶಬದ್ಧನಲ್ಲ, ಮಾಯಾಶರೀರಿಯಲ್ಲ.
ಕಾಮನೆಸಲಮ್ಮ, ಮಾಯೆ ಕೈಗೆಯ್ಯಲಮ್ಮದು.
ಲಿಂಗಾನುಶರೀರಿಯಾಗಿದ್ದ ಕಾಯದ ಚರಿತ್ರವೆಂತೆಂದರೆ:

೧–೧ x (ಮೂ).

ಲಿಂಗದಂತೆ ನಡೆವುದು, ಲಿಂಗದಂತೆ ನುಡಿವುದು,
ಲಿಂಗಜಂಗಮದೊಳಗೆ ಬೆಳೆದನುಭಾವವ ಮಾಡೂದು.
ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ಸ್ಪರುಶನದಲ್ಲಿ
ಲಿಂಗಸಮುಚ್ಚಯಾಗಿ ಸನ್ನಿಹಿತ ಪ್ರಸಾದಿ.
ಇದು ಕಾರಣ, ಹೊನ್ನಿನಲ್ಲಿ ಹೆಣ್ಣಿನಲ್ಲಿ ಆಶ್ರಿತನಲ್ಲ,
ಭಕ್ತಿಸಾರಾಯವಾಗಿ ಬಂದುದ[೧][ನೆ][೧] ಕೊಂಬನು.
ಅನ್ಯಸಾರಾಯ ಲಿಂಗಾರ್ಪಿತಕ್ಕೆ ಸಲ್ಲದಾಗಿ
ಕೂಡಲಚೆನ್ನಸಂಗಮದೇವಾ
ನಿಮ್ಮ ಶರಣ ಭಕ್ತಿಸಾರಾಯನಿವಾಸಿಯಾಗಿರ್ಪನು. । ೮೮ । [೭೬೬]

೩೨೧
ಪ್ರಾಣಲಿಂಗದಲ್ಲಿ ಪ್ರಸಾದಕಾಯವಂತನೆಂಬೆ?
ಆರಾಧ್ಯಲಿಂಗದಲ್ಲಿ ಸಮಯಾಚಾರವಂತನೆಂಬೆ?
ಆಚಾರವಿಲ್ಲದ [೨]ಕಾಯ[೨] ಪ್ರಯೋಜನಕ್ಕೆ ಸಲ್ಲದು,
ಸಮಯವಿಲ್ಲದಾಚಾರಕ್ಕೆ ಆಶ್ರಯವಿಲ್ಲ.
ಆಚಾರಸ್ಥಳ ಆರಾಧ್ಯಸ್ಥಳ ಪ್ರಸಾದಸ್ಥಳ ಪ್ರತಿಗ್ರಾಹಕನಾಗಿ
"ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ"
ಇದು ಕಾರಣ ಕೂಡಲ ಚೆನ್ನಸಂಗಾ
ನಿಮ್ಮ ಶರಣ ಲಿಂಗದೇವನೆಂಬೆನು. । ೮೯ । [೭೬೪]

೩೨೨
ಜಿಹ್ವೆ ಗುರು, ಕಂಗಳು ಲಿಂಗ,
ನಾಸಿಕ ಆಚಾರ, ಶ್ರೋತ್ರ ಪ್ರಸಾದ,
ಹಸ್ತ ಜಂಗಮ, ಭಾವದಲ್ಲಿ ಮಹಾಲಿಂಗ.
ಆಚಾರಸ್ಯ ಮುಖಂ ಘ್ರಾಣಃ ಮುಖಂ ಜಿಹ್ವಾಗುರೋಸ್ತಥಾ ।
ಶಿವಲಿಂಗಮುಖಂ ನೇತ್ರ ಮಹಾಲಿಂಗಂ ಚ ಭಾವನೇ ॥

೧-೧ ವೆ (ಮೂ), ೨-೨ ಕಾರ್ಯ (ಮೂ).

ಇತಿ ಭೇದಮುಖಂ ಜ್ಞಾತ್ವಾ ಅರ್ಪಿತಂ ಚ ವಿಶೇಷತಃ ॥
ಎಂದುದಾಗಿ ಕೂಡಲ ಚೆನ್ನಸಂಗಾ
ನಿಮ್ಮ ಶರಣ ಸರ್ವಾಂಗಪ್ರಸಾದಿ. ।೯೦। [೬೭೬]

೩೨೩

ಓಗರ ಪ್ರಸಾದವ ಮಾಡಿ, ಪ್ರಸಾದವ ಓಗರವ ಮಾಡಿ,
ಕೊಟ್ಟುಕೊಂಬನಾಗಿ ಆತ ಲಿಂಗಪ್ರಸಾದಿ.
ರೂಪು ರಸ ಗಂಧ ಪರುಶ ಸಹಿತ ಜಂಗಮಕ್ಕೆ
ಅರ್ಪಿತವ ಮಾಡಿಕೊಂಬನಾಗಿ ಆತ ಜಂಗಮಪ್ರಸಾದಿ.
ಸಪ್ತಧಾತು ಅಷ್ಟಮದವಿಲ್ಲಾಗಿ ಆತ ಲಿಂಗಪ್ರಸಾದಿ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವಿಲ್ಲಾಗಿ
ಆತ ಜಂಗಮಪ್ರಸಾದಿ.
ಇದು ಕಾರಣ ಕೂಡಲ ಚೆನ್ನಸಂಗಾ
ನಿಮ್ಮ ಪ್ರಸಾದಿಗೆ ನಮೋ ನಮೋಯೆಂಬೆ. ।೯೧। [೧೨೨೬]

೩೨೪

ಲಿಂಗಮುಖದಲ್ಲಿ ಬಂದ ಪ್ರಸಾದವ ಪ್ರಸಾದವೆಂಬೆ,
ಜಂಗಮಮುಖದಲ್ಲಿ ಬಂದ ಪ್ರಸಾದವ ಪ್ರಸಾದವೆಂಬೆ,
ಪ್ರಸಾದಮುಖದಲ್ಲಿ ಬಂದ ಪ್ರಸಾದವ ಪ್ರಸಾದವೆಂಬೆ,
ಅರ್ಪಿತ ಸಂಕಲ್ಪಿತ ಭಾವಾರ್ಪಿತವ ಮಾಡಬಲ್ಲ,
ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೯೨। [೭೪೬]

೩೨೫

ದೇ[1]ವ[1]ನಾಮ ಸೊಗಸದು ಲಿಂಗಾಯತಂಗೆ,
ಮಾನವನಾಮ ಸೊಗಸದು ಜಂಗಮಭಕ್ತಂಗೆ,
ಅನ್ಯನಾಮವಜಿಯ ಪ್ರಸಾದಸಮ್ಯಕನಾಗಿ.
ಈ ತ್ರಿವಿಧ ಮಾಟ[2][ದ][2]ರ್ಥ
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. ।೯೩। [೧೨೪೪]

೧-೧ ಹ (ಮೂ), ೨-೨ ಕಾ (ಮೂ),

೩೨೬

ಗುರುಕಾರುಣ್ಯ, ಲಿಂಗನಿಷ್ಠೆ, ಪ್ರಸಾದವಿಶ್ವಾಸ, ಭಾವದ ನಿಜವನಾರು ಬಲ್ಲರಯ್ಯಾ?
ಗುರುವಿನಲ್ಲಿ ಲಿಂಗಪ್ರವೇಶ, ಲಿಂಗದಲ್ಲಿ ಜಂಗಮಪ್ರವೇಶ,
ಜಂಗಮದಲ್ಲಿ ಪ್ರಸಾದಪ್ರವೇಶ, ಪ್ರಸಾದದಲ್ಲಿ ಪರಿಣಾಮಪ್ರವೇಶ,
ಪರಿಣಾಮದಲ್ಲಿ ಭಾವಪ್ರವೇಶ.
ಇಂತು ಗುರುವಿಂಗೆ ಲಿಂಗವಿಲ್ಲ, ಲಿಂಗಕ್ಕೆ ಜಂಗಮವಿಲ್ಲ.
ಪರಿಣಾಮಕ್ಕೆ ಭಾವವಿಲ್ಲ.
ಇದಱಾಗು ಹೋಗಿನ ಸಕೀಲ[1] ಸಂಬಂಧವ
ಕೂಡಲ ಚೆನ್ನಸಂಗಾ ನಿಮ್ಮ ಶರಣನೆ ಬಲ್ಲ. । ೯೪ । [೭೭೪]

೩೨೭

ಚತುರ್ಗ್ರಾಮ ಪಂಚೈದು ಭೂತದೊಳಗೆ ಸ್ಥೂಲವಾವುದು? ಸೂಕ್ಷ್ಮವಾವುದು?
ಎಮಗೆ ಬಲ್ಲವರು ನೀವು ಹೇಳಿರೇ.
ಕಾಲಚಕ್ರ ಕರ್ಮಚಕ್ರ ನಾದಚಕ್ರ ಬಿಂದುಚಕ್ರ,
ಆವುದು ಘನ, ಆವುದು ಕಿಱಿದು? ಎಮಗೆ ಬಲ್ಲವರು ನೀವು ಹೇಳಿರೇ,
ಶುದ್ಧ ಸಿದ್ಧ ಪ್ರಸಿದ್ಧವೆಂದು ಹೆಸರಿಟ್ಟುಕೊಂಡು ನುಡಿವಿರಿ,
ಓಗರವಾವ ಕಡೆ? ಪ್ರಸಾದವಾವ ಕಡೆ? ಎಮಗೆ ಬಲ್ಲವರು ನೀವು ಹೇಳಿರೇ,
ಇಕ್ಕಿದ ಱಾಟಳ[2] ತುಂಬುತ ಕೆಡಹುತಲದೆ.[3]
ಇಕ್ಕಿದ ಱಾಟಳ ಮುಱಿದು ಸೂತ್ರಹಱಿದು ನಿಶ್ಶೂನ್ಯವಾದಡೆ
ಕೂಡಲಚೆನ್ನಸಂಗನಲ್ಲಿ ಮಹಾಪ್ರಸಾದಿಯೆಂಬೆನು. । ೯೫ । [೧೨೨೭]

೩೨೮

ಕಾಲಚಕ್ರ ಕರ್ಮಚಕ್ರ ನಾದಚಕ್ರ ಬಿಂದುಚಕ್ರ:
ಕಾಲಚಕ್ರ ಘ್ರಾಣದಿಂದ ನಡೆವುದು,
ಕರ್ಮಚಕ್ರ ನಯನದಿಂದ ನಡೆವುದು,
ನಾದಚಕ್ರ ಜಿಹ್ವೆಯಿಂದ ನಡೆವುದು,
ಬಿಂದುಚಕ್ರ ಜಿಹ್ವೆಯಿಂದ ನಡೆವುದು.

೧+ಕ (ಮೂ), ೨+ದಂತೆ (ಮೂ) ೩+ಓಗರವಾದ ಕಡೆ? ಪ್ರಸಾದವಾದ ಕಡೆ ಎಮಗೆ ಬಲ್ಲವರು ನೀವು ಹೇಳಿರೆ ಅಯ್ಯ (ಮೂ).

ಇಂತು ನಾಲ್ಕರಲ್ಲಿ ನಾಲ್ಕು ನಡೆದವು.
ಇಂತು ಲೋಕಾದಿಲೋಕಂಗಳೆಲ್ಲವು ಹೀಗೆ ಕೆಟ್ಟು ಹೋದವು.
ಈ ನಾಲ್ಕರ ಕುಳಸ್ಥಳವನಱಿಸಿ ಹರಿಬ್ರಹ್ಮಾದಿಗಳೆಲ್ಲ ಕೆಟ್ಟುಹೋದರು.
ಈ ನಾಲ್ಕಕ್ಕೆ ನಾಲ್ಕನು ಕೊಟ್ಟು,
ಶುದ್ಧನಾದ ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೯೬ ।[೧] [೭೧೧?]

೩೨೯
ಕಾಲಚಕ್ರವ ಗುರುವಿಂಗಿತ್ತು, ಕರ್ಮಚಕ್ರವ ಲಿಂಗಕ್ಕಿತ್ತು,
ನಾದಚಕ್ರವ ಜಂಗಮಕ್ಕಿತ್ತು, ಬಿಂದುಚಕ್ರವ ಪ್ರಸಾದಕ್ಕಿತ್ತು,
ಇಂತೀ ನಾಲ್ಕಕ್ಕೆ ನಾಲ್ಕನು ಕೊಟ್ಟು ಕೊಟ್ಟೆನೆಂಬುದಿಲ್ಲ,
ಕೊಂಡೆನೆಂಬುದು ಬಯಲಲೊದಗಿದ ಘಟವು,
ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೯೭ । [೭೭೩]

೩೩೦
ಅನಾಹತಸ್ಥಳದಲ್ಲಿ ಶಿವ ತನ್ನ ಲೀಲಾವಿನೋದದಿಂದ
ನೀವು ಸಹಿತ ಮೂರ್ತಿಯಾದನು,
ಹೊಱಗೆ ಆಕಾರವ ಧರಿಸಿ, ಒಳಗೆ ನಿರವಯಕ್ಕೆ ಆರೋಗಣೆಯ ಮಾಡಿಸಲಿ.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಬಸವಣ್ಣ ಮಡಿವಾಳಯೆಂಬೆರಡು ತೋಳ ಧರಿಸಿದೆ. । ೯೮ । [೭೫೭]

೩೩೧
ನಿರವಯವಾದಡೆಯೂ
ಭಕ್ತಿಯ ತೋಱಿದ ತನುವಿನ ಮೇಲೆ ಮೂರ್ತಿಯಾಯಿತ್ತು,
ಪ್ರಸಾದವಾದಡೆಯೂ ಬಸವಣ್ಣನ ಕರಸ್ಥಳದಲ್ಲಿ ಮೂರ್ತಿಯಾಯಿತ್ತು,
ಪ್ರಸಾದವ ನಾನೆತ್ತ ಬಲ್ಲೆನಯ್ಯಾ ಮಡಿವಾಳ ತೋಱಲಿಕೆ ಕಂಡೆನು:
ಭಕ್ತಿಯ ಕಂದೆಱದು ತೋಱಿದ, ಜ್ಞಾನದ ನಿಲುಕಡೆಯ ತೋಱಿದ.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ

---

೧ ೭೦ನೆಯ ವಚನದೊಂದಿಗೆ ಹೋಲಿಸಿರಿ (ಸಂ).

ಮಡಿವಾಳನೂ ಬಸವಣ್ಣನೂ ಪದಾರ್ಥವನಾರೋಗಿಸಿ,
ಕೊಡುತ ಕರುಣಿಸಿದ ಪ್ರಸಾದಿಯಾನು. । ೯೯ । [೭೫೮]

ಪ್ರಸಾದಿಯ ಐಕ್ಯ[೧]ಸ್ಥಲ:[೧]

೩೩೨

ಗುರುಲಿಂಗಜಂಗಮವೆಂಬ ಭೇದವನೆ ಕಳೆದು,
ಗುರು[೨]ಲಿಂಗ[೨]ವನೇಕವ ಮಾಡಿ ತೋಱಿದನಾಗಿ,
[೩]ತನುಮನ[೩]ಪ್ರಾಣ ಮೊದಲಾಗಿಪ್ಪ ಕರಣೇಂದ್ರಿಯಂಗಳನು
ತನು ಮುಟ್ಟಿದ ಸುಖಂ[೪]ಗಳನು[೪] ಲಿಂಗಕ್ಕೆ ಕೊಟ್ಟು,
ಆಗ [೫]ಬಗೆ[೫]ಗೆತ್ತಿ ಬಿಚ್ಚು ಬೇಱ[೬] ಮಾಡ,
ಕೂಡಲ ಚೆನ್ನಸಂಗಾ ಲಿಂಗೈಕ್ಯನು. । ೧೦೦ ।[೭೮೯]

೩೩೩

ರೂಪನರ್ಪಿಸಿದ ಬಳಿಕ ಅಂಗವೆಂಬುದಿಲ್ಲ,
ರುಚಿಯನರ್ಪಿಸಿದ ಬಳಿಕ ಪ್ರಾಣವೆಂಬುದಿಲ್ಲ,
ಭಾವ ನಿರ್ಭಾವವ ನಿಜ ನುಂಗಿತ್ತು, ಅರ್ಪಿಸುವ ಪರಿಯೆಂತೋ?
ರೂಪು ಲಿಂಗ, ರುಚಿ ಜಂಗಮ,
ಅರ್ಪಿಸುವ ಅರ್ಪಣ ಮುನ್ನಿಲ್ಲ ಕೂಡಲ ಚೆನ್ನಸಂಗಮದೇವಾ. । ೧೦೧ । [೮೦೩]

೩೩೪

ಆಚಾರವಂಗವಾದವರಿಗೆ ಅಂಗಾಶ್ರಯ ಹೊದ್ದು[೬]ವು[೬]ದೇ ಅಯ್ಯಾ?
ತನು-ಭಕ್ತ ಮನ-ಲಿಂಗ ಸಂಗವಾದವರಿಗೆ ಅನರ್ಪಿತ ಹೊದ್ದೂದೇ ಅಯ್ಯಾ?
ಈ ಉಭಯಸಂಗನಿರ್ಣಯ ಲಿಂಗೈಕ್ಯವು
ಕೂಡಲ ಚೆನ್ನಸಂಗಮದೇವ. । ೧೦೨ ।[೭೮೦]

೧-೧ ನು (ಮೂ), ೨-೨ x(ಮೂ), ೩-೩x (ಮೂ), ೪-೪ ವ (ಮೂ), ೫-೫ ವೆ (ಮೂ), ೬-೬ x(ಮೂ).

೩೩೫
ಅನಾದಿಕುಳ ಗುರು ಸನುಮತವಾದ ಪ್ರಸಾದಿ,
ಲಿಂಗ ಜಂಗಮ ಸನುಮತವಾದ ಪ್ರಸಾದಿ,
ಆಪ್ಯಾಯನ ಅವಧಾನ ಅಂಗವಿಸದೆ ನಿಂದು ಸನುಮತವಾದ ಪ್ರಸಾದಿ.
ನೇತ್ರ ಶ್ರೋತ್ರ ಘ್ರಾಣ ಮನ ಬುದ್ಧಿ ಚಿತ್ತಹಂಕಾರ ಸನುಮತವಾದ ಪ್ರಸಾದಿ,
ರೂಪು ರಸ ಗಂಧ ಸ್ಪರ್ಶ ಪಂಚೇಂದ್ರಿಯ ಸನುಮತವಾದ ಪ್ರಸಾದಿ,
ದೇಹಾದಿಗುಣವನತಿಗಳೆದು ಉದರಾಗ್ನಿ ತಲೆದೋಱದೆ
ಸಕಲ ಸನುಮತವಾದ ಪ್ರಸಾದಿ.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ,
ಸಮಾಪ್ತವಾಗಿ ಲಿಂಗಲೀಯವಾದ ಪ್ರಸಾದಿ.[೧] ।೧೦೩।[೧೨೨೮]

❖❖

೧+ ಪ್ರಸಾದಿಸ್ಥಲ ಸಮಾಪ್ತಃ ॥ ಶ್ರೀ ಶ್ರೀ ಶ್ರೀ (ಮೂ)

ಪ್ರಾಣಲಿಂಗಿಸ್ಥಲ

[೧]ಪ್ರಾಣಲಿಂಗಿಯ ಜ್ಞಾನಿಸ್ಥಲ:[೧]

೩೩೬

ಶ್ರೋತ್ರ ನೇತ್ರ ತ್ವಕ್ಕು ಜಿಹ್ವೆ ಘ್ರಾಣೇಂದಿಯಂಗಳ ಕೂಡಿಕೊಂಡು
ಚೇಷ್ಟಿಸುವ ದಶವಾಯುಗಳಾವುವೆಂದರೆ:
ರೇಚಕ ಪೂರಕ [೨]ಕುಂಭಕ[೨] ರೂಪಿಂದ ಚೇಷ್ಟಿಸುವುದೊಂದು ಪ್ರಾಣವಾಯು.[೩]
ರಸಂಗಳ ನಿರಸಂಗಳ ಮಾಡಿ ಮಲಮೂತ್ರಂಗಳ ನಡಸೂದೊಂ[೪]ದ[೪]ಪಾನವಾಯು.
ಅನ್ನ ರಸವಂ ಪಿಡಿದು ತನುವಂ ವ್ಯಾಪಿಸಿ ಪಸರಿಸೂದೊಂದು ವ್ಯಾನವಾಯು.
ಪಾದವ ನೆಲಕ್ಕಿಕ್ಕಿಸೂದೊಂದು ಉದಾನವಾಯು.
ಸಮಧಾತುಗಳನಜೆದು ಅನ್ನಪಾನಂಗಳ ಪಸರಿಸೂದೊಂದು ಸಮಾನವಾಯು.
ರಸವ್ಯಾಪ್ತಿಯ ಮಾಡೂದೊಂದು ನಾಗವಾಯು,
ಘರವಟ್ಟಿಯ ತೊಳಲೂದೊಂದು ಕೂರ್ಮವಾಯು.
ಆಗುಳಿಕೆ ಸೀನು ಮೈಮುರಿವುದೊಂದು [೫]ಕೃಕರ[೫]ವಾಯು.
ಓಕರಿಕೆಯ ಮಾಡೂದೊಂದು ದೇವದತ್ತನೆಂಬವಾಯು.
ನುಡಿಯ ಬುದ್ಧಿಯ ಮಾಡಿ ನಡಸೂದೊಂದು ಧನಂಜಯವಾಯು.
ಇಂತು ದಶವಾಯುಗಳು ಇಹ ಸ್ಥಾನವಾವುದೆಂದರೆ:
ಗುಹ್ಯದಲ್ಲಿ ಅಪಾನವಾಯು, ನಾಭಿಯಲ್ಲಿ ಸಮಾನವಾಯು,
ಹೃದಯದಲ್ಲಿ ಪ್ರಾಣವಾಯು, ಕಂಠದಲ್ಲಿ ಉದಾನವಾಯು,
ಸಮಸ್ತ ಸಂದುಗಳಲ್ಲಿ ವ್ಯಾನವಾಯು, ಈಡಾನಾಳದಲ್ಲಿ ನಾಗವಾಯು,

೧–೧ ಶ್ರೀಗುರುಶಾಂತಲಿಂಗಾಯಂ ನಮಃ ॥ ಪ್ರಾಣಲಿಂಗಿಯ ಸ್ಥಳ ಆ ಜ್ಞಾನಿ (ಮೂ), ೨–೨ x(ಮೂ), ೩+ ಆ (ಮೂ), ೪–೪ ದು (ಮೂ), ೫–೫ ಕಿಕಿಲ (ಮೂ)

ಪಿಂಗಳನಾಳದಲ್ಲಿ ಕೂರ್ಮವಾಯು, ಸುಷುಮ್ನಾನಾಳದಲ್ಲಿ [೧]ಕೃಕರ[೧]ವಾಯು,
ಹಸ್ತದಲ್ಲಿ ದೇವದತ್ತವಾಯು, ಜಿಹ್ವೆಯಲ್ಲಿ ಧನಂಜಯವಾಯು,
ಈ ವಾಯುಪ್ರಾಣಿಯ ಕಳೆದು, ಲಿಂಗಪ್ರಾಣಿಯ ಮಾಡಬಲ್ಲರೆ
ಕೂಡಲ ಚೆನ್ನಸಂಗಯ್ಯನಲ್ಲಿ ಅದೇ ಯೋಗ. ।೧। [೮೪೪]

೩೩೭
ಪ್ರಾಣವಾಯು ನೇತ್ರನಾಳ, ಅಪಾನವಾಯು ಜಿಹ್ವಾನಾಳ,
ವ್ಯಾನವಾಯು ಅಧಮನಾಳ, ಉದಾನವಾಯು ಕಮಳನಾಳ,
[೨]ಸಮಾನವಾಯು ಮುಖನಾಳ,[೨] ನಾಗವಾಯು ಶ್ರೋತ್ರನಾಳ,
ಕೂರ್ಮವಾಯು ಕಂಠನಾಳ, [೩]ಕೃಕರ[೩]ವಾಯು ಚಂದ್ರನಾಳ,
ದೇವದತ್ತವಾಯು ಸೂರ್ಯನಾಳ, ಧನಂಜಯವಾಯು ಬ್ರಹ್ಮನಾಳ,
ಇಂತು ದಶವಾಯುಗಳ ಸ್ಥಾನ.
ಪ್ರಾಣವಾಯು ಹರಿದಲ್ಲಿ ಲಿಂಗಪ್ರಾಣವಂ ಮಱೆದು
ತನುಮನಧನವೆ ಪ್ರಾಣವಾಗಿಹ,
[೪]ಅ[೪]ಪಾನವಾಯು ಹರಿದಲ್ಲಿ ಲಿಂಗ[೫]ಬಯಕೆಯ[೫] ಮಱೆದು
ಷಡುರಸಾನ್ನದ ಬಯಕೆಯಾಗಿಹ,
ವ್ಯಾನವಾಯು ಹರಿದಲ್ಲಿ ತನ್ನ ಧ್ಯಾನವಂ ಮಱೆದು
ಚತುರ್ವಿಧ ಪದವೇದ್ಯವಾಗಿಹ,
ಉದಾನವಾಯು ಹರಿದಲ್ಲಿ ಲಿಂಗಗಮನವ ಬಿಟ್ಟು
ಉದ್ದೇಶ ಗಮನಿಯಾಗಿಹ,
ಸಮಾನವಾಯು ಹರಿದಲ್ಲಿ ಚತುರ್ವಿಧಸಾರವಂ ಮಱೆದು
ಕಲ್ಲು ಮರನಾಗಿಹ.
ನಾಗವಾಯು ಹರಿದಲ್ಲಿ ಸುಭಾಷಿತ ಗೋಷ್ಠಿಯಂ ಕೇಳಲೊಲ್ಲದೆ
ಕುಭಾಷಿತ ಕುಚಿತ್ತರ ಶಬ್ದವ ಕೇಳಿಹೆನೆಂಬ,
ಕೂರ್ಮವಾಯು ಹರಿದಲ್ಲಿ ಸುಜ್ಞಾನವಂ ಬಿಟ್ಟು
ಅಜ್ಞಾನ ಸಂಭಾಷಣೆಯಂ ಮಾಡುವ,
[೬]ಕೃಕರ[೬]ವಾಯು ಹರಿದಲ್ಲಿ [೭]ಸು[೭]ಗುಣವಂ [೮]ಬಿಟ್ಟು[೮]
[೯]ದುರ್[೯]ಗುರ್ಣಕ್ಕೆ ಬೀಜೆ ಬಡವಾಗುತ್ತಿಹ,

೧–೧ ಕಿಕಿಲ (ಮೂ)೨–೨x (ಮೂ), ೩–೩ ಕಿಕಿಲ (ಮೂ), ೪–೪ x(ಮೂ), ೫–೫ ಪ್ರಾಣವಂ (ಮೂ), ೬–೬ ಕಿಕಿಲ(ಮೂ), ೭–೭ ಸ (ಮೂ), ೮–೮ x(ಮೂ), ೯–೯ ನಿ(ಮೂ).

ದೇವದತ್ತವಾಯು ಹರಿದಲ್ಲಿ ಆವ ವಿಚಾರವಂ ಮಱೆದು
ಕೋಪಪದಲುರಿದೇಳುತ್ತಿಹ,
ಧನಂಜಯವಾಯು ಹರಿದಲ್ಲಿ ಅನೇಕಾಯಸದಿಂ
ಗಳಿಸಿದಂಥ ಧನವನು ಲಿಂಗಜಂಗಮಕ್ಕೆ ವೆಚ್ಚಿಸಲೊಲ್ಲದೆ,
ಅನರ್ಥವ ಮಾಡಿ ಕೆಡಿಸಿ ಕಳೆದು ಹೋಯಿತ್ತೆಂದು ಮಱುಗುತ್ತಿಹ.
ಇಂತೀ ದಶವಾಯುಗಳ ಭೇದವನಱಿದು
ಕೂಡಲ ಚೆನ್ನಸಂಗಯ್ಯನಲ್ಲಿ ನಿಲಿಸೂದೆ ಯೋಗ. । ೨ । [೮೪೫]

೩೩೮

ಪೃಥ್ವಿಮದ ಸಲಿಲಮದ ಪಾವಕಮದ [೧]ಪವನಮದ[೧]
ಅಂಬರಮದ ರವಿಮದ ಶಶಿಮದ ಆತ್ಮಮದ–
ಇಂತೀ ಅಷ್ಟಮದಂಗಳ ವಿವರ :
ಪೃಥ್ವಿಮದವೆತ್ತಿದಲ್ಲಿ ತನುಗುಣಭರಿತನಾಗಿಹ,
ಸಲಿಲಮದವೆತ್ತಿದಲ್ಲಿ ಸಂಸಾರಭರಿತನಾಗಿಹ,
ಪಾವಕಮದವೆತ್ತಿದಲ್ಲಿ ಕಾಮ್ಯರಸಭರಿತನಾಗಿಹ,
ಪವನಮದವೆತ್ತಿದಲ್ಲಿ ಇರ್ದ ಠಾವಿನಲ್ಲಿದ್ದು ಜಂಬೂದ್ವೀಪಭರಿತನಾಗಿಹ,
ಅಂಬರಮದವೆತ್ತಿದಲ್ಲಿ[೨] ವಾಹನಭರಿತನಾಗಿಹ,
ರವಿಮದವೆತ್ತಿದಲ್ಲಿ ಕೋಪಾಗ್ನಿಭರಿತನಾಗಿಹ,
ಶಶಿಮದವೆತ್ತಿದಲ್ಲಿ ಚಿಂತಾಭರಿತನಾಗಿಹ,
ಆತ್ಮಮದವೆತ್ತಿದಲ್ಲಿ ಅಹಂಕಾರಭರಿತನಾಗಿಹ.
ಇಂತೀ ಅಷ್ಟಮದವಳಿದು ನಿಜವನಱಿಯ ಬಲ್ಲರೆ,
ಕೂಡಲ ಚೆನ್ನಸಂಗಯ್ಯನಲ್ಲಿ ಶಿವಯೋಗಿಗಳೆಂಬೆನು. । ೩ । [೮೪೬]

೩೩೯

ತನುವ್ಯಸನ ಮನವ್ಯಸನ ಧನವ್ಯಸನ ವಾಹನವ್ಯಸನ
ಉತ್ಸಾಹವ್ಯಸನ [೩]ವಿಶ್ವ[೩]ವ್ಯಸನ ಸೇವಕವ್ಯಸನ–
ಇಂತೀ ಸಪ್ತವ್ಯಸನಂಗಳು:
ತನುವ್ಯಸನ ವಸ್ತು ಆಭರಣ ವೀಳ್ಯೆಯ ಬಯಸೂದು,

೧–೧ x(ಮೂ), ೨ + ಇರ್ದ ಠಾವಿನಲಿದ್ದು (ಮೂ), ೩–೩ ವಿಶ್ವಾಸ(ಮೂ).

ಮನವ್ಯಸನ ಕಳವು ಹುಸಿ ಪಾರದ್ವಾರವ ಬಯಸೂದು,
ಧನವ್ಯಸನ ರಾಜ್ಯವ ಬಯಸೂದು,
ವಾಹನವ್ಯಸನ ಆನೆ ಕುದುರೆ ಸೇನೆ ಬಯಸೂದು,
ವಿಶ್ವವ್ಯಸನ ಚತುರ್ವಿಧಕರ್ತವ್ಯ ಬಯಸೂದು,
ಉತ್ಸಾಹವ್ಯಸನ ಪುತ್ರ ಮಿತ್ರ ಕಳತ್ರವ ಬಯಸೂದು,
ಸೇವಕವ್ಯಸನ ಉಣಲಾಜಿ, ಉಡಲಾಜಿ, ತೊಡಲಾಜಿಸೆಂದೆನುತ್ತಿಹುದು.
ಈ ಸಪ್ತವ್ಯಸನಂಗಳಂ ಬಿಟ್ಟು ಲಿಂಗವ್ಯಸನಿಯಾಗಬಲ್ಲರೆ
ಕೂಡಲ ಚೆನ್ನಸಂಗಯ್ಯನಲ್ಲಿ ಪ್ರಾಣಲಿಂಗಿಗಳೆಂಬೆನು. । ೪ । [೮೪೭]

೩೪೦
ಕಾಯದ ಪೂರ್ವಾಶ್ರಯ ಶ್ರೀಗುರುವಿನಿಂದ ಹೋಯಿತ್ತು,
[೧]ಲಿಂಗದಿಂದ ಹೋ[ಗ]ದು.[೧]
ಇಂದ್ರಿಯದ ಪೂರ್ವಾಶ್ರಯ ಶ್ರೀಗುರುವಿನಿಂದ ಹೊಯಿತ್ತು,
ಲಿಂಗದಿಂದ ಹೋಗದು.
ತನ್ನಿಂದಲೇ [೨]ಆಹದು.[೨] ತನ್ನಿಂದಲೇ [೩]ಹೋಹದು,[೩]
ಕಾಲಚಕ್ರ ಕರ್ಮಚಕ್ರ ನಾದಚಕ್ರ ಬಿಂದುಚಕ್ರವುಳ್ಳನ್ನಕ್ಕರ
ಕೂಡಲ ಚೆನ್ನಸಂಗನಲ್ಲಿ ಶರಣನೆನಿಸಲುಬಾರದು. । ೫ । [೮೩೫]

೩೪೧
ತನುಗುಣ ಗ್ರಾಹಕನಾಗದಿರಬೇಕು,
ಮನಗುಣ ಗ್ರಾಹಕನಾಗದಿರಬೇಕು,
ಪ್ರಾಣಗುಣ ಗ್ರಾಹಕನಾಗದಿರಬೇಕು.
ಈ ತ್ರಿವಿಧಗ್ರಾಹಕನಾಗದೆ ಲಿಂಗಗ್ರಾಹಕನಾಗಬೇಕು,
ಕೂಡಲ ಚೆನ್ನಸಂಗಮದೇವಾ. । ೬ । [೮೪೮]

೩೪೨
ಅಂಗದಿಂದ ಲಿಂಗ ಹಿಂಗಬಾರದೆಂಬರು:
ಅಂಗ ಲಿಂಗ ಸಂಬಂಧವಾದಲ್ಲಿ ಫಲವೇನು,
ಮನ ಲಿಂಗ ಸಂಬಂಧವಾಗದನ್ನಕ್ಕ?
ಕೂಡಲ ಚೆನ್ನಸಂಗಯ್ಯಾ ಮನದಿಂದಲೇನೂ ಘನವಿಲ್ಲಯ್ಯಾ. । ೭ । [೮೪೯]

೧-೧ x(ಮೂ), ೨-೨ ಅಹುದು (ಮೂ), ೩-೩ ಹೋಹುದು (ಮೂ).

೩೪೩

ಅಂಗಸಂಗಿಯಾದವಂಗೆ ಲಿಂಗಸಂಗವಿಲ್ಲ,
ಲಿಂಗಸಂಗಿಯಾದವಂಗೆ ಅಂಗಸಂಗವಿಲ್ಲ,
ಅಂಗಸಂಗವೆಂಬುದು ಅನಾಚಾರ,
ಲಿಂಗಸಂಗವೆಂಬುದು ಸದಾಚಾರ.
ಇದು ಕಾರಣ, ಅಂಗಸಂಗವ ಬಿಟ್ಟು
ಲಿಂಗಸಂಗಿಯಾಗಿರಬೇಕು, ಕೂಡಲ ಚೆನ್ನಸಂಗಮದೇವಾ. ।೮। [೮೫೦]

೩೪೪

ಮನಶುದ್ಧವಾಗಿ ಮಜ್ಜನಕ್ಕೆಱೆದರೆ ಭಾವ ಮತ್ತೇಕಯ್ಯಾ?
ಪತ್ರ ಪುಷ್ಪ ರಂಗವಲ್ಲಿಯನಿಕ್ಕಲೇನು, ಭಿತ್ತಿಯ ಚಿತ್ತಾರವೆ?
ಅವರು ಕಾಣಬೇಕು, ಇವರು ಕಾಣಬೇಕೆಂಬ
ಭ್ರಮೆಯ ಭ್ರಮಿತರು ಅಂಗಹೀನರು.
ಮನದಂಗವನಗಲರು, ಲಿಂಗ ಮತ್ತೆಲ್ಲಿಯದೋ?
ಸದಮದವಳಿದು ನಿಜವನಱಿದಡೆ ಲಿಂಗಕ್ಕೆ ಪೂಜೆ ಕಂಡಾ,
ಕೂಡಲ ಚೆನ್ನಸಂಗಯ್ಯ ಸಾಹಿತ್ಯನಾಗಿಹನು. ।೯। [೮೩೭]

೩೪೫

ಭಾವದಿಂದಲಿ ಲಿಂಗೈಕ್ಯವಾದೆವೆಂಬರು,
ಜೀವದಿಂದ ಲಿಂಗೈಕ್ಯವಾದೆವೆಂಬರು,
ಸುಷುಮ್ನಾನಾಳ ಭೇದವನಱಿಯರು,
ವಿಷಯದಲ್ಲಿ ಗಸಣಿಗೊಂಬರು.
ಅಂತರಂಗಶುದ್ಧಿಯನವರೆತ್ತ ಬಲ್ಲರು
ಕೂಡಲ ಚೆನ್ನಸಂಗಮದೇವಾ. ।೧೦। [೮೨೬]

೩೪೬

ಭವಿಗೆ ಇಕ್ಕಲಾಗದೆಂಬ ಸಂಬಂಧಿಗಳು ಮರಳಿ ಭವಿಗಿಕ್ಕಿದರೆ,
ಭಾಷೆಗೆ ವ್ರತಗೇಡಿ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಭವಿ
ನಿಮ್ಮನಾವರ್ಜಿಸಿಕೊಂಡಿರಲು ಮತ್ತೆ ಭವಿಗಿಕ್ಕೆನೆಂಬ ಪರಿಯೆಂತೋ?

ಬಹಿರಂಗದ ಭವಿಯ ಕಳೆವುದು [1]ಅಭ್ಯಾಸವಲ್ಲದೆ ನಿಜವಲ್ಲ.[1]
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಅಂತರಂಗದ ಭವಿಯ ಕಳೆವ ಶರಣನಪೂರ್ವ. ।೧೧। [೧೦೮೦]

೩೪೭
ಘಟಸಂಸ್ಕಾರದಲ್ಲಿ ಪಟಲ ಹಱಿವುದೆ, ಜೀವಸಂಸ್ಕಾರವಿಲ್ಲದನ್ನಕ್ಕ?
ವೇಷಧಾರಿತನದಲ್ಲಿ ಗ್ರಾಸವಹುದಲ್ಲದೆ,
ಜ್ಞಾನಸಂಸ್ಕಾರವಿಲ್ಲದನ್ನಕ್ಕ ಭವವೆಂತು ಹಱಿವುದು?
ಅಂಗಭವಿಯನು ಲಿಂಗಭವಿಯನು ಕಳೆದುಳಿದಲ್ಲದೆ,
ಕೂಡಲ ಚೆನ್ನಸಂಗಯ್ಯನ ಹೊದ್ದಬಾರದು. ।೧೨। [೧೦೮೧]

೩೪೮
ತನುಮುಟ್ಟಿ ಮನಮುಟ್ಟದೆ ದೂರವಾದರಯ್ಯಾ ಬೆಲೆವೆಣ್ಣಿನಂತೆ,
ಸೂಳೆ ತನುಮುಟ್ಟಿ ಅಪ್ಪುವಳಲ್ಲದೆ ಮನಮುಟ್ಟಿ ಅಪ್ಪಳಾಗಿ.
ಆಚಾರವಱಿಯದೆ ಅಱಿಮರುಳುಗಳು [2]ಶಿವ[2] ಸುಖವನೆತ್ತ ಬಲ್ಲರು
ಕೂಡಲ ಚೆನ್ನಸಂಗಮದೇವಾ? ।೧೩। [೮೧೪]

೩೪೯
ಉಲಿಗರ ಮಾತು, ಊರುಗರ ತೋಟಿಯೊಳಗುಂಟೆ ಲಿಂಗಾನುಭಾವ?
ರಚ್ಚೆಯ ಕೆಟ್ಟ ಬೀದಿಯ ಮಾತಿನೊಳಗುಂಟೆ ಲಿಂಗಾನುಭಾವ?
ಸಂತೆಯೊಳಗೆ ಸಮಾಧಿಯುಂಟೆ?
ಇದು ಕಾರಣ ಕೂಡಲ ಚೆನ್ನಸಂಗಯ್ಯನ ಅನುಭಾವ
ಹೊಱವೇಷದ ವಾಚಾಳರಿಗೆಲ್ಲಿಯದು? ।೧೪। [೮೧೫]

೩೫೦
ಅನುಭಾವ ಅನುಭಾವವೆಂದೆಂಬರು.
ಅನುಭಾವವೆಂಬುದು ನೆಲದ ಮಱೆಯ ನಿಧಾನ ಕಾಣಿರೋ,
ಅನುಭಾವವೆಂಬುದು ಅಂತರಂಗದ ಶುದ್ಧಿ ಕಾಣಿರೋ.

೧-೧ ಸಂಬಂಧವಲ್ಲ (ಮೂ), ೨-೨ x (ಮೂ).

ಅನುಭಾವವೆಂಬುದು ರಚ್ಚೆಯ ಮಾತೆ?
ಅನುಭಾವವೆಂಬುದು ಸಂತೆಯ ಸುದ್ದಿಯೆ?
ಅನುಭಾವವೆಂಬುದೇನು ಬೀದಿಯ ಪಸರವೆ?
ಏನೆಂಬೆ ಹೇಳಾ ಮಹಾಘನವ!
ಆನೆಯ ಮಾನದೊಳಗಿಕ್ಕಿದರಡಗೂದೆ ದರ್ಪಣದೊಳಗಡಗೂದಲ್ಲದೆ?
ಕಂಡ ಕಂಡಲ್ಲಿ ಗೋಷ್ಠಿ, ನಿಂದ ನಿಂದಲ್ಲಿ ಅನುಭಾವ,
ಬಂದ ಬಂದಲ್ಲಿ ಪ್ರಸಂಗವ ಮಾಡುವ ನಿರ್ಬುದ್ಧಿ ನೀಚರ ಮೆಚ್ಚ
ಕೂಡಲ ಚೆನ್ನಸಂಗಮದೇವ. ।೧೫। [೮೧೭]

೩೫೧
ಮುನ್ನಿನ ಆದ್ಯರ ವಚನ: ಆ ಲಿಂಗದ ನಡೆ, ಆ ಲಿಂಗದ ನುಡಿ, ಆ ಲಿಂಗದಂತೆ,
ಮುನ್ನಿನ ಜಂಗಮದ ನಡೆ, ಜಂಗಮದ ನುಡಿ, ಆ ಜಂಗಮದಂತೆ,
ಮುನ್ನಿನ ಪ್ರಸಾದದ ನಡೆ, ಪ್ರಸಾದದ ನುಡಿ, ಆ ಪ್ರಸಾದದಂತೆ.
ಇಂತಿವಕ್ಕನುಸಾರಿ ಮಾಡಿಹೆನೆಂಬ ಕರ್ಮಿ[1]ಯ ಮಾತ ಕೇಳಲಾಗದು,[1]
ಹೊಂಬಿತ್ತಾಳೆಯ ಕೆಲಸದಂತೆ.
ಲಿಂಗಾನುಭಾವಿಗಳು ಕೇಳಿದರೆ ಛೀಃ ಇವನ ಮುಟ್ಟಲಾಗದೆಂಬರು,
ಓಡ ಹಿಡಿದಡೆ ಕೈ ಮಸಿಯಾದೂದೆಂದು.
ಸಿಂಹದ ನಡು[2]ವಿಂಗೆ[2] ನಾಯ ನಡು ಸರಿಯೆಂಬ ಪಂಚಮಹಾಪಾತಕರ ನುಡಿಯ
ಕೇಳಲಾಗದು, ಕೂಡಲ ಚೆನ್ನಸಂಗಮದೇವಾ. ।೧೬। [೮೧೮]

೩೫೨
ವೃಕ್ಷಾಶ್ರಮದಲ್ಲಿದ್ದು ಭಿಕ್ಷಾಪರಿಣಾಮಿಯಾಗಿದ್ದರೇನು?
ಸುತ್ತಳಿದು ಬತ್ತಲೆಯಿದ್ದರೇನು?
ಕಾಲರಹಿತನಾದಡೇನು? ಕರ್ಮರಹಿತನಾದಡೇನು?
ಕೂಡಲ ಚೆನ್ನಸಂಗನ ಅನುಭಾವವನಱಿಯದವರು
ಏಸುಕಾಲವಿದ್ದರೇನು? ವ್ಯರ್ಥಕಾಣಿರೋ! ।೧೭। [೮೧೯]

೩೫೩
ಕಾಯದ ಕಳವಳದಲ್ಲಿ ಹುಟ್ಟಿ, ಸಂಸಾರವನೆ ವೇಧಿಸಿ,
ಲಿಂಗಮುಖವಱಿಯದವರಂತಿರಲಿ.

೧–೧ ಯು (ಮೂ), ೨–೨ x (ಮೂ).

ಬ್ರಹ್ಮಜ್ಞಾನವನೆ ಪೂರಯಿಸಿ, ಭಾವವಂತರೆನಿಸಿ,
ವಿಷಯಂಗಳ ಕೊಂಡಾಡುವಂತಿರಲಿ.
ತನುವ ಕೊಱೆದು, [1]ಮನೊಮಧ್ಯದೊಳಗೆ[1]
ಕಾಲವಂಚಕರಾದವರಂತಿರಲಿ.
ಕೂಡಲ ಚೆನ್ನಸಂಗಯ್ಯನ ನಿಲವನಱಿಯದ
ಅಂಗರುಚಿಗಳವರಂತಿರಲಿ. । ೧೮ । [೮೩೩]

೩೫೪
ಒಡಲಗುಣಧರ್ಮವನ್ನು ಬಿಡದೆ ನಡೆವನ್ನಕ್ಕ
ಎಡೆವಱಿಯದ ಪೂಜೆಯನವರೆತ್ತ ಬಲ್ಲರು?
ಉದಯದಲಾದ ಪೂಜೆ, ಅಸ್ತಮಾನದ[2]ಲೆ[2]ಂಜಲೆಂಬರು,
ಇಂತೆಂಬ ಭಂಗಿಗಳ ಮುಖವ ನೋಡಲಾಗದು.
ಅಗ್ನಿ ಎಂಜಲನುಂಡು ಲಿಂಗದಲ್ಲಿ ಸಯವನಱಿಸುವ
ಭಂಗಿತರನೇನೆಂಬೆ ಕೂಡಲ ಚೆನ್ನಸಂಗಮದೇವಾ. । ೧೯ । [೧೧೫೧]

೩೫೫
ಶೀಲಶೀಲವೆಂದು ನುಡಿವ ಉದ್ದೇ[3]ಶ[3]ಪ್ರಾಣಿಗಳು ಎಲ್ಲರೂ ಅನಂತಶೀಲರು.
ಅಱಿವಿನ ನಿರ್ಣಯವನಱಿಯರು,
ಹೊಱಗೆ ಬಳಸುವರು, ಒಳಗಣ ಶುದ್ಧಿಯನಱಿಯರು.
ನೇಮಶೀಲವೆಂದು ಹಿಡಿವರು, ನಿರ್ಣಯವನಱಿಯರಾಗಿ,
ಕೂಡಲ ಚೆನ್ನಸಂಗಯ್ಯನಲ್ಲಿ ಉದ್ದೇಶಪ್ರಾಣಿಗಳು. । ೨೦ । [೮೨೫]

೩೫೬
ಜೈನನ ಮನದ ಕೊನೆಯ [4]ಮೊನೆಯ[4] ಮೇಲೆ
ಹೊಲೆಯಿಪ್ಪುದಲ್ಲದೆ ವ್ರತವಿಲ್ಲ.
ಸನ್ಯಾಸಿಯ ಮನದ ಕೊನೆಯ ಮೊನೆಯ ಮೇಲೆ
ಹೆಣ್ಣಿಪ್ಪುದಲ್ಲದೆ ಸನ್ಯಾಸವಿಲ್ಲ.
ತಪಸ್ವಿಯ ಮನದ ಕೊನೆಯ ಮೊನೆಯ ಮೇಲೆ
ಸಂಸಾರವಿಪ್ಪುದಲ್ಲದೆ ತಪಸ್ಸಿಲ್ಲ.

೧–೧ ಮನಾಮದೊಗಿಗಳಾದ (ಮೂ), ೨–೨ ಎ (ಮೂ), ೩–೩ ಶಿ (ಮೂ), ೪–೪ x (ಮೂ).

ಶ್ರಾವಕನ ಮನದ ಕೊನೆಯ ಮೊನೆಯ ಮೇಲೆ
ಕೊಲೆಯಿಪ್ಪುದಲ್ಲದೆ ಜಿನನಿಲ್ಲ.
ಶೀಲವಂತನ ಮನದ ಕೊನೆಯ ಮೊನೆಯ ಮೇಲೆ
ಭಯವಿಪ್ಪುದಲ್ಲದೆ ಲಿಂಗವಿಲ್ಲ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣರ ಮನದ ಕೊನೆಯ ಮೊನೆಯ
ಮೇಲೆ ಲಿಂಗವಿಪ್ಪುದು. । ೨೦ । [೮೩೨]

೩೫೭
ಮಾತಿನ ಮಾತಿನ ಗೀತಾಂಗದಲ್ಲಿ ಸುಜಾ[೧]ಣ[೧]ನಾಗಲಹುದು.
ಶ್ರೋತ್ರಶೋಭೆ ಪ್ರಜ್ಞಾನಪ್ರವೀಣತೆಯಲ್ಲಿ ಶಾಸ್ತ್ರಿಕನಾಗಲಹುದು.
ಅಂತರಂಗ ಬಹಿರಂಗವನಂತವ ಕಾಣಬಹುದು.
ಅಂತರಾಗಮ ಗಣಿತಗುಣಿತ ಶ್ರುತಿ ಸ್ಮೃತಿಗಳ [೨]ತರ್ಕ್ಯ[೨]ನಾಗಿರಬಹುದು.
ಭೂತವಿಕಾರದ ಪ್ರಕೃತಿಸ್ವಭಾವಭ್ರಾಂತಳಿದಿರಬಹುದು.
ಕಾಂತಾರತಿಗುಣವರ್ಜಿತ ಸನ್ಯಾಸಿ, ಕ್ಷೇತ್ರವಾಸಿಗಳಾಗಿರಬಹುದು.
ಎನ್ನೊಡೆಯ ಕೂಡಲ ಚೆನ್ನಸಂಗಮದೇವನ
ನಚ್ಚಿನ ಮಚ್ಚಿನ ಇಚ್ಛಾವಶ[೩]ವರ್ತಿ[೩]ಯಾಗಿರಬಾರದು,
ಲಿಂಗಾನುಭಾವಿಗಲ್ಲದೆ. । ೨೧ । [೮೨೦]

೩೫೮
ವಾಯುವಶದಿಂದ ತರುಗಳಲ್ಲಾಡುವವು,
ಭರತವಶದಿಂದ ಮೃದಂಗಾದಿಯಾದ ಪಟಹ ನುಡಿವವು,
ಕೂಡಲ ಚೆನ್ನಸಂಗಯ್ಯಾ, ಲಿಂಗವಶದಿಂದ ಶರಣ ಮಾತಾಡುವ. । ೨೩ । [೮೩೮]

೩೫೯
ತನುವಿರಹಿತ ಪ್ರಾಣವಿಲ್ಲ, ಗುರುವಿರಹಿತ ಲಿಂಗವಿಲ್ಲ,
ಕಂಗಳಸಂಗ ವಿರಹಿತವಾಗಿ ನೋಡಲಿಲ್ಲ.
ಈ ಭೇದಸ್ಥಾನವನಱಿಯಬೇಕು,
ಕೂಡಲ ಚೆನ್ನಸಂಗಯ್ಯನನಱಿವರೆ. । ೨೪ । [೮೩೯]

೧-೧ ತ (ಮೂ), ೨-೨ ಗಂತಕ (ಮೂ), ೩-೩ ವೃತ್ತಿ (ಮೂ).

೩೬೦

ಹದಿನಾಲ್ಕು ಭುವನದಲ್ಲಿ ಮನವೇದ್ಯವನಾರು ಬಲ್ಲರಯ್ಯಾ?
ದೂರದೂರವಾಗಿ ಮನ್ನಿಸುವರು,
ದೂರದೂರವಾಗಿ ಸಂಭಾಷಣೆಯ ಮಾಡುವರು.
ದೂರದೂರವೆನಲಿಲ್ಲ, ಕೂಡಲ ಚೆನ್ನಸಂಗಯ್ಯನ. । ೨೫ । [೮೫೧]

೩೬೧

ಪರಿಯಾಣವೆ ಭಾಜನವೆಂಬರು, ಪರಿಯಾಣವೆ ಭಾಜನವಲ್ಲ,
ಲಿಂಗಕ್ಕೆ ತನ್ನ ಮನವೆ ಭಾಜನ.
ಬೀಸರವೋಗದೆ ಮಿಸಲಾ[೧]ಗಿ ಅ[೧]ರ್ಪಿಸಬಲ್ಲರೆ ಕೂಡಿಕೊಂಡಿಪ್ಪ
ನಮ್ಮ ಕೂಡಲ ಚೆನ್ನಸಂಗಮದೇವ. । ೨೬ । [೮೬೯]

೩೬೨

ಕಾಯ ಲಿಂಗವ ಮುಟ್ಟಿದರೆ, ಕಾಯ ಲಿಂಗಭಕ್ತನಾಗಿರಬೇಕು.
ನಯನ ಲಿಂಗವ ಮುಟ್ಟಿದರೆ, ನಯನ ಲಿಂಗಭಕ್ತನಾ[೨]ಗಿರ[೨]ಬೇಕು.
ಶ್ರೋತ್ರ ಲಿಂಗವ ಮುಟ್ಟಿದರೆ, ಶ್ರೋತ್ರ ಲಿಂಗಭಕ್ತನಾ[೨]ಗಿರ[೨]ಬೇಕು.
ಭಾವ ಲಿಂಗವ ಮುಟ್ಟಿದರೆ, ಭಾವ ಲಿಂಗಭಕ್ತನಾಗಿರಬೇಕು.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣ ಸರ್ವಜೀವದಯಾಪಾರಿಯಾಗಿರಬೇಕು. । ೨೭ । [೮೪೦]

೩೬೩

ಮನದ ಮತ್ಸರವ ಕಳೆದು, ಮನದ ಮೇಲೆ ಲಿಂಗವ ಕುಳ್ಳಿರಿಸಬೇಕಯ್ಯಾ,
ಧನದ ಲೋಭವ ಕಳೆದು, ಧನದ ಮೇಲೆ ಜಂಗಮವ ಕುಳ್ಳಿರಿಸಬೇಕಯ್ಯಾ,
ಕಾಯಗುಣಂಗಳ ಕಳೆದು ಕಾಯ ಪ್ರಸಾದವ ಮಾಡಬೇಕಯ್ಯಾ.
ಈ ಎಲ್ಲಾ ಗುಣಂಗಳನತಿಗಳೆದು ತ್ರಿವಿಧದಲ್ಲಿ ದಾಸೋಹಿಯಾಗಿರಬೇಕು,
ಕೂಡಲ ಚೆನ್ನಸಂಗಯ್ಯಾ. । ೨೮ । [೮೫೨]

೩೬೪

ಪ್ರಾಣದಿಂದ ಲಿಂಗ ಹಿಂಗಲಾಗದಯ್ಯಾ,
ಧನದಿಂದ ಜಂಗಮ ಹಿಂಗಲಾಗದಯ್ಯಾ,
ಕಾಯದಿಂದ ಪ್ರಸಾದ ಹಿಂಗಲಾಗದಯ್ಯಾ,

೧–೧ ಗ (ಮೂ), ೨–೨ ಗ (ಮೂ).

ಈ [೧]ತ್ರಿವಿಧವ[೧] ತ್ರಿವಿಧದಲ್ಲಿ ನೆಲೆಗೊಳಿಸದಿದ್ದರೆ ಭಕ್ತನಲ್ಲ, ಭವಿ
ಕೂಡಲ ಚೆನ್ನಸಂಗಯ್ಯಾ. ।೨೯। [೮೩೪]

೩೬೫

ಭಕ್ತನ ಹಸ್ತಮುಟ್ಟಿ ಪಾವನವೆಂಬನ್ನಕ ತಾನು ಭವಿಯೇ?
ಆತ ಲಿಂಗದೇಹಿಯೆಂತೆಂಬೆ? ಲಿಂಗಾಚಾರಿಯೆಂತೆಂಬೆ?
ಲೌಕಿಕನೆಂತೆಂಬೆ? ಪವಿತ್ರಕಾಯನೆಂತೆಂಬೆ?
ಲಿಂಗ ಕ್ಷೇತ್ರ, ಜಂಗಮ ಬೀಜವೆಂಬುದನಱಿಯರಾಗಿ. ।೩೦। [೨೬೮]

೩೬೬

ದೇಹದ ಬೆಂಬಳಿಯ ದೇಹಿಕನಾದಡೆ
ಸದಾಚಾರವಳವಡುವುದೆ?
ಜೀವದ ಬೆಂಬಳಿಯ ಜೀವಿತನಾದಡೆ
ಪ್ರಸಾದಸ್ಥಳವಳವಡುವುದೆ?
ಬೆಸನದ ಬೆಂಬಳಿಯ ವ್ಯಾಪಕನಾದಡೆ
ಜಂಗಮಪ್ರೇಮವಳವಡುವುದೆ?
ಕಾಲಕರ್ಮ ಪ್ರಳಯಜೀವಿಗಳು ತ್ರಿವಿಧಸಂಪನ್ನರಾಗಲಱಿವರೆ?
ಅಱಿವು ಮಱಹು ಕುಱುಹುಳ್ಳನ್ನಕ್ಕ
ಪ್ರಾಣಲಿಂಗಸಂಬಂಧಿಗಳಾಗಲಱಿವರೆ?
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಸರ್ವಾಚಾರಿಗಳಾಗಲಱಿವರೆ? ।೩೧। [೮೨೭]

೩೬೭

ಮುಂದುಗಾಣದ ಮಾನವರು ಮತ್ತೊಂದನಱಿಯದೆ ಕೆಟ್ಟರು.
ಲಿಂಗವ ಪೂಜಿಸಿ, ಪ್ರಸಾದವ ವೇಧಿಸಿ,
ಪ್ರಾಣಲಿಂಗ ಜಂಗಮವೆಂದಱಿಯದೆ
ಕೆಟ್ಟುಹೋದರಯ್ಯಾ, ಕೂಡಲ ಚೆನ್ನಸಂಗಮದೇವಾ. ।೩೨। [೫೮೧]

೧–೧ x (ಮೂ).

೩೬೮
ಭಕ್ತನೆನಿಸಿಕೊಂಡು ಜಂಗಮದೊಡನೆ ದುರುಳತನವ ನುಡಿದರೆ
ಅವ ಭಕ್ತನಲ್ಲ, ಲಿಂಗವಿರಳ ನೋಡಾ.
ಕಾಯದಲ್ಲಿ ವಿಶ್ವಾಸ, ಪ್ರಾಣದಲ್ಲಿ ಅವಿಶ್ವಾಸ
ಕಾಯಪ್ರಾಣದಂತೆ ಇದ್ದಿತ್ತು, ಜಂಗಮಲಿಂಗದ ನಿಲವು.
ಆತ್ಮಸ್ತುತಿ ಪರನಿಂದೆವುಳ್ಳನ್ನಕ್ಕ, ಕೂಡಲ ಚೆನ್ನಸಂಗಮದೇವ
ಕುರುಡನ ಕೈಯ ದರ್ಪಣದಂತೆ. । ೩೩ । [೮೨೮]

೩೬೯
ಗುರುಲಿಂಗ ಶಿವಲಿಂಗ ಜಂಗಮಲಿಂಗ–
ಈ ತ್ರಿವಿಧ ಒಂದೇ ಎಂದುದಾಗಿ ಒಂದರ ಕಡನವೊಂಧು ತಿದ್ದುವವು.
ಗುರು ನಷ್ಟವಾದರೆ ಜಂಗಮ ಗುರುವಲ್ಲದೆ ಭಕ್ತ ಗುರುವಾಗಲಾಗದು.
ಪಶು ಪಶುವಿಂಗೆ ಗರ್ಭವಹುದೆ ಬಸವಂಗಲ್ಲದೆ?
ಭಕ್ತ ಗುರುವಾದರೆ ಅವನನಾಚಾರಿ, ವ್ರತಗೇಡಿ, ಅವನುನ್ಮತ್ತನು.
ಗುರು ಶಿಷ್ಯರಿಬ್ಬರು ಕೆಟ್ಟಕೇಡಿಂಗೆ ಕಡೆಯಿಲ್ಲ
ಕೂಡಲ ಚೆನ್ನಸಂಗಮದೇವಾ. । ೩೪ । [೮೩೬]

೩೭೦
ಕಾಯವೂ ಜೀವವೂ ಜೀವವೂ ಕಾಯವೂ ಎಂತು ಬೆರಸಿಪ್ಪುದಂತೆ
ಲಿಂಗದೊಳಗೆ ಜಂಗಮ ಬೆರಸಿಪ್ಪುದು, ಭಿನ್ನಭಾವವಿಲ್ಲದೆ.
ನ ಶಿವೇನ ವಿನಾ ಶಕ್ತಿರ್ನ ಶಕ್ತಿರಹಿತಃ ಶಿವಃ ।
ಪುಷ್ಪಗಂಧಮಿವಾನ್ಯೋನ್ಯಂ ಮಾರುತಾಂಬರಯೋರಿವ ॥
ಎಂದುದಾಗಿ ಭಾವಭೇದವಿಲ್ಲ
ಜಂಗಮವೆ ಲಿಂಗ ಕೂಡಲ ಚೆನ್ನಸಂಗ. । ೩೫ । [೮೪೧]

೩೭೧
ಲಿಂಗದಲಿ ಸೂತಕವ ಹಿಡಿವನಕ್ಕ
ಪ್ರಾಣಲಿಂಗಸಂಬಂಧಿಯೆಂತೆಂಬೆ?
ಜಂಗಮದಲ್ಲಿ ಸೂತಕವ ಹಿಡಿವನ್ನಕ್ಕ

೧–೧ ಈ ಎರಡು ಶಬ್ದಗಳು ಮೂ ದಲ್ಲಿ ಪಲ್ಲಟವಾಗಿವೆ (ಸಂ). ೨–೨ x ಕಾಯ ಜೀವೌ ಜೀವ ಕಾಯೌ (ಮೂ).

ಅನುಭಾವಿಯೆಂತೆಂಬೆ?
ಪ್ರಸಾದದಲ್ಲಿ ಸೂತಕವ ಹಿಡಿವನ್ನಕ್ಕ
ಸ್ವಾಮಿಭೃತ್ಯ ಸಂಬಂಧಿಯೆಂತೆಂಬೆ?
ಭಕ್ತನೆಂತೆಂಬೆ, ಪ್ರಸಾದಿಯೆಂತೆಂಬೆ,
ಕೂಡಲ ಚೆನ್ನಸಂಗಯ್ಯನಲ್ಲಿ ಶರಣನೆಂತೆಂಬೆ? ।೩೬। [೬೪೨]

೩೭೨

ಗುರುಪ್ರಾಣ ಗುರುಪ್ರಾಣವೆಂಬರು,
ಗುರು[1][ವ][1] ತನ್ನಲ್ಲಿ ಸಯವ ಮಾಡಲಱಿಯದ ಗುರುಭ್ರಷ್ಟರ ನೋಡಾ.
ಲಿಂಗಪ್ರಾಣ ಲಿಂಗಪ್ರಾಣವೆಂಬರು,
ಲಿಂಗವ ತನ್ನಲ್ಲಿ ಸಯವ ಮಾಡಲಱಿಯದ ಲಿಂಗಭ್ರಷ್ಟರ ನೋಡಾ.
ಮಂತ್ರಪ್ರಾಣ ಮಂತ್ರಪ್ರಾಣವೆಂಬರು,
ಮಂತ್ರವ ತನ್ನಲ್ಲಿ ಸಯವ ಮಾಡಲಱಿಯದ [2]ಮಂತ್ರ[2]ಭ್ರಷ್ಟರ ನೋಡಾ.
ಈ ತ್ರಿವಿಧಸಂಬಂಧವನೊಂದೆಂದಱಿಯದೆ
ಪ್ರಾಣಲಿಂಗಸಂಬಂಧಿಗಳೆಂಬವರನೇನೆಂಬೆ
ಕೂಡಲ ಚೆನ್ನಸಂಗಮದೇವಾ. ।೩೭। [೮೨೯]

೩೭೩

ವೇದಶಾಸ್ತ್ರ ಪುರಾಣಾಗಮಾದಿಯಾದ ಲಿಂಗವಲ್ಲದಿದಲ್ಲೆಂದು
ಲಿಂಗಾರ್ಚನೆಯ ಮಾಡುವ ಮಹಾಮಹಿಮರು ನೀವು ಕೇಳಿರೇ.
ಅಂಗ ಲಿಂಗವೊ, ಜಂಗಮ ಲಿಂಗವೊ?
ಪ್ರಸಾದ ಲಿಂಗವೊ, ಪ್ರಾಣ ಲಿಂಗವೊ, ಭಾವ ಲಿಂಗವೊ?
ಪ್ರಾಣಲಿಂಗಸ್ಯ ಸಂಬಂಧೀ ಪ್ರಾಣಲಿಂಗೀ ಪ್ರಕೀರ್ತಿತಃ ।
ಪ್ರಸನ್ನಲಿಂಗಯುಕ್ತಾತ್ಮಾ ಮಮ ರೂಪೋ ಮಹೇಶ್ವರೀ ॥
ಇದು ಕಾರಣ, ಕೂಡಲ ಚೆನ್ನಸಂಗಮದೇವಾ
ಲಿಂಗನಾಮನಿರ್ಣಯವಪೂರ್ವ. ।೩೮। [೮೪೨]

೩೭೪

ಸತಿಯ ಕೈಯಲಿ ಕೊಟ್ಟುದು ಪ್ರಾಣಲಿಂಗವಲ್ಲ.
ಸುತನ ಕೈಲಿ ಕೊಟ್ಟುದು ಪ್ರಾಣಲಿಂಗವಲ್ಲ.

೧–೧ x (ಮೂ), ೨–೨ ಲಿಂಗ (ಮೂ).

ಅಲಸಿ ನಾಗವತ್ತಿಗೆಯಲಿರಿಸಿದದು ಪ್ರಾಣಲಿಂಗವಲ್ಲ.
ತನುವ ಸೋಂಕಿ ವಜ್ರಲೇಪದಂತಿರಬೇಕು.
ಮನ – ಕರದಲಿ ಕೊಟ್ಟ ಪ್ರಾಣಲಿಂಗ ಹಿಂಗಿದರೆ
ಅವನಂದೇ ವ್ರತಗೇಡಿ, ಕೂಡಲ ಚೆನ್ನಸಂಗಮದೇವಾ. । ೩೯ । [೮೩೦]

೩೭೫

ಉರಸ್ಥಲದಲ್ಲಿ ಲಿಂಗವನವಧರಿಸಿದ ಬಳಿಕ
ಮನದ ಕೊನೆಯಿಂದ ಲಿಂಗವನಗಲದಿರಬೇಕು.
ಉರ ¹ಗುರು¹ಸ್ಥಲ ಉರ ಲಿಂಗಸ್ಥಲ, ಉರ ಜಂಗಮಸ್ಥಲ, ಉರ ಪ್ರಸಾದಸ್ಥಲ,
ಉರ ಮಹಾಸ್ಥಲ, ಉರ ಮಹಾಮಹಿಮರಿಪ್ಪ ಅನುಭಾವಸ್ಥಲವೆಂದಱಿದು
ಅನ್ಯಮಿಶ್ರಂಗಳ ಹೊದ್ದಲಾಗದು.
ತಟ್ಟು ಮುಟ್ಟು ತಾಗು ನಿರೋಧಗಳಿಗೆ ಗುಱಿಯಾಗಲಾಗದು.
ಇಂದ್ರಿಯಂಗಳ ಕೂಡ ಮನಸ್ಥಾಪ್ಯಗೊಳದಿದ್ದರೆ
ಇದು ಉರಲಿಂಗ ಸ್ವಾಯತ,
ಪ್ರಾಣಲಿಂಗಪ್ರಾಣಿಗಿದು ಚಿಹ್ನೆ, ಕೂಡಲ ಚೆನ್ನಸಂಗಮದೇವಾ. । ೪೦ । [೯೦೪]

೩೭೬

ಕರಸ್ಥಲದಲ್ಲಿ ಲಿಂಗಸ್ಥಾ²ಪ²ನವಾದ ಬಳಿಕ
ಲಿಂಗದಲ್ಲಿ ಅನಿಮಿಷ ದೃಷ್ಟಿಯಾಗಿರಬೇಕು.
ತನ್ನ ತಾನೆ ಅನಿಮಿಷವಾಗಬೇಕು.
ಲಿಂಗದಲ್ಲಿ ಅನಿಮಿಷವಾಗಬೇಕು.
ಜಂಗಮದ ನಿಲುಕಡೆಯನಱಿಯಬೇಕು.
ಪ್ರಸಾದದಲ್ಲಿ ಪರಿಪೂರ್ಣನಾಗಬೇಕು.
ಹಿರಣ್ಯಕ್ಕೆ ಕೈಯಾನದಿರಬೇಕು.
ತನ್ನ ನಿಲುಕಡೆಯ ತಾನಱಿಯಬೇಕು.
ಇದು ಕಾರಣ ಕೂಡಲ ಚೆನ್ನಸಂಗನಲ್ಲಿ
ಕರಸ್ಥಲದ ನಿಜವನಱಿವರೆ ಇದು ಕ್ರಮ. । ೪೧ । [೯೦೫]

೧–೧ x (ಮೂ), ೨–೨ x (ಮೂ).

೩೭೭
ಅಂಗಸೋಂಕಿನಲ್ಲಿ ಲಿಂಗಸಂಗವಾದ ಬಳಿಕ
ಸರ್ವಾಂಗವಿಕಾರವಳಿಯಬೇಕು.
ಅಂಗಸೋಂಕಿನ ಲಿಂಗಕ್ಕೆ ಸೆಜ್ಜೆ ಶಿವದಾರವಾ[೧]ವುದೆಂದಡೆ :[೧]
ಜಂಗಮವೆ ಲಿಂಗದ ಸೆಜ್ಜೆ, ಆಚಾರವೇ ಶಿವದಾರ.
ತ್ರಿಕರಣ ಶುದ್ಧವಾಗಬೇಕು, ತ್ರಿವಿಧಗುಣಂಗಳಳಿಯಬೇಕು.
ತ್ರಿವಿಧಸಂಪನ್ನನಾಗಬೇಕು, ತ್ರಿಕಾಲ ಶಿವಲಿಂಗಾರ್ಚನೆಯ ಮಾಡಬೇಕು.
ಅಂಗಲಿಂಗಸಂಬಂಧಕ್ಕೆ ಇದು ಕ್ರಮ,
ಕೂಡಲ ಚೆನ್ನಸಂಗಮದೇವಾ. । ೪೨ । [೯೦೬]

೩೭೮
ಕಕ್ಷೆಯಲ್ಲಿ ಲಿಂಗವ ಧರಿಸಿಕೊಂಡ ಬಳಿಕ
ಅನ್ಯಕಾಂಕ್ಷೆಯಿಲ್ಲದಿರಬೇಕು.
ಮಾಯದ ಉಸಿರು ಎಡೆಯಾಡದಿರಬೇಕು.
ಸಂಸಾರ ಸಂಗವ ಹೊದ್ದದೆ
ಮನವು ಮಹಾಸ್ಥಲವನಿಂಬುಗೊಂಡಿರಬೇಕು,
ಕೂಡಲ ಚೆನ್ನಸಂಗನಲ್ಲಿ ಏಕಾರ್ಥವಾಗಿರಬೇಕು. । ೪೩ । [೯೦೭]

೩೭೯
ಗುರುಕಾರುಣ್ಯದ ಮಹಾಸಂಪಾದನೆಯಲ್ಲಿ
ಅತ್ಯಂತ ವಿಶೇಷಸ್ಥಳವೆ ಗಳವು.
ಮಹಾಲಿಂಗಸಂಪಾದನೆಯಲ್ಲಿ, ತ್ರಿವಿಧಸಂಪಾದನೆಯಲ್ಲಿ,
ಶರೀರಾರ್ಥ ಮಹಾರ್ಥದಲ್ಲಿ, ನಾದಬಿಂದು ಸಂಪಾದನೆಯಲ್ಲಿ,
ಮಾರ್ಗಕ್ರಿಯಾಸಂಪಾದನೆಯಲ್ಲಿ, ಭಕ್ತಿಸಂಪಾದನೆಯಲ್ಲಿ,
ಭಾವನಿಷ್ಠೆಯಲ್ಲಿ, ಅರ್ಪಿತ ನಿಷ್ಠೆಯಲ್ಲಿ ಆ ಗಳವೆ ಘನಸ್ಥಳ.
ಅತ್ಯಂತ ವಿಶೇಷಸ್ಥಳವಾಗಿ
ಗಳದಲ್ಲಿ ಧರಿಸಿರೇ ಕೂಡಲ ಚೆನ್ನಸಂಗಯ್ಯನ. । ೪೪ । [೯೦೮]

೧–೧ ದರೆ (ಮೂ).

೩೮೦

ಅಮಳೋಕ್ಯದಲ್ಲಿ ಲಿಂಗವ ಧರಿಸುವರೆ
ಅನ್ನಪಾನಾದಿಗಳ ಹಂಗಳಿಯಬೇಕು,
ಅಹಂಕಾರ ಮದಂಗಳಳಿಯಬೇಕು, ಜ್ಞಾನವಿಸ್ತಾರ ಪರಿಪೂರ್ಣನಾಗಿರಬೇಕು,
ಅನುಭಾವ ಘನಮನವೇದ್ಯನಾಗಬೇಕು, ಕಾಮದ [1]ಕಣ್ಣ[1]ಜೆಯದಿರಬೇಕು,
ಸುಶಬ್ದ ನಿಶ್ಶಬ್ದಿಯಾಗಬೇಕು, ಮಹದಾಶ್ರಯದಲ್ಲಿ ಮನವು ಲೀಯವಾಗಬೇಕು,
ಕೂಡಲ ಚೆನ್ನಸಂಗನಲ್ಲಿ ಏಕಾರ್ಥವಾಗಿರಬೇಕು. । ೪೫ । [೯೦೯]

೩೮೧

ಉತ್ತಮಾಂಗದಲ್ಲಿ ಲಿಂಗವ ಧರಿಸಿದ ಬಳಿಕ
ಧರೆಗೊಱಗಲಾಗದು, ಮಾನವರ ಬೇಡಲಾಗದು,
ಹಸಿವು ತೃಷೆ ವ್ಯಸನಂಗಳು ಲಿಂಗದಲ್ಲಿ ನಿಕ್ಷೇಪವಾಗಬೇಕು,
ಜಾಗ್ರಸ್ವಪ್ನಸುಷುಪ್ತಿಯಲ್ಲಿ ಲಿಂಗದ ನಿಲುಕಡೆಯನಱಿದು
ತೆಱಹಿಲ್ಲದಿರಬೇಕು, ಕೂಡಲ ಚೆನ್ನಸಂಗಮದೇವಾ. । ೪೬ । [೯೧೦]

[2]ಪ್ರಾಣಲಿಂಗಿಯ ಪ್ರಾಣಲಿಂಗಿಸ್ಥಲ:[2]

೩೮೨

ಪ್ರಾಣಲಿಂಗ ಸಂಬಂಧಿಯಾದ ಬಳಿಕ ತನುಗುಣವಿರಲಾಗದಯ್ಯಾ.
ಕೈ ಸಿಂಹಾಸನವಾದ ಬಳಿಕ ಸಂದಾಗಿರಲಾಗದಯ್ಯಾ.
ಕೂಡಲ ಚೆನ್ನಸಂಗಯ್ಯಾ, ಈಯನುವನಲ್ಲಮ ತೋಱಿದ. । ೪೭ । [೮೫೬]

೩೮೩

ಪೂರ್ವಬೀಜನಲ್ಲ, ಪೂರ್ವಪ್ರಾಣಿಯಲ್ಲ, ಪೂರ್ವಾಹಾರಿಯಲ್ಲ.
ಪೂರ್ವಾದಿಗಳೆಲ್ಲವನುತ್ತರಿಸಿ ಕಳೆದು ಲಿಂಗಗರ್ಭಿತನಾದ,
ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೪೮ । [೮೫೫]

೩೮೪

ಅಂಗವಾಚಾರದಲ್ಲಿ ಸಂಗವಾಯಿತ್ತು, [3]ಆಚಾರ ಪ್ರಾಣದಲ್ಲಿ ಸಂಗವಾಯಿತ್ತು,[3]
ಪ್ರಾಣ ಲಿಂಗದಲ್ಲಿ ಸಂಗವಾಯಿತ್ತು, ಪ್ರಾಣಕ್ಕೆ ಪ್ರಾಣವಾಗಿ ಉಭಯ ಪ್ರಾಣ
ಕೂಡಲ ಚೆನ್ನಸಂಗಮದೇವ. । ೪೯ । [೮೫೮]

೧–೧ ಗಣ್ಣಿ (ಮೂ), ೨–೨ ಪ್ರಾಣಲಿಂಗಿ (ಮೂ), ೩–೩ x (ಮೂ).

೩೮೫

[೧]ಧ[೧]ರ್ಮವೆ ಸಯವಾಗಿ, ಆಚಾರದ ನಿಲವನಱಿದು,
ಹೃದಯದ ಕತ್ತಲೆಯ ಉದಯದಲೆ ಕಳೆದು,
ಮುಟ್ಟುವುದ ಮುಟ್ಟದೆ ಕಳೆದು, ಮುಟ್ಟದುದ ಮುನ್ನವೆ ಕಳೆದು.
ಅಯ್ಯಾ ಅಯ್ಯಾಯೆಂಬಲ್ಲಿಯೆ ಕಲಿಯಾದ.
ಕೇಸರಿ[೨]ಸ[೨]ಮ ಜೋಗಯ್ದುಱ ಮದ ಸೇನೆದಳ ಮುಱಿಯಿತ್ತು,
ಎನ್ನೊಡೆಯ ಕೂಡಲ ಚೆನ್ನಸಂಗಯ್ಯ ಹಿಡಿವಡೆದ. ।೫೦। [೮೫೪]

೩೮೬

ಕಾಯಾನುಭಾವಿಗಳು ಕಾಯದಲೆ ಮುಕ್ತರು.
ಜೀವಾನುಭಾವಿಗಳು ಜೀವದಲೆ ಮುಕ್ತರು.
ಪ್ರಾಣಾನುಭಾವಿಗಳು ಪ್ರಾಣದಲೆ ಮುಕ್ತರು.
ಪವನಾನುಭಾವಿಗಳು ಪವನದಲೆ ಮುಕ್ತರು.
ಇವರನೆಂತು ಸರಿಯೆಂಬೆ, ಲಿಂಗಾನುಭಾವಿಗಳಿಗೆ?
ಸ್ವಯಂಪ್ರಕಾಶಲಿಂಗದಲ್ಲಿ ಸದಾ ಸನ್ನಿಹಿತ
ಕೂಡಲ ಚೆನ್ನಸಂಗಯ್ಯಾ, ನಿಮ್ಮ ಶರಣ. ।೫೧। [೯೧೧]

೩೮೭

ಸ್ತ್ರೀಲಿಂಗ ಪುಲ್ಲಿಂಗ ನಪುಂಸಕಲಿಂಗವೆಂದೆಂಬರು,
ಆದಿ ಅನಾದಿ ಸಂದಣಿ ಸಯವಾಯಿತ್ತು
ಪ್ರಣಮಪ್ರಜ್ವಲಿತ ಕುಳವಳಿಯದೆ ಪ್ರಣಮಲಿಂಗ,
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. ।೫೨। [೯೧೨]

೩೮೮

[೩]ಉಱುಗಿವೋದ[೩] ಕೊಡನನಳುಕದೆ [೪]ಮಱುಗದೆ ಹಿಡಿವ[೪] ನೇಹವ ನೋಡಿರೆ.
ಹರಿವ ಕರಿಗಳ ಅಱಿವಿ[೫]ನೆಡೆಗೆ[೫] ನೋಡಿರೆ.
ಸರ ಹಱಿದ ಮಣಿಗಳೊಂದೇ ಹರಳಾದುದ ನೋಡಿರೆ.
ಬೆರಸಿ ಬೇಱಿಹ ಕೂಡಲ ಚೆನ್ನಸಂಗ[ನ]ನೆರಡಿಲ್ಲದೆ ನೋಡಿರೆ. ।೫೩। [೬೧೩]

೧–೧ ಕ (ಮೂ), ೨–೨ x(ಮೂ), ೩–೩ ತುರಗಿ ವೊಡ (ಮೂ), ೪–೪ ಮರದತ (ಮೂ), ೫–೫ ಗಡಗಿ (ಮೂ).

೩೮೯

ಕಳೆಯೇಱಿದ ಲಿಂಗದ ತೆಱನನಱೆ[1]ದು,[1]
ಕಳೆಯುದ ವಳಯದ ಸೀಮೆಯಿಂದತ್ತತ್ತಲು ವೇಧಿಸಿದ ಮುಗ್ಧೆಯ ನೋಡಾ.
ಪಂಚಭೂತಿಕದ ಗಡಣೆಯ ಭಾವವ ನೇಮದಲ್ಲಿ ಭಾವಿಸಿದ ಮುಗ್ಧೆಯ ನೋಡಾ.
ಇರುಳು ಹಗಲೆಂಬ ಬೆಳಗು ಕತ್ತಲೆಯನಱಿಯದ ಮುಗ್ಧೆಯ ನೋಡಾ.
ಆಕಾರ ನಿರಾಕಾರ ಸಿಂಗಾರ[2]ದ,[2] ಪುಣ್ಯ[3]ಪಾಪ[3]ದ, ಅಱಿವಿನ ಮಱಹಿನ,
ಅಷ್ಟದಳಕಮಲದ ಮಧುಪಾ[4]ನವಾಗದಂತೆ,[4]
ಕೂಡಲ ಚೆನ್ನಸಂಗಯ್ಯನೆಂಬ ಮಹಾಲಿಂಗವನು
ಮನದಲ್ಲಿ ಅಳವಡಿಸಿದ ಮುಗ್ಧೆಯ ನೋಡಾ. । ೫೪ । [೯೧೪]

೩೯೦

ಉತ್ತರ ದಕ್ಷಿಣ[5] ಪೂರ್ವ ಪಶ್ಚಿಮ[5]ದ ಬಂದ ಬಟ್ಟೆಯನಾಲಿಸದೆ
ವಾಯುಬಂಧನಮಂ ಕಟ್ಟಿ,
ಪಶ್ಚಿಮದ್ವಾರದಲ್ಲಿ ಪ್ರಾಣನಿವಾಸಿಯಾಗಿದ್ದನಾ ಶರಣ.
ಅಧೋನಾಳದಲ್ಲಿ ನಿರುತ, ಮಧ್ಯನಾಳದಲ್ಲಿ ನಿರಾಳ,
ಊರ್ಧ್ವನಾಳದಲ್ಲಿ ಸುರಾಳ.
ವ್ಯೋಮಕುಸುಮದ ಕೊನೆಯ ಶೈ[6]ತ್ಯೋ[6]ದಕವ ಧರಿಸಿದ ಘಟಕ್ಕೆ ಕೇಡಿಲ್ಲಾಗಿ,
ಲಿಂಗಕ್ಕೆ ಪ್ರಾಣಕ್ಕೆ ಒಂದೆಂಬ ಕಾರಣ ಅಚಳವೆನಿಸಿತ್ತು.
ಇದು ಕಾರಣ ಕೂಡಲ ಚೆನ್ನಸಂಗಮದೇವಾ
ಎನ್ನ ಪ್ರಾಣಕ್ಕೆ ಭವವಿಲ್ಲ, ಬಂಧನವಿಲ್ಲ. । ೫೫ । [೯೯೫]

೩೯೧

ಉತ್ತಮಾಂಗ ಗಳ ಕಕ್ಷ ಕರಸ್ಥಳ ಮುಖಸೆಜ್ಜೆ ಅಮಳೋಕ್ಯ
ಅಕಟಕಟಾ! ಭಿನ್ನವಾರ್ತೆಯ ಕೇಳಲಾಗದು.
ಕೂಡಲ ಚೆನ್ನಸಂಗಯ್ಯಾ, ಸರ್ವಾಂಗಲಿಂಗವಲ್ಲದೆ ಕೇಳಲಾಗದು. । ೫೬ । [೮೫೯]

೩೯೨

ಶಬ್ದವೂ ಅಶಬ್ದವೂ ಶಬ್ದದಲ್ಲಿಯೆ ಕಾಣಬಹುದು, ಕಾಣಿರೋ !
ಇದ್ದವರು ಇದ್ದ ಸ್ಥಲವನೆ ನುಡಿವರು, ಅದಕದು ಸಹಜ.

೧–೧ ದ (ಮೂ), ೨–೨ x(ಮೂ), ೩–೩ ಪುಣ್ಯ (ಮೂ), ೪–೪ ವೆ ಆಗದೆ (ಮೂ), ೫–೫ ಪಶ್ಚಿಮ ಪೂರ್ವಾಪರ (ಮೂ), ೬–೬ ಲೋ (ಮೂ).

ಲಿಂಗದ ನಡೆ, ಲಿಂಗದ ನುಡಿ, ಲಿಂಗದ ನೋಟ,
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. ।೫೭। [೮೫೭]

ಪ್ರಾಣಲಿಂಗಿಯ ಭಕ್ತ[೧]ಸ್ಥಲ:[೧]

೩೯೩

[೨]ಪೃಥ್ವಿ ಸಲಿಲ ಪಾವಕ ಪವನ ಅಂಬರ[೨] ರವಿ ಶಶಿ ಆತ್ಮವೆಂಬ
ಅಷ್ಟತನುವಿನ ಭೇದವ ಭೇದಿಸಿ,
ಶ್ರೋತ್ರ ನೇತ್ರ ತ್ವಕ್ಕು ಘ್ರಾಣ ಜಿಹ್ವೆ ಸ್ಪರ್ಶವೆಂಬೀ ಪಂಚೇಂದ್ರಿಯವನಜೆದು,
ವಾಕು ಪಾಣಿ ಪಾದ ಪಾಯು ಗುಹ್ಯವೆಂಬ ಕರ್ಮೇಂದ್ರಿಯಂ ತೊಱೆದು,
ಪ್ರಾಣಾಪಾನ ವ್ಯಾನೋದಾನ ಸಮಾನ ನಾಗ ಕೂರ್ಮ [೩]ಕೃಕರ[೩] ದೇವದತ್ತ
ಧನಂಜಯನೆಂಬ ದಶವಾಯುಗಳ ಸಂಚವನಜೆದು,
ಮನಶುದ್ಧಿ ಚಿತ್ತಹಂಕಾರವೆಂಬ ಚತುರ್ವಿಧ ಕರಣಂಗಳನೊಂದುಮಾಡಿ,
ಉತ್ಪತ್ತಿ ಸ್ಥಿತಿ ಲಯವೆಂಬ ಕಾಲಮೂಲಾದಿಗಳಂ ಸುಟ್ಟು,
ಜ್ಞಾನವನೆ ಬೆಳಗಿ, ಧ್ಯಾನವನೆ ನಿಲಿಸಿ,
ಸುಚಿತ್ತದಲ್ಲಿ ಲಿಂಗಾರ್ಚನೆಯ ಮಾಡುವ ಶರಣ.
ವ್ಯಾಪಾರಂ ಸಕಲಂ ತ್ಯಕ್ತ್ವಾ ರುದ್ರೋರುದ್ರಂ ಸಮರ್ಚಯೇತ್ ।
ಎಂಬ ಶ್ರುತಿಯ ನಿಮ್ಮ ಶರಣರಲ್ಲಿ ಕಾಣಬಹುದು
ಕೂಡಲ ಚೆನ್ನಸಂಗಮದೇವಾ. ।೫೮। [೯೧೫]

೩೯೪

ಎನ್ನ ತನುವೆ ಅರ್ಘ್ಯವಣಿಯ ಬಿಂದಿಗೆ, ಮನವು ಸಿಂಹಾಸನ,
ಹೃದಯಕಮಲ ಪುಷ್ಪ, [೪]ಎನ್ನ ಕಿವಿಗಳೇ ಕೀರ್ತಿಮುಖ,
ನೆನೆವ ನಾಲಗೆ ಘಂಟೆ, ಶಿರವೆ ಸುವರ್ಣದ ಕಳಸ,
ಎನ್ನ ನಯನ ಸ್ವಯಂ ಜ್ಯೋತಿ ಆರತಿಯನೆತ್ತುವೆ.
[೫]ಎ[೫]ನ್ನ ಚಂದ್ರ[೬]ಶೇ[೬]ಖರಲಿಂಗಕ್ಕೆ ಮಾಡಿದೆನೆನ್ನ ಪ್ರಾಣ[೭]ಪೂಜೆಯ.
ಎನ್ನ ಕಾಯಭಾಜನವನೀಪರಿಯ ಮಾಡಿದೆ[೮]ನಾ[೮]ಗಿ
ಕೂಡಲ ಚೆನ್ನಸಂಗನ ಪೂಜಿಸಿದಲ್ಲದೆ ನಿಲಲಾಱೆ. ।೫೯। [೯೩೦]

೧–೧ x(ಮೂ), ೨–೨ x(ಮೂ), ೩–೩ ಕಿಕಿಲ (ಮೂ), ೪+ ದ ಪೂಜೆಯ ಮಾಡಿ (ಮೂ), ೫–೫ ನೆ (ಮೂ), ೬–೬ ಶಿ (ಮೂ), ೭+ ಲಿಂಗಕ್ಕೆ (ಮೂ), ೮–೮ ಯಾ (ಮೂ).

೩೯೫

ನೂಱನಾಲ್ವತ್ತೆಂಟು ದೇಹವಿಕಾರಕ್ಕೆ ಮನವೆ ತೇಜಿ,
ಕರಣಂಗಳೇಳು ಮಾನಿಸ ಸೇನಬೋವರು, ಅಷ್ಟಮದವೆಂಟಾನೆ,
ಮೊದ[ಲ] ನಾಯಕರಿಪ್ಪತ್ತೈವರು,
ಕಾಯಪುರ[1]ವೆಂಬ[1] ಪಟ್ಟಣದೊಳಗೆ ಅನಾಮಿಕನೆಂಬ [2]ಹೆಸರಸು,[2]
ಲಿಂಗವ ಪೂಜಿಸುವಾತ ಅಜಾತನೆಂಬ [3]ಶರಣ.[3]
ಆ ಶರಣನ ಮರ್ತ್ಯ[4]ನೆಂದರೆ ನಾಯಕನರಕ ತಪ್ಪದು
ಕೂಡಲ ಚೆನ್ನಸಂಗಮದೇವಾ. ।೬೦।

೩೯೬

ಗುರುದ್ರವ್ಯವ ಗುರುವಿಂಗೊಪ್ಪಿಸಿಹೆವೆಂದೆಂಬರು,
ಗುರುದ್ರವ್ಯವಾವುದೆಂದಱಿಯರು.
ದೇಹಿಕದ್ರವ್ಯ, [5]ಮನದ್ರವ್ಯ,[5] ಭೌತಿಕ ದ್ರವ್ಯ, ಆತ್ಮದ್ರವ್ಯ
ಜ್ಞಾನದ್ರವ್ಯವೆಂಬ ಪಂಚದ್ರವ್ಯವನು
ಉಭಯವಳಿದು ಷೋಡಶೋಪಚಾರದಲ್ಲಿ ಉಪಚರಿಸಬಲ್ಲರೆ
ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣ ಪೂಜಕನಾದ. ।೬೧। [೮೬೭]

೩೯೭

ತನು ಭಕ್ತ, ಮನ ದಾಸೋಹಿ, ಇಂದ್ರಿಯಂಗಳು ಪ್ರಸಾದಿಗಳು,
ಸಜ್ಜನ ಶರಣರ ಪ್ರಾಣವೆ ಲಿಂಗ. ಇದು ಕಾರಣ
ಕೂಡಲ ಚೆನ್ನಸಂಗಮದೇವಾ ಹೊಱಗೇನೂ ಅಱಿಸಲಿಲ್ಲ. ।೬೨। [೯೪೦]

೩೯೮

ಪಾತಕೇ ಸಮನು ಪ್ರಾಪ್ತೇ ಶಿವಲಿಂಗಂ ಪ್ರಪೂಜಯೇತ್ ।
ಅಥವಾ ಪೂರ್ವಕರ್ಮಾಣಾಂ ತತ್ಪೂಜಾ ನಿಷ್ಫಲಾ ಭವೇತ್ ॥
ಎಂಬುದನಱಿದು ಸ್ನಾನ ಧ್ಯಾನ ಜಪ ಹೋಮಾದಿ
ಕ್ರೀಗಳು ನಿಮ್ಮ ಶರಣಂಗಿಲ್ಲ, ಅನ್ಯವನಱಿಯನಾಗಿ,
ಅನ್ಯಕಾರ್ಯ ಅನರ್ಪಿತ ನಿಮ್ಮ ಶರಣಂಗಿಲ್ಲ, ಲಿಂಗವನಗಲಿ ಇರನಾಗಿ.

೧-೧ x(ಮೂ), ೨-೨ x(ಮೂ), ೩-೩ x(ಮೂ), ೪+ ಜ (ಮೂ), ೫-೫ x(ಮೂ).

ಆಗಮೋಕ್ತವಹ ಅರ್ಚನೆ ಪೂಜನೆ ಆಹ್ವಾನ ವಿಸರ್ಜನೆ ಷೋಡಶೋಪಚಾರ
ನ್ಯಾಸಮುದ್ರೆಗಳು ಇವು ನಿಮ್ಮ ಶರಣಂಗಿಲ್ಲ, ಪೂಜೆ[೧] ಗವಸಾನವಿಲ್ಲಾಗಿ.
ಇಂತಪ್ಪ[೧] ಭಕ್ತಿಯ ಪಥದ [೨]ನಿ[೨]ಲವನಱಿದ ಕಾರಣ
ಭವವಿಲ್ಲ ಚೆನ್ನಸಂಗಯ್ಯಾ
ನಿಮ್ಮ ಶರಣನು ದಾಸೋಹಿಯಾದ ಕಾರಣ ಸರ್ವಾಂಗಲಿಂಗಿ. । ೬೩ । [೫೩೭?]

೩೯೯

ಅಂಗದ ಮೇಲೆ ಲಿಂಗಸಾಹಿತ್ಯವಾಗದಿದ್ದರೇನು,
ಪ್ರಾಣವೇನು ವಾಯುಪ್ರಾಣವೆ?
ಪ್ರಾಣದ ಮೇಲೆ ಲಿಂಗಸಾಹಿತ್ಯವಾಗದಿದ್ದರೇನು,
ಕಾಯವೇನು ಬಱಿಕಾಯವೆ? ಅಹಂಗಲ್ಲ, ನಿಲ್ಲು.
ಗೌರವಂ ಕಾಯಸಂಬಂಧಂ ಪ್ರಾಣಸ್ತು ಪ್ರಾಣಸಂಯುತಃ ।
ಕಾರಣಂ ಭಾವಸಂಬಂಧಂ ಗುರೋಃ ಶಿಷ್ಯಮನುಗ್ರಹಂ ॥
ಎಂದುದಾಗಿ ಹರರೂಪವಾಗಿದ್ದುದೆ ಪ್ರಾಣಲಿಂಗ, ಗುರುರೂಪಾಗಿದ್ದುದೆ ಜಂಗಮಲಿಂಗ.
ಹರರೂಪಾಗಿ[೩]ರ್ದ[೩] ಪ್ರಾಣಲಿಂಗವಾವ ಕೈಯಲುಂಬುದೆಂದರೆ,
ಭಕ್ತ[೪]ನ[೪] ಜಿಹ್ವಾಗ್ರದಲುಂಬುದು.
ಗುರುರೂಪಾಗಿರ್ದ[೫] ಜಂಗಮಲಿಂಗ[೫]ವಾವ ಕೈಯಲುಂಬುದೆಂದರೆ
ಜಂಗಮ ಜಿಹ್ವಾಗ್ರದಲುಂಬುದು.
ಇದು ಕಾರಣ ಹರರೂಪಾಗಿದ್ದುದೆ ಪ್ರಾಣಲಿಂಗ,
ಗುರುರೂಪಾಗಿದ್ದುದೆ ಜಂಗಮಲಿಂಗ.
ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ ।
ಜಂಗಮಸ್ಯಾನಮಾನೇನ ಸ್ಥಾವರಂ ನಿಷ್ಫಲಂ ಭವೇತ್ ॥
ಎಂಬ ವಚನವನಱಿದು ಸ್ಥಾವರವನು ಜಂಗಮವನು ಒಂದೆಂದಱಿದೆನಯ್ಯಾ
ಕೂಡಲ ಚೆನ್ನಸಂಗಮದೇವಾ. । ೬೪ । [೮೭೭]

೪೦೦

ಹರಿವ ಹಾವಿಂಗೆ ಹಾಲನೆಱೆವ ಪ್ರಾಣಿಗಳು
ಹಾವಿನ ಅಂತರಂಗವನೆತ್ತ ಬಲ್ಲರು? ಹೇಳಾ.
ಕೈಲೆಡೆಗೊಟ್ಟ ಲಿಂಗಕ್ಕೆ ಮಜ್ಜನಕ್ಕೆಱೆವ ಪ್ರಾಣಿಗಳು

೧–೧ x(ಮೂ), ೨–೨ x(ಮೂ), ೩–೩ ದರ್ (ಮೂ), ೪–೪ x(ಮೂ), ೫–೫ ಶ್ರೀ ಗುರು (ಮೂ).

ಪ್ರಾಣಲಿಂಗ ಸಂಬಂಧದ ಸಕೀಲವನೆತ್ತ ಬಲ್ಲರು? ಹೇಳಾ.
ಪಾಣಿನಾ ಧೃತಲಿಂಗಂ ತತ್ ಪ್ರಾಣಸ್ಥಾನೇ ವಿನಿಕ್ಷಿಪೇತ್ ।
ಯಸ್ತು ಭೇದೇ ನ ಜಾನಾತಿ ನ ಲಿಂಗಂ ತಸ್ಯ ನಾರ್ಚನಂ ॥
ಲಿಂಗಜಂಗಮ ಒಂದೆಂದಱಿಯದವರ ಮಾಟ
ಅದಱ ವಿಧಿಯಂತೆ ಕೂಡಲ [ಚೆನ್ನ]ಸಂಗಮದೇವಾ. ।೬೫। [೮೭೫]

೪೦೧
ಕ್ರೀಯಿಂದಾದುದು ಲಿಂಗವೆಂದೆಂಬರು,
ಕ್ರೀಯಿಂದಾದುದು ಜಂಗಮವೆಂದೆಂಬರು.
ಕ್ರೀಯಿಂದಾದುದು ಲಿಂಗವಲ್ಲ, ಜಂಗಮವಲ್ಲ,
ಜಂಗಮವುಂಟು ಜಂಗಮವಿಲ್ಲ.
ಜಂಗಮ ಸುನಾದರೂಪು, ಕೂಡಲ ಚೆನ್ನಸಂಗಮದೇವಾ. ।೬೬। [೯೭೩]

೪೦೨
ಸ್ಥಾವರ ಜಂಗಮ ಒಂದೆಂಬರು ನೀವು ಕೇಳಿರೆ:
ಸ್ಥಾವರವೆ ಲಿಂಗ, ಜಂಗಮವೆ ಭಕ್ತ.
ಪೂಜಿಸುವುದು ಲಿಂಗ, ಪೂಜೆಗೊ[೧]ಂಬುದು[೧] ಜಂಗಮ.
ಸ್ಥಾವರ–ಜಂಗಮ ಒಂದಾದ ಕಾರಣ ಜಂಗಮವೆನಿಸಿತ್ತು.
ದೇವ–ಭಕ್ತನೊಂದಾದ ಕಾರಣ ಸ್ಥಾವರವೆನಿಸಿತ್ತು.
ಸ್ಥಾವರವೆ ಘಟವು, ಜಂಗಮವೆ ಪ್ರಾಣವು.
ಇದು ಕಾರಣ ಕೂಡಲ ಚೆನ್ನಸಂಗಾ ನಿಮ್ಮ ಶರಣ ಸ್ವತಂತ್ರ. ।೬೭। [೯೮೧]

೪೦೩
ನೇಮವೆಂದೇನು? ನಿತ್ಯವೆಂದೇನು? ಆಗಮವೆಂದೇನು? ಆಚಾರವೆಂದೇನು?
ಲಿಂಗ ಜಂಗಮದ ಕುಳವೊಂದೇ ಎಂದು ಸಂಪಾದಿಸಲು
ನಾಲ್ಕು ಯುಗಂಗಳು ಇಂತೆ ಹೋದವು.
ಕಂಡು ಹೇಳರು, ತಂದು ತೋಱರು, ಅವರು ಮಹಂತರೆ?
ಕೂಡಲ ಚೆನ್ನಸಂಗಮದೇವ
ಸುಲಭವಾಗಿ ಶರಣಸನ್ನಿಹಿತ ಲಿಂಗವು. ।೬೮। [೮೬೬]

೧–೧ ಬಾತ (ಮೂ).

೪೦೪
ಲಿಂಗದೊಳಗಣ ಬೀಜ ಜಂಗಮದಲುತ್ಪತ್ತಿ.
ಕಾಯಗುಣವಿಲ್ಲಾಗಿ ಸಂಸಾರ ಭಯವಿಲ್ಲ,
ಅಂತರಂಗ ಶುದ್ಧಾತ್ಮ, ನಿಸ್ಸಂಗಿ ಜಂಗಮ,
ಕೂಡಲ ಚೆನ್ನಸಂಗಮದೇವಾ. । ೬೯ । [೯೭೧]

೪೦೫
ಅಂಗ [೧]ಮನ[೧] ಪ್ರಾಣ ತ್ರಿಸ್ಥಾನ ಸಂಗವಾಗಿ,
ಮನಕ್ರೀಯಳಿದು, ಸಾರ[೨]ವು[೨]ಳಿದು ನಿಂದು,
ಅತಿರಥರ ಸಮರಥರ ನುಡಿಗಡಣ ಸಂಭಾಷಣೆಯಿಂದ
ಹೃದಯ ಕಂದೆಱೆದು,
ಜಂಗಮದಲ್ಲಿ ಅಜೀವ, ಲಿಂಗದಲ್ಲಿ ಮಱೆವ
ಕೂಡಲ ಚೆನ್ನಸಂಗ ತಾನಾಗಿ. । ೭೦ । [೮೮೧]

೪೦೬
ಅಕಾಯಮುಖದಲ್ಲಿ ಸಕಾಯ ಪ್ರತಿಬಿಂಬಿಸೂದು.
[೩]ಸ[೩]ಕಾಯಮುಖದಲ್ಲಿ ಅಕಾಯ ಪ್ರತಿಬಿಂಬಿಸೂದು.
ಸೋಂಕಿಲ್ಲದೆ ಸೊಗಸಿಲ್ಲದೆ ಹೂಣೆ ಹೋಗುವವನು, ಅನುಭಾವ ಸಕಾಯವಾಗಿ,
ಸ್ಥಾವರ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ ।
ಎಂದುದಾಗಿ ಕೂಡಲಚೆನ್ನಸಂಗಾ
ನಿಮ್ಮ ಘನತೆಯ ಶರಣನೆ ಬಲ್ಲ. । ೭೧ । [೯೮೦]

೪೦೭
ಅಂಗದಲಾಯತಲಿಂಗಸಾಹಿತ್ಯನಾಗಿದ್ದೆ ನಾನು,
ಪರಮಸುಖ ಪರಿಣಾಮದೊಳಿದ್ದೆ ನಾನು,
ತಸ್ಮೈ ಸರ್ವಾನುಭಾವೇನ ಶಿವಲಿಂಗಾಂತರೇ ದ್ವಯಂ ।
ಸ್ವಾನುಭೂತೌ ನಿವಿಷ್ಟಾಯ ಪ್ರಸನ್ನಃ ಸ್ಯಾತ್ ಸದಾಶಿವಃ ॥

೧–೧ x(ಮೂ), ೨–೨ ವ (ಮೂ), ೩–೩ x(ಮೂ).

[1]ಸ್ಥಾವರ[1] ಜಂಗಮ ಉಭಯವೊಂದಾಗಿ
ಬೇಱೆ ಭಿನ್ನಭಾವವ ವಿಚಾರಿಸಲಿಲ್ಲ.
ಕೂಡಲ ಚೆನ್ನಸಂಗನಲ್ಲಿ ಸ್ವಾಯತವಾಗಿದ್ದ ಸಹಜ. ।೭೨। [೯೭೯]

೪೦೮

ಲಿಂಗವೆ ಪ್ರಾಣವಾಯಿತ್ತಾಗಿ ಆಚಾರವಿಲ್ಲಯ್ಯಾ,
ಪ್ರಸಾದವೆ ಕಾಯವಾಯಿತ್ತಾಗಿ ರಜ ತಮ ಸತ್ವ ಕ್ರೋಧವಿಲ್ಲಯ್ಯಾ,
ಜಂಗಮಮುಖ[2]ದಲ್ಲಿ[2] ಲಿಂಗವಾದ ಕಾರಣ
ಲಿಂಗದಲನುಭಾವಿಸಿ ನೋಡುತ್ತಿದ್ದೇನಯ್ಯಾ.
ಭಕ್ತಕಾಯ ಮಮಕಾಯವಾಗಿ ಕೂಡಲ ಚೆನ್ನಸಂಗನಲ್ಲಿ
ಸುಖಿಯಾಗಿದ್ದೆ ನಾನಯ್ಯಾ. ।೭೩। [೯೭೬]

೪೦೯

ಸುಜ್ಞಾನವೆಂಬ ಭಾವವು ಗುರುವಿನಲ್ಲಿ ಸಾಹಿತ್ಯವು.
ಜ್ಞಾನವೆಂಬ ಭಾವವು ಶಿಷ್ಯನಲ್ಲಿ ಸಾಹಿತ್ಯವು.
ಗಮನವೆಂಬ ಭಾವವು ಲಿಂಗದಲ್ಲಿ ಸಾಹಿತ್ಯವು.
ಲಿಂಗಕ್ಕೆ ಮಜ್ಜನ ಮಾಡಲಾಗದು, ಅದೇನು ಕಾರಣ :
ಮನವೆಂಬ ಲಿಂಗವು ಭಾವದಲ್ಲಿ ಸಾಹಿತ್ಯವಾದ ಕಾರಣ.
ಲಿಂಗಕ್ಕೆ ಗಂಧ ಧೂಪ ನಿವಾಳಿಯ ಕುಡಲಾಗದು, ಅದೇನು ಕಾರಣ :
ನಿರ್ಗಮನವೆಂಬ ಲಿಂಗವು ನಾಸಿಕದಲ್ಲಿ ಸಾಹಿತ್ಯವಾದ ಕಾರಣ,
ಲಿಂಗಕ್ಕೆ ಪೂಜೆಯ ಮಾಡಲಾಗದು, ಅದೇನು ಕಾರಣ :
ಪರಿಮಳವೆಂಬ ಲಿಂಗವು ಮನಸ್ಥಳದಲ್ಲಿ ಸಾಹಿತ್ಯವಾದ ಕಾರಣ.
ಲಿಂಗಕ್ಕರ್ಪಿತವ ಮಾಡಲಾಗದು ಅದೇನು ಕಾರಣ :
ರುಚಿತತ್ವವೆಂಬ ಲಿಂಗವು ಜಿಹ್ವೆಯ ಕೊನೆಯ ಮೊನೆಯ ಮೇಲೆ
ಸಾಹಿತ್ಯವಾದ ಕಾರಣ.
[3]ಲಿಂಗಕ್ಕೆ ರೂಪನರ್ಪಿಸಲಾಗದು, ಅದೇನು ಕಾರಣ :
ರೂಪಾತೀತವಾದ ಲಿಂಗವು ನೇತ್ರದಲ್ಲಿ ಸಾಹಿತ್ಯವಾದ ಕಾರಣ.[3]
ಇಂತು ಷಡುಸ್ಥಲವನಱಿದು ಷಡುವರ್ಣವ ಮೀಱಿ
ಚರವೆಂಬ ಜಂಗಮಸಾಹಿತ್ಯವಾದ ಕಾರಣ
ಭಕ್ತಗೆ ಮತ್ತೆ ಪ್ರಾಣಲಿಂಗವಿಲ್ಲಯ್ಯ.

೧–೧ x (ಮೂ), ೨–೨ x (ಮೂ), ೩–೩x (ಮೂ).

ಇದು ಕಾರಣ ಕೂಡಲ ಚೆನ್ನಸಂಗಮದೇವಯ್ಯಾ,
[೧]ಲಿಂ[೧]ಗಸಾಹಿತ್ಯವಾದವರಂತಿರಲಿ
ಕಂಗಳ ನೋಟದಲ್ಲಿ ಜಂಗಮಸಾಹಿತ್ಯವಾದವರಪೂರ್ವ. ।೭೪। [೯೮೪]

ಪ್ರಾಣಲಿಂಗಿಯ ಮಾಹೇಶ್ವರ[೨]ಸ್ಥಲ:[೨]

೪೧೦
ಸೀಮರ ಕಂಡೆ, ನಿಸ್ಸೀಮರ ಕಂಡೆ,
ಭಾವರ ಕಂಡೆ, ಅಭಾವರ ಕಂಡೆ.
ಕೂಡಲ ಚೆನ್ನಸಂಗಯ್ಯಾ ಮನಸಾಹಿತ್ಯರನಾರುವ ಕಾಣೆ. ।೭೫। [೮೨೧]

೪೧೦
ಷೋಡಶೋಪಚಾರವಿಲ್ಲದೆ ಮುಟ್ಟಲಅಿಯದವರ ಕಂಡರೆ
ಅವರನೇನೆಂಬೆನಯ್ಯಾ?
ಆವ ಭಾವದಲ್ಲಿ ಆವ ಮುಖದಲ್ಲಿ ಆವ ಜ್ಞಾನದಲ್ಲಿ
ಅವರನಯ್ಯಯೆಂಬೆನು?
ನಿಮ್ಮಲ್ಲಿ ಸಮ್ಯಕವಾದ ಸತ್ಯಶರಣರ ಅವರನಯ್ಯಯೆಂಬೆನು
ಕೂಡಲ ಚೆನ್ನಸಂಗಮದೇವಾ. ।೭೬। [೯೦೧]

೪೧೨
ಶೀಲವಂತರು ಲಕ್ಕ ಲಕ್ಕ, ನೇಮಸ್ಥರು ಲಕ್ಕ ಲಕ್ಕ,
ವ್ರತ[೩]ಸ್ಥ[೩]ರು ಲಕ್ಕ ಲಕ್ಕ,
ಅರ್ಥ ಪ್ರಾಣ ಅಭಿಮಾನವನೊಪ್ಪಿಸಿದ ವೈರಾಗಿಗಳು ಲಕ್ಕ ಲಕ್ಕ.
ಕೂಡಲ ಚೆನ್ನಸಂಗಯ್ಯನಲ್ಲಿ ಇವರೆಲ್ಲಾ [೪]ಫ[೪]ಲಸದರ್ಥರಲ್ಲದೆ
ಲಿಂಗಸದರ್ಥರಾರೂ ಇಲ್ಲ. ।೭೭। [೮೨೨]

೪೧೩
ಅರಸನ ಹೆಸರಿಟ್ಟ ಅನಾಮಿಕನಂತೆ
ನಾಮಕ್ಕರುಹರಲ್ಲದೆ ಪಟ್ಟಕ್ಕರುಹರಪ್ಪರೆ?

೧-೧ ಅಂ (ಮೂ), ೨-೨ x(ಮೂ), ೩-೩ ಹಸ್ತ (ಮೂ), ೪-೪ ದ (ಮೂ).

ಲಿಂಗ ಜಂಗಮ ಪ್ರಸಾದವ ಅನುಭಾವ[1]ದ[1]
ಹೆಸರ ಹೇಳಿಕೊಂಡು ಬದುಕುವರಲ್ಲದೆ,
ವೇಷವ ಧರಿಸಿಪ್ಪ ಆಶ್ರಿತರೆಲ್ಲರೂ ಸಜ್ಜನಸಂಬಂಧ ಗುಣಾಧಿಗುಣಂಗಳಿಗೆ ಯೋಗ್ಯರೆ?
ಕೂಡಲ ಚೆನ್ನಸಂಗಯ್ಯಾ ಸಹಜ ಸ[2][ಮ್ಯ][2]ಕರಲ್ಲದವರಂತಿರಲು. । ೭೮ । [೬೪]

೪೧೪
ಲಿಂಗೈಕ್ಯರೆಂಬರು ತ್ರಿಪುರಮರ್ದನವಜೆಿಯರು,
ಲಿಂಗವಂತರೆಂಬರು ಕಾಮದಹನವ ಮಾಡಲಜೆಿಯರು.
ಪ್ರಾಣಲಿಂಗಿಗಳೆಂಬರು ಹರಿಯ ನಷ್ಟವನಜೆಿಯರು,
ಲಿಂಗಪ್ರಾಣಿಗಳೆಂಬರು ಬ್ರಹ್ಮನ ಕೊಲಲಜೆಿಯರು.
ಇಂತಪ್ಪ ಶಬ್ದಸೂತಕಿಗಳ ಕಂಡು ಕೂಡಲ ಚೆನ್ನಸಂಗನಲ್ಲಿ
ನಾಚಿತ್ತೆನ್ನ ಮನವು. । ೭೯ । [೮೯೩]

೪೧೫
ಎಲ್ಲಿಕ್ಕೆಯ ಎಣ್ಣೆ, ಎಲ್ಲಿಕ್ಕೆಯ ಬತ್ತಿ,
ಎಲ್ಲಿಕ್ಕೆಯ ಲಿಂಗವ ಪೂಜಿಸುವರು ನೀವು ಕೇಳಿರೆ:
ಅಂಗಲಿಂಗವೆಂಬೆನೆ? ಹಿಂಗದು ಮನದ ಭವಿತನ,
ಪ್ರಾಣ ಲಿಂಗವೆಂಬೆನೆ? ಭಾವದಲ್ಲಿ ಜಂಗಮವನಜೆಿಯರು,
ಗುರುವಚನ ಸಾರಾಯಸಂಪನ್ನರೆಂಬೆನೆ? ಷಟ್ಕರ್ಮಮಂತ್ರ ವಿರೋಧಿ[3]ಗಳು.[3]
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ತಾಯ ಮಾಜಿ ತೊತ್ತ ಕೊಂಬರನೇನೆಂಬೆ. । ೮೦ । [೮೯೪]

೪೧೬
ಶೀಲ ಶೀಲವೆಂದೇನೋ?
ಮಾಡಿದ ಮನೆ, ಹೂಡಿದ ಒಲೆ, ಅಟ್ಟುಂಬ ಮಡಕೆ, ಕಟ್ಟಿದ ಕೆಜೆ,
ಬಿತ್ತಿದ ಕೆಯಿ ಶೀಲವಲ್ಲದೆ, ತನ್ನ ಮನಕ್ಕೆ ಶೀಲವಿಲ್ಲ.
ಶೀಲವಂತನೆಂದರೆ :
ಲಿಂಗವು ಬಂದು ಮನವನಿಂಬುಗೊಂಬುದೇ ಶೀಲ,
ಜಂಗಮ ಬಂದು ಧನವನಿಂಬುಗೊಂಬುದೇ ಶೀಲ,

೧-೧ ರ (ಮೂ), ೨-೨ ಮ್ಮಿ (ಮೂ), ೩-೩ ಳಾಗಿ (ಮೂ).

ಪ್ರಸಾದ ಬಂದು ತನುವನಿಂಬುಗೊಂಬುದೆ ಶೀಲ.
ಇಂತಪ್ಪ ಶೀಲಕ್ಕೆ ನಮೋ ನಮೋ.
ಉಳಿದ ದುಃಶೀಲರ ಕಂಡರೆ ಮೆಚ್ಚುವನೆ ನಮ್ಮ
ಕೂಡಲ ಚೆನ್ನಸಂಗಯ್ಯ? ।೮೧। [೫೭೨]

೪೧೭

ಹೃದಯಕಮಲಮಧ್ಯದಲ್ಲಿಪ್ಪ ದೇವರ ದೇವನ ದೇಹಾರವ ಮಾಡಲಱಿಯದೆ,
ದೇಹಿ ನಿರ್ದೇಹಿಯಾಗದನ್ನಕ್ಕ ದೇಹಾರವೆಲ್ಲಿಯದೊ?
ಅನಂತಮುಖದಲ್ಲಿ ದೇಹಾರವ ಮಾಡಲು ದೇವನಲ್ಲಿಲ್ಲ ನೋಡಯ್ಯಾ.
ಅಸಾಹಿತ್ಯವಿಡಿದು ಹುಸಿಯನೆ ಪೂಜಿಸಿ ಗಸಣಿಗೊಳಗಾದಿರಲ್ಲಾ.
ಅನಂತವಳಿದು ನಿಜವನಱಿದು ಏಕೋಗ್ರಾಹಿ
ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೮೨। [೯೧೭]

೪೧೮

ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೆ?
ಸತ್ಯವುಳ್ಳಾತಂಗೆ ತತ್ವವಿಚಾರದ ಹಂಗೇಕೆ?
ಅಱಿವುಳ್ಳಾತಂಗೆ ಅಗ್ಗವಣಿಯ ಹಂಗೇಕೆ?
ಮನಶುದ್ಧವುಳ್ಳವಂಗೆ ಮಂತ್ರದ ಹಂಗೇಕೆ?
ಭಾವಶುದ್ಧವುಳ್ಳವಂಗೆ ಹೂವಿನ ಹಂಗೇಕೆ?
ಕೂಡಲ ಚೆನ್ನಸಂಗಯ್ಯಾ
ನಿಮ್ಮನಱಿದಾತಂಗೆ ನಿಮ್ಮ ಹಂಗೇಕೆ? ।೮೩। [೧೧೫೨]

೪೧೯

ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಲಾಗದು.
ಉದಯಾಸ್ತಮಾನವ ನೋಡಿ ಮಾಡುವ
ತುಡಗುಣಿ ನಾಯಿಗಳು ನೀವು ಕೇಳಿ ಭೋ.
ಉದಯವೆಂದೇನೊ ಶರಣಂಗೆ? ಅಸ್ತಮಾನವೆಂದೇನೊ ಶರಣಂಗೆ?
ಮಹಾಮೇರುವಿನ ಮಱಿಯಲ್ಲಿದ್ದು ತ[೧]ನ್ನ[೧] ನೆಳಲನಱಸುವ
ಭಾವಭ್ರಮಿತರ ಮೆಚ್ಚ ಕೂಡಲ ಚೆನ್ನಸಂಗಮದೇವ. ।೮೪। [೨೩೨]

೧-೧ ರ (ಮೂ).

೪೨೦
ಪ್ರಾಣಲಿಂಗವ ಸುಯಿಧಾನವ ಮಾಡು ಮಗನೇ, ಎಂದು
ಶ್ರೀಗುರು ಲಿಂಗವ ಕೊಟ್ಟನೇಕಾಂತದಲ್ಲಿ.
ಕೊಟ್ಟ ಲಿಂಗದ ನೇಮವ ಮಱೆಯದೆ,
ಪ್ರಾಣಲಿಂಗದ ಪರಿಚಾರವ ಮಾಡುವರಾರೂ ಇಲ್ಲ,
ಅಂಗದಿಂದ ಆ ಪ್ರಾಣಲಿಂಗ ಹಿಂಗಿದರೆ
ಈ ಲಿಂಗವ ಮುಟ್ಟಿ ಪೂಜಿಸುವರೆಲ್ಲ ಭಂಗಿತರಾದರು.
ಅರುಹಿರಿಯರೆಲ್ಲ[೧]ರಿಗೆ ಶರಣ[೧] ಸಂಬಂಧ ಸಾಲ[೨]ದ ಕಾರಣ,[೨]
ಎಲೆಯ ಮಱೆಯ ಕಾಯಂತೆ
ಮಱೆಯ ಮಾಡಿ, ಕುಱುಹ ತೋಱಿ
ನೆಱೆ ಜಗವನಾಳಿಗೊಂಡ ಕೂಡಲ ಚೆನ್ನಸಂಗಯ್ಯ. ।೮೫। [೮೯೬]

೪೨೧
ಶ್ರೀಗುರು ಕರಸ್ಥಲಕ್ಕೆ ಇಷ್ಟಲಿಂಗವ ಬಿಜಯಂಗೈಸಿ ಕೊಟ್ಟ ಬಳಿಕ.
ಮತ್ತೊಂದು ಸೆಜ್ಜೆ ಶಿವದಾರಬೇಕೆಂಬ ದ್ರೋಹ ಸಾಲದೆ?
ಅಂಗದ ಲಿಂಗವ ಹಿಂಗಿ, ಮಜ್ಜನಕ್ಕೆಱೆವ ಭಂಗಿತರ ತೋಱದಿರಯ್ಯಾ
ಕೂಡಲ ಚೆನ್ನಸಂಗಯ್ಯಾ. ।೮೬। [೮೯೧]

೪೨೨
ಮನೆಯೊಳಗಣ ಜ್ಯೋತಿ ಮನೆಯ ಮುಟ್ಟದಂತೆ,
ಬಸುಱೊಳಗಣ ಶಿಶು ಬಸುಱ ಮುಟ್ಟದಂತೆ,
ಕಕ್ಷೆ ಕರಸ್ಥಳ ಅಂಗಸೋಂಕು ಮುಖಸೆಜ್ಜೆ ಕಂಠ ಉತ್ತಮಾಂಗ
ಇವೆಲ್ಲಾ ಆಯತಂಗಳಲ್ಲದೆ ಪ್ರಾಣಲಿಂಗಸ್ಥಳ ಬೇಱೆ.
ಇದು ಕಾರಣ ಕೂಡಲ ಚೆನ್ನಸಂಗಾ ನಿಮ್ಮ ಶರಣನ ಪರಿ ಬೇಱೆ. ।೮೭। [೯೭೭]

೪೨೩
ಪರುಷ[೩]ವಿ[೩]ದ್ದುದ ಕಂಡು ಪರಿಣಾಮಬಡುವರು,
ಇಷ್ಟಲಿಂಗ ಬಿದ್ದಿತ್ತೆಂದು ಕುತ್ತಿಕೊಂಡು ಸಾವರು.
ಅರಿದರಿದು ಗುರುಶಿಷ್ಯ ಸಂಬಂಧವು,

೧–೧x (ಮೂ), ೨–೨ ದೆ (ಮೂ), ೩–೩ ದಿ (ಮೂ).

ಅಱಿವುಳ್ಳವರಿಗಲ್ಲದೆ ಮತ್ತಾರಿಗೆಯೂ ಆಗದು.
ಕುಱುಹು ಘನವೊ? ಲಿಂಗ ಘನವೊ? ಅಱಿವುಳ್ಳವರು ಹೇಳಿರೆ.
ಮಱಹು ಕವಿದಹುದೆಂದು ಕುಱುಹ ತೋಱಿದನಲ್ಲದೆ
ಅಱಿವಱಿವ ಮಱೆದರೆ ಕೂಡಲ ಚೆನ್ನಸಂಗಯ್ಯಂಗೆ
ಅವನಂದೇ ದೂರ. । ೮೮ । [೬೫೨]

೪೨೪

ಸೃಷ್ಟಿಯ ಮೇಲಣ ಕಣಿಯ ತಂದು, ಇಷ್ಟಲಿಂಗವೆಂದು ಮಾಡಿ,
ಅಷ್ಟ ತನುವಿನ ಕೈಯಲ್ಲಿ ಕೊಟ್ಟು,
ಅಷ್ಟ ತನುವಿನ ಕೈ ತಪ್ಪಿ ಸೃಷ್ಟಿಯ ಮೇಲೆ ಬಿದ್ದರೆ
ಕೆ[1]ಟ್ಟ[1]ನನಾಚಾರಿಯೆಂದು ಮುಟ್ಟರು ನೋಡಾ.
ಮುಟ್ಟಿದ ಪ್ರಾಣ ಬಿಚ್ಚಿದ ಭೇದವ ಕಷ್ಟ ಜೀವಿಗಳೆತ್ತ ಬಲ್ಲರು,
ಕೂಡಲ ಚೆನ್ನಸಂಗಮದೇವಾ? । ೮೯ । [೮೯೦]

೪೨೫

ಪ್ರತಿಯಿಲ್ಲದ ಲಿಂಗ ಭಿನ್ನವಾಯಿತ್ತೆಂದು
ತನ್ನ ತನುವಿನ ಮೇಲೆ ಶಸ್ತ್ರವನಿಕ್ಕಿಕೊಂಬ ಆತ್ಮದ್ರೋಹಿಯ
ಮುಖವ ನೋಡಲಾಗದು.
ಶಬ್ದ ಭಿನ್ನವಿಲ್ಲಾಗಿ ಪೂಜೆ ಭಿನ್ನವಿಲ್ಲ.
ಮಹಾಬಯಲೊಳಗಣ ಪ್ರಾಣದ ಸಂಚವನಱಿಯರಾಗಿ
ಕೂಡಲ ಚೆನ್ನಸಂಗಯ್ಯಾ ಅವರು ರೌರವನರಕಿಗಳು. । ೯೦ । [೬೫೩]

೪೨೬

ಸದ್ಗುರು ಕಾರುಣ್ಯವು[2]ಳ್ಳ ಭಕ್ತನ[2] ಲಿಂಗ ಓಸರಿಸಿದರೆ
ವ್ರತಗೇಡಿ[3]ಯೆಂದು[3] ಕಳೆಯಬಾರದು, ಕೊಳಬಾರದು, ಕಾರಣವುಂಟಾಗಿ :
'ಸುವ್ರತಂ ಸುಲಭಂ ಸಿದ್ಧಂ ಶತ್ರುಜಿತ್ ಶತ್ರುಪಾವನ'ಯೆಂದುದಾಗಿ
ಅಲಿಂಗೀ ಲಿಂಗರೂಪೇಣಯೋ ಲಿಂಗಮುಪಜೀವತಿ ।
ಸಪತೇತ್ ಮಹಾಘೋರೇ ನರಕೇ ಕಾಲಮಕ್ಷಯಂ॥ ಎಂದುದಾಗಿ
ಶಸ್ತ್ರ ಸಮಾಧಿ ಜನಾಂತ ವನಾಂತ ದಿಗ್ಬಲಿ ದಹನ ಈ ಆಱಱಲ್ಲಿ ಸತ್ತಡೆ
ಕೂಡಲ ಚೆನ್ನಸಂಗಯ್ಯನಲ್ಲಿ ಆತ ವ್ರತಗೇಡಿ. । ೯೧ । [೬೫೪]

೧–೧ ಟ್ಟೆ (ಮೂ), ೨–೨ ಳ್ಳಾತ ಭಕ್ತಿ (ಮೂ), ೩–೩ x (ಮೂ).

೪೨೭

ಭಾಷೆಗೇರಿಸಿ ತನುವಿಂಗೆ ಅಲಗ ಕೊಂಡರೆ ಲಿಂಗವೋಸರಿಸಿತ್ತಯ್ಯಾ.
[1]ಆತ[1] ವೀರನೆನಿಸುವ,
ಲಿಂಗಕ್ಕೆ ದೂರ, ಜಂಗಮಕ್ಕೆ ದೂರ,
ಪ್ರಸಾದಕ್ಕೆ ದೂರ, ವ್ರತಗೇಡಿಯಾಗಿ.
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ ಬ್ರಹ್ಮೇತಿಕಾಱನೆನಿಸುವ । ೯೨ । [೬೫೫]

೪೨೮

ತೆಱಹಿಲ್ಲದ ಲಿಂಗಭರಿತನೆಂದು ನಾಮವಿಡಿದು ಪೂಜಿಸಿ,
ಮರಳಿ ಬಿದ್ದಿತ್ತೆಂಬ ನಾಚಿಕೆಯ ನೋಡಾ.
ಅಱಿಯರಱಿಯರು ಪ್ರಾಣಲಿಂಗದ ನೆಲೆಯನು,
ಅಱಿದಱಿದು ಕುಱುಹಿಂಗೆ ವೇಳೆಯ ಮಾಡುವ ಮತಿಭ್ರಷ್ಟರು.
ಅಱಿದಱಿದು ಸಯವಾದ ಲಿಂಗ ಓಸರಿಸಿತ್ತೆಂದು
ಸಾವ ವ್ರತಗೇಡಿಗಳನೊಲ್ಲ ಕೂಡಲ ಚೆನ್ನಸಂಗಮದೇವ. । ೯೩ ।

೪೨೯

ಭಾಷೆ ತಪ್ಪಿದ ತನುವಿಂಗಲಗ ಕಿತ್ತರೆ ಲಿಂಗ[2]ವೋ[2]ಸರಿಸುವ,
ಮುಂದೆ ವೀರನಪ್ಪ. ಇಂಥ ಭಾಷೆವಂತನೆ ಶರಣ?
ಕಲ್ಪಿತಾಕಾರನಲ್ಲ, ಪೂರ್ವಾಶ್ರಯವಿಲ್ಲ,
ಉಭಯ ಕುಳರಹಿತ ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೯೪ । [೬೫೬]

೪೩೦

ಅಂಗದ ಮೇಲಣ ಲಿಂಗ ಹಿಂಗಿತ್ತೆಂದು
ಆತ್ಮಘಾತಕವ ಮಾಡಬೇಕೆಂಬ ಅಜ್ಞಾನಿಗಳು
ಅಂಗವಾವುದು ಲಿಂಗವಾವುದೆಂದವರೆತ್ತ ಬಲ್ಲರು?
ಅಂಗವೆ ಆತ್ಮ, ಲಿಂಗವೆ ಸಂವಿತ್ತು.
ಎರಡರ ಸಂಬಂಧ ಸಂಚ ತಿಳಿಯದೇ[3]ಲಿ[3]ಂಗಹಿಂಗಿತ್ತೆಂಬವರಿಗೆ
ಪ್ರಾಣಲಿಂಗನಾಸ್ತಿ, ಪ್ರಸಾದವೆಲ್ಲಿಯದೋ
ಕೂಡಲ ಚೆನ್ನಸಂಗಮದೇವಾ. । ೯೫ । [೬೫೭]

೧-೧ x(ಮೂ), ೨-೨ ದೋ (ಮೂ), ೩-೩ ಅ (ಮೂ).

ಪ್ರಾಣಲಿಂಗಿಯ ಪ್ರಸಾದಿ[೧]ಸ್ಥಲ[೧] :

೪೩೧

ಭಕ್ತಿಯಂತುಟಲ್ಲ, ಯುಕ್ತಿಯಂತುಟಲ್ಲ, ಮುಕ್ತಿಯ ಪರಿ ಬೇಱೆ,
ವೀರ ವೈರಾಗ್ಯ ಭಾಷೆಯಂತುಟಲ್ಲ, ಸಹಜದ ಪರಿ ಬೇಱೆ.
[೨]ಅಂಗಲಿಂಗದ ಸಂಬಂಧವು ಸಾರಾಯಂಗಲ್ಲದೆ,
ಸುಪ್ರಸಾದ ಗ್ರಾಹಕತ್ವ ಪ್ರಾಣಲಿಂಗಿಗಲ್ಲದೆ,
ಪರಿತಃ ಪ್ರಾಣಲಿಂಗೀನಾಂ ಲಿಂಗಪ್ರಾಣಂ ತದುತ್ತಮಂ ।
ಸ್ವಯಮಾತ್ಮವಧಂ ಕುರ್ವನ್ ನರಕೇ ಕಾಲಮಕ್ಷಯಂ ॥
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಸಂಬಂಧಿ ಸಾರಾಯ ಸುಪ್ರಸಾದ
ಪ್ರಾಣನಿಯತ ಲಿಂಗಪ್ರಾಣಿಗಲ್ಲದೆಲ್ಲಿಯದೋ. । ೯೬ । [೬೬೧]

೪೩೨

ಅರ್ಪಿತ ಸಯಿದಾನ ಪ್ರಸಾದ ಕಾಯಕ್ಕೆ,
ಅನರ್ಪಿತ ಸಯಿದಾನ [೩]ಪ್ರಸಾದ[೩] ಪ್ರಾಣಕ್ಕೆಂಬ
ಭೇದವನಾರೂ ಅಱಿಯದವರಿಲ್ಲ.
ತನುವ ಭೋ[೪]ಗಿ[೪]ಸುವ ಉಪಜೀವಿ ಪ್ರಸಾದಿಗಳಲ್ಲದೆ
ಪ್ರಾಣವ ಭೋ[೫]ಗಿ[೫]ಸುವ ಪರಿಣಾಮಪ್ರಸಾದಿಗಳನೊಬ್ಬರನೂ ಕಾಣೆ.
ಇದು ಕಾರಣ ಕೂಡಲ ಚೆನ್ನಸಂಗಾ
ನಿಮ್ಮ ಪ್ರಾಣಲಿಂಗ ಪ್ರಸಾದ ಹುಸಿಮಾಡಿ ಕಾಡಿತ್ತು. । ೯೭ । [೯೫೦]

೪೩೩

ವಾಯುಪ್ರಾಣಿಯ ಕಳೆದು, ಗುರುಸ್ವಾಮಿ
ಲಿಂಗಪ್ರಾಣಿಯ ಮಾಡಿದ ಠಾವನುದಾಸೀನವ ಮಾಡಿ ನಡೆವರು,
ಇದನಾನೇಂದಱಿಯೆನಯ್ಯಾ,
ಪಂಚಭೂತಕಾಯವ ಕಳೆದು ಪ್ರಸಾದಕಾಯವ ಮಾಡಿದನಾಗಿ
ಮುಂದೆ ಅರ್ಪಿಸುವ ಅರ್ಪಿತವೆಂಬುದನಾವಱಿಯೆವಯ್ಯಾ.

೧–೧ x (ಮೂ), ೨+ ಶಿವಲಿಂಗ (ಮೂ), ೩–೩ x (ಮೂ), ೪–೪ ಧಿ (ಮೂ), ೫–೫ ಧಿಸಿ (ಮೂ).

ಶಿವಾತ್ಮಕಂ ಸುಖಂ ಜೀವಃ ಜೀವಾತ್ಮಕ ಸುಖಂ ಶಿವಃ ।
ಶಿವಾತ್ಮನಾಪಿ ಸಂತುಷ್ಟ ಪ್ರಾಣಲಿಂಗ ಪ್ರಸಾದಿನಾಂ ॥
ಇಂತೆಂಬ ವಚನವ ಕೇಳಿ ನಂಬೂದು.
ನಂಬದಿದ್ದರೆ ಪ್ರಾಣಲಿಂಗವೆಂಬ ಶಬ್ದಕ್ಕೆ ಭಂಗ ಹೊದ್ದಿತ್ತು,
ಕೂಡಲ ಚೆನ್ನಸಂಗಮದೇವಾ. ।೯೮। [೯೩೨]

೪೩೪

ಪ್ರಾಣಲಿಂಗಪ್ರಸಾದವೆಲ್ಲಾ ಎಡೆಯಲೂ ಉಂಟು.
ಲಿಂಗಪ್ರಾಣಪ್ರಸಾದವಪೂರ್ವ ನೋಡಯ್ಯಾ.
ಪ್ರಾಣಲಿಂಗಪ್ರಸಾದಿ ದೇಹಧರ್ಮಿ,
ಲಿಂಗಪ್ರಾಣಪ್ರಸಾದಿ ಲಿಂಗಭೋಗೋಪಭೋಗಿ
ಕೂಡಲ ಚೆನ್ನಸಂಗನಲ್ಲಿ. ।೯೯। [೯೮೭]

೪೩೫

ಕಾಲು ಮುಟ್ಟಿದ ಪದಾರ್ಥ ಕಾಲಿಂಗರ್ಪಿತ.
ಕೈಮುಟ್ಟಿದ ಪದಾರ್ಥ ಕೈಗರ್ಪಿತ.
ತನು ಮುಟ್ಟಿದ ಪದಾರ್ಥ ತನುವಿಂಗರ್ಪಿತ,
ಮನ ಮುಟ್ಟಿದ ಪದಾರ್ಥ ಮನಕರ್ಪಿತ,
ತನುಮನ ಮು[1]ಟ್ಟಿ[1]ದ ಪದಾರ್ಥ ಭೂಮಿಯ ಮೇಲಿಲ್ಲ.
ಕೊಟ್ಟುದ ಕೊಳಬಾರದು, ಕೊಡದೆ ಕೊಳಬಾರದು,
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಗುರು ಕೊಟ್ಟ ಲಿಂಗವು ಕುರುಹಿನ ಲಿಂಗವು. ।೧೦೦।[೯೫೩]

೪೩೬

ಶಬ್ದೇಂದ್ರಿಯದ ಶ್ರುತದ ಅನುಭಾವವುಳ್ಳನಕ
ಗುರುವಚನ ಕೇಳಿದೆನೆಂದು ಎಂತೆನಬಹುದು?
ನೇತ್ರೇ[2]ಂದ್ರಿ[2]ಯದ ನೋಟದ ಅನುಭಾವವುಳ್ಳನಕ
ಲಿಂಗವ ಭಾವಿಸಿದೆನೆಂದು ಎಂತೆನಬಹುದು?

೧–೧ ಟ್ಟಿ (ಮೂ). ೨–೨ x(ಮೂ).

ನಾಸಿಕೇಂದ್ರಿಯದ ಪರಿಮಳ ವಾಸನೆ[೧]ಯನುಭಾವ[೧]ವುಳ್ಳನಕ
ಲಿಂಗದಲ್ಲಿ ಪರಿಮಳವ ವೇಧಿಸಿದೆನೆಂದು ಎಂತೆನಬಹುದು?
ಜಿಹ್ವೇಂದ್ರಿಯದ ರುಚಿಯ ರುಚಿಸುವ ಅನುಭಾವವುಳ್ಳ[೨]ನಕ[೨]
ಪ್ರಸಾದವ ಸೇವಿಸಿದೆನೆಂದು ಎಂತೆನಬಹುದಯ್ಯ?
[೩]ಸ್ಪರ್ಶೇಂ[೩]ದ್ರಿಯದ [೪]ಸೋಂಕಿನ ಸುಖದ[೪] ಅನುಭಾವವುಳ್ಳನಕ
ಲಿಂಗೈಕ್ಯನಾದೆನೆಂದು ಎಂತೆನಬಹುದು?
ಇವೆಲ್ಲವನು ಪರಿಚ್ಛೇದಿಸಿ ಭಾವನಿರ್ಭಾವವಾಗದನಕ
ಕೂಡಲ ಚೆನ್ನಸಂಗಯ್ಯನಳಿಶರಣರ ಮನದಲ್ಲಿ ನೆಲೆಗೊಳ್ಳನಾಗಿ
ಅವರೆಂತು ಪ್ರಾಣಲಿಂಗಿಗಳೆಂಬೆನು ? ।೧೦೧ ।[೯೮೮]

೪೩೭

ರೂಪನರ್ಪಿಸಬಹುದಲ್ಲದೆ ರುಚಿಯನರ್ಪಿಸುವ ಪರಿಯಿನ್ನೆಂತೊ ?
ಉಚಿವಣಿಸಿ ಬಂದ ತನುಗುಣಣಾದಿಗಳ
ಲಿಂಗದೊಳಗೆ ನಿಕ್ಷೇಪವ ಮಾಡದಿದ್ದರೆ ಪ್ರಾಣಲಿಂಗನಾಸ್ತಿ,
ಪ್ರಸಾದವೆಲ್ಲಿಯದು ಕೂಡಲಚೆನ್ನಸಂಗಯ್ಯಾ? ।೧೦೨ । [೯೮೯]

೪೩೮

ಅಂಗದ ಕೈಯಲು ಲಿಂಗವಿಪ್ಪುದು. ಲಿಂಗದ ಕೈಯಲು ಅರ್ಪಿತವೆಂಬರು.
ಲಿಂಗಾರ್ಪಿತವಲ್ಲದೆ ಕೊಳ್ಳೆವೆಂಬರು, ಪ್ರಾಣಲಿಂಗಿಗಳಲ್ಲದವರು.
ಪದಾರ್ಥ ಲಿಂಗಕ್ಕೆ ಬಂದುದು ಬಾರದೆಂಬ ಸಂದೇಹವುಳ್ಳನಕ
ಕೊಂಡುದು ಕಿಲ್ಬಿಷ ಕೂಡಲ ಚೆನ್ನಸಂಗಮದೇವಾ. ।೧೦೩ ।[೯೪೨]

೪೩೯

ಕೂಡೆ ಮಾಡಿದ ಸಯಿದಾನವ ತಂದು ಪದಾರ್ಥವೆಂದು,
ಇಷ್ಟಲಿಂಗದಲ್ಲಿ ಪೂರ್ವಾಶ್ರಯ ಹೋಯಿತ್ತೆಂದು,
ಪ್ರಾಣಲಿಂಗಕ್ಕೆ ಓಗರವೆಂದು ನೀಡುತ್ತಿದ್ದರಯ್ಯಾ.
ಅಂಗದ ಕೈಯಲು ಅರ್ಪಿತವದೆ, ಲಿಂಗದ ಕೈಯಲು ರುಚಿಯದೆ.

೧–೧ x(ಮೂ), ೨–೨ x(ಮೂ), ೩–೩ ಪರುಶೇ (ಮೂ), ೪–೪ x(ಮೂ).

ಅಂಗದ ಕೈಯ್ಯಾವುದು ? ಲಿಂಗದ ಕೈಯ್ಯಾವುದೆಂದಜೆಯರು,
ಬೇಱೆ ಮತ್ತೊಂದೆಂಬರು.
ಒಂದೆಂದರ್ಪಿಸಿ ಮತ್ತೊಂದೆಂದು ಭಾವಿಸಿದರೆ
ಹೊಂದಿದ ನೊಣವಿನಂತಾದರು,
ಕೂಡಲ ಚೆನ್ನಸಂಗನಲ್ಲಿ ಅವರ ಸಹಜರೆಂತೆಂಬೆ ? ।೧೦೪। [೯೪೩]

೪೪೦
ಕಾಯದ ಕೈಯಲು ಲಿಂಗಾರ್ಪಿತ ಖಂಡಿತ ಭಾಷೆ.
ಭಾವದ ಕೈಯಲು ಲಿಂಗಾರ್ಪಿತ ಖಂಡಿತ ಭಾಷೆ.
ಶ್ರೋತ್ರದ ಕೈಯಲು ಲಿಂಗಾರ್ಪಿತ ಖಂಡಿತ ಭಾಷೆ.
ಘ್ರಾಣದ ಕೈಯಲು ಲಿಂಗಾರ್ಪಿತ ಖಂಡಿತ ಭಾಷೆ.
ಜಿಹ್ವೆಯ ಕೈಯಲು ಲಿಂಗಾರ್ಪಿತ ಖಂಡಿತ ಭಾಷೆ.
[1]ಸ್ಪರ್ಶನದ[1] ಕೈಯಲು ಲಿಂಗಾರ್ಪಿತ ಖಂಡಿತ ಭಾಷೆ.
ಅಲ್ಲಲ್ಲಿ ತಾಗಿದ ಸುಖವೆಲ್ಲ ಲಿಂಗಾರ್ಪಿತವಾಗದಿದ್ದಡೆ
ಕೂಡಲ ಚೆನ್ನಸಂಗಯ್ಯನಲ್ಲಿ ಅವರ ಸಹಜರೆಂತೆಂಬೆ ? ।೧೦೫। [೯೫೨]

೪೪೧
ಗುರುಲಿಂಗ [2]ಜಂಗಮ[2] ಪ್ರಸಾದ ಪ್ರಾಣಪ್ರವೇಶವಾದುದಾಗಿ
ಲಿಂಗಪ್ರಾಣದೊಳಗೆ ಪ್ರಾಣಲಿಂ[3][ಗ][3] ನೋಡಾ.
ಭಕ್ತಿಕಾಯದೊಳಗೆ ಪ್ರಸಾದಕಾಯನೋಡಾ,
ವಿಶ್ವತೋ ಚಕ್ಷುವಿನೊಳಗೆ ಜ್ಞಾನಚಕ್ಷು ನೋಡಾ,
ವಿಶ್ವತೋ ಮುಖದೊಳಗೆ ಸುಮುಖ ನೋಡಾ.
ವಿಶ್ವತೋ ಬಾಹುವಿನೊಳಗೆ ನಮಸ್ಕಾರಬಾಹು ನೋಡಾ.
ವಿಶ್ವತೋ ಪಾದದಲ್ಲಿ ನಿಂದ ಮಹ[4]ತ್ಪಾ[4]ದ ನೋಡಾ.
ಇಂತಾದುದಾಗಿ,
ಲಿಂಗವ ಮನದಲ್ಲಿ ನೆನೆದು ಲಿಂಗಕ್ಕೆ ನೆನೆಯಲಿತ್ತು,
ಪ್ರಸಾದವ ಮನದಲ್ಲಿ ನೆನೆದು ಪ್ರಸಾದಿ ಪರಿಣಾಮಿಸುವ.
ಲಿಂಗವ ದೃಷ್ಟಿಯಲ್ಲಿ ನೋಡಿ ಲಿಂಗಕ್ಕೆ ನೋಡಲಿತ್ತು,
ಪ್ರಸಾದನಯನದಿಂದ ನೋಡಿ ನಯನಪ್ರಸಾದವ

೧-೧ ಪರುಶನ (ಮೂ), ೨-೨ ವು (ಮೂ), ೩-೩ ಗಿ (ಮೂ), ೪-೪ ತ್ವಾ (ಮೂ).

ನಯನದಿಂದ ನೋಡಿಸಿ ಪರಿಣಾಮಿಸುವ.
ಲಿಂಗಶ್ರೋತ್ರದಿ ಕೇಳಿ ಲಿಂಗಕ್ಕೆ ಕೇಳಲಿತ್ತು,
ಪ್ರಸಾದಶ್ರೋತ್ರದಿಂ ಶಬ್ದಪ್ರಸಾದಿ ಕೇಳಿಸಿ ಪರಿಣಾಮಿಸುವ.
[೧]ಲಿಂಗ ಪರುಶನದಿಂ ಪರುಶಿಸಿ ಲಿಂಗಕ್ಕೆ ಪರುಶಿಸಲಿತ್ತು
ಪ್ರಸಾದಪರುಶನದಿಂ ಪರುಶಿಸಿ ಪರುಶನಪ್ರಸಾದವ
ಪ್ರಸಾದಿ ಭೋಗಿಸಿ ಪರಿಣಾಮಿಸುವ.
ಲಿಂಗಜಿಹ್ವೆಯಿಂದ ಮಹಾರುಚಿಯ ರುಚಿಸಿ ಲಿಂಗಕ್ಕೆ ರುಚಿಸಲಿತ್ತು
ಪ್ರಸಾದಜಿಹ್ವೆಯಿಂ ಮಹಾರುಚಿಯ ರುಚಿಸಿ ರುಚಿಪ್ರಸಾದವ
ಪ್ರಸಾದಿ ಭೋಗಿಸಿ ಪರಿಣಾಮಿಸುವ.
ಇಂತು ಸರ್ವಭೋಗದ್ರವ್ಯವ ಲಿಂಗಕಾಯದಿಂ ಭೋಗಿಸಿ ಲಿಂಗಕ್ಕೆ ಭೋಗಿಸಲಿತ್ತು,
ಪ್ರಸಾದಕಾಯದಿಂ ಸರ್ವಭೋಗವನೂ ಭೋಗಿಸುವ ಪ್ರಸಾದಿ.
ಇದು ಕಾರಣ ಭಕ್ತದೇಹಿಕದೇವ ಕೂಡಲ ಚೆನ್ನಸಂಗಮದೇವನೆಂದಱಿದು
ಪ್ರಸಾದಿಯ ಪ್ರಸಾದಿಯಾದೆನಯ್ಯಾ. । ೧೦೬ ।

೪೪೨

ರುಚ್ಯರ್ಪಿತ ಪ್ರಸಾದಸ್ತು ಸ್ಪರ್ಶನಂ ಸುಖಮರ್ಪಿತಂ ।
ಉಭಯಾರ್ಪಿತ ವಿಹೀನಂಚ ಪೂಜನಂ ನಿಷ್ಫಲಂ ಭವೇತ್ ॥
ಇಂತೆಂಬ ಶ್ರುತಿಯನೊಲ್ಲೆ.
ರುಚಿಯ ಬಲ್ಲನೆ ಪ್ರಸಾದಿ? ತಾ ಲಿಂಗಭೋಗೋಪಭೋಗಿಯಾಗಿ,
ಸುಖವ ಬಲ್ಲನೆ ಭಕ್ತ? ತಾ ಜಂಗಮಭೋಗೋಪಭೋಗಿಯಾಗಿ.
ತಾ ರುಚಿಯನರ್ಪಿಸುವಾತ ಪ್ರಸಾದಿಯಲ್ಲ, ರುಚಿಯನರ್ಪಿಸುವಾತ ಭಕ್ತನಲ್ಲ.
ಇದನಱಿದ ಶರಣಂಗೆ ನಮೋ ನಮೋ ಎಂಬೆ
ಕೂಡಲ ಚೆನ್ನಸಂಗಮದೇವಾ. । ೧೦೭ । [೯೯೦]

೪೪೩

ಆಹ್ವಾನಿಸುವಲ್ಲಿ ಪ್ರಾಣಲಿಂಗವಿಲ್ಲ, ವಿಸರ್ಜಿಸುವಲ್ಲಿ ಲಿಂಗವಂತರಿಸಿತ್ತು.
ಆಹ್ವಾನಿಸುವನಲ್ಲ, ವಿಸರ್ಜಿಸುವನಲ್ಲ, ಶರಣನ ಪರಿಬೇಱೆ.
ಅಂಗಭೋಗೋಪಭೋಗವಲ್ಲದೆ. ಉಪಭೋಗವನ[೨][ನ][೨]ರ್ಪಿತವ ಭೋಗಿಸುವನಲ್ಲ,

೧+ ಲಿಂಗ ಪರಿಣಾಮಿಸುವ (ಮೂ). ೨–೨ x(ಮೂ)

ಆಗಲೂ ಪ್ರಾಣಲಿಂಗಸಂಗದಲ್ಲಿಯೆ ಇಪ್ಪನು.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣಂಗೆ
ನಮೋ ನಮೋ ಎಂಬೆ. । ೧೦೮ ।[೯೫೯]

೪೪೪

ಮುಟ್ಟದೆ ಮುಟ್ಟೆನಯ್ಯಾ
ಅನರ್ಪಿತವೆಂದು ಮುಟ್ಟಿ ಲಿಂಗಕ್ಕೆ ಮಾಡಲಿಲ್ಲ.
ತಟ್ಟದೆ ಮುಟ್ಟದೆ ಮನಸೋಂಕದೆ ಅನುದಿನ ಲಿಂಗಕ್ಕೆ ಮಾಡಬೇಕು,
ಕೊಂಬ ಭೇದವನು ಕೂಡಲ ಚೆನ್ನಸಂಗನಲ್ಲಿ ಬಸವಣ್ಣ ಬಲ್ಲ. । ೧೦೯ । [೯೫೧]

೪೪೫

ಲಿಂಗಸ್ಥಲವೆಂಬೆನೆ? ಲಿಂಗಕ್ಕೆ ನೆಲೆಯಿಲ್ಲ.
ಜಂಗಮಸ್ಥಲವೆಂಬೆನೆ? ಜಂಗಮಕ್ಕೆ ಜನನವಿಲ್ಲ.
ಪ್ರಸಾದಸ್ಥಲವೆಂಬೆನೆ? ಪ್ರಸಾದಕ್ಕೆ ಪರಿಣಾಮವಿಲ್ಲ.
ಈ ತ್ರಿವಿಧವೂ ಇಲ್ಲ ಎಂಬೆನೆ?
ಕೂಡಲ ಚೆನ್ನಸಂಗದಲ್ಲಿ ಬಸವಣ್ಣ ಬಲ್ಲ. । ೧೧೦ ।[೯೫೭]

೪೪೬

ತ್ರಿವಿಧೋದಕ ತ್ರಿವಿಧೋದಕವೆಂದು ತಿರುಗಿ ತಿರುಗಿ
ಕುಂಡಲಿಗನ ಹುಳುವಿನಂತೆ ಭ್ರಮೆಗೊಂಡು ಹೋದರ[೨]ಲ್ಲಾ,[೨]
ನಿಮ್ಮ ಭಕ್ತರೆಂಬವರು, ನಿಮ್ಮ ಹಿರಿಯರೆಂಬವರು.
ತ್ರಿವಿಧೋದಕ ಒಬ್ಬರಿಗೆಯೂ ಆಗದು.
ತ್ರಿವಿಧೋದಕ ಅಳವಟ್ಟ ದೇಹ ಕರುವಿಟ್ಟ ರೂಹಿನಂತೆ
ಕಣ್ಣೆವೆ ಹಳಚದೆ ನಿಬ್ಬೆರಗಾಗಿರಬೇಕು,
ಸಿಡಿಲು ಹೊಡೆದ ಹೆಣನಂತಿರಬೇಕು.
ಅಂತಲ್ಲದೆ ಬಯಲಿಗೆ ತ್ರಿವಿಧೋದಕ ತ್ರಿವಿಧೋದಕವೆಂಬ
ಹೇಸಿಕೆಯ ಮಾತ ಕೇಳಲಾಗದು.
ಇದು ಕಾರಣ, ಕೂಡಲ ಚೆನ್ನಸಂಗಮದೇವಾ
ನಿಮ್ಮ ತ್ರಿವಿಧೋದಕವ ಬಲ್ಲ ಬಸವಣ್ಣಂಗೆ ನಮೋ ನಮೋ. । ೧೧೧ । [೬೩೬]

೧-೧ x (ಮೂ), ೨-೨ ಲ್ಲದೆ (ಮೂ).

೪೪೭

ಹೃದಯಕಮಲಮಧ್ಯದ ಶುದ್ಧಾತ್ಮನನು
ಸಿದ್ಧ ವಿದ್ಯಾಧರ ನಿರ್ದೇಹಿಗಳು ಬಲ್ಲರೆ?
ಕಾಯದ ಕೈಯಲಿ ಕೊಟ್ಟುದು ಮಾಯಾಮುಖದರ್ಪಿತ.
ಇದಾವ ಮುಖವೆಂದಱಿಯದೆ ಭ್ರಮೆಯಾಗಿ ಹೋದರು.
ಕೊಂಬ ಕೊಡುವ ಎಡೆಯನಿಂಬಿನ ಗ್ರಾಹಕ ಬಲ್ಲ.
ಕೂಡಲ ಚೆನ್ನಸಂಗನಲ್ಲಿ ಬಸವಣ್ಣಪ್ರಭು ಬಲ್ಲ. । ೧೧೨ ।[೯೪೮]

೪೪೮

ಲಿಂಗದ ಘನವನಱಿದೆನೆಂದರೆ [೧]ಅದೆ[೧] ಕುಚಿತ.
ಜಂಗಮದ ಘನವನಱಿದೆನೆಂದರೆ ಅದೆ ಕುಚಿತ.
ಆಶ್ರಯ ಪ್ರಸಾದದ ಘನವನಱಿದೆನೆಂದರೆ ಅದೆ ಕುಚಿತ.
ಗುರುಲಿಂಗಜಂಗಮದಲೊದಗಿದ [೨]ಪ್ರಸಾದ[೨] ಘನಕ್ಕೆ ಘನ, ಮನವೇದ್ಯವೆಂದು
ತೋಱಿದನೆನ್ನ ಗುರುಲಿಂಗ,
ಕೂಡಲ ಚೆನ್ನಸಂಗಯ್ಯನ ಶರಣ [೩]ಗಲ್ಲ ಬಸವಣ್ಣ.[೩] । ೧೧೩ ।[೯೯೮]

೪೪೯

ಕಾಯ[೪]ವಿಡಿದು ಭಕ್ತಿಯ ಮಾಡುವರಲ್ಲದೆ
ಭಕ್ತಿವಿಡಿದು ಭಕ್ತಿಯಮಾಡುವರಾರೂ ಇಲ್ಲ.
ಅರ್ಪಿತವಂತಿರಲಿ ಅನರ್ಪಿತವೆ ಲೇಸು.
ಕೂಡಲ ಚೆನ್ನಸಂಗಯ್ಯನಲ್ಲಿ
ಬಸವಣ್ಣ ಮಾಡುವುದು ಅನರ್ಪಿತ. । ೧೧೪ ।[೯೫೮]

೪೫೦

ಲಿಂಗಪೂಜೆಯ, ಸ್ವಯಪೂಜೆಯ ನಾ ಮಾಡಿದೆನೆಂದೆನ್ನದ ಪ್ರಸಾದಿ.
ಜಂಗಮ ಮಾಟದಲ್ಲಿ ನಾ ಮಾಡಿದೆನೆಂದು ಮನದಲ್ಲಿ ನೆನೆಯದ ಪ್ರಸಾದಿ.
ದೂರದೂರದಲ್ಲಿ ಪರಾನುಸಂಗವಾದ ಪ್ರಸಾದಿ.
ವಿಕಸಿತವಾದ ಒಂದೊಂದು ಭಾವದ ತನುವಿರಹಿತವಾದ ಪ್ರಸಾದಪ್ರಸಾದಿ.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ,
ಲಿಂಗಜಂಗಮ ಸನುಮತವಾದ ಪ್ರಸಾದಿ. । ೧೧೫ ।[೯೫೫]

೧-೧ x(ಮೂ), ೨-೨ x(ಮೂ), ೩-೩ ಗಲ್ಲದಿಲ್ಲ (ಮೂ), ೪+ಕ (ಮೂ).

೪೫೧
ಅರ್ಪಿತ ಭುಂಜಕಂಗೆ ಎಂಜಲುಂಟಲ್ಲದೆ
ಅನರ್ಪಿತ ಭುಂಜಕಂಗೆ ಎಂಜಲೆಲ್ಲಿಯದು?
ಶಿವ ಭೋಜನವ ಮಾಡಲು ಭಾಜನವಾದಾತಂಗೆ,
ಪ್ರಸಾದಭೋಗಿಗೆ ಎಂಜಲೆಲ್ಲಿಯದು?
ಕರ್ಮಭೋಗೇ ಶಿವಸ್ಯೈವ ಉಪಭೋಗವಿಶೇಷತಃ ।
ಅಶರೀರಮಿದಂ ಗ್ರಾಹ್ಯಂ ಲಿಂಗಸಾರಾಯಸಂಯುತಂ ॥
ಇದು ಕಾರಣ ಕೂಡಲ ಚೆನ್ನಸಂಗಾ
ನಿಮ್ಮ ಶರಣಂಗೆಂಜಲು ಸೂತಕ ಹೊದ್ದಲೀಯದು. । ೧೧೬ ।[೯೪೯]

೪೫೨
ಸ್ಥಲಗೆಟ್ಟ ನಿಭ್ರಾಂತಂಗೆ, ಸಾಕಾರಗುಣವಡಗಿದ ಸನ್ಮಾರ್ಗಂಗೆ,
ನಯನ[1]ತಾ[1]ಗಿದ ಸುಖವ ಮನಮುಟ್ಟಲೀಯದ ಪ್ರಸಾದಿ[2]ಗೆ[2],
ಕರಣೇಂದ್ರಿಯಂಗಳಳಿದವು,
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದಿಗೆ. । ೧೧೭ ।[೧೦೧೩]

೪೫೩
ದೇಹ ಪ್ರಸಾದವೆಂದೆನ್ನೆ, ಅಂತರ್ದೇಹ ಪ್ರಸಾದವೆಂದೆಂಬೆ.
ಜಾಗ್ರ ಪ್ರಸಾದವೆಂದೆನ್ನೆ, ಸ್ವಪ್ನ ಪ್ರಸಾದವೆಂದೆಂಬೆ.
ಅಂತರ್ದೇಹಕ್ಕೆ ಆಕಾರವಿಲ್ಲ, ಸ್ವಪ್ನಕ್ಕೆ ಬೀಜವಿಲ್ಲ.
ಇದು ಕಾರಣ, ಕೂಡಲ ಚೆನ್ನಸಂಗ ತೋಜಿದನಾಗಿ
ಅಕಾಯದಲ್ಲಿ ಮಹಾಘನಪ್ರಸಾದಿ. । ೧೧೮ ।[೯೫೪]

೪೫೪
ಘನವೆಂಬ ಮನದ ತಲೆವಾಗಿಲಲ್ಲಿ ಸದಾ ಸನ್ನಿಹಿತನಾಗಿಪ್ಪೆಯಯ್ಯಾ.
ಸಕಲಪದಾರ್ಥದ ಪೂರ್ವಾಶ್ರಯವ ಕಳೆದುಬಹ
ಸುಖಂಗಳನವಧರಿಸುತಿಪ್ಪೆಯಯ್ಯಾ.
ನಿನ್ನ ಮುಟ್ಟಿ ಬಂದುದಲ್ಲದೆ ಎನ್ನ ಮುಟ್ಟದೆಂಬ
ಎನ್ನ ಮನದ ನಿಷ್ಠೆಗೆ ನೀನೆ ಒಡೆಯ,
ಕೂಡಲ ಚೆನ್ನಸಂಗಮದೇವಾ. । ೧೧೯ ।[೯೪೭]

೧-೧ ವಾ (ಮೂ). ೨-೨ x (ಮೂ).

೪೫೫

ಮನದ, ಮನೋಹರ ರಮಣೀಯ [೧]ಮನದ,
ಸುಖದಾ ಮನದ, ದುಃಖದಾ ಮನದ,
ಸುಚಿತ್ತದಾ ಚಿತ್ತದೊಡೆಯ ನೀ ಸಹಿತವಲ್ಲದೇನುವನನುಭವಿ[೨]ಸೆ.[೨]
ಕೂಡಲ ಚೆನ್ನಸಂಗಯ್ಯಾ
ಎನಗೆ ಬೇಱೆ ಅನುಭವಿಸಲುಂಟೆ? ।೧೨೦ ।[೧೦೨೭]

೪೫೬

ಅಂಗದಾಪ್ಯಾಯನಕ್ಕೆ ಅರ್ಪಿತವ ಮಾಡುವನಲ್ಲ,
ಆತ ಲಿಂಗದಾಪ್ಯಾಯನಿಯಾದ ಕಾರಣ.
ಅಂಗಗುಣಂಗಳಳಿದು ಲಿಂಗದಲ್ಲಿ ನಿರ್ಲೇಪವಾದ ಶರಣ
ಅರ್ಪಿತವನಱಿಯ, ಅನರ್ಪಿತವನಱಿಯ,
ಓಗರವನಱಿಯ, ಪ್ರಸಾದವನಱಿಯ.
ಇದು ಕಾರಣ ಕೂಡಲ ಚೆನ್ನಸಂಗಯ್ಯ,
ತಾನರುಹಿಸಿ ಕೊಟ್ಟು, ತನ್ನ ಕಾರುಣ್ಯ ಪ್ರಸಾದವನಿಕ್ಕಿ ಸಲಹಿದನಾಗಿ,
ಆನೇನೆಂದಱಿಯೆನಯ್ಯಾ. ।೧೨೧ ।[೧೦೧೧]

೪೫೭

ಇದೇನಯ್ಯಾ ಪ್ರಸಾದ ಒಡನೆ [೩]ನಡೆ[೩]ವುತ್ತಿದೆ,
ಇದೇನಯ್ಯಾ ಪ್ರಸಾದ ಒಡನೆ ನುಡಿವುತ್ತಿದೆ.
ಪ್ರಾಣದ ಮೇಲೆ ಲಿಂಗಪ್ರತಿಷ್ಠೆಯಾಗಲೊಡನೆ
ಅದು ತಾನೆ ನಡೆವುದು, ಅದು ತಾನೆ ನುಡಿವುದು.
ಕಂಡಯ್ಯಾ ಎರಡೆಂಬುದಿಲ್ಲಾಗಿ ಮುಂದೆ ನಾನೊಂದೆ
ಕೂಡಲ ಚೆನ್ನಸಂಗಮದೇವಾ. ।೧೨೨ ।[೯೩೫]

೪೫೮

ಶಬ್ದ ಸ್ಪರ್ಶ ರೂಪು ರಸ ಗಂಧ ಪಂಚೇಂದ್ರಿಯ ಮೊದಲಾಗಿ
ನಡೆದವು ಲಿಂಗದತ್ತತ್ತಲೆ.
ಬಂದ ಸುಖ ಲಿಂಗಾರ್ಪಿತವೆಂದು ನಡೆದವು ಲಿಂಗದತ್ತತ್ತಲೆ.
ಕೂಡಲ ಚೆನ್ನಸಂಗಾ ಲಿಂಗ ನೀವಾಗಿ ಶರಣಂಗೆ. ।೧೨೩ ।[೧೦೦೯]

೧+ ಮನ (ಮೂ), ೨–೨ ಸಿ (ಮೂ), ೩–೩ ನುಡಿ (ಮೂ).

೪೫೯

ಅರ್ಪಿತವಿಡಿದು ಸಯಿದಾನವಾಯಿತ್ತೊಡಲಿಂಗೆ,
ಅನರ್ಪಿತವಿಡಿದು ಪ್ರಸಾದವಾಯಿತ್ತೀ ಪ್ರಾಣಕ್ಕೆ.
ತನು ಭೋಗಿಸುವುದು ಉಪಾಧಿ[೧]ಕ[೧] ಪ್ರಸಾದ,
ಪ್ರಾಣ ಭೋಗಿಸುವುದು ಪರಿಣಾಮಪ್ರಸಾದ.
ಈ ಭೇದವ ಭೇದಿಸಿ ಪ್ರಾಣಚೈತನ್ಯಲಿಂಗವೆಂದಱಿದೆನಾಗಿ
[೨]ಕೂಡಲ ಚೆನ್ನಸಂಗನೆಂಬ ಲಿಂಗ ಸ್ವಯವಾಯಿತ್ತು. ।೧೨೪।[೨] [೯೩೬]

೪೬೦

ಪ್ರಾಣ ಲಿಂಗಕ್ಕೆ ಆಗಿ, ಲಿಂಗ ಪ್ರಾಣಕ್ಕೆ ಆಗಿ,
ಆಚಾರ ಅನುಭಾವ ದ್ವಿವಿಧ ಸನುಮತವಾಗಿ,
ತನು ಪ್ರಸಾದಕ್ಕೆಯಾಗಿ ಪ್ರಸಾದ ತನುವಿಂಗಾಗಿ,
ಶರೀರ ಪ್ರೇಮದಿಂ ಸರ್ವಾಂಗ [೩]ಲಿಂಗ[೩] ನೋಡಾ.
ಬಂದುದೆ ಓಗರ ನಿಂದುದೆ ಪ್ರಸಾದ.
ಅಲ್ಲಿ ನಿತ್ಯನಿರಂತರ ಸಾವಧಾನಿ
ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೧೨೫।[೯೯೯]

೪೬೧

ಆಲಸ್ಯವಿಲ್ಲದೆ ಲಿಂಗಲೀಯ ಮಾಡುತ್ತಿದ್ದವು ತವತವಗೆ ಪ್ರಾಣಾದಿಗಳು.
ತಾಗಿದ ಸುಖ ಲೇಸು ಲಿಂಗಕ್ಕೆಂಬವಯ್ಯಾ,
ಲಿಂಗಭೋಗೋಪಭೋಗದಲ್ಲಿ ತವತವಗೆ ಪ್ರಾಣಾದಿಗಳು.
ಕಲಸದೆ ಬೆರಸದೆ ವಿವರಿಸಿ ಕಳೆದು, ಸವಿಯ ಸಂಪುಟದ ಸುಖವ
ಕೂಡಲ ಚೆನ್ನಸಂಗಾ ನಿಮ್ಮ ಶರಣ ಬಲ್ಲ. ।೧೨೬।[೧೦೦೮]

೪೬೨

ನಿಃಶಬ್ದ ಲಿಂಗಾನುಭಾವಿ, ಶರಣ ಮುಗ್ಧಾನುಭಾವಿ,
ಪ್ರಸಾದಿ ಪರಿಣಾಮಾನುಭಾವಿ.[೪]
ಇಂತೀ ತ್ರಿವಿಧಾನುಭಾವಿ
ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೧೨೭।[೧೦೧೪]

೧-೧ x ಮೂ. ೨-೨ ಇಷ್ಟು ಭಾಗ ಮೂ ಪ್ರತಿಯಲ್ಲಿ ಬಿಟ್ಟು ಹೋದ ಕಾರಣ ಈ ವಚನ ಮುಂದಿನದರಲ್ಲಿ ಸೇರಿ ಹೋಗಿದೆ. (ಸಂ), ೩-೩ x (ಮೂ.) ೪+ ಗಳು (ಮೂ).

೪೬೩

ಲಿಂಗಸಂಗಸಾರಾಯ ಸುಸಂಗಿಗಲ್ಲದೆ ವೇದಿಸದಯ್ಯಾ.
[೧]ಲಿಂಗಾನುಭಾವಿ[೧] ಶರಣನು
ಲಿಂಗದಲ್ಲಿ ನಿರುತನಾಗಿದ್ದ ನೋಡಾ.
ಜಂಗಮಸಾಹಿತ್ಯ ಪ್ರಸಾದದಲ್ಲಿ ಭರಿತ ನೋಡಾ,
ಕೂಡೆ ಪ್ರಸಾದಿ ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೧೨೮ ।[೯೩೮]

೪೬೪

ಪಾದ ಬಾಹು ಮೊದಲಾಗಿ ಎಲ್ಲ ಪ್ರಸಾದಿಯಾಗಿರಬೇಕು,
ಖೇಚರಭೇದದಿಂ ಗೂಢಪ್ರಸಾದಿಯಾಗಿರಬೇಕು.
‘ಶಯನಾನ್ಯಂ ನ ಚರೇತ್’ ಪ್ರಸಾದಿಯಾಗಿ,
‘ನಾಸಿಕಾನ್ಯಂ ನ ಚರೇತ್’ ಪ್ರಸಾದಿಯಾಗಿ,
[೨]‘ಕ[೨]ರ್ಣಾನ್ಯಂ ನ ಚರೇತ್’ ಪ್ರಸಾದಿಯಾಗಿ,
‘ನೇತ್ರಾನ್ಯಂ ನ ಚರೇತ್’ ಪ್ರಸಾದಿಯಾಗಿ,
‘ಜಿಹ್ವಾನ್ಯಂ ನ ಚರೇತ್’ ಪ್ರಸಾದಿಯಾಗಿ,
‘ಆರೋಹಿತಾವರೋಹಿತಾನ್ಯಂ ನ ಚರೇತ್’ ಪ್ರಸಾದಿಯಾಗಿ,
ಇದು ಕಾರಣ ಕೂಡಲ ಚೆನ್ನಸಂಗಯ್ಯನ ಪ್ರಸಾದಿಯ
ಪ್ರಸಾದದಿಂದ ಬದುಕಿದೆನು. । ೧೨೯ ।[೯೫೬]

೪೬೫

ತನುವೇ ಭಾಂಡವಾಗಿ, ಮನವೇ ಸಯಿದಾನವಾಗಿ
ಜ್ಞಾನಾಗ್ನಿಯಲೇ ಪದಾರ್ಥವ ಮಾ[೩]ಡೆ,[೩]
ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ಸ್ಪರ್ಶಮೂರ್ತಿಯು ನೀನೆ.
ನಿನ್ನ ಪ್ರಸಾದಕ್ಕೆ ನಮೋ ನಮೋಯೆಂಬೆ
ಕೂಡಲ ಚೆನ್ನಸಂಗಮದೇವಾ. । ೧೩೦ ।[೯೪೬]

೪೬೬

ಕಾಯವೆಂಬ ಘಟಕ್ಕೆ ಕರಣಾದಿಗಳೆ ಸಯಿದಾನ.
ಅದಕ್ಕೆ ಚೈತನ್ಯವೇ ಜಲವಾಗಿ,
ಸಮತೆಯೇ ಮುಚ್ಚಳಿಕೆ, ಧೃತಿಯೆಂಬ ಸಮಿದೆ,

೧-೧ ಲಿಂಗಭಂಗಿ (ಮೂ), ೨-೨ ವ (ಮೂ), ೩-೩ ಡಿ (ಮೂ).

ಮತಿಯೆಂಬ ಅಗ್ನಿಯಲುರುಹಿ,
ಜ್ಞಾನವೆಂಬ [1]ದರ್ವಿಯಲ್ಲಿ[1] ಘಟ್ಟಿಸಿ ಪಕ್ವಕ್ಕೆ ತಂದು,
ಭಾವದಲ್ಲಿ ಕುಳ್ಳಿರಿಸಿ ಪರಿಣಾಮ ಓಗರವ ನೀಡುವೆ
ಕಾಣಾ, ಕೂಡಲ ಚೆನ್ನಸಂಗಮದೇವಾ. । ೧೩೧ ।[೯೪೫]

೪೬೭

ಜಲನಿಧಿಶಿಖರದ ನಡುವೊಂದು ದ್ರವ್ಯದ ತಳದಲ್ಲಿ
ಶಿವಲೋಕ ಕೇಳಿರಣ್ಣಾ !
ದ್ರವ್ಯಪಾಕದಲ್ಲಿ [2]ತಮ್ಮ[2] ಸುಖವನಜೆಯದೆ
ಶಿವಲೋಕದೊಳಗೆ ಬಳಲುತ್ತಿರ್ದರೆಲ್ಲಾ.
ದ್ರವ್ಯಶುದ್ಧ ಪಾಕಶುದ್ಧ,
ಕೂಡಲ ಚೆನ್ನಸಂಗನ ಪ್ರಸಾದಿಗೆ. । ೧೩೨ ।[೧೪೦೫]

೪೬೮

ಪ್ರಸಾದ ಪ್ರಸಾದವೆಂಬರು ಪ್ರಸಾದದ ಕುಳವೆಂತಿಪ್ಪುದೆಂದರೆ:
ಕೊಟ್ಟವನೆ ಗುರುವಲ್ಲ, ಕೊಂಡವನೆ ಶಿಷ್ಯನಲ್ಲ.
ಅಂಜಿಕೆಯಿಂದ ಕೊಂಡುದು ಎಂಜಲ ಪ್ರಸಾದ,
ಅದೆಂತೆಂದರೆ :
ಈಡಾಪಿಂಗಳನಾಳಮಂ ಕಟ್ಟಿ, ಸುಷುಮ್ನಾನಾಳದಲ್ಲಿ ಇಪ್ಪ ಪರಿಚಾರಕನು
ಅಗ್ನಿಯೆಂಬ ಸುವಾರನನೆಬ್ಬಿಸಲು,
ಮಸ್ತಕದಲ್ಲಿ ಇದ್ದ ಉತ್ತಮ ಪ್ರಸಾದ ದಾಳಾದೂಳಿಯೆನುತ್ತ
ಮಹಾಘನವೆಂಬ ಪ್ರಸಾದಿಯೆದ್ದು,
ಮುಯ್ಯಾಂತು ಉಂಡು ಬೋಧಿಸಿ ಬೋಧಿಸಿಕೊಂಬ
ಪ್ರಸಾದಿಗಳ ಮೆಚ್ಚುವನೆ ಕೂಡಲ ಚೆನ್ನಸಂಗಮದೇವ? । ೧೩೩ ।[೯೯೬]

ಪ್ರಾಣಲಿಂಗಿಯ ಶರಣ[3]ಸ್ಥಲ[3]:

೪೬೯

ನಾಲ್ಕು ಗ್ರಾಮದ ಪಟ್ಟಣಕ್ಕೆ ಪಂಚೈವರ ಕಾಹು.
ಅವರ ಸಂಚವಿಡಿದು ಲಿಂಗಾರ್ಚನೆಯ ಮಾಡಿದರೆ

೧–೧ ದ್ರವ್ಯದಲ್ಲಿ (ಮೂ), ೨–೨ ತನ್ನ (ಮೂ), ೩–೩ x (ಮೂ).

[೧]ಲೋಕದ[೧] ಬಳಕೆ ಕಂಡಯ್ಯಾ,
ಪಂಚೈವರ ಪಂಚಸ್ಥಳವಳಿದು ಏಕಸ್ಥಳವಾಗಿ
ನವನಾಳದ ಭೇದದ [೨]ಪ[೨]ರಿಯಱಿದಡೆ ಲಿಂಗೈಕ್ಯ ನೋಡಾ.
ನಾಳಮಧ್ಯದಲಿಪ್ಪ ಜೀವಪ್ರಾಣನ ನೆಲೆಯನಱಿದಡೆ
ಕೂಡಲ ಚೆನ್ನಸಂಗನೊಬ್ಬ ಸಾಹಿತ್ಯವಾಗಿಹನು. । ೧೩೪ ।[೯೧೮]

೪೭೦
ಗ್ರಾಮಮಧ್ಯದ ಧವಳಾರದೊಳಗೆ ಎಂಟು ಕಂಬ,
ಒಂಬತ್ತು ಬಾಗಿಲ ಶಿವಾಲ್ಯವಿರುತಿರಲು,
ಮಧ್ಯಸ್ಥಾನದಲ್ಲಿದ್ದ ಸ್ವಯಂಭುನಾಥನನೇನೆಂದಱಿಯರಲ್ಲಾ.
ಕಲ್ಲಿನಾಥನ ಪೂಜಿಸಿ ಸ್ವಯಂಭುನಾಥನನೊಲ್ಲದೆ
ಎಲ್ಲರೂ ಮರುಳಾದರು ನೋಡಾ.
ಮೆಲ್ಲ ಮೆಲ್ಲನೆ ಸ್ವಯಂಭುನಾಥನು ತನ್ನ ತಪ್ಪಿಸಿಕೊಂಡು,
ಕಲ್ಲಿನಾಥನ ತೋಱಿದ.
ಶಿವಾಲ್ಯದೊಳಗಣ ಮಧ್ಯಸ್ಥಾನವನಱಿದು
ಗರ್ಭಗೃಹವ ಹೊಕ್ಕಡೆ ಕಲ್ಲಿನಾಥ ನಾಸ್ತಿ.
ಕೂಡಲ ಚೆನ್ನಸಂಗನೆಂಬ ಸ್ವಯಂಭು ಇರುತ್ತಿರಲು
ಎತ್ತಲೆಂದಱಿಯರಲ್ಲಾ. । ೧೩೫ ।[೯೧೯]

೪೭೧
ಆಧಾರವುಳ್ಳನ್ನಕ್ಕ ಪ್ರಾಣಲಿಂಗಿಯಲ್ಲ,
ಆಧೇಯವುಳ್ಳನ್ನಕ್ಕ ಲಿಂಗಪ್ರಾಣಿಯಲ್ಲ.
ಇಷ್ಟಲಿಂಗದ ಕಷ್ಟ ಪೂಜಕರೆಲ್ಲರೂ
ದೃಷ್ಟಲಿಂಗದ ಘನವ ತಾವೆತ್ತ ಬಲ್ಲರು?
ಇಷ್ಟವು ಕಷ್ಟವು ನಷ್ಟವಾದರೆ
ಕೂಡಲ ಚೆನ್ನಸಂಗನೆಂಬುದೇ ದೃಷ್ಟ. । ೧೩೬ ।[೯೩೧]

೪೭೨
ಅಱುಹಿನ [೩]ಮಱಹಿನ ಆಪ್ಯಾಯನವ [೩]ಲಿಂಗಕ್ಕೆ ಕೊಡುವ
ಗುರುದ್ರೋಹಿಯನೇನೆಂಬೆ? ಲಿಂಗದ್ರೋಹಿಯನೇನೆಂಬೆ?

೧-೧ ಕೊಲದ (ಮೂ), ೨-೨ ಹ (ಮೂ), ೩-೩ x (ಮೂ).

ಇಷ್ಟಲಿಂಗಮವಗ್ರಾಹೀ ಪ್ರಾಣಲಿಂಗೇನ ಸಂಯುತಃ ।
ನಿಮಿಷಾರ್ದವಿಯೋಗೇನ ಮಹಾಪಾಪಂ ತು ಸಂಭವೇತ್ ॥
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ ಅಱಿವಿನ ಮಱಹಿನ ಭಕ್ತಿ,
ಬಾಯಲ್ಲಿ ಹುಡಿಯ ಹೊಯ್ದು ಹೋಯಿತ್ತು. । ೧೩೭ ।[೮೯೨]

೪೭೩

ಅರ್ಪಿತ ರೌರವನರಕವೆಂದುದು ಗುರುವಚನ.
ಅನರ್ಪಿತ ರೌರವನರಕವೆಂದುದು ಗುರುವಚನ.
ಭುಂಜನೆ ಮಾಡಿದ ರುಚಿ[೧]ಯು[೧] ಲಿಂಗಕ್ಕೆಂಬ ಕರ್ಮಿಯ,
ತಾಗಿದ ಸುಖವು ಲಿಂಗಕ್ಕೆಂಬ ಗುರುದ್ರೋಹಿಯ [೨]ಮಾತ ಕೇಳಲಾಗದು.[೨]
ಸರ್ವಾವಸ್ಥಾಗತಾಃ ಪ್ರಾಣಾಃ ಭಾಜನಂ ಭೋಜನಂ ತಥಾ ।
ಹಸ್ತಲಿಂಗೇಽಪ್ರತಿಗ್ರಾಹ್ಯ ನರಕೇ ಕಾಲಮಕ್ಷಯಂ ॥
ಸಂಕಲ್ಪ ಚ ವಿಕಲ್ಪಂ ಚ ಭಾವಾಭಾವ ವಿವರ್ಜಿತಃ।
ನಾಸ್ತ್ಯೇಂದ್ರಿಯಾಂತಃಕರಣಂ ತೇನೈವ ಸಹಭೋಜನಂ॥ [೩]ಎಂದುದಾಗಿ[೩]
ಲಿಂಗಭಾಜನದಲ್ಲಿ ಸಹಭೋಜನವ ಮಾಡಿದರೆ
ಇಹಪರವಿಲ್ಲೆಂದ ಕೂಡಲ ಚೆನ್ನಸಂಗಮದೇವ. । ೧೩೮ ।[೯೯೨]

೪೭೪

ಶರಣಭರಿತ ಲಿಂಗ ಎಲ್ಲಾ ಎಡೆಯಲ್ಲಿ ಉಂಟು,
ಲಿಂಗಭರಿತ ಶರಣನಪೂರ್ವ ನೋಡಾ.
ಗಮನವುಳ್ಳುದೇ ಜಂಗಮಲಿಂಗ, ನಿರ್ಗಮನಿಯಾದುದೆ ಲಿಂಗಜಂಗಮ.
ಅದಱ ಸಂಯೋಗ ಸಂಬಂಧವ ವೇದಿಸಿ ನಡೆಯಬಲ್ಲರೆ
ಕೂಡಲ ಚೆನ್ನಸಂಗಮದೇವನೆಂಬೆನು. । ೧೩೯ ।[೯೬೨]

೪೭೫

ಕಾಮ[೪]ವ[೪] ತೊಱೆದೆವೆಂಬ ಗಾವಿಲ ಮನುಜರು ನೀವು ಕೇಳಿ:
ಕಾಮವಳವಟ್ಟಿತ್ತಯ್ಯಾ ಬಸವಣ್ಣಂಗೆ.
ಕಂಗಳ ಕಾಮಿಯಯ್ಯಾ ಪ್ರಭುದೇವರು,
ಸರ್ವಾಂಗ ಕಾಮಿಯಯ್ಯಾ ಮಡಿವಾಳನು.

೧–೧ ಯ (ಮೂ), ೨–೨ x(ಮೂ), ೩–೩ x (ಮೂ), ೪–೪ x(ಮೂ).

ಈ ಮೂವರೂ ಕಾಮಸನ್ನಿಹಿತರು ಕಾಣಾ
ಕೂಡಲ ಚೆನ್ನಸಂಗಮದೇವಾ. ।೧೪೦।[೯೮೩]

೪೭೬

ಆಯತಲಿಂಗದಲ್ಲಿ ಆಗಾಗಿ ಭಕ್ತನೆನಿಸೂದಯ್ಯಾ.
ಸ್ವಾಯತಲಿಂಗದಲ್ಲಿ ಆಗಾಗಿ ಭಕ್ತನೆನಿಸೂದಯ್ಯಾ.
ಸಂಯೋಗದಲ್ಲಿ ಆಗಾಗಿ ಶರಣನೆನಿಸೂದಯ್ಯಾ.
ಪ್ರಾಣಕ್ಕೆ ಪ್ರಾಣವಾಗಿ ಉಭಯಪ್ರಾಣವೆಂದೆನಿಸೂದಯ್ಯಾ.
ಘನಕ್ಕೆ ಘನ ಮನವಾದಲ್ಲಿ ಮನವೇದ್ಯನೆಂದೆನಿಸೂದಯ್ಯಾ.
ಕೂಡಲ ಚೆನ್ನಸಂಗಯ್ಯಾ, ಲಿಂಗಸರ್ವಾಂಗದಲ್ಲಿ ಅನುಭಾವದಿಂದ
ಅಧಿಕನೆಂದೆನಿಸೂದಯ್ಯಾ. ।೧೪೧।[೧೦೨೦]

೪೭೭

ಗುರುಲಿಂಗ ಉದಯವಾದ ಉದಯವ ನೋಡಿರಯ್ಯಾ,
ಹಿಂದೆ ಕತ್ತಲೆ ಮುಂದೆ ಬೆಳಗಾಯಿತ್ತು,
ಬೆಳಗು ಬೆಳದಿಂಗಳಾಯಿತ್ತು.
ಕೂಡಲ ಚೆನ್ನಸಂಗಯ್ಯನಲ್ಲಿ
ಒಲವಿನ[೧] ಉದಯದ ದರ್ಪಣದಿಂದ. ।೧೪೨।[೧೦೧೯]

೪೭೮

ಒಂದೆಂಬೆನೆ? ಆಕಾರವಿಲ್ಲ. ಎರಡೆಂ[೨]ಬೆನೆ? ದರ್ಶನ ನಿರ್ಣಯವಾಗದು.
ಮೂಱಿಂ[೨]ಬೆನೆ? ಮೂರ್ತಿಯಾಗಿ ತೋಱದು.
ಸಗುಣ ನಿರ್ಗುಣ, ಸ್ಥೂಲ ಸೂಕ್ಷ್ಮವಾದುದು, ಅಲ್ಲದುದೇನಯ್ಯಾ?
ಕೂಡಲ ಚೆನ್ನಸಂಗಯ್ಯಾ, ದರ್ಪಣದೊಳಗಣ ಪ್ರತಿಬಿಂಬದಂತೆ
ಭಿನ್ನದಲಱಿಸೂದೇನಯ್ಯಾ? ।೧೪೩।[೧೦೩೨]

೪೭೯

ನೋಡುವ ನೋಟ[೩] ನೀ[೩]ವೆಂದಱಿದೆ,
ಕೇಳುವ ಶ್ರೋತ್ರ [೩]ನೀ[೩]ವೆಂದಱಿದೆ,
ವಾಸಿಸುವ ಘ್ರಾಣ [೩]ನೀ[೩]ವೆಂದಱಿದೆ,
ಮುಟ್ಟುವ ಸ್ಪರ್ಶನ [೩]ನೀ[೩]ವೆಂದಱಿದೆ,

೧+ ಪೊಸದ (ಮೂ), ೨+ ದೆಂ (ಮೂ), ೩–೩ x(ಮೂ).

[1]ರುಚಿಸುವ ಜಿಹ್ವೆ ನೀವೆಂದಜಿದೆ.[1]
ಎನ್ನ ಕರಣಂಗಳು ನಿಮ್ಮ ಕಿರಣಂಗಳಾಗಿ
ಕೂಡಲ ಚೆನ್ನಸಂಗಯ್ಯಾ ನಾ ನಿಮ್ಮ ಬೇಡಲಿಲ್ಲ,
ನೀ ಕೂರ್ತು ಕೊಡಲಿಲ್ಲಾಗಿ. ।೧೪೪।[೧೦೧೦]

೪೮೦

ಲಿಂಗ ಮುಂತಾಗಿಯೇ ನಡೆವನು ಶರಣನು,
ಲಿಂಗ ಮುಂತಾಗಿಯೇ ನುಡಿವನು ಶರಣನು,
ಲಿಂಗ ಮುಂತಾಗಿಯೇ ತೃಪ್ತನು ಶರಣನು,
ಲಿಂಗಕಾಯ ಶರಣ, ಶರಣಕಾಯ ಲಿಂಗ.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣ ಸರ್ವಾಂಗಲಿಂಗಿ. ।೧೪೫।[೧೦೦೬]

೪೮೧

ಪರುಷ ಮುಟ್ಟಲು ಕಬ್ಬುನ ಹೊನ್ನಾದಂತೆ
ಪುಣ್ಯಪಾಪಗಳಿಲ್ಲ, ಸ್ವರ್ಗನರಕಗಳಿಲ್ಲಯ್ಯಾ ನಿಮ್ಮವರಿಗೆ,
ಕೂಡಲ ಚೆನ್ನಸಂಗಾ ನಿಮ್ಮ ಶರಣ ಭವರಹಿತನು. ।೧೪೬।[೧೦೨೨]

೪೮೨

ದಿವಿಯೊಳಗಣ [2]ಜ್ಯೋ[2]ತಿಯ ದಿವಿಜರೆತ್ತ ಬಲ್ಲರು?
ಮನೋಬಲ ಹರಿವ ಠಾವನು ಮನೋಹರನೆ ಬಲ್ಲ.
ತನುವಿನ ಸ್ನೇಹಗುಣವ ದೇಹಿಕನೆ ಬಲ್ಲ.
ಅಷ್ಟತನು ಅಣುವಿನ ಭೇದವನು
ಕೂಡಲ ಚೆನ್ನಸಂಗನಲ್ಲಿ ಆ ಲಿಂಗಿಯೇ ಬಲ್ಲನು. ।೧೪೭।[೧೦೨೩]

೪೮೩

ಎಲ್ಲಾ ಗುಣಂಗಳನೊಲ್ಲೆನೆಂದು ಕಳೆದು, ಪ್ರಾಣಲಿಂಗದಲ್ಲಿ
ಪ್ರವೇಶವ ಮಾಡಿದನಯ್ಯಾ.

೧-೧ x (ಮೂ). ೨-೨ ಜಾ (ಮೂ).

ಆಯತ ಸ್ವಾಯತದಿಂದ ನೋಡಿ ಲಿಂಗಗಂಭೀರ ನಿಸ್ಸಂಗಿ ನೋಡಾ.
ಮಾಟ ಕೂಟವೆಂಬ ಭ್ರಾಂತಳಿದಾ ಮನದಲ್ಲಿ ತ್ರಿವಿಧವ ನೆಮ್ಮಿಸಿ
ಸಾಹಿತ್ಯವಾದ ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೧೪೮ ।[೧೦೩೧]

೪೮೪

ಕಂಗಳ ಅಂಗದಲ್ಲಿ ಲಿಂಗ ಅನಿಮಿಷವಾಗಿಹುದೆ ೧[ನೇತ್ರ]೧ ಕಾಯವು.
ಶ್ರೋತ್ರ ಸೊಗಸಿನ ಘನಾನುಭಾವದಲ್ಲಿಹುದೆ ಶ್ರೋತ್ರಕಾಯವು.
ಮನ ಪ್ರಾಣ ಸಂಯೋಗದಲ್ಲಿ,
ಕೂಡಲ ಚೆನ್ನಸಂಗನಲ್ಲಿ ನಿಜವಾಗಿಹುದೆ ಶರಣಕಾಯವು. । ೧೪೯ ।[೧೦೩೦]

೪೮೫

ಪಿಂಡ೨ದ೨ ಮೇಲೊಂದು ಪಿಂಡವನಿರಿಸಿ,
ಆ ಪಿಂಡ ೩[ದ ಮೇಲೊಂದು ಲಿಂಗ]೩ವ ನಿಕ್ಷೇಪಿಸಿ,
ಮತ್ತೊಂದು ಪಿಂಡವ ನಿಕ್ಷೇಪಿಸಿ, ೩[ಆ]೩ ಮತ್ತೊಂದು
ಪಿಂಡದ ಮೇಲೆ ಲಿಂಗವನಿರಿ೪[ಸೆ]೪
ಪಿಂಡ ಪಿಂಡವನಱಿಯದು, ಲಿಂಗ, ಲಿಂಗವನಱಿಯದು.
ಒಳಗಿದ್ದ ಲಿಂಗಕ್ಕೆ ಅದ್ಭುತ ಸಂಕಟವಾಯಿತ್ತು.
ಪಿಂಡಸ್ಥಂ ಪಿಂಡಮಧ್ಯಸ್ಥಂ ಪಿಂಡೇನ ತು ಘಟೀಕೃತಂ ।
ಪಿಂಡೇನ ಪಿಂಡಿತಂ ಪಿಂಡಂ ಪಿಂಡರೂಪಮುದಾಹೃತಂ ॥
ಯುತಃ ಶಿವಮಯಂ ಪಿಂಡಂ ಸರ್ವತತ್ವಾಲಯಂ ವಿದುಃ ।
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣನು ಅಕಾಯಚರಿತ್ರನು. । ೧೫೦ ।[೧೦೬೪]

೪೮೬

ಪದ್ಮಪತ್ರದಲ್ಲಿ ಪದ೫ಸ್ಥ೫ರಿಬ್ಬರು ಕಾದುಕೊಂಡು ಇದ್ದಾರು.
ಪ೬ದ್ಮ೬ಬೆಂದು ಪತ್ರ ಉಳಿಯಿತ್ತಯ್ಯಾ.
ಆ ಪತ್ರದ ಭೇದವ ಕೂಡಲ ಚೆನ್ನಸಂಗಾ
ನಿಮ್ಮ ಶರಣ ಬಲ್ಲ. । ೧೫೧ ।[೧೦೩೫]

೧–೧ x(ಮೂ), ೨–೨ x(ಮೂ). ೩–೩ x(ಮೂ), ೪–೪ ಸಿ (ಮೂ), ೫–೫ ಹಸ್ತ (ಮೂ), ೬–೬ ದ (ಮೂ).

೪೮೭
ಆಹ್ವಾನಿಸುವಲ್ಲಿ ಪ್ರಸೂತಿಕಾಯ, ಸ್ವತಂತ್ರನೆಂತೆಂಬೆ ?
ವಿಸರ್ಜಿಸುವಲ್ಲಿ ಲಿಂಗಸಂತುಷ್ಟನೆಂತೆಂಬೆ ?
ಆಧಾರಾಧೇಯದ ಸುಳುಹಲ್ಲ, ಆಧಾರಾಧೇಯ ಭಾವವಲ್ಲ.
ಬಿಂದು ಕ್ರೀಯನುಂಡು ಬಿಂದು ತಾನಾ[1]ದುದು[1]
ಪ್ರಾಣಾಪಾನದ ಅನುವಿನ ಅನುಸಂಧಾನ ಮನವು
ಅಸಮಾನ ತಾಳೊಷ್ಟಶಬ್ದ ಸಂಚಿತನಲ್ಲ,
ಉಭಯ ಪ್ರಸೂತಿ ಕಾಲರಹಿತ
ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೧೫೨ ।[೯೬೦]

೪೮೮
ಅಮಳಸಿಂಹಾಸನವನಿಕ್ಕಿ ಪದುಮದೋವರಿಯಲ್ಲಿ
ಹದುಳ ಕುಳ್ಳಿರಿಸುವೆನಯ್ಯಾ.
ಜ್ಞಾನಜ್ಯೋತಿಯ ಬೆಳಗಿನಲ್ಲಿ ಎಡೆಯಾಡು ಶಿವನೆ!
ರುದ್ರಭೂಮಿಗೆ ಎಡೆಯಾಡದಿರು ಹರನೆ! ರುದ್ರಭೂಮಿಗೆ.
ಹಡೆದ ತಾಯಿ ತಂದೆ ಮುನ್ನಿಲ್ಲ,
ಹುಟ್ಟಿದ ಶಿಶು, ಮೂಲ ಕಡುದೇಶಿಗನಯ್ಯಾ,
ನಮ್ಮ ಕೂಡಲ ಚೆನ್ನಸಂಗಮದೇವ. । ೧೫೩ ।[೧೦೨೬]

೪೮೯
ಶರಣ ಲಿಂಗದಲ್ಲಿ ಕೂಡಲು ಮಹಾಪರಮಸುಖವಯ್ಯಾ.
ದೃಢ ದೃಢಾಂಗ ಮಧ್ಯಸ್ಥನಾಗಿ
ಕೂಡಲ ಚೆನ್ನಸಂಗನ ನಾಮದಲ್ಲಿ ಸುಖವೆಂದುದು. । ೧೫೪ ।

೪೯೦
ಎನ್ನ ಮನವು ನಿಮ್ಮಲ್ಲಿ ನಟ್ಟು ತೆಗೆಯಲಿಬಾರದ ಬೆಱಗು ನೋಡಯ್ಯಾ.
ಇಹವೆಂಬುದನಱಿಯೆ, ಪರವೆಂಬುದನಱಿಯೆ.
ಪರಮಾನಂದದಲ್ಲಿದ್ದೆ ನೋಡಯ್ಯಾ,
ಪರಮನ ನೆನಹೆ ನೆನಹಾಗಿ ಪರಮಸುಖದಲ್ಲಿ ಸುಖಿಸುತ್ತಿದ್ದೆನಯ್ಯಾ.

೧-೧ ದ ಉಪವನ (ಮೂ).

ಅಪ್ರತಿಮ ಕೂಡಲ ಚೆನ್ನಸಂಗಯ್ಯಾ ಎನ್ನ ಬೆಱಗಿನ ಭೇದವ
ನೀನೆ ಬಲ್ಲೆಯಯ್ಯಾ. । ೧೫೫ ।[೧೦೨೯]

೪೯೧
ಅಱಿವಿನ ತೃಪ್ತಿಗೆ ಅನುಭಾವವಾಶ್ರಯ.
ಲಿಂಗ ಅನುಭಾವದಿಂದ ನಿಮ್ಮ ಕಂಡೆ.
ನಿಮ್ಮ ಕಂಡೆನ್ನ ಮಱೆದೆ, ಕೂಡಲ ಚೆನ್ನಸಂಗಮದೇವಾ. । ೧೫೬ ।[೧೦೦೩]

೪೯೨
ಕಾಯ ಮೇಖಳೆಯಾಗಿ, ಪ್ರಾಣ ಲಿಂಗವಾಗಿ,
ಭಾವ ಭಾವಿಸುತ್ತಿದ್ದಿತ್ತು ನೋಡಾ!
ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಃ ಸದಾಶಿವಃ ।
ತ್ಯಜೇದಜ್ಞಾನನಿರ್ಮಾಲ್ಯಂ ಸೋಽಹಂ ಭಾವೇನ ಪೂಜಯೇತ್ ॥
ಎಂದುದಾಗಿ, ಇದು ಕಾರಣ ಕೂಡಲ ಚೆನ್ನಸಂಗಯ್ಯ
ಮಹವ ನುಂಗಿದ ಮಹಂತನ ಬೆಱಗು. । ೧೫೭ ।[೧೦೩೩]

ಪ್ರಾಣಲಿಂಗಿಯ ಐಕ್ಯ[1]ಸ್ಥಲ[1] :

೪೯೩
ಅಂಗ ಲಿಂಗ, ಲಿಂಗ ಅಂಗವೆಂದಱಿದ ಬಳಿಕ ಅಲ್ಲಿಯೇ ಕಾಣಿರೊ!
ಬೇಱೆ ತೋಱಲಿಲ್ಲ, ಉಂಟೆಂದಱಿಸಲಿಲ್ಲ, ಅಲ್ಲಿಯೇ ಕಾಣಿರೊ!
ಕೂಡಲ ಚೆನ್ನಸಂಗಯ್ಯಲಿಂಗ ನಿರಂತರ ಅಲ್ಲಿಯೇ ಕಾಣಿರೊ! । ೧೫೮ । [೧೦೪೩]

೪೯೪
ಅಂಗಸಂಬಂಧ ಲಿಂಗವಾದ ಬಳಿಕ ಲಿಂಗೋಪಜೀವಿಯಾಗಿರಬೇಕು.
ಲಿಂಗಸಂಬಂಧ ಅಂಗವಾದ ಬಳಿಕ ಲಿಂಗೋಪಜೀವಿಯಾಗಿರಬೇಕು.
ಇದಾವಂಗೆ ಸಂಬಂಧವಿಲ್ಲದೆ ಆಶ್ರಯ ಗುಣದಿಂದ ಲಾಂಛನವಾದುದೇನಯ್ಯಾ?
ಲಾಂಛನಂ ದುರ್ಲಭಂ ಚೈವ ಸ್ವಾನುಭಾವೋ ಹ್ಯತಃ ಪರಂ ।
ದುರ್ಲಭಂ ಶಿವತತ್ವಂ ಚ ಪ್ರಾಣಲಿಂಗಮತಃ ಪರಂ ॥

೧–೧ x (ಮೂ).

[೧]ಎಂದುದಾಗಿ,[೧] ಆಶ್ರಯದ ಪರಿ[೨]ಯಲ್ಲ,[೨] ನಿರಾಶ್ರಯದ ಪರಿಯಲ್ಲ,
ಲಿಂಗಸಾರಾಯ ಶರಣ.[೩]
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಮಹದ ಅನುಭಾವ, ನಿರ್ಗಮನವಾದ ಬಳಿಕ. । ೧೫೯ ।[೧೦೨೪]

೪೯೫

ನಚ್ಚು ಬಿಚ್ಚದೆ ಮನದಲಚ್ಚೊತ್ತಿದಂತಿದ್ದಿತು,
ಲಿಂಗವೆನ್ನದು, ಜಂಗಮವೆನ್ನದು, ಪ್ರಸಾದವೆನ್ನದು.
ಅದು ತಾನಾಗಿ ತಾನೆ ಭರಿತ
ಕೂಡಲ ಚೆನ್ನಸಂಗಾ ಲಿಂಗೈಕ್ಯವು. । ೧೬೦ ।[೧೦೪೪]

೪೯೬

ಅಲ್ಲಿಂದತ್ತ ಲಿಂಗಪೂಜಕನೆನಿಸುವೆ,
ಅಭ್ಯಾಸವಿಡಿದಲ್ಲಿಂದತ್ತ ಲಿಂಗಭಕ್ತನೆನಿಸುವೆ,
ಸದಾಚಾರವಿಡಿದಲ್ಲಿಂದತ್ತ ಲಿಂಗಪ್ರಸಾದಿಯೆಂದೆನಿಸುವೆ.
ಅರ್ಪಿತವಿಡಿದಲ್ಲಿಂದತ್ತ ಪ್ರಾಣಲಿಂಗಿಯೆಂದೆನಿಸುವೆ.
ಪ್ರಾಣಲಿಂಗವಿಡಿದ[೪]ಲ್ಲಿ[೪]ಂದತ್ತ ಲಿಂಗೈಕ್ಯನೆಂದೆನಿಸುವೆ.
ಉಭಯಜ್ಯೋತಿವಿಡಿದಲ್ಲಿಂದತ್ತ
"ಸರ್ವಾಂಗಲಿಂಗೇನ ಸಹ ಮೋದತೇ" ಅಲ್ಲಿಂದತ್ತ.
ಇದು ಕಾರಣ, ಕೂಡಲ ಚೆನ್ನಸಂಗ
ಲಿಂಗವಿಡಿದಲ್ಲಿಂದತ್ತತ್ತ. । ೧೬೧ ।[೧೦೬೧]

೪೯೭

ಕಕ್ಷೆ ಕರಸ್ಥಳ ಕಂಠ ಉತ್ತಮಾಂಗ ಮುಖಸೆಜ್ಜೆ ಅಂಗಸೋಂಕೆಂಬವು
ಬಹಿರಂಗದ ಶೃಂಗಾರ.
ಬ್ರಹ್ಮರಂಧ್ರ ಭ್ರೂಮಧ್ಯ ನಾಸಿಕಾಗ್ರ ಚೌಕಮಧ್ಯವೆಂಬವು
ಅಂತರಂಗ[೫]ದ ಶೃಂಗಾರ,[೫]
ಬ್ರಹ್ಮರಂಧ್ರದಲ್ಲಿ ಲಿಂಗಸ್ವಾಯತ,
ಭ್ರೂಮಧ್ಯದಲ್ಲಿ ಜಂಗಮಸ್ವಾಯತ,

೧–೧ x (ಮೂ), ೨–೨ ಯು (ಮೂ), ೩+ ಲಿಂಗ (ಮೂ), ೪–೪ ರಿ (ಮೂ), ೫–೫ x (ಮೂ).

ನಾಸಿಕಾಗ್ರದಲ್ಲಿ ಪ್ರಸಾದಸ್ವಾಯತ,
ಚೌಕಮಧ್ಯದಲ್ಲಿ ಅನುಭಾವಸ್ವಾಯತ.
ಇಂತೀ ಚತುರ್ವಿಧ ಸಾಹಿತ್ಯವಾಗಿ
ನೋಡಿತ್ತೇ ಪಾವನ, ಮುಟ್ಟಿತ್ತೇ ಅರ್ಪಿತ
ಕೂಡಲ ಚೆನ್ನಸಂಗಮದೇವಾ. । ೧೬೨ ।[೧೦೦೪]

೪೯೮

ಸ್ಥೂಲ ಪಂಚಭೂತಂಗಳಲ್ಲಿ ಇಷ್ಟಲಿಂಗಪ್ರತಿಷ್ಠೆ,
ಸೂಕ್ಷ್ಮ ಪಂಚಭೂತಂಗಳಲ್ಲಿ ಪ್ರಾಣಲಿಂಗಪ್ರತಿಷ್ಠೆ,
ಕಾರಣ ಪಂಚಭೂತಂಗಳಲ್ಲಿ ತೃಪ್ತಿಲಿಂಗಪ್ರತಿಷ್ಠೆ.
ಇಂತೀ ಸ್ಥೂಲ ಸೂಕ್ಷ್ಮ ಕಾರಣ ಮಹವು,
ಮಹದ ಹೃದಯದಲ್ಲಿ ಕೊನೆದೋಱಿದಿಪ್ಪ ಜ್ಯೋತಿಯ
ನಿಮ್ಮ ಶರಣನ ಸರ್ವಾಂಗದಲ್ಲಿ ಕಂಡೆನು
ಕೂಡಲ ಚೆನ್ನಸಂಗಮದೇವಾ. । ೧೬೩ ।

೪೯೯

ಇಷ್ಟಲಿಂಗಕ್ಕೆ ಮಜ್ಜನ, ಪ್ರಾಣಲಿಂಗಕ್ಕೆ ಭೋಜನ,
ತೃಪ್ತಿಲಿಂಗದ ಮುಖದಲೆ ಪರಿಣಾಮ ನೋಡಯ್ಯಾ.
ಕಾಮಿತ ಕಲ್ಪಿತ ಭಾವಿತ ಅರ್ಪಿತ ನಾನಲ್ಲ,
ಅಲ್ಲಲ್ಲಿಗೆ ಅವಧಾನದಾಯತವ ನೋಡಯ್ಯಾ.
ಅವಧಾನದ ಕೊನೆಯಲಿಹ ಸುಯಿಧಾನದ ಲಿಂಗವನು
ನಿಮ್ಮ ಶರಣನ ಸರ್ವಾಂಗದಲ್ಲಿ ಕಾಣಬಹುದು
ಕೂಡಲ ಚೆನ್ನಸಂಗಮದೇವಾ. । ೧೬೪ ।[೧೦೦೦]

೫೦೦

ಆಯತಲಿಂಗದಲ್ಲಿ ಆಚಾರವಡಱತು,
ಸ್ವಾಯತಲಿಂಗದಲ್ಲಿ ವಿಚಾರವಡಱತು,
ಸನ್ನಿಹಿತ ಲಿಂಗದಲ್ಲಿ ಅನುಭಾವವಡಱತು,
ಈ ತ್ರಿವಿಧದಲ್ಲಿ ತ್ರಿವಿಧವಡಱತಡೆ
ಒಂದಲ್ಲದೆರಡುಂಟೆ? ಕೂಡಲ ಚೆನ್ನಸಂಗಾ ನಿಮ್ಮಲ್ಲಿ. । ೧೬೫ ।[೧೦೪೫]

೫೦೧

ಬಹಿರಂಗದ ಆರೋಗಣೆಯ ರುಚಿ ಅಱಿಯಬಾರದು,
ಏನು ಕಾರಣವೋ ಲಿಂಗಯ್ಯ?
ಅಂತರಂಗದ ಆರೋಗಣೆಯ ಮಹಂತನೇ ಬಲ್ಲನೊ ಲಿಂಗಯ್ಯ.
ಅಱಿದು ಮಱೆದಂಗೆ ವಿರೋಧವೆ?
ಸಜ್ಜಕ್ಕೆ ಉಪಚಾರವುಂಟೆ ಲಿಂಗಯ್ಯ?
ಅಲ್ಲಿ ಸೋಂಕಿದ ಬಳಿಕ ನೋಡಲಿಲ್ಲ, ಕೂಡಲ ಚೆನ್ನಸಂಗಯ್ಯನ. । ೧೬೬ ।[೭೮೫]

೫೦೨

ಲೋಕದ ನುಡಿ ತನಗೆ ಡೊಂಕು, ತನ್ನ ನುಡಿ ಲೋಕಕ್ಕೆ ಡೊಂಕು.
ಊರ ಹೊದ್ದ, ಕಾಡ ಹೊದ್ದ, ಆಪ್ಯಾಯನ ಮುಕ್ತಿ ವಿರಹಿತನಲ್ಲದ ಶರಣ.
ಕಪಾಲದೊಳಗೆ ಉಲುಹಡಗಿದ,
ಕೂಡಲ ಚೆನ್ನಯ್ಯನಲ್ಲಿ ಒಂದಾದ, ಲಿಂಗೈಕ್ಯವು. । ೧೬೭ ।[೧೦೪೯]

೫೦೩

ಇನಿಗಡಲ ಅಣುಗನ ಕೂಡಿದ ಪತಂಗನು
ತಾಮಸದಿವಸವ ಮಱೆದಂತೆ.
ಸತ್ವಗುಣ ರಜದಲಡಗಿ, ರಜದ ಗುಣ ತಮದಲಡಗಿ,
ತಮದ ಗುಣ ರುದ್ರನೊಳಡಗಿ.
ರುದ್ರನ ಗುಣವು ಅಕ್ಷರಾಕ್ಷರ [೧]ಪರಶಿವನೊಳ[೧]ಡಗಿ
ಅಕ್ಷರಾಣಿ ಚ ಮಾತ್ರಾಣಿ ಸರ್ವೇ ಬಿಂದುಸಮಾಶ್ರಿತಾಃ ।
ಬಿಂದುರ್ಭಿದ್ಯತೇ ನಾದೇನ ಸುನಾದಸ್ತೇನ ಭಿದ್ಯತೇ ॥
ಎಂದುದಾಗಿ, ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣ ಬಲ್ಲನಲ್ಲದೆ, ಅಜ್ಞಾನಿಗಳೆತ್ತ ಬಲ್ಲರು? । ೧೬೮ ।[೧೦೪೭]

೫೦೪

ರೇಚಕ ಪೂರಕ ಕುಂಭಕವೆಂಬ ಗರುಡವಾಯು[೨]ವ[೨]ಸೋಂಕ ತೆಗೆದು,
ಬ್ರಹ್ಮಾಂಡದಲ್ಲಿ ಕೀಲಿಟ್ಟು, ದ್ವಾರಕವಾಟವನೆ ತೆಱೆದು, ಆಂದೋಳಿಸುತ್ತಿದ್ದಿತ್ತು,
[೩]ಪರಶಿವಯೋಗ.[೩]

೧-೧ x (ಮೂ), ೨-೨ x (ಮೂ), ೩-೩ x (ಮೂ).

ಬಾಲ ಕುಮಾರ ಪ್ರೌಢಭಾಗದಲ್ಲಿ ಕಾಳಂ ಪೊಕ್ಕಿತ್ತು.
ಕಾಳಾಂದರದಿಂದತ್ತತ್ತಲಾರು ಬಲ್ಲರೊ?
ಅಪ್ಪಿನ ಘಟ ಸೋಂಕಿ ಹೊತ್ತುಕೊಂಡು ಸುಳಿದ ಜಗದೊಳಗೆ.
ಅದು ಬಿರಿಬಿರಿದು ನಿರಾಳದಲ್ಲಿ ನೆರೆವ ಭೇದವ, ಕೂಡಲ ಚೆನ್ನಸಂಗನಲ್ಲಿ
ಲಿಂಗೈಕ್ಯರನುವನಾ ಲಿಂಗೈಕ್ಯರೆ ಬಲ್ಲರು. ।೧೬೯।[೧೦೪೮]

೫೦೫

ಮಂದಾರಸ್ಥಾನ ಮೊದಲಾದ ಆಱಱ ಕಡೆಯ
ಸ್ವಾದೋದಕ ಸಮುದ್ರದಲ್ಲಿ ವಿಶ್ರಮಿಸಿದ,
ಇಕ್ಷುಸಮುದ್ರದಲ್ಲಿ ತೃಪ್ತನಾಗಿ ಮೇರುಮಂದಿರದಲಿ ಮುಗ್ಧನಾದ
ಕಾಣಾ ಕೂಡಲಚೆನ್ನ ಸಂಗಾ, ನಿಮ್ಮ ಶರಣ. ।೧೭೦।[೧೦೪೯]

೫೦೬

ಕಾಯವೆ ಶಿವಾಲ್ಯ, ಕಮಳಮಧ್ಯಮಂಟಪವು ಶುಕನಾಸಿ ನೋಡಾ ಅಯ್ಯಾ.
ಜ್ಞಾನಾರೂಢಪ್ರಾಣೇಶ್ವರನೆಂಬಾತನಲ್ಲಿಯ ದೇವನು.
ಒಂಬತ್ತು ಮಾನಿಸರು ತಂಡಾಲೆಯರು. ಇಂಬಿನ ಮಠಪತಿ ಹಂಸಜೀಯ,
ತನ್ನ ದಳವಳಯವನೊಲ್ಲದೆ ಲಿಂಗವೆ ಗೂಡಾದ[೧]ನು,[೧]
ಕೂಡಲ ಚೆನ್ನಸಂಗಯ್ಯನೆಂಬ ನಿಶ್ಚಿತ ನಿಜೈಕ್ಯನು. ।೧೭೧।[೧೦೫೦]

೫೦೭

ದೃಷ್ಟಿ ನಟ್ಟಿತ್ತು ನೋಡಾ, ನಟ್ಟು ಮತ್ತೆ ತೆಗೆಯಲಾಱದು ನೋಡಾ.
ಅಲ್ಲಿಯೇ ಅಚ್ಚೊತ್ತಿದಂತಿದ್ದಿತ್ತು ನೋಡಾ.
ಆಶ್ರಯವ ಗೆಲಿದು ನಿರಾಶ್ರಯದ ನಿಃಪತಿಯಲ್ಲಿ ನಿಂದನು
ಕೂಡಲ ಚೆನ್ನಸಂಗಾ, ನಿಮ್ಮ ಶರಣ. ।೧೭೨।[೧೦೨೮]

೫೦೮

ಲಿಂಗಗಂಭೀರವಾದ ಶರಣ ಅಂಗವಿಕಾರವನಱಿಯ,
ಲಿಂಗ ಸನುಮತವಾದ ಶರಣ ಇಂದ್ರಿಯವಿಕಾರವನಱಿಯ.
ಲಿಂಗಗಂಭೀರವಾಗಿ, ಮನದಲ್ಲಿಯೇ ಲೀಯವಾಗಿ, ಅವಧಾನವನಱಿಯ
ಕೂಡಲ ಚೆನ್ನಸಂಗಾ ಲಿಂಗೈಕ್ಯನು. ।೧೭೩।[೧೦೫೨]

೧–೧ ವು (ಮೂ).

೫೦೯

ಸಾವಯವೆಂದರೆ ನಿರವಯವಾಯಿತ್ತು,
ನಿರವಯವೆಂದರೆ ಸಾವಯವಾಯಿತ್ತು,
ನಿರವಯ ಸಾವಯ ತನ್ನೊಳಗಡಗಿತ್ತು.
ಸ್ಫಟಿಕದ ಘಟದೊಳಗಣ ಜ್ಯೋತಿಯಂತೆ
ಕೂಡಲ ಚೆನ್ನಸಂಗನ ಶರಣರ ನಿಲವು. । ೧೭೪ । [೧೦೬೬]

❖❖

೧+ ಶ್ರೀ ಗುರು ಶಾಂತಲಿಂಗಾಯಂ ನಮಃ ಪ್ರಾಣಲಿಂಗಿಸ್ಥಲ ಸಮಾಪ್ತ, ಶ್ರೀ ಶ್ರೀ.

ಶರಣಸ್ಥಲ

[೧]ಶರಣನ ಜ್ಞಾನಿಸ್ಥಲ :[೧]

೫೧೦

ಪೂಜಿಸುವನ್ನಕ್ಕ ಫಲದಾಯಕ ಕಂಡಾ,
ಸಹಜ ಸಂಬಂಧದನು[೨]ವು[೨] ಹುಟ್ಟದನ್ನಕ್ಕ ಎರವೆಂದೆನಿಸೂದು.
ಗಮನ ನಿರ್ಗಮನವಾಗದನ್ನಕ,
ಆಶೆಯಾಮಿಷವಳಿಯದನ್ನಕ ಭಕ್ತಿ ಮತ್ತೆಲ್ಲಿಯದೊ?
ಘಟದೊಳಗೆ ದಿಟವಾಗಿದ್ದ ಪಂಚೈದು ಭೂತವಳಿಯದೆ
ಕೂಡಲ ಚೆನ್ನಸಂಗನಲ್ಲಿ ಶರಣರೆನಿಸಿಕೊಳಲೆಂತುಬಹುದು? । ೧ ।[೧೧೫೨]

೫೧೧

ಭಕ್ತನಾದರೆ ಭವಿ ನಾಸ್ತಿಯಾಗಿರಬೇಕು,
ಶರಣನಾದರೆ ಭವಂ ನಾಸ್ತಿಯಾಗಿರಬೇಕು,
ಲಿಂಗೈಕ್ಯನಾದರೆ ಲಯವನಱಿಯದಿರಬೇಕು,
ಪ್ರಸಾದಿಯಾದರೆ ತ್ರಿವಿಧನಾಸ್ತಿಯಾಗಿರಬೇಕು,
ಕೂಡಲ ಚೆನ್ನಸಂಗಮದೇವಾ. । ೨ । [೭೮೧]

೫೧೨

ಮಾಯಾಂಗನೆಯ ಸೋಂಕಳಿದಲ್ಲದೆ ಅಂಗಸೋಂಕಲ್ಲ,
ಘಟವು ಸಯವಾದ[೩]ಲ್ಲ[೩]ದೆ ಕಕ್ಷೆಯಲ್ಲ,

೧-೧ ಶ್ರೀಗುರು ಶಾಂತಲಿಂಗಾಯಂ ನಮಃ ॥ ಶರಣ ಸ್ಥಳ॥ ಆಜ್ಞಾನಿ॥ (ಮೂ), ೨-೨ x(ಮೂ) ೩-೩ ೦(ಮೂ).

ಅನ್ಯದೈವಕ್ಕೆ ತಲೆವಾಗೂದುತ್ತಮಾಂಗ[೧]ವಲ್ಲ,
ಷಡುರುಚಿಯ ಬೇಡೂದಮಳೋಕ್ಯವಲ್ಲ,
ನಿಂದೆ ಸ್ತುತಿಯ ನುಡಿವುದು [೨][ಕಂಠ][೨]ವಲ್ಲ,
ಅನ್ಯರಿಗೆ ಕೈಯ್ಯಾನೂದು ಕರಸ್ಥಳವಲ್ಲ.
ಇಂತೀ ಆಱಱ ಕುಳವನಱಿಯದಿದ್ದಡೆ
ಮುಂದಣ ನರಕ ಇಂದೇ ಬಂದಿತ್ತು
ಕೂಡಲ ಚೆನ್ನಸಂಗಮದೇವಾ. । ೩ । [೧೧೫೪]

೫೧೩

ಕರಸ್ಥಲ ಸೆಜ್ಜೆಯಾದ ಶರಣನು ಹೊನ್ನಿಗೆ ಕೈಯ್ಯಾಂತಡದು
ಕರಸ್ಥಳವಲ್ಲ, ಅದು ಕರ್ಮಸ್ಥಳ.
ಅಂಗಸೋಂಕು ಸೆಜ್ಜೆಯಾದ ಶರಣನು
ಅಪ್ಪಿನ ಸೋಂಕಿನ ಸುಖಕ್ಕೆ ಅಂಗೈಸಿದನಾದರೆ
ಅದು ಅಂಗ ಸೋಂಕಲ್ಲ, ಅದು ಕರ್ಮಸೋಂಕು.
ಮುಖಸೆಜ್ಜೆಯಾದ ಶರಣನು ಹುಸಿ ನುಸುಳು ಬಂದಡದು
ಮುಖಸೆಜ್ಜೆಯಲ್ಲ, ಕರ್ಮಸೆಜ್ಜೆ.
ಉತ್ತಮಾಂಗ ಸೆಜ್ಜೆಯಾದ ಶರಣನು ಪೂರ್ವಲಿಖಿತವನುಂಬಡದು
ಉತ್ತಮಾಂಗವಲ್ಲ, ಅದು ಕರ್ಮಾಂಗ.
ಅಮಳೋಕ್ಯ ಬಾಯಿದೆಱೆದಂದದಿಂಗೆ ವ್ರತಗೇಡಿ
ಕೂಡಲ ಚೆನ್ನಸಂಗಮದೇವಾ. । ೪ । [೧೧೧೪]

೫೧೪

ವಸ್ತ್ರ ಬಲುಹಿನಲ್ಲಿ ಕಟ್ಟು, ಸೆಜ್ಜೆಯ ಬಲುಹಿನಲ್ಲಿ ಕಟ್ಟು.
ಶಿವದಾರವ ಬಲುಹಿನಲ್ಲಿ ಕಟ್ಟೆಂದು ಹೇಳೂದು ಉಪದೇಶವೆ?
ಮತ್ತೆ ಕಟ್ಟುವ ಠಾವುಂಟಾಗಿ ಅಷ್ಟವಿಧಾರ್ಚನೆ, ಷೋಡಶೋಪಚಾರ,
ಕಾಲನೇಮವೆಂದು ಹೇಳೂದು ದೀಕ್ಷೆಯೆ?
ಮತ್ತೆ ಕಾಲನೇಮವುಂಟಾಗಿ ಇದನಱಿಯದೆ ಹೇಳಿದಾತ [೩]ಶಿವ[೩]ದ್ರೋಹಿ,
ಕೇಳಿದಾತ ಗುರುದ್ರೋಹಿ.

೧+ ಲ್ಯ (ಮೂ), ೨–೨ ಸ್ಕಂದ(ಮೂ), ೩–೩ ಗುರು (ಮೂ).

ಐಕ್ಯವಿಲ್ಲದ ಮಾಟ, ಸಯಿದಾನದ ಕೇಡು.
ಕೂಡಲ ಚೆನ್ನಸಂಗಯ್ಯಾ ಆ ಗುರುಶಿಷ್ಯರಿಬ್ಬರೂ
ಉಭಯಭ್ರಷ್ಟರು. । ೫ । [೧೧೦೨]

೫೧೫
ಹಸರದ ಪಸರದ ಭಕ್ತಿಯ ಹಸರಿಸಿ
ಬೆಸಗೊಂಬರೆ, ನಾವು ಗುರುವೆಂಬಿರಿದಕಿನ್ನೆಂತಯ್ಯ?
ದಶದಳಸೂತಕವರ್ಣವಳಿಯದನ್ನಕ್ಕ ನಾವು ಗುರುವೆಂಬಿರೆಂತಯ್ಯ?
ತನ್ನ ಶಿಷ್ಯರ ಕೈಯ ನಿಷ್ಕವ ಕೊಂಬ ಪಾತಕರ ನುಡಿಯ ಕೇಳಲಾಗದು,
ಕೂಡಲ ಚೆನ್ನಸಂಗಮದೇವಾ. । ೬ । [೧೧೦೧]

೫೧೬
ಮಾತ ಕಲಿತು, ಮಂಡೆಯ ಬೋಳಿಸಿಕೊಂಡಡೇನು?
ವೇಷಲಾಂಛನಧಾರಿ, ಉದರಪೋಷಕರಪ್ಪರಲ್ಲದೆ
ಆಗಮಾಚಾರಿಯರಾಗಲಱಿಯರು ಕಾಣಿರೇ,
ಅಷ್ಟವಿಧಾರ್ಚನೆ ಷೋಡಶೋಪಚಾರಕ್ಕೆ ಸಲ್ಲದದು ಸೀಮೆಯ ಕಲ್ಲು.
ಅನ್ಯರ ಬೋಸರಿಸಿ ತನ್ನ ಉದರವ ಹೊರೆವ ವೇಷಡಂಭಕರ ಮೆಚ್ಚ
ನಮ್ಮ ಕೂಡಲ ಚೆನ್ನಸಂಗಮದೇವ. । ೭ । [೬೯೩]

೫೧೭
ಅರ್ಥ ಪ್ರಾಣ ಅಭಿಮಾನ ಭಕ್ತಂಗೆ ಹೊಲ್ಲದೆಂಬರು,
ತಮ್ಮ ಹೊದ್ದಿದ ಮಲಿನವರನಱಿಯರು.
ಕರುಳು ಕೊಳ್ಳದ ಉದಾನವ ಮರಳಿ ಅರ್ಪಿತವೆಂದು ಕೊಳಬಹುದೆ?
ಬೇಡುವಾತ ಜಂಗಮವಲ್ಲ, ಮಾಡುವಾತ ಭಕ್ತನಲ್ಲ.
ಬೇಡದ ಮುನ್ನವೆ ಮಾಡಬಲ್ಲರೆ ಭಕ್ತ.
ಬೇಡಿ ಮಾಡಿಸಿಕೊಂಬನ್ನಬರ ಜಂಗಮವಲ್ಲ.
ಓಡಲಾಱದ ಮೃಗವು ಸೊಣಗಂಗೆ ಮಾಂಸವನೀವಂತೆ.
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಮಾಡುವ ಭಕ್ತ, ಬೇಡದ ಜಂಗಮವಪೂರ್ವ. । ೮ । [೬೯೨]

೫೧೮

ಬೇಡುವನೆ ಲಿಂಗಜಂಗಮ? ಬೇಡಿಸಿಕೊಂಡು ಮಾಡುವಾತನೆ ಭಕ್ತ?
ಬೇಡಲಾಗದು ಲಿಂಗಜಂಗಮಕ್ಕೆ,
ಬೇಡಿಸಿಕೊಂಡು ಮಾಡಲಾಗದು ಭಕ್ತಂಗೆ.
ಹಿರಿಯರು ನರಮಾಂಸವ ಭುಂಜಿಸುವರೆ
ಕೂಡಲ ಚೆನ್ನಸಂಗಮದೇವಾ? ।೯। [೬೯೪]

೫೧೯

ಕಲ್ಪಿತದಿಂದ ಮಾಡುವ ಭಕ್ತ ನಿರ್ಧನಿಕನಾದರೆ
ತನ್ನ ಕೈಯ ಧನವ ವೆಚ್ಚಿಸಿ,
ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯ ಮಾಡಿ,
ಅವರ ಮತ್ತೆ ದಾಸೋಹಕ್ಕೆ ನಿಲಿಸಿ,
ತಾ ಕರ್ತನಾಗಿ ಪರಿಣಾಮಿಸಬಲ್ಲರೆ ಜಂಗಮ.
[೧]ಅ[೧]ವರಿಗೆ ನಮೋ ನಮೋ.
ಅಂತಲ್ಲದೆ ಮುನ್ನ ಮಾಡಿದಿರಿ, ಈಗ ಮಾಡಿರೇನಿ ಭೋ ಎಂದು
ಜರಿದು ಝುಂಕಿಸಿ ಹೋಹರ ಜಂಗಮವೆಂಬೆನೆ? ಎನ್ನೆನು.
ಏನು ಕಾರಣವೆಂದರೆ
ಆತ ಸೂನೆಗಾಜಿ, ಆತ ದೋಷಾರ್ಥಿ, ಆತ ಭವಭಾರಿ
ಕೂಡಲ ಚೆನ್ನಸಂಗಮದೇವಾ. ।೧೦। [೬೯೫]

೫೨೦

ಬೇಡಿ ಮಾಡೂದಂಗಭೋಗ, ಬೇಡದೆ ಮಾಡೂದು ಲಿಂಗಭೋಗ,
ಬೇಡುವನೆ ಜಂಗಮ? ಬೇಡಿಸಿಕೊಂಬನೆ ಭಕ್ತ?
ಕೂಡಲ ಚೆನ್ನಸಂಗಯ್ಯ ಮಾಟದಿಂದ ಕೂಟಕ್ಕಿಂಬಾಯಿತ್ತು. ।೧೦। [೧೧೦೩]

೫೨೧

ಗತಿಪದಮುಕ್ತಿಯ ಬಯಸಿ ಮಾಡುವಾತ ಭಕ್ತನಲ್ಲ,
ಜೀವನೋಪಾಯಕ್ಕೆ ಬೇಡುವಾತ ಜಂಗಮವಲ್ಲ.

೧-೧ x(ಮೂ)

ಗತಿ[೧]ಪದ[೧] ಮುಕ್ತಿಸೂತಕವಿರಹಿತ ಭಕ್ತ,
ಹಮ್ಮು ಬಿಮ್ಮು ಗಮನನಾಸ್ತಿ ಜಂಗಮ.
ಮಾಡುವಡೆ ಭಕ್ತಿ ಮಾಟದೊಳಗಿಲ್ಲದಿರಬೇಕು,
ಬೇಡುವಡೆ ಜಂಗಮ ಕೊಂಬುದಱೊಳಗಿಲ್ಲದಿರಬೇಕು.
ಪ್ರಾಣವಿಲ್ಲದ ಭಕ್ತ ರೂಹಿಲ್ಲದ ಜಂಗಮ,
ಉಭಯ ಕುಳ ಸಂದಳಿದಂದು
ಕೂಡಲ ಚೆನ್ನಸಂಗನಲ್ಲಿ ಭಕ್ತಜಂಗಮವೆಂಬೆ. ।೧೨। [೯೬]

೫೨೨

ಭಕ್ತ ಜಂಗಮದ ನುಡಿಗಡಣದ ಮೇಳಾಪವೆಂತಿರಬೇಕೆಂದರೆ:
ಪ್ರಚ್ಛನ್ನವಾಗಿ ಲೋಕಕ್ಕೆ [೨]ಅದೃಶ್ಯ[೨]ವಾಗಿರಬೇಕು,
ಜಲಚರನ ಪಾದಪಥದಂತಿರಬೇಕು,
ಶಿಶುಕಂಡ ಕನಸಿನಂತಿರಬೇಕು,
ಮೌನಿಯುಂಡ ರುಚಿಯಂತಿರಬೇಕು, ಶಿವಾಚಾರಕ್ಕೆ ಇದು ಚಿಹ್ನ.
ಅಂತಲ್ಲದೆ ಹಗರಣದ ವಾದ್ಯದಂತೆ ನಗೆಗೆಡೆಯಾಗಿರುತಿಪ್ಪರು.
ಹೇಮದೊರೆಯ ಮೃತ್ತಿಕೆಯ[೩]ಲೆ[೩]ತ್ತಿದಂತೆ,
ಭೇರುಂಡ ಬಾಯಿವಡೆದಿಪ್ಪವರ ಭಕ್ತರೆಂತೆಂಬೆ? ಜಂಗಮವೆಂತೆಂಬೆ?
ಕೂಡಲ ಚೆನ್ನಸಂಗಮದೇವಾ. ।೧೩। [೯೭]

೫೨೩

ಸುಳಿವ ಜಂಗಮ ಕಾಲಿಲ್ಲದೆ ಸುಳಿಯಬೇಕು,
ಮಾಡುವ ಭಕ್ತ[೪] ಕೈಯಿಲ್ಲದೆ ಮಾಡಬೇಕು.
ಸುಳಿವ ಜಂಗಮಕ್ಕೆ ಕಾಲಿದ್ದರೇನು? ಅನ್ಯರ ಮನೆಯ ಹೊಗದಿದ್ದರೆ ಸಾಕು.
ಮಾಡುವ ಭಕ್ತಂಗೆ ಕೈಯಿದ್ದರೇನು? ಲಿಂಗಜಂಗಮಕ್ಕಲ್ಲದೆ ಮಾಡದಿದ್ದರೆ ಸಾಕು.
ಜಂಗಮಸ್ಯಾಗಮೋ ನಾಸ್ತಿ ಭಕ್ತಸ್ಯ ಗೃಹಮಾಚರೇತ್ ।
ಅನ್ಯಸ್ಯ ಚೇದ್ಗೃಹಂ ಯಾತಿ ಸದ್ಯೋ ಗೋಮಾಂಸಭಕ್ಷಣಂ ॥
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಶರಣಸಂಬಂಧವಪೂರ್ವ. ।೧೪। [೯೮]

೧-೧ ಬೇರ (ಮೂ). ೨-೨ ನದೃಷ್ಟ (ಮೂ), ೩-೩ ವೆ (ಮೂ), ೪+ ಂಗೆ (ಮೂ).

೫೨೪

ಸಚರಾಚರ ಚತುರ್ವಲಯದೊಳಗೆ ತಿರುಗುವ
ವೇಷಧಾರಿಯನೆನಗೆ ತೋಱದಿರಾ.
ಆಶಯಾ ಬಧ್ಯತೇ ಲೋಕಃ ಕರ್ಮಣಾ ಬಹುಚಿಂತಯಾ ।
ಆಯುಃಕ್ಷೀಣಂ ನ ಜಾನಾತಿ ವೇಣುಸೂತ್ರಂ ವಿಧೀಯತೇ ॥
[೧]ಎಂದುದಾಗಿ.[೧] ಆಶೆಯ ಧಿಕ್ಕರಿಸಿ ನಿರಾಶೆಯ ವೇಷದವರ ಕಂಡರೆ
ನೀ ಸರಿಯೆಂಬೆ ಕೂಡಲ ಚೆನ್ನಸಂಗಮದೇವಾ. ।೧೫। [೧೧೯೭]

೫೨೫

ಲಿಂಗವ ಕಟ್ಟಿ ಸುಳಿವಾತ ಜಂಗಮವಲ್ಲ,
ಆ ಜಂಗಮಕ್ಕೆ ಮಾಡುವಾತ ಭಕ್ತನಲ್ಲ.
ಉಭಯ ಕುಳವಳಿದಾತ ಜಂಗಮ,
ಆ ಜಂಗಮಕ್ಕೆ ಮಾಡುವರೆ ಭಕ್ತ.[೨]
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಶರಣಸಂಬಂಧ, ಉಭಯಕುಳವಳಿದ ಭಕ್ತ ಜಂಗಮವಪೂರ್ವ. ।೧೬। [೧೩೯೯]

೫೨೬

ವಚನ ರಚನೆಯ ಅನುಭಾವ[೩]ವ[೩] ಬಲ್ಲೆವೆಂದೆಂಬರು
ವಚನವಾವುದು? ರಚನೆಯಾವುದು? ಅನುಭಾವವಾವುದು? ಹೇಳಿರಣ್ಣಾ.
ವಚನ : ಆತ್ಮತೃಪ್ತಿಯನಱಿವುದು.
ರಚನೆ : ಸ್ಥಾವರ ಲಿಂಗ ಜಂಗಮ ತ್ರಿವಿಧದಲ್ಲಿ ಕಾಣಬಲ್ಲರೆ ರಚನೆ.
ಅನುಭಾವ : ಕಾಮದಿಚ್ಫೆಗೆ ಹರಿದು ಕಾಮಿಯಾಗದಿರಬೇಕು,
ಕ್ರೋಧದಿಚ್ಫೆಗೆ ಹರಿದು ಕ್ರೋಧಿಯಾಗದಿರಬೇಕು,
ಮದ ಮಚ್ಚರದಿಚ್ಫೆಗೆ ಹರಿದು ಮದಮಚ್ಚರವಿಲ್ಲದಿರಬೇಕು,
ಆಶೆಯಾಮಿಷ ಹರುಷದಿಚ್ಫೆಗೆ ಹರಿದು [೪][ಯಾ][೪]ಚಕನಾಗದಿರಬೇಕು.
ಕಾಮ ಕ್ರೋಧ ಲೋಭ ಮೋಹ ಮದ ಮಚ್ಚರ ಆಶೆಯಾಮಿಷ
ರೋಷಾದಿಗಳಂ ಹಱಿವೊದೆದು,

೧-೧ x (ಮೂ), ೨+ ರು (ಮೂ), ೩-೩ ಕ್ಕೆ (ಮೂ), ೪-೪ ವಾ (ಮೂ).

ಏಕೋಗ್ರಾಹಿಯಾಗಿ ನಿಂದಲ್ಲೇ ಅನುಭಾವಿ.
ನಾಲ್ಕು ವೇದಶಾಸ್ತ್ರಂಗಳ ಬಲ್ಲೆವೆಂದು ನುಡಿವಾತನನುಭಾವಿಯೆ? ಅಲ್ಲ,
ಅವು ಬ್ರಹ್ಮನೆಂಜಲು, ಇವ ಬಲ್ಲೆನೆಂದು ನುಡಿವಾತನನುಭಾವಿಯೆ? ಅಲ್ಲ,
ಆತನು ಇದಿರ ನಂಬಿಸಿ ಉಂಬ ಭುಂಜಕನಯ್ಯಾ
ಕೂಡಲ ಚೆನ್ನಸಂಗಮದೇವಾ. ।೧೮। [೧೦೭೪]

೫೨೮
ಹುಟ್ಟಿದ ಕುಳಸ್ಥಳವನಜೆದು, ಕಾಮಕ್ರೋಧವನಳಿದು,
ಸತ್ವರಜತಮವನೊತ್ತಿ, ನಿಂದಲ್ಲಿ ಸಹಜ ನೆಲೆಗೊಂಬುದು.
ಮನದಂತುವನಜೆದು, ಜೀವದ ಹೋಹ ನೆಲೆಯ ಬಲ್ಲರೆ
ಕೂಡಲಚೆನ್ನಸಂಗನಲ್ಲಿ ಮಹಂತರೆನಿಸುವರು. ।೧೯। [೧೨೭೩]

೫೨೯
ತಾಳು ಬೋಳು ಕಪ್ಪರಾದಿಗಳೆಂದೆಂಬರು,
ತಾಳಾವುದು, ಬೋಳಾವುದು, ಕಪ್ಪರವಾವುದೆಂದಜೆಯರು.
ಕಾಯದ ಕಳವಳದ ಗುಣವ ತಾಳಬಲ್ಲರೆ ತಾಳು,
ಸಂಸಾರ ವಿಷಯವ ಬೋಳಿಸಬಲ್ಲರೆ ಬೋಳು,
ಪರದಲ್ಲಿ ಪರಿಣಾಮಿಸಬಲ್ಲರೆ ಕಪ್ಪರ.
ಅಂತಲ್ಲದಿದ್ದರೆ ಕೂಡಲ ಚೆನ್ನಸಂಗಮದೇವರಲ್ಲಿ
ಡೊಂಬರ ಬೋಳು. ।೨೦। [೧೧೯೫]

೫೩೦
ಆಚಾರ ಕಪ್ಪರವೊಂದು, ವಿಚಾರ ಕಪ್ಪರವೊಂದು, ಅವಿಚಾರ ಕಪ್ಪರವೊಂದು.
ಇಂತು ಮೂಱು ಕಪ್ಪರವೊಳವು.
ಆಚಾರ ಕಪ್ಪರವ ಜಾಡ್ಯನೆಂಬೆ. ವಿಚಾರ ಕಪ್ಪರವ ಹೆಳವನೆಂಬೆ.
[1]ಅವಿಚಾರ[1] ಕಪ್ಪರ ಸೊಮ್ಮು ಸಂಬಂಧವ ತೋಱೆ ಬೇಡದಾಗಿ
ನಿರುಪಾಧಿಕವಯ್ಯಾ ಕೂಡಲ ಚೆನ್ನಸಂಗಮದೇವಾ. ।೨೧।[2] [೧೧೯೬?]

೧-೧ x(ಮೂ), ೨ ಮುದ್ರಿತ ಪ್ರತಿಯಲ್ಲಿ ೫೩೦, ೫೩೧ನೆಯ ವಚನ ಪ್ರತ್ಯೇಕವಾಗಿಲ್ಲ. (ಸಂ).

೫೩೧

ಆಚಾರ ಕಪ್ಪರ ಸೊಮ್ಮು ಸಂಬಂಧವ ತೋಱಿ ಬೇಡುವುದು .
ವಿಚಾರ ಕಪ್ಪರ ಲಾಂಛನವ ತೋಱಿ ಬೇಡುವುದು.
ಅವಿಚಾರ ಕಪ್ಪರ ಸೊಮ್ಮು ಸಂಬಂಧವ, ನೇಮ ಶೀಲವ ಮೀಱಿ ಬೇಡುವುದಾಗಿ
ನಿರುಪಾಧಿ[೧]ಕವ[೧]ಯ್ಯಾ ಕೂಡಲ ಚೆನ್ನಸಂಗಮದೇವಾ. । ೨೨ ।* [೧೧೯೬?]

೫೩೨

ಅಕ್ಷರ ಪಂಚಕದ ನಿಕ್ಷೇಪವನಱಿಯಬಲ್ಲರೆ ಬೋಳು,
ಕುಕ್ಷಿಯೊಳಗೈವತ್ತೆರಡಕ್ಷರದ ಲಕ್ಷಣವನಱಿಯಬಲ್ಲರೆ ಬೋಳು,
ಅಕ್ಷಯನಿಧಿ ಕೂಡಲ ಚೆನ್ನಸಂಗಯ್ಯ ಭವಕ್ಕೆ ಬೋಳು. । ೨೩ । [೧೩೦೨]

೫೩೩

ದರುಶನಾದಿಗಳೆಲ್ಲ ವಿರಸವಾಯಿತ್ತು, ನೋಡಾ.
ಲಿಂಗಾರ್ಚಕರಲ್ಲದವರು ಲಿಂಗೈಕ್ಯವ ಬಲ್ಲರೆ?
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯ ಬಲ್ಲ ಹಾಂಗೆ. । ೨೪ । [೧೧೦೬]

೫೩೪

ಪೂರ್ವಾಶ್ರಯವಳಿಯದೆ ಪುನರ್ಜಾತರೆನಿಸಿಕೊಂಬರಿನ್ನೆಂತೋ?[೨]
ಪುನರ್ಜಾತನಾದಾತ ಸತಿ-ಸುತ ಮಾತಾ-ಪಿತರ್ಕಳ ಬೆರಸುವ[೩]ಡೆ[೩]
ಕೂಡಲ ಚೆನ್ನಸಂಗನಲ್ಲಿ ಶರಣರೆಂತೆಂಬೆ? । ೨೫ । [೧೧೮]

೫೩೫

ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ ಭವಿಯ ಸಂಗ ಮತ್ತೇಕಯ್ಯಾ?
ಕಾಮ[೪]ನು[೪] ಬಾಣವಕೊಂಡು ತನು ತನು ಮುಖಕ್ಕೆ
ಎಚ್ಚರೆ ಭವಿ ಬಳಿಕವುಂಟು ನೋಡಾ!
ಕಾಮನ ಬಾಣನ ಮುಱಿದು ಮಾಯದ ಸಂಚವ ಕೆಡಿಸಿ
ಎನಗೆ ತನಗೆಂಬುದಳಿದ ಬಳಿಕ ಲಿಂಗಸಂಗಿ ಶರಣನಾಗಿಪ್ಪನು,
ಭವಿ ಬಳಿಕೆಲ್ಲಿಯದೊ.

೧-೧ ಯ (ಮೂ). * ಮುದ್ರಿತ ಪ್ರತಿಯಲ್ಲಿ ೫೩೦, ೫೩೧ನೆಯ ವಚನ ಪ್ರತ್ಯೇಕವಾಗಿಲ್ಲ (ಸಂ). ೨+ ಪುನರ್ಜಾತರೆನಿಸಿಕೊಂಬರಿನ್ನೆಂತೊ (ಮೂ). ೩-೩ನೆ (ಮೂ). ೪-೪ ನ (ಮೂ).

ಅಂತರಂಗದ ಅನುಭವನಱಿದು ಮನದ ಆಗು ಹೋಗ ಬಲ್ಲರೆ
ಕೂಡಲ ಚೆನ್ನಸಂಗನಲ್ಲಿ ಲಿಂಗಸಂಗಿ ಶರಣನಾಗಿಪ್ಪನು. । ೨೬ ।

೫೩೬

ಹರಂಗೆಯೂ ತನಗೆಯೂ ಏಕೋಭಾಜನವೆಂಬರು,
ಗುರುಲಿಂಗ ಬಂದರೆ ಮತ್ತೊಂದು ಭಾಜನದ ತನ್ನಿಯೆಂಬ[೧]ರಿಗೆ[೧] ಲಿಂಗವುಂಟೆ?
ಲಿಂಗವ ಮುಟ್ಟಿ ಹಿಂಗುವ ಭವಿಗಳಿಗೆ ಲಿಂಗವುಂಟೆ?
ಲಿಂಗ ಜಂಗಮವನು ಮಹಾಪ್ರಸಾದವನು ಏಕವ ಮಾಡಿದವಂಗಲ್ಲದೆ
ಏಕೋಭಾಜನವಿಲ್ಲ ಕೂಡಲ ಚೆನ್ನಸಂಗಮದೇವಾ. । ೨೭ । [೧೩೮೧]

೫೩೭

ಜ್ಞಾನದೀಪ್ತಿಯ ಬೆಳಗುವ ತೈಲವಾವುದೆಂದರೆ:
ಸದುಮಾನ್ಯರ ನುಡಿಗಡಣದಿಂದೊ[೨]ಸರುವು[೨]ದೆಂಬುದು,
[೩]ಅದು[೩] ತಾನೆಂಬ ಅಱಿವಿನ ನಿಶ್ಚಯವ ತೋಱುವುದು,
[೪]ಹೀನ[೪] ಜಡತೆಯ ಮುಸುಕಿದ ಗಂದಿಕೆ ತಿಳಿದು
ಭಾನು ಬಂದರೆ ಜಗದ ಭ್ರಮೆ ಹರಿವಂತೆ ಹರಿವುದು.
ಬುಧರೊಳು ನೀನಿರಲು ಕರ್ಮಹಱಿವುದು,
ಕೂಡಲ ಚೆನ್ನಸಂಗಮದೇವಾ. । ೨೮ । [೧೦೯೬]

೫೩೮

ಜಲದಲ್ಲಿ ಹುಟ್ಟಿದ ಕೆಸಱು ಕ್ಷೀರದಲ್ಲಿ ತೊಳೆದರೆ ಹೋಹುದೆ?
ಜಲದಲ್ಲಿ ತೊಳೆದಡಲ್ಲದೆ.
ಜೀವನಲ್ಲಿ ಹುಟ್ಟಿದ ಪ್ರಪಂಚು ಪಾಪಂಗಳು
ಬ್ರಹ್ಮದಂಡ ಪ್ರಾಯಶ್ಚಿತದಲ್ಲಿ ಹೋ[೫]ಹವೆ?[೫]
ಶಿವಸಂಸ್ಕಾರಿಯಾಗಿ 'ಅಕ್ಷರೋಽಸಿ' ಎಂಬ ಮಂತ್ರದಿಂದ
ಜೀವನ ಪಾಪವು ಜೀವನಲ್ಲಿಯೇ ಕಳೆವುದು.
ಜೀವತ್ಮಾ ಪರಮಾತ್ಮಾ ಚೇನ್ಮುಕ್ತಾನಾಂ ಪರಮಾ ಗತಿ ।
ಅವ್ಯಯಃ ಪುರುಷಃ ಸರ್ವಕ್ಷೇತ್ರಜ್ಞೋಽಕ್ಷಯ ಏವ ಚ ॥

೧-೧ ರು (ಮೂ), ೨-೨ ದೋಷವಿ (ಮೂ), ೩-೩x (ಮೂ), ೪-೪ ದಿನಂ (ಮೂ), ೫-೫ ಹುದೆ (ಮೂ).

ಎಂದುದಾಗಿ, ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣನ ಕಾಯವು ಸುಕ್ಷೇತ್ರವೆಂದೆನಿಸೂದು. ।೨೯। [೧೨೭೧]

೫೩೯
ಬೇಕೆನಲಾಗದು ಶರಣಂಗೆ, ಬೇಡೆನಲಾಗದು ಶರಣಂಗೆ,
ಬಂದ ಸುಖವನತಿಗಳೆಯಲಾಗದು ಶರಣಂಗೆ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣರು
ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು. ।೩೦। [೧೨೩೫]

[1]**ಶರಣನ ಶರಣಸ್ಥಲ :**[1]

೫೪೦
ಶಿವಯೋಗಿಯೇ, ನಿಭ್ರಾಂತನೇ, ಶರಣ.
ಕರ್ಮಕಾಯನು ಅಲ್ಲ, ಕಾಯಕಲ್ಪಿತನಲ್ಲ ಶರಣನು.
ಸಂಕಲ್ಪ ವಿಕಲ್ಪ ವಿರಹಿತನಾಗಿ
ಅವರವರ ಬೆರೆಸಿಪ್ಪ, ತನ್ನ ಪರಿಬೇಱೆ.
ನಿರಂತರ ಸುಖಿ, ಕೂಡಲ ಚೆನ್ನಸಂಗಾ
ಪ್ರಪಂಚಿನೊಳಗಿಪ್ಪ, ತನ್ನ ಪರಿಬೇಱೆ. ।೩೧। [೧೨೪೦]

೫೪೧
ಸಂಗವಿಡಿದಂತೆ ಸಂಗವಿಡಿದು ನೋ[2]ಡದಿರ[2]
ಶರಣ ಸಂಗಸೂತಕಿಯಲ್ಲ, ಲಿಂಗ ಪರಿಚಿತ.
ಸಂಗವಂತನೆಂದೆನ್ನದಿರು, ಶರಣ ಮನಬಂದಂತೆ ಮಾಡುವ.
ಅಱಿಸಿ ಸಕಳಾಗಮನಪ್ಪ, ಅಹುದಾಗದೆಂಬುದಿಲ್ಲ ನೋಡಾ.
ಕೂಡಲ ಚೆನ್ನಸಂಗನ ಶರಣ ಸಂಗಿಯಲ್ಲ. ।೩೨। [೧೨೬೮]

೧-೧ ಶರಣಸ್ಥಳ (ಮೂ). ೨-೨ ಡಾ (ಮೂ)

೫೪೨

ಆನೆಂಬುದಿಲ್ಲಯ್ಯ, ಲಿಂಗವೆಂಬ ಮಹಂತಂಗೆ.
ಅಳಿಯ[೧]ನು[೧] ಉಳಿಯ[೧]ನು,[೧]
ಮಿಂಚಿನ ಗೊಂಚಲಂತೆ ಹಿಂದೆ ರೂಪಾಗಿ ತೋಱುತಿ[೨]ಪ್ಪನು.[೨]
ಶರಣನೊಡಲುಗೊಂಡಡೆ ಸಾಮಾನ್ಯನೆ? ಪ್ರಕೃತ ಗುಣ ಭಿನ್ನಭಾವವಿಲ್ಲ.
ಕೂಡಲ ಚೆನ್ನಸಂಗನ ಶರಣರ ಪರಿ ಬೇರೆ. । ೩೩ । [೧೨೬೩]

೫೪೩

ಲಿಂ[೩]ಗೋದ[೩]ಯದ ಅಂಗ ಸುಖವು, ಅಂ[೩]ಗೋದ[೩]ಯದ ಲಿಂಗ ಸುಖವು,
ಎರಡಿಲ್ಲದ ಘನವನೇನೆಂಬೆನಯ್ಯಾ, ಮಿಕ್ಕುಮೀಱಿನಿಂದ ನಿಲವನೇನೆಂಬೆನಯ್ಯಾ.
ಕೂಡಲ ಚೆನ್ನಸಂಗನ ಶರಣನನೇನೆಂಬೆನಯ್ಯಾ. । ೩೪ ।

೫೪೪

ಪ್ರಾಣಲಿಂಗವೆಂದೆಂಬರು ಪ್ರಾಣದಲ್ಲಿ ಹರಿವ ಪ್ರಕೃತಾದಿಗಳಿಗಿನ್ನೆಂತೋ.
ಪ್ರಾಣನ, ಪರಮವಾರೂಢನ ನಿರ್ವಾಣದಲ್ಲಿದ್ದಾತನೆ ಬಲ್ಲ.
ಪ್ರಾಣಲಿಂಗವಾದಾತನ ನಿಲವುಯೆಂತಿದ್ದಿಹುದೆಂದರೆ:
ನೆಯಿ ಹತ್ತದ ನಾಲಗೆಯಂತೆ, ಕಾಡಿಗೆ ಹತ್ತದಾಲಿಯಂತೆ,
ಧೂಳು ತಾಗದ ಗಾಳಿಯಂತೆ ಜಲ ಹತ್ತದ ಜಲಜದಂತೆ,
ಉಷ್ಣ ತಾಗದಗ್ನಿಯಂತಿಪ್ಪ, ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೩೫ । [೧೨೫೬]

೫೪೫

ಅಂಡಜ ಸ್ವೇದಜ ಉದ್ಭಿಜ ಜರಾಯುಜ ಈ ನಾಲ್ಕು ಯೋನಿಗಳಲ್ಲಿ ಬರುತ್ತಿಹ
ಅನಂತಕೋಟಿ ಜೀವ ಸತ್ತ ಪಾಪವು ಮೇಘಂಗಳ ತಾಗೂದೆ ಅಯ್ಯಾ?
ಕಾನನದಡವಿಯೊಳಗೆ ಒಂದೊಂದು ಕಾಡುಗಿಚ್ಚು ಹುಟ್ಟಿ
ಧಗಿಲು ಭುಗಿಲೆಂಬ ಉರಿ ಸುಳಿಗೊಂಡಟ್ಟಿ ಸುಡುವಲ್ಲಿ
ಅನಂತಕೋಟಿ ಜೀವ ಸತ್ತ ಪಾಪವು ಹುತವಹನ ತಾಗೂದೆ ಅಯ್ಯಾ?

೧-೧ ರು (ಮೂ), ೨-೨ ಪ್ಪುದು (ಮೂ). ೩-೩ ಗ ಉ (ಮೂ).

ದೆಸೆದಿಕ್ಕುಗಳು ಭರಿತವಾಗಿ ಪವನನಲ್ಲಿಯೆ ಒಲಿದು
ಬ್ರಹ್ಮಾಂಡವ ಮುಟ್ಟಿ ಮಲೆತು ಬೀಸುವಲ್ಲಿ
ಅನಂತಕೋಟಿ ಜೀವಗಳು ಸತ್ತ ಪಾಪವು ಪವನನ ತಾಗೂದೆ ಅಯ್ಯಾ?
ಧರೆಹತ್ತಿ ಉರಿಯೆ ಬ್ರಹ್ಮಾಂಡವ ತಾಗಲು ಕೆಂಡದ ಮಳೆ ಸುರಿಯಲು
ಸುರರ ಅಸುರರ ಎಲ್ಲಾ ಭುಗಿಲು ಭುಗಿಲುಯೆಂದು ಉರಿಯೆಯ್ದೆ ತಾಗಲ್ಕೆ
ವಿಶೇಷ ಪಾಪವು ಗಗನವ ತಾಗೂದೆ ಅಯ್ಯಾ?
ಪೃಥ್ವಿ, ಅಪ್ಪು, ತೇಜ, ವಾಯುವಾಕಾಶ ಚಂದ್ರಸೂರ್ಯ
ಈ ಅಷ್ಟತನುಮೂರ್ತಿಗಳು ನಷ್ಟವಾದ ಪಾಪ ಸದಾಶಿವನ ತಾಗೂದೆ ಅಯ್ಯಾ?
ಉತ್ಪತ್ತಿ, ಸ್ಥಿತಿ, ಲಯ ಕಾಲಕಲ್ಪಿತನಲ್ಲ
ಪ್ರಳಯರಹಿತ ಕೂಡಲೆನ್ನಸಂಗಾ ನಿಮ್ಮ ಶರಣ. । ೩೬ । [೧೨೮೫]

೫೪೬
ಪರುಷ ಮುಟ್ಟಲು ಕಬ್ಬುನ ಸುವರ್ಣವಾದಂತೆ
ಪುಣ್ಯ-ಪಾಪ, ಸ್ವರ್ಗ-ನರಕಂಗಳಿಲ್ಲಯ್ಯಾ ನಿಮ್ಮವರಿಗೆ.
ಕೇಡಿಲ್ಲ, ಕೂಡಲ ಚೆನ್ನಸಂಗನ ಶರಣಂಗೆ. । ೩೭ । [೧೦೨೨]

೫೪೭
ಲಿಂಗಮಧ್ಯದೊಳಗೆ ಜಗವಿದ್ದಡೇನು?
ಜಗವ ಹೊಱಗಿಕ್ಕಿ ಲಿಂಗವನೊಳಗಿಟ್ಟುಕೊಂಬ ಆ ಘನಕ್ಕೆ ಶರಣೆಂಬೆನು.
ಆ ಮಹಾಘನದಾಯತಕ್ಕೊಳಗು, ಪ್ರಳಯಕ್ಕೆ ಹೊಱಗು
ಕೂಡಲ ಚೆನ್ನಸಂಗಾ ನಿಮ್ಮ ಶರಣರು. । ೩೮ । [೧೨೫೯ }

೫೪೮
ಲಿಂಗಸಂಬಂಧ ಸೀಮೆ ನೋಡಾ, ಶರಣಸಂಬಂಧ ನಿಸ್ಸೀಮೆ ನೋಡಾ.
ಲಿಂಗವು ಗಮ್ಯ, ಅಗಮ್ಯ ಶರಣ ನೋಡಾ.
'ಯದ್ಭಾವಂ ತದ್ಭವತಿ'ಯೆಂಬುದಿಲ್ಲಾಗಿ
ಆದಿ ಲಿಂಗ, ಅನಾದಿ ಶರಣ ಕೂಡಲ ಚೆನ್ನಸಂಗಾ. । ೩೯ । [೧೨೬೦]

೫೪೯

ಲಿಂಗಾಭಿಮಾನಿಗೆ ಅಂಗಾಶ್ರಯವಿಲ್ಲ ನೋಡಯ್ಯಾ,
ಬಂದುದೆ ಪರಿಣಾಮ, ನಿಂದುದೆ ನಿವಾಸ.
ಅದು ಇದು ಎಂಬುದಿಲ್ಲ ಕೂಡಲ ಚೆನ್ನಸಂಗನ ಶರಣ[೧]ಂಗೆ.[೧] ।೪೦। [೧೨೫೭]

೫೫೦

ಶರಣರೆಂಬವರು ಜನನಕ್ಕೆ ತವಕಿಗಳಲ್ಲ,
ವಿಷಯಾನುಭಾವಿಗಳಲ್ಲ, ನಿಂದ ನಿಲವು ತಾನೆ ಪರಿಣಾಮ.
[೨]ಲಿಂಗದ[೨] ಸಂಗದ ಸವಿಯ ಶರಣರು ಅನುಮಾನಕವಧಾನಿಗಳಲ್ಲ,
ಕೂಡಲ ಚೆನ್ನಸಂಗಾ ನಿಮ್ಮ ಶರಣರು. ।೪೧। [೧೨೬೪]

೫೫೧

ಅನಾಯಾಸದಿಂದ ಮನೆಯ ಮಾಡಿ, ನಿರಾಯಾಸದಿಂದ ಪರಮಸುಖಿ,
ರೂಪಿಸುವಲ್ಲಿ ರೂಪಾಧಿಕ, ನೋಡುವಲ್ಲಿ ನೋಟ ಘನ,
ಇಂಥಾ ಸಹಜಸಂಗಿಯ ನಿಲವಿನ ಪರಿ.
ಉದಕದೊಳಗಣ ಬಿಂದು ಉದಯರತ್ನದಂತೆ
ಕೂಡಲ ಚೆನ್ನಸಂಗಾ ನಿಮ್ಮ ಶರಣರ ನಿಲವು. ।೪೨। [೧೨೮೨]

೫೫೨

ಶರಣನು ಅದೃಷ್ಟದೃಷ್ಟ ಎರಡುವನೂ ತೋಱುವನು.
ಸಾವಯ ನಿರವಯ ಏನೆಂದು ವಿವರಿಸ ಶರಣನು,
ತಾನು ಸ್ವತಂತ್ರನಾಗಿ ಭಾವರಹಿತನು.
ವಿಕೃತವೇಷದಿಂದ ಸುಕೃತವ ಜೋಡಿಪನಲ್ಲ.
ಪ್ರಕೃತಿ ಗುಣವಿಡಿದು ಮೂರ್ತಿಯಾದ ಉಪಜೀವಿ ತಾನಲ್ಲ.
ಕೂಡಲ ಚೆನ್ನಸಂಗಾ
ನಿಮ್ಮ ಶರಣನು ಸಾರಾಯ ಸನುಮತನು. ।೪೩। [೧೨೬೫]

೧–೧ x (ಮೂ), ೨–೨ x (ಮೂ).

೫೫೩

ಅಸರನಾಳಿದ ಗ್ರಾಮ ಪುರ ಪಟ್ಟಣದೊಳಗೆ ತಾನಿದ್ದು
ಸೀಮೆ ನಿಸ್ಸೀಮೆ ಇದೇನಯ್ಯಾ?
ಬಂಧ ನಿರ್ಬಂಧವಿಲ್ಲಾಗಿ ಶರಣಂಗೆ ಸಂದು ಸಾಧನವುಂಟೆ?
ಎಡೆಗೆ ಕಡೆಯುಂಟೆ?
ಅಗುಸೆಯಲ್ಲಿ ಹೊಗುವನೆ? ಚೋರಖಂಡಿಯಲ್ಲಿ ನುಸುಳುವನೆ?
ಇದು ಕಾರಣ ಕೂಡಲ ಚೆನ್ನಸಂಗಾ
ಅನಿತ್ಯ ಮಿಥ್ಯವ ಕಳೆದು ನಿತ್ಯನಾದ ಶರಣ. । ೪೪ । [೧೨೭೪]

೫೫೪

ಲಿಂಗವೆಂದಱಿದಡೆ ಅಂಗವೆಂಬುದಿಲ್ಲ,
ಜಂಗಮವೆಂದಱಿದಡೆ ಸಂಸಾರವೆಂಬುದಿಲ್ಲ,
ಪ್ರಸಾದವೆಂದಱಿದಡೆ ತನುವೆಂಬುದಿಲ್ಲ.
ಈ ತ್ರಿವಿಧವನಱಿದಡೆ ಮುಂದೆ ಏನೂ ಇಲ್ಲವೆಂಬುದನು
ಶ್ರುತಿ ಸ್ಮೃತಿಗಳಱಿಯವು,
ಕೂಡಲ ಚೆನ್ನಸಂಗಾ ನಿಮ್ಮ ಶರಣ ಬಲ್ಲ. । ೪೫ । [೧೨೪೧]

೫೫೫

ದೇಹಿಯಲ್ಲ ನಿರ್ದೇಹಿಯಲ್ಲ, ಬೋಧನಲ್ಲ ನಿರ್ಬೋಧನಲ್ಲ,
ಕಾಮಿಯಲ್ಲ ನಿಃಕಾಮಿಯಲ್ಲ, ಆಸೆವಿಡಿದು ಬಂದ ಆಮಿಷನಲ್ಲ
ಅವಗುಣವಿಲ್ಲದ ನಿರ್ಗುಣಿ, ನಿರಂತರ
ಕೂಡಲ ಚೆನ್ನಸಂಗನ ಶರಣ ನೋಡಯ್ಯಾ. । ೪೬ । [೧೨೮೮]

೫೫೬

ಹುಸಿಯ ಹಸರವನಿಕ್ಕಿ ವಚನವನ[೧]ರ್ಪಿ[೧]ಸುವನಲ್ಲ,
ಆ[೨]ನು[೨]ಬಲ್ಲೆನೆಂಬ ಅಜೀ[೩]ವಿನ[೩] ಕೊಜಿವಂಜಿಯಂತೆ ಜಗಕ್ಕೆ ಹೇಳುವನಲ್ಲ,
ಘನಕ್ಕೆ ಮಹಾಘನ ತಾನಾದ ಕಾರಣ ಕೂಡಲ ಚೆನ್ನಸಂಗನ ಶರಣರು
ಕುಟಿಲ ಕುಹಕದೊಳಗೆ ವರ್ತಿಸುವರಲ್ಲ. । ೪೭ । [೧೨೮೨]

೧–೧ ರ್ಚಿ (ಮೂ), ೨–೨ x (ಮೂ), ೩–೩ ವ (ಮೂ)

೫೫೭
ವಚನ ಸನ್ನಿಹಿತ ತರ್ಕಕ್ಕೊಡಲು,
ಅನುಭಾವ ಸನ್ನಿಹಿತ ಬಹುಮಾ[1]ತಿ[1]ಗೊಡಲು,
ಇಂದ್ರಿಯ ಸನ್ನಿಹಿತ ನಷ್ಟಕ್ಕೊಡಲು,
ತನು ಸನ್ನಿಹಿತ ವ್ಯಾಪ್ತಿಗೊಡಲು.
ಸರ್ವಾಂಗದೊಳಗಾವಂಗವಿಲ್ಲ,
ಕೂಡಲ ಚೆನ್ನಸಂಗಮದೇವಾ ನಿಮ್ಮ ಶರಣನ ಪರಿ ಬೇಱೆ. । ೪೮ । [೧೦೩೯]

೫೫೮
ತನು ನಾಗವತ್ತಿಗೆಯಾದಡೆ ಅರ್ಪಿತವ ಮಾಡಬೇಕು,
ತನು ಸಜ್ಜೆಯಾದಡೆ ಅರ್ಪಿಸಲಿಲ್ಲ ಕಂಡಯ್ಯಾ,
ತನು ಸಿಂಹಾಸನವಾದಡೆ ಸುಳಿವುದೆ ಭಂಗ.
ಪ್ರಾಣಲಿಂಗ ಸಂಬಂಧಿಯಾದರೆ
ಅದನು ಎರಡು ಮಾಡಿಕೊಂಡು ನುಡಿಯಲೇಕಯ್ಯಾ?
ಒಂದೆಯೆಂದು ನುಡಿದ ಸೋಹದವನಲ್ಲ,
ಬಹ ಪದಾರ್ಥದ ಲಾಭದವನಲ್ಲ,
ಹೋಹ ಪದಾರ್ಥದ [2]ಚೇ[2]ಗೆಯವನಲ್ಲ.
ಪ್ರಪಂಚವ ಹೊತ್ತುಕೊಂಬ ಭಾರದವ ತಾನಲ್ಲ,
ಕೂಡಲ ಚೆನ್ನಸಂಗನ ಶರಣನುಪಮಾತೀತನು. । ೪೯ । [೧೨೪೫]

೫೫೯
ಮೂರ್ತನಲ್ಲ ಅಮೂರ್ತನಲ್ಲ,
ಲಿಂಗದಲ್ಲಿ ಪ್ರಾಣಸಂಚಿತ, ಪ್ರಾಣದಲ್ಲಿ ಪ್ರಸಾದ ಸಂವರಣೆ,
ಪ್ರಸಾದದಲ್ಲಿ ಕಾಯಾಶ್ರಿತ ಜನ್ಯ.
ಲೋಕಲೌಕಿಕ ಪ್ರಸಾದದುದಯನಲ್ಲ ಕೂಡಲ ಚೆನ್ನಸಂಗನ ಶರಣನು. । ೫೦ ।

೧-೧ ಲೆ (ಮೂ). ೨-೨ ದೆ (ಮೂ).

೫೬೦

ಆದಿಸ್ಥಲವೆಂದು ನುಡಿವರು, ಅನಾದಿಸ್ಥಲವೆಂದು ನುಡಿವರು,
ಆದಿಗೆ ಒಡಲುಂಟು, ಅನಾದಿಗೆ ಒಡಲಿಲ್ಲ.
ನ ಚ ಭೂಮಿ ನಚ ಜಲಂ ನ ಚ ತೇಜೋರ್ನಚ ವಯುಃ ನಚಾಕಾಶಃ ।
ಇವೆಲ್ಲವೂ ಘಟಕ ಸಂಬಂಧವಾಗಿ ಘಟ ಕೆಡುವುದು.[1]
ಇಂಥ ನಿರ್ದೇಹಿ ಶರಣಂಗಲ್ಲದೆ ಅಱಿಯಬಾರದು
ಕೂಡಲ ಚೆನ್ನಸಂಗಯ್ಯಾ. । ೫೧ । [೧೨೬೨]

೫೬೧

ಸ್ಥಲವನಱಿದೆನೆಂದರೆ ಕುಳವನಱಿಯಬೇಕು.
ಕುಳವನಱಿದಡೆ ಭ್ರಾಂತು ಸೂತಕವಿಲ್ಲಯ್ಯಾ.
ತನುಮನ ಲಯವಾದ ನಿಜೈಕ್ಯನು
'ಲಿಂಗದೇವಾ'ಯೆಂದು ಉಪಚರಿಸಲುಂಟೆ?
ಆಗಮ ಮುನ್ನವೇ ಹಿಂಗಿತ್ತು, ಆಚಾರ ಮೀಱಿತ್ತು.
ಕೂಡಲ ಚೆನ್ನಸಂಗನ ಶರಣ ಸುಚರಂ ಭೋ. । ೫೨ । [೧೨೬೭]

೫೬೨

ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ.
ತೆಱಹಿಲ್ಲದ ವಿಶ್ರಾಮಸ್ಥಾನ ಸುಖದ ಸುಖ,
ತೆಱಹಿಲ್ಲದ ಗಂಭೀರ, ತೆಱಹಿಲ್ಲದ ಮಹಾಮಹಿಮೆ
ತೆಱಹಿಲ್ಲದ ಕೂಡಲ ಚೆನ್ನಸಂಗಾ, ನಿಮ್ಮ ಶರಣಂಗೆ. । ೫೩ ।

೫೬೩

ದೃಷ್ಟದ ದೃಷ್ಟ ಕಾಣಿರೆ, ಮುಟ್ಟದ ಮುಟ್ಟು ಕಾಣಿರೆ,
ಆಗಿನ ಆಗು ಕಾಣಿರೆ, ಭೇದದ ಭೇದ ಕಾಣಿರೆ,
ಅಱಿವಿನ ಅಱಿವು ಕಾಣಿರೆ.
ಲಿಂಗದಲ್ಲಿ ಹಿಂಗದ ಸಂದು
ಕೂಡಲ ಚೆನ್ನಸಂಗನಲ್ಲಿ ಬಸವಣ್ಣ ಕಾಣಿರೆ. । ೫೪ ।

೧+ ಸ್ಥಳಂ ಸ್ಥಳಗತಂ ಸ್ಥಾಪ್ಯಂ ತಾಮಸಂ ಮನವರ್ಜಿತಂ ಸ್ಥಳಂಚ ನಿಸ್ಥಳಂ ನಾಸ್ತಿ ಘನಲಿಂಗ ಸ್ವಭಾವತಃ॥ (ಮೂ).

೫೬೪

ಪ್ರಸಾದಕಾಯವಾದ ಬಳಿಕ ಸರ್ವಾಂಗ ಉತ್ತಮಾಂಗ.
ಪ್ರಾಣ ಲಿಂಗವಾದ ಬಳಿಕ ಸದಾಸನ್ನಿಹಿತ ಲಿಂಗ.
ಶರಣನಲ್ಲಿ ಭಾವ ಭೇದವಿಲ್ಲ ನಿರಂತರ ಲಿಂಗಸಂಗಿ.
"ಅಕಾಯೋ ಭಕ್ತಕಾಯಸ್ತು" ಇಂತೆಂದುದು
ಕೂಡಲ ಚೆನ್ನಸಂಗನ ವಚನ. । ೫೫ । [೧೨೩೪]

೫೬೫

ಅಂಗದ ಮೇಲಣ ಲಿಂಗ ಅಂಗಲಿಂಗವಯ್ಯಾ,
ಪ್ರಾಣದ ಮೇಲಣ ಲಿಂಗ ಪ್ರಾಣಲಿಂಗವಯ್ಯಾ,
ಭಾವದ ಮೇಲಣ ಲಿಂಗ ಭಾವಲಿಂಗವಯ್ಯಾ.
ಕೂಡಲ ಚೆನ್ನಸಂಗಾ ಲಿಂಗತ್ರಿವಿಧ ನಿರ್ಣಯ, ನಿಮ್ಮಲ್ಲಿ. । ೫೬ । [೧೨೦೯]

೫೬೬

ಆಯತ ಸ್ವಾಯತ ಸಂಯೋಗಸಂಬಂಧಿಯ ಆಚಾರವಡಗಿತ್ತು,
ಅನುಭಾವ ತೊಡರಿತ್ತು, ಕ್ರಿಯಾತೀತ ನಿಃಪತಿಯಾಯಿತ್ತು.
ಕೂಡಲಚೆನ್ನಸಂಗಾ ತ್ರಿವಿಧಸಂಬಂಧಿಗೆ. । ೫೭ । [೧೨೯೦]

೫೬೭

ಎನ್ನ ಕಣ್ಣು ಕಾಬಳತೆ, ಮನ ಸುತ್ತುವ[೧]ಳ[೧]ತೆ
ಸರ್ವಲೋಕ ನಿಮ್ಮದೆಂದು ಶುದ್ಧ ನಾನು ಲಿಂಗಯ್ಯಾ.
ನಾನು ಸೀಮೆಯೆಂಬುದು ಮನದಳತೆಯಲ್ಲ
ನಿಸ್ಸೀಮ, ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೫೮ । [೧೨೬೯]

[೨]ಶರಣನ ಭಕ್ತಸ್ಥಲ :[೨]

೫೬೮

ಧನವ ಕೊಟ್ಟರೆ ದಾನಿಯಾದ, ತನುವ ಕೊಟ್ಟರೆ ವೀರನಾದ,
ಮನವ ಕೊಟ್ಟರೆ [೩]ವಶಿ[೩]ಯಾದ.

೧–೧ ಂ (ಮೂ). ೨–೨ x(ಮೂ). ೩–೩ ವೇಸಿ (ಮೂ).

ಈ ತ್ರಿವಿಧದಿಂದ ಹೊಱಗೆ ಕೊಡಬಲ್ಲರೆ
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು. । ೫೯ । [೧೧೦೯]

೫೬೯

ಭಕ್ತನಾದೆನೆಂದು ನಚ್ಚದಿರೊ ಅಣ್ಣಾ,
ನಿನ್ನ ಕರಣಾದಿಗಳ ಭಕ್ತರ ಮಾಡಯ್ಯಾ,
ಹಸಿವು ತೃಷೆ ವಿಷಯ ಘನ ನೋಡಯ್ಯಾ.
ಇವು ಮನಸಹಿತ ಮಜ್ಜನಕ್ಕೆಱೆದರೆ
ಹಿಂದಣ ಭವಿಸಂಗ ಹಿಂಗದು ನೋಡಾ.
ಮೃತಕರೋ[೧]ಟಿ[೧] ವರ್ತಮಾನರಿಬ್ಬರೂ ಅವರ ತಮ್ಮನೊಬ್ಬ-
ಇಂತೀ ಮೂವರ ಹಿಂಗಿಸಿ ಮಜ್ಜನಕ್ಕೆಱೆದು
ಲಿಂಗಸಂಗಿಯಾಗಿಪ್ಪ ಕೂಡಲ ಚೆನ್ನಸಂಗಾ, ನಿಮ್ಮ ಶರಣ. । ೬೦ । [೧೦೯೧]

೫೭೦

ಆಸೆಯಾಮಿಷ ತಾಮಸ ಹುಸಿ ವಿಷಯವೆಲ್ಲವನೂ ಸಟೆಯಂ ಮಾಡಿ
ಸದ್ಗುಣವೆಂಬ ಗೋಮಯವನು
ವಿನಯಾರ್ಥವೆಂಬ ಉದಕದಲ್ಲಿ ಸಮ್ಮಾರ್ಜನೆಯಂ ಮಾಡಿ,
ಕುಟಿಲ ಕುಹಕ ಕ್ರೋಧ ಕ್ಷುದ್ರ ಮಿಥ್ಯಮಿವೆಲ್ಲವ
ಪುಡಿಗಟ್ಟಿ ರಂಗವಾಲಯನಿಕ್ಕಿ.
ಸುಮತಿಯೆಂಬ ಹತ್ತಿಯಂ ಕೊಂಡು,
ಪುಣ್ಯಾಪಾಪಗಳೆಂಬ ಕಸಗೋಷ್ಟಿಯಂ ಕಳೆದು, ದೃಢವೆಂಬ ಬತ್ತಿಯಿಂ ತೀವಿ,
ತನುವೆಂಬ ಪ್ರಣಿತೆಯಲ್ಲಿ ಕಿಂಕಿಲವೆಂಬ ತೈಲವನ್ನೆರೆದು
ಜ್ಞಾನವೆಂಬ ಜ್ಯೋತಿಯಂ ಪೊತ್ತಿಸಿ,
ಸಮತೆ ಸಲಿಲವೆಂಬ ಅಗ್ಗವಣಿಯ ಮಜ್ಜನಕ್ಕೆಱೆದು,
ನಿರ್ಹೃದಯ ನಿಃಕಾಮ್ಯವೆಂಬ ಗಂಧಾಕ್ಷತೆಯಂ ಕೊಟ್ಟು,
ಅಷ್ಟದಳಕಮಳವ ಕೊಯ್ದು, ಪೂಜೆಯಂ ಮಾಡಿ,
ಪಂಚೇಂದ್ರಿಯವಿನಾಶವೆಂಬ ಪಂಚಾರತಿಯ ನಿರಂತರ ಅವಧಾನವೆ ನಿರಂಜನ,

೧–೧ ತಿ (ಮೂ).

ತನು ಮುಖಾದಿಗಳನೇಕಾರ್ಥ ಮಾಡಿ, ಹಿಡಿವುದೇಕಾರತಿ.
ಸರ್ವಜೀವದಯಾಪರವೆಂಬ ಧೂಪವಂ ಬೀಸಿ,
ನಿರ್ಧಾರವೆಂಬ ನಿತ್ಯನೇಮವ ಸಲ್ಲಿಸಿ,
ಪರಮಾರ್ಥವೆಂಬ ನೈವೇದ್ಯಮನಿಟ್ಟು
ಶಿವಸುಖಸಂಕಥಾವಿನೋದದಿಂದರ್ಪಿತವ ಮಾಡಿ,
ಪರಿಣಾಮವೆಂಬ ಪ್ರಸಾದವ ಸ್ವೀಕರಿಸಿ,
ಸುಜ್ಞಾನಭರಿತವಾಗಿಹ,
ಇಂತಪ್ಪ ಲಿಂಗಾರ್ಚಕರ ಶ್ರೀಪಾದವ ತೋಱಿ ಬದುಕಿಸಾ
ಕೂಡಲ ಚೆನ್ನಸಂಗಮದೇವಾ. ।೬೧। [೧೧೫೬]

೫೭೧

ಕಾಯದ ಸಡಗರ ಸಂಭ್ರಮ ಬಲೆಯಲ್ಲಿ ಸಿಲುಕಿಸಿದಿರೆನ್ನುವನು.
ಆನೆಂತು ಬಲ್ಲೆನೆಂದರೆ ಪ್ರಾಣದ ಮೇಲೆ ಲಿಂಗಪ್ರತಿಷ್ಠೆಯ ಮಾಡಿ
ಬಲೆಯಲ್ಲಿ ಸಿಲುಕಿಸಿದಿರಿ.
ಇದು ಕಾರಣ ಸ್ವಾನುಭಾವರನಱಿಸಲೇ ಬೇಕು,
ಕೂಡಲಚೆನ್ನಸಂಗಾ ನಿಮ್ಮ ಶರಣನು. ।೬೨। [೧೨೮೬]

೫೭೨

ಮುನ್ನಱಿಯದೆ ಹಿಡಿದುದಕ್ಕೆಂತು?
[೧]ಇನ್ನಱಿದು ಬಿಟ್ಟದಡಕ್ಕೆಂತು?[೧]
ಹಿಡಿದಡೆ ಜ್ಞಾನವಿರೋಧ, ಬಿಟ್ಟಡೆ ಲೋಕ ವಿರೋಧ.
ಈ ಉಭಯ ಸ್ಥಳವನಱಿದು ಬಿಡಬಲ್ಲ
ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೬೩। [೧೨೮೬]

೫೭೩

ದೇಹ ನಿರ್ದೇಹವೆಂದೆನುತ್ತಿರಪ್ಪರಯ್ಯಾ,
ದೇಹ ನಿರ್ದೇಹವೆಂಬ ವರ್ಮವನಱಿಯರು.
ಅಹಮ್ಮೆಂಬುದೆ ದೇಹ ನೋಡಾ,

೧-೧ ಇನ್ನರಿದಡೆ (ಮೂ).

ದಾಸೋಹಮೆಂಬುದೆ ನಿರ್ದೇಹ ನೋಡಾ.
ಅಹಂಭಾವವಳಿದು ದಾಸೋಹಿಯಾದ
ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೬೪ । [೧೦೯೨]

೫೭೪
ಶರಣಸತಿ ಲಿಂಗಪತಿಯೆಂಬ ಉಭಯ ಸಂದು ಬಿಡದು,
ಮಜ್ಜನವ ಮಾಡುವರಯ್ಯಾ.
ಪ್ರಾಣಲಿಂಗಕ್ಕೆಂದರ್ಪಿಸುವರು,
ಮತ್ತೆ ಲಿಂಗಜಂಗಮ ಪ್ರಸಾದವೆಂದೆಂಬರು
ಇಂತಪ್ಪ ಸಂದೇಹವುಳ್ಳನ್ನಕ್ಕ ಐಕ್ಯರೆಂತಪ್ಪರಯ್ಯಾ?
ಈ ಸಂಕಲ್ಪ ವಿಕಲ್ಪವೆಂಬ ಸಂದೇಹವ ಕಳೆದುಳಿದ
ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೬೫ । [೧೨೪೨]

ಶರಣನ [1]ಮಾಹೇಶ್ವರಸ್ಥಲ[1] :

೫೭೫
ಭಕ್ತಿ ಭಕ್ತಿಯೆಂದರೇನು [2]ತುತ್ತಿಡು[2]ವನ್ನಕವೆ ?
ಗುರು ಗುರುವೆಂದೇನು ಪರಕೆ ಹೆಸರ ಹೇಳುವನ್ನಕವೆ ?
ಲಿಂಗ ಲಿಂಗವೆಂದೇನು ಅಂಗ ಬೀಳುವನ್ನಕವೆ ?
ಜಂಗಮ ಜಂಗಮವೆಂದೇನು ಮುಂದಿದ್ದ ಧನವೆಲ್ಲಾ ಸವೆವನ್ನಕವೆ ?
ಪಾದೋದಕ ಪಾದೋದಕವೆಂದೇನು
ಇವೆಲ್ಲಾ ಜಲವ ಕೂಡಿ ಹೋಹನ್ನಕವೆ ?
ಪ್ರಸಾದ ಪ್ರಸಾದವೆಂದೇನು ಉಂಡುಂಡು
ತನು ಕಳಚಿ ಪ್ರಳಯಕ್ಕೊಳಗಹನ್ನಕವೆ ?
ಅಲ್ಲಿ ನಿಂದಿರದಿರಾ ಮನವೆ,
ನಿಂದಿದ್ದರೆ ನೀ ಕೇಡುವೆ, ಬಂದರೆ ನಾ ಕೆಡುವೆ,
ಎನ್ನ ತಂದೆ ಕೂಡಲ ಚೆನ್ನಸಂಗಯ್ಯಾ
[3]ಈ[3]ಯನುವ ಬಸವಣ್ಣ ತೋಜಿದನಾಗಿ, ಆನು ಬದುಕಿದೆನು. । ೬೬ । [೧೧೪೭]

೧-೧ ಮಹೇಶ್ವರನು (ಮೂ), ೨-೨ ತತ್ತುದು (ಮೂ), ೩-೩ x(ಮೂ)

೫೭೬

ವ್ರತ[1]ಸ್ಥ[1]ನಜೀವು ಪ್ರಪಂಚಿನಲೆ ಹೋಯಿತ್ತು,
ಭಾಷೆವಂತನಜೀವು ವಂಚನೆಯಲೆ ಹೋಯಿತ್ತು,
ನೇಮಸ್ಥನಜೀವು ಸಂಕಲ್ಪದಲೆ ಹೋಯಿತ್ತು,
ಸೀಮೆವಂತನಜೀವು ಸೂತಕದಲೆ ಹೋಯಿತ್ತು,
ಜಂಗಮದಜೀವು ಬೇ[2][ಡಿದಾಗ][2]ಲೆ ಹೋಯಿತ್ತು,
ಪ್ರಸಾದದಜೀವು ಬೆರಕೆಯಲ್ಲಿ ಹೋಯಿತ್ತು.
ಇಂತೀ ಷಡುಸ್ಥಲದ ನಿರ್ಣಯ [3][ಇ][3]ಲ್ಲದೆ
ಹೋಯಿತ್ತು ಕೂಡಲ ಚೆನ್ನಸಂಗನಲ್ಲಿ. ।೬೭। [೧೦೭೦]

೫೭೭

ಕಾಣಬಹ ಲಿಂಗವೆಂದು ಅರ್ಘಣಿಯನೆ ಕೊಟ್ಟು ಕೆಳೆಯಾದಿರಲ್ಲಾ, ಲೋಕಕ್ಕೆ !
ನಿರಾಳಲಿಂಗಕ್ಕೆ ಕೊಡಲಜೀಯರು,
ಕಂಡವರ [4]ಕಂಡು[4] ಕಂಡಂತೆ, ಉಂಡವರ ಕಂಡು ಉಂಡಂತೆ,
ಇದು ಕಾರಣ ಕೂಡಲ ಚೆನ್ನಸಂಗನಲ್ಲಿ
ಇಂಥವರ ಕಂಡು ನಾಚಿತ್ತೆನ್ನ ಮನವು. ।೬೮। [೧೦೭೧]

೫೭೮

ಅಷ್ಟವಿಧಾರ್ಚನೆ ಷೋಡಶೋಪಚಾರವ ಲಿಂಗಕ್ಕೆ ಮಾಡಿ,
ಜಂಗಮಕ್ಕೆ ಮಾಡದವರ ಕಂಡರೆ ಭಕ್ತರೆಂತೆಂಬೆ ?
ಇಂದ್ರಿಯಂಗಳ ಬೆಂಬಳಿಯಲ್ಲಿ ಹೋಗಿ,
ನಿಮ್ಮ ಚರಿತ್ರವ ನೆನೆಯದವರ ಕಂಡರೆ ಶರಣನೆಂತೆಂಬೆ ?
ಅನಿಮಿಷದೃಷ್ಟಿಯಲ್ಲಿ ನೋಡುವರ ಅನಿಮಿಷರೆಂದೆಂಬೆನೆ ?
ನೀವೇ ತಾನಾಗಿ ಮೈದೋಱದವರ ಕಂಡರೆ
ಎನ್ನ ವಿಸ್ತಾರವೆಂಬೆ, ಕೂಡಲ ಚೆನ್ನಸಂಗಮದೇವಾ. ।೬೯। [೧೧೩೩]

೧-೧ ಹಸ್ತ (ಮೂ), ೨-೨ ಡ (ಮೂ), ೩-೩ ವಿ (ಮೂ), ೪-೪ x (ಮೂ).

೫೭೯
ಅಂತರಂಗದ ಭಕ್ತಿ ಹಾದರಿಗನ ತೆಱನಂತೆ,
ಬಹಿರಂಗದ ಭಕ್ತಿ ವೇಶಿಯ ತೆಱನಂತೆ,
ಅಂತರಂಗವೂ ಅಲ್ಲ, ಬಹಿರಂಗವೂ ಅಲ್ಲ,
ಶರಣನ ನಿಲವು ಬೇಱೆ. ಕೂಡಲ ಚೆನ್ನಸಂಗನೆಂಬ ಮಾತಂತಿರಲಿ. । ೭೦ । [೧೧೪೩]

೫೮೦
ಮಾಡುವಲ್ಲಿ ಭಕ್ತನೆ ? ಮಾಟದ ಕ್ರಮವಱಿಯದನ್ನಕ್ಕ,
ನೀಡುವಲ್ಲಿಯೂ ಭಕ್ತನೆ ?
ಸಯದಾನದ ಸನ್ನಿಹಿತದ ವರ್ಮವ ತಿಳಿಯದನ್ನಕ್ಕ,
ಸುಳಿವಲ್ಲಿ ಜಂಗಮವೆ ? ಸುಳಿವಲ್ಲಿ ಸೋಂಕು ತಿಳಿಯದನ್ನಕ್ಕ.
ಈ ಉಭಯ ಕುಳವಳಿಯದನ್ನಕ್ಕ
ಭವ ಹಿಂಗದು ಕೂಡಲ ಚೆನ್ನಸಂಗಮದೇವಾ. । ೭೧ । [೧೧೨೮]

೫೮೧
ಸಚರಾಚರ ಚತುರ್ವಳಯದೊಳಗೆ ತಿರುಗುವ
ವೇಷಧಾರಿಯನೆನಗೆ ತೋಱದಿರಾ.
ಆಶಯಾ ಬಧ್ಯತೇ ಲೋಕಂ ಕರ್ಮಣಾ ಬಹುಚಿಂತಯಾ ।
ಆಯುಃಕ್ಷೀಣಂ ನ ಜಾನಾತಿ ವೇಣುಸೂತ್ರಂ ವಿಧೀಯತೇ ॥
[೧]ಎಂದುದಾಗಿ[೧] ಆಶೆಯ ಧಿಕ್ಕರಿಸಿ, ನಿರಾಶೆಯ ವೇಷವ ಪತಿಕರಿಸಿದವರ
ನೀ ಸರಿಯೆಂಬೆ ಕೂಡಲ ಚೆನ್ನಸಂಗಮದೇವಾ, । ೭೨ । [೧೧೯೭]

೫೮೨
ಪಥವನಱಿಯದೆ ಮಂಡೆಯ ಬೋಳಿಸಿಕೊಂಡರೆ ಜಂಗಮವೆ ? [೨]ಅಲ್ಲ,[೨]
ಹಮ್ಮು ಬಿಮ್ಮು ಗಮನನಾಸ್ತಿಯಾದರೆ ಜಂಗಮ,
ಸತ್ತರೆ ತೆಗೆವರಿಲ್ಲೆಂದು ಕಟ್ಟಿಕೊಂಡರೆ ಭಕ್ತನೆ ? ಅಲ್ಲ,
ಅರ್ಥ ಪ್ರಾಣ ಅಭಿಮಾನಕ್ಕೆ ವಿರೋಧಿಯಾದರೆ ಭಕ್ತ,
ತನುಗುಣ ನಾಸ್ತಿಯಾಗಿ ಮನ ಲಿಂಗದಲ್ಲಿ ಸಿಲಿಕಿಕಿತ್ತು.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಪ್ರಭು ಜಂಗಮ, ಬಸವ ಭಕ್ತ. । ೭೩ । [೧೧೫೦]

೧–೧ x (ಮೂ), ೨–೨ x (ಮೂ).

೫೮೩

ಕಾ⁽[ಸೆ]⁽ ಕಮಂಡಲ ಉತ್ತಮಾಂಗ ವಿಭೂತಿ ರುದ್ರಾಕ್ಷಿ ಸಹಿತಿದ್ದವರ
ಜಂಗಮವೆಂದು ನಂಬುವೆನೆ? ನಂಬೆ ಕಾಣಾ !
ಅದೇನು ಕಾರಣ :
ಸಾಕಾರದಲ್ಲಿ ಸನುಮತರಲ್ಲ, ಪರಿಣಾಮದಲ್ಲಿ ಪರಿಚಿತರಲ್ಲಾಗಿ.
ಇದು ಕಾರಣ ಕೂಡಲ ಚೆನ್ನಸಂಗನಲ್ಲಿ
ಲಕ್ಷಕ್ಕೊಬ್ಬ ಭಕ್ತ; ಕೋಟಿಗೊಬ್ಬ ಶರಣ. । ೭೪ । [೯೬೪]

೫೮೪

ಗುರುವಿನ ಗುರು ಪರಮಗುರು ಜಂಗಮವೆಂದೆನಿಸಿಕೊಂಬರು.
ದೀಕ್ಷೆ ಶಿಕ್ಷೆ ಮಾಡಿದಲ್ಲಿ ದಾಸೋಹವ ಮಾಡಿಸಿಕೊಳ ಕರ್ತರಲ್ಲದೆ
ತನ್ನ ಪ್ರಾಣಲಿಂಗವ ಕೊಡ ಕರ್ತರಲ್ಲ.
ಪ್ರಾಣಲಿಂಗವ ಕೊಟ್ಟು ಗುರುವಾದ ಬಳಿಕ, ಜಂಗಮಸ್ಥಲಕ್ಕೆ ಭಂಗಹೊದ್ದಿತ್ತು
ಕೂಡಲ ಚೆನ್ನಸಂಗಮದೇವಾ. । ೭೫ । [೯೬೩]

೫೮೫

ಕಿಸು ಕಾಷಾಂಬರವನಿಕ್ಕಿದರೇನು? ರುದ್ರಾಕ್ಷೆಯ ಮುಕುಟವ ಧರಿಸಿದರೇನು?
ಸಾಕಾರದಲ್ಲಿ ಸನುಮತರಲ್ಲ, ನಿರಾಕಾರದಲ್ಲಿ ನಿರುತರಲ್ಲ,
ಪರಮಾರ್ಥದಲ್ಲಿ ಪರಿಣಾಮಿಗಳಲ್ಲ.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ತುಱುಬಾಗಲಿ, ಬೋಳಾಗಲಿ, ಅಱಿವುಳ್ಳುದೆ ಜಂಗಮ. । ೭೬ । [೯೬೪]

೫೮೬

ಧರೆಯ ಮೇಲೆ ಸುಳಿವ ವೇಷಲಾಂಛನಧಾರಿಗಳೆಯ್ದೆ
ಹದಿನೆಂಟು ಜಾತಿಯ ಮನೆಯ ಭಿಕ್ಷವನುಂಡು ಕೆಟ್ಟರು.
ಅಱಿಯ ಮೇಲಿಪ್ಪ ಅರುಹಿರಿಯರೆಯ್ದೆ ವಾಯುಭಿಕ್ಷವನುಂಡು ಕೆಟ್ಟರು.
ಗಿರಿಯ ಮೇಲಿಪ್ಪ ತಪಸ್ವಿಗಳೆಯ್ದೆ ವನಭಿಕ್ಷವನುಂಡು ಕೆಟ್ಟರು.

೧-೧ ಶಿ (ಮೂ).

ಅರಿಯದೆ ಇಂದ್ರಿಯಂಗಳ ಕಟ್ಟಿ ಕುರುಹಿನ ನರಕಕ್ಕೆ ಹೋಹವರ
ಹಿರಿಯರೆಂದು ಎನಗೆ ತೋಱದಿರಾ.
ಸರ್ವಭ್ರಾಂತಳಿದ ಹಂತರನೆನಗೆ ತೋಱಾ,
ಕೂಡಲ ಚೆನ್ನಸಂಗಮದೇವಾ. । ೭೭ । [೧೧೪೧]

೫೮೭

ಭೂಮಿಯ ಮೇಲೆ ಇದ್ದ ಅಚಲಪೀಠವೆಲ್ಲಾ ಲಿಂಗವೆ?
[1]ಅಲ್ಲ, ಲಿಂಗ[1]ಮೂರ್ತಿ ಇಲ್ಲಾಗಿ.
ಜಾಯತೇ ಚರಾದಿಗಳೆಲ್ಲಾ ಜಂಗಮವೆ?
ಅಲ್ಲ, ಆಚಾರ ಸಮತೆ ಸಂಬಂಧವಿಲ್ಲಾಗಿ. ಇವರೆಲ್ಲರೂ ಉಪಜೀವಿಗಳು.
ಕೂಡಲ ಚೆನ್ನಸಂಗಮದೇವ ಸಹವಾಗಿ
ಉಭಯಲಿಂಗ ಜಂಗಮವಾದವರಿಗೆ ನಮೋ ನಮೋಯೆಂಬೆ. । ೭೮ । [೯೬೫]

೫೮೮

ಅಱಿವಱಿತು ಮಱಹು ನಷ್ಟವಾದವರನೇನೆಂಬೆ?
ಅಱಿವಱಿಯದೆ ಮಱಹು ನಷ್ಟವಾಗದ ನೆಱೆ ಸಂಸಾರಿಗಳನೇನೆಂಬೆ?
ಕ್ರಿಯಾಕರ್ಮ ಸೂತಕರಲ್ಲದೆ ಉಭಯ ಕರ್ಮರಹಿತರನೇನೆಂಬೆ?
ಅಂಗವಿಕಾರದ ಹಂಗಳಿಯದನ್ನಕ್ಕ
ಕೂಡಲ ಚೆನ್ನಸಂಗಮದೇವಯ್ಯನೆಂದೆಂಬವರನೇನೆಂಬೆ. । ೭೯ । [೯೫]

೫೮೯

ಪೂರ್ವಾಶ್ರಯ ಪೂರ್ವಾಶ್ರಯವೆಂದೆಂಬರು,
ಪೂರ್ವಾಶ್ರಯವಾವುದೆಂದಱಿಯರು.
ಪೂರ್ವವೆಂಬುದೆ ಬಂದ ಬಟ್ಟೆ, ಆಶ್ರಯವೆಂಬುದೆ ಕರಣಾದಿ ಗುಣಂಗಳು.
ಈ ಉಭಯವಳಿದು ಕೂಡಲ ಚೆನ್ನಸಂಗನಲ್ಲಿಪ್ಪ
ಶರಣಂಗೆ ಶರಣೆಂಬೆ. । ೮೦ । [೧೨೭೬]

೧-೧ ಅಲ್ಲಲ್ಲಿಗಾ (ಮೂ)

೫೯೦

ಮನದದ್ಭುತವಹಂಕಾರವಳಿಯದನ್ನಕ್ಕ ಸದ್ಭಕಿ ಸದರವೆಂತೆಂಬೆನು?
ಕಾಯಸಮ್ಮೋಹಿಯು ಲಾಂಛನಧಾರಿಯೆಂಬೆನು,
ಜೀವಸಮ್ಮೋಹಿಯನು ಸಂಸಾರಿಯೆಂಬೆನು.
ಇದು ಕಾರಣ ಮಿಗೆ ಮಿಗೆ ಮೀಸಲು
ಸ[೧][ಲೆ][೧] ಸಹಜ ಕೂಡಲ ಚೆನ್ನಸಂಗನೆಂಬೆನು. ।೮೧। [೧೧೪೦]

೫೯೧

[೨]ಖಾಂಡಾವಿ[೨]ಯ ಕೀಲ ಬಲ್ಲರೆ, ಮಂದರಾವಿಯ ಅನುಭವ ಬಲ್ಲರೆ,
ಷಣ್ಣಾವಿಯ ಭಾವವ ಬಲ್ಲರೆ, ಕಾಳಾಮುಖದ ನಿಲವ ಬಲ್ಲರೆ,
ಕೂಡಲ ಚೆನ್ನಸಂಗನೆಂಬೆನು. ।೮೨। [೧೦೬೩]

೫೯೨

ಅಂಬುಧಿಯ ಸಂಚದ ಕುಳವನಜಿಯರು,
ಪ್ರಾಣನಾಥನ ಬಿಂದುವಿನ ಅನುವನಜಿಯರು.
ಖಾಂಡಾವಿಯ ಬಿಂದುವಿನ ಠಾವನಜಿಯರು.
ಈ ತ್ರಿವಿಧದ ಮುಖವನಜಿದಡೆ ಕೂಡಲ ಚೆನ್ನಸಂಗನೆಂಬೆನು. ।೮೩। [೧೦೬೨]

೫೯೩

ಲಿಂಗಭಾಜನದಲ್ಲಿ ಸಹಭೋಜನವ ಮಾಡಿಹೆವೆಂದೆಂಬರು,
ಲಿಂಗಭಾಜನದಲ್ಲಿ ಸಹಭೋಜನವ ಮಾಡುವವರ ನೋಡಿರೇ.
ಲಿಂಗವಂತರೆಲ್ಲಾ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಆಸೆವುಳ್ಳನ್ನಕ್ಕ
ಲಿಂಗಭಾಜನದಲ್ಲಿ ಸಹಭೋಜನವ ಮಾಡುವ ಪರಿಯೆಂತೊ?
ಹಸಿವು ತೃಷೆ ನಿದ್ರೆ ಆಲಸ್ಯ ವ್ಯಸನವುಳ್ಳನ್ನಕ್ಕ,
ಗುರುಲಿಂಗಜಂಗಮ ತ್ರಿವಿಧಸಂಪನ್ನತೆವುಳ್ಳನ್ನಕ್ಕ.
ಲಿಂಗಭಾಜನದಲ್ಲಿ ಸಹಭೋಜನವ ಮಾಡುವ ಜ್ಞಾನಿಗಳು
ತಾವೇ ಲಿಂಗವೆಂಬರು, ಲಿಂಗವೇ ತಾವೆಂಬರು.

೧–೧ ತಿ (ಮೂ). ೨–೨ ಖಾಡಾಡಿ (ಮೂ)

ತಾವೆ ಲಿಂಗವಾದರೆ ಜನನ ಮರಣ ರುಜೆ ತಾಗು ನಿರೋಧವಿಲ್ಲದಿರಬೇಡಾ?
ಮಹಾಜ್ಞಾನವ ಬಲ್ಲೆವೆಂದು ತಮ್ಮ ಭಾಜನದಲ್ಲಿ ಲಿಂಗಕ್ಕೆ ನೀಡುವ
ಪಾತಕರ ತೋಱದಿರು ಕೂಡಲ ಚೆನ್ನಸಂಗಮದೇವಾ. । ೮೪ । [೧೩೮೨]

೫೯೪

ಪರುಷದ ಪುತ್ಥಳಿಯ ಬಸುಱಲ್ಲಿ ಅವಲೋಹ ಹುಟ್ಟುವುದೆ ಅಯ್ಯಾ,
ಮರಳಿ ಮರಳಿ ?
ಪರುಷವೆ ಹುಟ್ಟಿ ಸುವರ್ಣವಹರೆ
ಮುನ್ನ ಹುಟ್ಟಿತ್ತೆಲ್ಲಾ ಹುಸಿಯೇ ಮರಳಿ ಮರಳಿ ?
ಇದು ಕಾರಣ ಕೂಡಲ ಚೆನ್ನಸಂಗಯ್ಯ ಮೆಚ್ಚ,
ಭವಿಯ ಕಳೆ[೧]ದು[೧]ಸಂಬಂಧಿಗೆ ಸಂಗವಾದರೆ. । ೮೫ । [೧೧೩೦]

೫೯೫

ಸಾಲೋಕ್ಯಬೇಕೆಂದು ಪೂಜಿಸಿ ಸಾಲೋಕ್ಯವ ಹಡೆವರು,
ಸಾಮೀಪ್ಯಬೇಕೆಂದು ಪೂಜಿಸಿ ಸಾಮೀಪ್ಯವ ಹಡೆವರು,
ಸಾರೂಪ್ಯಬೇಕೆಂದು ಪೂಜಿಸಿ ಸಾರೂಪ್ಯವ ಹಡೆವರು,
ಸಾಯುಜ್ಯಬೇಕೆಂದು ಪೂಜಿಸಿ ಸಾಯುಜ್ಯವ ಹಡೆವರು.
ಇಂತೀ ನಾಲ್ಕು ಪದವಿಗಳು ಬೇಕೆಂದು ಪೂಜಿಸಿ
ನಾಲ್ಕು ಪದವಿಗಳ ಬೇಡಿ ಇತ್ತಿತ್ತಲಾದರಲ್ಲದೆ,
ಅವರು ನಿಮ್ಮ ವೇದಿಸಲಱಿಯರು.
ಅಂಥವರು [೨]ಎ[೨]ಲ್ಲಾ ಕೊಟ್ಟುಕೊಂಡಾಡುವ ಕೂಲಿಕಾಱರೆಲ್ಲಾ ನಿಮ್ಮ ಬಲ್ಲರೆ?
ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣನಲ್ಲದೆ. । ೮೬ । [೯೩೯]

೫೯೬

ಎರಡೂರ ಮಧ್ಯದಲ್ಲಿ ನೆಟ್ಟ ಸೀಮೆಯ ಕಲ್ಲು,
[೩]ಲಿಂಗವೆಂದು[೩] ಕೊಟ್ಟಾತ ಗುರುವಲ್ಲ, ಕೊಂಡಾತ ಶಿಷ್ಯನಲ್ಲ.
ಆದಿಯನಱಿಯದ ಗುರು. ವೇದಿಸಲಱಿಯದ ಶಿಷ್ಯ,

೧–೧ ದ (ಮೂ). ೨–೨ ಅ (ಮೂ), ೩–೩ x (ಮೂ).

ಇವರಿಬ್ಬರೂ ಶಿವಾಚಾರಕ್ಕೆ ಹೊಱಗು.
ಕೂಡಲ ಚೆನ್ನಸಂಗಯ್ಯಾ. । ೮೭ । [೧೧೦೦]

೫೮೭

ಹಿಂದ ಮಱಹಿಸದೆ, ಮುಂದನಱುಹಿಸದೆ
ಹರಿಹರಿದು ಉಪದೇಶವ ಮಾಡುವ ಹೀಹಂದಿಗಳನೇನೆಂಬೆನಯ್ಯಾ?
ಗಂಡನ ಗುರು ಹೆಂಡತಿಯ ಮಾವನೆ?
ಹೆಂಡತಿಯ ಗುರು ಗಂಡನ ಮಾವನೆ?
ಉಪಮೆಗೆ ಬಾರದ ವಸ್ತುವ ಭಾವಕ್ಕೆ ತಂದು ನುಡಿವ ನರಕಿಗಳ
ಕೂಗಿಡೆ ಕೂಗಿಡೆ ನರಕದಲದ್ದೂದ ಮಾಬನೆ
ಕೂಡಲ ಚೆನ್ನಸಂಗಯ್ಯ? । ೮೮ । [೧೧೨೩]

೫೮೮

ಭವಿಯ ತಂದು ಪೂರ್ವಾಶ್ರಯವ ಕಳೆದು ಭಕ್ತನ ಮಾಡಿದ ಬಳಿಕ,
ಪೂರ್ವವನ್ನೆತ್ತಿ ನುಡಿವ ಶಿವದ್ರೋಹಿಯ ಮಾತ ಕೇಳಲಾಗದು.
ಲಿಂಗವೆ ಗುರು ಗುರುವೆ ಲಿಂಗವೆಂದು ಹೆಸರಿಟ್ಟು ಕರೆವ
ಗುರುದ್ರೋಹಿಯ ಮಾತ ಕೇಳಲಾಗದು.
ಹೆಸರಿಲ್ಲದ ಅಪ್ರಮಾಣ ಮಹಿಮನನು ಹೆಸರಿಟ್ಟು ಕರೆವ
ಲಿಂಗದ್ರೋಹಿಯ ಮಾತ ಕೇಳಲಾಗದು.
ಪೂರ್ವವಿಲ್ಲದ ಶಿಷ್ಯ, ನೇಮವಿಲ್ಲದ ಗುರು, ಹೆಸರಿಲ್ಲದ ಲಿಂಗ
ಈ ತ್ರಿವಿಧವನಱಿಯದೆ ಕೆಟ್ಟು ಹೋದರು
ಕೂಡಲ ಚೆನ್ನಸಂಗಯ್ಯಾ. । ೮೯ । [೧೧೨೬]

೫೮೯

ಗುರುವಾಗಬಹುದು, ಶಿಷ್ಯನಾಗಬಾರದು.
ದೇವನಾಗಬಹುದು, ಭಕ್ತನಾಗಬಾರದು.
ಶಿಷ್ಯನ ಪೂರ್ವಾಶ್ರಯವ ಶಿಷ್ಯನಱಿಯ.
ಆಶೆ ನಿಮಿತ್ತವಾದ ಭಕ್ತಿ ಮುಕ್ತಿಗೆ ಸಾಧನವಲ್ಲ,
ಕೂಡಲ ಚೆನ್ನಸಂಗನಲ್ಲಿ ನೇಮದ ಲೆಂಕರು. । ೯೦ । [೧೧೨೭]

೬೦೦

ತಪವೆಂಬುದು ಬಂಧನ, ನೇಮವೆಂಬುದು ತಗಹು,
ಶೀಲವೆಂಬುದು ಸೂತಕ, ಭಾಷೆಯೆಂಬುದು ಪ್ರಾಣಘಾತಕ.
ಈ ಚತುರ್ವಿಧದೊಳಗೆ ಇಲ್ಲ,
ಕೂಡಲ ಚೆನ್ನಸಂಗಯ್ಯಾ ಏಕೋಗ್ರಾಹಿ. । ೯೧ । [೧೧೩೮]

೬೦೧

ಭವಿ ಮಣ್ಣ[1]ಲಿ[1] ಮಾಡಿದ ಮಡಕೆಯ ಕಳೆವುದು ಶೀಲವೆ?
ಅಲ್ಲಲ್ಲಿ ಮೆಟ್ಟಿದ ಭೂಮಿಯ ಕಳೆವುದು ಶೀಲವೆ?
ಕೆಱೆ ಬಾವಿ ತೊಱೆಯ ತೊಱೆವುದು ಶೀಲವೆ?
ಅಲ್ಲಲ್ಲಿಗೆ ಒಸರುವ ಉದಕವ [2][ತೊ][2]ಱೆವುದು ಶೀಲವೆ?
ಲಿಂಗಾರ್ಪಿತ ಮಾಡಿದ ಪ್ರಸಾದವನೊ[3]ಳ[3]ಕೊಂಡರೆ ಭಾಷೆಗೆ ವ್ರತಗೇಡಿ,
ಕೊಳ್ಳದಿದ್ದರೆ ಪ್ರಸಾದದ್ರೋಹಿ.
ಇದು ಕಾರಣ ಕೂಡಲ ಚೆನ್ನಸಂಗನಲ್ಲಿ
ಸಂಕಲ್ಪ ವಿಕಲ್ಪದಿಂದ ಕೆಟ್ಟಿತ್ತು ಶೀಲ. । ೯೨ । [೧೦೮೨]

೬೦೨

ಭಕ್ತರ ಮಠಕ್ಕೆ ಬಂದು ಒಳಹೊಱಗೆಂಬುದು ಶೀಲವೆ?
ಎನ್ನ ಲಿಂಗಕ್ಕೆ ಒಳ್ಳಿಹ ಅಗ್ಘಣಿಯ ತನ್ನಿ ಎಂಬುದು ಶೀಲವೆ?
ಎನ್ನ ಲಿಂಗಕ್ಕೆ ಒಳ್ಳಿಹ ಪುಷ್ಪವ ತನ್ನಿ ಎಂಬುದು ಶೀಲವೆ?
ಎನ್ನ ಲಿಂಗಕ್ಕೆ ಓಗರ ಮಾಡಿ ಎಂಬುದು ಶೀಲವೆ?
ಪಂಚೇಂದ್ರಿಯ ಸಪ್ತಧಾತು ಅರಿಷಡ್ವರ್ಗವ ಕೊಂದಾತನು
ಕೂಡಲ ಚೆನ್ನಸಂಗನಲ್ಲಿ ಆತನೇ ಶೀಲವಂತನು. । ೯೩ । [೧೦೮೩]

೬೦೩

ಶೀಲವಾದಡೆ ಪ್ರಪಂಚು ನಾಸ್ತಿಯಾಗಬೇಕು,
ಸೀಮೆಯಾದಡೆ ಪಂಚೇಂದ್ರಿಯ ನಾಸ್ತಿಯಾಗಿರಬೇಕು,

೧–೧ x (ಮೂ). ೨–೨ x(ಮೂ). ೩–೩ ಡ (ಮೂ).

ಸೀಮೆಯಾದಲ್ಲದೆ ಭಕ್ತನೆನಿಸಬಾರದು,
ಶೀಲವಾದಲ್ಲದೆ ಶರಣನೆನಿಸಬಾರದು,
ಶೀಲಕ್ಕೆ ಭವಿನಾಸ್ತಿ, ಸೀಮೆಗೆ ಭವಂ ನಾಸ್ತಿ,
ಈ ದ್ವಿವಿಧನಾಸ್ತಿಯಾದಲ್ಲದೆ ಕೂಡಲ ಚೆನ್ನಸಂಗನಲ್ಲಿ
ಶೀಲವಂತನೆಂದೆನಿಸಬಾರದು. । ೯೪ । [೧೦೮೪]

೬೦೪

ಶೀಲ ಸಂಬಂಧವನೆಂತು ಮಾಡುವರಯ್ಯ,
ಮನದಂತುವನಱಿಯಬಾರದೆ?
ಕಾಯದ ಕಳವಳವು ತಮತಮಗೆ ತಟತಟ ತಾಗುತ್ತಿರಲು
ಶೀಲ ಶೀಲದಂತೆ, ತಾವು ತಮ್ಮಂತೆ. ಲಿಂಗ ಲಿಂಗದಂತೆ,
ಮನದೊಳಗೆ ಎನಗೆ ತನಗೆಂಬ ಭಾವ ಬಿಡದನ್ನಕ್ಕ ಶೀಲ ಮತ್ತೆಲ್ಲಿಯದೊ?
ಅಷ್ಟಮದವಳಿದು ಷಡ್ವರ್ಗವಱತಡೆ,
ಕೂಡಲ ಚೆನ್ನಸಂಗನಲ್ಲಿ ಸುಶೀಲನೆಂಬೆನು. । ೯೫ । [೧೧೩೫]

೬೦೫

ಶೀಲವಂತರು ಶೀಲವಂತರೆಂಬರು,
ಶೀಲಸಂಬಂಧದ ಹೊಲಬನಱಿಯದ ಭ್ರಮಿತ ಪ್ರಾಣಿಗಳು ನೀವು ಕೇಳಿ ಭೋ !
ಕಾಮವೆಂಬುದೊಂದು ಪಾಪಿ, ಮದವೆಂಬುದೊಂದು ದ್ರೋಹಿ,
ಮತ್ಸರವೆಂಬುದೊಂದು ಹೊಲೆಯ,
[1]ಕ್ರೋಧವೆಂಬುದೊಂದು[1] ಕೈಸೂನೆ[2]ಗಾ[2]ಱ,[3]
ಮನವ್ಯಾಪಕಂಗಳು ಭವಿ.
ಇಂತಿವನಱಿದು ಮಱೆದು ಹರವಸಂಬೋಗಿ ಹೊಯಿ ಹಡೆದಂತಿದ್ದರೆ
ಕೂಡಲ ಚೆನ್ನಸಂಗನಲ್ಲಿ ಅವರ ಲಿಂಗವಂತರೆಂಬೆ. । ೯೬ । [೪೮೧]

೬೦೬

ಅಗ್ಘವಣಿ ಮೀಸಲಾಗಬೇಕೆಂಬುದು ಶೀಲವೆ?
ಪುಷ್ಪ ಮೀಸಲಾಗಬೇಕೆಂಬುದು ಶೀಲವೆ?

೧-೧ x(ಮೂ), ೨-೨ ಕಾ (ಮೂ), ೩+ ರು (ಮೂ)

ಇವು ಶೀಲವಲ್ಲ ಕಾಣಿರಯ್ಯಾ !
ಪಂಚೇಂದ್ರಿಯ ಷಡ್ವರ್ಗ ಸಪ್ತಧಾತು ಅಷ್ಟಮದಂಗ೧ಳ೧ ಕಳೆಯ ಬಲ್ಲಡೆ
ಕೂಡಲ ಚೆನ್ನಸಂಗನಲ್ಲಿ ಅಚ್ಚಶೀಲ. । ೯೭ । [೧೧೩೬]

೬೦೭

ನದಿ ಕೂಪ ತಟಾಕ ಜಲದಲ್ಲಿ ಕನ್ನವನಿಕ್ಕಿ ಉದಕವ ತಂದು,
ಮಜ್ಜನಕ್ಕೆಱೆವವರು ಸುಯಿಧಾನಿಗಳಪ್ಪರೆ?
ಪಾಕದಲ್ಲಿ ಭವಿಪಾಕ ಪರಪಾಕವೆಂದು ಭುಂಜಿಸುವ
ಉದರ ಪೋಷಕರೆಲ್ಲಾ ಶೀಲವಂತರಪ್ಪರೆ? ಅಲ್ಲ,
ಆಸೆಯಱಿತು, ವ್ಯಸನ ಬೆಂದು, ವ್ಯಾಪ್ತಿಗಳೆಲ್ಲವು ತಲ್ಲೀಯವಾಗಿ,
ತನುಗುಣಾದಿಗಳೆಲ್ಲಾ ಸಮಾಪ್ತಿಯಾದಡೆ
ಕೂಡಲ ಚೆನ್ನಸಂಗನಲ್ಲಿ ಶೀಲವಂತರೆಂಬೆ. । ೯೮ । [೧೦೮೬]

೬೦೮

ಶೀಲವಂತರು ಶೀಲವಂತರೆಂದೆಂಬರು ನಾವಿದನಱಿಯೆವಯ್ಯ.
ಅಂಗನೆಯರ ಅಧರಪಾನವು
ತನ್ನ ಉದರವ ಹೊಗುವನ್ನಕ್ಕ ಶೀಲವೆಲ್ಲಿಯದೊ?
ಈಷಣತ್ರಯವೆಂಬ ಸೊಣಗ ಬೆಂಬತ್ತಿ ಬರುತ್ತಿರಲು ಶೀಲವೆಲ್ಲಿಯದೊ?
ಹೆಱೆಸಾರಿ ಮನವು ಮಹದಲ್ಲಿ ನಿಂದರೆ ಶೀಲ,
ಪರಿಣಾಮ ನೆಲೆಗೊಂಡರೆ ಶೀಲ.
ಇದು ಕಾರಣ ಕೂಡಲ ಚೆನ್ನಸಂಗನಲ್ಲಿ ಶೀಲವಂತರಪೂರ್ವ. । ೯೯ । [೧೦೮೫]

೬೦೯

ಶೀಲವಂತರೆಲ್ಲಾ ಶೀಲವಂತರಯ್ಯಾ?
ಭಾಷೆವಂತರೆಲ್ಲಾ ಭಾಷೆವಂತರಯ್ಯಾ?
ವ್ರತವಂತರೆಲ್ಲಾ ವ್ರತವಂತರಯ್ಯಾ?
ಸತ್ಯವಂತರೆಲ್ಲಾ ಸತ್ಯವಂತರಯ್ಯಾ?
ನೇಮವಂತರೆಲ್ಲಾ ನೇಮವಂತರಯ್ಯಾ?

೧–೧ x (ಮೂ).

ಕೂಡಲ ಚೆನ್ನಸಂಗಮದೇವಯ್ಯಾ
ಸಂಗನಬಸವಣ್ಣನೊಬ್ಬನೆ ಲಿಂಗವಂತ. । ೧೦೦ ।[೧೧೩೭]

೬೧೦
ಭಕ್ತನೆ ಕುಲಜನೆಂಬರು, ಯುಕ್ತಿಯಲ್ಲಿ ವಿಚಾರಿಸರು ನೋಡಾ!
ವ್ಯಾಕುಳ ನಿರಾಕುಳವೆಂಬ ಎರಡು ಕುಳ ನೋಡಾ!
ವ್ಯಾಕುಳವೆ ಭವ, ನಿರಾಕುಳವೆ ನಿರ್ಭವ.
ವ್ಯಾಕುಳವೆ ಪಾಪ, ನಿರಾಕುಳವೆ ಪುಣ್ಯ.
ವ್ಯಾಕುಳವೆ ಭವಿ, ನಿರಾಕುಳವೆ ಭಕ್ತ.
ಭವಬೀಜಂ ತಥಾ ಭಕ್ತಿರ್ಭಕ್ತಿಬಿಜಂ ತಥಾ ಶಿವಃ ।
ಶಿವಬೀಜಂ ತಥಾ ಜ್ಞಾನಂ ಜ್ಞಾನಂ ತ್ರೈಲೋಕ್ಯ ದುರ್ಲಭಂ ॥
[೧]ಎಂದುದಾಗಿ,[೧] ಜ್ಞಾನಿಗೆ ಕತ್ತಲೆಯಿಲ್ಲ, ಅಜಾತಂಗೆ ಹೊಲೆಯಿಲ್ಲ
[೨]ಕುಲಾಧೀಶ[೨] ಕೂಡಲ ಚೆನ್ನಸಂಗಾ. । ೧೦೧ ।[೮೨೩]

೬೧೧
ಏನೆಂಬೆನಯ್ಯ? ಕಲ್ಪಿತ ಬಂಧನ ಬಿಡದು,
ಪ್ರಸಾದಕ್ಕೆಂತೊ? ಗಮನ ಶಂಕೆ ಬಿಡದು,
ಪ್ರಾಣಲಿಂಗಕ್ಕೆಂತೊ? ನಿಜತುಂಬಿ ನಿಕ್ಷೇಪವಾಗದು.
ಇದು ಕಾರಣ, ಅರ್ಪಿತವುಳ್ಳನ್ನಕ್ಕ ಪ್ರಸಾದಿಯಲ್ಲ,
ಅವಧಾನವುಳ್ಳನ್ನಕ್ಕ ಪ್ರಾಣಲಿಂಗಿಯಲ್ಲ
ಕೂಡಲ ಚೆನ್ನಸಂಗಯ್ಯಾ. । ೧೦೨ ।[೧೧೩೨]

೬೧೨
ಧರೆಗೆ ಸೂತಕವುಂಟೆ? ವಾರಿಧಿಗೆ ಹೊಲೆಯುಂಟೆ?
ಉರಿವ ಅನಲಂಗೆ ಜಾತಿಭೇದವುಂಟೆ?
ಹರಿದು ಚರಿಸುವ ಅನಿಲಂಗೆ ಸೀಮೆಯುಂಟೆ?
ಆಕಾಶಕ್ಕೆ [೩]ದಾರಿ[೩] ಮೇರೆಯುಂಟೆ?

೧–೧ x (ಮೂ). ೨–೨ ಕುಲದೀಶ (ಮೂ). ೩–೩ ಧಾರೆ (ಮೂ)

ನೀರಿಂದಲೊದಗಿದ ಘಟವನು ಆರು ಹೊಲ್ಲೆಂಬರು?
ಸಾರವು ಕರ್ಮ, ಕೂಡಲ ಚೆನ್ನಸಂಗಮದೇವಾ
ನಿಮ್ಮ ಶರಣಂಗೆ. । ೧೦೩ ।[೧೧೪೨]

೬೧೩
ಕಾಲದಿಂದ ಸವೆದಡೆ ಲಿಂಗಪ್ರಾಣಿಯಲ್ಲ,
ಕಲ್ಪಿತದಿಂದ ಸವೆದಡೆ ಜಂಗಮಪ್ರೇಮಿಯಲ್ಲ,
ಸಂಸಾರದಿಂದ ಸವೆದಡೆ ಪ್ರಸಾದಸಂಬಂಧಿಯಲ್ಲ,
ಅಱಿವಿಂದ ಸವೆದಡೆ ಲಿಂಗಾನುಭಾವಿಯಲ್ಲ,
ಕೂಡಲ ಚೆನ್ನಸಂಗನ ಶರಣನೊಬ್ಬಗಲ್ಲದಿಲ್ಲ. । ೧೦೪ ।[೧೨೩೬]

೬೧೪
ಆನು ಮಾಡಲು ಗುರುವಾದನಲ್ಲದೆ, ಗುರು ಮಾಡಲು ನಾನಾದೆನೆ?
ಗುರು ಮಾಡಲು ಲಿಂಗವಾಯಿತಲ್ಲದೆ, ಲಿಂಗ ಮಾಡಲು ಗುರುವಾದನೆ?
ಇಂತೀ ಉಭಯ ಕುಳಸ್ಥಳವನು ಕೂಡಲ ಚೆನ್ನಸಂಗನ ಶರಣ ಬಲ್ಲನಲ್ಲದೆ
ಎಲ್ಲರೂ ಎತ್ತ ಬಲ್ಲರು? । ೧೦೫ ।[೧೧೨೫]

೬೧೫
ಅಂಗದ ಆಪ್ಯಾಯನವಳಿಯದ ಕಾರಣ ಲಿಂಗ, ಲಿಂಗ ಎನುತ್ತಿದ್ದರು,
ಸಂಗದಾಪ್ಯಾಯನವಳಿಯದ ಕಾರಣ ಜಂಗಮ ಜಂಗಮವೆನುತ್ತಿದ್ದರು,
ಪರಿಣಾಮ ನೆಲೆಗೊಳ್ಳದ ಕಾರಣ ಪ್ರಸಾದ ಪ್ರಸಾದವೆನುತ್ತಿದ್ದರು.
ಒಂದೊಂದರಂಗವಿಡಿದು ನಾಮಭಂಗಿತರಾದರೆಲ್ಲ,
ಕೂಡಲ ಚೆನ್ನಸಂಗಾ ನಿಮ್ಮ ಶರಣ [೧]ಅಂಗವಿ[೧]ರಹಿತ. । ೧೦೬ ।[೧೦೨೭]

೬೧೬
ಕ್ರಿಯಾಲಿಂಗದ ಲಿಂಗಿಗಳೆಲ್ಲ ಕ್ರೀಯಳಿದ ಭಕ್ತರೆಂಬರಯ್ಯಾ.
ಕ್ರೀಯಳಿದ ಭಕ್ತಂಗೆ ಲಿಂಗವುಂಟೆ ? ಕ್ರೀಯಳಿದ ಭಕ್ತಂಗೆ ಜಂಗಮವುಂಟೆ?

೧-೧ ನಾವಂಗ (ಮೂ).

ಕ್ರೀಯಳಿದ ಭಕ್ತಂಗೆ ಪ್ರಸಾದವುಂಟೆ ?
ಕ್ರೀಯಳಿದು ನಿಃಕ್ರೀಯಲ್ಲಿ ನಿಂದ ಕೂಡಲ ಚೆನ್ನಸಂಗಾ
ನಿಮ್ಮ ಶರಣ. ।೧೦೭।[೧೨೩೭]

೬೧೭
ಕಾಳಾಮುಖಿ ಕಂಗೆಟ್ಟ, ಶೈವ ಸೈವೆಜಿಗಾದ,
ಪಾಶುಪತಿ ಪಥವಜೆಯ, ಮಹಾವ್ರತಿ ಮದದಲಳಿದ,
ಕಾಪಾಲಿ ಮರುಳಾಗಿ ತಿರುಗಿದ.
ಈ ಐದುವನಲ್ಲೆಂದು ಕಳೆದು, ಕೂಡಲ ಚೆನ್ನಸಂಗನ ಶರಣನು
ಆರ ಮೀಜಿ ಬೇಜಿ ನಿಂದನು. ।೧೦೮।[೫೨೮]

೬೧೮
ಏಕೋವರ್ಣ ಷಡುವರ್ಣವೆಂಬೆನೆ ಪ್ರಭುವೆ? ಎನ್ನ ದೃಷ್ಟಿ ಕಾಣದು.
ಅಂಗವನೂ ಲಿಂಗವನೂ ಸಂಗವ ಮಾಡಿ ತೋಜಿದರೆ
ಕೂಡಲ ಚೆನ್ನಸಂಗಯ್ಯಾ ನೀನೆಂಬೆನು. ।೧೦೯।[೧೦೭೬]

೬೧೯
ಆದಿ ಲಿಂಗಂ ಭೋ, ಅನಾದಿ ಶರಣಂ ಭೋ !
ಪೂರ್ವ ಲಿಂಗಂ ಭೋ, ಅಪೂರ್ವ ಶರಣಂ ಭೋ !
ಕೂಡಲ ಚೆನ್ನಸಂಗನಲ್ಲಿ ಸಾಧ್ಯ ಲಿಂಗಂ ಭೋ,
ಅಸಾಧ್ಯ ಶರಣಂ ಭೋ ! ।೧೧೦।[೧೨೬೧]

೬೨೦
ತಾಪತ್ರಯವಿಲ್ಲದವ, ವ್ಯಾಪ್ತಿಯನಜಿಯದವ,
ಇರುಳು ಹಗಲೆಂದು ಮನದಲ್ಲಿ ತಾಳದವ,
ತಾಳೋಷ್ಟ ಸಂಪುಟಕ್ಕೆ ಬಾರದವ,
ಭವಚ್ಛೇದ ಕಾಮಭಂಜನ ಕಾಯವಿಲ್ಲದವ,[೧]

೧+ ನಾ (ಮೂ).

ಕಾಲನ ಗೆದ್ದವ, ಮಾಯವ ತೋಱಿದವ,[೧] ಮತ್ತೊಂದನಱಿಯದವ
ನಮ್ಮ ಕೂಡಲ ಚೆನ್ನಸಂಗನನಱಿದು ಸುಖಿಯಾದವ.[೨] । ೧೧೧ ।[೧೨೮೧]

ಶರಣನ ಪ್ರಸಾದಿ[೩]ಸ್ಥಲ :[೩]

೬೨೧
ಅರ್ಪಿತ ಅರ್ಪಿತವೆನುತ್ತಿಹರೆಲ್ಲ
ಅರ್ಪಿತವಾವುದೆಂದು ಹೇಳಿರಯ್ಯಾ?
ಕಾಯಾರ್ಪಿತವೆಂಬಿರೆ ಅಳಿವಿನೊಳಗಾಯಿತ್ತು.
ಭಾವಾರ್ಪಿತವೆಂಬಿರೆ ಭ್ರಮೆಗೊಳಗಾಯಿತ್ತು,
ಜಿಹ್ವಾರ್ಪಿತವೆಂಬಿರೆ ರುಚಿಯೊಳಗಾಯಿತ್ತು.
ಸರ್ವವೂ ಶಿವನಾಜ್ಞೆಯೊಳಗೆಂಬಿರೆ ಭವಭಂಧನ ಬಿಡದು,
ಅರ್ಪಿಸಲೇ ಬೇಕು, ಅರ್ಪಿಸಿದಲ್ಲದೆ ಪ್ರಸಾದವಾಗದು.
ಅರ್ಪಿತದ ವರ್ಮ ಸಕೀಲನು ಕೂಡಲ ಚೆನ್ನಸಂಗಾ
ನಿಮ್ಮ ಶರಣ ಬಲ್ಲ. । ೧೧೨ ।[೧೧೬]

೬೨೨
ಕಂಗಳ [೪]ನೋಟ[೪] ಲಿಂಗಕ್ಕೆ ಅರ್ಪಿತ,
ಮನ ಮುಟ್ಟಿದ ಆರೋಗಣೆಯೆಂಬುದೇನೊ?
ಸಂಕಲ್ಪವಿರಹಿತ ಶರಣನು,
ಆಗಮವಿರಹಿತ ಶರಣನಲ್ಲದೇನೊ ? ಶರಣಂಗೆ ಸೀಮೆಯೆಂಬುದೇನೊ ?
ನಿರ್ಭಾವದ ಕೈಯಲು ಮುಟ್ಟಿ ಲಿಂಗಾರ್ಪಿತವು,
ಮಿಕ್ಕುದು ಕಿಲ್ಬಿಷ ಕೂಡಲ ಚೆನ್ನಸಂಗಮದೇವಾ. । ೧೧೩ ।[೫೪]

೬೨೩
ಪ್ರಾಣಲಿಂಗಿಗಳಾದವರು ಪ್ರಸಾದಕಾಯರಪ್ಪರಲ್ಲದೆ
ಲಿಂಗಭಾಜನವೆಂತಳವಡುವುದಯ್ಯಾ?
ತನುವಿನಲ್ಲಿ ಪಂಚವಿಂಶತಿ ಗುಣಂಗಳೆಚ್ಚತ್ತಿಪ್ಪನ್ನಕ
ಲಿಂಗಭಾಜನವೆಂತಳವಡುವುದಯ್ಯಾ ?

೧+ ನಾ (ಮೂ), ೨+ ನು (ಮೂ), ೩–೩ x (ಮೂ), ೪–೪ ಮೂಜೆ (ಮೂ).

ಬಂದುದು [1]ಬಾರದು[1]ದೆಂಬ ಸಂದೇಹವುಳ್ಳನ್ನಕ
ಕೊಂಡುದು ಕಿಲ್ಬಿಷ, ಕೂಡಲ ಚೆನ್ನಸಂಗಮದೇವಾ. ।೧೧೪।[೧೧೬೮]

೬೨೪

ಅಂದಂದಿಗೆ ಬಂದ ಪದಾರ್ಥವನೆಂದೆಂದೂ
ತಾನುಂಬ ಕೈಯಲಿ ಕೊಡುವುದು ಎಂತೊ?
ಲಿಂಗಕ್ಕೆ ನೀಡುವರೆಂತೊ? ಲಿಂಗಕ್ಕೆ ಕೊಡುವರೆಂತೊ?
ಲಿಂಗಕ್ಕೆ ಸಲುವುದೆಂತೊ?
ಶಿವ ಶಿವಾ! ಮಂಚವೊಂದೆ, ಕಂಚು ಬೇಜೆಂಬ ಪ್ರಪಂಚಿಯನೊಲ್ಲ
ಕೂಡಲ ಚೆನ್ನಸಂಗಮದೇವ. ।೧೧೫।[೧೧೬೬]

೬೨೫

ಅರ್ಪಿತ ಅನರ್ಪಿತವೆಂಬ ಉಭಯ ಕುಳದ ಶಂಕೆವುಳ್ಳನ್ನಕ್ಕ
ಅಚ್ಚ ಸಂಸಾರಿಯೆಂಬೆ.
ಅರ್ಪಿತ ಅನರ್ಪಿತವೆಂಬೆರಡ ಕಳೆದು ನಿಂದಾತನಚ್ಚ ಲಿಂಗವಂತನೆಂಬೆ
ಅರ್ಪಿತ ಅನರ್ಪಿತವನರ್ಪಿಸಿ ಪ್ರಸಾದ ಸ್ವೀಕರಿಸಬಲ್ಲಡಾತನ
ವಾಙ್ಮನಾತೀತನೆಂಬೆ.
ಅರ್ಪಿತವಿಲ್ಲ, ಅನರ್ಪಿತವಿಲ್ಲ, ಅಕಲ್ಪಿತವಯ್ಯಾ
ಕೂಡಲ ಚೆನ್ನಸಂಗಮದೇವಾ. ।೧೧೬।[೧೧೭೦]

೬೨೬

ರೂಪುವಿಕಾರಿಗಳಿಗಿನ್ನಾಗದಯ್ಯಾ,
ರುಚಿವಿಕಾರಿಗಳಿಗಿನ್ನಾಗದಯ್ಯಾ,
ವಚನದ ರಚನೆಯ ನುಡಿದವರಿಗೆ ಪ್ರಸಾದ ವೇದ್ಯವಾಗದಯ್ಯಾ.
ಈ ತ್ರಿವಿಧದ ಮೊದಲನಜಿಯದ ಅಸಂಬಂಧಿಗಳಿಗೆ ಇನ್ನಾಗದಯ್ಯಾ
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದ. ।೧೧೭।[೧೨೨೯]

೬೨೭

ಹದಿನೆಂಟು ಯುಗದವರು ಲಿಂಗವ ಪೂಜಿಸಿ
ದೃಷ್ಟವಾವುದು ನಷ್ಟವಾವುದೆಂದಜಿಯದೆ
ಭಾವ ಭ್ರಾಮಿತರಾದರು.

೧–೧ x (ಮೂ).

ಜೀವ ಸಂಕಲ್ಪಿಗಳಾದವರು
ಜೀವದಾಹುತಿಯನೆ ಲಿಂಗಕ್ಕರ್ಪಿತವೆಂಬರು.
ಎಂಬವರು ಭವದ ಬಳ್ಳಿಯ ಹಱಿಯಲಱಿಯರು,
ಇಂಥವನೆ ಭಕ್ತ? ಇಂಥವನೆ ಪ್ರಸಾದಿ?
ಕೇಳು ಕೇಳು ಭಕ್ತನ ಮಹಿಮೆಯ :
ಪೃಥ್ವಿಯ ಸಾರಾಯದಲಾದ ಪದಾರ್ಥವ ಲಿಂಗಕ್ಕೆ ಕೊಡದ ಭಾಷೆ,
ಅಪ್ಪುವಿಂದಾದ ಅಗ್ಘಣೆಯ ಲಿಂಗಕ್ಕೆ ಕೊಡದ ಭಾಷೆ,
ತೇಜದಿಂದಾದ ನಿವಾಳಿಯ ಲಿಂಗಕ್ಕೆ ಕೊಡದ ಭಾಷೆ,
ವಾಯುವಿನಿಂದಾದ ಪರಿಮಳವ ಲಿಂಗಕ್ಕೆ ಕೊಡದ ಭಾಷೆ,
ಆಕಾಶದಿಂದಾದ ಶೂನ್ಯವ ಲಿಂಗಕ್ಕೆ ಕೊಡದ ಭಾಷೆ.
ಇದೇನು ಕಾರಣವೆಂದಡೆ :
ಮತ್ತೊಂದು ಪೃಥ್ವಿವುಂಟಾಗಿ, ಮತ್ತೊಂದು ಅಪ್ಪುವುಂಟಾಗಿ
ಮತ್ತೊಂದು ತೇಜವುಂಟಾಗಿ, ಮತ್ತೊಂದು ವಾಯುವುಂಟಾಗಿ
ಮತ್ತೊಂದು ಆಕಾಶವುಂಟಾಗಿ.
ಇವರ ಮೇಲಣ ಪಾಕದ್ರವ್ಯವ ಲಿಂಗಕ್ಕೆ ಕೊಡುವುದು ಭಕ್ತಿ.
ಕೂಡಲ ಚೆನ್ನಸಂಗಾ ಅರ್ಪಿತ ಮುಖವ ನಿಮ್ಮ ಶರಣ ಬಲ್ಲ. । ೧೧೮ ।[೯೯೪]

೬೨೮

ಕಾಯ ಪ್ರಸಾದವೊ, ಜೀವ ಪ್ರಸಾದವೊ, ಪ್ರಾಣ ಪ್ರಸಾದವೊ,
ಬಲ್ಲವರು ನೀವು ಹೇಳಿರೆ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವೆಂದು ಹೆಸರಿಟ್ಟುಕೊಂಡು ಕರೆವಿರಿ,
ಕಾಯವ ಕಳೆದು ಕಾಯಪ್ರಸಾದವೊ,
ಜೀವವ ಕಳೆದು ಜೀವಪ್ರಸಾದವೊ,
ಪ್ರಾಣವ ಕಳೆದು ಪ್ರಾಣಪ್ರಸಾದವೊ.
ಇಂತಿದನುತ್ತರಿಸಿದ ಮಹಾಪ್ರಸಾದವನಲ್ಲದೆ ಕೊಳ್ಳೆ.
ರಂಜಕ ಪ್ರಸಾದಕಾನಂಜುವೆ ಕೂಡಲ ಚೆನ್ನಸಂಗಮದೇವಾ. । ೧೧೯ ।[೧೧೭೩]

೬೨೯

ಗಮನಿ ಲಿಂಗಜಂಗಮ, ನಿರ್ಗಮನಿ ಜಂಗಮಲಿಂಗ.
[1]ಲಿಂಗ[1]ಜಂಗಮ ಉಭಯಾರ್ಥದ ಸಂಚವನಾವುದ ಘನವೆಂಬೆ? ಆವುದ ಕಿಱಿದೆಂಬೆ?
ಆಚಾರವುಳ್ಳಲ್ಲಿ ಪ್ರಾಣಲಿಂಗವಿಲ್ಲ, ಪ್ರಾಣಲಿಂಗವುಳ್ಳಲ್ಲಿ ಪ್ರಸಾದವಿಲ್ಲ.

೧-೧ x (ಮೂ).

ಇದು ಕಾರಣ ಕೂಡಲ ಚೆನ್ನಸಂಗಮದೇವಾ
ಅನಾಚಾರಿಗಲ್ಲದೆ ಪ್ರಸಾದವಿಲ್ಲ. ।೧೨೦।[೧೧೯೧]

೬೩೦

ಗುರುವುಳ್ಳಾತ ಭಕ್ತನಲ್ಲ, ಪ್ರಸಾದವುಳ್ಳಾತ ಶಿಷ್ಯನಲ್ಲ.
ಲಿಂಗೈಕ್ಯನಾದರೆ ಸ್ಥಾವರಲಿಂಗ ವಿರೋಧಿಯಾಗಿರಬೇಕು.
ಕಾಯಕ್ಕೆ ಸಾಹಿತ್ಯವೆಲ್ಲಿಯಾದರೆಯೂ ಉಂಟು,
ಆತ್ಮಸಾಹಿತ್ಯವಪೂರ್ವ.
ಆಚಾರಸಾಹಿತ್ಯ ಲೋಕ, ಅನಾಚಾರ [1]ಸಾಹಿತ್ಯ[1] ಶರಣ.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ [2]ನಾ[2]ನು
ಅನಾಚಾರಿಯಾದ ಕಾರಣ ಎನಗೆ ಪ್ರಸಾದ ನೆಲೆಗೊಂಡಿತ್ತು. ।೧೨೧।[೧೧೯೦]

೬೩೧

ಭವಿಯ ತಂದು ಭಕ್ತನ ಮಾಡೂದನಾಚಾರ,
ಭಕ್ತನ ತಂದು ಭವಿಯ ಮಾಡೂದಾಚಾರ,
ಭವಿ ಮುಟ್ಟೆ ಪ್ರಸಾದ, ಭಕ್ತ ಮುಟ್ಟೆ ಓಗರ.
ಇದು ಕಾರಣ ಕೂಡಲ ಚೆನ್ನಸಂಗನಲ್ಲಿ
ಭವಿಯ ಪ್ರಸಾದವ ಕೊಂಡೆನ್ನ ಭವಂ ನಾಸ್ತಿಯಾಯಿತ್ತು. ।೧೨೨।[೧೧೮೯]

೬೩೨

ಲಿಂಗವನು ಭವಿಯೆಂಬೆ. ಜಂಗಮವನು ಭವಿಯೆಂಬೆ,
ಪ್ರಸಾದವನು ಭವಿಯೆಂಬೆ,
ಅದೇನು ಕಾರಣ ಭವಿಯೆಂಬೆ?
ಈ ತ್ರಿವಿಧಕ್ಕೆ ಹಸ್ತಮಸ್ತಕಸಂಯೋಗವಿಲ್ಲದ ಕಾರಣ ಭವಿಯೆಂಬೆ.
ಇದು ಕಾರಣ ಈ ತ್ರಿವಿಧವನು
ಕೂಡಲ ಚೆನ್ನಸಂಗಾ ನಿಮ್ಮ ಶರಣ ಬಲ್ಲ. ।೧೨೩।[೧೨೨೪]

೬೩೩

ಅನಾಚಾರದ ಕಾಯ[3][ಕ][3]ವ ಮಾಡಿ, ಪದಾರ್ಥವನೆ ಗಳಿಸಿ
ಆ ಪದಾರ್ಥವನೆ ಪಾಕವ ಮಾಡಿ, ಓಗರವ ಮಾಡುವುದು.

೧-೧ x (ಮೂ), ೨-೨ ನೀ (ಮೂ), ೩-೩ x (ಮೂ).

ಆ ಓಗರವನೆ ಪ್ರಸಾದವ ಮಾಡಿ, ಆ ಪ್ರಸಾದವನೆ ಓಗರವ ಮಾಡಿ,
ಇದು ಕಾರಣ ಕೂಡಲ ಚೆನ್ನಸಂಗನ ಶರಣನು
ಅರ್ಪಿತವಲ್ಲದೆ ಮಾಡನು. । ೧೨೪ ।[೧೧೬೭]

೬೩೪

ಸಚರಾಚರದೊಳಗಿಪ್ಪ ಲಾಂಛನಧಾರಿಗಳೆಯ್ದೆ
ಸಯದಾನವೆ ಪ್ರಸಾದವೆಂದು ಹೆಸರಿಟ್ಟುಕೊಂಡುಂಬರು.
ಲೋಹಮೇವೋಚ್ಯತೇ ಲಿಂಗಂ ಲಿಂಗಮೇವೋಚ್ಯತೇ ಶಿವಃ ।
ತಲ್ಲಿಂಗಧಾರಣಾಚ್ಛಿಷ್ಯಃ ಪೂರ್ವಜನ್ಮವಿವರ್ಜಿತಃ ॥
[1]ಇಂತು[1] ಪ್ರಕೃತ್ಯಾದಿಗಳ ಗುಣಂಗಳು ಪಲ್ಲಟವಾದ ಕಾರಣ[2]
[3]ಕೂಡಲ ಚೆನ್ನಸಂಗನಲ್ಲಿ
ಬಸವನೆಂಬ ಪ್ರಸಾದಿಗೆ ನಾನೆಂಬ ಓಗರ. । ೧೨೫ ।[೧೧೭೨]

೬೩೫

ಲಿಂಗಸ್ವಾಯತ ಶರಣ, ಪ್ರಸಾದಸ್ವಾಯತ ಪ್ರಸಾದಿ.
ಅರ್ಪಿತವಿಡಿದುದೆ ಪಥವು, ಅನರ್ಪಿತವಿಡಿದುದೆ ಭಂಗವು.
ಅಸಂಬಂಧ ಸಂಬಂಧವಾಯಿತ್ತು,
ಕೂಡಲ ಚೆನ್ನಸಂಗಾ ನಿಮ್ಮಲ್ಲಿ. । ೧೨೬ ।[೧೧೭೧]

೬೩೬

ಗುರು ಮುಟ್ಟಿತ್ತು ಪ್ರಸಾದವೆಂಬೆನೆ? ಅಲ್ಲ. ಅದೇನು ಕಾರಣ?
ಅನಾದಿ ಲಿಂಗವ ತೋಱಲಱಿಯನಾಗಿ.
ಲಿಂಗ ಮುಟ್ಟಿತ್ತು ಪ್ರಸಾದವೆಂಬೆನೆ? ಅಲ್ಲ. ಅದೇನು ಕಾರಣ?
ಅಷ್ಟವಿಧಾರ್ಚನೆ ಷೋಡಶೋಪಚಾರಕ್ಕೊಳಗಾಯಿತ್ತಾಗಿ.
ಜಂಗಮ ಮುಟ್ಟಿತ್ತು ಪ್ರಸಾದವೆಂಬೆನೆ? ಅಲ್ಲ. ಅದೇನು ಕಾರಣ?
ಆಸೆಯಾಮಿಷಕ್ಕೊಳಗಾಗಿ ನಿಂದುದಾಗಿ.
ಲಿಂಗವಿಲ್ಲದ ಜಂಗಮ, ಜಂಗಮವಿಲ್ಲದ ಲಿಂಗ.
ಲಿಂಗಜಂಗಮವೆಂಬ ವಿಭೇದವ ಕಳೆದುಳಿದ ಪ್ರಸಾದಿಯ
ಎನಗೆ ತೋಱು ಕೂಡಲ ಚೆನ್ನಸಂಗಮದೇವಾ. । ೧೨೭ ।[೧೨೩೦]

೧-೧ ಇನ್ನು (ಮೂ), ೨ + ಪೂರ್ವಜನ್ಮವಿವರ್ಜಿತಃ(ಮೂ), ೩+ ಇದು ಕಾರಣ (ಮೂ).

೬೩೭

ಶಿಷ್ಯನ ಮುಖದಿಂದಾದ ಗುರುವಿಂಗೆ – ಶಿಷ್ಯನ ಪ್ರಸಾದ ಗುರುವಿಂಗಲ್ಲದೆ,
ಗುರುವಿನ ಪ್ರಸಾದ ಶಿಷ್ಯಂಗಿಲ್ಲ, ಇದಕ್ಕಾ ಗುರುವೆ ಸಾಕ್ಷಿ.
ಶರಣನ ಮುಖದಿಂದಾದ ಲಿಂಗಕ್ಕೆ – ಶರಣನ ಪ್ರಸಾದ ಲಿಂಗಕ್ಕಲ್ಲದೆ.
ಲಿಂಗ ಪ್ರಸಾದ ಶರಣಂಗಿಲ್ಲ, ಇದಕ್ಕಾ ಲಿಂಗವೆ ಸಾಕ್ಷಿ.
ಭಕ್ತನ ಮುಖದಿಂದಾದ ಜಂಗಮಕ್ಕೆ – ಭಕ್ತನ ಪ್ರಸಾದ ಜಂಗಮಕ್ಕಲ್ಲದೆ,
ಜಂಗಮ ಪ್ರಸಾದ ಭಕ್ತಂಗಿಲ್ಲ, ಇದಕ್ಕಾ ಜಂಗಮವೆ ಸಾಕ್ಷಿ.
ಇದು ಕಾರಣ ಕೂಡಲ ಚೆನ್ನಸಂಗಮದೇವಾ
ಈ ತ್ರಿವಿಧದನುಭಾವವ ಬಸವಣ್ಣ ಬಲ್ಲ, ।೧೨೮ ।[೧೧೭೮]

೬೩೮

ಅರ್ಪಿತವನರ್ಪಿತವೆಂಬ ಸಂದೇಹವಳಿದುಳಿದ ಪ್ರಸಾದಿಗೆ
ಅರ್ಪಿತ ಪ್ರಸಾದಕ್ಕೆಲ್ಲಿಯದೊ? ಆ ಪ್ರಸಾದ ಅರ್ಪಿತಕ್ಕೆಲ್ಲಿಯದೊ?
ಲಿಂಗಾರ್ಪಿತಪ್ರಸಾದಂ ಚ ನ ದದ್ಯಾಜ್ಜಂಗಮಾಯ ವೈ ।
ಜಂಗಮಾರ್ಪಿತಪ್ರಸಾದಂ ದದ್ಯಾತ್ತು ಲಿಂಗಮೂರ್ತಯೇ ॥
ಮಹದಿಂದಾದ ಸುಖವ ಸೂತಕಕ್ಕಿಕ್ಕುವ ಪಾತಕರನೇನೆಂಬೆ
ಕೂಡಲ ಚೆನ್ನಸಂಗಯ್ಯಾ, ।೧೨೯ ।[೧೧೮೬]

೬೩೯

ದಶವಿಧ ಉದಕ, ಏಕಾದಶ ಪ್ರಸಾದ, ಎಲ್ಲಾ ಎಡೆಯಲ್ಲಿ ಉಂಟು,
ಮತ್ತೊಂದ ಬಲ್ಲವರ ತೋಱಾ ಎನಗೆ.
ಲಿಂಗವ ನೆನೆಯದೆ, ಲಿಂಗಾರ್ಪಿತವ ಮಾಡದೆ,
ಅನರ್ಪಿತವ ಕೊಳ್ಳದ ಅಚ್ಚಪ್ರಸಾದಿಯ ತೋಱಿ
ಬದುಕಿಸಯ್ಯಾ ಕೂಡಲ ಚೆನ್ನಸಂಗಮದೇವಾ. ।೧೩೦ ।[೧೧೮೫]

೬೪೦

ತನ್ನ ಲಿಂಗಕ್ಕೆ ಕೊಟ್ಟಲ್ಲದೆ ಕೊಳ್ಳೆನೆಂಬ ಶರಣನು,
ಬಿಸಿಲಲಿ ನಿಂದರೆ ಬಿಸಿಲ ಲಿಂಗಾರ್ಪಿತವ ಮಾಡಬೇಕು,
ನೆಳಲಲಿ ನಿಂದರೆ ನೆಳಲ ಲಿಂಗಾರ್ಪಿತವ ಮಾಡಬೇಕು.
ಧೂಪ ದೀಪ ಪರಿಮಳ ವಾಯು ರುಚಿ ರೂಪನು ಕಾಯದ ಕೈಯ್ಯಲು
ಮುಟ್ಟಿ ಅರ್ಪಿಸೂದರಿದಲ್ಲ, ನಿಲ್ಲು ಮಾಣು.
ಭಾವದ ಕೈಯ್ಯಲು ಮುಟ್ಟಿ ಲಿಂಗಕ್ಕೆಂಬರು ನಾವಿದನಱಿಯೆವಯ್ಯಾ.

ನಯನೇಂದ್ರಿಯ ಶಯನಾಶನ ಪರುಶನ ನಿರವಯಲಿಂಗದಲ್ಲಿ.
ಈ ತೆಱನನಱಿಯ ಬಲ್ಲರೆ ಕೂಡಲ ಚೆನ್ನಸಂಗಮದೇವ. ।೧೩೧।[೭೨೩]

೬೪೧
ಲಿಂಗೋದಕ ಲಿಂಗಾರ್ಚನೆ. ಪಾದೋದಕ ಪಂಚೇಂದ್ರಿಯಾರ್ಚನೆ,
ಪ್ರಸಾದೋದಕ ಪ್ರಾಣಾರ್ಚನೆ.
ಲಿಂಗೋದಕ, ಪಾದೋದಕ, ಪ್ರಸಾದೋದಕ
ಈ ತ್ರಿವಿಧವ ಮುಟ್ಟಲಾಗದು ಕೂಡಲ ಚೆನ್ನಸಂಗಮದೇವಾ. ।೧೩೨।[೧೧೬೦]

೬೪೨
ಕಾಯ ಗುರು, ಪ್ರಾಣ ಲಿಂಗ, ಜ್ಞಾನ ಜಂಗಮ.
ಕಾಯದಲ್ಲಿ ಶುದ್ಧಪ್ರಸಾದ, ಪ್ರಾಣದಲ್ಲಿ ಸಿದ್ಧಪ್ರಸಾದ,
ಜ್ಞಾನದಲ್ಲಿ ಪ್ರಸಿದ್ಧಪ್ರಸಾದ.
ಈ ತ್ರಿವಿಧಪ್ರಸಾದನಿರ್ಣಯ ಕೂಡಲ ಚೆನ್ನಸಂಗಾ
ನಿಮ್ಮ ಶರಣಂಗೆ. ।೧೩೩।[೧೧೬೫]

೬೪೩
ಶರಣಸಾಹಿತ್ಯ ಲಿಂಗ ನೋಡಾ, ಲಿಂಗಸಾಹಿತ್ಯ ಶರಣ ನೋಡಾ.
ಸಂಗವೆ ಸನುಮತವಾಗಿ ಮತ್ತೊಂದು ಪರಿಯಲ್ಲ.
ಶರಣನೆ ಓಗರ, ಲಿಂಗವೆ ಪ್ರಸಾದ, ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ, ।೧೩೪।

೬೪೪
ಸ್ಥಲ[1]ದಿಂದ[1] ಸ್ಥಲವನರ್ಪಿಸೂದೊಡಲ ಗುಣ.
ನಿಃಸ್ಥಲದಿಂದ ನಿಃಸ್ಥಲವನರ್ಪಿಸೂದೆ ಪ್ರಾಣಗುಣ.
ಸ್ಥಲವೆನ್ನದೆ [2]ನಿಃಸ್ಥಲವೆನ್ನದೆ[2] ನೋಡದೆ ಆರಯ್ಯದೆ ಅರ್ಪಿಸೂದು ನಿರ್ಗುಣ.
ಇಂಥ ಮಹಂತರ ತೋಱಿ ಬದುಕಿಸಯ್ಯಾ
ಕೂಡಲ ಚೆನ್ನಸಂಗಮದೇವಾ. ।೧೩೫।[೧೧೭೬]

೬೪೫
ಲಿಂಗಗಂಭೀರ ನಿಸ್ಸಂಗಿಯ ಸಂಗವ ನಾನೇನೆಂಬೆನಯ್ಯಾ ?
ಪರಮಾರ್ಥದಿಂ ಗಮಿಸುವ ಗಮನವ ನಾನೇನೆಂಬೆನಯ್ಯಾ ?

೧-೧ ದಲ್ಲಿ (ಮೂ). ೨-೨x (ಮೂ).

ಕೂಡಲ ಚೆನ್ನಸಂಗನ ಶರಣರು ಕಾಯುವ ನೇವದಿಂದಲರ್ಪಿಸುವ
ಬೆಡಗ ನಾನೇನೆಂಬೆನಯ್ಯಾ ? ।೧೩೬।[೧೧೫೭]

೬೪೬
ಅಖಂಡಿತಪ್ರಸಾದ ಸಂಬಂಧದ, ಸೂಕ್ಷ್ಮದ ಕ್ರಮವ ಭೇದಿಸಿ.
ಲಿಂಗಾರ್ಪಿತ ಭೇದಾಭೇದಲ್ಲಿ ಲಿಂಗಪ್ರಸಾದ [೧]ಸಾಧ್ಯ[೧] ಸಾಧಕನಾಗಿ,
ಕೂಡಲ ಚೆನ್ನಸಂಗನಲ್ಲಿ ಪ್ರಸಾದವ ಮಹಾಘನವೆಂಬೆ. ।೧೩೭।[೧೧೮೮]

೬೪೭
ಆಪ್ಯಾಯನ ಮುಂತಾಗಿ ಕೊಂಬುದು ಪ್ರಸಾದವಲ್ಲ.
ಸಯದಾನದೊಳಗಣ ಪ್ರಸಾದ ಆವ ಪರಿಯಲೂ ಅಲ್ಲ.
ಮತ್ತೆಯೂ ಪ್ರಸಾದವೆ ಬೇಕು.
ಇಂತಪ್ಪ ಪ್ರಸಾದಿಯ ತೋಱು ಕೂಡಲ ಚೆನ್ನಸಂಗಮದೇವಾ. ।೧೩೮।

೬೪೮
ನಯನಾಗ್ರದ ನೋಡುವ ಸುಖವ ಲಿಂಗಾರ್ಪಿತವೆಂಬರು,
ನಾಸಿಕಾಗ್ರ ಪರಿಮಳದ ಸುಖವ ಲಿಂಗಾರ್ಪಿತವೆಂಬರು,
ಕೇಳುವ ಶ್ರೋತ್ರಾಗ್ರದ ಸುಖವ ಲಿಂಗಾರ್ಪಿತವೆಂಬರು,
ಜಿಹ್ವಾಗ್ರದ ರುಚಿಯ ಸುಖವ ಲಿಂಗಾರ್ಪಿತವೆಂಬರು,
[೨]ಮುಟ್ಟುವ ತ್ವಕ್ಕಿನ ಸುಖವ ಲಿಂಗಾರ್ಪಿತವೆಂಬರು.[೨]
ಇದು ಲಿಂಗಾರ್ಪಿತವೆ?
ಅರ್ಪಿತವ ಮಾಡದೆ, ಅನರ್ಪಿತವ ಹೊದ್ದದೆ, ಅರ್ಪಿಸಬೇಕು.
ಅರ್ಪಿಸುವ ಭಾವನೆವುಳ್ಳನ್ನಕ್ಕ ಶರಣೆನಿಸಬಾರದು,
ಕೂಡಲ ಚೆನ್ನಸಂಗಮದೇವಾ. ।೧೩೯।[೧೧೮೧]

೬೪೯
ಲಿಂಗದಲ್ಲಿ ಕೊಡಲುಂಟು, ಕೊಳಲುಂಟಾಗರ್ಪಿತ,
ಜಂಗಮದಲ್ಲಿ ಕೊಟ್ಟು ಕೊಳಲಿಲ್ಲಾಗನರ್ಪಿತ,
ಪ್ರಸಾದದಲ್ಲಿ ಕೊಡಲು ಕೊಳಲಿಲ್ಲಾಗುಭಯನಾಸ್ತಿ.
ಈ ತ್ರಿವಿಧ ಸಂಚ ಸನುಮತವನು
ಕೂಡಲ ಚೆನ್ನಸಂಗಾ ನಿಮ್ಮ ಶರಣ ಬಲ್ಲ. ।೧೪೦।[೧೧೯೩]

೧–೧ x(ಮೂ), ೨–೨x (ಮೂ).

೬೫೦

ಸಾವಧಾನಿ ಸರ್ವಸಂಸಾರಿ ನಿಸ್ಸಂದೇಹಿಯಲ್ಲ, ನಿಃಪ್ರಪಂಚಿಯಲ್ಲ.
ಅರ್ಪಿತಕ್ಕೆ ಅಜೆವುಳ್ಳನ್ನಕ್ಕ, ಶರಣನಲ್ಲ ಪ್ರಸಾದಿಯಲ್ಲ ಲಿಂಗೈಕ್ಯನಲ್ಲ.
ಇಂತೆಂದುದು ಕೂಡಲ ಚೆನ್ನಸಂಗನ ವಚನ. । ೧೪೧ ।[೧೧೭೫]

೬೫೧

ಗುರುವಿಂಗೆ [1]ಗುರುವಾಗಿ[1] ಗುರುಪ್ರಸಾದವ ಕೊಂಬುದು.
ಲಿಂಗಕ್ಕೆ ಲಿಂಗವಾಗಿ ಲಿಂಗಪ್ರಸಾದವ ಕೊಂಬುದು,
ಜಂಗಮಕ್ಕೆ ಜಂಗಮವಾಗಿ ಜಂಗಮಪ್ರಸಾದವ ಕೊಂಬುದು,
ಪ್ರಸಾದಕ್ಕೆ ಪ್ರಸಾದವಾಗಿ ಪ್ರಸಾದವನೆ ಕೊಂಬುದು.
ಈ ಚತುರ್ವಿಧ ಸ್ಥಲಕ್ಕೆ ಚತುರ್ವಿಧವಾಗಬಲ್ಲಡೆ,
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯವು. । ೧೪೨ ।[೧೧೭೭]

೬೫೨

ಅರ್ಪಿತದಲ್ಲಿ ಅವಧಾನವಱಿತು,
ಅನರ್ಪಿತದಲ್ಲಿ ಸುಯಿಧಾನವಱಿತು,
ಬಂದುದು ಬಾರದುದೆಂದಱಿಯದೆ,
ನಿಂದ ನಿಲವಿನ ಪರಿಣಾಮತೆ[2]ಯಾಯಿತ್ತು.[2]
ರುಚೀ ರೂಪಂ ನ ಚ ಜ್ಞಾನಂ ಅರ್ಪಿತಾನರ್ಪಿತಂ ತಥಾ ।
ಆದೌ ಪ್ರವರ್ತತೇ ಯಸ್ಯ ಶಿವೇನ ಸಹ ಮೋದತೇ ॥
ಎಂದುದಾಗಿ, ಕೂಡಲ ಚೆನ್ನಸಂಗಯ್ಯಾ
ನಿಮ್ಮವರು ಶಿವಸುಖಸಂಪನ್ನರಾದರಯ್ಯಾ. । ೧೪೩ ।[೧೧೮೦]

೬೫೩

ರೂಪನರ್ಪಿತವ ಮಾಡಿದ ಬಳಿಕ ರುಚಿಯನರ್ಪಿತವ ಮಾಡಲೇಬೇಕು,
ರುಚಿಯನರ್ಪಿತವ ಮಾಡಿದ ಬಳಿಕ ಮುಟ್ಟಿದ ಕೈ ವ್ರತಗೇಡಿಯಾಗಲೇಬೇಕು.
ಕೂಡಲ ಚೆನ್ನಸಂಗಯ್ಯಾ ನಿಮ್ಮ ಪ್ರಸಾದಿಗೆ
ನಮೋ ನಮೋ ಎಂಬೆ. । ೧೪೪ ।[೧೧೭೪]

೧-೧ x(ಮೂ), ೨-೨ x(ಮೂ).

೬೫೪

ಕೊಟ್ಟುದೊಂದು ಸೂತಕ, ಮುಟ್ಟುವುದೊಂದು ಸೂತಕ,
ಕೊಟ್ಟು ಕೊಂಬುದೊಂದು ಸೂತಕ,
ಲಿಂಗ ನಿಜಾಯತಂಗೆ ಇವೆ[1]ಲ್ಲಿಯವು?[1]
ಕೂಡಲ ಚೆನ್ನಸಂಗ ಲಿಂಗನಾ[2]ನೆ[2]ಂಬ ಸೂತಕವಿಲ್ಲಾಗಿ. ।೧೪೫।[೧೧೬೧]

೬೫೫

ಸ್ಥೂಲ ಸೂಕ್ಷ್ಮವೆಂಬ ಶಬ್ದ ಪರಿಭಾವ ತಲೆದೋಱದೆ,
ಸಂಗ ಮಹಾಸಂಗದ ವರ್ಮದಾಸೋಹ
ಹೃದಯಕ್ಕೆ ಸಾಹಿತ್ಯವಾದ ಭಕ್ತಂಗೆ
ಅರ್ಪಿತ ಅನರ್ಪಿತವೆಂಬ ಸಂಕಲ್ಪ [3]ವಿಕಲ್ಪ[3]ವಿರಹಿತ,
ಮತ್ತೆ ಅರ್ಪಿಸಬಲ್ಲನಾಗಿ,
ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ್ಯವೆಂಬ
ಪಂಚವಕ್ತ್ರವನು ಊರ್ಧ್ವಮುಖಕ್ಕೆ ತಂದು,
ಅರ್ಪಿಸಬಲ್ಲನಾಗಿ ಗುರುಪ್ರಸಾದಿ.
ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯ, ಆತ್ಮ
ಇಂತೀ ಅಷ್ಟತನುವನು ದಾಸೋಹದಲ್ಲಿ
ಅರ್ಪಿಸಬಲ್ಲನಾಗಿ ಜಂಗಮಪ್ರಸಾದಿ,
ಹೊಱಗೆ ಭಜಿಸಲಿಲ್ಲ, ಒಳಗೆ ನೆನೆಯಲಿಲ್ಲ,
ಸರ್ವಾಂಗಲಿಂಗಿಯಾಗಿಹ ಲಿಂಗಪ್ರಸಾದಿ.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣ ಮಹಾಪ್ರಸಾದಿ. ।೧೪೬।[೧೧೮೭]

೬೫೬

ಲಿಂಗಭೋಗೋಪಭೋಗದಲ್ಲಿ ಆಪ್ಯಾಯನ ಪ್ರಸಾದಿ ಶರಣ,
ಪ್ರಸಾದಭೋಗೋಪಭೋಗದಲ್ಲಿ ಆಪ್ಯಾಯನ ಶರಣ,
ಅನಪ್ಯಾಯನ ಪ್ರಸಾದಿ ಕುಳಾಕುಳರಹಿತನು.
ಕ್ರೀ ಹಿಂದಾದ, ಲಿಂಗ ಮುಂದಾಗ ಪ್ರಸಾದಿ.
ಪ್ರಸಾದಕ್ಕೆ ತಾನವಗ್ರಾಹಿ, ಪ್ರಸಾದಿ ತನಗವಗ್ರಾಹಕನು.
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದಿಗೆ ನಮೋ ನಮೋ ಎಂಬೆ. ।೧೪೭।[೧೧೯೪]

೧-೧ ಲ್ಲವೂ (ಮೂ), ೨-೨ ವೆ (ಮೂ), ೩-೩ x (ಮೂ).

೬೫೭

ವಿನಾಶ[1]ದೇಶದ, ವಿನಾಶ ವಿನೋದದ, ಭಾವದ ಉತುಕಟದ,
ಶರೀರಂಗಳ ಹೊರೆಯಲ್ಲಿ ಮೋಹಿತವಿಲ್ಲದ ಪ್ರಸಾದಿ.
ಕರಕಾಲ ಸನ್ನಿಧಿಯಲ್ಲಿ, ತತ್ಪುರುಷರ ಸನ್ನಿಧಿಯಲ್ಲಿ, ಭೇದವಿಲ್ಲದೆ ಬೆಳೆದ ಪ್ರಸಾದಿ
ರಾಗದ್ವೇಷಂಗಳ ಶಬ್ದವಿಲ್ಲದ ಪ್ರಸಾದಿ.
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಸದಾಸನ್ನಿಹಿತವಾದ ಪ್ರಸಾದಿ. ।೧೪೮।[೧೪೦೬]

೬೫೮

ಆಲಂಬಿತವೆನ್ನದೆ, ಆಲಂಬದೊಳಗಡಗದೆ, ಆಲಂಬವ ಬಯಸದೆ,
ಸೂಕ್ಷ್ಮ ಶಿವಪಥ ಏಕೈಕ ಪ್ರಸಾದಿ.
ಸೂಕ್ಷ್ಮವೆನ್ನದೆ, ಸೂಕ್ಷ್ಮವ ಬಯಸದೆ, ಸೂಕ್ಷ್ಮ ನಿರಾಕರಣೆ ಪರಿಕರಣೆಯೆನ್ನದೆ,
ನಿತ್ಯ ನಿಜವಾದ ಪ್ರಸಾದಿ.
ಇದು ಕಾರಣ, ಕೂಡಲ ಚೆನ್ನಸಂಗಾ
ಸಯಿದಾನಕ್ಕೆಡೆಗುಡದ ಪ್ರಸಾದಿ. ।೧೪೯।[೧೧೮೪]

೬೫೯

ತನು ಮುಟ್ಟಿದ ಪದಾರ್ಥ ಲಿಂಗಾರ್ಪಿತವಲ್ಲ,
ಮನ ಮುಟ್ಟಿದ ಪದಾರ್ಥ ಲಿಂಗಾರ್ಪಿತವಲ್ಲ,
ಕಿವಿಗಳು ಕೇಳಿದ ಪದಾರ್ಥ ಲಿಂಗಾರ್ಪಿತವಲ್ಲ,
ಕಂಗಳು ನೋಡಿದ ಪದಾರ್ಥ ಲಿಂಗಾರ್ಪಿತವಲ್ಲ,
ಘ್ರಾಣ ಸೋಂಕಿದ ಪದಾರ್ಥ ಲಿಂಗಾರ್ಪಿತವಲ್ಲ,
ಜಿಹ್ವೆ ತಾಗಿದ ಪದಾರ್ಥ ಲಿಂಗಾರ್ಪಿತವಲ್ಲ.
ಅಹುದೆಂಬುದ ನಡೆಯ, ಅಲ್ಲೆಂಬುದ ನುಡಿಯ,
ಬೇಕು ಬೇಡೆಂಬುದಿಲ್ಲ, ಸಾವಯವೆಂಬುದಿಲ್ಲ,
ನಿರವಯದಲ್ಲಿ ಸಕಲಭೋಗಂಗಳ ಭೋಗಿಸುವವನು,
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದಿ. ।೧೫೦।[೧೧೮೨]

೧+ ದ (ಮೂ).

೬೬೦

ಪ್ರಸಾದವನೆ ಬಿತ್ತಿ, ಪ್ರಸಾದವನೆ ಬೆಳೆವ,
ಫಲದ ಪರಿಯ ಬೆಸಗೊಳಲಿಲ್ಲ.
ಫಲ[1]ದರ್ಥಿ[1]ಯಲ್ಲ, ಕಾಯಪ್ರಸಾದಕ್ಕೆ ಭೇದವಿಲ್ಲ,
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. । ೧೫೧ ।[೧೨೩೩]

ಶರಣನ ಪ್ರಾಣಲಿಂಗಿ[2]ಸ್ಥಲ :[2]

೬೬೧

ದೇಹದೊಳಗಣ ದೇಹಿಯೆನ್ನಬಹುದೆ ನಿಮ್ಮ ಶರಣನ?
ಅನ್ನಪಾನಾದಿಗಳೊಳಗಣ ಅನ್ನಪಾನವೆಂದೆನ್ನಬಹುದೆ ಪ್ರಸಾದವ?
[3]ಏ[3]ನಬಾರದಯ್ಯಾ, [4]ಎನ್ನ ತಂದೆ!
ಸಾಧನದೊಳಗಣ ಸಂಯೋಗವೆಂತಿದ್ದುದು ಅಂತಿದ್ದುದಾಗಿ,
ಇದು ಕಾರಣ, ಶ್ರುತಿ ಸ್ಮೃತಿಗಗೋಚರ
ಕೂಡಲ ಚೆನ್ನಸಂಗಮದೇವಾ [5]ನಿಮ್ಮ ಶರಣರು.[5] । ೧೫೨ ।[೧೨೦೨]

೬೬೨

ಲಿಂಗವೆಂದಱಿದಂಗೆ ಹಿಂದಿಲ್ಲ, ಜಂಗಮವೆಂದಱಿದಂಗೆ ಮುಂದಿಲ್ಲ,
ಇದೇ ಶಿವಾಚಾರ, ಇದೇ ಶಿವದೊಡಕು,
'ಆತ್ಮಾನಾಂ ಪ್ರಕೃತಿಂ ಚ ಭಾವಯೇತ್' ಎಂದುದಾಗಿ.
ಇದು ಕಾರಣ ಕೂಡಲ ಚೆನ್ನಸಂಗಮದೇವನು
ಮುಟ್ಟಬಾರದ ಠಾವ ಮಱೆಗೊಂಡಿಪ್ಪ. । ೧೫೩ ।[೧೦೭೭]

೬೬೩

ಕಣ್ಣೊಳಗೆ ಕಣ್ಣಿದ್ದು ಕಾಣಲೇಕಱಿಯರಯ್ಯಾ?
ಕಿವಿಯೊಳಗೆ ಕಿವಿಯಿದ್ದು ಕೇಳಲೇಕಱಿಯರಯ್ಯಾ?
ಘ್ರಾಣದೊಳಗೆ ಘ್ರಾಣವಿದ್ದು ವಾಸಿಸಲೇಕಱಿಯರಯ್ಯಾ?
ಜಿಹ್ವೆಯೊಳಗೆ ಜಿಹ್ವೆಯಿದ್ದು ರುಚಿಸಲೇಕಱಿಯರಯ್ಯಾ?
ಸ್ಪರ್ಶದೊಳಗೆ ಸ್ಪರ್ಶವಿದ್ದು ಮುಟ್ಟಿಸಲೇಕಱಿಯರಯ್ಯಾ?

೧-೧ ದಾರ್ಥಿ (ಮೂ), ೨-೨ x(ಮೂ), ೩-೩ ನೆ (ಮೂ), ೪+ ದೇಹದೊಳಗಣ ದೇಹಿಯೆಂದೆನಬಹುದೆ (ಮೂ), ೫-೫ x(ಮೂ).

ಪ್ರಾಣದೊಳಗೆ ಪ್ರಾಣವಿದ್ದುದನೇಕಜೆಯರಯ್ಯಾ?
ಕಾಯದೊಳಗೆ ಕಾಯವಿದ್ದು ಬಿಡದು, ಬೇಱಾಗದು.
ಕೂಡಲ ಚೆನ್ನಸಂಗಯ್ಯನಿಕ್ಕಿದ ಭೇದವ ಬಿಡಿಸಬಾರದು. । ೧೫೪ ।[೧೦೭೮]

೬೬೪

ಉಂಬ ಬಾಯೊಳು ಊಡಿಸಿಕೊಂಬ ಬಾಯಿ[೧]ಯಿ[೧]ದೇನಯ್ಯಾ?
ನೋಡುವ ನಯನದೊಳು ನೋಡಿಸಿಕೊಂಬ ನಯನವಿದೇನಯ್ಯಾ?
ಕೇಳುವ ಶ್ರೋತ್ರದೊಳು ಕೇಳಿಸಿಕೊಂಬ ಶ್ರೋತ್ರವಿದೇನಯ್ಯಾ?
ವಾಸಿಸುವ ವಾಸನೆಯೊಳು ವಾಸಿಸಿಕೊಂಬ ನಾಸಿಕವಿದೇನಯ್ಯಾ?
[೨]ಮುಟ್ಟುವ[೨] ಪರುಶದೊಳು ಮುಟ್ಟಿಸಿಕೊಂಬ ಪರುಶವಿದೇನಯ್ಯಾ?[೩]
[೪]ಇಂತಿವಱೊಳಗೆ[೪] ನೀನಿಪ್ಪ ಅನುವನಾರು ಬಲ್ಲರು?
ಕೂಡಲ ಚೆನ್ನಸಂಗಮದೇವಾ. । ೧೫೫ ।[೧೨೦೩]

೬೬೫

ಭಾವ ಭಾವಿಸಲುಂಟೆ? ಭಾವಭಾವಿಸಲಱಿಯದು, ಅದೇನು ಕಾರಣ?
ಭಾವದಲ್ಲಿ ಭರಿತನಾಗಿ.
ನೇತ್ರ ನೋಡಲುಂಟೆ ? ನೇತ್ರ ನೋಡಲಱಿಯದು, ಅದೇನು ಕಾರಣ?
ನೇತ್ರೇಂದ್ರಿಯದ ಬಾಗಿಲಲ್ಲಿ ನಿಂದು ನೋಡುವನಾಗಿ.
ಶ್ರೋತ್ರ ಕೇಳಲುಂಟೆ? ಶ್ರೋತ್ರ ಕೇಳಲಱಿಯದು, ಅದೇನು ಕಾರಣ?
ಶ್ರೋತ್ರದ ಬಾಗಿಲಲ್ಲಿ ನಿಂದು ಕೇಳುವನಾಗಿ.
ನಾಸಿಕ ಪರಿಮಳವಱಿವುದೆ? ನಾಸಿಕ ಪರಿಮಳಱಿಯದು, ಅದೇನು ಕಾರಣ?
ನಾಸಿಕ ಬಾಗಿಲಲ್ಲಿ ನಿಂದು ವಾಸಿಸುವ ತಾನಾಗಿ.
ಜಿಹ್ವೆ ರುಚಿಯನಱಿವುದೆ? ಜಿಹ್ವೆ ರುಚಿಯನಱಿಯದು, ಅದೇನು ಕಾರಣ?
ಜಿಹ್ವೆಯ ಬಾಗಿಲಲ್ಲಿ ನಿಂದು ರುಚಿ[೫]ಯ[೫] ನಿಶ್ಚೈಸುವ ತಾನಾಗಿ.
ಜಂತ್ರಂಗಳಾಡಬಲ್ಲವೆ? ಜಂತ್ರಂಗಳಾಡಲಱಿಯವು, ಅದೇನು ಕಾರಣ?
ಜಂತ್ರಂಗಳನಾಡಿಸುವ ಯಂತ್ರವಾಹಕ ತಾನಾಗಿ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣ ಸರ್ವಾಂಗಲಿಂಗಿ. । ೧೫೬ ।[೧೨೦೪]

೧–೧ x(ಮೂ), ೨–೨ x(ಮೂ), ೩+ ನೋಡುವ ನಯನದೊಳು ನೋಡಿಸಿಕೊಂಬ (ಮೂ), ೪–೪ x(ಮೂ), ೫–೫ ಸುವ (ಮೂ).

೬೬೬

ಅಂಗದಲಳವಟ್ಟ ಲಿಂಗೈಕ್ಯನ ನಿಲವ ಭಾವಭ್ರಮಿತರೆತ್ತ ಬಲ್ಲರು?
ಬಲ್ಲವರು ಬಲ್ಲರು, ಎಲ್ಲರೆತ್ತ ಬಲ್ಲರು?
ಕೂಡಲ ಚೆನ್ನಸಂಗಯ್ಯನಲ್ಲಿ ಶಬ್ದಸೂತಕಿಗಳವರೆತ್ತ ಬಲ್ಲರು? । ೧೫೭ ।[೧೨೧೮]

೬೬೭

ಅಂಗದಿಂದ ಲಿಂಗಸುಖ, ಲಿಂಗದಿಂದ ಅಂಗಸುಖ,
ಅಂಗ ಲಿಂಗ ಸಂಬಂಧದಿಂದ ಪರಮಸುಖ.
ಈ ಅಂಗ ಲಿಂಗ ಸುಖವನು
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯನೇ ಬಲ್ಲ. । ೧೫೮ ।[೫೫೦]

೬೬೮

ಉನ್ಮನಿಜ್ಞಾನದ ಗಮನ[1]ದ ಭಾವವು[1] ಲೌಕಿಕದ ನಿಷ್ಠೆಯ ದೃಷ್ಟಿ,
ಶಾಂಭವಜ್ಞಾನದ[2] ಗಮನದ[2] ಭಾವವು ಪ್ರಾಣದ ಪರಿಣಾಮದ ನಿಲವು,
ಸುಜ್ಞಾನದ ಗಮನದ ಭಾವವು ಉಪದೇಶ ಪ್ರಸೂತದ ಭಾವಭೇದ.
ಈ ತ್ರಿವಿಧ ಚರಿತ್ರ ಸಂಭಾಷಣೆಯ ಕೂಡಲ ಚೆನ್ನಸಂಗಾ
ನಿಮ್ಮ ಶರಣ ಬಲ್ಲ. । ೧೫೯ ।[೧೨೧೭]

೬೬೯

ಸಾವ ಜೀವ ಬಿಂದುವಿನ ಸಂಚ, ಸಾಯದ ನಾದ ಪ್ರಾಣದ ಸಂಚ.
ಸಾವ ಜೀವದ, ಸಾಯದ ಪ್ರಾಣದ
–ಎರಡಱ ಭೇದವನಱಿಯದಿರ್ದಡೆ ಲಾಂಛನಧಾರಿ,
ಸಾವ ಜೀವದ, ಸಾಯದ ಪ್ರಾಣದ
ಎರಡಱ ಭೇದವ ಭೇದಿಸಿ ಅಱಿವು ಕಣ್ದೆಱೆದ
ಪ್ರಾಣಲಿಂಗ ಸಂಬಂಧವಂತಿರಲಿ,
ಮತ್ತೆಯೂ ಪ್ರಾಣಲಿಂಗ ಸಂಬಂಧವೆ ಬೇಕು.
ಇಂತೀ ಉಭಯ ಸಂಬಂಧವಳಿದ ಸಂಬಂಧ ನಿಜವಾಯಿತ್ತು,
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. । ೧೬೦ ।[೧೨೧೪]

೧–೧ ದ ಉದ್ಭವ (ಮೂ), ೨–೨ ಭಾವದ ಗಮನದ (ಮೂ).

೬೭೦

ಲಿಂಗ ಪ್ರಾಣವೆಂಬೆನೆ? ಪ್ರಾಣದ ಹಂಗಿನ ಲಿಂಗ,
ಪ್ರಾಣ ಲಿಂಗವೆಂಬೆನೆ? ಲಿಂಗದ ಹಂಗಿನ ಪ್ರಾಣ.
ಪ್ರಾಣ ಲಿಂಗವಲ್ಲ, ಲಿಂಗ ಪ್ರಾಣವಲ್ಲ.
ಈ ಉಭಯ ಸಂದಳಿದವರ ತೋಜೆ ಬದುಕಿಸಯ್ಯಾ
ಕೂಡಲ ಚೆನ್ನಸಂಗಮದೇವಾ. ।೧೬೧।[೧೨೧೫]

೬೭೧

ದೃಷ್ಟದಲ್ಲಿ ನಡೆ ನುಡಿ ತನುಕ್ರೀ, ಅದೃಷ್ಟದಲ್ಲಿ ಪ್ರಾಣ ಮನಕ್ರೀ,
ಆಚಾರದಲ್ಲಿ ಸ್ಥಾನಾಸ್ಥಾನವೆ?
ಭಾವಸ್ಥಾನಾಂಗ ಲಿಂಗೇಷು ಪ್ರಾಣಲಿಂಗಾಂತರೇ ದ್ವಯಂ ।
ಸನ್ನಿಧಾನಾತ್ಪರಂ ಲಿಂಗಂ ಸ್ಥಾಪ್ಯಮೇತತ್ತು ಧೀಮತಾ ॥
ಈ ಉಭಯ ಸಂಗಾಸಂಗಿ ಲಿಂಗನಿರಂತರ,
ಕೂಡಲ ಚೆನ್ನಸಂಗಮದೇವಾ. ।೧೬೨।[೧೨೧೧]

೬೭೨

ಸುಖವಾವುದು? ಸುಖಿಯಾವುದು? ಸುಖದನುಭಾವವಾವುದು?
ಸುಖಲಿಂಗ, ಸುಖಿ ಶರಣ, ಸುಖದನುಭಾವ ಸುಸಂಗ,
ಕೂಡಲ ಚೆನ್ನಸಂಗ ಪರವಿಲ್ಲಾಗಿ. ।೧೬೩।[೧೨೧೨]

೬೭೩

ಜಗಭರಿತಲಿಂಗ ಎಲ್ಲಾ ಎಡೆಯಲುಂಟು,
ಶರಣಭರಿತ ಲಿಂಗವಪೂರ್ವ ನೋಡಾ.
ಗಮನವುಳ್ಳ ಜಂಗಮ ಎಲ್ಲಾ ಎಡೆಯಲುಂಟು,
ನಿಗರ್ಮನಿ ಜಂಗಮವಪೂರ್ವ ನೋಡಾ.
ಸುಚೈತನ್ಯ ಲಿಂಗಕ್ಕೆ ಚೈತನ್ಯ ಜಂಗಮಸಾಹಿತ್ಯ ನೋಡಾ.
ಈ ಲಿಂಗದ ಸಕೀಲ[೧] ಸಂಯೋಗದಲ್ಲಿ ಪರಿಣಾಮಿ
ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೧೬೪।[೯೬೬]

೧+ ಕ (ಮೂ).

೬೭೪

ಒಂದೆಂಬೆನೆ ಮೂರ್ತಿಯಾಗಿ ತೋಱಿದು,
ಎರಡೆಂಬೆನೆ ನಿರ್ಣಯಕ್ಕಱಿಸಲಿಲ್ಲ,
ಮೂಱೆಂಬೆನೆ ಮೂರ್ತಿಯಾಗಿ ತೋಱಿದು.
ಸಗುಣದಲಿಲ್ಲ, ನಿರ್ಗುಣದಲಿಲ್ಲ, ಸ್ಥೂಲದಲಲ್ಲ, ಸೂಕ್ಷ್ಮದಲಿಲ್ಲ.
ಕೂಡಲ ಚೆನ್ನಸಂಗಯ್ಯಾ ಕನ್ನಡಿಯೊಳಗಣ ಪ್ರತಿಬಿಂಬದಂತೆ
ತನ್ನೊಳಗೆ ತಾನಿದ್ದುದನಱಿಯದೆ ಭಿನ್ನದಲಱಿಸುವರೆ? । ೧೬೫ ।

೬೭೫

ನೇತ್ರಕಪಾಲದಲ್ಲಿ ನಿಂದ ಕಾಳಿಕೆ ಹೋದಡೆ
ಶ್ರೋತ್ರ ಕಪಾಲದಲ್ಲಿ ಸೊಪ್ಪು ಸೊಗಡು ಹೋದಡೆ,
ಮನಕಪಾಲದಲ್ಲಿ ಮನ[೧]ಗ್ಲಾ[೧]ನಿಗೊಳ್ಳದೆ, ಪ್ರಾಣಿಯ ಕೊಲ್ಲದೆ,
ಪ್ರಾಣಲಿಂಗವ ಬಲ್ಲವರು ಎನ್ನ ಪ್ರಾಣಲಿಂಗ ಕಾಣಾ,
ಕೂಡಲ ಚೆನ್ನಸಂಗಮದೇವಾ. । ೧೬೬ ।[೧೨೧೩]

೬೭೬

ಕಾಯವಿಲ್ಲದ ಸಂಸಾರ ಚೋದ್ಯ, ಸಂಸಾರವಿಲ್ಲದ ಕಾಯ ಚೋದ್ಯ,
ಕಾಯದೊಳಗೊಂದು ನಿರಾಳ ಚೋದ್ಯ,
ನಿರಾಳದೊಳಗೊಂದು ಕೂಡಲ ಚೆನ್ನಸಂಗಯ್ಯನೆಂಬ ಶರಣ
ಸಮ್ಯಕ್ ಚೋದ್ಯ, ಮಹಾಚೋದ್ಯ ! । ೧೬೭ ।[೧೨೨೨]

೬೭೭

ಅಱಿವಿನೆಡೆಯನಱುಹಿದೆನೆಂದರೆ
ಅಱಿವು ಮಱಹಿಂಗೊಳಗಾಯಿ[೨]ತ್ತಾಗಿ.[೨]
ಅಱಿವಿಂದ ಅಱಿದೆವೆಂಬ ಬಱಿಜ್ಞಾನಿಯ ಮಾತ ಕೇಳಲಾಗದು.
ಭಾವದಿಂದ ಭಾವಿಸಿದರೆ ಭಾವ ಭ್ರಾಂತಿಗೊಳಗಾಯಿತ್ತಾಗಿ
ಭಾವದಿಂದ ಭಾವಿಸಿಹೆನೆಂಬ ಭ್ರಮಿತರ ಮಾತ ಕೇಳಲಾಗದು.
ಜ್ಞಾನದಿಂದ ಅಱಿದೆನೆಂದರೆ ಜ್ಞಾನ ಅಜ್ಞಾನಕ್ಕೊಳಗಾಯಿತ್ತಾಗಿ
ಜ್ಞಾನದಿಂದ ಅಱಿದೆನೆಂಬ ಅಜ್ಞಾನಿಯ ಮಾತ ಕೇಳಲಾಗದು,
ಸುಜ್ಞಾನಭರಿತ ಕೂಡಲಚೆನ್ನಸಂಗಾ ನಿಮ್ಮ ಶರಣ. । ೧೬೮ ।[೧೨೮೪]

೧–೧ ಜ್ಞಾ (ಮೂ), ೨–೨ ತ್ತು (ಮೂ).

೬೭೮

ಆಯತಲಿಂಗದಲ್ಲಿ ಆಗಾಗಿ ಭಕ್ತನೆನಿಸೂದಯ್ಯ,
ಸ್ವಾಯತಲಿಂಗದಲ್ಲಿ ಆಗಾಗಿ ಯುಕ್ತನೆನಿಸೂದಯ್ಯ,
ಸಂಯೋಗ[೧]ಲಿಂಗ[೧]ದಲ್ಲಿ ಆಗಾಗಿ ಶರಣನೆನಿಸೂದಯ್ಯ,
ಪ್ರಾಣಕ್ಕೆ ಪ್ರಾಣವಾಗಿ ಉಭಯ ಪ್ರಾಣವೆಂದೆನಿಸೂದಯ್ಯ,
ಘನಕ್ಕೆ ಘನವಾದಲ್ಲಿ ಮನವೇದ್ಯನೆನಿಸೂದಯ್ಯ.
ಕೂಡಲ ಚೆನ್ನಸಂಗಯ್ಯಾ ಲಿಂಗಸರ್ವಾಂಗದಲ್ಲಿ
ಅನುಭಾವದಿಂದಧಿಕವೆನಿಸೂದಯ್ಯಾ. । ೧೬೯ ।[೧೦೦೧]

೬೭೯

ಬಸವ ಬಿಲ್ಲಾ[೨]ಳಾ[೨]ಗಿ, ಹೊಸಭಕ್ತಿ ಅಂಬಾಗಿ,
ಎಸೆದನಯ್ಯಾ ಆ ಲಿಂಗವನು ಗುಜಿಮಾಡಿ.
ಶಿಶು ಬಾಣವ ಕೊಂಡು, ಬಸುಱ ಮಧ್ಯವ ತಾಗಿ,
ಹೊಸದೆಶೆಗಳೆಲ್ಲಾ ಕಾಣಬಂದವಯ್ಯಾ!
ಭಸ್ಮದೆಣ್ಣೆಯ ಹೂಸಿ ಕೂಡಲ ಚೆನ್ನಸಂಗನಲ್ಲಿ
ಬಸವಪೂಯದ ಬಂದು ಆರೈದ ಲಿಂಗವನು. । ೧೭೦ ।[೪೯]

೬೮೦

ಎಲ್ಲವ ಕಳೆದು ಶರಣನಿಂಬುಮಾಡಿ,
ಅಂತರಂಗ ಬಹಿರಂಗದಲ್ಲಿಯೆ ಬಳಿಕ ತನ್ನ ಹಜಿ ತನ್ನ ಕೊಳಲು,
ಕೂಡಲ ಚೆನ್ನಸಂಗ ಲಿಂಗಸಂಗಿಯಾಗಿ. । ೧೭೧ ।[೧೩೫೨]

೬೮೧

ಜ್ಞಾನ ತನ್ನೊಳಗೆ, ಅಜ್ಞಾನ ತನ್ನೊಳಗೆ,
ಎರಡುವನಜೆದ ಸಹಜ ಸುಜ್ಞಾನಿ ಸುಸಂಗಿ ಲಿಂಗವಶಕನಾಗಿದ್ದು
ಪರಿಣಾಮಿ ಕೂಡಲ ಚೆನ್ನಸಂಗಾ, ನಿಮ್ಮ ಶರಣ. । ೧೭೨ ।[೧೨೧೦]

೧-೧ x (ಮೂ), ೨-೨ x (ಮೂ).

[1]ಶರಣನ ಐಕ್ಯಸ್ಥಲ[1] :

೬೮೨
ತ್ರಿವಿಧಕ್ಕೆ ರತಿಯಾಗಿ, ತ್ರಿವಿಧದ ಜನಿತವ ತಿಳಿದು,
ತ್ರಿವಿಧ ಕಣ್ದೆಱದು, ತ್ರಿವಿಧ ತ್ರಿವಿಧ ಗ್ರಹಿಸಿ, ತ್ರಿವಿಧ ಪಥವ ಮೀಱ
ತ್ರಿವಿಧ ನಿರ್ಣಯ ನಿಷ್ಪತ್ತಿ ಕೂಡಲಚೆನ್ನಸಂಗಾ, ನಿಮ್ಮ ಶರಣ. ।೧೭೩।[೧೨೯೧]

೬೮೩
ಗುರುಲಿಂಗ ಶಿವಲಿಂಗ ಜಂಗಮಲಿಂಗ ಪರೀಕ್ಷಿಸಿ, ತ್ರಿವಿಧ ತ್ರಿವಿಧ.
ಅನುಗ್ರಹ ಅರ್ಪಿತ ಅನುಭಾವದಿಂದ ಲಿಂಗ ತ್ರಿವಿಧ ತ್ರಿವಿಧ.
ಶಿಷ್ಯ ವ್ಯವಸ್ಥಾವೃತ್ತಿತನದಿಂದ ತ್ರಿವಿಧ ತ್ರಿವಿಧ.
ಲಿಂಗೋದಕ ಪಾದೋದಕ ಪರಿಣಾಮ ತ್ರಿವಿಧ ತ್ರಿವಿಧ.
ಆದ್ಯ ವೇದ್ಯ ಸಹಜ ಸಾಧಕತನದಿಂದ ತ್ರಿವಿಧ ತ್ರಿವಿಧ.
ಸ್ಥಾನಾಸ್ಥಾನಾಪ್ಯ ಪೂಜೆ ಜ್ಞಾನಗಮನದಿಂದ ತ್ರಿವಿಧ ತ್ರಿವಿಧ.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನೀನೊಲಿದ ಮಹಂತಂಗಿದು ಸಹಜ. ।೧೭೪।[೧೩೧೭]

೬೮೪
ದಿಟದಾಕಾಶ, ಘಟದಾಕಾಶ, ಮಠದಾಕಾಶ ತ್ರಯಂಗಳಲ್ಲಿ
ಹೋಗಲಿಕಸಾಧ್ಯ, ಹೊಱವಂಡಲಿಕಸಾಧ್ಯ.
ಚಿತ್ತಾಕಾಶಂ ಚಿದಾಕಾಶಂ ಆಕಾಶಂ ಚ ತೃತೀಯಕಂ ।
ದ್ವಾಭ್ಯಾಂ ಶೂನ್ಯತರಂ ವಿದ್ಧಿ ಚಿದಾಕಾಶಂ ವರಾನನೇ ॥
[2]ಎಂದುದಾಗಿ[2] ಆಕಾಶತ್ರಯ ಕೂಡಲ ಚೆನ್ನಸಂಗಾ
ನಿಮ್ಮ ಶರಣಂಗೆ ಸಾಧ್ಯ, ಉಳಿದವರಿಗಸಾಧ್ಯ. ।೧೭೫।[೧೩೪೩]

೬೮೫
ಲಿಂಗಸ್ಥಲ ಲಿಂಗಸ್ಥಲದಲ್ಲಿಯೇ ನಿಂದುದು,
ಜಂಗಮಸ್ಥಲ ಜಂಗಮಸ್ಥಲದಲ್ಲಿಯೇ ನಿಂದುದು,
ಪ್ರಸಾದಸ್ಥಲ ಪ್ರಸಾದಸ್ಥಲದಲ್ಲಿಯೇ ನಿಂದುದು.
ಈ ತ್ರಿವಿಧಸ್ಥಲ ತ್ರಿವಿಧದಲ್ಲಿಯೇ ನಿಂದುದು,
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ, ।೧೭೬।

೧-೧ ಶರಣನ ಐಕ್ಯ (ಮೂ), ೨-೨ x (ಮೂ).

೬೮೬

ಅಣುಕುಂಡಲ ನಾಗಬಂಧನವೆಂಬ ಸುಷುಮ್ನನಾಳದಿಂದ ಒದಗಿದ
ನಿರೂಪವನು ಒಸರಲೀಯದೆ ಕಟ್ಟಿದೆನೆಂದರೆ ಆ ಶಶಿಧರಂಗಳವಲ್ಲ.
ಒಡಲುಗೊಂಡರೆ ಒಸರುವುದು ಮಾಬುದೆ?
ಒಡಲಿಲ್ಲದಿದ್ದರೆ ಒಸರುವುದು ಮಾಬುದೆ?
ಒಸರಲೀಯದೆ ಕಟ್ಟಿದೆನೆಂಬ ಮೂರ್ಖರೆಲ್ಲಾ
ಭಂಗಬಟ್ಟು ನ ಸಿದ್ಧರಾಗಿ ಹೋದರಯ್ಯಾ.
ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ.
[೧]ಕೋಟ್ಯನುಕೋಟಿ[೧] ಕರ್ಮವ ಪೂಜಿಸುವ ಕರ್ಮಿಗಳೆತ್ತ ಬಲ್ಲ[೨]ರು,[೨] ಆ ಶರಣನ,
ಭಕ್ತಿ ಹಿಂದುಮುಂದಾದ ಮಹಾಲಿಂಗೈಕ್ಯನ, [೩]ನಿಲವ,[೩]
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಲಿಂಗೈಕ್ಯರ ನಿಲವ ಲಿಂಗೈಕ್ಯನೇ ಬಲ್ಲ. ।೧೭೭।[೧೩೨೦]

೬೮೭

ಎಲೆ ಗುರುಕಾರುಣ್ಯವಾಯಿತ್ತೆಂಬ ಅಣ್ಣಗಳು ನೀವು ಕೇಳಿರೆ.
ಶಿವನಾವಕಡೆ ಶಕ್ತಿಯಾವ ಕಡೆ?
ಉತ್ಪತ್ಯವ ಬಲ್ಲರೆ ನೀವು ಹೇಳಿರೆ.
ಶಕ್ತಿಯ ಮೇಲೆ ಸಾಹಿತ್ಯವ ಮಾಡಿಕೊಟ್ಟನಲಾ ನಿಮ್ಮ ಗುರು.
ಶಿವನ ಶಿವಂಗರ್ಪಿಸುವ ಪರಿಯೆಂತೊ?
ಶಿವ ನಷ್ಟ ಶಕ್ತಿ ನಷ್ಟ,
ಈ ಉಭಯಸ್ಥಳವನಱಿದಡೆ
ಕೂಡಲ ಚೆನ್ನಸಂಗಾ ನೀನೆಂಬೆನು. ।೧೭೮।[೧೩೧೩]

೬೮೮

ಆತ್ಮಸಂಗವಾದ ಬಳಿಕ ಅಱಿವ ಮೆಱೆಯಲುಂಟೆ?
ಉಪಮೆ ನಿಃಸ್ಥಳವಾದ ಬಳಿಕ ಶಬ್ದ ಸಂದಣಿ ಉಂಟೆ?
ಅಖಂಡಿತ ಲಿಂಗಕ್ಕೆ ಅಪ್ರಮಾಣ ಶರಣ,
ಸೀಮೆ ಸಂಬಂಧವೆಂಬ ಸಂಕಲ್ಪ ಉಂಟೆ?
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ ನಿಮ್ಮ
ಶರಣಂಗೆ ಭವವಿಲ್ಲ, ಬಂಧನವಿಲ್ಲ. ।೧೭೯।

೧-೧ ಕರ್ಮವ ಕೊಟ್ಟಾತ (ಮೂ), ೨-೨ ರಲ್ಲಾ (ಮೂ), ೩-೩ ನಿನ್ನ (ಮೂ).

೬೮೯

ಆಚಾರದಱಿವು ಆಗಮವ ಕೂಡಿಕೊಂಡಿಹುದು.
ಗುರುವಾಚಾರದ ನಿಷ್ಠೆ ಅಱಿವ ಕೂಡಿಕೊಂಡಿಹುದು.
ಲಿಂಗಾಚಾರದ ನಿಃಕ್ರೀಯ ಕೂಡಿಕೊಂಡಿಹುದು.
ಸಮಯಾಚಾರದ ಅಱಿವು ಸಂಬಂಧವ ಕೂಡಿಕೊಂಡಿಹುದು.
ಇಂತೀ, ಚತುರ್ವಿಧದೊಳಗಾವಂಗವೂ ಇಲ್ಲ.
ಕೂಡಲ ಚೆನ್ನಸಂಗನ ಶರಣರ ಪರಿ ಬೇಱೆ. । ೧೮೦ ।[೧೩೬೬]

೬೯೦

ಗುರುವಿನಲ್ಲಿ ಸದಾಚಾರಿ, ಲಿಂಗದಲ್ಲಿ ಶಿವಾಚಾರಿ,
ಜಂಗಮದಲ್ಲಿ ಸಮಯಾಚಾರಿ, ಪ್ರಸಾದದಲ್ಲಿ ಬ್ರಹ್ಮಚಾರಿ,
ಕೂಡಲಚೆನ್ನಸಂಗನ ಶರಣನು ಆಚಾರದಲ್ಲಿ ಅನಾಚಾರಿ. । ೧೮೧ ।[೨] [೩೭೨?]

೬೯೧

ಲಿಂಗವೆಂಬವಂಗೆ ಲಿಂಗವಿಲ್ಲ, ಜಂಗಮವೆಂಬವಂಗೆ ಜಂಗಮವಿಲ್ಲ,
ಪ್ರಸಾದವೆಂಬವಂಗೆ ಪ್ರಸಾದವಿಲ್ಲ.
ಲಿಂಗವೆನ್ನದವಂಗೆ ಲಿಂಗವುಂಟು, ಜಂಗಮವೆನ್ನದವಂಗೆ ಜಂಗಮವುಂಟು,
ಪ್ರಸಾದವೆನ್ನದವಂಗೆ ಪ್ರಸಾದವುಂಟು.
ಈ ತ್ರಿವಿಧ ಸ್ಥಳವನಱಿಯ ಬಲ್ಲರೆ
ಕೂಡಲ ಚೆನ್ನಸಂಗ ತಾನೇವುಂಟು. । ೧೮೨ ।[೧೧೧೫]

೬೯೨

ಲಿಂಗ ಲಿಂಗವೆಂಬ[೩]ವ[೩] ಲಿಂಗ ಸೂತಕಿಯಯ್ಯ,
ಜಂಗಮ ಜಂಗಮವೆಂಬ[೩]ವ[೩] ಜಂಗಮಸೂತಕಿಯಯ್ಯಾ,
ಪ್ರಸಾದ ಪ್ರಸಾದವೆಂಬ[೩]ವ[೩] ಪ್ರಸಾದ ಸೂತಕಿಯಯ್ಯ.
ಈ ತ್ರಿವಿಧ ಸೂತಕಿಯ ಮಾತ ಕೇಳಲಾಗದು.
ಸರ್ವಸೂತಕ ನಿರ್ವಾಹವಾಯಿತ್ತು,
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. । ೧೮೧ ।[೧೨೪೦]

೧–೧ x (ಮೂ). ೨. ಭಕ್ತ ಸ್ಥಲದ ೧೨೦ನೆಯ ವಚನದೊಂದಿಗೆ ಈ ವಚನವನ್ನು ಹೋಲಿಸಿರಿ (ಸಂ). ೩–೩ x(ಮೂ).

೬೯೩

ಓಲೆಯನಿಕ್ಕಿದ ಬಾಲೆಯ ಓಲೆಗಳೆಯದಿದೆಂತೊ ?
ಓಲೆಯಿದ್ದು ಓಗಾಯಿತ್ತವಾಯಿತ್ತೆಲ್ಲರಿಗೆಯೂ.
ಓಲೆಯೂ ಹೋಯಿತ್ತೆನಗೆ, ಬಾಲೆಯೂ ಹೋಯಿತ್ತೆನಗೆ,
ಓಲೆಯ ಬಾಲೆಯ ಕೀಲ ಬಲ್ಲವರ
ಕೂಡಲ ಚೆನ್ನಸಂಗನೆಂಬೆನು. । ೧೮೪ ।[೧೨೯೨]

೬೯೪

ಸ್ಥಲವಿಡಿದು ಸರ್ವದಲಾಯತ[೧]ವಾ[೧]ಗಿ.
ಸಹಜವಿಡಿದು ನಿಜವಳವಟ್ಟುದಾಗಿ,
ಅದಿದೆಂದೆನಲುಂಟೆ? ರೂಪವಲ್ಲ ನಿರೂಪವಲ್ಲ,
ಕೂಡಲ ಚೆನ್ನಸಂಗಾ ನಿರ್ಗಮನವಾದ
ಕಾಯವೆ ಕೈಲಾಸ. । ೬೯೫ ।[೧೩೩೯]

೬೯೫

ಲಿಂಗ ಲಿಂಗವೆಂದಲ್ಲಿಯೇ ತಪ್ಪಿತ್ತು,
ಜಂಗಮ ಜಂಗಮವೆಂದಲ್ಲಿಯೇ ತಪ್ಪಿತ್ತು,
ಪ್ರಸಾದ ಪ್ರಸಾದವೆಂದಲ್ಲಿಯೇ ತಪ್ಪಿತ್ತು.
ಈ ತ್ರಿವಿಧದ ನಿಕ್ಷೇಪದ ಸಂಚವ ಬಲ್ಲರೆ
ಈ ಲೋಕದಲ್ಲಿ ಇದ್ದರೇನು ? ಆ ಲೋಕಕ್ಕೆ ಹೋದರೇನು ?
ಆ ಲೋಕದಿಂದ ಈ ಲೋಕಕ್ಕೆ ಬಂದರೇನು ?
ಹದಿನಾಲ್ಕು ಭುವನದೊಳಗಿದ್ದ ನಿಸ್ಸಾರಮಂ ಬಿಟ್ಟು
ಲಿಂಗಸಾರಾಯ ಭೋಗಿಯಾಗಿ ಕೂಡಲ ಚೆನ್ನಸಂಗನಲ್ಲಿ
ನಿರ್ಲೇಪ[೨]ನಾ[೨]ದ ಶರಣ. । ೧೮೬ ।[೧೨೯೩]

೬೯೬

ಸಕಳ ನಿಷ್ಕಳನಯ್ಯಾ ನಿಷ್ಕಳ ಸಕಳನಯ್ಯಾ,
ಸಕಳನಾಗಿ ಸಂಸಾರಿಯಲ್ಲ, ನಿಷ್ಕಳನಾಗಿ ವೈರಾಗಿಯಲ್ಲ.
ಸಂಸಾರಿಯಲ್ಲದ ಸಂಗ, ವೈರಾಗಿಯಲ್ಲದ ನಿಸ್ಸಂಗ,
ಸಂಗದಿಂದ ಮಹಂತಿಕೆಯನೆಯ್ದಿಹನಾಗಿ.
ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ
ಕೂಡಲ ಚೆನ್ನಸಂಗನೆಂತಿದ್ದಡಂತೆ ಕ್ಷೀಣನಲ್ಲ. । ೧೮೭ ।[೧೩೪೧]

೧-೧ ನಾ (ಮೂ), ೨-೨ ವಾ (ಮೂ).

೬೯೭

ಅಜಾಂಡ ಮೊದಲಾದ ತ್ರಿಜಾಂಡದೊಳಗೆ ಅಜಾಂಡ ಕೋಟಿಗಳು,
ಇಂಥ ನವಕೋಟಿ ಬ್ರಹ್ಮರೆಲ್ಲರೂ ಹರ ನಿಮ್ಮ ಚರಣವನಱಿಯರು.
ಎಲ್ಲಾ ಭವಭಾರಕರಾಗಿ, ಶಿವ ನಿಮ್ಮ ಚರಣವನಱಿಯರು.
ಜಡೆಯ ಕಟ್ಟಿ ಕರ್ಣಕುಂಡಲವನಿಕ್ಕಿ ನಂದಿಯನೇಱಿದ ರುದ್ರರು,
ಇಂಥ ನವಕೋಟಿ ರುದ್ರರೆಲ್ಲಾ ಹರ ನಿಮ್ಮ ಚರಣವನಱಿಯರು,
ಎಲ್ಲಾ ಭವಭಾರಕರಾಗಿ,
ಅಷ್ಟವೃಕ್ಷಫಲದೊಳು ಸ್ಥೂಲಸೂಕ್ಷ್ಮವಾಗಿ,
ಕೂಡಲ ಚೆನ್ನಸಂಗಾ ನಿಮ್ಮ ಶರಣ
ಅನಲನಾಹುತಿಯ ಮೇಳದಂತಿಪ್ಪ. ।೧೮೮।[೧೩೦೬]

೬೯೮

ಉದ್ಭ್ರಮಿಯಲ್ಲ, ಉದ್ದೇಶಿಯಲ್ಲ, ನಿದ್ರೆಗೆಟ್ಟವನು.
ನಿಜವನೆ ಬೆಳಗುತ್ತಿಪ್ಪ ನಿಶ್ಚಿಂತ ಶರಣ.
ಚಿಂತೆಗೆಟ್ಟು ಸ್ಥಿರವಾಗಿ ನಿಂದ, ಸೀಮೆಯ ಕೆಡಿಸಿ ನಿಸ್ಸೀಮನಾದ,
ಬೋಧನೆಯ ಕೆಡಿಸಿ ನಿರ್ಬೋಧಿಯಾದ,
ಕಾಯವ ಕೆಡಿಸಿ ಕರ್ಮಾದಿ ಗುಣರಹಿತನಾದ,
ಆಶೆಯ ಕೆಡಿಸಿ ನಿರಾಶ್ರಯನಾಗಿ ತನ್ನ ಮಱೆದನಾಗಿ,
ಇದು ಕಾರಣ, ಕೂಡಲ ಚೆನ್ನಸಂಗಾ
ನಿಮ್ಮ ಶರಣಂಗೆ ಆರೂ ಸರಿಯಿಲ್ಲ. ।೧೮೯।[೧೨೮೭]

೬೯೯

ಕರ್ತೃತ್ವವಿಲ್ಲಾಗಿ ಕರ್ಮವಿಲ್ಲ, ಕರ್ಮವಿಲ್ಲಾಗಿ ಜನನವಿಲ್ಲ,
ಜನನವಿಲ್ಲಾಗಿ ದೇಹವಿಲ್ಲ, ದೇಹವಿಲ್ಲಾಗಿ ಭೂತಾತ್ಮ ಪವಿತ್ರ
ಕರಣಾದಿ ಗುಣಂಗಳು ಮುನ್ನಿಲ್ಲ, ಹಿಂದಣ ಸ್ಥಿತಿಯಿಲ್ಲ, ಮುಂದಣ ಲಯವಿಲ್ಲ,
ಆದಿ ಮಧ್ಯ ಅವಸಾನವಿಲ್ಲ,
ಬಿಚ್ಚಿ ಬೇಱಿಲ್ಲ, ಬೆರಸಿವೊಂದಲ್ಲ, ಉಪಮಾತೀತವೆಂಬೆ.
ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣನು ನುಡಿಗಡಣವಿಲ್ಲದ ಮುಗ್ಧನು. ।೧೯೦।[೧೩೫೧ ।

೭೦೦

ಹತ್ತಱಲೊಂದ ಕಳೆದು ಅಱುವತ್ತಾಯಿತ್ತು.
ಸಪ್ತಕ ಸಾಧಿಸಲಾರವಶವಲ್ಲ,

ಶಶಿ ಸೂರ್ಯರ ವಶವಲ್ಲ, ದಶಕೋಟಿಯೆಯ್ದೆ ಅಳಿದುದು.
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಹತ್ತಱ ಮೇಲೆ ಹನ್ನೊಂದಱಂತಿದ್ದೆನಯ್ಯಾ. ।೧೯೧।

೭೦೧
ಯೋಗಿ ಎನಲಿಲ್ಲ, ಭೋಗಿ ಎನಲಿಲ್ಲ,
ಕಾಮಿ ಎನಲಿಲ್ಲಾಗಿ, ನಿಃಕಾಮಿಯೆನಲಿಲ್ಲಾಗಿ,
ತನ್ನ ಪರಿ ಬೇಱೆ ಕಾಣಿರಯ್ಯ.
ದೇವ ಎನಲಿಲ್ಲ, ಭಕ್ತ ಎನಲಿಲ್ಲ,
ಭಾವವೆನಲಿಲ್ಲ, ನಿರ್ಭಾವವೆನಲಿಲ್ಲಾಗಿ,
ತನ್ನ ಪರಿ ಬೇಱೆ ಕಾಣಿರಣ್ಣಾ.
ಭವಭಯಂಗಳೆಲ್ಲವ ಪರಿಹರಿಸಿ ಕಳೆದನು,
ನಿಭ್ರಾಂತಿ ನಿರುತನು, ನಿಮ್ಮ ಶರಣ,
ಅಪ್ರತಿಗೆ ಪ್ರತಿವುಂಟೆ? ಕೂಡಲ ಚೆನ್ನಸಂಗಮದೇವಾ. ।೧೯೨।

೭೦೨
ಭಜಿಸಲಿಲ್ಲ, ಗತಿಮತಿ ಫಲದಾಯಕ ವಿರಹಿತನಾಗಿ,
ಉಂಟೆಂಬ ಕುಳವಿಲ್ಲ, ಇಲ್ಲೆಂಬ ನಿಸ್ಸಾರನಲ್ಲ,
ಕೂಡಲ ಚೆನ್ನಸಂಗಾ ನಿಮ್ಮ ಶರಣ ಲಿಂಗೈಕ್ಯನಾದ. ।೧೯೩।[1] [೧೩೫೫]

❖❖

[1] + ಶ್ರೀ ಗುರುಶಾಂತಲಿಂಗಾಯಂ ನಮಃ ॥ ಶರಣನ ಅರುವಿಧ ಸ್ಥಳಂ ಸಮಾಪ್ತಾ॥ ಮಂಗಳಮಹಾ ಶ್ರೀ ಶ್ರೀ ಶ್ರೀ (ಮೂ).

ಐಕ್ಯಸ್ಥಲ

[೧]ಐಕ್ಯನ ಜ್ಞಾನಿಸ್ಥಲ:[೧]

೭೦೩

ಭಕ್ತನಾದರೆ ಭಕ್ತಿಸ್ಥಲವನಱಿದು ಅಱಿಯದಂತಿರಬೇಕು,
ಮಾಹೇಶ್ವರನಾದರೆ ನಿಷ್ಠೆಯ ಕುಳವನಱಿದು ಅಱಿಯದಂತಿರಬೇಕು,
ಪ್ರಸಾದಿಯಾದರೆ ಪ್ರಸಾದಸ್ಥಲವನಱಿದು ಅಱಿಯದಂತಿರಬೇಕು,
ಪ್ರಾಣಲಿಂಗಿಯಾದರೆ ಸ್ಥಿತಿಗತಿಯನಱಿದು ಅಱಿಯದಂತಿರಬೇಕು,
ಶರಣನಾದರೆ ಸತಿಪತಿಯೆಂದಱಿದು ಅಱಿಯದಂತಿರಬೇಕು,
ಐಕ್ಯನಾದರೆ ತಾನು ತಾನಾಗಿ ಆಗದಂತಿರಬೇಕು.
ಇಂತೀ ಷಡುಸ್ಥಲವನಱಿಯದೆ ಮಾಡಿದೆನೆಂಬ
ಲಜ್ಜೆಗೆಟ್ಟ ಲಾಂಛನಧಾರಿಯನೇನೆಂಬೆ,
ಕೂಡಲ ಚೆನ್ನಸಂಗಮದೇವಾ. ।೧। [೧೩೬೮]

೭೦೪

ಲಾಂಛನದೆಡೆಯಲ್ಲಿ ಹುಸಿಯ ಸಂಪಾದಿಸುವವ ಭಕ್ತನಲ್ಲ,
ಹುರುಡುವಿಡಿದಾತ ಮಾಹೇಶ್ವರನಲ್ಲ,
ಪದಪದಾರ್ಥನಾಸ್ತಿ ಪ್ರಸಾದಿಗೆ, [೨]ಖ[೨]ತಿನಾಸ್ತಿ ಪ್ರಾಣಲಿಂಗಿಗೆ,
ಶರಣಂಗೆ ಸತಿನಾಸ್ತಿ, ಐಕ್ಯಂಗೆ ಪತಿನಾಸ್ತಿ.
ಇಂತೀ ಷಡುಸ್ಥಲಂಗಳ ಸಕೀಲಕ ಸಂಯೋಗ ಸಂಬಂಧ[೩][ವು].[೩]
ಕೂಡಲ ಚೆನ್ನಸಂಗಮದೇವಾ ಸಾಧಕರಳವೆ? ಅಲ್ಲ.
ಸಹಜದ ಒಡೆಯರಿಗಲ್ಲದೆ. ।೨। [೧೩೬೦]

೧-೧ ಐಕ್ಯಸ್ಥಳ ॥ ಆಜ್ಞಾನಿ ॥(ಮೂ), ೨-೨ ಪ (ಮೂ), ೩-೩ ವ (ಮೂ).

೭೦೫

ಭಕ್ತನಾದರೆ ಭವಂ ನಾಸ್ತಿಯಾಗಿರಬೇಕು,
ಶರಣನಾದರೆ ಭಯಂ ನಾಸ್ತಿಯಾಗಿರಬೇಕು,
ಲಿಂಗೈಕ್ಯನಾದರೆ ಲಯವನಱಿಯದಿರಬೇಕು.
ಈ ತ್ರಿವಿಧನಾಸ್ತಿಯಾಗಬೇಕು, ಕೂಡಲ ಚೆನ್ನಸಂಗಯ್ಯಾ. । ೩ । [೭೮೧]

೭೦೬

ಹೊನ್ನುಳ್ಳಾತ ಭಕ್ತನಲ್ಲ, ಹೆಣ್ಣುಳ್ಳಾತ ಶರಣನಲ್ಲ, ಮಣ್ಣುಳ್ಳಾತ ಲಿಂಗೈಕ್ಯನಲ್ಲ.
ಹೊನ್ನು ಜೀವ, ಹೆಣ್ಣು ಪ್ರಾಣ, ಮಣ್ಣು ದೇಹ.
ಹೊನ್ನು ಭವ, [೧]ಹೆಣ್ಣು ಭವಿ,[೧] ಮಣ್ಣು ಹಮ್ಮು.
ಇಂತೀ ತ್ರಿವಿಧಸ್ಥಲವಪೂರ್ವ ಕೂಡಲ ಚೆನ್ನಸಂಗಯ್ಯನಲ್ಲಿ. । ೪ । [೧೩೬೧]

೭೦೭

ಲಿಂಗನಿಷ್ಠೆ ಪೂಜೆಯಲ್ಲಿ ಬೀಯವಾಯಿತ್ತು,
ಜಂಗಮನಿಷ್ಠೆ ಅನುಸರಣೆಯಲ್ಲಿ ಬೀಯವಾಯಿತ್ತು,
ಪ್ರಸಾದನಿಷ್ಠೆ ಬೆರಕೆಯಲ್ಲಿ ಬೀಯವಾಯಿತ್ತು,
ಇಂತೊಂದರ ನಿಷ್ಠೆ ಅಂದಂದಿಗೆ ಬೀಯವಾಯಿತ್ತು,
ಕೂಡಲ ಚೆನ್ನಸಂಗಯ್ಯನ ಭಕ್ತಿ ಜಗವನಾಳಿಗೊಂಡಿತ್ತು. । ೫ ।

೭೦೮

ಪವನದ ಕಡೆಯಿಂದ ಪರಿಮಳ ಬೀಸರವಾಯಿತ್ತು,
ನುಡಿಗಡಣದಿಂದ ಅನುಭಾವ ಬೀಸರವಾಯಿತ್ತು,
ಮಾಟದ ಬೆರಕೆಯಿಂದ ಭಕ್ತಿ ಬೀಸರವಾಯಿತ್ತು,
ಕೂಟದ ಬೆರಕೆಯಿಂದ ಅಱಿವು ಬೀಸರವಾಯಿತ್ತು.
ಸೂಕ್ಷ್ಮ ಶಿವಪದವು ಸಮಾನ್ಯರಿಗಳವೆ ?
ಕೂಡಲ ಚೆನ್ನ ಸಂಗಯ್ಯನ ಶರಣರಿಗಲ್ಲದಿಲ್ಲ. । ೬ । [೧೧೧೩]

೧–೧ ಈ ಎರಡು ವಾಕ್ಯಗಳು 'ಮೂ' ಪ್ರತಿಯಲ್ಲಿ ಹಿಂದು ಮುಂದಾಗಿವೆ (ಸಂ).

೨೦೯

ವೇದ್ಯರ ನುಡಿಗಡಣವಿಲ್ಲದವರು ನಡೆವ[೧][ರೆ][೧]ಡಹರೆ ?
ಅಹಿತರೆ ವೃಷಭಧ್ವಜರು ?
ಪ್ರಕೃತಿ ಪ್ರಾಣಿಗಳಿಗೆಲ್ಲಿಯದು ಭಕ್ತಿ?
ಬಾಣನಿರ್ವಾಣ ಕೂಡಲ ಚೆನ್ನಸಂಗ ಲಿಂಗೈಕ್ಯವು. । ೭ ।

೨೧೦

ಎಂಜಲು ಮಾತ ನುಡಿವ ರಂಜಕರೆಲ್ಲರು ಮಿಗೆ ಮಿಗೆ ಮೀಸಲು ತಾವೆತ್ತ ಬಲ್ಲರು?
ಮೀಸಲು ಎಂಜಲಹುದೆ? ಎಂಜಲು ಮೀಸಲಹುದೆ?
ಮಾತಿನ ಬಣಬೆಯ ಮೇದ ಪಶುಪ್ರಾಣಿಯಂತೆ ಎಂಜಲು ಮಾತನೆ ನುಡಿಯುತ್ತಿಹರು,
ಲಿಂಗ ಸಕೀಲಕ ಸಂಯೋಗದ ವರ್ಮಸ್ಥಳವನವರೆತ್ತ ಬಲ್ಲರು!
ಕೂಡಲ ಚೆನ್ನಸಂಗಯ್ಯಾ,
ಉಪದೇಶ ಸೂತಕಿ[೨]ಗಳೆಲ್ಲರೂ[೨] ರೌರವನರಕಿಗಳು. । ೮ । [೧೩೮೯]

೨೧೧

ಪುರಾತರ ವಚನವ ಕಲಿತು ಹೇಳುವವರನೇನೆಂಬೆ !
ಅದ ಕುಳ್ಳಿದ್ದು ಕೇಳುವವರನೇನೆಂಬೆ! ಅದಕ್ಕೆ ಮನ ನಾಚದವರನೇನೆಂಬೆ!
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ ಶಬ್ದನಷ್ಟವಾಗದವರನೇನೆಂಬೆ! । ೯ ।

೨೧೨

ಒಡಲುಗೊಂಡು ಒಡಲುವಿಡಿಯದೆ ಒಡಲಿಲ್ಲದ ನಿಜವ ಬೆರಸೆಲವೊ!
ನರರು ಸುರರು ಕಿನ್ನರರು ಖೇಚರರು
ಪರಮಪದವಿಯನರಿಯದ ಕಾರಣ ಭವದೊಳಗೆ ಸಿಲುಕಿದರು.
ಕೂಡಲ ಚೆನ್ನಸಂಗನ ನಿಜರೂಪನೆ ಬೆರಸಿರೊ ಮುಮುಕ್ಷುಗಳಿರಾ. । ೧೦ ।[೧೩೯೦]

೨೧೩

ಧರಣಿಜರೆಲ್ಲರೂ ಭಕ್ತರೇ ಆಗಿ, ಪಾಷಾಣಂಗಳೆಲ್ಲವೂ ಲಿಂಗಂಗಳಾಗಿ,
ಆದಿಸೂತಕವೇದ್ಯನು ಭಕ್ತನು, [೩]ವಿರಕ್ತನು,[೩] ಮುಕ್ತನೆಂದೆನಿಸುವ.
ತ್ರಿವಿಧಸೂತಕವ ಕಳೆದುಳಿದಲ್ಲದೆ
ಕೂಡಲ ಚೆನ್ನಸಂಗನ ಹೊದ್ದಬಾರದು. । ೧೧ ।

೧–೧ ರೇ (ಮೂ), ೨–೨ x (ಮೂ), ೩–೩ ವಿಕ್ತನೋ (ಮೂ).

೭೧೪

ಲಿಂಗಮುಖವಱಿದಂಗೆ ಅಂಗವೆಂಬುದಿಲ್ಲ,
ಜಂಗಮಮುಖವಱಿದಂಗೆ ಸಂಸಾರವೆಂಬುದಿಲ್ಲ,
ಪ್ರಸಾದಮುಖವಱಿದಂಗೆ ಇಹಪರವೆಂಬುದಿಲ್ಲ.
ಈ ತ್ರಿವಿಧವೊಂದೆಂದಱಿದಂಗೆ ಮುಂದೇನೂ ಇಲ್ಲ,
ಈ ತ್ರಿವಿಧ ನೆಲೆಯ ಶ್ರುತಿಸ್ಮೃತಿಗಳಱಿಯವು,
ಕೂಡಲ ಚೆನ್ನಸಂಗಾ ನಿಮ್ಮ ಶರಣ ಬಲ್ಲ. । ೭೧೫ ।[೫೫೧]

೭೧೫

ಕಾಯದೊಳಗೆ ಕಾಯವಾಗಿರ್ದೆಯಲ್ಲಾ ಹಂಸಾ,
ಸಂಸಾರ ಮಾಯಾಪಾಶವ ಬಿಡಲಾಱದೆ ಡಿಂಭವ ನಚ್ಚಿ ಕೆಟ್ಟೆಯಲ್ಲಾ ಹಂಸಾ.
ಜೀವ ಶೂನ್ಯವಾಗಿ
ಕೂಡಲ ಚೆನ್ನಸಂಗನ ಶರಣರು ಹೋಹರು. । ೧೩ । [೪೬೦]

೭೧೬

ಭಕ್ತಿ ಭಕ್ತಿಯ ಸುಖವ ಕಾಣಬಹುದಲ್ಲದೆ,
ಲಿಂಗ ಲಿಂಗದ ಸುಖವ ಕಾಣಬಾರದು,
ಲಿಂಗ ಲಿಂಗದ ಸುಖವ ಕಾಣಬಹುದಲ್ಲದೆ,
ಜಂಗಮ ಜಂಗಮದ ಸುಖವ ಕಾಣಬಾರದು.
ಜಂಗಮ ಜಂಗಮದ ಸುಖವ ಕಾಣಬಹುದಲ್ಲದೆ,
ನಿಜ ನಿಜದ ಸುಖವ ಕಾಣಬಾರದು.
ನಿಜ ನಿಜದ ಸುಖವ ಕಾಣಬಹುದಲ್ಲದೆ,
ನಿಷ್ಪತಿ ನಿಷ್ಪತಿಯ ಸುಖವ ಕಾಣಬಾರದು.
ನಿಷ್ಪತಿ ನಿಷ್ಪತಿಯ ಸುಖವ ಕಾಣಬಹುದಲ್ಲದೆ,
ನಿಜೈಕ್ಯ ನಿಜೈಕ್ಯದ ಸುಖವ ಕಾಣಬಾರದು.
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ನಿರ್ನಾಮಿಗಲ್ಲದೆ ನಿರ್ನಾಮದ ಸುಖವ ಕಾಣಬಾರದು. । ೧೪ । [೧೪೧೮]

೭೧೭

ತನು ಮನ ಧನ ನಿವೇದಿಸಿದಲ್ಲಿ ಭಕ್ತನೆಂಬೆನು,
ಅರ್ಥಪ್ರಾಣಾಭಿಮಾನವ ನಿವೇದಿಸಿದಲ್ಲಿ ಪ್ರಸಾದಿಗಳೆಂಬೆನು,
ಹೊನ್ನು ಹೆಣ್ಣು ಮಣ್ಣು ನಿವೇದಿಸಿದಲ್ಲಿ ಶರಣರೆಂಬೆನು,

ನವಸ್ಥಳವನರ್ಪಿಸಿದರೇನಯ್ಯ? ನವಬ್ರಹ್ಮರ ಕುಳ ತಿಳಿಯದನ್ನಕ್ಕ!
ನವಬ್ರಹ್ಮರ ಕುಳನಷ್ಟವಾದರೆ.
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯರೆಂಬೆನು. ।೧೫। [೧೪೦೧]

೭೧೮

ಕಾಯದಲ್ಲಿ ಲಿಂಗೈಕ್ಯವೇ? ಅಲ್ಲ. ಜೀವದಲ್ಲಿ ಲಿಂಗೈಕ್ಯವೇ? ಅಲ್ಲ.
ಭಾವದಲ್ಲಿ ಲಿಂಗೈಕ್ಯವೇ? ಅಲ್ಲ.
ಇಂತೀ ತ್ರಿವಿಧಲಿಂಗೈಕ್ಯವೇ? ಅಲ್ಲ. ಮತ್ತೆಯೂ ಲಿಂಗೈಕ್ಯವೇ ಬೇಕು,
ಕೂಡಲ ಚೆನ್ನಸಂಗಮದೇವಾ. ।೧೬।

೭೧೯

ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆಂದೆನಬೇಡ,
ಮುಂದಣ ಫಲದೊಳಗಱಿಸಿಕೊ!
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆಂದೆನಬೇಡ,
ಮುಂದಣ ಬಣ್ಣದೊಳಗಱಿಸಿಕೋ!
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆಂದೆನಬೇಡ,
ಮುಂದಣ ಅಗ್ನಿಯೊಳಗಱಿಸಿಕೊ!
ಲಿಂಗದೊಳಗೆ ಪ್ರಾಣ, ಪ್ರಾಣದೊಳಗೆ ಲಿಂಗ.
ಇದು ಕಾರಣ ಕೂಡಲ ಚೆನ್ನಸಂಗನ ಶರಣರ
ಪಾದ ಪ್ರತಿಬಿಂಬದೊಳಗಱಿಸಿಕೊ
ಸಂಗನಬಸವಣ್ಣ, ಬಸವಣ್ಣ.. ।೧೭। [೯೭೪]

೭೨೦

ಕ್ಷತ್ರಿಯ ಮಂತ್ರಿ ಜಗಕ್ಕೆ ರಾಜಾಂಗವೆ?
ಸಪ್ತಾಂಗ ಸನ್ನಾಹವೆಂಬುದು ಸಂಭ್ರಮ ಸಹಿತ
ಉನ್ಮದನ ಮೋಹಿನಿಗಳೆಲ್ಲಾ ಅನುದಪ್ಪಿಹೋದರಾಗಿ
ಅಂತಃಕರಣ ಘನವೇದಿಸಿ ಶಬ್ದನಿಷ್ಪತಿಗಳಿಗಲ್ಲದೆ
ಸಹಭೋಜನವಳವಡದು ಕೂಡಲ ಚೆನ್ನಸಂಗಮದೇವಾ. ।೧೮।

೭೨೧

ಕ್ರಮವಜೆದು, ಭ್ರಮೆತಿಳಿದು ಅಮಳಸಂಯೋಗದಲ್ಲಿ ಸಮನಿಸೂದು.
'ಏಕಮೇವ ನ ದ್ವಿತೀಯ' ಎಂಬುದನಜೆದು ಸಮನಿಸೂದು.

ಶಿವಾತ್ಮಕೋ ಲಿಂಗದೇಹೀ ಅಂಗಾಚಾರೇಣ ಲೌಕಿಕಃ ।
ಸರ್ವಂ ಲಿಂಗಮಯಂ ಪ್ರೋಕ್ತಂ ಲಿಂಗೇನ ಸಹವರ್ತತೇ ॥
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಸಹಭೋಜನವ ಸಮನಿಸೂದು. । ೧೯ । [೧೩೮೩]

೭೨೨
ಭವಿಯ ತಂದು ಭಕ್ತನ ಮಾಡುವುದೆ ಅನಾಚಾರ,
ಭಕ್ತನ ತಂದು ಭವಿಯ ಮಾಡುವುದೆ ಆಚಾರ.
ಭವಿ ಮಾಡಿದ ಓಗರವ ಭಕ್ತ ನೋಡಿದರೆ ನಾಯಕ ನರಕ.
ಆ ಭಕ್ತ ಭವಿಯಹನಲ್ಲದೆ ಆ ಭವಿ ಭಕ್ತನಾಗಲಱಿಯನಾಗಿ.
ಈ ಕ್ರಮವಱಿದು ಮಾಡೂದು
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು. । ೨೦ । [೧೧೭೯]

೭೨೩
ಹಸಿವಱತಲ್ಲದೆ ಪ್ರಸಾದವೇದಿಯಲ್ಲ,
ತೃಷೆಯಱತಲ್ಲದೆ ಪಾದೋದಕವೇದಿಯಲ್ಲ,
ನಿದ್ರೆಯಱತಲ್ಲದೆ ಭವವಿರಹಿತನಲ್ಲ.
ಅನಲ ಪವನದಿಂದಲ್ಲದೆ ಜನನ ಮರಣರಹಿತನಲ್ಲಯ್ಯ.
ಇದು ಕಾರಣ, ಕೂಡಲ ಚೆನ್ನಸಂಗಯ್ಯನ
ಲಿಂಗೈಕ್ಯವೆಲ್ಲರಿಗೆಲ್ಲಿಯದು? । ೨೧ । [೧೩೫೭]

೭೨೪
ಅಂಗವಿಡಿದು ಲಿಂಗಮಾಹೇಶ್ವರನೆನಿಸಿಕೊಂಬುದಯ್ಯಾ,
ಲಿಂಗವಿಡಿದು ಲಿಂಗೈಕ್ಯನೆನಿಸಿಕೊಂಬುದಯ್ಯಾ,
ಲಿಂಗವಿಡಿದು ಲಿಂಗಪ್ರಾಣಿಯೆನಿಸಿಕೊಂಬುದಯ್ಯಾ.
ಅಱಿವಱತು ಕ್ರಿಯಾನುಭಾವವಿಡಿದು ಮೀಱಿ
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವೆಂದೆನಿಸಿಕೊಂಬುದಯ್ಯಾ. ।೨೨। [೧೪೩೬]

೭೨೫
ಲಿಂಗಸ್ಥಲನಾಸ್ತಿಯಾದಲ್ಲದೆ ಭಕ್ತನಲ್ಲ,
ಜಂಗಮಸ್ಥಲನಾಸ್ತಿಯಾದಲ್ಲದೆ ಶರಣನಲ್ಲ,
ಗುರುಸ್ಥಲನಾಸ್ತಿಯಾದಲ್ಲದೆ ಐಕ್ಯನಲ್ಲ,

ಇದು ಕಾರಣ ಕೂಡಲ ಚೆನ್ನಸಂಗಮದೇವಾ
ಈ ತ್ರಿವಿಧನಾಸ್ತಿಯಾಗಿ ಭಕ್ತಿಕೆಟ್ಟು
ಭವಿಯಾದಲ್ಲದೆ ಲಿಂಗೈಕ್ಯನಲ್ಲ. । ೨೩ । [೧೩೫೮]

೭೨೬

ಅಂಜಿಕೆಯುಳ್ಳನ್ನಕ್ಕ ಪ್ರಾಣಲಿಂಗ ಸಂಬಂಧಿಯಲ್ಲ,
ಸೂತಕವುಳ್ಳನ್ನಕ್ಕ ಶರಣನಲ್ಲ, ಎಂಜಲುಳ್ಳನ್ನಕ್ಕ ಪ್ರಸಾದಿಯಲ್ಲ.
ಈ ತ್ರಿವಿಧವುಳ್ಳನ್ನಕ್ಕ ಲಿಂಗೈಕ್ಯನಲ್ಲ.
ಕೂಡಲ ಚೆನ್ನಸಂಗಮದೇವಾ. । ೨೪ । [೧೩೫೯]

೭೨೭

ಅಂಗದ ಗುಣದಿಂದ ಲಿಂಗೈಕ್ಯವೆಂಬರು,
ಲಿಂಗದ ಗುಣದಿಂದ ಲಿಂಗೈಕ್ಯವಿಲ್ಲ ನೋಡಾ.
ಭಾವಾದ್ವೈತಂ ಪರಹಿತ ಕೂಡಲ ಚೆನ್ನಸಂಗಾ ಲಿಂಗೈಕ್ಯವು. । ೨೫ ।

೭೨೮

ಆಚಾರವಂಗದ ಮೇಲೆ ಆಯತವಾದುದೆ ಇಷ್ಟಲಿಂಗ,
ಇಷ್ಟಲಿಂಗವಿಡಿದುದೆ ಪ್ರಾಣಲಿಂಗಸ್ವಾಯತ.
ಪ್ರಾಣಲಿಂಗ ಉದಯಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು,
ಈ ಭೇದವ ಭೇದಿಸಬಲ್ಲರೆ ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯವು. । ೨೬ । [೮೭೩]

೭೨೯

ಕಾಯದ ಕೊನೆಯ ಮೊನೆಯ ಮೇಲಣ ಲಿಂಗವ ಪ್ರಾಣಲಿಂಗವೆಂದು ಪೂಜಿಸುವರು,
ಜೀವದ ಕೊನೆಯ ಮೊನೆಯ ಮೇಲಣ ಲಿಂಗವ ಪ್ರಾಣಲಿಂಗವೆಂದೆಂಬರು,
ಭಾವದ ಕೊನೆಯ ಮೊನೆಯ ಮೇಲಣ ಲಿಂಗವ ಪ್ರಾಣಲಿಂಗವೆಂದು ಪೂಜಿಸುವರು.
ಕಾಯ ಲಿಂಗವೆಂದು ಪೂಜಿಸುವ ಖಂಡಿತರನೇನೆಂಬೆ?
ಜೀವ ಲಿಂಗವೆಂದು ಪೂಜಿಸುವ ಉಪಜೀವಿಗಳನೇನೆಂಬೆ?
ಭಾವ ಲಿಂಗವೆಂದು ಪೂಜಿಸುವ ಭ್ರಮಿತರನೇನೆಂಬೆ?
ಕಾಯಲಿಂಗವೇ? ಅಲ್ಲ, ಜೀವ ಲಿಂಗವೇ? ಅಲ್ಲ, ಭಾವಲಿಂಗವೇ? ಅಲ್ಲ,
ಅದೃಶ್ಯಭಾವನಾ ನಾಸ್ತಿ ದೃಶ್ಯಮೇವ ವಿನಶ್ಯತಿ ।
ಅವರ್ಣಮಕ್ಷರಂ ಬ್ರಹ್ಮ ಕಥಂ ಧ್ಯಾಯಂತಿ ಯೋಗಿನಃ ॥

[1]ಎಂದುದಾಗಿ[1] ಇಷ್ಟಲಿಂಗವ ಪೂಜಿಸಿ ದೃಷ್ಟಲಿಂಗದಲ್ಲಿ ನೆರೆಯಬಲ್ಲರೆ
ಕೂಡಲ ಚೆನ್ನಸಂಗಯ್ಯಾ, ಅವರ ಸರ್ವಾಂಗಲಿಂಗಿಗಳೆಂಬೆನು. । ೨೭ । [೧೩೬೩]

೭೩೦
ಭಕ್ತನಾದರೆ ಕಿಂಕಿಲನಾಗಿರಬೇಕು,
ಜಂಗಮವಾದರೆ ಆದಿ ಅನಾದಿಯನಱಿಯದಿರಬೇಕು.
ಪ್ರಸಾದಿಯಾದರೆ ಒಡಲಗುಣವಿರಹಿತನಾಗಿರಬೇಕು.
ಪ್ರಾಣಲಿಂಗಿಯಾದರೆ ಪ್ರಸಾದವಿಲ್ಲದಿರಬೇಕು.
ಶರಣನಾದರೆ ನಿಸ್ಸಂಗಿಯಾಗಿರಬೇಕು,
ಐಕ್ಯನಾದರೆ ಬಯಲು ಬಯಲಾಗಿರಬೇಕು.
ಇಂತೀ ಸ್ಥಲವನಱಿದಲ್ಲದೆ, ಕೂಡಲ ಚೆನ್ನಸಂಗನಲ್ಲಿ
ಸುಸಂವೇದ್ಯನೆಂದೆನಿಸಬಾರದು. । ೨೮ । [೧೩೬೭]

೭೩೧
[2]ಭಕ್ತಿಯಱಿಯಿರಿ, ಭಕ್ತನಾದ ಪರಿಯೆಂತಯ್ಯಾ?
ಭಾವಶುದ್ಧವಿಲ್ಲ, ಮಹೇಶ್ವರರೆಂತಪ್ಪಿರಯ್ಯಾ?
ಅರ್ಪಿತದನುವಱಿದು ಅರ್ಪಿಸಲಱಿಯಿರಿ,
ಪ್ರಸಾದವ ಗ್ರಹಿಸುವ ಪರಿಯೆಂತಯ್ಯಾ?
ನಡೆ–ನುಡಿ ಎರಡಾಗಿ ಇದೆ, ಪ್ರಾಣಲಿಂಗಸಂಬಂಧಿಯೆಂತಾದಿರಿ?
ಇಂದ್ರಿಯಂಗಳು ಭಿನ್ನವಾಗಿ ಶರಣರಾದ ಪರಿಯೆಂತಯ್ಯಾ?
ವಿಧಿ ನಿಷೇಧ ಭ್ರಾಂತಿ ಮುಕ್ತಿಯಾದ ಪರಿಯನಱಿಯಿರಿ, ಐಕ್ಯರೆಂತಪ್ಪಿರಿ?
ಈ ಷಡುಸ್ಥಲದ ಕ್ರಿಯಾಕರ್ಮವರ್ಮ ಆರಿಗೆಯೂ ಅಱಿಯಬಾರದು.
ಈ ವರ್ಮವಱಿದಡೆ ಲಿಂಗೈಕ್ಯವು ಕೂಡಲ ಚೆನ್ನಸಂಗಮದೇವಾ. । ೨೯ । [೫೮೩]

೭೩೨
ಶಿವಯೋಗದಲ್ಲಿ ಸಂಸಾರಯೋಗ ಮಾಬುದಯ್ಯಾ,
ಸಂಸಾರಯೋಗ ಮಾದಲ್ಲಿ ಭಕ್ತಾನುಗ್ರಹಯೋಗವಯ್ಯಾ,
ಭಕ್ತಾನುಗ್ರಹಯೋಗದಲ್ಲಿ ಲಿಂಗಾನುಗ್ರಹಯೋಗವಯ್ಯಾ,
ಲಿಂಗಾನುಗ್ರಹಯೋಗದಲ್ಲಿ ಜಂಗಮಾನುಗ್ರಹಯೋಗವಯ್ಯಾ,

೧–೧ x (ಮೂ). ೨ + ಭಕ್ತಿ (ಮೂ).

ಜಂಗಮಾನುಗ್ರಹಯೋಗದಲ್ಲಿ ಪ್ರಸಾದಾನುಗ್ರಹಯೋಗವಯ್ಯಾ,
ಪ್ರಸಾದಾನುಗ್ರಹಯೋಗದಲ್ಲಿ ತ್ರಿವಿಧ ಸನುಮತಯೋಗವಯ್ಯಾ,
ತ್ರಿವಿಧ ಸನುಮತಯೋಗದಲ್ಲಿ ಮನಮಗ್ನಯೋಗವಯ್ಯಾ,
ಮನಮಗ್ನಯೋಗದಲ್ಲಿ ಕೂಡಲ ಚೆನ್ನಸಂಗನಲ್ಲಿ
ಲಿಂಗಸಂಯೋಗವಯ್ಯಾ. । ೩೦ । [೯೯೧]

೨೩೩

ಶಿಷ್ಯನೆಂಬ ಪ್ರತಿಭಾವವಿಲ್ಲದ ಗುರು. ಗುರುವೆಂಬ ಪ್ರತಿಭಾವವಿಲ್ಲದ ಶಿಷ್ಯ.
ಏನೆಂಬೆನಯ್ಯಾ ಎರಡಿಲ್ಲದ ಘನವ? ಏನೆಂಬೆನಯ್ಯ ಎರಡೊಂದಾದ ಘನವ.
ಕೂಡಲ ಚೆನ್ನಸಂಗನಲ್ಲಿ ಗುರುಶಿಷ್ಯಸಂಬಂಧವಪೂರ್ವ. । ೩೧ ।

೨೩೪

ಗ್ರಾಮ ಪಥಗತಿಯನಱಿಯರು, ಗ್ರಾಮಕ್ಕೆ ಗುರುವಾವುದೆಂದಱಿಯರು,
ಗ್ರಾಮದ [1]ಕರಣವಿಡಿದಲ್ಲಿ ನಿಚ್ಚಾಟ[1]ವಾವುದೆಂದಱಿಯರು.
ಇವನಱಿದು ಮಱೆದು ನಿಂದರೆ
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯವು. । ೩೨ । [೧೨೯೫]

೨೩೫

ಲಿಂಗವೆಂದು ಪೂಜಿಸಿದರೆ ಅಂಗದೊಡನೆ ಉಳಿಯಿತ್ತು.
ಅಂಗದೊಡನೆ ಉಳಿದ ಲಿಂಗವ ಹಿಂಗಿ ಪೂಜಿಸಬೇಕು.
ಹಿಂ[2]ಗಿ[2]ದ ಪೂಜೆಯನಱಿದಡೆ ಪ್ರಾಣಲಿಂಗದಾಪ್ಯಾಯನವನಱಿಯಬೇಕು.
ಪ್ರಾಣಲಿಂಗದಾಪ್ಯಾಯನವನಱಿದಡೆ
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯ[3]ನೆ[3]ನಿಸುವ. । ೩೩ । [೧೩೯೫]

೨೩೬

ಮನದ ಸೂತಕವಳಿಯದೆ ಘನದಲ್ಲಿ ಕೂಡಿಹೆನೆಂದರೆ ದೊರಕೊಳ್ಳದು,
ಭಕ್ತಿಪಥ ದೊರಕೊಳ್ಳದು, ಶರಣಪಥದೊರಕೊಳ್ಳದು.
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯ[ನಾ]ದಂಗಲ್ಲದೆ. । ೩೪ ।

೧-೧ ಕಣ ವಿಧದಲ್ಲಿ ನಿಚ್ಚವು (ಮೂ), ೨-೨ ದ (ಮೂ), ೩-೩ ವೆ (ಮೂ).

೭೩೭
ಹೊತ್ತಾಡಿನ ಪೂಜೆ, ಹಗಲಿನ ಪೂಜೆ, ಬೈಗಿನ ಪೂಜೆ,
ನಿಚ್ಚಕ್ಕೆ ಪೂಜೆಯ ಮಾಡಿ ಅಚ್ಚಿಗಗೊಂಡರೆಲ್ಲರು.
ನಿಶ್ಚಿಂತ ನಿರಾಳ ನಿಜೈಕ್ಯ ಲಿಂಗವ ಹೊತ್ತಿಂಗೆ ತರಲಹುದೆ?
ಹೊತ್ತನೆ ಪೂಜಿಸಿ, ಹೊತ್ತನೆ ಅರ್ಚಿಸಿ, ಇತ್ತಲೆಯಾದರೆಲ್ಲರು.
ನಿಶ್ಚಿಂತವನಜೆದು ನಿಜವನೆಯ್ದುವರೆ ಸುಚಿತ್ತ ಸಮಾಧಾನ.
ಕೂಡಲ ಚೆನ್ನಸಂಗನೆಂಬ [1]ಲಿಂಗ[1] ನಿಶ್ಚಿಂತ ನಿಜೈಕ್ಯವು. । ೩೫ । [೧೩೯೬]

೭೩೮
ಅಂಗಲಿಂಗವೆಂಬರು, ಲಿಂಗಅಂಗವೆಂಬರು, ಅದು ಹುಸಿ ಕಾಣಿರೊ, ಅಯ್ಯಾ!
ಅಂಗವೇ ಲಿಂಗವಾದರೆ ಕಾಯದಲಿ ಕಳವಳವುಂಟೆ?
ಲಿಂಗವೆ ಅಂಗವಾದರೆ ಪ್ರಳಕ್ಕೊಳಗಹುದೆ?
ಅಂಗ ಲಿಂಗವಲ್ಲ, ಲಿಂಗ ಅಂಗವಲ್ಲ.
ಅಂಗಲಿಂಗ ಸಂಬಂಧವಳಿದಲ್ಲಿ ಪ್ರಾಣಲಿಂಗಸಂಬಂಧಿ.
ಪ್ರಾಣ ನಿಃಪ್ರಾಣವಾದಲ್ಲಿ ಲಿಂಗರೂಪು ನಿರೂಪುನಾಸ್ತಿಯಾದಂದು,
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯವು. । ೩೬ । [೧೩೯೭]

೭೩೯
ದರುಶನಾದಿಗಳೆಲ್ಲಾ ವಿರಸವಾಯಿತ್ತು ನೋಡಾ!
ಲಿಂಗಾರ್ಚಕರಲ್ಲದವರು ಲಿಂಗೈಕ್ಯವ ಬಲ್ಲರೆ?
ಕೂಡಲ ಚೆನ್ನಸಂಗನೆಂಬ ಲಿಂಗೈಕ್ಯವ ಲಿಂಗೈಕ್ಯರೇ ಬಲ್ಲರು. । ೩೭ । [೧೧೦೬]

೭೪೦
ಶಿವಕಳಶ ಗುರುಕಳಶವೆಂದು ಹೆಸರಿಟ್ಟುಕೊಂಡು ನುಡಿವಿರಿ.
ಶಿವಕಳಶ ಗುರುಕಳಶವ ನೀವು ಆವುದ ಬಲ್ಲರೆ ಹೇಳಿರೇ.
ಶಿವಕಳಶವಲ್ಲ ಇದು ಕುಂಭಕಳಶ.
ಓಂ ಧಾಮಂತೇ ಗೋತಮೋ ಆಪೋ ಬೃಹತೀ ॥

೧-೧ x(ಮೂ).

ಧಾಮಂತೇ ವಿಶ್ವಂ ಬುವನ ಮಧಿಶ್ರಿತಮಂತಃ ಸಮುದ್ರೇ
ಹೃದ್ಯಾಂತರಾಯುಷಿ । ಅಪಾಮನಿಕೇ ಸಮಿಥೇಯ
ಆಭೃತಸ್ತಮಶ್ಯಾಮಮಧುಮಂತಂತೂರ್ಮಿಂ ॥
ಇಂತೆಂದುದಾಗಿ ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಶಿವಕಳಶ ಗುರುಕಳಶದ ಹೊಲಬ ನಮ್ಮ ಬಸವಣ್ಣ ಬಲ್ಲ. । ೩೮ ।

೭೪೧
ಉಂಟೆಂಬ ವಸ್ತು ಇಲ್ಲೆಂಬ ಪ್ರಮಾ[1]ಣಬಹುದಾ[1]ಚಾರಕ್ಕಿಕ್ಕುವುದಿದು ಭಕ್ತಿಯೆ?
ಉಂಟೆಂಬ ಉದ್ಭಾವಿಯಲ್ಲ, ಇಲ್ಲೆಂಬ ನಿರ್ಭಾವಿಯಲ್ಲ.
ಇದು ಕಾರಣ ಕೂಡಲ ಚೆನ್ನಸಂಗಾ
ಸಜ್ಜನ ಶುದ್ಧ ಶಿವಾಚಾರಿಗಲ್ಲದೆ ಲಿಂಗೈಕ್ಯವಳವಡದು. । ೩೯ । [೧೩೭೯]

೭೪೨
ದೇವಪ್ರಭೆಯೊಳಗಿಹರಲ್ಲದೆ ದೇವಗಹನವ ಮಾಡಬಾರದಾರಿಗೆಯೂ.
ದೇವ ಸಕೀಲದೊಳಗೆ ಬೆಳೆಯಬಹುದಲ್ಲದೆ ದೇವನಷ್ಟದೊಳಗೆ
ಉತ್ಪತ್ಯವಾಗಬಾರದಾರಿಗೆಯೂ.
ಉತ್ಪತ್ತಿಯ ಗತಿಯನಾರೋಗಣೆಯ ಮಾಡಬಾರದಾರಿಗೆಯೂ.
ಸಚರಾಚರವೆಲ್ಲವೂ ಈ ಪರಿಯಲ್ಲಿ ಸಂಭ್ರಮಿಸುತ್ತಿ[2]ರ್ದುದ[2]ಲ್ಲಾ.
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಇದ್ದ ಭಾವವಳಿದಡೆ ಲಿಂಗೈಕ್ಯವು. । ೪೦ । [೧೪೦೩]

೭೪೩
ರೂಪು ಶೂನ್ಯವಾಗಬೇಕು,
ಶೂನ್ಯ ಅಂಕುರಿತವಾಗಬೇಕು.
ಅಂಕುರಿತಕ್ಕೆ ಸಂದು ತೆಱಹಿಲ್ಲದಿದ್ದರೆ
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು. । ೪೧ । [೧೪೪೫]

೭೪೪
ಪ್ರಸಾದಮುಖದಲ್ಲಿ ಕಲ್ಪಿತ
ಲಿಂಗಮುಖದಲ್ಲಿ ಸಂಕಲ್ಪಿತ.
ಜಂಗಮಮುಖದಲ್ಲಿ ಸಂದೇಹಿ

೧-೧ ಣು ಚವುಘಾ (ಮೂ), ೨-೨ ದ್ದರ (ಮೂ).

ಗುರುಮುಖದಲ್ಲಿ ಸಮಾಪ್ತಿ.
ಇಂತೀ ಚತುರ್ವಿಧವನೇಕಾರ್ಥವ ಮಾಡಬಲ್ಲರೆ
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು. । ೪೨ ।

೭೪೫

ಭಕ್ತನಾದರೆ ತನುಮನಧನದಾಸೆ ಅಳಿದಿರಬೇಕು,
ಮಾಹೇಶ್ವರನಾದರೆ ಪರಧನ ಪರಸತಿ[1]ಯಾಸೆ[1]ಯಳಿದು ಉಳಿದಿರಬೇಕು.
ಪ್ರಸಾದಿಯಾದಡೆ ಪ್ರಸಾದ ಅವಗ್ರಾಹಿಯಾಗಿ, ಪ್ರಸಾದದ ಘಟವಳಿಯದೆ
ಉಳಿದಿರಬೇಕು.
ಪ್ರಾಣಲಿಂಗಿಯಾದರೆ ಸುಖ-ದುಃಖವ ಮಱೆದು
ಪ್ರಾಣಲಿಂಗದಲ್ಲಿ ಪರಿಣಾಮಿಯಾಗಿರಬೇಕು.
ಶರಣನಾದರೆ ಸತಿಯರ ಸಂಗವ ತೊಱೆದು ತಾನು ಲಿಂಗಕ್ಕೆ ಸತಿಯಾಗಿರಬೇಕು.
ಲಿಂಗೈಕ್ಯನಾದರೆ ಲಿಂಗದಲ್ಲಿ ಬೆರಸಿ ಬೇಱಿಲ್ಲದಿರಬೇಕು
ಕೂಡಲ ಚೆನ್ನಸಂಗಯ್ಯಾ. । ೪೩ । [೧೨೫೦]

೭೪೬

ಗುರುಲಿಂಗ ಆಚಾರಲಿಂಗ ಜಂಗಮಲಿಂಗ
ಪ್ರಸಾದಲಿಂಗ ಶಿವಲಿಂಗ ಮಹಾಲಿಂಗ.
ಇಂತು ಷಡುಸ್ಥಲವಾಱು.
ಗುರುಲಿಂಗ ತ್ರಿವಿಧ: ದೀಕ್ಷೆ, ಶಿಕ್ಷೆ, ಸ್ವಾನುಭಾವ.
ದೀಕ್ಷೆಯೆಂದು ಗುರು,
ಶಿಕ್ಷೆಯೆಂದು ಜಂಗಮ,
ಸ್ವಾನುಭಾವವೆಂದು ತನ್ನಿಂದ ತಾನೆ ಅಱಿವುದು,
ಇಂತು ಗುರುಲಿಂಗಸ್ಥಲ ತ್ರಿವಿಧ.
ಆಚಾರಲಿಂಗಸ್ಥಲ ತ್ರಿವಿಧ: ಸದಾಚಾರ, ನಿಯತಾಚಾರ, ಗಣಾಚಾರ,
ಎಲ್ಲಾ ಜನದ ಕೈಯಲೂ ಅಹುದೆನಿಸಿಕೊಂಬುದು ಸದಾಚಾರ,
ತಾನೇನ ಹಿಡಿದ ವ್ರತಾಚಾರವನು ನಡಸೂದು ನಿಯತಾಚಾರ,
ಶಿವನಿಂದೆಯ ಕೇಳದಿಪ್ಪುದು ಗಣಾಚಾರ,
ಇಂತು ಆಚಾರಲಿಂಗಸ್ಥಲ ತ್ರಿವಿಧ.
ಜಂಗಮಲಿಂಗಸ್ಥಲ ತ್ರಿವಿಧ: ಸ್ವಯ, ಚರ, ಪರ,
ಸ್ವಯವೆಂದು ತಾನು, ಚರವೆಂದು ಜಂಗಮ, ಪರವೆಂದು ಪರಶಿವನು,

೧-೧ ಯೆದೆ (ಮೂ).

ಇಂತು ಜಂಗಮಲಿಂಗಸ್ಥಲ ತ್ರಿವಿಧ.
ಪ್ರಸಾದಲಿಂಗಸ್ಥಲ ತ್ರಿವಿಧ: ಶುದ್ಧ, ಸಿದ್ಧ, ಪ್ರಸಿದ್ಧ,
ಶುದ್ಧ ಲಿಂಗಮುಖದಿಂದ ಬಂದುದು,
ಸಿದ್ಧ ಜಂಗಮಮುಖದಿಂದ ಬಂದುದು,
ಪ್ರಸಿದ್ಧ ಗುರುಮುಖವಿಂದ ಬಂದುದು,
ಇಂತು ಪ್ರಸಾದಲಿಂಗಸ್ಥಲ ತ್ರಿವಿಧ.
ಶಿವಲಿಂಗ ತ್ರಿವಿಧ: ಇಷ್ಟಲಿಂಗ, ಪ್ರಾಣಲಿಂಗ, ತೃಪ್ತಿಲಿಂಗ,
ಗುರುವು ಕರಸ್ಥಲದಲ್ಲಿ ಅನುಗ್ರಹಿಸಿದುದು ಇಷ್ಟಲಿಂಗ,
ತನುಗುಣನಾಸ್ತಿಯಾದುದು ಪ್ರಾಣಲಿಂಗ,
ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಲಿಂಗವಲ್ಲದೆ ಅಱಿಯದಿಪ್ಪುದು ತೃಪ್ತಿಲಿಂಗ,
ಇಂತು ಶಿವಲಿಂಗಸ್ಥಲ ತ್ರಿವಿಧ.
ಮಹಾಲಿಂಗ ತ್ರಿವಿಧ: ಪಿಂಡಜ, ಅಂಡಜ, ಬಿಂದ್ವಾಕಾಶ.
ಪಿಂಡಜವೆಂದು ಘಟಾಕಾಶ, ಅಂಡಜವೆಂದು ಬ್ರಹ್ಮಾಂಡ,
ಬಿಂದ್ವಾಕಾಶವೆಂದು ಮಹದಾಕಾಶ,
ಇಂತು ಮಹಾಲಿಂಗಸ್ಥಲ ತ್ರಿವಿಧ. ಇಂತು ಸ್ಥಲ ೧೮.
ಇದಕ್ಕೆ ಅಂಗಸ್ಥಲಂಗಳಾವುವೆಂದರೆ:
ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಇಂತು ಸ್ಥಲ ೬.
ಭಕ್ತಸ್ಥಲ ತ್ರಿವಿಧ: ಗುರುಭಕ್ತಿ, ಲಿಂಗಭಕ್ತಿ, ಜಂಗಮಭಕ್ತಿ
ಇಂತು ಭಕ್ತಸ್ಥಲ ತ್ರಿವಿಧ,
ಮಾಹೇಶ್ವರಸ್ಥಲ ತ್ರಿವಿಧ: ಇಹಲೋಕ ವೀರ, ಪರಲೋಕ ವೀರ, ಲಿಂಗವೀರ.
ಇಂತು ಮಾಹೇಶ್ವರಸ್ಥಲ ತ್ರಿವಿಧ.
ಪ್ರಸಾದಿಸ್ಥಲ ತ್ರಿವಿಧ:
ಪದಾರ್ಥ ಪ್ರಸಾದಿ, ಆಪ್ಯಾಯನ ಪ್ರಸಾದಿ, ಸಮತಾ ಪ್ರಸಾದಿ.
ಇಂತು ಪ್ರಸಾದಿಸ್ಥಲ ತ್ರಿವಿಧ.
ಪ್ರಾಣಲಿಂಗಸ್ಥಲ ತ್ರಿವಿಧ: ಆಚಾರಪ್ರಾಣಿ, ಲಿಂಗಪ್ರಾಣಿ, ಜಂಗಮಪ್ರಾಣಿ,
ಇಂತು ಪ್ರಾಣಲಿಂಗಿಸ್ಥಲ ತ್ರಿವಿಧ.
ಶರಣಸ್ಥಲ ತ್ರಿವಿಧ: ಇಷ್ಟಲಿಂಗಾರ್ಚಕ, ಪ್ರಾಣಲಿಂಗಾರ್ಚಕ, ತೃಪ್ತಿಲಿಂಗಾರ್ಚಕ,
ಇಂತು ಶರಣಸ್ಥಲ ತ್ರಿವಿಧ.
ಐಕ್ಯಸ್ಥಲ ತ್ರಿವಿಧ: ಕಾಯಲಿಂಗೈಕ್ಯ, ಜೀವಲಿಂಗೈಕ್ಯ, ಭಾವಲಿಂಗೈಕ್ಯ,
ಇಂತು ಐಕ್ಯಸ್ಥಲ ತ್ರಿವಿಧ. ಇಂತು ಸ್ಥಲ ೧೮. ಉಭಯಸ್ಥಲ ೩೬.
ಇಂತೀ ಎಲ್ಲಾ ಸ್ಥಲವೂ ತಾನಾಗಬಲ್ಲರೆ
ಕೂಡಲ ಚೆನ್ನಸಂಗಾ ನಿಮ್ಮಲ್ಲಿ ಲಿಂಗೈಕ್ಯವು. । ೪೪ ।

೭೪೭
ಕಿಂಕುರ್ವಾಣತೆಯಿಂದ ಬಂದ ಜಂಗಮವೆ ಜಂಗಮಲಿಂಗವೆಂದು
ಉಳ್ಳುದನಱಿದು ಮನಸಹಿತ ಮಾಡುವಲ್ಲಿ ಭಕ್ತ.
ನಿಷ್ಠೆನಿಬ್ಬೆರಸಿ ಗಟ್ಟಿಗೊಂಡು ಅಭಿಲಾಷೆಯ ಸೊಮ್ಮು ಸಮನಿಸದೆ
ಪರಿಚ್ಛೇದ ಬುದ್ಧಿಯುಳ್ಳಲ್ಲಿ ಮಾಹೇಶ್ವರನು.
ಅನರ್ಪಿತ ಸಮನಿಸದೆ ಬಂದುದ ಕಾಯದ ಕರಣದ ಕೈಯಲು ಕೊಟ್ಟು,
ಲಿಂಗಸಹಿತ ಭೋಗಿಸುವಲ್ಲಿ ಪ್ರಸಾದಿ.
ಪ್ರಾಣಕ್ಕೆ ಪ್ರಾಣವಾಗಿ ಇದ್ದುದನು ಕಾಯಸ್ಥಿತಿಯಱಿದು ಎಚ್ಚಱಿಕೆಗುಂದದಿಪ್ಪಲ್ಲಿ,
ಪ್ರಾಣಲಿಂಗಸಂಬಂಧಿ.
ತನಗೆ ಲಿಂಗವಾಗಿ, ಲಿಂಗಕ್ಕೆ ತಾನಾಗಿ ಬೆಚ್ಚು ಬೇಱಿಲ್ಲದ
ಬೆಡಗಿನ ಒಲುಮೆಯಲ್ಲಿ ಶರಣನು,
ಸದಾಚಾರ ಸಂಪತ್ತಿನಲ್ಲಿ ಬಂದ ಅನುಭಾವವ ಮೀಱಿ
ಹೆಸರಡಗಿದ ಸುಖವದು ಲಿಂಗೈಕ್ಯ.
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಬಸವಣ್ಣಂಗಲ್ಲದೆ ಷಟುಸ್ಥಲವಪೂರ್ವ. ।೪೫। [೧೩೧೦]

೭೪೮
ಭಕ್ತನೆಂದೆನಿಸಿಕೊಂಬುದಯ್ಯಾ ಭಕ್ತಿವಿಡಿದು,
ಮಾಹೇಶ್ವರನೆನಿಸಿಕೊಂಬುದಯ್ಯಾ ನಿಷ್ಠೆವಿಡಿದು,
ಪ್ರಸಾದಿಯೆನಿಸಿಕೊಂಬುದಯ್ಯಾ ಅವಧಾನವಿಡಿದು,
ಪ್ರಾಣಲಿಂಗಿಯೆನಿಸಿಕೊಂಬುದಯ್ಯಾ ಅನುಭಾವವಿಡಿದು,
ಶರಣನೆನಿಸಿಕೊಂಬುದಯ್ಯಾ ಸಮರತಿಯಿಂದ,
ಐಕ್ಯನೆನಿಸಿಕೊಂಬುದಯ್ಯಾ ಸಮರಸದಿಂದ.
ಇಂತೀ ಷಡುಸ್ಥಲ ಸಾಹಿತ್ಯನಾಗಿ
ಕೂಡಲ ಚೆನ್ನಸಂಗಯ್ಯನಲ್ಲಿ ಸಹಜನೆನಿಸಿಕೊಂಬುದಯ್ಯಾ. ।೪೬।

೭೪೯
ಆಚಾರ ಗುರುಸ್ಥಲ, ಅನುಭಾವ ಲಿಂಗಸ್ಥಲ,
ಅವಧಾನ ಅರ್ಪಿತಸ್ಥಲ, ಪರಿಣಾಮ ಪ್ರಸಾದಸ್ಥಲ,
ಸಮಾಧಾನ ಶರಣಸ್ಥಲ, ಅಱಿವು ನಿಃಪತಿಯಾಗಿ ತೆಱಹಿಲ್ಲದ ನಿಜದಲ್ಲಿ ಲಿಂಗೈಕ್ಯವು,
ಕೂಡಲ ಚೆನ್ನಸಂಗಮದೇವಾ. ।೪೭। [೧೨೪೯]

[1]ಐಕ್ಯನ ಐಕ್ಯಸ್ಥಲ :[1]

೭೫೦
ಕುಲವಳಿದು, ಛಲವಳಿದು, ಮದವಳಿದು, ಮಚ್ಚರವಳಿದು,
ಆತ್ಮತೇಜವಳಿದು, ಸರ್ವಾಹಂಭಾವವಳಿದು,
ನಿಜ ಉಳಿಯಿತ್ತು.
ಲಿಂಗಜಂಗಮವೆಂಬ ಶಬ್ದವಿಡಿದು ಸಾಧ್ಯವಾಯಿತ್ತು ನೋಡಾ,
ತಾನಳಿದು ತಾನುಳಿದು ತಾನು ತಾನಾದ ಸಹಜ ನಿಜಪದವಿಯಲ್ಲಿ
ಕೂಡಲ ಚೆನ್ನಸಂಗ ಲಿಂಗೈಕ್ಯವು. । ೪೮ । [೧೪೩೯]

೭೫೧
ಹೃತ್ಕಮಲಕರ್ಣಿಕೆಯ ಕುಹರದಲೊಮ್ಮೆ ಪೃಥಗ್ಭಾವದಿಂದ
ನೋಡಿ ಕಾಬನೆ ಶರಣನು?
ವಕ್ತ್ರಾಶ್ರಯದ ಜಿಹ್ವೆಯ ಕೊನೆಯಲ್ಲಿ ಪರವಕ್ತ್ರನಾಗಿ
ನೋಡಿ ನುಡಿವನೆ ಶರಣನು?
ಪ್ರಕೃತಿ ತನುಗುಣರಹಿತ, ಸುಕೃತ ಶೂನ್ಯ, ಘನಮುಗ್ಧ ಮಹಂತ,
ಕೂಡಲ ಚೆನ್ನಸಂಗಾ ಲಿಂಗೈಕ್ಯವು. । ೪೯ । [೧೩೩೮]

೭೫೨
ಕಾಯದಲ್ಲಿ ಸಾರಿಪ್ಪ ಲಿಂಗ ಕಾಯಸಂಸಾರಿ,
ಲಿಂಗದಲ್ಲಿ ಸಾರಿಪ್ಪ ಕಾಯ ಲಿಂಗಸಂಸಾರಿ.
ಈ ದ್ವಿವಿಧ ಸಂಬಂಧಿಯ ಭೇದವ ಭೇದಿಸಿ ಕಳೆದು
ಕೂಡಲ ಚೆನ್ನಸಂಗಾ ಲಿಂಗೈಕ್ಯವು. । ೫೦ ।

೭೫೩
ತನು ಸೋಂಕಿ ತನುನಷ್ಟವಾಯಿತ್ತು,
ಮನ ಸೋಂಕಿ ಮನನಷ್ಟವಾಯಿತ್ತು,
ಭಾವ ಸೋಂಕಿ ಭಾವನಷ್ಟವಾಯಿತ್ತು.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಲಿಂಗ ಸೋಂಕಿ ಶರಣಸಂದು ನಷ್ಟವಾಯಿತ್ತು. । ೫೧ । [೧೪೧೯]

೧-೧ ಐಕ್ಯನು (ಮೂ).

೭೫೪

ಅಂಗ ಲಿಂಗವೆಂದರೆ ಪ್ರಳಯಕ್ಕೆ ಒಳಗು,
ಪ್ರಾಣ ಲಿಂಗವೆಂದರೆ ಸಂಸಾರಕ್ಕೊಳಗು,
ಇದಾವಂಗವೆನಲಿಲ್ಲ, ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯವು. । ೫೨ ।[೭೮೨

೭೫೫

ಆಚಾರವೆಂಬ ಬಿಲ್ಲಿಗೆ ವಿಚಾರವೆಂಬ ನಾರಿ,
ಸಮತೆಯೆಂಬ ತಿರುವ ಮುಟ್ಟಿ ಜೇವೊಡೆಗೆಯ್ದು,
ಶಿ[1]ಷ್ಯನೆ[1]ಂಬ ಬಾಣವ ತೊಡಚಿ,
ಗುರುವೆಂಬ ವ್ಯಾಧನು ಲಿಂಗವೆಂಬ ಬಯಲ ಗುಱಿಯನೆಚ್ಚಡೆ,
[2]ಗ[2]ಱಿ ತೋಱದಂತೆ ಮುಳುಗಿ ಅಡಗಿತ್ತು.
ಆ ಗುಱಿಯನು ಬಾಣವನು ಅಱಸಲುಂಟೆ,
ಕೂಡಲ ಚೆನ್ನಸಂಗಾ ನಿಮ್ಮಲ್ಲಿ? । ೫೩ ।[೧೪೨೦]

೭೫೬

ಇದ್ದು ಬದ್ಧನಲ್ಲ, ಸುಳಿದು ಸೂತಕಿಯಲ್ಲ,
ಆವ ಸಂಗವೂ ಇಲ್ಲದ ನಿಜೈಕ್ಯನು.
ಬೇಕು ಬೇಡೆನ್ನದೆ, ಅಳಿದುಳಿದು
ಕರ್ಪುರದ ಗಿರಿಯನುರಿ ತಾಗಿದಂತೆ
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯನು. । ೫೪ ।[೧೪೪೭]

೭೫೭

ಮುಟ್ಟಿದಲ್ಲಿ ಇಷ್ಟಲಿಂಗ, ಬೆರಸಿದಲ್ಲಿ ಪ್ರಾಣಲಿಂಗ,
ಸ್ವಾಯತವಾದರೆ ಅಂಗಲಿಂಗ, ಇದು ಲಿಂಗೈಕ್ಯವಲ್ಲ.
ಇದು ಕಾರಣ ಕೂಡಲ ಚೆನ್ನಸಂಗನು ಅಂಗವಿಲ್ಲದ ನಿಜಲಿಂಗೈಕ್ಯನು.। ೫೫ ।

೭೫೮

ಅಂಗ ಲಿಂಗೈಕ್ಯವೆಂದರೆ ಸಂಸಾರಕ್ಕೊಳಗಾಯಿತ್ತು,
ಮನ ಲಿಂಗೈಕ್ಯವೆಂದರೆ ಬಂಧನಕ್ಕೊಳಗಾಯಿತ್ತು,
ಪ್ರಾಣ ಲಿಂಗೈಕ್ಯವೆಂದರೆ ಭವಕ್ಕೊಳಗಾಯಿತ್ತು.
ಇದಾವಂಗವೆನಲಿಲ್ಲ, ಕೂಡಲ ಚೆನ್ನಸಂಗ[3][ನಲ್ಲಿ][3] ಲಿಂಗೈಕ್ಯ. । ೫೬ ।

೧-೧ ಶುವೆಂ (ಮೂ), ೨-೨ ಗು (ಮೂ), ೩-೩ x (ಮೂ).

೭೫೯

ಅಜೀವಿನಾಶ್ರಯಸಂಗ ಅಜೀವ ನೆಜಿ ಕೂಡಲು,
ಭಾವದಲ್ಲಿ ಸರ್ಪದಷ್ಟವಾಗಿ ಆಕಾರ ಪ್ರಾಣದಲ್ಲಿಯೆ ವಿಶ್ರಮಿಸಿತ್ತು.
ಭಾವದಲ್ಲಿ ಭರಿತ, ನಿರ್ಭಾವದಲ್ಲಿ ನಿರುತ,
ಕೂಡಲ ಚೆನ್ನಸಂಗಯ್ಯ ಸಕಳಾಶ್ರಯಸಂಗ ನಿರ್ಣಯ. । ೫೭ । [೧೦೫೯]

೭೬೦

ಆನು ನೀನೆಂಬ ಮೋಹವೆಲ್ಲಿಯದು,
ನಿರ್ಭಾವವೆಂಬ ಪ್ರಸಂಗವೆಲ್ಲಿಯದು ಹೇಳಾ!
ಮನಲೀಯ ಮನಲೀಯ ಉಭಯಭಾವರಹಿತ
ಕೂಡಲ ಚೆನ್ನಸಂಗಾ ಲಿಂಗೈಕ್ಯವು. । ೫೮ । [೧೪೬೪]

೭೬೧

ಅಂಗದ ಮೇಲೊಂದು ಲಿಂಗವು, ಲಿಂಗದ ಮೇಲೊಂದು ಅಂಗವು.
ಆವುದು ಘನವೆಂಬೆ, ಆವುದು ಕಿಜಿದೆಂಬೆ.
ತಾಳೋಷ್ಠಸಂಪುಟಕ್ಕೆ ಬಾರದ ಘನ, ಉಭಯಲಿಂಗವಿರಹಿತವಾದ ಶರಣ
ಕೂಡಲ ಚೆನ್ನಸಂಗಾ ಲಿಂಗೈಕ್ಯವು. । ೫೯ ।

೭೬೨

ಅ[1]ಪ್ಪುವನ[1]ಪ್ಪಿದ ಆಲಿಕಲ್ಲಿನಂತೆ, ವಾಯುವನಪ್ಪಿದ ಪರಿಮಳದಂತೆ,
ಲಿಂಗವನಪ್ಪಿದ ಶರಣ, ಆತನ ದೇಹಿಯೆನಬಹುದೆ?
ಅನಲನನಪ್ಪಿದ ಕರ್ಪುರದಂತೆ ಈ ತ್ರಿವಿಧನಿರ್ಣಯ
ಕೂಡಲ ಚೆನ್ನಸಂಗಾ ನಿಮ್ಮಲ್ಲಿ.[2] । ೬೦ । [೧೩೨೫]

೭೬೩

ಗ್ರಾಮಮಧ್ಯದ ಧವಳಾರದೊಳಗೊಂದು ಸತ್ತ ಹೆಣವಿರುತ್ತಿರಲು,
ಗ್ರಾಮ ಸುತ್ತಿ ಬರುತ್ತಿದ್ದ ರಕ್ಕಸಿ ಆ ಸತ್ತುದ ಕಂಡಳಲ್ಲಾ.
ಗ್ರಾಮ ನನ್ನ ಕಾಹು, ಗ್ರಾಮದಲ್ಲಿ ನಾನಿಪ್ಪೆ, ಇದಾರೊ ಕೊಂದವರು?
ನಾನು ಕೊಲ್ಲದ ಮುನ್ನ, ಅದು ತಾನೆ ಸತ್ತಡೆ, ಎನಗಿದು ಸೋಜಿಗವು.

೧-೧ ಪ್ಪಿನಲ (ಮೂ), ೨+ ಇದು ಹಿಂದಣ ವಚನ (ಮೂ).

ಸತ್ತುದು ಗ್ರಾಮವ ಕೆಡಿಸಿತ್ತು, ಇನ್ನಿದ್ದರೆ ಎನ್ನನೂ ಕೆಡಿಸಿತ್ತು.
ಇಲ್ಲಿದ್ದವರಿಗುಪಟಳ ನೋಡಾ! ಗ್ರಾಮ ಬಿಟ್ಟು ಹೋಯಿತ್ತಯ್ಯಾ
ಕೂಡಲ ಚೆನ್ನಸಂಗಮದೇವಾ. । ೬೧ । [೧೩೭೧]

೭೬೪
ಸತ್ತ ಹೆಣನುವ ಹೊತ್ತವರೆಲ್ಲಾ ಅಚ್ಚಿಗಗೊಂಡರಲ್ಲಾ.
ಹೊತ್ತವರೆಲ್ಲಾ ಸತ್ತುದ ಕಂಡು [1]ಮೂರ್ಛೆ[1]ವೋದರಲ್ಲಾ.
ಸುತ್ತಿ ಬಂದಿದ್ದವರೆಲ್ಲಾ ಹೋಗಿ ಅದ ಮುಟ್ಟಲಮ್ಮರು ನೋಡಾ!
ಮುಟ್ಟದ ಮುನ್ನ ಮೂವರ ಕೆಡಿಸಿತ್ತು, ಸತ್ತ ಪರಿಯ ನೋಡಾ!
ಅದು ಕಾಡಿನಲ್ಲಿ ಉರಿಯದು, ಕಿಚ್ಚಿನಲ್ಲಿ ಬೇಯದು.
ಸತ್ತ ಪರಿಯ ನೋಡಾ! ಕೂಡಲಚೆನ್ನಸಂಗನೆಂಬ
ಚಿಂತೆ [2]ಸ[2]ತ್ತಿತಲ್ಲಾ. । ೬೨ । [೧೩೨೭]

೭೬೫
ಶರಣ ಸತ್ತರೆ ಭಕ್ತರು ಹೊತ್ತರು, ಪ್ರಸಾದಿಗಳತ್ತರಲ್ಲಾ.
ಸುತ್ತಲಿದ್ದ ಜಂಗಮವೆಲ್ಲಾ ಕಿಚ್ಚ ಹಿಡಿದರಲ್ಲಾ,
ಊರೊಳಗಿದ್ದವರು ಒಂಬತ್ತು ಬಾಗಿಲ ತುಂಬಿಕೊಂಡಿದ್ದರು ನೋಡಾ!
ಮರಳಿ ಒಂದು ಬಾಗಿಲ ತೆಗೆದು ಸತ್ತುದ ಕಂಡು,
ಅದಾರು ಅದಾರು ಸತ್ತರೆಂದು ಸತ್ತವರು ಬಹುದ ಕಂಡು ಇತ್ತಲೆಯಾದರಲ್ಲಾ.
ಕೂಡಲ ಚೆನ್ನಸಂಗ ಸತ್ತು ಸಯವಾದ. । ೬೩ । [೧೩೭೩]

೭೬೬
ಸಮುಸುಖ ಸಂಧಾನವಿಲ್ಲದ ಸಂಗ ನೋಡಾ!
ತಾಗು ನಿರೋಧವಿಲ್ಲದ ಸಂಗ ನೋಡಾ!
ಆವಂಗೆ ಆವಂಗೆ ಅನುಭಾವವಿಲ್ಲದ ಸಂಗ ನೋಡಾ!
ಕೂಡಲ ಚೆನ್ನಸಂಗಮದೇವಾ ಲಿಂಗಲೀಯ ಸಂಗ ನೋಡಾ. । ೬೪ । [೧೪೬೨]

೭೬೭
ಕಾಣಬಹುದೇ ನಿರಾಕಾರ? ಕಾಣಬಹುದೇ ಮಹಾಘನವು?
ಕಂಡು ಭ್ರಮೆಗೊಂಡು ಹೋದರೆಲ್ಲರೂ.
ಕೂಡಲ ಚೆನ್ನಸಂಗನ ಅನುಭಾವವ ಲಿಂಗೈಕ್ಯನೆ ಬಲ್ಲ. । ೬೫ । [೧೪೯೨]

೧-೧ ಮುಚ್ಚಿತ್ತ (ಮೂ). ೨-೨ ಸು (ಮೂ).

೭೬೮

ಪ್ರಮಥವೇದಿಗಳೆಲ್ಲರೂ ಗತಿಯಲೆ ಸಿಲುಕಿದರು.
ಅತೀತ ಅನಾಗತವೆಂಬ ನುಡಿಯಲೆ ಸಿಲುಕಿದರು.
ಶ್ರುತಿವಂತರೆಲ್ಲರೂ ಆಗಮದಲ್ಲಿ ಸಿಲುಕಿದರು. ಇಂಥವನೆ ಲಿಂಗೈಕ್ಯನು?
ನುಡಿದ ನುಡಿಯ ನಡೆಯನು, ನಡೆದ ನಡೆಯ ನುಡಿಯನು.
ಬಂದಲ್ಲಿ ಬಾರನು, ನಿಂದಲ್ಲಿ ನಿ[೧]ಲ್ಲ[೧]ನು,
ನಿಸ್ಸೀಮನು ಕೂಡಲ ಚೆನ್ನಸಂಗಾ ಲಿಂಗೈಕ್ಯನು. । ೬೬ । [೧೪೨೨]

೭೬೯

ಅಱಿದೆನೆಂಬನ ಅಱಿವೆ ನುಂಗಿತ್ತು,
ಮಱಿದೆನೆಂಬನ ಮಱಹೆ ನುಂಗಿತ್ತು.
ಇನ್ನೇನಿದ್ದುದಯ್ಯಾ, ಅವಧಾನಗೆಟ್ಟು ನಡೆಯದನ್ನಕ್ಕ!
ಅಱಿವಿನ ಮಱಹಿನ ಕುಱುಹು ತಾನಲ್ಲ,
ಕೂಡಲ ಚೆನ್ನಸಂಗಾ ಲಿಂಗೈಕ್ಯವು. । ೬೭ । [೭೮೮]

೭೭೦

ಪ್ರಾಣಿಂಗವೆಂಬೆನೆ ಪ್ರಾಣದ ಹಂಗಿನ ಲಿಂಗ,
ಲಿಂಗಪ್ರಾಣವೆಂಬೆನೆ ಲಿಂಗದ ಹಂಗಿನ ಪ್ರಾಣ.
ಲಿಂಗ ಪ್ರಾಣವೆಂಬ ಸಂದು ಸಮನಿಸದಾ
ಕೂಡಲ ಚೆನ್ನಸಂಗನೆಂಬ ಲಿಂಗೈಕ್ಯಂಗೆ, । ೬೮ ।

೭೭೧

ಲಿಖಿತಕ್ಕೆ ಲಿಖಿತ ಮಹಾಲಿಖಿತವುಂಟೆಂಬೆನೆ? ಲಿಂಗಸಂಸಾರಿ,
ಲಿಂಗವಿಲ್ಲೆಂಬೆನೆ ? ಅಂಗಸಂಸಾರಿ,
ಇಲ್ಲೆನ್ನಾವುದ ಘನವೆಂಬೆ. ಆವುದ ಕಿಱಿದೆಂಬೆ,
ತಾಳಸಂಪುಟಕ್ಕೆ ಬಾರದ ಘನವ?
ಸುಖಕ್ಕೆ ಸುಖತಾಱುಗಂಡು, ಸಮಸುಖವಾಗಿ,
ಉಪಮಾತೀತ ತ್ರಿವಿಧ ಸಂಪತ್ತುಗಳೆಂಬ ವಾಯುವಾಕುಳದಲ್ಲಿ,
ಆದಿ ಮಧ್ಯ ಅವಸಾನರಹಿತ ಅನಂತ ಶರಣ ಅಜಾತ
ಕೂಡಲ ಚೆನ್ನಸಂಗಾ ನಿರ್ನಾಮ ಲಿಂಗೈಕ್ಯ. । ೬೯ ।

೧-೧ ಂದ (ಮೂ).

೭೭೨

ಜಲಮಧ್ಯ ತನುವಳಯದ ಪ್ರಾ[೧]ಣ[೧]ಬದ್ಧನೆ ? ಅಲ್ಲ.
ನಿಜಕ್ಕೆ ಪರಿಚಾರಕ. ಸರ ಸುರಸ ಮೇಘರೂಪು ಕಂಠ ನಿಜಕಂಠಕ್ಕೆ ಮಂಗಳವಸ್ತು.
ಇಂತಿದು ಕಾರಣ ಅಪ್ರತಿಗೆ ಪ್ರತಿ ಹುಟ್ಟಿ
ಇದು ಸಹಿತ ಇದು ಸಾಹಿತ್ಯ ನೋಡ
ಕೂಡಲ ಚೆನ್ನಸಂಗಾ ಲಿಂಗೈಕ್ಯವು. । ೭೦ । [೧೪೬೬]

೭೭೩

ಶಿವಶಕ್ತಿಸಂಪುಟವಿಹೀನ ಲಿಂಗ, ಹಾನಿವೃದ್ಧಿಯಿಲ್ಲದುದೆ ಜಂಗಮ.
ಜಾಗ್ರದಲ್ಲಿ ಕುಱುಹು, ಸ್ವಪ್ನದಲ್ಲಿ ಆಕೃತಿ.
ನೆಱೆ ಅಱಿತ ಅಱಿವು. ಹಿರಿದುಕಿಱಿದೆನ್ನ ಸಜ್ಜನಶುದ್ಧಶಿವಾಚಾರ
ಕೂಡಲ ಚೆನ್ನಸಂಗಾ ಲಿಂಗೈಕ್ಯವು. । ೭೧ । [೭೮೩]

೭೭೪

ಮಾರ್ಗಕ್ರಿಯಾ ಸಮಯದಲ್ಲಿ ಶಿವಶಕ್ತಿಸಂಪುಟ.
ಮೀಱಿದ ಕ್ರಿಯಾ ಸಮಯದಲ್ಲಿ ಶಿವಲಿಂಗಸಂಪುಟ.
[೨]ಉಭಯ[೨] ಕ್ರಿಯಾನುಭಾವ ನೆಲೆಗೊಂಡಲ್ಲಿ ಮನಲಿಂಗಸಂಪುಟ.
ಮನಲಿಂಗಲೀಯವಾದ ಬಳಿಕ ತೆಱಹಿಲ್ಲದೆ ಕುಱುಹಳಿದ ಲಿಂಗೈಕ್ಯ.
ಸುತ್ತಿದ ಪ್ರಪಂಚು ಮೆಲ್ಲಮೆಲ್ಲನೆ ಅಚ್ಚುಗವಿಲ್ಲದೆ ಹಿಂಗಿದವು
ಕೂಡಲ ಚೆನ್ನಸಂಗಾ ಲಿಂಗೈಕ್ಯಂಗೆ. । ೭೨ । [೧೪೨೬]

೭೭೫

ಮಂತ್ರಯೋಗ, ಹಠಯೋಗ, ಲಯಯೋಗ, ಭಕ್ತಿಯೋಗ, ಜ್ಞಾನಯೋಗ.
ಭಕ್ತಿಯೋಗದ ಮೇಲೆ ನಿಂದು, ರಾಜಯೋಗದ ಮೇಲೆ ನಿಂದು ನುಡಿವುದು ಕಾಣಿರೆ!
ರಾಜಯೋಗದ ಮೇಲೆ ನಡೆವುದು ಕಾಣಿರೆ!
ವಾಗತೀತಂ ಮನೋಽತೀತಂ ಭಾವಾತೀತಂ ನಿರಂಜನಂ ।
ಸರ್ವಶೂನ್ಯಂ ನಿರಾಕಾರಂ ನಿತ್ಯತ್ವಂ ಪರಮಂ ಪದಂ ॥
ಎಂದುದಾಗಿ ಶಿವಜೀವ ಲಿಂಗಪ್ರಾಣಿ, ಶಿವಯೋಗವೆಂಬುದೆ ಐಕ್ಯ.
ಮಹಾಲಿಂಗೈಕ್ಯರ ನಿಲವನು ಅನುಮಾನಿಗಳೆತ್ತ ಬಲ್ಲರು?
ಕೂಡಲ ಚೆನ್ನಸಂಗಮದೇವಾ. । ೭೩ । [೧೪೨೪]

೧-೧ ಣಿ (ಮೂ). ೨-೨ x (ಮೂ).

೭೭೬

ಬಿಂದುಮಧ್ಯಗತೋ ನಾದಃ ನಾದಮಧ್ಯ ಗತಾ ಕಲಾ ।
ಕಲಾಮಧ್ಯ ಗತಂ ಶೂನ್ಯಂ ಶೂನ್ಯಮಧ್ಯ ಗತಃ ಶಿವಃ ॥
ಪರಾತ್ಪರಂ ಪರಂ ನಾಸ್ತಿ ಪರಮಿಚ್ಛಂತಿ
ಕೂಡಲ ಚೆನ್ನಸಂಗಯ್ಯ. । ೭೪ ।

೭೭೭

ಸ್ಥಲದಿಂದ ನಡೆನುಡಿಯಾಯಿತ್ತು, ನಿಃಸ್ಥಲದಿಂದ ನುಡಿನಡೆಗೆಟ್ಟಿತ್ತು.
ನೋಡಲೊಡನೆ ಸ್ಥಲವಾಗಿ ತೋಱಿತ್ತು.
ಸ್ಥಲವೂ ಅಲ್ಲ, ನಿಃಸ್ಥಲವೂ ಅಲ್ಲ,
ನೋಟವೆ ಕೂಟ ಕೂಡಲ ಚೆನ್ನಸಂಗಾ. । ೭೫ । [೧೦೬೫]

೭೭೮

ನೆನಹದ ಸುಖವ ನೋಟ ನುಂಗಿತ್ತು, ನೋಟದ ಸುಖವ ಕೂಟ ನುಂಗಿತ್ತು,
ಕೂಟದ ಸುಖವ ಸಮರಸ ನುಂಗಿತ್ತು, ಸಮರಸದ ಸುಖವ ಪರವಶ ನುಂಗಿತ್ತು,
ಪರವಶದ ಸುಖವ ಕೂಡಲ ಚೆನ್ನಸಂಗಯ್ಯ ತಾನೇ ಬಲ್ಲ. । ೭೬ । [೧೪೫೯]

೭೭೯

ಅಱಿಯಲಿಲ್ಲದ ಅಱಿವು, ಮಱೆಯಲಿಲ್ಲದ ಮಱಹು.
ನೋಟವಿಲ್ಲದ ನೋಟ, ಕೂಟವಿಲ್ಲದ ಕೂಟ.
ಬೆಱಸಲಿಲ್ಲದ ಬೆಱಗು ನಿಂದುದು,
ಕೂಡಲ ಚೆನ್ನಸಂಗಾ ಲಿಂಗೈಕ್ಯವು. । ೭೭ । [೧೪೨೭]

೭೮೦

ನೋಡಿ ನೋಟವ ಮಱೆದು, ಕೂಡಿ ಕೂಟವ ಮಱೆದು,
ಬಯಲು ಸಮರಸಕ್ಕೆ ಮರುಳಾಯಿತಲ್ಲಾ,
ಜೀವಪ್ರಾಣನ ಭೇದವಳಿದು ನಿಜವದಕ್ಕಾಯಿತಲ್ಲಾ.
ಅನ್ಯ ಚಿಹ್ನವಳಿದು ತನ್ನ ತಾ ಮಱೆಯಿತ್ತು,
ಕೂಡಲ ಚೆನ್ನಸಂಗಾ ನೀನೆಂದೆ ನಿಂದಿತಲ್ಲಾ. । ೭೮ । [೧೪೨೮]

೭೮೧

ಸ್ಥಲವೆಂದೆನ್ನೆ, ನಿಃಸ್ಥಲವೆಂದೆನ್ನೆ, ತಾನು ಎನಗಾದ ಬಳಿಕ.
ನಿಃಪತಿಯೆನಗಾದ ಬಳಿಕ ಎತ್ತಲೆಂದಱಿಯೆನು,
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಲಿಂಗೈಕ್ಯವೆಂದು ಎನ್ನೆನಾಗಿ. । ೭೯ । [೧೩೪೦]

೭೮೨

ಆದಿ ಮಧ್ಯ ಅವಸಾನವಿಲ್ಲದುದ ವೇದಿಸುವ ವೇದ್ಯಂಗರಿದು,
ಸಾಧಿಸುವ ಸಾಧಕಂಗಲ್ಲದೆ,
ವಾದಿಯಲ್ಲ ಪರವಾದಿಯಲ್ಲ, ಸಾಧಕವಲ್ಲ ಧರ್ಮದ ಬೋಧಕನಲ್ಲ.
ಗಡಣವಿಲ್ಲದ ನುಡಿಯನು ಎಡಬಲನೆಂದಱಿಯನು,
ನಿಸ್ಸಂಗಿ ಶೂನ್ಯಸ್ಥಾನದಲ್ಲಿ ಸುಖಿಯಾಗಿಪ್ಪನು.
ದೇವನಲ್ಲ ಮಾನವನಲ್ಲ,
ಕೂಡಲ ಚೆನ್ನಸಂಗನಲ್ಲಿ ಸಯವಾದ ಲಿಂಗೈಕ್ಯನು. । ೮೦ । [೧೪೪೬]

೭೮೩

ಕಾಣದೆ ಕೇಳದೆ ಮೂವರು ಹೋದರೆಂದರೆ,
ಕಂಡು ನುಡಿಸಿ ದಿಟವಾಯಿತ್ತ ಕಂಡೆನಿದೇನೊ.
ಬಯಲಶಬ್ದವಡಗಿತ್ತ ಕಂಡೆ, ಅಜಾತ ಕೂಡಲ ಚೆನ್ನಸಂಗಯ್ಯಾ
ಲಿಂಗ ಜಂಗಮದನುಭಾವವೆನಲಿಲ್ಲ, ಎನಿಸಿಕೊಳಲಿಲ್ಲ. । ೮೧ । [೧೪೪೮]

೭೮೪

ಭವವಿಲ್ಲದ ಭಕ್ತನ ಪರಿಯ ನೋಡಾ!
ಮನ ಪ್ರಾಣ ಮುಕ್ತಿ ಭಾವ ವಿರಹಿತ
ಒಡಲಿಲ್ಲದ ಜಂಗಮದ ಪರಿಯ ನೋಡಾ!
ಸಿಡಿಲು ಮಿಂಚಿನ ರೂಹನೊಂದೆಡೆಯಲ್ಲಿ ಹಿಡಿಯಲುಂಟೆ!
ಈ ಉಭಯ ಒಂದಾದವರ ಕಂಡರೆ ನೀವೆಂಬೆನಯ್ಯಾ
ಕೂಡಲ ಚೆನ್ನಸಂಗಮದೇವಾ. । ೮೨ । [೧೦೬೭]

೭೮೫

ಆದಿಯಾಧಾರವಾಗಿಹುದೇ ಘನ, ಆ ಘನವ ವೇಧಿಸಿದುದೇ ಮನ
ಮನವು ಮಹದಲ್ಲಿ ನಿಂದುದೆ ಭಕ್ತಿ.

ಭಿನ್ನ ಭಾವಕ್ಕಿಚ್ಛೆದೋಱದಿಹುದೆ ಆಚಾರ.
ತಟ್ಟು ಮುಟ್ಟು ತಾಗು ನಿರೋಧವಿಲ್ಲದಿಹುದೆ ಪೂಜೆ.
ಆಸೆ ರೋಷ ಹರುಷವಿಲ್ಲದಿಹುದೆ ಪ್ರಸಾದ.
ಕರಣಮಥನಕಿಚ್ಛೆ ತೋಱದಿಹುದೆ ಅನುಭಾವ,
ಇಂತೀ ಸರ್ವಾಂಗದಲ್ಲಿ ಸಾಹಿತ್ಯವಾದ ನಿಜೈಕ್ಯಂಗೆ
ನಮೋ ನಮೋಯೆಂಬೆ ಕೂಡಲ ಚೆನ್ನಸಂಗಯ್ಯಾ. । ೮೩ । [೧೩೭೦]

೭೮೬

ಕುಲವಿಲ್ಲದ ಅಕುಲನು, ಶರೀರವಿಲ್ಲದ ಸಂಬಂಧಿ,
ಕೋಪವಿಲ್ಲದ ಶಾಂತನು, ಮತ್ಸರವಿಲ್ಲದ ಮಹಿಮನು.
ಕರ್ಮವಿಲ್ಲದ ಕಾರಣಿಕನು, ಅರ್ಪಿತವಿಲ್ಲದ ಆಪ್ಯಾಯನಿ,
ಜಂಗಮವಿಲ್ಲದ ಸಮಶೀಲನು, ಲಿಂಗವಿಲ್ಲದ ನಿರುತನು.
ಪ್ರಸಾದವಿಲ್ಲದ ಪರಿಣಾಮಿ ಕೂಡಲ ಚೆನ್ನಸಂಗಾ ನಿಮ್ಮ ಶರಣನು. । ೮೪ । [೧೨೮೯]

೭೮೭

ಭವಿಗೆ ಹುಟ್ಟಿದ ಭಕ್ತ, ಭಕ್ತಗೆ ಹುಟ್ಟಿದ ಪ್ರಸಾದ,
ಪ್ರಸಾದಕ್ಕೆ ಹುಟ್ಟಿದ ಅರ್ಪಿತ, ಅರ್ಪಿತಕ್ಕೆ ಹುಟ್ಟಿದ ಆರೂಢ,
ಆರೂಢಕ್ಕೆ ಹುಟ್ಟಿದ ಆಚಾರ, ಆಚಾರಕ್ಕೆ ಹುಟ್ಟಿದ ಆಗಮ.
ಕ್ರಿಯಾಜ್ಞಾನಸಂಪಾದನೆಯ ಕೂಡಲ ಚೆನ್ನಸಂಗಾ
ನಿಮ್ಮ ಶರಣ ಬಲ್ಲ. । ೮೫ । [೧೧೧೬]

೭೮೮

ಆಚಾರವಿಲ್ಲದೆ ಅನುಗ್ರಹ, ಅನುಗ್ರಹವಿಲ್ಲದೆ ಏನೂ ಇಲ್ಲ.
ದೇಶಗ್ರಾಹಕ ಅನುಗ್ರಾಹಕ ಸಮಗ್ರಾಹ ಸಂಗ್ರಾಹಿಯ
ಕೂಡಲ ಚೆನ್ನಸಂಗಯ್ಯಾ ಅನುಗ್ರಹ ಕಾರಣ ಅಂತಿಂತೆನಲಿಲ್ಲ. । ೮೬ ।

೭೮೯

ಮಾಡಿ ಮಾಡಿಸಿಕೊಂಬ ಎರಡಱ ಉಭಯ ಒಂದೆ,
ಲಿಂಗವೊಂದೆ, ಜಂಗಮವೊಂದೆ, ಪ್ರಸಾದವೊಂದೆ,
ಒಂದಾದಲ್ಲಿ ಎರಡಾಗಿ ಮಾಡುವ ಭಕ್ತ ನೀನೇ
ಕೂಡಲ ಚೆನ್ನಸಂಗಮದೇವಾ. । ೮೭ ।

೭೯೦

ಅನ್ಯಲಿಂಗ ಅನ್ಯಲಿಂಗವೆಂದೆಂಬಿರಿ,
ಅನ್ಯಲಿಂಗವದಾವುದು? ತನ್ನಲಿಹುದಾವುದು?
ಅಂಗದ ಮೇಲೆ ಲಿಂಗವುಳ್ಳವರ ಮನೆಯ ಹೊಗಿಸಲಾಗದು,
ಬಚ್ಚುಕಾಯಿಗೆ ನೀಡಲಾಗದು.
ಗುರು ಲಿಂಗ ಜಂಗಮ ಪ್ರಸಾದವಿಲ್ಲದವರ ಕಂಡರೆ ಮಾಡುವಾತ ಭಕ್ತ[೧]ನಲ್ಲ.[೧]
ಕೂಡಲ ಚೆನ್ನಸಂಗಮದೇವಾ. । ೮೮ । [೧೪೦೦]

೭೯೧

ತಾನು ಜಂಗಮವಾದರೆ ತನ್ನ ಕೈಯ ಲಿಂಗವು ತನಗೆ
ಬೆಸಮಗನುವಾಗಿರಬೇಡಾ.
ಇಂತಿದ್ದುದು ಉಭಯಾರ್ಥವು, ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಆ ಲಿಂಗವಾದ ಜಂಗಮವಪೂರ್ವ. । ೮೯ ।

ಐಕ್ಯನ ಮಾಹೇಶ್ವರ[೨]ಸ್ಥಲ[೨] :

೭೯೨

ಲಿಂಗ ಲಿಂಗವೆಂಬನ್ನಕ್ಕ ಜಂಗಮವಲ್ಲ,
ಪ್ರಸಾದ ಪ್ರಸಾದವೆಂಬನ್ನಕ್ಕ ಶರಣನಲ್ಲ,
ಗುರು ಲಿಂಗವೆಂಬುದಕ್ಕೆ ಆನಂಗವಿಸಲಾಱೆ, ಕೂಡಲ ಚೆನ್ನಸಂಗಯ್ಯಾ। ೯೦ ।

೭೯೩

ಕಾಯಸಂಮೋಹಿಯನು ಲಾಂಛನಧಾರಿಯೆಂಬೆ,
ಜೀವಸಂಮೋಹಿಯನು ಸಂಸಾರಿಯೆಂಬೆ,[೩]
ಭಾವಸಂಮೋಹಿಯನು ಅಜ್ಞಾನಿಯೆಂಬೆ,[೩]
ಮಿಗೆ ಮಿಗೆ ಮೀಸಲು ಸಹಜ ಶರಣ ಕೂಡಲ ಚೆನ್ನಸಂಗನೆಂಬೆ. । ೯೧ ।

೭೯೪

ಶಿಷ್ಯನ ಪೂರ್ವಾಶ್ರಯವ ಕಳೆದು ಭಕ್ತನ ಮಾಡಿದ ಬಳಿಕ,
ವಾಯುಪ್ರಾಣಿಯ ಕಳೆದು ಲಿಂಗಪ್ರಾಣಿಯ ಮಾಡಿದ ಬಳಿಕ,
ಪಂಚಭೂತಕಾಯವ ಕಳೆದು ಪ್ರಸಾದಕಾಯವ ಮಾಡಿದ ಬಳಿಕ,

೧-೧ x (ಮೂ), ೨-೨ ನು (ಮೂ), ೩+ ನು (ಮೂ).

ಅಲ್ಲಿ ಕುಲಸೂತಕ, ಛಲಸೂತಕ, ತನುಸೂತಕ, ಮನಸೂತಕ,
ನೆನಹುಸೂತಕ, ಭಾವಸೂತಕವುಳ್ಳನ್ನಕ್ಕ ಲಿಂಗವಂತರೆಂತೆಂಬೆ?
ಕುಲಸೂತಕವುಳ್ಳನ್ನಕ್ಕ ಭಕ್ತನಲ್ಲ, ಛಲಸೂತಕವುಳ್ಳನ್ನಕ್ಕ ಮಾಹೇಶ್ವರನಲ್ಲ,
ತನುಸೂತಕವುಳ್ಳನ್ನಕ್ಕ ಪ್ರಸಾದಿಯಲ್ಲ, ಮನಸೂತಕವುಳ್ಳನ್ನಕ್ಕ ಪ್ರಾಣಲಿಂಗಿಯಲ್ಲ,
ನೆನಹುಸೂತಕವುಳ್ಳನ್ನಕ್ಕ ಶರಣನಲ್ಲ, ಭಾವಸೂತಕವುಳ್ಳನ್ನಕ್ಕ ಲಿಂಗೈಕ್ಯನಲ್ಲ.
ಇಂತೀ ಷಡುಸೂತಕವಳಿದುಳಿದ
ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೯೨ ।

೭೯೫

ದೇಹೇಂದ್ರಿಯ ಮನಃಪ್ರಾಣಾದಿ ಅಹಮದೆ ತತ್ವಪದಾರ್ಥವ ಕೆಡಿಸಿತಲ್ಲಾ,
ಕೋಽಹಮೆನಲಱಿಯದ ಮುಗ್ಧಾ, ಸೋಽಹಂ ನಿನ್ನ ನೀ ತಿಳಿಯಾ,
ತತ್ವಮಸಿ ವಾಕ್ಯಾರ್ಥ ನೀನಾಗೆ, ಕೂಡಲ ಚೆನ್ನಸಂಗ ಬೇಱಿಲ್ಲ. । ೯೩ । [೯೦೨]

೭೯೬

ಯದ್ಭಾವಂ ತದ್ಭವತಿಯೆಂಬ ಭಾವವುಂಟಾಗಿ ಗುರುವಾಯಿತ್ತು,
ಯದ್ಭಾವಂ ತದ್ಭವತಿಯೆಂಬ ಭಾವವುಂಟಾಗಿ ಶಿಷ್ಯನಾದ.
ಯದ್ಭಾವಂ ತದ್ಭವತಿಯೆಂಬ ಭಾವವುಂಟಾಗಿ ಲಿಂಗವಾಯಿತ್ತು,
ಯದ್ಭಾವಂ ತದ್ಭವತಿಯೆಂಬ ಭಾವವುಂಟಾಗಿ ಭಕ್ತನಾದ.
ಯದ್ಭಾವಂ ತದ್ಭವತಿಯೆಂಬ ಭಾವವುಂಟಾಗಿ ಪ್ರಸಾದವಾಯಿತ್ತು,
ಯದ್ಭಾವಂ ತದ್ಭವತಿಯೆಂಬ ಭಾವವುಂಟಾಗಿ ಪ್ರಸಾದಿಯಾದ.
ಯದ್ಭಾವಂ ತದ್ಭವತಿಯೆಂಬ ಭಾವವುಂಟಾಗಿ ಕೂಡಲ ಚೆನ್ನಸಂಗ ತಾನಾದ. । ೯೪ ।

೭೯೭

ಆ ಮಾತನೆ ಮನೆಯ ಮಾಡಿ, ಸತಿಯ ನೆಲೆಗೊಳಿಸಿ,
ನಿಭ್ರಾಂತಿನ ಕದವನಿಕ್ಕಿ, ಸೂತಕವಳಿಯೆ ಸುಯಿದಾನಿ.
ಇದನಱಿದು ಮಱೆದವರ ಕೂಡಲ ಚೆನ್ನಸಂಗಯ್ಯನೆಂಬೆನು. । ೯೫ । [೧೧೯೮]

೭೯೮

ಅಂಧಕನ ಕೈಯ ಬಿಟ್ಟಲ್ಲಿ ಲೋಕವಿರೋಧ,
ಲೋಕವಿರೋಧಿ ಭಕ್ತ, ಭಕ್ತವಿರೋಧಿ ಶರಣ, ಶರಣವಿರೋಧಿ ಲಿಂಗೈಕ್ಯ,
ಈ ತ್ರಿವಿಧವಿರೋಧಿ ಕೂಡಲ ಚೆನ್ನಸಂಗನ ಮಹಾಘನವು. । ೯೬ ।

೭೯೯

ಭಕ್ತನೆಂಬೆನೆ ಭಕ್ತಸ್ಥಲ ಮುನ್ನವೆಯಿಲ್ಲ,
ಮಾಹೇಶ್ವರನೆಂಬೆನೆ ಮಾಹೇಶ್ವರಸ್ಥಲ ಮುನ್ನವೆಯಿಲ್ಲ,
ಪ್ರಸಾದಿಯೆಂಬೆನೆ ಪ್ರಸಾದಿಸ್ಥಲ ಮುನ್ನವೆಯಿಲ್ಲ,
ಪ್ರಾಣಲಿಂಗಿಯೆಂಬೆನೆ ಪ್ರಾಣಲಿಂಗಸ್ಥಲ ಮುನ್ನವೆಯಿಲ್ಲ,
ಶರಣನೆಂಬೆನೆ ಶರಣಸ್ಥಲ ಮುನ್ನವೆಯಿಲ್ಲ,
ಐಕ್ಯನೆಂಬೆನೆ ಐಕ್ಯಸ್ಥಲ ಮುನ್ನವೆಯಿಲ್ಲ
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. ।೯೭।

೮೦೦

ಅಂಗಲಿಂಗೈಕ್ಯನ ಲಾಂಛನಧಾರಿಯೆಂಬೆ,
ಜೀವಲಿಂಗೈಕ್ಯನ ಉಪಜೀವಿಯೆಂಬೆ,
ಪ್ರಾಣಲಿಂಗೈಕ್ಯನ ಸಂಸಾರಿಯೆಂಬೆ.
ಈ ತ್ರಿವಿಧ ಲಿಂಗೈಕ್ಯನೆ ? ಅಲ್ಲ, ಮತ್ತೆಯೂ ಲಿಂಗೈಕ್ಯನೇ ಬೇಕು. ತಿಳಿದು ನೋಡಾ!
ಸಾಹಿತ್ಯವಾದಲ್ಲಿ ಅಂಗಲಿಂಗೈಕ್ಯವು,
ಮುಟ್ಟಿದಲ್ಲಿ ಇಷ್ಟಲಿಂಗೈಕ್ಯವು,
ಬೆರಸಿದಲ್ಲಿ ಪ್ರಾಣಲಿಂಗೈಕ್ಯವು,
ಈ ತ್ರಿವಿಧಲಿಂಗೈಕ್ಯವು ಅಲ್ಲ, ಮತ್ತೆಯೂ ಲಿಂಗೈಕ್ಯವೆ ಬೇಕು. ತಿಳಿದು ನೋಡಾ!
ಕಾಯದ ಕೊನೆಯಲಿಪ್ಪುದು ಪ್ರಾಣಲಿಂಗವು,
ಜೀವದ ಕೊನೆಯಲಿಪ್ಪುದು ಪ್ರಾಣಲಿಂಗವು,
ಭಾವದ ಕೊನೆಯಲಿಪ್ಪುದು ಪ್ರಾಣಲಿಂಗವು,
ಕಾಯ ಲಿಂಗವೆಂದು ಪೂಜಿಸುವ ಖಂಡಿತರನೇನೆಂಬೆ!
ಜೀವ ಲಿಂಗವೆಂದು ಪೂಜಿಸುವ ಉಪಜೀವಿಗಳನೇನೆಂಬೆ !
ಭಾವ ಲಿಂಗವೆಂದು ಪೂಜಿಸುವ ಭ್ರಮಿತರನೇನೆಂಬೆ !
ಈ ಉಭಯ ಲಿಂಗವನಱಿದು, ಏಕೋನಿಷ್ಠೆ ಲಿಂಗವ ಮಱೆದು
ಆ ಇಷ್ಟದಲ್ಲಿ ನೆರೆಯ ಬಲ್ಲರೆ ಕೂಡಲ ಚೆನ್ನಸಂಗಯ್ಯಾ
ಅವರನಚ್ಚ ಲಿಂಗೈಕ್ಯರೆಂಬೆ. ।೯೮।

೮೦೧

ಅಱಿವಿಲ್ಲದ ಕಾರಣ ಭವಕ್ಕೆ ಬಂದರು,
ಅಱಿವಿಲ್ಲದವಂಗೆ ಗುರುವಿಲ್ಲ, ಗುರುವಿಲ್ಲದವಂಗೆ ಆಚಾರವಿಲ್ಲ.

ಆಚಾರವಿಲ್ಲದವಂಗೆ ಲಿಂಗವಿಲ್ಲ, ಲಿಂಗವಿಲ್ಲದವಂಗೆ ಜಂಗಮವಿಲ್ಲ.
ಜಂಗಮವಿಲ್ಲದವಂಗೆ ಪ್ರಸಾದವಿಲ್ಲ, ಪ್ರಸಾದವಿಲ್ಲದವಂಗೆ ಗಣತ್ವವಿಲ್ಲ.
ಅಜೀವುಸಾಹಿತ್ಯ ಗುರು, ಗುರುಸಾಹಿತ್ಯ ಆಚಾರ,
ಆಚಾರಸಾಹಿತ್ಯ ಲಿಂಗ, ಲಿಂಗಸಾಹಿತ್ಯ ಜಂಗಮ,
ಜಂಗಮಸಾಹಿತ್ಯ ಪ್ರಸಾದ, ಪ್ರಸಾದ ಸಾಹಿತ್ಯ ಗಣತ್ವ
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಈ ಒಂದು ಸ್ಥಲವಾದವರಿಗೆಲ್ಲಾ ಭಕ್ತಿ ಉನ್ಮದ ಉಂಟು,
[1][ಸಕಳ][1] ನಿರ್ವಾಣ ಲಿಂಗೈಕ್ಯಪದವಪೂರ್ವ. । ೯೯ । [೧೩೬೨]

೮೦೨

ಲಿಂಗಲಿಂಗವೆಂದು ಕಾಣದನ್ನಕ್ಕ,
ಜಂಗಮಜಂಗಮವೆಂದು ಕಾಣದನ್ನಕ್ಕ,
ಇನ್ನಾಗದಯ್ಯಾ, ಇನ್ನಾಗದಯ್ಯಾ,
ಅಜೀವಿನೊಳಗಣ ಘನವೆ ಸುಳುಹಡಗಿದ ಸೂತಕ.
ಇನ್ನಾಗದಯ್ಯಾ, ಇನ್ನಾಗದಯ್ಯಾ,
ಇದು ಕಾರಣ, ಕೂಡಲ ಚೆನ್ನಸಂಗಮದೇವಯ್ಯ
ಸರ್ವಾಂಗ ಸಂದೇಹಿಗಳಿಗೆಂತೊಲಿವ ? । ೧೦೦ ।[೧೩೩]

೮೦೩

ಗುರು ಉಂಟೆಂಬವಂಗೆ ಗುರುವಿಲ್ಲ, ಲಿಂಗ ಉಂಟೆಂಬವಂಗೆ ಲಿಂಗವಿಲ್ಲ,
ಜಂಗಮ ಉಂಟೆಂಬವಂಗೆ ಜಂಗಮವಿಲ್ಲ, ಪ್ರಸಾದ ಉಂಟೆಂಬವಂಗೆ ಪ್ರಸಾದವಿಲ್ಲ.
ಗುರುವಿಲ್ಲವೆಂಬವಂಗೆ ಗುರು ಉಂಟು, ಲಿಂಗವಿಲ್ಲವೆಂಬವಂಗೆ ಲಿಂಗ ಉಂಟು,
ಜಂಗಮ ವಿಲ್ಲವೆಂಬವಂಗೆ ಜಂಗಮವುಂಟು,
ಪ್ರಸಾದವಿಲ್ಲವೆಂಬವಂಗೆ ಪ್ರಸಾದವುಂಟು.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ, ತಾನಿಲ್ಲೆಂಬವಂಗೆ ತಾನುಂಟು. । ೧೦೧ ।

೮೦೪

ಅರ್ಪಿತವೆಂದರೆ ಅನರ್ಪಿತವಾಯಿತ್ತು, ಅನರ್ಪಿತವೆಂದರೆ ಅರ್ಪಿತವಾಯಿತ್ತು.
ಗುರುವೆಂದರೆ ಶಿಷ್ಯನಾಯಿತ್ತು, ಶಿಷ್ಯನೆಂದರೆ ಗುರುವಾಯಿತ್ತು,
ಗುರುಶಿಷ್ಯ ಸಂಬಂಧ [2]ಕ್ರೀ ಪ್ರತಿ[2]ಭಾವವುಳ್ಳನ್ನಕ್ಕ
ಘನಲಿಂಗೈಕ್ಯವೆಲ್ಲಿಯದೊ? ಕೂಡಲ ಚೆನ್ನಸಂಗಮದೇವಾ ? । ೧೦೨ । [೧೩೮೬]

೧–೧ ಕಳಶ ನೀ (ಮೂ), ೨–೨ ತ್ರಿ ಪ್ರಥಕೃತಿ (ಮೂ).

೮೦೫

ನರರಿಗೆಯ್ದೆ ಗುರುವಪ್ಪ ಹಿರಿಯರು, ನೀವು ಕೇಳಿರೆ!
ನಿಮ್ಮ ಗುರುತನ ಕೆಟ್ಟು ಶಿಷ್ಯನ ಶಿಷ್ಯತನವ ಕೆಡಿಸಬಲ್ಲರೆ,
ಅವರ ಹಿರಿಯರೆಂಬೆ, ಕೂಡಲ ಚೆನ್ನಸಂಗಮದೇವಾ. ।೧೦೩।

೮೦೬

ಲಿಂಗಸ್ಥಲವಿಲ್ಲದವರ ಭಕ್ತರೆಂಬೆ,
ಗುರುಸ್ಥಲವಿಲ್ಲದವರ ಪ್ರಸಾದಿಗಳೆಂಬೆ,
ಪ್ರಸಾದಸ್ಥಲವಿಲ್ಲದವರ ಜಂಗಮವೆಂಬೆ,
ಈ ತ್ರಿವಿಧಸ್ಥಲವಿಲ್ಲದವರ ಶರಣರೆಂಬೆ.
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಭವಿಸಹಿತವಾಗಿದ್ದಾತನ ಲಿಂಗೈಕ್ಯನೆಂಬೆ. ।೧೦೪।[೧೩೬೯]

೮೦೭

ಲಿಂಗದ್ರೋಹಿಯನೆ ಗುರುವೆಂಬೆ, ಗುರುದ್ರೋಹಿಯನೆ ಶಿಷ್ಯನೆಂಬೆ.
ಸಮಯದ್ರೋಹಿಯನೆ ಭಕ್ತನೆಂಬೆ, ಪ್ರಸಾದದ್ರೋಹಿಯನೆ ಮಾಹೇಶ್ವರನೆಂಬೆ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ನಿಮ್ಮ ಶರಣ ಸರ್ವಾಂಗದ್ರೋಹಿಯ ಲಿಂಗೈಕ್ಯನೆಂದೆಂಬೆ. ।೧೦೫।[೧೩೧೯]

೮೦೮

[1]ಮನ ನಷ್ಟವಾದರೆ ಭಕ್ತನೆಂಬೆ,
ಉಪದೇಶ ನಷ್ಟವಾದರೆ ಗುರುವೆಂಬೆ,
ಭಾವ ನಷ್ಟವಾದರೆ ಲಿಂಗವೆಂಬೆ,
[2]ಗ[2]ಮನ ನಷ್ಟವಾದರೆ ಜಂಗಮವೆಂಬೆ,
ಅರ್ಪಿತ ನಷ್ಟವಾದರೆ ಪ್ರಸಾದಿಯೆಂಬೆ,
ಆಕಾರ ನಷ್ಟವಾದರೆ ಐಕ್ಯನೆಂಬೆ.
ಇಂತೀ ಷಡುಸ್ಥಲ ನಿಂದ ನಿಲವ ಪರಿಣಾಮ ಪದವ
ಕೂಡಲ ಚೆನ್ನಸಂಗಾ ನಿಮ್ಮ ಶರಣನೆ ಬಲ್ಲ. ।೧೦೬।[೧೨೨೫]

೧+ ಗ (ಮೂ). ೨–೨ x (ಮೂ).

೮೧೯
ಸ್ಥಲಹೋಯಿತ್ತೆನಗೆ, ನಿಃಸ್ಥಲ ಹೋಯಿತ್ತೆನಗೆ.
ಗೋರಿಕಲ್ಲ ಮಾಡ ಹೋಯಿತ್ತೆನಗೆ,
ಹೂವಿಮಾನ ಹೋಯಿತ್ತೆನಗೆ,
ಬಸವ ಹೋದನೆನಗೆ, ಬಸವನ ಜಂಗಮ ಹೋದನೆನಗೆ.
ಇನ್ನು ಬಸವಾಯೆಂದೆನಾದರೆ ಕೂಡಲ ಚೆನ್ನಸಂಗಾ ನಿಮ್ಮಾಣೆ. ।೧೦೭।[೧೪೭೦]

೮೨೦
ಗುರುವಾದರೆ ಲಿಂಗವನೆತ್ತ ಬಲ್ಲ?
ಜಂಗಮನಾದರೆ ಪ್ರಸಾದವನೆತ್ತ ಬಲ್ಲ?
ಇದು ಕಾರಣ,
ಕೂಡಲ ಚೆನ್ನಸಂಗಮದೇವಯ್ಯನೆತ್ತ ಬಲ್ಲ ಬಸವಣ್ಣನ? ।೧೦೮।

೮೨೧
ಗುರುಮುಟ್ಟಿ ಗುರುವಾಯಿತ್ತು,
ಲಿಂಗ ಮುಟ್ಟಿ ಲಿಂಗವಾಯಿತ್ತು,
ಜಂಗಮ ಮುಟ್ಟಿ ಜಂಗಮವಾಯಿತ್ತು,
ಪ್ರಸಾದ ಮುಟ್ಟಿ ಪ್ರಸಾದವಾಯಿತ್ತು,
ಪ್ರಸಾದ ಪರವಸ್ತು, ಪರದಲ್ಲಿಪ್ಪುದಾಗಿ,
ಇನ್ನು ಪ್ರಸಾದವ ಮುಟ್ಟಬೇಕೆಂಬವರ ಮುಖವ ನೋಡಲಾಗದು,
ಕೂಡಲ ಚೆನ್ನಸಂಗಯ್ಯಾ. ।೧೦೯।[೧೩೯೪]

ಐಕ್ಯನ ಪ್ರಸಾದಿ[1]ಸ್ಥಲ[1] :

೮೨೨
ಗುರುವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ.
ಲಿಂಗವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ.
ಜಂಗಮವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ.
ಪ್ರಸಾದವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ.
ಇಂತೀ, ಚತುರ್ವಿಧವನಿಂಬಿಟ್ಟುಕೊಂಡು ತನ್ನಲ್ಲಿ ಸತ್ಯನಾಗಿಪ್ಪ
ಕೂಡಲ ಚೆನ್ನಸಂಗನಲ್ಲಿ ಸತ್ಯಪ್ರಸಾದಿಯೆಂಬೆನು. ।೧೧೦।

೧–೧ x (ಮೂ).

೮೧೩

ಆಯತ ಪ್ರಸಾದಿ, ಸ್ವಾಯತ ಪ್ರಸಾದಿ,
ಸನ್ನಿಹಿತ ಪ್ರಸಾದಿ, ಸಮಯಭೋಗ ಪ್ರಸಾದಿ.
ಪ್ರಸಾದವೆ ಪ್ರಾಣವಾಗಿ,
ಪ್ರಸಾದವು ಪ್ರಸಾದಿಯನೆ ಅವಗ್ರಹಿಸಿಕೊಂಡಿಪ್ಪುದು.
ಪ್ರಸಾದವೂ ಪ್ರಸಾದಿಯೂ ಏಕವಾಗಿದ್ದಡಾನು
ನಮೋ ನಮೋಯೆಂಬೆ ಕೂಡಲ ಚೆನ್ನಸಂಗಮದೇವಾ. । ೧೧೧ ।[೭೫೯]

೮೧೪

ರುಚಿಯೆಂದರೆ ರೂಪವಾಯಿತ್ತು, ಸವಿಯೆಂದರೆ ಸಂದಾಯಿತ್ತು,
ರುಚಿಯೆನ್ನ[೧][ದ],[೧] ರೂಪೆನ್ನ[೧][ದ],[೧] ಸವಿಯೆನ್ನ[೧][ದ],[೧] ಸಂದಿಲ್ಲ[೧][ದ][೧]
ಕೂಡಲ ಚೆನ್ನಸಂಗನ ಪ್ರಸಾದಿಗೆ ನಮೋ ನಮೋಯೆಂಬೆ. । ೧೧೨ ।

೮೧೫

ರುಚಿವಿರಹಿತ ಪ್ರಸಾದಿ, ಸ್ಪರ್ಶವಿರಹಿತ ಅರ್ಪಿತ
ಎಂದೆನೆಂದೆನಾರಿಗಾದರೆಯೂ ಸಾಧ್ಯವಾಗಲಿ.
ಕೂಡಲ ಚೆನ್ನಸಂಗನ ಪ್ರಸಾದಿಯ ಪ್ರಸಾದದಿಂದ
ಎಂದೆನೆಂದೆನಾರಿಗಾದರೆಯೂ ಸಾಧ್ಯವಾಗಲಿ. । ೧೧೩ ।[೬೮೪]

೮೧೬

ಅವಿನಾಶಂಗೆ ವಿನಾಶವರ್ಜಿತವಾದರೆ ಪ್ರಸಾ[೨]ದಿ,[೨]
ಆ ಪ್ರಸಾದ ವರ್ಣನಾಸ್ತಿಯಾಗಿ ಕೊಳಬಲ್ಲಡೆ ಪ್ರಸಾದಿ.
ಆ ಪ್ರಸಾದಿಯೆ[೩]ಂಬ[೩] ಅವಿನಾಶಂಗೆ ನಮೋ ನಮೋಯೆಂಬೆ
ಕೂಡಲ ಚೆನ್ನಸಂಗಮದೇವಾ. । ೧೧೪ ।[೭೨೯]

೮೧೭

ಸಾಲವ ಕೊಟ್ಟು ನಿಮ್ಮ ಶರಣ ಶಿವಲೋಕಕ್ಕೆ ಹೋದನಲ್ಲಾ :
ಪೃಥ್ವಿಯ ಸಾಲವ ಪೃಥ್ವಿಗೆ ಕೊಟ್ಟು,
ಅಪ್ಪುವಿನ ಸಾಲವ ಅಪ್ಪುವಿಗೆ ಕೊಟ್ಟು,
ತೇಜದ ಸಾಲವ ತೇಜಕ್ಕೆ ಕೊಟ್ಟು,

೧–೧ ದೆ (ಮೂ). ೨–೨ ದ (ಮೂ). ೩–೩ ಬೆ (ಮೂ).

ವಾಯುವಿನ ಸಾಲವ ವಾಯುವಿಗೆ ಕೊಟ್ಟು,
ಆಕಾಶದ ಸಾಲವ ಆಕಾಶಕ್ಕೆ ಕೊಟ್ಟು,
ಪ್ರಸಾದವನಾರಿಗೆಯೂ ಕೊಡಲಿಲ್ಲೆಂದು
ಕೂಡಲ ಚೆನ್ನಸಂಗನಲ್ಲಿ ಹೂಣಿ ಹೊಕ್ಕ ಶರಣಂಗೆ
ಮಿಗೆ ಮಿಗೆ ನಮೋ ನಮೋಯೆಂಬೆ. । ೧೧೫ ।

೮೧೮

ನವಖಂಡಪೃಥ್ವಿ ಚತುರ್ದಶಭುವನದೊಳಗೆ
ಸ್ಥೂಲವಾವುದು, ಸೂಕ್ಷ್ಮವಾವುದು ಬಲ್ಲವರು ನೀವು ಹೇಳಿರೆ !
ಕಾಲಚಕ್ರವೊ, ಕರ್ಮಚಕ್ರವೊ, ನಾದಚಕ್ರವೊ, ಬಿಂದುಚಕ್ರವೊ
ಇದರೊಳಗೆ ಆವುದ ಹಿರಿದೆಂಬೆನಾವುದ ಕಿಱಿದೆಂಬೆ, ಬಲ್ಲವರು ನೀವು ಹೇಳಿರೆ !
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವೆಂಬಡೆ
ಇಕ್ಕಿದ ಊಟಾಳ ತುಂಬುತ ಕೆಡಹುತಲಿದ್ದೂದಾಗಿ,
ಕೀಲು ಮುಱಿದು ಊಟಾಳ ನಿಂದು ನಿಶ್ಶೂನ್ಯವಾಗಿ
ಕೂಡಲ ಚೆನ್ನಸಂಗನಲ್ಲಿ ಮಹಾಪ್ರಸಾದಿ. । ೧೧೬ ।

೮೧೯

ಸ್ವಯಮಜ್ಜನ, ಸ್ವಯಪೂಜೆ, ಸ್ವಯಾರೋಗಣೆ ಕೃತ್ಯ ಶರನರತಿಮುಚ್ಯತೇ
ಎಂದುದಾಗಿ, ನಾ ನೀನೆಂಬ ಸಂಶಯ ನಿಂದ ನಿಲವೆಂತಿದ್ದಿತೆಂದರೆ :
[1][ಪ್ರ][1]ಪಂಚ ಪರತಂತ್ರವ ಮೀಱಿ,
ಭಾವವ ಬಿಟ್ಟು, ಘನ ರವಿಲೋಚನನಾಗಿ,
ಅರ್ಪಿತವೆ [2][ಭುಂಜಿತ],[2] ಅನರ್ಪಿತವೆ ಅಭುಂಜಿತ,
ಸ್ಥೂಲ ಸೂಕ್ಷ್ಮಘನನಿತ್ಯವೆಂದಱಿಯರು, ಜಡವೇಷಲಾಂಛನಧಾರಿಗಳು,
ಕಾಯಜೀವಪ್ರಸಾದವಂ ಬಿಟ್ಟು ಸರ್ವ[3]ಭಾವ[3]ರುಚಿಪ್ರಸಾದಿ.
ಕೂಡಲ ಚೆನ್ನಸಂಗಯ್ಯಾ ಆತ[4] ಸರ್ವಾಂಗಪ್ರಸಾದಿ. । ೧೧೭ ॥[೧೪೦೭]

೮೨೦

ಅಱಿವಱಿತು ಮಱಹು ನಷ್ಟವಾದರೆ ಭಕ್ತ,
ಆಚಾರವಱಿತು ಅನಾಚಾರ ನಷ್ಟವಾದರೆ ಜಂಗಮ,
ಅರ್ಪಿತವಱಿತು ಅನರ್ಪಿತ ನಷ್ಟವಾದರೆ ಪ್ರಸಾದಿ,

೧-೧ ಪರ (ಮೂ), ೨-೨ ಯಂಚಿತ (ಮೂ), ೩-೩ ಭವಿ (ಮೂ), ೪+ ಆತ (ಮೂ).

ಪ್ರಸಾದವಱಿತು ಪದಾರ್ಥ ನಷ್ಟವಾದರೆ ಪರಿಣಾಮಿ,
ಪರಿಣಾಮವಱಿತು ಪರಮಸುಖ ನೆಲೆಗೊಂಡರೆ
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯವು. । ೧೧೮ ।[೯೫]

೮೨೧
ಕಾಮಿಸಿ ಕಲ್ಪಿಸಲಿಲ್ಲ, ಕಲ್ಪಿಸಿ ಭಾವಿಸಲಿಲ್ಲ,
ಭಾವಿಸಿ ರೂಹಿಸಲಿಲ್ಲ, ರೂಹಿಸಿ ಭೇದಿಸಲಿಲ್ಲ,
ಇದು ಕಾರಣ, ಕೂಡಲ ಚೆನ್ನಸಂಗಮದೇವಾ,
ಸರ್ವಾಂಗಲಿಂಗವಾದಲ್ಲಿ ಅನರ್ಪಿತವಿಲ್ಲ. । ೧೧೯ ।[೧೪೪೯]

೮೨೨
ಉಭಯ ಕಾಮ, ಉಭಯ ಶಕ್ತಿ, ಉಭಯ ಆಶ್ರಮವು–
ಅನಾಶ್ರಮವು, ಉಭಯ ತಾನೆ ಪ್ರಸಾದಿ.
ಉಭಯನಾಮದ ಮೇಲೆ ನಾಮವಾದುದನು
ಲಿಂಗದೇಹಿಯೆಂಬಾತಂಗಱಿಯಬಾರದು.
ಇದು ಕಾರಣ ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದಿಗಲ್ಲದೆ,
ಅಱಿಯಬಾರದು. । ೧೨೦ ।[೧೨೩೧]

೮೨೩
ಸರ್ಪದಷ್ಟವಾದರೆ ಗಾರುಡವುಂಟು, ಪ್ರಸಾದದಷ್ಟವಾದರೆ ಗಾರುಡವಿಲ್ಲ.
ಅಂಗದ ಕೈಯಲಾದುದ ಲಿಂಗಕ್ಕೆ ಕೊಡಲಿಲ್ಲ,
ಲಿಂಗದ ಕೈಯಲಾದುದ ಲಿಂಗಕ್ಕೆ ಕೊಡಲಿಲ್ಲ.
ಲಿಂಗದ ಒಡಲೆಂಬರು, ಲಿಂಗಕ್ಕೆ ಒಡಲುಂಟೆ?
ಈ ಉಭಯ ಸಂಗ ಕೂಡಲ ಚೆನ್ನಸಂಗಾ ನಿಮ್ಮಲ್ಲಿ ವಿಚಾರಿಸೂದು
ಮಹಾಘನ ತಾನು. । ೧೨೧ ।

೮೨೪
ಶಬ್ದವೆಂ[೧]ಬುದು[೧] ಶ್ರೋತ್ರದೆಂಜಲು, ರೂಪೆಂಬುದು ನಯನದೆಂಜಲು,
ವಾಸನೆಯೆಂಬುದು ನಾಸಿಕದೆಂಜಲು, ರುಚಿಯೆಂಬುದು ಜಿಹ್ವೆಯೆಂಜಲು,
ಸ್ಪರ್ಶವೆಂಬುದು ತ್ವಕ್ಕಿನೆಂಜಲು,

೧–೧ ಬೆನೆ (ಮೂ).

ಮಾಡಲಾಗದು : ಲಿಂಗಕ್ಕೆ ರೂಹಿಲ್ಲ, ಜಂಗಮಕ್ಕೆ ಅಂಗವಿಲ್ಲ.
ಪದಾರ್ಥವ ನೀಡಬಲ್ಲ ನಿಜೈಕ್ಯ ನಿಮ್ಮ ಶರಣ,
ಕೂಡಲ ಚೆನ್ನಸಂಗಮದೇವಾ. । ೧೨೨ ।

೮೨೫
ಆದಿಯ ಪ್ರಸಾದವ ಕೊಂಬಡೆ ಆತ್ಮದ್ರೋಹಿ,
ಗುರುಪ್ರಸಾದವ ಕೊಂಬಡೆ ಗುರುದ್ರೋಹಿ,
ಲಿಂಗಪ್ರಸಾದವ ಕೊಂಬಡೆ ಲಿಂಗದ್ರೋಹಿ,
ಜಂಗಮಪ್ರಸಾದವ ಕೊಂಬಡೆ ಜಂಗಮದ್ರೋಹಿ.
ಸಮಯಪ್ರಸಾದವ ಕೊಂಬಡೆ ಭಾವವಳಿಯದಾಗಿ,
ಕೂಡಲ ಚೆನ್ನಸಂಗನ ಹಿರಿಯನ ಹಿರಿಯ ಮಗ
ಸಂಗನಬಸವಣ್ಣನ ಪ್ರಸಾದಕ್ಕೆ ನಾನೆಂಬ ಓಗರ. । ೧೨೩ ।

೮೨೬
ಕಾಯವಿರೋಧಿ [೧]ಸ್ಪರ್ಶನ,[೧] ಭಾವವಿರೋಧಿ ದರ್ಶನ, ರುಚಿವಿರೋಧಿ ಪ್ರಸಾದಿ.
ಕೂಡಲ ಚೆನ್ನಸಂಗಾ
ನಿಮ್ಮ ಶರಣನ ಕಾಯ ಲಿಂಗಕ್ಕೆ ಓಗರವಾಯಿತ್ತು. । ೧೨೪ ।[೧೨೯]

೮೨೭
ಸಂಕಲ್ಪ ವಿಕಲ್ಪವೆಂಬುದಿಲ್ಲ,
ಭಾವ ಅಭಾವವೆಂಬುದಿಲ್ಲ, ಅಭಾವ ಭಾವವೆಂಬುದಿಲ್ಲ,
ಪದಾರ್ಥ ಪ್ರಸಾದವೆಂಬುದಿಲ್ಲ, ಪ್ರಸಾದ ಪ್ರದಾರ್ಥವೆಂಬುದಿಲ್ಲ.
ಅದೇನು ಕಾರಣ ? ನಿಃಪದಾರ್ಥ ನಿಃಪ್ರಸಾದ ಕೂಡಲ ಚೆನ್ನಸಂಗಯ್ಯಾ
ಗುರುಲಿಂಗವಾರೋಗಣೆಯ ಮಾಡಿದ ಕಾರಣ. । ೧೨೫ ।

೮೨೮
ನೀನಳವಡಿಸಿಕೊಟ್ಟುದು ನಿನಗೆ ಅರ್ಪಿತವಯ್ಯಾ,
ಆರೋಗಣೆ ಮಹಾರೋಗಣೆ ಸಕಲಗಣಂಗಳಿಗೆ ಹಿತಾರ್ಥ.
ಕೂಡಲ ಚೆನ್ನಸಂಗಯ್ಯಾ ನಿನಗೆ ಕ್ಷುತ್ತಿಲ್ಲಾಗಿ
ಅರ್ಪಿ[೨]ತ[೨] ಮಾಡಲಿಲ್ಲ. । ೧೨೬ ।[೭೫೨]

೧–೧ ಪರುಶನ(ಮೂ), ೨–೨ x(ಮೂ).

೮೨೯
ನಿತ್ಯನೆಂಬ ಭಕ್ತನ ಮನೆಗೆ ಘನಚೈತನ್ಯನೆಂಬ ಜಂಗಮ ಬಂದಡೆ,
ಜಲವಿಲ್ಲದ ಜಲದಲ್ಲಿ ಪಾದಾರ್ಚನೆಯ ಮಾಡಿ[೧]ದಡೆ,[೧]
ಮಾಡಿದ ಆ ಪಾದೋದಕವೆ ಮಹಾಪದವಯ್ಯಾ,
ಸ್ವಚ್ಛಾನಂದಜಲೇ ನಿತ್ಯಂ ಪ್ರಕ್ಷಾಲ್ಯ ಚರಪಾದುಕಾಂ ।
ತಚ್ಚ ಪಾದೋದಕಂ ಪೀತ್ವಾ ಸ ಮುಕ್ತೋ ನಾತ್ರ ಸಂಶಯಃ ॥
ಎಂದುದಾಗಿ,
ಆ ಪಾದೋದಕದಲ್ಲಿ ಪರಮಪರಿಣಾಮಿ
ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೧೨೭ ।[೧೧೩೧]

೮೩೦
ಲಿಂಗಸ್ಥಲವೆಂಬೆನೆ ಲಿಂಗಕ್ಕೆ ನೆಲೆಯಿಲ್ಲ,
ಜಂಗಮಸ್ಥಲವೆಂಬೆನೆ ಜಂಗಮಕ್ಕೆ ಜನನವಿಲ್ಲ,
ಪ್ರಸಾದಸ್ಥಲವೆಂಬೆನೆ ಪ್ರಸಾದಕ್ಕೆ ಪರಿಣಾಮವಿಲ್ಲ,
ಈ ತ್ರಿವಿಧವೂ ಅಲ್ಲಾಯೆಂಬೆನೆ?
ಕೂಡಲ ಚೆನ್ನಸಂಗನಲ್ಲಿ ಬಸವಣ್ಣನೇ ಬಲ್ಲ. । ೧೨೮ ।[೨] [೬೫೭]

೮೩೧
ಸರ್ವಾಂಗ[೩]ವೂ ಲಿಂಗ[೩]ವಾದ ಆರೋಗಣೆಗೆ ಆಪ್ಯಾಯನವೆ ಕರಸ್ಥಲ.
ನಿಂದುದೆ ಓಗರ, ಬಂದ ಪರಿಣಾಮವೆ ಪ್ರಸಾದವಾಗಿ
ಹೇಳಲಿಲ್ಲದ ಕೇಳಲಿಲ್ಲದ ನಿರ್ಣಯ, ಕೂಡಲಿಲ್ಲ ಕಳೆಯಲಿಲ್ಲ ನೋಡಾ.
ಇದು ಕಾರಣ, ಕೂಡಲ ಚೆನ್ನಸಂಗಮದೇವಾ
ಬಸವನನುಗ್ರಹಿಸಿಕೊಂಡ, ನಿಂದ ನಿಲವಿನ ಸಹಜ[೪]ದಲ್ಲಿ[೪]
ಉದಯಿಸಿದ ಲಿಂಗನಿರಂತರ. । ೧೨೯ ।[೧೦೦೭]

೮೩೨
ಹನ್ನೆರಡು ಗಾವುದ ವಿಸ್ತೀರ್ಣ ಮಹಾಪಟ್ಟಣಕ್ಕೆ
ಕಲ್ಯಾಣವೆಂಬ ಪ್ರಣತೆ, [೫]ಮಹತ್ತೆಂಬ[೫] ಎಣ್ಣೆ,
ಬಸವನೆಂಬ ಸ್ವಯಂಜ್ಯೋತಿ,

೧-೧ x ಮೂ, ೨ ಲಿಪಿಕಾರರ ಕೈತಪ್ಪಿ ೧೨೭ನೆಯ ವಚನ ಎಂಬ ಅಂಕಿ ಹಾಕಿದ್ದಾನೆ. (ಸಂ), ನೋಡಿ : ೪೪೫ನೆಯ ವಚನ(ಸಂ)೩-೩ x (ಮೂ), ೪-೪ x (ಮೂ), ೫-೫ ಮಹಂತೆಂಬ (ಮೂ).

ಅಲ್ಲಿ ಕಾಳಯ್ಯ ಚವುಡಯ್ಯ ಕೋಲಶಾಂತಯ್ಯ
ಮುಖವಾಡದ ಕೇಶಿರಾಜ ಖಂಡಣೆಯ ಬೊಮ್ಮಣ್ಣ
ಮಿಂಡ ಮಲ್ಲಿನಾಥ ಹಡಪದ ಅಪ್ಪಣ್ಣ ಮಡಿವಾಳ ಮಾಚಯ್ಯ
ಅವ್ವೆ ನಾಗವ್ವೆ ಸಹಿತ ಇವರೆಲ್ಲರೂ ಸಂಗನಬಸವಣ್ಣನ ಬಯಲ ಕೂಡಿದರು.
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಇವರ ಪ್ರಸಾದದ ಬಯಲೆನಗಾಯಿತ್ತು. । ೧೩೦ ।[೧೪೫೫]

೮೩೩

[೧]ದಾಸ[೧]ಪ್ರಸಾದವ ದಾಸಿಮಯ್ಯಗಳು ಕೊಂಡರು,
ಪ್ರಾಣಪ್ರಸಾದವ ಸಿರಿಯಾಳ ಕೊಂಡ,
ಸಮತೆ ಪ್ರಸಾದವ ಬಲ್ಲಾಳ ಕೊಂಡ,
ಜಂಗಮಪ್ರಸಾದವ ಬಸವಣ್ಣ ಕೊಂಡ,
[೨]ಸಮಯ[೨]ಪ್ರಸಾದವ ಬಿಬ್ಬಬಾಚಯ್ಯಗಳು ಕೊಂಡರು,
ಜ್ಞಾನಪ್ರಸಾದವ ಅಕ್ಕಗಳು ಕೊಂಡರು,
ಶೂನ್ಯಪ್ರಸಾದವ ಪ್ರಭುದೇವರು ಕೊಂಡರು.
ಎನಗಿನ್ನೆಂತಯ್ಯಾ? ಮುಳ್ಳುಗುತ್ತ ತೆಱಹಿಲ್ಲ.
ಇದು ಕಾರಣ, ಕೂಡಲ ಚೆನ್ನಸಂಗನ ಶರಣರ
ಒಕ್ಕು ಮಿಕ್ಕ ಪ್ರಸಾದವೆನಗಾಯಿತ್ತು. । ೧೩೧ ।[೭೫೬]

೮೩೪

ಗೋಚರ ಅಗೋಚರ [೩]ಸಾಕಾರ[೩] ನಿರಾಕಾರ,
ಶೂನ್ಯ ನಿಶ್ಶೂನ್ಯವೆಂದು[೪]ದು[೪] ಪುರಾತರ ವಚನ.
ಕೂಡಲ ಚೆನ್ನಸಂಗಯ್ಯ ಮುಟ್ಟಿತ್ತೇ ಆಯಿತ್ತು ಮಹಾಪ್ರಸಾದ. । ೧೩೨ ।[೭೫೧]

೮೩೫

ಮುಟ್ಟದ ಮುನ್ನ ದಿಟ ಘಟಿಸಿ ನಿಂದು ಸಟೆಯಿಲ್ಲ ಕಾಣಿರೆ!
ಮುಟ್ಟಿತ್ತೇ ಮಹಾಪ್ರಸಾದ ಕೂಡಲ ಚೆನ್ನಸಂಗನಲ್ಲಿ. । ೧೩೩ ।[೬೪೫]

೧-೧ ದಾಸಿ (ಮೂ), ೨-೨ ಜಂಗಮ (ಮೂ), ೩-೩ x (ಮೂ), ೪-೪ x (ಮೂ).

೮೩೬

ಕಾಯಪ್ರಸಾದ ಒಂದೆಡೆಯಲ್ಲಿ,
ಜೀವಪ್ರಸಾದ ಒಂದೆಡೆಯಲ್ಲಿ,
ವ್ಯಾಪಾರಪ್ರಸಾದ ಒಂದೆಡೆಯಲ್ಲಿ.
ಪ್ರಸಾದಿ ಪ್ರಸಾದವನೆ ಪತಿಕರಿಸಿ ಕೊಂಡಿಪ್ಪ
ಓಗರ ಪ್ರಸಾದವೆಂಬ ಸಂಕಲ್ಪವಿರಹಿತ ಪ್ರಸಾದಿ,
ಭ್ರಾಂತು ಸೂತಕವಳಿದುಳಿದ ಪ್ರಸಾದಿ,
ಕೂಡಲ ಚೆನ್ನಸಂಗನಲ್ಲಿ ತಾನೆ ಪ್ರಸಾದಿ. । ೧೩೪ ।

೮೩೭

ಕಾಯಪ್ರಸಾದ ಒಂದೆಡೆಯಲ್ಲಿ, ಜೀವಪ್ರಸಾದ ಒಂದೆಡೆಯಲ್ಲಿ,
ವ್ಯಾಪಾರಪ್ರಸಾದ ಒಂದೆಡೆಯಲ್ಲಿ, ನಿತ್ಯಪ್ರಸಾದ ಒಂದೆಡೆಯಲ್ಲಿ,
ವಚನಪ್ರಸಾದ ಒಂದೆಡೆಯಲ್ಲಿ, ಅರ್ಥ ಪ್ರಾಣ ಅಭಿಮಾನ ಒಂದೆಡೆಯಲ್ಲಿ,
ಅಖಂಡಿತವೆನಿಸಿ ತಾ ಲಿಂಗಪ್ರಸಾದ ಒಂದೆಡೆಯಲ್ಲಿ,
ಇಂತಿವೆಲ್ಲವೂ ಏಕವಾದ ಪ್ರಸಾದಿಯ ಪ್ರಸಾದದಿಂದ
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದಿಯಾದೆನಯ್ಯಾ. । ೧೩೫ ।

೮೩೮

ನಿಷ್ಠಲಿಂಗದಲ್ಲಿ ದಷ್ಟಲಿಂಗದಲ್ಲಿ ದೃಷ್ಟಲಿಂಗದಲ್ಲಿ,
ನಷ್ಟಲಿಂಗದಲ್ಲಿ ಮುಟ್ಟಿ ನಿಷ್ಠೆಯಾದ ಪ್ರಸಾದಿ,
ನಿಷ್ಠಾನಿಷ್ಠಪರವಾದ ಪ್ರಸಾದಿ, ಪ್ರಸಾದದಿಂದ ಪ್ರಸಾದಿ,
ಕೂಡಲ ಚೆನ್ನಸಂಗಯ್ಯಾ ಲಿಂಗೈಕ್ಯಪ್ರಸಾದಿ. । ೧೩೬ ।

೮೩೯

ಸಯದಾನ ಸರೂಪವನು ನಿರೂಪಕ್ಕೆ ತಂದು,
ನಯನಾದಿ ಅನಿಮಿಷದಷ್ಟವಾದ ಪ್ರಸಾದಿ.
ನಿಷ್ಠಾನಿಷ್ಠವಾದ ಪ್ರಸಾದಿ, ಪ್ರಸಾದದಿಂದ ಪ್ರಸಾದಿ,
ಕೂಡಲ ಚೆನ್ನಸಂಗಯ್ಯಾ ಲಿಂಗೈಕ್ಯಪ್ರಸಾದಿ. । ೧೩೭ ।

೮೪೦

ಸ್ಥಾವರಾರಾಧನೆಯ ಪೂಜನೆಯ ಪುರಸ್ಕಾರದ
ಲಿಂಗರಚನೆಯ ರತಿಯಿಲ್ಲದ ಪ್ರಸಾದಿ,

ಜಂಗಮಗುಣಾದಿ ಸಂಗವ ಮನಕ್ಕೆ ತಾರದ ಪ್ರಸಾದಿ,
ತ್ರೈಪುರುಷ ಏಕೋವರ್ಣದ ಸಂಯೋಗವಿಲ್ಲದ ಪ್ರಸಾದಿ.
ನಾದದ ಸರಸಾರವನು ಕರಸ್ಥಲಕ್ಕೆ ತಂದು ಪರಗಮನರಹಿತ ಪ್ರಸಾದಿ.
ಇದು ಕಾರಣ, ಕೂಡಲ ಚೆನ್ನಸಂಗಾ
ಸಮಾಪ್ತವಾಗಿ, ಲಿಂಗಲೀಯವಾದ ಪ್ರಸಾದಿ. । ೧೩೮ ।[೭೯]

೮೪೧

ನಾಥ[೧]ನು[೧] ಅನಾಥ[೨]ನು[೨] ಪುಣ್ಯನಾಥನು ಕರುಣಾಕರನೆಂಬ
ಶಬ್ದಂಗಳ ಮನಕ್ಕೆ ತಾರದ ಪ್ರಸಾದಿ,
ಸ್ಥಾಪ್ಯಾ[೩]ಯನ[೩]ಸ್ತಂಭ ಆ ಎರಡಱ ಅನ್ವಯವಳಿದ ಪ್ರಸಾದಿ,
ಸಂಗ ಲಿಂಗೈಕ್ಯವೆಂಬ ನುಡಿಯ ಹಂಗಿಲ್ಲದ ಪ್ರಸಾದಿ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ನಾನೆನ್ನದ ಪ್ರಸಾದಿ. । ೧೩೯ ।[೧೪೧೧]

೮೪೨

ರವಿಯ ಕಿರಣಂಗಳ ರಮಿಸದೆ ಪಾಲಿಸದೆ ಆಲಿಸದೆ ಎಂದೂ ನಿಂದುದಾಗಿ,
ಹಿಮಕರಕರಾದಿಗಳನು ಮನಸ್ತಂಭನೆಗೆ ತಾರದೆ ನಿಂದುದಾಗಿ,
ದಿನಕರ ಅಬೋಧ ಸ್ತಂಭಗ[೪]ಳ[೪] ಅರ್ಪಿತವೆನ್ನದೆ ಆಯಿತ್ತಾಗಿ
ಘನಮನವೇದ್ಯ ಪ್ರಸಾದಿ.
ಇದು ಕಾರಣ, ಕೂಡಲ ಚೆನ್ನಸಂಗಾ ಆನೆನ್ನದ ಪ್ರಸಾದಿ. । ೧೪೦ ।[೮೦೦]

೮೪೩

ಆಧಾರಾಧೇಯ ಸೊಮ್ಮು ಸಂಬಂಧವಿಲ್ಲದ ಪ್ರಸಾದಿ,
ಭೋಗ ಅಭೋಗಂಗಳ ಸಾರಾಯವಿಲ್ಲದ ಪ್ರಸಾದಿ,
ಕ್ರಿಯಾಮೋಹಿತದ, ನಿಃಕ್ರಿಯಾನಿರ್ಮೋಹಿತದ,
ಎರಡಱ ಭೇದವನು ಶರೀರಾರ್ಥಕ್ಕೆ ಹೊದ್ದಲೀಯದೆ
ಜಂಗಮದಲ್ಲಿ ನಿವೇದಿಸಿ ಲಿಂಗಲೀಯವಾದ ಪ್ರಸಾದಿ,
ಚಟುಷ್ಟಯಂಗಳ ಜಿಹ್ವಕ್ಕೆ ತಲೆದೋಱದ ಪ್ರಸಾದಿ,
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಸರ್ವಾಂಗಲೀಯವಾದ ಪ್ರಸಾದಿ. । ೧೪೧ ।

೧-೧ ನ (ಮೂ), ೨-೨ ನೆ (ಮೂ), ೩-೩ ಯಾ (ಮೂ), ೪-೪ ಳನು (ಮೂ).

೮೪೪

ಪದಾರ್ಥವೆತ್ತ? ಪ್ರಸಾದ[೧]ವೆತ್ತ?[೧] ಪದಾರ್ಥವೇ ಪ್ರಸಾದ,
ಈ ಎರಡಱ ಮನಮಥನವಿಲ್ಲದ ಪ್ರಸಾದಿ,
'ಮಧ್ಯಂ ದೇವದತ್ತಂ ಮಧ್ಯಂ ಭುವನಸಂಗ'ವಿಲ್ಲದ ಪ್ರಸಾದಿ,
ಪ್ರಸಾದಪಾಕದ ವಿವರವನು ಕೂಡಲ ಚೆನ್ನಸಂಗಾ
ನಿಮ್ಮ ಪ್ರಸಾದಿಯೆ ಬಲ್ಲ. । ೧೪೨ ।

೮೪೫

ಮನ ಮತವಲ್ಲದೆ, ಸಯದಾನ ಮತವಲ್ಲದೆ,
ಶರೀರಾರ್ಥದಲ್ಲಿ ದ್ರವವಂತನಲ್ಲದೆ, ಅರ್ಪಿತಮುಖವಱಿತ ಪ್ರಸಾದಿ,
ಸಕೀಲಕ ಸುಖವಳಿಯದ ಪ್ರಸಾದಿ,
ಶ್ರೋಣಿತದ ಇಚ್ಛಾದಿಗಳಳಿದ ಪ್ರಸಾದಿ,
ನಾದ ಬಿಂದುವಿನ ಪರಿಭಾವವಳಿದ ಪ್ರಸಾದಿ.
ಪ್ರಸಾದವೆ ಭಾವ, ಪ್ರಸಾದವೆ ನಿರ್ಭಾವ,
ನಡೆನುಡಿ ಚೈತನ್ಯ ಆಳಾಪ, ಸಂಗ ಸುಸಂಗ ಮಹಾಸಂಗ
ಘನಸಂಗದಲ್ಲಿ ಮನನಿಂದ ಪ್ರಸಾದಿ.
ಇದು ಕಾರಣ, ಕೂಡಲ ಚೆನ್ನಸಂಗಮದೇವಾ
ಶಬ್ದಾರ್ಥದಲ್ಲಿ [೨][ಮ][೨]ನ ನಿಂದ ಪ್ರಸಾದಿ. । ೧೪೩ ।[೮೦೧]

೮೪೬

ಅಂಗಕ್ಕೆ ಆಚಾರವಳವಟ್ಟಲ್ಲಿ ಆ ಲಿಂಗಕ್ಕೆ ಅಂಗವೆ ಅರ್ಪಿತ.
ಪ್ರಾಣಕ್ಕೆ ಪ್ರಸಾದ ಸಾಧ್ಯವಾದಲ್ಲಿ ಆ ಲಿಂಗಕ್ಕೆ ಆ ಪ್ರಾಣವೆ ಅರ್ಪಿತ.
ಮನವು ಮಹವನಿಂಬುಗೊಂಡಲ್ಲಿ ಆ ಲಿಂಗಕ್ಕೆ ಮನವೆ ಅರ್ಪಿತ.
ಭಾವಕ್ಕೆ ಭ್ರಮೆಯಳಿದು ನಿಭ್ರಾಂತುವಾದಲ್ಲಿ ಆ ಲಿಂಗಕ್ಕೆ ಆ ಭಾವವೆ ಅರ್ಪಿತ.
ಜ್ಞಾತೃ ಜ್ಞಾನ ಜ್ಞೇಯ ಸಂಪುಟವಾಗಿ ಅಱಿವು ನಿರ್ಣಯಿಸಿ ನಿಷ್ಪತಿಯಾಗಿ
ಕುಱುಹುಗೆಟ್ಟಲ್ಲಿ ಆ ಲಿಂಗಕ್ಕೆ ಅಱಿವೆ ಅರ್ಪಿತ.
ಇಂತು, ಸರ್ವಾಂಗವರ್ಪಿತವಾದ ಲಿಂಗಕ್ಕೆ ಒಡೆತನವನಿತ್ತ ಕಾರಣ,
ಕೂಡಲ ಚೆನ್ನಸಂಗಯ್ಯನಲ್ಲಿ ನಾನೆಂದೆನಲಱಿಯ[೩]ದೆ[೩]
ನಿಂದ ನಿಜದ ಮಹಾಪ್ರಸಾದಿ. । ೧೪೪ ।[೧೪೦೮]

೧–೧ ವಂತ (ಮೂ), ೨–೨ ವು (ಮೂ), ೩–೩ ದ (ಮೂ).

೮೪೭

ಅರ್ಪಿತ ಭುಂಜಕ[1]ನ,[1] ಪ್ರಸಾದ[2] ಭುಂಜಕನ ಪರಿ ಬೇಜಿ.
ಅರ್ಪಿತವೆಂದಳಿದು ಸ್ಥೂಲಸೂಕ್ಷ್ಮವೆಂದೆನ್ನದೆ
ಘನಕ್ಕೆ ಘನ ಮಹಾಘನ ಕಾಯ ಜೀವವೊಂದಯ್ಯಾ.
ಅರ್ಥ ಪ್ರಾಣ ಅಭಿಮಾನ ಸವೆದಡೆ ಸಮಭೋಗರುಚಿ ಪ್ರಸಾದಿ.
ಈ ಉಭಯ ಲಿಂಗದ ಮಹಿಮೆಯನು ಇನ್ನುಪಮಿಸಬಾರದು.
ರೂಹಿಸಿ ಭಾವಿಸಿ ಗುಣಪ್ರಪಂಚ[3]ನತಿಗಳೆದು,[3] ನಿರ್ವಿಕಲ್ಪಿತನಾದಾತ
ಆನೆಂ[4]ಬ[4] ಶಬ್ದವಳಿದುಳಿದ ಪ್ರಸಾದಗ್ರಾಹಕ ನಿಂದ ನಿಲವು,
ಪರತಂತ್ರ ಪರಿಭಾವ ಪ್ರಪಂಚುವ ಬಿಟ್ಟು ಘನರವಿಲೋಚನನಾಗಿ,
ಅರ್ಪಿತ ಭುಂಜಕನಲ್ಲ, ಆದಿವಿಡಿದಾಗಮನಲ್ಲ.
ಅರ್ಪಿತ ಅನರ್ಪಿತರಹಿತ ಕೂಡಲ ಚೆನ್ನಸಂಗನಲ್ಲಿ
ಆತ ದಿಟ ಪ್ರಸಾದಿ. । ೧೪೫ ।[೭೫]

೮೪೮

ಅಂಗಲೀಯ ಲಿಂಗಲೀಯ, ಅಭಾವಲೀಯ ಸ್ವಭಾವಲೀಯ,
[5]ಸಂಗದಲ್ಲಿ ಪ್ರಸಾದಿ, [6]ಅಕೃತ[6]ವಾದ ಪ್ರಸಾದಿ.
ಆಧಾರ ಆಧೇಯ ದೇವನಾಮಕ್ರೀಯನು ಮನಕ್ಕೆ ತಾರದ ಪ್ರಸಾದಿ.
ಇದು ಕಾರಣ, ಕೂಡಲ ಚೆನ್ನಸಂಗಾ
ಮಹಾಘನದಲ್ಲಿ ನಿಂದ ಪ್ರಸಾದಿ. । ೧೪೬ ।[೧೪೦೯]

೮೪೯

ಆದಿ ಅನಾದಿಯಿಲ್ಲದಂದು, ಮಹಾಬಯಲು ಬೆಳಗಿಲ್ಲದಂದು
ನಿಜಪ್ರಸಾದವ ತೋಜಿಸಾ.
ನಾದವನೆ ಬಯಲು ನುಂಗಿ, ಬಯಲನೆ ಕಳೆ ನುಂಗಿ
ಹೊಳೆವ ಲಿಂಗವಿದೆಲ್ಲಿಯದೊ?
ಪ್ರಸಾದಿಯ ಪ್ರಸಾದ ಮುಟ್ಟಿದಲ್ಲದೆ ಲಿಂಗಾರ್ಪಿತಕ್ಕೆ ಸಲ್ಲದು,
ಜಗಕ್ಕೆ ಪ್ರಸಾದಿಗಳೆಂತಪ್ಪರೊ?
ಅನಾದಿಯ ಸೋಂಕಿಲ್ಲದ ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣನು ಅನಂತ ಕುಳರಹಿತನು. । ೧೪೭ ।[೪೯೧]

೧-೧ x (ಮೂ), ೨+ ಕ (ಮೂ), ೩-೩ ನೆ ತಿಳಿದು (ಮೂ), ೪-೪ ದ (ಮೂ), ೫+ ಲೀಯ (ಮೂ), ೬-೬ ಅಂಕೃತ (ಮೂ)

ಐಕ್ಯನ ಪ್ರಾಣಲಿಂಗಿ[೧]ಸ್ಥಲ[೧] :

೮೫೦
ಸಾವಧಾನಿ ಸರ್ವಸಂಸಾರಿ, ನಿಃಪ್ರಪಂಚಿ ನಿಸ್ಸಂಸಾರಿ.
ಅರ್ಪಿತಕ್ಕೆ ಅಜೀವುಳ್ಳನ್ನಕ ಆಚಾರ್ಯನು.
ನಿಯತಾತ್ಮಂಗೆ ಇದಾವಂಗವೂ ಇಲ್ಲ,
ಕೂಡಲ ಚೆನ್ನಸಂಗನೆನ್ನದ ಸುಯಿಧಾನಿಗೆ. ।೧೪೮।

೮೫೧
ಭಕ್ತನಾದಡೆ ಲಿಂಗಸ್ಥಲವ ಮೆಟ್ಟಲಾಗದು,
ಶರಣನಾದಡೆ ಭಕ್ತಸ್ಥಲವ ಮೆಟ್ಟಲಾಗದು,
ಲಿಂಗೈಕ್ಯನಾದಡೆ ಪ್ರಸಾದಿಸ್ಥಲವ ಮೆಟ್ಟಲಾಗದು.
ಈ ತ್ರಿವಿಧಸಾಹಿತ್ಯ ಮಹಾಬೆಳಗಿನ ಬೆಳಗು
ಕೂಡಲ ಚೆನ್ನಸಂಗಮದೇವ. ।೧೪೯।[೧೩೮೪]

೮೫೨
ಲಿಂಗದ ರಚನೆಯ ಮಾಡುವರೆ ಇಲ್ಲಿಯ ರಚನೆ ಕೆಡಬೇಕು.
ರಚನೆ ರಂಜಕ ಭುಂಜಕ ಹೊಂದಿದ ಸಂಗ ಸೂತಕವಿಲ್ಲ, ಲಿಂಗವಿಯೋಗವಿಲ್ಲ,
ಅಂಗದ ನಿಲವ ಸಂಗಕ್ಕೆ ತರಲುಂಟೆ?
ಆನಂದದಿಂದ ವಿಚಾರಿಸಿ ನೋಡಲು ಸಂಗ ನಿಸ್ಸಂಗ ನೋಡಾ!
ಕೂಡಲ ಚೆನ್ನಸಂಗನೆಂಬ ನಿಶ್ಚಿಂತ ನಿರಾಳವು. ।೧೫೦।

೮೫೩
ಸಾರಾಯ ಪದಾರ್ಥವನಾರಯ್ಯಾ ಅಜೀವರು?
ಆಋಜೆಂದ ಬೇಜ್ ತೋಜಲಿಲ್ಲೆನಿಸಿತ್ತು.
ಹೆಸರೆನಿಸಿಕೊಂಬಡೆ ಹೆಸರು ಮುನ್ನಿಲ್ಲ,
ಹೆಸರೆಲ್ಲವೂ ಪರಿಣಾಮಿಸಲಾಯಿತ್ತು.
ಕಂಡೆನೆಂದರೆ ಕಾಣಲಾಯಿತ್ತು, ಕಂಡು ನುಡಿಸುವಂಥದಲ್ಲ,
ಕಂಡಾತ ಕಲಿಕೆಯೊಳಗಲ್ಲದಂತಿಪ್ಪ, ಕಾರ್ಯವಿಲ್ಲದ ಕಾರಣಕರ್ತ.

೧–೧ x (ಮೂ).

ಆಱಿಱೆಂದತ್ತ ತಾನಿಲ್ಲೆಂದೆನಿಸಿಕೊಂಡ ಕೂಡಲಚೆನ್ನಸಂಗಯ್ಯಾ
ಆ ಮಹಾಲಿಂಗದ ಅನುಭಾವ ಶರಣಫಲದ
ಸಂಬಂಧವ ಮೀಱಿತ್ತು. । ೧೫೧ ।[೧೪೩]

೮೫೪

ನೋಡಿಹೆನೆಂದಡೆ ದೃಷ್ಟಿಕೊಳ್ಳದು,
ಪೂಜಿಸಿಹೆನೆಂದರೆ ಪೂಜೆಗೊಳ್ಳದಿನ್ನೆಂತೊ !
ಅಱಿದೆನೆಂದಡೆ ಏನೂ ಇಲ್ಲ,
ಘನದೃಷ್ಟ ಕೂಡಲಚೆನ್ನಸಂಗಾ
ಈ ಉಭಯಗೆಟ್ಟ ಲಿಂಗಾರ್ಚನೆ. । ೧೫೨ ।[೧೯೮]

೮೫೫

ಮನಸ್ಥಂ ಮನಮಧ್ಯಸ್ಥಂ ಮನಸಾ ಮನವರ್ಜಿತಂ ।
ಮನಸಾ ಮನ ಆಲೋಕ್ಯ ಸ್ವಯಂ ಸಿದ್ಧಾಂತಯೋಗಿನಃ ॥
ಅಱಿದೆನೆಂಬ ಅಱಿವು ಅಱಿವನೆ ನುಂಗಿತ್ತು,
ಮಱಿದೆನೆಂಬ ಮಱಹು ಮಱಹನೆ ನುಂಗಿತ್ತು.
ನೆನಹೆ ಅವಧಾನಗೆಟ್ಟಿತ್ತು ಕೂಡಲ ಚೆನ್ನಸಂಗನೆಂಬ
ಲಿಂಗ ಅವಧಾನವಿಲ್ಲಾಗಿ. । ೧೫೩ ।

೮೫೬

ಅಱಿವಿಂದಲಾದ ಮಱಹಿನ ಶಬ್ದವನಱಿಯಲಾಗದು,
ಅಱಿದಡದಕ್ಕೆ ಭವವು.
ಅಱಿವಱಿತು ಮಱಹು ನಷ್ಟವಾಗಿ ಜ್ಞಾನ[1]ಬೆಂದ[1]ಲ್ಲಿ ನಿರ್ನಾಮವೆಲ್ಲಿಯದು?
ಜ್ಞಾನದೊಳಗಣ ಬುದ್ಧಿಯ ಭಸ್ಮವಾಗಿ ಧರಿಸಿದಲ್ಲಿ
ಕೂಡಲ ಚೆನ್ನಸಂಗಮದೇವರು ಸರ್ವನಿವಾಸಿ. । ೧೫೪ ।[೧೪೬]

೮೫೭

ಸ್ಥಲವಿಡಿದು ಸರ್ವದಲಾಯತನಾಗಿ[2]
ಸಹಜವಳವಟ್ಟಲ್ಲಿ ಇದದೆನ್ನಲುಂಟೆ?

೧-೧ ವೆಂಬ (ಮೂ), ೨+ ಸಮಯ ಉದಯವಿದೆಂದು (ಮೂ).

ಭಾವವಳಿದು ನಿರ್ಭಾವವುಳಿದಲ್ಲಿ ಇದದೆನ್ನಲುಂಟೆ?
ಕದಂಬ ಕಳಾಸ ಕೂಡಲ ಚೆನ್ನಸಂಗಯ್ಯ
ಸರ್ವಾಂಗಮಯವಾದಲ್ಲಿ. ।೧೫೫।[೧೩೯]

೮೫೮

ಜಗಭರಿತನೆನ್ನ ದೇವ, ಜಗವ ಹೊದ್ದನೆನ್ನ ದೇವ.
ಭಕ್ತನ ಕರಸ್ಥಲಕ್ಕೆ ಬಂದನೆನ್ನ ದೇವ, ಭಕ್ತನನವಗ್ರಹಿಸಿಕೊಂಡನಾಗಿ ಎನ್ನ ದೇವ.
"ಓಂ ನಮೋ ಮಹದ್ಭ್ಯೋ ನಮೋ ಆರ್ಭಕೇಭ್ಯೋ ನಮೋ ಯುವಭ್ಯೋ
ನಮಃ ಆಶಿನೇಭ್ಯಃ ಯಜಾಮ ದೇವಾನ್ಯದಿಶಕ್ನವಾಮ ಮಮಾಜ್ಯಾಯಸಃ ।
ತಂ ಸಮಾವೃಕ್ಷಿದೇವಾ"ಯೆಂದುದಾಗಿ ಎನ್ನದೇವ.
ಇದು ಕಾರಣ, ಕೂಡಲ ಚನ್ನಸಂಗಮದೇವರು
ಅಕ್ಷರಾಕ್ಷರವ ಮೀಱಿದ ಘನವು. ।೧೫೬।[೧೩೭]

೮೫೯

"ಅತೀತಃ ಪಂಥಾನಂ ತವ ಚ ಮಹಿಮಾ"ಯೆಂಬ ಶ್ರುತಿಗಳು
ನಿಮ್ಮ ಕಾಣಲಱಿಯವು ದೇವಾ.
ಲಿಂಗದೇವಾ, ನಿಮ್ಮ ಮಹಿಮೆಯ ಸ್ತುತಿಯಿಸಿ ಕಾಣಲಱಿಯವು ದೇವಾ.
ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।
ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ ॥
ಎಂಬ ತುದಿ ಪದವು,
ಕೂಡಲ ಚೆನ್ನಸಂಗಮದೇವಾ ಪರವಿಲ್ಲಾಗಿ. ।೧೫೭।[೧೪೩೫]

೮೬೦

ಶೂನ್ಯ [1]ಹುಟ್ಟದಂದು[1] ನಿಶ್ಶೂನ್ಯವಿಲ್ಲದಂದು,
ಬ್ರಹ್ಮ ವಿಷ್ಣು ಮಹೇಶ್ವರರಿಲ್ಲದಂದು,
ಹದಿನಾಲ್ಕು ದಿಗುವಳಯವಿಲ್ಲದಂದು,
ಕೂಡಲ ಚೆನ್ನಸಂಗಯ್ಯನೆಂಬ ಹೆಸರು ಮುನ್ನಿಲ್ಲದಂದು. ।೧೫೮।[೭]

೧–೧ ಹೃದಯ (ಮೂ).

೮೬೧

ಏನೆಂಬೆನೇನೆಂಬೆನಾಶ್ರಯ ವಿರಹಿತವ,
ಏನೆಂಬೆನೇನೆಂಬೆ ನಾಮ ನಿರ್ನಾಮವ,
ಏನೆಂಬೆ[1]ನೇನೆಂಬೆ[1] ಸಾರಾಯ ಸನುಮತವಲ್ಲದುದ,
ಏನೆಂಬೆನೇನೆಂಬೆ ದೇವ[2]ಕ್ರೀಯ[2] ಮೀಜಿದ ಸಂಬಂಧವ.
ಕೂಡಲ ಚೆನ್ನಸಂಗಮದೇವಾ
ಆನೆಂಬುದಿಲ್ಲದುದನೇನೆಂದುಪಮಿಸುವೆ. ।೧೫೯।[೧೪೬೦]

೮೬೨

ಸಹಜವೆನ್ನದೆ, ನಿಜವೆನ್ನದೆ, ಅಚಳವೆನ್ನದೆ, ಶೂನ್ಯವೆನ್ನದೆ,
ಅಖಂಡಿತ ಪರಿಪೂರ್ಣವೆನ್ನದೆ, ಏನೂ ಎನ್ನದೆ,
ಕೂಡಲಚೆನ್ನಸಂಗಾ ಲಿಂಗೈಕ್ಯವು. ।೧೬೦।[೧೪೨೯]

ಐಕ್ಯನ ಶರಣ[3]ಸ್ಥಲ[3] :

೮೬೩

**ಸಮತೆ ಸಯವಾದ ಶರಣಂಗೆ ಅಱಿವ ಮಱೆಯಲುಂಟೆ?
ಉಪಮೆ ನಿಃಸ್ಥಲವಾದ ಶರಣಂಗೆ ಶಬ್ದಸಂದಣಿ ಉಂಟೆ?
ಅಖಂಡಿತ ಲಿಂಗಕ್ಕೆ, ಅಪ್ರಮಾಣ ಶರಣಂಗೆ ಸೀಮೆಸಂಬಂಧವೆಂಬ ಸಂಕಲ್ಪವುಂಟೆ?
ಇದು ಕಾರಣ, ಸುಳುಹಿಂಗೆ, ಭವವಿಲ್ಲ, ಬಂಧನವಿಲ್ಲ
ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣಂಗೆ. ।೧೬೧।[೧೨೯೪]**

೮೬೪

ದೃಷ್ಟ ನಷ್ಟಕ್ಕೇನು ದೃಷ್ಟ? ಭಾವ ನಷ್ಟವೇ ದೃಷ್ಟ.
ಭಾವ ನಷ್ಟಕ್ಕೇನು ದೃಷ್ಟ? ಅನುಭಾವ ನಷ್ಟವೇ ದೃಷ್ಟ.
ಅನುಭಾವ ನಷ್ಟಕ್ಕೇನು ದೃಷ್ಟ? ಸ್ವಯಪರವಾವುದೆಂದಱಿಯದುದೆ ದೃಷ್ಟ.
ಸ್ವಯಪರವಾವುದೆಂದಱಿಯದಕ್ಕೇನು ದೃಷ್ಟ?
ಕೂಡಲ ಚೆನ್ನಸಂಗನೆಂದು ಎನ್ನದುದೆ ದೃಷ್ಟ. ।೧೬೨।[೧೩೭೪]

೧-೧ x (ಮೂ), ೨-೨ ಕ್ರಿಯ (ಮೂ), ೩-೩ x (ಮೂ).

೮೬೫

ಓದಿದ ವೇದದಲ್ಲಿ ಏನಹುದಯ್ಯಾ? ಓದಿಸಬಾರದಂಥ ಲಿಂಗಸ್ಥಲ.
ಸಾಧಿಸಿದ ಶಾಸ್ತ್ರದಲೇನಹುದಯ್ಯಾ? ಸಾಧ್ಯವಾಗದಂಥ ಜಂಗಮಸ್ಥಲ.
ತರ್ಕಿಸಿದ ತರ್ಕದಲ್ಲಿ ಏನಹುದಯ್ಯಾ? ತರ್ಕಕ್ಕಗೋಚರವಹಂಥ ಪ್ರಸಾದಿಸ್ಥಲ.
ಓದು ವೇದ ಶಾಸ್ತ್ರ ತರ್ಕಕಗೋಚರ ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೧೬೩।

೮೬೬

ಆನು ನೀನು, ಅಱಿದೆ ಮಱೆದೆ, ಅಳಿದೆನುಳಿದೆನೆಂಬ ಸಂಶಯಭ್ರಮೆ,
[೧]ಅ[೧]ತತ್ವ ತತ್ವವಿವೇಕಭ್ರಮೆ, ಮೂಲ ಸ್ಥೂಲ ಸೂಕ್ಷ್ಮ ವಿಪರೀತ ಭ್ರಮೆ,
ಪುಣ್ಯಪಾಪ ಸ್ವರ್ಗನರಕ [೨]ಬಂಧ[೨]ಮೋಕ್ಷ ಪ್ರವರ್ತಕ ನಿವರ್ತಕ
ಆದಿ[೩]ಯಾದ[೩] ಸಪ್ತಕರ್ಮಬಂಧಭ್ರಮೆ, ಹುಸಿಜೀವ ಪರಮನೈಕ್ಯಸಂಧಾನ ಭ್ರಮೆ,
ಯೋಗದಾಸೆ ಸಿಲುಕುಭ್ರಮೆ, ಅಂತರ್ಮುಖಭ್ರಮೆ ಬಹಿರ್ಮುಖಭ್ರಮೆ,
ಅನೃತಭ್ರಮೆ ಸತ್ಯಭ್ರಮೆ ನಿತ್ಯಭ್ರಮೆ, ವಾಗದ್ವೈತಭ್ರಮೆ ಅದ್ವೈತಭ್ರಮೆ,
ಮಂತ್ರಭ್ರಮೆ ತಂತ್ರಭ್ರಮೆ, ನಾಹಂ ಭ್ರಮೆ ಕೋಹಂ ಭ್ರಮೆ ಸೋಹಂ ಭ್ರಮೆ.
ತತ್ವ[೪]ಸಕರ[೪]ಣವೇಷ್ಟಿತ ಜಗತ್ರಯಕ್ಕೆಲ್ಲಾ ಮಾಯಾಮಯ,
ಕೂಡಲ ಚೆನ್ನಸಂಗಾ
ನಿಮ್ಮ ಶರಣಂಗಾವ ಭ್ರಮೆಯೂ ಇಲ್ಲ. । ೧೬೪ ।[೧೨೦೦]

೮೬೭

ಊರ್ಧ್ವಬಿಂದು ನಾದ ಮುಟ್ಟಲಿಕೆ ಜಂಗಮ,
ಮಧ್ಯಬಿಂದು ಊರ್ಧ್ವ ಮುಟ್ಟಲಿಕೆ ಸ್ಥಾವರ,
ಸ್ಥಾವರಬಿಂದು ಸ್ಥಾವರನಾದ ಊರ್ಧ್ವ ಮುಟ್ಟಲಿಕೆ ಭಕ್ತ,
ಭವಿ ಬಿಂದು ನಾದ ಮುಟ್ಟಲಿಕೆ ಭವಿ.
ಇಂತು ಜಾತಿಸೂತಕ ಪ್ರಸೂತ[೫]ಕವನಳಿ[೫]ದಾತಂಗೆ
ಕಾಲವಿಲ್ಲ ಕರ್ಮವಿಲ್ಲ, ಭವಿಗೆ ಕೊಡಲಿಲ್ಲ ಭಕ್ತಂಗೆ ಕೊಡಲಿಲ್ಲ,
ಇದು ಕಾರಣ, ಕೂಡಲ ಚೆನ್ನಸಂಗಮದೇವಾ
ನಿಮ್ಮ ಶರಣಂಗಲ್ಲದೆ ಉಳಿದವರಿಗಪೂರ್ವ. । ೧೬೫ ।[೧೧೬೪]

೧-೧ ಅ (ಮೂ), ೨-೨ x (ಮೂ), ೩-೩ x(ಮೂ), ೪-೪ ಸಾಹ (ಮೂ), ೫-೫ ನಾ (ಮೂ).

೬೭೮

ತ್ರಿವಿಧ ವಿರತಲಿಂಗ, ಆಗಮ ವಿರಹಿತ ಪ್ರಸಾದಿ,
ಲಿಂಗವಿಲ್ಲದ ಜಂಗಮ, ಜಂಗಮವಿಲ್ಲದ ಲಿಂಗ,
ಇದ ಕೇಳಿ ಗುರುವಿಲ್ಲದ ಶಿಷ್ಯ, ಶಿಷ್ಯನಿಲ್ಲದ ಗುರು,
ಇವೆಲ್ಲವ ಕಂಡು ಯುಕ್ತಿಯಿಲ್ಲದ ಭಕ್ತಿ,
ಭಕ್ತಿಯಿಲ್ಲದ ಯುಕ್ತಿ ನೋಡಯ್ಯ !
ಇದು ಐಕ್ಯಸ್ಥಲವಲ್ಲ, ನಿಃಸ್ಥಲ ನಿರವಯ
ಕೂಡಲ ಚೆನ್ನಸಂಗಾ ನಿಮ್ಮ ಶರಣ. ।೧೬೬।[೧೪೬೮]

೬೭೯

ಶ್ರೀಗುರುಲಿಂಗ ತ್ರಿವಿಧ: ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು.
ಶಿವಲಿಂಗ ತ್ರಿವಿಧ: ಕ್ರಿಯಾಲಿಂಗ, ಜ್ಞಾನಲಿಂಗ, ಭಾವಲಿಂಗ.
ಜಂಗಮಲಿಂಗತ್ರಿವಿಧ: ಸ್ವಯ ಚರ ಪರ. ಇಂತು ಸ್ಥಲ ೯.
ಆಗಮಲಿಂಗ ತ್ರಿವಿಧ: ಕ್ರಿಯಾಗಮ, ಭಾವಾಗಮ, ಜ್ಞಾನಾಗಮ.
ಕಾಯಲಿಂಗ ತ್ರಿವಿಧ: ಸಕಾಯ, ಅಕಾಯ, ಪರಕಾಯ.
ಆಚಾರಲಿಂಗ ತ್ರಿವಿಧ: ಧರ್ಮಾಚಾರ, ಭಾವಾಚಾರ, ಜ್ಞಾನಾಚಾರ.
ಇಂತು ಸ್ಥಲ ೯, ಉಭಯಸ್ಥಲ ೧೮.
ಅನುಗ್ರಹಲಿಂಗ ತ್ರಿವಿಧ: ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ.
ಅರ್ಪಿತಲಿಂಗ ತ್ರಿವಿಧ: ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತ.
ತನುಗುಣಲಿಂಗ ತ್ರಿವಿಧ: ಶಿಷ್ಯ, ಶುಶ್ರೂಷೆ, ಸೇವ್ಯ.
ಇಂತು ಸ್ಥಲ ೯, ತೃತೀಯ ಸ್ಥಲ ೨೭.
ಒಲವು ಲಿಂಗ ತ್ರಿವಿಧ: ಜೀವಾತ್ಮ, ಅಂತರಾತ್ಮ, ಪರಮಾತ್ಮ.
ನಿರೂಪಲಿಂಗ ತ್ರಿವಿಧ: ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ,
ಪ್ರಸಾದಲಿಂಗ ತ್ರಿವಿಧ: ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿ.
ಪಾದೋದಕಲಿಂಗ ತ್ರಿವಿಧ: ದೀಕ್ಷಾಪಾದೋದಕ, ಶಿಕ್ಷಾಪಾದೋದಕ,
ಜ್ಞಾನಪಾದೋದಕ, ಇಂತು ಸ್ಥಲ ೧೨, ಚತುರ್ಥಸ್ಥಲ ೩೯.
ಮೀಜಿದ ಕ್ರಿಯಾ ದೀಕ್ಷಾಕ್ರಮದಿಂದತ್ತತ್ತಲು
ನಿಃಪತಿಲಿಂಗ ತ್ರಿವಿಧ: ಕ್ರಿಯಾನಿಃಪತಿ, ಭಾವನಿಃಪತಿ, ಜ್ಞಾನನಿಃಪತಿ.
ಆಕಾಶಲಿಂಗ ತ್ರಿವಿಧ: ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶ,
ಪ್ರಕಾಶಲಿಂಗ ತ್ರಿವಿಧ: ಕ್ರಿಯಾಪ್ರಕಾಶ, ಭಾವಪ್ರಕಾಶ, ಜ್ಞಾನಪ್ರಕಾಶ.

ಇಂತು ಸ್ಥಲ ೬, ಪಂಚಮಸ್ಥಲ ೪೮.
ಆ ಲಿಂಗೈಕ್ಯ ಕೊಂಡುದು ಪ್ರಸಾದ, ನಿಂದುದೋಗರ, ಚರಾಚರನಾಸ್ತಿ–
ಇಂತು ತ್ರಿವಿಧ.
ಭಾಂಡ, ಭಾಜನ, ಅಂಗಲೇಪ–ಇಂತು ತ್ರಿವಿಧ.
ಸ್ವಯ ಚರ ಪರವಜೆಯ[ದ], ಭಾವಾಭಾವನಷ್ಟ, ಜ್ಞಾನಶೂನ್ಯ–
ಇಂತು ಸ್ಥಲ ೬, ಷಡುಸ್ಥಲ ೫೭.
[೧]ಇಂತಿವೆಲ್ಲ ಸ್ಥಲಂಗಳನೊಳಕೊಂಡ ಮಹಾಮಹಿಮನು[೧]
ಜ್ಞಾನಿಯಲ್ಲ ಅಜ್ಞಾನಿಯಲ್ಲ, ಶೂನ್ಯನಲ್ಲ ಅಶೂನ್ಯನಲ್ಲ,
ಉಭಯ ಕುಳ ತಾನೆಂದಜೆದ ಪರಮಜ್ಞಾನಿಗೆ ಕೊಳುಕೊಡೆಯಿಲ್ಲ.
ಸಾಕಾರ ಸಂಬಂಧವನಜೆಯ, ನಿತ್ಯಮುಕ್ತ ನಿರವಯ,
ಉಭಯಾತ್ಮಕ ತಾನು ಕೂಡಲ ಚೆನ್ನಸಂಗನೆಂದು
ಎನ್ನದ ಸುಯಿಧಾನಿ. ।೧೬೭।[೧೪೪೦]

೮೭೦
ಸಾಕಾರ ಹದಿನೆಂಟು ಕುಳವನಂಗದಲ್ಲಿ ಆಚರಿಸುತ
ಅಲ್ಲಲ್ಲಿಗೆ ಭಕ್ತ, ಅಲ್ಲಲ್ಲಿಗೆ ಮಾಹೇಶ್ವರ, ಅಲ್ಲಲ್ಲಿಗೆ ಪ್ರಸಾದಿಯಾಗಿಪ್ಪ
ಆ ಸಾಕಾರವನೇನೆಂದುಪಮಿಸುವೆ !
ನಿರಾಕಾರ ಹದಿನೆಂಟು ಕುಳವನಾತ್ಮನಲ್ಲಿ ಆಚರಿಸುತ
ಅಲ್ಲಲ್ಲಿಗೆ ಪ್ರಾಣಲಿಂಗಿ, ಅಲ್ಲಲ್ಲಿಗೆ ಶರಣ, ಅಲ್ಲಲ್ಲಿಗೆ ಐಕ್ಯನಾಗಿಪ್ಪ
ಆ ನಿರಾಕಾರವನೇನೆಂದುಪಮಿಸುವೆ !
ಇಂತು ಉಭಯ ಕುಳಸ್ಥಳ ಒಂದಾಗಿನಿಂದ ನಿಜದ ಘನದಲ್ಲಿ
ಕುಳವಡಗಿತ್ತು, ಕೂಡಲ ಚೆನ್ನಸಂಗಾ. ।೧೬೮।[೧೪೧೨]

೮೭೧
ಅಜೆವಾಜಿಡಿಗೊಂಡುದು ಮನ, ಮನದಲ್ಲಿ ಘನವಡಗಿತ್ತು,
ಆಶ್ರ[೨]ಯ[೨]ವಿಲ್ಲ.
ಬಲ್ಲೆನೆಂಬರೆ ನೆಜೆ ಅಜೆತ ಅಜೆವು ಘನ,
ಘನದಲ್ಲಿ ಆಶ್ರ[೨]ಯ[೨] ನಿರಾಶ್ರ[೨]ಯ[೨]ವಿಲ್ಲ,
ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. ।೧೬೯।[೧೪೫೭]

೧–೧ x (ಮೂ), ೨–೨ ಮ (ಮೂ).

೮೭೨

ಭಕ್ತಸ್ಥಲ ಘನವೆಂದೆಂಬಿರಿ, ಭಕ್ತಸ್ಥಲಕ್ಕೆ ಮಾಹೇಶ್ವರಸ್ಥಲವೆ ಪ್ರತಿ,
ಮಾಹೇಶ್ವರಸ್ಥಲಕ್ಕೆ ಪ್ರಸಾದಿಸ್ಥಲವೆ ಪ್ರತಿ,
ಪ್ರಸಾದಿಸ್ಥಲಕ್ಕೆ ಪ್ರಾಣಲಿಂಗಿಸ್ಥಲವೆ ಪ್ರತಿ,
ಪ್ರಾಣಲಿಂಗಿಸ್ಥಲಕ್ಕೆ ಶರಣಸ್ಥಲವೆ ಪ್ರತಿ,
ಶರಣಸ್ಥಲಕ್ಕೆ ಐಕ್ಯಸ್ಥಲವೆ ಪ್ರತಿ.
ಪ್ರತಿಯುಳ್ಳುದಜೀವೆ? ಪ್ರತಿಯುಳ್ಳುದು ಜ್ಞಾನವೆ?
ಪ್ರತಿಯುಳ್ಳುದು ನಿರ್ಭಾವವೆ? ಪ್ರತಿಯುಳ್ಳುದು ಮೋಕ್ಷವೆ?
ಇಂತು ಸ್ಥಲದ ಮಾರ್ಗವಲ್ಲ, ಸಾವಯವಲ್ಲ, ನಿರವಯವಲ್ಲ.
ಸ್ಥಲವೂ ಅಲ್ಲ ನಿಸ್ಥಲವೂ ಅಲ್ಲ, ಒಳಗೂ ಅಲ್ಲ, ಹೊಱಗೂ ಅಲ್ಲ,
ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೧೭೦ ।[೧] [೧೩೧೧]

❖❖

೧+ ಶ್ರೀ ಗುರುಶಾಂತಲಿಂಗಾಯಂ ನಮಃ ಚೆನ್ನಬಸವರಾಜದೇವರ ಷಡುಸ್ಥಳಂ ಸಮಾಪ್ತಾಃ॥ ಅಂತು ಭಕ್ತಿಸ್ಥಳ ೧೪೨, ಮಹೇಶ್ವರ ಸ್ಥಳ ೯೦, ಪ್ರಸಾದಸ್ಥಳ ೧೦೩, ಪ್ರಾಣಲಿಂಗಿಸ್ಥಳ ೧೭೪, ಶರಣಸ್ಥಳ ೧೯೩, ಐಕ್ಯಸ್ಥಳ ೧೭೦ ಅನ್ತು ಸ್ಥಳ ೬ಕ್ಕಂ ವಚನ ೮೭೨ ಕ್ಕಂ ಮಂಗಳ ಮಹಾ ॥ ಶ್ರೀ ॥ ಶ್ರೀ ॥ ಶ್ರೀ ॥ ಕೀಲಕ ಸಂವತ್ಸರದ ಜೇಷ್ಠ ಶುದ್ಧ ದಶಮಿಯೂ ಬುಧವಾರದಲೂ ಚಿಂನವರದ ಬಸವಪ್ಪನಿಗೆ ಕಂದವಗಾಲದ ಲಿಂಗಪ್ಪೊಡೆಯರು ಬರೆದ ಚೆಂನಬಸವರಾಜದೇವರ ಷಡುಸ್ಥಳಂ ಸಮಾಪ್ತಾ॥

ದ್ವಿತೀಯ ಸಂಪುಟ

ಚೆನ್ನಬಸವೇಶ್ವರದೇವರು ನಿರೂಪಿಸಿದ ಅನುಭಾವಷಟ್ಸ್ಥಲದ ವಚನಂಗಳು

ಭಕ್ತಸ್ಥಲ

[೧]ಚೆನ್ನಬಸವೇಶ್ವರದೇವರು ನಿರೂಪಿಸಿದ ಅನುಭಾವಷಟ್ಸ್ಥಲದ ವಚನಂಗಳು. ಆ ವಚನಂಗಳ ಸ್ಥಳಕುಳವನು ಹೇಂಗೆಂದು ಶ್ರೀಗುರುರಾಯಂಗೆ ಶಿಷ್ಯ ಬಿನ್ನೈಸಿದ ಬಿನ್ನಪ :

ಆಚರಣೆಯ ಸ್ಥಲವನ್ನ[೨]ಱಿ ।
ದಾ[೨]ಚರಿಸಲ್ಬಾರದಾಗಿ ಅನುಭಾವಸ್ಥಲ[೩] ।
ಸೂಚನೆಯನೆತ್ತಿ ಎನ್ನೊಳು ।
ಯೋಚಿಸು ಸದ್ಗುರುವೆ ಬಸವಸಂಗ ಸದಾಶಿವ ॥

ಶ್ರೀಗುರು ನಿರೂಪ :
ಚೆನ್ನಬಸವಯ್ಯನನುಭಾ ।
[೪]ವೋ[೪]ನ್ನತ ಉಪದೇಶ[೫][ವನಾ][೫] ನಿನ್ನ ಮನದ ತಮ ।
ವನ್ನಳಿಯಲ್ಕೆ ನಿರೂಪಿಸಿ
ದನ್ವ[೬]ಯಮಂ[೬] ಕೇಳು ನಿನಗೆ ತಿಳಿಯಲ್ಪೇಳ್ವೆಂ ॥

ಎಲ್ಲ ವಚನಂಗಳೊಳಗಾ ।
ಗುಳ್ಳ ಸ್ಥಲಕುಲದ ಸೂಕ್ಷ್ಮಸೂಕ್ಷ್ಮವ ತುಂಬಿ ।
ಇಲ್ಲಿಯೆ ಅನುಭವಪೂರ್ಣಾ ।
ಗೆಲ್ಲವ ತೋಱುವೆನು ಕೇಳ್ದು ಅಱಿವುದು ಮುದದಿಂ ॥[೭]

೧+ ಶ್ರೀಗುರುಸಿದ್ಧಲಿಂಗಾಯ ನಮಃ (ಮೂ). ೨–೨ ರಿದು ಆ (ಮೂ). ೩+ ವ (ಮೂ). ೪–೪ ವ ಉ (ಮೂ). ೫–೫ ವಾಗಿ (ಮೂ). ೬–೬ ಯಂ (ಮೂ). ೭ ಈ ಪದ್ಯ ('ಮೂ') ದಲ್ಲಿ ತುಂಬಾ ಅಸ್ತವ್ಯಸ್ತವಾಗಿರುವುದರಿಂದ ಇದನ್ನು ಕರ್ನಾಟಕ ವಿಶ್ವವಿದ್ಯಾಲಯದ ಮುದ್ರಿತ ಪ್ರತಿಯಿಂದ ಇಲ್ಲಿ ಎತ್ತಿಕೊಳ್ಳಲಾಗಿದೆ. (ಸಂ).

ಬಸವರಾಜದೇವರ ಆಚರಣೆಯ ಸ್ಥಲದ ವಚನ :

೧

ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಮಾಹೇಶ್ವರನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಪ್ರಸಾದಿಯೆನಿಸಿಕೊಂಬೆ,
ಮೆಲ್ಲಮೆಲ್ಲನೆ ಪ್ರಾಣಲಿಂಗಿಯೆನಿಸಿಕೊಂಬೆ,
ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಐಕ್ಯನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಷಟ್ಸ್ಥಲವ ಮೀಱಿ
ನಿರವಯಸ್ಥಲವನೈದುವೆ ಕೂಡಸಂಗಮದೇವಾ. ॥ ೧ ॥

ಹೀಗೆಂದು ಬಸವರಾಜದೇವರು ನಿರೂಪಿಸಲು, ಇದಕ್ಕೆ ಚೆನ್ನಬಸವರಾಜದೇವರು ಈ ವಚನಾರ್ಥಂ ಅನುಭಾವವನು ಖಂಡಿಸಿ ನುಡಿದ ಅನುಭಾವಸ್ಥಲದ ವಚನ :

೨

ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ ಮಾಹೇಶ್ವರ,
ಮೆಲ್ಲಮೆಲ್ಲನೆ ಪ್ರಸಾದಿ, ಮೆಲ್ಲಮೆಲ್ಲನೆ ಪ್ರಾಣಲಿಂಗಿ,
ಮೆಲ್ಲಮೆಲ್ಲನೆ ಶರಣ, ಮೆಲ್ಲಮೆಲ್ಲನೆ ಐಕ್ಯರಾದೆವೆಂಬರು–
ನಿಮ್ಮ ಶರಣರು ತಾವೇನು ಮಱುಜವಣಿಯ [೧]ಕೊಂಡರೆ?[೧]
ಅಮೃತಸೇವನೆಯ ಮಾಡಿದರೆ?
ಆವ ಸ್ಥಲದಲ್ಲಿ ನಿಂದರೂ
ಆ ಸ್ಥಲದಲ್ಲಿ ಷಡುಸ್ಥಲ ಅಳವಡದಿದ್ದರೆ,
ಆ ಭಕ್ತಿಯ ಬಾಯಲ್ಲಿ ಹುಡಿಯ ಹೊಯ್ದು ಹೋಗನೆ
ಕೂಡಲ ಚೆನ್ನಸಂಗಮದೇವರು. ॥ ೨ ॥[ಮ ೨೯ ಅ.ಟಿ.]

ಅದು ಕಾರಣವಾಗಿ, ಆವ ಸ್ಥಲವನಂಗಂಗೊಂಡಿ[೨][ ][೨]ರೂ ಆ ಸ್ಥಲಕ್ಕೆ ತಕ್ಕ ರೂಪಾಗಿ ಷಡ್ವಿಧಲಿಂಗವೆರಸಿಪ್ಪ ಭೇದವನು ಆ ಚೆನ್ನಬಸವರಾಜದೇವ[೩]ರ[೩] ಅನುಭಾವಸ್ಥಲದ ವಚನದಲ್ಲಿಯ ಸ್ಥಲವಿಟ್ಟು ತೋಱು[೪]ವೆವು,[೪] ಚೆನ್ನಾಗಿ ಕೇಳು. ಪ್ರಥಮಸ್ಥಲ, ಮೊದಲಿಲ್ಲ [೫]ಭಕ್ತ[೫]ಸ್ಥಲ, ಆ ಸ್ಥಲಕ್ಕೆ ತಾಮಸನಿರಸನದ ವಚನ :

೧–೧ x (ಮೂ), ೨–೨ ಪ್ಪ (ಮೂ), ೩–೩ ರು (ಮೂ), ೪–೪ ವೆ (ಮೂ), ೫–೫ ಭಕ್ತಿ (ಮೂ).

[1]ಭಕ್ತನ ತಾಮಸನಿರಸನಸ್ಥಲ :[1]

೩

ಭಕ್ತರಾದೆವೆಂದು ಯುಕ್ತಿಗೆಟ್ಟು ನುಡಿವರು,
[2]ಭಕ್ತ[2]ಸ್ಥಲವೆಲ್ಲರಿಗೆಲ್ಲಿಯದೋ?
ಗುರುವಿನಲ್ಲಿ ತನುವಂಚನೆ,
ಲಿಂಗದಲ್ಲಿ ಮನವಂಚನೆ,
ಜಂಗಮದಲ್ಲಿ ಧನವಂಚನೆ,
ಇಂತೀ ತ್ರಿವಿಧವುಳ್ಳನ್ನಬರ ಭಕ್ತನೆ? ಅಲ್ಲ.
ಗುರುವಿನಲ್ಲಿ ಚಾರಿತ್ರವ, ಲಿಂಗದಲ್ಲಿ ಲಕ್ಷಣವ,
ಜಂಗಮದಲ್ಲಿ ಜಾತಿಯನ್ನರಸುವನ್ನಕ ಭಕ್ತ[3]ನೆ?[3] ಅಲ್ಲ, ಅವನು ದೋಷಾರ್ಥಿ.
ಭಕ್ತಶ್ಚ ಪ್ರತಿಪಕ್ಷಸ್ಯ ಸದಾಚಾರೇಣ ವರ್ಜಿತಃ ।
ಗುರುಲಿಂಗಜಂಗಮದ್ವೇಷೀ ಯೋ ನರಸ್ಸದುರಾತ್ಮಕಃ ॥
ಇದು ಕಾರಣ ಕೂಡಲ ಚೆನ್ನಸಂಗಮದೇವಾ
[2]ಭಕ್ತ[2]ಸ್ಥಲವೆಲ್ಲರಿಗೆಲ್ಲಿಯದೊ? ॥ ೩ ॥[೫೯]

೪

ಸುರೆಯ ಮಡಕೆಗೆ ಹೊಱಗೆ ಬೂದಿಯ ಹೂಸಿದರೆ,
ಒಳಗೂ ಶುದ್ಧವಾಗಬಲ್ಲುದೆ?
ಗುರುಕಾರುಣ್ಯ ನೆಲೆಗೊಂಡು,
ಗುರುಲಿಂಗಜಂಗಮ ಒಂದೆಂದು ಕಾಣದನ್ನಕ್ಕ
ಕೂಡಲ ಚೆನ್ನಸಂಗಮದೇವರಲ್ಲಿ
ಸದಾಚಾರವೆಲ್ಲರಿಗೆಯೂ ಸೂಱ[4]ಯೆ?[4] ॥ ೪ ॥[೬೦]

೫

ಕಬ್ಬುನದ ಸೊಣಗನ ತಂದು ಪರುಷವ ಮುಟ್ಟಿಸಲು,
ಹೊನ್ನ ಸೊಣಗನಪ್ಪುದಲ್ಲದೆ ಪರುಷವಾಗದು ನೋಡಾ.
ಲೋಕದ ಮಾನವ[4]ನ[4] ತಂದು ಭಕ್ತನ ಮಾಡಿದರೆ
ವೇಷಲಾಂಛನವಹುದಲ್ಲದೆ ಭಕ್ತನಾಗ ನೋಡಾ.

೧-೧ x (ಮೂ), ೨-೨ ಭಕ್ತಿಯ (ಮೂ), ೩-೩ ರೆ (ಮೂ), ೪-೪ ರ (ಮೂ).

ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ಮಜ್ಜನಕ್ಕೆಱೆವ ಭವಿಗಳನೆಂತು ಭಕ್ತರೆಂಬೆ? ॥ ೫ ॥[೬೧]

೬

ತದ್ದಿನವ ಮಾಡುವ ಕ್ರೂರಕರ್ಮಿಯ ಮನೆಯಲ್ಲಿ
ಮದ್ಯಮಾಂಸವಲ್ಲದೆ ಲಿಂಗಕ್ಕೋಗರವಿಲ್ಲ,
ವರುಷಕ್ಕೊಂದು ತಿಥಿಯೆಂದುಮಾಡುವ ಭಕ್ತನ ಮನೆಯಲ್ಲಿ ಕೂಟಕಿ[೧][ಕ್ಕೆ][೧]
ಕೀರ್ತಿವಾರ್ತೆಗೆ ಸಲುವುದಲ್ಲದೆ ಲಿಂಗಕ್ಕೋಗರವಿಲ್ಲ.
ಹರಸಿಕೊಂಡು ಮಾಡುವ ಭಕ್ತನ ಮನೆಯಲ್ಲಿ
ದಂಡಕ್ಕಿಕ್ಕು[೨]ವುದ[೨]ಲ್ಲದೆ ಲಿಂಗಕ್ಕೋಗರವಿಲ್ಲ.
"ತದ್ದಿನಂ ದಿನದೋಷಂ ಸ್ಯಾತ್ ರಕ್ತಮಾಣಸಸುರಾನ್ವಿತಂ ।
ಸಸಂಕಲ್ಪ ವಿಕಲ್ಪಂ ಚ ನರಕೇ ಕಾಲಮಕ್ಷಯಂ ॥" ಎಂದುದಾಗಿ
ಈ ತ್ರಿವಿಧವಿಡಿದು ಮಾಡುವಾತ ಭಕ್ತನಲ್ಲ,
ಅಲ್ಲಿ ಹೊಕ್ಕು ಲಿಂಗಾರ್ಚನೆಯ ಮಾಡುವಾತ ಜಂಗಮಸ್ಥಲಕ್ಕೆ ಸಲ್ಲ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಈ ತ್ರಿವಿಧವು ನರಕಕ್ಕೆ ಭಾಜನ. ॥ ೬ ॥ [೬೨]

೭

ದಾಸಿಯ ಸಂಗ ಕಸ ನೀರ ಹೊಱೆಸಿತ್ತು,
ವೇಶಿಯ ಸಂಗ ಎಂಜಲು ತಿನ್ನಿಸಿತ್ತು,
ಪರಸ್ತ್ರೀಯ ಸಂಗ ಪಂಚಮಹಾಪಾತಕಕ್ಕಿಕ್ಕಿತ್ತು.
ಇಂತೀ ತ್ರಿವಿಧನಾಸ್ತಿಯಾದಂಗಲ್ಲದೆ ಭಕ್ತಿಯಿಲ್ಲ
ಕೂಡಲ ಚೆನ್ನಸಂಗಮದೇವಾ. ॥ ೭ ॥ [೬೩]

೮

ಅರಸಿನ ಹೆಸರಿಟ್ಟ ಅನಾಮಿಕನಂತೆ
ನಾಮಕ್ಕರುಹನಲ್ಲದೆ, ಪಟ್ಟಕ್ಕರುಹನಪ್ಪನೆ?
ಲಿಂಗಜಂಗಮದ, ಪ್ರಸಾದದ, ಅನುಭಾವದ ಹೆಸರ ಹೇಳಿಕೊಂಡು ಬದುಕುವರಲ್ಲದೆ
ವೇಷವ ಧರಿಸಿಪ್ಪ ಆಶ್ರಿತರೆಲ್ಲರು

೧-೧ ಕ್ಕಿ (ಮೂ), ೨-೨ ವನ (ಮೂ).

ಸಜ್ಜನ ಸಂಬಂ[1]ಧ[1]ದ ಗುಣಾದಿ ಗುಣಂಗಳಿಗೆ ಯೋಗ್ಯರಪ್ಪರೆ?
ಕೂಡಲ ಚೆನ್ನಸಂಗಯ್ಯಾ
ಸಹಜ ಭಕ್ತರಲ್ಲದವರಂತಿರಲಿ. ॥ ೮ ॥ [೬೪]

೯

ತನುಮನ ಬಳಲದೆ ಉದ್ದಂಡವೃತ್ತಿಯಲ್ಲಿ ಧನವ ಗಳಿಸಿ ತಂದು,
ಗುರುಲಿಂಗಜಂಗಮಕ್ಕೆ ವೆಚ್ಚಿಸಿ, ದಾಸೋಹವ ಮಾಡಿ,
ಭಕ್ತರಾದೆವೆಂಬವರ, ಭಕ್ತರಾದೆವೆಂಬವರನೆನಗೆ ತೋಱದಿರಯ್ಯಾ.
ಅದೇಕೆಂದರೆ: ಅವ ಪರಧನ ಚೋರಕ, ಅವ ಪಾಪಿ.
ಅವಗೆ ವಿಚಾರಿಸದೆ ಉಪದೇಶವ ಕೊಟ್ಟ ಗುರುವಿಂಗೆ ರೌರವನರಕ.
ಅವನ ಕಾಯಕವ ವಿಚಾರಿಸದೆ, ಅವರ ಮನೆಯಲ್ಲಿ ಹೊಕ್ಕು,
ಲಿಂಗಾರ್ಚನೆಯ ಮಾಡುವ ಜಂಗಮಕ್ಕೆ ಏಳನೆಯ ಪಾತಕ.
ಇಂತಿವರ ಬದುಕು ಹುಲಿ ಕಪಿಲೆಯ ತಿಂದು
ಮಿಕ್ಕುದ ನರಿ ಬಂದು ತಿಂಬಂತೆ ಕಾಣಾ,
ಕೂಡಲ ಚೆನ್ನಸಂಗಮದೇವಾ. ॥ ೯ ॥ [೬೫]

ಇಂತು ತಾಮಸನಿರಸನವಂ ಮಾಡಿದ ಸದ್ಭಕ್ತಸ್ಥಲದ ನಿರ್ದೇ[2]ಶ.[2] ಆ ಸ್ಥಲದನುಭಾವದ ವಚನ :

[3]ಭಕ್ತನ ನಿರ್ದೇಶಸ್ಥಲ :[3]

೧೦

ಕಾಯಕ್ಲೇಶದಿಂದ ತನುಮನ ಬಳಲಿ, ಧನವ ಗಳಿಸಿ
ಗುರುಲಿಂಗಜಂಗಮಕ್ಕೆ ವೆಚ್ಚಿಸಿ
ದಾಸೋಹವ ಮಾಡುವ ಭಕ್ತನ ಪಾದವ ತೋಱಯ್ಯಾ, ನಿಮ್ಮ ಧರ್ಮ.
[4]ಅದೇಕೆಂದಡೆ[4] ಆತನ ತನು ಶುದ್ಧ, ಆತನ ಮನ ಶುದ್ಧ.
ಆತನ ನಡೆನುಡಿ ಪಾವನ, ಆತಂಗೆ ಉಪದೇಶವ ಮಾಡಿದ ಗುರುವು
ನಿರಂಜನ ನಿರಾಮಯ.
ಅಂಥ ಭಕ್ತನ ಕಾಯವೆ ಕೈಲಾಸವೆಂದು ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮ ಜಗತ್ಪಾವನ.
ಇಂತಿವರಿಗೆ ನಮೋ ನಮೋ ಎಂಬೆ ಕೂಡಲ ಚೆನ್ನಸಂಗಯ್ಯಾ. ॥ ೧೦ ॥ [೮೦]

೧–೧ ಧಿ (ಮೂ), ೨–೨ x (ಮೂ), ೩–೩ x (ಮೂ), ೪–೪ ಅದೆಂತೆಂದರೆ (ಮೂ).

೧೧

ಲಿಂಗವನಜೀವಡೆ ಮನವೆ ನಿಚ್ಚಣಿ[೧]ಕೆ[೧]
ಜಂಗಮವನಜೀವಡೆ ಧನವೆ ನಿಚ್ಚಣಿ[೧]ಕೆ[೧]
ಪ್ರಸಾದವನಜೀವಡೆ ತನುವೆ ನಿಚ್ಚಣಿ[೧]ಕೆ[೧]
ಈ ತ್ರಿವಿಧವನಜೀವಡೆ, ಈ ತ್ರಿವಿಧವೆ ನಿಚ್ಚಣಿ[೧]ಕೆ.[೧]
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣಂಗಲ್ಲದೆ ಈ ಸಂಪತ್ತಿಲ್ಲ. ॥ ೧೧ ॥[೮೧]

೧೨

ಭಕ್ತನು ಶಾಂತನಾಗಿರಬೇಕು,
ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯವಾಗಿ ನುಡಿಯಬೇಕು,
ಲಿಂಗಜಂಗಮದೆಡೆಯಲ್ಲಿ ನಿಂದೆಯಿಲ್ಲದೆ
ಸಕಲಪ್ರಾಣಿಗಳ ತನ್ನಂತೆ ಕಾಣಬೇಕು.
ತನುಮನಧನವನು ಗುರುಲಿಂಗಜಂಗಮಕ್ಕೆ ಸವೆಸಬೇಕು.
ಅಪಾತ್ರದಾನವ ಮಾಡಲಾಗದು,
ಸಕಲೇಂದ್ರಿಯಂಗಳ ತನ್ನ ವಶವ ಮಾಡಬೇಕು,
ಇದೇ ಮೊದಲಲ್ಲಿ [೨]ಬೇ[೨]ಹಶೌಚ ನೋಡಾ.
ಲಿಂಗವ ಪೂಜಿಸಿ ಪ್ರಸಾದವ ಪಡೆವೊಡೆ
ಇದೇ ಸಾಧನ ಕೂಡಲ ಚೆನ್ನಸಂಗಮದೇವಾ. ॥ ೧೨ ॥ [೮೨]

೧೩

ಶಿವಭಕ್ತಿಯುಳ್ಳವಂಗೆ
ಕಾಮಬೇಡ. ಕ್ರೋಧಬೇಡ, ಲೋಭಬೇಡ,
[೩]ಮೋಹಬೇಡ,[೩] ಮದಬೇಡ, ಮಚ್ಚರಬೇಡ.
ಶಿವಭಕ್ತಿಯುಳ್ಳವಂಗೆ
ಕಾಮಬೇಕು, ಕ್ರೋಧಬೇಕು, ಲೋಭಬೇಕು,
ಮೋಹಬೇಕು, ಮದಬೇಕು, ಮಚ್ಚರಬೇಕು.
ಬೇಕೆಂಬುದಕ್ಕಾನ ಗುಣ?[೪]
ಕಾಮ ಬೇಕು ಲಿಂಗದಲ್ಲಿ, ಕ್ರೋಧ ಬೇಕು ಕರಣಂಗಳಲ್ಲಿ,

೧-೧ x (ಮೂ), ೨-೨ ದೇ (ಮೂ), ೩-೩ x (ಮೂ), ೪+ ಬೇಡಾ ಎಂಬುದಕ್ಕಾವ ಗುಣ (ಮೂ).

ಲೋಭ ಬೇಕು ಪಾದೋದಕ ಪ್ರಸಾದದಲ್ಲಿ,
ಮೋಹ ಬೇಕು ಗುರುಲಿಂಗಜಂಗಮದಲ್ಲಿ,
ಮದ ಬೇಕು ಶಿವಾಚಾರದಿಂದ ಘನವಿಲ್ಲವೆಂದು,
ಮಚ್ಚರ ಬೇಕು ಹೊನ್ನು ಹೆಣ್ಣು ಮಣ್ಣಿನಲ್ಲಿ,
ಇಂತೀ ಷಡ್ಗುಣವಿರಬೇಕು.
ಬೇಡ ಎಂಬುದಕ್ಕಾವುದು ಗುಣ?
ಕಾಮ ಬೇಡ ಪರಸ್ತ್ರೀಯಲ್ಲಿ, ಕ್ರೋಧ ಬೇಡ ಗುರುವಿನಲ್ಲಿ,
ಲೋಭ ಬೇಡ ತನುಮನಧನದಲ್ಲಿ, ಮೋಹ ಬೇಡ ಸಂಸಾರದಲ್ಲಿ,
ಮದ ಬೇಡ ಶಿವಭಕ್ತರಲ್ಲಿ, ಮಚ್ಚರ ಬೇಡ ಸಕಲಪ್ರಾಣಿಗಳಲ್ಲಿ,
ಇಂತೀ ಷಡ್ಗುಣವನಱಿದು ಮೆಱೆಯಬಲ್ಲಡೆ
ಆತನೇ ಸಹಜಸದ್ಭಕ್ತ ಕಾಣಾ ಕೂಡಲ ಚೆನ್ನಸಂಗಮದೇವಾ. ॥ ೧೩ ॥ [೮೩]

ಇಂತಪ್ಪ ಸದ್ಭ[೧]ಕ್ತ[೧]ಸ್ಥಲವನಂಗಂಗೊಂಡಿಪ್ಪಾತಂಗೆ, ಷಡ್ವಿಧಲಿಂಗವು ಹೇಂಗೆ ಬೆರಸಿಪ್ಪುದೆಂದಡೆ, ಆ ಲಿಂಗದ ವಿವರ: ಭಕ್ತನ ಆಚಾರಲಿಂಗ. [೨][ಆ ಸ್ಥಲದನುಭಾವದ ವಚನ][೨] :

[೩]ಭಕ್ತನ ಆಚಾರಲಿಂಗಸ್ಥಲ :[೩]

೧೪
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಭವಿಯೊಡತಣ ಸಂಗವು ಭಂಗವೆಂದಱಿಯರು.
ಕೂಡಲ ಚೆನ್ನಸಂಗಯ್ಯಾ
ಅವರತ್ತಲೂ ಅಲ್ಲ, ಅವರಿತ್ತಲೂ ಅಲ್ಲ. ॥ ೧೪ ॥ [೮೪]

೧೫
ಮಡಿಲ ಸುತ್ತಿದ ಹಾವಿನಂತೆ ಮಡಿಲಲ್ಲಿ ಕಟ್ಟಿದರೇನು?
ಕೊರಳ ಸುತ್ತಿದ ಹಾವಿನಂತೆ ಕೊರಳಲ್ಲಿ ಕಟ್ಟಿದರೇನು?
ಕಳವು ಹಾದರ ಅನ್ಯದೈವ ಭವಿಸಂಗವು ಬಿಡದನ್ನಕ್ಕರ
ಲಿಂಗಭಕ್ತನೆನಿಸಬಾರದು.
ಆಚಾರ ಸಹಿತ ಭಕ್ತ, ಅನಾಚಾರ ಸಹಿತ ನರಕಿ.
ಇದು ಕಾರಣ ಕೂಡಲ ಚೆನ್ನಸಂಗಯ್ಯನವರ
ಬಲ್ಲನಾಗಿ ಒಲ್ಲ. ॥ ೧೫ ॥[೮೫]

೧-೧ ಕ್ತಿ (ಮೂ), ೨-೨ x (ಮೂ), ೩-೩ x (ಮೂ).

೧೬

ಅಂಗಾಶ್ರ[೧]ಯ[೧]ವಳಿದು ಲಿಂಗಾಶ್ರ[೧]ಯ[೧]ವಾದ ಬಳಿಕ
ಅಂಗಕ್ಕೆ ಲಿಂಗಾಚಾರವಲ್ಲದೆ ಅಂಗಕ್ರೀಯೆಂಬುದನು ಅಂಗವಿಸರು ನೋಡಾ!
ಲಿಂಗದಲ್ಲಿ ನಿಷ್ಠೆವಂತರಾದ ಬಳಿಕ
ಅನ್ಯನಾಮವಿಡಿದು ಬಳಲುವ ಬಳಲಿಕೆ ಇನ್ನೆಲ್ಲಿಯದು?
ಇದು ಕಾರಣ ಕೂಡಲ ಚೆನ್ನಸಂಗನ ಶರಣರು
ಅನ್ಯವನಾಚರಿಸುವರಲ್ಲ. ॥ ೧೬ ॥ [೮೬]

೧೭

ಹೆಂಡಿರು ಮಕ್ಕಳಿಗೆ ಕುಲದೈವ ಮನೆದೈವವಲ್ಲದೆ
ಎನಗ ಕುಲದೈವ ಮನೆದೈವವಿಲ್ಲವೆಂಬ
ಭಂಡನ ಭಕ್ತಿಯ ಪರಿಯ ನೋಡಾ.
ಯುಕ್ತಿಶೂನ್ಯ[೨]ಂಗೆ[೨] ಮುಂದೆ ದೃಷ್ಟವ ಹೇಳಿಹೆನು :
ಆ ಹೆಂಡತಿ ಮತ್ತೊಬ್ಬನ ಮೆಚ್ಚಿಕೊಂಡು ಹೋಗುತ್ತಿರೆ,
ಹೋದರೆ ಹೋಗಲಿ ಎಂದು ತಾ ಸೈರಿಸಬಲ್ಲಡೆ
[೩]ತಾನವ[೩]ರೊಳಗಲ್ಲ!
ಅಕಟಕಟಾ ಲೌಕಿಕಕ್ಕೆ ಆಜ್ಞೆಯುಂಟು, ಪಾರಮಾರ್ಥಕ್ಕೆ ಆಜ್ಞೆಯಿಲ್ಲವೆ?
ಇದು ಕಾರಣ, ಕೂಡಲಚೆನ್ನಸಂಗಯ್ಯಾ
ಭಕ್ತನಾಗಿ ಭವಿಯ ಬೆರಸುವ ಅನಾಚಾರಿಯ
ತೋಱದಿರಯ್ಯಾ. ॥ ೧೭ ॥ [೮೭]

ಇಂತು ಆಚಾರಲಿಂಗದಲ್ಲಿ [ಸದ್ಭಕ್ತಿ] ಸಂಗಸಂಯೋಗದೊಳಿಪ್ಪ ಸದ್ಭಕ್ತನ ಗುರುಲಿಂಗ. ಆ ಸ್ಥಲದನುಭಾವದ ವಚನ :

[೪]ಭಕ್ತನ ಗುರುಲಿಂಗಸ್ಥಲ[೪] :

೧೮

ಗುರು, ಲಿಂಗ ಒಂದೆ ಎಂಬ
ಸಂತೆಯ ಸುದ್ದಿಯ, ಬಾಲಭಾಷೆಯ ಕೇಳಲಾಗದು,
ಲಿಂಗಸಹಿತ ಪ್ರಸಾದಭೋಗ, ಲಿಂಗಸಹಿತ ನಿದ್ರೆ.
ಗುರು ಲಿಂಗ ಒಂದೇ ಎಂದು ಕಂಡರೆ
ಅಘೋರ ನರಕ, ಕೂಡಲ ಚೆನ್ನಸಂಗಮದೇವಾ. ॥ ೧೮ ॥ [೧೮೪]

೧–೧ ಮ (ಮೂ), ೨–೨ ನ (ಮೂ), ೩–೩ ಅವ (ಮೂ), ೪–೪ x (ಮೂ).

೧೯

ಗುರುಶಿಷ್ಯ ಸಂಬಂಧವನು ಏನೆಂದುಪಮಿಸುವೆನಯ್ಯಾ?
ಒಂದಾಗಿ ಹೋಗಲು ಬಾರದು, ಅವರಿದ್ದೂರಲ್ಲಿ ಇರಲಾಗದು.
ಗಣಪಂಕ್ತಿಯಲ್ಲಿ ಕುಳ್ಳಿರಲಾಗದು,
ಅವರ ಸಮಪಂಕ್ತಿಯಲ್ಲಿ ಲಿಂಗಾರ್ಚನೆಯ ಮಾಡಲಾಗದು.
ಅವರಂಥವರಿಂಥವರೆಂದು ಕನಸಿನಲ್ಲಿ ಮನಸಿನಲ್ಲಿ ನೆನೆದರೆ
ಅಘೋರನರಕ ಕೂಡಲ ಚೆನ್ನಸಂಗಮದೇವಾ. ॥ ೧೯ ॥[೧೮೫]

೨೦

ಗುರುಲಿಂಗದಲ್ಲಿ ಇಲ್ಲದ ಒಲವು ಪರದೈವದಲಾದುದೆಂಬಿರಿ,
ಶರಣು ಶರಣೆನ್ನಲಜೆಯದೆ ಬಱುದೊಱೆವೋದಿರಲ್ಲಾ.
ಜನನ ಮರಣವಿರಹಿತ ನಮ್ಮ ಕೂಡಲ ಚೆನ್ನಸಂಗಯ್ಯನೆಂಬ
ಶ್ರೀಗುರುವಿಂಗೆ ಶರಣೆಂದು ಬದುಕಿರೆ. ॥ ೨೦ ॥ [೧೮೬]

೨೧

ಗುರುವ ನರನೆಂದನಾದರೆ ಹಿಂದಣ ಭವಮಾಲೆ ಹಿಂಗದು,
ಗುರು ಶಬ್ದಕ್ಕೆ ೧[ದೋ]೧ಷವ ಮಾಡಿದನಾದರೆ ಶ್ವಾನನ ಬಳಗದೊಳಿಪ್ಪನು,
ಗುರು ಉಪದೇಶವ ಮೀರಿದನಾದರೆ ಭವಕರ್ಮ ಹಿಂಗದು.
ಇದು ಕಾರಣ, ಶ್ರೀಗುರುಲಿಂಗವು ಭರ್ಗೋದೇವನೆಂದಱಿವುದು
ಕೂಡಲ ಚೆನ್ನಸಂಗಯ್ಯಾ, ಇದ ನಂಬದಿದ್ದರೆ
ಭವ ಹಿಂಗದು. ॥ ೨೧ ॥ [೧೮೭]

೨೨

ಗುರುವಚನವನುದಾಸೀನವಂ ಮಾಡಿ,
ಗುರುಲಿಂಗಕ್ಕೆ ವಂಚಿಸುವನ ಮುಖವ ನೋಡೆ ನೋಡೆ,
ಅವನೊಡನೆ ಮಾತನಾಡೆಯಾಡೆ,
ಆ ಪಾಪಿಯ ಇದಿರಲ್ಲಿ ನಿಂದಿರೆ ನಿಂದಿರೆ.
ಕೂಡಲ ಚೆನ್ನಸಂಗಯ್ಯನ ವಚನ
'ನ ವದಂತಿ ನ ಪಶ್ಯಂತಿ' ಎಂದುದಾಗಿ. ॥ ೨೨ ॥[೧೮೮]

ಇಂತು ಗುರುಲಿಂಗ[ದಲ್ಲಿ ಸದ್ಭಕ್ತಿ]ಸಂಗ[ಸಂಯೋಗ]ದೊಳಿಪ್ಪ ಸದ್ಭಕ್ತನ ಶಿವಲಿಂಗ. ಆ ಸ್ಥಲದನುಭಾವದ ವಚನ :

೧-೧ ಕೋ (ಮೂ).

೧ಭಕ್ತನ ಶಿವಲಿಂಗಸ್ಥಲ:೧

೨೩

ಅಂಗದ ಮೇಲೆ ಲಿಂಗವಿದ್ದು
ಸ್ಥಾವರ ಲಿಂಗಕ್ಕೆ ಶರಣೆನ್ನಲಾಗದು.
ಅನ್ಯಲಿಂಗವ ಮುಟ್ಟಿ ದರುಶನವ ಮಾಡುವ ಕುನ್ನಿಗಳನೇನೆಂಬೆ!
ಅಂಗದ ಲಿಂಗವು ರಂಗದ ಕಲ್ಲ ತಾಗಿದರೆ,
ಆವುರು ಕಿಱಿದು, ಆವುದು ಹಿಱಿದೆಂಬೆನಯ್ಯಾ
ತಾಳಸಂಪುಟಕ್ಕೆ ಬಾರದ ಘನವ?
ಪ್ರಾಣಲಿಂಗಂ ಪರಿತ್ಯಜ್ಯ ಅನ್ಯಲಿಂಗಮುಪಾಸಯನ್ ।
ಶ್ವಾನಯೋನೀಶತಂ ಗತ್ವಾ ಚಾಂಡಾಲಗೃಹಮಾಚರೇತ್ ॥
ಎಂದುದಾಗಿ, ದೀರ್ಘದಂಡ ಗುರು ಪರುಶನ,
ಕರಮುಟ್ಟಿ ಲಿಂಗ ಪರುಷನ, ಶಿರಮುಟ್ಟಿ ಜಂಗಮ ಪರುಷನ.
ಹತ್ತಿರಿರ್ದ ಲಿಂಗವ ಕಿಱಿದುಮಾಡಿ, ದೂರದಲ್ಲಿದ್ದ ಲಿಂಗವ ಹಿರಿದುಮಾಡಿ ನಡೆವ
ವ್ರತಗೇಡಿಯ ಮುಖವ ತೋಱದಿರಯ್ಯಾ
ಕೂಡಲ ಚೆನ್ನಸಂಗಮದೇವಾ. ॥ ೨೩ ॥ [೨೩೯]

೨೪

ಪತಿವ್ರತೆಯಾದರೆ ಅನ್ಯಪುರುಷನ ಸಂಗವೇತಕ್ಕೆ ?
ಲಿಂಗಸಂಗಿಯಾದರೆ ಅನಂಗಸಂಗವೇತಕ್ಕೆ ?
೨ಕಂಡ ಕಂಡವರ ಹಿಂದೆ ಹರಿವ ಚಾಂಡಾಲಗಿತ್ತಿಯಂತೆ,
ಒಬ್ಬರ ಕೈಹಿಡಿದು, ಒಬ್ಬರಿಗೆ ಮಾತಕೊಟ್ಟು,
ಒಬ್ಬರಿಗೆ ಸನ್ನೆ ಮಾಡುವ ಬೋಸರಗಿತ್ತಿಯಂತೆ
ಪ್ರಾಣಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಹರಸಿ ಹೊಡಹೊಂಟು
ಕೋಟಲೆಗೊಳಲೇತಕ್ಕೆ ?
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಇಂತಪ್ಪ ಪಾಪಿಗಳನೆನಗೆ ತೋಱದಿರಯ್ಯಾ. ॥ ೨೪ ॥ [೨೪೦]

೧-೧ ಸದ್ಭಕ್ತನ ಶಿವಲಿಂಗ (ಮೂ), ೨+ ಈ (ಮೂ).

೨೫

ಪೃಥ್ವಿಯ ಪೂರ್ವಾಶ್ರಯ ರಂಗವಾಲಿಯಿಂದ ಹೋ[1]ಹು[1]ದು,
ಅಪ್ಪುವಿನ ಪೂರ್ವಾಶ್ರಯ ಮಂತ್ರವಿಭೂತಿಯಿಂದ ಹೋ[1]ಹು[1]ದು,
ಅಗ್ನಿಯ ಪೂರ್ವಾಶ್ರಯ ಧೂಪದಿಂದ ಹೋ[1]ಹು[1]ದು,
ವಾಯುವಿನ ಪೂರ್ವಾಶ್ರಯ ಧ್ಯಾನದಿಂದ ಹೋಹುದು,
ಆಕಾಶದ ಪೂರ್ವಾಶ್ರಯ [2]ಸ್ತೌತ್ರ್ಯ[2]ದಿಂದ ಹೋ[1]ಹು[1]ದು,
ಚಂದ್ರಸೂರ್ಯರ ಪೂರ್ವಾಶ್ರಯ ಮಾಡುವ ಕ್ರೀಯಿಂದ ಹೋಹುದು.
ಆತ್ಮನ ಪೂರ್ವಾಶ್ರಯ ಕಿಂಕುರ್ವಾಣದಿಂದ ಹೋ[1]ಹು[1]ದು,
ಇದು ಕಾರಣ,
ಭಕ್ತಕಾಯ ಮಮಕಾಯ ಕೂಡಲ ಚೆನ್ನಸಂಗಮದೇವ. ॥ ೨೫ ॥ [೨೪೧]

೨೬

ಪರುಷದ ಪರ್ವತದಲ್ಲಿ ಕಬ್ಬುನವುಂಟೆ?
ಅಷ್ಟವಿಧಾರ್ಚನೆ ಷೋಡಶೋಪಚಾರ ಸನ್ನಿಹಿತಂಗೆ
ಅವಗುಣವುಂಟೆ?
ಭಕ್ತಕಾಯ ಮಮಕಾಯ
ಕೂಡಲ ಚೆನ್ನಸಂಗಮದೇವ. ॥ ೨೬ ॥ [೨೪೨]

ಇಂತು ಶಿವಲಿಂಗದಲ್ಲಿ ಸದ್ಭಕ್ತಿಸಂಯೋಗದೊಳಿಪ್ಪ ಸದ್ಭಕ್ತನ ಜಂಗಮಲಿಂಗ. ಈ ಸ್ಥಲದನುಭಾವದ ವಚನ :

[3]ಭಕ್ತನ ಜಂಗಮಲಿಂಗಸ್ಥಲ[3] :

೨೭

ಒಡೆಯರು ಮನೆಗೆ ಬಂದರೆ ತೆಱಹು ಮಱಹಾಗಿಪ್ಪನೆ ಭಕ್ತನು?
ಹೊನ್ನುಳ್ಳ ದೊರೆಯಂತೆ [4]ಭೀಷ್ಮಿಸಿ[4]ಕೊಂಡಿಪ್ಪನೆ ಭಕ್ತನು?
ಜಂಗಮಪ್ರೇಮಿಗೆ ಜಡಮತಿಗಳುಂಟೆ?
ನಿಮ್ಮ ಒಕ್ಕುದ ಕೊಂಡಿಪ್ಪ ಮಹಾಮಹಿಮರ ತೋಱ[5]ಯ್ಯಾ[5]
ಕೂಡಲ ಚೆನ್ನಸಂಗಮದೇವಾ. ॥ ೨೭ ॥ [೨೬೪]

೧–೧ ಹ (ಮೂ), ೨–೨ ಸ್ತೋತ್ರ್ಯ (ಮೂ), ೩–೩ x (ಮೂ), ೪–೪ ಭಿಷ್ಮರಿಸಿ (ಮೂ), ೫–೫ x (ಮೂ).

೨೮
ಜಂಗಮವ ಕಾಣುತ್ತ ಅಹಂಕಾರದೊಳಿಪ್ಪ ಅನಿತ್ಯದೇಹಿಯನೇನೆಂಬೆ ಶಿವನೆ !
ಲಿಂಗಸ್ಥಲಕ್ಕೆ ಸಲ್ಲ, ಗುರುಲಿಂಗ ಹೇಳಿತ್ತ ಮಱೆದರು.
ಭಸ್ಮಾಂಗಮಾಗತಂ ದೃಷ್ಟ್ವಾ ಆಸನಂ ನ ಪರಿತ್ಯಜೇತ್ ।
ಸ್ವಧರ್ಮಃ ಪಿತೃಧರ್ಮಶ್ಚ ಸರ್ವಧರ್ಮೋ ವಿನಶ್ಯತಿ ॥
ಕುಲೀನಮಕುಲೀನಂ ವಾ ಭೂತಿರುದ್ರಾಕ್ಷಧಾರಿಣಂ ।
ದೃಷ್ಟ್ವೋನ್ನತಾಸನೇ ತಿಷ್ಠನ್ ಶ್ವಾನಯೋನಿಷು ಜಾಯತೇ ॥
ಇದು ಕಾರಣ, ಕೂಡಲ ಚೆನ್ನಸಂಗಾ
ಭಸ್ಮಾಂಗಿಯ ಕಂಡರೆ ನಮೋ ನಮೋ ಎಂಬೆನು. ॥ ೨೮ ॥ [೨೬೫]

೨೯
ಮಾಡುವ ದಾಸೋಹ ಕಿಂಕುರ್ವಾಣದಿಂದ,
ಭಕ್ತನ ಅವಗುಣಂಗಳು ಮುಟ್ಟಲಮ್ಮವಯ್ಯಾ.
ಅರ್ಥಪ್ರಾಣ ಅಭಿಮಾನ ತ್ರಿಸ್ಥಾನ ಶುದ್ಧಮಾಡುವಲ್ಲಿ
ನಿರಾಭಾರಿಯ ಕೂಡಿಕೊಂಡಿಪ್ಪ ಕೂಡಲ ಚೆನ್ನಸಂಗಯ್ಯ. ॥ ೨೯ ॥ [೨೬೬]

೩೦
ಬಂದವಸರವನಱಿದು ಸಮಯಾಚಾರವ ಮಾಡಬೇಕಯ್ಯಾ.
ಬಂದವಸರವನಱಿದು ಸಮಯಭಕ್ತಿ ಸಂಬಂಧವ ಮಾಡಬೇಕು.
ಬಂದವಸರವ ತಪ್ಪಿಸಬಾರದು.
ಕೂಡಲ ಚೆನ್ನಸಂಗನ ಸಮಯಾಚಾರಕ್ಕೆ ಇದೇ ಯುಕ್ತಿ. ॥ ೩೦ ॥ [೨೬೭]

೩೧
ಭಕ್ತನ ಹಸ್ತಮುಟ್ಟಿ ಪಾವನವೆಂಬನ್ನಕ್ಕರ ತಾನೇನು ಭವಿಯೆ ?
ಆತನ ಲಿಂಗದೇಹಿಯೆಂತೆಂಬೆ? ಲಿಂಗಾಚಾರಿಯೆಂತೆಂಬೆ?
ಪವಿತ್ರಕಾಯನೆಂತೆಂಬೆ?
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಲಿಂಗ ಕ್ಷೇತ್ರ ಜಂಗಮ ಬೀಜವೆಂಬುದನಱಿಯರಾಗಿ. ॥ ೩೧ ॥ [೨೬೮]

೩೨
ಅಂಗದ ಮೇಲೆ ಲಿಂಗ ಸಾಹಿತ್ಯವುಳ್ಳ ಭಕ್ತನು
ಜಂಗಮಕ್ಕೆ ಜಳಕವ ಮಾಡಿಸದೆ ತಾ ಜಳಕವ ಮಾಡಿದನಾದಡೆ
ಬಚ್ಚಲ ನೀರ ತೊಳೆದುಕೊಂಡ ಸಮಾನ.

ಜಂಗಮಕ್ಕೆ ವಸ್ತ್ರವ ಹೊದಿಸದೆ ತಾ ಹೊದ್ದನಾದರೆ
ನಾಯ ತೊಗಲ ಹೊದ್ದ ಸಮಾನ.
ಜಂಗಮಕ್ಕೆ ಸುಗಂಧದ್ರವ್ಯಂಗಳ ಲೇಪನವ ಮಾಡದೆ ತಾ ಲೇಪಿಸಿಕೊಂಡಡೆ
ಅಮೇಧ್ಯವ ಹೂಸಿಕೊಂಡ ಸಮಾನ.
ಜಂಗಮಕ್ಕೆ ಅಕ್ಷತೆಯನಿಡದೆ ತಾನಿಟ್ಟುಕೊಂಡಡೆ
ಹೆಣನ ಹಣೆಯಕ್ಕಿಯನಿಕ್ಕಿಕೊಂಡ ಸಮಾನ.
ಜಂಗಮಕ್ಕೆ ಪುಷ್ಪವ ತುಱುಬದೆ ತಾ ತುಱುಬಿಕೊಂಡಡೆ
ಪಕ್ಷಿಗಳ ಪಕ್ಕವ ತುಱುಬಿಕೊಂಡ ಸಮಾನ.
ಜಂಗಮಕ್ಕೆ ಧೂಪಾರತಿಯ ಬೆಳಗದೆ ತಾ ನಿವಾಳಿಸಿಕೊಂಡಡೆ
ಸತ್ತ ಹೆಣಕೆ ನಿವಾಳಿಯನೆತ್ತಿದ ಸಮಾನ,
ಜಂಗಮಕ್ಕೆ ಆರೋಗಣೆಯಂ ಮಾಡಿಸದೆ ತಾನಾರೋಗಣೆಯಂ ಮಾಡಿದೊಡೆ
ಕಿಲ್ಬಿಷವ ಕೊಂಡ ಸಮಾನ.
ಜಂಗಮಕ್ಕೆ ಅಮೃತಪಾನಂಗಳಂ ಕೊಡದೆ ತಾ ಕುಡಿದುಕೊಂಡನಾದಡೆ
ಸುರಾಪಾನವ ಕುಡಿದ ಸಮಾನ.
ಜಂಗಮಕ್ಕೆ ಹಸ್ತಪ್ರಕ್ಷಾಲನಂ ಮಾಡಿಸದೆ ತಾ ಕೈಯ ತೊಳೆದು ಮುಕ್ಕುಳಿಸಿದಡೆ
ರಕ್ತದಲ್ಲಿ ತೊಳೆದು ಮುಕ್ಕುಳಿಸಿದ ಸಮಾನ.
ಜಂಗಮಕ್ಕೆ ತಾಂಬೂಲವಂ ಕೊಡದೆ ತಾ ವೀಳ್ಯೆಯ ಮಾಡಿದಡೆ
ತ್ರಿಭಂಗಿಯ ಕೊಂಡ ಸಮಾನ.
ಜಂಗಮಕ್ಕೆ ಸುಖಾಸನವನಿಕ್ಕದೆ ತಾ ಗದ್ದುಗೆಯ ಮೇಲೆ ಕುಳ್ಳಿತ್ತನಾದಡೆ
ಬಂದೀಕಾನದಲ್ಲಿ ಕುಳ್ಳಿತ್ತ ಸಮಾನ.
ಜಂಗಮಕ್ಕೆ ಸರ್ವಾಭರಣವನಿಕ್ಕದೆ ತಾನಿಕ್ಕಿಕೊಂಡಡೆ
ಕರ ಶಿರ ಚರಣದಲ್ಲಿ ಸಂಕಲೆಯನಿಕ್ಕಿದ ಸಮಾನ.
ಜಂಗಮಕ್ಕೆ ಅಂದಳ ಕುದುರೆ ಮೊದಲಾದ ವಾಹನಂಗಳ ಕೊಡದೆ
ತಾನೇಱಿಕೊಂಡನಾದರೆ, ವಿಮಾನದ ಮೇಲಣ ಹೆಣನ ಸಮಾನ.
ಜಂಗಮಕ್ಕೆ ಸ್ತೋತ್ರ ಮಂತ್ರ ಗೀತ ವಾದ್ಯ ನೃತ್ಯಂಗಳ ಕೇಳಿಸದೆ ತಾ ಕೇಳಿದಡೆ
ದುಃಶಬ್ದ ದುರ್ನಾದವ ಕೇಳಿದ ಸಮಾನ.
ಚಿತ್ರ ವಿಚಿತ್ರದಾಟ ಮೊದಲ ವಿನೋದವನು ಜಂಗಮ ಮುಂತಾಗಿ
ನೋಡದೆ ತಾ ನೋಡಿದಡೆ, ತೊಗಲಬೊಂಬೆಯ ನೋಡಿದ ಸಮಾನ.

ಜಂಗಮಕ್ಕೆ ಕನ್ಯಾಸ್ತ್ರೀಯ ವಿವಾಹವ ಮಾಡದೆ, ಅವರಿಗೆ ರತಿಸುಖವ ಮಾಡದೆ
ತಾ ಮದುವೆಯಾಗಿ ಸತಿ ಸಂಯೋಗವ ಮಾಡಿದಡೆ
ಮಾತೃಸಂಯೋಗವ ಮಾಡಿದ ಸಮಾನ.
ಜಂಗಮಕ್ಕೆ ಗೃಹವ ಕಟ್ಟಿಸಿಕೊಡದೆ ತಾ ಗೃಹದೊಳಗಿದ್ದರೆ
ನರಕದ ಕುಳಿಯೊಳಗಿದ್ದ ಸಮಾನ.
ಇಂತೀ ಸಕಲಭೋಗಾದಿಭೋಗಂಗಳನು ಜಂಗಮಕ್ಕೆ ಅರ್ಪಿಸದೆ
ತಾನು ಲಿಂಗಸಾಹಿತ್ಯವುಂಟೆಂದು ಕೊಂಡಡೆ
ಆತಂಗೆ ಗುರು ಲಿಂಗ ಜಂಗಮ ಪಾದೋದಕ ಪ್ರಸಾದವಿಲ್ಲ,
ಅವ ಸರ್ವಾಪರಾಧಿಯಯ್ಯಾ, ಸರ್ವಾಪರಾಧಿಯಯ್ಯಾ
ಕೂಡಲ ಚೆನ್ನಸಂಗಮದೇವಾ. ॥ ೩೨ ॥[1] [೨೬೯]

೩೩

ಮಹಾಜ್ಞಾನವು ಗುರುವಿನಲ್ಲಿ ಸಾಹಿತ್ಯ,
ಸುಜ್ಞಾನವು ಶಿಷ್ಯನಲ್ಲಿ ಸಾಹಿತ್ಯ,
ಜ್ಞಾನವು ಲಿಂಗದಲ್ಲಿ ಸಾಹಿತ್ಯ.
ಇಂತೀ, ಜ್ಞಾನವೂ ಸುಜ್ಞಾನವೂ ಮಹಾಜ್ಞಾನವೂ ಜಂಗಮದಲ್ಲಿ ಸಾಹಿತ್ಯವು.
ಇದು ಕಾರಣವಾಗಿ, ಸಕಲ ಭೋಗಾದಿ ಭೋಗಂಗಳೆಲ್ಲವನು
ಜಂಗಮಕ್ಕೆ ಕೊಡದೆ ಲಿಂಗಕ್ಕೆ ಕೊಡಲಾಗದು.
ಅದೇನು ಕಾರಣವೆಂದರೆ :
ಸರ್ವಸುಖಂಗಳನು ಜಂಗಮಕ್ಕೆ ಅರ್ಪಿಸಿದಡೆ
ಆ ಸುಖವ ಸುಖಿಸಬಲ್ಲನಾಗಿ ತನಗೆ ಪ್ರಸಾದವಾಯಿತ್ತು.
ಲಿಂಗಕ್ಕೆ ಅರ್ಪಿಸಿದೊಡೆ ಆ ಸುಖವ ಸುಖಿಸಲಜಿಯದಾಗಿ
ತನಗೆ ಪ್ರಸಾದವಿಲ್ಲ, ಪ್ರಸಾದವಿಲ್ಲವಾಗಿ ಮುಕ್ತಿಯಿಲ್ಲ.
ಅದು ಕಾರಣವಾಗಿ,
ಜಂಗಮಕ್ಕೆ ಮಾಡದೆ ಲಿಂಗಕ್ಕೆ ಆರು ಮಾಡಿಹಾರು?
ಅಲ್ಲಿ ಲಿಂಗಕ್ಕೆ ತೃಪ್ತಿಯಿಲ್ಲ ಕಾಣಾ,
ಕೂಡಲ ಚೆನ್ನಸಂಗಮದೇವಾ. ॥ ೩೩ ॥[೨೭೦]

೩೪

ಶ್ರೀಗುರು ಸಾಹಿತ್ಯಸಂಬಂಧವ ಮಾಡುವಲ್ಲಿ
ಲಿಂಗವೆ ಜಂಗಮ, ಜಂಗಮವೆ ಲಿಂಗವೆಂದು

---

೧. ಇದು ಚೆನ್ನಬಸವಣ್ಣನವರ ವಚನವಾಗಿರಲಿಕ್ಕಿಲ್ಲ(ಸಂ)

ಹೇಳಿ ಕೊಟ್ಟ ವಿವರವನಱಿಯದೆ,
ಲಿಂಗದೊಳಗೆ ಜಂಗಮ ಉಂಟೆಂದು ಗಳಹುತಿಪ್ಪಿರಿ.
ರಾಸಿಗಿಕ್ಕಿದ ಲಕ್ಷಣ ರಾಸಿಯ ಕೊಳಬಲ್ಲುದೆ?
ರಾಸಿಯೊಡೆಯನಲ್ಲದೆ,
ಆ ಪರಿಯಲ್ಲಿ ಲಿಂಗವು ಜಂಗಮದ ಮುದ್ರೆ,
ಅದಕ್ಕೆ ಜಂಗಮವೇ ಮುದ್ರಾಧಿಪತಿಯಾದ ಕಾರಣ,
ಜಂಗಮದೊಳಗೆ ಲಿಂಗ ಉಂಟೆಂಬುದು ಸತ್ಯವಲ್ಲದೆ
ಲಿಂಗದೊಳಗೆ ಜಂಗಮ ಉಂಟೆಂಬುದು ಅಸತ್ಯವು.
ವೃಕ್ಷದ ಕೊನೆಗಳಿಗೆ ಉದಕವ ನೀಡಿದಡೆ ಫಲವಹುದೆ?
ಬೇರಿಂಗೆ ನೀಡಬೇಕಲ್ಲದೆ,
ಅದು ಕಾರಣವಾಗಿ, ವೃಕ್ಷದ ಆಧಾರವೇ ಪೃಥ್ವಿ.
ಪೃಥ್ವಿಯೇ ಜಂಗಮ, ಶಾಖೆಯೇ ಲಿಂಗವು.
ದೇಹದ ಮೇಲೆ ಸಕಲಪದಾರ್ಥಂಗಳ ತಂದಿರಿಸಿದಡೆ ತೃಪ್ತಿಯಹುದೇ?
ಮುಖವ ನೋಡಿ ಒಳಯಿಂಕೆ ನೀಡಬೇಕಲ್ಲದೆ.
ಅದು ಕಾರಣವಾಗಿ ಅವಯವಂಗಳು ಕಾಣಲ್ಪಟ್ಟ ಮುಖವನುಳ್ಳುದೆ ಜಂಗಮ,
ದೇಹವೇ ಲಿಂಗ, ಲಿಂಗವೆಂಬುದು ಜಂಗಮದೊಂದಂಗ
ಕಾಣಾ ಕೂಡಲ ಚೆನ್ನಸಂಗಮದೇವಯ್ಯಾ. ॥ ೩೪ ॥[೧೭೧]

೩೫
ಗುರುವಾದಡೂ ತನ್ನ ಶಿಷ್ಯನ ಕೈಯ್ಯ ಜಂಗಮಕ್ಕೆ ಸೇವೆಯ ಮಾಡಿಸದೆ
ತಾ ಮಾಡಿಸಿಕೊಂಡನಾದರೆ ಶ್ವಾನನೊಡಲ ಹೊರೆಕಿದಂತೆ.
ಅದು ಹೇಗೆಂದಡೆ :
ತನ್ನ ಲಿಂಗವನಾ ಶಿಷ್ಯಂಗೆ ಕೊಟ್ಟು, ತಾನು ವ್ರತಗೇಡಿಯಾಗಿ ಹೋಹಲ್ಲಿ
ಆ ಜಂಗಮವೇ ಸಾಕ್ಷಿಯಾಗಿರ್ದು ವಿಭೂತಿ ವೀಳ್ಯೆಯವ ತೆಗೆದುಕೊಂಡು
ಗುರು ಶಿಷ್ಯರಿಬ್ಬರ ಪೂರ್ವಾಶ್ರಯವ ಕಳೆದರಾಗಿ
ಆ ಜಂಗಮಕ್ಕೆ ಮಾಡಿಸುವದು.
ಗುರುವಾದಡಾಗಲಿ ಲಿಂಗವಾದಡಾಗಲಿ ಜಂಗಮ ತಾನಾದರೂ ಆಗಲಿ
ಜಂಗಮದ ಪಾದೋದಕ ಪ್ರಸಾದವಿಲ್ಲದವರನೊಲ್ಲೆನೊಲ್ಲೆ.
ಅವರು ಬಱುಕಾಯರೆಂಬೆ, ಬಱುಮುಖಿಗಳೆಂಬೆ
ಅಂಗಹೀನರೆಂಬೆ ಲಿಂಗಹೀನರೆಂಬೆ.

ಜಂಗಮದಲ್ಲಿ ಗುಣವ ನೋಡದೆ ಅವಗುಣವ ನೋಡದೆ,
ರೂಪ ನೋಡದೆ ನಿರೂಪ ನೋಡದೆ, ಕೋಪವ ನೋಡದೆ ಶಾಂತವ ನೋಡದೆ,
ವಿವೇಕವ ನೋಡದೆ ಅವಿವೇಕವ ನೋಡದೆ,
ಮಲಿನವ ನೋಡದೆ ಅಮಲಿನವ ನೋಡದೆ,
ರೋಗವ ನೋಡದೆ ನಿರೋಗವ ನೋಡದೆ,
ಕುಲವ ನೋಡದೆ ಛಲವ ನೋಡದೆ, ಆಶೆಯ ನೋಡದೆ ನಿರಾಶೆಯ ನೋಡದೆ,
ಅಂಗದ ಮೇಲಣ ಲಿಂಗವನೆ ನೋಡಿ, ಜಂಗಮಕ್ಕೆ ಮಾಡಿ ನೀಡಿ
ಪಾದೋದಕ ಪ್ರಸಾದವ ಕೊಂಬ ಶರಣನ
ಬಸವಣ್ಣನೆಂಬೆ ಕಾಣಾ ಕೂಡಲ ಚೆನ್ನಸಂಗಮದೇವಯ್ಯಾ. ॥ ೩೫ ॥[೨೭೨]

೩೬

ಜಂಗಮ ಭಕ್ತನು ಗಂಡನುಳ್ಳ ಸಜ್ಜನ ಸತಿಯಂತಿರಬೇಕು :
ಹೊಯಿದಡೆ ಬೈದಡೆ ಜಜೆದಡೆ ಕೋಪಿಸಿದಡೆ
ನಿಂದಿಸಿದಡೆ ಅಳಲಿಸಿದಡೆ ಬಳಲಿಸಿದಡೆ ಹುರುಡಿಸಿದಡೆ
ಇಂತಿವು ಮೊದಲಾಗಿ ಏನೊಂದ ಮಾಡಿದೊಡೆಯೂ
ಮನದಲ್ಲಿ ಮಱುಗಿದಡೆ ಇದಿರುತ್ತರವಂ ಕೊಟ್ಟಡೆ
ಆ ಸಜ್ಜನ ಸತಿಯ ಗುಣಕ್ಕೆ ಕೊಱತೆಯಹುದು.
ಆ ಪುರುಷನೆ ದೈವವೆಂದಱೆವುದು,
ಅವನ ಗುಣವ ನೋಡದೆ ತನ್ನ ಗುಣವ ಬಿಡದೆ ಇದ್ದರೆ
ಪತಿವ್ರತೆ ಎನಿಸುವಳು, ಮೇಲೆ ಮುಕ್ತಿಯಪ್ಪುದು.
ಈ ಪತಿವ್ರತೆಯಂತೆ ಜಂಗಮದಾಸೋಹವ ಮಾಡುವ ಭಕ್ತರು
ಜಂಗಮಮಾಡಿದಂತೆ ಮಾಡಿಸಿಕೊಂಬುದು, ನಿರುತ್ತರದಲ್ಲಿಪ್ಪುದು,
ಹೀಂಗಿರದೆ ಜಂಗಮಕ್ಕೆ ಇದಿರುತ್ತರವ ಕೊಟ್ಟರೆ,
ಅವರಿಗೆ ಮಾಡುವ ಭಕ್ತಿಯ ಸಾಮಾನ್ಯವ ಮಾಡಿದರೆ,
ತಾ ಹಿಂದೆ ಮಾಡಿದ ಭಕ್ತಿಯೆಲ್ಲಾ ಬೆಂದುಹೋಗಿ
ಮುಂದೆ ನರಕಕ್ಕೆ ಗುಜೆಯಹುದು ತಪ್ಪದು
ಕಾಣಾ ಕೂಡಲ ಚೆನ್ನಸಂಗಮದೇವಾ. ॥ ೩೬ ॥[೩೭೩]

೩೭

ಜಂಗಮ ಭಕ್ತನು
ಚಿನ್ನದಂತೆ, ಕಬ್ಬಿನಂತೆ, ಶ್ರೀಗಂಧದಂತೆ ಇರಬೇಕು.

ಅದು ಹೇಂಗೆ :
ಆ ಚಿನ್ನವ ಕಾಸಿದಡೆ, ಕರಗಿಸಿದಡೆ, ಕಡಿದಡೆ, ನಿಗಿಚಿದಡೆ
ಬಣ್ಣವಧಿಕವಹುದಲ್ಲದೆ ಕಿಱಿದಾಗದು,
ಇವರು ನನ್ನನೇಕೆ ಘಾಸಿ ಮಡಿದರೆನ್ನದು.
ಆ ಕಬ್ಬ ಕಡಿದಡೆ, ಖಂಡಿಸಿದಡೆ, ಗಾಣದಲಿಕ್ಕಿ ಹಿಂಡಿಹಿಳಿದು ಬಂದ ರಸವನಟ್ಟಡೆ
ನಾನಾ ಪ್ರಕಾರದಲ್ಲಿ ಸಾಯಸಗೊಳಿಸಿದಡೆಯೂ
ಮಿಗೆ ಮಿಗೆ ಮಧುರವಾಗಿಪ್ಪುದಲ್ಲದೆ, ವಿಷವಾಗದು.
ನನ್ನನೇಕೆ ನೋಯಿಸಿದರೆಂದೆನ್ನದು.
ಆ ಶ್ರೀಗಂಧವು ಕೊಱೆದಡೆ, ತೇದಡೆ, ಹೂಸಿದಡೆ, ಬೆಂಕಿಯೊಳಗೆ ಹಾಕಿದಡೆ,
ಪರಿಮಳ ಘನವಾಯಿತ್ತಲ್ಲದೆ ದುರ್ಗಂಧವಾಗದು,
ತನ್ನಲ್ಲಿ ದುಃಖಗೊಳ್ಳದು.
ಈ ತ್ರಿವಿಧ ಗುಣದ ಪರಿಯಲ್ಲಿ
ಭಕ್ತನು ತನ್ನ ಸುಗುಣವ ಬಿಡದ ಕಾರಣ,
ಸದ್ಭಕ್ತನಹ ಮಾಹೇಶ್ವರನಹ ಪ್ರಸಾದಿಯಹ
ಪ್ರಾಣಲಿಂಗಿಯಹ ಶರಣನಹ ಐಕ್ಯನಹ.
ಇಂತು ಷಟ್ಸ್ಥಲದಲ್ಲಿ ಸಂಪನ್ನನಹಡೆ
ಇಂತಪ್ಪ ಜಂಗಮಭಕ್ತಿಯೆ ಮೂಲವಯ್ಯ
ಕೂಡಲ ಚೆನ್ನಸಂಗಮದೇವಾ. ॥ ೩೭ ॥ [೨೭೪]

ಇಂತು ಜಂಗಮಲಿಂಗದಲ್ಲಿ ಸದ್ಭಕ್ತಿಸಂಗದೊಳಿಪ್ಪ ಭಕ್ತನ ಪ್ರಸಾದಲಿಂಗ. ಆ ಸ್ಥಲದನುಭವದ ವಚನ :

[೧]**ಭಕ್ತನ ಪ್ರಸಾದಲಿಂಗಸ್ಥಲ :**[೧]

೩೮
ಭವಿಯ ಮನೆಯಲ್ಲಿ ಭವಿಪಾಕವಲ್ಲದೆ
ಭಕ್ತರ ಮನೆಯಲ್ಲಿ ಭವಿಪಾಕವಿಲ್ಲ.
ಆ ಭಕ್ತನೂ ಆ ಭಕ್ತನ ಸ್ತ್ರೀಯೂ ಲಿಂಗ ಮುಂತಾಗಿ
ಗುರು ಲಿಂಗ ಜಂಗಮಕ್ಕೆ ಬೇಕೆಂದು ಭಕ್ತಿರತಿಯಿಂದ

೧–೧ x (ಮೂ)

ಲಿಂಗಹಸ್ತದಲ್ಲಿ ಮಾಡಿದ ಸರ್ವದ್ರವ್ಯಂಗಳು ಸಕಲಪದಾರ್ಥಂಗಳೆಲ್ಲವೂ
ಶುದ್ಧಪಾಕ, ಅತ್ಯಂತ ಪವಿತ್ರಪಾಕ, ಲಿಂಗಕ್ಕೆ ಸಲುವುದು,
ಅದನತಿಗಳೆದಡೆ ದ್ರೋಹ, ಲಿಂಗಕ್ಕೆ ಕೊಟ್ಟುಕೊಳಬೇಕು
ಕೂಡಲ ಚೆನ್ನಸಂಗಮದೇವಾ. ॥ ೩೮ ॥ [೨೯೬]

೩೯

ಭವಿಯ ಮನೆಯಲ್ಲಿ ಭವಿಯ ಹಸ್ತದಲ್ಲಿ ಭವಿಪಾಕವಲ್ಲದೆ,
ಭಕ್ತರ ಮನೆಯಲ್ಲಿ ಭಕ್ತರ ಹಸ್ತದಲ್ಲಿ ಭವಿಪಾಕವುಂಟೆ? ಇಲ್ಲ ಇಲ್ಲ.
ಸುಡಲಿವಿದಿರ ಭಕ್ತಿಯೆಂತಹುದೊ, ಯುಕ್ತಿಯೆಂತಹುದೊ, ಶೀಲವೆಂತಹುದೋ!
ಸದ್ಭಕ್ತಿಯಿಂದ ಮಾಡಿ ನೀಡುವ ಭಕ್ತನು ಭಕ್ತದೇಹಿಕದೇವ!
ಆತ ತಾನೆ ಪರಶಿವನು.
ಆ ಭಕ್ತನ ಹಸ್ತದಿಂದ ದ್ರವ್ಯಪದಾರ್ಥಗಳೆಲ್ಲವೂ
ಪ್ರಸನ್ನತ್ವದಿಂ ಬಂದು[೧]ವಾ[೧]ಗಿ ಪ್ರಸಾದ,
ಲಿಂಗಕ್ಕೆ ಕೊಟ್ಟು ಕೊಂಬುದೆ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವು ಅದು ತಾನೆ.
ಆ ಮಹಿಮನು ಭಕ್ತದೇಹಿಕದೇವನೆಂದು ಭಾವಶುದ್ಧಿಯಿಂದ ಪ್ರಸಾದವ ಕೊಂಡಡೆ
ಅದೇ ಮಹಾಪ್ರಸಾದ ಕೂಡಲ ಚೆನ್ನಸಂಗಯ್ಯಾ. ॥ ೩೯ ॥ [೨೯೭]

೪೦

ಭಕ್ತರ ಮಠವನಱಸಿಕೊಂಡು ಹೋಗಿ,
ಭಕ್ತದೇಹಿಕದೇವನೆಂಬ ಶ್ರುತಿವಚನವಾಕ್ಯಮಂ ಕೇಳಿ,
ಭಕ್ತ[೨]ನೆ[೨] ದೇವನೆಂದಱಿದು, ಯುಕ್ತಿಯನಱಸುವ ಪಾತಕರ ವಿಧಿಗಿನ್ನೆಂತೊ?
ಭಕ್ತರ ಮಠಕ್ಕೆ ಹೋಗಿ ಅದು ಇದು ಎಂಬ ಸಂದೇಹಿ ಪಾತಕ ನೀ ಕೇಳಾ,
ಭಕ್ತರ ಮಠದೊಳಗೆ ಭಕ್ತಿ ರಸದ ಬೆಳಸು, ಲಿಂಗದ ಬೆಳೆ, ಪ್ರಸಾದದ ರಾಶಿ,
ಇಂತಪ್ಪ ಪ್ರಸಾದದಲ್ಲಿಗೆ ಹೋಗಿ
ಸೂತಕವನಱಸುವ ಪಾತಕರ ಮೆಚ್ಚುವನೆ
ಕೂಡಲ ಚೆನ್ನಸಂಗಮದೇವ. ॥ ೪೦ ॥[೨೯೮]

೧-೧ ದಾ (ಮೂ), ೨-೨ x(ಮೂ).

೪೧

ಲಿಂಗಕ್ಕೆ ಕೊಟ್ಟು ಕೊಂಡರೆ ಪ್ರಸಾ[೧]ದ.[೧]
ಜಂಗಮವಾರೋಗಣೆಯ ಮಾಡಿ ಮಿಕ್ಕುದು ಪ್ರಸಾದ,
ಇದೇ ಪ್ರಸಾದದಾದಿ ಕಂಡಯ್ಯಾ.
ಆದಿಯ ಪ್ರಸಾದವ ವೇದಿಸಬಲ್ಲಡೆ ಇದೇ ಕಂಡಯ್ಯಾ.
ಲಿಂಗಕ್ಕೆ ಕೊಡದೆ, ಜಂಗಮಕ್ಕೆ ನೀಡದೆ ಕೊಂಡಡೆ,
ಹುಳುಗೊಂಡದಲ್ಲಿಕ್ಕುವ ಕೂಡಲ ಚೆನ್ನಸಂಗಮದೇವ. ॥ ೪೧ ॥ [೨೯೯]

೪೨

ಗುರುಪ್ರಸಾದವೆಂದೆಂಬಿರಿ, ಲಿಂಗಪ್ರಸಾದವೆಂದೆಂಬಿರಿ,
ಭರಿತಬೋನವೆಂದೆಂಬಿರಿ, ಅಚ್ಚಪ್ರಸಾದವೆಂದೆಂಬಿರಿ.
ಗುರುಪ್ರಸಾದವೆಂಬುದನು ಲಿಂಗಪ್ರಸಾದವೆಂಬುದನು
ಭರಿತಬೋನವೆಂಬುದನು ಅಚ್ಚಪ್ರಸಾದವೆಂಬುದನು
ಅಱಿವವರು ನೀವು ಕೇಳಿರೆ :
ಶ್ರೀ ಗುರುಕಾರುಣ್ಯವುಳ್ಳ[೨] ಶಿವಭಕ್ತರು
ಆ ಶ್ರೀಗುರುಲಿಂಗಕ್ಕೆ ತನುಕ್ರೀಯಿಂದ ಪಾದಾರ್ಚನೆಯಂ ಮಾಡಿ,
ಪಾದತೀರ್ಥಮಂ ಕೊಂಡು ಷಡು ಸಮ್ಮಾರ್ಜನೆಯಂ ಮಾಡಿ,
ಲಿಂಗವಾಲಿಯನಿಕ್ಕಿ ಶ್ರೀಗುರು[೩]ವ[೩] ಲಿಂಗಾರ್ಚನೆಗೆ ಕುಳ್ಳಿರಿಸಿ,
ಅಷ್ಟವಿಧಾರ್ಚನೆ ಷೋಡಶೋಪಚಾರವಂ ಮಾಡಿ,
ಪುರುಷಾಹಾರ ಪ್ರಮಾಣಿನಿಂದ ನೀಡಿ, ತೆಱಹು ಮಱಹಿಲ್ಲದೆ,
ಆ ಶ್ರೀಗುರುವಾರೋಗಣೆಯಂ ಮಾಡಿದ ಬಳಿಕ,
ಹಸ್ತಮಜ್ಜನಕ್ಕೆಱೆದು, ಒಕ್ಕುದ ಮಿಕ್ಕುದ ಕೊಂಡುಂಬುದು ಗುರುಪ್ರಸಾದ.
ಇಂತಲ್ಲದೆ ಕೈಯೊಡ್ಡಿ ಬೇಡುವಾತ ಗುರುದ್ರೋಹಿ,
ಕೈನೀಡಿದರೆ ಇಕ್ಕುವಾತ ಶಿವದ್ರೋಹಿ,
ಇನ್ನು ಲಿಂಗಪ್ರಸಾದವನಱಿವ ಪರಿ:
ಹಿಂದಣ ಪರಿಯಲಿ, ಪುರುಷಾಹಾರದಿಂದ
ತೆಱಹು ಮಱಹಿಲ್ಲದೆ ಭರಿತಬೋನವಾಗಿ ಗಡಣಿಸಿ,
ತಟ್ಟುವ ಮುಟ್ಟುವ ವರ್ಮವನಱಿತು,

೧–೧ ದಿ (ಮೂ), ೨+ ಡೆ (ಮೂ), ೩–೩ x(ಮೂ).

ಸಂಕಲ್ಪ ವಿಕಲ್ಪವಿಲ್ಲದೆ ಭಾವಶುದ್ಧನಾಗಿ,
ಏಕಚಿತ್ತದಿಂದ ಮನಮುಟ್ಟಿ, ಲಿಂಗಕ್ಕೆ ನೈವೇದ್ಯಮಂ ತೋಱಿ,
ಸೀತಾಳಮಂ ಕೊಟ್ಟು, ಸೆಜ್ಜೆಯರಮನೆಗೆ ಬಿಜಯಂಗೈಸಿಕೊಂಡು,
ಪಂಚೇಂದ್ರಿಯ ಸಪ್ತಧಾತು ತೃಪ್ತರಾಗಲ್ಕೆ
ಪ್ರಸಾದಭೋಗಮಂ ಮಾಡುವುದು[೧] ಲಿಂಗಪ್ರಸಾದ,
ಅ[೧]ಖಂಡಿತವಾದಡೆ ಇರಿಸಿ ಲಿಂಗಪ್ರಸಾದಿಗಳಿಗೆ ಕೊಡುವುದು,
ಕೊಡದೆ ಛಲಗ್ರಾಹಕತನದಲ್ಲಿ ಕೊಂಡು,
ಒಡಲಕೆಡಿಸಿಕೊಂಡಡೆ ಪಂಚಮಹಾಪಾತಕ,
ಅವನ ಮುಖವ ನೋಡಲಾಗದು ಕೂಡಲ ಚೆನ್ನಸಂಗಯ್ಯ. ॥ ೪೨ ॥ [೩೦೦]

೪೩

ರೂಪಾಗಿ ಬಂದುದ ಕಾಯದ ಕೈಯಲ್ಲಿ ಕೊಡುವುದು,
ರುಚಿಯಾಗಿ ಬಂದುದ ಮನದ ಕೈಯಲ್ಲಿ ಕೊಡುವುದು,
ತೃಪ್ತಿಯಾಗಿ ಬಂದುದ ಭಾವದ ಕೈಯಲ್ಲಿ ಕೊಡುವುದು.
ಅರ್ಪಿಸುವ ತೆಱನಿದು ಪ್ರಸಾದಿಗಯ್ಯಾ.[೨]
ಇಷ್ಟಲಿಂಗಾರ್ಪಿತಂ ರೂಪಂ ರುಚಿಃ ಪ್ರಾಣಸಮರ್ಪಿತಾ ।
ತೃಪ್ತಿರ್ಭಾವಸಮಾಯುಕ್ತಾ ಅರ್ಪಿತಂ ತ್ರಿವಿಧಾತ್ಮಕಂ ॥
ರೂಪು ರುಚಿ ತೃಪ್ತಿಯ ಕೊಡಬಲ್ಲಡೆ
ಕೂಡಲಚೆನ್ನಸಂಗಯ್ಯನಲ್ಲಿ ಮಹಾಪ್ರಸಾದಿಯಯ್ಯಾ. ॥ ೪೩ ॥ [೩೦೧]

ಇಂತು ಪ್ರಸಾದಲಿಂಗದಲ್ಲಿ ಸದ್ಭಕ್ತಿಸಂಯೋಗದೊಳಿಪ್ಪ ಭಕ್ತನ ಮಹಾಲಿಂಗ, ಆ ಸ್ಥಲದನುಭಾವದ ವಚನ :

[೩]ಭಕ್ತನ ಮಹಾಲಿಂಗಸ್ಥಲ :[೩]

೪೪

ಸದಾಚಾರಿಯಾದಡೆ ಉಪ್ಪರಗುಡಿ, ಸಿಂಧುಪತಾಕೆ,
ಒಬ್ಬರಿಗೊಬ್ಬರು ಶರಣೆಂಬುದೆ ಸರ್ವತೀರ್ಥ,
ಭಕ್ತನ ದೇಹವೇ ತ್ರಿಕೂಟದ ಶಿವಾಲ್ಯ, ಕಾಲೇ ಕಂಬ,
ಶಿರವೇ ಸುವರ್ಣದ ಕಳಸ, ಶಿವಾಚಾರವೆ ಪೌಳಿ,

೧–೧ ಪ್ರಕಾರದ (ಮೂ), ೨+ ಶ್ರೀ (ಮೂ), ೩–೩ x (ಮೂ).

ವಿಭೂತಿಯಲ್ಲಿ ಧವಳಿಸಿ,
ಪರದೈವ ಹುಗಲೀಯದೆ,
ಪ್ರಣವ ಪಂಚಾಕ್ಷರಿಯ ಅಗುಳಿ ದ್ವಾರವಟ್ಟ ಒಪ್ಪುತ್ತಿರೆ.
ವಿನಯವೆ ಅಗ್ಗವಣಿ, ಸಜ್ಜನವೆ ಮಜ್ಜನ,
ಸದಾ ಸನ್ನಿಹಿತವೆ ಲಿಂಗಪೂಜೆ, ಸತ್ಯವೆ ಅಡ್ಡಣಿಗೆ,
ಸಮತೆಯೇ ಪರಿವಾಣ, ಮನ ಮೀಸಲೋಗರ,
ಲಿಂಗವಾರೋಗಣೆಯಂ ಮಾಡುತ್ತಿರಲು,
ಹರುಷವೆ ಹಸ್ತಮಜ್ಜನ, ಪ್ರೀತಿ ಪ್ರೇಮವೆ ಕರ್ಪೂರದ ವೀಳೆಯ,
ಕಲಿತನವೇ ಝೇಗಂಟೆ, ಫಲಪದವೆ ಭೇರಿ, [೧]ವೀರವಂದನೆ[೧] ಮದ್ದಳೆ,
ಗೀತವೆ ಸಂಪ್ರದಾ[೨][ನಿ].[೨]
ಇದು ಕಾರಣ, ಕೂಡಲ ಚೆನ್ನಸಂಗಾ
ನಿಮ್ಮ ಶರಣ ಸರ್ವಾಂಗಲಿಂಗಿ. ॥ ೪೪ ॥ [೩೨೬]

೪೫

ಗುರುಲಿಂಗಜಂಗಮ ಸನ್ಮತವಾದ ಕ್ರೀ
ಅಹುದು ಆಗದೆಂಬ ಸಂದೇಹ ಬೇಡ.
ಕ್ರೀವಿಡಿದು ತನುವ ಗಮಿಸುವುದು, ಅಱಿವಿಡಿದು ಮನವ [೩]ಗ[೩]ಮಿಸುವುದು,
ಕ್ರಿಯಾದ್ವೈತಂ ನ ಕರ್ತವ್ಯಂ ಭಾವಾದ್ವೈತಂ ಸಮಾಚರೇತ್ ।
ಕ್ರಿಯಾಂ ನರ್ವಹತೇ ಯಸ್ತು ಭಾವಶುದ್ಧಂ ತು ಶಾಂಕರಿ ॥
ಎಂದುದಾಗಿ, ಅನುಭಾವದಿಂದ ಸಕಲೇಂದ್ರಿಯಂಗಳು
ಕೂಡಲ ಚೆನ್ನಸಂಗಯ್ಯನಲ್ಲಿ ತದ್ರೂಪು. ॥ ೪೫ ॥ [೩೨೭]

೪೬

ಮಾಟವಿಲ್ಲದ ಕೂಟವದೇಕೊ?
ಕೂಟವಿಲ್ಲದ ಮಾಟವದೇಕೊ?
ಮಾಟಕೂಟವೆರಡಱ ಅನುವನಱಿಯಬೇಕು,
ಸಟೆಯಿಲ್ಲದೆ ದಿಟ ಘಟಿಸಿ ಸಯವಾಗಬೇಕು.
ಮಾಟಕೂಟವೆರಡಱ ಅನುಮತದಿಂದಲಿ ಭಕ್ತಿ,
ಇದೇ [೪]ಕೂಟ[೪] ಕೂಡಲ ಚೆನ್ನಸಂಗಯ್ಯನಲ್ಲಿ. ॥ ೪೬ ॥ [೩೨೮]

೧-೧ ನಿರವಂಧ (ಮೂ), ೨-೨ ಯ (ಮೂ), ೩-೩ ಕಾ (ಮೂ), ೪-೪ x (ಮೂ).

೪೭

ಸೂತಕವಿರಹಿತ ಲಿಂಗಾರಾಧನೆ ತನುಮೂರ್ತಿಯಾದಲ್ಲಿ ಲಿಂಗೈಕ್ಯ,
ಪಾತಕವಿರಹಿತ ಜಂಗಮಾರಾಧನೆ ಮನಮೂರ್ತಿಯಾದಲ್ಲಿ ಲಿಂಗೈಕ್ಯ.
ಸೂತಕ ಪಾತಕವೆಂಬ ಉಭಯಸಂಗ ಹಿಂಗಿತ್ತು
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯ[೧]ಂಗೆ.[೧] ॥ ೪೭ ॥ [೩೨೯]

೪೮

ಇನ್ನು ಮುಕ್ತಿಯೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕ
ಪ್ರಸಾದಲಿಂಗ ಸಾಹಿತ್ಯವಾದುದಿಲ್ಲ.
ಇನ್ನು ಪರವೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕ
ಜಂಗಮಲಿಂಗ ಸಾಹಿತ್ಯವಾದುದಿಲ್ಲ.
ಇನ್ನು ಲಿಂಗವ ಬೆರಸೇನೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕ
ಶಿವಲಿಂಗವು ಸಾಹಿತ್ಯವಾದುದಿಲ್ಲ.
ಇನ್ನು ವಿಶೇಷ[೨]ತ್ವ[೨] ಉಂಟೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕ
ಶ್ರೀಗುರುಲಿಂಗವು ಸಾಹಿತ್ಯವಾದುದಿಲ್ಲ.
ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ
ಈ ಚತುರ್ವಿಧವು ಏಕೀಭವಿಸಿ ಮಹಾಲಿಂಗವಾದ ಮಹಾಮಹಿಮಂಗೆ
ಇನ್ನು ಕಾಮಿಸಲಿಲ್ಲ, ಕಲ್ಪಿಸಲಿಲ್ಲ, ಭಾವಿಸಲಿಲ್ಲ, ಚಿಂತಿಸಲಿಲ್ಲ.
ಆತ ನಿಶ್ಚಿಂತ ಪರಮಸುಖಿ ಪರಿಣಾಮಿ, ಆತನಿದ್ದುದ ಕೈಲಾಸ,
ಆತ ಸರ್ವಾಂಗಲಿಂಗಿ ಕೂಡಲ ಚೆನ್ನಸಂಗಯ್ಯಾ. ॥ ೪೮ ॥ [೩೩೦]

ಇಂತು ಸದ್ಭ[೩]ಕ್ತ[೩]ಸ್ಥಲ ಒಂದಱಲ್ಲಿ ಷಡ್ವಿಧಲಿಂಗಸಮರಸವನೆಯ್ದಿರುತ್ತಿರಲು, ಸದ್ಭಕ್ತಸ್ಥಲ ಸಮಾಪ್ತಿ, ಮಂಗಳಮ[೪]ಹಾಶ್ರೀ. ಮುಂದೆ ಮಾಹೇಶ್ವರಸ್ಥಲವಾದುದು.

❖❖

೧–೧ x (ಮೂ), ೨–೨ ತತ್ವ (ಮೂ), ೩–೩ ಕ್ತಿ (ಮೂ).

ಮಾಹೇಶ್ವರಸ್ಥಲ

[೧]ಮಾಹೇಶ್ವರಸ್ಥಲ, ಆ ಸ್ಥಲಕ್ಕೆ ತಾಮಸ ನಿರಸನದ ವಚನ:

[೨]ಮಾಹೇಶ್ವರನ ತಾಮಸ ನಿರಸನಸ್ಥಲ:[೨]

೪೯
ಹದಿರು ಸೂಳೆಗೆ, ಕಟಕಿ ವಿದ್ಯಾವಂತಗೆ,
ಮದ್ದುಮರ ಹಾವಡಿಗಂಗೆ,
ಗೆಲ್ಲ ಸೋಲದ ಮತ್ಸರ ಕೊಲ್ಲಟಿಗಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?
ಒಬ್ಬರಿಗೊಬ್ಬರು ಮತ್ಸರಿಸಿ ನರಕಕ್ಕಿಳಿಯಬೇಕೆಂದು
ಕೊಟ್ಟನೆ ಶ್ರೀಗುರು ಲಿಂಗವನು?
ಲಿಂಗಭಕ್ತಂ ಸಕೃದ್ವೇಷೀ ಸಕೃಲ್ಲಿಂಗಂ ತು ದೂಷಕಃ ।
ಯುಗಕೋಟಿ ಕ್ರಿಮಿರ್ಭೂತ್ವಾ ವಿಷ್ಟಾಯಾಂ ಜಾಯತೇ ಪುನಃ ॥
ಇದನಱಿದು ಶಿವಭಕ್ತರು ಮದಮತ್ಸರವ ಬಿಟ್ಟು,
ಗುರುಲಿಂಗಜಂಗಮಕ್ಕೆ ಮಾಡುವ ಭಕ್ತನ ಶಿವನೆಂದು ಕಾಣದಿದ್ದರೆ
ಅಘೋರ ನರಕದಲಿಕ್ಕುವ ಕೂಡಲ ಚೆನ್ನಸಂಗಮದೇವರು. ॥ ೧ ॥ [೩೪೬]

೫೦
ಅರ್ಥಮದ ಅಹಂಕಾರಮದ ಕುಲಮದ ಬಿಡದು,
ಸಮಯಾಚಾರ ಸಮಯಭಕ್ತಿ ಇನ್ನಾರಿಗೆಯೂ ಅಳವಡದು ನೋಡಾ!
ಮಾತಿನ ಮಾತಿನ ಢಾಳಕರಿಗೆ ಸಮಯಾಚಾರಭಕ್ತಿ ಇನ್ನೆಲ್ಲಿಯದೊ?
ಕೂಡಲ ಚೆನ್ನಸಂಗಯ್ಯಾ. ॥ ೨ ॥ [೩೪೭]

೧+ ಶ್ರೀ ಗುರು ಬಸವಲಿಂಗಾಯ ನಮಃ । (ಮೂ), ೨–೨ x (ಮೂ).

ಬ್ರಹ್ಮೋಪದೇಶವಾಯಿತ್ತೆಂದು ಬ್ರಹ್ಮದೊಡನೆ ಧಿಕ್ಕಾರ ಬೇಡ,
ಕಾಲಜ್ಞಾನವಾಯಿತ್ತೆಂದು ಕರ್ಮವ ಹಳಿಯಬೇಡ,
ಶಿವಜ್ಞಾನದೀಪ್ತಿ ತೋಜಿತ್ತೆಂದು ಶಿವಶರಣರೊಡನೆ ಧಿಕ್ಕಾರ ಬೇಡ.
ಈ ತ್ರಿವಿಧೋತ್ಪಾತ ಸಲ್ಲದು,
ಕೂಡಲ ಚೆನ್ನಸಂಗಯ್ಯಾ ಇವರು ವೇಶಿಯ ಮಕ್ಕಳು. ॥ ೩ ॥ [೩೪೮]

೫೨

ಸತ್ಯವಿಲ್ಲದ ಭಕ್ತಿಯ ಸಾವಿರ ವರುಷ ಮಾಡಿದರೇನು?
ನಿಷ್ಠೆಯಿಲ್ಲದ ಪೂಜೆಯನೇಸು ಕಾಲ ಪೂಜಿಸಿದರೇನು?
ಭಾವ ನೆಲೆಗೊಳ್ಳದನ್ನಕ್ಕ,
ನಿಜವಿಲ್ಲದ ಪ್ರಸಾದವನೇಸು ಕಾಲ ಕೊಂಡರೇನು?
ಅಭ್ಯಾಸವಾಯಿತ್ತಲ್ಲದೆ ಸಹಜವಿಲ್ಲ, ಸಮ್ಮುಖವಿಲ್ಲ, ನಿಜವಿಲ್ಲ.
ಒಬ್ಬರೊಬ್ಬರ ಕಂಡು ಮಾಡುವ[೧]ರು,[೧]
ತಮ್ಮ [೨]ತಾವು[೨] ವಿಚಾರಿಸಿಕೊಳ್ಳಲಜಿಯರು.
ಇಂತಪ್ಪವರ ಭಕ್ತರೆಂದೆನಲಾಗದು, ಮಾಹೇಶ್ವರರೆಂದೆನಲಾಗದು,
ಕೂಡಲ ಚೆನ್ನಸಂಗಯ್ಯಾ,
ನೀ ಸಾಕ್ಷಿಯಾಗಿ ಛೀ ಎಂಬೆನು. ॥ ೪ ॥ [೩೪೯]

೫೩

ಲೋಕದೊಳಗೆ ಇಪ್ಪರು, ಲೋಕದೊಳಗೆ ಸುಳಿವರು,
ಲೋಕದ ಹಂಗಿಗರು!
ಆ ಲಿಂಗದ ಸುದ್ದಿಯ ತಾವೆತ್ತ ಬಲ್ಲರು?
ಪ್ರಸಾದ ನಿಷ್ಠೆಯ ತಾವೆತ್ತ ಬಲ್ಲರು?
ಬಜಿದೆ ಹೋರುವ ಭ್ರಮಿತರು.
ಇವರು ತ್ರಿವಿಧಕ್ಕೆ ವಿರಹಿತರೆಂಬೆ
ಕೂಡಲ ಚೆನ್ನಸಂಗಮದೇವಾ. ॥ ೫ ॥ [೩೫೦]

೧-೧ ದು (ಮೂ), ೨-೨ ತಮ್ಮ ತಾವೇ (ಮೂ).

೫೪

ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ?
ಗುರುಕಾರುಣ್ಯವ ಪಡೆದ ಭಕ್ತರು
ಹಿಂದಣ ಪೂರ್ವಾಶ್ರಯವ ಬೆರಸಲಾಗದು.
ಬೆರಸಿದರೆ ಆಚಾರದ್ರೋಹ ಗುರುದ್ರೋಹ ಲಿಂಗದ್ರೋಹ ಜಂಗಮದ್ರೋಹ
ಪಾದೋದಕದ್ರೋಹ ಪ್ರಸಾದದ್ರೋಹ!
ಇಂತು ಷಡ್ವಿಧದ್ರೋಹ ಬಂದೂದೆಂದಱಿಯದವಂಗೆ
ಕುಂಭೀಪಾಕ ನಾಯಕ ನರಕದಲ್ಲಿಕ್ಕುವ
ಕೂಡಲ ಚೆನ್ನಸಂಗಮದೇವ. ॥ ೬ ॥ [೩೫೧]

೫೫

ಗುರುಭಕ್ತಿ ಗುರುಭಜನೆ ಇಲ್ಲದ ನರಕಿಯ ನೆರೆಮನೆಯಲ್ಲಿರಲಾಗದಯ್ಯಾ,
ಶಿವಭಕ್ತಿ ಶಿವಭಜನೆ ಇಲ್ಲದ ಪಾಪಿಯ ಸಂಗವ ಮಾಡಲಾಗದು,
ಶೈವಸನ್ಯಾಸಿ ಕಾಳಾಮುಖಿಯ ಗುರುವೆಂಬ ಅನಾಮಿಕನ ಮಾತನಾಡಿಸಲಾಗದು,
ತಟ್ಟು ಮಟ್ಟಿಯನಿಟ್ಟ ಭ್ರಷ್ಟಂಗೆ ಶಿಶುವಾದ ಕಷ್ಟನ ಮುಟ್ಟಲಾಗದು,
ವಿಭೂತಿ ರುದ್ರಾಕ್ಷಿಯಲ್ಲಿ ಪ್ರೀತಿ ಪ್ರೇಮವಿಲ್ಲದ ನರಕಿಯ ಗುರುವೆಂಬ
ಪಾತಕನ ಮಾತು ಬೇಡ.
ಭಕ್ತಿಯಿಲ್ಲದವರಲ್ಲಿ ಯುಕ್ತಿಯಿಲ್ಲ, ಯುಕ್ತಿಯಿಲ್ಲದವರಲ್ಲಿ ಮುಕ್ತಿಯಿಲ್ಲ,
ಇವೆಲ್ಲಾ ಗುಣವಿಲ್ಲದವರಲ್ಲಿ ಕರುಣವ ಪಡದು ನಡೆವ [೧]ಸೊಲ್ಲು[೧] ಬೇಡ.
ಕೂಡಲ ಚೆನ್ನಸಂಗಯ್ಯಾ ನಿಮ್ಮ ಸಮಯಕ್ಕೆ ಸಮನಿಸದವನು
ನನಗೆ ಬೇಡವಯ್ಯಾ. ॥ ೭ ॥ [೩೫೨]

ಇಂತು ತಾಮಸನಿರಸನವಂ ಮಾಡಿದ ನಿಷ್ಠೈಕ ಮಾಹೇಶ್ವರನ ಸ್ಥಲನಿರ್ದೇಶಕ. ಆ ಸ್ಥಲದನುಭಾವದ ವಚನ :

[೨]ಮಾಹೇಶ್ವರನ ನಿರ್ದೇಶಸ್ಥಲ:[೨]

೫೬

ಸಜ್ಜನ ಸದ್ಭಾವಿ ಅನ್ಯರಲ್ಲಿ ಕೈಯ್ಯಾಂತು ಬೇಡ, ಲಿಂಗವ ಮುಟ್ಟಿದ ಕೈಮೀಸಲು,
ಕಂಗಳಲ್ಲಿ ಒಸೆದು ನೋಡ ಪರವಧುವ, ಮನದಲ್ಲಿ ನೆನೆಯ,

೧-೧ ಸೋಲು (ಮೂ), ೨-೨ x (ಮೂ).

ಮಾನವಸೇವೆಯ ಮಾಡ, ಲಿಂಗವ ಬೇಡ.
ಲಿಂಗದ ಹಂಗನೊಲ್ಲ ಕೂಡಲ ಚೆನ್ನಸಂಗಾ ನಿಮ್ಮ ಶರಣ. ॥ ೮ ॥ [೩೬೦]

೫೭

ಭಕ್ತಿ ಪದಾರ್ಥವೆಂದಱಿದ ಮಾಹೇಶ್ವರನು
ತನ್ನಲ್ಲಿ ತಾನು ಸುಯಿಧಾನಿಯಾಗಿರಬೇಕು.
ಎಲ್ಲಿ? ಲಿಂಗದಲ್ಲಿ, ಎಲ್ಲಿ? ಜಂಗಮದಲ್ಲಿ, ಎಲ್ಲಿ? ಪ್ರಸಾದದಲ್ಲಿ.
ಸುಯಿಧಾನಿಯಾಗದಿದ್ದರೆ 'ಶ್ವಾನಯೋನಿಷು ಜಾಯತೇ'
ಎಂದುದು ಕೂಡಲ ಚೆನ್ನಸಂಗನ ವಚನ. ॥ ೯ ॥ [೩೬೧]

೫೮

ಅರೆಭಕ್ತ[೧]ರಾ[೧]ದವ[೨]ರ[೨] ನೆರೆಮನೆಯಲ್ಲಿರಲಾಗದು,
ಲಿಂಗನಿಷ್ಠೆಯಿಲ್ಲದವರ ಅಂಗಳವ ಮೆಟ್ಟಲಾಗದು,
ಜಂಗಮಪ್ರೇಮವಿಲ್ಲದವರೊಡನೆ ಮಾತನಾಡಲಾಗದು,
ಪ್ರಸಾದ ಪ್ರಸನ್ನಿಕೆ ಇಲ್ಲದವರ ಸಹಪಂಕ್ತಿಯಲ್ಲಿ ಕುಳ್ಳಿರಲಾಗದು.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ, ನೀವು ಸಾಕ್ಷಿಯಾಗಿ
ಚತುರ್ವಿಧ ಸನ್ನಿಹಿತರಲ್ಲದವರ ಮೆಚ್ಚರು ನಿಮ್ಮ ಶರಣರು. ॥ ೧೦ ॥ [೩೬೨]

೫೯

ಬಟ್ಟ ಬಯಲೆಲ್ಲ ಗಟ್ಟಿಗೊಂಡರೆ
ಸ್ವರ್ಗ ಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಯದೊ?
ಮೇಘ ನಿರ್ಮಳಜಲವೆಲ್ಲಾ ಮುತ್ತಾದರೆ
ಸಪ್ತಸಾಗರಂಗಳಿಗೆ ಉದಕವೆಲ್ಲಿಯದೊ?
ಕಷ್ಟಜೀವಿ ಮನುಜರೆಲ್ಲರು ನೆಟ್ಟನೆ ಶಿವಜ್ಞಾನಿಗಳಾದರೆ
ಮುಂದೆ ಭವದ ಬಳ್ಳಿ ಬೆಳೆಯಲಿನ್ನೆಲ್ಲಿಯದೊ?
'ಗುರುಭಕ್ತಿಂ ಪರಿತ್ಯಜ್ಯ ಸದ್ಯೋಽಪಿ ನರಕಂ ವ್ರಜೇತ್'
ಇಂತೆಂದುದಾಗಿ ಕೂಡಲ ಚೆನ್ನಸಂಗಯ್ಯಾ
ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ. ॥ ೧೧ ॥ [೩೬೩]

೧-೧ ನಾ (ಮೂ), ೨-೨ ನ (ಮೂ).

೬೦

ಪರಧನ ಪರಸತಿ ಪರವಾರ್ತೆಯ ತೊಱೆಯದನ್ನಕ್ಕ
ಎಂತು ಮಾಹೇಶ್ವರಪ್ಪನಯ್ಯಾ?
ಲಿಂಗಪೂಜೆಯಲ್ಲಿ ಲೀಯವಾಗಿ ಅಂಗಗುಣವಿರೋಧಿಯಾಗದನ್ನಕ್ಕ
ಎಂತು ಮಾಹೇಶ್ವರನಪ್ಪನಯ್ಯಾ?
ಗುರುಪ್ರಸಾದದಲ್ಲಿ ನಿಹಿತಾವಧಾನಿಯಾಗದನ್ನಕ್ಕ
ಎಂತು ಮಾಹೇಶ್ವರನಪ್ಪನಯ್ಯಾ?
ಕೂಡಲ ಚೆನ್ನಸಂಗಯ್ಯನಲ್ಲಿ
ಮಾಹೇಶ್ವರನೆನಿಸಿಕೊಂಬುದು ಸಾಮಾನ್ಯವೇ ಅಯ್ಯಾ? ॥ ೧೨ ॥ [३೬೪]

೬೧

ನಿಷ್ಠೆ ನಿಬ್ಬೆಱಗು ಗಟ್ಟಿಗೊಂಡಡೆ
ಏಕೋಭಾವದಲ್ಲಿ ಸೊಮ್ಮು ಸಂಬಂಧ.
ಆಹ್ವಾನ ವಿಸರ್ಜನೆ[೧][ದ್ವಿ][೧]ರ್ಭಾವ ಬುದ್ಧಿ ಲಯವಾದಡೆ ಆತ ಮಾಹೇಶ್ವರ,
ಗುರುಮುಖದಲ್ಲಿ ಸರ್ವಶುದ್ಧನಾಗಿ ಪಂಚಭೂತದ ಹಂಗಡಗಿದಡೆ
ಆತ ಮಾಹೇಶ್ವರ.[೨]
ಪರದೈವ ಮಾನವಸೇವೆ ಪರಸ್ತ್ರೀ ಪರಧನವಂ ಬಿಟ್ಟು
ಏಕಲಿಂಗ ನಿಷ್ಠಾಪರನಾಗಿ,
ದಾಸತ್ವಂ ವೀರದಾಸತ್ವಂ ಭತ್ಯತ್ವಂ ವೀರಭೃತ್ಯತಾ ।
ಸಮಯಃ ಸಕಲಾವಸ್ಥಃ ಸಜ್ಜನಂ ಷಡ್ವಿಧಸ್ತಥಾ ॥
ಎಂಬ ಶ್ರುತ್ಯರ್ಥದಿಂದಲ್ಲಿ ನಿಹಿತನಾಗಬಲ್ಲಡೆ
ಆತ ಮಾಹೇಶ್ವರನಪ್ಪನಯ್ಯಾ.
ಗುರುಮಾರ್ಗವೇ ತನಗೆ ಸನ್ಮತವಾಗಿ
ಇರಬಲ್ಲಡೆ ಆತ ಮಾಹೇಶ್ವರನು.
ಈ ಮತವನಱಿಯದ ಮೂಕೊಱೆಯರ ಮೆಚ್ಚುವನೆ
ಕೂಡಲ ಚೆನ್ನಸಂಗಮದೇವ? ॥ ೧३ ॥ [३೬೫]

೧-೧ ದು (ಮೂ), ೨+ ನು (ಮೂ).

[೧]ಇಂತಪ್ಪ ಮಾಹೇಶ್ವರಸ್ಥಲವನಂಗಂಗೊಂಡಿಪ್ಪ ನಿಜೈಕ್ಯಂಗೆ ಷಡ್ವಿಧಲಿಂಗ[೨]ವು[೨] ಹೇಂಗೆ ಬೆರಸಿಪ್ಪುದೆಂದರೆ, ಆ ಲಿಂಗದ ವಿವರ:[೩] ಮಾಹೇಶ್ವರನ ಆಚಾರಲಿಂಗ, ಆ ಸ್ಥಲದನುಭಾವದ ವಚನ :

[೪]ಮಾಹೇಶ್ವರನ ಆಚಾರಲಿಂಗಸ್ಥಲ:[೪]

೬೨

ಶಿವಜನ್ಮದಲ್ಲಿ ಹುಟ್ಟಿ ಶಿವಶರಣರ ಮನೆಯಲ್ಲಿ ಒಕ್ಕುದ ಕೊಂಬುದು,
ಭವಭಾರಿಗಳ ಮನೆಯಲ್ಲಿ ಲಿಂಗಾರ್ಚನೆಯಂ ಮಾಡಲಾಗದು,
ಭವವಿರಹಿತ [೫]ಲಿಂಗಕ್ಕೆ ಭವಿಪಾಕವ[೫] ಕೊಟ್ಟರೆ ರೌರವನರಕ ನೋಡಾ.
ಅಸಂಸ್ಕಾರಿಕೃತಂ ಪಾಕಂ ಶಂಭೋರ್ನೈವೇದ್ಯಮೇವ ನ ।
ಅನ್ಯವೇದ್ಯಂ ತು ಭುಂಜಿಯಾನ್ನರಕೇ ಕಾಲಮಕ್ಷಯಂ ॥
ಇದು ಕಾರಣ, ಕೂಡಲಚೆನ್ನಸಂಗಯ್ಯಾ
ಭವಿಪಾಕ 'ಪುನರಪಿ ಜನ್ಮಂ' ॥ ೧೪ ॥ [೩೬೬]

೬೩

ಶಿವಮಂತ್ರಸಂಸ್ಕಾರವಿಲ್ಲದ ತನುಭವಿಗಳು
ತನ್ನ ಲಿಂಗಕ್ಕೆ ಮಾಡುವನ್ನಕ್ಕ
ಭವಿಮಿಶ್ರವ ಕಳೆದೆವೆಂದು ಎಂತೆನಬಹುದು?
ಶಿವಮಂತ್ರಸಂಸ್ಕಾರವಾಗಿ
ಜಾತಿಸೂತಕ ಪ್ರೇತಸೂತಕ ಜನನಸೂತಕ ಎಂಜಲುಸೂತಕ ರಜಸ್ಸೂತಕವೆಂಬ
ಪಂಚಸೂತಕವುಳ್ಳ ಮನಭವಿಗಳು
ತನ್ನ ಲಿಂಗಕ್ಕೆ ಪದಾರ್ಥವ ಮಾಡುವನ್ನಕ್ಕ
ಭವಿಮಿಶ್ರವ ಕಳೆದೆವೆಂದು ಎಂತೆನಬಹುದು?
ತನುಭವಿಯ ಹಸ್ತದಿಂದ ಪಂಚಮಹಾಪಾತಕ,
ಮನಭವಿಯ ಹಸ್ತದಿಂದ ಅಘೋರನರಕ.
'ಭವಿನಾಂ ಪಾಪದೃಷ್ಟೀನಾಂ ನ ಕಿಂಚಿತ್ಪರಮಂ ಪದಂ'
ಎಂಬುದನಜಿದು,
ಇಂತಪ್ಪ ಭವಿಗಳನೊಳಗಿಟ್ಟುಕೊಂಡು ಎನಗೆ ಭವಿಮಿಶ್ರವಿಲ್ಲವೆಂಬ
ಲಜ್ಜೆಗೆಟ್ಟ ದುರಾಚಾರಿಗಳ ಸಜ್ಜನಸದ್ಭಕ್ತರು ಮೆಚ್ಚರು,
[೬]ಕೂಡಲ ಚೆನ್ನಸಂಗಮದೇವಾ.[೬] ॥ ೧೫ ॥ [೩೬೭]

೧+ ಶ್ರೀ (ಮೂ), ೨–೨ ವೆ (ಮೂ), ೩–೩ ಶ್ರೀ (ಮೂ), ೪–೪ x(ಮೂ), ೫–೫ ಂಗೆ ಭಗವಪಾಕವ ತನ್ನ ಲಿಂಗಕ್ಕೆ (ಮೂ), ೬–೬ x(ಮೂ).

೬೪

ಸದ್ಭಕ್ತರ ಬಸುಱಲ್ಲಿ ಹುಟ್ಟಿದ ಮಕ್ಕಳು ಭವಿಯನಾಚರಿಸಿದಡೆ
ಪಂಚಮಹಾಪಾತಕವೆಂದುದು ವಚನ,
ತಿಲಷೋಡಶಭಾಗಂ ಚ ತೃಣಾಗ್ರಾಂಬುಕಣೋಪಮಂ ।
ಪಾದೋದಕಂ ಪ್ರಸಾದಾನ್ನಂ ನಾಶನಾನ್ನರಕಂ ವ್ರಜೇತ್ ॥
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರ[1]ಣರಿ[1]ಗೆ ಸಂತಾನವಿಲ್ಲದೆ ಹೋಗಲಿ. ॥ ೧೬ ॥[೩೬೮]

೬೫

ಉಂಬಲ್ಲಿ ಉಡುವಲ್ಲಿ ಕ್ರೀ ಅಳಿಯಿತ್ತೆಂಬರು,
ಕೊಂಬಲ್ಲಿ ಕೊಡುವಲ್ಲಿ ಕುಲವನಱಸುವರು.
ಏನೆಂಬೆನಯ್ಯಾ?
ಒಚ್ಚೆ ಒಚ್ಚೆ ಭವಿಗಳು, ಒಚ್ಚೆ ಒಚ್ಚೆ ಭಕ್ತರು,
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಭಕ್ತಕಾಯ ಮಮಕಾಯವೆಂ[2]ತೆ[2]ಂಬರು? ॥ ೧೭ ॥ [೩೬೯]

೬೬

ಕರ್ಮಜಾತನ ಕಳೆದು ಶ್ರೀಗುರುಲಿಂಗವು ಪುಣ್ಯಜಾತನ ಮಾಡಿದ ಬಳಿಕ,
ಆತನು ಶಿವಕುಲವಲ್ಲದೆ ಬೇಱೆ ಮತ್ತೊಂದು ಕುಲವುಂಟೆ?
ಮಾತಾ ಗೌರೀ ಪಿತಾ ರುದ್ರೋ ಐಶ್ವರಂ ಕುಲಮೇವ ಚ ।
ಬಾಂಧವಾಃ ಶಿವಭಕ್ತಾಶ್ಚ ಸ್ವದೇಶೋ ಭುವನತ್ರಯಂ ॥
ಎಂದುದಾಗಿ, ಕೂಡಲ ಚೆನ್ನಸಂಗಯ್ಯಾ
ನಿಮ್ಮ ಮಾಹೇಶ್ವರಕುಲಕ್ಕೆ ಪ್ರತಿಯ ಕಾಣೆ. ॥ ೧೮ ॥ [೩೭೦]

೬೭

ಗುರುಕಾರುಣ್ಯವ ಪಡೆದ ಬಳಿಕ ಕೂಡೆ ಭವಿಯ ಬಿಡಲೇಬೇಕು.
ಲಿಂಗಸಂಗಿಯಾದ ಬಳಿಕ ದುಸ್ಸಂಗ ಹಿಂಗಲೇಬೇಕು.
ಅರ್ಪಿತವಲ್ಲದೆ ಮುಟ್ಟೆನೆಂದರೆ ತಟ್ಟು ಮುಟ್ಟುವ ವರ್ಮವನಱಿಯಬೇಕು,
ಲಿಂಗಪ್ರಸಾದವಲ್ಲದೆ ಬಾಯಿದೆಱೆಯೆನೆಂದರೆ
ಜಿಹ್ವೆಯ ಕೊನೆಯಲ್ಲಿ ರುಚಿಯನಱಿಯದಂತಿರಬೇಕು.

೧–೧ ಣಂ (ಮೂ), ೨–೨ ದೆಂ (ಮೂ), ೩–೩ ವ (ಮೂ).

ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಸರ್ವಾಚಾರ ಸಂಪನ್ನರಲ್ಲದವರ ಮನೆಯ ಪಾಕ
ಸೂಕರ ಮಾಂಸಕ್ಕೆ ಸಮಾನ ಎಂದುದಾಗಿ
ಲಿಂಗೈಕ್ಯರಂಗವಿಸಲೊಲ್ಲರು. ॥ ೧೯ ॥ [೩೭೧]

೩೭೮

ಗುರುವಿನಲ್ಲಿ ಸದಾಚಾರ, ಲಿಂಗದಲ್ಲಿ ಶಿವಾಚಾರ,
ಜಂಗಮದಲ್ಲಿ [1]ಸಮಯಾಚಾರ.[1]
ಇಂತೀ ತ್ರಿವಿಧಾಚಾರ ಸಂಬಂಧವಾದ ಬಳಿಕ
ತನ್ನ ಶೀಲಕ್ಕೆ ಶೀಲ ಸಮಾಚಾರವಾಗದವರ ಮನೆಯ ಅನುಸರಿಸಿ ನಡೆದರೆ
ಕೂಡಲ ಚೆನ್ನಸಂಗನ ಶರಣ
ಪೂರ್ವಾಚಾರಿ ಬಸವಣ್ಣ ಮೆಚ್ಚನಯ್ಯಾ. ॥ ೨೦ ॥ [೩೭೨]

೩೭೯

ಶ್ರೀಗುರುಸ್ವಾಮಿ ಶಿಷ್ಯನ ಅನುಗ್ರಹವ ಮಾಡುವ ಪರಿಯೆಂತೆಂದರೆ:
ಆಚಾರಸ್ಥಲ ಗುರುಸ್ಥಲ ಲಿಂಗಸ್ಥಲ [2]ಜಂಗಮಸ್ಥಲ[2]
[2]ಅರ್ಪಿತಸ್ಥಲ[2] ಪ್ರಸಾದಸ್ಥಲವೆಂದು
ಕರುಣಿಸೂದು ದೀಕ್ಷೆ.
ಈ ಕ್ರಮವನರಿದು ಮಹಾಪ್ರಸಾದವೆಂದು
ಕೈಕೊಂಬು[3]ದು[3] ಶಿಷ್ಯ.
ಇಂತು ಮಹಾಪ್ರಸಾದವೆಂದು ಕೈಕೊಂಡಬಳಿಕ
ಪರಪಾಕಂ ನ ಕರ್ತವ್ಯಂ ಲಿಂಗನೈವೇದ್ಯ ಕಿಲ್ಬಿಷಂ ।
ಸ್ವಯಂ ಪಾಕಂ ಪವಿತ್ರಾಣಾಂ ಲಿಂಗನೈವೇದ್ಯಮುತ್ತಮಂ ॥ ಎಂಬುದಾಗಿ
ಒಡಲ ಕಕ್ಕುಲತೆಗೆ, ಭಕ್ತನ ದಾಕ್ಷಿಣ್ಯಕ್ಕೆ
ಆ ನೈವೇದ್ಯವ ಭವಿನೇಮಸ್ತರುಳ್ಳಲ್ಲಿ
ಲಿಂಗಾ[4][ರ್ಪಿತವಂ][4]ಮಾಡಿದಡೆ
ನಾಯಡಗು ನರಮಾಂಸ,
ತಪ್ಪದು ಕೂಡಲ ಚೆನ್ನಸಂಗಮದೇವಾ. ॥ ೨೧ ॥[೩೭೩]

೧–೧ ಸಮಾಚಾರ (ಮೂ), ೨–೨ x (ಮೂ). ೩–೩ ರ್ಚನೆಯಂ (ಮೂ). ೪–೪ x (ಮೂ)

೭೦

ಭಕ್ತಂಗಾಗಲಿ ಜಂಗಮಕ್ಕಾಗಲಿ ಸದಾಚಾರವೆ ಬೇಕು,
ಸದಾಚಾರ ಉಳ್ಳವರಿಗೆ ಅನಾಯತ ಹೊದ್ದಲಾಗದು.
ಅನಾಯತವೆಂಬುದೆ ಅನುಸರಣೆ, ಅನುಸರಣೆಯೆಂಬುದೆ ಅಂಗದಿಚ್ಛೆ,
ಅಂಗದಿಚ್ಛೆ ಎಂಬುದೆ ಅನಾಚಾರ, ಅನಾಚಾರವೆಂಬುದೆ ಪಂಚಮಹಾಪಾತಕ.
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಅನುಸರಿಸಿ ನಡೆದಡೆ ಅಘೋರನರಕ. ॥ ೨೨ ॥ [೩೭೪]

೭೧

ನೊಸಲಲೊಂದು ಕಣ್ಣುಳ್ಳವನಾದರೂ
ಅವನ ಅಂಗದ ಮೇಲೆ ಲಿಂಗಸಂಬಂಧವಿಲ್ಲದಿದ್ದರೆ
ಅವನ ಮನೆಯಲ್ಲಿ ಮಾಡಿದ ಪಾಕ ಶ್ವಾನಮಾಂಸ, ತಪ್ಪದಾಗಿ ಬಲ್ಲವರೊಲ್ಲರು.
ಶಿವಭಕ್ತರಲ್ಲದವರ ಮನೆಯಲ್ಲಿ ಉಂಡರೆ
ಜನ್ಮಜನ್ಮಾಂತರದಲ್ಲಿ ಶ್ವಾನಯೋನಿಯಲ್ಲಿ ಬಪ್ಪುದು ತಪ್ಪದು,
ಎಲೆ ಶಿವನೆ ನೀನಿಲ್ಲದವನ ಮನೆಯಲ್ಲಿ ತಿಂಬವಂಗೆ
ಎನ್ನ ಮನವು ಸೊಗಸದಯ್ಯಾ ಕೂಡಲ ಚೆನ್ನಸಂಗಮದೇವಾ. ॥ ೨೩ ॥ [೩೭೫]

೭೨

ಬೀದಿಯ ಬಸವಂಗೆ ದೇಗುಲದ ಪಶುವಿಂಗೆ ಹುಟ್ಟಿದ
ಹೋರಿಗಳೆಲ್ಲಾ ಬಸವಗಳಪ್ಪವೆ? ಲಿಂಗ ಮುದ್ರೆಯನೊತ್ತದನ್ನಕ್ಕ,
ಭಕ್ತಂಗೆಯೂ ಭಕ್ತೆಗೆಯೂ ಹುಟ್ಟಿದವರೆಂದರೆ
ಗುರುಕಾರುಣ್ಯದಿಂದ ಲಿಂಗಧಾರಣವಿಲ್ಲದಿದ್ದರೆ ಭಕ್ತರಪ್ಪರೆ?
ಅವರನೊಳಗಿಟ್ಟುಕೊಂಡು ನಡೆದರೆ ಭಕ್ತಿಹೀನರೆನಿಸಿತ್ತು
ಕೂಡಲ ಚೆನ್ನಸಂಗಮದೇವನ ವಚನ. ॥ ೨೪ ॥ [೩೭೬]

೭೩

ಶಿವಭಕ್ತರ ಶಿಶುವು ಧರಣಿಯ ಮೇಲೆ ಬಿದ್ದ[1]ರಂ[1]ತೆ
ವಿಭೂತಿಯ ಪಟ್ಟವಂ ಕಟ್ಟಿ, ಕೊರಳಲ್ಲಿ ಲಿಂಗಸಾಹಿತ್ಯವಂ ಮಾಡಿ,
ಪಾದೋದಕದಲಿ ಜಳಕವ ಮಾಡಿಸೂದು,
ಪ್ರಸಾದದೆಣ್ಣೆ ಬೆಣ್ಣೆ ಹಾಲನೆಱದು ಸಲಹೂದು ಸದಾಚಾರ.

೧-೧ ರೆಂ (ಮೂ).

ಅದಕ್ಕೆ [೧]ಈಜಿಲು ಗುಳಿ[೧] ಭೂತ ಸೋಂಕಿತ್ತೆಂದು
ಕಣಿಯರ ಬೆಸಬೆಸಗೊಂಡು ಮಾಡುವ ಭಕ್ತಂಗೆ
ಗುರುವಿಲ್ಲ ಲಿಂಗವಿಲ್ಲ [೨]ಜಂಗಮವಿಲ್ಲ[೨] ಪಾದೋದಕವಿಲ್ಲ ಪ್ರಸಾದವಿಲ್ಲ.
ಅವ ಪಂಚಮಹಾಪಾತಕ.
ಇದನರಿದು ಕೂಡಲ ಚೆನ್ನಸಂಗಯ್ಯನಲ್ಲಿ
ನಚ್ಚಿದ ಮಚ್ಚು ಅಚ್ಚೊತ್ತಿದಂತಿಲ್ಲದವರ
ಮೆಚ್ಚರು ನಿಮ್ಮ ಶರಣರು ॥ ೨೫ ॥ [೩೭೭]

[೩]ಇಂತಪ್ಪ ಆಚಾರಲಿಂಗನಿಷ್ಠೆಯೊಳಿಪ್ಪ ಮಾಹೇಶ್ವರನ ಗುರುಲಿಂಗ. ಆ ಸ್ಥಲದನುಭಾವದ ವಚನ:

[೪]ಮಾಹೇಶ್ವರನ ಗುರುಲಿಂಗಸ್ಥಲ:[೪]

೭೪

ಶ್ರೀಗುರು ಶಿಷ್ಯಂಗೆ ಅನುಗ್ರಹವ ಮಾಡಿದ ಕ್ರಮವೆಂತೆಂದಡೆ :
ಲಿಂಗ ಜಂಗಮ ಪಾದೋದಕ ಪ್ರಸಾದ
ಇಂತು ಚತುರ್ವಿಧ ಲಂಪಟನಾಗೈ ಮಗನೆ ಎಂದು,
ಅಂಗದ ಮೇಲೆ ಲಿಂಗಸಾಹಿತ್ಯವ ಮಾಡಿ,
ಹುಸಿ ಕಳವು ವೇಶ್ಯಾಗಮನ ಪಾರದ್ವಾರ ಪರದ್ರವ್ಯ ಪರನಿಂದೆ ಪರದೋಷ
ಇಂತೀ ಸಪ್ತಗುಣ ವಿರಹಿತನಾಗಿ, ಅನ್ಯಭವಿನಾಸ್ತಿಯಾಗಿ,
ಮಜ್ಜನಕ್ಕೆರೆವುದು ಶಿವಪಥ ಕಂಡಾ ಮಗನೆ
ಎಂದು ಹೇಳಿಕೊಟ್ಟ ಉಪದೇಶವನೆ ಕೇಳಿ ನಡೆಯಬಲ್ಲಡೆ,
ಆತನೆ [೫]ಶಿಷ್ಯ,[೫] ಆತನೆ ನಿತ್ಯಮುಕ್ತನು.
ಆ ಗುರುಶಿಷ್ಯರೇಕವಾಗಿ ನಿಮ್ಮೊಳಗೆರಕವು, ಅದಂತಿರಲಿ,
ಅದು ಉಪಮಿಸಬಾರದ ಘನವು, ಅದಕ್ಕೆ ಶರಣಾರ್ಥಿ.
ಇನಿತಿಲ್ಲದೆ ಕೊಡುವ ಕೊಂಬ ಗುರುಶಿಷ್ಯರಿಬ್ಬರಿಗೂ ಯಮದಂಡನೆ,
ಕಾಣಾ ಕೂಡಲ ಚೆನ್ನಸಂಗಮದೇವಾ. ॥ ೨೬ ॥ [೪೪೮]

೭೫

ಮಹಾಘನವ ಶ್ರೀಗುರುಲಿಂಗವೆ ಗುರುವಲ್ಲದೆ
ಪಿತನೊಂದು ಗುರುವೆ ? ಮಾತೆಯೊಂದು ಗುರುವೆ ?

೧–೧ ಯಿಜೆಯಲು ಗಾಳಿ (ಮೂ), ೨–೨ x(ಮೂ), ೩+ ಶ್ರೀ (ಮೂ), ೪–೪ x ಮೂ, ೫–೫ ತತ್ಶಿಷ್ಯ (ಮೂ).

ಭ್ರಾತನೊಂದು ಗುರುವೆ ? ಸತಿಯೊಂದು ಗುರುವೆ ?
ಸುತನೊಂದು ಗುರುವೆ ?
ಗುರು ಗುರುವೆಂದೇನೊ ಒಮ್ಮಿಜಿ ಗುರುವೆ ?
[೧]ಆ[೧] ಮಹಾಘನ ಗುರುಲಿಂಗಕ್ಕೆ.
ಇವರೆಲ್ಲರ ಸರಿಗಂಡರೆ ಅಘೋರ ನಾಯಕನರಕ ತಪ್ಪದು
ಕೂಡಲ ಚೆನ್ನಸಂಗಮದೇವಾ. ॥ ೨೭ ॥ [೪೪೯]

೭೬

ತನ್ನ ಪುತ್ರಂಗೆ ತಾನೆ ಗುರುವಾದೆನೆಂಬ
ಗುರುದ್ರೋಹಿಯ ಮಾತ ಕೇಳಲಾಗದು,
ಅವರಿಬ್ಬರನು ಹೊತ್ತಿಸಿ ನಂದಿಸಿ ಸುಡುವ
ಕೂಡಲ ಚೆನ್ನಸಂಗಯ್ಯನವರ ಗುರುಶಿಷ್ಯತನವ. ॥ ೨೮ ॥ [೪೫೦]

[೨]ಇಂತು ಗುರುಲಿಂಗನಿಷ್ಠೆಯೊಳಿಪ್ಪ ಮಾಹೇಶ್ವರನ ಶಿವಲಿಂಗ. ಆ ಸ್ಥಲದನುಭಾವದ ವಚನ:

[೩]ಮಾಹೇಶ್ವರನ ಶಿವಲಿಂಗಸ್ಥಲ:[೩]

೭೭

'ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ'
ಎಂಬ ಶ್ರುತಿಯನಜಿದು [೪]ಮತ್ತೆ ದೈವ[೪]ವುಂಟೆಂಬ ವಿಪ್ರರು ನೀವು ಕೇಳಿರೋ!
ಓಂ ನಿಧನಪತಯೇ ನಮಃ ನಿಧನ ಪತಾಂತಿಕಾಯ ನಮಃ
ಓಂ ಉರ್ಧ್ವಾಯ ನಮಃ ಉರ್ಧ್ವಲಿಂಗಾಯ ನಮಃ
ಓಂ ಹಿರಣ್ಯಾಯ ನಮಃ ಹಿರಣ್ಯಲಿಂಗಾಯ ನಮಃ
ಓಂ ಸುವರ್ಣಾಯ ನಮಃ ಸುವರ್ಣಲಿಂಗಾಯ ನಮಃ
ಓಂ ದಿವ್ಯಾಯ ನಮಃ ದಿವ್ಯಲಿಂಗಾಯ ನಮಃ
ಎಂದುದಾಗಿ,
[೫]ಏತತ್ ಸೋಮಸ್ಯ ಸೂರ್ಯಸ್ಯ[೫] ಸರ್ವಲಿಂಗ ಸ್ಥಾಪಯೇತ್
[೬]ಇತಿ[೬] ಓಂ ಪಾಣಿಮಂತ್ರಂ ಪವಿತ್ರಂ
ಎಂದುದಾಗಿ, ಇದನಜಿದು ಮತ್ತೆ ದೈವವುಂಟೆಂಬ
ದ್ವಿಜರೆಲ್ಲರೂ ಭ್ರಮಿತರು, ಕೂಡಲ ಚೆನ್ನಸಂಗಮದೇವಾ, ॥ ೨೯ ॥ [೪೫೯]

೧–೧ x (ಮೂ), ೨+ ಶ್ರೀ (ಮೂ), ೩–೩ x (ಮೂ), ೪–೪ ಮುತ್ತೈದೆ (ಮೂ), ೫–೫ x (ಮೂ), ೬–೬ x (ಮೂ).

೭೮

ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣವೇ ।
ಶಿವಸ್ಯ ಹೃದಯಂ ವಿಷ್ಣುರ್ವಿಷ್ಣೋಶ್ಚ ಹೃದಯಂ ಶಿವಃ ।
ಯಥಾ ಶಿವಮಯೋ ವಿಷ್ಣುರೇವಂ ವಿಷ್ಣುಮಯಃ ಶಿವಃ ॥
ಇಂತೆಂಬ ಪಾತಕರು ನೀವು ಕೇಳಿರೊ!
ಓಂ ಭೂ ಓಂ ಭುವಃ ಓಂ ಸ್ವಃ ಓಂ ಮಹಃ ಓಂ ಜನಃ ಓಂ ತಪಃ ಓಂ ಸತ್ಯಂ
ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋ
ಯೋ ನಃ ಪ್ರಚೋದಯಾತ್
ಇಂತೆಂಬ ಶ್ರುತಿಯೊಳಗೆ ಆ ಶಬ್ದವುಳ್ಳರೆ ತೋಱಿರೇ!
ಹಿಂದನಱಿಯರು ಮುಂದ ವಿಚಾರಿಸರು,
ಇಂತಪ್ಪ ಅಂತ್ಯಜರನೇನೆಂಬೆ ಕೂಡಲ ಚೆನ್ನಸಂಗಮದೇವಾ. ॥ ೩೦ ॥ [೪೯೦]

೭೯

[1]ಆದಿ ಅನಾದಿ ಇಲ್ಲದಂದು, ಸ್ಥಿತಿಗತಿ ಉತ್ಪನ್ನವಾಗದಂದು,
ಭಕ್ತಿಯ[2]ನುಭಾವಿಯ[2] ಬಸುಱೊಳಗೆ ಸತ್ಯಜ್ಞಾನವೆಂಬ ಶಾಸ್ತ್ರಂಗಳು ಹುಟ್ಟಿದವು.
ಆ ಶಾಸ್ತ್ರದೊಳಗಡಗಿದವು ವೇದಪುರಾಣಾಗಮಂಗಳು.
ಆ ಆಗಮಂಗಳೊಳಗಡಗಿದವು ಐವತ್ತೊಂದಕ್ಷರಂಗಳು,
ಆ ಅಕ್ಷರಂಗಳೊಳಗಡಗಿದವು ಇಪ್ಪತ್ತೇಳು ನಕ್ಷತ್ರಂಗಳು,
ಇಪ್ಪತ್ತೇಳು ನಕ್ಷತ್ರಂಗಳೊಳಗಡಗಿದವು
ಈರೇಳು ಲೋಕದ ಘಳಿಗೆ ಜಾವ ದಿನ ಮಾಸ ಸಂವತ್ಸರಂಗಳು.
ಇಂತಿವೆಲ್ಲವನು ಒಳಗಿಟ್ಟುಕೊಂಡಿಹಾತ ಓಂ ನಮಃ ಶಿವಾಯಯೆಂಬಾತ ಕಾಣಿರೇ!
ಹೊಱಗಿಪ್ಪಾತನು ಓಂ ನಮಃ ಶಿವಾಯಯೆಂಬಾತ ಕಾಣಿರೆ!
ಉಳಿದಿಪ್ಪಾತನು ಓಂ ನಮಃ ಶಿವಾಯಯೆಂಬಾತ ಕಾಣಿರೆ!
ಮತ್ತಿದ್ದ ಯೋನಿಜರೆಲ್ಲರೂ ಶಾಪಹತರಾಗಿ ಹೋದರು.
ಇದು ಕಾರಣ, ಓಂ ನಮಃ ಶಿವಾಯಯೆಂಬಾತನೆ ಲಿಂಗವು.
ಪಂಚಾಕ್ಷರಿಯೆ ಪರಮೇಶ್ವರನು, ಪಂಚಾಕ್ಷರಿಯೆ ಪರಮತತ್ವ,
ಪಂಚಾಕ್ಷರಿಯೆ ಪರಮಯೋಗ,
ಪಂಚಾಕ್ಷರಿಯೆ ಪರಂಜ್ಯೋತಿ, ಪಂಚಾಕ್ಷರಿಯೆ ಪಾಪಾಂತಕ.[3]

೧+ ಓಂ ಪಂಚಾಕ್ಷರಿಯ ಪ್ರಣಮಂಗಳು (ಮೂ), ೨–೨ ಮಗನು ಭವಿಯ (ಮೂ), ೩+ ನು (ಮೂ)

'ನ' ಎಂಬಕ್ಷರವೆ ದೇವರ ಚರಣ, 'ಮ' ಎಂಬಕ್ಷರವೆ ದೇವರ ಒಡಲು,
'ಶಿ' ಎಂಬಕ್ಷರವೆ ದೇವರ ಹಸ್ತಂಗಳು, 'ವಾ' ಎಂಬಕ್ಷರವೆ ದೇವರ ನಾಸಿಕ,
'ಯ' ಎಂಬಕ್ಷರವೆ ದೇವರ ನೇತ್ರ.
ಮತ್ತೆ,
'ನ' ಎಂಬಕ್ಷರವೆ ದೇವರ [೧]ದಯೆ,[೧] 'ಮ' ಎಂಬಕ್ಷರವೆ ದೇವರ ಶಾಂತಿ,
'ಶಿ' ಎಂಬಕ್ಷರವೆ ದೇವರ ಕ್ರೋಧ, 'ವಾ' ಎಂಬಕ್ಷರವೆ ದೇವರ [೨]ದ[೨]ಮನ,
'ಯ' ಎಂಬಕ್ಷರವೆ ದೇವರ ಶಬ್ದ.
ಮತ್ತೆ,
'ನ' ಎಂಬಕ್ಷರವೆ ಪೃಥ್ವಿ, 'ಮ' ಎಂಬಕ್ಷರವೆ ವಿಷ್ಣು,
'ಶಿ' ಎಂಬಕ್ಷರವೆ ರುದ್ರ, 'ವಾ' ಎಂಬಕ್ಷರವೆ ಶಕ್ತಿ,
'ಯ' ಎಂಬಕ್ಷರವೆ ಲಿಂಗವು.
ಇಂತು ಪಂಚಾಕ್ಷರಿಯೊಳಗಳಿವಕ್ಷರ ನಾಲ್ಕು, ಉಳಿವಕ್ಷರ ಒಂದು.
ಈ ಪಂಚಾಕ್ಷರಿಯನೇಕಾಕ್ಷರಿಯ ಮಾಡಿದ ಬಳಿಕ ದೇವನೊಬ್ಬನೆ ಎಂದಱಿದು
ಬ್ರಹ್ಮ ದೈವವೆಂಬ ಬ್ರಹ್ಮೇತಿಕಾಱರನೇನೆಂಬೆನಯ್ಯ!
ವಿಷ್ಣು ದೈವವೆಂಬ ವಿಚಾರಹೀನರನೇನೆಂಬೆನಯ್ಯ!
ಅಶ್ವಿನಿ ಭರಣಿ ಕೃತಿಕೆ ಮೊದಲಾದ ಇಪ್ಪತ್ತೇಳು ನಕ್ಷತ್ರಂಗಳೊಳಗೆ
ಮೂಲನಕ್ಷತ್ರಂಗಳೊಳಗೆ ಹುಟ್ಟಿದನಾಗಿ ಮೂಲನೆಂಬ ಹೆಸರಾಯಿತ್ತು.
ದೇವರ [೩]ಸೇವ್ಯ[೩] ಕಾರ್ಯಕ್ಕೆ ಪ್ರಾಪ್ತನೆಂದು ವೇದಂಗಳು ಬಿನ್ನೈಸಲು,
ಜ್ಯೋತಿ[೪]ಷ್ಯ[೪] ಜ್ಞಾನಶಾಸ್ತ್ರಂಗಳು ಹುಸಿಯಾದವೆಂದು,
ನಿಮ್ಮ ಹರಿಯ ಅಡವಿಯಲಿ ಬಿಸಾಡಲು, ಅಲ್ಲಿ ಆಳುತಿದ್ದ ಮಗನ
ಭೂದೇವರೆ ಸಲಹಿ, ಭೂಕಾಂತನೆಂಬ ಹೆಸರಕೊಟ್ಟು,
ಭೂಚಕ್ರ ತನ್ನ [೫]ಪ್ರತಿರೂಪ ತೋಳಲ್ಲಿ ಸೂಡಿಸಿ,[೫]
ಶಿವಧರ್ಮಾಗಮ ಪೂಜೆ ಭಕ್ತಿಯಲ್ಲಿ ಯುಕ್ತನ ಮಾಡಿದ ಬಳಿಕ,
ಮತ್ತೆ ನಮ್ಮ ದೇವರ ಶ್ರೀಚರಣದಲ್ಲಿರ್ದು ಒಳಗೆ ತೋಱಲು,
ದೇವರು ಪುರಾಣಂಗಳು ಕರೆದು ವಿಷ್ಣುವಿನ ಪಾಪಕ್ಷಯವ ನೋಡಿ ಎಂದರೆ,

೧–೧ ಒಡಲು (ಮೂ). ೨–೨ ಗ (ಮೂ). ೩–೩ ದೆ ಸೇವೆ (ಮೂ), ೪–೪ x(ಮೂ). ೫–೫ ಪತಿರೂಪ ತೊಳಲಿ ಸುಡಿಸಿ (ಮೂ).

ಆ ಪುರಾಣಂಗಳಿಂತೆಂದವು :
ಪಾಪಂ ತು ಮೂಲನಕ್ಷತ್ರಂ ಜನನೀವರಣಂ ಪುನಃ ।
ಪಾಪಂ ತು ಪರ್ವತಸ್ಥೂಲ ಶಿವೇ ಮ್ಯೆರಮತಃ ಪರಂ ।
ಶಿವದಾಸೋಹಭಾವೇನ ಪಾಪಕ್ಷಯಮವಾಪ್ನು ಯಾತ್ ॥
ಎಂದು ಪುರಣಂಗಳು ಹೇಳಲಾಗಿ,
ವಿಷ್ಣು ಕೇಳಿ, ಪುರಾಣದ ಕೈಯ ದೀಕ್ಷಿತನಾಗಿ
ಪುರಾಣಪುರುಷೋತ್ತಮನೆಂಬ ಹೆಸರು ಬಳಿಕಾಯಿತ್ತು,
ಮತ್ತೆ, ನಮ್ಮ ದೇವರ ಪಾದರಕ್ಷೆಯ ತಲೆಯಲ್ಲಿ ಹೊತ್ತುಕೊಂಡು,
ಭೂತಂಗಳಿಗಂಜಿ ಶಂಖಮಂ ಪಿಡಿದುಕೊಂಡು,
ದುರಿತಂಗಳಿಗಂಜಿ ನಾಮವನಿಟ್ಟು, ಪ್ರಳಯಂಗಳಿಗಂಜಿ ವೇಷಮಂ ತೊಟ್ಟು,
ರಾಕ್ಷಸರಿಗಂಜಿ ಚಕ್ರಮಂ ಪಿಡಿದು,
ಶಿವನ ದಾಸೋಹದ ದಾಸಿಯೆಂದು ಕಸಕಿಲಂ ಪಿಡಿದು, ಬಯಲನುಡುಗಿ
ಹೊತ್ತ ನೀರಲ್ಲಿ ಪುತ್ಥಳಿಯ ಸೌಖ್ಯಮಂ ಮಾಡಿ.
ಇಪ್ಪತ್ತೇಳು ಲಕ್ಷ ವರುಷ ಶಿವನ ಸೇವೆಯಂ ಮಾಡಿ,
ಮತ್ತೆ ಹಡದ ಗರುಡವಾಹನ, ಸತಿಲಕ್ಷ್ಮಿ, ವಾರ್ಧಿಜಯಮಂ ಪಡೆದು,
ದೇವರ ಎಡದ ಗೆದ್ದುಗೆ೧ಯ೧ನೋಲೈಸಿಪ್ಪವನ
ದೇವರೆಂದರೆ ನೀವೆಂದಂತೆ ೨[ಎಂಬರೆ]೨ ಕೇಳಿರಣ್ಣಾ!
ವಚನಶುದ್ಧಭಾವದಲ್ಲಿ ಭಕ್ತಿಯುಳ್ಳವರು ನೀವು
ಹೊತ್ತಿದ್ದ ವೇಷದಲ್ಲಿ ತಿಳಿದು ನೋಡಿ.
ತಂದೆ ತಾಯಿ ಇಂದ್ರಿಯದಲ್ಲಿ ಬಂದವರು ದೇವರೆ?
ಸಂದೇಹ ಭ್ರಮೆಯೊಳಗೆ ಸಿಕ್ಕಿದವರು ದೇವರೆ?
ಶುಕ್ಲಶೋಣಿತದೊಳಗೆ ಬೆಳೆದವರು ದೇವರೆ?
ಆ ತಂದೆ ತಾಯಿ ಹುಟ್ಟಿಸಿದವರಾರೆಂದು ಕೇಳಿರೆ :
ಹಿಂದೆ ಸಂದ ಯುಗಂಗಳು, ಶತಕೋಟಿ ಸಂಖ್ಯೆಯ ಮೇಲೆ
ಏಳುನೂಱೆಪ್ಪತ್ತು ಸಾವಿರ ಯುಗಗಳು,
ಇದಕ್ಕೆ ನವಕೋಟಿ ನಾರಾಯಣರಳಿದರು, ಶತಕೋಟಿ ಸಂಖ್ಯೆ ಬ್ರಹ್ಮರಳಿದರು,
ಉಳಿದವರ ಪ್ರಳಯವ ಹೊಗಳಲಿನ್ನಾರ ವಶ ?
ಇಂತಿಲ್ಲದವನು ಬಿಟ್ಟು ಉಳಿದಿಪ್ಪಾತನೊಬ್ಬನೆ,
ಆತಂಗೆ ನಮೋ ನಮೋ ಎಂಬೆ ಕೂಡಲ ಚೆನ್ನಸಂಗಮದೇವಾ. ॥ ೩೧ ॥[೪೯೧]

೧–೧ x ಮೂ, ೨–೨ ಎಂಬಿರೆ (ಮೂ),

೮೦

ನಿಮ ನಿಮಗೆಲ್ಲಾ ಬಲ್ಲೆವೆಂದೆಂಬಿರಿ.
ಹರಿ ಹತ್ತು ಭವಕ್ಕೆ ಬಂದಲ್ಲಿ, ಅಜನ ಶಿರವರಿದಲ್ಲಿ,
ಅಂದೆಲ್ಲಿಗೆ ಹೋದವೊ ನಿಮ್ಮ ವೇದಶಾಸ್ತ್ರಾಗಮ ಪುರಾಣ ಆಗಮಂಗಳೆಲ್ಲಾ.
ಚೆನ್ನಯ್ಯನ ಕೈಯ[೧]ಲ್ಲಿ[೧] ಹಾಗವನೆ ಕೊಟ್ಟು
ಕಂಕಣದ ಕೈಯ ಕಂಡು, ಧನ್ಯರಾಗಿರೆ ನೀವು.
ಮಾತಂಗಿಯ ಮಕ್ಕಳೆಂದು, ಗಗನದಲ್ಲಿ ಸ್ನಾನವನೆ ಮಾ[೨]ಡೆ[೨]
ಆಕಾಶದಲ್ಲಿ ಧೋತ್ರಂಗಳು ಹಾಜಿ ಹೋಗಲಾಗಿ,
ನಮ್ಮ ಶ್ವಪಚಯ್ಯಗಳ ಕೈಯಲ್ಲಿ ಒಕ್ಕುದಕೊಂಡು ಧನ್ಯನಾಗನೆ
ಸಾಮವೇದಿಗಳೆಂದು?
ನಿಮ್ಮ ನಾಲ್ಕು ವೇದವನೋದದೆ, ನಮ್ಮ ಭಕ್ತರ ಮನೆಯ ಕಾಳನು?
ಇದು ಕಾರಣ, ನಮ್ಮ ಕೂಡಲ ಚೆನ್ನಸಂಗನ ಶರಣರ ಮುಂದೆ
ಈ ಒಡ್ಡುಗಳ ಮಾತ ಪ್ರತಿ ಮಾಡಬೇಡ. ॥ ೩೨ ॥ [೪೯೨]

೮೧

ವೇದವನೋದಿ ಹೊನಲಲ್ಲಿ ಹೋದ ದ್ವಿಜರು
ಕೆಟ್ಟ ಕೇಡಿಂಗೆ ಕಡೆಯಿಲ್ಲ, ಅದು ಹೇಂಗೆಂದಡೆ :
ಹೇಮದಾಸಗೆ ಒಕ್ಕಲಿಗಂಗೆ ದತ್ತು ಪುತ್ರನಾಗೆಂದು ಹೇಳಿತ್ತೆ ವೇದವು?
ಕೊರಡಿನ ಮೇಲೆ ಕುಳಿತು ತುತ್ತು ಗದ್ಯಾಣವ ನುಂಗಿ,
ಸೀಮೆಯ ಹೊರವಂಡಿಸಿಕೊಳ್ಳೆಂದು ಹೇಳಿತ್ತೆ ವೇದ?
ಬಡಗಿ ಮಾಚಲದೇವಿಯ ಕುಲಜೆಯ ಮಾಡಿ[೩]ಹೆ[೩]ವೆಂದು
ಹೊನ್ನ ಕಪಿಲೆಯ ಕೊಂದು ನರಕಕ್ಕಿಳಿಯ ಹೇಳಿತ್ತೆ ವೇದ?
‘ಅಹಿಂಸಾ ಪರಮೋ ಧರ್ಮ’ವೆಂದೋದಿ ಅಸುರಭೋಜನಕ್ಕೆ ಅಂಗವಿಸಿ,
ಕರ್ಮವಂ ಮಾಡಿ, ಹೋತ ಕೊಂದು ತಿಂಬುದು ಪಾತಕವಲ್ಲವೆ?
‘ಪರಮೋ ಧರ್ಮ ಹಿರಣ್ಯಗರ್ಭ’ [೩]ಎ[೩]ಂದು ಹೊನ್ನಕಪಿಲೆಯಂ ಮಾಡಿ ಕಡಿದು
ಹಂಚಿಕೊಂಬುದು ಚಾಂಡಾಲವಲ್ಲವೆ ?
ಹೊಲೆಯನಂತೆ ಹುಲುವೇಣನ ಸುಟ್ಟು,
ಹೊರಸಿನ ಮೇಲೆ ಹತವಾದ ಕಳ್ಳಗ ಹತ್ತಿದ ಹಸುವಿನ ಉತ್ಕ್ರಾಂತಿಯ
ಕಾನನದಲ್ಲಿ ಕೂಳು ಭೋಜನವನುಂಡು, ಲೋಕೋಪಚಾರಕ್ಕೆ ಒಳಗಾಗಿ
ಪಾಪಕರ್ಮವ ಮಾಡಿ ಸಲ್ಲದೆ ಹೋದರು, ಶಿವನಲ್ಲಿಗೆ.

೧–೧ x (ಮೂ), ೨–೨ ಡಿ (ಮೂ), ೩–೩ x (ಮೂ).

ಇದು ಕಾರಣ, ಕೂಡಲ ಚೆನ್ನಸಂಗಮದೇವ
ಶಿವಭಕ್ತಂಗೊಲಿದ ಕಾರಣ
ಕಂಚಿಯ ಏಳುಕೇರಿಯ ಕೈಲಾಸಕ್ಕೊಯ್ದ. ॥ ೩೩ ॥ [೪೯೩]

೮೨

ಅಷ್ಟತನುಮೂರ್ತಿ ಲಿಂಗವೆಂಬ ಮಾತಿನ ಪಾತಕವ ಕೇಳಲಾಗದು:
ಪೃಥ್ವಿಯಂತೆ ಕಠಿಣವುಳ್ಳಾತನೆ?
ಅಪ್ಪುವಿನಂತೆ ಓಟ ಭರಿತವುಳ್ಳಾತನೆ?
ತೇಜದಂತೆ ತೃಣಕಾಷ್ಠವಿಲ್ಲದಿದ್ದರೆ ನಂದುವಾತನೆ?
ವಾಯುವಿನಂತೆ ಚಲನವುಳ್ಳಾತನೆ?
ಆಕಾಶದಂತೆ ಬಚ್ಚ ಬಱಿಯ ಬಯಲಾದಾತನೆ?
ಜೀವಾತ್ಮನಂತೆ ಜನನ ಮರಣವುಳ್ಳಾತನೆ?
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ನೀ ನಿನ್ನಂತೆ, ಇವರೆಲ್ಲರು ನೀನಿರಿಸಿದಂತೆ. ॥ ೩೪ ॥ [೪೯೪]

೮೩

ಸರ್ವವೂ ಶಿವನಿಂದ ಉದ್ಭವಿಸಿದವೆಂದರೆ ಉದ್ಭವಿಸುವವೆಲ್ಲವೂ ಶಿವನೆ?
ಸಕಲ ಬೀಜವ ಒಕ್ಕಲಿಗ ಬಿತ್ತುವನೆಂದರೆ ಆ ಬೆಳೆ ತಾನು ಒಕ್ಕಲಿಗನೆ?
ಮಡಕೆಯ ಕುಂಬಾಱ ಮಾಡುವನೆಂದರೆ ಆ ಮಡಕೆ ತಾನು ಕುಂಬಾಱನೆ?
ಕಬ್ಬುನವ ಕಮ್ಮಾರ ಮಾಡುವನೆಂದರೆ ಆ ಕಬ್ಬುನ ತಾ ಕಮ್ಮಾಱನೆ?
ಈ ಪರಿಯಲ್ಲಿ ಸಕಲಜಗತ್ತಿನ ಸಚರಾಚರವನು ಶಿವ ಮಾಡುವನೆಂದರೆ
ಆ ಸಚರಾಚರವು ಶಿವನೆ?
ಹಾಗಾದರೆ; ಅಷ್ಟದಶವರ್ಣಂಗಳೇಕಾದವು?
[೧]ಉತ್ತಮ[೧] ಮಧ್ಯಮ ಕನಿಷ್ಠಂಗಳೇಕಾದವು?
ಪುಣ್ಯಪಾಪ ಸ್ವರ್ಗನರಕಂಗಳೇಕಾದವು?
ಚೌರಾಸಿ ಲಕ್ಷ ಜೀವಕೋಟಿಗಳೇಕಾದವು?
ಭವಿಭಕ್ತರೆಂದೇಕಾದವು?
ಇದು ಕಾರಣ, ಸದಾಚಾರ ಸದ್ಭಕ್ತಿಯಲ್ಲಿಪ್ಪ,
ಅಂತಲ್ಲದೆ ಸರ್ವವೂ ಶಿವನೆಂದರೆ
ಅಘೋರ ನರಕ ಕೂಡಲ ಚೆನ್ನಸಂಗಯ್ಯಾ. ॥ ೩೫ ॥ [೪೯೫]

೧–೧ ಭವಿಭಕ್ತರೆಂದೇಕಾದವು? ಇದು ಕಾರಣ ಸದಾಚಾರ ಸದ್ಭಕ್ತಿ (ಮೂ).

ಇಂತು ಶಿವಲಿಂಗನಿಷ್ಠೆಯೊಳಿಪ್ಪ ಮಾಹೇಶ್ವರನ ಜಂಗಮಲಿಂಗ. ಈ ಸ್ಥಲದನುಭಾವದ ವಚನ :

[೧]ಮಾಹೇಶ್ವರನ ಜಂಗಮಲಿಂಗಸ್ಥಲ:[೧]

೮೪

ಕೃತಯುಗ ಹದಿನೇಳು ಲಕ್ಷವು ಇಪ್ಪತ್ತೆಂಟು ಸಾವಿರ ವರುಷದಲ್ಲಿ ಕೇತಾರದೇವರು ಮೂಲಸ್ಥಾನ,
ತ್ರೇತಾಯುಗ ಹನ್ನೆರಡು ಲಕ್ಷದ ಮೇಲೆ ತೊಂಬತ್ತಾಱು ಸಾವಿರ ವರುಷದಲ್ಲಿ
ಸೇತುಬಂಧ ರಾಮೇಶ್ವರದೇವರು ಮೂಲಸ್ಥಾನ,
ದ್ವಾಪರಯುಗ ಎಂಟು ಲಕ್ಷದ ಮೇಲೆ ಅಱುವತ್ತುನಾಲ್ಕು ಸಾವಿರ ವರುಷದಲ್ಲಿ
ಸೌರಾಷ್ಟ್ರ ಸೋಮಯ್ಯದೇವರು ಮೂಲಸ್ಥಾನ,
ಕಲಿಯುಗ ನಾಲ್ಕು ಲಕ್ಷವು ಮೂವತ್ತೆರಡು ಸಾವಿರ ವರುಷದಲ್ಲಿ
ಶ್ರೀ ಚೆನ್ನಮಲ್ಲಿಕಾರ್ಜುನದೇವರು ಮೂಲಸ್ಥಾನ.
ಇದು ಕಾರಣ, ಕೂಡಲ ಚೆನ್ನಸಂಗಯ್ಯ ಸಾಕ್ಷಿಯಾಗಿ
ಭಕ್ತರಿಗೆ ಜಂಗಮವೆ ಮೂಲಸ್ಥಾನ. ॥ ೩೬ ॥ [೫೦೯]

೮೫

ಎಂಟು ಲಕ್ಷದ ಮೇಲೆ ಐನೂರು ದೇವರಿಗೆ ಮಾಡಿದ ಬೋನವ
ಒಬ್ಬ ಜಂಗಮವಾರೋಗಣೆಯ ಮಾಡುವನಲ್ಲದೆ,
ಹದಿನಾಱು ಲಕ್ಷದ ಮೇಲೆ ಐನೂಱುದೇವರು ಕೂಡಿಕೊಂಡು
ಒಬ್ಬ ಜಂಗಮಕ್ಕೆ ಮಾಡಿದ ಬೋನವನಾರೋಗಿಸಲಱಿಯವು.
ಅಂತಪ್ಪ ದೇವರಿಗಿಂತಲೂ ಜಂಗಮವೆ ಘನ.
ಕೃತಯುಗದಲ್ಲಿ ಸುವರ್ಣದ ಲಿಂಗವಾದಲ್ಲಿ ನಿನ್ನ ಹೆಸರೇನು?
ತ್ರೇತಾಯುಗದಲ್ಲಿ ಬೆಳ್ಳಿಯ ಲಿಂಗವಾದಲ್ಲಿ ನಿನ್ನ ತಾಯಿ ತಂದೆ ಯಾರು?
ದ್ವಾಪರದಲ್ಲಿ ತಾಮ್ರದ ಲಿಂಗವಾದಲ್ಲಿ ಹದಿನೆಂಟು ಜಾತಿಯ
ಕೈಯ ಕಿಲುಬು ಹೋಯಿತ್ತು.
ಕಲಿಯುಗದಲ್ಲಿ ಕಲ್ಲ[೨]ದೇವರಾದರೆ ಇಕ್ಕಿದೋಗರವನುಣ್ಣದೇಕೊ?
ಹಿಂದೊಮ್ಮೆ ನಾಲ್ಕು ಯುಗದಲ್ಲಿ ಅಳಿದು ಹೋದುದನಱಿಯಾ?
ಇನ್ನೇಕೆ ದೇವತನಕ್ಕೆ ಬೆಱತೆಹೆ.

೧-೧ x (ಮೂ), ೨+ ಯ್ಯ (ಮೂ).

ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ ।
ಜಂಗಮಸ್ಯಾವಮಾನೇನ ಸ್ಥಾವರಂ ನಿಷ್ಫಲಂ ಭವೇತ್ ॥
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ.
ತಪ್ಪದೆ ನಾಲ್ಕು ಯುಗದಲ್ಲಿ
ಜಂಗಮವೆ ಪ್ರಾಣಲಿಂಗವಾದ ಕಾರಣ
ಸ್ಥಾವರವೆ ಜಂಗಮಪ್ರಸಾದಕ್ಕೆ ಯೋಗ್ಯವಾಯಿತ್ತು. ॥ ೩೭ ॥ [೫೧೦]

೮೬

ತನು ಮನ ಧನವು ತ್ರಿಸ್ಥಾನ ಸಂಗವಾಯಿತ್ತಾಗಿ
ಭಕ್ತಿ ಮದವೇಱಿತ್ತು.
ಸದ್ಭಕ್ತಿ ಸಂಭಾಷಣೆ ಕ್ರಿಯಾಕ್ರೀಯನಱಿದು
ತೂರ್ಯಾತೂರ್ಯಗೊಂಡಿತ್ತಾಗಿ
ಲಿಂಗದಲ್ಲಿ ಅಱಿ[೧][ವ][೧] ಜಂಗಮದಲ್ಲಿ ಮೆ[೨][ಱೆ][೨]ವ
ಕೂಡಲ ಚೆನ್ನಸಂಗಮದೇವ ತಾನು ತಾನಾಗಿ. ॥ ೩೮ ॥ [೫೧೧]

೮೭

ಪೂರ್ವಿಕ ಪೂಜಕ, ಅಪೂರ್ವಿಕ ಭಕ್ತ.
ಕರ್ಮಿ ಪೂಜಕ, ನಿಃಕರ್ಮಿ ಭಕ್ತ.
ಲಿಂಗ ಪೂಜಕ, ಜಂಗಮ ಭಕ್ತ.
ತನುಗುಣಪೂರ್ವಸೂತಕ ವಿರಹಿತ
ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ, ಆತನೆ ಅಚ್ಚ ಶರಣ. ॥ ೩೯ ॥ [೫೧೨]

೮೮

ಸುಖಶೀಲ ಲಿಂಗಧ್ಯಾನ,
ಸಮಶೀಲ ಜಂಗಮಪ್ರೇಮ,
ಮಹಾಶೀಲ ಅವರೆಂದಂತೆ ಎಂಬುದು,
ಈ ತ್ರಿವಿಧವನಱಿವಡೆ
ಕೂಡಲ ಚೆನ್ನಸಂಗಯ್ಯನೆಂಬೆ. ॥ ೪೦ ॥ [೫೧೩]

೧-೧ವು (ಮೂ), ೨-೨ ಱ (ಮೂ).

೮೯

ಎನ್ನ ಮನೆಯೆಂಬವಂಗೆ ಬ್ರಹ್ಮನಿಕ್ಕಿದ ಕೋಳವಾಯಿತ್ತು,
ಎನ್ನ ಸ್ತ್ರೀಯೆಂಬವಂಗೆ ವಿಷ್ಣುವಿಕ್ಕಿದ ಸಂಕಲೆ ಹೂಡಿತ್ತು,
ಎನ್ನ ಧನವೆಂಬವಂಗೆ ರುದ್ರನಿಕ್ಕಿದ ಆಸೆರೋಷದ ಜಿಂಜಿಜಿ ಹೂಡಿತ್ತು,
ಎನ್ನ ಕುಲವೆಂಬವಂಗೆ ಈಶ್ವರನಿಕ್ಕಿದ ಸೆಜೆಸಾಲೆ,
ಬಂದೀಕಾನದೊಳಗೆ ಬಿದ್ದ ನೋಡಾ.
ಇಂತು ಕೊರಳುದ್ದಕ್ಕೆ ಹೂಳಿಸಿಕೊಂಡು ಮುಗಿಲುದ್ದಕೆ ಹಾಜಿ
ನಾನು ಭಕ್ತ, ನಾನು ಮಾಹೇಶ್ವರನೆಂಬ ನುಡಿಗೆ ನಾಚರು ನೋಡಾ.
ಆ ಭಕ್ತನ ಮಠಕ್ಕೆ ಜಂಗಮ ನಿರಂತರ ಬರುತ್ತಿರಲು
ಬ್ರಹ್ಮನಿಕ್ಕಿದ ಕೋಳ ಕಡಿಯಿತ್ತು.
ಆ ಭಕ್ತನ ಸ್ತ್ರೀ ಜಂಗಮದಾಸೋಹವ ನಿರಂತರ ಮಾಡುತ್ತಿರಲು
ವಿಷ್ಣುವಿಕ್ಕಿದ ಸಂಕಲೆ ಕಡಿಯಿತ್ತು.
ಆ ಭಕ್ತನ ಧನ ಜಂಗಮಕ್ಕೆ ನಿರಂತರ ನಿರುಪಾಧಿಯಲಿ ಸಲ್ಲುತ್ತಿರಲು
ಆ ರುದ್ರನಿಕ್ಕಿದ ಆಸೆರೋಷದ ಜಿಂಜಿಜಿ ಕಡಿಯಿತ್ತು.
ಆ ಭಕ್ತನು ಜಾತಿಸೂತಕವಳಿದು ಶಿವಭಕ್ತರ ಕುಲವ ವಿಚಾರಿಸದೆ
ಶಿವಕುಲವೆಂದಜಿದು ನಿರಂತರ ಬೆರಸಿಕೊಂಡಿರುತ್ತಿರಲು
ಈಶ್ವರನಿಕ್ಕಿದ ಕಾಲದ ಸೆಜೆ ಸಾಲೆಯ ಬಂಧೀಕಾನದಿಂದ
ಹೊಜಹೊಂಟ ನೋಡಾ.
ಇಂತು ಇ[1]ದ್ದು ಇ[1]ಲ್ಲದ ಸಹಜರ ತೋಜಿ ಬದುಕಿಸಯ್ಯಾ
ಕೂಡಲ ಚೆನ್ನಸಂಗಮದೇವಾ. ॥ ೪೧ ॥[೫೧೪]

ಇಂತು ಜಂಗಮಲಿಂಗನಿಷ್ಠೆಯೊಳಿಪ್ಪ ಮಾಹೇಶ್ವರನ ಪ್ರಸಾದಲಿಂಗ. ಆ ಸ್ಥಲದ ಅನುಭಾವದ ವಚನ:

[2]ಮಾಹೇಶ್ವರನ ಪ್ರಸಾದಲಿಂಗಸ್ಥಲ:[2]

೯೦

ಗುರುದ್ರೋಹಿಯಾದವನ ಮುಖವ ನೋಡಲಾಗದು,
ಮತ್ತೆ ನೋಡಬಹುದು, ಏಕೆ? ಮುಂದೆ ಲಿಂಗವಿಪ್ಪುದಾಗಿ.
ಲಿಂಗದ್ರೋ[3]ಹಿಯಾ[3]ದವನ ಮುಖವ ನೋಡಲಾಗದು,

೧–೧ ದ್ದಿ (ಮೂ), ೨–೨ x (ಮೂ), ೩–೩ ಹವಾ (ಮೂ).

ಮತ್ತೆ ನೋಡಬಹುದು, ಏಕೆ? ಮುಂದೆ ಜಂಗಮವಿಪ್ಪ ಕಾರಣ.
ಜಂಗಮದ್ರೋ[೧]ಹಿಯಾ[೧]ದವನ ಮುಖವ ನೋಡಲಾಗದು,
ಅದೇನು ಕಾರಣ? ಕೂಡಲ ಚೆನ್ನಸಂಗಯ್ಯನ ಪ್ರಸಾದವಿರಹಿತವಾಗಿ
ಪರವಿಲ್ಲದ ಕಾರಣ. ॥ ೪೨ ॥[೫೨೭]

೯೧

ಕೃತಯುಗ, ತ್ರೇತಾಯುಗ, ದ್ವಾಪರ[೨]ಯುಗ,[೨] ಕಲಿಯುಗವೆಂಬ–
ಈ ನಾಲ್ಕು ಯುಗಂಗಳಿಗೆ ಸತ್ಯಲೋಕ, ತಪೋಲೊಕ.
ಜನರ್ಲೋಕ, ಸ್ವರ್ಗಲೋಕಕ್ಕೆ
ಅತಿಶಯವೆನಿಪ ಕಲ್ಯಾಣಮಂ ಮಾಡಿ,
ಮಹಾಘನತರವಪ್ಪ ಭಕ್ತಿಯಂ ಪುಟ್ಟಿಸಿದ,
ಬಸವರಾಜದೇವರು ಮೊದಲಾದ ಮಹಾಗಣಂಗಳ
ದಿವ್ಯಶ್ರೀಪಾದಪದ್ಮಾರಾಧಕನಾಗಿ,
ಆನುಬಲ್ಲೆನೆಂಬ ಗರ್ವವಿಲ್ಲದೆ
ನೀವು ಕೊಟ್ಟ ಅನುಗ್ರಹದ ಬಿನ್ನಪವನವಧರಿಸುವುದು.
ಭಕ್ತಿಸೂಕ್ಷ್ಮ, ಭಕ್ತಿಯ ಕಟ್ಟಳೆ, ಭಕ್ತಿಕ್ರಮವ,
ಶರಣಸತಿ ಲಿಂಗಪತಿಯಾದ ಸಂಬಂಧವ, ಪಾದೋದಕದ ನಿರ್ಣಯವ
ಇಂತೀ [೩]ಕ್ರಿಯಾ[೩]ದ್ವೈತಮಂ ಆನು ಬಲ್ಲಷ್ಟು [೪]ಬಾಲತೊ[೪]ದಲ್ನುಡಿಯಿಂದ
ವಿಸ್ತರಿಸಿ ಪೇಳ್ವೆ, ಮಹಾಮಹಿಮರು ಕೇಳಿರಯ್ಯಾ :
ಶೈವ ಸೈವೆಱಗಾದ, ಪಾಶುಪತಿ ಪಥವಱಿಯ,
ಕಾಳಾಮುಖಿ [೫]ಕಂ[೫]ಗೆಟ್ಟ, ಮಹಾವ್ರತಿ ಮದವೇಱಿದ,
ಸನ್ಯಾಸಿ ಪಾಷಂಡಿಯಾದ, ಕಾಪಾಲಿ ಮರುಳಾಗಿ ತಿರುಗಿದ.
–ಈ ಆರು ಭಕ್ತಸ್ಥಲಕ್ಕೆ ಸಲ್ಲವು ಕೇಳಿರಣ್ಣಾ.
ಏಳೇಳು ಭವದಲ್ಲಿ ಭವಿಯಾಗಿ ಬಂದು, ಶ್ರೀಗುರುಕಟಾಕ್ಷ ನೀರಿಕ್ಷಣೆಯಿಂದ
ಪ್ರಾಣದ ಮೇಲೆ ಲಿಂಗಪ್ರತಿಷ್ಠೆಯಂ ಮಾಡಿಕೊಂಡು,
ಆಱರಿಂದ ಮೀಱಿದ ಸ್ಥಲವಿಟ್ಟು, ವೀರಮಾಹೇಶ್ವರತ್ವಮಂ ಪಡೆದು,
ಮರಳಿ ತನ್ನ ಕುಲವನಱಿಸಿದರೆ
ಒಡೆದ ಮಡಕೆಯ ಓಡಿನಂತಹನು ಕೇಳಿರಣ್ಣಾ !
ತನ್ನ ಕುಲವೆಂದು ಪ್ರಾಣಸ್ನೇಹ ಮಾಯಾಮೋಹ ಕಿಂಚಿತ್ ಮಾತ್ರ ಬೆರಸಿದರೆ,

೧–೧ ಹವಾ (ಮೂ), ೨–೨ x (ಮೂ), ೩–೩ ತ್ರಿವಿಧಾ (ಮೂ), ೪–೪ ಬಲ್ತೊ (ಮೂ), ೫–೫ ಖಂ (ಮೂ).

ಅವ ಪಂಚಮಹಾಪಾತಕಿ, ರೌರವ ನಾರಕಿ.
ಅವನ ಭಕ್ತನೆಂದು ನೋಡಿದಡೆ, ನುಡಿಸಿದಡೆ, ಸಪಙ್ತಿಯಲ್ಲಿ ಕುಳ್ಳಿತಿದ್ದಡೆ,
ಸಂಭಾಷಣೆಯಂ ಮಾಡಿದಡೆ, ಕೈವೊಡ್ಡಿ ಬೇಡಿದಡೆ,
ಅವಂಗೆ ಕುಂಭೀಪಾತಕ ನಾಯಕ ನರಕ ಕೇಳಿರಣ್ಣಾ !
ಶುದ್ಧ ಸಿದ್ಧ ಪ್ರಸಿದ್ಧದ ಭೇದಾಭೇದ ಸೂಕ್ಷ್ಮಂ ಪೇಳ್ವೆ :
ಭಕ್ತ ಲಿಂಗಾರ್ಚನೆಯಂ ಮಾಡುತ್ತಿರಲು, ಮಠದಲ್ಲಿ ಪದಾರ್ಥ ಹೆಚ್ಚಿರಲಾಗಿ,
ಆ ಸಮಯದಲ್ಲಿ ಒಡೆಯರು ಬಿಜಯಂಗೈಯಲು,
ತಾ ಕೊಂಡುದೆ ಪ್ರಸಾದ, ನಿಂದುದೆ ಪದಾರ್ಥವಾಗಿ ನೀಡಬಹುದಯ್ಯಾ.
ಬಹುದು ಬಾರದೆಂಬ ಸಂದೇಹಮಂ ತಾಳ್ದರೆ,
ಲಿಂಗಕ್ಕೆ ದೂರ, ಜಂಗಮಕ್ಕೆ ಸಲ್ಲನಯ್ಯಾ.
ಅದು ಶುದ್ಧಮುಖದಿಂದ ಬಂದುದಾಗಿ ಪ್ರಸಿದ್ಧಮುಖಕ್ಕೆ ನೀಡಬಹುದು.
ಸಂದೇಹಮಂ ತಾಳಲಾಗದು,
ಭಕ್ತಂಗೆ ಭವಿ ನೇಮಸ್ತರು ಸಲಲಾಗದು.
ಭವಿ ಶ್ವಪಚ, ನೇಮಸ್ತ ಸಮ್ಮಗಾಱ–
ಇವರಿಬ್ಬರು ಸತಿ ಸುತ ಮಿತ್ರರೆಂದು
ಮಠಮಂ ಹೊಗಿಸಿದಡೆ, ಅನ್ನಮನಿಕ್ಕಿದಡೆ,
ಸುರೆಯ ಮಡಕೆಯಂ ತೊಳೆದು ಘೃತಮಮಂ ತುಂಬಿ ಶ್ವಾನವಂ ಕರೆದು ತಿನಿಸಿ.
ಮಿಕ್ಕಿದನು ತಾನು ಭುಂಜಿಸುವಂತೆ ಕೇಳಿರಣ್ಣಾ!
ಭಕ್ತ ಲಿಂಗಾರ್ಚನೆಯ ಮಾಡಿದ ಪವಿತ್ರ ಭಾಜನಮಂ
ಶ್ವಾನ ಸೂಕರ ಕುಕ್ಕುಟ ಮಾರ್ಜಾಲಂಗಳು ಮುಟ್ಟಿದಡೆ,
ಅವಱ ಕೂಡೆ ಸಹಭೋಜನವಂ ಮಾಡಿದಂತೆ.
ಗುರುಲಿಂಗಜಂಗಮಕ್ಕೆ ಅರ್ಪಿತವ ಮಾಡಿ, ಒಕ್ಕುಮಿಕ್ಕ ಪ್ರಸಾದವ ಭೋಗಿಸುವಲ್ಲಿ
ಪದಾರ್ಥವೆಂದು ಭಾವಿಸಿದರೆ ಪ್ರಸಾದದ್ರೋಹ.
ಜಂಗಮದಲ್ಲಿ ಅನೃತ, ಅಸ್ಥಿರವಾಕ್ಯ, ಪಙ್ತಿಭೇದ, ಉದಾಸೀನ, ನಿರ್ದಯೆ
ಇಷ್ಟು ಜಂಗಮದ್ರೋಹ.
ಲಿಂಗದಲ್ಲಿ ತ್ರಿಕಾಲಪೂಜೆ ಪ್ರೀತಿ ಪ್ರೇಮ ಸ್ನೇಹ ಮೋಹ–
ಇಂತೀ ಐದು ಇಲ್ಲದಿರುಹ, ಲಿಂಗದ್ರೋಹ.
ಗುರುವಿನಲ್ಲಿ ಅಹಂಕಾರ ಭಯವಿಲ್ಲದಿರುಹ, ಸಪಙ್ತಿಯಲ್ಲಿ ಕುಳ್ಳಿರುಹ,
ಸಂಭಾಷಣೆಯಂ ಮಾಡುಹ, ಕೈವೊಡ್ಡಿ ಬೇಡುಹ–ಇಷ್ಟು ಗುರುದ್ರೋಹ.
ಇದು ಕಾರಣ ಗುರುಲಿಂಗಜಂಗಮಕ್ಕೆ

ತನುಮನಧನವ ಸಮರ್ಪಿಸಿ, ಏಕಲಿಂಗ ನಿಷ್ಠಾಪರನಾಗಿ,
ಭಕ್ತಕಾಯ ಮಮಕಾಯವೆಂಬ ಶಬ್ದಕ್ಕೆ ಸಂದು, ಪ್ರಸಾದವೆಂದು ಕೊಂಡು,
ಎಂಜಲೆಂದು ಕೈಯ ತೊಳೆದರೆ,
ಅಘೋರ ನರಕ ತಪ್ಪದು ಕೂಡಲ ಚೆನ್ನಸಂಗಮದೇವಯ್ಯಾ. ॥ ೪೩ ॥ [೫೨೮]

೬೨

[1]ಅವಸರ. ಆರೋಗಣೆ, ಆಪ್ಯಾಯನ[1]ದಲ್ಲಿ-
ತ್ರಿವಿಧವು ಲಿಂಗಮುಖದಲ್ಲಿ ಅರ್ಪಿತವಾದರೆ
ಆತನ ಪ್ರಸಾದಿಯೆಂಬೆನು.
ಅವಸರ, ಅನವಸರ, ಅಂಗದಿಚ್ಛೆ
ಲಿಂಗಮುಖದಲ್ಲಿ ಅರ್ಪಿತವಿಲ್ಲಾಗಿ
ಆತನನೆಂತು ಪ್ರಸಾದಿಯೆಂಬೆನು?
ಅವಸರ ಅನವಸರವಜಿತು ಭೇದಿಸಬಲ್ಲರೆ
ಆತನೆ ಪ್ರಸಾದಿಯೆಂಬೆನು.
"ಲಿಂಗಸ್ಯಾವಸರೇ ಯಸ್ತು ಅರ್ಚ್ಯಂ ದದ್ಯಾತ್ ಸುಖಂ ಭವೇತ್"
ಎಂದುದಾಗಿ ಕೂಡಲ ಚೆನ್ನಸಂಗಯ್ಯಾ,
ನಿಮ್ಮ ಅವಸರವಜಿತು
ಅರ್ಪಿಸುವ ಅರ್ಪಣೆ ಸದ್ಭಾವಿಗಲ್ಲದಿಲ್ಲ. ॥ ೪೪ ॥ [೫೨೯]

೬೩

ಭೃತ್ಯಾಚಾರಿಗಲ್ಲದೆ ಭಕ್ತ್ಯಾಚಾರವಳವಡದು,
ವೇದಪುರಾಣಶಾಸ್ತ್ರ ಆಗಮಪುರಾಣಂಗಳನಜಿದೆ
ಸಂಬಂಧಿಗಳಿಗಲ್ಲೆ ಆಚಾರವಳವಡದು. ಅದೇವು ಕಾರಣ?
ಅಜಿದಱ್ದು ಭವಿಪಾಕವೆಂದು ಕಳೆದ ಬಳಿಕ
ಜಂಗಮಕ್ಕೆ ನೀಡಿದರೆ ಅದೇ ಪಾತಕ.
ಅದೆಂತೆಂದರೆ, ತನ್ನ ಲಿಂಗಕ್ಕೆ ಸಲ್ಲದಾಗಿ ಜಂಗಮಕ್ಕೆ ಸಲ್ಲದು,
ಲಿಂಗಭೋಗೋಪಭೋಗೀಯೋ ಭೋಗೇ ಜಂಗಮವರ್ಜಿತಃ ।
ಲಿಂಗಹೀನಸ್ಸ ಭೋಕ್ತಾ ತು ಶ್ವಾನಗರ್ಭೇಷು ಜಾಯತೇ ॥
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಇಂತಪ್ಪ ದುರಾಚಾರಿಗಳನೆನಗೆ ತೋಱದಿರಯ್ಯಾ. ॥ ೪೫ ॥ [೫೩೦]

೧-೧ ಅವಸರದಾರೋಗಣೆ ಆಪ್ಯಾಯನದಲ್ಲಿ (ಮೂ).

೯೪

ತನ್ನ ಲಿಂಗಕ್ಕೆ ಬಾರದ ರುಚಿಯ,
ಜಂಗಮಕ್ಕೆ ಸಲಿಸಿ ಕೈಯ ನೀಡಿ ಪ್ರಸಾದವನಿಕ್ಕೆಂಬಿರಿ,
ಅದು ಪ್ರಸಾದವಲ್ಲ, ಸಿಂಗಿಕಾಳಕೂಟ ವಿಷವು.
ಕೇಳಿರಣ್ಣಾ, ಆ ಪ್ರಸಾ[೧]ದ[೧] ಪದವೆಂಬಿರಿ, ಆ ಪ್ರಸಾದ ಕಿಲ್ಬಿಷವೆಂಬೆ,
ಕೂಡಲ ಚೆನ್ನಸಂಗಮದೇವಾ. ॥ ೪೬ ॥ [೫೩೧]

೯೫

ತನ್ನ ಲಿಂಗಕ್ಕೆ ಕೊಡಬಾರದ ಠಾವಿನಲ್ಲಿ ಪ್ರಸಾದಿಸಿಕೊಂಡು,
ತುಡುಗುಣಿ ನಾಯಂತೆ ತಿಂಬವರನೇನೆಂಬೆನಯ್ಯ!
ಅದು ತನ್ನ ಒಡಲು ಹೊರವುದಲ್ಲದೆ ಹಿಡಿದ ಕುಳಕ್ಕೆ ಸಲ್ಲದು.
'ದ್ರವ್ಯಂ ಜಾತು ಶುಭಂ ಭವೇತ್' ಎಂದುದಾಗಿ,
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಆಯತ ಬೀಸಱಿವೋದ ಬ್ರತಗೇಡಿಗಳನೇನೆಂಬೆನಯ್ಯಾ. ॥ ೪೭ ॥ [೫೩೨]

೯೬

ತನ್ನ ಲಿಂಗದಲ್ಲಿ ಪದಾರ್ಥದ ಪೂರ್ವಾಶ್ರಯ ಹೋಗದೆಂದು
ಅನುಸರಿಸಿ ಜಂಗಮದ ಒಕ್ಕುದ [೨]ಮಿ[೨]ಕ್ಕುದ ಕೊಂಬೆನೆಂಬವನೊಬ್ಬ ಠಕ್ಕಭವಿ,
ಆ ಚರಲಿಂಗ ಜಂಗಮ ಹೋದ ಬಳಿಕ್ಕ,
ತನ್ನ ಸ್ವಯಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಮಂ ಮಾಡಿ,
ಆ ಲಿಂಗಪ್ರಸಾದವಲ್ಲದೆ ಒಲ್ಲೆನೆಂಬವನೊಬ್ಬ ಠಕ್ಕಭವಿ.
ಅವರಿಗೆ ಲಿಂಗವಿಲ್ಲ, ಲಿಂಗಕ್ಕೆ ತಾನಿಲ್ಲ, ಅವ ಆಚಾರಭ್ರಷ್ಟ.
ಅಂಥವರ ಕಂಡರೆ, ಇಱಿದಿಱಿದು ಸುಡವನಲ್ಲದೆ,
ಮೆಚ್ಚುವನಲ್ಲ ಕೂಡಲ ಚೆನ್ನಸಂಗಮದೇವ. ॥ ೪೮ ॥ [೫೩೩]

೯೭

ಉಭಯಲಿಂಗಪ್ರಸಾದದುದಯವ ಲಿಂಗಪ್ರಸಾದಿಗಳ [೩]ಬ[೩]ಲ್ಲರು,
ನಾನೆತ್ತ ಬಲ್ಲೆನಯ್ಯಾ ದೇವಾ!

೧–೧ ಥ (ಮೂ), ೨–೨ ಒ (ಮೂ), ೩–೩ x (ಮೂ).

ಕ್ರೀಯ ಮೀಱಿದ ಸಂಬಂಧವ,
ವಿಧಿನಿಷೇಧ ಕ್ರೀ[1]ಗೆ[1] ಹೊಱಗಾದುದನು,
ಶ್ರುತಿ ಸ್ಮೃತಿ ಪ್ರಮಾಣಿನೊಳಗಲ್ಲ, ಕೂಡಲ ಚೆನ್ನಸಂಗನ ಪ್ರಸಾದ. ॥ ೪೯ ॥

ಇಂತಪ್ಪ ಪ್ರಸಾದಲಿಂಗನೈಷ್ಠಿಕವಾದ ಮಾಹೇಶ್ವರನ ಮಹಾಲಿಂಗ. ಆ ಸ್ಥಲದನುಭಾವದ ವಚನ:

[2]ಮಾಹೇಶ್ವರನ ಮಹಾಲಿಂಗಸ್ಥಲ:[2]

೯೮
ಜಗದ ಕರ್ತನು ಜಗದ ಸ್ಥಿತಿಗತಿಯನಾಡಿಸುವ ಪರಿಯನು
ಆವಂಗೆಯೂ ಅಱಿಯಲುಬಾರದು.
ಅಕಟಕಟಾ! ದೇವ ದಾನವ ಮಾನವರೆಲ್ಲರೂ
ಅಹಂ ಎಂದು ಅಹಂಕಾರದಲ್ಲಿ ಕೆಟ್ಟರಲ್ಲಾ!
ಆ ಮಹಾಕರ್ತನು ತನ್ನ ಶಕ್ತಿಯ ವಿನೋದಕ್ಕೆ ರಚಿಸಿದ ರಚನೆ :
ಮೂವರು ಪ್ರಧಾನರು, ಒಂಬತ್ತು ಪ್ರಜಾಪಸಾಯತರು,
ಹದಿನಾಲ್ಕು ನಿಯೋಗಿಗಳು, ಇಪ್ಪತ್ತೇಳು ಅನುಚರರು,
ಅಷ್ಟತನುಗಳಿಂದಾದ ಜಗದ ಸ್ಥಿತಿಯ ನಡಸುವರು.
ಆ ಮಹಾ[3]ಕರ್ತನು ಕಟ್ಟಿದ ಕಟ್ಟಳೆಯಲ್ಲೂ ಆಯುಷ್ಯಭಾಷೆಯ
ನಿಮಿಷ ಮಾತ್ರವ ಹೆಚ್ಚಿಸಬಾರದು, ಕುಂದಿಸಬಾರದು ನೋಡಾ,
ಇದಾವಂಗೆಯೂ ಅಱಿಯಬಾರದು,
ಇದ ಬಲ್ಲರೆ ಶರಣರು ಬಲ್ಲರು, ಕೂಡಲ ಚೆನ್ನಸಂಗಮದೇವಾ. ॥ ೫೦ ॥ [೫೪೭]

೯೯
ಭವಿ ಮಾಡಲಿಕೆ ಪೃಥ್ವಿಯಾಯಿತ್ತು,
ಭವಿ ಮಾಡಲಿಕೆ ಅಪ್ಪುವಾಯಿತ್ತು,
ಭವಿ ಮಾಡಲಿಕೆ ತೇಜವಾಯಿತ್ತು,
ಭವಿ ಮಾಡಲಿಕೆ ವಾಯುವಾಯಿತ್ತು,
ಭವಿ ಮಾಡಲಿಕೆ ಆಕಾಶವಾಯಿತ್ತು,
ಭವಿ ಮಾಡಲಿಕೆ ಚಂದ್ರಸೂರ್ಯರಾದರು,
ಭವಿ ಮಾಡಲಿಕೆ ಬ್ರಹ್ಮ ವಿಷ್ಣು ರುದ್ರರಾದರು.

೧-೧ ಯ (ಮೂ), ೨-೨ x (ಮೂ), ೩ + ಶಕ್ತಿ (ಮೂ).

ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಭವಿಯಿಂದಾಯಿತ್ತು ಸಕಲಜಗವೆಲ್ಲ. ॥ ೫೧ ॥ [೫೪೮]

೧೦೦
ಲೋಕವನು ಹೊದ್ದ, ಲೌಕಿಕವನು ಹೊದ್ದ,
ಏಕೋಗ್ರಾಹಿ ಶರಣ ಲಿಂಗವ ಪೂಜಿಸಿ ಅನ್ಯವನಱಿಯ.
ಅಚ್ಚ ಲಿಂಗೈಕ್ಯ, ಕೂಡಲ ಚೆನ್ನಸಂಗಾ ನಿಮ್ಮ ಶರಣ. ॥ ೫೨ ॥ [೫೪೯]

೧೦೧
ಅಂಗದಿಂದ ಲಿಂಗಸುಖ, ಲಿಂಗದಿಂದ ಅಂಗಸುಖ,
ಅಂಗ ಲಿಂಗ ಸುಖದಿಂದ ಪರಮಸುಖ ನೋಡಯ್ಯಾ,
ಅಂಗ ಲಿಂಗ ಸಂಗದ ಸುಖವನು
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯನೆ ಬಲ್ಲ. ॥ ೫೩ ॥ [೫೫೦]

೧೦೨
ಲಿಂಗಮುಖವಱಿದಂಗೆ ಅಂಗವೆಂಬುದಿಲ್ಲ,
ಜಂಗಮುಖವಱಿದಂಗೆ ಸಂಸಾರವೆಂಬುದಿಲ್ಲ,
ಪ್ರಸಾದಮುಖವಱಿದಂಗೆ ಇಹಪರವೆಂಬುದಿಲ್ಲ,
ಈ ತ್ರಿವಿಧ ಒಂ¹ದೆಂ¹ದಱಿದಂಗೆ ಮುಂದೇನೂ ಇಲ್ಲ.
ಈ ತ್ರಿವಿಧದ ನೆಲೆಯ ಶ್ರುತಿ ಸ್ಮೃತಿಗಳಱಿಯವು,
ಕೂಡಲ ಚೆನ್ನಸಂಗಾ ನಿಮ್ಮ ಶರಣ ಬಲ್ಲ. ॥ ೫೪ ॥ [೭೧೪]

೧೦೩
ಬ್ರಹ್ಮಾಂಡಛತ್ರದಂಡಃ ಶತಧೃತಿಭವನಾಂಭೋರುಹೋ ನಾಲದಂಡಃ ।
ಕ್ಷೋಣೀನೌ ಕೂಪದಂಡಃ ಕ್ಷರದಮರ ಸರಿತ್ಪಟ್ಟಿಕಾಕೇತುದಂಡಃ ॥
ಜ್ಯೋತಿಶ್ಚಕ್ರಾಕ್ಷದಂಡಸ್ತ್ರಿಭುವನ ವಿಜಯಸ್ತಂಭದಂಡೋಽಂಘ್ರಿದಂಡಃ ।
ಶ್ರೇಯಸ್ತ್ರೈವಿಕ್ರಮಸ್ತೇ ವಿದಧತು ವಿಬುಧದ್ವೇಷಿಣಾಂ ಕಾಲದಂಡಃ ॥
ಧರೆಗೆ ತೊಂಬತ್ತೆಂಟು ಸಾವಿರಯೋಜನದುದ್ದದಲ್ಲು

೧-೧ ದೊಂ (ಮೂ).

ಸಿಡಿಲು ಮಿಂಚು ಮುಗಿಲುಗಳಿಹವು.
ಅದರಿಂದ ಮೇಲೆ ಒಂದು ಲಕ್ಷಯೋಜನ ಉದ್ದದಲ್ಲು
ಬ್ರಹಸ್ಪತಿ ಇಹನು.
ಆ ಬ್ರಹಸ್ಪತಿಯಿಂದ ಮೇಲೆ ಮೂವತ್ತೆರಡು ಲಕ್ಷಯೋಜನ ಉದ್ದದಲ್ಲು
ಶುಕ್ರನಿಹನು.
ಆ ಶುಕ್ರನಿಂದ ಮೇಲೆ ಅಱುವತ್ತುನಾಲ್ಕು ಸಾವಿರ ಯೋಜನ ಉದ್ದದಲ್ಲು
ಶನಿಯಿಹನು.
ಆ ಶನಿಯಿಂದಂ ಮೇಲೆ ಒಂದು ಕೋಟಿಯು ಇಪ್ಪತ್ತೆಂಟು ಲಕ್ಷ ಯೋಜನ
ಉದ್ದದಲ್ಲು ಆದಿತ್ಯನಿಹನು.
ಆ ಆದಿತ್ಯನಿಂದ ಮೇಲೆ ಎರಡುಕೋಟಿಯುಂ ಐವತ್ತುಸಾವಿರ ಲಕ್ಷ
ಯೋಜನ ಉದ್ದದಲ್ಲು ರಾಹುಕೇತುಗಳು ಪ್ರವರ್ತಿಸಿಕೊಂಡಿಹವು.
ಅಲ್ಲಿಂದಂ ಮೇಲೆ ಐದು ಕೋಟಿಯುಂ ಹನ್ನೆರಡು ಲಕ್ಷಯೋಜನ
ಉದ್ದದಲ್ಲು ನಕ್ಷತ್ರವಿಹವು.
ಆ ನಕ್ಷತ್ರಂಗಳಿಂದ ಮೇಲೆ ಹತ್ತುಕೋಟಿಯು ಇಪ್ಪತ್ತು ನಾಲ್ಕು ಯೋಜನ
ಉದ್ದದಲ್ಲು ಸಕಲ ಮಹಾಋುಷಿಗಳಿಹರು.
ಆ ಋುಷಿಗಳಿಂದಂ ಮೇಲೆ ಇಪ್ಪತ್ತುಕೋಟಿಯುಂ ನಾಲ್ವತ್ತೆಂಟು ಲಕ್ಷ
ಯೋಜನ ಉದ್ದದಲ್ಲು ತ್ರಿವಿಧ ದೇವತೆಗಳಿಹರು.
ಆ ತ್ರಿವಿಧದೇವತೆಗಳಿಂದಂ ಮೇಲೆ ನಾಲ್ವತ್ತು ಕೋಟಿಯುಂ
ತೊಂಭತ್ತಾಱು ಲಕ್ಷ ಯೋಜನ ಉದ್ದದಲ್ಲು ದೇವರ್ಕಳಿಹರು.
ಆ ದೇವರ್ಕ್ಕಳಿಂದಂ ಮೇಲೆ ಎಂಬತ್ತೊಂದು ಕೋಟಿಯುಂ
ತೊಂಬತ್ತೆರಡು ಲಕ್ಷ ಯೋಜನೆ ಉದ್ದದಲ್ಲು ದ್ವಾದಶಾದಿತ್ಯರಿಹರು.
ಆ ದ್ವಾದಶಾದಿತ್ಯರಿಂದಂ ಮೇಲೆ ನೂಱಱುವತ್ತುಮೂಱು ಕೋಟಿಯುಂ
ಎಂಬತ್ತುನಾಲ್ಕು ಲಕ್ಷ ಯೋಜನ ಉದ್ದದಲ್ಲು ಮಹಾಸೇನರಿಹರು.
ಆ ಮಹಾಸೇನರಿಂದಂ ಮೇಲೆ ಮುನ್ನೂಱಿಪ್ಪತ್ತೇಳು ಕೋಟಿಯುಂ
ಅಱುವತ್ತೆಂಟು ಲಕ್ಷಯೋಜನ ಉದ್ದದಲ್ಲು
ಕೃತರೆಂಬ ಮಹಾಮುನಿಗಳಿಹರು.
ಇಂತು ಧರೆಯಿಂದಂ ಆಕಾಶ ಉಭಯಂ ಕೂಡಲು,
ಆಱುನೂಱೈವತ್ತೈದು ಕೋಟಿಯುಂ ಐದುಲಕ್ಷವು ತೊಂಬತ್ತೆಂಟು ಸಾವಿರ
ಯೋಜನ ಉದ್ದದಲ್ಲೂ ಒಂದು ಮಹಾಲೋಕವಿಹುದು.
ಆ ಲೋಕದಿಂದ ಹದಿನಾಲ್ಕು ಲೋಕವುಂಟು. ಅವು ಎಲ್ಲಿಹವೆಂದರೆ;
ಪಾತಾಳಲೋಕ ದೇವರ ಕಟಿಯಲ್ಲಿಹುದು,
ರಸಾತಳಲೋಕ ದೇವರ ಗುಹ್ಯದಲ್ಲಿಹುದು,

ತಳಾತಳಲೋಕವು [೧]ಊರುವಿ[೧]ನಲ್ಲಿಹುದು,
ಸುತಳಲೋಕ ಜಾನುವಿನಲ್ಲಿಹುದು,
ನಿತಳಲೋಕ ಜಂಘೆಯಲ್ಲಿಹುದು,
ವಿತಳಲೋಕ ಪಾದೋರ್ಧ್ವದಲ್ಲಿಹುದು,
ಅತಳಲೋಕ ಪಾದತಳದಲ್ಲಿಹುದು.
ಅಲ್ಲಿಂದತ್ತ ಕೆಳಗುಳ್ಳ ಲೋಕವನಾತನೆ ಬಲ್ಲ!
ಭೂಲೋಕ ನಾಭಿಯಲ್ಲಿಹುದು,
ಭುವರ್ಲೋಕ ಹೃದಯದಲ್ಲಿಹುದು,
ಸುವರ್ಲೋಕ ಉರಮಧ್ಯದಲ್ಲಿಹುದು,
ಮಹರ್ಲೋಕ ಕಂಠದಲ್ಲಿಹುದು,
ಜನರ್ಲೋಕ ತಾಲವ್ಯದಲ್ಲಿಹುದು,
ತಪರ್ಲೋಕ ಲಲಾಟದಲ್ಲಿಹುದು,
ಸತ್ಯರ್ಲೋಕ ಬ್ರಹ್ಮರಂಧ್ರದಲ್ಲಿಹುದು,
ಅಲ್ಲಿಂದತ್ತ ಮೇಲುಳ್ಳ ಲೋಕವನಾತನೆ ಬಲ್ಲ!
ಇಂತೀ ಈರೇಳು ಲೋಕವು ತಾನೆಯಾಗಿಪ್ಪ ಮಹಾಲಿಂಗವನ್ನು
ಅಡಗಿ[೨]ಸಿಹೆ[೨]ನೆಂಬ ಅತುಳ ಬಲ್ಲಿದರು ಕೆಲಬರುಂಟೆ?
ಅಡಗುವನು ಮತ್ತೊಂದು ಪರಿಯಲ್ಲಿ, ಅದು ಹೇಂಗೆ?
ಅಡರಿ ಹಿಡಿಯಲುಬಹುದು ಭಕ್ತಿಯೆಂಬ ಭಾವದಲ್ಲಿ.
ಸತ್ಯಸದಾಚಾರವನಜೆದು ಪಾಪಕ್ಕೆ ನಿಲ್ಲದೆ, ಕೋಪಕ್ಕೆ ಸಲ್ಲದೆ,
ಮಾಯವನುಣ್ಣದೆ, ಮನದಲ್ಲಿ ಅಜ್ಞಾನಮಂ ಬೆರಸದೆ,
ಅಲ್ಲದುದನೆ ಬಿಟ್ಟು, ಬಲ್ಲುದನೆ ಲಿಂಗಾರ್ಚನೆಯೆಂದು,
ಓಂ ಎಂಬಕ್ಷರವನೋದಿ ಅಜಿತ ಬಳಿಕ,
ಬಸುಱಲ್ಲಿ ಬಂದಿಪ್ಪ, ಶಿರದಲ್ಲಿ ನಿಂದಿಪ್ಪ,
ಅಂಗೈಯೊಳಗೆ ಅಪ್ರತಿಮನಾಗಿ ಬಂದಿಪ್ಪ, ಕಾಣಾ
ಕೂಡಲ ಚೆನ್ನಸಂಗಮದೇವ! ॥ ೫೫ ॥ [೫೫೨]

ಇಂತು ಮಾಹೇಶ್ವರನ ಸ್ಥಲ ಒಂದರಲ್ಲಿ ಷಡ್ವಿಧಲಿಂಗಸಮರಸವನೆಯ್ದಿ ಇರುತ್ತಿರಲು, ಮುಂದೆ ಪ್ರಸಾದಿಸ್ಥಲವಾದುದು:[೩]

❖❖

೧-೧ ರೂಜ್ಞೆದ (ಮೂ), ೨-೨ ಸೆ (ಮೂ), ೩+ ಇಂತು ದ್ವಿತೀಯ ಸ್ಥಲಕ್ಕೆ ಸೇರಿಸಿದ ವಚನ ೧೦೩ಕ್ಕಂ ಮಂಗಳ ಮಹಾಶ್ರೀ (ಮೂ).

ಪ್ರಸಾದಿಸ್ಥಲ

ಪ್ರಸಾದಿಸ್ಥಲ. [ಆ ಸ್ಥಲ]ಕ್ಕೆ ತಾಮಸನಿರಸನದ ವಚನ:

೧**ಪ್ರಸಾದಿಯ ತಾಮಸನಿರಸನಸ್ಥಲ:**೧

೧೦೪

ಅಡಿಗಡಿಗೆ ಸಿರಿವಂತರ ನೋಡಿಕೊಂಬುದು ಉಪಜೀವಿತ ಪ್ರಸಾದ,
ಬಡವರೆಂದು ಮಱಿಮಗ್ಗುಲಲ್ಲಿ ಕೊಂಬುದು ತುಡುಗುಣಿ ಪ್ರಸಾದ,
ನಚ್ಚು ಮಚ್ಚಿನಲ್ಲಿ ಎಳೆದು ಸೆಳೆದು ಕೊಂಬುದು ದಳದುಳಿ ಪ್ರಸಾದ,
ಇಕ್ಕದವರನಂಜಿಸಿ ಕೊಂಬುದು ಬಂಧಿಕಾಱಿ ಪ್ರಸಾದ,
ಇಕ್ಕುವಾತನ ಮನದಲ್ಲಿ ಅಳುಕು ಬಳುಕಿಲ್ಲದೆ,
ಕೊಂಬಾತನ ಮನದಲ್ಲಿ ಗುಡಿಗಟ್ಟಿ ಕೊಂಬುದು ಸಮಯಪ್ರಸಾದ,
ಇದು ಕಾರಣ ಕೂಡಲ ಚೆನ್ನಸಂಗಯ್ಯಾ, ನಿಮ್ಮ ಪ್ರಸಾದಿಗಳಪೂರ್ವ ।೧। [೫೫೯]

೧೦೫

ಪ್ರಸಾದ ಪ್ರಸಾದವೆಂದು ಹೆಸರಿಟ್ಟುಕೊಂಡು ನುಡಿವಂಗೆಲ್ಲ ಪ್ರಸಾದವೆಲ್ಲಿಯದೋ?
ತನು ಮುಟ್ಟಿಕೊಂಡುದು ಪ್ರಸಾದವಲ್ಲ,
ಮನ ಮುಟ್ಟಿಕೊಂಡುದು ಪ್ರಸಾದವಲ್ಲ,
ಧನ ಮುಟ್ಟಿಕೊಂಡುದು ಪ್ರಸಾದವಲ್ಲ.
ಈ ತ್ರಿವಿಧಸಾಹಿತ್ಯದಲ್ಲಿ ಕೊಂಡುದು ಪ್ರಸಾದವಲ್ಲ.
ಕೈಯೊಡ್ಡಿ ಕೊಂಬಾತ ಗುರುದ್ರೋಹಿ, ಕೈಯ ನೀಡಿದರೆ ಇಕ್ಕುವಾತ ಶಿವದ್ರೋಹಿ.
ಇದು ಕಾರಣ, ಕೂಡಲ ಚೆನ್ನಸಂಗಯ್ಯನ ಪ್ರಸಾದ,
ಘನಕ್ಕೆ ಘನ, ಮಹಾಘನವನೇನೆಂದುಪಮಿಸುವೆ. ।೨। [೫೬೦]

೧–೧ x (ಮೂ)

೧೦೬
ಭಕ್ತರಾದೆವೆಂದು ಭವಿಪಾಕವನೊಲ್ಲೆವೆಂಬರು,
ಭವಿಪಾಕವೆಂಬುದೆಂತುಟಯ್ಯ?
ಅಂಗತ್ರಯಕ್ಕೆ ನೋಡಿದರೆ ಭವಿಪಾಕ
ಲಿಂಗತ್ರಯ[1]ದ[1] ನೋಟಕ್ಕದು ಸಲ್ಲದು.
ಗುರುಕಾರುಣ್ಯ ಉಂಟೆಂದು ಭಕ್ತರೆಂಬರು,
ಅವರಿಗೆ ಅಂಗತ್ರಯದ ನೋಟವುಳ್ಳನ್ನಕ್ಕ
ಲಿಂಗತ್ರಯದ ನೋಟವೆಲ್ಲಿಯದೊ?
ಪಂಚಭೂತಕಾಯವ ತಂದು ಭಕ್ತರೆಂದರೆ
ಪ್ರಸಾದನಾಸ್ತಿಯೆಂದುದು ಕೂಡಲ ಚೆನ್ನಸಂಗನ ವಚನ. ।೩।   [೫೬೧]

ಇಂತು ತಾಮಸನಿರಸನವಂ ಮಾಡಿದ ಅವಧಾನಿಯ ಪ್ರಸಾ[2]ದಿ[2]ಸ್ಥಲ ನಿರ್ದೇಶ. ಆ ಸ್ಥಲದನುಭಾವದ ವಚನ:

[3]ಪ್ರಸಾದಿಯ ನಿರ್ದೇಶಸ್ಥಲ:[3]

೧೦೭
ಬಯಸಿ ಬಂದುದು ಅಂಗಕ್ಕೆ ಭೋಗ,
ಬಯಸದೆ ಬಂದುದು ಲಿಂಗಕ್ಕೆ ಭೋಗ,
ಅಂಗಭೋಗ ಅನರ್ಪಿತ, ಲಿಂಗಭೋಗ ಪ್ರಸಾದ.
ಬೇಕೆಂಬುದು ಕಾಯಗುಣ, ಬೇಡ ಎಂಬುದು ವೈರಾಗ್ಯ.
ಬೇಕೆಂಬುದೂ ಅಲ್ಲ, ಬೇಡ ಎಂಬುದೂ ಅಲ್ಲ,
ಈ ಉಭಯವತಿಗಳೆದು ಭೋಗಿಸಬಲ್ಲಡೆ
ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣನೆಂಬೆ. ।೪।   [೫೬೮]

೧೦೮
ಕ್ರೀಯಿಲ್ಲದೆ ನಿಃಕ್ರಿಯಲ್ಲಿ ಎಂತು ನಡೆಯಬಹುದು?
ಸೀಮೆಯಿಲ್ಲದೆ ನಿಃಸೀಮೆಯಲ್ಲಿ ನಡೆಯಲೆಂತುಬಹುದು?
ಮೊದಲಿಲ್ಲ[4]ದೆ[4] ಲಾಭವಡಿಸಬಹುದೆ?
ಹರಿವ ಮನವ ನಿಲ್ಲೆಂದು ನಿಲ್ಲಿಸಿ, ಜಿಹ್ವೆಯ ಭುಂಜಕತನವ ಕಳೆದು
ಲಿಂಗ ಭೋಗೋಪಭೋಗಿಯಾದಲ್ಲದೆ ಮೆಚ್ಚುವನೆ
ಕೂಡಲ ಚೆನ್ನಸಂಗಾ ನಿಮ್ಮ ಶರಣ? ।೫।   [೫೬೯]

೧-೧ ನ (ಮೂ), ೨-೨ ದ (ಮೂ), ೩-೩ (ಮೂ), ೪-೪ ದ (ಮೂ).

೧೧೯

ಸದ್ಗುರುಕಾರುಣ್ಯವ ಪಡೆದು, ಪೂರ್ವಗುಣವಳಿದು, ಪುನರ್ಜಾತನಾದ ಬಳಿಕ,
ಆ ಸದ್ಗುರು, ಪರಶಿವ, ಪ್ರಾಣಾತ್ಮನು–
ಈ ತ್ರಿವಿಧವು ಏಕವಾಗಿ ಲಿಂಗಪ್ರವೇಶವಂ ಮಾಡಿ,
ಪ್ರಾಣಲಿಂಗವನು ಬಿಜಯಂಗೈಸಿ ಕೊಟ್ಟು,
ಲಿಂಗಪ್ರಾಣ ಪ್ರಾಣಲಿಂಗ, ಲಿಂಗವಂಗ ಅಂಗಲಿಂಗ, ಭಕ್ತಕಾಯ ಮಮಕಾಯವಾಗಿ.
ಅಂಗದ ಮೇಲೆ ಲಿಂಗಸಾಹಿತ್ಯವ ಮಾಡಿ,
ಆ ಮಹಾಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡೆಂದು
ಆ ಶ್ರೀಗುರು ಆಜ್ಞೆಯಂ ಮಾಡಲು,
ಮಹಾಪ್ರಸಾದವೆಂದು ಆಜ್ಞೆಯಂ ಕೈಕೊಂಡು, ಕ್ರಿಯಾಮಾರ್ಗದಲ್ಲೂ ಮಾಡುವಲ್ಲಿ,
ದೀಪಾರಾಧನೆ ಪರಿಯಂತರಂ ಮಾಡಿ
[೧]ನೈವೇದ್ಯ[೧] ಕ್ರೀಯ ಮಾಡುವಲ್ಲಿ,
ಆಗಮಮಾರ್ಗದಲ್ಲೂ ಸರ್ವರಸಫಲಪಾಕಾದಿ ಮಹಾದ್ರವ್ಯಂಗಳನು ಅರ್ಪಿಸಿ,
ಪಂಚೇಂದ್ರಿಯಂಗಳಿಂ ಪಂಚಸ್ಥಾನಪ್ರವೇಶನಾದ ಮಹಾಲಿಂಗಕ್ಕೆ ಅರ್ಪಿಸುವಲ್ಲಿ,
ದ್ರವ್ಯಂಗಳ [೨]ಸು[೨]ರೂಪವನು ಶ್ವೇತ ಪೀತ ಹರಿತ ಮಾಂಜಿಷ್ಟ ಕೃಷ್ಣ ಕಪೋತ
ಇವಾದಿಯಾದ ಷಡುವರ್ಣಮಿತ್ರ ಮೂವತ್ತಾರು ಬಹುವಿಧವರ್ಣಂಗಳನು,
ಕಂಗಳಲ್ಲಿ ನೋಡಿಕೊಂಡು ಅಜಿದು ಕುರೂಪ ಕಳೆದು,
ಸುರೂಪವನು ಕಂಗಳಲ್ಲಿ ಲಿಂಗಕರ್ಪಿಸುವಾಗ
ಸ್ವಯಭಾಜನವೊ ಲಿಂಗಭಾಜನವೊ?
ಆ ಕಾಲದಲ್ಲಿ ಸೂತಕವಿಲ್ಲ, ದೋಷವಿಲ್ಲ. ರೂಪು ಲಿಂಗಾರ್ಪಿತವಾಯಿತ್ತು.
ನಾದಮಂತ್ರಂಗಳಾದಿಯಾಗಿದ್ದ ಸುಶಬ್ದಗಳನು ಶ್ರೋತದಿಂ ಕೇಳಿ,
ಕುಶಬ್ದವನೆ ಕಳೆದು, ಸುಶಬ್ದಂಗಳ ಶ್ರೋತ್ರದಿಂ ಲಿಂಗಕರ್ಪಿಸುವಲ್ಲಿ,
ಸ್ವಯಭಾಜನವೊ ಲಿಂಗಭಾಜನವೊ?
ಆ ಕಾಲದಲ್ಲೂ ಸೂತಕವಿಲ್ಲ ದೋಷವಿಲ್ಲ.
ಶಬ್ದದ್ರವ್ಯ ಶ್ರೋತ್ರದಿಂ ಲಿಂಗಕ್ಕೆ ಅರ್ಪಿತವಾಯಿತ್ತು,
ಸುಗಂಧ ದುರ್ಗಂಧಗಳನು ಘ್ರಾಣದಿಂದಜಿದು,
ದುರ್ಗಂಧವನೆ ಕಳೆದು ಸುಗಂಧವನು ಘ್ರಾಣದಿಂ ಲಿಂಗಕ್ಕೆ ಅರ್ಪಿಸುವಲ್ಲಿ,
ಸ್ವಯಭಾಜನವೊ ಲಿಂಗಭಾಜನವೊ?
ಆ ಕಾಲದಲ್ಲಿ ಸೂತಕವಿಲ್ಲ ದೋಷವಿಲ್ಲ.
ಘ್ರಾಣದಿಂ ಸುಗಂಧ ಲಿಂಗಾರ್ಪಿತವಾಯಿತ್ತು.

೧–೧ x (ಮೂ), ೨–೨ ಸ್ವ (ಮೂ).

ಮೃದುಕಠಿಣ ಶೀತೋಷ್ಣಂಗಳನು ಪರುಶನದಿಂ ಪರುಶಿಸಿ, ಪರುಶನವನಜಿದು
ಮೃದುಕಠಿಣ ಶೀತೋಷ್ಣಂಗಳ ಕಳೆದು ಸುಸ್ಪರ್ಶವ[೧]ನು[೧]ಲಿಂಗಕ್ಕರ್ಪಿಸುವಲ್ಲಿ,
ಸ್ವಯಭಾಜನವೊ ಲಿಂಗಭಾಜನವೊ?
ಆ ಕಾಲದಲ್ಲಿ ಸೂತಕವಿಲ್ಲ ದೋಷವಿಲ್ಲ, ಸುಸ್ಪರ್ಶನ[೨] ಲಿಂಗಾರ್ಪಿತವಾಯಿತ್ತು.
ಮಹಾದ್ರವ್ಯಂಗಳ [೩]ರೂಪು ರಸ ಗಂಧ ಸ್ಪರ್ಶ ಶಬ್ದಂಗಳು
ನೇತ್ರ ಜಿಹ್ವೆ ಘ್ರಾಣ ತ್ವಕ್ಕು ಶ್ರೋತ್ರಗಳಿಂದ[೩] ಲಿಂಗಾರ್ಪಿತವಾಯಿತ್ತು.
ದ್ರವ್ಯಸುರೂಪವನು ಕಂಗಳಿಂದರ್ಪಿಸುವಂತೆ ಶ್ರೋತ್ರ ತ್ವಕ್ಕು ಜಿಹ್ವೆ ಘ್ರಾಣ
[೪]ಈ[೪] ನಾಲ್ಕು ಇಂದ್ರಿಯಂಗಳಲ್ಲಿ[೫] ಅರ್ಪಿಸಬಾರದು,
ಕಂಗಳಲ್ಲಿಯೆ ಸುರೂಪನರ್ಪಿಸಬೇಕು.
ಸುಶಬ್ದವನು ಶ್ರೋತ್ರದಿಂದರ್ಪಿಸುವಂತೆ ನೇತ್ರ ಘ್ರಾಣ ಜಿಹ್ವೆ ತ್ವಕ್ಕು
[೪]ಈ[೪] ನಾಲ್ಕು ಇಂದ್ರಿಯಂಗಳಲ್ಲಿ ಅರ್ಪಿಸಬಾರದು,
ಸುಶಬ್ದವನು ಶ್ರೋತ್ರದಿಂದವೆ ಅರ್ಪಿಸಬೇಕು.
ಸುಗಂಧವನು ಘ್ರಾಣದಿಂದರ್ಪಿಸುವಂತೆ, ನೇತ್ರ ಶ್ರೋತ್ರ ತ್ವಕ್ಕು ಜಿಹ್ವೆ
[೪]ಈ[೪] ನಾಲ್ಕು ಇಂದ್ರಿಯಂಗಳಲ್ಲಿ ಅರ್ಪಿಸಬಾರದು.
ಸುಗಂಧವನು ಘ್ರಾಣದಿಂದವೆ ಅರ್ಪಿಸಬೇಕು.
ಸುಪರುಶನವನು ತ್ವಗಿಂದ್ರಿಯದಿಂದರ್ಪಿಸುವಂತೆ, ಶ್ರೋತ್ರ ನೇತ್ರ ಜಿಹ್ವೆ ಘ್ರಾಣ
ಈ ನಾಲ್ಕು ಇಂದ್ರಿಯಂಗಳಲ್ಲಿ ಅರ್ಪಿಸಬಾರದು,
ಸುಪರುಶನವನು ತ್ವಗಿಂದ್ರಿಯದಿಂದವೆ ಅರ್ಪಿಸಬೇಕು.[೬]
ಮಹಾರಸವನು ಜಿಹ್ವೆಯಿಂದರ್ಪಿಸುವಂತೆ
ನೇತ್ರ ಘ್ರಾಣ ತ್ವಕ್ಕು ಶ್ರೋತ್ರ ಈ ನಾಲ್ಕಿಂದ್ರಿಯಂಗಳಲ್ಲಿ ಅರ್ಪಿಸಬಾರದು,[೭]
[೭]ಮಹಾರಸವನು ಜಿಹ್ವೆಯಿಂದವೆ ಅರ್ಪಿಸಬೇಕು.[೮]
ಈ ತೆಜನಜೆಯದೆ ಸ್ವಯಭಾಜನವಾಗದೆಂದು, ಭಿನ್ನಭಾಜನವಾಗಬೇಕೆಂದು,
ದೇವರಾರೋಗಣೆಗೆ ಮುನ್ನಲಿಟ್ಟ ಪರಿಯಾಣವ ತೆಗೆದು

೧–೧ x (ಮೂ), ೨+ ದ್ರವ್ಯಂಗಳ ಮೃದುಕಠಿಣ ಶೀತೋಷ್ಣಂಗಳ ಸಕಿಚ್ಚೆಯರಜಿದು ಪರುಷನದಿಂ (ಮೂ), ೩–೩ ರೂಪು ಶಬ್ದ ಗಂಧ ಪರುಶನ ಶೋತ್ರ ನೇತ್ರ ಘ್ರಾಣತ್ವಕ್ಕಿಂದ (ಮೂ), ೪ ಮೊದಲಾದ (ಮೂ), ೫–೫ + ಯೂ (ಮೂ), ೬+ ಕೇಳಿರಣ್ಣಾ (ಮೂ), ೭–೭ x (ಮೂ), ೮+ ಆಗ ಲಿಂಗಭಾಜನವೊ ಸ್ವಯಭಾಜನವೊ, ಆ ಕಾಲದಲ್ಲಿ ಸೂತಕವಿಲ್ಲ ದೋಷವಿಲ್ಲ (ಮೂ).

ಇನ್ನೊಂದು ಪರಿಮಾಣವ ತನ್ನಿ ಎಂಬ ಕಷ್ಟವ ನೋಡಾ!
ಅಗಲನಾಜಿಡಿಗೊಂಬ ಪಾಪಿಯ ನೋಡಾ! ಅಕಟಕಟಾ!
ಈ ಪರಿಯ ಲಿಂಗಾರ್ಚನೆಯಂ ಮಾಡಿ, ಈ ಪರಿಯ ಲಿಂಗಾರ್ಪಿತವ ಮಾಡಿ,
ಪ್ರಸಾದವ ಪಡೆವ ಪರಿ ಈ ಪರಿಯೇ?
ಭಕ್ತಿ ಈ ಪರಿಯೆ? ಜ್ಞಾನ ಈ ಪರಿಯೆ?
ಇಂತಲ್ಲ ಕೇಳಿರಣ್ಣಾ, ಕರ್ತೃ ಭೃತ್ಯ ಸಂಬಂಧವು.
ದೇವರ ಪರಿಯಾಣದಲ್ಲಿ, ದೇವರಿಗೆ ಬಂದ
ಸರ್ವದ್ರವ್ಯಮಹಾರಸಂಗಳನು ಮಹಾರುಚಿಯನು
ಭಕ್ತದೇಹಿಕದೇವನಾಗಿ ಮಹಾದೇವಂಗೆ ಅರ್ಪಿಸಬೇಕು.
ರೂಪಂ ಸಮರ್ಪಿತಂ ಶುದ್ಧಂ ರುಚಿಃ ಸಿದ್ಧಂ ತು ವಿಶ್ರುತಂ ।
ಏತತ್ಸಮಾಗತಾ ತೃಪ್ತಿಃ ಪ್ರಸಿದ್ಧಂ ತು ಪ್ರಸಾದಕಂ ॥
ದರ್ಪಣಂ ಧೂಪದೀಪೌ ಚ ನಾನಾರುಚಿಸುಖಂ ಬಹು ।
ಪ್ರಸಾದ ಏವ ಭೋಕ್ತವ್ಯೋ ಅನ್ಯದ್ಗೋಮಾಂಸಸನ್ನಿಭಂ ॥
ರೂಪಂ ಸಮರ್ಪಯೇದ್ದ್ರವ್ಯಂ ರುಚಿಮಪ್ಯರ್ಪಯೇತ್ತತಃ ।
ಉಭಯಾರ್ಪಣವಿಹೀನಶ್ಚೇತ್ ಪ್ರಸಾದೋ ನಿಷ್ಫಲೋ ಭವೇತ್ ॥
ನೈವೇದ್ಯಂ ಪುರತೋ ನ್ಯಸ್ತಂ ದರ್ಶನಾತ್ ಸ್ವೀಕೃತಂ ಮಯಾ ।
ರಸಾನ್ ಭಕ್ತಸ್ಯ ಜಿಹ್ವಾಗ್ರಾದಶ್ನಾಮಿ ಕಮಲೋದ್ಭವ ॥
ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧೋ ಮಹಾರುಚಿಃ ।
ತತ್ತಲ್ಲಿಂಗಮುಖೇನೈವ ಅರ್ಪಿತಂ ಸ್ಯಾತ್ಸಮರ್ಪಣಂ ॥
ಅರ್ಪಿತಾನರ್ಪಿತಂ ಸ್ಥಾನಂ ಇಂದ್ರಿಯಾದಿಂದ್ರಿಯಂ ಯಥಾ ।
ಇಂದ್ರಿಯಸ್ಥಾನತತ್ಕರ್ಮ ತಮರ್ಪಿತಕ್ರಿಯಾರ್ಪಿತಂ ॥
. . . . ಜ್ಞಾನಾರ್ಪಣಕ್ರಿಯಾರ್ಪಣೇ ।
ಉಭಯಾರ್ಪಣಹೀನಸ್ಯ ಪ್ರಸಾದೋ ನಿಷ್ಫಲೋ ಭವೇತ್ ॥
ಗರ್ಭಿಣ್ಯಾ ಗರ್ಭದೇಹಸ್ಯ ಸರ್ವಭೋಗಸ್ಸಮೋ ಭವೇತ್ ।
ಲಿಂಗಿನಾಂ ಲಿಂಗಭೋಗೇನ ಪ್ರಸಾದಃ ಸಹ ಸಂಭವೇತ್ ॥
ಗರ್ಭಿಣೀ ಸರ್ವಭೋಗೇಷು ಶಿಶೂನಾಂ ತೃಪ್ತಿಸಂಭವಃ ।
ಲಿಂಗಿನಾಂ ಲಿಂಗಭೋಗೇಷು ಪ್ರಸಾದಸ್ಸಂಭವೇತ್ತಥಾ ॥
ಯಥಾ ಚ ಗರ್ಭಿಣೀ ಭೋಗೇ ಶಿಶೂನಾಂ ತೃಪ್ತಿಸಂಭವಃ ।
ತಥಾ ಲಿಂಗಸ್ಯ ಭೋಗೇಷು ಅಂಗಸ್ತೃಪ್ತಿಮವಾಪ್ನುಯಾತ್ ॥
ಗರ್ಭೀಕೃತಸ್ಯ ಪ್ರಾಣಸ್ತು ಗರ್ಭಿಣೀಭೋಗಮಾಶ್ರಿತಃ ।
ಲಿಂಗಗರ್ಭೀಕೃತೋ ಲಿಂಗೀ ಲಿಂಗಭೋಗಂ ಸಮಾಶ್ರಿತಃ ॥

ಭಕ್ತಕಾಯೋ ಮಹಾದೇವೋ ಭಕ್ತಾತ್ಮಾ ಚ ಸದಾಶಿವಃ ।
ಭಕ್ತಭೋಗೋಪಭೋಗಶ್ಚ ಭೋಗಸ್ತಸ್ಯ ವಿಧೀಯತೇ ॥
ಲಿಂಗದೇಹೀ ಶಿವಾತ್ಮಾಯಂ ಲಿಂಗಾಚಾರೋ ನ ಲೌಕಿಕಃ ।
ಸರ್ವಲಿಂಗಮಯಂ ರೂಪಂ ಲಿಂಗೇನ ಸಮಮಶ್ನುತೇ ॥
ಘ್ರಾಣಸ್ತಸ್ಯೈವ ಘ್ರಾಣಶ್ಚ ದೃಷ್ಟಿರ್ದೃಷ್ಟಿಃ ಶ್ರುತಿಃ ಶ್ರುತಿಃ ।
ಸ್ಪರ್ಶನಂ ಸ್ಪರ್ಶನಂ ವಿಂದ್ಯಾದ್ ಗ್ರಾಹ್ಯಂ ತದ್ಗ್ರಾಹ್ಯಮೇವ ಚ ॥
ಭುಕ್ತಂ ತದ್ಭುಕ್ತಮಾಖ್ಯಾತಂ ತೃಪ್ತಿಸ್ತತ್ತೃಪ್ತಿರೇವ ಚ ।
ತಸ್ಯೈಕಃ ಪ್ರಾಣ ಆಖ್ಯಾತ ಇತ್ಯೇತತ್ಸಹವರ್ತಿನಾಂ ॥
ಲಿಂಗದೃಷ್ಟಿನಿರೀಕ್ಷಾ ಸ್ಯಾಲ್ಲಿಂಗಹಸ್ತೋಪಸ್ಪರ್ಶನಂ ।
ಲಿಂಗಶ್ರೋತ್ರೇಣ ಶ್ರವಣಂ ಲಿಂಗಜಿಹ್ವಾರಸಾನ್ನವಾನ್ ॥
ಲಿಂಗಘ್ರಾಣಸ್ತು ಘ್ರಾಣಶ್ಚ ಲಿಂಗೇನ ಸಹ ವರ್ತತೇ ।
ಲಿಂಗಂ ಮನೋಗತಂ ವಾಪಿ ಇತ್ಯೇತೈಃ ಸಹ ಭೋಜನಂ ॥
ಲೋಕಾಚಾರನಿಬದ್ಧಸ್ತು ಲೋಕಾಲೋಕವಿವರ್ಜಿತಃ ।
ಲೋಕಾಚಾರಪರಿತ್ಯಾಗೀ ಪ್ರಾಣಲಿಂಗೀತಿ ಸಂಸ್ಮೃತಃ ॥
ನ ಪ್ರಾಣಲಿಂಗಿನಃ ಕಾಲೋ ನ ಲಿಂಗಪ್ರಾಣಿನಃ ಕ್ರಿಯಾ ।
ಕಾಲಕರ್ಮದ್ವಯಂ ನಾಸ್ತಿ ಶರಣಸ್ಯ ಪ್ರಸಾದತಃ ॥
ಇಂತೆಂದುದಾಗಿ ಲಿಂಗಾರ್ಚನೆಯ ಮಾಡುವ ಪರಿಯಿದು.
ಇಂತಲ್ಲದೆ ರುಚಿಯಾರ್ಪಿತಕ್ಕೆ ಮುನ್ನವೆ
ಪರಿಯಾಣವ ತೆಗೆದರೆ ಲಿಂಗಾರ್ಚನೆಯ ಕ್ರೀ ತಪ್ಪುವದು.
ಶ್ರೀಗುರುವಾಜ್ಞೆಯ ಮೀಱಿದವನು ಜ್ಞಾನಿಯಲ್ಲ, ಭಕ್ತನಲ್ಲ, ಕೇಳಿರೆ.
ಅವನಾನೊಬ್ಬ ಲಿಂಗಭೋಗಿಯಾದಾತನು
ರಾಜಾಧಿರಾಜ ಮಹಾರಾಜ ದೇವಾಧಿದೇವ ಮಹಾದೇವಂಗೆ
ಆರೋಗಣೆಯ ಮಾಡದ ಮುನ್ನವೆ ಪರಿಯಾಣವ ತೆಗೆಯಲು ಮಹಾದ್ರೋಹ.
ಇದನಱಿತು ಶ್ರೀಗುರುವಾಜ್ಞೆ ತಪ್ಪದೆ,
ಲಿಂಗಾರ್ಚನೆಯ ಕ್ರೀ ತಪ್ಪದೆ,
ದೇವರ ಪರಿಯಾಣದಲ್ಲು ಮಹಾಪದಾರ್ಥಂಗಳನಿಟ್ಟು
ಶ್ರೀಗುರು ಸಹಿತ ಜಂಗಮ ಸಹಿತ ಲಿಂಗಾರ್ಪಿತವ ಮಾಡುವುದು.
ಪಂಚೇಂದ್ರಿಯಂಗಳಿಂ ಪಂಚಸ್ಥಾನಪ್ರವೇಶವಾದ ಮಹಾಲಿಂಗಕ್ಕೆ
ಶಬ್ದಸ್ಪರ್ಶರೂಪುರಸಗಂಧಂಗಳನು
ಮನೋವಾಕ್ಕಾಯಕ್ಕೆ ಭೋಗಿಸುವ ಭೋಗವೆಲ್ಲವನೂ
ಲಿಂಗಕರ್ಪಿಸಿ ಪ್ರಸಾದವ ಪಡೆದು,

ಆ ಮಹಾಪ್ರಸಾದದಿಂದ ಪ್ರಸಾದಿಯ[1]ಪ್ಪುದು[1] ತಪ್ಪದು,
ಕೂಡಲ ಚೆನ್ನಸಂಗಮದೇವಾ. ।೬।   [೫೭೦]

ಇಂತಪ್ಪ ಪ್ರಸಾದಸ್ಥಲವನಂಗಂಗೊಂಡಿಪ್ಪ ಅವಧಾನಿ[2][ಗೆ ಷಡ್ವಿಧಲಿಂಗವು ಹೇಂಗೆ ಬೆರಸಿಪ್ಪುದೆಂದಡೆ, ಆ][2] ಲಿಂಗದ ವಿವರ: ಪ್ರಸಾದಿಯ ಆಚಾರಲಿಂಗ, ಆ ಸ್ಥಲದನುಭಾವದ ವಚನ:

ಪ್ರಸಾದಿಯ ಆಚಾರಲಿಂಗಸ್ಥಲ:

೧೧೦
ಶೀಲ ಶೀಲವೆಂದು ಗರ್ಭೀಕರಿಸಿ ನುಡಿವುತಿಪ್ಪರು,
ಶೀಲವಾವುದೆಂದಱಿಯರು:
ಇದ್ದುದ ವಂಚನೆಯ ಮಾಡದಿಪ್ಪುದೆ ಶೀಲ,
ಇಲ್ಲದುದ ಕಡನ ಬೇಡದಿಪ್ಪುದೆ ಶೀಲ,
ಪರಧನ ಪರಸತಿಗಳುಪದಿಪ್ಪುದೆ ಶೀಲ,
ಪರದೈವ ಪರಸಮಯಕ್ಕೆ ಎಳಸದಿಪ್ಪುದೆ ಶೀಲ,
ಗುರುನಿಂದೆ ಶಿವನಿಂದೆ ಜಂಗಮನಿಂದೆಯ ಕೇಳದಿಪ್ಪುದೆ ಶೀಲ.
ಕೂಡಲ ಚೆನ್ನಸಂಗನ ಶರಣರ ಬರವಿಂಗೆ
ಮುಯ್ಯಾಂತು ಪರಿಣಾಮಿಸಬಲ್ಲುದೆ ಅಚ್ಚ ಶೀಲ. ।೭।   [೫೭೧]

೧೧೧
ಶೀಲ ಶೀಲವೆಂದೇನೋ?
ಮಾಡಿದ ಮನೆ, ಹೂಡಿದ ಒಲೆ,
ಅಟ್ಟುಂಬ ಮಡಕೆ, ಕಟ್ಟಿದ ಕೆಱೆ, ಬಿತ್ತಿದ ಬೆಳೆ,
ಇಂತಿವಕ್ಕೆ ಶೀಲ[3]ವಲ್ಲದೆ.[3] ತನ್ನ ಮನಕ್ಕೆ [4]ಶೀಲವಿಲ್ಲ,[4]
ಶೀಲವಂತನೆಂತೆಂದರೆ :
ಲಿಂಗ ಬಂದು ಮನವನಿಂಬುಗೊಂಬುದೆ ಶೀಲ,
ಜಂಗಮ ಬಂದು ಧನವನಿಂಬುಗೊಂಬುದೆ ಶೀಲ,
ಪ್ರಸಾದ ಬಂದು ತನುವನಿಂಬುಗೊಂಬುದೆ ಶೀಲ.
ಇಂತಪ್ಪ ಶೀಲಕ್ಕೆ ನಮೋ ನಮೋ ಎಂಬೆ,
ಉಳಿದ ದುಃಶೀಲವಂತರನೆನ್ನತ್ತ ತೋಱದಿರು
ಕೂಡಲ ಚೆನ್ನಸಂಗಮದೇವಾ. ।೮।   [೫೭೨]

೧-೧ ಪ್ಪ (ಮೂ), ೨-೨ ಯಪ್ಪ ಷಡ್ವಿಧ (ಮೂ), ೩-೩ ವೆಲ್ಲಿದೆ (ಮೂ), ೪-೪ ವ (ಮೂ).

೧೧೨
ಅನ್ಯದೈವವುಳ್ಳ ಭಕ್ತನ ಮನೆಯ ಆರೋಗಣೆ ಅನ್ಯಾಹಾರದ ಕೂಳು,
ನಂಬಿಗೆ ಇಲ್ಲದ ಭಕ್ತನ ಮನೆಯ ಆರೋಗಣೆ ಸಂದೇಹದ ಕೂಳು,
ಮಾ[1]ಡಿ ಹಮ್ಮ ನುಡಿ[1]ವ ಭಕ್ತನ ಮನೆಯ ಆರೋಗಣೆ ಕಾಜೆದ ಕೂಳು,
ನಿಮ್ಮ ನಂಬಿದ ಸಜ್ಜನ ಭಕ್ತನ ಮನೆಯ ಆರೋಗಣೆ
ಸದಾಚಾರ ಭೃತ್ಯಾಚಾರ ಶಿವಾಚಾರದಿಂ ಬಂದುದಾಗಿ
ಲಿಂಗಾರ್ಪಿತವಾಯಿತ್ತಯ್ಯಾ, ಕೂಡಲ ಚೆನ್ನಸಂಗಮದೇವಾ. । ೯ । [೫೭೩]

ಇಂತು ಆಚಾರಲಿಂಗದಲ್ಲಿ ಅವಧಾನಿಯಾದ ಪ್ರಸಾದಿಯ ಗುರುಲಿಂಗ. ಆ ಸ್ಥಲದನುಭಾವದ ವಚನ:

ಪ್ರಸಾದಿಯ ಗುರುಲಿಂಗಸ್ಥಲ:

೧೧೩
ತನ್ನ ಮನೆಯ ಹೊಗದ ಗುರುವನಱಸಿಕೊಂಡು ಹೋಹಾತ ಶಿಷ್ಯನಲ್ಲ,
ತಾ ಹೊಗದ ಮನೆಗೆ ಕಾರುಣ್ಯ ಉಪದೇಶವ ಮಾಡುವಾತ ಗುರುವಲ್ಲ.
ಅಂಗವ ಮಾಱಿಕೊಂಡುಂ[2]ಬ ಶಿಷ್ಯ[2] ಗುರುದ್ರೋಹಿ,
ಲಿಂಗವ ಮಾಱಿಕೊಂಡುಂಬ ಗುರು ಶಿವದ್ರೋಹಿ.
ನಾಮಧಾರಕ ಶಿಷ್ಯಾಣಾಂ ನಾಮಧಾರೀ ಗುರುಸ್ತಥಾ ।
ಅಂಧಕೋऽಂಧಕರಾಸಕ್ತೋ ಭವೇತಾಂ ಪತಿತಾವುಭೌ ॥
ಈ ಗುರುಶಿಷ್ಯರಿಬ್ಬರ ಭಕ್ತರೆಂದವರ
ಕೂಡಲ ಚೆನ್ನಸಂಗಯ್ಯ ನಾಯಕನರಕದಲ್ಲಿಕ್ಕುವ. । ೧೦ । [೬೩೦]

೧೧೪
ಕುಲಹೀನಶಿಷ್ಯಂ[3]ಗೆ[3] ಅನುಗ್ರಹವ ಕೊಟ್ಟು,
ತನ್ನ ಪ್ರಾಣಲಿಂಗವ ನಿಕ್ಷೇಪಿಸಿ, ಕರ್ಣಮಂತ್ರವ ಹೇಳಿ,
ಆ ಗುರು ಬಂದು ಆ ಶಿಷ್ಯನ ಮನೆಯ ಹೊಗಲೊಲ್ಲದೆ
ಅಕ್ಕಿ, ತುಪ್ಪವನೀಸಿಕೊಂಬವನ ಕೇಡಿಂಗೆ ಇನ್ನೇವೆನಯ್ಯಾ?

೧-೧ x (ಮೂ), ೨-೨ ಬಾತ (ಮೂ), ೩-೩ x (ಮೂ).

ತನ್ನ ಪ್ರಾಣಲಿಂಗವನವನಿಗೆ ಕೊಟ್ಟು ತಾ ಹೊಗೆನೆಂಬ
ವ್ರತಗೇಡಿಯ ಇನ್ನೇನೆನ್ನಬಹುದಯ್ಯಾ?
ಅವನ ಧನಕ್ಕೆ ತಂದೆಯಾದನಲ್ಲದೆ ಅವನಿಗೆ ತಂದೆಯಲ್ಲ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ಆ ಲಿಂಗವ ಮಾಱಿಕೊಂಡು ಉಂಬ
ಭಂಗಗಾಱಿರು ಕೆಟ್ಟ ಕೇಡನೇನೆಂಬೆನಯ್ಯಾ. ।೧೧। [೬೩೧]

೧೧೫
ಭೂತಪ್ರಾಣಿಯ ಕಳೆದು, ಲಿಂಗಪ್ರಾಣಿಯ ಮಾಡಿದ ಬಳಿಕ,
ಆ ಶಿಷ್ಯನೆ ಜಂಗಮವಾಗಿ ಗುರುವಿನ ಮಠಕ್ಕೆ ನಡೆದು ಬಂದರೆ,
ಗುರುವೆಂಬ ಹಮ್ಮಿಲ್ಲದೆ ಪರಮಗುರುವೆಂದು
ಪಾದಾರ್ಚನೆಯಂ ಮಾಡೂದು, ಆಚಾರ;
ನಾಚಿ ಮಾಡದಿದ್ದರೆ ನಾಯಕನರಕ.
ಆ ಜಂಗಮ ಶಂಕೆಯಿಲ್ಲದೆ ಪಾದಾರ್ಚನೆಯಂ ಮಾಡಿಸಿಕೊಂಬುದೆ ಕರ್ತೃತ್ವ,
ಶಂಕೆಗೊಂಡಡೆ ಪಂಚಮಹಾಪಾತಕ.
ಹಿಂಗಲ್ಲದೆ ಗುರುವೆಂಬ ಹಮ್ಮು, ಶಿಷ್ಯನೆಂಬ ಶಂಕೆವುಳ್ಳನ್ನಬರ
ರೌರವನರಕದಲ್ಲಿಕ್ಕುವ ಕೂಡಲ ಚೆನ್ನಸಂಗಮದೇವ. ।೧೨। [೬೩೨]

೧೧೬
ಶ್ರೀಗುರುವಾದಾತನು ಸಕಲಾಗಮಂಗಳ ಹೃದಯವನಱಿತು,
ತನ್ನ ತಾನಱಿದು ಸರ್ವ ಆಚಾರ ತನ್ನಲ್ಲಿ ನೆಲೆಗೊಂಡು,
ಉಪದೇಶವ ಮಾಡುವ ಕ್ರಮವೆಂತೆಂದಡೆ :
ಬ್ರಾಹ್ಮಣನ ಮೂಱು ವರುಷ ನೋಡಬೇಕು,
ಕ್ಷತ್ರಿಯನ ಆಱು ವರುಷ ನೋಡಬೇಕು,
ವೈಶ್ಯನ ಒಂಬತ್ತು ವರುಷ ನೋಡಬೇಕು,
ಶೂದ್ರನ ಹನ್ನೆರಡು ವರುಷ ನೋಡಬೇಕು,
ನೋಡಿದಲ್ಲದೆ ದೀಕ್ಷೆಯ ಕೊಡಬಾರದು.
ಬ್ರಾಹ್ಮಣಂ ತ್ರೀಣಿ ವರ್ಷಾಣಿ ಷಡಬ್ದಂ ಕ್ಷತ್ರಿಯಂ ತಥಾ ।
ವೈಶ್ಯಂ ನವಾಬ್ದಮಾಖ್ಯಾತಂ ಶೂದ್ರಂ ದ್ವಾದಶ ವರ್ಷಕಂ ॥
ಈ ಕ್ರಮವನಱಿಯದೆ,
ಉಪಾಧಿವಿಡಿದು ಉಪದೇಶವ ಮಾಡುವಾತ ಗುರುವಲ್ಲ,
ಉಪಾಧಿವಿಡಿದು ಉಪದೇಶವ ಮಾಡಿಸಿಕೊಂಬಾತ ಶಿಷ್ಯನಲ್ಲ,

ಇವರಿಬ್ಬರ ನಿಲವು ಒಂದೆ: ಠಕ್ಕನ ಮನೆಗೆ ಠಕ್ಕ ಬಿದ್ದಿನವ ಬಂದಂತೆ.
[೧]ಈ[೧] ಗುರುಶಿಷ್ಯರಿಬ್ಬರನು ರೌರವನರಕದಲ್ಲಿಕ್ಕುವ
ಕೂಡಲ ಚೆನ್ನಸಂಗಯ್ಯ. ।೧೩। [೬೩೩]

೧೧೬
ಭವಿತನಕ್ಕೆ ಹೇಸಿ ಭಕ್ತನಾದೆಹೆನೆಂದರೆ
ಆ ಭವಿಯ ಪೂರ್ವಾಶ್ರಯವ ಕಳೆದು,
ಭಕ್ತನ ಮಾಡುವ ಪರಿಯೆಂತುಟಯ್ಯಾ?
ಆತನ ಕಾಯಶುದ್ಧನ ಮಾಡುವುದು, ಜೀವಶುದ್ಧನ ಮಾಡುವುದು,
ಆತ್ಮಶುದ್ಧನ ಮಾಡುವುದು, ಮಂತ್ರಶುದ್ಧನ ಮಾಡುವುದು.
ವಾಕು ಪಾಣಿ ಪಾದ ಪಾಯು ಗುಹ್ಯವೆಂಬ
ಕರ್ಮೇಂದ್ರಿಯಂಗಳ ಶುದ್ಧನ ಮಾಡುವುದು,
ಶ್ರೋತ್ರ ನೇತ್ರ ಜಿಹ್ವೆ ತ್ವಕ್ಕು ಘ್ರಾಣವೆಂಬ
ಬುದ್ಧೀಂದ್ರಿಯಂಗಳ ಶುದ್ಧನ ಮಾಡುವುದು,
ಸುತ್ತಿರ್ದ ಮಾಯಾಪ್ರಪಂಚಮಂ ಬಿಡಿಸಿ,
ಜೀವನೆ ಶಿವನೆಂಬ ಪರಿಯಾಯಮಂ ಕೆಡಿಸಿ
ಶಿವನೆ ಜೀವನೆಂಬ ಪರಿಯಾಯಮಂ ತೋಱಿ,
ಜೀವಶುದ್ಧನ ಮಾಡುವುದು.
ಪಂಚಭೂತದ ಅಧಿದೇವತೆಗಳಂ ತೋಱಿ, ಪಂಚವಕ್ತ್ರಂಗಳ ನೆಲೆಗೊಳಿಸಿ,
ಅವರ ವರ್ಣ ಶ್ವೇತ ಪೀತ ಹರಿತ ಕಪೋತ ಮಾಂಜಿಷ್ಟ ಗೌರವರ್ಣಂಗಳ ತೋಱಿ,
ಪಂಚಭೂತಶುದ್ಧನಂ ಮಾಡುವುದು.
'ಜೀವಾತ್ಮಾ ಪರಮಾತ್ಮಾ ಚ' ಎಂಬ ಶ್ರುತಿಯಿಂದ
ಆತ್ಮನ ಶುದ್ಧನ ಮಾಡುವುದು,
ಇಂತು ಸರ್ವಶುದ್ಧನಂ ಮಾಡುವುದು.
ಆತನಂ ತಂದು ಗಣತಿಂಥಿಣಿಯ ಮುಂದೆ [೨]ನಿಲ್ಲಿಸಿ[೨]
ಕರ್ಮಣಾ ಮನಸಾ ವಾಚಾ ಗುರು ಭಕ್ತ್ಯಾಂ ತು ವತ್ಸಲಃ ।
ಶರೀರಮರ್ಥಂ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್ ॥
ಎಂದು ಮನಃಸ್ಮರಣೆಯಂ ಮಾಡಿ, [೩]ಶಿ[೩]ಷ್ಯನ ಭವಚ್ಛೇದನಂ ಮಾಡಿ,
ಚೌಕಮಧ್ಯದಲ್ಲಿ ಕುಳ್ಳಿರಿಸಿ,

೧–೧ x (ಮೂ), ೨–೨ ನಿಂದಿರಿಸಿ (ಮೂ), ೩–೩ ತತ್ಶಿ (ಮೂ).

'ಓಂ ಸ ಮೇ ಕಾಮಾನ್ ಕಾಮ ಕಾಮಾಯ ಮಹ್ಯಂ' ಎಂಬ ಮಂತ್ರದಿಂದ
ಅಗ್ರೋದಕವಂ ತಳಿದು,
ಭಾಳದಲ್ಲಿ ವಿಭೂತಿಯ ಪಟ್ಟಮಂ ಕಟ್ಟಿ,
ಮಸ್ತಕ ಕಳಸದ ಮೇಲೆ ಹಸ್ತವನ್ನಿಳಿಹಿ,
ಶತಪತ್ರಕಮಳದೊಳಗಿಪ್ಪ ಮಾನಸಪೃಥ್ವಿಯಿಂದ, ಪ್ರಾಣಲಿಂಗಸ್ಥಳಮಂ ತೋಱಿ,
ಸ್ಥಾವರ ಪೂಜೆಯಂ ಮಾ[೧]ಣಿ[೧]ಸಿ,
ಎನ್ನ ಕೃತಾರ್ಥನಂ ಮಾಡಿದ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಸಂಗನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ. ॥ ೧೪ ॥[೬೩೪]

ಇಂತಪ್ಪ ಗುರುಲಿಂಗದಲ್ಲಿ ಅವಧಾನಿಯಾಗಿಪ್ಪ ಪ್ರಸಾದಿಯ ಶಿವಲಿಂಗ. ಆ ಸ್ಥಲದನುಭಾವದ ವಚನ :

[೨]ಪ್ರಸಾದಿಯ ಶಿವಲಿಂಗಸ್ಥಲ:[೨]

೧೧೮
ಪರುಷದ ಲಿಂಗವಿದ್ದುದ ಕಾಣಲಱಿಯದೆ,
ಇಷ್ಟಲಿಂಗ ಬಿದ್ದಿತ್ತೆಂದು ಶಸ್ತ್ರವನಿಕ್ಕಿಕೊಂಡು ಸಾವರು.
ಅರಿದರಿದು ಗುರುಶಿಷ್ಯ ಸಂಬಂಧವು,
ಅಱಿವುಳ್ಳವರಿಗಲ್ಲದೆ ಮತ್ತಾರಿಗೆಯೂ ಆಗದು.
ಕುಱುಹು ಘನವೋ ? ಲಿಂಗ ಘನವೋ ? ಅಱಿವುಳ್ಳವರು ಹೇಳಿರೇ.
ಮಱಹು ಕವಿದೂದೆಂದು ಶ್ರೀಗುರು ಕುಱುಹ ತೋರಿದನಲ್ಲದೆ
ಅಱಿವ ಮಱೆದರೆ ಕೂಡಲ ಚೆನ್ನಸಂಗನವನಂದೆ ದೂರ. । ೧೫ । [೬೫೨]

೧೧೯
ಪ್ರತಿಯಿಲ್ಲದ ಲಿಂಗ[೩]ವು[೩] ಭಿನ್ನವಾಯಿತ್ತೆಂದು
ತನುವಿನ ಮೇಲೆ ಶಸ್ತ್ರವನಿಕ್ಕಿಕೊಂಬ
ಆತ್ಮದ್ರೋಹಿಯ ಮುಖವ ನೋಡಲಾಗದು.
ಮಂತ್ರಭಿನ್ನವಿಲ್ಲವಾಗಿ ಪೂಜೆ ಭಿನ್ನವಿಲ್ಲ.
ಮಹಾಬಯಲೊಳಗಣ ಪ್ರಾಣದ ಸಂಚವನಱಿಯರಾಗಿ,
ಕೂಡಲ ಚೆನ್ನಸಂಗಯ್ಯನಲ್ಲಿ ರೌರವನರಕ. । ೧೬ । [೬೫೩]

೧-೧ ಡಿ (ಮೂ), ೨-೨ x (ಮೂ), ೩-೩ ವ (ಮೂ).

೧೨೦

ಸದ್ಗುರು ಕಾರುಣ್ಯವುಳ್ಳ ಭಕ್ತರ ಲಿಂಗ ಓಸರಿಸಿದರೆ
ವ್ರತಗೇಡಿ[೧]ಯೆಂದು[೧] ಕೆಳೆಯಬಾರದು, ಕೊ[೨]ಲ[೨]ಬಾರದು, ಕಾರಣವುಂಟಾಗಿ.
'ಸುವ್ರತಂ ಸುಲಭಂ ಸಿದ್ಧಂ ಸಹಸ್ರಜೀವನ ಪಾವನಂ' ಎಂದುದಾಗಿ.
ಅಲಿಂಗೀ ಲಿಂಗರೂಪೇಣ ಯೋ ಲಿಂಗಮುಪಜೀವತಿ ।
ಸ ಪಚ್ಯತೇ ಮಹಾಘೋರೇ ನರಕೇ ಕಾಲಮಕ್ಷಯಂ ॥ ಎಂದುದಾಗಿ
ಶಸ್ತ್ರ ಸಮಾಧಿ ಜಲಾಂತ ವನಾಂತ ದಿಗುಬಲಿ ದಹನ–
ಈ ಆಱಱಲ್ಲಿ ಸತ್ತಡೆ ಅಘೋರನರಕದಲ್ಲಿಕ್ಕುವ
ಕೂಡಲ ಚೆನ್ನಸಂಗಮದೇವ. । ೧೭ । [೬೫೪]

೧೨೧

ಭಾಷೆಗೇಱಿಸಿ ತನುವಿಂಗಲಗಂ ಕೊಂಡರೆ ಲಿಂಗ ಓಸರಿಸಿತ್ತಯ್ಯಾ.
ಆತ ವೀರನೆನಿಸುವ,
ಲಿಂಗಕ್ಕೆ ದೂರ, ಜಂಗಮಕ್ಕೆ ದೂರ,
ಪ್ರಸಾದಕ್ಕೆ ದೂರವಾಗಿ ವ್ರತಗೇಡಿ[೩]ಯಪ್ಪ.[೩]
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಬ್ರಹ್ಮೇತಿಕಾಱನೆನಿಸುವ. । ೧೮ । [೬೫೫]

೧೨೨

ಭಾಷೆ ತಪ್ಪಿದ ತನುವಿಂಗೆ ಅಲಗ ಕಿತ್ತರೆ ಲಿಂಗ ಓಸರಿಸುವ,
ಮುಂದೆ ವೀರನಪ್ಪ.
ಇಂಥ ಭಾಷೆವಂತ[೪] ಶರಣನಲ್ಲ,
ಕಲ್ಪಿತಾಕಾರನಲ್ಲ, ಪೂರ್ವಾಶ್ರಯ[೫]ನ[೫]ಲ್ಲ.
ಉಭಯಕುಳರಹಿತ ಕೂಡಲ ಚೆನ್ನಸಂಗಾ, ನಿಮ್ಮ ಶರಣ. । ೧೯ । [೬೫೩]

೧೨೩

ಅಂಗದ ಮೇಲಣ ಲಿಂಗ ಹಿಂಗಿತ್ತೆಂದು,
ಆತ್ಮಘಾತವ ಮಾಡಬೇಕೆಂಬ ಅಜ್ಞಾನಿಗಳು,
ಅಂಗವಾವುದು, ಲಿಂಗವಾವುದೆಂದಱಿಯರು.

೧-೧ x (ಮೂ), ೨-೨ ಳ (ಮೂ), ೩-೩ ಯಾಗಿ (ಮೂ), ೪+ ನೆ (ಮೂ), ೫-೫ ವಿ (ಮೂ).

ಅಂಗವೇ ಆತ್ಮ, ಲಿಂಗವೇ ⁱಸ⁾ಂವಿತ್ತು.
ಈ ಎರಡರ ಸಂಬಂಧದ ಸಂಚವ ತಿಳಿಯದೆ
ಅಂಗ ಲಿಂಗ ಹಿಂಗಿತ್ತೆಂಬವರಿಗೆ ಪ್ರಾಣಲಿಂಗನಾಸ್ತಿ,
ಪ್ರಸಾದವೆಲ್ಲಿಯದೋ ಕೂಡಲ ಚೆನ್ನಸಂಗಮದೇವಾ. । ೨೦ । [೬೫೭]

೧೨೪
ದೇವರು ಬಿದ್ದರು, ದೇವರು ಬಿದ್ದರೆಂದು
ಸಾಹಿತ್ಯದ ಕೂಡ ಸಾಯಬೇಕೆಂಬಿರಿ.
ಆವಾಗ ಬಿದ್ದಿತ್ತೆಂದಱಿಯಿರಿ, ಆವಾಗ ಇದ್ದಿತೆಂದಱಿಯಿರಿ.
ಆವಾಗ ಇದ್ದಿತ್ತು, ಆವಾಗ ಬಿದ್ದಿತ್ತು,
ಎಂದು ಬಲ್ಲರೆ ನೀವು ಹೇಳಿರೆ?
ಅದೃಶ್ಯಭಾವನೋ ನಾಸ್ತಿ ದೃಶ್ಯಮೇವ ವಿನಶ್ಯತಿ ।
ಅವರ್ಣಮಕ್ಷರಂ ಬ್ರಹ್ಮ ಕಥಂ ಧ್ಯಾಯಂತಿ ಯೋಗಿನಃ ॥
ಎಂದುದಾಗಿ, ಇದು ಕಾರಣ ಕೂಡಲ ಚೆನ್ನಸಂಗಯ್ಯನ
ಅಱಿದಾಗಲಿದ್ದಿತ್ತು, ಮಱೆದಾಗ ಬಿದ್ದಿತ್ತು. । ೨೧ । [೬೫೮]

೧೨೫
ಉಭಯದಳವು ನಡೆದುಬಂದು, ಮುಂದೆ ನಿಂದಿರ್ದು,
ಭಾಷೆಯಾಗಿ ಬಿರಿದನುಚ್ಚರಿಸುತ್ತ ಹೊಯಿಕುಟ್ಟಿಯಾಡುವ
ಕಾಳಗದೊಳಗೆ ಕೈದು ಬಿದ್ದರೆ ಭಂಗವಲ್ಲದೆ
ಶಸ್ತ್ರಸಾಧಕವ ಕಲಿತೇನೆಂದು
ಅಭ್ಯಾಸಮಾಡುವ ಅಭ್ಯಾಸದೊಳಗೆ ಕೋಲು ಬಿದ್ದರೆ ಭಂಗವೇ?
ಅಲ್ಲ, ಮತ್ತೆ ಮರಳಿ ಕೋಲ ಕಳೆದುಕೊಂಡು
ಅಭ್ಯಾಸವ ಮಾಡುವುದೇ ಉಚಿತವಲ್ಲದೆ
ನಾನಿನ್ನು ಅಭ್ಯಾಸವ ಮಾಡಲಾಗದು,
ಕೋಲು ಬಿದ್ದಿತ್ತೆಂಬ ಗಾವಿಲರ ಮಾತ ಕೇಳಲಾಗದು.
ದೃಷ್ಟವೆ ಕೋಲು, ಅದೃಷ್ಟವೆ ಕೈದು.
ಕಾಣಬಾರದ ಲಿಂಗವ ಕಾಬುದು ತನ್ನ ಸತ್ಕ್ರೀ ಕಾಣಾ
ಕೂಡಲ ಚೆನ್ನಸಂಗಯ್ಯ. । ೨೨ । [೬೫೯]

೧-೧ ಸಾ (ಮೂ).

೧೨೬
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಲಾಗದು,
ಮಾಡಿದರು ಮಾಡಿರಿ, ಬೇಡಿ ಮಾಡಲಾಗದು.
ಬೇಡಿ ಮಾಡಿದ ಭಕ್ತಿ ಈಡಾಗಲಱಿಯದು
ಕೂಡಲ ಚೆನ್ನಸಂಗಯ್ಯಾ. ।೨೩।[೬೬೦]

೧೨೭
ಭಕ್ತಿ[೧]ಯಂ[೧]ತುಟಲ್ಲ, ಯುಕ್ತಿ[೧]ಯಂ[೧]ತುಟಲ್ಲ, ಮುಕ್ತಿಯ ಪರಿ ಬೇಱೆ.
ವೀರವೈರಾಗ್ಯದ ಭಾಷೆಯಂತುಟಲ್ಲ, ಸಹಜದ ಪರಿ ಬೇಱೆ.
ಅಂಗ ಲಿಂಗ ಸಂಬಂಧವು ಸಾರಾಯಂಗಲ್ಲದೆ,
ಸುಪ್ರಸಾದ ಗ್ರಾಹಕತ್ವ ಪ್ರಾಣಲಿಂಗಿಗಲ್ಲದೆ
ಪರಿತಃ ಪ್ರಾಣಲಿಂಗೀನಾಂ ಲಿಂಗಪ್ರಾಣ ತದುತ್ತಮಂ ।
ಸ್ವಯಮಾತ್ಮವಧಂ ಕುರ್ವಾನ್ ನರಕೇ ಕಾಲಮಕ್ಷಯಂ ॥
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ನಿಮ್ಮ ಸಂಬಂಧಸಾರಾಯ ಸುಪ್ರಸಾದ ಪ್ರಾಣನಿಯತ ಲಿಂಗಪ್ರಾಣಿಗಲ್ಲದೆ
ಮತ್ತೆಲ್ಲರಿಗೆಲ್ಲಿಯದೊ? ।೨೪।[೬೬೧]

೧೨೮
ಹರಿ ಬ್ರಹ್ಮ ಇಂದ್ರ ಚಂದ್ರ ರವಿ ಕಾಲ ಕಾಮ ದಕ್ಷ
ಇವರೊಳಗಾದ ಸಮಸ್ತ ದೇವ ದಾನವ ಮಾನವರೆಲ್ಲರು
ಶಿವಲಿಂಗದೇವರನಾರಾಧಿಸಿಹೆವೆಂದು,
ಜಪ ಧ್ಯಾನ ಮೌನಾದಿ ತಪ ನಾನಾವ್ರತನೇಮಂಗಳಂ ಕೈಕೊಂಡು,
ಅರ್ಚನೆ ಪೂಜನೆಯಂ ಮಾಡಿ, ಹಲವು ಪ್ರಕಾರದಿಂದೊಲಿಸಿ,
ಅನೇಕ ಫಲಪದಮುಕ್ತಿಯಂ ಪಡೆದು ಭೋಗಿಸಿ,
ಸುಖಿಯಾಗಿರುತಿಹುದಕ್ಕೆ ಸಂಶಯವೇಕೆ ?
ಶ್ರುತದೃಷ್ಟ ಅನುಮಾನದಿಂ ತಿಳಿದುನೋಡಿ,
ಅದಕೇನೂ ಸಂದೇಹಂಬಡಲಿಲ್ಲಯ್ಯಾ.

೧-೧ ಯಿಂ (ಮೂ).

ಎರಡಲ್ಲದೆ ಏಕವಾ[೧]ದ,[೧] ಭಿನ್ನದೋಱದೆ ಶಿವನಂಗವಾದ
ಶಿವಭಕ್ತನು ಇವರಂತೆ ಅಲ್ಲ.
ಜಪ ತಪ ಧ್ಯಾನ ಮೌನ ನಾನಾವ್ರತನಿಯಮಂಗಳಂ ಕೈಕೊಂಡು,
ಅರ್ಚನೆ ಪೂಜನೆಯಂ ಮಾಡಿ, ಹಲವು ಪ್ರಕಾರದಿಂದೊಲಿಸಿ,
ಅನೇಕ ಫಲಪದಮುಕ್ತಿಯ ಪಡೆದೆಹೆವೆಂದು ಅಲ್ಪಾಶೆವಿಡಿದು,
ಭ್ರಮೆಗೊಳಗಾದ ಮರ್ಕಟಮನದ ಪರಿಯ ನೋಡಾ.
ಶಿವ ಶಿವ ಮಹಾದೇವಾ! ಮಹಾವಸ್ತುವಿನಲ್ಲಿ ಭೇದವಿಲ್ಲದಿಪ್ಪ
ಅಭೇದ್ಯಶರಣಂಗೆ ಜಪದ ನೇಮವೆಲ್ಲಿಯದೋ?
ಜಪದ ಫಲ ಕೈಸಾರಿದಂಗೆ ಧ್ಯಾನಮೌನವೆಲ್ಲಿಯದು?
ಧ್ಯಾನದ ದೇಹ ಅಳವಟ್ಟು ಆನಂದಿಪಂಗೆ ತಪದ ತಗಹೆಲ್ಲಿಯದು?
ಇಹಪರವೆಂಬ ಇದ್ದೆಸೆಗೆಟ್ಟಂಗೆ ವ್ರತನೇಮದ ನೋಂಪಿಯ ಸೂತಕವೆಲ್ಲಿಯದು?
ಉದ್ಯಾಪನೆಯಂ ಮಾಡಿ, ಮಹಾಪುರುಷನಂ ಪಡೆದು,
ತೆಱಹಿಲ್ಲದೆ ಪತಿಭಕ್ತಿಯ ಮಾಡುವ ಸಜ್ಜನ ಸತಿಗೆ
ಅರ್ಚನೆ ಪೂಜನೆಯಂ ಮಾಡುವ ಸಂಭ್ರಮ ದಂದುಗವೆಲ್ಲಿಯದೊ?
ತನು ಮನ ಧನ ಮುಂತಾದುವೆಲ್ಲವು ಶಿವನೊಡವೆಯೆಂದು ಮಾಡುವ ಸದ್ಭಕ್ತಂಗೆ
ಆವಾಗವೂ ಶಿವನ ಸೇವೆಯ ಮಾಡುವ ಕೈಗಳಿಗೆ,
ಮಣಿಯ ಹಿಡಿದು ತಿರುಹಬೇಕೆಂಬ ಕೋಟಲೆಗೊಳಗಾಗಲೇಕೆ?
ಅನುಶ್ರುತವು ನೆನೆವ ಮನದ ನೆನಹ ಬಿಡಿಸಿ
ಎಣಿಕೆಗಿಕ್ಕಿ ಸಂದೇಹಿಸುವ ಸಂಚಲವೇಕೆ?
ಅನಿಮಿಷನಾಗಿ ನೋಡುವ ದೃಷ್ಟಿಗೆ
ಎವೆಯ ಮಱೆಮಾಡಿಕೊಂಡು ಕಣ್ಣಮುಚ್ಚಲೇತಕೆ?
ಕಣ್ಣು ಮನ ಕೈಯು ತ್ರಿಸ್ಥಾನದಲ್ಲಿರಿಸಲಱಿಯದೆ,
ಭೇದವ ಮಾಡಿ ಅಗಲಿಸುವ ಜಪ ತಾನೇಕೆ?
ಪರಿಪೂರ್ಣವಾಗಿಹ ಸರ್ವಪದನೀವ ಸ್ವತಂತ್ರ[೨] ಪರಾತ್ಪರವಸ್ತುವನಗಲಿ,
ದೂರಕಿಕ್ಕಿ ಎಡದೆಱಹಮಾಡಿ ಖಂಡಿಸಿಹೆನೆಂಬ ಧ್ಯಾನಮೌನವೇಕೆ?
ಸಾಮರ್ಥ್ಯತನವನುಳ್ಳ ಮಹಾಪದದೊಳಗಿದ್ದು
ಅಲ್ಪಪದವ ಸಾಧಿಸೇನೆಂದು ಕಾಯವ ದಂಡಿಸಿ ಆತ್ಮನಿಗ್ರಹವ ಮಾಡಿ,
ಬಟ್ಟೆಗುತ್ತಗೆತನವ ಹಣ್ಣಿ,
ತಗಹಿನಲ್ಲಿ ಕುಳ್ಳಿರ್ದು ಬೇಡಿಕೊಂಬ ತಪ ತಾನೇಕೆ?

೧-೧ ಗದೆ (ಮೂ), ೨+ ಕೆ (ಮೂ).

ಮುಟ್ಟಿತ್ತೆಲ್ಲ ಪವಿತ್ರ, ನೋಡಿತ್ತೆಲ್ಲ ಪಾವನ,
ನಿರ್ಮಾಯವೆಂಬ ನಿರ್ಮಳಾಂಗ
ನಿತ್ಯ ಶುದ್ಧದಾಸೋಹದೊಳಿರುತ ಸೂತಕ ಬಿಡದು.
ಜಡಕ್ರೀಯಿಂದ ಭಾಷೆಗೊಡಲ ನೀ ಗುಜೆಮಾಡಿ
ಮೀಸಲಾಗಿಹ ಪ್ರಾಣವನಿಜೆದುಕೊಂಡು,
ಸಾವ ಸಂಕಲ್ಪವ್ರತನೇಮವೇಕೆ?
ಪೂಜೆಯು ಪೂಜ್ಯನು ಪೂಜಿಸುವವ
– ಈ ತ್ರಿವಿಧದೋಜೆಯ ಸೂತ್ರಾತ್ಮಕ ತಾನೆ ಎಂಬ ಹವಣನಜೆದು,
ಅಜೆವಿಂಗಾಶ್ರಯವಾಗಿರಲಜೆಯದೆ, ನಾನಾ ಪರಿಯಿಂದ ಒಲಿಸಿ ಮೆಚ್ಚಿಸಿ,
ಸ್ವರ್ಗಾದಿಭೋಗ ಧರ್ಮಕರ್ಮವನುಂಬ ಕೈಕೂಲಿಕಾಜಕರ್ಮಿಗಳಂತೆ
ಮಾಡುವ ಅರ್ಚನೆ ಪೂಜನೆಯಾಯಸವೇಕೆ?
ಜಪದ ಜಾಡ್ಯದ ಜಂಜಡದವನಲ್ಲ,
ಧ್ಯಾನ ಮೌನದಿಂದ ಬಿಗಿದು ಬೆಜೆತಿಹ ಬಂಧನದವನಲ್ಲ,
ತಪದ ದಂಡನೆಯ ತಗಹಿನವನಲ್ಲ, ವ್ರತನೇಮದ ಸೂತಕಿಯಲ್ಲ,
ಅರ್ಚನೆ ಪೂಜನೆಯ ಫಲದಾಯಕನಲ್ಲ,
ಹರಕೆಗೆ ಹವಣಿಸಿ ಬಜೆದಹನಲ್ಲ.
ನೆವದಿಂದ ತದ್ದಿನವ ಮಾಡಬೇಕೆಂಬ ಉದ್ದೇಶಿಯಲ್ಲ,
ವರುಷಕ್ಕೊಂದು ತಿಥಿಯೆಂದು ಕೂಡಿಮಾಡುವ ಕೀರ್ತಿವಾರ್ತೆಗೆ
ಮುಯ್ಯಾನುವನಲ್ಲ, ಮಿಕ್ಕಾದ ಕಿರುಕೂಳ ಬಾಧೆ
ಆದಿವಿಡಿಯದ ಸಹಜಸಂತೋಷಿ, ಸರ್ವಾಂಗದೊಳ್ತನ್ಮಯನಾಗಿರುತ್ತ ಭಿನ್ನವೇಕೆ?
ಹಾಲಸಾಗರದೊಳಗೋಲಾಡುತಿರ್ದು ಓರೆಯಾವಿನ ಬೆನ್ನ ಹರಿವನಲ್ಲ,
ಪರುಷದ ಗಿರಿ ಕೈಸಾರಲು, ನಾಡಮಣ್ಣ ಕೂಡಲಿಕ್ಕಿ ತೊಳೆದು,
ಹಾಗವ ಸಾಧಿಸಬೇಕೆಂಬ ಧಾವತಿ[೧]ಯವನ[೧]ಲ್ಲ,
ಅತ್ಯಂತ ಸ್ನೇಹದಿಂದಲ್ಲಿ ನೆನಹಿನಲ್ಲಿ, ಮನಕ್ಕೆ ಬಂದು ನೆಲೆಗೊಂಡಿರುತ್ತಿರಲು,
ಆಹಾ! ಪುಣ್ಯವೆಯೆಂದು, ಕ್ರೀಡಿಸುವ ರತಿಸುಖವಂ ಬಿಟ್ಟು,
ನೆನ[೨]ಹಿನ ಆಸೆಯಿಂದ[೨] ತೊಳಲಿ ಬಳಲುವ ಮಜಹಿಲ್ಲ,
ಕೆಲವು ಮತದವರಂತೆ ಕಂಡೆನೆಂದಜಿಸಿ ಆಡುವನಲ್ಲ,
ಕೆಲವು ಮತದವರಂತೆ ತೆಜಪಿಟ್ಟು ಅಜಸಲುಂಟೆ?
ತಾನಲ್ಲದನ್ಯವಿಲ್ಲವೆಂದು ಅಹಂಕರಿಸಿ ಬೆಜೆವವನಲ್ಲ.

೧–೧ ಯಿ (ಮೂ), ೨–೨ ಹದರಾಸೆಯೆಂಬ (ಮೂ).

ಮತ್ತೆ ಉಳಿದಾದ ಕಾರುಮತದ ಸೊಗಸಿಗೆಳಸನಾಗಿ
ಹೊಲಬುಗೆಡುವವನಲ್ಲ,
ಹೊತ್ತುದ ಹುಸಿ ಮಾಡಿ ಮತ್ತೆ ಉಂಟೆಂದು ಭೇದವ ಮಾಡುವ
ದುಷ್ಟದುಷ್ಕರ್ಮಿಗಳ ಪರಿಯವನಲ್ಲ,
ಮಾಡಿಹೆನೆಂಬ ಸಂಸಾರದ ಬಂಧನದ[೧]ವನ[೧]ಲ್ಲ,
ಮಾಡಲೊಲ್ಲೆನೆಂಬ ವಿಕಳವಾವರಿಸಿಹ ವೈರಾಗ್ಯದ ಉದಾಸೀನದವನಲ್ಲ,
[೨]ಋತು[೨]ವುಳ್ಳ ಸತಿಯ ರತಿಕೂಟದಂತೆ
ಅಗಲಿಕೆಯಿಲ್ಲದ ಸುಖದ ಸಂಯೋಗದ ನೆಲೆಯನಱಿದಾತಂಗೆ,
ಮಾಡುವಾತ ತಾನು, ಮಾಡಿಸಿಕೊಂಬಾತ ತಾನು,
ಸೋಹ ದಾಸೋಹ ತಾನೆಂದು ಬೇಱಿನ್ನದೆ
ದಾತೃ ಭೋಕ್ತೃ ಶಿವನೊಬ್ಬನಲ್ಲದೆ
ಬೇಱೆ ಬೇಱೆ ತಮತಮಗೆ ಒಡೆಯರುಂಟೆ? [೩]ಇಲ್ಲ.[೩]
ಆದಿಪರಶಿವ ತಾನೆ ಎಂದು ಮಾಡುವ ಮಾಟ
ಸಟೆಯಿಲ್ಲದೆ ದಿಟ [೪]ಘಟಿಸಿ[೪] ಸಯವಾಗಿ ನಿಂದು,
ನಿರಾಶೆಯ ಕುಳದನುವನಱಿತು,
ನಿಜವೆಡೆಗೊಂಡ ನಿಲವ ಪ್ರಮಾಣಿಸಿ ಕಾಬಂತೆ
ಮಾಡಬೇಕೆಂದು ದ್ರವ್ಯವ ಸಂಕಲ್ಪಿಸಿ ಕೊಟ್ಟವರಾರು?
ಮಾಡಬೇಕೆಂಬ ಅಱಿವಿನ ಜ್ಞಾನವ ಕಣ್ದೆಱೆದವರಾರು?
ಮಾಡುವೆನೆಂದು ನೆನೆವ ಚೇತನದ ಪ್ರಾಣವ ತಂದಿರಿಸಿದವರಾರು?
ಮಾಡಿಹೆನೆಂಬ, ಮಾಡಬೇಕೆಂಬ, ಮಾಡುವ,
ಇವನೆಲ್ಲವ ಅಳವಡಿಸಿಕೊಂಡಿಹ ಕಾಯವ ರೂಪಿಸಿದವರಾರು?
ಆದಿಯಿಂದವೆ ನುಡಿದು ನಡೆದು ರೂಪಾಗಿ ಪ್ರಭಾವಿಸಿ
ವ್ಯಾಪಾರಕ್ಕೆ ಸಂದೆವೆಂಬ ಹವಣಗಾಣರು,
ಬಱಿಯ ವಳಾವಳಿಯಿಂದ ನಾ ಮಾಡಿದೆನೆಂದು ಪ್ರತಿಜ್ಞೆಯಂ ಕೈಕೊಂಡು,
ಇಲ್ಲದುದನುಂಟು ಮಾಡಿ ಪಡೆದು ಸಾಧಿಸಿಹೆನೆಂಬ
ಬಯಕೆಯ ಸಂಭ್ರಮದಾಯಸ ತಲೆಗೇಱಿ.

೧-೧ x(ಮೂ), ೨-೨ ರೀತಿ (ಮೂ), ೩-೩ x(ಮೂ). ೪-೪ ಪುಟ್ಟಿಸಿ (ಮೂ).

ಉಬ್ಬಿ ಹರಿದಾಡುವ ಅವಿಚಾರದ ಮನದ ಮಱವೆ ಬಲಿದ
ಇರವಿನ ಪರಿಯ ನೋಡಾ ಶಿವ ಮಹಾದೇವಾ!
ಶಿವ ತನ್ನ ಲೀಲಾವಿನೋದಕ್ಕೆ ಸಕಲವನು ರೂಪಿಸಿ ಆಗುಮಾಡಿಕೊಂಡಿರುತ್ತಿರಲು
ಹುಚ್ಚುಗೊಂಡಂತೆ ಎಲ್ಲವೂ ನನ್ನಿಂದಾಯಿತ್ತು, ನಾ ಮಾಡಿದೆನೆಂದು
ಉಲಿವ ದೇಹಿಯ ಇನ್ನೇನೆನಬಹುದಯ್ಯ?
ಅವರಿಂದಾದ ಒಡವೆಯ ಅವರಿಗೆ ಈವುತ್ತ ಉಪಚರಿಯವೆ?
ನದಿಯುದಕವ ನದಿಗರ್ಪಿಸುವಂತೆ
ಒಡೆಯಂಗೊಡವೆಯನರ್ಪಿಸಿ ತಾ ಶುದ್ಧನಾಗಿ,
ನಡೆನುಡಿಯಲ್ಲಿ ಕವಲುದೋಱದೆ ತನ್ನಲ್ಲಿ ತಾನೆ ತಿಳಿದು ಘನವೆಡೆಗೊಂಡು,
ಮಹಾನುಭಾವಿಗಳು ಎಲ್ಲವನಳವಡಿಸಿಕೊಂಡಿಹ ಕಾಯವ ಗುರುವೆಂದೆ ಸಾಧಿಸಿದ,
ನೆನೆವ ಚೇತನದ ಪ್ರಾಣವ ಲಿಂಗವೆಂದೆ ಭಾವಿಸಿದ,
ಅಱವಿನ ಜ್ಞಾನವ ಜಂಗಮವೆಂದೆ ಅಱದನಯ್ಯಾ
ನಮ್ಮ ಕೂಡಲ ಚೆನ್ನಸಂಗಮದೇವರು. । ೨೫ । [೬೬೨]

ಇಂತು ಶಿವಲಿಂಗದಲ್ಲಿ ಅವಧಾನಿಯಾದ ಪ್ರಸಾದಿಯು ಜಂಗಮಲಿಂಗ, ಆ ಸ್ಥಲದನುಭಾವದ ವಚನ:

ಪ್ರಸಾದಿಯ ಜಂಗಮಲಿಂಗಸ್ಥಲ :

೧೨೯
ಅನುಶ್ರುತವು ಮಾಡಿಹೆನೆಂದು ಉಪ್ಪರಗುಡಿಯನೆತ್ತಿ, ಮಾಡುವ
ಭಕ್ತನ ಮನೆ ಅಟ್ಟಿಕ್ಕುವ ಲಂದಣಗಿತ್ತಿಯ ಮನೆ.
ಸರ್ವಜೀವದೊಳಗೆ ಚೈತನ್ಯಾತ್ಮಕ ಶಿವನೆಂದು ಮಾಡುವುದು,
ಭೂತದಯಕಿಕ್ಕುವುದು ಸಯದಾನದ ಕೇಡು.
ಸೂಳೆಯ ಮಗನಾಗಿ ಮಹಳವನಿಕ್ಕುವಡೆ ತಾಯ ಹೆಸರಾಯಿತ್ತು,
ತಂದೆಯ ಹೆಸರಿಲ್ಲ, ಕೂಡಲ ಚೆನ್ನಸಂಗಮದೇವಾ. । ೨೬ । [೬೮೬]

೧೩೦
ವರ್ಮವಿಡಿದು ಮಾಡುವಂಗೆ ಕರ್ಮವಿಲ್ಲ,
ಹೆಮ್ಮೆಗೆ ಮಾಡುವನ ವಿಧಿಯ ನೋಡಾ!
ಸಜ್ಜನ ಸದಾಚಾರವಱದು ಮಾಡುವನು
ಕೂಡಲ ಚೆನ್ನಸಂಗಯ್ಯನ ಶರಣ, ನಮ್ಮ ಬಸವಣ್ಣನು. । ೨೭ । [೬೮೭]

೧೩೧
ಮಾಡುವರಯ್ಯಾ, ಮಾಡುವರಯ್ಯಾ, ಮರಳುಗೊಂಡಂತೆ.
ವರ್ಮವಱಿಯದ ಮಾಟ
ಸಯದಾನದ ಕೇಡು, ಕರ್ಮದ ಬೆಳಸು.
ಕೂಡಲ ಚೆನ್ನಸಂಗನ ಶರಣರ ಅನುವನಱಿದು
ಮಾಡದ ಮಾಟ, ಭವದ ಮಾಟ. । ೨೮ । [೬೮೮]

೧೩೨
ಅನ್ನವನಿಕ್ಕಿದರೇನು ಪುಣ್ಯವಹುದು,
ವಸ್ತ್ರವ ಕೊಟ್ಟರೇನು ಧರ್ಮವಹುದು,
ಹಣವ ಕೊಟ್ಟರೇನು ಶ್ರೀಯಹುದು,
ತ್ರಿಕರಣಶುದ್ಧವಾದರೆ ಮುಕ್ತಿಯಹುದು,
ಕೂಡಲ ಚೆನ್ನಸಂಗಯ್ಯಾ. । ೨೯ । [೬೮೯]

೧೩೩
ಅತಿ ಚಪಳಿಗ ಜಂಗಮ ಸಂಸಾರಿಯಾದ,
ಭಕ್ತ ನಿಃಸಂಸಾರಿಯಾದ.
ವೀರವೈರಾಗ್ಯವು, ಆ ಸಂಸಾರನಿಷ್ಠೆಯು ಒಂದಾದರೆ ತೆಱಹಿಲ್ಲ
ಕೂಡಲ ಚೆನ್ನಸಂಗಾ ನಿಮ್ಮಲ್ಲಿ. । ೩೦ । [೬೯೦]

೧೩೪
ಅಕಾಯೋ ಭಕ್ತಕಾಯಶ್ಚ ಮಮ ಕಾಯಸ್ತು ಭಕ್ತಮಾನ್ ।
ಎಂಬ ಶ್ರುತಿಯನೋದುವರೆ ಎಂತೊ ಭಕ್ತಂಗೆ?
ಮಹಂತೋ ಲಿಂಗರೂಪೇಣ ಮಹಂತೋ ಜಂಗಮಸ್ತಥಾ ।
ಎಂಬ ಶ್ರುತಿಯನೋದುವರೆ ಎಂತೊ ಜಂಗಮಕ್ಕೆ?
ಇಂತೆರಡೊಂದಾದಡೆ ತೆಱಹಿಲ್ಲ
ಕೂಡಲ ಚೆನ್ನಸಂಗಾ ನಿಮ್ಮಲ್ಲಿ. । ೩೧ । [೬೯೧]

೧೩೫
ಅರ್ಥ ಪ್ರಾಣ ಅಭಿಮಾನ ಭಕ್ತಂಗೆ ಹೊಲ್ಲಹವೆಂದೆಂಬರು,
ತಮ್ಮ ಹೊದ್ದಿದ ಮಲಿನವನಱಿಯರು.
ಕರುಳುಕೊಳ್ಳದ ಉದಾನವ ಮರಳಿ ಅರ್ಪಿತವೆಂದು ಕೊಳಬಹುದೆ?

ಬೇಡುವಾತ ಜಂಗಮವಲ್ಲ, ಬೇಡಿಸಿಕೊಂಬಾತ ಭಕ್ತನಲ್ಲ,
ಬೇಡದೆ, ಭಕ್ತ ತನ್ನ ತಾನೆ ಮಾಡಿದ ಮಾಟವ
ಪರಿಣಾಮಿಸಬಲ್ಲಡೆ ಜಂಗಮ.
ಜಂಗಮ ಬೇಡಿಸಿಕೊಳ್ಳದೆ
ಜಂಗಮದ ಇಂಗಿ[೧]ತಾ[೧]ಕಾರವನಱಿತು ಮಾಡಬಲ್ಲಡೆ [೨]ಭಕ್ತ.[೨]
ಓಡಲಾಱದ ಮೃಗವು ಸೊಣಗಂಗೆ ಮಾಂಸವನೀವಂತೆ
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಬೇಡದೆ ಮಾಡುವ ಭಕ್ತನುಂಟಾದರೇನು?
ಬೇಡದೆ ಮಾಡಿಸಿಕೊಂಬ ಜಂಗಮವಪೂರ್ವ. । ೩೨ । [೯೨]

೧೩೬
ಮಾತ ಕಲಿತು, ಮಂಡೆಯ ಬೋಳಿಸಿಕೊಂಡರೇನು?
ವೇಷಲಾಂಛನಧಾರಿಯಾಗಿ ಉದರಪೋಷಕರಪ್ಪರಲ್ಲದೆ,
ಶಿವಾಗಮದ ಸುವಿಚಾರದ ಹೊಲಬನಱಿಯರು ಕಾಣಿರೆ.
ಅಷ್ಟವಿಧಾರ್ಚನೆ ಷೋಡಶೋಪಚಾರಕ್ಕೆ ಸಲ್ಲದು, ಸೀಮೆಯ ಕಲ್ಲು.
ಅನ್ಯರ ಬೋಧಿಸಿ ತನ್ನುದರವ ಹೊರೆವ
ಬಱಿಯ ವೇಷಡಂಬಕರ ಮೆಚ್ಚ ಕೂಡಲ ಚೆನ್ನಸಂಗಮದೇವ. । ೩೩ । [೯೩]

೧೩೭
ಬೇಡುವನೆ ಲಿಂಗಜಂಗಮ? ಬೇಡಿಸಿಕೊಂಬನೆ ಸದ್ಭಕ್ತನು
ಬೇಡಲಾಗದು ಲಿಂಗಜಂಗಮಕ್ಕೆ.
ಬೇಡುವನ್ನಕ್ಕ ಇರದೆ ಮಾಡಬೇಕು ಸಹಜಭಕ್ತನು.
ಇದು ಕಾರಣ, ಹಿರಿಯರು ನರಮಾಂಸವ ಭುಂಜಿಸುವರೆ ಅಯ್ಯಾ!
ತನುವೆತ್ತಿ ಮನವುಬ್ಬಿ ಮಾಡಿದೊಡೆ ಲಿಂಗಾರ್ಪಿತವಾಯಿತ್ತು,
ಅಲ್ಲದಿದ್ದಡೆ ಅನರ್ಪಿತವಾಯಿತ್ತು.
ಇದು ಕಾರಣ, ಕೂಡಲ ಚೆನ್ನಸಂಗಮದೇವಯ್ಯಾ
ಲಕ್ಷಕ್ಕಾದರೂ ಒಬ್ಬ ಭಕ್ತನುಂಟು,
ಕೋಟಿಗಲ್ಲದೆ ಒಬ್ಬ ಜಂಗಮವಿಲ್ಲ. । ೩೪ । [೯೪]

೧–೧ ತ (ಮೂ), ೨–೨ ಭಕ್ತಿ (ಮೂ).

೧೩೮

ಕಲ್ಪಿತದಿಂದ ಮಾಡುವ ಭಕ್ತ ನಿರ್ಧನಿಕನಾದರೆ
ತನ್ನ ಕೈಯ ಧನವ ವೆಚ್ಚಿಸಿ ದಾಸೋಹವ ಮಾಡಿ,
ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯಂ ಮಾಡಿ,
ಅವ[೧]ನ[೧] ದಾಸೋಹಕ್ಕೆ ನಿಲಿಸಿ ತಾ ಕರ್ತನಾಗಿ ನಿಂದು,
ಪರಿಣಾಮಿಸಬಲ್ಲಡೆ ಜಂಗಮವೆಂಬೆ, ಅವಂಗೆ ನಮೋ ನಮೋ.
ಅಂತಲ್ಲದೆ ಮುನ್ನ ಮಾಡಿದಿರಿ. ಈಗ ಮಾಡಿರಿ,
ಇದೇನಿ ಭೋ ಎಂದು ಜರಿದು ಝುಂಕಿಸಿ ಹೋಹವರ
ಜಂಗಮವೆಂಬೆನೆ? ಎನ್ನೆನು.
ಅದೇನು ಕಾರಣವೆಂದರೆ
ಆತ ಸೂನೆಗಾಜಿ, ಆತ ದೋಷಾರ್ಥಿ, ಆತ ಭವಭಾರಿ,
ಕೂಡಲ ಚೆನ್ನಸಂಗಮದೇವಾ. । ೩೫ । [೬೯೫]

೧೩೯

ಗತಿ[೨]ಪದ[೨] ಮುಕ್ತಿಯ ಬಯಸಿ ಮಾಡುವಾತ ಭಕ್ತನಲ್ಲ,
ಜೀವನೋಪಾಯಕ್ಕೆ ಬೇಡುವಾತ ಜಂಗಮವಲ್ಲ.
ಗತಿ[೩]ಪದ[೩] ಮುಕ್ತಿ ಸೂತಕ ವಿರಹಿತ ಭಕ್ತ,
ಹಮ್ಮು ಬಿಮ್ಮು ಗಮನನಾಸ್ತಿ ಜಂಗಮ.
ಮಾಡುವರೆ ಭಕ್ತ ಮಾಟದೊಳಗಿಲ್ಲದಿರಬೇಕು,
ಮಾಡಿಸಿಕೊಂಬಡೆ ಜಂಗಮ ಕೊಂಬುದಱೊಳಗಿ[೪]ಲ್ಲದಿ[೪]ರಬೇಕು,
ಪ್ರಾಣವಿಲ್ಲದ ಭಕ್ತ, ರೂಹಿಲ್ಲದ ಜಂಗಮ.
ಉಭಯಕುಳ ಸಂದಳಿದಡೆ ಭಕ್ತ ಜಂಗಮವೆಂಬೆ
ಕೂಡಲ ಚೆನ್ನಸಂಗಮದೇವಾ. । ೩೬ । [೬೯೬]

೧೪೦

ಭಕ್ತ ಜಂಗಮದ ನುಡಿಗಡಣದ ಮೇಳಾಪವೆಂತಿರಬೇಕೆಂದರೆ,
ಪ್ರಚ್ಛನ್ನವಾಗಿ ಲೋಕಕ್ಕೆ [೫]ಅ[೫]ದೃಶ್ಯವಾಗಿರಬೇಕು,
ಜಲಚರಪಾದಪಥದಂತಿರಬೇಕು, ಶಿಶುಕಂಡ ಕನಸಿನಂತಿರಬೇಕು,

೧–೧ x (ಮೂ), ೨–೨ ಪಥ (ಮೂ), ೩–೩ x (ಮೂ), ೪–೪ x (ಮೂ), ೫–೫ ನ (ಮೂ).

ಮೋನಿಯುಂಡ ರುಚಿಯಂತಿರಬೇಕು,
ಶಿವಾಚಾರಕ್ಕೆ ಇದು ಚಿಹ್ನ,
ಅಂತಲ್ಲದೆ ಹಗರಣದ ವಾದ್ಯದಂತೆ ನಗೆಗೆಡೆಯಾಗುತಿಪ್ಪರು.
ಹೇಮದೊರೆಯ ಮೃತ್ತಿಕೆಯ [೧]ಲೆ[೧]ತ್ತಿದಂತೆ,
ಭೇರುಂಡ ಬಾಯಿವಡೆದಂತೆ ಇಪ್ಪವರ
ಭಕ್ತರೆಂತೆಂಬೆ? ಜಂಗಮವೆಂತೆಂಬೆ?
ಕೂಡಲ ಚೆನ್ನಸಂಗಮದೇವಾ. । ೩೭ । [೬೯೭]

೧೪೧
ಸುಳಿವ ಜಂಗಮ[೨] ಕಾಲಿಲ್ಲದೆ ಸುಳಿಯಬೇಕು,
ಮಾಡುವ ಭಕ್ತ[೩] ಕೈಯಿಲ್ಲದೆ ಮಾಡಬೇಕು.
ಸುಳಿವ ಜಂಗಮಕ್ಕೆ ಕಾಲಿದ್ದರೇನು?
ಅನ್ಯಗೃಹಕ್ಕೆ ಗಮಿಸದಿದ್ದರೆ ಸಾಕು.
ಮಾಡುವ ಭಕ್ತಂಗೆ ಕೈಯಿದ್ದರೇನು?
ಲಿಂಗ ಜಂಗಮಕಲ್ಲದೆ ಮಾಡದಿದ್ದರೆ ಸಾಕು.
ಜಂಗಮಸ್ಯಾಗಮೋ ನಾಸ್ತಿ ಭಕ್ತಸ್ಯ ಗೃಹಮಾಚರೇತ್ ।
ಅನ್ಯಸ್ಯ ಚೇದ್ಗೃಹಂ ಯಾತಿ ಸದ್ಯೋ ಗೋಮಾಂಸಭಕ್ಷಣಂ ॥
ಇದೀಗ ಜಂಗಮ [೪]ಸ್ಥಲ.[೪]
ಸತ್ಪಾತ್ರದಾತೃವಿತ್ತಸ್ಯ ತದ್ಧನಂ ಸ್ವಧನಂ ಸುಖಂ ।
ಅಪಾತ್ರದಾತೃವಿತ್ತಸ್ಯ ತದ್ಧನಂ ತ್ವಸುಖಂ ಭವೇತ್ ॥
ಇದೀಗ ಭಕ್ತ [೪]ಸ್ಥಲ.[೪]
ಇಂತೀ ಉಭಯ ಕುಳಸ್ಥಲವು
ಕೂಡಲ ಚೆನ್ನಸಂಗಯ್ಯನಲ್ಲಿ ಸನ್ಮತವಾದವರಿಗಲ್ಲದಿಲ್ಲ. । ೩೮ । [೬೯೮]

೧೪೨
ಹೊಜಿ ವೇಷದ ವಿಭೂತಿರುದ್ರಾಕ್ಷಿಯನಳವಡಿಸಿಕೊಂಡು
ವೇದಶಾಸ್ತ್ರ ಪುರಾಣ ಪುರಾತರ ವಚನದ ಬಹುಪಾತಕರು,
ಅನ್ನದಾನ ವಸ್ತ್ರದಾನವನೀವನ ಬಾಗಿಲ ಮುಂದೆ
ಮಣ್ಣ ಪುತ್ಥಳಿಯಂತಿಹ ನಿತ್ಯನೇಮದ ಹಿರಿಯರು.

೧–೧ ತೆ (ಮೂ), ೨ x ಕ್ಕೆ (ಮೂ), ೩+ ಂಗೆ (ಮೂ), ೪–೪ x (ಮೂ).

ವಯೋವೃದ್ಧಸ್ತಪೋವೃದ್ಧೋ ವೇದವೃದ್ಧೋ ಬಹುಶ್ರುತಃ ।
ಇತ್ಯೇತೇ ಧನವೃದ್ಧಸ್ಯ ದ್ವಾರೇ ತಿಷ್ಠಂತಿ ಕಿಂಕರಾಃ ॥
ಎಂಬ ಶ್ರುತಿ ದಿಟವಾಯಿತ್ತು.
ಆ ಎಲ್ಲಾ ಅಱಿವು[೧]ಳ್ಳವರು[೧]
ಲಕ್ಷ್ಮಿಯ ದ್ವಾರಪಾಲಕರಾದರು.
ಅಱಿವಿಂಗೆ ಇದು ವಿಧಿಯೇ
ಕೂಡಲ ಚೆನ್ನಸಂಗಯ್ಯಾ ನೀ ಮಾಡಿದ ಮಱಹು. । ೩೯ । [೬೯೯]

೧೪೩

ಸಕಲಪ್ರಾಣಿಗಳಿಗೆ ಲೇಸಾಗಲೆಂದು ಮಜ್ಜನಕ್ಕೆಱೆವ
[೨]ಲಾಂಛನಧಾರಿಯ ವೇಷಕ್ಕೆ ಶರಣೆಂಬೆ,
ಲಾಂಛನದ ಹೆಚ್ಚು ಕುಂದನಱಿಸೆ,[೩]
ಸಕಲಪದಾರ್ಥವ[೪] ತಂದು ಜಂಗಮಕ್ಕೆ ನೀಡುವ ಭಕ್ತಿಯಿಂದ.
ಮನೆಗೆ ಬಂದರೆ ಪರಿಣಾಮವ ಕೊಡುವೆ, ಆತನಿದ್ದೆಡೆಗೆ ಹೋಗೆ.
ಕೂಡಲ ಚೆನ್ನಸಂಗಯ್ಯನಲ್ಲಿ ಅನುವಿಲ್ಲಾಗಿ ಮುನಿದುದಿಲ್ಲ. । ೪೦ । [೭೦೦]

ಇಂತು ಜಂಗಮಲಿಂಗದಲ್ಲಿ ಅವಧಾನಿಯಾದ ಪ್ರಸಾದಿಯ ಪ್ರಸಾದಲಿಂಗ, ಆ ಸ್ಥಲದನುಭಾವದ ವಚನ:

ಪ್ರಸಾದಿಯ ಪ್ರಸಾದಲಿಂಗ :

೧೪೪

ಅಚ್ಚಪ್ರಸಾದಿ ಅಚ್ಚಪ್ರಸಾದಿಯೆಂದು
ನಿಚ್ಚಕ್ಕೆ ಬೊಗಳುವ ಕುನ್ನಿಗಳ ನೋಡಾ!
ಬಱದ ನಾಡಿಂದ ಬಂದ ಬಣಗುಗಳಂತೆ
ಮತ್ತಿಕ್ಕುವರೋ ಇಕ್ಕರೋ ಎಂದು ಒಟ್ಟಿಸಿಕೊಂಡು ತಿಂದು
ಮಿಕ್ಕುದ ಬಿಸುಡುವ ಕುನ್ನಿಗಳ ಮೆಚ್ಚುವನೆ
ನಮ್ಮ ಕೂಡಲ ಚೆನ್ನಸಂಗಮದೇವರು? । ೪೧ । [೭೧೭]

೧-೧ x(ಮೂ) ೨+ ವೇಷ(ಮೂ), ೩+ ಲಾಂಛನಧಾರಿಯಾಗಿ (ಮೂ), ೪+ ತನಗೋಸುಗ (ಮೂ)

೧೪೫

ರೂಹಿಲ್ಲದ ನೆಳಲಿಂಗೆ ಮಳಲಬೊಂಬೆಯ ಮಾಡಿ
ನಾದಬಿಂದುವಿನಲ್ಲಿ ಹುಟ್ಟಿಸಿ ಆರಿಗೆಯೂ ಮೈದೋಱದೆ
ಏಡಿಸಿ ಕಾಡಿತ್ತು ಶಿವನ ಮಾಯವು,
ಕಾಯದ ಕಳವಳಕ್ಕೆ ರೂಪಾಗಿ ಮುಂದೆ ತೋಱಿತ್ತಲ್ಲದೆ,
ಅದು ತನ್ನ ಗುಣವಲ್ಲದೆ ಬೇಱೆ ತೋಱಿತ್ತಿಲ್ಲ.
ಅಂಗಭೋಗವನೆ ಕುಂದಿಸಿ ಪ್ರಸಾದವನೆ ರುಚಿಸೆನೆಂಬ
ಲಿಂಗವಂತರುಗಳೆಲ್ಲರು ಅಱಿವೆಣಗಳಾಗಿ ಹೋದರು.
ಅಂಗಭೋಗವೆ ಲಿಂಗಭೋಗ, ಲಿಂಗಭೋಗವೆ ಅರ್ಪಿತ.
ಸ್ವಕೀಯಂ ಪಾಕಸಂಬಂಧೀ ಭೋಗೋ ಜಂಗಮವರ್ಜಿತಃ ।
ನಾಸ್ತಿ ಲಿಂಗಾರ್ಚನಂ ಚೈವ ಪ್ರಸಾದೋ ನಿಷ್ಫಲೊ ಭವೇತ್ ॥
ಎಂದುದಾಗಿ, ಲಿಂಗಕ್ಕೆ ಬಂದ ರುಚಿ ಜಂಗಮಕ್ಕೆ ಬರದು.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಪಾಕಸಂಬಂಧಿಗೆ ಪ್ರಸಾದ ದೂರ. ।೪೨। [೨೫೮]

೧೪೬

ತನು ಮುಟ್ಟದ ಮುನ್ನ ಲಿಂಗಾರ್ಪಿತವ ಮಾಡಬೇಕು,
ಮನ ಮುಟ್ಟದ ಮುನ್ನ ಲಿಂಗಾರ್ಪಿತವ ಮಾಡಬೇಕು,
ಶ್ರೋತ್ರ ನೇತ್ರ ಜಿಹ್ವೆ ತ್ವಕ್ಕು ಘ್ರಾಣ
ಮುಟ್ಟದ ಮುನ್ನ ಲಿಂಗಾರ್ಪಿತವ ಮಾಡಬೇಕು,
ಕೂಡಲ ಚೆನ್ನಸಂಗಯ್ಯನಲ್ಲಿ ಪ್ರಸಾದಿಯಾದರೆ. ।೪೩। [೭೨೯]

೧೪೭

ಪದಾರ್ಥ ಪದಾರ್ಥವೆಂದೆಂಬಿರಿ, ಪದವಾವುದು ಅರ್ಥವಾವುದೆಂದಱಿ[೧]ಯಿರಿ.[೧]
ಪದವೇ ಲಿಂಗ, ಅರ್ಥವೇ ಭಕ್ತ.
ಇದನಱಿದು ಪದಾರ್ಥವ ತಂದು ಅರ್ಪಿತವ ಮಾಡಬಲ್ಲಡೆ
ಕೂಡಿಕೊಂಡಿಪ್ಪ ನಮ್ಮ ಕೂಡಲ ಚೆನ್ನಸಂಗಮದೇವ. ।೪೪। [೭೩೦]

೧–೧ ಯರು (ಮೂ).

೧೪೮
ಅಚ್ಚಪ್ರಸಾದವೆಂದು ಹುಸಿದು ತನ್ನ ಮನದ ಹವಣಿಗೆ ಗಡಣಿಸಿಕೊಂಬರು,
ತನುಮನ ಮುಟ್ಟಿದೋಗರ ಪ್ರಸಾದವಲ್ಲ, ಲಿಂಗಾರ್ಪಿತಕ್ಕೆ ಸಲ್ಲದು.
ಅನರ್ಪಿತವನುಂಡು ಅಚ್ಚಪ್ರಸಾದಿಗಳೆಂಬವರನು
ಲಿಂಗೈಕ್ಯ ಶರಣರು ಮೆಚ್ಚರು.
ಬಂದ ಪದಾರ್ಥವ
ಕೂಡಲ ಚೆನ್ನಸಂಗಯ್ಯಂಗೆ ಅರ್ಪಿಸಬಲ್ಲಾತನೆ ಪ್ರಸಾದಿ. । ೪೫ । [೭೩೧]

೧೪೯
ಪ್ರಕಟದಿಂದ ಕೊಂಬುದು ಪ್ರಸಾದವಲ್ಲ,
ಗುಪ್ತದಿಂದ ಕೊಂಬುದು ಪ್ರಸಾದವಲ್ಲ,
ಪ್ರಕಟದಂತುಟೆ ಪ್ರಸಾದ? ಗುಪ್ತದಂತುಟೆ ಪ್ರಸಾದ?
ಪ್ರಸಾದದಂತುವನೇನೆಂದುಪಮಿಸುವೆ?
ಭವಭಾರಿಗಳೊಡನೆ ಪ್ರಸಾದದಂತುವ ಏನೆಂದು ಉಪಮಿಸುವೆ?
ನಾರೂಢಸ್ಯ ಪ್ರಸಾದೋಹಿ ನ ಗುಪ್ತಸ್ಯ ಪ್ರಸಾದಕಃ ।
ಗೋಪ್ಯಾರೂಢೋಭಯಂ ನಾಸ್ತಿ ಮಹಾಪ್ರಸಾದಸಂಗಿನಃ ॥
ಎಂದುದಾಗಿ, ಪ್ರಕಟಗುಪ್ತವ ಕಳೆದು ನೆಟ್ಟನೆ ಪ್ರಸಾದವ ಕೊಳಬಲ್ಲಡೆ
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದಿ. । ೪೬ । [೭೩೨]

೧೫೦
ಕಾಯವೇ ಲಿಂಗಾರ್ಪಿತ, ಅರ್ಪಿತವೇ ಪ್ರಸಾದ.
ಅದೆ ಮತ್ತೆ ಮತ್ತೆ ಅರ್ಪಿತ.
ದರುಶನದಿಂದಲಾಯಿತ್ತು, ಸ್ಪರುಷನದಿಂದಲಾಯಿತ್ತು.
ಅರ್ಪಿಸುವ ಸೋಂಕಿನ ಸುಖವ ಅರ್ಪಿಸಲಱಿಯದಿದ್ದರೆ ಭ್ರಾಂತಿ.
ಕೂಡಲ ಚೆನ್ನಸಂಗಯ್ಯನ ಪ್ರಸಾದಿಯ
ಪ್ರಸಾದವನತಿಗಳೆದರೆ ಅದಕ್ಕಿನ್ನೆಂತೊ! । ೪೭ । [೭೩೩]

೧೫೧
ಕ್ಷೀರವ ಸೋಂಕಿದ ಜಲವ ಬೇಱೆ ಮಾಡಬಹುದೆ?
ಪರಿಮಳವ ಸೋಂಕಿದ ವಾಯುವ ವಿವರಿಸಬಹುದೆ?
ಉತ್ತಮಂ ಏಕಭುಕ್ತಂ ಚ ಮಧ್ಯಮಂ ದ್ವಯಸ್ವೀಕೃತಂ ।
ಕನಿಷ್ಠೋऽನರ್ಪಿತಶ್ಚೈವ ಪ್ರಸಾದೋ ನಿಷ್ಫಲೋ ಭವೇತ್ ॥

ಎಂದುದಾಗಿ, ರೂಪಿಂಗೆ ರೂಪನರ್ಪಣೆಯ ಮಾಡಿ,
ರುಚಿಪರಿಮಳಭಾವದತ್ತಲು ಅವಧಾನಿಯಾಗಿಪ್ಪ ನಿಮ್ಮ ಶರಣ.
ಬೇಱೆ ಮತ್ತೆ ಅವಧಾನವಿಲ್ಲದಂತಿಪ್ಪ ಕಾಣಾ
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದಿ. । ೪೮ । [೭೩೪]

೧೫೨

ಸರ್ವದ್ರವ್ಯವ ಅರ್ಪಿತವ ಮಾಡಬೇಕೆಂಬರು,
ಸರ್ವೇಂದ್ರಿಯ ಸನುಮತವಹುದನಱಿಯರು.
ಶ್ರೋತ್ರ ನೇತ್ರ ಜಿಹ್ವೆ ತ್ವಕ್ಕು ಘ್ರಾಣ ಸಹಿತ ಅರ್ಪಿತವ ಮಾಡಬೇಕು.
ಪ್ರಾಣಪ್ರಯಾಣಕಾಲೇಽಪಿ ಸರ್ವಭೋಗೇಷು ಯಸ್ಸದಾ ।
ಅರ್ಪಣೇ ಚಾವಧಾನೀ ಚ ಸ ಲಿಂಗೀ ಪ್ರಾಣನಾಯಕಃ ॥
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ನಿಮ್ಮ ಪ್ರಸಾದಿಗೆ ನಮೋ ನಮೋ ಎಂಬೆನು. । ೪೯ । [೭೩೫]

೧೫೩

ಸೋಂಕಿನ ಸುಖವ ಅರ್ಪಿತಮಾಡಿ
[1]ಅ[1]ಸೋಂಕಿನ ಸುಖವ ಅರ್ಪಿತವ ಮಾಡದೆ ಇದ್ದರೆ,
ಪ್ರಸಾದಿಯಲ್ಲ, ಶರಣನಲ್ಲ, ಐಕ್ಯನಲ್ಲ.
ಸಂಯೋಗೆ ಚ ವಿಯೋಗೆ ಚ ಅಣುಮಾತ್ರಂ ಸುಖಾರ್ಪಣಂ ।
ಯಃ ಕುರ್ಯಾದಿಷ್ಟಲಿಂಗೇ ತು ಸೋಽವಧಾನೀ ನಿರಂತರಂ ॥
ಇದು ಕಾರಣ, ಕೂಡಲ ಚೆನ್ನಸಂಗಾ
ನಿಮ್ಮ ಪ್ರಸಾದಿಗೆ ನಮೋ ನಮೋ ಎಂಬೆನು. । ೫೦ । [೩೭೬]

೧೫೪

ಅಂಗದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಸಂಗವ ಮಾಡನು ಶರಣನು,
ನಯನದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಅನ್ಯವ ನೋಡನು ಶರಣನು,
ಶ್ರೋತ್ರದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಅನ್ಯವ ಕೇಳನು ಶರಣನು,

೧-೧ ಅ (ಮೂ).

ಘ್ರಾಣದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಪರಿಮಳವ ವೇಧಿಸನು ಶರಣನು,
ಜಿಹ್ವೆಯ ಕೊನೆಯಲ್ಲಿ ಲಿಂಗ ಮುಂತಲ್ಲದೆ
ರುಚಿಯ ನಿಶ್ಚೈಸನು ಶರಣನು,
ಕೂಡಲ ಚೆನ್ನಸಂಗಾ, ನಿಮ್ಮ ಶರಣ
ಸರ್ವಾಂಗಲಿಂಗಿಯಾದ ಕಾರಣ. । ೫೧ । [೭೩೨]

೧೫೫

ಆಯತ ಸ್ವಾಯತ [1]ಸನ್ನಿಹಿತನ[1]
ಅನಾಯತಂಗಳು ಮುಟ್ಟಲಮ್ಮವು ನೋಡಾ!
ಕಂಗಳ ಕೈಗಳಲರ್ಪಿಸುವ. [2]ಶ್ರೋತ್ರದ ಕೈಗಳಲರ್ಪಿಸುವ,[2]
ನಾಸಿಕ ಕೈಗಳಲರ್ಪಿಸುವ, ಜಿಹ್ವೆಯ ಕೈಗಳಲರ್ಪಿಸುವ,
ತ್ವಕ್ಕಿನ ಕೈಗಳಲರ್ಪಿಸುವ, ಮನದ ಕೈಗಳಲರ್ಪಿಸುವ.
ಅಲ್ಲಲ್ಲಿ ತಾಗಿದ ಸುಖವ ಅಲ್ಲಲ್ಲಿಯೆ ಲಿಂಗಾರ್ಪಿತವ ಮಾಡಬಲ್ಲನಾಗಿ
ಕೂಡಲ ಚೆನ್ನಸಂಗಯ್ಯನಲ್ಲಿ ಆತ ಮಹಾಪ್ರಸಾದಿ. । ೫೨ ।

೧೫೬

[3]ಗುರುಲಿಂಗಜಂಗಮದ ಪಾದೋದಕ ಪ್ರಸಾದ ಪ್ರಾಣಪ್ರಸಾದವಾದುದಾಗಿ
ಲಿಂಗಪ್ರಾಣದೊಳಗೆ ಪ್ರಾಣಲಿಂ[4]ಗ[4] ನೋಡಾ,
ಭಕ್ತ[5]ಕಾಯ[5]ನೊಳಗೆ ಪ್ರಸಾದಕಾಯ ನೋಡಾ,
ವಿಶ್ವತಶ್ಚಕ್ಷುವಿನೊಳಗೆ ಜ್ಞಾನಚಕ್ಷು ನೋಡಾ,
ವಿಶ್ವತೋಮುಖನೊಳಗೆ ಸುಮುಖ ನೋಡಾ,
ವಿಶ್ವತೋಬಾಹುವಿನೊಳಗೆ ನಮಸ್ಕಾರಬಾಹು ನೋಡಾ,
ವಿಶ್ವತೋಪಾದ[6]ದೊಳಗೆ[6] ಮಹಾಪಾದ ನೋಡಾ
ಇಂತಾದುದಾಗಿ,
ಲಿಂಗವ ಮನದಲ್ಲಿ ನೆನೆದು ಲಿಂಗಕ್ಕೆ ನೆನೆಯಲಿತ್ತು,
ಜಂಗಮವ ಮನದಲ್ಲಿ ನೆನೆದು ಜಂಗಮಕ್ಕೆ ನೆನೆಯಲಿತ್ತು,

೧–೧ ಸಂಭಾವತನ (ಮೂ), ೨–೨ x(ಮೂ), ೩+ ಮನದ ಕೈಗಳಲರ್ಪಿಸುವ (ಮೂ), ೪–೪ ಗಿ (ಮೂ), ೫–೫ x(ಮೂ), ೬–೬ ದಲ್ಲಿ ನಿಂದ (ಮೂ).

ಪ್ರಸಾದವ ಮನದಲ್ಲಿ ನೆನೆದು ಪ್ರಸಾದಕ್ಕೆ ನೆನೆಯಲಿತ್ತು,
ಲಿಂಗದೃಷ್ಟಿಯಲ್ಲಿ ನೋಡಿ ಲಿಂಗಕ್ಕೆ ನೋಡಲಿತ್ತು,
[೧]ನಯನಪ್ರಸಾದದಿಂ ನೋಡಿ ರೂಪ[೧] ಪ್ರಸಾದವ[೨]ನು[೨] ಪರಿಣಾಮಿಸುವ.
ಲಿಂಗಶ್ರೋತ್ರದಿಂ ಕೇಳಿ ಲಿಂಗಕ್ಕೆ ಕೇಳಲಿತ್ತು,
ಪ್ರಸಾದಶ್ರೋತ್ರದಿಂ ಶಬ್ದಪ್ರಸಾದವನು ಕೇಳಿ ಪರಿಣಾಮಿಸುವ.
ಲಿಂಗತ್ವಕ್ಕಿನಿಂ ಸ್ಪರ್ಶಿಸಿ ಲಿಂಗಕ್ಕೆ ಸ್ಪರ್ಶಿಸಲಿತ್ತು,
ಪ್ರಸಾದತ್ವಕ್ಕಿನಿಂ ಸ್ಪರ್ಶಪ್ರಸಾದವನು [೩]ಭೋಗಿಸಿ ಪರಿಣಾಮಿಸುವ.
ಲಿಂಗಜಿಹ್ವೆಯಿಂದ ರುಚಿಸಿ ಲಿಂಗಕ್ಕೆ ರುಚಿಸಲಿತ್ತು,
[೪]ಪ್ರಸಾದಜಿಹ್ವೆಯಿಂದ ರುಚಿಪ್ರಸಾದವನು ಪ್ರಸಾದಿಸಿ ಪರಿಣಾಮಿಸುವ,
ಲಿಂಗಘ್ರಾಣದಿಂ ವಾಸಿಸಿ, ಲಿಂಗಕ್ಕೆ ವಾಸಿಸಲಿತ್ತು,[೪]
ಪ್ರಸಾದಘ್ರಾಣದಿಂ ಪರಿಮಳ ಪ್ರಸಾದವನು[೫] ವಾಸಿಸಿ ಪರಿಣಾಮಿಸುವ.
ಇಂತಪ್ಪ ಸರ್ವಭೋಗದ್ರವ್ಯವ
ಲಿಂಗಕಾಯದಿಂ ಭೋಗಿಸಿ ಲಿಂಗಕ್ಕೆ ಭೋಗಿಸಲಿತ್ತು,
ಪ್ರಸಾದಕಾಯ[೬]ದಿಂದ[೬] ಸರ್ವಭೋಗವನು ಭೋಗಿಸುವ ಪ್ರಸಾದಿ.
ಇದು ಕಾರಣ ಭಕ್ತದೇಹಿಕದೇವ ಕೂಡಲ ಚೆನ್ನಸಂಗಯ್ಯನೆಂದಱಿದು
ಪ್ರಸಾದಿಯ ಪ್ರಸಾದಿಯಾದೆನಯ್ಯಾ. । ೫೩ । [೭೩೯]

ಇಂತು ಪ್ರಸಾದಲಿಂಗದಲ್ಲಿ ಅವಧಾನಿಯಾದ ಪ್ರಸಾದಿಯ ಮಹಾಲಿಂಗ. ಆ ಸ್ಥಲದನುಭಾವದ ವಚನ:

[೭]ಪ್ರಸಾದಿಯ ಮಹಾಲಿಂಗಸ್ಥಲ:[೭]

೧೫೭
ನಡೆವ ನುಡಿವ ಚೈತನ್ಯವುಳ್ಳನ್ನಕ್ಕ
ಒಡಲ ಗುಣಂಗಳಾರಿಗೆಯೂ ಮಾಣವು.
ನೋಡುವ ನಯನ ಕೇಳುವ ಶ್ರೋತ್ರ
ವಾಸಿಸುವ ಘ್ರಾಣ ಮುಟ್ಟುವ [೮]ತ್ವಕ್ಕು ರುಚಿಸುವ ಜಿಹ್ವೆ[೮] ಸೋಂಕಿತ್ತೆಂದೆನಬೇಡ,
ನೋಡುತ್ತ ನಡೆಯುತ್ತ ಕೇಳುತ್ತ ಮುಟ್ಟುತ್ತ ಲಿಂಗಾರ್ಪಿತವ ಮಾಡಿ,
ಲಿಂಗಭೋಗೋಪಭೋಗಿ ಪ್ರಸಾದಿಗೆ ಸರ್ವಾಂಗಶುದ್ಧವೆಂದಿತ್ತಯ್ಯಾ.

೧-೧ ಪ್ರಸಾದವ ನಯನದಿಂ ನೋಡಿ ನಯನ (ಮೂ), ೨-೨ x (ಮೂ), ೩+ ಪ್ರಸಾದಿ (ಮೂ), ೪-೪ x (ಮೂ), ೫+ ಪ್ರಸಾದಿ (ಮೂ), ೬-೬ x (ಮೂ), ೭-೭ (ಮೂ), ೮-೮ ಸ್ಪರುಶನವ (ಮೂ).

ಕಾಯತ್ರಯಂಗಳ ಜೀವತ್ರಯಂಗಳ ಭಾವತ್ರಯಂಗಳನೊಂದು ಮಾಡಿ,
ಸುಖ ದುಃಖ ಗುಣ ನಿರ್ಗುಣಂಗಳ ಉಭಯಲಿಂಗದಲ್ಲಿ ಏಕವಮಾಡಿ,
ಅಹುದು–ಅಲ್ಲ ಬೇಕು–ಬೇಡೆಂಬ ಸಂಶಯವ ಕಳೆದು
ಕೂಡಲ ಚೆನ್ನಸಂಗಯ್ಯನಲ್ಲಿ
ಆದಿಯ ಪುರಾತರು ಕೂಡಿದ [1]ಪಥ[1]ವಿದು. ।೫೪। [೭೭೫]

೧೫೮
ಲಿಂಗದ ಪೂರ್ವಾಶ್ರಯವ ಕಳೆಯ ಬಲ್ಲಾತನೆ ಭಕ್ತ,
ಗುರುವಿನ ಪೂರ್ವಾಶ್ರಯವ ಕಳೆಯ ಬಲ್ಲಾತನೆ ಶಿಷ್ಯ,
ಪ್ರಸಾದದ ಪೂರ್ವಾಶ್ರಯವ ಕಳೆಯಬಲ್ಲಾತನೆ ಪ್ರಸಾದಿ.
ಇಂತೀ ತ್ರಿವಿಧದ ಪೂರ್ವಾಶ್ರಯವ ಕಳೆಯಬಲ್ಲಾತನೆ
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯ. ।೫೫। [೭೭೬]

೧೫೯
ಲೋಹ ಪರುಷವ ಮುಟ್ಟುವುದಲ್ಲದೆ
ಪರುಷ ಪರುಷವ ಮುಟ್ಟುವುದೇ ಅಯ್ಯಾ ?
ಅಂಗವಿಡಿದಂಗೆ ಪ್ರಸಾದವಲ್ಲದೆ ಲಿಂಗವಿಡಿದಂಗೆ ಪ್ರಸಾದವುಂಟೆ ?
ಅಣೋರಣೀಯಾನ್ ಮಹತೋ ಮಹೀಯಾನ್
ಎಂದುದಾಗಿ, ಕಿಱಿದಿಂಗೆ ಕಿಱಿದು ಹಿರಿದಕ್ಕೆ ಹಿರಿದು ವಾಙ್ಮನಕ್ಕಗೋಚರ.
ಕೂಡಲ ಚೆನ್ನಸಂಗಮದೇವಯ್ಯಾ
ಸ್ವರೂಪು ಪ್ರಸಾ[2]ದಿ[2], ನಿರೂಪು ಲಿಂಗೈಕ್ಯ. ।೫೬। [೭೭೭]]

೧೬೦
ಒಕ್ಕುದ ಮಿಕ್ಕುದ ಕೊಂಬೆನೆಂಬ ನಿಚ್ಚಳ ಶರಣರ ತೋಱಾ,
ಒಕ್ಕುದ ಮಿಕ್ಕುದ ಕೊಂಬ ನಿಚ್ಚಳ ಶರಣರ ತೋಱಾ.
ಒಕ್ಕುದ ಮಿಕ್ಕುದ ಕೊಂಬೆನೆಂಬ ವಿವರವ ಬಲ್ಲ[3]ಡೆ[3]
ಒಕ್ಕುದೆಂಬುದೆ ಕಾಯ, ಮಿಕ್ಕುದೆಂಬುದೆ ಪ್ರಾಣ.
ಈ ಉಭಯವೇ ತಕ್ಕುದೆಂದಱಿತುಕೊಳ್ಳ[4]ಬಲ್ಲರೆ
ಸಿಕ್ಕುವ ಕಾಣಾ ಕೂಡಲ ಚೆನ್ನಸಂಗಮದೇವ. ।೫೭। [೭೭೮]

೧–೧ ಪ (ಮೂ), ೨–೨ ದ (ಮೂ), ೩–೩ ನಾಗಿ (ಮೂ), ೪+ ದೆ (ಮೂ).

೧೬೧

[೧]ಭಕ್ತರಲ್ಲಿ ಬಣ್ಣವನಱಸುವಾತನೆ ಆಚಾರದ್ರೋಹಿ,
ಜಂಗಮದಲ್ಲಿ ಜಾತಿಯನಱಸುವಾತನೆ ಗುರುದ್ರೋಹಿ,
ಪಾದೋದಕದಲ್ಲಿ ಸೂತಕವ ಪಿಡಿವಾತನೆ ಲಿಂಗದ್ರೋಹಿ,
ಪ್ರಸಾದದಲ್ಲಿ ರುಚಿಯನಱಸುವಾತನೆ ಜಂಗಮದ್ರೋಹಿ,
ಇಂತೀ ಚತುರ್ವಿಧದೊಳಗೆ ಸನ್ನಿಹಿತನಾದಾತನೆ ಭಕ್ತ,
ಇಂತೀ ಚತುರ್ವಿಧದೊಳಗೆ ಕಲಿಯಾದಾತನೆ ಮಾಹೇಶ್ವರ,
ಇಂತೀ ಚತುರ್ವಿಧದೊಳಗೆ ಅವಧಾನಿಯಾದಾತನೆ ಪ್ರಸಾದಿ,
ಇಂತೀ ಚತುರ್ವಿಧದೊಳಗೆ ತದ್ಗತವುಳ್ಳಾತನೆ ಪ್ರಾಣಲಿಂಗಿ,
ಇಂತೀ ಚತುರ್ವಿಧದೊಳಗೆ ಲವಲವಿಕೆ ಉಳ್ಳಾತನೆ ಶರಣ,
ಇಂತೀ ಚತುರ್ವಿಧದೊಳಗೆ ಅಡಗಿದಡೆ ಐಕ್ಯ.
ಇಂತಪ್ಪ ಷಡುಸ್ಥಲವು ಸಾಧ್ಯವಾದಡೆ ಲಿಂಗದೇಹಿ,
ಆತ ನಡೆಯಿತ್ತೇ ಬಟ್ಟೆ, ಆತ ನುಡಿಯಿತ್ತೇ ಸಿದ್ಧಿ
ಕೂಡಲ ಚೆನ್ನಸಂಗಯ್ಯನಲ್ಲಿ ಆತನೆ ಸರ್ವಾಂಗಲಿಂಗಿ, ಆತನೆ ನಿರ್ದೇಹಿ. । ೫೮ ।

ಇಂತು ಪ್ರಸಾದಿಸ್ಥಲ [೨]ಒಂದ[೨]ರಲ್ಲಿ ಷಡ್ವಿಧಲಿಂಗಸಮರಸವನೆಯ್ದಿ ಇರುತ್ತಿರಲು [ಪ್ರಸಾದಿ ಸ್ಥಲ ಸಮಾಪ್ತಿ], ಮುಂದೆ ಪ್ರಾಣಲಿಂಗಿಯ ಸ್ಥಲವಾದುದು.[೩]

❖❖

೧+ ಓಂ ನಮಃ ಶಿವಾಯ (ಮೂ), ೨-೨ ೧(ಮೂ), ೩+ ತೃತೀಯ ಸ್ಥಲಕ್ಕೆ ಸೇರಿಸಿದ ವಚನ ೧೬೧ಕ್ಕಂ ಮಂಗಳ ಮಹಾ ಶ್ರೀ (ಮೂ).

ಪ್ರಾಣಲಿಂಗಿಸ್ಥಲ

ಪ್ರಾಣಲಿಂಗಿಯ ಸ್ಥಲ, ಆ ಸ್ಥಲಕ್ಕೆ ತಾಮಸನಿರಸನ[೧]ದ ವಚನ:[೧]

[೨]ಪ್ರಾಣಲಿಂಗಿಯ ತಾಮಸನಿರಸನಸ್ಥಲ :[೨]

೧೬೨
ತನುಮುಟ್ಟಿ ಮನಮುಟ್ಟದೆ ದೂರವಾದರಯ್ಯಾ ಬೆಲೆವೆಣ್ಣಿನಂತೆ,
ಸೂಳೆ ತನುಮುಟ್ಟಿ ಅಪ್ಪುವಳಲ್ಲದೆ ಮನಮುಟ್ಟಿ ಅಪ್ಪಳಾಗಿ.
ಆಚಾರವಱಿಯದ ಅಱಿಮರುಳುಗಳು [೩]ಶಿವ[೩] ಸುಖವನೆತ್ತ ಬಲ್ಲರು,
ಕೂಡಲ ಚೆನ್ನಸಂಗಮದೇವಾ. ।೧। [೮೧೪]

೧೬೩
ಉಲಿಗರ ಮಾತು, ಉಲಿಗರ ತೋಟಿಯೊಳಗುಂಟೆ ಲಿಂಗಾನುಭಾವ?
ಸಂತೆಯೊಳಗೆ ಸಮಾಧಿಯುಂಟೆ?
ಕೂಡಲ ಚೆನ್ನಸಂಗನ ಅನುಭಾವ
ಹೊಱವೇಷದ ವಾಚಾಳರಿಗೆಲ್ಲಿಯದೊ? ।೨। [೮೧೫]

೧೬೪
ಭಕ್ತಿಗೆ ಅನುಭಾವವೆ ಬೀಜ ಕಾಣಿರೆ,
ಭಕ್ತಿಗೆ ಅನುಭಾವವೆ ಆಚಾರ ಕಾಣಿರೆ,
ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು.
ಅನುಭಾವವ ಮಾಡುವಲ್ಲಿ ವಿನಯದಿಂದ ಕೇಳದಿದ್ದೊಡೆ,
ಕೂಡಲ ಚೆನ್ನಸಂಗಮದೇವರು ಅಘೋರನರಕದಲ್ಲಿಕ್ಕುವ. ।೩। [೮೧೬]

೧–೧ x (ಮೂ), ೨–೨ x (ಮೂ). ೩–೩ x(ಮೂ).

೧೬೫
ಅನುಭಾವ ಅನುಭಾವವೆಂದೆಂಬಿರಿ,
ಅನುಭಾವವೆಂಬುದು ನೆಲದ ಮಱೆಯ ನಿಧಾನ ಕಾಣಿಭೋ,
ಅನುಭಾವವೆಂಬುದು ಅಂತರಂಗದ ರತ್ನ ಕಾಣಿಭೋ,
ಅನುಭಾವವೆಂಬುದು ಶಿಶುಕಂಡ ಕನಸು ಕಾಣಿಭೋ,
ಅನುಭಾವವೆಂಬುದು ರಚ್ಚೆಯ ಮಾತೆ?
ಅನುಭಾವವೆಂಬುದು ಸಂತೆಯ ಸುದ್ದಿಯೆ?
ಅನುಭಾವವೆಂಬುದು ಬೀದಿಯ ಪಸರವೆ?
ಏನೆಂದು ಹೇಳುವೆ ಮಹಾಘನವನು?
ಆನೆಯ ಮಾನದಲ್ಲಿಕ್ಕಿದರೆ ಅಡಗುವದೆ?
ದರ್ಪಣದೊಳಗಡಗುವದಲ್ಲದೆ,
ಕಂಡ ಕಂಡಲ್ಲಿ ಗೋಷ್ಠಿ, ನಿಂದ ನಿಂದಲ್ಲಿ ಅನುಭಾವ,
ಬಂದ ಬಂದಲ್ಲಿ ಪ್ರಸಂಗದ ಮಾಡುವ,
ಪಾತಕರ ತೋಱದಿರು ಕೂಡಲ ಚೆನ್ನಸಂಗಮದೇವಾ. । ೪ ।

೧೬೬
ಮುನ್ನಿನ ಆದ್ಯರ ವಚನ:
ಲಿಂಗದ ನಡೆ ಲಿಂಗದ ನುಡಿ,
ಜಂಗಮದ ನಡೆ ಜಂಗಮದ ನುಡಿ,
ಪ್ರಸಾದದ ನಡೆ ಜಂಗಮ ನುಡಿ,
ಶ್ರುತಿಯ ತೋಱಿ ನುಡಿವರು, ಅಲ್ಲವೆಂದರೆ,
ದೃಷ್ಟವ ತೋಱಿ ನಡೆವರು.
ಇಂತಪ್ಪ ಪುರಾತರ ವಚನಕ್ಕೆ,
[1]ಅ[1]ನುಸರಿಯಾಗಿ ಮಾಡಿಹೆನೆಂಬ ಕರ್ಮಿಯನೇನೆಂಬೆ ?
ಲಿಂಗಾನುಭಾವಿಗಳು ಕೇಳಿದರೆ ಛೀ ಎಂಬರು,
ಹೊಂಬಿತ್ತಾಳೆಯ ಕೆಲಸದಂತೆ.
ಸಿಂಹದ ನಡು ಸಣ್ಣ[2]ದೆ[2]ಂದರೆ ನಾಯ ನಡು ಸಣ್ಣ[2]ದೆ[2]ಂಬ
ಪಂಚಮಹಾಪಾತಕರ ನುಡಿಯ ಕೇಳಲಾಗದು.
ಓಡ ಹಿಡಿದು ಮಸಿಯಾಗಲೇಕೆ ಕೂಡಲ ಚೆನ್ನಸಂಗಮದೇವಾ. । ೫ । [೮೧೯]

೧–೧ ಆ (ಮೂ), ೨–೨ ನೆ (ಮೂ).

೧೬೭

ವೃಕ್ಷಾಶ್ರಮದಲ್ಲಿರ್ದರೇನು?
ಭಿಕ್ಷಾಪರಿಣಾಮಿಯಾಗಿ ಇರ್ದರೇನು?
ಉಟ್ಟುದನಳಿದು ಬತ್ತಲೆ ಇರ್ದರೇನು?
ಕಾಲರಹಿತನಾದರೇನು? ಕರ್ಮರಹಿತನಾದರೇನು?
ಕೂಡಲ ಚೆನ್ನಸಂಗನ ಅನುಭಾವವಜಿಯದವರು
ಏಸುಕಾಲ ಇದ್ದರೇನು? ವ್ಯರ್ಥಕಾಣಿರೆ! ।೬। [೮೧೯]

೧೬೮

ಮಾತಿನ ಮಾತಿನ[೧]ಲ್ಲಿ [೨]ಗೀತಂಗಳಲ್ಲಿ[೨] ಸುಜಾ[೩]ಣ[೩]ನಾಗಬಹುದು,
ಶ್ರೋತ್ರದ ಸೊಗಸಿನಲ್ಲಿ ಪ್ರಾಜ್ಞಪ್ರವೀಣನೆನಿಸಿ ಸುಲಭನಾಗಬಹುದು,
ಅಂತರಂಗ ಬಹಿರಂಗವಂತ[೪]ನಾಗ[೪]ಬಹುದು,
ಆಗಮಗಣಿತಗುಣಿತ ಶ್ರುತಿ ಸ್ಮೃತಿಗಳಿಗ[೫]ತರ್ಕ್ಯ[೫]ಗಿರಬಹುದು,
ಭೂತವಿಕಾರದ ಪ್ರಕೃತಿಸ್ವಭಾವದ ಭ್ರಾಂತಳಿದಿರಬಹುದು,
ಕಾಂತೆಯರ ರತಿಗುಣವರ್ಜಿತನಾಗಬಹುದು.
ಕಾಶಿಕ್ಷೇತ್ರವಾಸಿಗಳಾಗಿರಬಹುದು,
ಎನ್ನೊಡೆಯ ಕೂಡಲ ಚೆನ್ನಸಂಗಮದೇವರ ನಚ್ಚಿನ ಮಚ್ಚಿನ ಇಚ್ಛಾವಾಸ
ವೃತ್ತಿಯಾಗಿರಬಾರದು, ಲಿಂಗಾನುಭಾವಿಗಳಿಗಲ್ಲದೆ. ।೭। [೮೨೦]

೧೬೯

ಸೀಮರ ಕಂಡೆ ನಿಸ್ಸೀಮರ ಕಂಡೆ,
ಭಾವರ ಕಂಡೆ ಅನುಭಾವರ ಕಂಡೆ.
[೬]ತನುಸಾಹಿತ್ಯರನಲ್ಲದೆ[೬] ಕೂಡಲ ಚೆನ್ನಸಂಗಯ್ಯ[೭]ನಲ್ಲಿ[೭]
ಮನಸಾಹಿತ್ಯರನಾರನೂ ಕಾಣೆ. ।೮। [೮೨೧]

೧೭೦

ಶೀಲವಂತರು ಲಕ್ಷ ಲಕ್ಷ,
ನೇಮಸ್ಥರು ಲಕ್ಷ ಲಕ್ಷ,
ವ್ರತಸ್ಥರು ಲಕ್ಷ ಲಕ್ಷ.
ಅರ್ಥಪ್ರಾಣ ಅಭಿಮಾನವನೊಪ್ಪಿಸಿದ ವೈರಾಗ್ಯರು ಲಕ್ಷ ಲಕ್ಷ.

೧–೧ x (ಮೂ), ೨–೨ ಗೀತಾಂಗದಲ್ಲಿ (ಮೂ), ೩–೩ ತ (ಮೂ), ೪–೪ ಕನಕಾಣ (ಮೂ), ೫–೫ ೦ತಕ (ಮೂ), ೬–೬ x (ಮೂ), ೭–೭ ನ (ಮೂ).

ಕೂಡಲ ಚೆನ್ನಸಂಗಯ್ಯನಲ್ಲಿ ಅವರೆಲ್ಲರು
ಫಲಪದಾರ್ಥರಲ್ಲದೆ ಲಿಂಗಪದಾರ್ಥರಾರೂ ಇಲ್ಲ. ।೯। [೮೨೨]

೧೭೧
ಭಕ್ತನೆ ಕುಲಜನೆಂಬರು ಯುಕ್ತಿಯಲ್ಲಿ ವಿಚಾರಿಸರು ನೋಡಾ.
ವ್ಯಾಕುಳ ನಿರಾಕುಳವೆಂಬೆರಡು ಕುಲ ನೋಡಯ್ಯಾ.
ವ್ಯಾಕುಳವೆ ಭವ, ನಿರಾಕುಳವೆ ನಿರ್ಭ[1]ವ,[1]
ವ್ಯಾಕುಳವೆ ಪಾಪ, ನಿರಾಕುಳವೆ ನಿಷ್ಪಾಪ.
ವ್ಯಾಕುಳವೆ ಭವಿ, ನಿರಾಕುಳವೆ [2]ಭಕ್ತ.[2]
ಭವಬೀಜಂ ತಥಾ ಭಕ್ತಿಭಕ್ತಿರ್ಬೀಜಂ ತಥಾ ಶಿವಃ ।
ಶಿವಬೀಜಂ ತಥಾ ಜ್ಞಾನಂ ಜ್ಞಾನಂ ತ್ರೈಲೋಕ್ಯದುರ್ಲಭಂ ।
ಜ್ಞಾನಿಗೆ ಕತ್ತಲೆಯಿಲ್ಲ, ಅಜಾತಂಗೆ ಹೊಲೆಯಿಲ್ಲ
ಕುಲಾಧೀಶ, ಕೂಡಲ ಚೆನ್ನಸಂಗಯ್ಯಾ. । ೧೦ । [೮೨೩]

೧೭೨
ತನ್ನನಿಕ್ಕಿ ನಿಧಾನವ ಸಾಧಿಲಅಱಿಯದ ಹಂದೆಗಳಿದ್ದೇನು ಫಲ?
ಕಾಡಹಂದಿ ನರಿಯಹಿಂಡು ತರುವಿಂಧ್ಯದಲ್ಲಿ ಕೂಡಿರವೆ?
ನರವಿಂಧ್ಯದಲ್ಲಿ ಕೂಡಿರವೆ?
ತಮ್ಮ ತಮ್ಮ ತಮಂಧ ಕತ್ತಲೆ ಹರಿಯದನ್ನಕ್ಕ
ಇದಿರಿಗೆ ಬುದ್ಧಿಯ ಹೇಳಿ ಉದರವ ಹೊರೆವ ಚದುರರೆಲ್ಲರು ಹಿರಿಯರಪ್ಪರೆ?
ಲೋಗರ ಮಕ್ಕಳನಿಕ್ಕಿ ನೆಲೆಯ ನೋಡಿಹೆನೆಂದರೆ ಅದೆಂತು
ಸಾಧ್ಯವಪ್ಪನಯ್ಯಾ, ನಮ್ಮ ಕೂಡಲ ಚೆನ್ನಸಂಗಮದೇವರು? । ೧೧ ।

ಇಂತು ತಾಮಸನಿರಸನವಂ ಮಾಡಿದ ಅನುಭಾವಿಯ ಪ್ರಾಣಲಿಂಗಿಸ್ಥಲ ನಿರ್ದೇಶ. ಆ ಸ್ಥಲದ ಅನುಭಾವದ ವಚನ:

ಪ್ರಾಣಲಿಂಗಿಯ ನಿರ್ದೇಶಸ್ಥಲ :

೧೭೩
ತರುಮರಾದಿಗಳಲ್ಲಿಗೆ ಹೋಗಿ ಅನಂತಕಾಲ ತಪಸ್ಸಿರುಹುದನು
ಒಂದು ದಿನ ಗುರುಚರಣಸೇವೆ ಸಾಲದೆ ?

೧-೧ ಯ (ಮೂ), ೨-೨ ಭಕ್ತಿ (ಮೂ).

ಅನಂತಕಾಲ ಗುರುಚರಣ ಸೇವೆಯ ಮಾಡುವದನು
ಒಂದು ದಿನ ಲಿಂಗಪೂಜೆಯ ಮಾಡಿದರೆ ಸಾಲದೆ?
ಅನಂತಕಾಲ ಲಿಂಗಪೂಜೆಯ ಮಾಡುವದನು
ಒಂದು ದಿನ ಜಂಗಮತೃಪ್ತಿಯ ಮಾಡಿದರೆ ಸಾಲದೆ?
ಅನಂತಕಾಲ ಜಂಗಮತೃಪ್ತಿಯ ಮಾಡುವದನು
ಒಂದು ನಿಮಿಷ ನಿಮ್ಮ ಶರಣರ ಅನುಭಾವ ಸಾಲದೆ?
ಕೂಡಲ ಚೆನ್ನಸಂಗಮದೇವಾ. । ೧೨ । [೮೪೩]

೧೭೪
ಶ್ರೋತ್ರ ನೇತ್ರ ಜಿಹ್ವೆ ತ್ವಕ್ಕು ಘ್ರಾಣವೆಂಬ ಬುದ್ಧೇಂದ್ರಿಯಂಗಳ ಕೂಡಿಕೊಂಡು,
ಉದಯಿಸುವ ವಾಯುಗಳಾವುವೆಂದಡೆ:
ರೇಚಕ ಪೂರಕ ಕುಂಭಕ ರೂಪಿಂದ ಚೇಷ್ಟಿಸುವುದೊಂದು ಪ್ರಾಣವಾಯು,
ರಸಂಗಳ ನಿರಸಂಗಳ ಮಾಡಿ ಮಲಮೂತ್ರಂಗಳ ನಡೆಸುವುದೊಂ[1]ದಪಾನ[1]ವಾಯು
ಶಕ್ತಿಯ ಚೇಷ್ಟೆಯ ಮಾಡುವುದೊಂದು ವ್ಯಾನವಾಯು,
ಪಾದವ ನೆಲಕಿಕ್ಕಿ [2]ನಡ[2]ಸುವುದೊಂದು ಉದಾನವಾಯು,
ಸಮಧಾತುಗಳನಜಿದು ಅನ್ನಪಾನಾದಿಗಳ ಪಸರಿಸುವುದೊಂದು ಸಮಾನವಾಯು.
ರಸವ್ಯಾಪ್ತಿಯ ಮಾಡುವುದೊಂದು ನಾಗವಾಯು,
ಘರವಟ್ಟಿಗೆಯ ತೊಳಲೂದೊಂದು ಕೂರ್ಮವಾಯು,
ಆಗುಳಿಕೆ ಮೈಮುರಿಹ ಮಾಡುವುದೊಂದು [3]ಕೃಕರ[3]ವಾಯು,
ವಾಕರಿಕೆ ಮಾಡೂದೊಂದು ದೇವದತ್ತವಾಯು,
ನುಡಿಯ ಬುದ್ಧಿಯ ಮಾಡಿ ನಡಸೂದೊಂದು ಧನಂಜಯವಾಯು,
ಇಂತೀ ದಶವಾಯುಗಳ ಸ್ಥಾನಂಗಳಾವಾವವೆಂದೊಡೆ :
ಗುಹ್ಯದಲ್ಲಿ [4]ಅ[4]ಪಾನವಾಯು, ನಾಭಿಯಲ್ಲಿ ಸಮಾನವಾಯು,
ಹೃದಯದಲ್ಲಿ ಪ್ರಾಣವಾಯು, ಕಂಠದಲ್ಲಿ ಉದಾನವಾಯು,
ಸಮಸ್ತಸಂದುಗಳಲ್ಲಿ ವ್ಯಾನವಾಯು, ಈಡಾನಾಳದಲ್ಲಿ ನಾಗವಾಯು,
ಪಿಂಗಳನಾಳದಲ್ಲಿ ಕೂರ್ಮವಾಯು, ಸುಷುಮ್ನನಾಳದಲ್ಲಿ [5]ಕೃಕರ[5]ವಾಯು,
ಹಸ್ತದಲ್ಲಿ ದೇವದತ್ತವಾಯು, ಜಿಹ್ವೆಯಲ್ಲಿ ಧನಂಜಯವಾಯು,
ಇಂತೀ ವಾಯುಪ್ರಾಣಿಯನೆ ಕಳೆದು ಲಿಂಗಪ್ರಾಣಿಯ ಮಾಡಬಲ್ಲಡೆ,
ಕೂಡಲ ಚೆನ್ನಸಂಗಯ್ಯನಲ್ಲಿ ಅದೇ ಯೋಗ. । ೧೩ । [೮೪೪]

೧-೧ ದು ಪ್ರಾಣ (ಮೂ), ೨-೨ x (ಮೂ), ೩-೩ ಕಿಕಿಲ (ಮೂ), ೪-೪ x (ಮೂ), ೫-೫ ಕಿಕಿಲ (ಮೂ).

೧೭೫

ಪ್ರಾಣವಾಯು ನೇತ್ರನಾಳ, ಅಪಾನವಾಯು ಜಿಹ್ವಾನಾಳ,
ವ್ಯಾನವಾಯು ಅಧಮನಾಳ, ಉದಾನವಾಯು [೧]ಕಮಲ[೧]ನಾಳ,
ಸಮಾನವಾಯು [೨]ಮುಖ[೨]ನಾಳ, ನಾಗವಾಯು ಶ್ರೋತ್ರನಾಳ,
ಕೂರ್ಮವಾಯು [೩]ಕಂಠ[೩]ನಾಳ, [೪]ಕೃಕರ[೪]ವಾಯು ಚಂದ್ರನಾಳ,
ದೇವದತ್ತವಾಯು ಸೂರ್ಯನಾಳ, ಧನಂಜಯವಾಯು ಬ್ರಹ್ಮನಾಳ,
ಇಂ[೫]ತಿವು[೫] ದಶವಾಯುಗಳ ಸ್ಥಾನ.
ಪ್ರಾಣವಾಯು ಹರಿದಲ್ಲಿ ಲಿಂಗಪ್ರಾಣವಂ ಮಱೆದು
ತನುಮನಧನವೇ ಪ್ರಾಣವಾಗಿಹ.
[೬]ಅ[೬]ಪಾನವಾಯು ಹರಿದಲ್ಲಿ ಲಿಂಗಬಯಕೆಯಂ ಮಱೆದು
ಷಡುರಸಾನ್ನದ ಬಯಕೆಯಾಗಿಹ.
ವ್ಯಾನವಾಯು ಹರಿದಲ್ಲಿ ಲಿಂಗಧ್ಯಾನವಂ ಮಱೆದು
ಚತುರ್ವಿಧಪಾತಕ[೭]ವೆ ಧ್ಯಾನ[೭]ನಾಗಿಹ.
ಉದಾನವಾಯು ಹರಿದಲ್ಲಿ ಲಿಂಗಮಂ ಬಿಟ್ಟು
ಉದ್ದೇಶಗಮನಿಯಾಗಿಹ.
ಸಮಾನವಾಯು ಹರಿದಲ್ಲಿ ಚತುರ್ವಿಧ ಸಾರಾಯಮಂ ಮಱೆದು
ಕಲ್ಲುಮರನಾಗಿಹ.
ನಾಗವಾಯು ಹರಿದಲ್ಲಿ ಸುಭಾಷಿತ ಗೋಷ್ಠಿಯಂ ಕೇಳಲೊಲ್ಲದೆ
ಕುಭಾಷಿತರ ಕುಚಿತರ ಶಬ್ದಮಂ ಕೇಳಿಹೆನೆಂಬ.
ಕೂರ್ಮವಾಯು ಹರಿದಲ್ಲಿ ಸುಜ್ಞಾನಮಂ ಬಿಟ್ಟು
ಅಜ್ಞಾನಸಂಭಾಷಣೆಯಂ ಮಾಡಿಹೆನೆಂಬ.
[೮]ಕೃಕರ[೮]ವಾಯು ಹರಿದಲ್ಲಿ ಸುಗುಣವಂ ಬಿಟ್ಟು
ದುರ್ಗುಣಕ್ಕೆ ಬೀಜ ಬಡವಾಗುತ್ತಿಹ.
ದೇವದತ್ತವಾಯು ಹರಿದಲ್ಲಿ ಆವ ವಿಚಾರವು ತೋಱದೆ
ಕೋಪದಲುರಿದೇಳುತ್ತಿಹ.

೧-೧ ಅಧಮ (ಮೂ), ೨-೨ ಮಕರ (ಮೂ), ೩-೩ ಕಠಿಣ (ಮೂ), ೪-೪ ಕಿಕಿಲ (ಮೂ), ೫-೫ ಇಂತೀ (ಮೂ), ೬-೬ x (ಮೂ), ೭-೭ ವೇದ್ಯ (ಮೂ), ೮-೮ ಕಿಕಿಲ (ಮೂ).

ಧನಂಜಯವಾಯು ಹರಿದಲ್ಲಿ ಅನೇಕ [೧]ಸಾ[೧]ಯಸದಿಂದ ಗಳಿಸಿದ ಧನವನು
ಗುರುಲಿಂಗಜಂಗಮಕ್ಕೆ ವೆಚ್ಚಿಸಲೊಲ್ಲದೆ
ಅನರ್ಥವ ಮಾಡಿ ಕೆಡಿಸಿ ಕಳೆದುಹೋಯಿತ್ತೆಂದು ಮಱುಗುತ್ತಿಹ.
ಇಂತೀ ದಶವಾಯುಗಳ ಭೇದವನಱಿದು
ಕೂಡಲ ಚೆನ್ನಸಂಗಯ್ಯನಲ್ಲಿ ನಿಲಿಸುವುದೇ ಯೋಗ. ।೧೪। [೮೪೫]

೧೭೬

ಪೃಥ್ವಿ ಸಲಿಲ ಪಾವಕ ಪವನ ಅಂಬರ ರವಿ ಶಶಿ ಆತ್ಮ
ಇಂತೀ ಅಷ್ಟಮದಮಗಳ ವಿವರ :
ಪೃಥ್ವಿಮದವೆತ್ತಿದರೆ ತನುಗುಣಭರಿತನಾಗಿಹ,
ಸಲಿಲಮದವೆತ್ತಿದರೆ ಸಂಸಾರಭರಿತನಾಗಿಹ,
ಪಾವಕಮದವೆತ್ತಿದರೆ ಕಾಮ್ಯರಸಭರಿತನಾಗಿಹ,
ಪವನಮದವೆತ್ತಿದರೆ ಇದ್ದ ಠಾವಿನಲ್ಲಿದ್ದು ಜಂಬೂದ್ವೀಪಭರಿತನಾಗಿಹ,
ಅಂಬರಮದವೆತ್ತಿದರೆ ವಾಹನಭರಿತನಾಗಿಹ,
ರವಿಮದವೆತ್ತಿದರೆ ಕೋಪಾಗ್ನಿಭರಿತನಾಗಿಹ,
ಶಶಿಮದವೆತ್ತಿದರೆ ಚಿಂತಾಭರಿತನಾಗಿಹ,
ಆತ್ಮಮದವೆತ್ತಿದರೆ ಅಹಂಕಾರಭರಿತನಾಗಿಹ.
ಇಂತೀ ಅಷ್ಟಮದವಳಿದು ನಿಜವನಱಿಯಬಲ್ಲರೆ
ಕೂಡಲ ಚೆನ್ನಸಂಗಯ್ಯನಲ್ಲಿ ನಿಜಯೋಗಿಗಳೆಂಬೆ. ।೧೫। [೮೪೬]

೧೭೭

ತನುವ್ಯಸನ ಮನವ್ಯಸನ ಧನವ್ಯಸನ ವಾಹನವ್ಯಸನ
ವಿಶ್ವವ್ಯಸನ ಉ[೨]ತ್ಸಾ[೨]ಹವ್ಯಸನ ಸೇವಕವ್ಯಸನ
ಇಂತೀ ಸಪ್ತವ್ಯಸನಂಗಳ ವಿವರ :
ತನುವ್ಯಸನ ವಸ್ತ್ರಾಭರಣ ವೀಳ್ಯೆಯ ಲೇಪನಾದಿಗಳ ಬಯಸುತ್ತಿಹುದು,
ಮನವ್ಯಸನ ಹುಸಿ ಕಳವು ಪಾರದ್ವಾರವಂ ಬಯಸೂದು,
ಧನವ್ಯಸನ ಧನಧಾನ್ಯವಂ ಬಯಸೂದು,
ವಾಹನವ್ಯಸನ ಆನೆ ಕುದುರೆ ಸೇನೆಯಂ ಬಯಸೂದು,
ವಿಶ್ವವ್ಯಸನ ಚತುರ್ವಿಧಕರ್ತವ್ಯಂ ಬಯಸೂದು,
ಉತ್ಸಾಹವ್ಯಸನ ಪುತ್ರ ಮಿತ್ರ ಕಳತ್ರಾದಿಗಳ ಬಯಸೂದು,

೧-೧ ಸಹ (ಮೂ), ೨-೨ ಚ್ಛಾ (ಮೂ).

ಸೇವಕವ್ಯಸನ ಗಳಿಸಲಾಜಿ ಗೆಯ್ಯಲಾಜಿ[೧] ಗೆತ್ತಲಾಜಿ
ಕೊಡಲಾಜಿ ಕೊಳಲಾಜಿ ಎನುತ್ತಿಹುದು.
ಇಂತೀ ಸಪ್ತವ್ಯಸನಂಗಳಂ ಬಿಟ್ಟು ಲಿಂಗವ್ಯಸನಿಯಾಗಿರಬಲ್ಲರೆ
ಕೂಡಲ ಚೆನ್ನಸಂಗಯ್ಯನಲ್ಲಿ ಆತನೇ ಪ್ರಾಣಲಿಂಗಸಂಬಂಧಿ. । ೧೬ । [೮೪೭]

೧೭೮

ತನುಗುಣಗ್ರಾಹಕನಾ[೨]ಗದಿ[೨]ರಬೇಕು.
ಮನಗುಣಗ್ರಾಹಕನಾ[೨]ಗದಿ[೨]ರಬೇಕು.
ಧನಗುಣಗ್ರಾಹಕನಾ[೨]ಗದಿ[೨]ರಬೇಕು.
ಇಂತೀ ತ್ರಿವಿಧಗುಣಗ್ರಾಹಕನಾಗದೆ
ಲಿಂಗಗುಣಗ್ರಾಹಕನಾಗಿರಬೇಕು, ಕೂಡಲ ಚೆನ್ನಸಂಗಮದೇವಾ. । ೧೭ । [೭೪೮]

೧೭೯

ಅಂಗದ ಮೇಲಣ ಲಿಂಗ ಹಿಂಗಲಾಗದೆಂಬರು,
ಅಂಗಲಿಂಗಸಂಬಂಧವಾದಲ್ಲಿ ಫಲವೇನು?
ಮನಲಿಂಗ ಸಂಬಂಧಿಯಾಗದನ್ನಕ್ಕ,
ಕೂಡಲ ಚೆನ್ನಸಂಗಯ್ಯಾ ಮನದಿಂದೇನು ಫಲವಿಲ್ಲಯ್ಯಾ. । ೧೮ । [೮೪೯]

೧೮೦

ಅಂಗಸಂಗಿಯಾದವಂಗೆ ಲಿಂಗಸಂಗವಿಲ್ಲ,
ಲಿಂಗಸಂಗಿಯಾದವಂಗೆ ಅಂಗಸಂಗವಿಲ್ಲ,
ಅಂಗಸಂಗವೆಂಬುದೇ ಅನಾಚಾರ, ಲಿಂಗಸಂಗವೆಂಬುದೇ ಸದಾಚಾರ.
ಇದು ಕಾರಣ ಅಂಗಸಂಗವ ಬಿಟ್ಟು
ಲಿಂಗಸಂಗಿಯಾಗಿರಬೇಕು ಕೂಡಲ ಚೆನ್ನಸಂಗಮದೇವಾ. । ೧೯ । [೮೫೦]

೧೮೧

ಹದಿನಾಲ್ಕು ಭುವನದಲ್ಲಿ ಮನವೇದ್ಯವನಾರು ಬಲ್ಲರಯ್ಯಾ?
ದೂರ ದೂರವಾಗಿ ಮನ್ನಿಸುವರು,
ದೂರ ದೂರವಾಗಿ ಸುಭಾಷಿತವ ಮಾಡುವರು.

೧–೧ x (ಮೂ), ೨–೨ ಗಿ (ಮೂ), ೩–೩ ಗವಾ (ಮೂ).

ದೂರ ದೂರವೆನಲಿಲ್ಲ,
ಕೂಡಲ ಚೆನ್ನಸಂಗಯ್ಯನಲ್ಲಿ ಮನವೇದ್ಯವಾಗಬೇಕು. । ೨೦ । [೮೫೧]

೧೮೨

ಮನದ ಮ[1]ತ್ಸ[1]ರವ ಕಳೆದು
ಮನದ ಮೇಲೆ ಲಿಂಗವ ಕುಳ್ಳಿರಿಸಬೇಕಯ್ಯಾ.
ಧನದ ಲೋಭವ ಕಳೆದು,
ಧನದ ಮೇಲೆ ಜಂಗಮವ ಕುಳ್ಳಿರಿಸಬೇಕಯ್ಯಾ.
ತನುಗುಣಂಗಳ ಕಳೆದು
ಪ್ರಸಾದಕಾಯವ ಮಾಡಬೇಕಯ್ಯಾ.
ಇಂತೀ ಎಲ್ಲಾ ಗುಣಂಗಳ ಕಳೆದು
ತ್ರಿವಿಧದಲ್ಲಿ ದಾಸೋಹಿಯಾಗಿರಬೇಕು ಕೂಡಲ ಚೆನ್ನಸಂಗಯ್ಯಾ. । ೨೧ । [೮೫೨]

೧೮೩

ಪ್ರಣಮ, ಪ್ರಾಣವಾಯುವಿನ ನೆಲೆಯನಱಿದುಬಿಡಬಲ್ಲರೆ,
ಪ್ರಣಮ, ಓಂಕಾರದ ಶ್ರುತಿಯ ಮೂಲಾಂಕುರವನಱಿಯಬಲ್ಲರೆ,
ಪ್ರಣಮ, ಐವತ್ತೆರಡಕ್ಷರದ ಲಿಪಿಯ ತಿಳಿದು ನೋಡಿಯೋದಬಲ್ಲರೆ,
ಪ್ರಣಮ, ನಾದಬಿಂದು ಕಳಾತೀತನಾಗಬಲ್ಲರೆ.[2]
ಇದು ಕಾರಣ ಕೂಡಲ ಚೆನ್ನಸಂಗಾ
ನಿಮ್ಮ ಶರಣ[3]ರು[3] ಸಹಸ್ರವೇದಿಯಾದ ಕಾರಣ ಪ್ರಣಮಪ್ರತಿಷ್ಠಾಚಾರ್ಯರು,
ಅವರಿಗೆ ಮಿಗೆ ಮಿಗೆ ನಮೋ ನಮೋ ಎಂಬೆನು. । ೨೨ । [೮೫೩]

ಇಂತು [4][ಪ್ರಾಣಲಿಂಗಿಸ್ಥಲವನಂಗಗೊಂಡಿಪ್ಪ ಅನುಭಾವಿಗೆ ಷಡ್ವಿಧಲಿಂಗವು ಹೇಂಗೆ ಬೆರಸಿಪ್ಪುದೆಂದಡೆ ಆ ಲಿಂಗದ ವಿವರ].[4] ಪ್ರಾಣಲಿಂಗಿಯ ಆಚಾರಲಿಂಗ, ಆ ಸ್ಥಲದನುಭಾವದ ವಚನ:

[5]ಪ್ರಾಣಲಿಂಗಿಯ ಆಚಾರಲಿಂಗಸ್ಥಲ:[5]

೧೮೪

ಆಚಾರಸಹಿತ ಲಿಂಗಭಕ್ತನಾದರೆ,
ದೈವವೆಂಬುದ ತನ್ನಲ್ಲಿಯೇ ಅಱಿಯಬೇಕು.

೧–೧ ಚ್ಛ (ಮೂ), ೨+ಪ್ರಣಮ (ಮೂ), ೩–೩ x (ಮೂ), ೪–೪ x (ಮೂ), ೫–೫ x (ಮೂ).

ಇದಿರನ್ಯಭವಿಯ ಕೊಂ[೧]ಡ[೧] ಕಾರಣವೇನಯ್ಯಾ ಲಿಂಗೈಕ್ಯಂಗೆ?
ಅರಿಷಡ್ವರ್ಗ ಮಲತ್ರಯಂಗಳೆಂಬ ಭವಿಗಳನಱಿಯಬೇಕು.
ಅಱಿದಱಿದು ಆನಂದವೆಂಬ ಗುರುವಿನ ಕರದಿಂದ ಇವಱ ಭಕ್ತರ ಮಾಡಿ,
ದೀಕ್ಷೆ ಶಿಕ್ಷೆ ಸ್ವಾನುಭಾವದಿಂದ ತನ್ನನೇ ಅಱಿಯಬೇಕು.
ತ್ರಿಕರಣ ಘುಟಿಕೆಯಂ ಜೀವಕಳೆಯನ್ನಿಕ್ಕಿ ಇವಱ ಭಕ್ತರಂ ಮಾಡಿ
ಶಿವಲಿಂಗಾರ್ಚನೆಯ ಮಾಡುವಾತನೀಗ ಶೀಲವಂತ.
ಅವಱಿಂ ಮತ್ತನಾಗಿ ವಿಸಟಂಬರಿದು,
ಅವು ಹೇಂಗೆ ಪ್ರಯೋಗಿಸಿದವು ಅವಱಿಚ್ಚೆಗೆ ತಾನು ಪ್ರಯೋಗಿಸದೆ,
ಪರಿಣಾಮದಿಂದ ಬಂದ ಪದಾರ್ಥವ,
ಲಿಂಗಾರ್ಪಿತವ ಮಾಡಿಕೊಂಬಾತನೀಗ ಲಿಂಗಸುಯಿಧಾನಿ,
ಭವಿಪಾಕವ ಬಿಟ್ಟಾತ.
ಅರ್ಪಯೇದ್ಯಃ ಸ್ವಯಂ ಪಾಕಂ ಪರಪಾಕಂ ವಿವರ್ಜಯೇತ್ ।
ವ್ಯಾಪಾರಂ ಸಕಲಂ ತ್ಯಕ್ತ್ವಾ ಸ ರುದ್ರೋ ನಾತ್ರ ಸಂಶಯಃ ॥
ಇಂತಪ್ಪಾತನೀಗ ಲಿಂಗೈಕ್ಯನು.
ಇನ್ನು ಅನ್ಯದೈವವೆಂಬವು:
ಪ್ರಾಣ [೨]ಅಪಾನ[೨] ವ್ಯಾನಉದಾನ ಸಮಾನ
ನಾಗ ಕೂರ್ಮ [೩]ಕೃಕತ[೩] ದೇವದತ್ತ ಧನಂಜಯವೆಂಬ ದಶವಾಯುಗಳು ಉಂಟಾಗಿ
ತನ್ನ ತಾನಱಿದ ಪುರುಷಂಗೆ ಇವೆ ಅನ್ಯದೈವ ಕಾಣಿಭೋ!
ಭೂತಲಿಂಗಮಿದಂ ಜ್ಞೇಯಂ ಪ್ರೇತಲಿಂಗಂ ಶಿವಾರ್ಚಕಃ ।
ಭೂತಪ್ರೇತಪಿಶಾಚಾಂಶ್ಚ ದೂರತಃ ಪರಿವರ್ಜಯೇತ್ ॥
ಇಂತಪ್ಪ ಭವಿಭಕ್ತರೆಂಬ ಭೇದವನಱಿಯದೆ
ಇದಿರಲ್ಲಿ ಅನ್ಯದೈವವುಂಟೆಂಬ
ಶೀಲರೆಲ್ಲ ಶಿಲವಂತರೆ? ಅವರಂತಿರಲಿ.
ತನ್ನ ಮನದ ತಮಂಧವ ಕಳೆದು ತನ್ನೊಳಗಿದ್ದ ಭವಿಗಳ ಭಕ್ತರ ಮಾಡಿ
ತನ್ನ ವಾಯುಭೂತಂಗಳ ಅನ್ಯದೈವವೆಂದೆನಿಸದೆ ಶಿವಸಂಸ್ಕಾರಿಗಳೆಂದೆನಿಸಿ
ನಿತ್ಯ ಲಿಂಗಾರ್ಚನೆಯ ಮಾಡಬಲ್ಲ ಮಹಾಪುರುಷನ
ಶ್ರೀಹಸ್ತಂಗ[೪]ಳಲ್ಲಿ[೪] ಪೊಗಳುತ್ತಿದ್ದವೈ ವೇದ.

೧-೧ ಡು (ಮೂ). ೨-೨ x (ಮೂ). ೩-೩ ಕಕಲ (ಮೂ). ೪-೪ ಳಂ (ಮೂ).

ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ ।
ಅಯಂ ಮೇ ವಿಶ್ವಭೇಷಜಃ ಅಯಂ ಶಿವಾಭಿಶರ್ಮನಃ
ಅಯಂ ಮಾತಾ ಅಯಂ ಪಿತಾ ॥
ಇಂತಪ್ಪ ಲಿಂಗಾರ್ಚನೆಯ ಮಾಡಬಲ್ಲಾತ ಸಂಬಂಧಿಯೆನಿಸಿಕೊಳ್ಳಬಲ್ಲಾತ.
ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣ ಬಸವಣ್ಣಂಗೆ ಸುಲಭವಾಯಿತ್ತು,
ಮಿಕ್ಕಿನವರಿಗೆಲ್ಲ ಅಸುಲಭ. । ೨೩ । [೮೬೦]

೧೮೫
ಹೊನ್ನು ಭಕ್ತನೆಂಬೆನೆ? ಹೊನ್ನಿನೊಳಗಣ ಮುದ್ರೆ ಭವಿ,
ಹೆಣ್ಣು ಭಕ್ತನೆಂಬೆನೆ? ಹೆಣ್ಣಿನೊಳಗಣ ವಿರಹ ಭವಿ,
ಮಣ್ಣು ಭಕ್ತನೆಂಬೆನೆ? ಮಣ್ಣಿನೊಳಗಣ ಬೆಳಸು ಭವಿ,
ಈ ತ್ರಿವಿಧಭವಿಯಂ ಕಳೆದುಳಿಯಬಲ್ಲರೆ,
ಕೂಡಲ ಚೆನ್ನಸಂಗಯ್ಯನಲ್ಲಿ ಅಚ್ಚ ಶೀಲವಂತನೆಂದೆಂಬೆ. । ೨೪ । [೮೬೧]

೧೮೬
ತ[1]ಮ್ಮ[1] ಆಚಾರಕ್ಕೆ ಅನ್ಯರಿಗೆ ಪ್ರಾಣಲಿಂಗಸಂಬಂಧವ ಮಾಡುವರಯ್ಯಾ.
ಹೊದ್ದಿತಲ್ಲಾ ಗುರುವಚನಕ್ಕೆ ಭಂಗ !
ಏಕಕಾಲ [2]ಲಿಂಗಾರ್ಚನೆ ತಡೆದರೆ ರೌರವನರಕವೆಂದುದು
ಕೂಡಲ ಚೆನ್ನಸಂಗಯ್ಯನ ವಚನ. । ೨೫ । [೮೬೨]

ಇಂತು ಆಚಾರಲಿಂಗದಲ್ಲಿ ಅನುಭಾವಿಯಾದ ಪ್ರಾಣಲಿಂಗಿಯ ಗುರುಲಿಂಗ. ಆ ಸ್ಥಲದನುಭಾವದ ವಚನ:

[3]ಪ್ರಾಣಲಿಂಗಿಯ ಗುರುಲಿಂಗಸ್ಥಲ:[3]

೧೮೭
ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳಂ ಕಳೆದು,
ಆಜ್ಞಾದೀಕ್ಷೆ ಉಪಮಾದೀಕ್ಷೆ ಸ್ವಸ್ತಿಕಾರೋಹಣ ವಿಭೂತಿಯ ಪಟ್ಟ

೧-೧ ನ್ನ (ಮೂ), ೨+ ಕ್ಕೆ (ಮೂ), ೩-೩ x (ಮೂ).

ಕಳಕಾಭಿಷೇಕ ಲಿಂಗಾಯತ ಲಿಂಗಸ್ವಾಯತ
ಈ ಏಳನು ಕಾಯಕ್ಕುಪದೇಶವ ಮಾಡುವುದು.
ಸಮಯ ನಿಃಸಂಸಾರ ನಿರ್ವಾಣ ತತ್ವದೀಕ್ಷೆ ಅಧ್ಯಾತ್ಮ ಅನುಗ್ರಹ ಶುದ್ಧವಿದ್ಯೆ
ಈ ಏಳನು ಮನಕ್ಕುಪದೇಶವ ಮಾಡುವದು.
ಏಕಾಗ್ರಚಿತ್ತ ದೃಢವ್ರತ ಪಂಚೇಂದ್ರಿಯಾರ್ಪಿತ ಅಹಿಂಸೆ
ಮನೋಲಯ ಲಿಂಗನಿಜ ಸದ್ಯೋನ್ಮುಕ್ತಿ
ಈ ಏಳನು ಪ್ರಾಣಕ್ಕುಪದೇಶವ ಮಾಡುವುದು.
ಈ ಪ್ರಕಾರದುಪದೇಶ ಕೂಡಲ ಚೆನ್ನಸಂಗಯ್ಯನಲ್ಲಿ ಸಹಜದೀಕ್ಷೆ. । ೨೬ । [೮೮೫]

೧೮೮

ತಾವು ಗುರುವೆಂದು ಮುಂದಣವರಿಗನುಗ್ರಹವ ಮಾಡುವರಯ್ಯಾ,
ತಾವು ಗುರುವೆಂತಾದರೊ, ಎಲ್ಲರಿಗೆಯೂ ಒಂದೇ ದೇಹ!
ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ ।
ಆತ್ಮಕಾಯ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ॥
ಎಂದುದಾಗಿ, ಗುರುವೆಂಬುದು ತಾನು ಪರುಷವು,
ಆ ಪರುಷವು ಮುಟ್ಟಲೊಡನೆ ಉಳಿದ ಲೋಹಂಗಳು
ಸುವರ್ಣವಾದುವಲ್ಲದೆ ಆ ಪರುಷವೆ ಆಗಲಚೆಯವು.
ಅದು ಗುರುಸ್ಥಲವಲ್ಲ, ನಿಲ್ಲು ಮಾಣು.
ಗುರುವೆಂಬುದು ತಾನು ಸ್ವಯಂಜ್ಯೋತಿಪ್ರಕಾಶವು.
ಅಂತಪ್ಪ ಸ್ವಯಂಜಜ್ಯೋತಿಪ್ರಕಾಶವ ತಂದು
[೧]ಪರಂ[೧]ಜ್ಯೋತಿಯ ಹೊತ್ತಿಸಿದೊಡೆ
ಆ ಜ್ಯೋತಿ ತನ್ನಂತೆ ಮಾಡಿತ್ತು!
ಅದಾವ ಜ್ಯೋತಿಯೆಂದಡೆ [೨]ಪಶ್ಚಿಮಜ್ಯೋತಿ.[೨]
[೩]ಆ[೩] ಪಶ್ಚಿಮಜ್ಯೋತಿಯ ಬೆಳಗಿನಿಂದ ಪ್ರಾಣಲಿಂಗವ ಕಂಡು ಸುಖಿಯಾದೆನು.
ನಾಲ್ಕು [೪]ವೇದಾರ್ಥ ಅಜಪೆಗಾಯತ್ರಿ.[೪]
ಅಜಪಗಾಯತ್ರಿಯಾರ್ಥಪ್ರಾಣಾಯಾಮದಿಂದ ಪ್ರಾಣಲಿಂಗ ಸಂಬಂಧವ ಮಾಡೂದು
ಇಷ್ಟರಲ್ಲಿ ತಾನು ಸ್ವತಂತ್ರನಾದಡೆ ಇಷ್ಟಲಿಂಗವನಾರಿಗಾದರೂ ಕೊಡುವುದು.
ಇಲ್ಲದಿದ್ದರೆ ಅಂಧಕನ ಕೈಯ ಹೆಳವ ಹಿಡಿದಂತೆ ಕಾಣಾ,
ಕೂಡಲ ಚೆನ್ನಸಂಗಮದೇವಯ್ಯಾ. । ೨೭ । [೮೮೬]

೧-೧ ಊರ (ಮೂ), ೨-೨ (ಮೂ), ೩-೩ (ಮೂ), ೪ x (ಮೂ).

ಇಂತು ಗುರುಲಿಂಗದಲ್ಲಿ ಅನುಭಾವಿಯಾದ ಪ್ರಾಣಲಿಂಗಿಯ ಶಿವಲಿಂಗ. ಆ ಸ್ಥಲದನುಭಾವದ ವಚನ:

ಪ್ರಾಣಲಿಂಗಿಯ ಶಿವಲಿಂಗಸ್ಥಲ:

೧೮೯
ಉರಸ್ಥಲದಲ್ಲಿ ಲಿಂಗವ ಧರಿಸಿದ ಬಳಿಕ
ಮನದ ಕೊನೆಯಿಂದ ಲಿಂಗವನಗಲದಿರಬೇಕು.
ಉರ ಗುರುಸ್ಥಲ, ಉರ ಲಿಂಗಸ್ಥಲ, ಉರ ಜಂಗಮಸ್ಥಲ,
ಉರ ಪ್ರಸಾದಸ್ಥಲ, ಉರ ಮಹಾಸ್ಥಲ, ಉರ ಅನುಭಾವಸ್ಥಲವೆಂದಱಿವುದು.
ಅನ್ಯಮಿಶ್ರಂಗಳ ಹೊದ್ದಲಾಗದು,
ತಟ್ಟು-ಮುಟ್ಟು ತಾಗು-ನಿರೋಧಂಗಳಿಗೆ ಗುಱಿಯಾಗಲಾಗದು.
ಇಂದ್ರಿಯಂಗಳ ಕೂಡಿ ಮನಸ್ತಾಪ[೧]ಂಗೊಳ್ಳದೆ ಉರಲಿಂಗಸ್ವಾಯತವಾ[೨][ಗೆ],[೨]
ಪ್ರಾಣಲಿಂಗಪ್ರಾಣಿಗಿದು ಚಿಹ್ನ
ಕೂಡಲ ಚೆನ್ನಸಂಗಮದೇವಾ. । ೨೮ । [೯೦೪]

೧೯೦
ಕರಸ್ಥಲದಲ್ಲಿ ಲಿಂಗವ ಧರಿಸಿದ ಬಳಿಕ
ಅನಿಮಿಷಲಿಂಗದಲ್ಲಿ ದೃಷ್ಟಿಯಾಗಿರಬೇಕು,
ತನ್ನ ತಾನೆ ಅನಿಮಿಷನಾಗಿರಬೇಕು,
ಜಂಗಮದಲ್ಲಿ ನಿಲುಕಡೆಯಱಿಯಬೇಕು,
ಪ್ರಸಾದದಲ್ಲಿ ಪರಿಪೂರ್ಣನಾಗಿರಬೇಕು,
ಹಿರಣ್ಯಕ್ಕೆ ಕೈಯಾನದಿರಬೇಕು.
ತನ್ನ ನಿಲುಕಡೆಯ ತಾನಱಿಯಬೇಕು.
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಕರಸ್ಥಲದ ನಿಜವನಱಿವಡೆ ಇದೇ ಕ್ರಮ. । ೨೯ । [೯೦೫]೧೯

೧೯೧
ಅಂಗಸೋಂಕಿನಲ್ಲಿ ಲಿಂಗಸಂಬಂಧಿಯಾದ ಬಳಿಕ
ಸರ್ವಾಂಗವಿಕಾರವಳಿಯಬೇಕು.

೧+ ನ (ಮೂ), ೨-೨ ಗಿ (ಮೂ).

ಅಂಗಸೋಂಕಿನ ಲಿಂಗಕ್ಕೆ ಸೆಜ್ಜೆ ಶಿವದಾರವಾವುದೆಂದಡೆ :
ಅಂಗವೆ ಸೆಜ್ಜೆ, ಆಚಾರವೇ ಶಿವದಾರ, ತ್ರಿಕರಣ ಶುದ್ಧವೆ ಕುಣಿಕೆ.
ಈ ತ್ರಿವಿಧ ಗುಣವನಱಿಯಬೇಕು, ತ್ರಿವಿಧ ಸಂಪನ್ನನಾಗಬೇಕು,
ಈ ತ್ರಿವಿಧ ಮುಟ್ಟಿ ಲಿಂಗಾರ್ಚನೆಯ ಮಾಡಬೇಕು.
ಅಂಗಲಿಂಗ ಸಂಬಂಧಕ್ಕೆ ಇದೇ ಕ್ರಮ
ಕೂಡಲ ಚೆನ್ನಸಂಗಮದೇವಾ. । ೩೦ । [೬೦೬]

೧೯೨
ಕಕ್ಷೆಯಲ್ಲಿ ಲಿಂಗವ ಧರಿಸಿಕೊಂಡ ಬಳಿಕ
ಅನ್ಯಕಾಂಕ್ಷೆ ಇಲ್ಲದಿರಬೇಕು,
ಮಾಯದ ಉಸಿರೆಡೆಯಾಡದಿರಬೇಕು,
ಸಂಸಾರ ಸಂಗವ ಹೊದ್ದದೆ
ಮನವು ಮಹಾಸ್ಥಳವನಿಂಬುಗೊಂಡಿರಬೇಕು.
ಕೂಡಲ ಚೆನ್ನಸಂಗಯ್ಯನಲ್ಲಿ ಏಕಾರ್ಥವಾಗಿ
ಕಕ್ಷೆಯಲ್ಲಿ ಲಿಂಗವ ಧರಿಸುವ ಕ್ರಮ. । ೩೧ । [೬೦೭]

೧೯೩
ಗುರುಕಾರುಣ್ಯದ ಮಹಾಸಂಪಾದನೆಯಲ್ಲಿ
ಅತ್ಯಂತ ವಿಶೇಷಸ್ಥಳಂ ಗಳವು.
ಶರೀರಾರ್ಥ ಮಹಾರ್ಥದಲ್ಲಿ, ಮಹಾಲಿಂಗ ಸಂಪಾದನೆಯಲ್ಲಿ,
ತ್ರಿವಿಧ ಸಂಪಾದನೆಯಲ್ಲಿ, ನಾದ ಬಿಂದು ಸಂಪಾದನೆಯಲ್ಲಿ,
ಮಾರ್ಗಕ್ರಿಯಾಸಂಪಾದನೆಯಲ್ಲಿ, ಭಕ್ತಿ ಸಂಪಾದನೆಯಲ್ಲಿ,
ಭಾವನಿಷ್ಠೆಯಲ್ಲಿ, ಅರ್ಪಿತ ನಿಷ್ಠೆಯಲ್ಲಿ, ಆ ಗಳವೆ ಮಹಾಸ್ಥಲ.
ಅತ್ಯಂತ ವಿಶೇಷಸ್ಥಳವಾಗಿ,
ಗಳದಲ್ಲಿ ಧರಿಸಿರೆ ಕೂಡಲ ಚೆನ್ನಸಂಗಯ್ಯನ. । ೩೨ । [೬೦೮]

೧೯೪
ಅಮಳೋಕ್ಯದಲ್ಲಿ ಲಿಂಗವ ಧರಿಸುವರೆ
ಅನ್ನಪಾನಾದಿಗಳ ಹಂಗಳಿಯಬೇಕು,
ಅಹಂಕಾರ ಮಮಕಾರ ಅಷ್ಟಮದಂಗಳ ಹಂಗಳಿಯಬೇಕು,
ಅನುಭಾವ ಘನವೇದ್ಯನಾಗಿರಬೇಕು,

ಕಾಮನ ಗಣ್ಯವಿಲ್ಲದಿರಬೇಕು, ಶಬ್ದ ನಿಃಶಬ್ದವಾಗಿರಬೇಕು,
ಅಹಂಕಾರ ಮಹದಾಶ್ರಯದಲ್ಲಿ ಮನವು ಲೀಯವಾಗಬೇಕು.
ಕೂಡಲ ಚೆನ್ನಸಂಗಯ್ಯನಲ್ಲಿ ಅಮಳೋಕ್ಯದಲ್ಲಿ ಲಿಂಗವ ಧರಿಸಿ
ಪರಮಪರಿಣಾಮಿಯಾಗಬೇಕು. । ೩೩ । [೯೦೯]

೧೯೫
ಉತ್ತಮಾಂಗದಲ್ಲಿ ಲಿಂಗವ ಧರಿಸಿದ ಬಳಿಕ
ಅನ್ಯರಿಗೆ ತಲೆವಾಗಲಾಗದು, ಮಾನವರ ಬೇಡಲಾಗದು.
ಹಸಿವು ತೃಷೆ ವಿಷಯಂಗಳು ಲಿಂಗದಲ್ಲಿ
ನಿಕ್ಷೇಪವಾಗಬೇಕು.
ಜಾಗ್ರಸ್ವಪ್ನಸುಷುಪ್ತಿಯಲ್ಲಿ ಲಿಂಗದ ನಿಲುಕಡೆಯನಱಿತು
ತೆಱಹಿಲ್ಲದಿರಬೇಕು.
ಉತ್ತಮಾಂಗದಲ್ಲಿ ಲಿಂಗವ ಧರಿಸಿದ ಮಹಾತ್ಮಂಗೆ
[1]ಇದೆ ಮುಕ್ತಿಪಥವಯ್ಯಾ[1] ಕೂಡಲ ಚೆನ್ನಸಂಗಮದೇವಾ. । ೩೪ । [೯೧೦]

೧೯೬
ಕಾಯಾನುಭಾವಿಗಳು ಕಾಯದಲ್ಲಿಯೇ ಮುಕ್ತರು,
ಜೀವಾನುಭಾವಿಗಳು ಜೀವದಲ್ಲಿಯೇ ಮುಕ್ತರು,
ಪ್ರಾಣಾನುಭಾವಿಗಳು ಪ್ರಾಣದಲ್ಲಿಯೇ ಮುಕ್ತರು,
ಪವನಾನುಭಾವಿಗಳು ಪವನದಲ್ಲಿಯೇ ಮುಕ್ತರು.
ಲಿಂಗಾನುಭಾವಿಗಳಿಗೆಂತು ಸರಿಯೆಂಬೆ !
ನಿರವಯ ಸ್ವಯಂಪ್ರಕಾಶವಾಗಿಪ್ಪ,
ಲಿಂಗದಲ್ಲಿ ಕೂಡಲ ಚೆನ್ನಸಂಗಾ ನಿಮ್ಮ ಶರಣನು. । ೩೫ । [೯೧೧]

೧೯೭
ಸ್ತ್ರೀಲಿಂಗ ಪುಲ್ಲಿಂಗ ನಪುಂಸಕಲಿಂಗವೆಂದೆಂಬರು,
ಆದಿ ಅನಾದಿ ಸಂದಣಿ ಸಯವಾಯಿತ್ತು.
ಪ್ರಣಮ ಪ್ರಜ್ವಲಿತ ಕುಲವಳಿದು [2]ಪ್ರಾಣ[2]ಲಿಂಗ,
ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣಂಗೆ. । ೩೬ । [೯೧೨]

೧–೧ x (ಮೂ), ೨–೨ ಪ್ರಣಮ (ಮೂ).

೧೯೮

ಉಱುಗಿಹೋದ ಕೊಡನನಳುಕದೆ
ಮಱುಗುತ್ತ ಹಿಡಿವ ನೇಹವ ನೋಡಿರೆ!
ಹರಿವ ಕರಿಗಳ ಅಱಿವಿ[1]ನೆಡೆಗೆ[1] ನೋಡಿರೆ!
ಸರಹಱಿದ ಮಣಿಗಳೊಂದೆ ಹರಳಾದುದ ನೋಡಿರೆ!
ಬೆರೆಸಿ ಬೇಱಿಹ ಕೂಡಲ ಚೆನ್ನಸಂಗನ ಎರಡಿಲ್ಲದೆ ನೋಡಿರೆ! । ೩೭ ।

೧೯೯

ಕಳೆಯೇಱಿದ ಲಿಂಗದ ತೆಱನನಱಿದು
ಕಳೆ ಕಳೆಯದ ವಳಯದ ಸೀಮೆಯಿಂದತ್ತಲು ವೇಧಿಸಿದ ಮುಗ್ಧೆಯ ನೋಡಾ!
ಪಂಚಭೌತಿಕದ ಗಡಣೆಯ [2]ನೇಮ[2]ದಲ್ಲಿ ಭಾವಿಸಿದ
ಮುಗ್ಧೆಯ ನೋಡಾ!
ಇರುಳೆಂಬ ಹಗಲೆಂಬ
ಕತ್ತಲೆಯನಱಿಯದ ಮುಗ್ಧೆಯ ನೋಡಾ!
ಆಕಾರ ನಿರಾಕಾರದ ಪುಣ್ಯಪಾಪದ ಅಱುಹಿನ ಮಱಹಿನ
ಅಷ್ಟದಳ ಕಮಳದ ಮಧುಪಾನವೆಯಾಗದೆ
ಕೂಡಲ ಚೆನ್ನಸಂಗಯ್ಯನೆಂಬ ಮಹಾಲಿಂಗವ
ಮನದಲ್ಲಿ ಅಳವಡಿಸಿದ ಮುಗ್ಧೆಯ ನೋಡಾ! । ೩೮ । [೯೧೪]

೨೦೦

ಪೃಥ್ವಿ ಸಲಿಲ ಪಾವಕ ಪವನ ಅಂಬರ ರವಿ ಶಶಿ ಆತ್ಮನೆಂಬ
ಅಷ್ಟ ತನುವಿನ ಭೇದವ ಭೇದಿಸಿ,
ಶ್ರೋತ್ರ ನೇತ್ರ ಜಿಹ್ವೆ ತ್ವಕ್ಕು ಘ್ರಾಣವೆಂಬ
ಪಂಚೇಂದ್ರಿಯವನಱಿದು,
ವಾಕ್ಕು ಪಾಣಿ ಪಾದ ಪಾಯು ಗುಹ್ಯೇಂದ್ರಿಯವೆಂಬ
ಕರ್ಮೇಂದ್ರಿಯ ತೊಱೆದು,
ಪ್ರಾಣಾಪಾನ ವ್ಯಾನ ಉದಾನ ಸಮಾನ
ನಾಗ ಕೂರ್ಮ [3]ಕೃಕತ[3] ದೇವದತ್ತ ಧನಂಜಯನೆಂಬ
ದಶವಾಯುಗಳ ಸಂಚವನಱಿದು,

೧-೧ ಗಡಿಗಡಿಗೆ (ಮೂ), ೨-೨ ಮಲ (ಮೂ), ೩-೩ ಕಿಕಿಲ (ಮೂ).

ಮನ ಬುದ್ಧಿ ಚಿತ್ತ ಅಹಂಕಾರವೆಂಬ
ಚತುರ್ವಿಧ ಕರಣಂಗಳನೊಂದುಗೂಡಿ,
ಉತ್ಪತ್ಯಸ್ಥಿತಿಲಯವೆಂಬ ಕಾಲಮೂಲಾದಿಗಳಂ ಸುಟ್ಟು,
ಜ್ಞಾನವನೆ ಬೆಳಗಿ, ಧ್ಯಾನವನೆ ನಿಲಿಸಿ,
ಚಿತ್ತ ಸರಾಗದಲ್ಲಿ ಶಿವಲಿಂಗಾರ್ಚನೆಯ ಮಾಡುವ ಶರಣ.
'ವ್ಯಾಪಾರಂ ಸಕಲಂ ತ್ಯಕ್ತ್ವಾ' 'ನಾ ರುದ್ರೋ ರುದ್ರಮರ್ಚಯೇತ್'
ಎಂಬ ಶ್ರುತಿ ನಿಮ್ಮ ಶರಣಂಗೆ ಸಂದಿತ್ತು,
ಕೂಡಲ ಚೆನ್ನಸಂಗಮದೇವಾ. । ೩೯ । [೯೧೫]

೨೦೧
ಕಾಯಪುರವೆಂಬ ಪಟ್ಟಣದೊಳಗೆ
ಮನವೆಂಬ ಅರಸು, ತ್ರಿಗುಣವೆಂಬ ಪ್ರಧಾನರು,
ವಶೀಕರಣವೆಂಬ ಸೇನಬೋವರು
ಸಂಚಲವೆಂಬ ತೇಜಿ, ಅಷ್ಟಮದವೆಂಬವೆಂಟಾನೆ.
[1]ಈರೈದು[1] ಮೊದಲ ನಾಯಕರು, ಇಪ್ಪತ್ತೈದು ಪ್ರಜೆ,
ನೂಱನಾಲ್ವತ್ತೆಂಟು ದೇಹವಿಕಾರವೆಂಬ ಪರಿವಾರ
ಈ ಸಂಭ್ರಮದಲ್ಲಿ ಮನೋರಾಜ್ಯಂಗೆಯ್ಯುತ್ತಿರಲು–
ಇತ್ತ ಶೂನ್ಯವೆಂಬ ಪಟ್ಟಣದೊಳಗೆ
ಅನಾಮಿಕನೆಂಬ ಲಿಂಗದರಸು
ಅಜಾತನೆಂಬ ಶರಣ [2]ಪ್ರಧಾನಿ,[2]
ಪ್ರಪಂಚ[3]ವೆಂಬ ದಳ ಮುಱಿದು,[3] ಮೂವರಾಟ [4]ಕೆಟ್ಟಿತ್ತು.[4]
ಮನವೆಂಬ ಅರಸನು ಕೂಡಲ ಚೆನ್ನಸಂಗಯ್ಯಂಗೊಲಿದ ಕಾರಣ. । ೪೦ । [೯೧೬]

೨೦೨
ಹೃದಯಕಮಳಮಧ್ಯದಲ್ಲಿಪ್ಪ [5]ದೇವರ[5] ದೇಹಾರವ ಮಾಡಲಱಿ[6]ಯದೆ[6]
ದೇಹ ನಿರ್ದೇಹಿಯಾಗದನ್ನಕ್ಕ ದೇಹಾರವೆಲ್ಲಿಯದೊ?
ಅನಂತಮುಖದಲ್ಲಿ ದೇಹಾರವ ಮಾಡಲು ದೇವನಲ್ಲಿಲ್ಲ ನೋಡಾ!
[7]ಅಸತ್ಯ[7]ವಿಡಿದು, ಹುಸಿಯನೆ ಪೂಜಿಸಿ ಗಸಣಿಗೊಳಗಾದಿರಲ್ಲಾ!
ಅನಂತವಳಿದು ನಿಜವನಱಿದ ಏಕೋಗ್ರಾಹಿ,
ಕೂಡಲ ಚೆನ್ನಸಂಗಾ ನಿಮ್ಮ ಶರಣ ನಿಶ್ಚಿಂತ ನಿಜೈಕ್ಯನು. । ೪೧ । [೯೧೭]

೧–೧ (ಮೂ), ೨–೨ (ಮೂ), ೩–೩ ಚುಗಳಂ ಮಱಿದು (ಮೂ), ೪–೪ ಕೆಡಿಸಿ (ಮೂ), ೫–೫ (ಮೂ), ೬–೬ ದು (ಮೂ), ೭–೭ ಆ ಸಾಹಿತ್ಯ (ಮೂ).

೨೦೩

ನಾಲ್ಕು ಗ್ರಾಮದ ಪಟ್ಟಣಕ್ಕೆ ಪಂಚೈವರ ಕಾವಲು,
ಅವರ ಸಂಚವಿಡಿದು ಲಿಂಗಾರ್ಚನೆಯಂ ಮಾಡಿದೊಡೆ
ಲೋಕದ ಬಳಕೆ ಕಂಡಯ್ಯಾ.
ಪಂಚೈವರ ಪಂಚಸ್ಥಳವಳಿದು ಏಕಸ್ಥಳವಱಿದ ಶರಣ
ನವನಾಳದ [1]ಲ[1]ಹರಿಯ ಭೇದವನಱಿದಡೆ ಲಿಂಗೈಕ್ಯ ನೋಡಾ!
ನಾಳಮಧ್ಯದಲ್ಲಿಪ್ಪ ಜೀವಪ್ರಾಣನ ನೆಲೆಯನಱಿದಡೆ
ಕೂಡಲ ಚೆನ್ನಸಂಗಯ್ಯನೊಬ್ಬನೆ ಸಾಹಿತ್ಯವಾಗಿಹನು. । ೪೨ । [೯೧೮]

೨೦೪

ಗ್ರಾಮದ ಮಧ್ಯ ಧವಳಾರದೊಳಗೆ
ಎಂಟು ಕಂಬ ಒಂಬತ್ತು ಬಾಗಿಲ ಶಿವಾಲಯವಿರುತ್ತಿರಲು,
ಆ ಮಧ್ಯಸ್ಥಾನದೊಳಿಪ್ಪ ಸ್ವಯಂಭುನಾಥನನಱಿಯದೆ
ಕಲ್ಲಿನಾಥನ [2]ಪೂಜಿಸಿ[2] ಎಲ್ಲರು ಮರುಳಾದರು ನೋಡಾ!
ಮೆಲ್ಲಮೆಲ್ಲನೆ ಸ್ವಯಂಭುನಾಥನು ತನ್ನ ತಪ್ಪಿಸಿಕೊಂಡು
ಕಲ್ಲಿನಾಥನ ತೋಱಿದ.
ಶಿವಾಲಯದೊಳಗಣ ಮಧ್ಯಸ್ಥಾನವನಱಿತು
ಗರ್ಭಗೃಹವ ತಿಳಿದರೆ ಕಲ್ಲಿನಾಥ ನಾಸ್ತಿ.
ಕೂಡಲ ಚೆನ್ನಸಂಗಯ್ಯನೆಂಬ ಸ್ವಯಂಭು ಇರುತ್ತಿರಲು
ಎತ್ತಲೆಂದಱಿಯರಲ್ಲಾ. । ೪೩ । [೯೧೯]

೨೦೫

ಕಂದದ ಹೂವೆ ಕೊಯ್ದು, [3]ನಂದದಾರತಿಯನೆ ಬೆಳಗಿ,[3]
ಅಂದವಳಿಯದೆ, ಬಿಂದು ತುಳುಕದೆ, ನಂದಿ ಮುಂದುಗೆಡದೆ,
ಅಂದಂದಿನ ಹೊಸ ಪೂಜೆಯ ಮಾಡಿ,
ಆ ಲಿಂಗಮಧ್ಯವನೆ ತಿಳಿದು ನೋಡಿ,
ಮೇರುಗಿರಿಯಾಕಳನೆ ಕಱೆದು, ಕ್ಷೀರದಲ್ಲಿ ಅಡಿಗೆಯ ಮಾಡಿ,
ಕೂಡಲ ಚೆನ್ನಸಂಗಯ್ಯನೆಂಬ ಲಿಂಗಕ್ಕೆ
ಆರೋಗಣೆಯ ಸಮಯ. । ೪೪ । [೯೨೦]

೧-೧ ಲ್ಲಾ (ಮೂ), ೨-೨ ಪೂಜಿಸಲೊಲ್ಲದೆ (ಮೂ), ೩-೩ x(ಮೂ).

೨೦೬

ಸರವರದೊಳಗೊಂದು ಹಿರಿದು ಕಮಳವು ಹುಟ್ಟಿ,
ಪರಿಮಳವಡಗಿತ್ತನಾರೂ ಅಱಿಯರಲ್ಲಾ!
ಅರಳಲೀಯದೆ ಕೊಯ್ದು ಕರಡಿಗೆಯೊಳಗಿರಿಸಿ,
ಸುರಕ್ಷಿತವ ಮಾಡಲಾರೂ ಅಱಿಯರಲ್ಲಾ!
[೧]ಎಡದ[೧] ಕೈಯಲಿ ಲಿಂಗ, ಬಲದ ಕೈಯಲಿ ಪುಷ್ಪದೋಱದು,
ಪೂಜೆಯ ಮಾಡಲಱಿಯರಲ್ಲಾ!
ಇದನನೋಗರವ ಮಾಡಿ ಸರುವ ತೃಪ್ತಿಕೊಟ್ಟು
ಭರಿತರಾಗಿಪ್ಪರಿನ್ನಾರು ಹೇಳಾ!
ಪರದೇಶಮಂಡಲವನಿರವನೊಂದನೆ ಮಾಡಿ,
ಪರಿಯಾಯ ಪರಿಯಾಯನೊರೆದು ನೋಡುತ್ತ,
ಕಱುವಿಟ್ಟ ರೂಹಿನಂತೆ, ಕಣ್ಣೆರಡು ಹಳಚದಂತೆ,
ಧರೆಯ ಏರಿಯ ಮೇಲೆ ಮೆಟ್ಟಿ ನಿಂದು ನೋಡುತ್ತ,
ಹರಿವ ವೃಷಭನ ಹಿಡಿದು ನೆರೆವ ಸ್ವಾಮಿಯ ಕಂಡು,
ಜನನ ಮರಣವಿಲ್ಲದಂತಾದೆನಲ್ಲಾ!
ಕರುಣಿ ಕೂಡಲ ಚೆನ್ನಸಂಗಯ್ಯಾ
ಬಸವಣ್ಣನ ಕರುಣ ಪ್ರಭುವಿಗಲ್ಲದೆ ಇನ್ನಾರಿಗೂ ಅಳವಡದು. ।೪೫। [೯೨೧]

೨೦೭

ಮಾಣಿಕ್ಯದ ಮಂಟಪದೊಳಗೆ ಏಳು ಚಿತ್ರಕರೊಡನೆ
ಮೇಳವಿಸಿದನು, ಮಹಾಮಂತ್ರಂಗಳ.
ಮೂಲಮಂತ್ರದ ಮೇಲೆ ಪ್ರಾಣಲಿಂಗದ ಬೆಳಗು!
ವಾರಿಕಲ್ಲಲ್ಲಿ ವಜ್ರದ ಕೀಲು ಕೂಟ,
ಜಾಳಾಂದರದೊಳಗೆ ಮಾಣಿಕ್ಯದ ಪ್ರತಿಬಿಂಬ,
ಏಳು ರತ್ನದ ಪುತ್ಥಳಿಗಳಾಟವು!
ಮಣಿಮಾಲೆಗಳ ಹಾರ, ಹೊಳೆವ ಮುತ್ತಿನ ದಂಡೆ,
ಎಳೆಯ ನೀಲದ ತೊಡಿಗೆಯನೆ ತೊಟ್ಟರು, ಸುಳಿದು
ಮದ್ದಳೆಗಾಱರೊಳುಂ ಮೊಳಗೆ ದದ್ದಿಳಮೆನಲು,
ಕುಣಿವ ಪಡಿ ಬಹುರೂಪುಗಳ ನಾಟಕ, ತಾಳ ದಾರಿಯ ಮೇಳ,

೧–೧ ಕರದ (ಮೂ).

ಕಾಳೆಗಾಳಿನ ನಾದ, ಕೊಳಲರವಸದೊಳಗಾಡುತ್ತ
ಒಳ ಹೊಱಗೆ ಕಾಣ ಬರುತ್ತಿರೆ ಚಿತ್ರದ ಬೊಂಬೆ.
ಫಣಿಪತಿಯ ಕಾಣೆ
ಸಂದಣಿಸುತ್ತಿರಲು ಗಣಮೇಳ.
ಕೂಡಲ ಚೆನ್ನಸಂಗಯ್ಯನಲ್ಲಿ
ಕಳಸ ಪ್ರಾಣಲಿಂಗದ ಬೆಳಗಿನೊಳು ಬೆಳಗಿತ್ತು. ।೪೬। [೬೨೨]

೨೦೮
ಉದಯ ಮಧ್ಯಾಹ್ನ ಅಸ್ತಮಾನವೆಂಬ ತ್ರಿಕಾಲದಲ್ಲಿ
ಪ್ರಾಣಲಿಂಗಕ್ಕೆ ಮಜ್ಜನಕ್ಕೆಱೆಯಬೇಕೆಂಬರು.
ಉದಯವಾವುದು? ಮಧ್ಯಾಹ್ನವಾವುದು? ಅಸ್ತಮಾನವಾವುದು?
ಬಲ್ಲವರು ನೀವು ಹೇಳಿರೇ.
ಕಾಯದ ಉದಯವೊ? ಕಾಯದ ಮಧ್ಯಾಹ್ನವೊ? ಕಾಯದ ಅಸ್ತಮಾನವೊ?
ಕಾಯದ ಉದಯ ಬಲ್ಲಾತ ಕರ್ಮಿ,
ಕಾಯದ ಮಧ್ಯಾಹ್ನವ ಬಲ್ಲಾತ ಪ್ರಪಂಚಿ,
ಕಾಯದ ಅಸ್ತಮಾನವ ಬಲ್ಲಾತ ವಿರಕ್ತ.
ಜೀವದ ಉದಯವೊ? ಜೀವದ ಮಧ್ಯಾಹ್ನವೊ? ಜೀವದ ಅಸ್ತಮಾನವೊ?
ಜೀವದ ಉದಯವ ಬಲ್ಲಾತ ಜ್ಞಾನಿ,
ಜೀವದ ಮಧ್ಯಾಹ್ನವ ಬಲ್ಲಾತ ಜಾತಿಸ್ಮರ,[೧]
ಜೀವದ ಅಸ್ತಮಾನವ ಬಲ್ಲಾತ ಜೀವನ್ಮುಕ್ತನು,
ಲಿಂಗದ ಉದಯ, ಲಿಂಗದ ಮಧ್ಯಾಹ್ನ, ಲಿಂಗದ ಅಸ್ತಮಾನ,
ಇಂತೀ ತ್ರಿಕಾಲದಲ್ಲಿ ಪ್ರಾಣಲಿಂಗಕ್ಕೆ ಮಜ್ಜನಕ್ಕೆಱೆಯಬಲ್ಲಡೆ
ಕೂಡಲ ಚೆನ್ನಸಂಗಮದೇವರಲ್ಲಿ
ಆತನು ಅನವರತ ಲಿಂಗಾರ್ಚನಪರನು. ।೪೭। [೬೨೩]

೨೦೯
ಸ್ಥೂಲತನು ಸೂಕ್ಷ್ಮತನು ಕಾರಣತನು:
ಸ್ಥೂಲತನುವಿನಲ್ಲಿ ಇಷ್ಟಲಿಂಗಪ್ರತಿಷ್ಠೆ,
ಸೂಕ್ಷತನುವಿನಲ್ಲಿ ಪ್ರಾಣಲಿಂಗಪ್ರತಿಷ್ಠೆ,
ಕಾರಣತನುವಿನಲ್ಲಿ ತೃಪ್ತಿಲಿಂಗಪ್ರತಿಷ್ಠೆ.

೧+ ತ್ವ (ಮೂ).

ಇಂತೀ ಸ್ಥೂಲ ಸೂಕ್ಷ್ಮ ಕಾರಣ ಮಹವು
ಮಹದುದಯ ಹೃದಯದಲ್ಲಿ
ಕೊನೆದೋಱುತಿರ್ಪ ಪರಂಜ್ಯೋತಿ,
ನಿಮ್ಮ ಶರಣನ ಸರ್ವಾಂಗದಲ್ಲುಂಟು
ಕೂಡಲ ಚೆನ್ನಸಂಗಯ್ಯಾ. । ೪೮ । [೯೨೪]

ಇಂತು ಶಿವಲಿಂಗದಲ್ಲಿ ಅನುಭಾವಿಯಾದ ಪ್ರಾಣಲಿಂಗಿಯ ಜಂಗಮಲಿಂಗ. ಆ ಸ್ಥಲದನುಭಾವದ ವಚನ :

ಪ್ರಾಣಲಿಂಗಿಯ ಜಂಗಮಲಿಂಗಸ್ಥಲ :

೨೧೦
ತನು ಮನ ಧನವನಿತ್ತೆನೆಂಬವರೆಲ್ಲರು,
ತನುಮನಧನವನಿತ್ತೆನೆಂಬ ಮಾತ ಕೇಳಬಹುದೆ?
ಅಂಬಲಿಯನೆಱೆವರೆಲ್ಲಾ ಭಕ್ತರೆ?
ಕಂಬಳಿಯ ಕೊಟ್ಟವರೆಲ್ಲಾ ಭಕ್ತರೆ?
ಧರ್ಮಾರ್ಥ ಕಾಮ್ಯಾರ್ಥ ಮೋಕ್ಷಾರ್ಥ ಪುಣ್ಯಾರ್ಥ
ಇಂತೀ ಚತುರ್ವಿಧಂಗಳಿಲ್ಲದೆ
ತನುಮನಧನವ ನೆಱೆಯಿತ್ತು,
ತನ್ನ ಹಱಿವ ತಾನಱಿಯದನ್ನಕ್ಕ
ಕೂಡಲ ಚೆನ್ನಸಂಗಯ್ಯನಲ್ಲಿ ಅದೆಂತು ಭಕ್ತರೆಂಬೆ? । ೪೯ । [೯೬೧]

೨೧೧
ಶರಣಭರಿತಲಿಂಗ ಎಲ್ಲಾ ಎಡೆಯಲ್ಲಿಯೂ ಉಂಟು,
ಲಿಂಗಭರಿತ ಶರಣನಪೂರ್ವನೋಡಾ!
ಗಮನವುಳ್ಳಡೆ ಜಂಗಮಲಿಂಗ, ನಿರ್ಗಮನಿಯಾದುದೆ ಲಿಂಗಜಂಗಮ.
ಅದಱ ಸಂಯೋಗ ಸಂಬಂಧವ ವೇದಸಿ ನಡೆಯಬಲ್ಲಡೆ
ಕೂಡಲ ಚೆನ್ನಸಂಗಯ್ಯನೆಂಬೆ. । ೫೦ । [1][೯೬೨]

---

೧ ಈ ಸ್ಥಲದ ೫ಳನೆಯ ವಚನದೊಂದಿಗೆ ಹೋಲಿಸಿರಿ. (ಸಂ).

೨೧೨
ಗುರುವಿನ ಗುರು ಪರಮಗುರು ಜಂಗಮಲಿಂಗವೆಂದೆನಿಸಿಕೊಂಡ ಬಳಿಕ,
ಗುರುವಾಗಿ ಉಪದೇಶವ ಮಾಡಲಾಗದು.
ಮುನ್ನ ಗುರುಕರುಣವಾಗಿ ದೀಕ್ಷೆ ಶಿಕ್ಷೆಯ ಮಾಡಿದಲ್ಲಿ,
ದಾಸೋಹವ ಮಾಡಿಸಿಕೊಳಕರ್ತ[1]ನ[1]ಲ್ಲದೆ
ತನ್ನ ಪ್ರಾಣಲಿಂಗವ ಕೊಡಕರ್ತ[1]ನ[1]ಲ್ಲ.
ಪ್ರಾಣಲಿಂಗವ ಕೊಟ್ಟು ಗುರುವಾದ ಬಳಿಕ
ಜಂಗಮಸ್ಥಲಕ್ಕೆ ಭಂಗಹೊದ್ದಿತ್ತು,
ಕೂಡಲ ಚೆನ್ನಸಂಗಮದೇವಾ. ।೫೧। [೯೬೩]

೨೧೩
[2]ಕಿಸುಕಾಷಾಯಾಂಬರ[2]ವನಿಕ್ಕಿದರೇನು?
ವಿಭೂತಿ ರುದ್ರಾಕ್ಷಿಯ ಮಕುಟವ ಧರಿಸಿದರೇನು?
ಸಾಕಾರದಲ್ಲಿ ಸನುಮತರಲ್ಲ, ನಿರಾಕಾರದಲ್ಲಿ ನಿರುತರಲ್ಲ,
ಪರಮಾರ್ಥದಲ್ಲಿ ಪರಿಣಾಮಿಗಳಲ್ಲ.
ಇದು ಕಾರಣ, ಕೂಡಲ ಚೆನ್ನಸಂಗಮದೇವಾ,
ತುಱುಬಾಗಲಿ ಬೋಳಾಗಲಿ ಜಡೆಯಾಗಲಿ
ಅಱಿವುಳ್ಳರೆ ಜಂಗಮ. ।೫೨। [೯೬೪]

೨೧೪
ಭೂಮಿಯ ಮೇಲಿದ್ದ ಅಚಳಪೀಠವೆಲ್ಲ ಲಿಂಗವೆ?
[3]ಅಲ್ಲ, ಲಿಂಗ[3]ಮೂರ್ತಿ ಇಲ್ಲವಾಗಿ.
ಜಾತ ಚರಾದಿಗಳೆಲ್ಲ ಜಂಗಮವೇ? ಅಲ್ಲ.
ಆಚಾರ ಸಮತೆ ಸಂಬಂಧವಿಲ್ಲಾಗಿ,
ಇಂತಿವರೆಲ್ಲರೂ ಉಪಜೀವಿಗಳು.
ಕೂಡಲ ಚೆನ್ನಸಂಗಮದೇವರು ಸಾಹಿತ್ಯವಾಗಿ
ಉಭಯ [4]ಲಿಂಗ[4] ಜಂಗಮವಾದವರಿಗೆ
ನಮೋ ನಮೋ ಎಂಬೆ. ।೫೩। [೯೬೫]

೧-೧ ರ (ಮೂ), ೨-೨ ಏಸು ಕಾಸಾಂಬರ (ಮೂ), ೩-೩ ಅಲ್ಲಲ್ಲಿಗಾ (ಮೂ), ೪-೪ x (ಮೂ).

೨೧೫
ಜಗಭರಿತ ಲಿಂಗ ಎಲ್ಲಾ ಎಡೆಯಲ್ಲಿಯೂ ಉಂಟು,
ಶರಣಭರಿತ ಲಿಂಗ ಅಪೂರ್ವ ನೋಡಾ!
ಗಮನವುಳ್ಳ ಜಂಗಮ ಎಲ್ಲಾ ಎಡೆಯಲ್ಲಿಯೂ ಉಂಟು,
ನಿರ್ಗಮನಿ ಜಂಗಮ ಅಪೂರ್ವ ನೋಡಾ!
ಸುಚೈತನ್ಯಲಿಂಗಕ್ಕೆ ಚೈತನ್ಯಜಂಗಮಸಾಹಿತ್ಯ ನೋಡಾ!
ಇಂತೀ ಲಿಂಗದ ಸಕೀಲಸಂಯೋಗದಲ್ಲಿ ಪರಿಣಾಮಿ
ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣ. ।೫೪।[1] [೯೬೬]

೨೧೬
ಭಕ್ತ ಭೃತ್ಯನಾಗಿ ಮಾಡುವ ಮಾಟದಲ್ಲಿ ವಿಚಾರವುಂಟಯ್ಯಾ.
ಅದೆಂತೆಂದರೆ :
ಸಂಸಾರಭೇದನೆಯುಳ್ಳರೆ ಜಂಗಮಲಿಂಗವಹುದು,
ಅದಕ್ಕೆ ಮಾಡಿದ ಫಲಂ ನಾಸ್ತಿ,
ಸಂಸಾರಭೇದನೆ ಇಲ್ಲದಿದ್ದರೆ ಆ ಜಂಗಮ ಭವಭಾರಿಯಹನು,
ಅದಕ್ಕೆ ಮಾಡಿದಲ್ಲಿ ಫಲವುಂಟು,
ಫಲ ಉಂಟಾದಲ್ಲಿ ಭವ ಉಂಟು, ಫಲವಿಲ್ಲದಲ್ಲಿ ಭವವಿಲ್ಲ.
ಮನದಂತೆ ಮಂಗಳವೆಂಬ ಶ್ರುತಿಯ ದಿಟವ ಮಾಡಿ
ಈ ಉಭಯದೊಳಗೆ ಆವು[2]ದ[2] ಪ್ರಿಯವಾಗಿ ಮಾಡುವರು ಅಹಂಗೆ ಇಹರು
ಕಾಣಾ ಕೂಡಲ ಚೆನ್ನಸಂಗಮದೇವಾ. ।೫೫। [೯೬೭]

೨೧೭
ಜಂಗಮ ಜಂಗಮವೆಂದರೆ ಬಾಯಿಲೆಕ್ಕವೇ ಜಂಗಮ?
ಜಂಗಮ ಜಂಗಮವೆಂದರೆ ಉಪಾಧಿಕನೆ ಜಂಗಮ?
ಜಂಗಮ ಜಂಗಮವೆಂದೇನೊ ಬೋಧಕನೆ ಜಂಗಮ?
ಜಂಗಮ ಜಂಗಮವೆಂದೇನು ಆಶ್ರಿತನೆ ಜಂಗಮ?
ಜಂಗಮ ಜಂಗಮವೆಂದೇನು ಕಾರ್ಯಕಾರಣನೆ ಜಂಗಮ?
ಜಂಗಮ ಜಂಗಮವೆಂದೇನು ಸ್ತ್ರೀಲಂಪಟನೆ ಜಂಗಮ?
ಈ ಷಡ್ಗುಣದಿಚ್ಛುಕರ ಜಂಗಮವೆಂಬೆನೆ? ಎನ್ನೆನು,
ಈ ಪಾತಕದ ನುಡಿಯ ಕೇಳಲಾಗದು.

---

೧. ಈ ಸ್ಥಲದ ೫೦ನೆಯ ವಚನದೊಂದಿಗೆ ಹೋಲಿಸಿರಿ. (ಸಂ), ೨-೨ ದು (ಮೂ).

ಜಂಗಮವೆಂತಹನೆಂದರೆ :
ನಿರವಯ ಜಂಗಮ, ನಿರುಪಾಧಿಕ ಜಂಗಮ,
ನಿರ್ಬೋಧಕ ಜಂಗಮ, ನಿರಾಶ್ರಿತ ಜಂಗಮ
ನಿಃಕಾರಣ ಜಂಗಮ, ನಿರ್ಲಂಪಟ ಜಂಗಮ.
ಈ ಷಡ್ಗುಣಭರಿತನಾದರೆ ನಿರವಯ ಜಂಗಮ.
ಬದುಕಿದ ಬಸವಣ್ಣ.
ಅವರಿಬ್ಬರ ಒಕ್ಕುದ ಕೊಂಡು,
ನಾನು ಬದುಕಿದೆನು ಕಾಣಾ
ಕೂಡಲ ಚೆನ್ನಸಂಗಮದೇವಾ. । ೫೬ । [೯೬೮]

೨೧೮
ಶರಣನೆನಿಸಿಕೊಂಬುದು ಕರ ಅರಿದು ನೋಡಯ್ಯ:
ಸತ್ಯಭಕ್ತರೊಳಡಗಿ ತನ್ನ ಕುಱುಹ ಲೋಕಕ್ಕೆ ತೋಱದಿರಬೇಕು.
ಸಕಲಜೀವರಾಶಿಗಳಿಗೆ ರೋಷ ಹರುಷವ ತಾಳದಿರಬೇಕು.
ಇಂತಪ್ಪ ಶರಣನಲ್ಲಿ ಸನ್ನಿಹಿತ ನಮ್ಮ ಕೂಡಲ ಚೆನ್ನಸಂಗಮದೇವ.। ೫೭ । [೯೬೯]

ಇಂತಪ್ಪ ಜಂಗಮದಲ್ಲಿ ಅನುಭಾವಿಯಾದ ಪ್ರಾಣಲಿಂಗಿಯ ಪ್ರಸಾದಲಿಂಗ, ಆ ಸ್ಥಲದನುಭಾವದ ವಚನ:

ಪ್ರಾಣಲಿಂಗಿಯ ಪ್ರಸಾದಲಿಂಗಸ್ಥಲ:

೨೧೯
ಅಷ್ಟವಿಧಾರ್ಚನೆಯ ಮಾಡುವರೆ
ಅಂಗಸುಖಂಗಳನಱಿಯದಿರಬೇಕು.
ಲಿಂಗಾರ್ಚನೆಯ ಮಾಡುವರೆ
ಅರಿಷಡ್ವರ್ಗವಿಲ್ಲದಿರಬೇಕು.
ಪ್ರಸಾದಭೋಗವ ಮಾಡುವರೆ
ಹಸಿವು ತೃಷೆಯಿಲ್ಲದಿರಬೇಕು.
ಇಂತೀ ತ್ರಿವಿಧನಿರ್ಣಯ[೧]ವನಱಿಯದಿದ್ದರೆ
ಕೂಡಲ ಚೆನ್ನಸಂಗಯ್ಯನಲ್ಲಿ ಬಱಿಯ ಉಪಾಧಿಕರೆಂಬೆ. । ೫೮ । [೯೮೫]

೧+ ವಿಲ್ಲದಿದ್ದರೆ (ಮೂ).

೨೨೦

ಕಾಯ ಜೀವವಾಗಿ, ಜೀವ ಕಾಯವಾಗಿ,
ಕಾಯ ಜೀವ ಮುಟ್ಟದು, ಜೀವ ಕಾಯವ ಮುಟ್ಟದು,
ಸಂಬಂಧ ಸಂಭ್ರಮವಡಂಗದು.
ಲಿಂಗವ ಪ್ರಾಣ ಮುಟ್ಟದು, ಪ್ರಾಣವ ಲಿಂಗ ಮುಟ್ಟದು,
ಪ್ರಸಾದವಿನ್ನೆಲ್ಲಿಯದೊ?
ವಾಯಕ್ಕೆ ವಾಯ ಕೂಡಲ ಚೆನ್ನಸಂಗಮದೇವಾ. । ೫೯ । [೯೮೬]

೨೨೧

ಪ್ರಾಣಲಿಂಗಪ್ರಸಾದ ಎಲ್ಲಾ ಎಡೆಯಲ್ಲು ಉಂಟು,
ಲಿಂಗಪ್ರಾಣಪ್ರಸಾದವಪೂರ್ವ ನೋಡಾ!
ಪ್ರಾಣಲಿಂ[1]ಗ[1]ಪ್ರಸಾದಿ ದೇಹಕರ್ಮಿ,
ದೇಹಕರ್ಮಿ ಲಿಂಗಪ್ರಾಣಪ್ರಸಾ[2]ದಿ.[2]
ಲಿಂಗಭೋಗೋಪಭೋಗಿ ಕೂಡಲ ಚೆನ್ನಸಂಗಾ ನಿಮ್ಮ ಶರಣ. । ೬೦ । [೯೮೭]

೨೨೨

[3]ಶಬ್ದೇಂದ್ರಿಯದ[3] ಸುಖದನುಭಾವವುಳ್ಳನ್ನಕ್ಕ
ಗುರುವಚನವ ಕೇಳಿದನೆಂದು ಎಂತೆನ್ನಬಹುದಯ್ಯಾ?
ಜಿಹ್ವೇಂದ್ರಿಯದ ರುಚಿಯನುಭಾವವುಳ್ಳನ್ನಕ್ಕ
ಪ್ರಸಾದವ ಗ್ರಹಿಸಿದನೆಂದು ಎಂತೆನ್ನಬಹುದಯ್ಯಾ?
ನಾಸಿಕೇಂದ್ರಿಯದ ಪರಿಮಳದ ವಾಸನೆಯನುಭಾವವುಳ್ಳನ್ನಕ್ಕ
ಲಿಂಗವ ವೇಧಿಸಿದನೆಂದು ಎಂತೆನ್ನಬಹುದಯ್ಯಾ?
[3]ನೇತ್ರೇಂದಿಯದ ನೋಟದನುಭಾವವುಳ್ಳನ್ನಕ್ಕ[3]
ಲಿಂಗವ ಭಾವಿಸಿದನೆಂದೆಂತೆನಬಹುದಯ್ಯಾ?
ಸ್ಪರ್ಶೇಂದ್ರಿಯದ ಸೋಂಕಿನ ಸುಖದನುಭಾವವುಳ್ಳನ್ನಕ್ಕ
ಲಿಂಗಾಂಗವಾಯಿತ್ತೆಂದು ಎಂತೆನ್ನಬಹುದಯ್ಯಾ?
ಇಂತಿವೆಲ್ಲವನು ಪರಿಚ್ಛೇದಿಸಿದರೆ,
ಕೂಡಲ ಚೆನ್ನಸಂಗಯ್ಯನಲ್ಲಿ ಅವರ ಪ್ರಾಣಲಿಂಗಪ್ರಸಾದಿಗಳೆಂಬೆ. । ೬೧ । [೯೮೮]

೧-೧ ಗಿ (ಮೂ), ೨-೨ ದ (ಮೂ), ೩-೩ x (ಮೂ).

೨೨೩
ರೂಪನರ್ಪಿಸಬಹುದಲ್ಲದೆ
ರುಚಿಯನರ್ಪಿಸುವ ಪರಿ ಎಂತಯ್ಯಾ?
ಉಚಿವಣಿಸಿ ಬಂದ ತನುಗುಣಾದಿಗಳ
ಲಿಂಗದೊಳಗೆ ನಿಕ್ಷೇಪವ ಮಾಡದಿದ್ದರೆ
ಪ್ರಾಣಲಿಂಗ ನಾಸ್ತಿ, ಪ್ರಸಾದವಿನ್ನೆಲ್ಲಿಯದೊ,
ಕೂಡಲ ಚೆನ್ನಸಂಗಯ್ಯಾ? ।೬೨। [೯೮೯]

೨೨೪
ರುಚ್ಯರ್ಪಿತ ಪ್ರಸಾದಸ್ತು ಸ್ಪರ್ಶನಂ ಸುಖಮರ್ಪಿತಂ ।
ಉಭಯಾರ್ಪಣವಿಹೀನಂ ಚ ಪೂಜನಂ ನಿಷ್ಫಲಂ ಭವೇತ್ ॥
ಇಂತೆಂಬ ಶ್ರುತಿಯ ಕೇಳಲಾಗದು.
ರುಚಿಯ ಬಲ್ಲನೆ ಪ್ರಸಾದಿ?
ತಾನು ಲಿಂಗಭೋಗೋಪಭೋಗಿಯಾಗಿ.
ಸುಖವ ಬಲ್ಲನೆ ಭಕ್ತ?
ತಾನು ಜಂಗಮ ಭೋಗೋಪಭೋಗಿಯಾಗಿ,
ರುಚಿಯನರ್ಪಿಸುವಾತ ಪ್ರಸಾದಿಯಲ್ಲ,
ಸುಖವನರ್ಪಿಸುವಾತ ಭಕ್ತನಲ್ಲ.
ಇದನಜಿದ ಶರಣಂಗೆ ನಮೋ ನಮೋ ಎಂಬೆ
ಕೂಡಲ ಚೆನ್ನಸಂಗಮದೇವಾ. ।೬೩। [೯೯೦]

೨೨೫
ಶಿವಯೋಗವಾದಲ್ಲಿ ಸಂಸಾರಯೋಗ ಮಾಬುದಯ್ಯಾ.
ಸಂಸಾರಯೋಗ ಮಾದಲ್ಲಿ ಭಕ್ತ್ಯನುಗ್ರಹಯೋಗವಯ್ಯಾ,
ಭಕ್ತ್ಯನುಗ್ರಹಯೋಗವಾದಲ್ಲಿ ಲಿಂಗಾನುಗ್ರಹಯೋಗವಯ್ಯಾ,
ಲಿಂಗಾನುಗ್ರಹಯೋಗವಾದಲ್ಲಿ ಜಂಗಮಾನುಗ್ರಹಯೋಗವಯ್ಯಾ,
ಜಂಗಮಾನುಗ್ರಹಯೋಗವಾದಲ್ಲಿ
ಕೂಡಲ ಚೆನ್ನಸಂಗ ಸಂಯೋಗವಯ್ಯಾ. ।೬೪। [೯೯೧]

೨೨೬
ಅರ್ಪಿತ ರೌರವನರಕವೆಂದುದು ಗುರುವಚನ,
ಅನರ್ಪಿತ ರೌರವ ನರಕವೆಂದುದು ಗುರುವಚನ,

ಭುಂಜನೆಯ ಮಾಡಿದ ರುಚಿಯ ಲಿಂಗಕ್ಕೆಂಬ
ಕರ್ಮಿಯ ಮಾತ ಕೇಳಲಾಗದು.
ತಾ ಸೋಂಕಿದ ಸುಖವ ಲಿಂಗಕ್ಕೆಂಬ
ಗುರುದ್ರೋಹಿಯ ಮುಖವ ನೋಡಲಾಗದು.
ಸರ್ವಾವಸ್ಥಾಗತೋ ಪ್ರಾಣಃ ಭಾಜನಂ ಭೋಜನಂ ತಥಾ ।
ಹಸ್ತೇ ಲಿಂಗಂ ಪ್ರತಿಗ್ರಾಹ್ಯ ನರಕೇ ಕಾಲಮಕ್ಷಯಂ ॥
ಎಂದುದಾಗಿ,
ಲಿಂಗಭಾಜನದಲ್ಲಿ ಸಹಭೋಜನವ ಮಾಡಿದರೆ
ಇಹಪರವಿಲ್ಲೆಂದ ಕೂಡಲ ಚೆನ್ನಸಂಗಮದೇವ. । ೬೫ । [೯೯೨]

೨೨೭

ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡು,
ಶಿವನೆ ಆರೋಗಣೆಯ ಮಾಡಿಹನೆಂದು ಮಾಡಲಾಗದು.
ಲಿಂಗಭಾಜನದಲ್ಲಿ ಸಹಭೋಜನವ ಮಾಡುವ
ಉದ್ದೇಶಿಗಳನೇನೆಂಬೆನಯ್ಯಾ!
ಮಾಡಲಾಗದು, ಮಾಡಲಾಗದು.
ಏನು ಕಾರಣ?
ಇಂದ್ರಿಯವಿಕಾರ ಬಿಡದನ್ನಕ್ಕ, ತಮವಿಕಾರ ಬಿಡದನ್ನಕ್ಕ,
ಸಂಕಲ್ಪಂಚ ವಿಕಲ್ಪಂಚ ಭಾವಾಭಾವ ವಿವರ್ಜಿತಃ ।
ಯಸ್ಯ ಅಂತಃಕರೇ ಲಿಂಗಂ ನೈವೇದ್ಯಂ ಸಹಭೋಜನಂ ॥
ಎಂದುದಾಗಿ
ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ಸಹಭೋಜನ ನಾಯಕನರಕ. । ೬೬ । [೯೯೩]

೨೨೮

ಹದಿನೆಂಟು ಯುಗದವರೆಲ್ಲ ಲಿಂಗವ ಪೂಜಿಸಿ,
ದೃಷ್ಟವಾವುದು ನಷ್ಟವಾವುದೆಂದಱಿಯದೆ
ಭ್ರಮಿತರಾದರು, ಜೀವಸಂಕಲ್ಪಿಗಳಾದರು.
ಜೀವದಾ[೧]ಹು[೧]ತಿಯನೆ ಲಿಂಗಾರ್ಪಿತವೆಂಬರು,
ಭವದ ಬಳ್ಳಿಯ ಹಱಿಯಲಱಿಯರು.

೧-೧ ಹ (ಮೂ).

ಇಂಥವರೆ ಭಕ್ತರು? ಇಂಥವರೆ ಪ್ರಸಾದಿಗಳು?
ಕೇಳು ಕೇಳಾ ಭಕ್ತನ ಮಹಿಮೆಯ,
ಕೇಳು ಕೇಳಾ ಪ್ರಸಾದಿಯ ಮಹಿಮೆಯ:
ಪೃಥ್ವಿಯ ಸಾರಾಯದಲಾದ ಪದಾರ್ಥವ ಲಿಂಗಕ್ಕೆ ಕೊಡದ ಭಾಷೆ,
ಅಪ್ಪುವಿಂದಾದ ಅಗ್ಘವಣಿಯ ಲಿಂಗಕ್ಕೆ ಮಜ್ಜನಕ್ಕೆಱೆಯದ ಭಾಷೆ,
ತೇಜದಿಂದಾದ ನಿವಾಳಿಯ ಲಿಂಗಕ್ಕೆ ಎತ್ತದ ಭಾಷೆ.
ವಾಯುವಿನಿಂದಾದ ಪರಿಮಳವ ಲಿಂಗಕ್ಕೆ ವೇದಿಸದ ಭಾಷೆ,
ಆಕಾಶದಿಂದಾದ ಶೂನ್ಯವ ಲಿಂಗಕ್ಕೆ ಭಾವಿಸದ ಭಾಷೆ.
ಅದೇಕೆಂದರೆ,
ಮತ್ತೊಂದು ಪೃಥ್ವಿಯುಂಟಾಗಿ, ಮತ್ತೊಂದು ಅಗ್ಘವಣಿಯುಂಟಾಗಿ
ಮತ್ತೊಂದು ತೇಜವುಂಟಾಗಿ, ಮತ್ತೊಂದು ವಾಯುವುಂಟಾಗಿ
ಮತ್ತೊಂದು ಆಕಾಶವುಂಟಾಗಿ.
ಇಂತಿವಱ ಮೇಲಾದ ಪಾಕದ್ರವ್ಯವನೆ ಲಿಂಗಕ್ಕೆ ನೀಡು[1]ವುದು[1] ಭಕ್ತಿ.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ಅರ್ಪಿತದ ಮುಖವ ನಿಮ್ಮ ಶರಣನೆ ಬಲ್ಲ. । ೬೭ । [೯೯೪]

೨೨೯

ಉತ್ತರದಕ್ಷಿಣ ಪೂರ್ವಪಶ್ಚಿಮದ ಬಂದ ಬಟ್ಟೆಯನಾಲಿಸಿ,
ವಾಯುಬಂಧನಮಂ ಕಟ್ಟಿ,
ಪಶ್ಚಿಮದ್ವಾರದಲ್ಲಿ ಪ್ರಾಣಲಿಂಗನಿವಾಸಿಯಾಗಿದ್ದನಾ ಶರಣ.
ಅಧೋನಾಳದಲ್ಲಿ ನಿರುತ, ಮಧ್ಯನಾಳದಲ್ಲಿ ನಿರಾಳ, ಊರ್ಧ್ವನಾಳದಲ್ಲಿ ಸುರಾಳ.
[2]ವ್ಯೋಮ[2] ಕುಸುಮದ ಶೈತ್ಯೋದಕವ ಧರಿಸಿದ ಘಟಕ್ಕೆ ಕೇಡಿಲ್ಲವಾಗಿ,
ಲಿಂಗಕ್ಕೆ ಪ್ರಾಣಕ್ಕೆ ಒಂದೆಂಬ ಕಾರಣ ಅಚಳವೆನಿಸಿತ್ತು.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ,
ಎನ್ನ ಪ್ರಾಣಕ್ಕೆ ಭವವಿಲ್ಲ ಬಂಧನವಿಲ್ಲ. । ೬೮ । [೯೯೫]

೨೩೦

ಪ್ರಸಾದ ಪ್ರಸಾದವೆಂದೆಂಬರು, ಪ್ರಸಾದದ ಕುಳವೆಂತಿಪ್ಪುದೆಂದರೆ:
ಕೊಟ್ಟವನೆ ಗುರುವಲ್ಲ, ಕೊಂಡವನೆ ಶಿಷ್ಯನಲ್ಲ,
ಅಂಜಿಕೆಯಿಂದ ಕೊಂಬುದು ಎಂಜಲು ಪ್ರಸಾದ.

೧-೧ ವ (ಮೂ). ೨-೨ ವಾಮ (ಮೂ).

ಅದಂತಿರಲಿ, ಮತ್ತೆಂತೆಂದರೆ:
ತನುವನಂಡಲೆದು, ಮನವ ಶುದ್ಧಯಿಸಿ,
ಈಡಾಪಿಂಗಳನಾಳವಂ ಕಟ್ಟಿ,
ಸುಷುಮ್ನಾನಾಳದಲ್ಲಿ ಪವನನೆಂಬ ಪರಿಚಾರಕನಿಂದ
ಅಗ್ನಿಯೆಂಬ ಸುವಾರನನೆಬ್ಬಿಸಲು,
ಅದು ಮಸ್ತಕದಲ್ಲಿದ್ದ ಉತ್ತಮಪ್ರಸಾದವ ತಾಗಿ,
ಆ ಪ್ರಸಾದ ಉದರಂಗಳಿಗಿಳಿದು ಬಪ್ಪಲ್ಲಿ,
ಮನವೆಂಬ ಪ್ರಸಾದಿ ಮುಯ್ಯಾಂತು ಭೋಗಿಸಬಲ್ಲಡೆ
ಆತನೇ ಅಚ್ಚ ಪ್ರಸಾದಿಯೆಂಬೆನು ಕಾಣಾ
ಕೂಡಲ ಚೆನ್ನಸಂಗಮದೇವಾ. ।೬೯। [೯೯೬]

೨೩೧

ಕ್ರೀಯೆಂಬುದನಾರು ಬಲ್ಲರು?
ಅಂಗಲಿಂಗವೆಂಬ ಸಂದಳಿಯದುದು ಕ್ರೀಯಲ್ಲ,
ಲಿಂಗ ಜಂಗಮವೆಂಬ ಸಂದಳಿಯದುದು ಕ್ರೀಯಲ್ಲ,
ಅರ್ಪಿತ ಅನರ್ಪಿತವೆಂಬ ಸಂದಳಿಯದುದು ಕ್ರೀಯಲ್ಲ.
ಅಲ್ಲ ಎನಲಿಲ್ಲ.
ಇಂತೀ ಕ್ರೀಯೊಳಗಿದ್ದ ನಿಃಕ್ರೀವಂತರ ತೋಱಾ.
ನಿಃಕ್ರೀಯೆಂಬುದಾವುದು?
ಕ್ರೀ ತನು, ನಿಃಕ್ರೀ ಪ್ರಾಣ, ತನುವೆ ಲಿಂಗ, ಪ್ರಾಣವೆ ಜಂಗಮ.
ತನುವ ಸಯವ ಮಾಡಿ, ಆ ಪ್ರಾಣಲಿಂಗಜಂಗಮಕ್ಕೆ
ಮನವನರ್ಪಿಸಿದ ನಿಃಕ್ರೀಪ್ರಸಾದಿಗಳ ತೋಱಾ,
ಕೂಡಲ ಚೆನ್ನಸಂಗಮದೇವಾ ನಿಮ್ಮ ಧರ್ಮ, ನಿಮ್ಮ ಧರ್ಮ. ।೭೦। [೯೯೭]

ಇಂತು ಪ್ರಸಾದಲಿಂಗದಲ್ಲಿ ಅನುಭಾವಿಯಾದ ಪ್ರಾಣಲಿಂಗಿಯು ಮಹಾಲಿಂಗ. ಆ ಸ್ಥಲದನುಭಾವದ ವಚನ:

ಪ್ರಾಣಲಿಂಗಿಯ ಮಹಾಲಿಂಗಸ್ಥಲ:

೨೩೨

ಶ್ರೀಶೈಲಸಿಂಹಾಸನದ ಮೇಲೆ ಕುಳ್ಳಿರ್ದು
ಪುರದ ಬಾಗಿಲೊಳು ಕದಳಿಯ ನಿರ್ಮಿಸಿದರು,
ನರರು ಸುರರು ಮುನಿಗಳಿಗೆ ಮಱಹೆಂಬ ಕದವನಿಕ್ಕಿ

ತರಗೊಳಿಸಿದ[1]ರು[1] ತ್ರಿವಿಧದುರ್ಗಂಗಳ.
ಆ ಗಿರಿಯ ಸುತ್ತಲು ಗಾಳಿ ದೆಸೆದೆಸೆಗೆ ಬೀಸುತ್ತಿರೆ,
ಕೆರಳಿ ಗಜವೇಂಟೆಗೆ ಗಮಿಸುತ್ತಿರಲು,
ಪರಿವಾರ ತಮ್ಮೊಳಗೆ ಅತಿಮಥನದಿಂ ಕೆರಳಿ
ಪುರವ ನಾಲ್ಕು ಕೇರಿಯನೆ ಬಲಿದರು.
ಆ ನರರೆಂಬ ಪೆಸರಳಿದು,
ಗುರುಮಾರ್ಗದಿಂದ ಮಱಹೆಂಬ ಕದವ ಮುಱಿದು,
ಒಳಗೆ ಹೊಕ್ಕು ಪುರದ ವರ್ಮವನಱಿದು,
ಭರದಿಂದ ತ್ರಿಸ್ಥಾನವನುರುಹಿ, ಪರಿವಾರವನು ವಶಕೆ ತಂದು,
ಗಿರಿಯ ಶಿಖರವನೇಱಿ, ಪುರವ ಸೂಱೆಯಂಗೊಂಡು, ಪುರಕ್ಕೊಡೆಯರಾಗಿ
ಪರಿಣಾಮದಿಂದ ಕೂಡಲ ಚೆನ್ನಸಂಗಯ್ಯನಲ್ಲಿ
ಶರಣರಾದವಂಗೆ ನಮೋ ನಮೋ ಎಂಬೆ. । ೭೧ । [೧೦೪೨]

೨೩೩

ಅಂಗ[2]ವೆ[2] ಲಿಂಗ, ಲಿಂಗ[2]ವೆ[2] ಅಂಗವೆಂದಱಿದ ಬಳಿಕ
ಅಲ್ಲಿಯೇ ಕಾಣಿರೋ,
ಕೂಡಲ ಚೆನ್ನಸಂಗಯ್ಯ, ನಿರಂತರ ಅಲ್ಲಿಯೇ ಕಾಣಿರೋ. । ೭೨ । [೧೦೪೩]

೨೩೪

ನಚ್ಚು ಮಚ್ಚು ಮನದಲಚ್ಚೊತ್ತಿದಂತಿತ್ತು,
ಲಿಂಗವೆನ್ನದು, ಜಂಗಮವೆನ್ನದು, ಪ್ರಸಾದವೆನ್ನದು.
ಅದು ತಾನು ತಾನಾಗಿ ತಾನೆ ಭರಿತ,
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು. । ೭೩ । [೧೦೪೪]

೨೩೫

ಆಯತಲಿಂಗದಲ್ಲಿ ಆಚಾರವಱಿತು,
ಸ್ವಾಯತಲಿಂಗದಲ್ಲಿ ವಿಚಾರವಱಿತು,
ಸನ್ನಿಹಿತ ಲಿಂಗದಲ್ಲಿ ಅನುಭಾವವಱಿತು.
ಈ ತ್ರಿವಿಧದಲ್ಲಿ ತ್ರಿವಿಧವಱಿತ ಬಳಿಕ
ಒಂದಲ್ಲದೆ ಎರಡುಂಟೆ? ಕೂಡಲ ಚೆನ್ನಸಂಗಾ ನಿಮ್ಮಲ್ಲಿ. । ೭೪ । [೧೦೪೫]

೧-೧ ನು (ಮೂ). ೨-೨ x (ಮೂ).

೨೩೬

ಲೋಕದ ನುಡಿ ತನಗೆ ಡೊಂಕು,
ತನ್ನ ನುಡಿ ಲೋಕಕ್ಕೆ ಡೊಂಕು.
ಊರನು ಹೊದ್ದ, ಕಾಡನು ಹೊದ್ದ,
ಆಪ್ಯಾಯನ ವಿರಹಿತ ಶರಣ.
ಕಪಾಲದಲುಲುಹಡಗಿದ,
ಕೂಡಲ ಚೆನ್ನಸಂಗಯ್ಯನಲ್ಲಿ [೧]ಒಂದಾದ[೧] ಲಿಂಗೈಕ್ಯವು. । ೭೫ । [೧೦೪೬]

೨೩೭

ಇನಿಗಡಲಣು[೨]ಗನ[೨] ಕೂಡಿದ ಪತಂಗನು
ತಾಮಸ ದಿವಸವ ಮಱೆದಂತೆ,
ಸತ್ವದ ಗುಣ ರಜದಲಡಗಿ, ರಜದ ಗುಣ ತಾಮಸದಲಡಗಿ,
ತಾಮಸದ ಗುಣ ರುದ್ರನೊಳಡಗಿ, ರುದ್ರನ ಗುಣ ಈಶ್ವರನೊಳಡಗಿ,
ಈಶ್ವರನ ಗುಣ ಮಹೇಶ್ವರನೊಳಡಗಿ, ಮಹೇಶ್ವರನ ಗುಣ ಸದಾಶಿವನೊಳಡಗಿ,
ಸದಾಶಿವನ ಗುಣ ಅಕ್ಷರಾಕ್ಷರ ಪರಶಿವನೊಳಡಗಿ,
ಅಕ್ಷರಾಣಿ ಚ ಮಾತ್ರಾಣಿ ಸರ್ವೇ ಬಿಂದುಸಮಾಶ್ರಿತಾಃ ।
ಬಿಂದುರ್ಭಿದ್ಯತೇ ನಾದೇನ ಸುನಾದಸ್ತೇನ ಭಿದ್ಯತೇ ॥
ಎಂದುದಾಗಿ, ಇದು ಕಾರಣ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣ ಬಲ್ಲನಲ್ಲದೆ ಉಳಿದವರೆತ್ತ ಬಲ್ಲರು! । ೭೬ । [೧೦೪೭]

೨೩೮

ರೇಚಕ ಪೂರಕ ಕುಂಭಕವೆಂಬ
ಗರುಡವಾಯು[೩]ವ[೩] ಸೋಂಕ ತೆಗೆದು,
ಬ್ರಹ್ಮಾಂಡದಲ್ಲಿ ಕೀಲಿಟ್ಟು, ದ್ವಾರ[೪]ಕ[೪]ವಾಟವ ತೆಗೆದು,
[೫]ಆಂದೋ[೫]ಳಿಸುತ್ತಿದ್ದಿತ್ತು.
ಬಾಲ ಕುಮಾರ ಪ್ರೌಢ ವಿಭಾಗದಲ್ಲಿ ಕಾಳಂ ಪೊ[೬]ಕ್ಕಿತ್ತು.[೬]
[೭]ಕಾಳಾಂದರ[೭]ದಿಂದತ್ತತ್ತಲಾರು ಬಲ್ಲರೊ?
ಇತ್ತಿತ್ತಲಾರು ಬಲ್ಲರೊ?

೧-೧ ಒಂದದಾ (ಮೂ), ೨-೨ x(ಮೂ), ೩-೩ x(ಮೂ), ೪-೪ x(ಮೂ), ೫-೫ ಅಂದೋ (ಮೂ), ೬-೬ ಕ್ಕವು (ಮೂ), ೭-೭ ಕಾಳೊಂಧರ (ಮೂ).

ಅಪ್ಪುವಿನ ಘಟವ ಹೊತ್ತುಕೊಂಡು ಸುಳಿದು,
ಜಗದೊಳಗೆ ಅ[೧]ರೆ[೧]ವಿರಿದು ನಿರಾಳದಲ್ಲಿ ನೆರೆವ ಭೇದವ[೨]ನಾರು ಬಲ್ಲರೊ?[೨]
ಕೂಡಲ ಚೆನ್ನಸಂಗಯ್ಯನಲ್ಲಿ
ಲಿಂಗೈಕ್ಯರನುವನಾ ಲಿಂಗೈಕ್ಯರೆ ಬಲ್ಲರು. । ೭೭ । [೧೦೪೮]

೨೩೯
ಮಂದಾರಸ್ಥಾನ ಮೊದಲಾದ ಆಱು ಕಡೆ[೩]ಯ[೩]
ಸ್ವಾದೋದಕ ಸಮುದ್ರದಲ್ಲಿ ವಿಶ್ರಮಿಸಿದ,
ಇಕ್ಷುಸಮುದ್ರದಲ್ಲಿ ತೃಪ್ತನಾಗಿ
ಮೇರುಮಂದಿರದಲ್ಲಿ ಮುಗ್ಧನಾದ
ಕಾಣಾ ಕೂಡಲ ಚೆನ್ನಸಂಗಾ, ನಿಮ್ಮ ಶರಣ. । ೭೮ । [೧೦೪೯]

೨೪೦
ಕಾಯವೇ ಶಿವಾಲಯ, ಕಮಳಮಧ್ಯವೇ ಮಂಟಪ,
ಶುಕನಾಸಿ ನೋಡಯ್ಯಾ.
ಜ್ಞಾನಾರೂಢ ಪ್ರಾಣೇಶನೆಂಬಾತನಲ್ಲಿಯ ದೇವನು,
ಒಂಬತ್ತು ಮಾನಿಸರು [೪]ತಂಡಾಲಯರು[೪]
ಅಲ್ಲಿಪ್ಪ ಇಂಬಿನ ಮಠಪತಿ ಹಂಸಜೀಯನೆಂಬಾತನಾ
ದೇವರ ಪೂಜಿಸುವ,
ತನ್ನ ದಳವಳಯವನೊಲ್ಲದೆ ಲಿಂಗವೇ ಗೂಡಾದನು
ಕೂಡಲ ಚೆನ್ನಸಂಗಾ, ನಿಶ್ಚಿಂತ ನಿಜೈಕ್ಯನು. । ೭೯ । [೧೦೫೦]

೨೪೧
ಒಂದನೆಯ ಬಾಗಿಲಲ್ಲಿ ನೇಹವಿಪ್ಪುದು,
ಎರಡನೆಯ ಬಾಗಿಲಲ್ಲಿ ಗುಣವಿಪ್ಪುದು,
ಮೂಱನೆಯ ಬಾಗಿಲಲ್ಲಿ ಧ್ಯಾನವಿಪ್ಪುದು,
ನಾಲ್ಕನೆಯ ಬಾಗಿಲಲ್ಲಿ ಯೋಗವಿಪ್ಪುದು,
ಐದನೆಯ ಬಾಗಿಲಲ್ಲಿ ಪಂಚೇಂದ್ರಿಯಗುಣವಿಪ್ಪುದು,
ಆಱನೆಯ ಬಾಗಿಲಲ್ಲಿ ಷಡಸ್ಥಲಂಗಳಿಪ್ಪುವು,
ಏಳನೆಯ ಬಾಗಿಲಲ್ಲಿ ಸಪ್ತವ್ಯಸನಂಗಳಿಪ್ಪುವು,

೧-೧ ಜೆ (ಮೂ), ೨-೨ x (ಮೂ), ೩-೩ x (ಮೂ), ೪-೪ ಚಾಂಡಾಲರು (ಮೂ).

ಎಂಟನೆಯ ಬಾಗಿಲಲ್ಲಿ ಅಷ್ಟಮದಂಗಳಿಪ್ಪುವು,
ಒಂಬತ್ತನೆಯ ಬಾಗಿಲಲ್ಲಿ ನಾದಬಿಂದುಗಳಿಪ್ಪುವು,
ಹತ್ತನೆಯ ಬಾಗಿಲಲ್ಲಿ ಸುಜ್ಞಾನವಿಪ್ಪುದು.
ಇಂತೀ ಒಂಬತ್ತು ಬಾಗಿಲಂ ಕಳೆದು,
ದಶಬಾಗಿಲಂ ತೆಗೆದು ಹೊಕ್ಕು,
ಮಹಾಸುಖಿಯಾಗಿದ್ದ ಕೂಡಲ ಚೆನ್ನಸಂಗಾ, ನಿಮ್ಮ ಶರಣ. ।೯೦। [೧೦೫೧]

೨೪೨
ಲಿಂಗಗಂಭೀರವಾದ ಶರಣ ಅಂಗವಿಕಾರವನಜೆಯ,
ಜಂಗಮ ಸ[೧]ಮ್ಮ[೧]ತವಾದ ಶರಣ ಇಂದ್ರಿಯ ವಿಕಾರವನಜೆಯ.
ಲಿಂಗಗಂಭೀರವಾಗಿ ಮನದಲ್ಲಿಯೇ ತಲ್ಲೀಯವಾಯಿತು.
ಜಂಗಮಸಮ್ಮತವಾಗಿ ಅವಧಾನವಜೆದು,
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯನು. ।೯೧। [೧೦೫೨]

ಇಂತು ಪ್ರಾಣಲಿಂಗಿಸ್ಥಲ [೨]ಒಂದಜಿಲ್ಲಿ ಷಡ್ವಿಧಲಿಂಗಸಮರಸವನೆಯ್ದಿ ಇರುತ್ತಿರಲು, ಮುಂದೆ ಶರಣಸ್ಥಲವಾದುದು.[೨]

❖❖

೧-೧ ಸ್ನು (ಮೂ), ೨-೨ ೧ಜಿಲ್ಲಿ ಚತುರ್ವಿಧ ಸ್ಥಲಕ್ಕೆ ಸೇರಿದ ವಚನ ೨೩೪ [೨೪೨] ಕ್ಕಂ ಮಂಗಳ ಮಹಾಶ್ರೀ (ಮೂ).

ಶರಣಸ್ಥಲ

[ಶರಣಸ್ಥಲ], ಆ ಸ್ಥಲಕ್ಕೆ ತಾಮಸನಿರಸನದ ವಚನ.

ಶರಣನ ತಾಮಸನಿರಸನಸ್ಥಲ:

೨೪೩

ಮಜ್ಜನಕ್ಕೆಱೆವುದು ಮಾದ ಬಳಿಕ
ಮನ ಮತ್ತೊಂದಕ್ಕೆಱಗದಿರಬೇಕು,
ಪೂಜೆಯ ಮಾಡುವದು ಮಾದ ಬಳಿಕ
ಪರರ ಬೋಧಿಸಲಾಗದು,
ಅರ್ಪಣವ ಮಾಡುವದು ಮಾದ ಬಳಿಕ
ಅಂಗಭೋಗಂಗಳೆಲ್ಲವ ಮಾಣಬೇಕು,
ಇಂತಿದು ಮೀಱಿದ ಘನ ಅಗಮ್ಯವಾಯಿತ್ತು.
ಅದನಱೆಯ ಬಾರದು, ಅಂತಿರಲಿ.
ನಾ ನೀನೆಂಬ ಭ್ರಾಂತುಳ್ಳನ್ನಕ್ಕ
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಬೇಕು.
ಕೂಡಲ ಚೆನ್ನಸಂಗಯ್ಯಾ, ಇವ ಮಾಡದಿದ್ದರೆ ನಾಯಕ ನರಕ. ।೧। [೧೦೬೯]

೨೪೪

ವ್ರತಸ್ಥನಜೀವು ಪ್ರಪಂಚಿನಲ್ಲಿ ಹೋಯಿತ್ತು,
ಭಾಷೆವಂತನಜೀವು ಸಂಚಲದಲ್ಲಿ ಹೋಯಿತ್ತು.
ನೇಮಸ್ಥನಜೀವು ಸಂದೇಹದಲ್ಲಿ ಹೋಯಿತ್ತು,
ಶೀಲವಂತನಜೀವು ಸೂತಕದಲ್ಲಿ ಹೋಯಿತ್ತು,
ಜಂಗಮದಜೀವು ಬೇಡಿದಲ್ಲಿ ಹೋಯಿತ್ತು,

ಭಕ್ತನಜಿವು ಮಾಡಿಹೆನೆಂಬಲ್ಲಿ ಹೋಯಿತ್ತು,
ಪ್ರಸಾದಿಯಜಿವು ರುಚಿಯನಜಿದಲ್ಲಿ ಹೋಯಿತ್ತು.
ಇಂತಿವು ಸ್ಥಲದ ನಿರ್ಣಯಕ್ಕೆ ಸಲ್ಲದೆ ಹೋ[೧]ದುವು[೧]
ಕೂಡಲ ಚೆನ್ನಸಂಗಯ್ಯನಲ್ಲಿ ಶರಣನೆಂತಪ್ಪನು? । ೨ । [೧೦೭೦]

೨೪೫
ಕಾಣಬಹ ಲಿಂಗವೆಂದು ಅಗ್ಘವಣಿಯನೆ ಕೊಟ್ಟು
ವೇಳೆಯಾದಿರಲ್ಲಾ ಲೋಕವೆಲ್ಲಾ.
ನಿರಾಳಲಿಂಗಕ್ಕೆ ಕೊಡಲಜಿಯರು,
ಕಂಡವರ [೨]ಕಂಡು[೨] [೩]ಕಂಡೆವೆಂಬಂತೆ,[೩] ಉಂಡವರ ಕಂಡು ಉಂಡೆವೆಂಬಂತೆ.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಇಂಥವರ ಕಂಡು ನಾಚಿತ್ತೆನ್ನ ಮನವು. । ೩ । [೧೦೭೧]

೨೪೬
ಅಂಗದಾಪ್ಯಾಯನವಳಿಯದ ಕಾರಣ
ಲಿಂಗ ಲಿಂಗವೆನುತಿದ್ದರು.
ಸಂಗದಾಪ್ಯಾಯನವಳಿಯದ ಕಾರಣ
ಜಂಗಮ ಜಂಗಮವೆನುತಿದ್ದರು.
ಪರಿಣಾಮಪ್ರಸಾದ ನೆಲೆಗೊಳ್ಳದ ಕಾರಣ
ಪ್ರಸಾದ ಪ್ರಸಾದವೆನುತಿದ್ದರು.
ಇಂತೊಂದೊಂದಱಂಗವಿಡಿದು ನಾಮಭಂಗಿತರಾದರೆಲ್ಲರು.
ಕೂಡಲ ಚೆನ್ನಸಂಗಾ ನಿಮ್ಮ ಶರಣ
ಅವಕ್ಕೆ ವಿರಹಿತನಾದನು. । ೪ । [೧೦೭೨]

೨೪೭
ದೇವ ದಾನವ ಮಾನವರು ಮೊದಲಾದ
ಎಲ್ಲಾ ಜೀವರಲ್ಲಿ ಹಿರಿದು ಕಿಱಿದೆನ್ನದೆ
ನಿದ್ರೆಯ ಬಲೆ ಬೀಸಿ, ಸರಿದು ತೆಗೆಯಲೊಡನೆ

೧–೧ ಯಿತ್ತು (ಮೂ), ೨–೨ x (ಮೂ), ೩–೩ ಕಂಡಂತೆ (ಮೂ).

ಅಱಿವು ಮಱಹಿತ್ತು, ನೋಟ ಜಾಱಿತ್ತು,
ಬುದ್ಧಿತೊಱೆಯಿತ್ತು, ಜೀವ ಹಾಱಿತ್ತು, ದೇಹ ಒಱಗಿತ್ತು.
ಇದು ನಿಚ್ಚ ನಿಚ್ಚಬಹುದು, ಹೋಹದರ ಕೀಲನಾರೂ ಅಱಿಯರು
ಕೂಡಲ ಚೆನ್ನಸಂಗಯ್ಯಾ ।೫। [೧೦೭೩]

೨೪೮

ವಚನ[೧][ವ],[೧] ರಚನೆಯ, ಅನುಭಾವವ ಬಲ್ಲೆವೆಂದೆಂಬ[೨]ವ[೨]ರು,
ವಚನವಾವುದು, ರಚನೆಯಾವುದು, ಅನುಭಾವವಾವುದು ಹೇಳಿರಣ್ಣಾ।
ವಚನ: ಆತ್ಮತೃಪ್ತಿಯನಱಿಯ ಬಲ್ಲರೆ,
ರಚನೆ: ಸ್ಥಾವರ ಜಂಗಮದಲ್ಲಿ ದಯವಾಗಿರಬಲ್ಲರೆ,
ಅನುಭಾವ: ಅರಿಷಡುವರ್ಗಂಗಳ ಇಚ್ಛೆಗೆ ಹರಿಯದಿರ[೩]ಬಲ್ಲರೆ.[೩]
ಇಂತಲ್ಲದೆ ವೇದಶಾಸ್ತ್ರಾಗಮಪುರಾಣಂಗಳ ಬಲ್ಲೆನೆಂದು
ನುಡಿವಾತನನುಭಾವಿಯೆ? ಅಲ್ಲ, ಅವು ಬ್ರಹ್ಮನೆಂಜಲು.
ಸತ್ವರಜತಮವನೊತ್ತಿನಿಂದಲ್ಲಿ ಸಹಜ ನೆಲೆಗೊಂಬುದು.
ಇದನಱಿಯದೆ ವಿದ್ಯಾಭ್ಯಾಸವ ಬಲ್ಲೆನೆಂದು
ನುಡಿವಾತನನುಭಾವಿಯೆ? ಅಲ್ಲ.
ಆತನು ಇದಿರ ನಂಬಿಸಿ, ಉಂಬ ಉದರ ಪೋಷಕನಯ್ಯಾ,
ಕೂಡಲ ಚೆನ್ನಸಂಗಮದೇವಾ. ।೬। [೧೦೭೪]

ಇಂತು ತಾಮಸನಿರಸನವ ಮಾಡಿದ ಆನಂದಸ್ವರೂಪ ಶರಣನ ಸ್ಥಲನಿರ್ದೇಶನ. ಆ ಸ್ಥಲದನುಭಾವದ ವಚನ:

ಶರಣನ ನಿರ್ದೇಶಸ್ಥಲ :

೨೪೯

ಲಿಂಗಗ್ರಾಹಕ ಶರಣ ಅಂಗಭೋಗಕ್ಕೆ ವಿರೋಧಿಯಯ್ಯಾ,
ಜಂಗಮಗ್ರಾಹಕ ಶರಣ ಅರ್ಥ ಪ್ರಾಣ ಅಭಿಮಾನಕ್ಕೆ ವಿರೋಧಿಯಯ್ಯಾ,
ಪ್ರಸಾದಗ್ರಾಹಕ ಶರಣ ಜಿಹ್ವೆಯ ರುಚಿಗೆ ವಿರೋಧಿಯಯ್ಯಾ,
ಇಂತೀ ತ್ರಿವಿಧಗ್ರಾಹಕ ಕೂಡಲ ಚೆನ್ನಸಂಗಾ, ನಿಮ್ಮ ಶರಣ. ।೭। [೧೦೭೫]

೧-೧ ದ (ಮೂ), ೨-೨ x (ಮೂ), ೩-೩ (ಮೂ) ಬೇಕು (ಮೂ).

೨೫೦
ಏಕೋವರ್ಣ ಷಡುಸ್ಥಲನಿರ್ಣಯವೆಂಬೆನೆ?
[೧]ಪ್ರಣವದೃಷ್ಟಿ[೧] ಕಾಣದು.
ಅಂಗವನು ಲಿಂಗವನು ಸಂಗವಮಾಡಿ
ತೋಱಿದರೆ
ಕೂಡಲ ಚೆನ್ನಸಂಗಯ್ಯಾ ನೀನೆಂಬೆ. । ೮ ।   [೧೦೨೬]

೨೫೧
ಲಿಂಗವೆಂದಱಿದಂಗೆ ಹಿಂದಿಲ್ಲ,
ಜಂಗಮವೆಂದಱಿದಂಗೆ ಮುಂದಿಲ್ಲ,
ಇದೇ ಶಿವಾಚಾರ[೨]ದ ತೊ[೨]ಡಕು.
'ಆತ್ಮಾನಂ ಪ್ರಕೃತಿಂ ಚ ಭಾವಯೇತ್' ಎಂದುದಾಗಿ,
ಇದು ಕಾರಣ, ಕೂಡಲ ಚೆನ್ನಸಂಗಮದೇವನು
ಮುಟ್ಟಬಾರದ ಠಾವ ಮಱೆಗೊಂಡಿಪ್ಪನು. । ೯ ।   [೧೦೨೨]

೨೫೨
ಕಣ್ಣೊಳಗೆ ಕಣ್ಣಿದ್ದು ಕಾಣಲೇಕಱಿಯರಯ್ಯಾ?
ಕಿವಿಯೊಳಗೆ ಕಿವಿಯಿದ್ದು ಕೇಳಲೇಕಱಿಯರಯ್ಯಾ?
ಘ್ರಾಣದೊಳಗೆ ಘ್ರಾಣವಿದ್ದು ವಾಸಿಸಲೇಕಱಿಯರಯ್ಯಾ?
ಜಿಹ್ವೆಯೊಳಗೆ ಜಿಹ್ವೆಯಿದ್ದು ರುಚಿಸಲೇಕಱಿಯರಯ್ಯಾ?
ತ್ವಕ್ಕಿನೊಳಗೆ ತ್ವಕ್ಕಿರ್ದು ಪರುಶಿಸಲೇಕಱಿಯರಯ್ಯಾ?
ಪ್ರಾಣದೊಳಗೆ ಪ್ರಾಣವಿದ್ದು [೩]ಪ್ರಾಣನ[೩] ಪಱಿ[೪]ಕಿಸ[೪]ಲೇಕಱಿಯರಯ್ಯಾ?
ಕಾಯದೊಳಗೆ ಕಾಯವಿದ್ದು ಬಿಡದು, ಬೇರಾಗದು,
ಕೂಡಲ ಚೆನ್ನಸಂಗಯ್ಯನಿಕ್ಕಿದ ಅಣಕದ ಭೇದವ
ಭೇದಿಸಬಾರದಯ್ಯಾ. । ೧೦ । [೧೦೨೮]

೨೫೩
ಅರ್ಥೇಷಣ ಪುತ್ರೇಷಣ ಧಾರೇಷಣವೆಂಬ
ಈಷಣತ್ರಯಂಗಳನೆ ಬಿಟ್ಟು ಮಂಡೆಬೋಳಾದ ಬಳಿಕ
ಮರಳಿ ಹೊನ್ನಿಂಗೆಱಗಿದರೆ ಗುರುದ್ರೋಹಿ,

೧–೧ ಪ್ರಾಣವದೃಷ್ಟಿ (ಮೂ), ೨–೨ ದೊ (ಮೂ), ೩–೩ x (ಮೂ), ೪–೪ ಯ (ಮೂ).

ಹೆಣ್ಣಿಂಗೆಳಗಿದರೆ ಲಿಂಗದ್ರೋಹಿ,
ಮಣ್ಣಿಂಗೆಳಗಿದರೆ ಸಂಸಾರಸಂಬಂಧಿ,
ಆತ ಪೂರ್ವಾಚಾರಿಯಲ್ಲ.
ಸ್ಥಾವರಂ ಭಿನ್ನದೋಷೇಣ ವ್ರತಭ್ರಂಶೇನ ಜಂಗಮಃ ।
ಉಭಯೋರ್ಭಿನ್ನಭಾವೇನ ಚಾರ್ಚಂನಚ ವಂದನಂ ॥
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಬಸವಣ್ಣನೊಬ್ಬನೆ ಭಕ್ತ, ಪ್ರಭುವೆ ಜಂಗಮ. । ೧೧ । [೧೦೭೯]

ಇಂತು ಶರಣಸ್ಥಲವನಂಗಂಗೊಂಡು ಆನಂದಿಪಂಗೆ ಷಡ್ವಿದ[೧]ಲಿಂಗವು[೧] ಹೇಂಗೆ ಬೆರಸಿಪ್ಪುದೆಂದಡೆ, ಆ ಲಿಂಗದ ವಿವರ. ಶರಣನ ಆಚಾರಲಿಂಗ, ಆ ಸ್ಥಲದನುಭಾವದ ವಚನ:

ಶರಣನ ಆಚಾರಲಿಂಗಸ್ಥಲ :

೨೫೪
ಭವಿಗಿಕ್ಕಬಾರದೆಂಬ ಸಂಬಂಧಿಗಳು
ಮರಳಿ ಭವಿಗಿಕ್ಕಿದರೆ ಭಾಷೆಗೆ ವ್ರತಗೇಡಿ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ
ಈ ಭವಿಗ[೨][ಳಾವರ್ಜಿ][೨]ಸಿಕೊಂಡಿರಲು
ಮತ್ತೆ ಭವಿಗಿಕ್ಕೆನೆಂಬ ಪರಿಯೆಂತೊ?
ಬಹಿರಂಗದ ಭವಿಯ ಕಳೆವುದು ಅಭ್ಯಾಸ[೩]ವಲ್ಲದೆ ನಿಜವಲ್ಲ.[೩]
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಅಂತರಂಗದ ಭವಿಯ ಕಳೆವುದಪೂರ್ವ. । ೧೨ । [೧೦೮೦]

೨೫೫
ಘಟಸಂಸ್ಕಾರದಲ್ಲಿ ಪಟಲ ಹಜೆವುದೆ
ಜೀವಸಂಸ್ಕಾರವಿಲ್ಲದನ್ನಕ್ಕ?
ವೇಷಧಾರಿತನದಲ್ಲಿ ಗ್ರಾಸವಹುದಲ್ಲದೆ
ಜ್ಞಾನಸಂಸ್ಕಾರವಿಲ್ಲದನ್ನಕ್ಕ ಭವವೆಂತು ಹಜೆವುದು?
ಅಂಗಭವಿ[೪][ಯ][೪] ಲಿಂಗಭವಿಯ ಕಳೆದುಳಿದಲ್ಲದೆ
ಕೂಡಲ ಚೆನ್ನಸಂಗನ ಹೊದ್ದಲಾಗದು. । ೧೩ । [೧೦೮೧]

೧-೧ ವೆ (ಮೂ). ೨-೨ ಳು ವರ್ತಿ (ಮೂ). ೩-೩ x (ಮೂ). ೪-೪ x (ಮೂ).

೨೫೬
ಶೀಲ ಶೀಲವೆಂದೇನು?
ಭವಿ ಮಾಡಿದ ಮಡಕೆಯ ಕಳೆವುದು ಶೀಲನೆ?
ಕೆಱೆ ತೊಱೆ ಭಾವಿಯ ಕಳೆವುದು ಶೀಲವೆ?
ಅಲ್ಲಲ್ಲಿ ಒಸರುವ ಉದಕವ ತಹುದು ಶೀಲವೆ?
ಲಿಂಗಾರ್ಪಿತವ ಮಾಡಿದ ಪ್ರಸಾದವ
ಭವಿ ನೋಡಲಿಕ್ಕೆ ಕೊಂಡಡೆ ಕಿಲ್ಬಿಷ, ಭಾಷೆಗೆ ವ್ರತಗೇಡಿ.
ಕೊಳ್ಳದಿದ್ದರೆ ಪ್ರಸಾದ ದ್ರೋಹ.
ಇದು ಕಾರಣ, ಕೂಡಲ ಚೆನ್ನಸಂಗನಲ್ಲಿ
ಸಂಕಲ್ಪವಿಕಲ್ಪದಿಂದ ಕೆಟ್ಟಿತ್ತು ಶೀಲ. ।೧೪। [೧೦೮೨]

೨೫೭
ಭಕ್ತರ ಮಠಕ್ಕೆ ಬಂದು ಒಳಗು ಹೊಱಗು ಎಂಬುದು ಶೀಲವೆ?
ಎನ್ನ ಲಿಂಗಕ್ಕೆ ಒಳ್ಳೆಯ ಅಗ್ಘವಣಿಯ ತನ್ನಿ, ಒಳ್ಳೆಯ ಪುಷ್ಪವ ತನ್ನಿ,
ಒಳ್ಳಿತ್ತಾಗಿ ಬೋನವ ಮಾಡಿ ಎಂಬುದು ಶೀಲವೆ? ಅಲ್ಲ.
ಪಂಚೇಂದ್ರಿಯ ಸಪ್ತಧಾತು ಅರಿಷಡ್ವರ್ಗ ಅಷ್ಟಮದಂಗಳ
ಕೊಂದಾತನೆ ಶೀಲವಂತ, ಕೂಡಲ ಚೆನ್ನಸಂಗಮದೇವಾ. ।೧೫। [೧೦೮೩]

೨೫೮
ಶೀಲವಾದರೆ ಪ್ರಪಂಚುನಾಸ್ತಿಯಾಗಬೇಕು,
ಸೀಮೆಯಾದರೆ ಪಂಚೇಂದ್ರಿಯನಾಸ್ತಿಯಾಗಬೇಕು.
ಇಂತಪ್ಪ ಸೀಮೆಗೆ ಭವಿನಾಸ್ತಿ, ಶೀಲಕ್ಕೆ ಭವನಾಸ್ತಿಯಾದಲ್ಲದೆ
ಕೂಡಲ ಚೆನ್ನಸಂಗಯ್ಯನಲ್ಲಿ ಶೀಲವಂತರೆಂದೆನಿಸಬಾರದು. ।೧೬। [೧೦೮೪]

೨೫೯
ಶೀಲವಂತರು ಶೀಲವಂತರು ಎಂದೆಂಬಿರಿ,
ನಾವಿದನಱಿಯೆವಯ್ಯಾ,
ಅಂಗನೆಯರಧರಪಾನ ಉದರ ಹೊಗುವನ್ನಕ್ಕ
ಶೀಲವೆಲ್ಲಿಯದೋ?
[೧]ಈಷಣತ್ರಯವೆಂಬ

೧+ ಬಾಲರಾಳಿಯಲ್ಲದೆ (ಮೂ).

ಸೊಣಗ ಬೆಂಬತ್ತಿ ಬರುತ್ತಿರಲು ಶೀಲವೆಲ್ಲಿಯದೊ?
ಚಿತ್ತದ ಕಳವಳವಳಿದು
ಮನವು ಮಹಾಘನದಲ್ಲಿ ನೆಲೆಗೊಂಡುದೇ ಶೀಲ.
ಪರಮಪರಿಣಾಮ ನೆಲೆಗೊಂಡುದೇ [೧]ಶೀಲ.[೧]
ಅದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಶೀಲವಂತರಪೂರ್ವ. । ೧೭ । [೧೦೮೫]

೨೬೦
ನದಿಯ ತಟಾಕದಲ್ಲಿ ಕನ್ನವನಿಕ್ಕಿ ಉದಕವ ತಂದು
ಮಜ್ಜನಕ್ಕೆಱೆವರೆಲ್ಲ ಸುಯಿಧಾನಿಗಳಪ್ಪರೆ?
ಪಾಕದಲ್ಲಿ ಭವಿಪಾಕ ಪರಪಾಕವೆಂದು ವಿವರಿಸಿ ಕಳೆದು
ಭುಂಜಿಸುವ ಉದರಪೋಷಕರೆಲ್ಲ ಶೀಲವಂತರಪ್ಪರೆ? ಅಲ್ಲ.
ಅಶನವಜಿತು, ವ್ಯಸನ ನಿಂದು, ವ್ಯಾಪ್ತಿಗಳೆಲ್ಲವು ತಲ್ಲೀಯವಾಗಿ,
ತನುಗುಣಾದಿಗಳೆಲ್ಲಾ ಸಮಾಪ್ತಿಯಾಗಿದ್ದರೆ
ಕೂಡಲ ಚೆನ್ನಸಂಗನಲ್ಲಿ ಅವರೇ ಶೀಲವಂತರೆಂಬೆ. । ೧೮ । [೧೦೮೬]

ಇಂತು ಆಚಾರಲಿಂಗದಲ್ಲಿ ಆನಂದ ಸ್ವರೂಪನಾದ ಶರಣನ ಗುರುಲಿಂಗ. ಆ ಸ್ಥಲದನುಭಾವದ ವಚನ:

ಶರಣನ ಗುರುಲಿಂಗಸ್ಥಲ :

೨೬೧
ಕಾಲಚಕ್ರ ಕರ್ಮಚಕ್ರ ನಾದಚಕ್ರ ಬಿಂದುಚಕ್ರದೊಳಗೆ
ಹುಟ್ಟದ ಯೋಗಿಯಿಲ್ಲ, ಮೆಟ್ಟದ ನೆಲನಿಲ್ಲ,
ಉಣ್ಣದಾಹಾರವಿಲ್ಲ, ಕಾಣದ ದುಃಖವಿಲ್ಲ.
ಇಂತು ನಾನಾ ಜನ್ಮದಲ್ಲಿ ನುಗ್ಗುನುಜೆಯಾಗಿ ಬಂದವಂಗೆ
ಗುರುವ ಮುಟ್ಟಬಹುದೆ? ಲಿಂಗವನರ್ಚಿಸಬಹುದೆ?
ಪ್ರಸಾದವ ಕೊಳ್ಳಬಹುದೆ?
ಕೂಡಲ ಚೆನ್ನಸಂಗಯ್ಯಾ ತ್ರಿಕರಣಶುದ್ಧವಿಲ್ಲದವಂಗೆ
ಉಪದೇಶವ ಕೊಟ್ಟರೆ ನಾಯಕನರಕ. । ೧೯ । [೧೧೨೦]

೧–೧ ಶ್ರೀಮೆ (ಮೂ).

೨೬೨

ಗುರುಶಿಷ್ಯ ಸಂಬಂಧವನೇನೆಂದುಪಮಿಸುವೆ?
ಜ್ಯೋತಿಯಲೊದಗಿದ ಜ್ಯೋತಿಯಂತಿರಬೇಕು.
ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು,
ಸ್ಫಟಿಕದ ಘಟದೊಳಗಿರಿಸಿದ ರತ್ನದಂತಿರಬೇಕು,
ರೂಪಿನ ನೆಳಲಿನ ಅಂತರಂಗದಂತಿರಬೇಕು.
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ದರ್ಪಣವ ದರ್ಪಣಕ್ಕೆ ತೋಱಿದಂತಿರಬೇಕು. । ೨೦ । [೧೧೨೧]

೨೬೩

ಗುರುಲಿಂಗವು ಬಂದು ಶಿಷ್ಯನ ಕರೆದು
ಪಾದದ ಮೇಲಿಕ್ಕಿಕೊಂಡಡೆ ನಾಯಕನರಕ,
ಪ್ರಸಾದವೆಂದು ಇಕ್ಕಿಸಿಕೊಂಡಡೆ ಅದು ಕಿಲ್ಬಿಷ.
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಬಲ್ಲ ಮಹಾತ್ಮರು ಕೊಳ್ಳರು. । ೨೧ । [೧೧೨೨]

ಇಂತು ಗುರುಲಿಂಗದಲ್ಲಿ ಆನಂದಸ್ವರೂಪನಾದ ಶರಣನ ಶಿವಲಿಂಗ. ಆ ಸ್ಥಲದನುಭಾವದ ವಚನ:

ಶರಣನ ಶಿವಲಿಂಗಸ್ಥಲ :

೨೬೪

ಒಡಲ ಗುಣಧರ್ಮವನು ಬಿಡದೆ ನಡೆಸುವನ್ನಕ್ಕ
ಎಡೆವಱಿಯದ ಪೂಜೆಯನವರೆತ್ತ ಬಲ್ಲರು?
ಉದಯದಲಾದ ಪೂಜೆಯ ಅಸ್ತಮಾನ[೧]ಕ್ಕಂ[೧]ಜಲೆಂಬ
ಭಂಗಿತರ ಮುಖವ ನೋಡಲಾಗದು.
ಅಗ್ನಿಯೆಂಜಲನುಂಡು ಲಿಂಗದಲ್ಲಿ ಸ್ವಯವನಱಸುವ
ಭಂಗಿತರನೇನೆಂಬೆನಯ್ಯಾ ಕೂಡಲ ಚೆನ್ನಸಂಗಮದೇವಾ. । ೨೨ । [೧೧೫೧]

೧-೧ ದೆ (ಮೂ).

೨೬೫

ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೆ?
ಸತ್ಯವುಳ್ಳಾತಂಗೆ ತತ್ವವಿಚಾರದ ಹಂಗೇಕೆ?
ಅಱಿವುಳ್ಳಾತಂಗೆ ಅಗ್ಘವಣಿಯ ಹಂಗೇಕೆ?
ಮನಶುದ್ಧವುಳ್ಳಾತಂಗೆ ಮಂತ್ರದ ಹಂಗೇಕೆ?
ಭಾವಶುದ್ಧವುಳ್ಳಾತಂಗೆ ಹೂವಿನ ಹಂಗೇಕೆ?
ಕೂಡಲ ಚೆನ್ನಸಂಗಯ್ಯಾ
ನಿಮ್ಮನಱಿದಾತಂಗೆ ನಿಮ್ಮ ಹಂಗೇಕೆ? । ೨೩ । [೧೧೫೨]

೨೬೬

ಪೂಜಿಸುವನ್ನಕ್ಕ ಫಲದಾಯಕ ಕಂಡಾ.
ಸಹಜ ಸಮಬಂಧ[೧]ದನುವು[೧] ಹುಟ್ಟದನ್ನಕ್ಕ ಎರವೆಂದೆನಿಸುವುದು.
ಗಮನ ನಿರ್ಗಮನವಾಗದನ್ನಕ್ಕ, ಆಸೆ ಆಮಿಷವಳಿಯದನ್ನಕ್ಕ
ಲಿಂಗಪೂಜೆ ಎಲ್ಲಿಯದೊ?
ಘಟದೊಳಗೆ ದಿಟವಾಗಿದ್ದ ಪಂಚಭೂತವಳಿಯದೆ
ಕೂಡಲ ಚೆನ್ನಸಂಗಯ್ಯನ ಮುಟ್ಟಬಹುದೆ? । ೨೪ । [೧೧೫೩]

೨೬೭

ಮಾಯಾಂಗನೆಯ ಸೋಂಕಳಿದಲ್ಲದೆ ಅಂಗಸೋಂಕಲ್ಲ,
ಘಟವು ಸಯವಾದಲ್ಲದೆ ಕಕ್ಷೆಯಲ್ಲ,
ನಿದ್ರೆ ಕವಿದು ಭೂಮಿಗೆ ತಲೆವಾಗುವದು ನಿಂದಲ್ಲದೆ ಉತ್ತಮಾಂಗವಲ್ಲ,
ಜಿಹ್ವೆಯಱತಲ್ಲದೆ ಅಮಳೋಕ್ಯವಲ್ಲ.
ಅನುಭಾವವಱತಲ್ಲದೆ ಕಂಠವಲ್ಲ,
ಹಿಡಿವುದಱತಲ್ಲದೆ ಕರಸ್ಥಲವಲ್ಲ.
ಇಂತೀ ಆಱಱ ಕುಳವನಱಿಯದಿದ್ದರೆ
ಮುಂದೆ ಬಹ ನರಕ ಇಂದೇ ಬಹುದು,
ಕಾಣಾ ಕೂಡಲ ಚೆನ್ನಸಂಗಮದೇವಾ. । ೨೫ । [೧೧೫೪]

೧-೧ ದಲು (ಮೂ).

ಇಂತು ಶಿವಲಿಂಗದಲ್ಲಿ ಆನಂದಸ್ವರೂಪನಾದ ಶರಣನ ಜಂಗಮಲಿಂಗ. ಆ ಸ್ಥಲದನುಭಾವದ ವಚನ:

ಶರಣನ ಜಂಗಮಲಿಂಗಸ್ಥಲ:

೨೬೮

ತಾಳು ಬೋಳು ಕಪ್ಪರವೆಂದೆಂಬರು :
ತಾಳಾವುದು ಬೋಳಾವುದು ಕಪ್ಪರವಾವುದೆಂದಜಿಯರು.
ಕಾಯದ ಕಳವಳದವಗುಣವ ತಾಳಬಲ್ಲರೆ ತಾಳು,
ಸಂಸಾರವಿಷಯವ ಬೋಳೈಸಬಲ್ಲರೆ ಬೋಳು,
ಪರದಲ್ಲಿ ಪರಿಣಾಮಿಸಬಲ್ಲರೆ ಕಪ್ಪರ.
ಅಂತಲ್ಲದಿದ್ದರೆ ಕೂಡಲ ಚೆನ್ನಸಂಗಮದೇವರಲ್ಲಿ
ಡೊಂಬರ ಬೋಳು. ।೨೬। [೧೧೯೫]

೨೬೯

ಆಚಾರ ಕಪ್ಪರವೊಂದು, ವಿಚಾರ ಕಪ್ಪರವೊಂದು, ಅವಿಚಾರ ಕಪ್ಪರವೊಂದು.
ಈ ತ್ರಿವಿಧ ಕಪ್ಪರದೊಳಗೆ ಆಚಾರ ಕಪ್ಪರ ಲಾಂಛನವ ತೋಱಿ
ಬೇಡುವದಾಗಿ ಜಾಡ್ಯವೆಂಬೆ,
ವಿಚಾರ ಕಪ್ಪರ ಸೊಮ್ಮ ಸಂಬಂಧವ ತೋಱಿ
ಬೇಡುವುದಾಗಿ ಹೆಳವನೆಂಬೆ.
ಅವಿಚಾರ ಕಪ್ಪರ ಸೊಮ್ಮ ಸಂಬಂಧ ನೇಮ ಸೀಮೆಯ ಮೀಱಿ
ಬೇಡುವುದಾಗಿ ನಿರುಪಾಧಿಯೆಂಬೆನಯ್ಯಾ
ಕೂಡಲ ಚೆನ್ನಸಂಗಮದೇವಾ. ।೨೭। [೧೧೯೬]

೨೭೦

ಸಚರಾಚರ ಚತುರ್ವಳಯದೊಳಗೆ ತಿರುಗುವ
ವೇಷಧಾರಿಯನೆನಗೆ ತೋಱದಿರಾ.
ಆಶಯಾ ಬಧ್ಯತೇ ಲೋಕಃ ಕರ್ಮಣಾ ಬಹುಚಿಂತಯಾ ।
ಆಯುಃಕ್ಷೀಣಂ ನ ಜಾನಾತಿ ವೇಣುಸೂತ್ರಂ ವಿಧೀಯತೇ ॥
೧ಎಂದುದಾಗಿ೧ ಆಶೆಯ ಧಿಕ್ಕರಿಸಿ, ನಿರಾಶೆಯ ಪತಿಕರಿಸಿದ ವೇಷವ ಕಂಡಡೆ,
ನೀ ಸರಿ ಎಂಬೆ, ಕೂಡಲ ಚೆನ್ನಸಂಗಮದೇವಾ. ।೨೮। [೧೧೯೭]

೧–೧ x (ಮೂ).

೨೬೧
ತನು ಸ್ವಾಯತವಾದವರಂಗ ಸ್ಥಾವರದಂತಿಪ್ಪುದು,
ಮನ ಸ್ವಾಯತವಾದವರಂಗ ಜ್ಯೋತಿರ್ಮಯಲಿಂಗದಂತಿಪ್ಪುದು.
ಶಬ್ದ ಸ್ವಾಯತವಾದವರಂಗ ಪೃಥ್ವಿಯಂತಿಪ್ಪುದು,
ಇಂತೀ ತ್ರಿವಿಧಸ್ವಾಯತವಾದವರಂಗ[೧]
ಜಂಗಮಲಿಂಗವೆಂಬೆ ಕಾಣಾ,
ಕೂಡಲ ಚೆನ್ನಸಂಗಮದೇವಾ. । ೨೯ । [೧೧೯೮]

೨೬೨
ಬಱಿಯ ಬೋಳುಗಳೆಲ್ಲಾ ಜಂಗಮವೇ?
ಜಡಜೀವಿಗಳೆಲ್ಲಾ ಜಂಗಮವೇ?
ವೇಷಧಾರಿಗಳೆಲ್ಲಾ ಜಂಗಮವೇ?
ಇನ್ನಾವುದು ಜಂಗಮವೆಂದರೆ,
ನಿಸ್ಸೀಮನೆ ಜಂಗಮ: ನಿಜೈಕ್ಯನೆ ಜಂಗಮ.
ಇಂಥ ಜಂಗಮದ ಸುಳುಹ ಕಾಣದೆ
ಕೂಡಲ ಚೆನ್ನಸಂಗಮದೇವ ತಾನೆ ಜಂಗಮವಾದ. । ೩೦ । [೧೧೯೯]

ಇಂತು ಜಂಗಮಲಿಂಗದಲ್ಲಿ ಆನಂದಸ್ವರೂಪನಾದ ಶರಣನ ಪ್ರಸಾದಲಿಂಗ. ಆ ಸ್ಥಲದನುಭಾವದ ವಚನ:

ಶರಣನ ಪ್ರಸಾದಲಿಂಗಸ್ಥಲ :

೨೬೩
ಓಗರವ ಪ್ರಸಾದವ ಮಾಡಿ
ಪ್ರಸಾದವನೋಗರವ ಮಾಡಿಕೊಂಬನಾಗಿ
ಆತ ಪ್ರಸಾದಿಯ ಪ್ರಸಾದಿ.
ಶಬ್ದ ಸ್ಪರುಶ ರೂಪು ರಸ ಗಂಧ ಸಹಿತ
ಜಂಗಮಕರ್ಪಿತವ ಮಾಡಿಕೊಂಬನಾಗಿ
ಆತ ಜಂಗಮಪ್ರಸಾದಿ.
ಸಪ್ತಧಾತು ಅಷ್ಟಮದಂಗಳಿಲ್ಲಾಗಿ
ಆತ ಲಿಂಗಪ್ರಸಾದಿ.

೧+ ಜ್ಯೋತಿರ್ಮಯ ಲಿಂಗದಂತಿಪ್ಪುದು (ಮೂ).

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವಿಲ್ಲಾಗಿ
ಆತ ಗುರುಪ್ರಸಾದಿ.
ಇದು ಕಾರಣ ಕೂಡಲ ಚೆನ್ನಸಂಗಯ್ಯಾ,
ನಿಮ್ಮ ಪ್ರಸಾದಕ್ಕೆ ನಮೋ ನಮೋ ಎಂಬೆ. । ೩೧ । [೧೨೨೬]

೨೮೪
ಚತುರ್ಗ್ರಾಮ ಪಂಚೈದು ಭೂತದೊಳಗೆ
ಸ್ಥೂಲವಾವುದು ಸೂಕ್ಷ್ಮವಾವುದು ಬಲ್ಲವರು ನೀವು ಹೇಳಿರೆ?
ಕಾಲಚಕ್ರ ಕರ್ಮಚಕ್ರ ನಾದಚಕ್ರ ಬಿಂದುಚಕ್ರ
ಈ ನಾಲ್ಕು ಚಕ್ರದೊಳಗೆ ಆವುದು ಘನವಾವುದು ಕಿಱಿದು
ಬಲ್ಲರೆ ನೀವು ಹೇಳಿರೆ?
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವೆಂದು
ಹೆಸರಿಟ್ಟುಕೊಂಡು ನುಡಿವಿರಿ.
ಓಗರವಾವಕಡೆ, ಪ್ರಸಾದವಾವಕಡೆ?
ಇಕ್ಕಿದ ಊಟಾಳ ತುಂಬುತ್ತ ಕೆಡಹುತ್ತಲದೆ,
ಊಟಾಳ ಮುಱಿದು, ಸೂತ್ರ ಹಱಿದು ನಿಶ್ಶೂನ್ಯವಾದರೆ
ಕೂಡಲ ಚೆನ್ನಸಂಗಯ್ಯನಲ್ಲಿ ಮಹಾಪ್ರಸಾದಿಯೆಂಬೆ. । ೩೨ । [೧೨೨೭]

೨೮೫
ಅನಾದಿಯ ಕುಳ[1]ದಲ್ಲಿ[1] ಸನ್ಮತವಾದ ಪ್ರಸಾದಿ,
ಲಿಂಗಜಂಗಮ ಸನ್ಮತವಾದ ಪ್ರಸಾದಿ,
ಆಪ್ಯಾಯನ ಅವಧಾನವ ಅಂಗವಿಸದೆ ನಿಂದ ಪ್ರಸಾದಿ,
ಮನ ಬುದ್ಧಿ ಚಿತ್ತಹಂಕಾರ ಸನ್ಮತವಾದ ಪ್ರಸಾದಿ,
ಶಬ್ದ ಸ್ಪರುಶ ರೂಪು ರಸ ಗಂಧ ಪಂಚೇಂದ್ರಿಯ
ಸನ್ಮತವಾದ ಪ್ರಸಾದಿ,
ದೇಹಾದಿ ಗುಣವಳಿದು ಉದರಾಗ್ನಿ ತಲೆದೋಱದೆ
ಸಕಲ ಸನುಮತವಾದ ಪ್ರಸಾದಿ.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
[2]ಸನ್ಮತ[2]ವಾದ ಪ್ರಸಾದಿ. । ೩೩ । [೧೨೨೮]

೧-೧ ಗುರು (ಮೂ), ೨-೨ ಸಮಾಪ್ತ (ಮೂ).

೨೭೬
ರೂಪುವಿಕಾರಿಗಳಿಗಿನ್ನಾಗದಯ್ಯಾ,
ರುಚಿವಿಕಾರಿಗಳಿಗಿನ್ನಾಗದಯ್ಯಾ,
ವಚನದ ರಚನೆಯ ನುಡಿವರಿಗಿನ್ನಾಗದಯ್ಯಾ.
ಇಂತೀ ತ್ರಿವಿಧದ ಮೊದಲನಱಿಯದ
ಅಸಂಬಂಧಿಗಳಿಗಿನ್ನಾಗದಯ್ಯಾ,
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದ. ।೩೪। [೧೨೨೯]

೨೭೭
ಗುರು ಮುಟ್ಟಿತ್ತು ಪ್ರಸಾದವೆಂಬೆನೆ? ಅಲ್ಲ,
ಅದೇನು ಕಾರಣ[೧] : ಅನಾದಿಯ ಲಿಂಗವ ತೋಱಲಱಿಯನಾಗಿ.
ಲಿಂಗ ಮುಟ್ಟಿತ್ತು ಪ್ರಸಾದವೆಂಬೆನೆ? ಅಲ್ಲ,
ಅದೇನು ಕಾರಣ : ಅಷ್ಟವಿಧಾರ್ಚನೆ ಷೋಡಶೋಪಚಾರಕ್ಕೆ ಒಳಗಾದ ಕಾರಣ.
ಜಂಗಮ ಮುಟ್ಟಿತ್ತು ಪ್ರಸಾದವೆಂಬೆನೆ? ಅಲ್ಲ,
ಅದೇನು ಕಾರಣ : ಆಸೆ ಆಮಿಷಕ್ಕೊಳಗಾಯಿತ್ತಾಗಿ.
ಲಿಂಗವಿಲ್ಲದ ಜಂಗಮ, ಜಂಗವಿಲ್ಲದ ಲಿಂಗ !
ಲಿಂಗಜಂಗಮವೆಂಬುಭಯವ ಕಳೆದುಳಿದ
ಪ್ರಸಾದಿಯನೆನಗೆ ತೋಱು ಕೂಡಲ ಚೆನ್ನಸಂಗಮದೇವಾ. ।೩೫। [೧೨೩೦]

೨೭೮
"ಉಭೌ ಕಾಮಾವುಭೌ ಶಕ್ತೀ ಉಭೌವಾಶ್ರಮೌ" ಎಂದುದಾಗಿ,
ಉಭಯಲಿಂಗದ ಪ್ರಸಾದವನಱಿಯದೆ
ಉಭಯಾಂಗದೊಳಗಾಯಿತ್ತು.
ಉಭಯನಾಮದ ಮೇಲೆ ನಾಮವಾದುದನು
ದೇಹಪೂಜಕಂಗಱಿಯಬಾರದು,
ಕೂಡಲ ಚೆನ್ನಸಂಗಮದೇವಯ್ಯಾ ನಿಮ್ಮ ಪ್ರಸಾದಿಗಲ್ಲದೆ.[೨] ।೩೬। [೧೨೩೧]

೨೭೯
ಒಮ್ಮೆಯಲ್ಲದಿಮ್ಮೆಯುಂಟೆ ಪೂಜೆ?
ಒಮ್ಮೆಯಲ್ಲದಿಮ್ಮೆಯುಂಟೆ ಅರ್ಪಿತ?
ಒಮ್ಮೆಯಲ್ಲದಿಮ್ಮೆಯುಂಟೆ ಪ್ರಸಾದ?

೧+ ವೆಂದರೆ (ಮೂ), ೨+ ಅಳವಡದು (ಮೂ).

ತಾನರ್ಪಿತವಾದ ಬಳಿಕ,
ಮರಳಿ ಮರಳಿ ಅರ್ಪಿತ ಉಂಟೆ?
ಕೂಡಲ ಚೆನ್ನಸಂಗಮದೇವಾ. ।೩೭। [೧೨೩೨]

ಇಂತು ಪ್ರಸಾದಲಿಂಗದಲ್ಲಿ ಆನಂದಸ್ವರೂಪನಾದ ಶರಣನ ಮಹಾಲಿಂಗ. ಆ ಸ್ಥಲದನುಭಾವದ ವಚನ:

ಶರಣನ ಮಹಾಲಿಂಗಸ್ಥಲ :

೨೮೦
ತ್ರಿವಿಧಕ್ಕೆ ರತಿಯಾಗಿ, ತ್ರಿವಿಧದ ಜನನವ ತಿಳಿದು,
ತ್ರಿವಿಧ ಕಂದೆಱೆದು, ತ್ರಿವಿಧ ತ್ರಿವಿಧವನವಗ್ರಹಿಸಿ,
ತ್ರಿವಿಧದ ಪಥವ ಮೀಱೆ, ತ್ರಿವಿಧ ನಿರ್ಣಯ ನಿಷ್ಪತ್ತಿ
ಕೂಡಲ ಚೆನ್ನಸಂಗಾ, ನಿಮ್ಮ ಶರಣ. ।೩೮। [೧೨೯೧]

೨೮೧
ಓಲೆಯನಿಕ್ಕಿದ ಬಾಲೆಯ ಓಲೆಗಳೆಯದಿದೆಂತೊ?
ಓಲೆ ಇದ್ದು ಓಗಾಯತವಾಯಿತ್ತೆಲ್ಲರಿಗೆಯೂ,
ಓಲೆಯೂ ಹೋಯಿತ್ತು, ಬಾಲೆಯೂ ಹೋಯಿತ್ತು.
ಓಲೆಯ ಬಾಲೆಯ ಕೀಲ ಬಲ್ಲವರ
ಕೂಡಲ ಚೆನ್ನಸಂಗಮದೇವನೆಂಬೆನು. ।೩೯। [೧೨೯೨]

೨೮೨
ಲಿಂಗ ಲಿಂಗವೆಂಬಲ್ಲಿಯೆ ತಪ್ಪಿತ್ತು,
ಜಂಗಮ ಜಂಗಮವೆಂಬಲ್ಲಿಯೆ ತಪ್ಪಿತ್ತು,
ಪ್ರಸಾದ ಪ್ರಸಾದವೆಂಬಲ್ಲಿಯೆ ತಪ್ಪಿತ್ತು.
ಇಂತೀ ತ್ರಿವಿಧ ಸಂಚದ ನಿಕ್ಷೇಪವ ಬಲ್ಲರೆ,
ಈ ಲೋಕದಲ್ಲಿದ್ದರೇನು? ಆ ಲೋಕಕ್ಕೆ ಹೋದರೇನು?
ಆ ಲೋಕದಿಂದ ಮತ್ತೆ ಈ ಲೋಕಕ್ಕೆ ಬಂದರೇನು?
ಹದಿನಾಲ್ಕು ಲೋಕದೊಳಗಿದ್ದರೇನು?
ನಿಸ್ಸಾ¹ರಾಯ¹ವಂ ಬಿಟ್ಟು ಲಿಂಗಸಾರಾಯಭೋಗಿಯಾಗಿ
ಕೂಡಲ ಚೆನ್ನಸಂಗಯ್ಯನಲ್ಲಿ ನಿರ್ಲೇಪನಾದ ಶರಣ. ।೪೦। [೧೨೯೩]

೧–೧ ರ (ಮೂ).

೨೮೩
ಸಮತೆ ಸಯವಾದ ಶರಣಂಗೆ ಅಱಿವ ಮಱೆಯಲುಂಟೆ?
ಉಪಮೆ ನಿಃಸ್ಥಲವಾದ ಶರಣಂಗೆ ಶಬ್ದಸಂದಣಿ ಉಂಟೆ?
ಅಖಂಡಿತ ಲಿಂಗಕ್ಕೆ, ಅಪ್ರಮಾಣ ಶರಣಂಗೆ
ಸೀಮೆ ಸಂಬಂಧವೆಂಬ ಸಂಕಲ್ಪ ಉಂಟೆ?
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣಂಗೆ ಭವವಿಲ್ಲ, ಬಂಧನವಿಲ್ಲ. । ೪೧ । [೧೨೯೪]

೨೮೪
ಗ್ರಾಮದ ಪಥಗತಿಯನಱಿಯರು,
ಗ್ರಾಮಕ್ಕೆ ಗುರುವಾವುದೆಂದಱಿಯರು,
ಗ್ರಾಮದ ಕರಣವಿಡಿದಲ್ಲಿ ನಿಜ್ಜಾಟವಾವುದೆಂದಱಿಯರು.
ಇದನಱಿದು ಮಱೆದು ನಿಂದರೆ
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು. । ೪೨ । [೧೨೯೫]

೨೮೫
ಲಿಂಗಸ್ಥಲ ಲಿಂಗದಲ್ಲಿಯೆ ನಿಂದುದು,
ಜಂಗಮಸ್ಥಲ ಜಂಗಮದಲ್ಲಿಯೆ ನಿಂದುದು,
ಪ್ರಸಾದಿಸ್ಥಲ ಪ್ರಸಾದದಲ್ಲಿಯೆ ನಿಂದುದು,
ಇಂತೀ ತ್ರಿವಿಧಸ್ಥಲ ತ್ರಿವಿಧದಲ್ಲಿಯೆ ನಿಂದುದು,
ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣಂಗೆ. । ೪೩ । [೧೨೯೬]

೨೮೬
[1]ಪೃಥ್ವಿಯಿಂದ ಈಶ್ವರ ಪರಿಯಂತ
ಪಂಚವಿಂಶತಿಗಳುತ್ಪತ್ಯ,
ಈಶ್ವರಾದಿ ಪರಶಿವ ಪರಿಯಂತ
ಶಿವತತ್ವದುತ್ಪತ್ಯ.
ದೇವತಾದಿಗೆ, ಜಗದಾದಿಗೆ, ಪೃಥ್ವಿಯಾದಿಗೆ
ಪಂಚವಿಂಶತಿ ತತ್ವಂಗಳುತ್ಪತ್ಯಮಂ ಪೇಳ್ವೆ:
ಪಂಚಶತಕೋಟಿ ಭೂಮಂಡಲವಳಯದಲ್ಲಿ,
ಆ ಮೇರು ಮಂದಿರದ ವಿಸ್ತೀರ್ಣ

೧+ ಭೂಚಕ್ರ (ಮೂ).

ಒಂದು ಕೋಟಿಯುಂ ಇಪ್ಪತ್ತಾಱುಲಕ್ಷ ಮೇಲೆ
ಎಂಬತ್ತೈದು ಸಾವಿರ ಯೊಜನ ಪರಿಪ್ರಮಾಣು.
ಆ ಮೇರು ಮಂದಿರದ ಮೇಲೆ ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ
ನಂದಿ ಮಹಾಕಾಳ ವೀರಭದ್ರ ಅಷ್ಟಾಶೀತಿ ಸಹಸ್ರ[೧] ಋಷಿಯರು,
ಅಸಂಖ್ಯಾತ ಮಹಾಗಣಂಗಳು, ದ್ವಾದಶಾದಿತ್ಯರು,
ನಾರದ ಯೋಗೀಶ್ವರರು, ಅಷ್ಟದಿಕ್ಪಾಲಕರು, ಏಕಾದಶರುದ್ರರು,
ಮುಖ್ಯವಾಗಿ ಶಿವಸುಖಸಂತೋಷದಿಂ ರಾಜ್ಯಂಗೆಯ್ವರು,
ಆ ಮೇರು ಮಂದಿರದ ಕೆಳಗಣ ಜಂಬೂದ್ವೀಪದ ವಿಸ್ತೀರ್ಣ
ಲಕ್ಷದ ಮೇಲೆ ಇಪ್ಪತ್ತೈದು ಸಾವಿರ ಯೋಜನ ಪ್ರಮಾಣು,
ಲವಣಸಮುದ್ರ ಲಕ್ಷದ ಮೇಲೆ ಇಪ್ಪತ್ತೈದು ಸಾವಿರ ಯೋಜನೆ ಪ್ರಮಾಣು,
ಆ ಲವಣಸಮುದ್ರದಿಂದಾಚೆಯಲ್ಲಿ ಭೂಮಿ
ಎರಡು ಲಕ್ಷದ ಮೇಲೆ ಐವತ್ತು ಸಾವಿರ ಯೋಜನೆ ಪ್ರಮಾಣು,
ಪ್ಲಕ್ಷದ್ವೀಪಕ್ಕೆ ಇಕ್ಷುರಸಸಮುದ್ರ
ಎರಡು ಲಕ್ಷ ಐವತ್ತು ಸಾವಿರ ಯೋಜನ ಪ್ರಮಾಣು.
ಅದಱಿಂದಾಚೆಯಲ್ಲಿ ಭೂಮಿ
ಐದು ಲಕ್ಷ ಯೋಜನ ಪ್ರಮಾಣು.
ಶಾಲ್ಮಲಿದ್ವೀಪಕ್ಕೆ ಮಧುಸಮುದ್ರ
ಐದು ಲಕ್ಷ ಯೋಜನ ಪ್ರಮಾಣು.
ಅದಱಿಂದಾಚೆಯಲ್ಲಿ ಭೂಮಿ
ಹತ್ತು ಲಕ್ಷ ಯೋಜನ ಪ್ರಮಾಣು.
ಕುಶದ್ವೀಪಕ್ಕೆ ಘೃತಸಮುದ್ರ
ಹತ್ತು ಲಕ್ಷ ಯೋಜನ ಪ್ರಮಾಣು.
ಅಲ್ಲಿಂದತ್ತ ಭೂಮಿ
ಇಪ್ಪತ್ತೈದು ಲಕ್ಷ ಯೋಜನ ಪ್ರಮಾಣು.
ಶಾಕದ್ವೀಪಕ್ಕೆ ದಧಿಸಮುದ್ರ
ನಾಲ್ವತ್ತು ಲಕ್ಷ ಯೋಜನ ಪ್ರಮಾಣು.
ಅದಱಿಂದಾಚೆಯಲ್ಲಿ ಭೂಮಿ
ನಾಲ್ವತ್ತು ಲಕ್ಷ ಯೋಜನ [೨]ಪ್ರಮಾಣು.[೨]
ಕಂಸದ್ವೀಪಕ್ಕೆ ಕ್ಷೀರಸಮುದ್ರ

೧+ ಸ್ತ್ರೀ (ಮೂ), ೨-೨ x (ಮೂ).

ನಾಲ್ವತ್ತು ಲಕ್ಷ ಯೋಜನ [೧]ಪ್ರಮಾಣು.[೧]
ಅದಱಿಂದಾಚೆಯಲ್ಲಿ ಭೂಮಿ
ಎಂಬತ್ತು ಲಕ್ಷ ಯೋಜನ [೧]ಪ್ರಮಾಣು.[೧]
ಪುಷ್ಕರದ್ವೀಪಕ್ಕೆ ಸ್ವಾದೋದಕಸಮುದ್ರ
ಎಂಬತ್ತು ಲಕ್ಷ ಯೋಜನ [೧]ಪ್ರಮಾಣು.[೧]
ಅಲ್ಲಿಂದತ್ತ ಲೋಕಾಲೋಕ ಪರ್ವತಾಕಾರವಾಗಿಪ್ಪುದು.
ಇಂತೀ ಸಪ್ತಸಮುದ್ರಂಗಳ ಸಪ್ತದ್ವೀಪಂಗಳ
ಪ್ರಮಾಣನೊಂದಾಗಿ ಮೇಳೈಸಿದರೆ
ಮೂಱುಕೋಟಿಯುಂ ಹದಿನೇಳು ಲಕ್ಷದಯಿವತ್ತು ಸಹಸ್ರ
ಯೋಜನ ಪರಿಮಾಣಿನ ಕಟ್ಟಳೆಯಾಯಿತ್ತು.
ಮತ್ತಲಿಂದತ್ತ ಭೂಮಂಡಲ ಉಂಟೆ? ಎಂದೊಡೆ, ಉಂಟು:
ನಾನೂಱುಕೋಟಿಯೋಜನ ಹೇಮೋರ್ವಿ.
ಅಲ್ಲಿಂದತ್ತ ಭೂಮಂಡಲ ಉಂಟೆ? ಎಂದೊಡ ಉಂಟು.
ಹತ್ತು ಕೋಟಿಯು ಇಪ್ಪತ್ತು ಲಕ್ಷ ಯೋಜನ ಪ್ರಮಾಣು, ಹೇಮದ ಬೆಟ್ಟ.
ಮತ್ತಲ್ಲಿಂದತ್ತಲೂ ಭೂಮಂಡಲ ಉಂಟೆ? ಎಂದಡೆ ಉಂಟು:
ಎಂಬತ್ತೈದು ಕೋಟಿಯುಂ ಮೂವತ್ತೈದು ಲಕ್ಷದ ಅರುವತ್ತೈದು
ಸಾವಿರ ಯೋಜನ ಪರಿಮಾಣ ವಳಯದಲ್ಲಿ
ಅಂಧಃಕಾರವಾಗಿ, ಚಂದ್ರಸೂರ್ಯರ ಬೆಳಗಿಲ್ಲ.
ಇಂತಿವನೆಲ್ಲವನೊಂದಾಗಿ ಮೇಳೈಸಿದರೆ
ಐನೂರು ಕೋಟಿ ಯೋಜನ ಪರಿಪ್ರಮಾಣು ಕಟ್ಟಳೆಯಾಯಿತು.
ಆ ಮೇರುವಿನ ಒಂದು ದಿಕ್ಕಿನ ಪ್ರಮಾಣು:
ಆ ಮೇರುವಿನ ಪ್ರದಕ್ಷಿಣವಾಗಿ
ಎಂಟು ದಳದಲ್ಲಿ ಎಂಟು ಪಂಚಾಶತಕೋಟಿ ವಿಸ್ತೀರ್ಣವಾಯಿತ್ತು.
ಇದನು ದಿವಸದೊಳಗೆ ಸೂರ್ಯ ತಿರುಗುವನು
ರಾತ್ರಿಯೊಳಗೆ ಚಂದ್ರ ತಿರುಗುವನು,
ಇಪ್ಪತ್ತೇಳು ನಕ್ಷತ್ರಧ್ರುವಮಂಡಲ, ಸಪ್ತಋಷಿಯರು, ರಾಹುಕೇತು, ನವಗ್ರಹ
ಇಂತಿವರೆಲ್ಲರು ಆ ಮೇರು ಮಂದಿರದ ಹೊಱ ಪ್ರದಕ್ಷಿಣವಂ
ದಿವಾರಾತ್ರಿಯಲ್ಲಿ ತಿರುಗಿಬಹರು.
ಇವರೆಲ್ಲರ ಪ್ರಮಾಣವನು ಮಹಕ್ಕೆ ಮಹದಾಗಿಪ್ಪ ಶರಣಸ್ಥಲದವರು [೨]ಬಲ್ಲರು.[೨]

೧–೧ x (ಮೂ), ೨–೨ x (ಮೂ).

ಪ್ರಭುದೇವರು ಸಿದ್ಧರಾಮದೇವರು ಸಾಮವೇದಿಗಳು,
ಆದಿಲಿಂಗ ಅನಾದಿಶರಣ ಪೂರ್ವಾಚಾರಿ ಸಂಗನಬಸವಣ್ಣನು
ಕಟ್ಟಿದ ಕಟ್ಟಳೆಯೊಳಗೆ ಜ್ಯೋತಿರ್ಜ್ಞಾನದವರು.
ಜ್ಯೋತಿಷ ಗ್ರಹಣ ಸಂಕ್ರಮಣ ತಿಥಿ ವಾರ ನಕ್ಷತ್ರ ಯೋಗ ಕರಣ ಸಂವತ್ಸರ
ಇವೆಲ್ಲವನು ಕೂಡಲ ಚೆನ್ನಸಂಗನಲ್ಲಿ
ಬಸವಣ್ಣ ಕಟ್ಟಿದ ಕಟ್ಟಳೆ. ।೪೪। [೧೨೯೭]

ಇಂತು ಶರಣಸ್ಥಲವೊಂದಱಲ್ಲಿ ಷಡ್ವಿಧಲಿಂಗ ಸಮರಸವಾಗುತ್ತಿರಲು ಮುಂದೆ ಐಕ್ಯಸ್ಥಲವಾದುದು.[೧]

❖❖

೧+ ಇಂತು ಪಂಚಸ್ಥಲಕ್ಕೆ ಸೇರಿಸಿದ ವಚನ ೨೮೭ಕ್ಕಂ ಮಂಗಳ ಮಹಾಶ್ರೀ. (ಮೂ).

ಐಕ್ಯಸ್ಥಲ

ಐಕ್ಯಸ್ಥಲ, ಆ ಸ್ಥಲಕ್ಕೆ ತಾಮಸನಿರಸನದ ವಚನ:

ಐಕ್ಯನ ತಾಮಸನಿರಸನಸ್ಥಲ:

೨೮೭

ಹಸಿವಜಿತಲ್ಲದೆ ಪ್ರಸಾದಿಯಲ್ಲ,
ತೃಷೆಯಜಿತಲ್ಲದೆ ಪಾದೋದಕವೇದಿಯಲ್ಲ,
ನಿದ್ರೆಯಜಿತಲ್ಲದೆ ಭವಿವಿರಹಿತನಲ್ಲ,
ಅನಲ ಪವನನ ಗುಣವಜಿತಲ್ಲದೆ ಜನನಮರಣವಿರಹಿತನಲ್ಲ.
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಎಲ್ಲರಿಗೆ ಎಲ್ಲಿಯೊ ಲಿಂಗೈಕ್ಯವು? ।೧। [೧೩೫೭]

೨೮೮

ಲಿಂಗಸ್ಥಲ ನಾಸ್ತಿಯಾದಲ್ಲದೆ ಭಕ್ತನಲ್ಲ,
ಜಂಗಮಸ್ಥಲ ನಾಸ್ತಿಯಾದಲ್ಲದೆ ಶರಣನಲ್ಲ,
ಗುರುಸ್ಥಲ ನಾಸ್ತಿಯಾದಲ್ಲದೆ ಐಕ್ಯನಲ್ಲ,
ಇದು ಕಾರಣ, ಕೂಡಲ ಚೆನ್ನಸಂಗಮದೇವಯ್ಯಾ
ಭಕ್ತ ಕೆಟ್ಟು ಭವಿಯಾದನಲ್ಲದೆ ಐಕ್ಯನಲ್ಲ. ।೨। [೧೩೫೮]

೨೮೯

ಅಂಜಿಕೆಯುಳ್ಳನ್ನಕ್ಕ ಪ್ರಾಣಲಿಂಗಿಯಲ್ಲ,
ಸೂತಕವುಳ್ಳನ್ನಕ್ಕ ಶರಣನಲ್ಲ,

ಎಂಜಲುವುಳ್ಳನಕ್ಕ ಪ್ರಸಾದಿಯಲ್ಲ.
ಈ ತ್ರಿವಿಧವುಳ್ಳನ್ನಕ್ಕ ಲಿಂಗೈಕ್ಯನಲ್ಲ
ಕೂಡಲ ಚೆನ್ನಸಂಗಮದೇವಾ. ।೩।   [೧೩೫೯]

೨೯೦
ಲಾಂಛನದೆಡೆಯಲ್ಲಿ ಹುಸಿಯ ಸಂಪಾದಿಸುವನ್ನಕ್ಕ ಭಕ್ತನಲ್ಲ,
ಹುರುಡುವಿಡಿದಾತ ಮಾಹೇಶ್ವರನಲ್ಲ,
ಪದಾರ್ಥವನಜೀವನ್ನಕ್ಕ ಪ್ರಸಾದಿಯಲ್ಲ,
[1]ಖತಿ[1]ಯುಳ್ಳನ್ನಕ್ಕ ಪ್ರಾಣಲಿಂಗಿಯಲ್ಲ,
ಸತಿಯುಳ್ಳನ್ನಕ್ಕ ಶರಣನಲ್ಲ,
ಪತಿಯುಳ್ಳನ್ನಕ್ಕ ಐಕ್ಯನಲ್ಲ.
ಇಂತೀ ಷಡುಸ್ಥಲಂಗಳ ಸ[2]ಕೀ[2]ಲಸಂಬಂಧ
ಕೂಡಲ ಚೆನ್ನಸಂಗಯ್ಯನಲ್ಲಿ
ಸಾಧಕರಳವೆಯಲ್ಲ, ಸಹಜದೊಡೆಯರಿಗಲ್ಲದೆ ಇಲ್ಲ, ।೪।   [೧೩೬೦]

೨೯೧
ಹೊನ್ನುಳ್ಳಾತ ಭಕ್ತನಲ್ಲ,
ಹೆಣ್ಣುಳ್ಳಾತ ಶರಣನಲ್ಲ.
ಮಣ್ಣುಳ್ಳಾತ ಲಿಂಗೈಕ್ಯನಲ್ಲ.
ಹೊನ್ನು ಜೀವ, ಹೆಣ್ಣು ಪ್ರಾಣ, ಮಣ್ಣು ದೇಹ.
ಹೊನ್ನು ಭವಿ, ಹೆಣ್ಣು ಭವ, ಮಣ್ಣು ಹಮ್ಮು.
ಇಂತೀ ತ್ರಿವಿಧಸ್ಥಲವಪೂರ್ವ,
ಕೂಡಲ ಚೆನ್ನಸಂಗಯ್ಯನಲ್ಲಿ. ।೫।   [೧೩೬೧]

೨೯೨
ಅಱುವಿಲ್ಲದ ಕಾರಣ ಭವಕ್ಕೆ ಬಂದರು.
ಅಱುವಿಲ್ಲದವಂಗೆ ಆಚಾರವಿಲ್ಲ,
ಆಚಾರವಿಲ್ಲದವಂಗೆ ಗುರುವಿಲ್ಲ,
ಗುರುವಿಲ್ಲದವಂಗೆ ಲಿಂಗವಿಲ್ಲ,

೧–೧ ಖ್ಯಾತಿ (ಮೂ), ೨–೨ ಕ (ಮೂ).

ಲಿಂಗವಿಲ್ಲದವಂಗೆ ಜಂಗಮವಿಲ್ಲ,
ಜಂಗಮವಿಲ್ಲದವಂಗೆ ಪ್ರಸಾದವಿಲ್ಲ,
ಪ್ರಸಾದವಿಲ್ಲದವಂಗೆ ಗಣತ್ವವಿಲ್ಲ,
ಅಱಿವುಸಾಹಿತ್ಯ ಆಚಾರ,
ಆಚಾರಸಾಹಿತ್ಯ ಗುರು,
ಗುರುಸಾಹಿತ್ಯ ಲಿಂಗ,
ಲಿಂಗಸಾಹಿತ್ಯ ಜಂಗಮ,
ಜಂಗಮಸಾಹಿತ್ಯ ಪ್ರಸಾದ,
ಪ್ರಸಾದಸಾಹಿತ್ಯ ಗಣತ್ವ
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಈ [೧]ಸ್ಥಲ ಉಂಟಾದವರಿಗೆ ಎಲ್ಲಾ ಸ್ಥಲ ಉಂಟು,
[೨]ಸಕಳ[೨] ನಿರ್ವಾಣ ಲಿಂಗೈಕ್ಯರಪೂರ್ವ. । ೬ ।   [೧೩೬೨]

ಇಂತು ತಾಮರಸನಿರಸನವ ಮಾಡಿ, ಸಮರಸಸಂಪೂರ್ಣನಾದ ಐಕ್ಯನ ಸ್ಥಲನಿರ್ದೇಶ. ಆ ಸ್ಥಲದನುಭಾವದ ವಚನ:

ಐಕ್ಯನ ನಿರ್ದೇಶ ಸ್ಥಲ :

೨೯೩

ಆಚಾರದಱಿವು ಆಗಮವ ಕೂಡಿಕೊಂಡಿಹುದು,
ಗುರುವಿನಾಚಾರದಱಿವು ನಿಷ್ಠೆಯ ಕೂಡಿಕೊಂಡಿಹುದು,
ಲಿಂಗಾಚಾರದಱಿವು ಕ್ರೀಯ ಕೂಡಿಕೊಂಡಿಹುದು,
ಸಮಯಾಚಾರದಱಿವು ನಿಃಕ್ರೀಯ ಕೂಡಿಕೊಂಡಿಹುದು.
ಇಂತೀ ಚತುರ್ವಿಧದೊಳಗೆ ಆವ [೩]ಅ[೩]ಂಗವೂ ಅಲ್ಲ,
ಕೂಡಲಸಂಗನ ಶರಣನ ಪರಿ ಬೇಱ[೩]. । ೭ ।   [೧೩೬೬]

೨೯೪

ಭಕ್ತನಾದರೆ ಕಿಂಕಿಲರ ಕಿಂಕಿಲನಾಗಿರಬೇಕು,
ಮಹೇಶ್ವರನಾದರೆ ಆದಿ ಅನಾದಿಯನಱಿಯದಿರಬೇಕು,
ಪ್ರಸಾದಿಯಾದರೆ ಒಡಲಗುಣವಿರಹಿತನಾಗಿರಬೇಕು,
ಪ್ರಾಣಲಿಂಗಿಯಾದರೆ ಬಾಹ್ಯವಿಚಾರವಿಲ್ಲದಿರಬೇಕು,

೧+ ಒಂದು (ಮೂ), ೨–೨ ಕಳಸ (ಮೂ), ೩–೩ x (ಮೂ).

ಶರಣನಾದರೆ ನಿಸ್ಸಂಗಿಯಾಗಿರಬೇಕು,
ಐಕ್ಯನಾದರೆ ಬಯಲು ಬಯಲಾಗಿರಬೇಕು.
ಇಂತಪ್ಪ ಸ್ಥಲವನಜಿದಲ್ಲದೆ ಕೂಡಲ ಚೆನ್ನಸಂಗಯ್ಯನಲ್ಲಿ
ಸುಸಂಗವೇದ್ಯನೆಂದೆನಿಸಬಾರದು. ।೮। [೧೩೬೭]

೨೯೫
ಭಕ್ತನಾದರೆ ಭಕ್ತಿಸ್ಥಲವನಜಿತಜಿಯದಿರಬೇಕು,
ಮಾಹೇಶ್ವರನಾದರೆ ನಿಷ್ಠೆಯ ಕುಳವನಜಿತಜಿಯದಿರಬೇಕು,
ಪ್ರಸಾದಿಯಾದರೆ ಪ್ರಸಾದಿಸ್ಥಲವನಜಿತಜಿಯದಿರಬೇಕು,
ಪ್ರಾಣಲಿಂಗಿಯಾದರೆ ಅಂತಃಸ್ಥಿತಿಯನಜಿತಜಿಯದಂತಿರಬೇಕು,
ಶರಣನಾದರೆ ಸತಿಪತಿಯೆಂದು ಅಜಿತಜಿಯದಂತಿರಬೇಕು,
ಐಕ್ಯನಾದರೆ ತಾನು ತಾನಾಗಿ ಆಗದಂತಿರಬೇಕು.
ಇಂತೀ ಷಡುಸ್ಥಲದ ನಿರ್ಣಯವ ನಿರ್ಣಯಿಸದೆ
ಬಲ್ಲೆನೆಂಬ ಲಜ್ಜೆಗೆಟ್ಟ ಲಾಂಛನಧಾರಿಯನೇನೆಂಬೆ
ಕೂಡಲ ಚೆನ್ನಸಂಗಮದೇವಾ. ।೯। [೧೩೬೯]

೨೯೬
ಲಿಂಗಸ್ಥಲವಿಲ್ಲದವರ ಭಕ್ತರೆಂಬೆ,
ಗುರುಸ್ಥಲವಿಲ್ಲದವರ ಶಿಷ್ಯರೆಂಬೆ,
ಪ್ರಸಾದಸ್ಥಲವಿಲ್ಲದವರ ಜಂಗಮವೆಂಬೆ,
ಈ ತ್ರಿವಿಧಸ್ಥಲವಿಲ್ಲದವರ ಶರಣರೆಂಬೆ.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಭವಿಸಾಹಿತ್ಯವಾಗಿದ್ದಾತನ ಲಿಂಗೈಕ್ಯನೆಂಬೆ. ।೧೦। [೧೩೭೯]

೨೯೭
ಆದಿ ಆಧಾರವಾಗಿಹುದೆ ಘನ,
ಆ ಘನವ ವೇಧಿಸುವುದೆ ಮನ,
ಆ ಮನವು ಮಹದಲ್ಲಿ ನಿಂದುದೆ ಭಕ್ತಿ,
ಭಿನ್ನಭಾವದಿಚ್ಛೆ ತೋಜದಿಹುದೆ ಆಚಾರ,
ತಟ್ಟು ಮುಟ್ಟು ತಾಗು ನಿರೋಧವಿಲ್ಲದಿಹುದೆ ಪೂಜೆ,
ಆಶೆ, ರೋಷ ಹರುಷವಿಲ್ಲದಿಹುದೆ ಪ್ರಸಾದ,
ಕರಣಮಥನದಿಚ್ಛೆ ತೋಜದಿಹುದೆ ಅನುಭಾವ.

ಇಂತಿವು ಸರ್ವಾಂಗದಲ್ಲಿ ಸಾಹಿತ್ಯವಾದ ನಿಜೈಕ್ಯಂಗೆ
ನಮೋ ನಮೋ ಎಂಬೆ ಕೂಡಲ ಚೆನ್ನಸಂಗಮದೇವಾ. ।೧೧। [೧೩೭೦]

೨೯೮
ಗ್ರಾಮಮಧ್ಯ ಧವಳಾರದೊಳಗೊಂದು
ಸತ್ತ ಹೆಣನಿರುತ್ತಿರಲು,
ಆ ಗ್ರಾಮದ ಸುತ್ತಿ ಬರುತಿರ್ದ ರಕ್ಕಸಿ
ಸತ್ತುದ ಕಂಡಳಲ್ಲಾ !
ಗ್ರಾಮ ನನ್ನ ಕಾಹು, ಗ್ರಾಮದಲ್ಲಿ ನಾನಿಪ್ಪೆ,
ಇದಾರು ಕೊಂದವರು?
ನಾನು ಕೊಲ್ಲದ ಮುನ್ನವೆ ಅದು ತಾನೆ ಸತ್ತಡೆ
ಎನಗಿದು ಸೋಜಿಗವು.
ಸತ್ತುದು ಗ್ರಾಮವನೆ ಕೆಡಿಸಿತ್ತು,
ಇನ್ನಿದ್ದಡೆ ಎನ್ನನೂ ಕೆಡಿಸಿತ್ತು,
ಇಲ್ಲಿದ್ದವರಿಗೆ ಉಪಟಳ ನೋಡಾ!
ಎಂದು ಗ್ರಾಮವ ಬಿಟ್ಟು ಹೋಯಿತ್ತಯ್ಯಾ
ಕೂಡಲ ಚೆನ್ನಸಂಗಮದೇವಾ. ।೧೨। [೧೩೭೧]

೨೯೯
ಸತ್ತ ಹೆಣನ ಹೊತ್ತವರೆಲ್ಲಾ
ಅಚ್ಚುಗಗೊಂಡರಲ್ಲಾ !
ಹೊತ್ತವರೆಲ್ಲಾ ಸತ್ತುದ ಕಂಡು
ಮೂರ್ಛಿತರಾದರಲ್ಲಾ !
ಸುತ್ತಿ ಬಂದಿದ್ದವರೆಲ್ಲಾ ಹೋಗಿ
ಅದ ಮುಟ್ಟಲಮ್ಮರು ನೋಡಾ !
ಮುಟ್ಟಿದರೆ ಮುನ್ನ ಮೂವರ ಕೆಡಿಸಿತ್ತು
ಸತ್ತ ಪರಿಯ ನೋಡಾ !
ಅದು ಕಾಡಿನಲ್ಲಿ ಉರಿಯದು, ಕಿಚ್ಚಿನಲ್ಲಿ ಬೇಯದು,
ಸತ್ತ ಪರಿಯ ನೋಡಾ !
ಕೂಡಲ ಚೆನ್ನಸಂಗಸೆಂಬ ಚಿಂತೆ
ಸತ್ತ ಪರಿಯ ನೋಡಾ ! ।೧೩। [೧೩೭೨]

೩೦೦

ಶರಣ ಸತ್ತರೆ ಭಕ್ತರು ಹೊತ್ತರು,
ಪ್ರಸಾದಿಗಳತ್ತರಲ್ಲಾ !
ಸುತ್ತಲಿದ್ದ ಜಂಗಮವೆಲ್ಲ ಕಿಚ್ಚಹಿಡಿದರು.
ಊರೊಳಗಿದ್ದವರು ಒಂಬತ್ತು ಬಾಗಿಲ
ತುಂಬಿಕೊಂಡಿದ್ದರು ನೋಡಾ !
ಮರಳಿ ಒಂದು ಬಾಗಿಲ ತೆಗೆದು ನೋಡಿ,
ಸತ್ತುದ ಕಂಡು ಅತ್ತವರು ಸತ್ತರೆಂದು
ಸತ್ತವರು ಬರುವುದ ಕಂಡು,
ಅತ್ತವರೆಲ್ಲ ಇತ್ತಲೆಯಾದರು,
ಕೂಡಲ ಚೆನ್ನಸಂಗ ಸತ್ತು ಸಯವಾದ ನೋಡಾ ! ।೧೪। [೧೩೭೩]

೩೦೧

ದೃಷ್ಟ ನಷ್ಟವಾದುದಕ್ಕೇನು ದೃಷ್ಟ?
ಭಾವ ನಷ್ಟವಾದು[೧]ದೆ[೧] ದೃಷ್ಟ.
ಭಾವ ನಷ್ಟವಾದುದಕ್ಕೇನು ದೃಷ್ಟ?
ಅನುಭಾವ ನಷ್ಟವಾದುದೆ ದೃಷ್ಟ.
ಅನುಭಾವ ನಷ್ಟವಾದುದಕ್ಕೇನು ದೃಷ್ಟ?
ಸ್ವಯ ಪರವೆನ್ನದುದೆ ದೃಷ್ಟ.
ಸ್ವಯ ಪರವೆನ್ನದುದಕ್ಕೇನು ದೃಷ್ಟ?
ಶಮೆದಮೆನಿಹತವಾದುದೆ ದೃಷ್ಟ.
ಶಮೆದಮೆನಿಹಿತಾತನಾದುದಕ್ಕೇನು ದೃಷ್ಟ?
ಕೂಡಲ ಚೆನ್ನಸಂಗನೆಂದು ಎನ್ನದುದೆ ದೃಷ್ಟ. ।೧೫। [೧೩೭೪]

ಇಂತು ಐಕ್ಯಸ್ಥಲನಂಗಂಗೊಂಡ ಸಮರಸಸಂಪನ್ನಂಗೆ ಷಡ್ವಿಧಲಿಂಗ[೨]ವು[೨] ಹೇಂಗೆ ಬೆರಸಿಪ್ಪುದೆಂದಡೆ, ಆ ಲಿಂಗದ ವಿವರ. ಐಕ್ಯನ ಆಚಾರಲಿಂಗ, ಆ ಸ್ಥಲದನುಭಾವದ ವಚನ:

ಐಕ್ಯಕ ಆಚಾರಲಿಂಗಸ್ಥಲ :

೩೦೨

ಅಱಿವು ನಾಸ್ತಿಯಾದುದೆ ಗುರು,
ಕುಱುಹು ನಾಸ್ತಿಯಾದುದೆ ಲಿಂಗ,

೧-೧ ದಕ್ಕೆ (ಮೂ), ೨-೨ ವೆ (ಮೂ).

ಕಾಯಗುಣ ನಾಸ್ತಿಯಾದುದೆ ವಿಭೂತಿ,
ಕರಣಗುಣ ನಾಸ್ತಿಯಾದುದೆ ರುದ್ರಾಕ್ಷಿ,
ಮರಣ ನಾಸ್ತಿಯಾದುದೆ ಮಂತ್ರ,
ಇಂತೀ ಪಂಚಾಚಾರ ಪ್ರತಿಷ್ಠೆಯುಳ್ಳಾತನೆ
ಕೂಡಲ ಚೆನ್ನಸಂಗನಲ್ಲಿ ಸದಾಚಾರಿ. । ೧೬ । [೧೩೭೬]

ಇಂತು ಆಚಾರಲಿಂಗದಲ್ಲಿ ಸಮರಸಸಂಪನ್ನನಾದ ಐಕ್ಯನ ಗುರುಲಿಂಗ. ಆ ಸ್ಥಲದನುಭಾವದ ವಚನ:

ಐಕ್ಯನ ಗುರುಲಿಂಗಸ್ಥಲ :

೩೦೩
ಅರ್ಪಿತವೆಂದರೆ ಅನರ್ಪಿತವಾಯಿತ್ತು,
ಅನರ್ಪಿತವೆಂದರೆ ಅರ್ಪಿತವಾಯಿತ್ತು,
ಗುರುವೆಂದರೆ ಶಿಷ್ಯನಾಯಿತ್ತು,
ಶಿಷ್ಯನೆಂದರೆ ಗುರುವಾಯಿತ್ತು,
ಗುರುಶಿಷ್ಯಸಂಬಂಧಕ್ರೀ ಪ್ರತಿ[1]ಭಾವವುಳ್ಳನ್ನಕ್ಕ
ಘನ ಲಿಂಗೈಕ್ಯವೆಲ್ಲಿಯದೊ?
ಕೂಡಲ ಚೆನ್ನಸಂಗಮದೇವಾ. । ೧೭ । [೧೩೮೬]

೩೦೪
ಗುರುಕಾರುಣ್ಯವ ಪಡೆದೆವೆಂಬರು:
ಒಬ್ಬ[2]ನಾಗಾದೆಹೆ[2]ನೆಂಬ, ಒಬ್ಬ ಚೇಗೆಯಾದೆಂಬ.
ಇವರಿಬ್ಬರು ಪಿಂಡಭೋಗಿಗ[3]ಳು.[3]
ಭಕ್ತಂಗೆ ಆಗೂ ಇಲ್ಲ, ಈ ಚೇಗೆಯೂ ಇಲ್ಲ,
ಗುರುದ್ರವ್ಯವನೊಪ್ಪಿಸಿದನಾಗಿ.
ಗುರುದ್ರವ್ಯಾಭಿಲಾಷೇಣ ಗುರುದ್ರವ್ಯಸ್ಯ ವಂಚನಂ ।
ಯಃ ಕುರ್ಯಾದ್ಗುರುಭಕ್ತಸ್ಸೋ ಭವತಿ ಬ್ರಹ್ಮರಾಕ್ಷಸಃ ॥
ಎಂದುದಾಗಿ,
ಗುರುದ್ರವ್ಯವಾವುದೆಂದಡೆ:
ದೈಹಿಕ ದ್ರವ್ಯ, ಭೌತಿಕ ದ್ರವ್ಯ, ಆತ್ಮದ್ರವ್ಯ,

೧+ ಷ್ಠೆ (ಮೂ), ೨–೨ ನಗಾದೆ (ಮೂ), ೩–೩ ಳಾಗಿ (ಮೂ).

ಇಂದ್ರಿಯದ್ರವ್ಯ, ಜ್ಞಾನದ್ರವ್ಯವೆಂಬ
ಈ ಪಂಚದ್ರವ್ಯವನು ಉಭಯವಳಿದು
ಷೋಡಶೋಪಚಾರದಲ್ಲಿ ಅರ್ಪಿಸಬಲ್ಲರೆ
ಕೂಡಲ ಚೆನ್ನಸಂಗಯ್ಯನಲ್ಲಿ ಆತನೆ ಗುರುಭಕ್ತ. । ೧೮ । [೧೩೮೭]

ಇಂತು ಗುರುಲಿಂಗದಲ್ಲಿ ಸಮರಸಸಂಪನ್ನನಾದ ಐಕ್ಯನ ಶಿವಲಿಂಗ. ಆ ಸ್ಥಲದನುಭಾವದ ವಚನ :

ಐಕ್ಯನ ಶಿವಲಿಂಗಸ್ಥಲ :

೩೦೫
ಲಿಂಗವೆಂದು ಪೂಜಿಸಿದಡಂಗದೊಡನುಳಿಯಿತ್ತು,
ಅಂಗದೊಡನುಳಿವ ಲಿಂಗ[1]ವ[1] ಹಿಂಗಿ ಪೂಜಿಸಬೇಕು.
ಹಿಂಗಿದ ಪೂಜೆಯನಳಿದರೆ ಪ್ರಾಣಲಿಂಗದಾಪ್ಯಾಯನವಳಿಯಬೇಕು,
ಪ್ರಾಣಲಿಂಗದಾಪ್ಯಾಯನವಳಿದರೆ
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯನೆನಿಸುವ. । ೧೯ । [೧೩೯೫]

೩೦೬
ಹೊತ್ತಾರೆ[2]ಯ[2] ಪೂಜೆ, ಹಗಲಿನ ಪೂಜೆ, ನಿಚ್ಚಕಿನ ಪೂಜೆಯ ಮಾಡಿ
ಅಚ್ಚುಗಗೊಂಡರೆಲ್ಲರು.
ನಿಶ್ಚಿಂತ ನಿರಾಳ ನಿಜೈಕ್ಯ ಲಿಂಗವ ಹೊತ್ತಿಗೆ ತರಲುಂಟೆ?
ದಿವಾ ನ ಪೂಜಯೇಲ್ಲಿಂಗಂ ರಾತ್ರೌ ನೈವ ಚ ನೈವ ಚ ।
ಸರ್ವದಾ ಪೂಜಯೇಲ್ಲಿಂಗಂ ದಿವರಾತ್ರಂ ವಿವರ್ಜಯೇತ್ ॥
ಎಂದುದಾಗಿ,
ಹೊತ್ತನೆ ಪೂಜಿಸಿ, ಹೊತ್ತನೆ ಅರ್ಚಿಸಿ, ಇತ್ತಿತ್ತಲಾದರೆಲ್ಲರು.
ನಿಶ್ಚಿಂತವನಳಿದು ನಿಜವ ನೆಮ್ಮಿದರೆ, ಚಿತ್ತ ಸಮಾಧಾನ.
ಕೂಡಲ ಚೆನ್ನಸಂಗನೆಂಬ ಲಿಂಗ, ನಿಶ್ಚಿಂತ ನಿಜೈಕ್ಯವು. । ೨೦ । [೧೩೯೬]

೩೦೭
ಅಂಗಲಿಂಗವೆಂಬರು, ಲಿಂಗವಂಗವೆಂಬರು, ಅದು ಹುಸಿ,
ಅಂಗ ಲಿಂಗವಾದರೆ ಕಾಯದಲ್ಲಿ ಕಳವಳವುಂಟೆ?

೧–೧ x (ಮೂ), ೨–೨ ರಿನ (ಮೂ).

ಲಿಂಗವಾಂಗವಾದರೆ ಪ್ರಳಯಕ್ಕೆ ಒಳಗಹುದೆ?
ಅಂಗ ಲಿಂಗದವಲ್ಲ, ಲಿಂಗವಂಗವಲ್ಲ,
ಲಿಂಗಅಂಗಸಂಬಂಧ ಸಂದಳಿದಲ್ಲಿ ಪ್ರಾಣಲಿಂಗಸಂಬಂಧಿ.
ಪ್ರಾಣ ನಿಃಪ್ರಾಣವಾದಲ್ಲಿ ಲಿಂಗರೂಪಾಗಿ ರೂಪು ನಾಸ್ತಿಯಾದಂದು
ಕೂಡಲ ಚೆನ್ನಸಂಗನಲ್ಲಿ ಲಿಂಗಸಂಬಂಧ. । ೨೧ । [೧೩೯೭]

೩೦೮
ನೋಡಿಹೆನೆಂದರೆ ದೃಷ್ಟಿ ಕೊಳ್ಳದು,
ಪೂಜಿಸಿಹೆನೆಂದರೆ ಪೂಜೆ ಕೊಳ್ಳದು.
ಇನ್ನೆಂತೊ? ಅಜಿದೆನೆಂದರೇನೂ ಇಲ್ಲ.
ಮನದೃಷ್ಟ ಕೂಡಲ ಚೆನ್ನಸಂಗಯ್ಯ,
ಉಭಯಗೆಟ್ಟ ಲಿಂಗಾರ್ಚನೆ. । ೨೨ । [೧೩೯೮]

ಇಂತು ಶಿವಲಿಂಗದಲ್ಲಿ ಸಮರಸಸಂಪನ್ನನಾದ ಐಕ್ಯನ ಜಂಗಮಲಿಂಗ. ಆ ಸ್ಥಲದನುಭಾವದ ವಚನ:

ಐಕ್ಯನ ಜಂಗಮಲಿಂಗಸ್ಥಲ :

೩೦೯
ಲಿಂಗವ ಕಟ್ಟಿ ಸುಳಿವಾತ ಜಂಗಮವಲ್ಲ,
ಆ ಜಂಗಮಕ್ಕೆ ಮಾಡುವಾತ ಭಕ್ತನಲ್ಲ,
ಉಭಯ ಕುಳವಳಿದಾತ ಜಂಗಮ,
ಆ ಜಂಗಮಕ್ಕೆ ಮಾಡುವಾತ ಭಕ್ತ,
ಇದು ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಉಭಯ ಕುಳವಳಿದ ಭಕ್ತನಪೂರ್ವ,
ಆ ಜಂಗಮವೂ ಅಪೂರ್ವ. । ೨೩ । [೧೩೯೯]

೩೧೦
ಅನ್ಯಲಿಂಗ ಅನ್ಯಲಿಂಗವೆಂದೆಂಬರು,
ಅನ್ಯಲಿಂಗವಾವುದು, ತನ್ನಲ್ಲಿಹುದಾವುದು?
ಅಂಗದ ಮೇಲೆ ಲಿಂಗವುಳ್ಳವರ ಮನೆಯ ಹೊಗಲಾಗದು,
ಬಱುಕಾಯಗೆ ನೀಡಲಾಗದು,

ಗುರುಲಿಂಗಜಂಗಮ ಪ್ರಸಾದವಿಲ್ಲದವರ ಕಂಡರೆ
ಮಾಡುವಾತ ಭಕ್ತ[೧]ನಲ್ಲ,[೧] ಕೂಡಲ ಚೆನ್ನಸಂಗಮದೇವಾ, । ೨೪ । [೧೪೦೦]

ಇಂತು ಜಂಗಮಲಿಂಗದಲ್ಲಿ ಸಮರಸಸಂಪನ್ನನಾದ ಐಕ್ಯನ ಪ್ರಸಾದಲಿಂಗ. ಆ ಸ್ಥಲದನುಭಾವದ ವಚನ:

ಐಕ್ಯನ ಪ್ರಸಾದಲಿಂಗಸ್ಥಲ :

೩೧೧
ಜಲನಿಧಿ ಶಿಖರದ ನಡುವೆ ಒಂದು ದ್ರವ್ಯದ ತಳದಲ್ಲಿ
ಶಿವಲೋಕ ಕೇಳಿರಣ್ಣ !
ದ್ರವ್ಯಪಾಕಂಗಳಲ್ಲಿ ತನ್ನ ಸುಖವನಱಿಯದೆ
ಶಿವಲೋಕದೊಳಗೆ ಬೀಳುತ್ತಿದ್ದರೆಲ್ಲರು !
ದ್ರವ್ಯಶುದ್ಧ, ಪಾಕಶುದ್ಧ,
ಕೂಡಲ ಚೆನ್ನಸಂಗಾ ನಿಮ್ಮ ಪ್ರಸಾದಿಗೆ. । ೨೫ । [೧೪೦೫]

೩೧೨
ವಿನಾಶದೇಶದ ವಿನಾಶವಿನೋದ ನೋಡಾ !
ಭಾವದ ಉತ್ಕಟದ ಶರೀರಂಗಳ
ಹೊಱೆಯಲ್ಲಿ ಮೋಹಿತವಿಲ್ಲದ ಪ್ರಸಾದಿ,
ಕರ ಕಾಲು ಸನ್ನಿಹಿತವಾದ ಪ್ರಸಾದಿ,
ರಾಗದ್ವೇಷಂಗಳ ಶಬ್ದವಿಲ್ಲದ ಪ್ರಸಾದಿ.
ಇದು ಕಾರಣ ಕೂಡಲ ಚೆನ್ನಸಂಗನಲ್ಲಿ
ಸದಾಸನ್ನಿಹಿತವಾದ ಪ್ರಸಾದಿ. । ೨೬ । [೧೪೦೬]

೩೧೩
ಸ್ವಯಮಜ್ಜನ, ಸ್ವಯಪೂಜೆ, ಸ್ವಯಾರ್ಪಿತ,
ನಾ ನೀನೆಂಬ ಸಂಶಯ ನಿಂದ ನಿಲವೆಂತಿದ್ದಿತೆಂದಡೆ:
ಪರತಂತ್ರವ ಮೀಱಿ, ಭಾವವ ಬಿಟ್ಟು,
ಘನ ರವಿಲೋಚನನಾಗಿ, ಅನರ್ಪಿತ ಅಭುಂಜಿತ,
ಸ್ಥೂಲ ಸೂಕ್ಷ್ಮ ಘನನಿತ್ಯವೆಂದಱಿದು,

೧-೧ x (ಮೂ).

ಕಾಯ ಜೀವ ಪ್ರಸಾದವಂ ಬಿಟ್ಟು, ಸರ್ವಭಾವ ರುಚಿಪ್ರಸಾದಿ,
ಕೂಡಲ ಚೆನ್ನಸಂಗಯ್ಯನಲ್ಲಿ ಆತ ಸರ್ವಾಂಗಪ್ರಸಾದಿ. ।೨೭। [೧೪೦೭]

೩೧೪

ಅಂಗಕ್ಕೆ ಆಚಾರವಳವಟ್ಟಲ್ಲಿ ಲಿಂಗಕ್ಕೆ ಆ ಅಂಗವೆ ಅರ್ಪಿತ,
ಪ್ರಾಣಕ್ಕೆ ಪ್ರಸಾದ ಸಾಧ್ಯವಾದಲ್ಲಿ ಲಿಂಗಕ್ಕೆ ಆ ಪ್ರಾಣವೆ ಅರ್ಪಿತ,
ಮನವು ಮಹಾಘನವನಿಂಬುಗೊಂಡಲ್ಲಿ ಲಿಂಗಕ್ಕೆ ಮನ ಅರ್ಪಿತ,
ಭಾವಭ್ರಮೆಯಳಿದು ನಿರ್ಭಾವವಾದಲ್ಲಿ ಲಿಂಗಕ್ಕೆ ಆ ಭಾವವೆ ಅರ್ಪಿತ,
ಜ್ಞಾತೃ ಜ್ಞಾನ ಜ್ಞೇಯ ಸಂಪುಟವಾಗಿ ಅಱಿವು ನಿರ್ಣಯಿಸಿ
ನಿಃಪತಿಯಾಗಿ ಕುಱು[ಹು]ಗೆಟ್ಟಲ್ಲಿ ಲಿಂಗಕ್ಕೆ ಆ ಅಱಿವೆ ಅರ್ಪಿತ.
ಇಂತು ಸರ್ವಾಂಗ ಅರ್ಪಿತವಾಗಿ ಲಿಂಗಕ್ಕೆ ಒಡೆತನವಿತ್ತ ಕಾರಣ
ಕೂಡಲ ಚೆನ್ನಸಂಗಯ್ಯನಲ್ಲಿ ನಾನೆಂದೆನ್ನಲಱಿಯದೆ
ನಿಂದ ನಿಜದ ಮಹಾಪ್ರಸಾದಿ. ।೨೮। [೧೪೦೮]

೩೧೫

ಅಂಗಲೀಯ, ಲಿಂಗಲೀಯ,
ಅಭಾವಲೀಯ, ಸ್ವಭಾವಲೀಯ,
ಸಂಗದಲ್ಲಿ ಪ್ರಸಾ[೧]ದಿ,[೧] ಅಕೃತವಾದ ಪ್ರಸಾದಿ.
ಆಧಾರಾ[೨]ಧೇ[೨]ಯ ಆದಿಯ ದೇವನ ಮನಕ್ಕೆ ತಾರದ ಪ್ರಸಾದಿ.
ಇದು ಕಾರಣ ಕೂಡಲ ಚೆನ್ನಸಂಗಯ್ಯನ
ಘನದಲ್ಲಿ ನಿಂದ ಪ್ರಸಾದಿ. ।೨೯। [೧೪೦೯]

೩೧೬

ಪ್ರಥಮದಲ್ಲಿ ಸ್ಪರ್ಶ[೩]ವೆಂಬ ಸ್ಪರ್ಶನ ಗುಣದಿಂದ ಪಾದೋದಕ,
ದ್ವಿತಿಯದಲ್ಲಿ ಅಂಗಗುಣವಳಿಯಿತ್ತಾಗಿ ಲಿಂಗಮುಖದಿಂದ
ಬಂದುದು ಲಿಂಗೋದಕ,
ತೃತೀಯದಲ್ಲಿ ಮಹಾಗಣಗಳ ಬರವಿನಿಂದ ಮಜ್ಜನೋದಕ.
ಚತುರ್ಥದಲ್ಲಿ ಚತುರ್ದಳಪದ್ಮವಿಕಸಿತವಾಗಿ ಪುಷ್ಪೋದಕ,
ಪಂಚಮದಲ್ಲಿ ಲಿಂಗಕ್ಕೆ ಪರಮ ಪರಿಯಾಣ ಇಕ್ಕುವಲ್ಲಿ ಅವಧಾನೋದಕ,

೧-೧ ದ (ಮೂ). ೨-೨ ದಿ (ಮೂ). ೩+ನ (ಮೂ).

ಷಷ್ಠಮದಲ್ಲಿ ಲಿಂಗಾರೋಗಣೆಯಾಪ್ಯಾಯನೋದಕ,
ಸಪ್ತಮದಲ್ಲಿ ಲಿಂಗಕ್ಕೆ ಹಸ್ತೋದಕ,
ಅಷ್ಟಮದಲ್ಲಿ ಅಷ್ಟಾಂಗಯೋಗ ಪರಮಪರಿಣಾಮೋದಕ,
ನವಮದಲ್ಲಿ ನಾಮ ಸೀಮೆ ಇಲ್ಲವಾಗಿ ನಿರ್ನಾಮೋದಕ,
ದಶಮದಲ್ಲಿ ಹೆಸರಿಲ್ಲವಾಗಿ ನಿತ್ಯೋದಕ,
ಇಂತು ದಶವಿಧೋದಕ.
ಇನ್ನು ಏಕಾದಶ ಪ್ರಸಾದ:
ಪ್ರಥಮದಲ್ಲಿ ಮಹಾದೇವಂಗೆ ಮನವರ್ಪಿತ.
ದ್ವಿತೀಯದಲ್ಲಿ ಮಹೇಶ್ವರಂಗೆ ವೀರಾರ್ಪಿತ,
ತೃತೀಯದಲ್ಲಿ ಶಂಕರಂಗೆ ಸಮಾಧಾನಾರ್ಪಿತ,
ಚತುರ್ಥದಲ್ಲಿ ನಿರ್ವಿಷಯಾರ್ಪಿತ,
ಪಂಚಮದಲ್ಲಿ ಪಂಚವಕ್ತ್ರಾರ್ಪಿತ,
ಷಷ್ಠಮದಲ್ಲಿ ನಷ್ಟರೂಪ ನಿರೂಪಾರ್ಪಿತ,
ಸಪ್ತಮದಲ್ಲಿ ಆತ್ಮಾರ್ಪಿತ,
ಅಷ್ಟಮದಲ್ಲಿ ತನ್ನ ಮಱೆದ ಮಱಹಾರ್ಪಿತ,
ನವಮದಲ್ಲಿ ಅಸಮ ಸಹಸ್ರನಾಳದಿಂದ ತೃಪ್ತ್ಯಾರ್ಪಿತ,
ದಶಮದಲ್ಲಿ ಚಿತ್ತ ಸುಯಿಧಾನಿಯಾಗಿ ಸುಷುಮ್ನಾನಾಳದಿಂದ ಅಮೃತಾರ್ಪಿತ,
ಏಕಾದಶದಲ್ಲಿ ಏಕಪ್ರಸಾದ ನೋಡ ಹೋದರೆ ತನ್ನ ನುಂಗಿತ್ತಯ್ಯಾ.
ಹೇಳಬಾರದ ಘನವು ಕಾಣಬಾರದಾಗಿ
ಕೂಡಲ ಚೆನ್ನಸಂಗನಲ್ಲಿ ಉಪಮಿಸಬಾರದ ಮಹಾಘನವು. । ೩೦ ।

ಇಂತು ಪ್ರಸಾದಲಿಂಗದಲ್ಲಿ ಸಮರಸಸಂಪನ್ನನಾದ ಐಕ್ಯನ ಮಹಾಲಿಂಗ. ಆ ಸ್ಥಲದನುಭಾವದ ವಚನ :

ಐಕ್ಯನ ಮಹಾಲಿಂಗಸ್ಥಲ :

೩೧೭

ಮಂತ್ರಯೋಗ, ಹಠಯೋಗ,
ಲಂಬಿಕಾಯೋಗ, ಜ್ಞಾನಯೋಗ–
ಇಂತಿವೆಲ್ಲಾ ಯೋಗವನಱೆದು ಮಱೆದು
ಭಕ್ತಿಯೋಗದ ಮೇಲೆ ನಿಂದು,
ರಾಜಯೋಗದ ಮೇಲೆ ನಡೆವ ನುಡಿ[ವುದು] ಕಾಣಿರೇ
ವಾಗತೀತಂ ಮನೋಽತೀತಂ ಭಾವಾತೀತಂ ನಿರಂಜನಂ ।
ಸರ್ವಶೂನ್ಯಂ ನಿರಾಕಾರಂ ನಿತ್ಯತ್ವಂ ಪರಮಂ ಪದಂ ॥

ಎಂದುದಾಗಿ.
ಮಹಾಲಿಂಗೈಕ್ಯರ ನಿಲವನು ಅನುಮಾನಿಗಳೆತ್ತ ಬಲ್ಲರು?
ಕೂಡಲ ಚೆನ್ನಸಂಗಮದೇವಾ. । ೩೧ । [೭೭೬]

೩೧೮

ಲೋಕವಿರೋಧಿ ಭಕ್ತ,
ಭಕ್ತವಿರೋಧಿ ಶರಣ,
ಶರಣವಿರೋಧಿ ಲಿಂಗೈಕ್ಯ.
ಈ ತ್ರಿವಿಧವಿರೋಧಿ ಕೂಡಲ ಚೆನ್ನಸಂಗನಲ್ಲಿ
ಮಹಾಲಿಂಗೈಕ್ಯವು. । ೩೨ । [೧೪೨೫]

೩೧೯

ಮಾರ್ಗಕ್ರಿಯಾಸಮಯದಲ್ಲಿ ಶಿವಭಕ್ತಿಸಂಪುಟ,
ಮೀಱಿದಕ್ರಿಯಾಸಮಯದಲ್ಲಿ ಶಿವಲಿಂಗಸಂಪುಟ,
ಉಭಯಕ್ರಿಯಾನುಭಾವ ನೆಲೆಗೊಂಡಲ್ಲಿ ಮನಲಿಂಗಸಂಪುಟ,
ಮನ ಲಿಂಗಲೀಯವಾದ ಬಳಿಕ ತೆಱಹಿಲ್ಲದೆ ಕುಱುಹಳಿದ ಲಿಂಗೈಕ್ಯ.
ಸುತ್ತಿರ್ದ ಪ್ರಪಂಚು ಮೆಲ್ಲಮೆಲ್ಲನೆ ಅಚ್ಚಳಿದು ಹಿಂಗಿದವು.
ಕೂಡಲ ಚೆನ್ನಸಂಗಾ ಲಿಂಗೈಕ್ಯಂಗೆ. । ೩೩ । [೧೪೨೬]

೩೨೦

ಅಱಿಯಲಿಲ್ಲದ ಅಱಿವು,
ಮಱೆಯಲಿಲ್ಲದ ಮಱಹು,
ನೋಡಲಿಲ್ಲದ ನೋಟ, [೧]ಕೂಡಲಿಲ್ಲದ ಕೂಟ[೧]
ಬೆರಸಲಿಲ್ಲದ ಬೆಱಗು ನಿಂದುದು,
ಕೂಡಲ ಚೆನ್ನಸಂಗಯ್ಯ[೨]ನಲ್ಲಿ[೨] ಲಿಂಗೈಕ್ಯವು. । ೩೪ । [೧೪೨೭]

೩೨೧

ನೋಡಿ ನೋಟವ ಮಱೆದು,
ಕೂಡಿ ಕೂಟವ ಮಱೆದು,
ಬಯಲ ಸಮರಸಕ್ಕೆ ಮರುಳಾಯಿತ್ತಲ್ಲಾ !

೧–೧ x (ಮೂ), ೨–೨ x (ಮೂ).

ಜೀವ ಪ್ರಾಣನ ಭೇದವಳಿದು
ನಿಜವದಕ್ಕಾಯಿತಲ್ಲಾ !
ಅನ್ಯಚಿಹ್ನವಳಿದು ತನ್ನ ತಾ ಮಱೆಯಿತ್ತು,
ಕೂಡಲ ಚೆನ್ನಸಂಗಮದೇವಾ ನಿನ್ನಿಂದ ನಿಂದಿತ್ತಲ್ಲಾ ! । ೩೫ । [೧೪೨೮]

೩೨೨
ಸಹಜವೆನ್ನದೆ ನಿಜವೆನ್ನದೆ,
ಅಚಳವೆನ್ನದೆ ಖಂಡಿತವೆನ್ನದೆ.
ಶೂನ್ಯವೆನ್ನದೆ ನಿಃಶೂನ್ಯವೆನ್ನದೆ,
ಏನೂ ಎನ್ನದೆ, ಕೂಡಲ ಚೆನ್ನಸಂಗ[೧]ನಲ್ಲಿ[೧] ಲಿಂಗೈಕ್ಯ. । ೩೬ । [೧೪೨೯]

ಇಂತು ಐಕ್ಯಸ್ಥಲವೊಂದಱಲ್ಲಿ ಷಡ್ವಿಧಲಿಂಗ ಸಮರಸವನೈದಿರುತ್ತಿರಲು ಮುಂದೆ ನಿರವಯ ಸ್ಥಲವಾದುದು. ಆ ಸ್ಥಲ ಸರ್ವಶೂನ್ಯವೆನಿಸಿಕೊಂಬುದಾಗಿ ಅದಕ್ಕೆ ನಿಃಶಬ್ದಬ್ರಹ್ಮ.[೨] ಇಂತು ಚೆನ್ನಬಸವರಾಜದೇವರು ನಿರೂಪಿಸಿದ ಅನುಭಾವವು.

ಆಚಾರ್ಯಂಗೆ ಆಚಾರ್ಯಾನುಭವವ ಹೇಳುವುದು, ಶಿಷ್ಯಂಗೆ ಸುಶ್ರೂಷೆಯನುಭಾವವ ಹೇಳುವುದು, ಜಂಗಮಕ್ಕೆ ಆಚಾರಾನುಭಾವವ ಹೇಳುವುದು, ಭಕ್ತಂಗೆ ಭೃತ್ಯಾನುಭಾವವ ಹೇಳುವುದು, ಯೋಗಿಗೆ ಸಂಯೋಗಾನುಭಾವವ ಹೇಳುವುದು, ಭೋಗಿಗೆ ಅರ್ಪಣಾನುಭಾವವ ಹೇಳುವುದು. ಅದು ಕಾರಣವಾಗಿ ಅನುಭಾವಸ್ಥಲವೆಂಬ ನಾಮವಾಯಿತ್ತು.

ಈ ವಚನಂಗಳು ಅಂಗಸ್ಥಲಕ್ಕೆ ಲಿಂಗಸ್ಥಲಕ್ಕೆ ಭಿನ್ನವಾಗಿ ಹೇಳಿ ಬಂದುದಿಲ್ಲ. ಷಡುಸ್ಥಲ ಸಂಯೋಗಬ್ರಹ್ಮದ ನೆಲೆಯನಱಿದು ನಿಲಬೇಕಾಗಿ ನಾಮರೂಪಾಯಿತ್ತೆಂದಱಿದು, ಇದೇ ಉಪದೇಶವೆಂದು ಗ್ರಹಿಸೂದು. ಇನ್ನೂ ಕೋಟ್ಯನುಕೋಟಿ ವಚನಂಗಳಿದ್ದರೂ ಈ ಅನುಭಾವಸ್ಥಲದೊಳಗಣವಲ್ಲದೆ ಬೇಱೊಂದು ಸ್ಥಲಪರಿಯಾಯವಿಲ್ಲವೆಂದಱಿವುದು.

ಇಂತಪ್ಪ ಅನುಭಾವಸ್ಥಲದನುವ ಶ್ರೀಗುರುರಾಯ ಶಿಷ್ಯಂಗೆ ಬೋಧಿಸಲು, ಆ [೩]ಶಿಷ್ಯ[೩] ಮಹಾಪ್ರಸಾದಮಂ ಕೈಕೊಂಡು, ಆ ಶ್ರೀಗುರುಲಿಂಗವ ಸ್ತೌತ್ಯವ ಮಾಡಿದ ಪದಂಗಳು.

ರಾಗ: ಶಾಂತಮಲಹರಿ

ಪಲ್ಲವ:[೪]
ಸ್ಥಳಕುಳದೊಳಗಣ ಹೊಳಹ ತಿಳಿಹಿ ಕಳ
ವಳವನಳಿದು ಬೆಳಗಿದ ಶ್ರೀಗುರುವೆ[೫] ।

೧-೧ x (ಮೂ), ೨+ ಇಂತು ಷಷ್ಠಮ ಸ್ಥಲಕ್ಕೆ ಸೇರಿಸಿದ ವಚನ ೩೨೩ಕ್ಕಂ ಮಂಗಳ ಮಹಾಶ್ರೀ. (ಮೂ), ೩-೩ ತಚ್ಛಿಷ್ಯ (ಮೂ), ೪+ ಪದ (ಮೂ), ೫+ ಸ್ಥಳಕುಳ (ಮೂ).

ಅಂಗ [೧]ಲಿಂಗ[೧] ಲಿಂಗಾಂಗವೆಂಬ ರತಿ
ಹಿಂಗದೆ ಸುಖಸಂಯೋಗದ ಶರಣ ।
ಸಂಗ ಚೆನ್ನಬಸವೇಶ್ವರನುಭಾವ
ಲಿಂಗವ ಕರುಣಿಸಿದ ಶ್ರೀಗುರುವೆ[೨] । ೧ ।

ಎಲ್ಲಿದ್ದ ಸ್ಥಲದಲ್ಲಿ[೩]ಯ[೩]ಲ್ಲದಿ
ನ್ನಿಲ್ಲ ಹಿಂದೆ ಮುಂದೆಂಬುದನು ।
ಸಲ್ಲವಿಟ್ಟು ಸಂದಣಿಸಿ ಷಡುಸ್ಥಲ
[೪]ವೆಲ್ಲಱಿಲ್ಲಿ[೪] ತೋಱಿಸಿದ ಶ್ರೀಗುರುವೆ[೫] । ೨ ।

ಆ[೬]ವ ಸ್ಥಲದೊಳಗಾವ ವ್ರತವ
ನಾವ[೭]ರ್ಜಿ[೭]ಸಬೇಕೆಂದು ಅಱುಹಿ ।
ದಾವತಿಗೊಳಿಸದೆ ಮನಕೆ ಮಹಾಘನ
ದೇವನ ತಂದಿರಿಸಿದ ಶ್ರೀಗುರುವೆ[೮] । ೩ ।

ನಿಂದನಿಲದೊಳೊಂದಿಹ ತಾಮಸವನು[೯]
ಕೊಂದು ಮುಂದೆ ಷಡ್ವಿಧಲಿಂಗ ।
ಸಂದಿಲ್ಲದೆ ಸರ್ವಾಂಗಲಿಂಗವಾ
ದಂದವನಱುಪಿದ ಶ್ರೀಗುರುರಾಯಾ । ೪ ।

ಆಱಂಗಸ್ಥಲದೊಳು ವಿವರಿಸಿಯಾ
ಆಱು ಲಿಂಗ ಮೂವತ್ತಾಱು ।
ತೋಱಿ ಬಸವನೆ ಸಂಗಸದಾಶಿವ
ಬೇಱೆಂದೆನಿಸದೆ ಬೆರಸಿದ ಶ್ರೀಗುರುವೆ । ೫ ।

❖❖

೧–೧ x (ಮೂ). ೨+ ಸ್ಥಳಕುಳ(ಮೂ). ೩–೩ ಎ (ಮೂ). ೪–೪ ವೆಲ್ಲವೆಲ್ಲಱಿಲ್ಲಿ (ಮೂ). ೫+ ಸ್ಥಳಕುಳ(ಮೂ) ೬+ ವಾ(ಮೂ). ೭–೭ ರ್ಜಿ (ಮೂ). ೮+ಸ್ಥಳಕುಳ(ಮೂ). ೯ ಇಲ್ಲಿಂದ ಮುಂದಿನ ಭಾಗ 'ಮೂ' ದಲ್ಲಿ ತ್ರುಟಿಕವಾಗಿದೆ (ಮೂ).

ತೃತೀಯ ಸಂಪುಟ

ಚೆನ್ನಬಸವಣ್ಣನವರ ಷಡುಸ್ಥಲದ ನಿರ್ಣಯ

ಭಕ್ತಸ್ಥಲ

[೧]ಬಸವರಾಜದೇವರು ಮಾಡಿದ ಷಡುಸ್ಥಲ[೨] ತಾಮಸಗುಣದ ಅನುಭಾವ[೨] [೩][ಪ][೩]ದಕೆ ಚೆನ್ನಬಸವರಾಜದೇವರು ಮಾಡಿದ, ಷಡುಸ್ಥಲ[೪]ನಿರಸನ[೪] ತಾಮಸವ ಖಂಡಿಸಿದ ಅನುಭಾವ ಪದವೆಂತೆಂದಡೆ:

೧

ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಮಾಹೇಶ್ವರನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಪ್ರಸಾದಿಯೆನಿಸಿಕೊಂಬೆ,
ಮೆಲ್ಲಮೆಲ್ಲನೆ ಪ್ರಾಣಲಿಂಗಿಯೆನಿಸಿಕೊಂಬೆ,
ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಐಕ್ಯನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಷಡುಸ್ಥಲವ ಮೀರಿ, ನಿರವಯ ಸ್ಥಲದಲ್ಲಿ [೫]ಎಯ್ದುವೆ[೫]
ಕೂಡಲ [೬]ಸಂಗಮದೇವಾ. ।೧।[೭] [ಪು ೨೮-೨೯ ಅ.ಟಿ.]

೨

ಮೆಲ್ಲಮೆಲ್ಲನೆ ಭಕ್ತ,
ಮೆಲ್ಲಮೆಲ್ಲನೆ ಮಾಹೇಶ್ವರ,
ಮೆಲ್ಲಮೆಲ್ಲನೆ ಪ್ರಸಾದಿ,

೧+ ಶ್ರೀಗುರು ಬಸವಲಿಂಗಾಯನಮಃ ॥ ಶ್ರೀಗುರು ಹಾಲಸ್ವಾಮಿಗಳ ಶ್ರೀಪಾದ ಪದ್ಮಂಗಳೇ ಗತಿ (ಮೂ), ೨+ ದ, (ಮೂ)೩-೩ ಪಾ (ಮೂ), ೪-೪ ದ ನಿ (ಮೂ), ೫-೫ ಯೆ ಇದುವೆ (ಮೂ), ೬+ ಚೆನ್ನ (ಮೂ), ೭, 'ಮೂ' ಹಸ್ತಪ್ರತಿಯ ಪ್ರಕಾರ ಇದು ಚೆನ್ನಬಸವಣ್ಣನವರ ವಚನ. ಆದರೆ ಇದು ಮೂಲತಃ ಬಸವಣ್ಣವರ ವಚನವಾಗಿದೆ. ಈ ವಚನದ ಅಭಿಪ್ರಾಯವನ್ನು ಖಂಡಿಸಿ ಚೆನ್ನಬಸವಣ್ಣನವರು ಮುಂದಿನ ವಚನಗಳನ್ನು ಹೇಳುತ್ತಾರೆ. (ಸಂ).

ಮೆಲ್ಲಮೆಲ್ಲನೆ ಪ್ರಾಣಲಿಂಗಿ,
ಮೆಲ್ಲಮೆಲ್ಲನೆ ಶರಣ,
ಮೆಲ್ಲಮೆಲ್ಲನೆ ಐಕ್ಯನಾದೆನೆಂದು
ನುಡಿವರು ನಿಮ್ಮ ಶರಣರು.
ತಾವೇನು ಮರು[೧]ಜ[೧]ವಣಿಯ ಕೊಂಡರೆ?
ಅಮೃತಸೇವನೆಯ ಮಾಡಿದರೆ?
ಆವ ಸ್ಥಲದಲ್ಲಿ ನಿಂದ[೨]ರೂ[೨]
ನಿಂದ ಸ್ಥಲದಲ್ಲಿ ಆ ಷಡುಸ್ಥಲವಡಗದಿದ್ದರೆ,
ಆ ಭಕ್ತಿಯ ಬಾಯಲ್ಲಿ ಹುಡಿಯ ಹೊಯಿದು ಹೋಗುವೆನೆಂದ
ಕೂಡಲ ಚೆನ್ನಸಂಗಮದೇವ. । ೨ ।[ಪು. ೨೮-೨೯ ಅ. ಟಿ.]

೩

ಭಕ್ತ[೩]ರಾದೆವೆ[೩]ಂದು ಯುಕ್ತಿಗೆಟ್ಟು ನುಡಿವರು,
ಭಕ್ತಿಯ ಸ್ಥಲವೆಲ್ಲರಿಗೆಲ್ಲಿಯದೊ?
ಗುರುವಿನಲ್ಲಿ ತನುವಂಚನೆ,
ಲಿಂಗದಲ್ಲಿ ಮನವಂಚನೆ,
ಜಂಗಮದಲ್ಲಿ ಧನವಂಚನೆ,
ಗುರುವಿನಲ್ಲಿ ಚಾರಿತ್ರ,
ಲಿಂಗದಲ್ಲಿ ಲಕ್ಷಣ,
ಜಂಗಮದಲ್ಲಿ ಜಾತಿಯನರಸುವನ್ನಕ್ಕ ಭಕ್ತನೆ?
ಭಕ್ತನಲ್ಲ, ದೋಷಾರ್ಥಿ.[೪]
ಗುರುಲಿಂಗಜಂಗಮ ಸದಾಚಾರವರ್ಜಿತ.
ಕೂಡಲ ಚೆನ್ನಸಂಗಮದೇವರಲ್ಲಿ
ಭಕ್ತಿಯ ಸ್ಥಲವೆಲ್ಲರಿಗೆಲ್ಲಿಯದೊ? । ೩ । [೫೯]

೪

ಸುರೆಯ ಮಡಕೆಗೆ ಹೊರಗೆ ಬೂದಿಯ ಹೂಸಿದರೇನೋ,
ಒಳಗೆ ಶುದ್ಧವಾಗಬಲ್ಲುದೆ?
ಗುರುಕಾರುಣ್ಯ ನೆಲೆಗೊಂಡು ಗುರುಲಿಂಗಜಂಗಮ
ಒಂದೆಂದಜೀಯದಿರ್ದರೆ ನಾಯಕನರಕ ತಪ್ಪದು.

೧-೧ ಜೆ (ಮೂ), ೨-೨ ರೆ (ಮೂ), ೩-೩ ನಾದೆನೆ (ಮೂ), ೪+ ಪಕ್ಷಪಕ್ಷೇಣ (ಮೂ).

ಕೂಡಲ ಚೆನ್ನಸಂಗಮದೇವರಲ್ಲಿ
ಭಕ್ತಿಯ ಸ್ಥಲವೆಲ್ಲರಿಗೂ ಸೂಜೆಯೆ? । ೪ । [೬೦]

೫
ಮುತ್ತು ನೀರೊಳಗೆ ಹುಟ್ಟಿದರೆ ಮತ್ತೆ ನೀರನಪ್ಪುವುದೆ?
ಗುರುಕಾರುಣ್ಯವ ಪಡೆದು ಪೂರ್ವಾಶ್ರಯವ ಬಯಸಿದರೆ
ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ,
ಪಾದೋದಕದ ಪ್ರಸಾದದ ದ್ರೋಹ.
ಇಂತೀ ಪಂಚಮಹಾಪಾತಕಂಗಳು
ಭಕ್ತನಿಗಲ್ಲದೆ ಭವಿಗೆಲ್ಲಿಯದೊ?
ಗುರುವಿದು, ಲಿಂಗವಿದು, ಜಂಗಮವಿದು ಎಂದರಿಯದಿರ್ದರೆ
ಕುಂಭೀಪಾತಕ ನಾಯಕನರಕ ತಪ್ಪದು ಎಂದ
ಕೂಡಲ ಚೆನ್ನಸಂಗಮದೇವ. । ೫ । [೩೫೧]

೬
ಹಲವು [೧][ಪರಿಯ][೧] ಪುಷ್ಪದಲ್ಲಿ ಪರಿಮಳವನಜಿಸುವರೆ?
ಪಿರಿದು ರಸದಾಳಿಯ ಕಬ್ಬಿನಲ್ಲಿ ಹಣ್ಣನಜಿಸುವರೆ?
[೨]ಸುರಭಿಗೆ ತನು[೨] ಕತ್ತಲೆಯೆಂದು ಬೆಳಗನಜಿಸುವರೆ?
ಪರಶಿವಮೂರ್ತಿ ಸಂಗನಶರಣರಲ್ಲಿ ಕ್ರಿಯೆ ನಿಃಕ್ರೀಯನಜಿಸುವರೆ?
ಅವರಿದ್ದಿರವೆ ಮುಕ್ತಿ, ಕೂಡಲ ಚೆನ್ನಸಂಗಮದೇವಾ. । ೬ । [೧೨೭೯]

೭
ವೇದಪ್ರಿಯನೆಂಬೆನೆ ನಮ್ಮ ದೇವ?
ವೇದಪ್ರಿಯನಲ್ಲ.
ನಾದಪ್ರಿಯನೆಂಬೆನೆ ನಮ್ಮ ದೇವ?
ನಾದಪ್ರಿಯನಲ್ಲ.
ಭೋಗಪ್ರಿಯನೆಂಬೆನೆ ನಮ್ಮ ದೇವ?
ಭೋಗಪ್ರಿಯನಲ್ಲ.
ತುತ್ತುಪ್ರಿಯನೆಂಬೆನೆ ನಮ್ಮ ದೇವ?
ತುತ್ತುಪ್ರಿಯನಲ್ಲ.
ಮನದ ಭಕ್ತಿ[೩]ಪ್ರಿಯ ಕಾಣಾ ಕೂಡಲ ಚೆನ್ನಸಂಗಮದೇವ. । ೭ ।

೧–೧ ಪರಿಮಳದ (ಮೂ), ಪರಿಪರಿಯ (ಕ), ೨–೨ ಸುರವಿಗೆ ತಾನು (ಕ), ೩+ ಯ (ಮೂ).

೮

ದೂರದಲ್ಲಿ ಅರ್ಪಿತ[೧]ವೆಂಬ ದುರಾಚಾರಿಯ
ಮಾತ ಕೇಳಲಾಗದು.
ಭಾವದಲ್ಲಿ ಅರ್ಪಿತವೆಂಬ ಭ್ರಮಿತರ
ಮಾತ ಕೇಳಲಾಗದು.
ಅಂತರದಲ್ಲಿ ಅರ್ಪಿತವೆಂಬ ಅನಾಚಾರಿಗಳ
ಮಾತ ಕೇಳಲಾಗದು.
ತನ್ನ ಕಾಯದ ಮೇಲಣ ಲಿಂಗಕ್ಕೆ ಭಾವಶುದ್ಧಿಯಲ್ಲಿ ಕೊಟ್ಟಲ್ಲದೆ
ಕೊಂಡವನಾದರೆ, ಸತ್ತ ಹಳೆಯ ನಾಯ ಅಱಸಿಕೊಂಡು,
ಅಟ್ಟದ ಮೇಲೆ ಇರಿಸಿಕೊಂಡು, ಗದ್ಯಾಣ ಗದ್ಯಾಣ
ತೂಕವ ಕೊಂಡಂತೆ ಕಾಣಾ
ಕೂಡಲ ಚೆನ್ನಸಂಗಮದೇವಾ. ।೮। [೪೧೬]

೯

ನೊಸಲಲ್ಲಿ ಒಂದು ಕಣ್ಣು ಉಳ್ಳವನಾದರೂ ಆಗಲಿ,
ಅಂಗದ ಮೇಲೆ ಲಿಂಗಸಾಹಿತ್ಯವಿಲ್ಲದವರ ಮನೆಯಲ್ಲಿ
ಮಾಡಿದ ಶಾಕಪಾಕಂಗಳು ನರಮಾಂಸ, ನಾಯಡಗು.
ಬಲ್ಲವರೊಲ್ಲರಾಗಿ, ಎಲೆ ಶಿವನೆ ನೀವಿಲ್ಲದವರ ಮನೆಯಲ್ಲಿ
ಮಾಡಿದ ಸ್ವಯಂಪಾಕ ಹಡಿಕೆಗಿಂದತ್ತತ್ತ ಕಾಣಾ
ಕೂಡಲ ಚೆನ್ನಸಂಗಮದೇವಾ. ।೯। [೩೭೫]

೧೦

ಶಿವನಿಗೈದು ಮುಖ, ಭಕ್ತನಿಗೈದು ಮುಖ,
ಆವುದಾವುದೆಂದರೆ:
ಗುರುವೊಂದು ಮುಖ,
ಲಿಂಗವೊಂದು ಮುಖ,
ಜಂಗಮವೊಂದು ಮುಖ,
ಪಾದೋದಕವೊಂದು ಮುಖ,
ಪ್ರಸಾದವೊಂದು ಮುಖ,

೧+ ವೆಂದು (ಮೂ).

ಇಂತೀ ಪಂಚಮುಖವನರಿಯದ
ವೇಶಿ ದಾಸಿ ಸುಂಕಿಗ ಮಣಿಹಗಾರ ವಿದ್ಯಾವ[1]ಂತ[1]
ಇಂತೀ ಐವರಿಗೆ ಲಿಂಗವ [2]ಕಟ್ಟಿದಡೆ[2]
ಗುಡಿಯ ಮುಂದಣ ಶೃಂಗಾರದ ಗಂಟೆ,
ಎಮ್ಮೆಯ ಕೊರಳ ಗಂಟೆ, ಕೊಟ್ಟಿಯ ಮೆಳೆಯೊಳಗೆ ಇಟ್ಟು ಸಿಕ್ಕಿದ ಕಲ್ಲು.
ಲಿಂಗ ವಿಭೂತಿ ರುದ್ರಾಕ್ಷಿ ಇವ ಮಾರಾಟಕ್ಕೆ
ಹೇರಿಕೊಂಡು ತಿರುಗುವ ಎತ್ತು ಕತ್ತೆಗೆ ಮುಕ್ತಿಯುಂಟೆ?
ಕೂಡಲ ಚೆನ್ನಸಂಗಮದೇವಾ. ।೧೦। [೨೦೮]

೧೧

ಬ್ರಾಹ್ಮಣ ಭಕ್ತನಾದರೇನಯ್ಯ?
ಸೂತಕ ಪಾತಂಕಗಳ ಬಿಡ.
ಕ್ಷತ್ರಿಯ ಭಕ್ತನಾದರೇನಯ್ಯ?
ಕ್ರೋಧವ ಬಿಡ.
ವೈಶ್ಯ ಭಕ್ತನಾದರೇನಯ್ಯ?
ಕಪಟವ ಬಿಡ.
ಶೂದ್ರ ಭಕ್ತನಾದರೇನಯ್ಯ?
ಸ್ವಜಾತಿಯೆಂಬುದ ಬಿಡ.
ಇಂತೀ ಜಾತಿಡಂಭಕರ ಮೆಚ್ಚುವನೆ
ಕೂಡಲ ಚೆನ್ನಸಂಗಮದೇವ? ।೧೧। [೨೧೯]

೧೨

ಭವಿ ಭಕ್ತನಾದರೇನಯ್ಯ?
ಪೂರ್ವಾಶ್ರಯವಳಿಯದನ್ನಕ್ಕ.
ವೇಶಿ ಭಕ್ತೆಯಾದರೇನಯ್ಯ
ಎಂಜಲ ತಿಂಬುದ ಬಿಡದನ್ನಕ್ಕ.
ಅರಸು ಭಕ್ತನಾದರೇನಯ್ಯ?
ಅಹಂಕಾರವಳಿಯದನ್ನಕ್ಕ.
ಇಂತೀ ಮೂವರಿಗೆ ಲಿಂಗವ ಕೊಟ್ಟಾತ ವ್ಯವಹಾರಿ,
ಕೊಂಡಾತ ಲಾಭಗಾರ.

೧-೧ ಸ್ತಾ (ಮೂ), ೨-೨ ಕಟೆಂದರೆ (ಮೂ).

ಇವರ ಭಕ್ತಿಯೆಂಬುದು,
ಒಕ್ಕಲಗಿತ್ತಿ[೧] ಹೊಸ್ತಿಲ ಪೂಜೆಯಂ ಮಾಡಿ
ಇಕ್ಕಾಲಿಕ್ಕಿ ದಾಟದಂತಾಯಿತ್ತು.
ಹಟ್ಟಿಯ ಹೊಱಗೆ ಬೆನವನ ಪೂಜೆ ಮಾಡಿ
ತಿಪ್ಪೆಯೊಳಗೆ ಬಿಟ್ಟಂತಾಯಿತ್ತು.
ಜಂಗಮದ ಪೂಜೆಯ ಮಾಡಿ ನೈಷ್ಠೆಯಿಲ್ಲದ ಭ್ರಷ್ಟರ ಮೆಚ್ಚುವನೆ
ಕೂಡಲ ಚೆನ್ನಸಂಗಮದೇವ? ।೧೨। [೨೨೦]

೧೩

ಅರ್ಥದ ಭಕ್ತಿ ಉತ್ತರಿಸಿ ಹೋಯಿತ್ತು.
ಅರಸು ಭಕ್ತಿ ನಿಲ್ಲು ಮಾಣು ಎಂದಲ್ಲಿ ಹೋಯಿತ್ತು,
ಆಚರಣೆಯ ಭಕ್ತಿ ಅಡಗಿ ಹೋಯಿತ್ತು,
ಶೀಲವಂತರ ಭಕ್ತಿ ಶಂಕೆಯಲ್ಲಿ ಹೋಯಿತ್ತು,
ಕೂಡಲ ಚೆನ್ನಸಂಗಮದೇವರಲ್ಲಿ ಕೀಟಕರು ಹೆಚ್ಚಿ
ಪುರಾತರು ಅಡಗಿ ಹೋದರು. ।೧೩। [೯೧]

೧೪

ತನು ಮನ ಬಳಲದೆ ಉದ್ದಂಡ ವೃತ್ತಿಯಿಂದ
ಧನವ ಗಳಿಸಿ ತಂದು ಗುರುಲಿಂಗ ಜಂಗಮಕ್ಕೆ [೨]ವೆಚ್ಚಿಸಿ[೨]
ದಾಸೋಹಿಯಾದೆನೆಂಬ ಭಕ್ತನ ಎನಗೆ ತೋರದಿರಯ್ಯಾ.
ಅದೇನು ಕಾರಣವೆಂದರೆ,
ಅವ ಪರಧನ ಚೋರ, ಅವ ಪಾಪಿ,
ಅವನ ವಿಚಾರಿಸದೆ ಉಪದೇಶವ [೩]ಕೊಟ್ಟ[೩] ಗುರುವಿಂಗೆ
ರೌರವ ನರಕ.
ಅವನ ಕಾಯಕವ ವಿಚಾರಿಸದೆ ಹೊಕ್ಕು ಲಿಂಗಾರ್ಚನೆಯ
ಮಾಡುವ ಜಂಗಮಕ್ಕೆ ಏಳನೆಯ ಪಾತಕ.
ಇಂತಿವರ ಬದುಕು ಹುಲಿ ಕಪಿಲೆಯ ತಿಂದು, ಮಿಕ್ಕುದ
ನರಿ ತಿಂದಂತಾಯಿತ್ತು ಕಾಣಾ ಕೂಡಲ ಚೆನ್ನಸಂಗಮದೇವಾ. ।೧೪। [೬೫]

೧+ ಯ (ಮೂ), ೨-೨ ಯೋಚಿಸಿ (ಮೂ), ೩-೩ (ಮೂ), ೪+ ಬಂದು (ಮೂ).

೧೫

ಅರಸನ ಭಕ್ತಿ ಅಹಂಕಾರದಿಂದ ಕೆಟ್ಟಿತ್ತು,
ಸೂಳೆಯ ಭಕ್ತಿ ಎಂಜಲು ತಿಂದಾಗಲೇ ಹೋಯಿತ್ತು.
ನಂಟುತನದ ಭಕ್ತಿ ನಾಯಕನರಕ, ಬಡವನ ಭಕ್ತಿ ನಿಧಾನ.
ಇದು ಕಾರಣ ಕೂಡಲ ಚೆನ್ನಸಂಗಮದೇವಾ
ನಿಮ್ಮ ಭಕ್ತಂಗೆ ಬಡತನವನೆ ಕೊಡು. ।೧೫। [೯೦]

೧೬

ಭಕ್ತಂಗಾದರೂ ಆಗಲಿ, ಜಂಗಮಕ್ಕಾದರೂ ಆಗಲಿ
ಅನುಭಾವವೇ ಬೀಜ ಕಾಣಿರೇ,
ಅನುಭಾವವೇ ಆಚಾರ ಕಾಣಿರೇ.
ಅನುಭಾವವೇನಱಿಯದ ಭಕ್ತಿ ಎಳತಟಗೊಳಿಸಿತ್ತು,
ಸಯದಾನದ ಕೇಡು, ಒಮ್ಮನದ ಧರ್ಮಕ್ಕೆ ಒಕ್ಕುಳದ ಕರ್ಮ.
ಅನುಭಾವವ ಮಾಡುವಲ್ಲಿ ಹೋಗಿ, ದೀರ್ಘದಂಡ ನಮಸ್ಕಾರವಂ ಮಾಡಿ,
ವಿನಯಾರ್ಥದಲ್ಲಿ ಅನುಭಾವವ ಕೇಳದಿರ್ದರೆ
ಅಘೋರ ನರಕದಲ್ಲಿಕ್ಕುವರು ಕೂಡಲ ಚೆನ್ನಸಂಗಮದೇವ. ।೧೬। [೮೧೬]

೧೭

ತದ್ದಿನವ ಮಾಡುವ ಕ್ರೂರಕರ್ಮಿಯ ಮನೆಯ[೧]ಲ್ಲಿ[೧]
ಮ[೨]ದ್ಯ[೨]ಮಾಂಸವಲ್ಲದೆ ಬೇರೆ ಓಗರವಿಲ್ಲ,
ವರುಷಕ್ಕೊಂದು [೩]ತಿಥಿ[೩]ಯೆಂದು ಮಾಡುವ [೪]ಭಕ್ತನ[೪] ಮನೆಯಲ್ಲಿ
ಊಟಕಿ[೫][ಕ್ಕೆ][೫] ಕೀರ್ತಿವಾರ್ತೆಗೆ ಸಲುವುದಲ್ಲದೆ ಲಿಂಗಕ್ಕೋಗರವಿಲ್ಲ.
ಹರಸಿಕೊಂಡು ಮಾಡುವ ಭಕ್ತನ ಮನೆಯಲ್ಲಿ
ದಂಡಕಿಕ್ಕು[೬]ವುದ[೬]ಲ್ಲದೆ ಲಿಂಗಕ್ಕೋಗರವಿಲ್ಲ.
ತದ್ದಿನಂ ದಿನದೋಷಂ ಸ್ಯಾತ್ ಶೋಣಿತಂ ಸುರಾಮಾಂಸಯೋ ।
ಸಂಕಲ್ಪಂ ಚ ವಿಕಲ್ಪಂ ಚ ನರಕೇ ಕಾಲಮಕ್ಷಯಂ ॥

೧–೧ x (ಮೂ), ೨–೨ ದ್ದು (ಮೂ), ೩–೩ ಸ್ತಿತಿ (ಮೂ), ೪–೪ ವಕನ (ಮೂ), ೫–೫ಕ್ಕಿ (ಮೂ), ೬–೬ ವನ (ಮೂ).

ಎಂದುದಾಗಿ
[೧]ಇಂತೀ[೧] ತ್ರಿವಿಧವಿಡಿದು[೨] ಮಾಡುವಾತ ಭಕ್ತನಲ್ಲ,
ಅಲ್ಲಿ ಹೊಕ್ಕು ಜಂಗಮಾರ್ಚನೆಯ ಮಾಡುವಾತ ಜಂಗಮವಲ್ಲ.
ಈ ತ್ರಿವಿಧಭಕ್ತಿಯೆಂಬುದು ನರಕಕ್ಕೆ ಭಾಜನವಾಗಿ ಹೋಯಿತ್ತು
ಕೂಡಲ ಚೆನ್ನಸಂಗಮದೇವಾ. ।೧೭। [೬೨]

೧೮
ಅನ್ನದಾನವಂ ಮಾಡಿದಡೆ ಏನಹುದು? ಧರ್ಮವಹುದು,
ಹೊನ್ನದಾನವ ಮಾಡಿದಡೇನಹುದು? ಶ್ರೀಯಹುದು,
ವಸ್ತ್ರದಾನವ ಮಾಡಿದಡೇನಹುದು? ಪುಣ್ಯವಹುದು,
ಹೆಣ್ಣುದಾನವ ಮಾಡಿದಡೇನಹುದು? ಫಲಪದವಹುದು.
ಇಂತೀ ಚತುರ್ವಿಧ ಕರಣಾದಿ[೩]ಗಳು ಶುದ್ಧವಾದರೆ
ಮುಕ್ತಿಯಾಗು[೪]ವುದು ಕಾಣಾ ಕೂಡಲ ಚೆನ್ನಸಂಗಮದೇವಾ.[೪] ।೧೮। [೬೮೯]

೧೯
ಹಾಡಿ ಮಾಡುವರೆಲ್ಲ ಹಾದರಗಿತ್ತಿಯ ಮಕ್ಕಳಯ್ಯಾ,
ಕೂಡಿ ಮಾಡುವರೆಲ್ಲ ಕುಂಟಣಗಿತ್ತಿಯ ಮಕ್ಕಳಯ್ಯಾ,
ಬೇಡಿ ಮಾಡುವರೆಲ್ಲ ಬೇಡಿತಿಯ ಮಕ್ಕಳಯ್ಯಾ,
ಡಂಬಕತನದಲ್ಲಿ ಮಾಡುವರೆಲ್ಲ ಡೊಂಬಗಿತ್ತಿಯ ಮಕ್ಕಳಯ್ಯಾ,
ಅಚ್ಚಪ್ರಸಾದಿಗಳು ಎಂಬವರೆಲ್ಲ ಮುಚ್ಚುಗಿತ್ತಿಯ ಮಕ್ಕಳಯ್ಯಾ,
ಸಮಯಾಚಾರದಲ್ಲಿಪ್ಪವರೆಲ್ಲ ಸಮ್ಮಗಾರಿಯ ಮಕ್ಕಳಯ್ಯಾ,
ಜಂಗಮ ಬಂದ ಬರ[೫]ವ[೫]ನಿಂದ ನಿಲುಕಡೆಯ ನೋಡಿ,
ಮಾಡಿ ನೀಡಿ ಸ್ವಯಾನುಭಾವದ ಸಮ್ಯಕ್‌ಜ್ಞಾನವನಜೆವವರು
ಕೂಡಲ ಚೆನ್ನಸಂಗನ ಶರಣರಯ್ಯಾ. ।೧೯। [೩೧೨]

೨೦
ಆರಂಬವ ಮಾಡಿ ಸಂಸಾರಸ್ಥಿತಿ ಕಳೆಯದಿದ್ದರೆ
ಆರಂಬವೇ ಕೇಡು,

೧–೧ x (ಮೂ), ೨+ ಇಲ್ಲಿಂದ ೧೮ನೆಯ ವಚನ 'ಮೂ' ಪ್ರತಿಯಲ್ಲಿ ಸೇರಿ ಹೋಗಿದೆ. (ಸಂ). ೩+ ಗುಣಾದಿ (ಮೂ), ೪–೪ ವ ಇಂತಹ ಭಕ್ತಿಯನಜೆಯದೆ ಅನ್ನದಾನವ (ಮೂ), ೫–೫ ವು (ಮೂ).

ವ್ಯವಹಾರವ ಮಾಡಿ ಸಂಸಾರಸ್ಥಿತಿ ಕಳೆಯದಿದ್ದರೆ
ಆ ವ್ಯವಹಾರವೇ ಕೇಡು,
ಓಲಗವ ಮಾಡಿ ಸಂಸಾರಸ್ಥಿತಿಯ ಕಳೆಯದಿದ್ದರೆ
ಆ ಓಲಗವೇ ಕೇಡು,
ಭಕ್ತಿಯ ಮಾಡಿ ಜನನಮರಣವಿರಹಿತನಾಗದಿದ್ದರೆ
ಆ ಭಕ್ತಿಯೇ ಕೇಡು,
ಕೂಡಲ ಚೆನ್ನಸಂಗಮದೇವಾ. । ೨೦ । [೧೧೪]

ಚೆನ್ನಬಸವಣ್ಣನವರ ಭಕ್ತಿಯ ಸ್ಥಲ ಸಮಾಪ್ತ ಮಂಗಳಮಹಾಶ್ರೀ.[೧]

❖❖

೧+ ಗುರುವೇಗತಿ (ಮೂ).

ಮಾಹೇಶ್ವರ ಸ್ಥಲ

೨೧

[೧]ಕೃತಯುಗ ಹದಿನೇಳು ಲಕ್ಷದ ಮೇಲೆ ಇಪ್ಪತ್ತೆಂಟು ಸಾವಿರ ವರುಷ
ಕೇತಾರೇಶ್ವರದೇವರು ಮೂಲಸ್ಥಾನ.
ತ್ರೇತಾಯುಗ ಹನ್ನೆರಡು ಲಕ್ಷದ ಮೇಲೆ ತೊಂಬತ್ತಾರು ಸಾವಿರ ವರುಷ
ಸೇತುರಾಮೇಶ್ವರದೇವರು ಮೂಲಸ್ಥಾನ.
ದ್ವಾಪರಯುಗ ಎಂಟು ಲಕ್ಷದ ಮೇಲೆ ಅಱುವತ್ತುನಾಲ್ಕು ಸಾವಿರ ವರುಷ
ಸೌರಾಷ್ಟ್ರ [೨]ಸೋಮೇ[೨]ಶ್ವರದೇವರು ಮೂಲಸ್ಥಾನ.
ಕಲಿಯುಗ ನಾಲ್ಕು ಲಕ್ಷದ ಮೇಲೆ ಮೂವತ್ತೆರಡು ಸಾವಿರ ವರುಷ
ಶ್ರೀಶೈಲ[೩] ಚೆನ್ನಮಲ್ಲಿಕಾರ್ಜುದೇವರು ಮೂಲಸ್ಥಾನ.
ಕೂಡಲ ಚೆನ್ನಸಂಗಮದೇವಾ, ನೀ ಸಾಕ್ಷಿಯಾಗಿ ನಾಲ್ಕು ಯುಗದಲ್ಲಿ
ಭಕ್ತರಿಗೆ ಜಂಗಮವೆ ಮೂಲಸ್ಥಾನ. । ೧ । [೫೦೯]

೨೨

ಎಂಟು ಲಕ್ಷದ ಮೇಲೆ ಐನೂಱು ದೇವರಿಗೆ ಮಾಡಿದ ಬೋನವ
ಒಬ್ಬ ಜಂಗಮ ಆರೋಗಣೆಯ ಮಾಡುವನಲ್ಲದೆ,
ಒಬ್ಬ ಜಂಗಮಕ್ಕೆ ಮಾಡಿದ ಬೋನವ
ಹದಿನಾಱು ಲಕ್ಷದ ಮೇಲೆ ಐನೂಱು ದೇವರುಗಳು ಕೂಡಿಕೊಂಡು
ಆರೋಗಣೆಯ ಮಾಡಲಱಿಯರು,
ಅದು ಕಾರಣ ಜಂಗಮವೇ ಘನ.

೧+ ಶ್ರೀಗುರು ಗುಹೇಶ್ವರಾಯನಮಃ। ಮಹೇಶ್ವರ ಸ್ಥಲದ ವಚನ (ಮೂ). ೨–೨ ಗೊಹೇ (ಮೂ), ೩+ ದಲ್ಲಿ (ಮೂ).

ಕೃತಯುಗದಲ್ಲಿ ಸುವರ್ಣಲಿಂಗವಾದರೆ
ನಿಮ್ಮ ಹೆಸರೇನೆಂಬೆನಯ್ಯ?
ತ್ರೇತಾಯುಗದಲ್ಲಿ ಬೆಳ್ಳಿಯ ಲಿಂಗವಾದರೆ
ನಿಮ್ಮ ತಾಯಿ ತಂದೆಗಳಾರು?
ದ್ವಾಪರಯುಗದಲ್ಲಿ ತಾಮ್ರದ ಲಿಂಗವಾದರೆ
ಹದಿನೆಂಟು ಜಾತಿಯ ಕೈಯಲ್ಲಿ ಕಿಲುಬುಹೋಯಿತೇ?
ಕಲಿಯುಗದಲ್ಲಿ ಕಲ್ಲು ಲಿಂಗವಾದರೆ
ಇಕ್ಕಿದೋಗರವ ಉಣ್ಣದೇಕೊ?
ಹಿಂದೆ ನಾಲ್ಕು ಯುಗದಲ್ಲಿ ಕೆಟ್ಟು ಹೋದುದನಜಿಯಾ?
ಇನ್ನೇಕೆ ದೇವತ್ವಕ್ಕೆ ಬೆ[೧]ರೆ[೧]ವೆ?
[೨]ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ ।
ಜಂಗಮಸ್ಯಾವಮಾನೇನ ಸ್ಥಾವರಂ ನಿಷ್ಫಲಂ ಭವೇತ್ ।
ಎಂದುದಾಗಿ,
ನಾಲ್ಕು ಯುಗದಲ್ಲಿಯೂ ಜಂಗಮವೇ ಪ್ರಾಣಲಿಂಗವಾದ ಕಾರಣ
ಸ್ಥಾವರವೆಲ್ಲ ಜಂಗಮಪ್ರಸಾದಕ್ಕೆ ಯೋಗ್ಯವಾದವು
ಕೂಡಲ ಚೆನ್ನಸಂಗಮದೇವಾ. । ೨ । [೫೧೦]

೨೩

ವಜ್ರವ ಒರಲೆ ಮುಟ್ಟಬಲ್ಲುದೇ ಅಯ್ಯಾ?
ಮದ್ದಿನ ಚೀಲವ ಹಾವು ಮುಟ್ಟಬಲ್ಲುದೇ ಅಯ್ಯಾ?
ಕಿಚ್ಚಿದ್ದ ಒಲೆಯಲ್ಲಿ ಶ್ವಾನ ಮಲಗಬಲ್ಲದೇ? ಅಯ್ಯಾ?
ಸಮುದ್ರಕೆ ಹೋಗಿ ಸಪ್ಪೆಯ ಸಲಿಸುವರೆ?
ಗುರುಲಿಂಗಜಂಗಮವ ಪೂಜಿಸಿ ಬಜಿ ಸಾವ ಸಾವರೆ,
ಊರ ಮುಂದಣ ಹೆಮ್ಮಾರಿಯೇ ಲೇಸೆಂದ
ಕೂಡಲ ಚೆನ್ನಸಂಗಮದೇವ. । ೩ । [೮೩೩]

೨೪

ಅರಸಿನ ಹೆಸರಿಟ್ಟ ಅನಾಮಿಕನಂತೆ ನಾಮು[೩]ಕ್ಕರುಹ[೩]ರಲ್ಲದೆ
ಪಟ್ಟಕ್ಕೊಡೆಯರಪ್ಪರೆ?
ಗುರುಲಿಂಗಜಂಗಮದ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ

೧–೧ ರ (ಮೂ), ೨+ ನೀತಿ (ಮೂ), ೩–೩ ಕ್ಕೊಡೆಯ(ಮೂ).

ಸ್ಥಲ ನಿಃಸ್ಥಲ ತೀರ್ಥ ಜಾತ್ರೆ ಗುರುಹಿರಿಯರ ಹೆಸರ ಹೇಳಿಕೊಂಡು
ಬದುಕುವರೆಲ್ಲ ವೇಷವ ಧರಿಸಿಪ್ಪ ಆಶ್ರಿತರು,
ಸಜ್ಜನ ಸಂಬಂಧ ಗುಣಗಣಂಗಳಿಗೆ ತಾವೆಲ್ಲ ಯೋಗ್ಯ[೧]ರೆ[೧]?
ಕೂಡಲ ಚೆನ್ನಸಂಗಮದೇವರಲ್ಲಿ ಸತ್ಯಸದಾಚಾರವನಜಿ[೨]ಯ[೨]ದ
ಅಜ್ಞಾನಿಗಳೆಲ್ಲ ಹಾಗಿರಲಯ್ಯಾ. ।೪। [೬೪]

೨೫
ಓದಿದರೇನು? ಕೇಳಿದರೇನು? ಆಸೆ ಅಳಿಯದು, ರೋಷ ಬಿಡದು.
ಮಜ್ಜನಕ್ಕೆ ನೀಡಿ ಫಲವೇನು?
ಲಾಂಛನವ ಹೊತ್ತು ಕಾಂಚಾಣಕ್ಕೆ ಕೈಯ ನೀಡುವ
ಜಗಭಂಡರ ಮೆಚ್ಚುವನೆ ಕೂಡಲ ಚೆನ್ನಸಂಗಮದೇವ? ।೫। [೪೧೩]

೨೬
ಸರ್ವಸಂಗನಿವೃತ್ತಿಯ ಮಾಡಿದ ಬಳಿಕ,
ಆದಿ ಮಧ್ಯ ಅವಸಾನವನಜಿಯಬೇಕು.
ಅಜಿಯದೆ ಭಕ್ತಿಜ್ಞಾನವೈರಾಗ್ಯವೆಂಬ ಬರಿ ವೇಷಕಿಂದ,
ಬಡ ಸಂಸಾರವೇ ಲೇಸು, ಕೂಡಲ ಚೆನ್ನಸಂಗಮದೇವಾ. ।೬। [೪೦೬]

೨೭
ಅಂಗದಿಚ್ಛೆಗೆ ಮದ್ದು ಮಾಂಸ ಬಳ್ಳ ಬಂಗಿಯ ತಿಂಬರು,
ಕಂಗಳಿಚ್ಛೆಗೆ ಪರರ ವಧುವ ನೆರೆವರು,
ಲಿಂಗಲಾಂಛನವಿದ್ದಲ್ಲಿ ಫಲವೇನು? ಲಿಂಗವನಜಿಯದೆ.
ಜಂಗಮಮುಖದಲ್ಲಿ ಕುಂದೆಯವು ಬಂದರೆ
ಪೂರ್ವದ ಕೊಂಡ ಮಾರಿಗೆ ಹೋಗುವ[೩]ರೆಂ[೩]ದ
ಕೂಡಲ ಚೆನ್ನಸಂಗಮದೇವ. ।೭।

೨೮
ಸುರೆಯ ತೊರೆ, ಮಾಂಸದ ಒ[೪]ಟ್ಟೆ[೪]ಲು, ಭಂಗಿಯ ಬಣಬೆ,
ಜಾಯಿಕಾಯ ಜಾಯಿಪತ್ರೆಯ ತಿಂಬ ಹಿರಿಯರ, ಹರಿಕಾರರ
ಜಂಗಮವೆಂದರೆ ನಾಯಕನರಕ ತಪ್ಪದು,
ಕೂಡಲ ಚೆನ್ನಸಂಗಮದೇವಾ. ।೮। [೪೮೫]

೧-೧ ವೆ (ಮೂ), ೨-೨ x(ಮೂ), ೩-೩ ದೆಂ (ಮೂ) ೪-೪ ಟ್ಟ (ಮೂ).

೨೯
ಕಾವಿ ಕಾ[೧]ಷಾಯಾಂ[೧]ಬರ ಜಡೆಮಾಲೆಯ ಧರಿಸಿದರೇನು,
ಜಂಗಮವಾಗಬಲ್ಲನೆ?
ಸಾಕಾರದಲ್ಲಿ ಸನ್ಮತರಲ್ಲ, ನಿರಾಕಾರದಲ್ಲಿ ನಿರುತರಲ್ಲ.
ತುರುಬು ಜಡೆ ಬೋಳೆನ್ನದೆ ಅಜಿವುಳ್ಳಾತನೇ ಜಂಗಮ.
ಅಜಿವಿಲ್ಲದೆಲ್ಲ ವೇಷ ಕಾಣಾ, ಕೂಡಲ ಚೆನ್ನಸಂಗಮದೇವಾ. ।೯। [೯೬೪]

೩೦
ಸಕಲಪ್ರಾಣಿಗಳಿಗೆ ಲೇಸಾಗಲೆಂದು ಮಜ್ಜನಕ್ಕೆ [೨]ನೀಡೇ[೨]ನೆಂಬ
ವೇಷಧಾರಿಯ ವೇಷಕ್ಕೆ ಶರಣೆಂಬೆ.
ಶರ[೩]ಣಿ[೩]ಗೋಸುಗರ ತಂದು
ಲಾಂಛನದ ಹೆಚ್ಚು [೪]ತಗ್ಗು[೪] ನೋಡಿ ಮಾಡಿ ನೀಡುವೆ,
ಜಂಗಮವೆನ್ನ ಮನೆಗೆ ಬಂದರೆಸರ್ವಸುಖವ ಕೊಡುವೆ,
ಆತನಿದ್ದೆಡೆಗೆ ನಾನು ಹೋಗೆನೆಂಬವನ ಭಕ್ತಿ ಅಂದೇ ಹಾಳು.
ಅವನಿಗೆ ನಾನಿಲ್ಲವಯ್ಯಾ, ಕೂಡಲ ಚೆನ್ನಸಂಗಮದೇವಾ. ।೧೦। [೭೦೦]

೩೧
ನಿಜಭಕ್ತಂಗಾದರೂ ಆಗಲಿ, ಜಂಗಮಕ್ಕಾದರೂ ಆಗಲಿ
ಸದಾಚಾರವೇ ಬೇಕು.
ಸದಾಚಾರವುಳ್ಳವರಿಗೆ ಅನಾಯತ ಹೊದ್ದಲಾಗದು.
ಅನಾಯತವೆಂದೇನೊ, ಅನುಸರಣೆ.
ಅನುಸರಣೆಯೆಂದೇನೊ, ಅಂಗದಿಚ್ಛೆ.
ಅಂಗದಿಚ್ಛೆಯೆಂದೇನೊ, ಅನಾಚಾರ.
ಅನಾಚಾರವೆಂದೇನೊ, ಪಾತಕ.
ಪಾತಕವೆಂದೇನೊ, ನರಕ.
ಇದು ಕಾರಣ, ಅನಾಚಾರಿಗಳು ಮನೆಮನೆಯ ಹೊಕ್ಕು ಆಚರಿಸಿ ನಡೆವರಲ್ಲದೆ
ಸದಾಚಾರಿಗಳು ಆಚರಿಸಿ ನಡೆದರೆ ನಾಯಕ ನರಕ ತಪ್ಪದು,
ಕೂಡಲ ಚೆನ್ನಸಂಗಮದೇವಾ. ।೧೧। [೩೭೪]

೧-೧ ಶಾಂ (ಮೂ), ೨-೨ ನೀಡಿ (ಮೂ), ೩-೩ ಣಿ (ಮೂ), ೪-೪ ತಂಗ (ಮೂ).

೩೨

ಭಕ್ತನ ಹಾಡಿ ಬೇಡುವಾತ ಜಂಗಮವಲ್ಲ,
ಭಕ್ತನ ಹೊಗಳಿ ಬೇಡುವಾತ ಜಂಗಮವಲ್ಲ.
ಭಕ್ತನ ಓದಿ ಬೇಡುವಾತ ಜಂಗಮವಲ್ಲ,
ಭಕ್ತನ ಕೊಂಡಾಡಿ ಬೇಡುವಾತ ಜಂಗಮವಲ್ಲ,
ಭಕ್ತನ ಸ್ತುತಿಸಿ ಬೇಡುವಾತ ಜಂಗಮವಲ್ಲ,
ಭಕ್ತನ ಕೈವಾರಿಸಿ ಬೇಡುವಾತ ಜಂಗಮವಲ್ಲ,
ಕೂಡಲ ಚೆನ್ನಸಂಗಮದೇವರಲ್ಲಿ
ಬೇಡದೆ ಮಾಡುವನೆ ಭಕ್ತ,
ಬೇಡದೆ ಮಾಡಿಸಿಕೊಂಬಾತನೆ ಜಂಗಮ. । ೧೨ । [೪೩೭]

೩೩

ಲೋಕದ ಡೊಂಕ ನೀವು ತಿದ್ದುವಿರಯ್ಯಾ,
ನಿಮ್ಮ ತಮ್ಮಸದ ಡೊಂಕ ತಿದ್ದಿ ತಿಳುವಿಕೊಳಲಜಿಯದೆ,
ಪುರಾತರು ನುಡಿದಂತೆ ನಡೆಯದವರೆಲ್ಲ
ಕಡು ಓದಿದ ಗಿಳಿ ತನ್ನ ಮಲವ ತಾ ತಿಂದಂತೆ.
ನೆರೆಮನೆಯವರ ದುಃಖವ ಕೇಳಿ
ಗಡ್ಡ ಮಂಡೆಯ ಬೋಳಿಸಿಕೊಂಡು
[1][ಕಡೆಯಲ್ಲಿ][1] ಹೋಗಿ ಅಳುತಿಪ್ಪವರ ಕಂಡರೆ
ಕೂಡಲ ಚೆನ್ನಸಂಗನ ಶರಣರು ನಗುತಿಪ್ಪರಯ್ಯಾ. । ೧೩ । [೨೨೪]

೩೪

ಕಾದನಂತೆ, ಕಣನೇಜಲೇಕೋ?
ನಪುಂಸಕನಂತೆ, ಗಣಿಕಾಸ್ತ್ರೀಯೇಕೋ?
ನಡೆಯ ಹೆಣನಂತೆ, ನುಡಿಯಲೇಕೋ?
ಪುರಾತರು ನುಡಿದಂತೆ ನಡಿಯಲಜಿಯದವರೆಲ್ಲ
ಹಾಳೂರೊಳಗೆ ನರಿ ಗುಳ್ಳೆಯ ತಿಂದು ಬಗುಳಿದಂತೆ[2]
ಕಾಣಾ ಕೂಡಲ ಚೆನ್ನಸಂಗಮದೇವಾ. । ೧೪ । [೩೮೯]

೧-೧ ಕವುಡಿಯ (ಮೂ), ಕಡಿಯಲ್ಲಿ (ಕ) ೨+ ಬಗುಳುತಿಪ್ಪರು (ಮೂ).

೩೫

ಅರ್ಥಪ್ರಾಣಾಭಿಮಾನವ ಕೊಟ್ಟು, ಕರ್ತೃ-ಭೃತ್ಯನ ಮಾತಿಗೆ
ಮನೆಯ ಬಾಗಿಲಿಗೆ ಹೋಗಿ, 'ನನಗೆ ಮಾಡಿ ನೀಡು' ಎಂದು
ಉಪಾಧಿಕೆಯ ನುಡಿದರೆ ಅವನ ಕರ್ತುತನ ಅದೆ ಹಾಳು,
ಅದೇನು ಕಾರಣ ಎಂದರೆ,
ಕರ್ತನಿದ್ದೆಡೆಗೆ ಭೃತ್ಯ ತಾನೆ ಬಂದು, ದೀರ್ಘದಂಡ ನಮಸ್ಕಾರವಂ ಮಾಡಿ,
ಅಷ್ಟವಿಧಾರ್ಚನೆ ಷೋಡಶ ಉಪಚಾರವ ಮಾಡಬಲ್ಲಾತನೆ ಭೃತ್ಯ,
ಪರಿಣಾಮಿಸಬಲ್ಲಾತನೆ ಕರ್ತ.
ಕೂಡಲ ಚೆನ್ನಸಂಗಮದೇವರಲ್ಲಿ ಮೀರಿದ ಸಯಸ್ಥಲವಪೂರ್ವ. । ೧೫ ।

೩೬

ಅರ್ಥಪ್ರಾಣಾಭಿಮಾನ ಭಕ್ತಂಗೆ ಹೊಲ್ಲ ಎಂಬರು,
ತಮ್ಮ ಹೊಂದಿರ್ದ ಮಲಿನವ ತಾವು ತೊಳೆಯಲಱಿಯರು.
ಕರುಳು ಕೊಳ್ಳದ ಉದಾನವ ಮರ[1]ಳಿ[1]ಕೊಂಡೆನೆಂದು ಅರ್ಪಿಸಲುಂಟೆ?
ಇದು ಕಾರಣ ಬೇಡುವಾತ ಜಂಗಮವಲ್ಲ, ಬೇಡಿಸಿಕೊಂಬಾತ ಭಕ್ತನಲ್ಲ.
ಬೇಡದೆ ಜಂಗಮದ ಇಂಗಿತ ಭಾವವನಱಿದು ಮಾಡಬಲ್ಲರೆ ಭಕ್ತ,
ಬೇಡದೆ ಭಕ್ತ ಮಾಡಿದ ಮಾಟವ ಪರಿಣಾಮಿಸಬಲ್ಲರೆ ಜಂಗಮ.
ಇವು ಎರಡು ಮಾಡಲಾರ[2]ದೆ[2] ಮಿಕವು ಸೊನಕೆಗೆ ಮಾಂಸವನಿತ್ತಂತೆ.
ಬೇಡದೆ ಮಾಡುವ ಭಕ್ತರು ಲಕ್ಷಕ್ಕೊಬ್ಬರುಂಟು,
ಬೇಡದಿಪ್ಪ ಜಂಗಮ ಕಲಿಯುಗದಲ್ಲಿ ಅಪೂರ್ವವಯ್ಯಾ,
ಕೂಡಲ ಚೆನ್ನಸಂಗಮದೇವಾ. । ೧೬ । [೬೯೨]

೩೭

ಶೀಲವಂತರು ಲಕ್ಷಲಕ್ಷ, ನೇಮಸ್ಥರು ಲಕ್ಷಲಕ್ಷ, ವ್ರತಸ್ಥರು ಲಕ್ಷಲಕ್ಷ,
ಅರ್ಥಪ್ರಾಣಾಭಿಮಾನವನೊಪ್ಪಿಸಿ ಬಂದ ವೈರಾಗಿಗಳು ಲಕ್ಷಲಕ್ಷ.
ಅವರೆಲ್ಲ ಕೂಡಲ ಚೆನ್ನಸಂಗಮದೇವರಲ್ಲಿ
ಛಲ ಸದರ್ಥಕರಲ್ಲದೆ ಲಿಂಗ ಸದರ್ಥಕರು ಒಬ್ಬರೂ ಇಲ್ಲ. । ೧೭ । [೮೨೨]

೩೮

ಮಾತ ಕಲಿತು ಮಂಡೆಯ ಬೋಳಿಸಿಕೊಂಡರೆ,
ವೇಷಲಾಂಛನದ ಉದರ ಪೋಷಕರಲ್ಲದೆ
ಶಿವಾಗಮದ ಸುವಿಚಾರದ ಹೊಲಬ ತಾವೆತ್ತ ಬಲ್ಲರೊ?

೧–೧ ಣಿ (ಮೂ). ೨–೨ ದ (ಮೂ).

ಅಷ್ಟವಿಧಾರ್ಚನೆ ಷೋಡಶೋಪಚಾರಕ್ಕೆ ಸಲ್ಲದಾಗಿ
ಸೀಮೆಯ ಕಲ್ಲು.
ಲೋಗರ ಬೋಧಿಸಿ ಒಡಲ ಹೊರೆವ ವೇಷಡಂಭಕರ
ಮೆಚ್ಚುವನೆ ಕೂಡಲ ಚೆನ್ನಸಂಗಮದೇವ? । ೧೮ । [೬೯೩]

೩೯
ಹೊಱವೇಷದಲ್ಲಿ ವಿಭೂತಿ ರುದ್ರಾಕ್ಷಿಯ ಅಳವಡಿಸಿಕೊಂಡು
ವೇದಶಾಸ್ತ್ರ ಪುರಾಣ ಆಗಮ ಪುರಾತರ ಬಹುವಚನ ಪಾಠ[ಕ]ರು [೧][ಎ]ಲ್ಲ[೧]
ಅನ್ನದಾನ ಹೊನ್ನದಾನ ಹೆಣ್ಣದಾನ ವಸ್ತ್ರದಾನವನೀವನ
ಮನೆಯ ಬಾಗಿಲ ಮುಂದೆ ಮಣ್ಣ ಪುತ್ಥಳಿಯಂತೆ ಇಹ[೨][ರು][೨]
ನಿತ್ಯ ನೇಮದ ಹಿರಿಯರೆಲ್ಲ.
ವಯೋವೃದ್ಧಸ್ತಪೋವೃದ್ಧೋ ವೇದವೃದ್ಧೋ ಬಹುಶ್ರುತಃ ।
ಇರ್ವೇತೇ ಧನವೃದ್ಧಸ್ಯ ದ್ವಾರೇ ತಿಷ್ಟಂತಿ ಕಿಂಕರಾಃ ॥
ಎಂಬ ಶ್ರುತಿ ದಿಟವಾಯಿತಲ್ಲ.
ಇಂತಪ್ಪ ಅಱಿವುಳ್ಳವರೆಲ್ಲ ಲಕ್ಷ್ಮಿಯ ದ್ವಾರಪಾಲಕರಾದರು.
ನಿಮ್ಮ ಅಱಿವಿಂಗೆ ಇದು [೩]ವಿಧಿಯೆ?[೩] ಕೂಡಲ ಚೆನ್ನಸಂಗಮದೇವಾ,
ಈ ಸರ್ವರಿಗೂ ನೀನಿಕ್ಕಿದ ಮರವೆ ! । ೧೯ । [೬೯೯]

೪೦
ಊರ ಮುಂದೆ ಶ್ವಾನನ ಕಾಣಬಹುದಲ್ಲದೆ
ಸಿಂಹವ ಕಾಣಬಾರದು.
ನದಿಯ ಮುಂದೆ ಬಕನ ಕಾಣಬಹುದಲ್ಲದೆ
ಹಂಸೆಯ ಕಾಣಬಾರದು.
ಪಸರದೊಳಗೆ ಗಾಜಿನ ಮಣಿಯ ಕಾಣಬಹುದಲ್ಲದೆ
ರತ್ನವ ಕಾಣಬಾರದು.
ಧರೆಯ ಮೇಲೆ ವೇಷಧಾರಿಗಳ ಕಾಣಬಹುದಲ್ಲದೆ
ಜ್ಞಾನಿಗಳ ಕಾಣಬಾರದು
ಕೂಡಲ ಚೆನ್ನಸಂಗಮದೇವಾ. । ೨೦ । [೪೦೮]

ಅಂತು ಮಾಹೇಶ್ವರಸ್ಥಲದ ವಚನ ಸಮಾಪ್ತಿ ಮಂಗಳಮಹಾಶ್ರೀ.

❖❖

೧–೧ ಇಲ್ಲ (ಮೂ), ೨–೨ x (ಮೂ), ೩–೩ ವಿಧವೆ (ಮೂ).

ಪ್ರಸಾದಿಸ್ಥಲ

೪೧

[1]ನಿತ್ಯವಿಲ್ಲದ ಭಕ್ತಿಯ ಹತ್ತುಸಾವಿರ ವರುಷ ಮಾಡಿದರೇನು?
ನಿಷ್ಠೆಯಿಲ್ಲದ ಪೂಜೆಯ ಎಷ್ಟು ಕಾಲ ಪೂಜಿಸಿದರೇನು?
ಭಾವ ನೆಲೆಗೊಳದೆ, ನಿಜವಿಲ್ಲದ ಪ್ರಸಾದವ ಎಷ್ಟು ಕಾಲ ಕೊಂಡರೇನು?
ಅಭ್ಯಾಸವಾಯಿತಲ್ಲದೆ ಸಹಜವಿಲ್ಲ, ಸನ್ಮತವಿಲ್ಲ, ನಿಜವಿಲ್ಲ.
ಒಬ್ಬರ ಕಂಡೊಬ್ಬರು ಮಾಡುವರು.
ತಮ್ಮ ತಾವು ಜ್ಞಾನಿಗಳಲ್ಲಿ ವಿಚಾರಿಸಿಕೊಲಜಿಯದೆ.
ಇಂತಪ್ಪವರ ಭಕ್ತರೆನ್ನಲಾಗದು, ಮಾಹೇಶ್ವರರೆನ್ನಲಾಗದು,
ಕೂಡಲ ಚೆನ್ನಸಂಗಮದೇವಾ ನೀ ಸಾಕ್ಷಿಯಾಗಿ
ಛೀ ಎಂದು ಕಳೆವೆನು. । ೧ । [೩೪೯]

೪೨

ಪ್ರಸಾದಿಗಳು ಹಸಾದಿಗಳು ಎಂದು ಹೆಸರಿಟ್ಟುಕೊಂಡು ನುಡಿದರು,
ಪ್ರಸಾದ ಎಲ್ಲರಿಗೂ ಎಲ್ಲಿಯದೋ?
ತನುಮುಟ್ಟಿ ಕೊಂಬುದು ಪ್ರಸಾದವಲ್ಲ,
ಮನಮುಟ್ಟಿ ಕೊಂಬುದು ಪ್ರಸಾದವಲ್ಲ,
ಧನಮುಟ್ಟಿ ಕೊಂಬುದು ಪ್ರಸಾದವಲ್ಲ.

೧+ ಶ್ರೀಸಾಂಬ ಶಿವಯೇ ನಮಃ॥ ಪ್ರಸಾದಿಸ್ಥಲದ ವಚನ ॥ (ಮೂ).

ಕೈಕೊಂಬಾತ ಗುರುದ್ರೋಹಿ,
ಕೈಯೆತ್ತಿ ಇಕ್ಕುವಾತ ಶಿವದ್ರೋಹಿ.
ಕೂಡಲ ಚೆನ್ನಸಂಗನ ಶರಣರ ಪ್ರಸಾದ[೧] ಘನಕ್ಕೆ ಘನವಾದ ಘನ,[೨]
ಏನೆಂದು ಉಪಮಿಸುವೆನಯ್ಯಾ? ।೨। [೫೬೦]

೪೩

ಅಱಿವು ಮುಂತಾಗಿ ಕೊಂಬುದು ಪ್ರಸಾದವಲ್ಲ,
ಲಿಂಗ ಮುಂತಾಗಿ ಕೊಂಬುದು ಪ್ರಸಾದವಲ್ಲ,
ಜಂಗಮ ಮುಂತಾಗಿ ಕೊಂಬುದು ಪ್ರಸಾದವಲ್ಲ,
ಸಯಜ್ಞಾನವಳಿದರೂ ಪ್ರಸಾದವಲ್ಲ,
ಇವು ಏನೂ ಪ್ರಸಾದವಲ್ಲ, ಸಹಜ ಪ್ರಸಾದವೇ ಬೇಕು.
ಅಂತಪ್ಪ ಪ್ರಸಾದಿಯ ತೋಱಿಸಿ ಬದುಕಿಸಯ್ಯಾ
ಕೂಡಲ ಚೆನ್ನಸಂಗಮದೇವಾ. ।೩। [೬೨೩]

೪೪

ಗುರು ಮುಟ್ಟಿದ್ದು ಪ್ರಸಾದವೆಂಬೆನೆ? ಪ್ರಸಾದವಲ್ಲ,
ಗುರು ಉತ್ಪತ್ತಿಸ್ಥಿತಿಲಯಕ್ಕೆ ಒಳಗಾದ ಕಾರಣ,
ಗುರು ಮುಟ್ಟಿದ್ದು ಪ್ರಸಾದವಲ್ಲ,
ಲಿಂಗ ಮುಟ್ಟಿದ್ದು ಪ್ರಸಾದವೆಂಬೆನೆ?
ಲಿಂಗ ಅಷ್ಟವಿಧಾರ್ಚನೆ ಷೋಡಶೋಪಚಾರಕ್ಕೆ ಒಳಗಾದ ಕಾರಣ
ಲಿಂಗ ಮುಟ್ಟಿದ್ದು ಪ್ರಸಾದವಲ್ಲ.
ಜಂಗಮ ಮುಟ್ಟಿದ್ದು ಪ್ರಸಾದವೆಂಬೆನೆ?
ಜಂಗಮ ಆಸೆ ವೇಷ ಉದರಪೋಷಣಕ್ಕೆ ಒಳಗಾದ ಕಾರಣ
ಜಂಗಮ ಮುಟ್ಟಿದ್ದು ಪ್ರಸಾದವಲ್ಲ.
ಇಂತೀ ತ್ರಿವಿಧಕ್ಕೆ ಒಳಗಾಗದೆ ಪ್ರಸಾದವ ಕೊಂಬವರ ತೋಱಿಸಯ್ಯಾ
ಕೂಡಲ ಚೆನ್ನಸಂಗಮದೇವಾ. ।೪। [೬೪೮]

೪೫

ಗುರು ಮು[೩]ಟ್ಟ[೩]ದ ಮುನ್ನ ಪ್ರಸಾದವಾಗಬೇಕು,
ಲಿಂಗ ಮುಟ್ಟದ ಮುನ್ನ ಪ್ರಸಾದವಾಗಬೇಕು,
ಜಂಗಮ ಮುಟ್ಟದ ಮುನ್ನ ಪ್ರಸಾದವಾಗಬೇಕು.[೪]

೧+ ದ (ಮೂ), ೨+ ವ (ಮೂ), ೩–೩ ಟ್ಟಿ (ಮೂ), ೪–೪ x (ಮೂ).

ಇಂತೀ ತ್ರಿವಿಧಸಾಹಿತ್ಯ ಮುಟ್ಟದ ಮುನ್ನ ಪ್ರಸಾದವ ಕೊಂಬವರ
ತೋಱಿಸಯ್ಯಾ ಕೂಡಲ ಚೆನ್ನಸಂಗಮದೇವಾ,
ನಿಮ್ಮ ಧರ್ಮ, ನಿಮ್ಮ ಧರ್ಮ. ।೫।

೪೬

ಗುರುವಾದುದು ತಪ್ಪು, ಲಿಂಗವಾದುದು ತಪ್ಪು,
ಜಂಗಮವಾದುದು ತಪ್ಪು.
ಈ ತ್ರಿವಿಧಭೇದದ ಸಂಬಂಧದ ಸಕೀಲ[೧]ವ,[೧]
ಸಂಚದ ನಿಕ್ಷೇಪವ ಅಱಿತರೆ,
ಈ ಲೋಕವೇನು? ಆ ಲೋಕವೇನು?
ಈರೇಳು ಭುವನ ಹದಿನಾಲ್ಕು ಲೋಕದ ನಿಸ್ಸಾರಾಯವ ಬಿಟ್ಟು,
ತನ್ನೊಳಗೆ ಇದ್ದ ಲಿಂಗಸಾರಾಯದ ಯೋಗಿಯಾದರೆ
ಸರ್ವಾಂಗವೆಲ್ಲವೂ ಲಿಂಗ,
ಇರ್ದುದೆ ಕೈಲಾಸ, ಕೂಡಲ ಚೆನ್ನಸಂಗಮದೇವಾ. ।೬।

೪೭

ಅಚ್ಚಪ್ರಸಾದಿಗಳು ನಿಚ್ಚಪ್ರಸಾದಿಗಳು ಎಂದು
ಭಕ್ತರ ಇಚ್ಛೆಗೆ ಬಗಳುವ ಕುನ್ನಿಗಳನೇನೆಂಬೆನಯ್ಯಾ?
ಬಱಿನ ನಾಡಿಂದ ಬಂದ ಬಣಗುಗಳಂತೆ
ಇಕ್ಕಿಸಿಕೊಂಡು, ಸಹಭೋಜನವೆಂದು,
ಲಿಂಗವೂ ತಾವೂ ಸಂಗಡ ತಿಂದು, ಮಿಕ್ಕಿದನೆಲ್ಲ ಪ್ರಸಾದವೆಂದು
ಮನೆಯಲಿದ್ದವರಿಗೆ ಬಿಟ್ಟು ಹೋಗುವ ಕುನ್ನಿಗಳ ಮೆಚ್ಚುವನೆ
ಕೂಡಲ ಚೆನ್ನಸಂಗಮದೇವ. ।೭। [೭೨೭]

೪೮

ಜಗದ ಕರ್ತನ ಕೈಯಲ್ಲಿ ಹಿಡಿಕೊಂಡು
ಬೇಡುವ ತುಡುಗುಣಿಗಳ ಏನೆಂಬೆನಯ್ಯಾ?
ಬೇಡಲಾಗದು ಭಕ್ತನ, ಕಾಡಲಾಗದು ಭವಿಯ,
ಬೇಡಿ ಕಾಡಿ ಒಡಲ ಹೊರೆವನಾದರೆ
ಬೇಟೆಯನಾಡಿದ ಮೊಲನನಟ್ಟು ಬಾಣಸವ ಮಾಡಿ,

೧-೧ ದ (ಮೂ).

ನಾಯಿ ತಿಂದು ಮಿಕ್ಕುದ ತಾ ತಿಂದಂತೆ
ಕೂಡಲ ಚೆನ್ನಸಂಗಮದೇವಾ. । ೮ । [೨೦೯]

೪೯
ಅಚ್ಚಪ್ರಸಾದ, ನಿಚ್ಚಪ್ರಸಾದ, ಪರಪಾಕವರ್ಜಿತವೆಂದು,
ತಮ್ಮ ತನುವಿನ ಹವಣಿಗೆ ಗಡಣಿಸಿಕೊಂಬರು,
ತನು ಮನ ಮುಟ್ಟಿದೋಗರ ಲಿಂಗಕ್ಕೆ ಸಲ್ಲದು.
ಅರ್ಪಿತವನುಂಡು ನಾವು ಅಚ್ಚಪ್ರಸಾದಿಗಳು, ನಿಚ್ಚ ಪ್ರಸಾದಿಗಳು ಎಂದರೆ,
ನಮ್ಮ ಲಿಂಗೈಕ್ಯ ಶರಣರು ಮೆಚ್ಚರು.
ಬಂದ ಪದಾರ್ಥವ ಕೂಡಲ ಚೆನ್ನಸಂಗಮದೇವರಿಗೆ ಅರ್ಪಿಸಿಕೊಳ್ಳಬಲ್ಲರೆ
ಆತನೇ ಮಹಾಪ್ರಸಾದಿ. । ೯ । [೭೩೧]

೫೦
ತನ್ನ ಲಿಂಗಕ್ಕೆ ಬೋನವ ಮಾಡುವನ್ನಕ್ಕ
ಭವಿಮಿಶ್ರವ ಕಳೆದೆನೆಂದು ಎಂತೆನ್ನಬಹುದು?
ತನು ಭವಿ, ಆ ಹಸ್ತ ಭವಿ, ಪಂಚಮಹಾಪಾತಕ ಮನ ಭವಿ ಅಘೋರನರಕ.
[೧]ಭವಿನಾಂ ಪಾಪದೃಷ್ಟೀನಾಂ ನ ಕಿಂಚಿತ್ಪರಮಂ ಪದಂ ।
ಎಂದುದಾಗಿ, ನನಗೆ ಭವಿಮಿಶ್ರವಿಲ್ಲವೆಂದು
ನುಡಿವ ದುರಾಚಾರಿಗಳ ಸಜ್ಜನಶುದ್ಧಶಿವಾಚಾರಸಂಪನ್ನಸದ್ಭಕ್ತರು
ಮೆಚ್ಚರು ಕಾಣಾ, ಕೂಡಲ ಚೆನ್ನಸಂಗಮದೇವಾ. । ೧೦ । [೩೬೭]

೫೧
ಹೊನ್ನು ಭಕ್ತನೆಂಬೆನೆ? ಹೊನ್ನಿನೊಳಗಣ ಮುದ್ರೆ ಭವಿ,
[೩]ಹೆಣ್ಣು ಭಕ್ತನೆಂಬೆನೆ? ಹೆಣ್ಣಿನೊಳಗಣ ವಿರಹ ಭವಿ,[೩]
ಮಣ್ಣು ಭಕ್ತನೆಂಬೆನೆ? ಮಣ್ಣಿನೊಳಗಣ ಹದಿನೆಂಟು ಧಾನ್ಯವು ಭವಿ.
ಕೂಡಲ ಚೆನ್ನಸಂಗಮದೇವರಲ್ಲಿ ಈ ತ್ರಿವಿಧಭವಿ ನಾಸ್ತಿಯಾದರೆ ಭಕ್ತರೆಂಬೆ,
ಅಲ್ಲದಿದ್ದರೆ ಬದ್ಧಭವಿಗಳೆಂಬೆ. । ೧೧ । [೮೬೧]

೫೨
ಭಕ್ತ[೪]ನೆದ್ದು[೪] ಭವಿಯ ಮುಖವ ಕಂಡರೆ
ರೌರವ ನರಕವೆಂಬರು.

೧+ ನೀತಿ ॥ (ಮೂ), ೨+ಉತ್ತಮವೆಂಬ ಶಬ್ದವನಚಿದು (ಮೂ), ೩-೩ x (ಮೂ), ೪-೪ ನೆಂದು (ಮೂ).

ಭಕ್ತನಾವುದು? ಭವಿಯಾವುದು? ಬಲ್ಲರೆ ಹೇಳಿ,
ಅಱಿಯದಿದ್ದರೆ ಕೇಳಿ.
ಕಾಮ ಒಂದನೆಯ ಭವಿ, ಕ್ರೋಧ ಎರಡನೆಯ ಭವಿ,
ಲೋಭ ಮೂರನೆಯ ಭವಿ, ಮೋಹ ನಾಲ್ಕನೆಯ ಭವಿ,
ಮದ ಐದನೆಯ ಭವಿ, ಮ[1]ತ್ಸ[1]ರ ಆರನೆಯ ಭವಿ.
ಇಂತೀ ಷಡ್ವಿಧಭವಿಯ ತಮ್ಮೆದೆಯೊಳಗೆ ಇಂಬಿಟ್ಟುಕೊಂಡು,
ನಾನು ಭವಿಯ ಮೋರೆಯ ಕಾಣಬಾರದು ಎಂದು
ಮುಖದ ಮೇಲೆ ವಸ್ತ್ರವ ಬಾಸಣಿಸಿಕೊಂಡು ತಿರುಗುವ[2]
ಕುನ್ನಿಗಳ ಮೆಚ್ಚುವನೆ ಕೂಡಲ ಚೆನ್ನಸಂಗಮದೇವ. ।೧೨। ೩೮೧]

೫೩

ಶೀಲಶೀಲವೆಂದು ಗರ್ವಿಸಿ ನುಡಿವರು,
ಶೀಲವಾವುದು? ಎಂದು ತಾವಱಿಯರು.
ಇರ್ದುದ ವಂಚನೆ ಮಾಡದಿಪ್ಪುದೆ ಶೀಲ,
ಪರಧನ ಪರಸತಿಗೆ ಅಳುಪದಿಪ್ಪುದೆ ಶೀಲ,
ಪರದೈವ ಪರಸಮಯಕ್ಕೆ ಎ[4]ಳ[4]ಸದಿಪ್ಪುದೆ ಶೀಲ,
ಗುರುನಿಂದೆ ಶಿವನಿಂದೆ ಜಂಗಮನಿಂದೆ ಕೇಳದಿಪ್ಪುದೆ ಶೀಲ.
ಕೂಡಲ ಚೆನ್ನಸಂಗನ ಶರಣರ ಬರವಿಂಗೆ ಮುಯ್ಯಾಂತು
ಪರಿಣಾಮಿಸಬಲ್ಲರೆ ಅದೇ ಮಹಾಶೀಲ. ।೧೩। [೫೭೧]

೫೪

ನದಿ ಜಲ ಕೂಪ ತಟಾಕ ಜಲಾ[5]ಶಯ[5]ದಲ್ಲಿ ಅಗ್ಗಣಿಯ ತಂದು
ಮಜ್ಜನಕ್ಕೆ ನೀಡುವರೆಲ್ಲ ಶೀಲವಂತರೆ?
ಪಾಕದಲ್ಲಿ ಪರಪಾಕ ಭವಿಪಾಕ ಎಂಬವರೆಲ್ಲ ಶೀಲವಂತರೆ?
ತಳಿಗೆ ಬಟ್ಟಲ ಪ್ರಗಾಳಿಸಿ ನೇಮವ ಮಾಡಿಕೊಂಬವರೆಲ್ಲ ಶೀಲವಂತರೆ?
ಅದೇನು ಕಾರಣವೆಂದರೆ,
ಅವರು [4]"ಸಂಕಲ್ಪಂ ಚ ವಿಕಲ್ಪಂ ಚ"[4] ಎಂದುದಾಗಿ [5]ಶುದ್ಧ[5] ಭವಿಗಳು.

೧–೧ ಚ್ಚ (ಮೂ), ೨+ ಕಣ್ಣಾರ (ಮೂ), ೩–೩ ಣಿ (ಮೂ), ೪–೪ ಕ್ಷ (ಮೂ), ೫–೫ ಸೂತಿ (ಮೂ).

ಭವಿಯೆಂಬವನೆ ಶ್ವಪಚ, ವ್ರತಸ್ಥನೆಂಬವನೆ ಸಮ್ಮಗಾಜಿ.
ಶೀಲವಿನ್ನಾವುದೆಂದರೆ:
ಅಶನ ಅಱತು, ವ್ಯಸನ ನಿಂದು,
ವ್ಯಾಪ್ತಿಯಳಿದು ಅಷ್ಟಮದವೆಲ್ಲ ನಷ್ಟವಾದಲ್ಲದೆ
ಕೂಡಲ ಚೆನ್ನಸಂಗಮದೇವರಲ್ಲಿ ಶೀಲವಿಲ್ಲ ಕಾಣಿರೋ. । ೧೪ । [೫೦೧]

೫೫
ದಾಸಿಯ ಸಂಗ ಭಂಗಿಯ ಸೇವನೆ,
ವೇಸಿಯ ಸಂಗ ಸುರೆಯ ಸೇವನೆ,
ಪರಸ್ತ್ರೀಯರ ಸಂಗ ಮಾಂಸದ ಸೇವನೆ,
ಮುಂಡೆಯ ಸಂಗ ಅಮೇಧ್ಯದ ಸೇವನೆ,
ಕನ್ನೆಯ ಸಂಗ ರಕ್ತದ ಸೇವನೆ.
ಇಂತೀ ಐವರ ಸಂಗವ ಮಾಡುವ ದ್ರೋಹಿಗೆ
ಕಂಠಪಾವಡ ಧೂಳಿಪಾವಡ ಸರ್ವಾಂಗಪಾವಡ ಉಂಟು ಎಂಬ
ಪಂಚ ಮಹಾಪಾತಕರಿಗೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ
ಪಾದೋದಕ ಪ್ರಸಾದವಿಲ್ಲ,
ನಾ ಮೊದಲೇ ಇಲ್ಲ, ಕೂಡಲ ಚೆನ್ನಸಂಗಮದೇವಾ. । ೧೫ । [೪೮೧]

೫೬
ಶೀಲಶೀಲವೆಂಬರು, ನಾವಿದನಜಿಯೆವಯ್ಯಾ,
ಅಂಗನೆಯರ ಅಧರಪಾನ ಉದರ[1]ವ[1] ಹೊಗುವನ್ನಬರ
ಶೀಲವೆಲ್ಲಿಯದೊ? ಬಾಲರಾಳಿಯಲ್ಲದೆ.
ಈಷಣತ್ರಯವೆಂಬ ನಾಯಿ ಬೆನ್ನಬಿಡದನ್ನಕ್ಕ
ಕೂಡಲ ಚೆನ್ನಸಂಗಮದೇವರಲ್ಲಿ ಶೀಲವಪೂರ್ವವಯ್ಯಾ. । ೧೬ । [೧೦೮೫]

೫೭
[2]ಸ[2]ತಿಯರ ನರಮಾಂಸವೆಂಬ ಮಾಂಸದ ಪುತ್ಥಳಿಯ
ನಿಚ್ಚ ನಿಚ್ಚ ಕಡಿದುಕೊಂಡು ತಿಂಬ ನಾಯಿಗಳಗೆ
ಎಲ್ಲಿಯದೊ ವ್ರತಶೀಲ ಸಂಬಂಧ?

೧–೧ ಪಾನ (ಮೂ), ೨–೨ ಸಂ (ಮೂ).

ಅವರ ಅಧರಸೇವನೆಯೆ ಮಧುಮಾಂಸ,
ಅವರ ಉದರಸೇವನೆಯೆ ಸುರೆಯ ಮಾಂಸ,
ಕಾಮವೇ ಕಬ್ಬಿಲಿಗ, ಕ್ರೋಧವೇ ಹೊಲೆಯ, ಲೋಭವೇ ಕಳ್ಳ,
ಮೋಹವೇ ಬಲೆಗಾರ, ಮದವೇ ಮಾದಿಗ, ಮ[೧]ತ್ಸ[೧]ರವೇ ಸುರಾಪಾನಿ.
ಇಂತೀ ಷಡ್ವಿಧ ಭವಿಯ ತಮ್ಮೆದೆಯೊಳಗೆ ಇಂಬಿಟ್ಟುಕೊಂಡು,
ಭವಿಪಾಕ ಪರಪಾಕವೆಂಬ ಪಂಚಮಹಾಪಾತಕರ ಮೆಚ್ಚುವನೆ
ಕೂಡಲ ಚೆನ್ನಸಂಗಮದೇವ. ।೧೭।

೫೮

ಉಚ್ಚೆಯ ಬಚ್ಚಲ ಶೋಧಿಸುವವರಿಗೆ ಚಿಲುಮೆಯ
ಆಯತವೇಕೋ?
ಸತಿಯರ ನರಮಾಂಸವ ಭುಂಜಿಸುವವರಿಗೆ ಪರಪಾಕ ವರ್ಜಿತವೆಂದು
ಸ್ವಯಂಪಾಕವೇಕೋ?
ಅಷ್ಟೋತ್ತರ ಶತವೇದವ ಓದುವವರಿಗೆ
ಅಚ್ಚಪ್ರಸಾದವೇಕೋ?
ಇಂತೀ ತ್ರಿವಿಧ ಡಂಬಿನ ಭಕ್ತಿಗೆ ಊರ ಮುಂದಣ ಡೊಂಬನೆ ಸಾಕ್ಷಿ
ಕೂಡಲ ಚೆನ್ನಸಂಗಮದೇವಾ. ।೧೮।

೫೯

ಶೀಲಶೀಲವೆಂಬರು, ನಾವಿದನರಿಯೆವಯ್ಯಾ.
ಮಾಡಿದ ಮನೆ, ಹೂಡಿದ ಒಲೆ, ಅಟ್ಟುಂಬ ಮಡಕೆ,
ಕಟ್ಟಿದ ಕೆರೆ, ಬಿತ್ತಿದ ಬೆಳೆಗೆ ಶೀಲ ಉಂಟೆ?
ಮಾಡಿದ ಮನೆ ಪರಪಾಕ. ಹೂಡಿದ ಒಲೆ ಪರಪಾಕ,
ಬಿತ್ತಿದ ಬೆಳೆ ಪರಪಾಕ, ಅಟ್ಟುಂಬ ಒಲೆ ಪರಪಾಕ.
ಕಟ್ಟಿದ ಕೆರೆ ಪರಪಾಕ.
ಶೀಲವಿನ್ನಾವುದೆಂದರೆ:
ಲಿಂಗ ಬಂದು ಮನವನಿಂಬುಗೊಂಬುದೇ ಶೀಲ,
ಜಂಗಮ ಬಂದು ಧನವನಿಂಬುಗೊಂಬುದೇ ಶೀಲ,

೧-೧ ಚ್ಚ (ಮೂ).

ಪ್ರಸಾದ ಬಂದು ತನುವನಿಂಬುಗೊಂಬುದೇ ಶೀಲ,
ಇಂತೀ ತ್ರಿವಿಧಶೀಲರಿಗೆ ನಮೋ ನಮೋ ಎಂಬೆ.
ಮಿಕ್ಕಿದ ದುಃಶೀಲರ ಎನಗೆ ತೋರದಿರಾ,
ಕೂಡಲ ಚೆನ್ನಸಂಗಮದೇವಾ. ।೧೯। [೫೨೭]

೭೦

ಶೀಲವಂತನಾದಲ್ಲದೆ ಶಿವಪದ ಸಾಧ್ಯವಾಗದೆಂಬುದು ಇಲ್ಲ ಕಂಡಯ್ಯಾ:
ಸತ್ತ ಕರುವ ಹೊತ್ತುಕೊಂಡು ದೃಷ್ಟವ ತೋರಿದರು,
ಅದಾವ ಶೀಲದೊಳಗೆ?
[೧]ಅವುಟುಕೋಟಿ[೧] ಭೂತಂಗಳನೆಲ್ಲ ಸಲ್ಲಂದ ಸಲಿಸಿದ ಉದ್ಭಟಯ್ಯ,
ಅದಾವ ಶೀಲದೊಳಗೆ?
ಡೊಂಬರಬೀಡು ಕಂಚಿಯಪುರವ ಕೈಲಾಸಕ್ಕೆ ಒಯ್ದರು,
ಅದಾವ ಶೀಲದೊಳಗೆ?
ಅರುವತ್ತಾರುಸಾವಿರ ರುದ್ರಾಕ್ಷಿಯ ಹಕ್ಕರಿಕೆ ಸಾಮ್ರಾಣಿ ಸಹ
ಚೇರಮ ದೇವಲೋಕಕ್ಕೆ ದಾಳಿವರಿದ,
ಅದಾವ ಶೀಲದೊಳಗೆ?
ಗಾಣದ ಕನ್ನಪ್ಪಗಳು ಮೀನ ಮಾರಿ ಜಂಗಮಾರ್ಚನೆಯ ಮಾಡಿದರು,
ಅದಾವ ಶೀಲದೊಳಗೆ?
ಹಾದರದ ಬೊಮ್ಮಯ್ಯಗಳು ಹಾದರವ ಮಾಡಿ ಜಂಗಮಾರ್ಚನೆಯ ಮಾಡಿದರು
ಅದಾವ ಶೀಲದೊಳಗೆ?
ಕನ್ನದ ಬ್ರಹ್ಮಯ್ಯಗಳು ಕನ್ನವನಿಕ್ಕಿ ಜಂಗಮಾರ್ಚನೆಯ ಮಾಡಿದರು,
ಅದಾವ ಶೀಲದೊಳಗೆ?
ಕಟುಕರ ಮಾರಿತಂದೆಗಳು ಮಾಂಸವ ಮಾರಿ ಜಂಗಮಾರ್ಚನೆಯ ಮಾಡಿದರು,
ಅದಾವ ಶೀಲದೊಳಗೆ?
ಹಳ್ಳದ ಮಾರಯ್ಯಗಳು ಪಾದರಕ್ಷೆಯ ಮಾರಿ ಜಂಗಮಾರ್ಚನೆಯ ಮಾಡಿದರು,
ಅದಾವ ಶೀಲದೊಳಗೆ?
ಮಾದಾರ ಕುಲದ ಕಕ್ಕಯ್ಯಗಳಿಗೆ ಚರ್ಮದ ಕಟಿಸೂತ್ರದಾರ,
ಚರ್ಮದ ಯೋಗವಟ್ಟಿಗೆ, ಚರ್ಮದ ವಿಭೂತಿಯಾಧಾರ, ಚರ್ಮದ ಖಟ್ವಾಂಗ,
ಸಂಗನಬಸವಣ್ಣ ಹನ್ನೆರಡು ವರುಷ ಪ್ರಸಾದಕ್ಕೆ ಕಾದಿರ್ದ,

೧-೧ ಆಊಟಕೊಟಿ (ಮೂ).

ಚೆನ್ನಬಸವಣ್ಣ ಹುಟ್ಟಿದ ಅದಾವ ಶೀಲದೊಳಗೆ?
ತಾವು ಭಕ್ತರಾಗಿ, ತಮ್ಮಲ್ಲಿ ನಿಷ್ಠೆಯಿಲ್ಲದೆ ಸದ್ಭಕ್ತ ದೃಷ್ಟಜಂಗಮವ ಅತಿಗಳೆವ
ಭ್ರಷ್ಟಹೊಲೆಯರ ಮಾತ ಕೇಳಲಾಗದು,
ಕೂಡಲ ಚೆನ್ನಸಂಗಮದೇವಾ.[೧] ।೨೦।

೬೧
ಶೀಲಶೀಲವೆಂಬ ಅಣ್ಣಗಳು ನೀವು ಕೇಳಿರೋ:
ಕಾಮ ಒಂದನೆಯ ಭವಿ, ಕ್ರೋಧ ಎರಡನೆಯ ಭವಿ,
ಲೋಭ ಮೂಱನೆಯ ಭವಿ, ಮೋಹ ನಾಲ್ಕನೆಯ ಭವಿ,
ಮದ ಐದನೆಯ ಭವಿ, ಮತ್ಸರ ಆಱನೆಯ ಭವಿ.
ಇಂತೀ ಷಡ್ವಿಧಭವಿಯ ತಮ್ಮ ಎದೆಯೊಳಗೆ ಇಂಬಿಟ್ಟುಕೊಂಡು,
ಅಂಗದ ಮೇಲೆ ಅವರಿಗೆ ಲಿಂಗವುಂಟೋ? ಇಲ್ಲವೋ?
ಎಂಬ ಜಗಭಂಡರು ನೀವು ಕೇಳಿರೋ:
ಅಚ್ಚಪ್ರಸಾದಿ ನಿಚ್ಚಪ್ರಸಾದಿ!
ಜಲವನೆ ಹೊಕ್ಕು ಕನ್ನವನಿಕ್ಕಿ ಅಗ್ಗಣಿಯ ತಂದು ಮಜ್ಜನಕ್ಕೆ ನೀಡುವ
ಹಗಲುಗಳ್ಳರ ಮೆಚ್ಚುವನೆ ಕೂಡಲ ಚೆನ್ನಸಂಗಮದೇವ? ।೨೧। [೭೫]

ಅಂತು ಚೆನ್ನಬಸವಣ್ಣನವರ ಪ್ರಸಾದಸ್ಥಲ. ಶೀಲನಿರಸನವಚನ ಸಮಾಪ್ತ. ಮಂಗಳ ಮಹಾಶ್ರೀ.

❖❖

---

೧ ಇದು ಬೇರೊಬ್ಬ ಶರಣನ ವಚನವಿರಬಹುದೆ? (ಸಂ). (ಮೂ), ೨-೨ ಚ್ಚ (ಮೂ).

ಪ್ರಾಣಲಿಂಗಿಸ್ಥಲ

೬೨

[1]ಅಷ್ಟತನುಗುಣಮೂರ್ತಿಯೆಂಬ ಕಷ್ಟದ ಮಾತ ಕೇಳಲಾಗದು,
ಪೃಥ್ವಿಯಂತೆ ಕಠಿಣವುಳ್ಳಾತನೆ?
ಅಪ್ಪುವಿನಂತೆ ಓಟ ಭರಿತವುಳ್ಳಾತನೆ?
ತೇಜುವಿನಂತೆ ತೃಣಕಾಷ್ಠ[2]ವಿಲ್ಲ[2]ದಲ್ಲಿ ನಂದುವಾತನೆ?
ವಾಯುವಿನಂತೆ ಚಲನೆವುಳ್ಳಾತನೆ?
ಆಕಾಶದಂತೆ ಬಚ್ಚಬಱಿಯ ಬಯಲಾದಾತನೆ?
ಚಂದ್ರಸೂರ್ಯಾದಿಗಳಂತೆ ದಿವಾರಾತ್ರಿಯ ನಡಸುವಾತನೆ?
ಜೀವಾತ್ಮನಂತೆ ಜನನ ಮರಣಕ್ಕೆ ಒಳಗಪ್ಪಾತನೆ?
ನೀವು ನಿಮ್ಮಂತೆ, ಇವು ಎಲ್ಲ ನೀವಿರಿಸಿದಂತೆ
ಕೂಡಲ ಚೆನ್ನಸಂಗಮದೇವಾ. ।೧। [೪೯೪]

೬೩

ಭಾವದಲ್ಲಿ [3]ಗ[3]ಮನ, ಪ್ರಾಣದಲ್ಲಿ ಲೋಭ, ಜಿಹ್ವೆಯಲ್ಲಿ ರುಚಿ,
ಶ್ರೋತ್ರದಲ್ಲಿ ಕುಶಬ್ದ, ನಾಸಿಕದಲ್ಲಿ ದುರ್ಗಂಧ,
ನೋಟದಲ್ಲಿ ಕಾಮ, ಶಬ್ದದಲ್ಲಿ ವಿರೋಧ.
ಇಂತೀ ಭವಿಯನೆ ಕಳೆದು ಭಕ್ತನ ಮಾಡುವ ಪರಿಯೆಂತೆಂದರೆ:
ಆಕಾರವಿಲ್ಲದಂದಿನ, ನಿರಾಕಾರವಿಲ್ಲದಂದಿನ,
ಕಾಮನ ಸುಟ್ಟ ವಿಭೂತಿ ಇಲ್ಲದಂದಿನ,

೧+ ಶ್ರೀಸಾಂಬ ಶಿವಾಯ ನಮಃ ॥ ಪ್ರಾಣಲಿಂಗಿ ಸ್ಥಲ, (ಮೂ), ೨-೨ x(ಮೂ), ೩-೩ x(ಮೂ).

ಕಾಲನ ಸುಟ್ಟ ವಿಭೂತಿ ಇಲ್ಲದಂದಿನ,
ಆದಿ ಆಧಾರವಿಲ್ಲದಂದಿನ,
ವಿಭೂತಿಯನೆ ತಂದು ಪಟ್ಟವನೆ ಕಟ್ಟಿದರೆ
ಭಾವಕ್ಕೆ ಗುರುವಾಯಿತು, ಪ್ರಾಣಕ್ಕೆ ಲಿಂಗವಾಯಿತು,
ಜಿಹ್ವೆಗೆ ಪ್ರಸಾದವಾಯಿತು, ಶ್ರೋತ್ರಕ್ಕೆ ಶಿವಮಂತ್ರವಾಯಿತು,
ನಾಸಿಕಕ್ಕೆ ಸುಗಂಧವಾಯಿತು, ನೋಟಕ್ಕೆ ಜಂಗಮವಾಯಿತು,
ಶಬ್ದಕ್ಕೆ ಸಂಭಾಷಣೆಯಾಯಿತು.
ಇಂತೀ ಪೂರ್ವಗುಣವಳಿದು ಪುನರ್ಜಾತನಾದ ಬಳಿಕ
ಕೂಡಲ ಚೆನ್ನಸಂಗಮದೇವಾ, ನಿಮ್ಮ ಪ್ರಾಣಲಿಂಗಿ[೧][ಯ][೧]
ಸರ್ವಾಂಗವೆಲ್ಲಾ ಲಿಂಗವಾದವು. । ೨ । [೫೪]

೬೪
ಲಿಂಗವಿಲ್ಲದ ಜಂಗಮವೆಲ್ಲಿಯದೊ? ಜಂಗಮವಿಲ್ಲದ ಲಿಂಗವೆಲ್ಲಿಯದೊ?
ಉರಿಯಿಲ್ಲದ ಅಗ್ನಿ ದಹಿಸಬಹುದೆ?
ವಿಷವಿಲ್ಲದ ಸರ್ಪ ಕಡಿಯಬಹುದೆ?
ನಿಮ್ಮ ಶರಣರ ಅನುಭಾವವಿಲ್ಲದೆ ಪ್ರಭುದೇವರ ಬೆರಸಬಹುದೆ?
ಕೂಡಲ ಚೆನ್ನಸಂಗಮದೇವಾ. । ೩ । [೮೭೬]

೬೫
ಕಬ್ಬುನದ ಶುನಕನ ತಂದು ಪರುಷಕ್ಕೆ ಮುಟ್ಟಿಸಲು
ಹೊನ್ನ ಶುನಕನಪ್ಪುದಲ್ಲದೆ ಪರುಷವಾಗಲರಿಯದು.
ಲೋಕದ ಮಾನವರ ತಂದು ಭಕ್ತನ ಮಾಡಿದರೆ
ವೇಷ ಲಾಂಛನಧಾರಿಗಳಪ್ಪರಲ್ಲದೆ ಭಕ್ತರಾಗಲರಿಯರು.
ಕೂಡಲ ಚೆನ್ನಸಂಗಮದೇವರಲ್ಲಿ ಮಜ್ಜನಕ್ಕೆ ನೀಡುವ ಭವಿಗಳ
ಎಂತು ಭಕ್ತರೆಂಬೆನಯ್ಯಾ? । ೪ । [೬೧]

೬೬
ಸತ್ಯವುಳ್ಳವರಿಗೆ ನಿತ್ಯನೇಮದ ಹಂಗೇಕಯ್ಯಾ?
ಅಜೀವುವುಳ್ಳವರಿಗೆ ಅಗ್ಗವಣಿಯ ಹಂಗೇಕಯ್ಯಾ?
ಮನಶುದ್ಧವುಳ್ಳವರಿಗೆ ಮಂತ್ರದ ಹಂಗೇಕಯ್ಯಾ?

೧–೧ x (ಮೂ).

ಭಾವಶುದ್ಧವುಳ್ಳವರಿಗೆ ಪತ್ರೆಯ ಹಂಗೇಕಯ್ಯಾ?
ನಿಮ್ಮನಱಿದ ಶರಣರಿಗೆ ನಿಮ್ಮ ಹಂಗೇಕಯ್ಯಾ?
ಕೂಡಲ ಚೆನ್ನಸಂಗಮದೇವಾ. । ೫ ।

೬೭

ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಲಾಗದು.
ಮಾಡಿದರೇನು? ಮನೆಮನೆಯ ಹೊಕ್ಕು ಬೇಡಲಾಗದು.
ಬೇಡಿ ಮಾಡಿದ ಭಕ್ತಿ ಆವುದೂ ಕಡೆಯಲ್ಲಿ ತನಗೆ
ಈ[1]ಡಾ[1]ಗಲಱಿಯದು, ಕೂಡಲ ಚೆನ್ನಸಂಗಮದೇವಾ. । ೬ । [೬೬೦]

೬೮

[2]ಲಿಂಗದಿಂದಲಿ ಗುರು, ಲಿಂಗದಿಂದಲಿ ಜಂಗಮ,
ಲಿಂಗದಿಂದಲಿ ಪಾದೋದಕ ಪ್ರಸಾದ,
ಲಿಂಗದಿಂದಲಿ ಸರ್ವವೆಲ್ಲಾ ಆಯಿತ್ತು,
[3]ಅವು[3] ನಮ್ಮ ಕರಸ್ಥಲದೊಳಗೆ ಇಲ್ಲವೆ? ಎಂಬ
ಸುರೆ ಭುಂಜಕರ ಮಾತ ಕೇಳಲಾಗದು.
ಅದೆಂತೆಂದರೆ:
ಲಿಂಗ ಘನವೆಂಬಿರಿ, ಅದೆಂತು ಘನವಹುದು?
ಎನ್ನ ಜಂಗಮದೇವರ ಅಷ್ಟಕೋಟಿರೋಮಕೂಪ
ದೊಳಗೊಂದು ರೋಮ ತಾ ಇಷ್ಟಲಿಂಗ.
ಇಷ್ಟಲಿಂಗವನೆ ಘನವ ಮಾಡಿ ದೃಷ್ಟಜಂಗಮನತಿಗಳೆವ
ಭ್ರಷ್ಟ ಹೊಲೆಯರ ಮಾತ ಕೇಳಲಾಗದು.
ಅದೆಂತೆಂದರೆ:
ಎನ್ನ ಜಂಗಮದೇವರ ಹಾಗೆ, ಪಾದಾರ್ಚನೆಯ ಮಾಡಿಸಿಕೊಂಡು
ಪಾದತೀರ್ಥ ಪ್ರಸಾದವ [4]ಕೊಟ್ಟು[4] ಪಾಲಿಸ[5]ಬಲ್ಲುದೆ[5] ಲಿಂಗವು?
ಮತ್ತೆನ್ನ ಜಂಗಮದೇವರ ಹಾಗೆ, ಅರ್ಥ ಪ್ರಾಣ ಅಭಿಮಾನವನಿ[6]ತ್ತಡೆ[6]
[7]ಸ್ವೀ[7]ಕಾರವ ಮಾಡಬಲ್ಲುದೆ ಲಿಂಗವು?
ಲಿಂಗ ಆವುದನು ಕೊಡಲಱಿಯದು.

೧–೧ ಡ (ಮೂ), ೨+ ಶಿವನ ಪಾದವೇ ಗತಿ (ಮೂ), ೩–೩ ಅವರು (ಮೂ), ೪–೪ x (ಮೂ), ೫–೫ ಬಲ್ಲರೆ (ಮೂ), ೬–೬ ತ್ತು (ಮೂ), ೭–೭ ಶ್ರೀ (ಮೂ).

ರಾಸಿಗೆ ಲಚ್ಚಿಸಿದ ಲಚ್ಚಣ ರಾಸಿಯನೊಳಕೊಂಬುದೆ? ರಾಸಿಯ ಒಡೆಯನಲ್ಲದೆ.
ಭಕ್ತನೆಂಬ ರಾಸಿಗೆ ಲಿಂಗವೆಂಬ ಲಚ್ಚಣ.
ಇದಕ್ಕೆನ್ನ ಜಂಗಮದೇವರೆ ಮುದ್ರಾಧಿಪತಿ ಕಾಣಾ
ಕೂಡಲ ಚೆನ್ನಸಂಗಮದೇವಾ. ।೭। [೭೦೪]

೧೯
ಅಱಿವ ಅಱಿಯ ಹೇಳಿ ಸದ್ಗುರುನಾಥ ಕುಱುಹ ಕೈಯಲ್ಲಿ ಕೊಟ್ಟನಲ್ಲದೆ.
ತನ್ನ ಅಱುಹನೆ ಮಱೆದು, ಈ ಕುಱುಹನೆ ಪೂಜಿಸುವ ನರಗುಱಿಗಳ ನೋಡ
ಕೂಡಲ ಚೆನ್ನಸಂಗಮದೇವಾ. ।೮। [೧೧೨೪]

೨೦
ಅಂಗದ ಮೇಲೆ ಲಿಂಗ ಹಿಂಗಿತೆಂದು
ಆತ್ಮಘಾತವ ಮಾ[೧]ಡೆಹೆ[೧]ನೆಂಬರೆಲ್ಲ ಅಜ್ಞಾನಿಗಳು.
ಅದೆಂತೆಂದರೆ:
ಅಂಗವಾವುದು, ಲಿಂಗವಾವುದು ಎಂದು ಅಱಿಯರಲ್ಲಾ.
ಅಂಗವೇ ಆತ್ಮ, ಲಿಂಗವೇ ಅಱಿವು.
ಇವು ಎರಡಱ ಸಂದು ಸಂಬಂಧದ ಸಂಚವ ಅಱಿಯದವರಿಗೆ
ಪ್ರಾಣಲಿಂಗ [೨]ನಾಸ್ತಿ,[೨] ಪ್ರಸಾದವೆಲ್ಲಿಯದೋ?
ಕೂಡಲ ಚೆನ್ನಸಂಗಮದೇವಾ. ।೯। [೬೫೭]

೨೧
ಉಭಯದಳ ನಡೆದು ಬಂದು ಮುಂದೆ ನಿಂದಿರ್ದು,
ಭಾಷೆಯಾಗಿ ಬಿರಿದನುಚ್ಚರಿಸುತ,
ಹೋರುಕುಟ್ಟಾಡುವ ಕಾಳಗದೊಳಗೆ ಕೈದು ಬಿದ್ದರೆ ಭಂಗವಲ್ಲದೆ
ಶಸ್ತ್ರವ ಕಲಿತೆ[೩]ಹೆ[೩]ನೆಂದು ಅಭ್ಯಾಸವ ಮಾಡುವ ಗರುಡಿಯಲ್ಲಿ
ಕೋಲು ಬಿದ್ದರೆ ಭಂಗವೇ? ಅಲ್ಲ.
ದುರುಳೆ ಕೇಳು: ಕೋಲ [೪]ಕೈ[೪]ಕೊಂಡು ಅಭ್ಯಾಸವ ಮಾಡುವದೇ ಉಚಿತವಲ್ಲದೆ,
ಕೋಲು ಬಿದ್ದರೆ 'ನಾನಿನ್ನು ಅಭ್ಯಾಸವ ಮಾಡಲಾಗದು' ಎಂಬ

೧–೧ ಡಿ (ಮೂ), ೨–೨ ಸಾನ್ತ (ಮೂ), ೩–೩ x (ಮೂ), ೪–೪ ಕಳ (ಮೂ).

ಗಾವಿಲರ ಮಾತ ಕೇಳಲಾಗದು.
ದೃಷ್ಟವೇ ಕೋಲು, ಅದೃಷ್ಟವೇ ಕೈದು.
ಕಾಣಬಾರದ ಲಿಂಗವ ಕಾಬುದೆ ತನ್ನ ಶಕ್ತಿ ಕಾಣಾ
ಕೂಡಲ ಚೆನ್ನಸಂಗಮದೇವಾ. ।೧೦। [೬೫೫]

೬೨
ಪರುಷದ ಲಿಂಗವಿದ್ದುದ ಕಾಣಲಱಿಯದೆ, ಇಷ್ಟಲಿಂಗ ಬಿದ್ದಿತೆಂದು
ಶಸ್ತ್ರವನಿಕ್ಕಿಕೊಂಡು ಸಾವರು.
ಅರಿದರಿದು, ಗುರುಶಿಷ್ಯರ ಸಂಬಂಧ,
ಅಱಿವು ಘನವೋ? ಕುಱುಹು ಘನವೋ?
ಅಱಿವುಳ್ಳವರು ಬಲ್ಲರೆ ನೀವು ಹೇಳಿರೇ.
ಮಱಹು ಕವಿದೀತೆಂದು ಆ ಶ್ರೀಗುರು
ಕುಱುಹ ಕೈಯಲ್ಲಿ ಕೊಟ್ಟನಲ್ಲದೆ,
ತನ್ನ ಅಱುಹ ಮಱೆದರೆ ಈ ಕುಱುಹ ಹಿಡಿದವರು
ಕೂಡಲ ಚೆನ್ನಸಂಗಮದೇವರಲ್ಲಿ ಅವರಂದೇ ದೂರವಯ್ಯಾ. ।೧೧। [೬೫೨]

೬೩
ಸೃಷ್ಟಿಯ ಮೇಲಣ ಕಣಿಯ ತಂದು, ಅಷ್ಟತನುವಿನ ಕೈಯ್ಯಲಿ ಕೊಟ್ಟು,
ಪೂಜಿಸು ಪೂಜಿಸು ಎಂಬರಯ್ಯಾ.
[1]ನಾಲ್ವ[1]ರಿಗೆ ಹುಟ್ಟಿದ ಲಿಂಗವ ನಾನೆತ್ತ ಪೂಜಿಸುವೆನಯ್ಯಾ.
ಪೃಥ್ವಿಗೆ ಹುಟ್ಟಿ ಶಿಲೆಯಾಯಿತು,
ಕಲ್ಲುಕುಟಿಕನ ಕೈಯಲ್ಲಿ ರೂಪಾಯಿತು,
ಗುರುವಿನ ಹಸ್ತದಲ್ಲಿ ಮೂರ್ತಿಯಾಯಿತು,
ಉಪಚಾರಕ್ಕೆ ದೇವರಾಯಿತು.
ಈ ನಾಲ್ವರಿಗೆ ಹುಟ್ಟಿದ ಲಿಂಗ ನಾನೆತ್ತ ಪೂಜಿಸುವೆನಯ್ಯಾ.
ಈ ಲಿಂಗ ನೆಲಕ್ಕೆ ಬಿದ್ದರೆ ಸಮಾಧಿಯ ಹೊಕ್ಕೇನೆಂಬರು.
[2]ಸಮಾಧಿ ಶಸ್ತ್ರಂ ಚ ಶಿಲಾದಾನಾದಿಂ ಚ ।
ಈ ಆಱು ತೆರದಲ್ಲಿ ಸತ್ತನಾದರೆ
ಕುಂಭೀಪಾತಕ ನಾಯಕ ನರಕ ತಪ್ಪದು
ಕೂಡಲ ಚೆನ್ನಸಂಗಮದೇವಾ. ।೧೨। [೮೮೭]

೧-೧ ನಾರಿಗೆಲ್ಪ (ಮೂ), ೨+ ನೀತಿ (ಮೂ).

೭೪
ಲಿಂಗ ಬಿದ್ದಿತು, ಲಿಂಗ ಬಿದ್ದಿತೆಂಬರಯ್ಯಾ,
ಲಿಂಗ ಬೀಳಲುಬಲ್ಲುದೆ? ಭೂಮಿ ತಾಳಲುಬಲ್ಲುದೆ?
ಕಮ್ಮಾರ ಕಡೆದು ಮಾಜಿದ. ಬೋಗಾಬಿ ತಂದು ಮಾಜಿದ,
ಗುರು ಕೊಂಡು ಮಾಜಿದ ಈ ಲಿಂಗ ಬಿದ್ದರೆ ಸಮಾಧಿ ಉಂಟೆ?
ಲಿಂಗವ ಕಟ್ಟಿದ ಗುರು ಸತ್ತರೆ ಸಮಾಧಿಯನೇಕೆ ಕೊಳ್ಳರೊ?
ಕೂಡಲ ಚೆನ್ನಸಂಗಮದೇವಾ. ।೧೩। [೮೮೯]

೭೫
ಗ್ರಾಮದ ಮಧ್ಯದ ಧವಳಾರದೊಳಗೆ
ಎಂಟು ಕಂಬ, ಒಂಬತ್ತು ಬಾಗಿಲ ಶಿವಾಲಯ ಇರುತ್ತಿರಲು,
ಅಲ್ಲಿ ಇಪ್ಪ ಸ್ವಯಂಬುನಾಥನ ಅಜಿಯದೆ ಎಲ್ಲಾ ಕೆಟ್ಟರಲ್ಲ.
ಆ ಸ್ವಯಂಬುನಾಥ ತನ್ನ ತಪ್ಪಿಸಿಕೊಂಡು ಕಲ್ಲಿನಾಥನ ತೋಜಿಸಿದ.
ಕಲ್ಲಿನಾಥಂಗೆ ಮೆಚ್ಚಿ ಮರುಳಾಗಿ ಹೋದರೆಲ್ಲ.
ದೇಗುಲವ ಹೊಕ್ಕು ಗರ್ಭಗೃಹವ ಅಜಿದು
ಅಲ್ಲಿ ಇಪ್ಪ ಸ್ವಯಂಭುನಾಥನನಜಿತರೆ ಕಲ್ಲಿನಾಥ ನಾಸ್ತಿ.
ಕೂಡಲ ಚೆನ್ನಸಂಗಮದೇವರೆಂಬ ಪ್ರಾಣಲಿಂಗವಿರ್ದುದ
ಎತ್ತಲೆಂದಜಿಯರು. ।೧೪। [೯೧೯]

೭೬
ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗವೆಂಬ
ಅಪಸ್ಮಾರಿಗಳ ಮಾತ ಕೇಳಲಾಗದು, ಅದೆಂತೆಂದಡೆ:
ಅಂಗದ ಮೇಲೆ ಒಬ್ಬ ಗಂಡ, ಮನೆಯೊಳಗೆ ಒಬ್ಬ ಗಂಡ,
ಹೊಸ್ತಿಲಲೊಬ್ಬ ಗಂಡ, ಮುಂಚೆಯಲೊಬ್ಬ ಗಂಡ!
ಇಂತೀ ಚತುರ್ವಿಧ ಗಂಡರು ಎಂಬ ಸತಿಯರ
ಲೋಕದವರು ಮೆಟ್ಟಿ ಮೂಗ ಕೊಯಿಯದೆ ಮಾಳ್ಪರೆ?
ಕೂಡಲ ಚೆನ್ನಸಂಗಮದೇವಾ
ಪ್ರಾಣಲಿಂಗವಿರ್ದುದ ಎತ್ತಲೆಂದಜಿಯರು. ।೧೫। [೮೯೮]

೭೭
ಮುಕ್ತಿಯೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕ
ಪ್ರಸಾದಸಾಹಿತ್ಯವಾಗದು.

ಪರವೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕ
ಜಂಗಮಸಾಹಿತ್ಯವಾಗದು.
[೧]ಲಿಂಗವ ಬೆರೆಸಿಹೆನೆಂದು ವಚನದಲ್ಲಿ ಹೊಳೆದು ಕಾಮಿಸುವನ್ನಕ್ಕ,
ಶಿವಲಿಂಗ ಸಾಹಿತ್ಯವಾಗದು.
ವಿಶೇಷ ತತ್ವ ಉಂಟೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕ
ಶ್ರೀಗುರುಸಾಹಿತ್ಯವಾಗದು.
ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ
ಇಂತೀ ಚತುರ್ವಿಧಲಿಂಗವ ಏಕೀಕರಿಸಿ
ಪ್ರಾಣಲಿಂಗವಾದ ಮಹಾಮಹಿಮಂಗೆ ಕಾಮಿಸಲಿಲ್ಲ, ಕಲ್ಪಿಸಲಿಲ್ಲ,
ಭಾವಿಸಲಿಲ್ಲ, ಚಿಂತಿಸಲಿಲ್ಲ.
ಆತ ನಿಶ್ಚಿಂತ, ಪರಮಸುಖಿ.
ಆತನಿರ್ದುದೇ ಕೈಲಾಸ, ಕೂಡಲ ಚೆನ್ನಸಂಗಮದೇವಾ. ।೧೬। [೧೦೦೫]

೭೮
ಲಿಂಗಮುಖವನಱಿತವಂಗೆ ಅಂಗವೆಂಬುದಿಲ್ಲ,
ಜಂಗಮಮುಖವನಱಿತವಂಗೆ ಸಂಸಾರವೆಂಬುದಿಲ್ಲ,
ಪ್ರಸಾದಮುಖವನಱಿತವಂಗೆ ಇಹಪರವೆಂಬುದಿಲ್ಲ,
ಈ ತ್ರಿವಿಧವು ಒಂದೇ ಎಂದು ಅಱಿತರೆ ಮುಂದೆ ಏನೂ ಇಲ್ಲ.
ಈ ತ್ರಿವಿಧವ ಶ್ರುತಿಸ್ಮೃತಿಗಳಱಿಯವು
ಕೂಡಲ ಚೆನ್ನಸಂಗಮದೇವಾ. ।೧೭।[೫೫೧]

೭೯
ಅಷ್ಟದಳ ಕಮಲದ ಮೇಲಣ ನಿಃಶೂನ್ಯದ
ವರ್ಮವನಱಿಯದ ಅಂಧಕರೆಲ್ಲ,
ಪ್ರಾಣಲಿಂಗ ಪ್ರಾಣಲಿಂಗವೆಂಬ ವ್ಯವಹಾರ ಸಂತೆಯ ಪಸರ !
ಅಂಗದ ಆಪ್ಯಾಯನಕ್ಕೆ ಲಿಂಗವ ಹುಡುಕಿನೋಡುವ ಭಂಗಿತರ ನೋಡಾ,
ಕೂಡಲ ಚೆನ್ನಸಂಗಮದೇವಾ. ।೧೮।[೮೯೭]

೮೦
ಉದಯ ಮಧ್ಯಾಹ್ನ ಅಸ್ತಮಯ ತ್ರಿಕಾಲದಲಿ
ಪತ್ರೆ ಪುಷ್ಪ ಅಗ್ಗವಣಿಯ ತಂದು ಮಜ್ಜನಕ್ಕೆ ನೀಡೇನೆಂದರೆ,

೧-೧ x (ಮೂ).

ನೆನೆಯದು, ಬಲಿಯದು, ಗಱಿಗಟ್ಟದಯ್ಯಾ,
ನೀರ ತೋಱಿದರೆ ಒಂದು ಹನಿಯನೂ ಮುಟ್ಟದು.
ನಿಮ್ಮ ಲಿಂಗದ ಪೂಜೆ ನಮ್ಮ ಜಂಗಮದ ಉದಾಸೀನ,
ಇದ ಕಂಡು, ನಾ ಬೆಱಗಾದೆ, ಕೂಡಲ ಚೆನ್ನಸಂಗಮದೇವಾ. । ೧೯ । [೧೫೦]

೮೧
ವೇದ ಘನವೆಂಬೆನೆ? ವೇದ ವೇಧಿಸಲಱಿಯದೆ ಕೆಟ್ಟವು,
ಶಾಸ್ತ್ರ ಘನವೆಂಬೆನೆ? ಶಾಸ್ತ್ರ ಸಾಧಿಸಲಱಿಯದೆ ಕೆಟ್ಟವು,
ಪುರಾಣ ಘನವೆಂಬೆನೆ? ಪುರಾಣ ಪೂರೈಸಲಱಿಯದೆ ಕೆಟ್ಟವು,
ಆಗಮ ಘನವೆಂಬೆನೆ? ಆಗಮ ಅಱಿಸಲಱಿಯದೆ ಕೆಟ್ಟವು.
ಅದೇನು ಕಾರಣವೆಂದರೆ:
ವೇದ ಶಾಸ್ತ್ರ ಪುರಾಣ ಆಗಮಂಗಳೆಲ್ಲ ತಮ್ಮತ[೧]ನ[೧]ವಿಡಿದು ಅಱಿಸಲಱಿಯವು.
ಇದಿರಿಟ್ಟುಕೊಂಡು [೨]ಕ[೨]ಡೆಹೋದರು,
ನರಲೋಕದ ನರರುಗಳಱಿಯರು, ಸುರಲೋಕದ ಸುರರುಗಳಱಿಯರು,
ಕೂಡಲ ಚೆನ್ನಸಂಗಮದೇವಾ, ನಿಮ್ಮ ಶರಣನೇ ಬಲ್ಲ, । ೨೦ । [೪೬೨]

೮೨
ಆ ಲಿಂಗವೆ ಅಮಳೋಕ್ಯವಾದ ಬಳಿಕ,
ಆ ಲಿಂಗವೆ ಮುಖಸಜ್ಜೆಯಾದ ಬಳಿಕ,
ಆ ಲಿಂಗವೆ ಭುಜಂಗನಾಗವಟ್ಟಿಗೆಯಾದ ಬಳಿಕ,
ಆ ಮಹಿಮನೆ ಪ್ರಾಣನಾಥನಾದ ಬಳಿಕ, ಇದಿರಿಟ್ಟು ಕೇಳಲುಂಟೆ?
ಅಂಗಲಿಂಗ ಸಂಬಂ[೩]ಧಿ[೩] ಶಿವಶರಣರ ಅಂಘ್ರಿಯಲ್ಲಿ ಇರಿಸಾ ಎನ್ನ,
ಕೂಡಲ ಚೆನ್ನಸಂಗಮದೇವಾ. । ೨೧ । [೯೭೫]

ಅಂತು ಪ್ರಾಣಲಿಂಗಿಸ್ಥಲ ಸಂಪೂರ್ಣ. ಮಂಗಳಮಹಾಶ್ರೀ.

❖❖

೧–೧ ನು (ಮೂ), ೨–೨ ಕಂ (ಮೂ), ೩–೩ ಧ (ಮೂ).

ಶರಣಸ್ಥಲ

೮೩

[1]ಎಲೆ ಅಯ್ಯಾ, ಸಜ್ಜನ ಸದ್ಭಾವಿಗಳ ಸಂಭಾಷಣೆಯಿಂದ
ಮಹಾನುಭಾವಿಗಳ ಕಾಣಬಹುದು.
ಮಹಾನುಭಾವಿಗಳ ಸಂಭಾಷಣೆಯಿಂದ ಶ್ರೀಗುರುವ ಕಾಣಬಹುದು.
ಶ್ರೀಗುರುವಿನ ಸಂಭಾಷಣೆಯಿಂದ ಲಿಂಗವ ಕಾಣಬಹುದು,
ಲಿಂಗದ ಸಂಭಾಷಣೆಯಿಂದ ಜಂಗಮವ ಕಾಣಬಹುದು,
ಜಂಗಮದ ಸಂಭಾಷಣೆಯಿಂದ ಆಚಾರವ ಕಾಣಬಹುದು,
ಆಚಾರದ ಸಂಭಾಷಣೆಯಿಂದ ಪ್ರಸಾದವ ಕಾಣಬಹುದು.
ಪ್ರಸಾದದ ಸಂಭಾಷಣೆಯಿಂದ ತನ್ನ ತಾ ಕಾಣಬಹುದು.
ನನಗೇನೂ ಬೇಡ, ನಿಮ್ಮ ಸಜ್ಜನ ಸದ್ಭಾವಿಗಳ ಸಂಭಾಷಣೆಯನೆ
ಎನಗೆ ಕರುಣಿಸೂದು
ಕೂಡಲ ಚೆನ್ನಸಂಗಮದೇವಾ. ।೧। [೧೦೯೫]

೮೪

ಅನುಭಾವ ಅನುಭಾವಯೆಂಬುದು
ನೆಲದ ಮಱೆಯ ನಿಧಾನ ಕಾಣಿರೇ.
ಅನುಭಾವ ಅನುಭಾವಯೆಂಬುದು
ಶಿಶು ಕಂಡ ಕನಸು ಕಾಣಿರೇ.

೧+ ಶ್ರೀ ಶ್ರೀ ಚೆನ್ನಬಸವಣ್ಣನವರ ಶರಣಸ್ಥಲದ ವಚನ ॥ (ಮೂ).

ಅನುಭಾವ ಅನುಭಾವಯೆಂಬುದು
ರಚ್ಚೆಯ ಮನೆಯೆ, ಸಂತೆಯ ಸುದ್ದಿಯೆ, ಬೀದಿಯ ಪಸರವೆ?
ಅನುಭಾವಯೆಂಬುದು ಮಹಾಘನವ[೧]ನು[೧] ಏನೆಂಬೆನಯ್ಯಾ,
ಆನೆ ಮಾನದೊಳಗಡಗುವದೇ? ದರ್ಪಣದೊಳಗಡಗುವದಲ್ಲದೆ.
ಕಂಡಕಂಡಲ್ಲಿ ಗೋಷ್ಠಿ, ಬಂದಬಂದಲ್ಲಿ ಪ್ರಸಂಗ,
ನಿಂದನಿಂದಲ್ಲಿ ಅನುಭಾವವ ಮಾಡುವ ಪಾತಕರ
ಎನಗೊಮ್ಮೆ ತೋಱದಿರಾ, ಕೂಡಲ ಚೆನ್ನಸಂಗಮದೇವಾ. । ೨ । [೮೧೭]

೮೫
ಕಾಮ ಬೇಡ ಕ್ರೋಧ ಬೇಡ
ಲೋಭ ಬೇಡ ಮೋಹ ಬೇಡ
ಮದ ಬೇಡ ಮತ್ಸರ ಬೇಡ.
ಕಾಮ ಬೇಕು ಕ್ರೋಧ ಬೇಕು
ಲೋಭ ಬೇಕು ಮೋಹ ಬೇಕು
ಮದ ಬೇಕು ಮತ್ಸರ ಬೇಕು.
[ಬೇಕು] ಎಂಬುದಕ್ಕೆ ಆವ ವಿಧ? ಬೇಡ ಎಂಬುದಕ್ಕೆ ಆವ ವಿಧ?
ಕಾಮ ಬೇಕು ಲಿಂಗದಲ್ಲಿ, ಕ್ರೋಧ ಬೇಕು ಕರಣಾದಿಗಳಲ್ಲಿ,
ಲೋಭ ಬೇಕು ಪಾದೋದಕ ಪ್ರಸಾದದಲ್ಲಿ,
ಮೋಹ ಬೇಕು ಗುರುವಿನಲ್ಲಿ, ಲಿಂಗದಲ್ಲಿ, ಜಂಗಮದಲ್ಲಿ,
ಮದ ಬೇಕು ಶಿವಭಕ್ತಿಯಲ್ಲದೆ ಭಕ್ತಿಯಿಲ್ಲ ಎಂಬಲ್ಲಿ,
ಮತ್ಸರ ಬೇಕು ಹೊನ್ನು ಹೆಣ್ಣು ಮಣ್ಣಿನಲ್ಲಿ.
ಕಾಮ ಬೇಡ ಪರಸ್ತ್ರೀಯರಲ್ಲಿ,
ಕ್ರೋಧ ಬೇಡ ಗುರುವಿನಲ್ಲಿ,
ಲೋಭ ಬೇಡ ತನು ಮನದಲ್ಲಿ,
ಮದ ಬೇಡ ಶಿವಭಕ್ತರಲ್ಲಿ,
ಮತ್ಸರ ಬೇಡ ಸಕಲಪ್ರಾಣಿಗಳಲ್ಲಿ.
ಇಂತೀ ಷಡ್ವಿಧವಳಿದು ಷಡ್ವಿಧವ ಹಿಡಿದರೆ
ಆತನೆ ಸಹಜ ಶರಣ ಕಾಣಾ, ಕೂಡಲ ಚೆನ್ನಸಂಗಮದೇವಾ. । ೩ । [೮೩]

೧–೧ x (ಮೂ).

೮೬

ಕಾಮಿ ಮಜ್ಜನಕ್ಕೆ ನೀಡಿದರೆ ರಕ್ತದ ಧಾರೆ,
ಕ್ರೋಧಿ ಪುಷ್ಪವನರ್ಪಿಸಿದರೆ ಕತ್ತಿಯ ಮೊನೆ,
ಲೋಭಿ ರುದ್ರಾಕ್ಷೆಯ ಧರಿಸಿದರೆ ಗಿಜಿಕೆ,
ಮೋಹಿ ವಿಭೂತಿಯ ಧರಿಸಿದರೆ ಸುಣ್ಣ[1]ದ ಗರ್ತ,[1]
ಮದಿ ಲಿಂಗವ ಕಟ್ಟಿದರೆ ಎತ್ತುಗಲ್ಲು,
ಮ[2]ತ್ಸ[2]ರಿ ಪಾದೋದಕ ಪ್ರಸಾದವ ಕೊಂಡರೆ ಕಾಳಕೂಟದ ವಿಷ.
ಕೂಡಲ ಚೆನ್ನಸಂಗಮದೇವರಲ್ಲಿ
ಮದಮತ್ಸರವ ಬಿಟ್ಟವರು ಅಪೂರ್ವ. ।೪। [೪೧೫]

೮೭

ಅರ್ಥೇಷಣ, ಪುತ್ರೇಷಣ, ದಾರೇಷಣತ್ರಯಂಗಳೂ ಬಿಟ್ಟು,
ಮಂಡೆಯ ಬೋಳಿಸಿಕೊಂಡು,
ಮರಳಿ ಹೊನ್ನಿಗೆಳಸಿದರೆ ಗುರುದ್ರೋಹ,
ಹೆಣ್ಣಿಗೆಳಸಿದರೆ ಶಿವದ್ರೋಹ,
ಮಣ್ಣಿಗೆಳಸಿದರೆ ಜಂಗಮದ್ರೋಹ.
ಇದಕ್ಕೆ ಸಾಕ್ಷಿ :
ಸ್ಥಾವರಂ ಭಿನ್ನದೋಷೇಣ ವ್ರತಭ್ರಂಶೇನ ಜಂಗಮಃ ।
ಉಭಯೋರ್ಭಿನ್ನಭಾವೇನ ನ ಚಾರ್ಚಂ ನ ಚ ವಂದನಂ ॥
ಎಂದುದಾಗಿ,
ಕೂಡಲ ಚೆನ್ನಸಂಗಮದೇವರಲ್ಲಿ ಹೊನ್ನು ಹೆಣ್ಣು ಮಣ್ಣು
ದೂರಕೆ ಬಿಟ್ಟ ಜಂಗಮ ಅಪೂರ್ವವಯ್ಯಾ. ।೫। [೧೦೭೯]

೮೮

ಉಲಿಗರ ಮಾತು, ಉಲಿಗರ ತೋಟಿಯೊಳಗುಂಟೆ ಲಿಂಗಾನುಭಾವ?
ಸಂತೆಯೊಳ[3]ಗೆ ಸಮಾಧಿಯುಂಟೆ?[3]
ಕೂಡಲ ಚೆನ್ನಸಂಗನ ಶರಣರ ಅನುಭಾವ,
ಹೊಱವೇಷದ ಉದರ ಪೋಷಕ
ವಾಚಾಳಕರೆಲ್ಲ ಅವರೆತ್ತ ಬಲ್ಲರೋ? ।೬। [೮೧೫]

೧–೧ ಗತ (ಮೂ), ೨–೨ ಚ್ಚ (ಮೂ), ೩–೩ ಗುಂಟೆ (ಮೂ).

೮೯

ವೃಕ್ಷಾಶ್ರಯದಲ್ಲಿ ಭಿಕ್ಷಾಪರಿಣಾಮಿಯಾಗಿ ಇದ್ದರೇನು?
ಕಾಲವಿರಹಿತನಾದರೇನು? ಕರ್ಮವಿರಹಿತನಾದರೇನು?
ಕೂಡಲ ಚೆನ್ನಸಂಗಮದೇವಾ, ನಿಮ್ಮ ಅನುಭಾವವನಱಿಯದೆ
ಎಷ್ಟು ಕಾಲ ಇದ್ದರೇನು? ನಷ್ಟ ಕಾಣಿರೋ ! ।೭।   [೮೧೯]

೯೦

ಕೋಡುಗಲ್ಲಿನ ಮೇಲೆ ತಪವಮಾಡುವರೆಲ್ಲ
ಒಂದು ದಿನದ ಗುರುಸೇವೆಗೆ ಸರಿ ಇಲ್ಲ.
ಅನಂತಕಾಲ ಗುರುಸೇವೆಯ ಮಾಡುವರೆಲ್ಲ
ಒಂದು ದಿನ ಲಿಂಗಪೂಜೆಗೆ ಸರಿ ಇಲ್ಲ.
ಅನಂತಕಾಲ ಲಿಂಗಪೂಜೆಯ ಮಾಡುವರೆಲ್ಲ
ಒಂದು ದಿನ ಜಂಗಮಕ್ಕೆ ತೃಪ್ತಿಬಡಿಸುವದಕ್ಕೆ ಸರಿ ಇಲ್ಲ.
[೧]ಅನಂತಕಾಲ ಬಡಿಸಿದ ಜಂಗಮತೃಪ್ತಿಯು[೧]
ಒಂದು ಕ್ಷಣ ಮಾತ್ರವಾದರೂ
ನಿಮ್ಮ ಶರಣರ ಅನುಭಾವಕ್ಕೆ ಸರಿಯಿಲ್ಲ ಕಾಣಾ,
ಕೂಡಲ ಚೆನ್ನಸಂಗಮದೇವಾ. ।೮।   [೧೧೧೦]

೯೧

ಪರುಷದ ಅರಸಿಂಗೆ ಕಬ್ಬುನದ ಪರಿವಾರದಂತೆ
ಮುನಿದೊಮ್ಮೆ ಮುಟ್ಟಿದರೂ ಸುವರ್ಣವಾಗುವದು ತಪ್ಪದು.
ಸ್ನೇಹದಿಂದ ಮುಟ್ಟಿದರೂ ಸುವರ್ಣವಾಗುವುದು ತಪ್ಪದು.
ಪರುಷ ಲೋಹದ ಸಂಗದಂತೆ
ಕೂಡಲ ಚೆನ್ನಸಂಗನ ಶರಣರ ಸನ್ನಿಧಿ. ।೯।   [೧೨೭]

೯೨

ಮಸಣವೈರಾಗ್ಯರು ಲಕ್ಷ ಲಕ್ಷ, ಪುರಾಣವೈರಾಗ್ಯರು ಲಕ್ಷ ಲಕ್ಷ,
ಪ್ರಸೂತಿವೈರಾಗ್ಯರು ಲಕ್ಷ ಲಕ್ಷ, ಪಿತ್ತವೈರಾಗ್ಯರು ಲಕ್ಷ ಲಕ್ಷ,
ಸ್ವಯಾನುಭಾವ ಸಮ್ಯಕ್‌ಜ್ಞಾನ ವೈರಾಗ್ಯರನೊಬ್ಬರನೂ ಕಾಣೆ
ಕೂಡಲ ಚೆನ್ನಸಂಗಮದೇವಾ. ।೧೦।   [೧೧೩]

೧–೧ x (ಮೂ).

೯೩

ಸೀಮರ ಕಂಡೆ, ನಿಸ್ಸೀಮರ ಕಂಡೆ,
[೧]ಭಾವರ ಕಂಡೆ, ಅನುಭಾವರ ಕಂಡೆ.
ಕೂಡಲ ಚೆನ್ನಸಂಗಮದೇವರಲ್ಲಿ
ತನುಸಾಹಿತ್ಯರಲ್ಲದೆ ಮನಸಾಹಿತ್ಯರನೊಬ್ಬರನೂ ಕಾಣೆ.[೨] । ೧೧ । [೮೨೧]

೯೪

ಪ್ರಹುಡಿ ಪರಿಹಾಸವುಳ್ಳ ಜಂಗಮವ
ರಾಜರುಗಳು ಪೂಜೆಯ ಮಾಡುವರು.
ವಿಷಯವುಳ್ಳ ಜಂಗಮವ
ವೇಶಿ ಪೂಜೆಯ ಮಾಡುವಳು,
ರಸವಿದ್ಯೆವುಳ್ಳ ಜಂಗಮವ
ಅಕ್ಕಸಾಲೆ ಪೂಜೆಯ ಮಾಡುವನು.
ವೇಷವುಳ್ಳ ಜಂಗಮವ
ಭಕ್ತರು ಪೂಜೆಯ ಮಾಡುವರು.
ಜ್ಞಾನವುಳ್ಳ ಜಂಗಮ ಆರಿಗೂ ಕಾಣಬಾರದು
ಕೂಡಲ ಚೆನ್ನಸಂಗಮದೇವಾ. । ೧೨ । [೧೯೭]

೯೫

ಲೋಕವಿರಹಿತ ಶರಣ, ಶರಣವಿರಹಿತ ಲೋಕ.
ಊರ ಹೊಂದ, ಕಾಡ ಹೊಂದ, ಆಪ್ಯಾಯನ ಭುಕ್ತಿವಿರಹಿತ.
ಕೂಡಲ ಚೆನ್ನಸಂಗಮದೇವರಲ್ಲಿ ಲಿಂಗನಿಜೈಕ್ಯನು. । ೧೩ । [೧೩೫೪]

೯೬

ಶರಣನಿರ್ಣಯವೆಂತೆಂದಡೆ:
ಕರವೆ ಕಪ್ಪರ, ಒಡಲೆ ಜೋಳಿಗೆ, ಆಕಾಶವೆ ಹೊದಿಕೆ, ಭೂಮಿಯೆ ಖಟ್ವಾಂಗ
ಸರ್ವಸಂಗನಿವೃತ್ತಿಯ ಮಾಡಿ ಬಸವಣ್ಣ ಹೋದುದನು ಕಂಡೆ,
ಕೂಡಲ ಚೆನ್ನಸಂಗಮದೇವಾ. । ೧೪ । [೧೩೦೪]

೧+ ಅನು (ಮೂ) ೨+ ಕೂಡಲ ಚೆನ್ನಸಂಗಮದೇವಾ(ಮೂ).

೯೭

ಸಮತೆಯೆಂಬ ಕಂತೆಯ ತೊಟ್ಟು,
ಸುಬುದ್ಧಿಯೆಂಬ ಟೋಪಾರಿಯನಿಕ್ಕಿ,
ವಿಷಯವೆಂಬ ಹಾವುಗೆಯ ಮೆಟ್ಟಿ,
ತಮಂಧವೆಂಬ ಕುಣಿಯಂ ಬೀಳದೆ,
ಮದವೆಂಬ ಚೇಳ ಮೆಟ್ಟದೆ,
ವೈರಾಗ್ಯವೆಂಬ ಕೊಱಡನೆಡಹದೆ,
'ಭಕ್ತಿಭಿಕ್ಷಾಂ ದೇಹಿ' ಎಂದು ಬಸವಣ್ಣ ಕಪ್ಪಡಿಗೆ ಬಂದ,
ಕೂಡಲ ಚೆನ್ನಸಂಗಮದೇವಾ. । ೧೫] [೧೦೪೯]

೯೮

ಸ್ಥಲವೆನ್ನೆ, ನಿಃಸ್ಥಲವೆನ್ನೆ,
ನಿರ್ಣಯವೆನಗಾದ ಬಳಿಕ, ನಿಃಷ್ಪತ್ತಿ ಎನಗಾದ ಬಳಿಕ
ಏನೆಂದಱಿಯೆ, ಎತ್ತಲೆಂದಱಿಯೆ.
ಇದು ಕಾರಣ, ಕೂಡಲ ಚೆನ್ನಸಂಗಮದೇವಾ
ನಿಮ್ಮ ಶರಣರ ಲಿಂಗೈಕ್ಯ[೧]ವೆ[೧]ಂದು ಎನ್ನೆ[೨] । ೧೬ । [೧೩೪೦]

೯೯

ಮೂಱುಲೋಕವರ ನಿದ್ರಾಂಗನೆ ಹೀರಿ ಹಿಂಡಿ,
ಪ್ರಾಣಕಾರ್ಪಣ್ಯವ ಮಾಡಿ ತಟ್ಟು ಗೆಡಹಿದಳು.
ಇವಳ ಗೆಲುವವರ ಆರನೂ ಕಾಣೆ,
ಇವಳ ಬಾಣಕ್ಕೆ ಗುರಿಯಾಗಿ ಏಳುತ್ತ ಬೀಳುತ್ತ
ಐದಾರೆ ಕೂಡಲ ಚೆನ್ನಸಂಗಮದೇವಾ. । ೧೭ । [೯೨]

೧೦೦

ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು,
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು.
ಅಷ್ಟವಿಧಾರ್ಚನೆ ಷೋಡಶೋಪಚಾರ ಎಂಬರಲ್ಲದೆ,
ತಮ್ಮನಿಕ್ಕಿ ನಿಧಾನವ ಸಾಧಿಸುವರ ಆರನೂ ಕಾಣೆ,
ಕೂಡಲ ಚೆನ್ನಸಂಗಮದೇವಾ. । ೧೮ । [೨೨೧]

೧-೧ ನೆ (ಮೂ), ೨+ ನಾಗಿ (ಮೂ)

೧೦೧

ಹಲಬರ ನುಂಗಿದ ಹಾವಿಂಗೆ ತಲೆಬಾಲವಿಲ್ಲ,
ಕೊಲುವದು ತ್ರೈಜಗವ ತನಗೆ ಪ್ರಳಯವಿಲ್ಲ,
ಸೂಕ್ಷ್ಮ ಶಿವಪದದಲಿ ನಡೆವುದು, ತನಗೆ ಬೇರೆ ಒಡಲಿಲ್ಲ
ಅಹಂ ಎಂಬ ಗಾರುಡವ ನುಂಗಿತು
ಕೂಡಲ ಚೆನ್ನಸಂಗಮದೇವಾ.[೧] ।೧೯।

೧೦೨

ಧೀರಸಂಪನ್ನರೆಲ್ಲ ಅಲಗಿನ [೨]ಮೊನೆಗೆ[೨] ಭಾಜನವಾದರು ನೋಡಯ್ಯಾ !
ಧನಸಂಪನ್ನರೆಲ್ಲ ರಾಜರಿಗೆ ಭಾಜನವಾದರು ನೋಡಯ್ಯಾ !
ರೂಪಸಂಪನ್ನರೆಲ್ಲರು ಸ್ತ್ರೀಯರಿಗೆ ಭಾಜನವಾದರು ನೋಡಯ್ಯಾ !
ಗುಣಸಂಪನ್ನರೆಲ್ಲರು ಬಂಧುಗಳಿಗೆ ಭಾಜನವಾದರು ನೋಡಯ್ಯಾ !
ಜ್ಞಾನಸಂಪನ್ನ ಬಸವಣ್ಣ ಲಿಂಗಕ್ಕೆ ಭಾಜನವಾದ ನೋಡಯ್ಯಾ,
ಕೂಡಲ ಚೆನ್ನಸಂಗಮದೇವಾ. ।೨೦। [೧೭೨]

೧೦೩

ಎಲೆ ಶಿವನೆ ನಿಮ್ಮಲ್ಲಿ ಸಾಲವಕೊಂಡು, ನಿಮ್ಮ ಶಿವಪುರವ ಹೊಗುವನಲ್ಲ.
ಪೃಥ್ವಿಯ ಸಾಲಕ್ಕೆ ಪೃಥ್ವಿಯನೆ ಕೊಟ್ಟು,
ಅಪ್ಪುವಿನ ಸಾಲಕ್ಕೆ ಅಪ್ಪುವನೆ ಕೊಟ್ಟು,
ತೇಜ[೩]ದ[೩] ಸಾಲಕ್ಕೆ ತೇಜವನೆ ಕೊಟ್ಟು,
ವಾಯುವಿನ ಸಾಲಕ್ಕೆ ವಾಯುವನೆ ಕೊಟ್ಟು,
ಇನ್ನಾರಿಗೂ ಪ್ರಸಾದವ ಕೊಡಲಿಲ್ಲವೆಂದು
ಕೂಡಲ ಚೆನ್ನಸಂಗಮದೇವರಲ್ಲಿ
ಹೂಳಿ ಹೊಕ್ಕ ಶರಣಂಗೆ ನಮೋ ನಮೋ ಎಂಬೆ. ।೨೧। [೧೨೪೮]

೧೦೪

ಪೃಥ್ವಿ ಅಪ್ಪು ತೇಜ ವಾಯು ಆಕಾಶ
ಇಂತೀ ಪಂಚಭೂತದಿಂದ ಒದಗಿದ
ತನುವಿನ ಭೇದವ ನೋಡಿರೆ ಅಯ್ಯಾ.
ಐದರ ವಿಶ್ರಾಂತಿಯಲ್ಲಿಯೇ ತನು ಸವೆದು ಹೋಗುತ್ತಿರಲು

---

೧ ಈ ವಚನ ಬಸವಣ್ಣನವರ ಹೆಸರಿನಲ್ಲಿ ಸಿಗುತ್ತದೆ – ೮೫೬ (ಸಂ). ೨–೨ x (ಮೂ), ೩–೩ ವಿನ (ಮೂ).

ಮತ್ತೆ ದೇವರ ಕಂಡೆನೆಂದರೆ ತನುವೆಲ್ಲಿಯದೊ?
ಅಕ್ಕಟಕ್ಕಟಾ ಲಿಂಗವೆ !
ಜಡದೇಹಿಗಳೆಲ್ಲಾ ಜಡನನೆ ಪೂಜಿಸಿ ಹತ್ತಿದರಲ್ಲಾ ಕೈಲಾಸದ ಬಟ್ಟೆಯಾ.
ಹೋ ಹೋ ಅಲ್ಲಿಯೂ ಪ್ರಳಯ ಬಿಡದು !
ನಾ ನನ್ನ ಅಚಲಲಿಂಗವ ಸೋಂಕಿ ಸ್ವಯಾನುಭಾವ ಸಮ್ಯಕ್‌ಜ್ಞಾನದಿಂದ
ಕೈಲಾಸದ ಬಟ್ಟೆ ಹಿಂದಾಗಿ ನಾ ಬಯಲಾದೆ,
ಕಾಣಾ, ಕೂಡಲ ಚೆನ್ನಸಂಗಮದೇವಾ. । ೨೨ । [೧೩೦೮]

ಅಂತು ಶರಣಸ್ಥಲ ಸಂಪೂರ್ಣ, ಮಂಗಳಮಹಾಶ್ರೀ.

❖❖

೧–೧ ಸ (ಮೂ).

ಐಕ್ಯಸ್ಥಲ

೧೦೫

[೧]ವಚನಾರಂಭದ ನುಡಿಯ ಕಲಿತವರೆಲ್ಲ ಅನುಭಾವಿಗಳಪ್ಪರೆ?
ಅಷ್ಟಾಸೀತಿ ತೀರ್ಥಂಗಳ ಮೆಟ್ಟಿದವರೆಲ್ಲ ತೀರ್ಥವಾಸಿಗಳಪ್ಪರೆ?
ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಿವವರೆಲ್ಲ
ಲಿಂಗಾರ್ಚಕರಪ್ಪರೆ? ಅಲ್ಲ,
ಇಂತು ಲಾಂಛನವ ಹೊತ್ತು ಕಾಂಚಾಣಕ್ಕೆ ಕೈಯ ನೀಡುವ
ಲಾಂಛನ ಭಂಡರ ಮೆಚ್ಚುವನೆ ಕೂಡಲ ಚೆನ್ನಸಂಗಮದೇವ? । ೧ । [೪೧೩]

೧೦೬

ನಿರಾಳ ನಿಶ್ಶೂನ್ಯಲಿಂಗಕ್ಕೆ ಶರಣರು ತಮ್ಮ ತನುಮನವ ಕೊಡುವುದು ಕರ್ಮ,
ಇರಿಸಿಕೊಂಡು ಇರ್ಪುದು ಕರ್ಮ.
ಈ ಉಭಯ ನಾಸ್ತಿಯಾಗದ ಸುಳುಹು, ಮುಂದೆ ಕಾಡುವುದು ಕಾಣಾ,
ಕೂಡಲ ಚೆನ್ನಸಂಗಮದೇವಾ. । ೨ । [೬೭೨]

೧೦೭

ಒಳಗೆ ಪ್ರಾಣಲಿಂಗ, ಹೊಱಗೆ ಅಂಗಲಿಂಗ ಇದೇನಯ್ಯಾ?
ಮನಕೆ ಮನ ನಾಚದು, ನಾಚದು.
ಎರಡಱ ಬಳಿವಿಡಿದು ಮಱೆಗೊಂಡಾಡುವದೇನಯ್ಯ?
ಈ ಎರಡಱ ನಿರ್ಣಯಕ್ಕೆ ಅದು ಒಂದೆ ಎಂದು ಅಱಿದರೆ
ಅದೇ ಪದ, ಕೂಡಲ ಚೆನ್ನಸಂಗಮದೇವಾ. । ೩ । [೧೦೫೭]

೧+ ಶ್ರೀ ಸಾಂಬಶಿವಾಯ ನಮಃ ॥ ಚೆನ್ನಬಸವಣ್ಣವರ ಐಕ್ಯಸ್ಥಲದ ವಚನ ॥ (ಮೂ).

೧೦೮
ಶಿವಯೋಗಿ ನಿಭ್ರಾಂತ, ಕಾಲಕಲ್ಪಿತನಲ್ಲ, ಕರ್ಮವಿರಹಿತನಲ್ಲ.
ವಿಧಿ [1][ವಿಲಾಸ][1] ಪುಣ್ಯಫಲ ಕರ್ಮಕಾಯನು ಅಲ್ಲ.
ಶರಣ ಅವರವರ ಬೆರಸಿಪ್ಪ, ತನ್ನ ಪರಿ ಬೇಱೆ.
ಶರಣ ನಿರಂತರ ಶುಚಿ, ಕೂಡಲ ಚೆನ್ನಸಂಗಯ್ಯಾ
ಶರಣ ಪ್ರಪಂಚಿಗಳಂ ಬೆರಸಿಪ್ಪ, ತನ್ನ ಪರಿ ಬೇಱೆ. । ೪ । [೧೨೮೦]

೧೦೯
ಕಿನ್ನರರು, ಕಿಂಪುರುಷರು, ಸಿದ್ಧವಿದ್ಯಾಧರರೆಂಬ ಮೂಱು ತಲೆಯವರು ಬಂದು,
ಮೂಱಿಲಗಿನ ನಡುವಣ ಕೀಲ ಕಳಚಿದರೆ
ಕೂಡಲ ಚೆನ್ನಸಂಗಯ್ಯನೆಂಬೆ, ಆ ಮಹಾತ್ಮನ. । ೫ । [೧೨೨೦]

೧೧೦
ಒಂದಕೊಂಬತ್ತ ನುಡಿದು, ಕಣ್ಣ ಕೆಂಪಗೆ ಮಾಡಿ,
ಮುಂದಿಕ್ಕಿ ಕೆಲೆದು ಕುಣಿವವರಿಗೆ
ನಾನಂಜುವೆ, ನಾನಂಜುವೆ, ನಾ ಓಸರಿಸುವೆ, ನಾನೋಡಿದೆನೆಂಬೆ,
ಭಂಗವಾದರೂ ಆಗಲಿ, ಕೂಡಲ ಚೆನ್ನಸಂಗಯ್ಯನ ಶರಣ,
ಅನುಭಾವವಿಲ್ಲದವರ ಹೊಲ ಮೇರೆಯ ಬಿಟ್ಟು ಓಡುವೆನಯ್ಯಾ.[2] । ೬ ।

೧೧೧
ಸಗಣಿಯ ಬೆನಕನ ಮಾಡಿ ಸಂಪಗೆಯರಳಲ್ಲಿ ಪೂಜಿಸಿದರೆ
ಗಂಜಳ ನಾರುವದಲ್ಲದೆ ರಂಜನೆ ಇಲ್ಲಯ್ಯಾ.
ಮಣ್ಣ ಪ್ರತುಮೆಯ ಮಾಡಿ ಮಜ್ಜನಕ್ಕೆರೆದರೆ
ನಿಚ್ಚನಿಚ್ಚ ಕಾಲ ಕೆಸರಲ್ಲದೆ ನಿಚ್ಚಳವಿಲ್ಲಯ್ಯಾ.
ಕಲ್ಲ ಪ್ರತುಮೆಯ ಮಾಡಿ ಲೋಕದ ಮಾನವರಿಗೆ ಶಿವದೀಕ್ಷೆಯ ಕೊಟ್ಟರೆ
ಕೆಟ್ಟವ ಭಕ್ತನಹನೆ ಕೂಡಲ ಚೆನ್ನಸಂಗಮದೇವಾ?[3] । ೭ ।

೧೧೨
ಮಂಡೆ ಮಾಸಿದರೆ ಮಹಾಮಜ್ಜನವ ಮಾಡುವದು.
ವಸ್ತ್ರ ಮಾಸಿದರೆ ಮಡಿವಾಳರಿಗಿಕ್ಕುವದು.

೧–೧ ವಾಸ (ಮೂ), ೨+ ಈ ವಚನ ಬಸವಣ್ಣನವರ ಹೆಸರಿನಲ್ಲಿಯೂ ಸಿಗುತ್ತದೆ (ಮೂ), ೩ ಈ ವಚನ ಬಹುಶಃ ಬಸವಣ್ಣನವರದಾಗಿದೆ (ಸಂ).

ಮನದ ಮೈಲಿಗೆಯ ತೊಳೆಯಬೇಕಾದರೆ
ಕೂಡಲ ಚೆನ್ನಸಂಗಯ್ಯನ ಶರಣರ ಅನುಭಾವವ ಮಾಡುವದು. ।೮। [೯೯]

೧೧೩
ಸಜ್ಜನ ಸದ್ಭಾವಿ ಅನ್ಯರಲ್ಲಿ ಕೈಯಾಂತು ಬೇಡ,
ಲಿಂಗವ ಮುಟ್ಟಿದ ಕೈ ಮೀಸಲು.
ಕಂಗಳಲೊಸೆದು ನೋಡ, ಪರರ ವಧುವ,
ಮನದಲ್ಲಿ ಅನ್ಯವ ನೆನೆಯ.
ಮನದಲ್ಲಿ ಆಸೆಯ ಮಾಡ, ಲಿಂಗವ ಬೇಡ,
ಲಿಂಗದ ಹಂಗನೊಲ್ಲ,
ಕೂಡಲ ಚೆನ್ನಸಂಗಮದೇವಾ
ನಿಮ್ಮ ಶರಣರ ಮನದಲ್ಲಿ ವಂಚನೆಯಿಲ್ಲ. ।೯। [೩೬೦]

೧೧೪
ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಛೆಯ,
ಒಲ್ಲೆನಯ್ಯಾ ಪರಸತಿಯ ಸಂಗವ, ಬಲ್ಲೆನಯ್ಯಾ ಮುಂದೆ ತೊಡಕೆಂಬುದ.
ಬಳ್ಳದ ಬಾಯಂತೆ ಒಂದೆ ಮನವ ಮಾಡಿ, ನಿಲ್ಲೆಂದು ನಿಲ್ಲಿಸಯ್ಯಾ
ಕೂಡಲ ಚೆನ್ನಸಂಗಮದೇವಾ.[೧] ।೧೦।

೧೧೫
ಲಜ್ಜೆಗೆಟ್ಟೆ, ನಾಣುಗೆಟ್ಟೆ, ಕುಲಗೆಟ್ಟೆ,
ದೇವಾ ನಿಮ್ಮ ಪೂಜಿಸಿ ಭವಗೆಟ್ಟೆ,
ಲಿಂಗಾ ನಿಮ್ಮ ಪೂಜಿಸಿ ಕುಲಗೆಟ್ಟೆ,
ಕೂಡಲ ಚೆನ್ನಸಂಗಮದೇವರ ಮುಟ್ಟಿ ಹುಟ್ಟುಗೆಟ್ಟೆನು.[೨] ।೧೧।

೧೧೬
ಅರ್ಥಪ್ರಾ[೩]ಣಾಭಿಮಾನ[೩]ಶಿವನೊಪ್ಪಿಸಿದಲ್ಲಿ ಭಕ್ತನಪ್ಪನೆ? ಅಲ್ಲ.
ಆದಿರುದ್ರನ ಮಗಳು ಆದಿಶಕ್ತಿ,
ಆದಿಶಕ್ತಿಯ ಮಗ ವಿಷ್ಣು,
ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ.

---

೧ ಈ ವಚನ ಬಸವಣ್ಣನವರ ಹೆಸರಿನಲ್ಲಿ ಸಿಗುತ್ತದೆ (ಮೂ), ೨ ಈ ವಚನ ಬಸವಣ್ಣನವರ ಹೆಸರಿನಲ್ಲಿ ಸಿಗುತ್ತದೆ (ಸಂ). ೩-೩ ಣ (ಮೂ).

ಈ ತೊತ್ತು ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೆ? ಅಲ್ಲ.
ಎನ್ನ ಮನದೊಡೆಯ ಮಹಾದೇವಾ, ನಿಮ್ಮ ಮನವ ನಿಮಗೊಪ್ಪಿಸಿ ಶುದ್ಧ,
ಕೂಡಲ ಚೆನ್ನಸಂಗಮದೇವಾ.[1] । ೧೨ ।

೧೧೭

ಅರ್ಪಿತ ಅರ್ಪಿತ ಎನುತಿಹರೆಲ್ಲ, ಅರ್ಪಿತ ಆವುದು ಹೇಳಿರೇ,
ಕಾಯಾರ್ಪಿತವೆಂಬಿರೆ? ಅಳಿವಿನೊಳಗಾಯಿತು,
ಜಿಹ್ವಾರ್ಪಿತವೆಂಬಿರೆ? ರುಚಿಗೊಳಗಾಯಿತು,
ಭಾವಾರ್ಪಿತವೆಂಬಿರೆ? ಭ್ರಮೆಯೊಳಗಾಯಿತು,
ಸರ್ವವೂ ಶಿವನಾಜ್ಞೆ ಎಂಬಿರೆ? ಭ್ರಮೆ ಬಿಡದು,
ಅರ್ಪಿಸಬೇಕು ಅರ್ಪಿಸಿದಲ್ಲದೆ ಪ್ರಸಾದವಾಗದು,
ಅರ್ಪಿತದ ವರ್ಮದ ಸಕೀಲವ ಕೂಡಲ ಚೆನ್ನಸಂಗಾ
ನಿಮ್ಮ ಶರಣರೇ ಬಲ್ಲರು. । ೧೩ । [೧೧೯]

೧೧೮

ಪ್ರಸಾದ ಪ್ರಸಾದವೆನುತಿಹರೆಲ್ಲಾ, ಪ್ರಸಾದದ ಕುಳವೆಂತಿರ್ಪುದು ಹೇಳಾ?
ಇಕ್ಕುವಾತ ಗುರುವಲ್ಲ, ಕೊಂಬಾತ ಶಿಷ್ಯನಲ್ಲ.
ಇಕ್ಕು[1]ವು[1]ದು ಕೊಂಬುದು ಅಂಜಿಕೆಯಿಂದ ಎಂಜಲು.
ಎಂತೆಂದಡೆ:
ತನುವನಂಡಲೆದು ಮನವ ಶುದ್ಧೈಸಿ [2]ಈಡಾ[2] ಪಿಂಗಳ ನಾಳವಂ ಕಟ್ಟಿ,
ಸುಷುಮ್ನಾನಾಳದಲ್ಲಿ ಪವನನೆಂಬ ಪರಿಚಾರಕನಿಂದ
ಅಗ್ನಿಯೆಂಬ ಸುವಾರವನೆಬ್ಬಿಸಿ,
ಮನಸ್ಥಲದೊಳಗಿಪ್ಪ ಉತ್ತಮ ಪ್ರಸಾದವ ತಾಗಲು,
ದಳದಳನೆ ಇಳಿದು ಬಪ್ಪಾಗ, ಮನವೆಂಬ ಪ್ರಸಾದಿ ಎದ್ದು ಇದಿರಾಂತುಕೊಂಡು,
ಉಂಡು ಭೋಗಿಸಿ ಐಕ್ಯವಾಗಬಲ್ಲರೆ ಇದೇ ಸತ್ಯಪ್ರಸಾದ, ಇದೇ ನಿತ್ಯ ಪ್ರಸಾದ.
ಇಂತಲ್ಲದೆ ಪುಣ್ಯ ಉಳ್ಳವರ ನೋಡಿ ಬದುಕಿಸಿಕೊಂಬ
ಲೆಂಕ ಪ್ರಸಾದಿಗಳ ಮೆಚ್ಚುವನೆ
ನಮ್ಮ ಕೂಡಲ ಚೆನ್ನಸಂಗಮದೇವ? । ೧೪ । [೯೯೭]

---

೧. ಈ ವಚನ ಬಸವಣ್ಣನವರ ಹೆಸರಿನಲ್ಲಿ ಸಿಗುತ್ತದೆ (ಸಂ). ೨-೨ x (ಮೂ). ೩-೩ x (ಮೂ).

೧೧೯

ಭಕ್ತರಾದೆವೆಂಬರು, ಭಕ್ತಿಯ ಪರಿಯನಱಿಯರು, ಭಕ್ತರೆಂತಾದಿರಯ್ಯಾ?
ಮಾಹೇಶ್ವರರಾದೆವೆಂಬರು, ಆದಿ ಅನಾದಿಯನಱಿಯದನ್ನಕ್ಕ
ಮಹೇಶ್ವರರೆಂತಾದಿರಯ್ಯಾ?
ಪ್ರಸಾದಿಗಳಾದೆವೆಂಬರು, ಪ್ರಸಾದದ ಅರ್ಪಿತ ಆಯತವನಱಿಯದೆ
ಪ್ರಸಾದವ ಗ್ರಹಿಸದನ್ನಕ್ಕ ಪ್ರಸಾದಿಗಳೆಂತಾದಿರಯ್ಯಾ?
ಪ್ರಾಣಲಿಂಗಿಗಳಾದೆವೆಂಬರು, ನಡೆ ನುಡಿ ಭಾವ ಎರಡಾಗಿದೆ,
ಪ್ರಾಣಲಿಂಗಿಗಳೆಂತಾದಿರಯ್ಯಾ?
ಶರಣನಾದೆವೆಂಬರು, ಇಂದ್ರಿಯಂಗಳ ಭಿನ್ನವಿಟ್ಟು ವ[೧]ರ್ತಿ[೧]ಸುವನ್ನಕ್ಕ
ಶರಣರೆಂತಾದಿರಯ್ಯಾ?
ಐಕ್ಯವಾದೆವೆಂಬರು, ಧರ್ಮಕರ್ಮ ಚತುರ್ವಿಧದ ಫಲಪದ ಮೋಕ್ಷ
ಜನನ ಮರಣ ಬೆನ್ನಬಿಡದಿದೆ, ಐಕ್ಯರೆಂತಾದಿರಯ್ಯಾ?
ಕೂಡಲ ಚೆನ್ನಸಂಗಮದೇವರಲ್ಲಿ ಈ ಷಡುಸ್ಥಲದ ನಿರ್ಣಯವ
ನಿಮ್ಮ ಶರಣನೇ ಬಲ್ಲ. । ೧೫ । [೧೩೭೫]

೧೨೦

ಭವಿಯ ಸಂಗವುಳ್ಳನ್ನಬರ ಭಕ್ತನಲ್ಲ,
ಪರಧನ ಪರಸತಿಯಾಸೆಯುಳ್ಳನ್ನಬರ ಮಾಹೇಶ್ವರನಲ್ಲ,
ಸಕಲ ಪದಾರ್ಥವನೆಲ್ಲ ಗ್ರಹಿಸುವನ್ನಕ್ಕ ಪ್ರಸಾದಿಯಲ್ಲ,
ಪ್ರಾಣಲಿಂಗದಲ್ಲಿ ಸ್ವಸ್ಥಿರವಾಗದನ್ನಕ್ಕ ಪ್ರಾಣಲಿಂಗಿಯಲ್ಲ,
ಕರಣಾದಿಗಳು ವ[೨]ರ್ತಿ[೨]ಸುವನ್ನಕ್ಕ ಶರಣನಲ್ಲ,
ಜನನ ಮರಣವುಳ್ಳನ್ನಕ್ಕ ಐಕ್ಯನಲ್ಲ.
ಕೂಡಲ ಚೆನ್ನಸಂಗಮದೇವರಲ್ಲಿ ಈ ಷಡುಸ್ಥಲದ
ನಿರ್ಣಯವ ಬಸವಣ್ಣನೆ ಬಲ್ಲ. । ೧೬ । [೧೨೫೧]

೧೨೧

ಲಾಂಛನದೆಡೆಯಲ್ಲಿ ಹುಸಿಯ ಸಂ[೩]ಪಾ[೩]ದಿಸುವನ್ನಕ್ಕ ಭಕ್ತನಲ್ಲ,
ಹುರುಡುವಿಡಿದು ಆಡುವನ್ನಕ್ಕ ಮಾಹೇಶ್ವರನಲ್ಲ,
ಆದಿ ವ್ಯಾಧಿವುಳನ್ನಕ್ಕ ಪ್ರಸಾದಿಯಲ್ಲ,
ಖತಿವುಳ್ಳನ್ನಕ್ಕ ಪ್ರಾಣಲಿಂಗಿಯಲ್ಲ,

೧-೧ ರ್ಚಿ (ಮೂ), ೨-೨ ರ್ಚಿ (ಮೂ), ೩-೩ x(ಮೂ).

ಸತಿವುಳ್ಳನ್ನಕ್ಕ ಶರಣನಲ್ಲ,
ಪತಿವುಳ್ಳನ್ನಕ್ಕ ಐಕ್ಯನಲ್ಲ.
ಕೂಡಲ ಚೆನ್ನಸಂಗಮದೇವರಲ್ಲಿ
ಈ ಷಡುಸ್ಥಲದ ನಿರ್ಣಯ ಸಾಮಾನ್ಯರಿಗಳವೆ? ।೧೭। [೧೩೬೦]

೧೨೨
ಭಕ್ತನಾದರೆ ಕಿಂಕಿಲನಾಗಿ ಇರಬೇಕು,
ಮಾಹೇಶ್ವರನಾದರೆ ಆದಿ ವ್ಯಾಧಿ ಇಲ್ಲದೆ ಇರಬೇಕು,
ಪ್ರಸಾದಿಯಾದರೆ ಒಡಲಗುಣ ವಿರತನಾಗಿ ಇರಬೇಕು,
ಪ್ರಾಣಲಿಂಗಿಯಾದರೆ ಬಾಹ್ಯವಿಚಾರವಿಲ್ಲದೆ ಇರಬೇಕು,
ಶರಣನಾದರೆ ನಿಸ್ಸಂಗಿಯಾಗಿ ಇರಬೇಕು.
ಐಕ್ಯನಾದರೆ ಬಯಲು ಬಯಲು ಬಯಲಾಗಿರಬೇಕು.
ಕೂಡಲ ಚೆನ್ನಸಂಗಮದೇವರಲ್ಲಿ
ಈ ಷಡುಸ್ಥಲದ ನಿರ್ಣಯವನಱಿಯದೆ
ಲಿಂಗಸಂಗವೇದ್ಯರೆನಿಸಿಕೊಳ್ಳಲಾಗದು. ।೧೮। [೧೩೬೭]

೧೨೩
ಭಕ್ತನಾದರೆ ತನುಮನದ ಮೇಲಣಾಸೆ ಅಳಿದು ಉಳಿದಿರಬೇಕು,
ಮಾಹೇಶ್ವರನಾದರೆ ಪರಧನ ಪರಸತಿಯಾಸೆ ಅಳಿದು ಉಳಿದಿರಬೇಕು,
ಪ್ರಸಾದಿಯಾದರೆ ಪ್ರಸಾದವ ಕೊಂಡ ಕಾಯ ಅಳಿಯದೆ ಉಳಿದಿರಬೇಕು,
ಪ್ರಾಣಲಿಂಗಿಯಾದರೆ ಸುಖದುಃಖಾದಿಗಳೆಲ್ಲ ಮಱೆದು
ಪ್ರಾಣಲಿಂಗದಲ್ಲಿ [1]ಸು[1]ಸ್ಥಿರನಾಗಿ ಇರಬೇಕು,
ಶರಣನಾದರೆ ಸತಿಪತಿಭಾವವಳಿದು ಉಳಿದಿರಬೇಕು,
ಐಕ್ಯನಾದರೆ ಬಯಲು ಬಯಲಾಗಿ ಇರಬೇಕು,
ಕೂಡಲ ಚೆನ್ನಸಂಗಮದೇವರಲ್ಲಿ
ಈ ಷಡುಸ್ಥಲದ ನಿರ್ಣಯ ಸಾಧಕರಿಗಳವೆ? ಅಲ್ಲ, ನಿಲ್ಲಿ,
ಪೂರ್ವಸಂಸ್ಕಾರದ ಸಹಜದ ಒಡೆಯರಿಗಲ್ಲದೆ. ।೧೯। [೧೨೫೦]

೧-೧ ಸ್ವ (ಮೂ).

೧೨೪

ಹುಸಿ ಉಳ್ಳವ ಭಕ್ತನಲ್ಲ, ವಿಷಯ ಉಳ್ಳವ ಮಾಹೇಶ್ವರನಲ್ಲ,
ಆಸೆ ಉಳ್ಳವ ಪ್ರಸಾದಿಯಲ್ಲ, ಜೀವಗುಣ ಉಳ್ಳವ ಪ್ರಾಣಲಿಂಗಿಯಲ್ಲ,
ತನುಗುಣ ಉಳ್ಳವ ಶರಣನಲ್ಲ, ಜನನ ಮರಣ ಉಳ್ಳವ ಐಕ್ಯನಲ್ಲ.
ಈ ಆಱಱ ಅಱಿವಿನ ಅರ್ಕದ ಸಂಪತ್ತಿನ ಭೋಗ ಹಿಂಗಿದರೆ
ಸ್ವಯಜಾತನೆಂಬೆ.
ಆ ದೇಹ ನಿಜದೇಹವೆಂಬೆ, ಆ ದೇಹ ಗುರುಗೋಹೇಶ್ವರನೆಂಬೆ.
ಆ ದೇಹ ಇಱಿದರಱಿಯದು, ತಱಿದರಱಿಯದು, ಹೊಯಿದರಱಿಯದು,
ಬಯ್ದರಱಿಯದು, ಸ್ತುತಿಸಿದರಱಿಯದು, ನಿಂದಿಸಿದರಱಿಯದು,
ಪುಣ್ಯವನಱಿಯದು, ಪಾಪವನಱಿಯದು, ಸುಖವನಱಿಯದು,
ದುಃಖವನಱಿಯದು, ಕಾಲವನಱಿಯದು, ಕರ್ಮವನಱಿಯದು,
ಜನನವನಱಿಯದು, ಮರಣವನಱಿಯದು.
ಇಂತೀ ಷಡುಸ್ಥಲದೊಳಗೆ ತಾ ಒಂದು ನಿಜವಿಲ್ಲವಾಗಿ
ನಾವು ಹಿರಿಯರು, ನಾವು ಗುರುಗಳು,
ನಾವು ಸಕಲಶಾಸ್ತ್ರಸಂಪನ್ನ ಷಡುಸ್ಥಲದ ಜ್ಞಾನಿಗಳು,
ಎಂಬ ಮೂಕೊಱೆಯರ ಮೆಚ್ಚುವನೆ ಕೂಡಲ ಚೆನ್ನಸಂಗಮದೇವ?
[೧]ಕುತ್ತಿಗೆಯುದ್ದ[೧] ಹೂಳಿಸಿಕೊಂಡು ಮುಗಿಲುದ್ದಕ್ಕೆ ಹಾರಲುಂಟೆ? । ೨೦ । [೪೮೮]

ಐಕ್ಯಸ್ಥಲ ಸಮಾಪ್ತಿ, ಮಂಗಳಮಹಾಶ್ರೀ.[೨]

❖❖

೧–೧ ಕುತಿಗುಧಾ (ಮೂ), ೨+ ಚೆನ್ನಬಸವಣ್ಣನವರ ಷಡುಸ್ಥಲದ ನಿರ್ಣಯ, ಭಕ್ತಿಸ್ಥಲ ಒಂದು, ಮಹೇಶ್ವರ ಸ್ಥಲ ಎರಡು, ಪ್ರಸಾದಸ್ಥಲ ಮೂರು, ಪ್ರಾಣಲಿಂಗಿಸ್ಥಲ ನಾಲ್ಕು, ಶರಣಸ್ಥಲ ಐದು, ಐಕ್ಯಸ್ಥಲ ಆರು, ಆರು ಸ್ಥಲದ ನಿರ್ಣಯವು, ಭಕ್ತಂಗಾದರೂ ಆಗಲಿ, ಜಂಗಮಕ್ಕಾದರೂ ಆಗಲಿ, ಇದರ ಅನುಭಾವವನಱಿತು ನಡಕೊಂಬಂಥ ಮಹಾತ್ಮರಿಗೆ ಶಿವನೊಲಿವನು ಕೂಡಲ ಚೆನ್ನಸಂಗಮದೇವಾ।೨೧। ಅಂತೂ ಷಡುಸ್ಥಲದ ಸ್ಥಲ ಆರು ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಪಿಂಗಳ ಸಂವತ್ಸರದ ವಂಸಕ ಶಕ ಶುದ್ಧದಲು ಶ್ರೀ ಶ್ರೀ ಶ್ರೀ.

ವಚನಗಳ ಅಕಾರಾದಿ

೧

ಚೆನ್ನಬಸವರಾಜದೇವರ ಷಡುಸ್ಥಲವಚನ

ಆ

❖❖

೨
ಚೆನ್ನಬಸವೇಶ್ವರದೇವರು ನಿರೂಪಿಸಿದ ಅನುಭಾವ ಷಟ್ಸ್ಥಲದ ವಚನಂಗಳು

❖❖

೩

ಚೆನ್ನಬಸವಣ್ಣನವರ ಷಡುಸ್ಥಲದ ನಿರ್ಣಯ

❖❖

ಡಾ. ಶ್ರೀ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ಸಿರಿಗೆರೆ ಇವರ
'ವಚನ ಸಾಹಿತ್ಯ ದತ್ತಿನಿಧಿ' ಪ್ರಕಟನೆ

ಸಿದ್ಧರಾಮಯ್ಯದೇವರ ವಚನಗಳು

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಡಾ. ಸಾ. ಶಿ. ಮರುಳಯ್ಯ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು-೧೮

೧೯೯೮

*

ಸಂಪಾದಕರ ಮಾತು

ವಚನಸಾಹಿತ್ಯ ಹೂತಿಟ್ಟ ನಿಧಿಯಲ್ಲ, ಅಮೂಲ್ಯ ವಾಙ್ಮಯವನ್ನು ಗರ್ಭೀಕರಿಸಿಕೊಂಡಿರುವ ಗಣಿ. ಹೂತಿಟ್ಟ ಹಣವಾಗಿದ್ದಿದ್ದರೆ ಅದು ಬಳಕೆಗೆ ಸಿಕ್ಕು ಎಂದೋ ಬರಿದಾಗುತ್ತಿತ್ತು. ಅಂತಾಗಿಲ್ಲ, ಕಾರಣ ತೆಗೆದಂತೆಲ್ಲಾ ತೆರೆದುಕೊಳ್ಳುತ್ತಾ ಹೋಗುವುದಲ್ಲದೆ, ಪ್ರಯತ್ನಪಟ್ಟರೆ ಕೈಯಿಟ್ಟೆಡೆ ಸಿಕ್ಕುವ ತವನಿಧಿಯಾಗಿದೆ. ಕರ್ನಾಟಕದ ಮನೆ ಮಠಗಳಲ್ಲಿ ಸುಪ್ತವಾಗಿದೆ. ಅದನ್ನೆಬ್ಬಿಸಿ ಬೆಳಕಿಗೆ ತರುವ ಕ್ಷೇತ್ರಕಾರ್ಯ ಇನ್ನೂ ಆಗಬೇಕಾಗಿದೆ. ಆ ದಿಸೆಯಲ್ಲಿ ಫ.ಗು. ಹಳಕಟ್ಟಿಯವರದು ಸ್ತುತ್ಯ ಪ್ರಯತ್ನ. ಅದು ಇನ್ನೂ ಮುಂದುರಿಯಬೇಕು. ನಿಜಕ್ಕೂ ಅದು ಕನ್ನಡಕ್ಕೆ ಸಂದ ಸೇವೆ ಎಂದು ಭಾವಿಸಿ ನಡೆಸಿಕೊಟ್ಟರೆ, ಗೆದ್ದಲು ತಿಂದೊ, ಬೆಂಕಿ ಕಬಳಿಸಿಯೊ ಹೋಗಬಹುದಾದ ಅನೇಕ ಗ್ರಂಥಗಳ ಕಟ್ಟುಗಳು ಬದುಕಿಯಾವು.

ಪ್ರಸ್ತುತ 'ಸಿದ್ಧರಾಮಯ್ಯದೇವರ ವಚನಗಳು' ನಮಗೆ ಸಿಕ್ಕಿದ್ದು ತುಮಕೂರು ಜಿಲ್ಲಾ ತಿಪಟೂರು ತಾಲ್ಲೂಕು ಹೊನ್ನವಳ್ಳಿ ಗ್ರಾಮದ ಶ್ರೀ ಕರಿಸಿದ್ಧ ದೇವರ ಮಠದಲ್ಲಿ ಲಭ್ಯವಾದ 'ಎಲ್ಲಾ ಪುರಾತನರ ವಚನಗಳು' ಹೆಸರಿನ ಕಟ್ಟಿನಲ್ಲಿ. ಈ ಮಠದ ಅಧಿಪತಿಗಳು ಷ॥ ಬ್ರ॥ ಶ್ರೀ ಶಿವಪ್ರಕಾಶ ಮಹಾಸ್ವಾಮಿಗಳವರು. ಪೂಜ್ಯರು ತುಂಬು ಸಾಹಿತ್ಯಾಸಕ್ತರು. ಅವರು ಚಿಕ್ಕನಾಯಕನಹಳ್ಳಿ ತಾಲೂಕು ಕುಪ್ಪೂರು ಗದ್ದುಗೆ ಮಠಾಧೀಶರಾದ ಷ॥ ಬ್ರ॥ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ತಮ್ಮ ಮಠದಲ್ಲಿದ್ದ ಸುಮಾರು ೪೪೮ ಓಲೆ ಕಟ್ಟುಗಳನ್ನು ನಮಗೊಪ್ಪಿಸಿದರು. ಎಲ್ಲ ಕಟ್ಟುಗಳನ್ನೂ ಸ್ಥೂಲವಾಗಿ ಅವಲೋಕಿಸಿ, ಶೀರ್ಷಿಕೆ ಪಟ್ಟಿ ಸಿದ್ಧಪಡಿಸಿ, ಅವುಗಳನ್ನು ಒಂದೊಂದಾಗಿ ತೆಗೆದು ಪ್ರಕಟಿಸಬೇಕೆಂದು ಪೂಜ್ಯ ಶ್ರೀ ಶ್ರೀಗಳವರಲ್ಲಿ ಅರಿಕೆ ಮಾಡಿಕೊಂಡು ಬಂದೆವು. ಶ್ರೀ ಎಸ್. ಶಿವಣ್ಣನವರು ಒಂದು ಪುಟ್ಟ ತಾರಾವಳಿಯನ್ನು ಪ್ರಕಟಿಸಿದರು. ಸಾ. ಶಿ. ಮರುಳಯ್ಯ 'ಅಕ್ಕನ ವಚನಗಳು' ಎಂಬುದನ್ನು ಪ್ರಕಟಿಸಿದ್ದಾರೆ. ಮತ್ತೆ ಶತಮಾನಗಳ ಹಿಂದಿನ ಸೋಮೇಕಟ್ಟೆ ಮಠದ ಶ್ರೀ ಚೆನ್ನವೀರ ಸ್ವಾಮಿಗಳು ರಚಿಸಿ ಬಿಟ್ಟು ಹೋಗಿದ್ದ ಇಪ್ಪತ್ತೆರಡು ಧಾರ್ಮಿಕ ಗ್ರಂಥಗಳನ್ನು ಸಂಗ್ರಹಿಸಿ, ಡಾ. ಬಿ.ನಂಜುಂಡಸ್ವಾಮಿ, ಡಾ. ಸಾ.ಶಿ. ಮರುಳಯ್ಯ ಮತ್ತು ಶಿವಲಿಂಗಯ್ಯ ಇವರುಗಳ ಸಂಪಾದಕತ್ವದಲ್ಲಿ ಒಂದು ಸಮಗ್ರ ಗ್ರಂಥವಾಗಿ ಹೊರತರಲಾಯಿತು. ಈಗ ಅಲ್ಲಿ ದೊರೆತ 'ಸಿದ್ಧರಾಮಯ್ಯದೇವರ ವಚನ'ಗಳನ್ನು ಸಂಪಾದಿಸಿ ಪ್ರಕಟಿಸುತ್ತಿದ್ದೇವೆ.

ಈ ಎಲ್ಲಾ ಪುರಾತನ ವಚನಗಳ ಕಟ್ಟು ಅಪರೂಪದ್ದು. ಇದು ಆರು ಸಾವಿರ ವಚನಗಳ ಕಟ್ಟು. ಆದರೆ ೮೩ರಿಂದ ೧೬೭ ರ ವರೆಗಿನ ಗರಿಗಳನ್ನು ಯಾರೋ ತೆಗೆದುಕೊಂಡು ಹೋಗಿದ್ದಾರೆ. ಉಳಿದಿರುವ ಭಾಗದಲ್ಲಿ ಸಿದ್ಧರಾಮನ ೧೩೧೩ ವಚನಗಳಿವೆ. ಅವುಗಳನ್ನು ಇಲ್ಲಿ ಸಂಪಾದಿಸಿದ್ದೇವೆ. ಈ ಕೃತಿಯನ್ನಿತ್ತು ಆಶೀರ್ವದಿಸಿದ ಪೂಜ್ಯ ಗುರುದ್ವಯರಿಗೆ ಪ್ರಣಾಮಗಳನ್ನು ಅರ್ಪಿಸುತ್ತಿದ್ದೇವೆ.

ಈ ಕೃತಿಯು ಸಿರಿಗೆರೆ ಬೃಹನ್ಮಠಾಧೀಶರಾದ ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಕೃಪಾನುದಾನದಿಂದ ಹೊರಬರುತ್ತಿದೆ. ಪೂಜ್ಯರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇಟ್ಟಿರುವ ಒಂದು ಲಕ್ಷ ರೂಪಾಯಿ ದತ್ತಿ ಹಣದ ಬಡ್ಡಿಯಿಂದ ಇದು ಪ್ರಕಟವಾಗುತ್ತಿದೆ. ಪೂಜ್ಯರ ಈ ಉಪಕೃತಿಯನ್ನು ಪರಿಷತ್ತು ಮತ್ತು ನಾವು ಭಕ್ತಿಯಿಂದ ಸ್ಮರಿಸುತ್ತೇವೆ. ಅಂತೆಯೇ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಿಗೂ, ಪರಿಷತ್ತಿನ ಸಲಹಾ ಸಮಿತಿಗೂ, ಅಕ್ಷರ ಜೋಡಣೆ ಮಾಡಿಕೊಟ್ಟ ಸ್ಕ್ಯಾನ್ ಕಂಪ್ಯೂಟರ್ಸ್‌ನವರಿಗೂ, ಮುದ್ರಿಸಿಕೊಟ್ಟ ರಿಪ್ಲಿಕಾ ಪ್ರಿಂಟರ್ಸ್‌ರವರಿಗೂ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಡಾ. ಎಂ. ಎಂ. ಕಲಬುರ್ಗಿ

ಡಾ. ಸಾ. ಶಿ. ಮರುಳಯ್ಯ

❖❖

*

ಪ್ರಸ್ತಾವನೆ

ಎಂ.ಎಂ.ಕಲಬುರ್ಗಿ

ಭಕ್ತನಾದೊಡೆ ಬಸವಣ್ಣನಂತಾಗಬೇಕು
ಜಂಗಮನಾದೊಡೆ ಪ್ರಭುವಿನಂತಾಗಬೇಕು
ಭೋಗಿಯಾದೊಡೆ ನಮ್ಮ ಗುರು ಚೆನ್ನಬಸವಣ್ಣನಂತಾಗಬೇಕು
ಯೋಗಿಯಾದೊಡೆ ನನ್ನಂತಾಗಬೇಕು ನೋಡಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನ.

ಇದೊಂದು ಅಂತಃಸತ್ವದ ವಿಭೂತಿತತ್ವ ಕುರಿತ ಭಾವನಾತ್ಮಕ ವಿಮರ್ಶೆ. 'ಯೋಗಿಯಾದೊಡೆ ನನ್ನಂತಾಗಬೇಕು' ಎಂಬುದು ಶಿವಯೋಗಿ ಸಿದ್ಧರಾಮನ ಆತ್ಮಪ್ರತ್ಯಯದ ಮಾತು. ಹಕ್ಕು ಅರ್ಹತೆಗಳಿಲ್ಲದವರಿಗೆ ಈ ಆತ್ಮ ಪ್ರತ್ಯಯ ಬರಲಾರದು. ಸಿದ್ಧರಾಮ ಹೆಸರಿಗೆ ತಕ್ಕಂತೆ ಶಿವಯೋಗಿ ಸಿದ್ಧಪುರುಷ ಅಲ್ಲ. ಅವನದು ಅತಿ ಎತ್ತರದ ನಿಲವು. ಅದು 'ಸೀಮೆ ಸಾಹಿತ್ಯದಲಿ ರೀತಿ ಧಾತುವ ನುಂಗಿ ಪಾತಾಳದಿಂದತ್ತ ಪ್ರಮಾಣಜೆದು ಸೋತುನಿಂದಲ್ಲಿ ಸುಜ್ಞಾನಭರಿತನುವಾದ ಅಜಾತ ಗುರುವಿನ ನಿಲವು'. ಅವನ ಯೋಗಕ್ಕೆ ದೇಹ ಸಾಧನರಂಗವಾದಂತೆ, ಆತ್ಮ ಸಾಕ್ಷಾತ್ಕಾರಕ್ಕೆ ಭೂಮಿಯೇ ಸಿದ್ಧಿಯ ಸ್ಥಾನ. ಮೂಲತಃ ಸಿದ್ಧರಾಮ ವಾಸ್ತವತೆಗೆ ಬದುಕಿದವನು, ಅಗ್ರಾಹ್ಯ ಅಗೋಚರ ಸ್ವರ್ಗಕ್ಕೆ ಕೈ ಚಾಚಿದವನಲ್ಲ. ಎಲ್ಲ ಶರಣರ ಧರ್ಮ ಧ್ಯೇಯಗಳಂತೆ, ಅವನಲ್ಲಿ ಸ್ವರ್ಗದ ಮೋಹವಾಗಲಿ, ನರಕದ ಭೀತಿಯಾಗಲಿ ಇಲ್ಲ. ಅವನ ದೃಷ್ಟಿಯಲ್ಲಿ ಇಹವನ್ನುಳಿದ ಪರ ಇಲ್ಲ; ಇಹವೇ ಎಲ್ಲ.

ಒಣಗಿದ ಮರವದು ಭೂಮಿಯಲ್ಲೆ ಲೀನ ನೋಡಾ
ಒಣಗದ ಮರವದು ಭುಮಿಯಲ್ಲೆ ಲೀನ ನೋಡಾ
ತಿಳಿಯದ ಯೋಗಿಯ ಲಯವಿಲ್ಲೆ!
ಸ್ವರ್ಗಕ್ಕೆ ಹೋದೆಹೆನೆಂಬುದು ಗೊಡ್ಡು ಪುಸಿ ನೋಡಾ
ಕಪಿಲಸಿದ್ಧಮಲ್ಲಿಕಾರ್ಜುನಾ.

ಅವನ ದೃಷ್ಟಿಯಲ್ಲಿ ಭೂಮಿಯೇ ಸರ್ವಸ್ವ, ಭೂಮಿಯನ್ನು ಬಿಟ್ಟು ಸಾಧನೆ ಇಲ್ಲ. ಭೂಮಿಯೇ ಸಮಸ್ತಕ್ಕೂ ಸಕಲ ಸಾಧನ ರಂಗ. 'ದೇವರಿಗೆ ಕೃಷಿಯ ನೇಮಕವ ಮಾಡುವದಲ್ಲದೆ ದೇವರ ಪ್ರಥಮ ಮುಖ ಭೂಮಿ ಎಂದರಿಯದೀ ಲೋಕ' ಎಂದು ವಿಡಂಬಿಸಿ, ಮಣ್ಣಿನಲ್ಲಿ ಮಹದೇವನನ್ನು ಕಂಡಾತ ಸಿದ್ಧರಾಮ ಕೈಲಾಸದ ಭ್ರಮಿಕರನ್ನು ಕುರಿತು–

ಕೈಲಾಸ ಕೈಲಾಸವೆಂದು ಬಡಿದಾಡುವ ಅಣ್ಣಗಳಿರಾ, ಕೇಳಿರಯ್ಯಾ
ಕೈಲಾಸವೆಂಬುದೊಂದು ಭೂಮಿಯೊಳಗಿರುವ ಹಾಳುಬೆಟ್ಟ
ಅಲ್ಲಿರುವ ಮುನಿಗಳೆಲ್ಲರು ಜೀವಗಳ್ಳರು
ಅಲ್ಲಿರ್ದ ಚಂದ್ರಶೇಖರನು ಬಹು ಎಡ್ಡ
ಇದರಾಡಂಬರವೇಕಯ್ಯಾ?
ಎಮ್ಮ ಪುರಾತರಿಗೆ ಸದಾಚಾರದಿಂದ ವರ್ತಿಸಿ,
ಲಿಂಗಾಂಗ ಸಾಮರಸ್ಯವ ತಿಳಿದು
ನಿಮ್ಮ ಪಾದಪದ್ಮದೊಳು ಬಯಲಾದ ಪದವೇ ಕೈಲಾಸವಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ,

ಎಂದು ಹೇಳಿ ಎಚ್ಚರಿಸಿದ. ನಡೆನುಡಿಯಲ್ಲಿ ಮಡಿಯಾಗಿ ಬದುಕುವುದೇ ಸ್ವರ್ಗ. ತಾನು ಬದುಕಿ ಅನ್ಯರಿಗೆ ಬದುಕ ಕೊಡಬೇಕು, ತಾನು ಬೆಳಗಿ ಅನ್ಯರನ್ನು ಬೆಳಗಿಸಬೇಕು. ಇದೇ ಅವನ ಮೂಲ ಮಂತ್ರ. ಅವನಿಗೆ 'ಭಕ್ತನ ತನುವೆ ಶಿವನಿಪ್ಪ ಆಲಯವಾಗಿ, ಇಹಲೋಕವೇ ಪರಲೋಕ, ಪರಲೋಕವೆ ಇಹಲೋಕ'ವಾಗಿ ಕಂಡಿದೆ.

ರಾಘವಾಂಕ ಗುರುತಿಸಿದಂತೆ 'ಸಾಕಾರನಿಷ್ಠೆ' ಸರ್ವಭೂತಂಗಳೊಳನುಕಂಪೆ ತಾನೆ ಪರಬೊಮ್ಮ' ಎಂಬ ಆತ್ಮಪ್ರತ್ಯಯ ಸಿದ್ಧರಾಮನದು. 'ಆಧಾರ, ಸ್ವಾದಿಷ್ಠಾ ಅನಾಹತ, ವಿಶುದ್ಧಿ, ಆಜ್ಞೆಯೆಂದೆಂಬರೆಲ್ಲಾ ಆಧಾರ ಸ್ವಾದಿಷ್ಟ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯವಾವುದು ಬಲ್ಲರೆ ಹೇಳಿರೇ' ಎಂಬ ಪ್ರಶ್ನೆಯನ್ನು ಮುಂದಿಟ್ಟ ಸಿದ್ಧ ಗುರುವಿನ ವಚನವೊಂದು ತಾನೇ ಉತ್ತರಿಸುತ್ತಾ 'ಆದಿಯನುಳ್ಳುದೆ ಆಧಾರ', ಅಂದರೆ ಭಕ್ತಿಯನ್ನೆ ಮೂಲ ಧಾತುವನ್ನಾಗಿಸಿಕೊಂಡದ್ದು ಆಧಾರ, 'ಅನಾಹತವ ಕೂಡಿಪ್ಪುದೆ ಸ್ವಾದಿಷ್ಟ' ಅಂದರೆ ಲಿಂಗ–ಅಂಗ ಸಹಯೋಗ ಸಾಮರಸ್ಯವೇ ಅನಾಹತ ಮತ್ತು ಸ್ವಾದಿಷ್ಟಗಳು; ಅವು ಭಿನ್ನ ಚಕ್ರಗಳೇನಲ್ಲ. 'ಮಣಿಯ ಬೆಳಗಲಿಪ್ಪುದೆ ಮಣಿಪೂರಕ'. ಇಲ್ಲಿನ ಮಣಿ ಕೋಟಿ ದಿನಮಣಿ ಪ್ರಭಾಪೂರ್ಣ ಪರಶಿವ ಪರಂಜ್ಯೋತಿ ಆ ಬೆಳಗಿನೊಳಗಣ ಬೆಳಗಿನಲ್ಲಿ ಆತ್ಮ ತನ್ನ ತಾ ಬೆಳಗಿಸಿಕೊಂಬುದೇ ಮಣಿಪೂರಕ; 'ಆವುದಲ್ಲವೆಂಬುದನತಿಗಳೆದುದೆ ವಿಶುದ್ಧಿ' ಅಂದರೆ, ಅಹುದು ಅಲ್ಲ ಎಂಬವುಗಳಾಚೆಗಿನ ಸ್ಥಿತಿ; ಅರ್ಥಾತ್ ಅರಿವರತು ಮರಹು ನಷ್ಟವಾಗಬೇಕೆಂಬ ಭಾವದ ಬಯಲಾವಸ್ಥೆ, ಅದೇ ವಿಶುದ್ಧಿ; 'ಜೀವಂಗಳ ಮೇಲೆ ದಯವುಳ್ಳುದೆ ಆಜ್ಞೆ,' ಅಹುದು; ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ದಯಾಗುಣವೇ ಆಜ್ಞಾಚಕ್ರ. 'ಇಂತಿಪ್ಪುದೀ ಯೋಗ'. ಇಂತಹ ಶಿವಜೀವರ ಐಕ್ಯಾನುಸಂಧಾನವನ್ನು ಬಿಟ್ಟು, 'ಉಳಿದ ಅಭ್ಯಾಸ ಯೋಗ ಅವನ ನಗೆಯ ವಸ್ತು', ಅನ್ಯ ಯೋಗಿಗಳದು ಬರಿಯ ಕಸರತ್ತು. ಶಿವಯೋಗಿಯ ಆ ಐಕ್ಯಸ್ತರದಲ್ಲಿ.:

ಐಕ್ಯನೆಂಬಾತ ಅನ್ಯವನರಿಯ, ತನ್ನುವನರಿಯ
ಸಕಲವರಿಯ, ನಿಷ್ಕಲವನರಿಯ
ಸರ್ವವೆಲ್ಲವೂ ಲಿಂಗವೆಂಬನಾಗಿ,
ತನ್ನ ಮೀರಿದ ಪರತತ್ವ ಬೇರೊಂದು ಇಲ್ಲಾಗಿ
ಎಲ್ಲಾ ತತ್ವಂಗಳಿಗೆ ಮಾತೃಸ್ಥಾನ ತಾನಾಗಿ
ಲಿಂಗವನವಗ್ರಹಿಸಿಕೊಂಡಿಪ್ಪ ಪರಮ ಸೀಮೆ ತಾನಾಗಿ
ಕಪಿಲ ಸಿದ್ಧಮಲ್ಲಿಕಾರ್ಜುನಯ್ಯನ ಕೂಡಿ
ಕಳೆಗಳನು ಲಿಂಗಕಳೆಗಳ ಮಾಡಿದನೈಕ್ಯನು.

ಈ ಬಗೆಯ ದ್ವಂದ್ವಕ್ಕೆಡೆಯಿಲ್ಲದ ಅದ್ವಯನು ತಾನಾದವನು ಸಿದ್ಧರಾಮ. 'ಎನ್ನ ಮೀರಿದ ಪರ ಒಂದೂ ಇಲ್ಲ' ಎಂಬ ಆತ್ಮಪ್ರತ್ಯಯದ ಮೂಲಕ, 'ನಾನಿಲ್ಲದಿರೆ ನೀನೆಲ್ಲಿಯವನಯ್ಯಾ' ಎಂಬ ಸವಾಲಿನ ಮೂಲಕ ಶಿವ–ಜೀವರ ಏಕತೆಯನ್ನು ಬಿತ್ತರಿಸಿದವನು.

ಸಿದ್ಧರಾಮ ಸ್ವಯಂಭು ಸಿದ್ಧ. ವಿಕಾಸದ ಹಂತದಲ್ಲಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡವನು, 'ಕಾಯ ಸೊನೆಯರಿತಲ್ಲದೆ ಹಣ್ಣಿನ ರಸ ಚಿಹ್ನದೋರದು, ಕಾಯಕರ್ಮವ ಮಾಡಿ ಜೀವಜ್ಞಾನವನರಿದು ತ್ರಿವಿಧ ಭಾವ ಶುದ್ಧಿಪಡೆದು ಕಪಿಲ ಸಿದ್ಧಮಲ್ಲಿಕಾರ್ಜುನ ಲಿಂಗವ ಮೇಲೆ ಕಂಡ'ವನು. ಸೊನ್ನಲಿಗೆಯ ಈ ಮಹಾ ಶಿವಯೋಗಿ ಕಲ್ಯಾಣಕ್ಕೆ ಬಂದು ಇಷ್ಟಲಿಂಗವ ಹಿಡಿದು ತನ್ನ ಆಚರಣೆ, ಅನುಷ್ಠಾನಗಳಿಗೊಂದು ಅಯಾಮವನ್ನು ನಿರ್ಮಿಸಿಕೊಂಡವನು.

ಅವನು ತನ್ನ ವಚನಗಳಲ್ಲಿ ಗುರುತಿಸಿಕೊಂಡಂತೆ ಮೂಲತಃ ಓರ್ವ ಕಾಯಕಯೋಗಿ, ದುಡಿಮೆಯಲ್ಲಿ ದೇವರನ್ನು ಕಂಡವನು. ಲೋಕಕಲ್ಯಾಣಕ್ಕಾಗಿ, ಸದಾ ಲೋಕಸಂಗ್ರಹ ಕಾರ್ಯದಲ್ಲಿ ನಿರತನಾದವನು; ತಟಾಕ ನಿರ್ಮಾಣ, ದೇಗುಲ ನಿರ್ಮಾಣ, ಸಾಮೂಹಿಕ ವಿವಾಹ ಇವೇ ಮೊದಲಾದ ಸಕಲ ಜೀವಕೋಟಿಗಳಿಗೆ ಲೇಸನ್ನೆಸಗಿದವನು; ಜನಪರ ಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡವನು.

ರಾಘವಾಂಕನು ಚಿತ್ರಿಸಿದಂತೆ 'ಶಿವಯೋಗಿಯ ಶರೀರಮಾದೊಡಂ ವೃಥಾ ಸಮೆಯಲಾಗದು ಅನುಗೊಂಬನಿತು ಕಾಯಕಂ ನಡೆಯುತಿರಬೇಕು' ಎಂಬುದು ಸಿದ್ಧರಾಮನ ಮನೀಷೆ. ಶಿವಯೋಗಿ ವಿರಾಗಿ, ಸರ್ವಸಂಗ ಪರಿತ್ಯಾಗಿ. ಆದರೂ ಅವನು ಈ ಭೂಮಿಯ ಮೇಲಿದ್ದಾನೆ; ಈ ಭೂಮಿಯ ಮೇಲೆ ಬೀಸುವ ಗಾಳಿ, ಹರಿಯುವ ನೀರು, ಬೆಳೆಯುವ ಅನ್ನ ಮೊದಲಾದುವನ್ನು ಸ್ವೀಕರಿಸಿ ಬದುಕಿದ್ದಾನೆ. ಅಂದಮೇಲೆ ಪಡೆದದ್ದಕ್ಕೆ ತಕ್ಕಂತೆ ದುಡಿಯಬೇಕಾದ ಹೊಣೆ ಅವನ ಮೇಲಿದೆ. ಅನ್ಯರ ದುಡಿಮೆಯನ್ನು ತಿನ್ನುವ ಹಕ್ಕು ಯಾರಿಗೂ ಇಲ್ಲ. ಉಸಿರಿರುವವರೆಗೂ ಒಂದಲ್ಲ ಒಂದು ಕಾಯಕ ಮಾಡಲೇಬೇಕು. ಕಾಯಕ ಕೈಲಾಸ ಸದೃಶವಾದದ್ದು. ಶಿವಯೋಗದ ಸಿದ್ಧಿಗೆ ಕಾಯಕಯೋಗವೇ ಬುನಾದಿ. ಅದರಿಂದಾಗಿ ಹೇಳುತ್ತಾನೆ:

ಕೃಷಿಯ ಮಾಡಿ ಉಣ್ಣದೆ ಹಸಿವು ಹರಿವ ಪರಿಯಿನ್ನೆಂತೊ
ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿಯಿನ್ನೆಂತೊ
ಬೇಯದ ಅಶನವನುಂಬ ಠಾವಾವುದು ಕಪಿಲ ಸಿದ್ಧಮಲ್ಲಿಕಾರ್ಜುನ ಲಿಂಗಕ್ಕೆ

ಎಂದು.

ಇದರಲ್ಲಿ ಸಿದ್ಧರಾಮನ ಮನೋಧರ್ಮ ಸುವೇದ್ಯ: ಮಂತ್ರಕ್ಕೆ ಮಾವಿನಕಾಯಿ ಉದುರದು. ಮಾನವ ಕ್ರಿಯಾಶೀಲನಾಗಬೇಕು, ಕರ್ತವ್ಯನಿರತನಾಗಬೇಕು. ಮೊದಲು ಶ್ರಮ, ಆಮೇಲೆ ಸುಖ. ಊಟಕ್ಕೆ ಮೊದಲು ಉತ್ಪಾದನೆ. ಅದು ಮಾನವ ಜೀವನದ ಮೂಲಭೂತ ಕರ್ತವ್ಯ. ಹಸಿವಿನ ಮುಂದೆ ಯಾವ ಅಧ್ಯಾತ್ಮ, ತತ್ತ್ವ, ಸ್ವರ್ಗ ನರಕಗಳು ನಿಲ್ಲುವುದಿಲ್ಲ. ಮೊದಲು ಅನ್ನಬ್ರಹ್ಮ ತೃಪ್ತನಾಗಬೇಕು. ಅನಂತರದಲ್ಲಿ ಇತರ ಬ್ರಹ್ಮರು. ಹಸಿದ ಹೊಟ್ಟೆಗೆ ಕಾವ್ಯ ಕಾಣುವುದಿಲ್ಲ, ದೇವರು ಗೋಚರಿಸುವುದಿಲ್ಲ. ಆ ಕಾರಣ ಮಾನವನಿಗೆ ಬದುಕು ಮುಖ್ಯ. ಎಲ್ಲ ಕಲೆಗಳ ಕಲೆ ಜೀವನ ಕಲೆ. ಇದನ್ನು ಚೆನ್ನಾಗಿ ಅರಿತಿದ್ದ ಸಿದ್ಧರಾಮ ಕಾಯಕ ನಿರತನಾದ. ಅಲ್ಲಿಯವರೆಗೂ ಅವನಿಗೆ ಇಷ್ಟಲಿಂಗದ ಕಲ್ಪನೆಯಾಗಲಿ, ಅದರ ಮಹತ್ವವಾಗಲಿ ತಿಳಿದಿರಲಿಲ್ಲ. ಅವನು ಭಾವಲಿಂಗ ಭಜಕನಾಗಿದ್ದ ಮಾತ್ರ. ಅವನ ಆರಾಧ್ಯ ದೈವವೆಂದು ಹೇಳುವ ಶ್ರೀಶೈಲ ಮಲ್ಲಿಕಾರ್ಜುನ ಲಿಂಗವೂ ಅವನ ನಿತ್ಯೋಪಾಸನೆಯ ವಸ್ತುವಾಗಿರಲಿಲ್ಲ. ಈ ಅಭಿಪ್ರಾಯವನ್ನು ಅವನೇ ಒಂದೆಡೆ ಸ್ಪಷ್ಟಪಡಿಸಿದ್ದಾನೆ: 'ಅಗ್ನಿಲಿಂಗವ ಬ್ರಾಹ್ಮಣ ಪೂಜಿಸಿದ, ಧನುರ್ಲಿಂಗವ ಕ್ಷತ್ರಿಯ ಪೂಜಿಸಿದ; ಧನಲಿಂಗವ ವೈಶ್ಯ ಪೂಜಿಸಿದ, ಖಡ್ಗಲಿಂಗವ ರಾಜ ಪೂಜಿಸಿದ, ಧಾನ್ಯ ಲಿಂಗವ ಶೂದ್ರ ಪೂಜಿಸಿದ, ಪರ್ವತಲಿಂಗವ ಶೈವ ಪೂಜಿಸಿದ. ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವ ಸಿದ್ಧರಾಮ ಪೂಜಿಸಿದ ನೋಡಾ'–ಎಂದು. ಇದರ ಪ್ರಕಾರ ಕಪಿಲಸಿದ್ಧಮಲ್ಲಿಕಾರ್ಜುನ ಶ್ರೀಶೈಲದ ಸ್ಥಾವರಲಿಂಗ ಅಲ್ಲ, ಅವನ ಕವಿಲೆಯ ಸಿದ್ಧ ಆತ್ಮಾನುಸಂಧಾನದ ಚೈತನ್ಯವಾಗಿತ್ತು. ಸ್ಥಾವರಪೂಜೆ ಅವನ ಒಲವಿನ ಆರಾಧನೆ ಅಲ್ಲ. ಅದು ಈ ವಚನದ ಮೂಲಕ ವೇದ್ಯ:

ಕೆರೆಯ ನೀರು, ಮರದ ಪುಷ್ಪ ಧರಿಸಿದಡೇನು ಅಯ್ಯಾ
ಆಗುವುದೇ ಲಿಂಗಾರ್ಚನೆ?
ನೀರನೆರೆಯಲಿಕ್ಕಾತನೇನು ಬಿಸಿಲಿನಿಂದ ಬಳಲಿದನೆ?
ಪುಷ್ಪದಿಂದ ಧರಿಸಲಿಕ್ಕಾತನೇನು ವಿಟರಾಜನೆ?
ನಿನ್ನ ಮನವೆಂಬ ನೀರಿನಿಂದ, ಜ್ಞಾನವೆಂಬ ಪುಷ್ಪದಿಂದ ಪೂಜಿಸಬಲ್ಲಡೆ
ಭಕ್ತನೆಂಬೆ, ಮಹೇಶ್ವರನೆಂಬೆ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.

ಅವನದು ಇಂತಹ ಚಿಜ್ಯೋತಿ ಚೈತನ್ಯ ಕುರಿತ ಮಾನಸಪೂಜೆ. ಅದನ್ನವನು ಸದಾ 'ಮನಪುಷ್ಪ'ದಿಂದ ಪೂಜಿಸಿಕೊಂಡು ಬಂದಿದ್ದಾನೆ. ಅಂತೆಯೇ ಸಿದ್ಧರಾಮ ಕಾಯಕಯೋಗದ ಮೂಲಕ ಶಿವಯೋಗವನ್ನು ಸಾಧಿಸಿಕೊಂಡವನು; ಸಿದ್ಧಿಸಿಕೊಂಡವನು.

ಸೇವೆಯೇ ಶಿವ ಅವನ ಪಾಲಿಗೆ. ಅದರಿಂದಾಗಿ ಅವನು ಭಾವಲಿಂಗ ಭಜಕನಾದ, ಇಷ್ಟಲಿಂಗ ಪೂಜಕನಾಗಲಿಲ್ಲ. ಆದರೆ ಕಲ್ಯಾಣಕ್ಕೆ ಹೋದಾಗ ಲೌಕಿಕವಾಗಿ ಸ್ತ್ರೀ ಪುರುಷ ಸಮಾನತೆಯ ಸಂಕೇತವೂ ಆಧ್ಯಾತ್ಮಿಕವಾಗಿ ವಿಶ್ವಾತ್ಮನ ಸಂಗ್ರಹ ಸ್ವರೂಪವೂ 'ಸರ್ವಚೈತನ್ಯಾತ್ಮಕ'ವೂ, 'ಪರಿಪೂರ್ಣವಸ್ತು'ವೂ ಆದ ಇಷ್ಟಲಿಂಗ ಧಾರಣದ ಮಹತ್ವವರಿತ ಮೇಲೆ ಚೆನ್ನಬಸವಣ್ಣನಿಂದ ಶಿವದೀಕ್ಷೆ ಪಡೆದು ವಿಶ್ವಾತ್ಮನಲ್ಲಿ ತನ್ನಾತ್ಮವನ್ನು ಬೆರೆಸಿ ತಾನೆ 'ಶಿವ' ಆದ.

ಕಾಯ್ದ ಕರ್ಬುನ ನೀರನೊಳಕೊಂಬಂತೆ
ಬಿದ್ದ ಬಿಂದುವ ಭೂಮಿಯೊಳಕೊಂಬಂತೆ
ನವನೀತ ಘೃತವನೊಳಕೊಂಬಂತೆ

ವೀಳ್ಯ ರಸವೊಳಕೊಂಬಂತೆ
ಎನ್ನ ಕಾಯವ ತನ್ನ ಕಾಯದಲ್ಲಿ ಒಳಕೊಂಬ ನೋಡಾ
ಕಪಿಲ ಸಿದ್ಧಮಲ್ಲಿಕಾರ್ಜುನ ಮಹಾ ಶರಣನ.

ಈ ರೀತಿ ತಾನಿಲ್ಲವಾಗಿ ತಾನೆಲ್ಲವಾದ ಮಹಾನ್ ಶಿವಯೋಗಿ ಸಿದ್ಧರಾಮ.

ಈ ಎಡೆಯಲ್ಲಿಯೇ ಸಿದ್ಧರಾಮನ ವಚನಗಳ ಅಂಕಿತ ಕುರಿತು ಒಂದು ಮಾತು ಹೇಳುವುದು ಸೂಕ್ತ. ಅವನ ವಚನಾಂಕಿತ 'ಕಪಿಲ ಸಿದ್ಧಮಲ್ಲಿಕಾರ್ಜುನ'. ಈ ಮಲ್ಲಿಕಾರ್ಜುನ ಶ್ರೀಶೈಲ ಮಲ್ಲಿಕಾರ್ಜುನ ಅಲ್ಲ; ಅವನು ಕಪಿಲಸಿದ್ಧ ಅಂದರೆ ಗೋವಿನ ರೂಪದ ಸಿದ್ಧಪುರುಷ. ಸಿದ್ಧರಾಮ ಕೃಷಿ ಮತ್ತು ಪಶುಪಾಲನೆ ಕಾಯಕವನ್ನು ಒಲಿದವನು. ಕಾಯಕದಲ್ಲೆ ತನ್ನ ಆರಾಧ್ಯದೈವವನ್ನು ಕಂಡವನು. ಅವನ ವಚನಗಳಲ್ಲಿ ಅನೇಕ ಕಡೆಗಳಲ್ಲಿ ಕೃಷಿಪ್ರತಿಮೆಗಳು ಬರುತ್ತವೆ. ಆ ಎಡೆಗಳಲ್ಲೆಲ್ಲಾ ತನ್ನನ್ನು ಕಾಯಕಯೋಗಿಯಾಗಿ ಗುರುತಿಸಿಕೊಂಡಿದ್ದಾನೆ. ಕಾಯಕಯೋಗದ ಮೂಲಕವೆ ಶಿವಯೋಗವನ್ನು ಸಾಧಿಸಿಕೊಂಡಿದ್ದಾನೆ. ಅವನ ಆತ್ಮಾನುಸಂಧಾನಕ್ಕೆ ಪಾತ್ರನಾದ ಕಪಿಲೆ ಅಥವಾ ಕವಿಲೆ. ಆ ಕವಿಲೆ ಸಿದ್ಧನೇ ಅವನ ಆರಾಧ್ಯ ದೈವ; ಅವನದೇ ಅಲ್ಲಿ ಅಂಕಿತ.

ಅಂತೆಯೇ 'ಯೋಗಿನಾಥ' ಸಿದ್ಧರಾಮನ ಆರಾಧ್ಯ ದೈವಕ್ಕಿದ್ದ ಪರ್ಯಾಯನಾಮ. ಕೆಲವರು ಹೇಳುವಂತೆ ತನ್ನ ದೀಕ್ಷಾ ಗುರು ಕಲ್ಯಾಣದ ಚೆನ್ನಬಸವಣ್ಣ ಅಲ್ಲ. ಅದು ಈ ಕೆಳಗಿನ ವಚನದಿಂದ ಸ್ಪಷ್ಟವಾಗುತ್ತದೆ–

ಆದಿಯಾಧಾರದಲಿ ಆದುದೈ ಅನಿಮಿಷಗೆ
ತೋರದಿರಯ್ಯ ಗುರು–ಚರ–ಲಿಂಗವ
ಮೂರು ದೀಕ್ಷೆಗೆ ಮೂಲಸ್ಥಾಣು ನೀನೈ ತಂದೆ
ಅಣು ಭಕ್ತಿಯು ನಿನ್ನ ಶಾಖೆಯಾಗಿ
ಕಾರುಣ್ಯಕರ ಚನ್ನಬಸವಣ್ಣ ಭಕ್ತಿಯನು
ತೋಱಿದನೈ ಎನಗೆ ಯೋಗಿನಾಥ.

– ಈ ಪ್ರಕಾರ ಚನ್ನಬಸವಣ್ಣ ಕೇವಲ ಲಿಂಗದೀಕ್ಷೆಯ ಸಂಸ್ಕಾರವಿತ್ತವನು, ಯೋಗಬೋಧಕನಲ್ಲ. ಆ ಯೋಗ ಬೋಧಕ ತಾನೆ, ತನ್ನರಿವೆ! ಏಕೆಂದರೆ 'ಅರಿವೆ ಗುರು'. ಆ ಗುರು ಅವನಾಂತರ್ಯದ ಯೋಗಿನಾಥ.

ಸಿದ್ಧರಾಮ ಶುದ್ಧ ಮಾನವತಾವಾದಿ. ಶತಶತಮಾನಗಳಿಂದಲೂ ಶೋಷಣೆಗೆ ಒಳಗಾದವರು ಇಬ್ಬರು. ಒಂದು ಹೆಣ್ಣು, ಮತ್ತೊಂದು ದಲಿತ. ಇವರ ಬಗೆಗೆ ಬಸವಣ್ಣ ಮೊದಲಾದವರಂತೆ ವಿಶೇಷ ಕಳಕಳಿ ಸಿದ್ಧರಾಮಯ್ಯನಿಗೆ. ಪುರುಷಪ್ರಧಾನ ಸಮಾಜದ ತುಳಿತಕ್ಕೆ ಸಿಕ್ಕ ಹೆಣ್ಣನ್ನು ತುಂಬು ಗೌರವಾದರಗಳಿಂದ, ಅಷ್ಟೇಕೆ ವಿಶೇಷ ಪೂಜ್ಯ ಭಾವನೆಯಿಂದ ಗುರುತಿಸಿ ಗೌರವಿಸಿದ್ದಾನೆ, ಪೂಜಿಸಿದ್ದಾನೆ. ಅವನ ಒಂದು ವಚನ ಹೀಗೆ ಹೇಳುತ್ತದೆ :

ತಾ ಮಾಡಿದ ಹೆಣ್ಣು ತನ್ನ ತಲೆಯನೇಱಿತ್ತು,
ತಾ ಮಾಡಿದ ಹೆಣ್ಣು ತನ್ನ ತೊಡಿಯನೇಱಿತ್ತು,

ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇಜೆತ್ತು,
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇಜೆತ್ತು,
ಅದು ಕಾರಣ
ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ.

ಹೀಗೆ ಹೆಣ್ಣಿಗೆ ದೇವತ್ವದ ಸ್ಥಾನವಿತ್ತು ಅವಳ ಬಗೆಗೆ ಸದ್ಭಾವನೆ ಮೂಡುವಂತೆ ಮಾಡಿದ ಸುಧಾರಕ ಸಿದ್ಧರಾಮ.

ಸಿದ್ಧರಾಮ ಜಾತಿ ಸೂತಕವನ್ನು ಹಿಯ್ಯಾಳಿಸಿ ಸಮಾಜವನ್ನು ಎಚ್ಚರಿಸಿದ್ದಾನೆ. ಮನುಷ್ಯನಿಗೆ ಜಾತಿ ಮುಖ್ಯವಲ್ಲ, ಮನುಷ್ಯತ್ವ ಮುಖ್ಯ.

ಕುಲಜನಾಗಿ ನಾ ನೆನೆವೆನಯ್ಯಾ
ಕುಲದ ಬಳಿಯ ದೇವನಲ್ಲ
ಮನದ ಬಳಿಯ ದೇವನೈಸೆ
ಆವ ಯೋನಿಜರಾದಡೇನು?
ಕಪಿಲಸಿದ್ಧಮಲ್ಲಿನಾಥನೊಲಿದಾತನು ಕುಲಜನಯ್ಯಾ.

ಮಾನವ ಪ್ರಗತಿಗೆ ಮಾರಕವಾದ ಜಾತಿಯನ್ನು ದೂರವಿರಿಸಿ, ನೀತಿಯ ನೆಲೆಯಲ್ಲಿ ಮನುಷ್ಯತ್ವವನ್ನು ಸ್ಥಾಪಿಸಿದ ಮಹಾಮಾನವ ಸಿದ್ಧರಾಮ.

* * *

ಹನ್ನೆರಡನೆಯ ಶತಮಾನದ ಪ್ರಮುಖ ವಚನಕಾರರಲ್ಲಿ ಸಿದ್ಧರಾಮನೂ ಒಬ್ಬ. ಆದರೆ ಇವನು ಎಲ್ಲ ವಚನಕಾರರಂತಲ್ಲ. ಅವರಿಂದ ತುಸು ಭಿನ್ನನಾಗಿದ್ದಾನೆ. ಇವನ ಅನೇಕ ವಚನಗಳು ಮತ್ತು 'ತ್ರಿವಿಧಿ'ಗಳು ಛಂದೋಬದ್ಧ ರಚನೆಗಳಾಗಿವೆ. ಅಂದಿನ ವಚನಕಾರರು ಕನ್ನಡ ಕಾವ್ಯವನ್ನು ನಿಯತ ಛಂದಸ್ಸಿನ ಬಂಧನದಿಂದ ಬಿಡುಗಡೆ ಮಾಡಿ ಅದಕ್ಕೊಂದು ಮುಕ್ತ ವಾತಾವರಣವನ್ನು ನಿರ್ಮಿಸಿಕೊಟ್ಟಿದ್ದರೆ, ಸಿದ್ಧರಾಮ ಲಯದ ನಿಯತತೆಯನ್ನು ಕಾಪಾಡಲು ಯತ್ನಿಸಿದ್ದಾನೆ. ಗಣನಿಯಮ ಸಡಿಲಗೊಂಡಿದ್ದರೂ ಪ್ರಾಸ ಪ್ರಿಯತೆ ಹಾಸುಹೊಕ್ಕಾಗಿ ಮೆರೆದಿದೆ. ವಿಶೇಷವಾಗಿ ಇವನ ತ್ರಿವಿಧಿಗಳು ಕನ್ನಡ ಛಂದಸ್ಸಿನ ತಾಯಿಬೇರಾದ ತ್ರಿಪದಿ ಅಲ್ಲ, ಗುರು, ಲಿಂಗ, ಜಂಗಮ ಎಂಬ ವೀರಶೈವ ಮೂರು ವಿಧಿಗಳ (The three laws of Veerashaivism) ಸೃಷ್ಟೀಕರಣ. ಇಲ್ಲಿ ತ್ರಿವಿಧಿ ಎಂಬುದು ತ್ರಿಪದಿಯ ತತ್ಸಮ ರೂಪ ಅಲ್ಲ. ಆದರೂ ಸಿದ್ಧರಾಮಯ್ಯನ ಬಹುತೇಕ ವಚನಗಳಲ್ಲಿ ತ್ರಿಪದಿಯ ನಡಿಗೆ ಇದೆ, ಸಾಂಗತ್ಯದ ಧಾಟಿ ಇದೆ, ಸೀಸ ಪದ್ಯದ ಓಟ ಇದೆ. ಅವೆಲ್ಲಕ್ಕೂ ಮಿಗಿಲಾದ ಕುಸುಮ ಷಟ್ಪದಿಯ ಸ್ವರೂಪ ಇದೆ. ಅಂತೆಯೇ ಷಟ್ಪದವನ್ನು ಕನ್ನಡಕ್ಕೆ ಒಗ್ಗಿಸಿಕೊಳ್ಳುವ, ಶಾಸನಗಳಲ್ಲಿನ ಷಟ್ಪದಿಯನ್ನು ಅಂಶಗಣ ವಿನ್ಯಾಸದಿಂದ 'ಷಟ್ಪದಿ' ಎಂಬ ಮಾತ್ರಾಗಣ ವಿನ್ಯಾಸಕ್ಕೆ ಪರಿವರ್ತಿಸುವ ಪ್ರಥಮ ಪ್ರಯತ್ನ ಸಿದ್ಧರಾಮನಲ್ಲಿ ಕಂಡುಬರುತ್ತದೆ.

ಸಿದ್ಧರಾಮಯ್ಯನಿಗಿಂತಲೂ ಒಂದು ನೂರು ವರ್ಷಗಳ ಹಿಂದೆ ಆರು ಪಾದಗಳ ಒಂದು ಛಂದೋರೂಪ ಶಾಸನಗಳಲ್ಲಿ ಪ್ರಯೋಗಗೊಂಡಿತ್ತು. ಅದನ್ನು ತೀನಂಶ್ರೀಯವರು 'ಷಟ್ಪದ' ಎಂದು ಕರೆದಿದ್ದಾರೆ; ಮುಂದಿನವರು 'ಮೂಲ ಷಟ್ಪದಿ' ಎಂದು ಅದನ್ನು ಗುರುತಿಸಿದ್ದಾರೆ. ಈ 'ಷಟ್ಪದ' ಅಥವಾ 'ಮೂಲ ಷಟ್ಪದಿ' ಅಂಶಗಣಘಟಿತವಾಗಿದ್ದು ಆರು ಪಾದಗಳ ಹದಿನಾಲ್ಕು ಗಣಗಳಿಂದ ಕೂಡಿರುತ್ತದೆ. ಇದನ್ನು ಮೊದಲು ನಾಗವರ್ಮನು ಗುರುತಿಸಿ ೧, ೨, ೪, ೫ ಪಾದಗಳಲ್ಲಿ ತಲಾ ಎರಡೆರಡರಂತೆ ಎಂಟು ವಿಷ್ಣು ಗಣಗಳು, ೩ ಮತ್ತು ೬ನೆಯ ಪಾದಗಳಲ್ಲಿ ೨ ವಿಷ್ಣು ೧ರುದ್ರ ಗಣಗಳಿರುತ್ತವೆಂದು ಸೂತ್ರೀಕರಿಸಿದ್ದಾನೆ. ಇಂತಹ ಅಂಶಗಣ ವಿನ್ಯಾಸಗಳು ಶಾಸನಗಳಲ್ಲಿ ಲಭಿಸುತ್ತವೆ. ಈ ರೂಪ ಸಿದ್ಧರಾಮಯ್ಯನಿಗೆ ಮೆಚ್ಚಾಗಿ, ಅದೇ ಬಗೆಯ ಆರು ಪಾದಗಳ ಮಾತ್ರಾಗಣ ವಿನ್ಯಾಸವನ್ನು ಪ್ರಯೋಗಿಸಿದ. ಅಲ್ಲಿ ವಿಷ್ಣು ಗಣಕ್ಕೆ ಬದಲು ಐದು ಮಾತ್ರೆಯ ಗಣವನ್ನೂ ರುದ್ರಗಣಕ್ಕೆ ಬದಲು ಆರು ಮಾತ್ರೆಯ ಗಣವನ್ನೂ ಪ್ರಯೋಗಿಸಿದ್ದಾನೆ. ಅಂಶಗಣ ಘಟಿತಗಳು ಮಾತ್ರಾಗಣಕ್ಕೆ ರೂಪಾಂತರಗೊಂಡ ಈಬಗೆಯ ಪರಿವರ್ತನವನ್ನು ಈ ಕೆಳಗಿನ ಪ್ರಯೋಗಗಳಲ್ಲಿ ಕಾಣಬಹುದು.

ಅಂಶಗಣ ಘಟಿತ 'ಷಟ್ಪದ'	ಮಾತ್ರಾಗಣ ಘಟಿತ 'ಷಟ್ಪದಿ'
೧ವಿ ೨ವಿ	೫ ೫
ಶ್ರೀಸ್ಯೈಳ ಕೈಳಾಸ	ಚೆನ್ನೆಯರ ಬಲೆಯಲ್ಲಿ
೩ವಿ ೪ವಿ	೫ ೫
ವಾಸಿಕುಂ ಭೇಸಂಗೆ	ಎನ್ನನಿರಿ ಸಿದೆ ಪ್ರಭುವೆ
೫ವಿ ೬ವಿ ೭ರು	೫ ೫ ೬
ಶ್ರೀಸೂರ್ಯ ಗ್ರಹಹನಿ ಮಿತ್ತ ಮಾಗೆ	ಇನ್ನಿದಕೆ ಭಾವಜನು ಬೇಂಟೆಕಾರ
೮ವಿ ೯ವಿ	೫ ೫
ದೋಷವ ರ್ಜಿತಪ್ರಭು	ಕುನ್ನಿಗಳು ತಾವೈದು
೧೦ವಿ ೧೧ವಿ	೫ ೫
ದಾಸನುಂ ಜನಮೆಲ್ಲ	ಎನ್ನಗ್ರಹಿ ಸದ ಮುನ್ನ
೧೨ವಿ ೧೩ವಿ ೧೪ರು	೫ ೫ ೬
ವೀಸಂಗೆ ಹಯಮಜು ಸಲಿಕೆಬಂದ	ಚಿನ್ಮಯ ಪ್ರ ಭುಸಲಹೋ ಯೋಗಿನಾಥಾ
(ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಚಡಚಣ ಗ್ರಾಮದ ೧೦೬೭ನೆಯ ಇಸವಿಯ ಶಾಸನದ ಒಂದು ಪದ್ಯ)	(ಸಿದ್ಧರಾಮನ ಮಿಶ್ರಸ್ತೋತ್ರದ ತ್ರಿವಿಧಿ)

ಇಲ್ಲಿ ಅಂಶಗಣದ ವಿಷ್ಣು ಮಾತ್ರಾಗಣದ ಐದು ಮಾತ್ರೆಗಳ, ರುದ್ರ ಆರು ಮಾತ್ರೆಗಳ ಮೌಲ್ಯವನ್ನು ಪಡೆದಿರುವುದು ಸ್ಪಷ್ಟ. ಈ ಬಗೆಯಲ್ಲಿ ಅಂಶಗಣ ಘಟಿತ ವಿನ್ಯಾಸಕ್ಕೆ ಮಾತ್ರಾಗಣದ

ತಿರುವು ನೀಡಿದ್ದು ದೊಡ್ಡದಲ್ಲ; ಅದರಿಂದಾದ ಪರಿಣಾಮ ತುಂಬಾ ಮಹತ್ವದ್ದು. ಅಂದರೆ ಅಂದಿಗಾಗಲೆ ದಡ್ಡುಗಟ್ಟಿದ್ದ, ಚರ್ವಿತ ಚರ್ವಣವೆನಿಸಿದ್ದ, ಪಂಡಿತವರ್ಗಕ್ಕೆ ಮಾತ್ರ ಮೀಸಲಾಗಿದ್ದ ಚಂಪು ಮಾರ್ಗರಚನೆಯ ಪ್ರಾಚುರ್ಯವನ್ನು ಕಡಿಮೆ ಮಾಡಿ ದೇಸೀ ರೂಪಗಳನ್ನು ಚಾಲ್ತಿಗೆ ತಂದದ್ದು. ಬಹು ಮುಖ್ಯವಾಗಿ ಕಥಾನಕ ರಚನೆಗೆ ಹಾಸು ಬೀಸಿನಿಂದ ಕೂಡಿದ ವಿಸ್ತಾರ ತಡಿಕೆಯ ಷಟ್ಪದಿ ರೂಪಗೊಂಡು, ಚಂಪುವಿನಿಂದ ತೆರವಾದ ಸ್ಥಾನವನ್ನು ತುಂಬಿದ್ದು. ಸಿದ್ಧರಾಮಯ್ಯನ ಈ ಷಟ್ಪದಿ ಪ್ರಯೋಗ ಕುಸುಮ ಷಟ್ಪದಿಯಾಗಿ ರೂಪುಗೊಂಡಿತು. ಬಹುಶಃ, ಇದರಿಂದ ಪ್ರೇರಣೆ ಪಡೆದೊ ಏನೋ, ಸಿದ್ಧರಾಮನ ಸಮಕಾಲೀನನಾದ ಚಿಕ್ಕಯ್ಯನೆಂಬೋರ್ವ (ಸು. ೧೧೬೦) ವಚನಕಾರ ತನ್ನ ವಚನಗಳ ನಡುವೆ ವಾರ್ಧಕ ಷಟ್ಪದಿಯೊಂದನ್ನು ರಚಿಸಿದ. ಅದು ಹೀಗಿದೆ:

ಭವಪಾಶ ಬಂಧದಿಂ ಬಿಗಿದು ಕಪಿಲೆಯ ಹುಲಿಯ
ಗವಿಯೊಳಗೆ ಕಟ್ಟಿದಂತಾದೆ ಸಂಸಾರವೆಂ
ಬವಿಚಾರ ಸರ್ಪ ಸರ್ವಗ್ರಾಸಗೊಂಡುದಿದನೊಮ್ಮೆ ಪರಿಹರಿಸಿ ನಿಮ್ಮ
ಅವಿರಳ ಶ್ರೀಪಾದದೊಳು ಮಗ್ನನಾಗಿ ಮ
ತ್ತವಿಕಲ್ಪ ಸಮಸುಖಾನಂದದೊಳಗೆಂದಿಹೆನೊ
ಭವಭರಿತ ಪರಮೇಶ ಪಾಲಿಸೈ ಸದ್ಗುರುವೆ ಉಳುಯುಮೇಶ್ವರಲಿಂಗವೇ ॥

ಇವೆಲ್ಲವನ್ನೂ ಗಮನಿಸಿದರೆ 'ಮೂಲ ಷಟ್ಪದ, ಅನಂತರದ ಷಟ್ಪದಿ'ಯ ವಿಕಾಸದ ಹಂತದ ಪ್ರಯೋಗಾವಸ್ಥೆಯಲ್ಲಿತ್ತೆಂದು ಹೇಳಬಹುದು.'ಷಟ್ಪದ' ಏಕರೂಪಿ, ಅಂಶಗಣ ಘಟಿತವಾಗಿದ್ದರೆ, ಸಿದ್ಧರಾಮ ಹಾಕಿಕೊಟ್ಟ 'ಷಟ್ಪದಿ' ಶರ, ಕುಸುಮ, ಭೋಗ, ಭಾಮಿನಿ, ವಾರ್ಧಕ ಮತ್ತು ಪರಿವರ್ಧಿನಿ ಎಂಬ ಆರು ರೂಪಗಳ ಮಾತ್ರಾಗಣ ವಿನ್ಯಾಸ ತಳೆಯಲು ತಳಹದಿಯಾಯಿತು. ಅದು ಮುಂದೆ ಕಾವ್ಯ ಸಂದರ್ಭದಲ್ಲಿ ತುಂಬಾ ಪ್ರಾಚುರ್ಯಕ್ಕೆ ಬಂದು, ವಾರ್ಧಕದಲ್ಲಿ ರಾಘವಾಂಕ, ಲಕ್ಷ್ಮೀಶ, ವಿರೂಪಾಕ್ಷ ಪಂಡಿತ ಮೊದಲಾದ ಕವಿಪುಂಗವರನ್ನು, ಭಾಮಿನಿಯಲ್ಲಿ ಭೀಮಕವಿ, ಚಾಮರಸ, ಕುಮಾರವ್ಯಾಸ, ಕುಮಾರ ವಾಲ್ಮೀಕಿ ಮೊದಲಾದ ಕವಿವರೇಣ್ಯರನ್ನೂ ಕೊಟ್ಟಿತು. ಸಿದ್ಧರಾಮನ ಪ್ರಯತ್ನದಿಂದಾಗಿ ಕನ್ನಡ ಕಾವ್ಯ ಪೊರೆಬಿಟ್ಟ ಹಾವಿನಂತೆ ಹರಿದು ಕುಮಾರವ್ಯಾಸನೇ ಮೊದಲಾದ ವಿಶ್ವ ಕವಿಗಳನ್ನು ಕನ್ನಡಕ್ಕೆ ಕೊಡುವಂತಾಯಿತು.

* * *

ದೇಸಿ ರಚನೆಯ ದ್ವಾರತೆರೆದ ಶಿವಯೋಗಿ ಸಿದ್ಧರಾಮ ಶಿವಕವಿಯೂ ಆಗಿದ್ದಾನೆ. ಅವನ ವಚನಗಳಲ್ಲಿ ಅನೇಕ ಕಾವ್ಯಾಂಶ ಭರಿತ ರಚನೆಗಳನ್ನು ಕಾಣಬಹುದು.

ಕಾಮನನು ನೋಡಿದಾ ಕಂಗಳಲ್ಲಿ ನೋಡದೆ
ಸೋಮನಯನದಿ ನೋಡಿ ಸಲಹು ತಂದೆ
ಕಾಮಾರಿ ಕಪಿಲಸಿದ್ಧಮಲ್ಲಿಕಾರ್ಜುನ ತಂದೆ
ಕಾಮಂಗೆ ಒಪ್ಪಿಸದಿರೆನ್ನ ತಂದೆ.
ಅನ್ಯಾಯದಿಂದ್ಯೆದು ನಾಯಕಟ್ಟಿ

ಅವನು ಬಿನ್ನಾಣದಿಂ ಬೇಂಟೆಯಾಡುತ್ತಿಪ್ಪಾ?
ಎನ್ನ ಕಂಡಡೆ, ತನ್ನ ಹೋ ಮೃಗವು ಎಂದೆನಿಸುವಾ?
ಇನ್ನೇವೆನ್ನೈ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಾ.

ಇದೊಂದು ಸುಂದರ ಭಾವಗೀತ. ಬೇಟೆ ಪ್ರತಿಮೆಯ ಮೂಲಕ ಆತ್ಮರಕ್ಷಣೆ, ಚಾರಿತ್ರ್ಯ ಸಂರಕ್ಷಣೆಗಳ ಬೇಡಿಕೆ ಅಭಿವ್ಯಕ್ತವಾಗಿದೆ. ಮತ್ತೊಂದು ಬೋಧಪ್ರದ ಕವನ ಹೀಗಿದೆ:

ಆನಂದ ಬ್ರಹ್ಮನಲಿ ತಾನೊಂದು ರೂಪಾಗಿ
ತಾನು ತನ್ನೊಳಗೆ ತುರಿಯಾ ತುರಿಯದ
ಭಾನುವಿನ ಉದಯದೊಳು ಆನತವು ಕಮಳಕ್ಕೆ
ಸ್ವಾನು ಭೂತೈಕ್ಯದೊಳು ತನುಲಿಂಗದ.
ಸೀಮೆಯನು ಪರದಲ್ಲಿ ಭಾವವನು ಮನದಲ್ಲಿ
ಆನತದ ದೀಕ್ಷಿತಾ ತನುತ್ರಯದಲಿ
ನಾಮಧರ ಕಪಿಲಸಿದ್ಧಮಲ್ಲಿಕಾರ್ಜುನನೆಂಬವನ
ಕಾಮ್ಯಾರ್ಥದಲಿ ತಾನುಕಾಣಲರಿದು.

ಕಾಮ ಹೇಮವ ತೊರೆದು ಸೋಮನಲ್ಲಿ ಮನಲೀನವಾದಲ್ಲಿ ಮಾತ್ರ ಸರ್ವೇಶನ ಸಾಕ್ಷಾತ್ಕಾರ, ಶಿವಪದವಿ. ಅಲ್ಲದಿದ್ದರೆ ಅದು ದೊರಕುವಂಥದಲ್ಲ ಎಂಬ ತತ್ತ್ವ ಇಲ್ಲಿ ವೇದ್ಯ.

ಬಸವಣ್ಣನವರ ವಚನ ಪ್ರಭಾವಕ್ಕೆ ಒಳಗಾಗಿದ್ದರೂ ಸಿದ್ಧರಾಮಯ್ಯನ ಒಂದು ವಚನ ಅಲಂಕಾರಿಕವಾಗಿ ಅಭಿವ್ಯಕ್ತಗೊಂಡು ಓದುಗನನ್ನು ಬೆರಗುಗೊಳಿಸುತ್ತದೆ. ಆ ವಚನ ಹೀಗಿದೆ:

ಆತನ ಸುಖ ದುಃಖವೀತಗೇನು?
ಈತನ ಸುಖದುಃಖವಾತಗೇನು?
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಅರಿವ ಸಂತೈಸಿಕೊಳ್ಳಿ
ರಂಭೆ ಎಂದಡೆ ನಿನ್ನಂಗನೆಯಾಗಲಿಲ್ಲವು
ಒಂದು ದಿನ ಸ್ವಪ್ನದಲ್ಲಾದರೂ ರತಿಸಲಿಲ್ಲ ನೋಡಾ
ಕಪಿಲಸಿದ್ಧಮಲ್ಲಿಕಾರ್ಜುನಾ.

ಎಂದು. ಅಂತೆಯೇ 'ಕುತ್ಸಿತ ಕಾವ್ಯಾಲಂಕಾರ ನೋಡುವವರ ನೋಡಿ ಹುಡಿ ಮಣ್ಣು ಹೊಯ್ಯದೆ ಮಾಬನೆ' ಎಂದು ಅಲಂಕಾರ, ಛಂದಸ್ಸು, ವ್ಯಾಕರಣಾದಿಗಳ ಬಗೆಗೆ ತನಗೊಲವಿಲ್ಲದ್ದನ್ನು ಹೇಳಿಕೊಂಡರೂ ಸಿದ್ಧರಾಮನಲ್ಲಿ ಅನೇಕ ಅಲಂಕಾರಗಳ ಆವಿರ್ಭಾವವಿದೆ. ವಿಶೇಷವಾಗಿ ದೃಷ್ಟಾಂತಾಲಂಕಾರ. ಈ ಅಲಂಕಾರದ ಸರಮಾಲೆಯೆ ಒಂದೆಡೆ ಇದೆ. ಅವುಗಳಲ್ಲಿ ಉದಾಹರಣಾರ್ಥವಾಗಿ ಒಂದು:

ಬೀಸುವ ಗಾಳಿ ಧೂಳನೆತ್ತಲು
ಮಸುಳಿದನೆ ಸೂರ್ಯನು?
ಆ ಸೂರ್ಯನಂತೆ ಬೆಳಗುತ್ತಿರವೇಡಾ.
ಹಿರಿಯರ ಮನವು ಮನವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯಾಗುತಾ
ಎನ್ನನೆಂದು ಪೊಂದಿಪ್ಪುದು
ಕಪಿಲಸಿದ್ಧಮಲ್ಲಿಕಾರ್ಜುನಾ.

ಮತ್ತೊಂದು ದೃಷ್ಟಾಂತ:

ಉದಕವೆಲ್ಲಾ ಒಂದೆ:

ಈಚಲವ ಆಶ್ರಯಿಸಿ ಮದ್ಯಪಾನವೆನಿಸಿತು:
ಸುರತರುವ ಆಶ್ರಯಿಸಿ ಅಮೃತವೆನಿಸಿತ್ತು.

ದೇಹವೆಲ್ಲಾ ಒಂದೆ:

ಅಂಗನೆಯರ ಆಶ್ರಯಿಸಿ ಭವಕ್ಕೆ ಬೀಜವಾಯಿತ್ತು
ಲಿಂಗವ ಆಶ್ರಯಿಸಿ ಭವಾರಣ್ಯಕ್ಕೆ ದಾವಾನಲವೆನಿಸಿತ್ತು ನೋಡಾ,
ಕಪಿಲ ಸಿದ್ಧಮಲ್ಲಿಕಾರ್ಜುನಾ.

ಈ ರೀತಿ ಸಾದೃಶ್ಯವಿತ್ತು ತನ್ನ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವ ಹಲವು ಹತ್ತೆಂಟು ವಚನಗಳಿವೆ ಸಿದ್ಧರಾಮಯ್ಯನಲ್ಲಿ. ಅಂತೆಯೇ 'ಬತ್ತಿದ ಕೆಜಿ ಬಾಯಿಬಿಟ್ಟಂತೆ', 'ನಾಗರನಂಗ ಗರುಡನ ಬಾಯಿಗೆ ಬಿದ್ದಂತೆ', 'ಕಪಿಲೆಯ ಕಂದನಂತೆ', 'ಬಾಲನ ಮಾತು ಮಾತೆ ಪಿತರಿಗೆ ಪ್ರೀತಿಯಪ್ಪಂತೆ'– ಮೊದಲಾದ ಉಪಮೆಗಳು, 'ಮನವಿದ್ದಲ್ಲಿ ಮಹಾದೇವನಿಪ್ಪ', 'ಪಂಚಮದಾಯತ ಕೋಗಿಲೆಗಲ್ಲದೆ ಕಾಗೆಗೆಲ್ಲಿಯದೊ', 'ಪಾಲುಂಡ ಬಳಿಕ ಮತ್ತೇನನು ಉಂಬರೇ', 'ಬೇರ ಬಲ್ಲವರಿಗೆ ಎಲೆಯ ಬಣ್ಣಿಸುವಂತೆ', 'ತೂರಿಭೋ ಹಾಲುಳ್ಳಲ್ಲಿ ಹಬ್ಬವನು'– ಮೊದಲಾದ ಗಾದೆ ಮಾತುಗಳು ಹೇರಳವಾಗಿವೆ ಇವನ ವಚನಗಳಲ್ಲಿ.

ಸಿದ್ಧರಾಮಯ್ಯನಲ್ಲಿ ಆತ್ಮ ಸೌಂದರ್ಯದಿಂದ ದೀಪ್ತವಾದ ವಚನಗಳು ಹಲವು. ಮುಖ್ಯವಾಗಿ ಮಧುರ ಭಾವದ ದಾಂಪತ್ಯದ ಒಲವಿನಲ್ಲೆ ಶಿವನನ್ನೊಲಿಸುವ ಚದುರ ಚೆಲುವು ಇವನ ವಚನಗಳಲ್ಲಿದೆ. ಒಂದು ಉದಾಹರಣೆ:

ಅಭ್ಯಂತರದಲಿಪ್ಪ ಗಂಡ
ಗುರುವಿನ ಅನುಮತದಿಂದ ಸರ್ವಾಂಗಕ್ಕೆ ಬಂದಾನು
ಮನೆಯನಿಂಬುಮಾಡು ಮದವಳಿಗೆ
ಮನೆಯಲಿದ್ದೆರಡನೂ ಎಬ್ಬಟ್ಟಿನವ್ವಾ,
ಸಿದ್ಧ ಶುದ್ಧ ಪ್ರಸಿದ್ಧದಿಂದ, ದೀಕ್ಷೆ ಶಿಕ್ಷೆ ಸ್ವಾನುಭಾವದಿಂದ ಎಬ್ಬೆಟ್ಟಿ

ಮನೆಯ ಮಂಗಳವ ಮಾಡವ್ವಾ
ಕಪಿಲಸಿದ್ಧಮಲ್ಲಿಕಾರ್ಜುನಯ್ಯನೆಂಬ ಗಂಡ
ಮನೆಯೊಳಕೆ ಬಂದು ಮತ್ತೊಬ್ಬರಿದ್ದಡೆ ಸೈರಿಸ.

ವ್ಯಕ್ತಿಗೆ ಸ್ವೋಪಜ್ಞತೆ ಮುಖ್ಯ. ವ್ಯಕ್ತಿ ಎಲ್ಲೆಡೆಯೂ ತನ್ನತನವನ್ನು ಉಳಿಸಿಕೊಳ್ಳಬೇಕು, ಬೆಳೆಸಿಕೊಳ್ಳಬೇಕು. ಅನುಕರಣೆ, ಆಚರಣೆಗಳಿಂದಷ್ಟೇ ಅವನು ದೊಡ್ಡವನಾಗಲಾರ, ಅರ್ಹತೆಯೂ ಬೇಕು ಎಂಬ ಅಭಿಮತದ ಅಭಿವ್ಯಕ್ತಿ ಈ ಕೆಳಗಿನ ವಚನ.

ಕುಂಬಾಱರೆಲ್ಲರೂ ಗುಂಡಯ್ಯನಾಗಬಲ್ಲರೇ?
ಮಡಿವಾಳರೆಲ್ಲರೂ ಮಾಚಯ್ಯನಾಗಬಲ್ಲರೇ?
ನೆಯ್ಯಬಲ್ಲವರೆಲ್ಲರೂ ದಾಸಿಮಯ್ಯನಾಗಬಲ್ಲರೆ?
ಎನ್ನ ಗುರು ಕಪಿಲಸಿದ್ಧ ಮಲ್ಲೇಶ್ವರಯ್ಯಾ
ಪ್ರಾಣಿಯ ಕೊಂದು ಪರಿಹರಿಸಬಲ್ಲರೆ?
ತೆಲಗು ಜೊಮ್ಮಯ್ಯನಾಗಬಲ್ಲರೆ?

ಸಿದ್ಧರಾಮನದು ಸ್ವತಂತ್ರ ಧೀರ ಮನೋಧರ್ಮ. ಅದು ಕ್ರಾಂತಿಕಾರಕ ಮನೋಧರ್ಮವೂ ಅಹುದು. ಯಾವುದನ್ನೇ ಆಗಲಿ ತನ್ನ ವಿವೇಚನೆಯ ಒರೆಗಲ್ಲಿಗೆ ಹಚ್ಚದೇ ಸ್ವೀಕರಿಸುವುದೇ ಇಲ್ಲ. ಷಟ್‌ಸ್ಥಲದ ಬಗೆಗೂ ತನ್ನದೇ ಆದ ವ್ಯಾಖ್ಯಾನ:

ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶತಣ ಐಕ್ಯನೆಂದು
ಹೆಸರಿಟ್ಟುಕೊಂಡಿರಿ.
ಆಱು ಪರಿಯಲ್ಲಿ ಆಱೂಢವನಱಯಿರಿ.
ಭಕ್ತನಾದಡೇಕೆ ಭವದ ಬೇರು?
ಮಾಹೇಶ್ವರನಾದಡೇಕೆ ಪ್ರಳಯಕ್ಕೊಳಗಾಗುಹ?
ಪ್ರಸಾದಿಯಾದಡೇಕೆ ಇಂದ್ರಿಯವೈದ್ಯರಲ್ಲಿ ನಿಗ್ರಹಿಯಾಗುಹ?
ಪ್ರಾಣಲಿಂಗಿಯಾದಡೇಕೆ ಉತ್ಪತ್ತಿ ಸ್ಥಿತಿ ಲಯಕ್ಕೆ ಒಳಗಾಗುಹ?
ಶರಣನಾದಡೇಕೆ ಉಪ ಬಾಧೆಗೊಳಗಾಗುಹ?
ಐಕ್ಯನಾದಡೇಕೆ ಇಹಪರವನಱಯದಿರುಹ?
ಇವೆಲ್ಲ ಠಕ್ಕು, ಇವೆಲ್ಲ ಅಭ್ಯಾಸ
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ ನಿನ್ನ ಷಟ್ಸ್ಥಲವಭೇದ್ಯ.

ಇಂತಹ ಅನನುಭಾವಿಗಳನ್ನು 'ಇಷ್ಟಲಿಂಗವ ತೋಱ ಹೊಟ್ಟೆಯ ಹೊರೆವರು' ಎಂದು ದಟ್ಟಿಸಿ ನುಡಿಯುತ್ತಾನೆ.

ಶಾಸ್ತ್ರವೆಂಬುದು ಮನ್ಮಥಶಸ್ತ್ರವಯ್ಯಾ
ವೇದಾಂತವೆಂಬುದು ಮೂಲಮನೋವ್ಯಾಧಿಯಯ್ಯಾ

ಪುರಾಣವೆಂಬುದು ಮೃತರಾದವರ ಗಿರಾಣವಯ್ಯಾ
ತರ್ಕವೆಂಬುದು ಮರ್ಕಟಾಟವಯ್ಯಾ
ಆಗಮವೆಂಬುದು ಯೋಗದ ಘೋರವಯ್ಯಾ
ಇತಿಹಾಸವೆಂಬುದು ರಾಜರ ಕಥಾಭಾಗವಯ್ಯಾ
ಸ್ಮೃತಿಯೆಂಬುದು ಪಾಪಪುಣ್ಯ ವಿಚಾರವಯ್ಯಾ
ಆದ್ಯರ ವಚನವೆಂಬುದು ಬಹುವೇದ್ಯವಯ್ಯಾ
ನಮ್ಮ ಕಪಿಲ ಸಿದ್ಧಮಲ್ಲಿಕಾರ್ಜುನನ ತಿಳಿಯಲಿಕ್ಕೆ.

ಎಂದು ಶಾಸ್ತ್ರಾದಿಗಳ ಒಳತಿರುಳು ಹೇಳಿ 'ವಚನ ವಾಙ್ಮಯವನ್ನು ವೈಭವೀಕರಿಸಿದ್ದಾನೆ'. ಈ ಬಗೆಯ ವಚನ ರಚನೆಗಳಿಂದ ಸಿದ್ಧರಾಮಯ್ಯನ ಸ್ವತಂತ್ರ ಮನೋಧರ್ಮ ಸುವೇದ್ಯ.

ಸಿದ್ಧರಾಮ ತುಂಬಾ ಪ್ರಾಸಪ್ರಿಯ ವ್ಯಕ್ತಿ. ಕನ್ನಡಕವಿ ಪೆಮ್ಮಿಶೆಟ್ಟಿಯನ್ನು ಬಿಟ್ಟರೆ ವಿಪುಲ ಪ್ರಾಸಪ್ರಯೋಗ ನಡೆಸಿದವನು ಇವನೇ ಎಂದು ಹೇಳಬಹುದು. ಪ್ರಾಸವುಳಿದ ವಚನಗಳೇ ವಿರಳ. ಅವನ ಪ್ರಾಸಪ್ರಿಯತೆಗೆ ಒಂದೆರಡು ಉದಾಹರಣೆಗಳು;

ಎಸಳ ಮಂಟಪದಲ್ಲಿ ಕುಸುಮನಾಳದ ಭೇದ
ಶಶಿಧರನ ಮಸ್ತಕದ ಧವಳಗಿರಿಯ
ಒಸರುವ ಆನಂದ ವಿಪರೀತ ಬಾಷ್ಪುವಿನ
ಲೆಸೆದಿರ್ದುದೈದೆ ಸದ್ಭಕ್ತಿ ಕ್ರೀಯು
ಶಶಿಧರ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ
ವಶದೊಳಿರ್ಪಂಗಲ್ಲದೆ ಕಾಣದಿದು.

ಇಂತಹ ಅರ್ಥವತ್ತಾದ ಅನುಪ್ರಾಸಗಳಲ್ಲದೆ ಅಬ್ಬರದ ಒಳಪ್ರಾಸಗಳೂ ಉಂಟು.

ಹಬ್ಬುಗಳೆಲ್ಲ ಉಬ್ಬುಬ್ಬಿ ಲಿಂಗದ ಹಬ್ಬಕ್ಕೆ ಬಂದಬ್ಬರವ ನೋಡಾ
ಲಿಂಗದ ಹಬ್ಬ ನಿಮ್ಮ ಬಾಯಿಗೆ ಒಬ್ಬಿಯಲ್ಲದೆ
ನಿಮ್ಮ ಜನನಕ್ಕೆ ಹಬ್ಬವೇನೊ, ಕಬ್ಬಿಲ ಮಬ್ಬುಳ್ಳ
ಕಪಿಲಸಿದ್ಧಮಲ್ಲಿಕಾರ್ಜುನನೊಬ್ಬನಱಿದಿರ್ದಡೆ.

ಇಂತಹ ಆತ್ಮ ಅಧ್ಯಾತ್ಮಪರವಾದ ವಚನಗಳಿಂದ ಸಿದ್ಧರಾಮಯ್ಯನ ಭಾವ ಪ್ರಪಂಚ ಪ್ರಜ್ವಲಿಸಿದೆ; ಅನುಭಾವದ ಅನಂತ ದೀಪ್ತಿಯನ್ನಿತ್ತು ಜಗ ಬೆಳಗಿದೆ.

ಸಿದ್ಧರಾಮನ ವಚನವಾರಾಶಿಯಲ್ಲಿ ನುಡಿಮುತ್ತುಗಳು ರಾಶಿ ರಾಶಿ. ಅವು ಅಮೃತೋಪಮ ಆಣಿ ಮುತ್ತುಗಳು ಕೂಡ. ಅವುಗಳಲ್ಲಿ ಕೆಲವು ಹೀಗಿವೆ:

'ಶಿಶುವಿನ ಕ್ರೀಡೆಯದು ತಾಯಿಗಲ್ಲದೆ ಅನ್ಯರಿಗುಂಟೆ?'
'ಮಗನಿಗಾದ ನೋವು ತಂದೆ ತಾಯಿಗಳಿಗಾಗದೆ ಅನ್ಯರಿಗೆಲ್ಲಿಹುದೊ'

'ಬಾಲನ ಮಾತು ಮಾತೆ ಪಿತರಿಗೆ ಪ್ರೀತಿಯಪ್ಪಂತೆ'
'ತಂದೆಯೊಡನುಂಡ ಶಿಶು ತಾಯಿಯೊಡನುಣ್ಣದೆ'
'ಕೆಱೆಯೊಳಗೆ ಬಾವಿಯನು ಅಗಳುವವ ಮುನ್ನೆಗ್ಗ'
'ಸಾಕುವವರು ತಾವಾದ ಬಳಿಕ, ನೂಕುವವರು ತಾವಾಗಬಾರದಯ್ಯಾ'
'ಅಱಿದೆನೆಂಬವಂಗೆ ನಾನು ನೀನು ಎಂಬುದೆ ಮಾಯೆ'
'ಆಸೆಯೆಂಬವಳು ಆರನಾದಡೆಯೂ ತನ್ನತ್ತಲೆ ಎಳೆವಳು'
'ಆರೇನೆಂದಡೂ ಓರಂತಿಪ್ಪುದೆ ಸಮತೆ'
'ಸಂಸಾರವೆಂಬ ಸಾಗರಕೆ ಒಡಲೆಂಬುದೊಂದು ಭೈತ್ರ ಕಂಡಯ್ಯಾ'
'ಇಟ್ಟೆಗೆ ಬಂದ ಬಳಿಕ ಉಪಚಾರಕ್ಕೆ ತೆಱಹುಂಟೆ?'
'ಮುಳುಗುವಾತ ಮುಳುಗುವವನನೆತ್ತಬಲ್ಲನೆ?'
'ಒಬ್ಬರ ಮನವ ನೋಯಿಸಿ, ಒಬ್ಬರ ಮನೆಯ ಘಾತವ ಮಾಡಿ
ಗಂಗೆಯ ಮುಳುಗಿಡದೇನಾಗುವುದಯ್ಯಾ'
'ಪರತರವ ಸಾಧಿಸುವಡೆ ಪ್ರಪಂಚದ ವಿಷಯ ಅಳಿದಿರಬೇಕು'
'ಪಶುಗಳಿಗೆಲ್ಲ ಪೃಷ್ಠದಲ್ಲಿ ಬಾಲವಿದ್ದಡೆ,
ಮಾಡುವೆನೆಂಬನ ಮುಖದಲ್ಲಿ ಬಾಲ ನೋಡಾ'
'ರಸದಂತೆ ಭಕ್ತ, ರುಚಿಯಂತೆ ಜಂಗಮ'
'ಹಾಲುಳ್ಳಲ್ಲಿ ಹಬ್ಬವ ಮಾಡಿ, ಗಾಳಿಯುಳ್ಳಲ್ಲಿ ತೂಱಿಕೊಳ್ಳಿರಿ'
'ಗುಣದಿಂದ ಹಾರುವನಲ್ಲದೆ, ಅಗಣಿತ ವಿದ್ಯಾಭ್ಯಾಸದಿಂದ ಹಾರುವನಲ್ಲ'
'ಪುಣ್ಯವ ಮಾಡಬೇಕೆಂದು ಮಱುಗಬೇಡ, ಪಾಪವ ಮಾಡದಿದ್ದಡೆ ಪುಣ್ಯ ದಿಟ'
'ಸುಖಾದಿಗಳು ಬಂದಡೆ ಎನ್ನಿಂದಾಯಿತ್ತೆಂಬೆ
ದುಃಖಾದಿಗಳು ಬಂದಡೆ ನಿನ್ನಿಂದಾಯಿತ್ತೆಂಬೆ'
'ಜಲದೊಳಗೆ ಭವಿಸಿತ್ತು, ಜಲಕೆ ನಂದದ ಕಿಚ್ಚು'
'ಗುರುಶಿಷ್ಯ ಸಂಬಂಧ ಜಲಹಾಲಿನಂತಿಕ್ಕು'
'ಶ್ರೀಯಾದಡೆ ಉತ್ಸಾಹದಿಂದ ಉಬ್ಬದೆ,
ಕೆಟ್ಟಡೆ ಮನನೊಂದು ಖಿನ್ನವಾಗದಂತೆ ಇರಬೇಡಾ?'

ಇಂತಹ ಪುಟ ಪುಟಗಳಷ್ಟು ವ್ಯಾಖ್ಯಾನ ವಿವರಣೆ ಬೇಡುವ ನೂರಾರು ಸೂಕ್ತಿಗಳು ಗರ್ಭೀಕೃತ ಸಿದ್ಧರಾಮಯ್ಯನ ವಚನಗಳಲ್ಲಿ.

ಸಿದ್ಧರಾಮಯ್ಯನದು ಪದಪ್ರಯೋಗಶೀಲ ಮನಸ್ಸು . ಕನ್ನಡ ಕಾರಣಪುರುಷ ವಚನಕಾರರಲ್ಲಿ ಇವನೂ ಒಬ್ಬನಾದ್ದರಿಂದ ಇವನಲ್ಲಿ ಅನೇಕ ಕನ್ನಡ ಶಬ್ದಗಳೂ ಹೊಸದಾಗಿ ಉಂಟಾಗಿವೆ;

ನೂತನ ಪದಪ್ರಯೋಗಗಳೂ ಇಲ್ಲಿ ನಂಟಾಗಿವೆ. ಉದಾಹರಣೆಗಾಗಿ ಬೆಂಗುಂಡು, ಲಾಂಚನ ಲಂಪಟರು, ಮನಪುಷ್ಪ, ಇಚ್ಛಂದ, ಕಾಲನಕಮ್ಮಟ, ಕಂಜಕನ್ನಿಕೆ, ಹೋಬಳಿ-ಇತ್ಯಾದಿ.

ಕೃಷಿಕಾಯಕದ ಕರ್ಮಯೋಗಿ ಸಿದ್ಧರಾಮ ಇಂಥವೆನಿತೊ ಸಾಹಿತ್ಯಕ ಕೃಷಿಯನ್ನು ಮಾಡಿ ಯಶಸ್ವಿಯಾಗಿದ್ದಾನೆ.

* * *

ಪ್ರಸ್ತುತ ವಚನ ಸಂಕಲನದ ಬಗೆಗೆ ಒಂದೆರಡು ಮಾತು:

ಇದು ನಮ್ಮ ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಪಟೂರು ತಾಲೂಕು ಹೊನ್ನವಳ್ಳಿಯಲ್ಲಿರುವ ಶ್ರೀ ಕರಿಸಿದ್ಧದೇವರ ಮಠದಲ್ಲಿ ನಮಗೆ ದೊರೆತ ಬೃಹತ್ ಪ್ರಮಾಣದ ಓಲೆಕಟ್ಟಿನ ಹೊತ್ತಗೆ. ಶ್ರೀಮಠದಲ್ಲಿ ಸುಮಾರು ೪೪೮ ಓಲೆಕಟ್ಟುಗಳು ಸಿಕ್ಕಿದುವು. ಅವುಗಳಲ್ಲಿ 'ಎಲ್ಲಾ ಪುರಾತರ ವಚನಗಳು' ಹೆಸರಿನದು ದೊಡ್ಡ ಕಟ್ಟು, ಇದರ ಒಂದು ಭಾಗ 'ಸಿದ್ಧರಾಮಯ್ಯದೇವರ ವಚನಗಳು'. ಇವುಗಳಲ್ಲಿರುವ ಅನೇಕ ವಚನಗಳು ಹೊಸವು, ಬೇರೆಲ್ಲೂ ಈವರೆಗೆ ಸಿಕ್ಕಿದವುಗಳಲ್ಲ. ಈ ದೃಷ್ಟಿಯಿಂದ ಇದು ಸಿದ್ಧರಾಮನ ಸಾಹಿತ್ಯ ಸಿದ್ಧಿಗಳ ಬಗೆಗೆ, ವಚನ ವಾಙ್ಮಯದ ವೈಶಿಷ್ಟ್ಯಗಳ ಬಗೆಗೆ ವಿಶೇಷ ಬೆಳಕು ಚೆಲ್ಲುತ್ತದೆ. ಸಂಶೋಧಕರಿಗೆ ಉತ್ತಮ ಆಹಾರ ಇಲ್ಲಿ ದೊರೆಯುತ್ತದೆ.

ಇದರ ಸಂಕಲನಕಾರ ಸಂಪೂರ್ಣವಾಗಿ ಅಜ್ಞಾತ ವ್ಯಕ್ತಿ. ಬಹುಶಃ ಹೊನ್ನವಳ್ಳಿಯ ಶ್ರೀಮಠದ ಪೂಜ್ಯ ಸ್ವಾಮೀಜಿಯವರೇ ತಮ್ಮ ಸ್ವಹಸ್ತಾಕ್ಷರದಿಂದ ಪ್ರತಿ ಮಾಡಿಕೊಂಡು, ತಮ್ಮ ನಿತ್ಯ ಪ್ರವಚನಾದಿಗಳಿಗೆ ಬಳಸಿಕೊಳ್ಳುತ್ತಿದ್ದಿರಬಹುದು. ಆದರೆ ಅನೇಕ ಗರಿಗಳು ಗೈರುವಿಲೆಯಾಗಿರುವುದರಿಂದ ಉಳಿದವುಗಳಲ್ಲಿ ವ್ಯವಸ್ಥಿತ ವಿಭಜನೆ ಕಂಡುಬರುವುದಿಲ್ಲ. ಬಸವಾದಿ ಪ್ರಮಥರ ವಚನಗಳ ಷಟ್ಸ್ಥಲಾಧಾರ ವಿಭಜನೆಯಿಂದ ಇಲ್ಲಿನ ವಚನಗಳು ವಿಭಜಿತವಾಗಿಲ್ಲ. ಅಲ್ಲಿನ ಸ್ಥಲದ ಕಲ್ಪನೆಗೆ ಬದಲು ಇಲ್ಲಿ-

ರಾಗ ಸಂಯೋಜಿತ ಸ್ವರವಚನಗಳು – ಪು.೩
ವೈರಾಗ್ಯ ಸಮತೆ –ಪು ೧೩
ಶ್ರೀ ರಾಮಯ್ಯದೇವರ ಸಾರೋದ್ಧಾರ – ಪು ೨೨
ಶಿವಯೋಗ : ಶ್ರೀ ರಾಮನಾಥ ಭಾಷೆ – ಪು ೬೩
ಪಾದೋದಕ ಕ್ರಮ – ಪು ೭೫
ಶ್ರೀ ಗುರು ಮಹಾತ್ಮೆ – ಪು ೯೬
ಲಿಂಗ ಮಹಾತ್ಮೆ – ಪು ೯೯
ಅಕ್ಷರಾಂಕ ಶಿವಯೋಗ ಮುದ್ರೆ – ಪು ೧೭೮
ಗುರು ಮಹಾತ್ಮ್ಯೆ – ಪು ೧೮೮
ನೇಮಾಕ್ಷರ ಭಾಷೆ – ಪು ೨೦೧
ಅನೇಕ ಪುರಾತರ ಅನುಮತದಿಂ ಬಸವಣ್ಣನೆನ್ನನಾಗು
ಮಾಡಿದ ಪರಿಯನು ಹೇಳುವನು – ಪು ೨೨೨

ಲಿಂಗೋದಯ - ಪು ೨೪೩

ಯೋಗಮುದ್ರೆ - ಪು ೨೫೫

ಸಮತೆ - ಪು ೨೭೪

ಇವೇ ಮೊದಲಾದ ವಿಶಿಷ್ಟ ತಲೆಬರಹದ ಅಧ್ಯಾಯಗಳನ್ನೊಳಗೊಂಡಿದೆ. ಇದರಿಂದಾಗಿ ಕಾವ್ಯಾಂಶ ರಚನೆಗಳಿಗಿಂತ ಆಧ್ಯಾತ್ಮಪರ ವಚನಗಳೇ ವಿಪುಲವಾಗಿ ಆಯ್ಕೆಯಾಗಿವೆ. ಬಹುಶಃ ಕಳೆದುಹೋಗಿರುವ ಗರಿಗಳಲ್ಲಿ ಕಾವ್ಯಾಂಶಭರಿತ ವಚನಗಳಿದ್ದರೂ ಇರಬಹುದು. ಆದರೂ ಈ ಸಂಗ್ರಾಹಕನ ಪ್ರಾಸಪ್ರಿಯತೆ ಮೆಚ್ಚುವಂಥದು. ತನ್ನ ಸಂಕಲನದಲ್ಲಿ ಪ್ರಾಸಬದ್ಧ, ಛಂದೋಬದ್ಧ ವಚನಗಳನ್ನೇ ಹೆಚ್ಚಾಗಿ ಆಯ್ಕೆ ಮಾಡಿ ಸೇರಿಸಿದ್ದಾನೆ. ಇಲ್ಲಿನ ವಚನಗಳಲ್ಲಿ ಸಿದ್ಧರಾಮನ ಬಹುಮುಖ ಪ್ರತಿಭೆಯ ಭೂಮವ್ಯಕ್ತಿತ್ವ ನಮ್ಮ ಕೈಗೆ ಸಿಗದಿರುವುದರಿಂದ, ಉಪಲಬ್ಧ ಇತರ ಸಂಪಾದಿತ ಕೃತಿಗಳ ನೆರವು ಪಡೆದು, ಧನ್ಯರೆನಿಸುತ್ತೇವೆ. ಕಡೆಯದಾಗಿ, ಸಿದ್ಧರಾಮಯ್ಯನ ವಚನವನ್ನು ಹಾಡಿ, ಅವನಲ್ಲಿ ನಮ್ಮನ್ನು ಗುರುತಿಸಿಕೊಂಡು ವಿರಮಿಸುತ್ತೇವೆ:

ನುಡಿ ಹಿಡಿದು ತಾರ್ಕಿಕರಂತೆ ತರ್ಕಿಸುವಾತ ನಾನಲ್ಲ.
ಆಡುವ ಮಾತಿಗೆ ಈಡ ಮಾಡುವ ನುಡಿಯಲ್ಲಿ ವಾಕ್ಪಟುತನವು ನಿಜವಲ್ಲ.
ನಡೆಯುವ ನಂದಿ ಕುಂಟುವುದುಂಟು.
ಹೋಗುವ ಮನುಜ ಎಡಹುವುದುಂಟು
ಮಾತಾಡುವ ಶರಣ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ತಪ್ಪಿದಡೆ ತಪ್ಪಲ್ಲ ಕೇಳಾ, ಪ್ರಭುವೆ.

❖❖

ಸಿದ್ಧರಾಮಯ್ಯದೇವರ ವಚನ

[೧]ರಾಗ ಭೂಪಾಳಿ:
ಶಿವಯೋಗಿ ಮಹಾಯೋಗಿ:
ಇಹಪರದಲಪರದಲಿ ಯೋಗಿ
ಪರಿಮಳದ ಪುಷ್ಪದೊಳಗಾನಂದ ಲೀಲೆಯಲಿ
ಭ್ರಮರಿಸುತ ಬೆರೆಸಿದನು ಯೋಗಿ ಶಿವಯೋಗಿ ॥ಪಲ್ಲವ॥

ಅಮೃತ ಕ್ಷೀರಾಂಬುಧಿಯ ಅಹಿಮಂಡಲದಲ್ಲಿ
ಸರವರದ ತಾವರೆಯ ಕಮಳದಲ್ಲಿ
ಎಸಳ ಪೊಸ ಕುಸುಮದ ನನೆ ಬಿರಿಯೆ ಮುಗುಳೊಳಗೆ
ಭ್ರಮರಿಸುತ ಬೆರೆಸಿದನು ಯೋಗಿ ಶಿವಯೋಗಿ ॥೧॥

ಅಷ್ಟದಳ ದಳದ ಸೂಸಕದ ಪದುಮಾಕ್ಷಿಗಳ
ಹಾರದಾಧಾರದಃ ನಾಳದಲ್ಲಿ
ಈಡ ಪಿಂಗಳ ನಿಟಿಲಪಂಕಜ ತಟಾಕದಲಿ
ಭ್ರಮರಿಸುತ ಬೆರೆಸಿದನು ಯೋಗಿ ಶಿವಯೋಗಿ ॥೨॥

೧+ ಶ್ರೀ ಗುರು ಬಸವಲಿಂಗಾಯನಮಃ। ಸಿದ್ಧರಾಮೇಶ್ವರಾಯ ನಮಃ। ಶುಭಮಸ್ತು ನಿರ್ವಿಘ್ನಮಸ್ತು. ಸಿದ್ಧರಾಮಯ್ಯಗಳ ವಚನ(ಮೂ)

ಬಲಮುರಿಯ ಶಂಖಚಕ್ರದ ಬ್ರಹ್ಮಸ್ಥಾನಕದ
ಶಿಖಿಯ ನಾಭಿಯ ಫಣಿಗಳಲ್ಲಿ
ಒಂಬತ್ತು ಮಸ್ತಕದ ಮಂದಿರದs ಜ್ಯೋತಿಯೊಳು
ಭ್ರಮರಿಸುತ ಬೆರೆಸಿದನು ಯೋಗಿ ಶಿವಯೋಗಿ ॥೩॥

ಐದು ರತ್ನದ ತಾರಾಂಬರದ ತುಂಬಿನ ರಸದ
ಮಾಣಿಕದ ಗೊಂಚಲಲ್ಲಿ
ಅಗಮ್ಯಾಗೋಚರ ಆಧಾರ ಬೆಳಗಿನೊಳು
ಭ್ರಮರಿಸುತ ಬೆಳಗಿದನು ಯೋಗಿ ಶಿವಯೋಗಿ ॥೪॥

ಸಕಳಕಳ ನಿಕಳಂಕ[೧] ಕೊಡನಾಗಿ ಪರನಲಿ
ಪ್ರಧಾನಿಮಂತ್ರಿ ಪರಮತತ್ವದೊಳಗೆ
ಪರಿಣಾಮಿ ಸೊನ್ನಲಿಗೆಯ ಸಿದ್ಧರಾಮಯ್ಯ
ಗುರು ಯೋಗಿ ಶಿವಯೋಗಿ ॥೫॥

ರಾಗ ಮಲಹರಿ:
ಏಕೋ ವೃಕ್ಷದ ಕೆಳಗೆ ನಿಂದಿರ್ದೆ
ನಾಕು ಕೊಂಬಿನ ಫಲವನಜೀವರೆ ಆ ಆ ಆ
ನಾಕು ಕೊಂಬಿನಫನವs ನಜೀವರೆಯೆ ಯೆ ಯೆ।
ಈ ಫಲವsನಜಿದು
ಹಣ್ಣು ಕೊಯಿಪ ಕನ್ನಡ ಜಾಣನೆ ಆ ಆ ಆ ॥೧॥

ಗಗನ ಗಗನವೆಲ್ಲಾ ಶ್ವೇತ ಪೀತ ವರ್ಣ ಓ ಓ ಓ
ಬಹುರೂಪ ಬಹುದಾಯ ಚಂದ್ರಸೂರ್ಯಚರಣ ಓ ಓ ಓ
ಬಹುರೂಪ ಬಹುದಾಯ ನಕ್ಷತ್ರಂಗಳುವೆಲ್ಲ
ಶಿವನಕ್ಷಯ ಮಾಲೆಗಳಾ ಆ ಆ ಆ
ಬಹುರೂಪು ಬಹುದಾಯ

೧ + ಕೊದ(ಮೂ)

→ ಲೆಕ್ಕಕೆ ಬಾರದ ಘನವ ಚಕ್ಕನೆ ಹೇಳಿದ ಕನ್ನಡ ಜಾಣ
ಬಹುರೂಪು ಬಹುದಾಯ ॥೨॥

ಹಿತ್ತಲ ಹಿಂದೆ ಒಂದು ಕುಸುಮದ ಗಿಡಹುಟ್ಟಿ
ದೆಸೆದೆಸೆಗೆ ಬೇರುವರಿಯಿತ್ತಲಯ್ಯಾ,
ಕೊಂಬು ಬೇರಾಗಿ ಬೇರು ಕೊಂಬಾಗಿ
ಗಿಡುವಿನ ಮೇಲೆ ಗಿಡ ಹುಟ್ಟಿತಯ್ಯಾ.
ಕೊಂಬು ಬೇರಾಗಿ ಅದಱ ಹೂ ಕುಡಿ ಫಲಗಳನು
ಬೀಸರವೋಗದ ಮುನ್ನವೆ ಇದುವೆ ದಶಮುಖ ಸಿದ್ಧರಾಮಯ್ಯಾ
ಕೊಂಬು ಬೇರಾಗಿ. ॥೩॥

•

ವಚನ :
ಅಜ್ಞಾನವೆನ್ನದು ಜ್ಞಾನ ನಿನ್ನದು,
ಶಿವಯೋಗಿ ಸಿದ್ಧರಾಮಯ್ಯ ತಮಂಧದಲಿ ಬಿದ್ದಿದ್ದೇನೆ.
ಮುದ್ದ ಸಲಿಸೂದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧॥

ಕರ್ಮದ [1]ಗ[1] ಡಣವು ಹಿಂಗಿತು,
ಪಾಪದ ರಾಸಿ ತೊಲಗಿ ಹೋಯಿತ್ತು,
ಬಲ್ಲೆನೊಲ್ಲೆನೀ ಸಂಸಾರದ ಆಸೆಯಿಂದ ಮನನೊಂದು ಬೆಂದುದಾಗಿ
ಮಾಯದ ತಲೆಯ ಮೆಟ್ಟಿ ದಾಟಿ ಹೋದೆ,
ಮರಳಿ ಬಾ [2][ರೆ][2] ನಲ್ಲ ಮ ಯೋಗಿನಾಥನಾ[3][ಪಾದದಾ][3]ಣೆ ॥೨॥ [I–೩೧೯]

ದೇವ ದೇವನಾ ನಂಬಿದಾ
ನಂಬಿದವ್ಯೆವರ ನಿಲವ ಕೇಳಿರೊ ಅಯ್ಯಾ
ಹರಿವ ನದಿಗಳಂತೆ ಪರಹಿತಾರ್ಥವಾಗಿಪ್ಪರಯ್ಯಾ,
ತಾವು ಮಾಡುವರಲ್ಲದೆ ಮೂಲದೊಳಗಿರರು,
ಕಪಿಲಸಿದ್ಧ ಮಲ್ಲಿನಾಥನ ಕೂಡಿಪ್ಪರಯ್ಯಾ, ॥೩॥

೧–೧ ಏ (ಮೂ). ೨–೨ ಕ (ಮೂ). ೩–೩ ನಾಥನಾ(ಮೂ)

ಮಹಾದೇವ ದೇವಗೇಜಿಸುವೆನಾರ ಹಸ್ತ ಮುಟ್ಟದ
ಆರ ದೃಷ್ಟಿಯು ಮುಟ್ಟದ
ಮನಪುಷ್ಪದಿಂದ ಪೂಜಿಸುವೆನೆನ್ನ
ಕಪಿಲಸಿದ್ಧ ಮಲ್ಲಿಕಾರ್ಜುನ ದೇವರ ದೇವನಾ. ॥೪॥[I–೬೫೬]

ಕೇಳವ್ವಾ ಕೇಳವ್ವಾ ಕೆಳದಿ, ಹೇಳುವೆ ನಿನಗೆ:
ಆಹಾ ಕಂಗಳಲ್ಲಿ ಕಾಬೆ ಮತ್ತೆ ಕಾಣೆನವ್ವಾ,
ಆ ಆ ಆ ಅವ್ವಾ
ಮಿಂಚಿನಾರ [ವೆ][1] ರವೆಯಂತೆ ತೋಱುವನಡುಗುವನವ್ವಾ,
ನಮ್ಮ ಕಪಿಲಸಿದ್ಧ ಮಲ್ಲಿನಾಥದೇವ. ॥೫॥[I–೩೯೫]

ಸಜ್ಜನವಾಳುತ್ತಾಗಿ ಹಿಂದೆಂಬ ತೊಂಡುತನವೆ?
ಮಿಂಡಾ ನಿನ್ನನೆಂತು ನಂಬುವೆ?
ಆಹಾ, ತಾಯಿ ತಂದೆಯರು ನಿನ್ನ ನಡಸಿಹರೆಂಬೆನೆ?
ಆಹಾ, ತಾಯಿ ತಂದೆಯರೆಮ್ಮ ನಿಮ್ಮ ನುಡಿಸಿಹರೆಂಬೆನೆ ?
ಆಹಾ, ಎಲ್ಲರ ಬಿಟ್ಟು ಪೊದ್ದಿದವನೆ ನಂಬುಗೆ ಮಾಡಾ ಆ ಆ ಆ ॥೬॥

ಮದಹಸ್ತಿ ಮದಹಸ್ತಿಯ ಹಿಡಿವುದಲ್ಲದೆ
ಮತ್ತೊಂದು ರೂಪ ಹಿಡಿವುದೆ?
ಆ ರೂಪಿಗಾ ರೂಪ ಹಿಡಿವುದಲ್ಲದೆ
ಮತ್ತೊಂದು ರೂಪ ಹಿಡಿವುದೆ?
ರೂಪಿಲ್ಲದಾತನ ರೂಪಿಸಿ ಹಿಡಿವೆನು
ಕಪಿಲಸಿದ್ಧ ಮಲ್ಲಿನಾಥಯ್ಯನ. ॥೭॥[I–೬೪೧]

ನಮ್ಮ ನಲ್ಲನೂ ನಾವೂ ನೆರೆವಲ್ಲಿ
ಅವ ಬಂದು ಝಳಪಿಸುವ ಹಾಹಾ ಯ್ಯಾ ಯ್ಯಾ ಯ್ಯಾ.
ಅವಗೆ ನಿಮಗೆ ಮತ್ಸರವುಂಟು.

೧–೧ ಲಿ (ಮೂ)

ಆತನ ಕೈ ಕಾಲ ಭೇದಿಸಿ ನಾವು ನಿಶ್ಚಿಂತದಿ
ಮನೆಗೆ ಹೋಹ ಬಾರಾ ಬಾರಾ ಎಂದಳು
ಕಪಿಲಸಿದ್ಧ ಮಲ್ಲಿನಾಥಯ್ಯನ. ॥೮॥

ಅನಿಲ ಬಂದೆನ್ನ ಮಗಳ ಹೊರೆಯಲಿದ್ದು
ಒಯ್ದನವ್ವಾ; ಆ ಆ ಆ ಆ ಆ ಅವ್ವಾ;
ಮಾಯವಾದಳೆನ್ನಲ್ಲಿ
ಎನ್ನ ಮಗಳನೊಯ್ದು ತನ್ನ ಮಾಯದೊಳಗೆ ಅಡಗಿಸಿದ
ಕಪಿಲಸಿದ್ಧ ಮಲ್ಲಿನಾಥಯ್ಯನ. ॥೯॥

ಹಲವು ಕಾಲದ ಹುಣ್ಣಿಗೆ ಹಿರಿದು ಧಾವತಿಗೊಂಡೆನಾ
ಆ ಆ ಆ ತಾಯೆ.
ಈ ಬಗದಳ ಹುಣ್ಣ ಕಳೆವಂತೆ ಎಲುವ ಸಂಧಿಸುವನ್ನಕ್ಕರ,
ಚಿತ್ರಮೂಲ ಕಪಿಲಸಿದ್ಧ ಮಲ್ಲಿನಾಥದೇವನ ತಂದು
ಹುಣ್ಣ, ಕಳೆವೆನಾ ಆ ಆ ಆ ಆನು ಅಯ್ಯಾ. ॥೧೦॥[I-೮೨೩]

ಮುತ್ತಿನ ವರ್ಣಶಂಖಾದಡೇನವೊ?[ರೂಪ ಬೇರೆ]
ಸಕ್ಕರೆಯ ವರ್ಣ ಉಪ್ಪಾದಡೇನು? ರುಚಿ ಬೇರೆ,
ನೀಲದ ವರ್ಣ ಗಾಜಾದಡೇನವೊ?
ಅಂತರ ಮಹದಂತರ ಪಱಂತರರದ ಗತಿ ಬೇಱೆ
ಎಲ್ಲಾ ಎಲ್ಲಾ ವರ್ಣವು ನಮ್ಮೊಳಗೆವೊ
ಆದಿಗುರು ಕಪಿಲಸಿದ್ಧ ಮಲ್ಲಿನಾಥಲಿಂಗ ನೀ ಬಲ್ಲೆ. ॥೧೧॥[I-೬೭೪]

ಸಂಸಾರವೆಂಬ ಸಾಗರಕ್ಕೆ ಒಡಲೆಂಬುದೊಂದು ಭೈತ್ರ ಕಂಡಾ
ಪುಣ್ಯ ಪಾಪವೆಂಬ ಭಂಡವನೆ ತುಂಬಿ
ಪಂಚ ಪಂಚೈವರು ಏರಿದರು.
ಜ್ಞಾನವೆಂಬ ಕೂಕಂಬೆಯ
ಲಿಂಗವೆಂಬ ತಾರಾಮಂಡಲವ ನೋಡಿ ನಡಸೂದು.

ಜವನ ಕಳ್ಳಾಳು ಕರ ಹಿರಿದು ಕಂಡಾ.
ಪುಣ್ಯ ಪಾಪವೆಂಬ ಭಂಡವ ಸಮಜೋಗವೆಂಬ ನೇಣ ನವನಾಳದಲಿ ಕಟ್ಟಿ
ಮನವೆಂಬ ಉಪಾಯವನು ವಾಹಿಕೊಳಲಿ
ನಿಧಿಯೆಂಬ ನಡುಗಡಲ ಸುಖದುಃಖದೊಳಗೆ
ತೆರೆಯ ಹೊಯಿಲ ಕರ ಹಿರಿದು ಕಂಡಾ.
ಉದುಮದವೆಂಬಾ ಸುಳಿಯಲ್ಲಿ ತಿರುಗದೆ
ಗುರುವೆಂಬ ಬೆಂಗುಂಡ ಹಿಡಿ ಕಂಡಾ.
ಇಹಲೋಕ ಪರಲೋಕ ವಿಘ್ನಗಳ ಕಳೆದು
ಕಪಿಲಸಿದ್ಧ ಮಲ್ಲಿನಾಥನ ಕಾಬೆ ಕಂಡಾ. ॥೧೨॥

ಐದು ಪುರದ ಪಟ್ಟಣದ ಪಾದಘಾತದ ಆ ಆ ಅಯ್ಯಾ,
ಹಾವಸಿ ಕುಂದದಲ್ಲಾ! ಬಾವಿಯ ಹಾವಸಿ ಕುಂದದಲ್ಲಾ!
ಬಾವಿಯ ಕಟ್ಟಿದ ಕಲ್ಲೆಲ್ಲಾ ಬಱಿಯ ಹಾವಸೆ ನೋಡಾ ಅಯ್ಯಾ.
ಹಾವಸಿ ಕುಂದದಲ್ಲಾ!
ಶಿಖರದ ಮೇಲಣ ಒಱತೆ ಕುಂದದೇನು ಕಾರಣ
ಕಪಿಲಸಿದ್ಧ ಮಲ್ಲಿನಾಥಯ್ಯನೊ ಅಯ್ಯಾ. ॥೧೩॥

ವಾಯದ ದೇಹವ ಮನೆಯ ಮಾಡಿ,
ಮಾಯದಲಿಪ್ಪೆ ಕಂಡಾ ಆ ಆ ಅಯ್ಯಾ.
ನೇತ್ರೆಯ ಬಾಗಿಲ ತೆಗೆದುನೋಡಿ ಇಪ್ಪೆ ಕಂಡಾ ಓ ಓ ಅಯ್ಯಾ.
ನೇತ್ರೆಯ ಆತನಿಗೆ ಒಂದು ಪರಿ, ತಾ ಮಠವೊಂದಖಂಡಿತ
ಕಪಿಲಸಿದ್ಧ ಮಲ್ಲಿನಾಥಯ್ಯನೋವೊ ಅಯ್ಯಾ. ॥೧೪॥[I–೭೨೧]

ಎಂಟು ಹದಿನಾಱೆಂಬ ಬಲೆಯನೊಡ್ಡಿ
ಚೆನ್ನಮೃಗವೆಂಬ ಕಂಗಳ ಬೇಟೆ ಎಸುವೆನಯ್ಯಾ.
ವಿಂಧ್ಯವನದೊಳಗೆ ಓ ಓ ಎಂದೆನುತಲಯಿದರೆ ಎಸುವೆನಯ್ಯಾ.
ಎಯ್ದೆ ಬಾಣಕ್ಕೆ ಎಯ್ದೆ ಗುರಿಯಾಗದ ಮುನ್ನ ಎಯ್ದುವೆ
ದಶಮುಖ ರಾಮತಂದೆ ಎಸುವೆನಯ್ಯಾ. ॥೧೫॥

ಸಮತೆಯ ಶಕ್ತಿ, ಸತ್ಯವೆ ಲಿಂಗವು,
ಅಸತ್ಯವೆ ಅನ್ಯದೈವ,
ರೋಷವಿಲ್ಲದಿಹುದೆ ಪೂಜೆ,
ಆಸೆಯಿಲ್ಲದಿಹುದೆ ಪ್ರಸಾದ,
ಇಷ್ಟ ಲಿಂಗದಲಿ ನಿರುತವಾದಾತನೆ
ಕಪಿಲಸಿದ್ಧ ಮಲ್ಲೇಶ್ವರದೇವರ ದೇವನು. ॥೧೬॥[I-೭೭೧]

ಕಣ್ಗೆ ಸತ್ವರಜತಮದ ತಿಮಿರ ಕವಿದವರು
ಗುರುವನೆ ಉಪಧಾವಿಸಿ
ಶ್ರೀ ಗುರುವಿಂಗೆ ಉಪಧಾವಿಸಿದಾತಂಗೆ
ಔಷಧಂಗಳ ಬೇಡುವರಯ್ಯಾ,
ಶಿವಜ್ಞಾನವೆಂಬ ಅಂಜನವನೆಚ್ಚಿ ತೋರುವಾತ
ಕಪಿಲಸಿದ್ಧ ಮಲ್ಲಿನಾಥಯ್ಯನ. ॥೧೭॥[I-೩೦೬]

ಕಂಡನಯ್ಯಾ ನೀ [1]ನೊಡ್ಡಿ[1] ದೊಡ್ಡಣೆಯ,
ಕಿಜಿಕಿಜಿದಾಗಿ ತಜಿದರೆ ಹಿರಿಹಿರಿದಾಗಿ ನೆನೆವೆನು
ಕಾಯವ ಬಡದಡರಿ ಒಳಗೀವೆನು
ಪ್ರಾಣ ನಿನ್ನದು ಕಪಿಲಸಿದ್ಧ ಮಲ್ಲಿನಾಥಯ್ಯಾ. ॥೧೮॥[I-೩೦೪]

ಕೈಗಳ ಬಿಚ್ಚಿದಡೆ ಮೈಗಳ ಹರಹಿದಡೆ ನಿಮ್ಮ ಬೆನ್ನಬಿಡೆ.
ತನುವಳಿದಡೆ ಜ್ಞಾನತನುವಿಂದವೆ ಕೂಡವೆ
ಕಪಿಲಸಿದ್ಧ ಮಲ್ಲಿನಾಥಯ್ಯಾ ನಿಮ್ಮ. ॥೧೯॥[II-೮೩]

ಕೇಳು ಕೇಳೆನ್ನ ಭಾಷೆ, ಅರಿದು ಕಂಡಾ ಅವ್ವಾ,
ನಲ್ಲನೊಮ್ಮೆ ತೋರಿದಡೆ ಎನ್ನ ಸರಿಹರಿ ನೋಡಿದೆ ಅವ್ವಾ,
ಕಪಿಲಸಿದ್ಧ ಮಲ್ಲಿನಾಥ ರೂಪಂಬಿಟ್ಟು ಅಗಮ್ಯನಾದಡೆ
ಅಗಮ್ಯ ರೂಪಂಬಿಡಿಸಿ ಹಿಡಿವೆನೆ ಅವ್ವಾ. ॥೨೦॥

೧-೧ ನೋಡಿ (ಮೂ)

ಅವನ ಗತಿ ಅವನ ಮತಿಯನಪ್ಪಿ ಅವ ನಿಂದಲ್ಲಿ ನಿಲುವೆ ಅವ್ವಾ
ಅವ ಬಿಟ್ಟುದ ಬಿಡುವೆ ಅವ ಹಿಡಿಯಿತ್ತ ಹಿಡಿವೆ.
ಬೆನ್ನ ಬಳಿಯ ಸಲುವೆ, ಪ್ರಾಣಮೇಲಿಕ್ಕಿ ನೆರವೆ
ಕಪಿಲಸಿದ್ಧ ಮಲ್ಲಿನಾಥಯ್ಯನ. ॥೨೧॥[I–೧೧೨]

ಮಹಾದೇವ ದೇವಂಗೇಜಿಸುವೆ ಪುಷ್ಪಗಳ ನಾನಯ್ಯ.
ಎನ್ನ ಮನಪುಷ್ಪದಿಂ ಪೂಜಿಸುವೆ ನಾ
ಕಪಿಲಸಿದ್ಧ ಮಲ್ಲಿನಾಥಯ್ಯನ. ॥೨೨॥*[I–೬೫೬]

ಮಹಾಭಕ್ತರ ಹೃದಯದಲ್ಲಿ
ದೇವರ ದೇವ ಬೈಸಣಿಗೆಯಾಗಿಪ್ಪ.
ಭಕ್ತರ ವಚನಂಗಳು ಗಂಗಾನದಿಯಾಗಿ
ಎದೆ ಕರ್ಣಂಗಳು ತುಂಬಲೊಡನೆ
ವಿರಕ್ತಿ ವೇಥೆಯಾಗಿ ಭಕ್ತಿಯಾಮೋದವಾಗಿ
ನಿಮ್ಮ ಶ್ರೀಪಾದವ ಸುತ್ತುಗೆ ಕಪಿಲಸಿದ್ಧ ಮಲ್ಲಿನಾಥಯ್ಯಾ. ॥೨೩॥

ಭಕ್ತಿಭಾವದ ಬಯಕೆಯ ಬಯಸುವೆನವಧಾರಯ್ಯಾ.
ಎನ್ನ ಮನ ನಿಮ್ಮ ನೆನೆವಂತೆ ಮಾಡಯ್ಯಾ.
ಎನ್ನ ಮನ ನಿಮ್ಮ ಶ್ರೀಪಾದವನಗಲದಂತೆ ಮಾಡು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೨೪॥[I–೬೧೯]

ಆತನೆನ್ನ ನೆನೆವನಾಗಿ ನೆನೆವೆ,
ಆತನೆನಗೆ ಕೂಪನಾಗಿ ಕೂರ್ಪೆ,
ಹಜೆದೊಡೆ ಹಜೆಯ ಕಾಣೆ,
ಬೆಚ್ಚಿ ಬಿಡದೆ ಬೇಱೆ ಕಾಣೆ,
ಇಂತೊಬ್ಬರನೊಬ್ಬರ ನೆರೆದು, ತಾನು ತಾನಾಗಿದ್ದ
ಕಪಿಲಸಿದ್ಧ ಮಲ್ಲಿನಾಥದೇವರ ದೇವಯ್ಯ. ॥೨೫॥[I–೧೨೮]

---

* ನೋಡಿ, ವಚನ ನಂ. ೪

ಎಲ್ಲವೆಲವೋ ನಲ್ಲ, ನಿಮ್ಮ ಕೂಡದ ಮುನ್ನ ಕಾಣೆ,
ಕೂಡಿದ ಬಳಿಕ ಮತ್ತೆ ಕಾಣನಯ್ಯಾ.
ಕೂಟದ ಸುಸುಖದಿಂದಾ[ೇನು] ನೀನೆಂದಱಿಯೆ
ಕಪಿಲಸಿದ್ಧ ಮಲ್ಲಿನಾಥಯ್ಯ. ॥೨೬॥[I-೨೪೯]

ಆನು ಭಕ್ತನೆಂಬೆ! ಪೊಱಿಹಂಚಿತನಂಗಳನಱಿಯೆನಯ್ಯಾ.
ತನು ಮನ ಭಕ್ತಿಯೆನಿಸಲಾ ನಿಮಗೆ ನಾ ಮುಚ್ಚಲಱಿಯೆನು ಕಂಡಯ್ಯಾ.
ಬೇರಬಲ್ಲವರಿಗೆ ಎಲೆಯ ಬಣ್ಣಿಸುವಂತೆ
ಕಪಿಲಸಿದ್ಧ ಮಲ್ಲಿನಾಥ ಮಚ್ಚಿದರೆ ಗತಿವೊಳವೆ? ॥೨೭॥[I-೧೪೮]

ಓಂ ಜಯ ಪರಮೇಶ್ವರಂ ಪರಮಾತ್ಮಂ
ಈಶ್ವರನುರ್ವಿಪರ್ವಿ ಅಡಗಿಕೊಂಡಿಪ್ಪನು.
ಒರ್ಬ್ಬಣಿಗೆಯಾಗಿ ಯೋಗಿಗಳ ಮನದ
ಕೊನೆಯ ಜ್ಯೋತಿಶ್ವರನುಂ
ವೃಷಭರೂಪನಾಗಿ ಯಜಮಾನನುಂ
ಆಚಾರ್ಯನುಂ ತಾನೆಯಾಗಿ
ಕಪಿಲಸಿದ್ಧಮಲ್ಲಿಕಾರ್ಜುನದೇವರೆ
ಬಂದುನೆಲೆಸಿನಿಂದು ॥೨೭ಅ॥

ಸಂಸಾರ ತೆಪ್ಪದೊಳಗೆ ಆನೀಗ ಅದ್ದು ಅಳಲುತಿಪ್ಪೆನಯ್ಯಾ.
ಬೇಗ ಬಾರ ಬಾರಯ್ಯಾ ಬಾರಾ
ವಜ್ರಲೇಪದಲಿ ಬಿದ್ದಿದ್ದೇನೆ,
ಬೇಗ ಬಂದತ್ತಯ್ಯಾ, ಎತ್ತಯ್ಯಾ ಕಪಿಲಸಿದ್ಧ ಮಲ್ಲಿನಾಥಯ್ಯಾ. ॥೨೮॥

ಆವನಾಗಿಯೂ ಒಬ್ಬನು
ಒಲಿದು ಸ್ನೇಹ ವಚನವ ನುಡಿಯಲಿ,
ಒಲ್ಲದೆ ಬೈಗೆಯಾ ಬೈದಡೆ ಮನವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯ ಗುಣಂಗಳು
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೯॥[I-೧೭೬]

ಆವನಾಗಿಯು ಒಬ್ಬನು
ಹಿಂದೆ ನಾಸ್ತಿಕವನಾಡಿ ನಗುತಿಪ್ಪುದನೆ ಕೇಳಿ,
ಆರಾಗಿ ಬಂದು ಪೇಳಿದಡೆ
ಮನ ವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೦॥[I-೧೭೩]

ಆವನಾಗಿಯು ಒಬ್ಬನು
ಒಡಗೊಂಡೊಯ್ದು ಒಳ್ಳಿತ್ತನಿಕ್ಕುಗೆಯಾ,
ಮೇಣು ಮಣ್ಣನಾದರೆ ಇಕ್ಕುಗೆಯಾ.
ಇಕ್ಕಿದಡೆ ಮನವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೧॥[I-೧೭೨]

ಆವನಾಗಿಯು ಒಬ್ಬನು ಕೈವಿಡಿದೊಯಿದು
ಕಾಳಕೂಟದ ವಿಷವನೆಱಿಯಿಗೆಯಾ,
ಮೇಣು ಅಮೃತವನೆಱಿಯಲಿ.
ಎಱಿದಡೆ ಮನವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯ ಗುಣ
ಎನ್ನನೆಂದು ಬಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೨॥[I-೧೧೭೫]

ಆವನಾಗಿಯೊಬ್ಬನು
ಅವಿಚಾರದಿಂದ ಪಿಡಿದೊಯ್ದು ಕಾದಱಿಯ ಮೇಲೆ ಕುಳ್ಳಿರಿಸಲಿ,
ಮೇಣು ಹಾಸಿನ ಮೇಲೆ ಒಯ್ದಿರಿಸಲಿ.
ಇರಿಸಿದೊಡೆ ಮನ ವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೩॥[I-೧೭೦]

ಆವನಾಗಿಯೊಬ್ಬನು
ಕಡು ಮೂರ್ಖತನದಿಂದ ಇಡು ಮುಳ್ಳ ಮೇಲೆ ಹೊರಳ್ಚುಗೆ,
ಮೇಣು ಹಂಸಿಯ ಹಾಸಿನ ಮೇಲೆ ಹೊರಳ್ಚುಗೆಯಾ.
ಹೊರಳ್ಚಿದೊಡೆ ಮನವಿಚ್ಛಂವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೪॥[I–೧೭೪]

ಆವನಾಗಿಯೊಬ್ಬನು
ತಗುಳ್ದಟ್ಟಿ ಕಲ್ಲುಗುಂಡಿನಲ್ಲಿಡಲಿ,
ಮೇಣು ಹೂವಿನಲಿಡಲಿ.
ಇಟ್ಟಡೆ ಮನ ವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೫॥[I–೧೭೭]

ನಂಟರಿಪ್ಪರನ್ಯರಾರಾದೊಡೆಯೂ ಬಂದು ನಿಂದಿರ್ದಡೆ,
ಅವರಿವರೆಂದೆನ್ನದೆ ಮನವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತಾ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೬॥

ಕುಂಜರ ಬಂದು ಮೇಲುವಾಯ್ದು ಸೀಳ್ದಿಡುಕ್ಕುಗೆಯಾ,
ಮೇಣು ಎತ್ತಿಕೊಂಡೆಯಾ.
ಎತ್ತಿಕೊಂಡಡೆ ಮನ ವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತಾ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೭॥

ಗರ್ಜಿಸಿ ಸಿಡಿಲು ಹೊಯ್ಯಲಿ,
ಹೊಯ್ಯದಿರ್ದಡೆ ವಾಯು ವಿಮಾನಂಗಳಾಗಿ ಎತ್ತಿಕೊಂಡು
ಪೋಗಲಿ ಪೋಗದಿರಲಿ.
ಮನವಿಚ್ಛಂದವಾಗದೆ

ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತಾ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೮॥[I-೪೦೦]

ಕಾಳರಕ್ಕಸಿ ಬಂದು ಕತ್ತಿವಿಡಿದು ಕೊಯಿವುತ್ತಿರಲಿ,
ಕೊಯ್ಯಲೊಲ್ಲದೆ ಚೆಚ್ಚರದಿಂ ಕನ್ನಕಿಯಾಗಿ ತೆಗೆದಪ್ಪಿಕೊಂಡಡೆ
ಮನವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತಾ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೯॥[I-೩೫೧]

ಇಂದಿಗೆ ನಿಮಿಷಕ್ಕೆ ಬದುಂಕದೆ ಹೋಗೆಯಾ,
ಅನಂತಕಾಲ ಬದುಕುಗೆಯಾ.
ಬದುಕಿದಡೆ ಮನವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತಾ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೦॥[I-೧೭೭]

ಪಡೆವೆನೆಂಬ ದುಃಖದಿಂದ ಹಡೆದಡೆ
ಕೈಕೊಂಬುದು ದುಃಖಕ್ಕೆಡೆಯಿಲ್ಲದೆ ಕಡು ದುಃಖವಪ್ಪುದು.
ಈ ದುಃಖವ ಎಂದಿಗೆ ನೀಗಿ
ಎಂದು ನಿಮ್ಮನೊಡಗೂಡಿ ಬೇಱಾಗದೆಂದಿಪ್ಪೆನೊ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೧॥

ಶ್ರೀಯಾದಡೆ ಉತ್ಸಾಹದಿಂದ ಉಬ್ಬದೆ,
ಕೆಟ್ಟಡೆ ಮನನೊಂದು ಖಿನ್ನವಾಗದಂತೆ ಇರಬೇಡಾ.
ಹಿರಿಯರ ಮನ ಮನವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೨॥

ಬೀಸುವ ಗಾಳಿ ಧೂಳಿಯನೆತ್ತಲು
ಮಸುಳಿದನೆ ಸೂರ್ಯನು?

ಆ ಸೂರ್ಯನಂತೆ ಬೆಳಗುತ್ತಿರವೇಡಾ!
ಹಿರಿಯರ ಮನವು ಮನವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೩॥[I-೪೦೦]

ಅನೇಕ ತೆಱನ ಯೋನಿಮುಖಂಗಳು ಹೊಕ್ಕು
ನೀರ್ಗುಡಿಯಲು ಹೋದಡೆ
ಸುಡು ಹೋಗೆಂದು ನೂಂಕಿತೆ ಜಲ?
ಈ ಜಲದಂತಾಗಲು ಬೇಡಾ.
ಹಿರಿಯರ ಮನ ಮನವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತಾ ಗುಣ
ಎನ್ನನೆಂದು ಪೊಂದಿಪ್ಪುದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೪॥[II-೩೩]

ಎನಿತುಂ ತ್ರಿಭುವನಂಗಳು ತನಗಾದಡೆ
ಅನಿತಱಲಿ ತುಷ್ಟಿವಡೆಯಳು,
ಈ ಆಸೆಯೆಂಬವಳಿಂದವೆ ನಿಮ್ಮೆಡೆಗಾಣದಿಪ್ಪೆನು.
ಈ ಆಸೆಯೆಂಬವಳನೆಂದಿಂಗೆ ನೀಗಿ
ಎಂದು ನಿಮ್ಮನೊಡಗೂಡಿ ಬೇಱಾಗದೆಂದಿಪ್ಪೆನೊ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೫॥

ತನುವಿನಲಿಪ್ಪ ಅವಸ್ಥೆಗಳೆನಿತುವಂ
ಬೇಱೆಂದು ಮಱೆದು
ನಿಮ್ಮ ಕೂಡಿ ಬೇಱಾಗದೆಂದಿಪ್ಪೆನು
ಈ ಧರೆ ದೆಸೆವಳೆಯವೆಲ್ಲವು ತನಗಾದಡೆ
ಅನಿತಱಲಿ ನಿಲ್ಲಳು,
ಮತ್ತಂ ಬೇಕೆಂದು ಪೊಱಯಿಂಕೆ ಕೈದೋಱುತಿಪ್ಪಳು.
ಈ ಆಸೆಯೆಂಬವಳಿಂದವೆ ನಿಮ್ಮೆಡೆಗಾಣದಿಪ್ಪೆನು.
ಈ ಆಸೆಯೆಂಬವಳನೆಂದಿಂಗೆ ನೀಗಿ
ಎಂದು ನಿಮ್ಮನೊಡಗೂಡಿ ಬೇಱಾಗದೆಂದಿಪ್ಪೆನೊ
ಕಪಿಲಸಿದ್ಧ ಮಲ್ಲಿಕಾರ್ಜುನಾ ॥೪೬॥

ಇದು ಪುಣ್ಯ, ಇದು ಪಾಪವೆನ್ನದೆ ಆಸೆ ಮಾಡುತಿಪ್ಪಳು
ಈ ಆಸೆಯೆಂಬವಳಿಂದವೆ ನಿಮ್ಮೆಡೆಗಾಣದಿಪ್ಪೆನು.
ಈ ಆಸೆಯೆಂಬವಳನೆಂದಿಗೆ ನೀಗಿ
ಎಂದು ನಿಮ್ಮನೊಡಗೂಡಿ ಬೇಱಾಗದೆಂದಿಪ್ಪೆನೊ
ಕಪಿಲಸಿದ್ಧ ಮಲ್ಲಿಕಾರ್ಜುನಾ ॥೪೭॥

ನಿಮ್ಮ ನೆನೆಯಲು ಪೋಪೆನೆಂದಡೆ
ತಾನೆನ್ನ ಕೈವಿಡಿದು ಇದ್ದೆಸೆಗಂ ಕೈದೋರ್ಪಳು
ಈ ಆಸೆಯಿಂದವೆ ನಿಮ್ಮೆಡೆಗಾಣೆನು.
ಈ ಆಸೆಯೆಂಬವಳನೆಂದಿಂಗೆ ನೀಗಿ
ಎಂದು ನಿಮ್ಮನೊಡಗೂಡಿ ಬೇಱಾಗದೆಂದಿಪ್ಪೆನು
ಕಪಿಲಸಿದ್ಧ ಮಲ್ಲಿಕಾರ್ಜುನಾ ॥೪೮॥

ಈ ಆಸೆಯೆಂಬವಳು ನೋಡಾ
ಜಲ ಸಮುದ್ರಂಗಳಂ ಕಟ್ಟಿಸುವಳು,
ಕ್ಷಣ ಬೇಗದಿ ಮೂಷೆಗಳಂ ಮಾಡಿ ರಸಂಗಳಂ ಪಡೆವಳು.
ಈ ಆಸೆಯೆಂಬವಳಿಂದವೆ ನಿಮ್ಮೆಡೆಗಾಣದಿಪ್ಪೆನು.
ಈ ಆಸೆಯೆಂಬವಳನೆಂದಿಗೆ ನೀಗಿ
ಎಂದು ನಿಮ್ಮನೊಡಗೂಡಿ ಬೇಱಾಗದೆಂದಿಪ್ಪೆನೊ
ಕಪಿಲಸಿದ್ಧ ಮಲ್ಲಿಕಾರ್ಜುನಾ ॥೪೯॥

ಈ ಆಸೆಯೆಂಬವಳು ನೋಡಾ
ತಡೆಯದೆ ವಾಹಿಗೊಟ್ಟಗೆಗಳಂ ಕಟ್ಟಿಸುವಳು.
ನದಿಯೊಳಗೆ ಪೊಗಿಸುವಳು.
ಈ ಆಸೆಯೆಂಬವಳಿಂದವೆ ನಿಮ್ಮೆಡೆಗಾಣದಿಪ್ಪೆನು.
ಈ ಆಸೆಯೆಂಬವಳನೆಂದಿಗೆ ನೀಗಿ
ಎಂದು ನಿಮ್ಮನೊಡಗೂಡಿ ಬೇಱಾಗದೆಂದಿಪ್ಪೆನೊ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೦॥[I-೨೧೨]

ಈ ಆಸೆಯೆಂಬ ವಳು ನೋಡಾ
ಏನಾದಡಂ ತನ್ನತಲೆ ಎಳೆವಳು,
ಆರನಾದಡೆ ಕೊಲಲಿಕೆ ಬಗೆವಳು,
ಈ ಆಸೆಯೆಂಬವಳಿಂದವೆ ನಿಮ್ಮೆಡೆಗಾಣದಿಪ್ಪೆನು.
ಈ ಆಸೆಯೆಂಬ ಪಾತಕಿಯ ಎಂದಿಂಗೆ ನೀಗಿ,
ಎಂದು ನಿಮ್ಮನೊಡಗೂಡಿ ಬೇಱಾಗದೆಂದಿಪ್ಪೆನೊ
ಕಪಿಲಸಿದ್ಧ ಮಲ್ಲಿಕಾರ್ಜುನ ॥೫೧॥[I–೨೧೦]

ವೈರಾಗ್ಯ ಸಮತೆ:
ಆದಿಯ ಬೀದಿಯಲಿದ್ದು
ತನುವಿನ ತನುಗುಣಮಂ ಮಱೆದು
ಇರುಳು ಹಗಲೆಂದಱಿಯದೆ
ಎಂದಿಂಗೆ ಎಂದು ನಿಮ್ಮೊಡಗೂಡಿ
ಬೇಱಾಗಿದೆಂದಿಪ್ಪೆನೊ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೨॥

ತನುಟನಲಿಪ್ಪ ಅವಸ್ಥೆಗಳೆನಿತೆನಿತುವಂ
ಬೇಱೆಂದು ಮಱೆದು
ನಿಮ್ಮ ಕೂಡಿ ಬೇಱಾಗದೆಂದಿಪ್ಪೆನು
ಕಪಿಲಸಿದ್ಧ ಮಲ್ಲಿಕಾರ್ಜುನಾ ॥೫೩॥

ತಮ್ಮೊಲಿದತ್ತಲೆನ್ನ ಹಱೆಹಂಚಮಾಡಿ ಕಾಡುತಿಪ್ಪ,
ಎನಿತೆನಿತು ಇಂದ್ರಿಯಂಗಳ ಒಡಗಡಣದಲ್ಲಿ
ಪೋಗದೆ ಎಂದಿಪ್ಪೆ
ಎಂದು ನಿಮ್ಮೊಡಗೂಡಿ ಬೇಱಾಗದೆಂದಿಪ್ಪೆನು
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೪॥[I–೪೬೧]

ನಡನಡನೆ ನಡುಗುವ
ಅವಗುಣಿ ಮನಂಗಳ ಅವಧಿಗಳು ನೆಱೆದು
ಎಂದಿಂಗೆ ಬಿಟ್ಟು ಪೋಪವು ಎಂದಿಪ್ಪೆ

ಎಂದು ನಿಮ್ಮೊಡಗೂಡಿ ಬೇಱಾಗದೆಂದಿಪ್ಪೆನು
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೫॥[I-೫೦೧]

ನಿಮ್ಮ ನಂಬಲೊಲ್ಲದ ಸಂದೇಹಿ ಮನಂಗಳ
ಸಂದುಗಳು ಬಿಚ್ಚಿ ಪಱಿದೆಂದಿಂಗೆ ಪೋಪವು.
ಎಂದು ನಿಮ್ಮೊಡಗೂಡಿ ಬೇಱಾಗದೆಂದಿಪ್ಪೆನು
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೬॥

ಮುದುಗಿನ ಸಂಸಾರ ಬಂದನಂಗಳು
ಹೆಱೆಹಿಂಗಿ ಅದೆಂದಿಂಗೆ ಬಿಟ್ಟು ಪೋಪವು ಎಂದಿಪ್ಪೆ,
ಎಂದು ನಿಮ್ಮೊಡಗೂಡಿ ಬೇಱಾಗದೆಂದಿಪ್ಪೆನು
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೭॥I-೫೭೫]

ಸಂಸಾರವ್ಯಾಧಿಗೆ ಗುರು ಹೇಳಿದ ಔಷಧಂಗಳಂ ಮನದಲಿಕ್ಕಿ
ಮೂದಲಿಸಿ ಪೋಗಲೀಯದೆ ವಿಚಾರಿಸಿ ನೋಡುತ್ತಿದ್ದನ
ಸಂಸಾರಂಗಳು ಮುಟ್ಟಲಮ್ಮದೆ
ಹೆಱೆಹಿಂಗೆ ತೇರ್ಗಟ್ಟಿದಂತೆ ನಿಂದು,
ಕಪಿಲಸಿದ್ಧ ಮಲ್ಲೇಶ್ವರದೇವರ ಶ್ರೀಪಾದಕ್ಕೆ ಬಟ್ಟೆಗೊಟ್ಟು
ಭಂಗಗೊಂಡಂತೆ ನಿಂದು
ಪೋಗಯ್ಯಾ ಪೋಗಯ್ಯಾ ಎನ್ನುತ್ತಂ ಇರದೆ? ॥೫೮॥[I-೭೫೯]

ಅಕಟಕಟಾ! ಎನಗೆ ನಿನಗೆ ನೆರೆಗೆ ಹೊರಗೆ
ಹೇಳುವನಲ್ಲ ಕಂಡಾ,
ಅಯ್ಯಾ, ಹಾ ಆ ಆ ಹೋ ಯೇ ಯೇ,
ಅಯ್ಯಾ, ಎನ್ನ ಕಾಣದ ಕೇಳದ ಪ್ರಾಣಿಗೆ
ಅನುಮಿಸದಿರಿಸೆನ್ನ ಕಪಿಲಸಿದ್ಧ ಮಲ್ಲಿನಾಥಯ್ಯನಾ. ॥೫೯॥[I-೨೦]

ಎರಡು ತೋಳೆರಡು ಭುಜ,
ಆ[ವಾ]ತನ ಹಿಡಿವಾಗಲಿ ಒಂದೇ ನೋಡಾ.

ಕಣ್ಣೆರಡಂಗ ಬೇಜೆ
ಆ[ವಾ]ತನ ಹಿಡಿವಾಗ ಒಂದೇ ನೋಡಾ.
ಇಬ್ಬರಿಗೊಬ್ಬ ಗಂಡ ಕಪಿಲಸಿದ್ಧ ಮಲ್ಲಿನಾಥಯ್ಯ. ॥೬೦॥

ಸಂಸಾರ ನಿಸ್ಸಾರವೆಂಬ ವಿಂಧ್ಯದೊಳಗೆ ಅಯ್ಯಾ,
ಕಾಮನೆಂಬ ಕಳ್ಳನ ತೋಱಿಸುವೆ ಅಯ್ಯಾ.
ಕಾಮನ ಕರೆದು ಎನ್ನವನೆಂದೆನ್ನಯ್ಯಾ
ಎನ್ನ ಕಪಿಲಸಿದ್ಧ ಮಲ್ಲೇಶ್ವರದೇವಾ ನೀನು ಅಯ್ಯಾ. ॥೬೧॥

ನರಸಮುದ್ರವೆಂಬುದೊಂದು ಕೊಳಚೆಯೊಳಗೆ ಅಯ್ಯಾ,
ಚಿಕ್ಕ ಕೊಳಚೆಯೊಳಗೆ ಅಯ್ಯಾ,
ಲೋಕ ಬಿದ್ದು ತೇಕುತಲಿದ್ದುದಯ್ಯಾ.
ಇದಱಿಂದ ಹೊಲ್ಲ
ಕೈಯ ನೀಡು ಕಪಿಲಸಿದ್ಧ ಮಲ್ಲೇಶ್ವರದೇವಾ ನೀನು ಅಯ್ಯಾ. ॥೬೨॥[I-೫೦೭]

ಜಗ ಜನಕ ಜನನಿಯರಿಬ್ಬರ ಇರವ ಕೇಳಾ ಅಯ್ಯಾ,
ಹಾ ಆ ಆ ಹೋ ಯೇ ಯೇ ಅಯ್ಯಾ,
ಸಸಿ ಬೀಜದಂತೆ ಶಿವನು ಶಯ(?)ರಿ ಕಂಡಾ ಅಯ್ಯಾ,
ಇಲ್ಲಿ ಒಮ್ಮೆಯೂ ಭೇದವಿಲ್ಲ
ಕಪಿಲಸಿದ್ಧ ಮಲ್ಲಿಕಾರ್ಜುನಾ ॥೬೩॥

ಜಗದಿಂದ ಒಳಗೆ ಹೊಱಗೆ ನೀನೆಪ್ಪೆಯಯ್ಯಾ.
ನೀನಿಪ್ಪ ನೆಲೆಯನು ಹೋಹ ಗತಿಯನು ಆರೂ ಅಱಿಯರಯ್ಯಾ.
ನೀನಿಪ್ಪ ನೆಲೆಯನು ಹೋಹ ಗತಿಯನು ಕೊಂಡು
ನೆಲಸೆನ್ನ ಕಪಿಲಸಿದ್ಧ ಮಲ್ಲಿನಾಥದೇವರ ದೇವಾ. ॥೬೪॥I-೪೦೭]

ತನ್ನ ಕಾರ್ಯಕ್ಕೆ ಹೋಗುತ್ತಲಿ ಅಡವಿಯಲಿ ಅಸ್ತಮಾನವಾಗೆ,
ಹಸಿದು ನಿಲಲಾಱದೆ ಉಣಲಿಕ್ಕಿರವ್ವಾಯೆಂದು ಬೇಡಿದರೆ,
ನೀನಾರಾತನಾರಾತನೆಂದರೆ ರೋಮರುಷಿಯರತ್ತತ್ತ(?)ನೋಡಯ್ಯ.

ಇತ್ತ ಬಾರಯ್ಯಾ ಬಾರಯ್ಯಾ ಎಂದು ಕರೆದು
ವೃಕ್ಷ ಭಿಕ್ಷವನಿಕ್ಕಿದುವು.
ಎನ್ನ ಕಪಿಲಸಿದ್ಧ ಮಲ್ಲಿನಾಥಯ್ಯನ ಶರಣರ ಹೆಸರು
ಕಲ್ಪವೃಕ್ಷ ನೋಡಯ್ಯಾ. ||೬೫||

ಸಂಸಾರದ ಅಣಲೊಳಗೆ ಇದ್ದೆನಯ್ಯಾ,
ಅಯ್ಯಾ, ಎನ್ನನಾವಾಗ, ನುಂಗಿತೆಂದಜಿಯೆನಯ್ಯಾ,
ಅಯ್ಯಾ, ಎನ್ನನಾವಾಗ ಮೆಲಿದೂದೆಂದಜಿಯೆನು.
ಅದಱ ಬಾಯೊಳಗಣಿಂದ ತೆಗೆದು ಎನ್ನ ಕಾಯಿ
ಕಪಿಲಸಿದ್ಧ ಮಲ್ಲಿನಾಥಯ್ಯಾ. ||೬೬||

ಹಿರಣ್ಯವೆಂದು ಮನ ವೇಧಿಸಿ ಕೈಯಾಂತರೆ ಅಯ್ಯಾ ನಿಮ್ಮಾಣೆ,
ನಿಮ್ಮ ಪ್ರಸಾದಕಲ್ಲದೆ ಕೈಯಾನೆನಯ್ಯಾ.
ಅಯ್ಯಾ, ನಿಮ್ಮ ಪಾದೋದಕವಲ್ಲದೆ ಬೇಱೆ ಕೊಳ್ಳೆನಯ್ಯಾ.
ನಿಮ್ಮಾಳು ಹೆಜಿರ ಹಾರಿದರೆ ಕರೆದು ಬಾ ಎನ್ನಾ
ಕಪಿಲಸಿದ್ಧ ಮಲ್ಲಿನಾಥಾ ನಿನ್ನ. ||೬೭||

ತನ್ನ ಬೆನ್ನಲಿ ಎನ್ನನೊಯ್ದ.
ವಾಯಾಪಟ್ಟಣವ ಹೊಕ್ಕೆ.
ಐದು ಮುಖಂಗಳ ಕಂಡೆನು.
ಮುಖದೊಳಗೆ ಮುಖಂಗಳು ಅಗೆಯ ಹೊಯ್ದಂತಿದ್ದವಾತನ
ತೂರ್ಯಾವಸ್ಥೆ ವೇದದಿಂದ ಊರ್ಧ್ವಮುಖವಾಗಿ
ತುರಿಸುತ್ತಿದ್ದ ಕಾರಣ
ವೇದಪುರದಿಂದತ್ತ ತಲಹಿಲ್ಲದ ಬಯಲಾದನವ್ವಾ,
ಎನ್ನ ಕಪಿಲಸಿದ್ಧ ಮಲ್ಲಿನಾಥದೇವರ ದೇವ. ||೬೮||

ಶಿವಾಚಾರಸಂಪನ್ನರೆಂಬ ಮಹಾಯೋಗ್ಯರು ಜಡಾವಸ್ಥೆಯಲು ಇರಲು
ಉದಯದೂರ್ಧ್ವ ಶಿಖರಂಗಳುರಿದು,
ಶಿರಮಸ್ತಕದಲ್ಲಿರ್ದ ಅಮೃತ ಕರಗಿ ಸುರಿದು,

ತಗ್ಗಿ ನೆಲೆಗೊಂಡವರ ಹೃದಯಂಗಳೂ
ಮಹಾಯೋಗ್ಯರು
ತಮ್ಮ ಉದಯಾಸ್ತಮಾನಂಗಳ ನೆನೆಯೆಂಬೆ
ಕಪಿಲಸಿದ್ಧ ಮಲ್ಲೇಶ್ವರಾ. ॥೬೯॥

ನೀವಲ್ಲದರ ಹಾರೆನಯ್ಯಾ,
ನೀವಲ್ಲದರ ಬೇಡೆನಯ್ಯಾ,
ನೀವಲ್ಲದರ ಹೊಗಳೆನಯ್ಯಾ,
ನೀವಲ್ಲದರ ಮೊಗಳೆನಯ್ಯಾ,
ನೀವಲ್ಲದರ ಬೇಡಿದರೆ ಹುರುಳಿಲ್ಲವಯ್ಯಾ
ಎನ್ನ ಕಪಿಲಸಿದ್ಧ ಮಲ್ಲಿನಾಥಾ. ॥೭೦॥

ಆನೆಯ ಕಾವನ ಅಂತರವ ನೀನಜಿ ಕಂಡಾ,
ಆಡ ಕಾವನ ಅಂತರಂಗಳ ನೀನಜಿ ಕಂಡಾ,
ಕೋಡಗವನಾಡಿಸುವನ ಪರಿಯನಜಿ ಕಂಡಾ,
ಮರುಳಿನ ಮನದ ಪರಿಯನಜಿ ಕಂಡಾ,
ಆ ಕಪಿಲಸಿದ್ಧ ಮಲ್ಲಿನಾಥಯ್ಯಾ
ಕತ್ತಲೆಯೆಂಬುದ ಕಳೆ ಕಂಡಾ, ಮಕ್ಕಳ ಮಾತನಜಿ ಕಂಡಾ. ॥೭೧॥I-೧೫೪]

ಪೂವರಳೆಯ ಹಾಸಿಯ ಮೇಲೆ ಎದ್ದಿದ್ದವಳೆ
ಗಳಗಳನೆ ಬಂದು, ಎನ್ನ ತುರುವನೇಜಿ ನಿಂದು,
ನಾನತ್ತಲೂ ಹೋಗಲಜಿಯದೆ
ನಾನಿತ್ತ ಬರಲಜಿಯದೆ
ಅಲ್ಲಿಂದಲ್ಲಿ ಆತನ ನೆರೆವುತಲಿದ್ದೆ.
ಅಂತೆಂದದ ಕೇಳಿ ಗಕ್ಕನೆ ಕರಗಿ
ಎನ್ನ ಮನದಲಿ ಮೂರುತಿಗೊಂಡ ಕಪಿಲಸಿದ್ಧ ಮಲ್ಲಿನಾಥಯ್ಯನಾ. ॥೭೨॥

ಕೆಳದಿ ಕೇಳೌ ಎನ್ನ, ನಾನಿದ್ದ ಪರಿಗಳ ಹೇಳುವೆ ನಿನಗೆ:
ಶಿಲೆಗಳ ಮೇಲೆ ಸೈವೆಜಿಗಾಗಿ, ತಲೆಗಳ ಬಿಟ್ಟು, ಇದ್ದ ಪರಿಯ,
ವಾಯುಭಿಕ್ಷವಾಗಿಯಿದ್ದ ಪರಿಗಳ ನೋಡಿರವ್ವಾ,
ಆನಿದ್ದ ಗತಿಗಳ ಕಂಡು ಕಂಡು, ಕರುಣಿಸಿ ಕರುಣಿಸಿ
ಗಂಡನಾದ ಎನ್ನ ಕಪಿಲಸಿದ್ಧ
ಮಲ್ಲಿನಾಥದೇವರ ದೇವ ನೋಡವ್ವಾ ॥೭೩॥[I-೩೬೩]

ಕುಲಜನಾಗಿ ನಾ ನೆನೆವೆನಯ್ಯಾ
ಕುಲದ ಬಳಿಯ ದೇವನಲ್ಲ,
ಮನದ ಬಳಿಯ ದೇವನ್ನೈಸೆ.
ಆವ ಯೋನಿಜರಾದಡೇನು?
ಕಪಿಲಸಿದ್ಧ ಮಲ್ಲಿನಾಥನೊಲಿದಾತನು ಕುಲಜನಯ್ಯಾ ॥೭೪॥[I-೩೫೮]

ನಾಗೇಂದ್ರನ ವಿಷವನು, ಬ್ರಹ್ಮನ ಕಪಾಲವನು,
ಮತ್ತೊಬ್ಬರಿಗೆ ಹಿಡಿಯತೀರೂದೆ? ಎಲೆ ಅಯ್ಯಾ!
ಎತ್ತಿದರೆ ಮೇಲೇಳು ಲೋಕವನುರುಹೂದು ಅಯ್ಯಾ!
ಇಳುಹಿದಡೆ ಸಪ್ತೇಳು ಲೋಕವನುರುಹೂದು.
ಇವನೆತ್ತದೆ ಇಳುಹದೆ ಪಿಡಿದುಕೊಂಡಾಡುವ
ನಮ್ಮ ಕಪಿಲಸಿದ್ಧ ಮಲ್ಲಿನಾಥಯ್ಯನು. ॥೭೫॥[I-೩೨]

ಪ್ರಾಪಿತವೇಕೆ ಬಾರದಯ್ಯಾ? ಇಂದಿನ ಅವಸ್ಥೆಗೆ!
ಕಲ್ಪಿತವೇಕೆ ಬಾರದಯ್ಯಾ? ಇಂದಿನ ಅವಸ್ಥೆಗೆ
ಲಿಕ್ತವೇಕೆ ಬಾರದಯ್ಯಾ? ಇಂದಿನ ಅವಸ್ಥೆಗೆ!
ಇಂದಿನಿತು ಏಕೆ ಬಾರದು? ನಾನೇನು ಮಾಡುವೆನು ದೇವಾ!
ಅಯ್ಯಾ ಎನ್ನ ಕಪಿಲಸಿದ್ಧ ಮಲ್ಲಿನಾಥಯ್ಯಾ,
ನಿನಗೆ ಕೂಪ ಅವಸ್ಥೆಯಲಿ ಪ್ರಾಣ ಬಿಡದು ಲಿಕ್ತಬಾರದು,
ಎನ್ನನಿಂತಿರಿಸುವರೆ ಹೇಳಲೆ ದೇವಯ್ಯಾ. ॥೭೬॥

ಇಬ್ಬಟ್ಟೆಯ ಕಂಗಳಲ್ಲಿ ಮನೆ ಮಾಡಿ ಇಪ್ಪೆಯಲ್ಲಾ,
ಅಣ್ಣಾ, ನಮ್ಮ ನಲ್ಲನ ನೀವು ಕಂಡಿರೆ ಎಲೆ ಅಣ್ಣಯ್ಯಾ!
ಎನ್ನ ಅಳಲು ಬಳಲ ಕಂಡು, ಕರುಣದಿಂದ ನೋಡಿ,
ಉಸುರುಸುರೆಂದು ಕಣ್ಣ ನೀರ ತೊಡೆದ ಕಪಿಲಸಿದ್ಧ ಮಲ್ಲಿನಾಥಯ್ಯನು.॥೭೭॥[I-೨೦೨]

ಪೊಱ ಕಣ್ಣನೆ ಮುಚ್ಚಿ, ಒಳ ಕಣ್ಣನೆ ತೆಱೆದು,
ಬಂದಾನೆಂಬ ರಭಸಕ್ಕೆ ಕಿವಿಮಾತು ಕೇಳುತ್ತಿದ್ದೆನು.
ಅದೆತ್ತಣಿಂದ ಸುಳಿದನೆಂದಱಿಯೆನಯ್ಯಾ.
ಸರ್ವ ಪ್ರತಿಬಿಂಬ ಹೊಳೆದರೆ
ಕಣ್ಣ ತುಂಬಿ ತುಂಬಿ ಹಿಡಿದೆ.
ಆ ಪ್ರತಿಬಿಂಬವಿಡಿದೆ ಕಪಿಲಸಿದ್ಧ ಮಲ್ಲಿಕಾರ್ಜುನನ ಮಾಡುವೆನು. ॥೭೮॥

ಐವರ ಸಂಗದುದಯದಲಿ ಹೊಱಹೊಂಟಿರಾದರೆ,
ಕೇಳಿರಣ್ಣಾ! ಮಧ್ಯಾಹ್ನಕೆ ಬಂದಿರಾದರೆ,
ಕಳೆಯವಳಿದು ಕಳೆಯ ತಪ್ಪದೆ ನಿಂದಿರಾದರೆ,
ಬಟ್ಟೆ ಸರಿಸ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿಗಾ ನಾ ಹೋಯಿತ್ತೆ. ॥೭೯॥[I-೨೮೧]

ಎಮ್ಮ ನಲ್ಲ ಎಮ್ಮ ಮನದೊಳಗೆ ಏಕಾಂತ ಹೊಕ್ಕಿಹನು,
ಬೇಗ ಬೇಗ ಹೊರವೊಂಡಿರಣ್ಣಗಳಿರಾ.
ನೀವಿದ್ದರೆ ಮೃತ್ಯು ಬಪ್ಪುದು.
ಆತನ ಮನೆಯೊಳಗೆ ಒಬ್ಬನೆ
ಸ್ಯೆರಿಸ ಕಪಿಲಸಿದ್ಧ ಮಲ್ಲಿಕಾರ್ಜುನ. ॥೮೦॥[I-೨೪೭]

ಅವನ ನಚ್ಚಿ ನಮ್ಮ ಬಿಟ್ಟರು ಬಿಡ ಬಿಡ ಬಿಡನೆಂತೊ,
ಅವನೆಂದಱಿಯೆನು ಎಮ್ಮವರು ಕರ ಮುಗಿವರು.
ಅವನ ತಂದು ಕೊಡಿರಣ್ಣಾ ಎಂದೆನುತ
ಕಪಿಲಸಿದ್ಧ ಮಲ್ಲಿಕಾರ್ಜುನ. ॥೮೧॥

ಶಿವಾಚಾರ ಸಂಪನ್ನರಾಗಿ ಯೋಗ ನಿಲವ ನಿಂದವರು,
ಇತ್ತಲನುಸರಿಸುವರು ಅತ್ತಲಾಚರಿಸುವರು ಪರಮಾರ್ಥವನು.
ಕಪಿಲಸಿದ್ಧ ಮಲ್ಲಿನಾಥನೆಂಬ ಮಹಾಬಯಲ ಮಾಡಿಪ್ಪರು. ॥೮೨॥

ಏವೆನ್ನ ಸಿರಿಗಳು ಕೆಱೆಗಳು ಮರಗಳು ಫಲಗಳು
ಬೀಯದ ಮುನ್ನವೆ ಅಯ್ಯಯ್ಯಾ.
ಮಾಡಿ ಭೋ! ಹಾಲುವುಳ್ಳಲ್ಲಿ ಹಬ್ಬವನು.
ಎನ್ನ ಭಕ್ತಿ ಮುಕ್ತಿ ಸವೆಯದ ಮುನ್ನವೆ
ಲಿಂಗ ಜಂಗಮ ಜಂಗಮ ಲಿಂಗವೆಂದು ಮಾಡಿ ಭೋ!
ಸ್ವತಂತ್ರ ಕಪಿಲಸಿದ್ಧ ಮಲ್ಲಿಕಾರ್ಜುನ
ತಾನು ಬಳಿಕ ತನ್ನನೀವ. ॥೮೩॥[I-೨೭೩]

ಕುರುಡ ಸೂಳೆಗೆ ಕುಂಟ ಬೊಜಗನು
ಕೋಲ ಹಿಡಿದು ನಡೆವಂತೆ ಸೂಳೆತನಗಳ ಮಾಡುವಿರಿ.
ಮೊಲೆ ಮುಡಿಗಳ ತೋರುವಿರಯ್ಯಾ.
ಶಿವಯೋಗಿ ಮರುಳಯ್ಯ
ಕಪಿಲಸಿದ್ಧ ಮಲ್ಲಯ್ಯ ಪ್ರಪಂಚ ವಿರಹಿತ ಲಿಂಗೈಕ್ಯ. ॥೮೪॥[I-೩೫೬]

ಹುಟ್ಟು ಮೆಟ್ಟೆಂಬುದು ನಿಮಗೆಯಿಲ್ಲ,
ನಿಮ್ಮಿಚ್ಛೆ ನೀವೇ ಸ್ವಯಂಭು ಅಯ್ಯಾ,
ಇಂತಿದಿರಯ್ಯಾ ಇಂತಿದಿರಯ್ಯಾ ಎಲೆ ಅಯ್ಯ.
ಅಯ್ಯಾ ನಿಮ್ಮ ಮಹತೆಯ ನೀವೆ ಬಲ್ಲಿರಿ,
ನಿಜಗುರು ಕಪಿಲಸಿದ್ಧ ಮಲ್ಲಿನಾಥಾ. ॥೮೫॥[I-೮೩೨]

ಕುಂಬಾಱರೆಲ್ಲರೂ ಗುಂಡಯ್ಯನಾಗಬಲ್ಲರೆ?
ಮಡಿವಾಳರೆಲ್ಲರೂ ಮಾಚಯ್ಯನಾಗಬಲ್ಲರೆ?
ನೆಯ್ಯಬಲ್ಲವರೆಲ್ಲರೂ ದಾಸಿಮಯ್ಯನಾಗಬಲ್ಲರೆ?
ಎನ್ನ ಗುರು ಕಪಿಲಸಿದ್ಧ ಮಲ್ಲೇಶ್ವರಯ್ಯಾ,
ಪ್ರಾಣಿಯ ಕೊಂದು ಪರಿಹರಿಸಬಲ್ಲರೆ
ತೆಲುಗು ಜೊಮ್ಮಯ್ಯನಾಗಬಲ್ಲರೆ? ॥೮೬॥[I-೨೮೪]

ಹುಟ್ಟಿದ ಬೆಟ್ಟಂಗಳು ಬಟ್ಟಬಜೆಯ ಲಿಂಗವಾದವಲ್ಲಾ.
ನಿಜವಜಿತವರೆನ್ನವರು,
ಕುಬುದ್ಧಿಯೆಲ್ಲವ ಕೊಂಡು ಮುಳುಗಿತ್ತು ನೋಡಾ.
ಕುಬುದ್ಧಿಯನಜಿಯದ ನರದ್ರೋಹಿಗಳಿಗೆಲ್ಲಾ ಹಬ್ಬ ಬಂದಿತ್ತಲ್ಲಾ.
ನರರೆಂಬ ಕೊಬ್ಬಿದ ಕುಜಿಗಳಿಗೆಲ್ಲಾ ಹಬ್ಬ ಬಂದಿತ್ತಲ್ಲಾ.
ನಿಸ್ಸೀಮ ನಿಜಗುಣ ಕಪಿಲಸಿದ್ಧ ಮಲ್ಲಿನಾಥಾ
ನರರೆಂಬ ಪ್ರಾಣಿಗಳಿಗೆ ಹಬ್ಬ ಬಂದಿತ್ತಲ್ಲಾ. ॥೮೭॥

ದೇಹದ ಸಿರಿಯನಾಗುಹೋಗನಿದೆಂದಜಿಯಬಾರದು,
ಅದೆಂದಜಿಯಬಾರದು.
ಅಯ್ಯಾ, ಇವನೋಜೆ ಮಾಡಿ ನೋಡಿಕೊಳ್ಳಿ,, ಪುಣ್ಯಗಳನು
ಕಪಿಲಸಿದ್ಧ ಮಲ್ಲಿನಾಥಯ್ಯನಾ. ॥೮೮॥[I–೪೯೧]

ಈಗಳಿಂತು ಕಾಯದಲೆ ಗುರುವ ನೆರವೆನೆಂಬಂಗೆ ಹೇಳುವೆನಯ್ಯಾ.
ಧನವೊಂದೆ ಧನವಾಗಿ ಮನವೊಂದೆ ಮನವಾಗಿ
ಅಂದೆ ಒಂದಾಗಿ ಇದ್ದೆ ನಾನಯ್ಯ.
ಆತನ ಹಿಡಿವ ಗತಿಯಿಂದ ಶಿವಕೂಟವೊಂದೆ
ಕಪಿಲಸಿದ್ಧ ಮಲ್ಲಿನಾಥಯ್ಯನಾ. ॥೮೯॥[I–೨೧೪]

ಮಜ್ಜನಕ್ಕೆಜೆಯ ಹೇಳಿದರೆ
ನಾನೇನ ಮಜ್ಜನಕ್ಕೆಜೆವೆನು.
ಒಳಗೊಂದು ಪ್ರಾಣಲಿಂಗವ ಕಂಡೆನಯ್ಯಾ.
ಹೊರಗಣ ಹೂವ ಕೊಯ್ದು
ಹೊಜಗೆ ಮಜ್ಜನಕ್ಕೆಜೆವರು.
ಉಪಚಾರದ ನೇಮವ ನಾನೊಲ್ಲೆನಯ್ಯಾ.
ತನುಭಾವವಜಿಯದನು ಏತಜ ಸುಖಿಯೋ,
ಕಪಿಲಸಿದ್ಧ ಮಲ್ಲಿನಾಥನೊಲ್ಲನಯ್ಯಾ. ॥೯೦॥[I–೬೩೬]

ತಾಗಿತ ತಪ್ಪಿಸಬಹುದೆ? ಬಂದುದನತಿಗಳೆಯಬಾರದು.
ಅಂದಂದಿಂಗೆ ಅಂದಂದಿಂಗೆ ಬಂದುದನುಂಬ ಕಾಲಕ್ಕೆ

ಒಲ್ಲೆನೆಂದರೆ ಮಾಬುದೆ?
ಒಡಲಿಗೊಂದು ವಿಧಿಯಾಗಿ
ವಿಧಿಗೊಂದು ಒಡಲಾದ ಬಳಿಕ
ನಿಜಗುರುವೆ ಸ್ವತಂತ್ರ ಕಪಿಲಸಿದ್ಧ ಮಲ್ಲಿನಾಥಾ
ನನ್ನ ಕರಸ್ಥಳಕೆ ಓಡೇಕೆ! ॥೯೧॥

ಅಯ್ಯ, ಮನದ ಜಡ ಮಣ್ಣ ಕಳೆದುದಯ್ಯಾ,
ಶಾಂತ ಉದಕದೊಳಗಿಕ್ಕಿ ತೊಳೆವೆ ನೋಡಯ್ಯಾ.
ಅದರುದಕವನೆ ಮಾಡಿ ಯೋಗ ಕಂಪನಿಕ್ಕಿ ಮೊರೆವೆ ನೋಡಯ್ಯಾ.
ಅದನೊಂದೆಡೆ ತೆಗೆದು ಬಂದು ಬಱುಗಾಣದಲಿಕ್ಕಿ ಹಿಳಿವೆ ನೋಡಯ್ಯ.
ಹಿಳಿದ ರಸದ ಕಂಪ ತೊಡೆವೆಡೆಯನೊಬ್ಬನೆ ಕಪಿಲಸಿದ್ಧ ಮಲ್ಲಿಕಾರ್ಜುನ. ॥೯೨॥

ಕಂಠಪ್ರಮಾಣ ಜಲವ ಹೊಕ್ಕು
ಪದುಮಾಸನಗೊಂಡಿದ್ದಡೇನವ್ವಾ,
ಮುಖ ಮುಖ ಮುಗಿದು ಆತನ ಧ್ಯಾನಿಸುತಿರ್ದೆನವ್ವಾ,
ಆತ ಬಂದು ಮುಟ್ಟಲೊಡನೆ
ಮುಖವಳಿದು ಪಿಡಿವೆ ಕಪಿಲಸಿದ್ಧ ಮಲ್ಲಿಕಾರ್ಜುನನ. ॥೯೩॥[I-೩೦೧]

ಎನ್ನ ಗಂಡ ಬಹನಡ್ಡ ಬಂದು ಬಾಯ ತೆಱೆವ,
ಬಾಯಿ ತುಂಬ ಹೊಯ್ವ,
ಮೆಲಲೊಡನೆ ಕುಡಿ ನೀರ ಹಿಡಿಯೆನುತಿಪ್ಪನವ್ವಾ,
ಕುಡಿಸಿ ಕಡು ಮೀಱಿ ಉಗುಳೆನುತಿಪ್ಪ ಮುನ್ನ ಕಾಣಿರೊ.
ಇವನಾಡಿಸುವ ಯಂತ್ರವಾಹಕ
ಕಪಿಲಸಿದ್ಧ ಮಲ್ಲಿಕಾರ್ಜುನನುಗುಳೆಂದಡೆ ಉಗುಳುವೆನವ್ವಾ ॥೯೪॥

ಶ್ರೀ ರಾಮಯ್ಯದೇವರ ಸಾರೋದ್ಧಾರ:

ತನುಮುಖ ತಾನೆ ಎಂಬ ಯೋಗದ ಹೊಲಬನಱಿದವರು
ಅತ್ತಲೂ ಚರಿಸುವರು ಇತ್ತಲೂ ಚರಿಸುವರು.

ಪರಮಾರ್ಥವ ಮಿಂಚಿನ ರವೆ ರವಿಯಂತೆ ಅಪ್ಪುವರಡಗುವರಯ್ಯ
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೫॥

ಐದಾಱು ಏಳೆಂಟೆಂದೆಂಬ ಬಲೆಯಲಿ ಸಿಲಿಕಿ
ಎಯ್ದೆ ಗಾಱಾಗುತ್ತಲಿದ್ದೇನೆ.
ಮೀಱಲಾಱೆನು ಕರ್ಮಂಗಳನು.
ಹಾಱುಮಾಡಿಹವು ಎನ್ನ ಬೇಱೆ ಮತ್ತೊಂದು ಉಳ್ಳಡೆ ತೋಱಾ.
ಸಾಱುವ ಶ್ರುತಿಗಳಿಗಿಂದತ್ತಲಾದ ಮಾಹಾಘನ ನೀನು ನೀಱ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ತಂದೆ. ॥೯೬॥

ವೇದ ಪಾಠಕರೆಲ್ಲಾ ಕೇಳಿಭೋ!
ವೇದ ಸ್ವಯಂಭು ಎನಲೊಡನೆ ಅಯ್ಯಾ
ಎನ್ನ ಎದೆ ಝುಲ್ಲೆಂದವಯ್ಯ.
ಎಲೆ ಅಜ್ಞಾನಿ ಕೇಳು,
ಕಪಿಲಸಿದ್ಧ ಮಲ್ಲಿಕಾರ್ಜುನ ಒಬ್ಬನೆ ಸ್ವಯಂಭು. ॥೯೭॥

ಅಯ್ಯಾ, ನೀನೇಕೆ ಬಾರೆಯೊ ಹೇಳಯ್ಯ.
ಅಯ್ಯ. ನೀ ಬಾರಯ್ಯ.
ಬಂದೆನ್ನ ಹೃದಯ ಮನ ಹಸನಮಾಡಿ ನೀನು ನಿಲ್ಲಯ್ಯ.
ಅಯ್ಯ, ನೀನು ಬಾರಾ ಬಾರಾ ನಿನ್ನ ಧರ್ಮ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೮॥

ಐವರ ಎನ್ನ ದುಃಖ
ನಿನ್ನ ಅಡಿಮಸ್ತಕದಲೆ ಇದ್ದಲ್ಲಿ
ಹುಟ್ಟು ಹೊಂದಿಲ್ಲದೆ ಹೋಗು.
ಅಯ್ಯ, ನಿನ್ನ ದೆಸೆಗಱಸುತ್ತಲಿದ್ದೇನೆ
ಕವಿಲೆಯ ಕಂದನಂತೆ.
ನಾನಿದ್ದೇನೆಂದು ಬಾರಾ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೯॥

ನೀನಿಲ್ಲದಿರೆ ನಾನು ಹಾಡೆನಯ್ಯ,
ನೀನಿಲ್ಲದಿರೆ ನಾನು ಹೊಗಳೆನಯ್ಯ,
ನೀನಿಲ್ಲದಿರೆ ನಾನು ಬೇಡೆನು,
ನೀನಿಲ್ಲದಿರೆ ಹಾಡಿ ಹೊಗಳಿ ಬೇಡಿದಡೆ ಹುರುಳಿಲ್ಲಯ್ಯ
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೦॥[I-೫೩೯]

ಹಿರಣ್ಯದಿಚ್ಛೆಯಲಿ ಹೆಚ್ಚಿ ನುಡಿವರು ನಿನ್ನಂಗವಪ್ಪರೆ ಅಯ್ಯಾ?
ಅಪ್ಪರಪ್ಪರು:
ಹೊನ್ನು ಹೆಣ್ಣು ಮಣ್ಣು ತ್ರಿವಿಧವ ಬಿಟ್ಟವರಪ್ಪರು,
ಸತ್ಪಾತ್ರ ಅಪಾತ್ರವೆಂದಜೆದವರಪ್ಪರಪ್ಪರು,
ಸದಾಚಾರ ನಿಹಿತಾಚಾರ ಗುರುಭಕ್ತಿ ಜಂಗಮಭಕ್ತಿ ಸ್ವಾನುಭಾವದೀಕ್ಷೆ
ಸಮನಿಸದವರು ಅಪ್ಪರಪ್ಪರು.
ನಿನ್ನಂಗ ಎಲ್ಲರಂತಲ್ಲ, ಹೊಸಪರಿ:
ಎಲೆ ಅಯ್ಯಾ, ಮಸ್ತಕದಲಿ ಪೂಜೆಯಂ ಮಾಡಿ
ಅದ ನಿರ್ಮಾಲ್ಯವೆಂದು ತ್ಯಜಿಸಿ ಮರಳಿ ಪಡೆದು,
ನಿನಗೆ ಪಾತ್ರವಾದವರು ಅಪ್ಪುದಕೇನು ಅನುಮಾನವೇ?
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೧॥[I-೮೩೧]

ಯಮನಿಯಮಾಸನಧ್ಯಾನಾರೂಢಪ್ರಾಣಾಯಾಮ
ಪ್ರತ್ಯಾಹಾರವೆಂಬ ಪಂಚಸಮಾಧಿಯ ಇಕ್ಕಿ,
ಅಜಲೋಕದ ಸಿದ್ಧಿಯನಜೆವವರು ಎತ್ತಾನೊಬ್ಬರು.
ಸುಲಭವೆ ಎಲ್ಲರಿಗೆ?
ಶಿವಭಕ್ತಿ ಸುಲಭವೆ ಎಲ್ಲರಿಗೆ?
ಗುರುಭಕ್ತಿ ಸುಲಭವೆ ಎಲ್ಲರಿಗೆ?
ಜೀವಜಂತುವಿನ ಮೇಲೆ ದಯವುಳ್ಳುದು
ಶಿವಲಿಂಗಾರ್ಚನೆಯ ಮಾಡಿದ ಬಳಿಕ
ಸರ್ವವೂ ತಾವಾಗಿರಬೇಕು.
ಗುರುಭಕ್ತಿ ಅಳವಟ್ಟ ಬಳಿಕ
ಸರ್ವವೂ ತಾವಾಗಿರಬೇಕು.

ಸದಾಚಾರ ಶಿವಾಚಾರ ನಿಹಿತಾಚಾರ ದಯಾಚಾರ
ಉಳ್ಳವರಿಗೆ ಸರ್ವಯೋಗವಪ್ಪುದು.
ಅವರೆ ಅಯ್ಯಂಗೆ ಯೋಗ್ಯವಪ್ಪರು.
ಜಗತ್ಪೂಜ್ಯರಪ್ಪರು, ಪರಲೋಕಸಿದ್ಧರಪ್ಪರು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿ
ದ್ವಯವಿಲ್ಲದೆ ಏಕವಪ್ಪರು. ॥೧೦೨॥[I-೬೯೧]

ಶುದ್ಧ ಸಿದ್ಧ ಪ್ರಸಿದ್ಧ ಪಂಚಮಹಾವಾಕ್ಯಂಗಳನಜಿದೆನೆಂಬ
ಯೋಗಿ ಕೇಳಾ ನೀನು.
ಶುದ್ಧವಾವುದು? ಸಿದ್ಧವಾವುದು? ಪ್ರಸಿದ್ಧವಾವುದು?
ಹೇಳಿರೇ ಬಲ್ಲರೆ.
ಪ್ರಾಣಾಯಾಮದಲ್ಲಿ ಪ್ರವೇಶಿಸಬಲ್ಲಡೆ ಅದು ಶುದ್ಧ.
ಪ್ರತ್ಯಾಹಾರದಲ್ಲಿ ಪ್ರಕಟಿಸಬಲ್ಲಡೆ ಸಿದ್ಧ,
ಪಂಚಬ್ರಹ್ಮದಲ್ಲಿ ಪ್ರವೇಶಿಸಬಲ್ಲಡೆ ಪ್ರಸಿದ್ಧ.
ಕೋಹಂ ತತ್ವಾರ್ಥವಂ ಮೀಜಿದ,
ಅಜ್ಞಾಸೀಮೆಯ ಸಮನಿಸಿದ,
ಪ್ರಸಿದ್ಧಬ್ರಹ್ಮವನು ಮೀಜಿದ,
ಅನಾಹತವನಾನಂದವ ಮಾಡಿದ,
ಉರುತರ ಪರಮಸೀಮೆಯಂ ದಾಂಟಿದ.
ಮಾತೆಯಿಲ್ಲದ ಜಾತನ,
ಗಮನವಿಲ್ಲದ ಗಮ್ಯನ,
ಆ ಯಾರೂ ಅಜಿಯದ ಅನಾಥನ,
ಹಮ್ಮಿನ ಸೊಮ್ಮಳಿದ ನಿತ್ಯನ,
ಅನಂತ ಬ್ರಹ್ಮಾಂಡವಳಿದಲ್ಲಿ ಏನೆಂದಜಿಯದ ಸತ್ಯನ,
ಸಕಳ ನಿಷ್ಕಳಾತ್ಮಕದಲ್ಲಿ ಪೂರ್ಣನಪ್ಪ ಮುಕ್ತನ,
ಬ್ರಹ್ಮಯೋಗವನರಜೀವರನೇಡಿಸುವ ಶಕ್ತನ,
ಅವ್ವೆಯ ಮನದ ಕೊನೆಯ ಮೊನೆಯ ಮೇಲೆ ನಿತ್ಯನಾಗಿಪ್ಪ ಒಡೆಯನ,
ಪ್ರಾಣಶೂನ್ಯನಪ್ಪ ಭಕ್ತಂಗೆ ಪ್ರಾಣನಾಗಿಪ್ಪ ಲಿಂಗನ,
ಷಡ್ವಿಧ ಭಕ್ತಿಯಲ್ಲಿ ಸಂಯೋಗವ ಮಾಡುವ ಶರಣನ,

ಇಹಪರ ಏಕವಾಗಿಪ್ಪಾತನ ತೋಱಿದನೆನ್ನ ಗುರು
ಬಸವಣ್ಣನ ಕಂಡೆನಾತನ ಕೊಂಡೆ,
ಆತನ ಪಾದೋದಕ ಪ್ರಸಾದವ
ಹಿಂದೆ ಉಂಡ ಹಂಗೆ ಇನ್ನು ಉಂಡೆನಾಯಿತ್ತಾದೊಡೆ,
ಹಿಂದೆ ಬಂದ ಹಂಗೆ ಇನ್ನು ಬಂದೆನಾಯಿತ್ತಾದೊಡೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ನಿಮ್ಮಾಣೆ. ॥೧೦೩॥

ಆಧಾರ ಸ್ವಾದಿಷ್ಟ ಮಣಿಪೂರಕ ಅನಾಹತ
ವಿಶುದ್ಧಿ ಆಜ್ಞೇಯವೆಂದೆಂಬರೆಲ್ಲಾ.
ಆಧಾರ ಸ್ವಾದಿಷ್ಟ ಮಣಿಪೂರಕ ಅನಾಹತ
ವಿಶುದ್ಧಿ ಆಜ್ಞೇಯವಾವುದು ಬಲ್ಲರೆ ಹೇಳಿರೇ.
ಆದಿಯನುಳ್ಳುದೆ ಆಧಾರ,
ಅನಾಹತವ ಕೂಡಿಪ್ಪುದೆ ಸ್ವಾದಿಷ್ಟ,
ಮಣಿಯ ಬೆಳಗಿನಲಿಪ್ಪುದೆ ಮಣಿಪೂರಕ,
ಅಹುದಲ್ಲವೆಂಬುದನತಿಗಳೆದುದೆ ವಿಶುದ್ಧಿ,
ಜೀವಂಗಳ ಮೇಲೆ ದಯವುಳ್ಳುದೆ ಆಜ್ಞೆ,
ಇಂತಪ್ಪುದೀ ಯೋಗ.
ಉಳಿದ ಅಭ್ಯಾಸ ಯೋಗಿಗಳ ಕಂಡು ನಗುತಿರ್ದೆ ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೪॥[I–೧೪೦]
ಅಪ್ಪಿನಲಾದ ಘಟವು ಅರ್ಪಿ[1][ತದ][1]ಲೆ ಲೀಯ,
ಇಪ್ಪತ್ತೈದೆಂದು ಕುಱುಹಿಡುವೆ ಏಕೆಲೆ ಮನುಜಾ.
ತಾ ಹುಟ್ಟಿ ತಮ್ಮವ್ವೆ ಬಂಜೆಯೆಂಬ ನ್ಯಾಯದಲ್ಲಿ
ಬೇಱೆ ವಿವರಿಸಿ ತೋಱಬಲ್ಲಡದು ಯೋಗ.
ಅಭ್ಯಾಸಸಮಾಧಿಯಿಂ ಅನುಭವಿಗಳೆಲ್ಲರಿಗೆ
ಬಯಲ ಸಮಾಧಿಯಾಗದಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೫॥

ಸುರುಚಿರಸ್ಥಾನದಲ್ಲಿ ಮೂಱು ಗುಂಡನಿಟ್ಟು,
ಸುಡುತೈದೆನೆ ಕಾಯ ಕರಣಾದಿ ಗುಣಂಗಳನೆ, ಇದೆ ಹುಳ್ಳಿಯಂ ಮಾಡಿ.

೧–೧ ಕ(ಮೂ)

ಕಾಯ ಕರಣಾದಿಗಳ ಹುಳ್ಳಿ ಸವೆದು ಅಜಲೋಕವಂ ತಾಗೆ,
ಅಲ್ಲಿರ್ದ ಸಿದ್ಧಜಲ ಪ್ರವಾಹವಾಗೆ,
ಅದ ಕಂಡು ನಿತ್ಯಮಹೋತ್ಸವನಾದ ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನ. ॥೧೦೬॥[I-೭೯೬]

ಇಚ್ಛಾ ಜ್ಞಾನ ಕ್ರಿಯಾಶಕ್ತಿ ಎನ್ನಾಧೀನ ಕಂಡಾ,
ಇಚ್ಛೈಸೂಗು ಶಕ್ತಿಯೊ! ಶಿವನೊ! ಬಲ್ಲರೆ ಹೇಳಿರೆ?
ಆನಂದಜಲದಲಿ ಆಶ್ರಯವಾಗಿ
ನಿತ್ಯಮಹೋತ್ಸವವನುಳ್ಳುದೇನು ಶಕ್ತಿಯೋ? ಶಿವನೊ? ಬಲ್ಲರೆ ಹೇಳಿರೆ?
ಬ್ರಹ್ಮಾಂಡಂಗಳು ಹಲವು ಕಂಪನೆ ಅಪ್ಪಾಗ.
ನಿಷ್ಕಂಪನೆಯಾಗಿ ಇರಲುಳ್ಳುದೇನು?
ಶಕ್ತಿಯೋ? ಶಿವನೋ? ಬಲ್ಲರೆ ಹೇಳಿರೆ?
ಆನಂದಬ್ರಹ್ಮದಲಿ ಆಂದೋಳವಾಗಿ ಅಕ್ಷರಬ್ರಹ್ಮವನೆಯ್ದಿದ
ಆದಿಶಕ್ತಿಯ ಹೋಬಳಿಯೊ ಎನ್ನ ಕಪಿಸಿದ್ಧ ಮಲ್ಲಿಕಾರ್ಜುನಯ್ಯನು. ॥೧೦೭॥[I-೧೯೪]

ಮನವೆಂಬ ಮಂಟಪದ ನೆಳಲಲ್ಲಿ
ನೆನಹೆಂಬ ಜ್ಞಾನಜ್ಯೋತಿಯ ಬೆಳಗನಿಟ್ಟು,
ಘನಪುರುಷ ಪವಡಿಸಿ ಎಯ್ದಾನೆಲೆ ಅವ್ವಾ,
ಅದನೊಂದೆರಡೆನ್ನದೆ ಮೂಱಱ ಬಾಗಿಲಂ ಮುಚ್ಚಿ.
ನಾಲ್ಕ ಮುಟ್ಟದೆ, ಐದು ತಟ್ಟದೆ, ಇರು ಕಂಡಾ ಎಲೆ ಅವ್ವಾ,
ಆಱೇಳೆಂಟೆಂಬ ವಿಹಂಗ ಸಂಕುಳದ ಉಲುಹ ಪ್ರಬಲವಾದಡೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ನಿದ್ರೆಗೆಟ್ಟಲ್ಲಿ ಇರ. ॥೧೦೮॥[I-೬೫೦]

ಸ್ವಸ್ಥಿರವೆಂಬ ಭೂಮಿಯಲ್ಲಿ
ಸ್ತಂಭಂಗಳು ಮೂಱಾಗಿ, ಫಲಂಗಳಾಱಾದವು.
ಆ ಫಲ ಮೀಱಿತ್ತು.
ಮೇಲಣ ಮೂವತ್ತಾಱ ಮೀಱಿ, ಅವ್ವೆಗೆ ಯೋಗ್ಯವಾಗಿ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿ
ತತ್ವವಿದೆಂದಱಿತು ತತ್ವಮಸಿಯಾದಳವ್ವೆ ॥೧೦೯॥

ಇಪ್ಪತ್ತೆರಡು ಸಾವಿರ ಇಚ್ಛಾನಾಡಿಯಲ್ಲಿ
ತಪ್ಪದೆ ರಮಿಸುವಾತನ ಉಪಪ್ರಯೋಗ ಹಂಸನೆಂದೆಂಬೆ.
ಆತನ ಪರಿ ಅದಂತಿರಲಿ.
ದ್ವಾರವೊಂಬತ್ತಱಲ್ಲಿ ನಾಯಕದ್ವಾರವನಱಿಯಬೇಕು.
ಯೋಗಿಗಳು ಬೇಱೆ ಜಪ ನಿಮಗೇಕೆ? ಹೇಳಿರೇ.
ಹಂಸ ಹಂಸಾಯೆಂಬ ಜಪವು
ಸಂಪೂರ್ಣವಾಗಿ ಅತ್ತಲಿತ್ತ ಇರ್ತ್ತೆಱಕೆ ಕಂಪಿಸದೆ ಇದ್ದಡೆ
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಕೂರ್ತು
ತತ್ವಮಸಿಯೆಂಬ ಇತ್ತಲಿದ್ದರ್ಥ ಒಯ್ಯುವನವ್ವಾ ॥೧೧೦॥

ಅಭ್ಯಂತರದಲಿಪ್ಪ ಗಂಡ
ಗುರುವಿನ ಅನುಮತದಿಂದ ಸರ್ವಾಂಗಕ್ಕೆ ಬಂದಾನು.
ಮನೆಯನಿಂಬುಮಾಡು ಮದವಳಿಗೆ,
ಮನವ ಶುದ್ಧವಮಾಡು ಮದವಳಿಗೆ,
ಮನೆಯಲ್ಲಿದ್ದೆರಡನೂ ಎಬ್ಬಟ್ಟವ್ವಾ,
ಸಿದ್ಧ ಶುದ್ಧ ಪ್ರಸಿದ್ಧದಿಂದ, ದೀಕ್ಷೆ ಶಿಕ್ಷೆ ಸ್ವಾನುಭಾವದಿಂದ ಎಬ್ಬಟ್ಟಿ
ಮನೆಯ ಮಂಗಳವ ಮಾಡವ್ವಾ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ ಗಂಡ
ಮನೆಯೊಳಕೆ ಬಂದು ಮತ್ತೊಬ್ಬರಿದ್ದಡೆ ಸೈರಿಸ. ॥೧೧೧॥

ಎಲ್ಲರ ಎಲ್ಲ[೧][ಂತಲ್ಲ][೧], ನಿನ್ನ ಪರಿ ಹೊಸತು
ಆಬೆ ಅನಾಹತ ಅಪರಸ್ಥಾನಕ್ಕೆ ಬಂದಡೆ ನೀನು ಪೂರ್ವಸ್ಥಾನಕ್ಕೆ ಬಪ್ಪಿ,
ಆಬೆ ಪೂರ್ವಸ್ಥಾನಕ್ಕೆ ಬಂದಡೆ ನೀನು ದಕ್ಷಿಣಸ್ಥಾನಕ್ಕೆ ಬಪ್ಪಿ,
ಆಬೆ ದಕ್ಷಿಣಸ್ಥಾನಕ್ಕೆ ಬಂದಡೆ ನೀನು ಪಂಚಮಸ್ಥಾನಕ್ಕೆ ಬಪ್ಪಿ,
ಆಬೆ ಪಂಚಮಸ್ಥಾನಕ್ಕೆ ಬಂದಡೆ ನೀನು ಅನಾಹತ ಅಪರಸ್ಥಾನದಲಿಪ್ಪಿ,
ಆಬೆ ಅನಾಹತ ಅಪರಸ್ಥಾನವನೆಯ್ದಲಾಱದೆ ಇದ್ದಡೆ
ಕೋಹಂ ನಿಚ್ಚಣಿಗೆಯನಿಕ್ಕಿಟ್ಟು
ಸಂಗಮಸ್ಥಾನಕ್ಕೆ ಸಂಯೋಗ ಪ್ರಾಪ್ತಿಯಂ ಮಾಡಿಸಿದೆ.

---

೧ x (ಮೂ)

ನಿನ್ನ ಸಂಯೋಗದ ಸುಖದಿಂದ ಸಂಪಮ್ಮೆಯಾಗಿ,
ಇಹಪರವೆಂಬುದನು ಏಕವ ಮಾಡಿದಳು
ಅವ್ವೆಯ ಕರುಣದಿಂದ ಎನಗೆ ಅರಿದಪ್ಪ ಆಧಿಕ್ಯವಿಲ್ಲ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಗುರುವಿನ ಕರುಣದಿಂದ
ಸದ್ಭಕ್ತಿಯನಱಿದು ಸಕಲಯೋಗಕ್ಕೆ ಮೂಲನಾದೆನು. ॥೧೧೨॥

ಒಬ್ಬಳು ಹೆಂಗೂಸಿಗೆ ಗಂಡರು ನಾಲ್ವರು,
ಆಕೆ ಗರ್ಭಿಣಿಯಾಗದ ಮುನ್ನವೆ ಪ್ರಸೂತೆಯಾದಳು ನೋಡಾ.
ಗಂಭೀರಸ್ಥಳಕ್ಕೆ ನೀವು ಹೋದಿರಾದಡೆ,
ಬಂಜೆಯ ಮಕ್ಕಳು ಮೂವರ್ಯೆದಾರೆ.
ಆಱು ಗೃಹಂಗಳಂ ಕಟ್ಟಿಕೊಂಡು
ಮೂವತ್ತಾಱನೆಯ ಮಂಟಪದಲ್ಲಿ
ಪರಮಸೀಮೆಯಂ ಮೀಱಿದ
ತತ್ವಮಸಿಯೆಂಬ ವೃಕ್ಷದ ಕೆಳಗೆ ದ್ವಯವಿಲ್ಲವೆಂದು
ಏಕಏಕವೆಂದು ಆಡುತ್ತೈದಾನೆ.
ಅದು ನಿತ್ಯಮುಕ್ತಿ, ಅದೆ ವಿಸ್ತಾರವೆಂದು ಆಡುತ್ತೈದಾನೆ.
ಈಡ ದ್ವಾರಕ್ಕೆ ಹೋದಿರಾದಡೆ
ನಾಲ್ವರ ಮೂಲ ನಾಶವ ಮಾಡಿ,
ಅವ್ವೆಯ ಸರ್ವಾಂಗವಂ ಸೂಱೆಗೊಂಡು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೊಡಗೂಡಿದರೆ
ಗಿರಿಯ ಮೇಲಣ ದುರ್ಗವಂ ಬಲ್ಲೆ. ॥೧೧೩॥

ದೇವಿಯರಿಬ್ಬರುಂ ಇಲ್ಲದಂದು,
ಪ್ರಧಾನಿ ಮಂತ್ರಿಗಳಿಲ್ಲದಂದು,
ಆರೂ ಆರೂ ಇಲ್ಲದಂದು,
ನೀನಾದಿಮುಖ ಶೂನ್ಯನಯ್ಯಾ.
ಅರ್ಥಾಂತ ಅನ್ವಯಕ್ಕೆ ನೀ ಮೂಲನೆಂದೆಂಬಡೆ
ನಿನ್ನೊಡನೆಯ ಮೂಲ ಬಸವಣ್ಣನು.
ನೀನು ತಮಂಧದಲ್ಲಿ

ಜ್ಞಾನಭಾಸ್ಕರದೀಪ್ತಿಯಲ್ಲಿ ಪ್ರವೇಶಿಸಿದಡೆ,
ನಿನ್ನ ದೀಪ್ತಿಯಂ ಪ್ರವೇಶಿಸಲ್ಪಟ್ಟಾತ ಬಸವಣ್ಣನು.
ಮುಕ್ತಿಯ ಮೂಲದಲ್ಲಿ ಸಕಲವನುಭವಿಸುತಿದ್ದಾಗ
ನಾಮಕ್ಕೆ ಕಾರಣಿಕ ಬಸವಣ್ಣನು.
ನೀನು ಸಕಲವನು ನಿಷ್ಕಲವನು
ಪ್ರಾಪಂಚಿಕವನು ತಾತ್ಪರ್ಯವನು ಮಾಡುವಾಗ
ನೀನೆಯೆಂದೆಂಬೆ, ಅದು ಬಸವಣ್ಣನನುಮತ
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ
ನೀನನಾದಿಯ ಮೂಲನೆಂದೆಂಬೆ, ನಿನ್ನ ಬಲ್ಲಾತ ಬಸವಣ್ಣ
ಗುರುಲಿಂಗ ಜಂಗಮತ್ರಯವು ಬಸವಣ್ಣನಂಶಿಕವು. ॥೧೧೪॥[I-೪೯೦]

ಒಂದೊಂದು ಪರಿಯ ಬೊಂಬೆಗಳು ಬಂದು
ಬಂದಾಡಲ್ಕೆ ಕಂಡು ಕಂಡು ನೊಂದೆನಯ್ಯ.
ಅದಱ ದಂದ ಹೊದ್ದಿಹಿದೆಂದು,
ಅವಱ ಹಿಂದು ಮುಂದಱಿತು,
ಅವು ಪಡುವ ನಿಗ್ರಹಂಗಳಂ ಕಂಡು,
ಈ ಮಂದಮತಿಗಯಪ್ಪ ಬೊಂಬೆಗಳ ಹಿಂದು ಮುಂದ ನಾಶವಂ ಮಾಡಿ,
ತಂದೆ ನಿಮ್ಮ ಅಂದವ ತೋಱಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೧೫॥

ದೂರದ ಬಟ್ಟೆಯ ಹೋಗಿ, ಪಥಶ್ರಾಂತನಾಗಿದ್ದು,
ಹಿಂದೆ ತಿರುಗಿ ನೋಡಿದರು ಕಂಡಾ, ಎಲೆ ಗಂಡನೆ.
ಹಿಂದ ತಿರುಗಿ ನೋಡಿದಲ್ಲಿ ಕೆಟ್ಟರು ಕೋಟಿ ಬ್ರಹ್ಮಜ್ಞರು,
ಹಿಂದೆ ತಿರುಗಿ ನೋಡಿದಡೆ ಮುಂದೆ ವಿಸ್ತಾರವೆಂದಿದ್ದೆಯಾದಡೆ
ತಂದೆ ಒಲಿವ ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನ. ॥೧೧೬॥

ಶುದ್ಧ ಸಂಗಮದಲ್ಲಿ ಸಂಯೋಗವಾದಳವ್ವೆ,
ಸಿದ್ಧ ಗುರುವಿನಲ್ಲಿ ನಿತ್ಯಳಾದಳವ್ವೆ,
ಪ್ರಸಿದ್ಧ ಜಂಗಮದಲ್ಲಿ ಪ್ರಾಣಸಂಯೋಗವಾದಳವ್ವೆ,

ಶುದ್ಧ ಸಿದ್ಧ ಪ್ರಸಿದ್ಧವ ಕೂಡಿದ
ಪ್ರಕಟಿತ ಸಂಯೋಗದಲ್ಲಿ ಸಮನಿಸಿದಳವ್ವೆ,
ಆಧಾರಮೂಲಪಂಚಿಕ ತೊಡಗಿ
ಬಹುವಿಧ ನಾಳಂಗಳಿಗೆ ಸಹಸ್ರ ಮುಚ್ಚಳಂ ಮುಚ್ಚಿದಳವ್ವೆ,
ಅಜ್ಞಾನವೆಂಬ ಬಿದ್ದಿನ ಬಂದಡೆ
ಇಕ್ಕಲಿಲ್ಲದಚ್ಚಿಗಂಬಟ್ಟು ಉದಾಸೀನಂ ಮಾಡಿದಳವ್ವೆ,
ಸುಜ್ಞಾನವೆಂಬ ಆತಂಗೆ
ನಿರ್ಮಳದಲೊಮ್ಮನವನಟ್ಟು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ ನಿತ್ಯರ್ಪಿತವಂ ಮಾಡಿ,
ಪ್ರಸಾದವ ಸ್ವೀಕಾರವಂ ಮಾಡಿ ನಿತ್ಯಮುಕ್ತಳಾದಳವ್ವೆ ॥೧೧೭॥

ಪರಶಕ್ತಿ ಆದಿಯೈಯ್ದು ಬೆರಸಿ ಬೆರೆಯದೆ
ಬ್ರಹ್ಮವನಱಿದೆನೆಂಬ ಯೋಗಿ ಕೇಳಾ:
ಅದು ಸಗುಣದಲ್ಲಿ ತಾತ್ಪರ್ಯ
ಅದು ನಿಷ್ಕಳದಲ್ಲಿ ನಿತ್ಯ.
ಅಱಿದೆನೆಂಬ ಯೋಗಿ ಕೇಳಾ:
ಅದು ಅನಾಹತದಲ್ಲಿ ಆನಂದ,
ಅದು ಭಕ್ತಿಜ್ಞಾನವೈರಾಗ್ಯವಂ ಕೂಡಿದ ಏಕಮತ ,
ಅದು ಪದ ನಾಲ್ಕು ಮೀಱಿದ ಮಹಾಮತ.
ಅದು ಉಂಡುದನುಣ್ಣದು, ಅದು ಬಂದಲ್ಲಿ ಬಾರದು.
ಅದು ಸಕಳದಲ್ಲಿಯೂ ತಾನೆ, ನಿಷ್ಕಳದಲ್ಲಿಯೂ ತಾನೆ.
ಅದು ಪ್ರಾಪಂಚಿಕದಲ್ಲಿಯೂ ತಾನೆ, ಅದು ತಾತ್ಪರದಲ್ಲಿಯೂ ತಾನೆ.
ಅದು ಸಕಲ ಸರ್ವದ ನಿಷ್ಕಳದ ನಿರ್ಮಳದ
ಮದದ ಮಾತ್ಸರ್ಯದ ಬಣ್ಣ ಹಲವಱದ
ಅತಿಗಳೆದ ಪರಮಸೀಮೆಯ ಅಱಿದೆನೆಂಬ ಯೋಗಿ.
ಅದು ಒಂದಱಲ್ಲಿ ನಿತ್ಯ, ಎರಡಱಲ್ಲಿ ತಾತ್ಪರ್ಯ,
ಮೂಱಱಲ್ಲಿ ಮುಕ್ತ. ನಾಲ್ಕಱಲ್ಲಿ ಕ್ರೋಧಿ,
ಐದಱಲ್ಲಿ ಆನಂದ, ಆಱಱಲ್ಲಿ ತಾನೆ
ಇಪ್ಪತ್ತೈದು ಪಟ್ಟಣದ ತಾತ್ಪರ್ಯಂಗಳನ್ನಱಿತು,

ಮೂವತ್ತಾಱು ವೃಕ್ಷಂಗಳ ಮೇಲೆ
ಹಣ್ಣೊಂದೆ ಆಯಿತ್ತು ಕಾಣಾ.
ಆ ಹಣ್ಣು ಹಣಿತು, ತೊಟ್ಟುಬಿಟ್ಟು
ನಿರ್ಮಳ ಜ್ಞಾನಾಮೃತಮಂ ತುಂಬಿ
ಭೂಮಿಯ ಮೇಲೆ ಬಿದ್ದಿತು.
ಆ ಬಿದ್ದ ಭೂಮಿ ಪರಲೋಕ.
ಆ ಹಣ್ಣ ಗುರು ಕರುಣವುಳ್ಳವಂಗಲ್ಲದೆ ಮೆಲಲಿಲ್ಲ.
ದೀಕ್ಷತ್ರಯದಲ್ಲಿ ಅನುಮಿಷನಾದಂಗಲ್ಲದೆ
ಆ ಲೋಕದಲ್ಲಿರಲಿಲ್ಲ.
ಆ ಲೋಕದಲ್ಲಿದ್ದವಂಗೆ ಅಜಲೋಕದ ಅಮೃತವನು
ನಿತ್ಯವು ಸೇವಿಸಿ ಸತ್ಯ ಮುಕ್ತನಾಗಿ
ಬೇಡಿದವಕ್ಕೆ ಬೇಡಿದ ಪರಿಯ ಕೇವಲವನಿತ್ತು,
ತಾನು ಕಾಂಕ್ಷೆಗೆ ಹೊಱಗಾಗಿ,
ಕಾಲನ ಕಮ್ಮಟಕ್ಕೆ ಕಳವಣ್ಣವಾಗಿ,
ನಿತ್ಯ ಸಂಗಮಕ್ಕೆ ಸಂಯೋಗವಾಗಿ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ
ಅನಾಹತ ಮೂಲಗುರುವಾಗಿ
ಎನ್ನನಿಷ್ಟಕ್ಕೆ ಪ್ರಾಪ್ತಿಸಿದನಯ್ಯಾ. ॥೧೧೮॥

ಮಲತ್ರಯಂಗಳಲ್ಲಿ ಕುದಿಯಲೀಯದೆ,
ಮನಸಿಜನ ಬಾಣಕ್ಕೆ ಗುಱಿಯಾಗಲಱಿಯದೆ,
ಎನ್ನ ತನ್ನಂತೆ ಮಾಡಿದಯ್ಯ. ಶ್ರೀಗುರು.
ಪದ ನಾಲ್ಕ ಮೀಱಿ ಭವಕ್ಕೆ ಹೇತುವಾಗಲೀಯದೆ
ಕಾರಣ ಸದ್ಯೋಮುಕ್ತನ ಮಾಡಿದನಯ್ಯ.
ಶ್ರೀಗುರುವೆ ಪರಮಗುರುವೆ
ಪರಿಭವಕ್ಕೆ ಬರಲೀಯದಂತೆ
ಎನ್ನ ನಿನ್ನವರೊಳಗೆ ಒಬ್ಬನೆಂದೆನಿಸಿದೆಯಲ್ಲಾ.
ಗುರುವೆ ಪರಮಗುರುವೆ
ಕಾಲನ ಕಮ್ಮಟಕ್ಕೆ ಗುರಿಯಹ ಎನ್ನನು ತೆಗೆದು

ಗುರುಲಿಂಗಜಂಗಮ ತ್ರೈಲಿಂಗಕ್ಕೆ ಕಾರಣಿಕನಮಾಡಿದೆ.
ಇನ್ನು ಭವಕ್ಕೆ ಬಾರೆನು,
ನಿನ್ನವರಾದಂತೆ ಅಪ್ಪೆ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ಎನ್ನ ಮೀಱಿದ ಪರ ಒಂದೂ ಇಲ್ಲ. ॥೧೧೯॥[II-೩೦]

ಮಾಡಿಸಯ್ಯ ಎನಗೆ ನಿನ್ನವರ ಸಂಗವ,
ಮಾಡಿಸಯ್ಯ ಎನಗೆ ನಿನ್ನವರ ಆನಂದವ,
ಆಗಿಸಯ್ಯ ನಿನ್ನವರಾದಂತೆ,
ನೋಡಯ್ಯ, ನಿನ್ನವರ ಕೂಡೆ ಸಂಗವನು ಮಾಡಿಸಯ್ಯ,
ಎನಗೆ ಬಚ್ಚ ಬಱಿಯ ಭಕ್ತಿಯನು ಕೊಡಿಸಯ್ಯ.
ಎನಗೆ ಪಾದೋದಕ ಪ್ರಸಾದವನೊಚ್ಚತ ಸಲಿಸಯ್ಯ.
ನಿನ್ನವರ ಕೂಡಿ ಸಲಿಕೆಗೆ
ಇರಿಸಯ್ಯ ನಿನ್ನವರ ಪಾದದ ಕೆಳಗೆ.
ನಿತ್ಯನಿತ್ಯನಾಗಿ ಬರಿಸದಿರಯ್ಯ ಎನ್ನ ಭವಭವದಲ್ಲಿ,
ಬರಿಸಿ ಬರಿಸಿ ಕಾಲಕಾಮಂಗೆ ಗುಱಿ ನಿಗ್ರಹಕ್ಕೆ.
ಕಪಿಲಸಿದ್ಧ ಮಲ್ಲಿಕಾರ್ಜುನಾ
ಇನಿತನು ಇತ್ತು ಕೆಡಿಸಯ್ಯಾ ಎನ್ನ ಭವದ ಹುಟ್ಟ, ॥೧೨೦॥

ಸನಕಾದಿ ಮುನಿಜನಂಗಳು ಅಱಿಯರವ್ವಾ ನಿನ್ನಂತವ,
ನೀನೊಂದಱೊಳಗೆ ಹಲವಾಗಿ ಹಲವಱೊಳಗೆ ಒಂದಾಗಿ
ಇಪ್ಪಿ ಕಂಡಾ ಎಲೆ ಅವ್ವಾ
ಆಕಾರ ನಿರೂಪದಲ್ಲಿ ಏಕವಾಗಿಪ್ಪಿಯೌ
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ನೀನಾಗಿ. ॥೧೨೧॥[I-೭೭೦

ಕಾತ ವೃಕ್ಷವವ್ವಾ ನೀನು,
ಪಕ್ಷಿಗಳು ಹಲವಾಗಿ ಬಂದು
ಹಣ್ಣ ಮೆಲಿಯಲ್ಕೆ ನ. ನಲಿದಾಡುವೆ.
ಪಕ್ಷಿ ವೃಕ್ಷವ ನುಂಗಿದಡೆ ಎಂತು ಸೈರಿಸಲಹುದೌ,
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೨೨॥

ಸಂತವಿಸು ಸಂತಯಿಸಲಾಱೆನೆನ್ನ ಮನವ,
ಮುನ್ನಿನವರುಮಾಡಿ ಕೂಡಿದ ಬಳಿಕ
ಪರಿಯ ನೆನೆನೆನೆದು ನಾನು
ಬೇಯದ ಬೇಗೆಯ ಬೆಂದೆನಯ್ಯ.
ಇಂತಲ್ಲದಿಂತು ಮರ ಕಿಚ್ಚು ಹಚ್ಚಿದಂತಾದೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೧೨೩॥[I-೭೫೩]

ಆರನಾದಡೆಯೂ ಅಣ್ಣಾ ಎನಲಾಱೆನು,
ಆನಾದಡೆಯೂ ಅಯ್ಯಾ ಎನ್ನಲಾಱೆನು,
ನೀನು ಜಗಕೊಡೆಯ, ನಾನು ನಿನ್ನ ಅಯ್ಯಾ ಎಂಬೆನು.
ಎನಗಾರೂ ಇಲ್ಲದ ಕಾರಣ, ನೀನೆ ಗತಿ.
ಶರಣುಹೊಕ್ಕೆ, ಕರುಣಿಸು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೨೪॥

ಅಂಕುಸದರಳಿನ ಸಂಪಗೆಯ ಹೂವಿನ ಕಂಪು.
ಇತ್ತಲೆತ್ತ ಬಿಜಯಂಗೈದಿರಿ ಶಿವನೆ,
ಅಜಿಯಾ ಮಗನೆ, ಮಲೆಯ ಮಲ್ಲಯ್ಯ ನಿನಗೆಂದು ಬಂದುದನು.
ನೀವು ಭಕ್ತರಂಗಳದಲಾಡುವ
ತೊತ್ತಿನ ಓಹಿಯ ಮಗನೆಂದು ಬಂದಿರಿ ಶಿವನೆ,
ಕಪಿಲಸಿದ್ದ ಮಲ್ಲಿಕಾರ್ಜುನಾ. ॥೧೨೫॥

ಎಸವಡೆದ ಮೃಗದಂತೆ ಎನ್ನ ಮನ ಶಂಭುವೆ,
ಕಲ್ಲೆನ್ನದು ಮುಳ್ಳೆನ್ನದು.
ಭಕ್ತಿಯೆಂಬ ಸಂಕಲೆಯಲಿಕ್ಕೆನ್ನ ಮನವ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೨೬॥[I-೨೭೨]

ಸಂಸಾರವೆಂಬ ಅರಣ್ಯದೊಳಗೆ ಆಸುರವೊ, ಬಿಡದಿರೆನ್ನ.
ಬೊಪ್ಪ, ಬೆನ್ನಲಿದ್ದು ಸಲಹುದೆನ್ನ.
ಪಂಚೇಂದ್ರಿಯವೆಂಬ ಐದು ನಾಯ ಬಿಟ್ಟು,
ಕಾಮನೆಂಬ ಬೇಟೆಗಾಱನ ಬಾರಿಗೊಪ್ಪಿಸದಿರು,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೨೭॥

ನಿನ್ನವನಾಗಿ ಅನ್ಯರ ಬೇಡುವ
ಅನ್ಯಾಯವನೇನೆಂಬೆನೆಲೆಯಯ್ಯಾ.
ನಿನ್ನನರ್ಚಿಸಿದ ಪುರಾತನರು ನೀವೆಯಾದರು.
ನಿನ್ನನರ್ಚಿಸಿದ ಬಸವಣ್ಣ ನೀನೆಯಾದ.
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ,
ಗುರುವಾಗಿ ಬಂದೆನ್ನ ಭವದ ಬೇರ ಹಜೆದ ಬಳಿಕ
ನಿನ್ನವರು ನೀನು ನಾನೆಂಬ ಸಂದೇಹವೇಕಯ್ಯ? ॥೧೨೮॥[I–೨೯೬]

ಓರಂತೆ ಮಾಡಯ್ಯ,
ನಿನ್ನವರೊಳಗೆ ಮನ್ನಣೆಯಿಂದ ಮಚ್ಚಿಸಯ್ಯ,
ನಿನ್ನವರ ಪಾದೋದಕವ ಮಚ್ಚಿಸಯ್ಯ,
ನಿನ್ನವರ ಪ್ರಸಾದವ ಮಚ್ಚಿಸಿ
ಮನಕ್ಕೆ ನೀನೆ ಮಂಗಳವಾರೆ,
ಅಚ್ಚಿಗಬಡಿಸದಂತಿರಿಸಾ ಕಪಿಲಸಿದ್ಧ ಮಲ್ಲಿಕಾರ್ಜುನ. ॥೧೨೯॥

ಸಾಗರ ಸತ್ಯಯವ್ವೆ
ಹಲರ ಮುಖ ಪ್ರಭಾಳೆ ನೀ ಬಾರವ್ವಾ,
[1][ಕಂ][1]ಗಳ ರಾಮಾಳೆ ನೀ ಬಾರವ್ವಾ,
ಕಿವಿಗಳ ಸಂ[2][ಬ][2]ಂಧಿನಿ ಬಾರವ್ವಾ,
ಆತನ ಕಂಗಳ ಕಿವಿಗಳ ಪರಿಯಾಣಕ್ಕೆ
ಚೊಕ್ಕ ಸರದೋಗರವನೆತ್ತುವೆ,
ನೀ ಬಾರವ್ವಾ, ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಗೆ. ॥೧೩೦॥[I–೭೮೧]

ಅಕ್ಕಟಾ! ಎನಗೆ ನಿನಗೆ ಹೊರಗೆ ಹೇಳುವಳಲ್ಲ ಕಂಡಾ,
ಹೇಳಿದಡಲ್ಲದೆ ಕೇಳಿದಡಲ್ಲದೆ ಕಾಬವಳಲ್ಲ ಕಂಡಾ.
ಎನ್ನ ಕಾಣದ ಕೇಳದ ಪ್ರಾಣಿಯನ್ನು ಅನಿಮಿಷನಾಗಿರಿಸೈ
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೩೧॥[I–೨೦]

೧–೧ ರ (ಮೂ) ೨–೨ ಮ (ಮೂ)

ಸಲ್ಲ ದುರಾಗತವು ಅಯ್ಯಾ.
ನೀನೇಕೆ ಬಾರೆ? ಒಲ್ಲೆಯೇಕೆ? ಹೇಳಾ ಅಯ್ಯಾ.
ನೀ ಬಾರಯ್ಯಾ,
ಬಂದೆನ್ನ ಹೃದಯ ಮನಸಾಸನಮಾಡಿ ನಿಲ್ಲಯ್ಯ.
ಅಯ್ಯಾ ನೀ ಬಾರಾ, ಬಾರಾ ನಿನ್ನ ಧರ್ಮ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೧೩೨॥

ಅಯ್ಯಾ ನಿನ್ನ ಬರವಿಂಗೆ ಕಂಬೇಟಗೊಂಡೆ ಅಯ್ಯಾ,
ಅಯ್ಯಾ ನಿನ್ನ ಬರವಿಂಗೆ ಮನದ ಮಂಚವ ಪಚ್ಚಡಿಸಿದೆ ಎಲೆ ಅಯ್ಯಾ.
ಅಯ್ಯಾ ನಿನ್ನ ಬರವಿಂಗೆ ಚಿತ್ತಶುದ್ಧಿಯಾಗಿದ್ದೆನೆಲೆ ಅಯ್ಯಾ,
ಅಯ್ಯಾ ನಿನ್ನ ಬರವಿಂಗೆ ಜ್ಞಾನ ಸೆಜಗ ಹಾಸಿ
ಆಸೆ ಬಿಟ್ಟಿದ್ದೆನೆಲೆ ಅಯ್ಯಾ,
ಅಯ್ಯಾ ನೀ ಬಂದು ಅವಿತಥವಿಲ್ಲದೆ ಕೂಡಿ
ನಿನ್ನವರೋರಂತೆ ಮಾಡಾ ಗುರುವೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೩೩॥[I-೬೮]

ಅಯ್ಯಾ, ನೀ ನಿತ್ಯ ನಿತ್ಯ ನೀನಲೆ ಅಯ್ಯಾ,
ನೀ ಸತ್ಯಶುದ್ಧದೇಹಿ ಕಾಣಲೆ ಅಯ್ಯಾ,
ಅಯ್ಯಾ ನೀ ಕರುಣವುಳ್ಳ ಮಹಾಶ್ರಯ ಕಾಣಲೆ ಅಯ್ಯಾ,
ಅಯ್ಯಾ ನೀನು ಭಕ್ತದೇಹಿಕ ದೇವನಾದ ಕಾರಣ ಒಲಿದೆ ಮೆಚ್ಚಿದೆ.
ಒಲುಮೆಯೂ ಮೆಚ್ಚು ನಿಶ್ಚಯವೆಂದು ನಂಬಿದೆ ಗುರುವೆ,
ಭವಪಾಶದೂರನೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೩೪॥

ಆನಂದಸ್ಥಳದಲ್ಲಿ ಊರ್ಧ್ವ ಕಂಜಕನ್ನಿಕೆಗೆ
ಇಂದುವಿನ ಕೊಡನ ಹೊತ್ತಾಡುತ್ತೈದಾಳೆ.
ಮೂಲಪಟ್ಟಣದಲ್ಲಿ ಮೂವರಿಗೆ ರತಿಯ ಹುಟ್ಟಿಸುತ್ತೈದಾಳೆ.
ಅಪರಪಟ್ಟಣದಲ್ಲಿ ಹಲವರಿಗೆ ಆಶ್ರಯವಾಗಿ ಐದಾಳೆ.
ಮಧ್ಯಮಪಟ್ಟಣದಲ್ಲಿ ಮಹಾಮಹೇಶ್ವರರಿಗೆ ಮಹದಾಶ್ರಯವಾಗಿ ಐದಾಳೆ.
ಇಂತು ಪಟ್ಟಣ ಹದಿನೆಂಟಕ್ಕೆ ಸೀಮೆ ಇಪ್ಪತ್ತೈದು

ಗ್ರಾಮ ಮೂವತ್ತಾಱು ಸಂಯೋಗವೆಂಬ ನಗರಿಯಲ್ಲಿ
ನಿತ್ಯಸಾನಂದನೆಂಬಾತ ಕುಳ್ಳಿದ್ದು,
ಪಟ್ಟಣ ಹದಿನೆಂಟರ ವ್ಯಾಪ್ತಿಯ
ತಳವಾಱಿರೆಂಟು ಮಂದಿಯ
ಗ್ರಾಮ ಬಂಧನೆಯ ಮಾಡಲೀಯದೆ,
ಸುಚಿತ್ತದಿಂ ನಡೆಸುತ್ತೈದಾನೆ.
ನೆನೆವ ಮನಸ್ಸಿನಲ್ಲಿ ಅವಿತಥವಿಲ್ಲದೆ
ಚಿತ್ತವೃತ್ತಿಯನ್ನಱಿತು ಮಹಾಲೋಕದಲಿಪ್ಪ
ಮುನ್ನೂಱ ಮೂವತ್ತ ಮೂಱು ಕುಲದುರ್ಗಂಗಳಂ ಪಾಟಿಸಿ
ಸುಯಿಧಾನಿಯಾಗಿರುತ್ತೈದಾನೆ.
ಅಜಲೋಕದಲ್ಲಿ, ಶುದ್ಧ ಸಂಯೋಗ ಸಂಗಮವೆಂಬ ಗೃಹದಲ್ಲಿ
ಮೂಲಕ ಮುಕ್ತಕಾ ರುದ್ರಕ ಅನುಮಿಷಕ
ಆಂದೋಳಕ ವಿಚಿತ್ರಕ ಸಕಲ ಮುಕ್ತ್ಯಕ್ಕ, ಸಾನಂದ ಸತ್ಯಕ್ಕ
ಇಂತಪ್ಪ ಮಹಾಸ್ತ್ರೀಯರ ಚಿತ್ತಕ್ಕೆ
ಸಗುಣವಪ್ಪುದನೊಂದನೆ ಕೂಡಿ ಭೋಗಿಸುತ್ತೈದಾನೆ.
ಅವರು ಸ್ತ್ರಿಯರು, ತಾ ಪುರುಷನಾಗಿ ಕೂಡುತ್ತೈದಾನೆ, ಅವಿತವಿಲ್ಲದೆ.
ಆ ಕೂಟದ ಸುಖವನು ಶಿಶು ಬಲ್ಲ,
ಶಿಶುವಿನ ಜನನವನು ಅವ್ವೆ ಬಲ್ಲಳು.
ಅವ್ವೆಯ ಇಚ್ಛಾ ಮಾತ್ರದಲ್ಲಿದ್ದು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ ತ್ರೈಲಿಂಕ್ಕೆ ಮೂಲವಾದಳವ್ವೆ. ॥೧೩೫॥

ಎಂದಿಪ್ಪೆನಯ್ಯಾ, ಶುದ್ಧ ಸಿದ್ಧ ಪ್ರಸಿದ್ಧ ಪ್ರವೇಶಿಸಿ,
ಎಂದಿಪ್ಪೆನಯ್ಯಾ ಭಕ್ತಿ ಜ್ಞಾನ ವೈರಾಗ್ಯ ಸಂಪನ್ನತೆಯಾಗಿ,
ಎಂದಿಪ್ಪೆನಯ್ಯಾ, ತತ್ವ ತತ್ವದ ತುರಿಯ ತುರಿಯ ನೀನೆಯಾಗಿ,
ಎಂದಿಪ್ಪೆನಯ್ಯಾ, ದೀಕ್ಷಾತ್ರಯದಲ್ಲಿ ಮಹಾಸಂಪನ್ನನಾಗಿ,
ಎಂದಿಪ್ಪೆನಯ್ಯಾ, ಲಿಂಗತ್ರಯದಲ್ಲಿ ಮಹಾಸಂಪನ್ನನಾಗಿ,
ಎಂದಿಪ್ಪೆನಯ್ಯಾ, ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ನಿಮ್ಮವರ ನಡುವೆ ಓರಂತೆ. ॥೧೩೬॥[I–೯೭]

ಎಂದಿಪ್ಪೆನಯ್ಯಾ, ನಿನ್ನ ಗಣಸಮೂಹದಲ್ಲಿ.
ಎಂದಿಪ್ಪೆನಯ್ಯಾ, ನಿನ್ನವರ ನಡುವೆ,
ಎಂದಿಪ್ಪೆನಯ್ಯಾ, ಕೀಳಿಲ ಕಾಯ್ದು,
ಎಂದಿಪ್ಪೆನಯ್ಯಾ, ಕೈಕಸಿಕಿಲನಾಗಿ,
ಎಂದಿಪ್ಪೆನಯ್ಯಾ, ನಿಮ್ಮ ಡಿಂಗರಿಗನಾಗಿ,
ಎಂದಿಪ್ಪೆನಯ್ಯಾ, ಶಿವನೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೩೭॥[I-೯೬]

ಆದಿನಿರಾಳ, ಮಧ್ಯನಿರಾಳ, ಊರ್ಧ್ವನಿರಾಳ ಅಂತೆ ನಿನ್ನ ಪರಿಯಯ್ಯಾ.
ಅನಾಮಯಶೂನ್ಯನೆಂದು ಹೊಗಳುತ್ತೈದಾರೆ ನಿನ್ನ ಹಲಬರು,
ನೀನು ಅಯ್ಯಾ, ಸುಚಿತ್ತವಾದ ಲೋಕಂಗಳಲ್ಲಿ ನೀನು
ಉರುತರ ನಿತ್ಯನೆಂಬುದನಱಿಯರು ಕಾಣಾ ಎಲೆ ಅಯ್ಯ,
ಅಯ್ಯ ನಿಮ್ಮ ಅನಾಹತ ಪಟ್ಟಣದಲ್ಲಿ
ಶೂನ್ಯ ಕಾಯನೆಂಬ ಮಹಾಗಣೇಶ್ವರನ ಮನೆಯಲ್ಲಿ ,
ಪದನಾಶನೆಂಬ ಯೋಗಿಯಾಗಿ ಬಂದು.
ಫಲಕ್ಕೆ ಬಿತ್ತಲಿದ್ದ ಬೀಜಂಗಳ ನೀನು ಸಂಗ್ರಹಿಸಿ
ಸ್ವಯಂಪಾಕವ ಮಾಡಿ,
ಆತ ಕಿಂಕಿಲದಿಂ ಸದ್ಭಾವವೆಂದೆಂಬ ಪರಿಯಾಣದಲ್ಲಿ
ಅಷ್ಟಪಾದಂಗಳನುಳ್ಳ ಆಧಾರವಂ ತಂದಿಟ್ಟು
ಮಥಿತ ಮರ್ದನ, ಸುಚಿತ ಸುಗುಣಂಗಳೆಂಬ
ಓಗರವಂ ತಂದು ಎನಗೆ ಬಡಿಸಲ್ಕಾಗಿ,
ನಿತ್ಯವೆಂಬ ದೀಪ್ತಿಯ ಬೆಳಗಿನಲ್ಲಿ
ಸುಚಿತ್ತದಿಂ ಆರೋಗಣೆಯಂ ಮಾಡಿ,
ರೇತೋದಾರನೆಂಬ ಗಣೇಶ್ವರ
ಲೆಕ್ಕ ಮೂವತ್ತಾಱು ಸಾವಿರ ಪಟ್ಟಣಂಗಳಲ್ಲಿ
ಪ್ರವೇಶಿಸಿ ಬಂದ ಕಾಲದಲ್ಲಿ
ನಿನ್ನ ಸುಮತಿ ಪ್ರಸನ್ನತೆ ಪರಿಣಾಮ ಪ್ರಯೋಗವೆಂಬ
ಪ್ರಸಾದ ಸ್ವೀಕಾರಂ ಮಾಡಲ್ಕಾಗಿ,
ಆತನ ಮೂಱಱಿಂ ಮೇಲೆ
ಹತ್ತಱಿಂದೊಳಗೆ ಇದ್ದಂಥ ಹಲವೆಲ್ಲವೂ ಏಕೀಭವಿಸಿದವು

ಆತ ನಿತ್ಯನಾದ, ಆತ ಫಲಕ್ಕೆ ಪದಕ್ಕೆ ಭವಕ್ಕೆ
ತುರೀಯ ಸಿದ್ಧತ್ವಮಸಿಯನೆಯ್ದಿ.
ಸಂದು ಹಜಿದ, ಹಂಗು ಹಜಿದ,
ಆನಂದವೆಂಬ ಶ್ವೇತಜಲದಲ್ಲಿ
ಚಂದ್ರಕಾಂತದ ಮಂಟಪವನಿಕ್ಕಿ
ಅರ್ಚನೆ ಪೂಜನೆ ವ್ಯವಹರಣೆಯೆಂಬವನತಿಗಳೆದು
ಸಿದ್ಧಲಿಂಗಾರ್ಚನೆಯಂ ಮಾಡಿ
ಸುಖಸಂಯೋಗದಲ್ಲಿ ಎರಡಿಲ್ಲದೆ ಮೂರ್ಛಿತವೋಗೈದಾನೆ
ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೩೮॥

ಕಂಬೇಟವೆಂಬ ಕಾನನದಲ್ಲಿ ಅಜಿಸುತ್ತೈದಾನೆ,
ಭಕ್ತಿಯೆಂಬ ಹೊಂಮೃಗವ ಸೋಹುತ್ತೈದಾನೆ.
ಲಿಂಗತ್ರಯದ ಬಲೆಗಾಗಿ ಮೃಗವು ಸಿಕ್ಕಿ
ಬಲೆ ಹಜಿದೊಂದಾದಡೆ ಎಯ್ದುವೆನವ್ವಾ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ ಪರಮ ಸೀಮೆಯಾ. ॥೧೩೯॥[I-೩೦೭]

ಸೀಮೆಯ ಮೀಜಿದ ಸಿರಿವಂತನೆ,
ಪದವ ಮೀಜಿದ ಬಹುರೂಪನೆ,
ಆನಂದ ಆನಂದವಾದ ನಿತ್ಯ ಸಾನಂದನೆ,
ಸುಗುಣದಲ್ಲಿ ಬೆಳಗುತಿಹ ನಿತ್ಯ ಸಾನಂದನೆಲೆ ಅಯ್ಯಾ,
ನಿನ್ನಾನಂದವನಾರು ಬಲ್ಲರು? ನೀನು ಲಿಂಗತ್ರಯದೊಳಗೆ,
ಎರಡೈದು ಪಾದೋದಕದಲಿ,
ಐದಾಜು ಕೂಡಿದ ಪ್ರಸಾದದಲ್ಲಿ
ನಿತ್ಯ ಸುಖಿಯೆಂಬುದ ಸತ್ಯಶುಚಿಯೆಂಬುದ ನಿನ್ನವರೆ ಬಲ್ಲರು.
ಜಡವಿಡಿದು ನುಡಿವ ಅಜ್ಞಾನಿ ಹೊರಸುಗಳು ಬಲ್ಲರೆ?
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೪೦॥

ಬಲ್ಲೆ ಬಲ್ಲೆ, ನಿನ್ನ, ಜನನ ಮರಣಕ್ಕೆ ಹೊಜಿಗಾದನೆಂಬುದ,
ಬಲ್ಲೆ ಬಲ್ಲೆ, ನಿನ್ನ ಕಾಲಕಲ್ಪಿತಕ್ಕೆ ಹೊಜಿಗಾದನೆಂಬುದ,

ಬಲ್ಲೆ ಬಲ್ಲೆ, ನೀನು ಮಹಾನಿತ್ಯ ಮಂಗಳನೆಂಬುದ,
ಬಲ್ಲೆ ಬಲ್ಲೆ, ನೀನು ಸತ್ಯಶುದ್ಧದೇವನೆಂಬುದ,
ಬಲ್ಲೆ ಬಲ್ಲೆ, ನೀನು ಫಲಪದವ ಮೀಱಿದನೆಂಬುದ,
ಬಲ್ಲೆ ಬಲ್ಲೆ, ನೀನು ಉರುತರ ಲೋಕಪ್ರಕಾಶನೆಂಬುದ,
ಬಲ್ಲೆ ಬಲ್ಲೆ, ನೀನು ಪರಿಭವಕ್ಕೆ ಬಾರನೆಂಬುದ,
ಬಲ್ಲೆ ಬಲ್ಲೆ, ನೀನು ಕಾಲನ ಕಮ್ಮಟಕ್ಕೆ ಸಲ್ಲನೆಂಬುದು,
ಎನ್ನ ಬಲ್ಲತನಕ್ಕೆ ಮಂಗಳವನೀಯೆ
ಉತ್ತರ ದಕ್ಷಿಣ ಪೂರ್ವ ಪಶ್ಚಿಮವೆಂಬ
ದ್ವಾರಂಗಳಲ್ಲಿ ತಪ್ಪದೆ ಬಪ್ಪಾಗ
ಆನು ನಿನ್ನೊಡನೆ ಬಾರದೆ ಉಳಿದುದುಂಟೆ?
ಆನೇನು ಭೇದವಾಗಿಪ್ಪೆನೆಲೆ ಅಯ್ಯಾ.
ಸಂದು ಸವೆದು ಹಂಗು ಹಱಿದು
ಲೀಯ ಒಳಗಾಗಿದ್ದ ಎನ್ನ ನೋಡದೆ ಇಪ್ಪುದು, ಅದಾವ ಗರುವತನ?
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೪೧॥

ಭಸಿತವನಿಟ್ಟಿ[ಱು]ವೆ,
ರುದ್ರಾಕ್ಷಿಯ ಧರಿಸಿ[ಱು]ವೆ,
ನೀನೊಲ್ಲೆ ನೀನೊಲಿದೆ
ನಿನ್ನೊಲುಮೆ ಏಕೆ ಎಲೆ ಅಯ್ಯಾ ನಿನ್ನವರೊಲ್ಲರು.
ಆ ಒಲುಮೆ ತಾನೆನಗೇಕೆ ಹೇಳಾ ಎಲೆ ಅಯ್ಯಾ.
ಪುರುಷನಿಲ್ಲದ ಸ್ತ್ರೀಯ ಶೃಂಗಾರದಂತೆ
ನಿನ್ನೊಲುಮೆ ಏಕೆ ಹೇಳಾ?
ನಿಜಭಕ್ತಿಯನಿರಿಸಿ ಸದ್ಭಕ್ತನೆಂದೆನಿಸಿ
ಸದಾಚಾರಿಗಳ ಸಂಗಡ
ಎನ್ನ ಹುದುವಿನಲ್ಲಿ ಕುಳ್ಳಿರಿಸಿ,
ಓರಂತೆ ಮಾಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ,
ನೀನೊಲಿದುದಕ್ಕೆ ಇದು ಕುರುಹು
ಅಲ್ಲದಿದ್ದಡೆ ವೈಶಿಕ. ॥೧೪೨॥[I-೬೨೭]

ಪ್ರಣವಾಕ್ಷರದಿಂ ಮೇಲೆ ಒಪ್ಪಿಪ್ಪ ಬೀಜಾಕ್ಷರದ ಪರಿಯಿನ್ನೆಂತೊ?
ವೈನೈಯೆಂಬ ಶುದ್ಧ ಧವಳತೆಯ ಮೀಜಿಪ್ಪ
ಅಕ್ಷರವೆರಡು, ಒಂದೆಸಳಿನ ಕಮಳ,
ನಿತ್ಯನೆಂಬ ಅಧಿದೇವತೆ
ಶುದ್ಧ ಸ್ಫಟಿಕ ಸಂಕಾಶವರ್ಣ
ನಿತ್ಯನಿರಂಜನೈಕ್ಯಪದವು,
ಕಪಿಲಸಿದ್ಧ ಮಲ್ಲಿನಾಥಯ್ಯನ ಕೂಟ
ಜಗದಾಟ ಭವದಾಟ ಜನ್ಮನಾಶ, ॥೧೪೩॥

ಸೋಹಂ ನೀನೆ ಎಲೆ ಅಯ್ಯಾ,
ಕೋಹಂ ತತ್ವ ತುರಿಯಾರ್ಥವು ನೀನೆ ಅಯ್ಯಾ,
ನಾಹಂ ಕೋಹಂ ನೀನೆ ಅಯ್ಯಾ,
ಆನೆಂಬುದೊಂದು ಭ್ರಾಂತುಂಟೆ?
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ಗುರುವಿನ ಕೈಯ್ಯಲು ನಾನು ಸತ್ತು ಹುಟ್ಟಿದ ಬಳಿಕ
ಆನು ನೀನೆಂಬ ಸಂದಳಿದೆ. ॥೧೪೪॥[I–೧೪೩]

ಕೂಟ ರಚನೆಯಲಿ ಸಂದಳಿದು,
ನೋಟ ನಿನ್ನಲಿ ನಟ್ಟು,
ಸಮಕಲೆಯೆಂದಪ್ಪುದಯ್ಯಾ?
ಸಮರತಿಯೆಂದಪ್ಪುದಯ್ಯಾ?
ಹಂಗುಸಜೆದು ದಂದುಗ ಉಡಿಗಿ,
ಎಂದಿಗೆ ಒಳಕೊಂಬೆಯಯ್ಯಾ? ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೪೫॥[I–೩೬೦]

ಇಹಲೋಕ ಪರಲೋಕವೆಂಬ ಸಂದಳಿಯಿತಯ್ಯಾ,
ಗುರುವಿನ ಹಸ್ತದಲ್ಲಿ ಸತ್ತು,
ಪಂಚಾಕ್ಷರಿಯಿಂದ ಎತ್ತಿದ ಕಾರಣದಲ್ಲಿ,
ನಿತ್ಯವೂ ಲಿಂಗಾರ್ಚನೆಯಂ ಮಾಡುವ ಕಾರಣದಲ್ಲಿ
ನಿತ್ಯಂ ವಿಭೂತಿ ರುದ್ರಾಕ್ಷಿ ಧಾರಣೆಯಂ ಮಾಡುವ ಕಾರಣದಲ್ಲಿ,

ಇಹಲೋಕವೆಂದೇನು? ಪರಲೋಕವೆಂದೇನು?
ಹಂಗುಹಜೆದು ಒಂದಾದ ಬಳಿಕ
ಕುಲಮದಂಗಳು ಹಜೆದು ನಾನು ನೀನಾದ ಬಳಿಕ
ಎಲೆ ಅಯ್ಯಾ ಭಕ್ತರ ಸರ್ವಾಂಗ ಲಿಂಗತನು,
ಭಕ್ತರಿಹಲೋಕವೆ ರುದ್ರಲೋಕ,
ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿನ್ನ ಹಸ್ತವ ಮಸ್ತಕದಲ್ಲಿ ಇಟ್ಟ ಪರಿಯಿಂತು. ॥೧೪೬॥[I-೧೨೦]

ಇನ್ನಾವ ಹಿರಿಯರಾದರೇನಯ್ಯಾ?
ಇನ್ನಾವ ಸಮಯವಾದರೇನಯ್ಯಾ?
ನೀ ಮಾಡಿದಂತೆ ಆಗದರಾರಯ್ಯಾ?
ನೀನಿರಿಸಿದಂತೆ ಇರದವರಾರಯ್ಯಾ?
ನಿನ್ನ ಇಚ್ಛಾಮಾತ್ರದಲ್ಲಿ ಜಗವು ಅಪ್ಪುವುದಡಗುವದಯ್ಯಾ?
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೧೪೭॥[I-೧೯೯]

ಅನಂತ ಭವ ಭವದಲ್ಲಿ ಬಂದು ನಾನು ಶಾಂತನಾದೆ ಅಯ್ಯಾ,
ನಿನ್ನ ಪ್ರಸಾದವನು ನಾನಾ ಭವದಲ್ಲಿ ಕಾಣೆ, ತಂದೆ.
ನಿನ್ನ ಪಾದೋದಕವನು ನಾನಾ ಭವದಲ್ಲಿ ಕಾಣೆ, ತಂದೆ.
ಕವಿಲೆಯ ಕಂದನಂತೆ ನಾನಿದ್ದೇನೆಂದು ಬಾರಾ,
ಶಿವನೆ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೪೮॥

ಹಿಂದು ಮುಂದು ಸಂದಳಿದ ಬಳಿಕ
ಆನು ನೀನೆಂಬ ಭೇದವೇತಕಯ್ಯ?
ಆನಂದ ಅಪರಸ್ಥಾನದಲ್ಲಿ ಶುದ್ಧ ಸಂಯೋಗವಾದ ಬಳಿಕ
ದಳ ಪ್ರತಿಷ್ಠೆಯ ಮಾಡೆನೆಂದು ಏನೆಂಬೆನಯ್ಯಾ?
ಪೂರ್ವದಳದಲ್ಲಿ ಲಕ್ಷವು ಇಪ್ಪತ್ನಾಲ್ಕು ಸಾವಿರ ಎಸಳು,
ಅಪರದಳದಲ್ಲಿ ಹದಿನಾಲ್ಕು ಸಾವಿರ ಎಸಳು,
ನಾನಾ ವರ್ಣ ಆನಂದವೆಂಬ ಅಧಿದೇವತೆ ಮಧ್ಯಮಸ್ಥಾನದಲ್ಲಿ.
ಸಿದ್ಧ ಸಂಯೋಗವೆಂಬ ಸರೋವರದಲ್ಲಿ,

ವೈನ್ಯೆಯೆಂಬ ಕೊಳಂಗಳು ಹದಿನಾಱೆಸಳಿನ ಕಮಳ ಬೀಜಾಕ್ಷರಂಗಳೆಂಟು,
ಅಧಿದೇವತೆ ಸಚ್ಚಿದಾನಂದನೆಂಬ ಗಣೇಶ್ವರ
ಆನಂದ ಬ್ರಹ್ಮ ಲೋಕದಲ್ಲಿ ಗುರುವೆಂಬ ಸರೋವರದಲ್ಲಿ ನಿತ್ಯವೆಂಬ ಕಳ,
ಶುದ್ಧಶ್ವೇತನೆಂಬ ಅಮೃತ ಪ್ರವಾಹ,
ದಳವೊಂದು, ಮೂಲ ಮೂಱು, ಫಲವಾಱು
ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಅಧಿದೇವತೆ. ||೧೪೯||

ಅಪರಸ್ಥಾನದಲ್ಲಿ ಆನಂದಬ್ರಹ್ಮವ ಭೇದಿಸುವ ಪರಿಯೆಂತೋ?
ಪೂರ್ವದಕ್ಷಿಣವೆಂಬ ದಿಕ್ಕುಗಳಲ್ಲಿ ಸಮನಿಸುವ
ಆತ್ಮ ಅಂತರ್ಯಾತ್ಮ ಭೂತಾತ್ಮ ಸರ್ವಾತ್ಮ ಪರಮಾತ್ಮವೆಂಬ
ಆತ್ಮ ಪಂಚಕಗಳೆಂಬವನು
ಹಿಂದು ಮುಂದಱಿಯದೆ, ಮುಂದು ಹಿಂದೆಂದಱಿಯದೆ
ಸಂಯೋಗದಲಿಕ್ಕಿ ಪ್ರಯೋಗಿಸಿಹನೆಂಬಯೋಗಿ ಕೇಳಾ:
ಪೂರ್ವವಾವುದು? ದಕ್ಷಿಣವಾವುದು?
ಪೂರ್ವದಲ್ಲಿ ದಿವಾಕರರು
ಹನ್ನೆರಡಱ ಆನಂದ ಪ್ರಭೆಯಲ್ಲಿ ಭವಿಸಲ್ಪಟ್ಟ
ನಯನದ ಕಿರಣದ ಕೊನೆಯ ಮೊನೆಯ ಮೇಲೆ
ದಿವ್ಯಾಂಗಯೋಗ ಸಮನಿಸುವ ಪರಿಯೆಂತು ಹೇಳಾ?
ದಕ್ಷಿಣದಲ್ಲಿ ದಿಗ್ವಳಯ ಹದಿನಾಲ್ಕಱ ವ್ಯಾಪ್ತಿಯ
ಸಂಚರಿಸದೆ ಸಮನಿಸುವ ಕೋಹಂ ತತ್ವಾರ್ಥದಿಂದತ್ತ
ನಾಹಂ ಪರಮಾರ್ಥದಿಂದತ್ತ
ಸೋಹಂ ಸದ್ಭಕ್ತಿಯ ಮುಟ್ಟಿದ ದಾಸೋಹ
ನಿನ್ನಲ್ಲಿ ಸಂಯೋಗವ ಎಂತು ಮಾಡುವೆ ಹೇಳಾ?
ಯೋಗಿ ನೀನು
ಯೋಗಕ್ಕೆ ಹಱವಾವುದು? ಯೋಗಕ್ಕೆ ನೆಲೆಯಾವುದು?
ಮತ್ತೆ ಪೆಱತನಱಿಯದೆ
ಶಾಶ್ವತವು ನೀನೆ ನೀನೆ ಎಂದೆನ್ನು,
ಸಕಲನಿಷ್ಕಲದೊಳಗೆ ನೀನೆ ನೀನೆಯೆನ್ನಾ,
ತಾತ್ಪರ್ಯವರ್ಮ ಕಳೆಗಳೊಳಗೆ ನೀನೆ ನೀನೆಯೆಂದೆನ್ನಾ,

ಓಂ ಗ್ರಾಂ ಘ್ರೀಂ ಘ್ರೂಂ ಎಂಬಕ್ಷರ
ಚತುಷ್ಟಯದ ಮೇಲೆ
ಶುದ್ಧ ಸಂಯೋಗವೆಂಬ ಗದ್ದುಗೆಯಿಕ್ಕಿ
ಅಕ್ಷರದ್ವಯದ ಆನಂದರಾಜ ಕುಳ್ಳಿದ್ದೈದಾನೆ ಜಪಿಸುತ.
ಆ ಜಪವು ನಿತ್ಯ, ಅದು ಮುಕ್ತಿ, ಅದು ಸತ್ಯ.
ಅದು ಪದಕ್ಕೆ ಫಲಕ್ಕೆ ಭವಕ್ಕೆ ದೂರ,
ವರ್ಣಾಶ್ರಯವ ಮೀರಿತ್ತು ತತ್ವ ಪ್ರಾಪಂಚಿಕವ ಜಱೆಯಿತ್ತು.
ಮಂತ್ರಂಗಳ ಕೈಯಿಂದ ವಂದಿಸಿಕೊಂಡಿತ್ತು.
ಮೂಱಱಲ್ಲಿ ಭವಿಸಿತ್ತು, ಆಱಱಲ್ಲಿ ಫಲವಾಯಿತ್ತು.
ಮೂವತ್ತಾಱಱಲ್ಲಿ ಹಣೆಸಿತು.
ಯೋಗಿಗಳ ನಡೆಸಿತು ತತ್ವಮಸಿ ಸಂಗಮವಾಯಿತು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ
ನಿತ್ಯದಲ್ಲಿ ನಿತ್ಯವಾಯಿತು. ॥೧೫೦॥

ಯೋಗದ ನೆಲೆಯನಱಿದೆನೆಂಬಾತ
ಲಿಂಗಾರ್ಚನೆಯ ಮಾಡಯ್ಯ.
ಮನತ್ರಯ ಮದತ್ರಯ ಮಲತ್ರಯಂಗಳ ಕಳೆದು
ತನುತ್ರಯಂಗಳ ನೆಲೆ ಭವಿಸಿ,
ಲಿಂಗತ್ರಯದಲ್ಲಿ ಶುದ್ಧ ಮುಗ್ಧನಾಗಿ,
ಲಿಂಗಾರ್ಚನೆಯ ಮಾಡಯ್ಯಾ,
ಅದು ನಿಸ್ತಾರ ಸಮಸ್ತ ಯೋಗಂಗಳ ಮೀಱಿದುದು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಕೂಡಿ ಬೆರೆಸುವ ಸಂಯೋಗವಿಂತು. ॥೧೫೧॥[I–೬೯೪]

ಸಕಲ ನಿಷ್ಕಲವ ಪೂ[1][ಜಿ][1]ಸೆನೆಂದೆಂಬೆ,
ಸಕಲವಾವುದು? ನಿಷ್ಕಲವಾವುದು? ಹೇಳಾ!
ಸ್ವಾತಂತ್ರ್ಯವ ಮೀಱಿಪ್ಪುದೀಗ ಸಕಲ,

೧–೧ ದಿ(ಮೂ) ೨–೨ ಇಲ್ಲಿ ಸ್ಥಳ ಬಿಡಲಾಗಿದೆ(ಸಂ)

ಪರಬ್ರಹ್ಮದ ಸೊಮ್ಮಾಗಿಪ್ಪುದೀಗ ನಿಷ್ಕಲ,
ಇಂತಪ್ಪುದೀಗ ಶಿವಯೋಗ.
ಈ ಪೂಜಾದ್ವಯಂಗಳನಜಿದ ಬಳಿಕ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡುವ ಸಂದಿಲ್ಲದೆ. ॥೧೫೨॥[I–೭೬೫]

ಆನಂದಸ್ಥಾನದಲ್ಲಿ, ಶುದ್ಧಧವಳ ಮನೆಯಲ್ಲಿ,
ನಿತ್ಯ ಜಾಗರವ ಮಾಡುವ ಅವ್ವೆ ನೀ ಕೇಳಾ.
ಬಂದವರ ಬಲ್ಲ ಹೋದವರ ಬಲ್ಲ
ಬಂದವರು [2]............[2] ಹೋದರು
ಭವಕ್ಕೆ ಹೇತುವಾಗಿ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕಾಣದೆ. ॥೧೫೩॥

ಮಾಡಿಮಾಡಿ ನಿತ್ಯ ಲಿಂಗಾರ್ಚನೆಯ,
ಮಾಡಿಮಾಡಿ ನಿತ್ಯ ಜಂಗಮಾರ್ಚನೆಯ,
ಮಾಡಿಮಾಡಿ ನಿಸ್ತಾರವೆಂದು,
ಮಾಡಿಮಾಡಿ ಕೂಡಿದವರೆಲ್ಲಾ ನೀನಾದರು.
ಮಾಡದೆ ಕೂಡದೆ
ಯೋಗವೆಂದು ಆತ್ಮಪ್ರಬೋದೆಯೆಂದು,
ಯೋಗಿಗಳ ಅನುಮತವೆಂದು,
ಅಧ್ಯಾತ್ಮವ ನುಡಿದು ಶಿವಪೂಜೆಗೆ ದೂರವಾಗಬೇಡ.
ಅಲ್ಲದೆ ಕೆಲವು ಊರೊಳಗೆ ಆಡಿ
ಕಪಿಲಸಿದ್ಧ ಮಲ್ಲಿನಾಥಯ್ಯನಯ್ಯನ ಚಿತ್ತಕ್ಕೆ ದೂರವಾಗದೆ
ಶಿವಾರ್ಚನೆಯ ಮಾಡಿದಡೆ ದಿವ್ಯಯೋಗಿಯಪ್ಪೆ. ॥೧೫೪॥[I–೬೬೩]

ತನುತ್ರಯ ಮಲತ್ರಯಂಗಳೆಂಬ ಶಂಕೆಯಲ್ಲಿ ಕೆಡದೆ,
ಹಮ್ಮಿನ ಬೊಮ್ಮವ ನೀನಾಡದೆ ಮಾಡಾ ಲಿಂಗಾರ್ಚನೆಯ,
ಶ್ರೋತ್ರಿಯ ಕೈಗಳಿಂದ ಇಷ್ಟಲಿಂಗಾರ್ಚನೆಯ,
ನೇತ್ರದ ಕೈಯಿಂದ ಗುರುಲಿಂಗಾರ್ಚನೆಯ.

ಇಂತು ತ್ರಿವಿಧ ಮುಟ್ಟಿ ಕರಕರಂಗಳಲ್ಲಿ
ಚರಲಿಂಗಾರ್ಚನೆಯ ಮಾಡಿರಯ್ಯಾ ಮನಮುಟ್ಟಿ.
ಚರಲಿಂಗಾರ್ಚನೆಯಿಂದ
ಭಕ್ತನೆನಿಸುವೆ, ಮಾಹೇಶ್ವರನೆನಿಸುವೆ,
ಪ್ರಾಣಲಿಂಗಿ, ಶರಣ, ಪ್ರಸಾದಿ,[೧] ಐಕ್ಯನೆನಿಸುವೆ.
ಜನನ ಮರಣಾದಿಗಳಿಗೆ ದೂರನೆನಿಸುವೆ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿ
ಶುದ್ಧಸಿದ್ಧ ಪ್ರಸಿದ್ಧ ಏಕ ಏಕ ಎನಿಸುವೆ. ॥೧೫೫॥

ನಯನೇಂದ್ರಿಯಂಗಳ ಮುಟ್ಟದೆ,
ಶ್ರೋತ್ರೇಂದ್ರಿಯಂಗಳ ಮುಟ್ಟದೆ,
ಘ್ರಾಣೇಂದ್ರಿಯಂಗಳ ಮುಟ್ಟದೆ,
ಜಿಹ್ವೇಂದ್ರಿಯಂಗಳ ತ್ವಕ್ಕೇಂದ್ರಿಯಂಗಳ ಮುಟ್ಟದೆ,
ಇಂತು ಇಂದ್ರಿಯಗಳು ಹಲವನು ಪಾರಿಯಲೀಯದೆ,
ಇವೀಶನ ಮುಖವೆಂದರ್ಪಿಸಾ.
ಸೂಸಲೀಯದೆ ಸರ್ವಕರಣಗಳು ಈಶನ ಕರಣಂಗಳೆಂದರ್ಪಿಸಿ.
ಎಲೆ ಅಯ್ಯಾ, ನಿನಗೆ ಗುರುಕರುಣವಾದ ಬಳಿಕ,
ತನು ಮನ ಧನವನು ತ್ರೈಲಿಂಗಕ್ಕೆ ವೇಧಿಸಿದ ಬಳಿಕ,
ನಿನ್ನ ಸರ್ವಾಂಗ ಲಿಂಗಾಂಗವೆಂದರ್ಪಿಸಿ
ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ
ನಿತ್ಯ ಸತ್ಯವ ಕೂಡು ಅವ್ವಾ. ॥೧೫೬॥[I-೫೦೬]

ಆಚಾರ ಪ್ರಾಣವಾದಡೆ ಅನ್ಯಕ್ಕೆರಗದಿರಬೇಕು,
ಪ್ರಾಣಲಿಂಗ ಸಂಬಂಧಿಯಾದ ಬಳಿಕ ಕಾಯಕ್ಕಳಿವಿಲ್ಲದಿರಬೇಕು,
ಐಕ್ಯನಾದ ಬಳಿಕ ಸಕಲ ನಿಷ್ಕಲದಲ್ಲಿ ಪೂರ್ಣನಾಗಿರಬೇಕು,
ಇನಿತು ಉಳ್ಳಡೆ ಅವನೈಕ್ಯ,
ಅಲ್ಲದಿದ್ದಡೆ ಆತನಭ್ಯಾಸಿ.

---

೧. ಮಾಹೇಶ್ವರದ ಬಳಿಕ ಬರಬೇಕಾದ ಪ್ರಸಾದಿ ಇಲ್ಲಿ ಬಂದಿದೆ(ಸಂ)

ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಇಂಥವರನೊಲಿವ, ಅಂಥವರನೊಲ್ಲ. ॥೧೫೭॥[I-೬೯೪]

ತಾತ್ಪರ್ಯವೆಂಬ ಮನೆಯಲ್ಲಿ ಕರಣಂಗಳ ಬೆಳಗಿ
ಆನಂದವೆಂಬಾತಂಗೆ ಭಕ್ತಿ ಮುಕ್ತ್ಯಂಗನೆಯರು
ನಿಶ್ಚಲದಿಂದ ನಿತ್ಯಂಗೆ ಬೋನವ ಮಾಡುತ್ತೈದಾರೆ.
ಆ ಮೌನ, ಧ್ಯಾನಸಮಾಧಿಯಂ ಮೀರುತ್ತದೆ.
ನಿತ್ಯ ಚೊಕ್ಕಸರವೆಂಬ ಯೋಗಿಗಳಿಗೆ
ಯೋಗಕ್ಕೆ ನೆಲೆಯಾಗುತ್ತದೆ.
ಬೀಜವು ತಾನೆ, ಓಗರವು ತಾನೆ, ತೃಪ್ತಿಯು ತಾನೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡುವ ತಥ್ಯವು ತಾನೆ. ॥೧೫೮॥[I-೪೭೧]

ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂದು
ಹೆಸರಿಟ್ಟುಕೊಂಬಿರಿ,
ಆಱು ಪರಿಯಲ್ಲಿ ಆಱೂಢವನಱಿಯಿರಿ.
ಭಕ್ತನಾದಡೇಕೆ ಭವದ ಬೇರು?
ಮಾಹೇಶ್ವರನಾದಡೇಕೆ ಪ್ರಳಯಕ್ಕೊಳಗಾಗುಹ?
ಪ್ರಸಾದಿಯಾದಡೇಕೆ ಇಂದ್ರಿಯವೈದರಲ್ಲಿ ನಿಗ್ರಹಿಯಾಗುಹ?
ಪ್ರಾಣಲಿಂಗಿಯಾದಡೇಕೆ ಉತ್ಪತ್ತಿ ಸ್ಥಿತಿ ಲಯಕ್ಕೆ ಒಳಗಾಗುಹ?
ಶರಣನಾದಡೇಕೆ ಉಪಬಾಧೆಗೊಳಗಾಗುಹ?
ಐಕ್ಯನಾದಡೇಕೆ ಇಹಪರವನಱಿಯದಿಗುಹ?
ಇವೆಲ್ಲ ಠಕ್ಕು, ಇವೆಲ್ಲ ಅಭ್ಯಾಸ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿನ್ನ ಷಟ್ಸ್ಥಲವಭೇದ್ಯ. ॥೧೫೯॥[I-೬೧೪]

ಭಕ್ತರ ನುಡಿ ಭವನ[೧][ನ][೧]ಲ್ಲದೆ
ಅನ್ಯದೇವ ನುಡಿಯದು, ಅನ್ಯಕೆಡೆಯಾಗದು.

೧–೧ x (ಮೂ)

ಅವನ ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ತ್ವಕ್ಕು
ಪರುಷ ಪಂಚೇಂದ್ರಿಯಂಗಳು
ಆತನ ಐದು ಮುಖಂಗಳಯ್ಯಾ.
ಆತ ಪತಿ ಆತ ಸತಿ.
ಆತನ ಕರಣಂಗಳೆಲ್ಲಾ ಈಶನ ಕರಣಂಗಳು.
ಆತನ ಕರಣಂಗಳೀಶನ ಹೇಮಶೈಲ.
ಆತ ನಿತ್ಯವು ಲಿಂಗಾರ್ಚನೆಯ ಮಾಡುವ ಕಾರಣ
ಆತಂಗೊಂದರಿದಿಲ್ಲ, ಆತ ಲೋಕಕ್ಕುಪದೇಶಿ.
ಕಪಿಲಸಿದ್ಧ ಮಲ್ಲಿನಾಥಯ್ಯನ ಕೂಡಿದ ತಾತ್ಪರ್ಯ ಭಕ್ತಿ. ॥೧೬೦॥[I–೬೧೫]

ಮಾಹೇಶ್ವರನಾದಾತ ಮರಣಕ್ಕೊಳಗಾಗ,
ಕರಣೇಂದ್ರಿಯಂಗಳಿಗೆಡಗುಡ,
ಕಾಲ ಕಲ್ಪಿತನಲ್ಲ, ಕರ್ಮಕ್ಕೆ ವಿರಹಿತ,
ಆತನ ತನು ಸಾಕ್ಷಾತ್ ಶಿವತನು.
ಆತ ನಿತ್ಯ ಕೇವಲ ಮುಕ್ತ.
ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡಿದ ಮಾಹೇಶ್ವರನು. ॥೧೬೧॥[I–೬೬೭]

ಪ್ರಾಣಲಿಂಗಿಯಾದಾತ ಪ್ರಳಯಕ್ಕೊಳಗಾಗ.
ಅನ್ಯಕ್ಕೆ ಕೈಯಾನ.
ಎಲ್ಲವೂ ತನ್ನೊಳಗೆ ಇಷ್ಟವಾಗಿ,
ತನ್ನ ಮೀಜಿದೊಂದೂ ಆಧಿಕ್ಯ ಬೇಜಿಲ್ಲಾಗಿ,
ಕೈವಲ್ಯಲಿಂಗವ ಪ್ರಾಣಲಿಂಗವೆಂಬ
ಸತಿಗೆ ಸಂದೇಹಸಮನಿಸಿದ ಬಳಿಕ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ಕೂಡಿದವ ಉರುತರ ಪ್ರಾಣಲಿಂಗಿ. ॥೧೬೨॥[I–೫೮೪]

ಪ್ರಸಾದಿಯಾದಾತ ಪ್ರಳಯಕ್ಕೆ ಒಳಗಾಗ,
ಇಂದ್ರಿಯಂಗಳ ಹರಿಯಲೀಯ,
ಬಂದುದನತಿಗಳೆಯ,

ಅದು ಲಿಂಗಮುಖದಿಂದ ಬಂದಿತ್ತಾಗಿ
ಆತನ ಅಂಗ ಸರ್ವಾಂಗಲಿಂಗ,
ಆತನ ನುಡಿ ನಡೆ ಆತನ ಭಾವ
ಸಾಕ್ಷಾತ್ ಅಯ್ಯನ ಸದ್ಭಾವ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ಕೂಡಿದ ನಿತ್ಯ ಪ್ರಸಾದಿಯ ಪರಿಯಿಂತು. ॥೧೬೩॥[I-೫೮೨]

ಶರಣನಾದೊಡೆ ಸತಿಯರ ಗೊಡ್ಡಾಟವೇಕೆ ಅಯ್ಯ?
ಇಂದ್ರಿಯಂಗಳ ಹರಿಯಲೇಕೆ?
ತಾನೆ ಸತಿ ಲಿಂಗ ಪತಿಯಾದ ಬಳಿಕ,
ಸರ್ವಸಂಯೋಗಕ್ಕೆ ಅಯ್ಯನೇ ಪತಿ
ತಾನೇ ಸತಿಯಾದಾತ, ಅನ್ಯಸತಿಯರಿಗೆಱಗ.
ಕರಣಂಗಳ ಹರಿಯಲೀಯ,
ಕಾರ್ಪಣ್ಯಕ್ಕೊದಗ,
ಕಪಿಲಸಿದ್ಧ ಮಲ್ಲಿಕಾರ್ಜುನ
ಒಡಗೂಡಿದ ಶರಣನ ಪರಿಯಿಂತು ॥೧೬೪॥[I-೭೩೨]

ಐಕ್ಯನೆಂಬಾತ ಅನ್ಯವನಱಿಯ, ತನ್ನುವನಱಿಯ,
ಸಕಲವಱಿಯ, ನಿಷ್ಕಲವನಱಿಯ.
ಸರ್ವವೆಲ್ಲವೂ ಲಿಂಗವೆಂಬನಾಗಿ,
ತನ್ನ ಮೀರಿದ ಪರತತ್ವ ಬೇಱೊಂದು ಇಲ್ಲಾಗಿ,
ಎಲ್ಲಾ ತತ್ವಂಗಳಿಗೆ ಮಾತೃಸ್ಥಾನ ತಾನಾಗಿ
ಲಿಂಗವನವಗ್ರಹಿಸಿಕೊಂಡಿಪ್ಪ
ಪರಮಸೀಮೆ ತಾನಾಗಿ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿ
ಕಳೆಗಳನು ಲಿಂಗಕಳೆಗಳ ಮಾಡಿದನೈಕ್ಯನು. ॥೧೬೫॥[I-೨೭೯]

ಷಡುಸ್ಥಳ ಸಮನಿಸದಯ್ಯಾ ಎಲ್ಲರಿಗೆ,
ಷಡ್ವ್ರತ ಸಮನಿಸದಯ್ಯಾ ಎಲ್ಲರಿಗೆ,

ಅರಿದರಿದು ಲಿಂಗಭಕ್ತಿ, ಅರಿದರಿದು ಗುರುಭಕ್ತಿ,
ಅರಿದರಿದು ಜಂಗಮಭಕ್ತಿ,
ಅರಿದಯ್ಯಾ, ಸುಲಭವೆ ಎಲ್ಲರಿಗೆ?
ಅವ್ವೆಯ ಕರುಣವಳವಟ್ಟವರಿಗಲ್ಲದೆ,
ಗುರು ಚರ ಇಷ್ಟತ್ರಯ ಅಳವಡದು.
ವ್ರತವಾಜಿಱಲ್ಲಿ ನಿಪುಣತೆ, ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಸಕೃತ್ ಎತ್ತಾನೊಬ್ಬರಿಗಲ್ಲದೆ ಎಲ್ಲರಿಗೆ ಸುಲಭವೆ? ॥೧೬೬॥[I-೭೫೦]

ಯೋಗವನಱಿದೆನೆಂಬೆ, ಯೋಗವನಱಿದೆನೆಂಬೆ.
ಯೋಗದ ನೆಲೆಯ ಹೇಳಿಹೆ ಕೇಳಾ:
ತಾತ್ಪರ್ಯಕರ್ಣಿಕೆಯ ಮಸ್ತಕದಲ್ಲಿ
ಇಂದು ಕುಂಭದೊಳಗೆ ತೋಱುತ್ತದೆ.
ಹಲವು ಬಿಂಬ ಹೋಗುತ್ತದೆ.
ಹಲವು ರೂಪ ಒಪ್ಪುತ್ತದೆ, ಏಕೇಕವಾಗಿ.
ಆನಂದಸ್ಥಾನದಲ್ಲಿ ಅನಿಮಿಷವಾಗುತ್ತದೆ.
ಪೂರ್ವ ಅಪರ ಮಧ್ಯಮ ಶುದ್ಧಪಂಚಮವೆಂಬ
ಸ್ಥಾನಂಗಳಲ್ಲಿ ಪ್ರವೇಶಿಸಿಸುತ್ತದೆ, ತಾನುತಾನೆಯಾಗಿ.
ಅಱಿಯಾ, ಭೇದಂಗಳ ಬಿಂದು ಶ್ವೇತ ಪೂರ್ವ
ಶುದ್ಧ ಸಿದ್ಧ ಪ್ರಸಿದ್ಧ ತತ್ವವೆಂಬ
ಪರಮಸೀಮೆಯ ಮುಖಂಗಳಾಗಿ,
ಅಜಲೋಕದಲ್ಲಿ ಅವ್ವೆಯ ನೆನಹಿನ
ಕೊನೆಯ ಮೊನೆಯಲ್ಲಿ ಒಪ್ಪಿ ತೋಱುವ.
ಧವಳತೆಯ ಬೆಳಗಿನ ರಂಜನೆ ಪ್ರವಾಹ
ಮಿಗಿಲಾಗಿ ತ್ವಂ ಪದವಾಯಿತು,
ಮೀಱಿ ತ್ವಂಮಸಿಯಾಯಿತು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ
ನಾಮವ ನುಂಗಿ ಲೀಯವಾಯಿತು. ॥೧೬೭॥[I-೬೯೬]

ಒಂದರಲ್ಲಿ ಓಂಕಾರ ಭವಿಸಿತ್ತು,
ಎರಡಱಲ್ಲಿ ವ್ಯಾಪ್ತಿ ಭವಿಸಿತ್ತು,
ಮೂಱಱಲ್ಲಿ ಮುಕ್ತ್ಯಂಗನೆಯ ಸಂಗ ಸಮನಿಸಿತ್ತು,
ನಾಲ್ಕಱಲ್ಲಿ ನೈ ಆ ಉಯೆಂಬ ಅಕ್ಷರದಂತುವನಱಿದೆ,
ಐದಱಲ್ಲಿ ಆ ಈ ಬ್ರಹ್ಮತಾತ್ಸರ್ಯ ಶುದ್ಧವ ನಿರೀಕ್ಷಿಸಿದೆ,
ಆಱಱಲ್ಲಿ ಅವ್ವೆಯ ಅನುಮಿಷ ಸ್ಥಾನವ ಕಂಡೆ,
ಮೀಱಿದೆ ಮೂವತ್ತಾಱ,
ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ತ್ವಮಸಿ ಸಂಗಮದಲ್ಲಿ
ಸಂಯೋಗಿಯಾದೆ. ॥೧೬೮॥[I–೨೮೨]

ಶುದ್ಧ ಸಿದ್ಧ ಪ್ರಸಿದ್ಧದ ನೆಲೆಯನಱಿದೆನೆಂದು
ತೊಳಲಿ ಬಂದೆ ನೀ ಗಿರಿ ಗಂಹ್ವರದೊಳಗೆ.
ಕಂಡೆ ಕಾಣೆನೆಂಬ ಸಂಶಯವಾಯಿತದು.
ಅದೇನು ಕಾರಣ ನಿನ್ನವರ ಗಣಸಮೂಹಕ್ಕೆ
ತಾತ್ಪರ್ಯವು ಒಲ್ಲರಾಗಿ
ನೀನು ಸದ್ಭಕ್ತ ದೇಹಿಕನಾಗಿ
ಭಕ್ತರಲ್ಲಿ ಒಚ್ಚತವಾಗಿ ಇಪ್ಪೆಯಾಗಿ ಇಪ್ಪ,
ಗಿರಿಗಂಹ್ವರದಲ್ಲಿ ಗುರುವಿನ ಕರುಣದಿಂದ
ಕಂಡೆ ನೀನಿಪ್ಪ ನೆಲೆಯ.
ಶುದ್ಧವ ಲಿಂಗದಲ್ಲಿ, ಸಿದ್ಧವ ಗುರುವಿನಲ್ಲಿ
ಪ್ರಸಿದ್ಧವ ಜಂಗಮದಲ್ಲಿ ಕಂಡೆ.
ಅಱಿದೆ ನಚ್ಚಿದೆ ಮಚ್ಚಿದೆ ಎನ್ನ ಸರ್ವಸ್ವವನೊಚ್ಚತಗೊಟ್ಟೆ,
ನಿನ್ನ ಗಣ ಸಮೂಹಕ್ಕೆ ಪ್ರಾಪ್ತನಾದೆ.
ನಿನ್ನ ಭಕ್ತರ ಸಲಿಕೆಗೆ ಸಂದೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ತಂದೆ. ॥೧೬೯॥[I–೧೪೨]

ಅಯ್ಯಾ ನಿನ್ನ ವಿಕಳತೆಯಿಂದ ಮಹಾಭೂತನಾದೆ,
ಅಯ್ಯ ನಿನ್ನ ನೆನಹಿನ ಧ್ಯಾನದಿಂದ ಮೂರ್ಛೆ ಹೋದೆ,
ಅಯ್ಯ ನಿನ್ನ ಭಕ್ತಿತ್ರಯದಿಂದ ಶುದ್ಧ ಮುಕ್ತನಾದೆ

ಅಯ್ಯ ನಿನ್ನ ತಾತ್ಪರ್ಯದ ಭಕ್ತಿಯಲ್ಲಿ ಶುದ್ಧಾತ್ಮನಾದೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ ,
ಭಕ್ತಿರತಿಯಲ್ಲಿ ಸಂಪನ್ನನಾದೆ. ॥೧೭೦॥[I–೬೪]

ತಂಡ ತಂಡದ ಅಜಾಂಡದ ಹಾಹೆಗಳ
ಒಂದೊಂದಱ ಒಂದೊಂದಱ ಕ್ರಿಯಾಳಾಪದ ದುಂದುಗ ಸಮನಿಸದೆ
ಹಿಂದು ಮುಂದಱ ಸಂದು ಹಱಿದು
ಎಂದಿಪ್ಪೆನಯ್ಯ ಶಿವಭಕ್ತಿಯಲ್ಲಿ.
ಅವ್ವೆಯ ಆಲಯದಲ್ಲಿ ಆನಂದ ಆನಂದವೆಂಬ
ಕ್ರಿಯಾಳಾಪವ ಹಾಡುತ್ತ ನಲಿನಲಿದಾಡುತ ಎಂದಿಪ್ಪೆನಯ್ಯಾ
ನಿನ್ನ ನೆನಹಿನ ಸಂಯೋಗ ಸಂಗಸುಖದಲ್ಲಿ ಎಂದಿಪ್ಪೆನಯ್ಯ
ಶುದ್ಧ ಧವಳತೆಯೆಂಬ ಮನೆಯಲ್ಲಿ
ತ್ವಂ ಪದ ಸೀಮೆಯ ಮೀಱಿ ಎಂದಿಪ್ಪೆನಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೭೧॥[I–೪೩೩]

ಕರ್ಮರಾಜಸವೆಂಬ ಹಮ್ಮಿನ ತೇಜದಲ್ಲಿ
ವಿರಳಜ್ಞಾನಿ ನಿಮ್ಮ ನಱಿಯೆನಯ್ಯ.
ಕರ್ಮಕ್ಕೊಳಗಾದೆನು, ಮೋಹ ಮೊಲನ ಬಲೆಗೆ ಗುಱಿಯಾದೆನು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ, ಕರುಣವುಳ್ಳಯ್ಯ. ॥೧೭೨॥[I–೩೧೮]

ಕರುಣಿಯೆಂದು ಮರೆವೊಕ್ಕಡೆ
ನಿಃಕರುಣಿಯಪ್ಪರೆಲೆ ಅಯ್ಯಾ?
ಅಱಿಯದೆ ಕಿಱಿದ ಮಾಡಿದಡೆ
ದಾನಿಯೆಂದು ಭವಕ್ಕೆ ಗುರಿಮಾಡುವರೆಲೆ ಅಯ್ಯಾ?
ಕಪಿಲಸಿದ್ಧ ಮಲ್ಲಿಕಾರ್ಜುನದೇವಾ
ಮರಳಿ ಬಾರದಂತೆ ಮಾಡಯ್ಯಾ ನಿನ್ನ ಧರ್ಮ. ॥೧೭೩॥[I–೩೩೦]

ಹಿಂದೆ ಬಯಸಿದೆ ಕಾಳುತನದಲ್ಲಿ.
ಎನ್ನ ಮಂದಮತಿಯ ನೋಡದಿರಯ್ಯಾ.

ಕೆಱೆ ಬಾವಿ ಹೂದೋಟ ಚೌಕಛತ್ರಂಗಳ ಮಾಡಿ
ಜೀವಂಗಳ ಮೇಲೆ ಕೃಪೆ ಉಂಟೆಂದು
ಎನ್ನ ದಾನಿಯೆಂಬರು, ಆನು ದಾನಿಯಲ್ಲಯ್ಯ.
ನೀ ಹೇಳಿದಂತೆ ನಾ ಮಾಡಿದೆನು,
ನೀನು ಬರಹೇಳಿದಲ್ಲಿ ನಾ ಬಂದೆನು,
ನೀನು ಇರಿಸಿದಂತೆ ಇದ್ದೆನು.
ನಿನ್ನ ಇಚ್ಛಾ ಮಾತ್ರವನು ಮೀರಿದೆನಾಯಿತ್ತಾದೊಡೆ
ಫಲವ ಪದವ ಜನನವ ಬಯಸಿದೆನಾದೊಡೆ.
ನಿಮ್ಮಾಣೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಭವಕ್ಕೆ ಬರಿಸದಿರಯ್ಯಾ, ನಿನ್ನ ಧರ್ಮ. ॥೧೭೪॥[I-೪೩೩]

ಅಯ್ಯಾ ನೀ ಮಾಡಿದಂತಾನಾದೆ.
ನೀ ಇರಿಸಿದಲ್ಲಿದ್ದೆ ಅಯ್ಯಾ.
ನೀ ಉತ್ತರ ದಕ್ಷಿಣ ಪೂರ್ವ ಪಶ್ಚಿಮ
ಅನಾಹತ ವಿಶುದ್ಧಿ ಆಜ್ಞೆ ಪ್ರಣವ ಪಂಚಮ ಸಮಾಧಿಯಲ್ಲಿ
ನೀನು ಅನುಭವಿಸಿ ಮುಂದೆ ಇರಿಸುವದ ನಾನಿಂದೆ ಕಂಡೆ.
ಅದೇನು ಹದರದಿಂದ?
ನಿನ್ನವರು ಎನ್ನನೊಲ್ಲದಿದ್ದಡೆ ಆ ನಿನ್ನ ಪಾದವ ಹಿಡಿದೆ.
ನೀ ನಿನ್ನ ಆ ರೂಪಬಿಟ್ಟು
ಗುರುವಾಗಿ ಬಂದೆನ್ನ ಭವದ ಬೇರ ಹಱಿದೆ.
ನಾನಱಿವುದೇನರಿದಯ್ಯ.
ನೀ ಶುದ್ಧದಲ್ಲಿ ಹೊಕ್ಕಡೆ ಆನೊಡನೆ ಹೊಕ್ಕೆ,
ನೀ ಸಿದ್ಧದಲ್ಲಿ ಹೊಕ್ಕಡೆ ಆನೊಡನೆ ಹೊಕ್ಕೆ,
ನೀನು ಪ್ರಸಿದ್ಧದಲ್ಲಿ ಪ್ರವೇಶಿಸಿದಡೆ
ಆನೊಡನೆ ಪ್ರವೇಶಿಸಿದೆ.
ಎನಗಿನ್ನೇನು ಅರಿದಿಲ್ಲ.
ಇನ್ನು ಹಿಂದೆ ತಿರಿಗಿ ನೋಡಿದೆನಾಯಿತ್ತಾದಡೆ
ಭಕ್ತಿಯ ತೋಱಿದ ತಂದೆ,
ಎನ್ನ ಭವವ ತಪ್ಪಿಸಿದ ಗುರು

ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ತದ್ರೂಪಾದ ಬಸವಪ್ರಭುವಿನಾಣೆ. ॥೧೭೫॥

ಅಣ್ಣ ನೋಡಿರೆ, ಲೋಕಕ್ಕೆ ಜಗದ ಕಣ್ಣ,
ಮುಕ್ಕಣ್ಣನಿಪ್ಪೆಡೆಯ ತೋಱಿದೆ ಅಣ್ಣ ಬಸವಣ್ಣ.
ವಾಙ್ಮನಸಗೋಚರ ಮುಕ್ಕಣ್ಣನ ಅವತಾರಂಗಳನು
ನಾಟಕವೆಂದಱಿದು ಮಱದ
ಸತ್ಯ ಶುದ್ಧ ನಿರ್ಮಳ ಕೈವಲ್ಯ ವಾಙ್ಮನಸಗೋಚರ
ಸತ್ಯ ಶುದ್ಧ ಬಸವಣ್ಣ.
ಅಣ್ಣಾ, ನಿಮ್ಮಿಂದ ಶುದ್ಧವ ಕಂಡೆ.
ಸಿದ್ಧವ ಕಂಡೆ, ಪ್ರಸಿದ್ಧವ ಕಂಡೆ.
ಆಱಱಲ್ಲಿ ಆಂದೋಳವಾಡಿ
ಆಱು ವ್ರತದಲ್ಲಿ ನಿಪುಣನಾದೆ.
ನೀನೊಂದು ಮೂಱಾಗಿ ಮೂಱೊಂದಾಗಿ
ತೋಱಿದ ಗುಣವಿಂತುಟೈ ಬಸವಣ್ಣ.
ಇನ್ನೆನಗಾಧಿಕ್ಯವಪ್ಪುದೊಂದೂಯಿಲ್ಲ.
ನಾನಿನ್ನು ಉರವಣಿಸಿ ಹರಿವೆ,
ಹರಿದು ಭರದಿಂದ ಗೆಲುವೆ.
ತತ್ವ ಮೂವತ್ತಾಱಱಿಂ ಮೇಲೆ ಒಪ್ಪಿಪ್ಪ ತ್ವಮಸಿಯನೈದುವೆ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಎನಗರಿದಪ್ಪುದಿಲ್ಲ ಕಾಣಾ, ಬಸವನ ಪ್ರಸಾದದಿಂದ. ॥೧೭೬॥[I-೧೩೫]

ಲೋಕದ ಲೌಕಿಕಗಳೆಲ್ಲಾ, ನೀವು ಕೇಳಿರೇ.
ಏಕೈಕ ರುದ್ರನ ಆಕಾರವನಱಿವೆಂದೆಂಬಿರಿ.
ನೋಡಿ ಮೆಚ್ಚಿರೆ, ಶಿವನು ಬಸವಣ್ಣನಾದ,
ನೋಡಿ ಮೆಚ್ಚಿರೆ, ಶಿವನು ಬಸವಣ್ಣನಾದ,
ನೋಡಿ ನೋಡಿರೆ, ಬಸವಣ್ಣ ಗುರುವಾದ.
ಬಸವಣ್ಣ ಲಿಂಗವಾದ, ಬಸವಣ್ಣ ಚರವಾದ,
ಬಸವಣ್ಣ ಪರಿಣಾಮ ಪ್ರಸನ್ನಪರವಾದ,

ಬಸವಣ್ಣ ಮೂಲತ್ರಯವಾದ,
ಬಸವಣ್ಣ ಭಕ್ತಿಯೆರಡುತ್ರಯವಾದ,
ಬಸವಣ್ಣ ಆಜ್ಞಾಚಕ್ರದ ಮೇಲೆ ತೋಱಿದ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಬಸವನ ಪ್ರಸಾದವ ಕೊಂಡು ಭವನ್ನಾಸ್ತಿಯಾದೆ. ॥೧೭೭॥[I–೧೩೬]

ಭಕ್ತಿರೂಪು ಬಸವಣ್ಣ, ಕ್ಷಮಾರೂಪು ಬಸವಣ್ಣ.
ಗುರುರೂಪು ಚೆನ್ನಬಸವಣ್ಣ,
ಪ್ರಸಾದರೂಪು ಚೆನ್ನಬಸವಣ್ಣ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಪ್ರಭುವಾಗಿ ಬಂದು
ಬಸವಣ್ಣ ಚೆನ್ನಬಸವಣ್ಣನ ಒಕ್ಕುದ ಕೊಂಡು ಜಂಗಮವಾದನು. ॥೧೭೮॥[I–೧೪೬]

ಭವದ ಬೇರ ಹಱಿಯಲ್ಕೆ ಪ್ರಭುವಾಗಿ ಬಂದ,
ಮಲತ್ರಯಂಗಳ ಕೆಡಿಸಲ್ಕೆ ಪ್ರಭುವಾಗಿ ಬಂದ
ಅಜ್ಞಾನರಿಗೆ ಜ್ಞಾನವ ತೋಱಲ್ಕೆ ಪ್ರಭುವಾಗಿ ಬಂದ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಎನ್ನ ಭವದ ಬೇರ ಹಱಿಯಲ್ಕೆ ಪ್ರಭುವಾಗಿ ಬಂದ. ॥೧೭೯॥[I–೭೨೪]

ಗುರುವಿನ ಕೃಪೆಯಿಂದ
ಸಾಧಾರಣ ತನುವ ಮಱೆದೆ,
ಗುರುವಿನ ಕೃಪೆಯಿಂದ
ಮಲತ್ರಯದ ಪಂಕವ ತೊಳೆಗೆ.
ಗುರುವಿನ ಕೃಪೆಯಿಂದ
ದೀಕ್ಷಾತ್ರಯದಿಂದನುಭವಿಯಾದೆ,
ಗುರುವಿನ ಕೃಪೆಯಿಂದ
ಶುದ್ಧ ಸಿದ್ಧ ಪ್ರಸಿದ್ಧ ಪ್ರಮಾಣವನಱಿದವನಾದೆ.
ಎನಗೆ ಆಧಿಕ್ಯವಪ್ಪ ವಸ್ತು ಎನಗೆ ಬೇಱೊಂದೂ ಇಲ್ಲ.
ಅದೇನು ಕಾರಣ? ಅವನಾದೆನಾಗಿ.
ಗುರುವೆ ಎನ್ನ ತನುವಿಗೆ ಲಿಂಗದೀಕ್ಷೆಯ ಮಾಡಿ,

ಎನ್ನ ಜ್ಞಾನಕ್ಕೆ ಸ್ವಾನುಭಾವದೀಕ್ಷೆಯ ಮಾಡಿ,
ಎನ್ನ ತನುಮನದಲ್ಲಿ ವಂಚನೆಯಿಲ್ಲದೆ
ಮಾಡಲೆಂದು ಜಂಗಮದೀಕ್ಷೆಯ ಮಾಡಿ,
ಎನ್ನ ಸರ್ವಾಂಗವೂ ನಿನ್ನ ವಿಶ್ರಾಮಸ್ಥಾನ
ಶುದ್ಧಮಂಟಪವಾದ ಕಾರಣದಲ್ಲಿ
ಲೋಕವ್ಯಾಪ್ತಿಯನಜಿದೆ, ಲೋಕವೆನ್ನೊಳಗಾಯಿತು,
ಆ ಲೋಕಕ್ಕೆ ಹೋಜಿಗಾದೆ.
ಅದೇನು ಕಾರಣ?
ಜನನ ಮರಣ ಪ್ರಳಯಕ್ಕೆ ನಾ ಹೊಜಿಗಾದೆ ನಾ.
ನೀ ಸದ್ಗುರುವೆ
ಎನ್ನ ಭವದ ಬೇರ ಹಜಿದೆ ಗುರುವೆ,
ಭವಪಾಶ ವಿಮೋಚನಾ
ಅವ್ವೆಯ ಮನದ ಸರ್ವಾಂಗಲೋಲುಪ್ತ
ಭುಕ್ತಿ ಮುಕ್ತಿ ಫಲಪ್ರದಾಯಕ ಗುರುವೆ ಬಸವಣ್ಣ,
ಕಪಿಲಸಿದ್ಧ ಮಲ್ಲಿಕಾರ್ಜುನಾ
ನೀನಾಗಿ ಚನ್ನಬಸವಣ್ಣನಾಗಿ,
ಪ್ರಭು ಮೊದಲಾದ ಅಸಂಖ್ಯಾತರೆಲ್ಲರನೂ
ತೋಜಿದೆ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೮೦॥

ಒಂದೊಂದು ಸ್ಥಾನದಲಿ ಆಳಾಪಿಸುವ
ಮಧುಕರಂಗಳು ಹದಿನಾಜು.
ಅಪರಸ್ಥಾನದಲ್ಲಿ ಕ್ರಿಯಾಳಾಪ,
ಮಧ್ಯಮಸ್ಥಾನದಲ್ಲಿ ಭಾವಾಳಾಪ,
ನಿಷ್ಕಳಸ್ಥಾನದಲ್ಲಿ ಅಯ್ಯನ ಸೊಮ್ಮಿನಾಳಾಪ.
ಆಳಾಪತ್ರಯಂಗಳ ಮೀಜಿದ ಅಕ್ಷರತ್ರಯಂಗಳು
ಅಕ್ಷರತ್ರಯಂಗಳಲ್ಲಿ ಮೀಜಿದ ಆದಿಶಕ್ತಿ
ಆದಿಶಕ್ತಿಯ ಮನೋನಾಯಕನು ಆನಂದಯ್ಯನು.
ಇವರ ಕಂಡೆ, ಒಡಲ ಸಂಗಮ ಪಟ್ಟಣದಲ್ಲಿ.
ಕಂಡು ಪ್ರಸಿದ್ಧನಾದೆ.

ಕಂಡು ಪರಮ ಸೀಮೆಯನೆಯ್ದಿದೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ
ಮಹಾಬೆಳಗಿನಲ್ಲಿ ಸಂದೆನು. ॥೧೮೧॥[I-೧೫೦]

ಹೆಸರಿಡಬಾರದ ಲಿಂಗವ
ಕರಸ್ಥಳಕ್ಕೆ ಹೆಸರಿಟ್ಟು ತಂದನೆನ್ನ ಗುರು.
ಆ ಹೆಸರಿಟ್ಟ ಲಿಂಗದ ಹೆಸರು ಹೇಳುವೆನು.
ಕಂಜಕನ್ನಿಕೆಯ ಹಣೆಯಲ್ಲಿ ವಿಧಿವಶವೆಂದು ಬರೆದ
ಐದಕ್ಷರವೆ ಆತನ ಪರಮನಾಮ.
ಅವ್ವೆಯ ಕರಂಗಳೊಪ್ಪಿಪ್ಪ
ಅಕ್ಷರಂಗಳಾಱ್ ದ್ವಿತೀಯ ನಾಮ.
ಅವ್ವೆಯ ಆನಂದ ಮಸ್ತಕದಲ್ಲಿ
ಒಪ್ಪಿಪ್ಪ ಅಕ್ಷರದ್ವಯವೆ ಆತನ ಆಚಾರ್ಯ ನಾಮ.
ಇಂತು ನಾಮತ್ರಯಂಗಳನಱಿದು ಧ್ಯಾನಾಱೂಢನಾಗಿ
ಲಿಂಗಾರ್ಚನೆಯ ಮಾಡುವರೆತ್ತಾನೊಬ್ಬರು.
ಬಸವಣ್ಣ ಮೊದಲಾದ ಸಕಲ ಪುರಾತರು,
ಅವ್ವೆಯ ಅನುಮತದಿಂದ
ಶುದ್ಧ ಸಿದ್ಧ ಪ್ರಸಿದ್ಧ ಲಿಂಗಾರ್ಚನೆಯಂ ಮಾಡಿ ನೀನಾದರು.
ಎನಗಿನ್ನಾವುದು ಹದನ್ಯೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೮೨॥

ಸ್ಥೂಲ ಸೂಕ್ಷ್ಮ ಕಾರಣನೆಂದೆಂಬರಯ್ಯಾ.
ಎಲ್ಲಾ ನಿನ್ನ ಅದಱ ಹಿಂದು ಮುಂದಱಿಯರು,
ಬಂದ ಹಾಗೆ ನುಡಿವರು.
ಸ್ಥೂಲಕ್ಕೆ ನೆಲೆಯ ಹೇಳಿಹೆ ಕೇಳಿರೋ ಮನುಜರಿರಾ:
ಸ್ಥೂಲವು ಅನೇಕ ಬ್ರಹ್ಮಾಂಡಗಳ
ಮೀಱಿಯಿಪ್ಪುದದಱ ಹೆಸರು ಸ್ಥೂಲವೆ? ಅದಲ್ಲ.
ಅವಱ ಮಾತು ಹಾಂಗಿರಲಿ.
ಶ್ರೀಗುರುಸ್ವಾಮಿ ನಿಸ್ತಾರವೆಂದು

ಅನಾಹತ ಸ್ಥಾನದಲ್ಲಿ ಆನಂದಾಳಾಪವ ಮಾಡಿ ಇತ್ತ ಲಿಂಗದ ಹೆಸರಿಗೆ ಸ್ಥೂಲ.
ಆ ಲಿಂಗ ಸಕಲವ್ಯಾಪ್ತಿಯ ತನ್ನೊಳಗಿಟ್ಟು ಕೊಂಡಿದ್ದ ಕಾರಣ ಸೂಕ್ಷ್ಮನಾದ.
ಶಿಷ್ಯ ಕಾರಣ ಪರಶಿವಮೂರ್ತಿಯಾದ ಕಾರಣ ಕಾರಣನಾದ.
ಎಲೆ ಗುರುವೆ, ಲಿಂಗವೆ, ಜಂಗಮವೆ,
ನೀನೊಂದಾದ ಭೇದವ ಜಡರೆತ್ತ ಬಲ್ಲರು? ಬಲ್ಲ ಬಸವಣ್ಣ.
ಆ ಬಸವಣ್ಣನವ್ವೆಯ ಮನೋನಾಥ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ತಾನೆ. ॥೧೮೩॥[I–೮೦೬]

ಕೇಳವ್ವಾ ಕೆಳದಿ, ಹೋಗನೆ ಅವ್ವ
ನೋಡವ್ವಾ ಕೆಳದಿ ಅವನಿಪ್ಪ ಠಾವ.
ನೆಲೆಯ ತೋಱನೆ ಅವ್ವ
ಅವ ನಿಬ್ಬಟ್ಟೆಗಾಱನು ಇಬ್ಬೀಡಲಿಪ್ಪನು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕಂಡೆನು ಬಾರಾ. ॥೧೮೪॥[I–೩೬೪]

ಬಾತೆಗೆಟ್ಟ ಬಾಳುವೆಗಳೆಲ್ಲಾ ನಿಮ್ಮ ಹೋಲುವವೆ?
ಬುದ್ಧಿಯ ಕಲಿ ಮಗಳೆ,
ಗುರುವಿನ ಮನದಲ್ಲಿ ಏನಿಹುದು ಅಹಂಗಹುದವ್ವಾ,
ಬುದ್ಧಿಗೆ ಬುದ್ಧಿ ಲೆಕ್ಕಕ್ಕೆ ಲೆಕ್ಕ ಸರಿಯಾದಡೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಗೆ ಯೋಗ್ಯವಾಗವ್ವಾ ॥೧೮೫॥

ಅಯ್ಯ ಬಂದಾನವ್ವ, ತನುಚಿತ್ತ ಶುದ್ಧಿಯಾಗಿರು.
ಅಯ್ಯ ಬಂದಾನವ್ವ, ಮನದ ಮಂಚವ ಪಚ್ಚಡಿಸಿರು.
ಅಯ್ಯ ಬಪ್ಪುದ ಕಂಡಳು ಜಿಹ್ವಾಂಗನೆ.
ಅಯ್ಯ ಶುದ್ಧಸಂಗಮಕ್ಕೆ ಒಬ್ಬನೆ ಬಂದಾನು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನು. ॥೧೮೬॥

ಅಯ್ಯ ಬಂದನು ಆನಂದಮಂಟಪಕ್ಕೆ,
ಎಚ್ಚತ್ತಿರಿರೋ ದ್ವಾರಕಿಂಕರರು,
ಎಚ್ಚತ್ತಿರಿರೋ ಅವಸರಿಗರು.

ಅಯ್ಯ ಸುತ್ತಿಮುತ್ತಿಗೊಳಗಾದನಾದೊಡೆ
ಪಟ್ಟಣ ಪ್ರವೇಶ ಸರ್ವಸ್ವ ಸೂಱೆ ಹೋಹುದು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನು ಹಿಡಿಗೊಳಗನು. ॥೧೮೭॥

ಒಲುಮೆಯ ನಲ್ಲನನು
ಒಲಿಸಿ ನೆಱೆದೆನೆಂಬ ಮರುಳತನವೇನೇನೆಂಬೆನಯ್ಯಾ.
ಒಲಿಸಲೇಕೆ? ತಾನೆ ಒಲಿದಾನು.
ನಿನ್ನಲ್ಲಿ ದೃಢತೆ ಸಂಬಂಧ ಸಮನಿಸಲುಳ್ಳಡೆ
ತಾನೆ ಒಲಿದಾನು.
ನಿನ್ನಲ್ಲಿ ದೀಕ್ಷಾತ್ರಯ ಸಂಪನ್ನತೆಯುಳ್ಳಡೆ
ತಾನೆ ಒಲಿದಾನು
ಒಲಿದಾನು, ಒಲಿಸಿದೊಡೊಲಿವನೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನನು? ॥೧೮೮॥

ಅಯ್ಯ ನಿನ್ನ ವಿಕಳತೆಯಿಂದ
ಹಲವು ಪರಿಯ ಭ್ರಮಿತನಾದೆನಯ್ಯಾ.
ಅಯ್ಯಾ ಗಿರಿಗಂಹ್ವರದೊಳಗೆ
ಹಲವು ಪರಿಯಲಿ ಅಱಸಿ ತೊಳಲಿ ಬಳಲಿದೆನಯ್ಯಾ.
ಕಂಡೆ, ಕಂಡೆ, ನೀನಿಪ್ಪ ಕಾರಣವ
ನೀನು ಭಕ್ತಿ ಕಾರಣ ಪರಶಿವಮೂರ್ತಿಯಪ್ಪುದನು ಕಂಡೆ ಕಂಡೆ
ನಿನ್ನವರಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೮೯॥

ಎಲ್ಲರ ಪರಿಯಲ್ಲ ಎನ್ನ ಗಂಡನ ಪರಿ.
ಒಬ್ಬರು ಬಲ್ಲುದನಱಿಯ,
ತಾ ಬಲ್ಲುದನೊಬ್ಬರಱಿಯರು.
ತವಕ ಬಂದಲ್ಲಿ ಕೂಡುವ,
ಅಲ್ಲದಡೊಲ್ಲದ ಹಾಂಗಿಪ್ಪ
ಕಪಿಲಸಿದ್ಧ ಮಲ್ಲಿಕಾರ್ಜುನ. ॥೧೯೦॥[I-೨೫೨]

ಭಕ್ತಿಯ ಬಯಸುವಡೆ
ನಿತ್ಯ ನಿತ್ಯವ ನೆನೆಯವ್ವಾ,
ನಿಸ್ತಾರ ನಿಸ್ತಾರವೆಂದು ಮುಂದೆ
ಮುಂದೆ ಬಂದಾಡವ್ವಾ,
ಆತ ಸತ್ಯ ಶುದ್ಧ ದೇವ,
ಎಲ್ಲರ ಪರಿಯಂತಲ್ಲ ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೧೯೧॥[I-೬೧೮]

ಸತ್ಯವ ನುಡಿದೆವೆಂದೆಂಬಿರಿ
ಸತ್ಯ ನಿಮಗೆಲ್ಲರಿಗೆ ಸುಲಭವೆ?
ಅದೇನು ಕಾರಣ ಸುಲಭವಲ್ಲ? ಸತ್ತಿಹಿರಾಗಿ.
ಸತ್ಯವ ನುಡಿದವರಿಗೆ ಸಾವುಂಟೆ?
ಸತ್ಯವ ನುಡಿವಲ್ಲಿ ಸಂದಿಲ್ಲದಿಪ್ಪ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.
ಹುಸಿಗೆ ಹುರುಡಿಗನು. ॥೧೯೨॥

ಪುಣ್ಯವ ಮಾಡಬೇಕೆಂದು ಮಱುಗಬೇಡ,
ಪಾಪವ ಮಾಡದಿದ್ದಡೆ ಪುಣ್ಯ ದಿಟ.
ಬೇಱೆ ತೀರ್ಥ ಬೇಡ
ಸತ್ಯವ ನುಡಿವಲ್ಲಿ ಸಂದಿಲ್ಲದಿಹನು.
ಕಪಿಲಸಿದ್ಧ ಮಲ್ಲಿಕಾರ್ಜುನ
ಹುಸಿಗೆ [1][ಹುರುಡಿಗನು][1] ॥೧೯೩॥

ಅಯ್ಯಾ ಸುಖಾದಿಗಳು ಬಂದಡೆ
ಎನ್ನಿಂದಾಯಿತ್ತೆಂಬೆ.
ದುಃಖಾದಿಗಳು ಬಂದಡೆ
ನಿನ್ನಿಂದಾಯಿತ್ತೆಂಬೆ.
ಅದೇನು ಕಾರಣದಲ್ಲಿ ಕಿಂಚಿತ್ತಕ್ಕೆ ಹಮ್ಮಯಿಸಿ

೧-೧ಹುರುಗಡಗನು(ಮೂ)

ಹಿಂದಕ್ಕೆ ಹಾರೈಸುವೆನಾಗಿ.
ಲೊಕದ ಲೌಕಿಕಗಳಂಥವಂಗೇಕೊಲಿವೆಯಯ್ಯಾ?
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೯೪॥

ನಿನ್ನವರ ಮೂರ್ತಿ ಧ್ಯಾನವ ನೆನೆದು
ನೀನಪ್ಪೆನೆ? ಅಪ್ಪೆನಪ್ಪೆನಯ್ಯಾ.
ದ್ವಯವಿಲ್ಲದೆ ನೆನೆದೆನಾದೊಡೆ
ನೀ ಬಂದು ಇರಿಸಿದಂತಿದ್ದು,
ನೀ ನೆನೆಯ ಹೇಳಿದ ಹಾಂಗೆ ನೆನೆದೊಡೆ
ಆನವರಪ್ಪುದೇನರಿದಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೧೯೫॥[I-೫೩೦]

ಅಯ್ಯಾ, ನಿನ್ನವ[ರ] ಕಂಡು ಕರಗದನ್ನಕರ,
ಅಯ್ಯಾ, ನಿನ್ನವರ ಕಂಡು ನೀನೆಂದು ಕಾಣದನ್ನಕರ,
ಅಯ್ಯಾ, ನಿನ್ನ ಮೂರ್ತಿಧ್ಯಾನದಲ್ಲಿ ಮೂರ್ಛೆವೋಗದನ್ನಕರ,
ಎಂತೊಲಿವೆಯಯ್ಯ?
ವೇಷದ ಗೌಳಿಯರ ಎಂತೊಲಿವೆಯಯ್ಯ?
ಲಾಂಛನದ ಲಂಪಟರ,
ಮಜ್ಜನಕ್ಕೆಱೆವ ಭವಿಗಳ ಏಕೊಲಿವೆಯಯ್ಯಾ?
ಕಪಿಲಸಿದ್ಧ ಮಲ್ಲಿಕಾರ್ಜುನ. ॥೧೯೬॥[I-೬೨]

ಒಲುವೆ, ನಿನ್ನವರ ನೀನೆಂದರೆ.
ಒಲುವೆ, ನಿನ್ನ ಮೂರ್ತಿ ಧ್ಯಾನವ ನೆನೆದು ಮೂರ್ಛೆವೋದರೆ.
ಒಲುವೆ, ವಿಭೂತಿ ರುದ್ರಾಕ್ಷೆ ಲಾಂಛನಧಾರಿಯ.
ಮಾನಸಾ ವಾಚಾ ಕಾಯಿಕದಲ್ಲಿ ನೀನೆಂದೊಡೆ, ಒಲುವೆ ಅಯ್ಯಾ.
ಅಲ್ಲದಿದ್ದಡೆ, ವೈತಾಳಿಕರ ಸಂಯೋಗದ ಹಾಂಗೆ
ವೈಶಿಕವ ಬಳಸಿದೊಡೆ ಕೊಲುವೆಯಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೧೯೭॥

ಅಯ್ಯಾ ಗುರುವೆಂಬ ಮಹಾಜ್ವಾಲೆಯಲ್ಲಿ ದಹನವಾದೆ.
ಪಂಚಾಕ್ಷರವೆಂಬ ಮರುಜವಣಿಯಲ್ಲಿ ಭವಿಸಿದೆ.
ಉಂಡೆ ನಾನು ಶಿಶುವಾಗಿ
ನಿನ್ನ ಶುದ್ಧ ಸಿದ್ಧ ಪ್ರಸಿದ್ಧವೆಂಬ ಪ್ರಸಾದತ್ರಯವ.
ಏಕೀಭವಿಸಿಕೊಂಡೆ ಎನ್ನ, ನಿನ್ನೊಂದರಿದಿಲ್ಲ.
ನಿನ್ನಿಟ್ಟೊತ್ತೆ ಮಾಡಿದ ಮಾಡಿಂಗೆ ಸಂದೆ ಕಾಣಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೯೮॥[I-೫೦]

ಉತ್ತರ ದಕ್ಷಿಣ ಪೂರ್ವ ಪಶ್ಚಿಮವೆಂಬ
ದಿಕ್ಕಿನ ಹಂಗು ಹಱಿದೆ.
ನೀನುತ್ತರದಲ್ಲಿ ಓಂಕಾರ ಪ್ರದೀಪನಾಗಿ
ಉತ್ತರದ್ವಾರದಲ್ಲಿ ಬಪ್ಪಾಗ ಆನೊಡನೆ ಬಂದೆ.
ನೀನು ಅಱಿತೂ ಅಱಿಯದ ಹಾಂಗೆ ಇದ್ದೆ.
ದಕ್ಷಿಣದ್ವಾರದಲ್ಲಿ ಜನಿತ ನಾಶವಾಗಿ ಬಪ್ಪಂದು
ಆನೊಡನೆ ಬಂದು ನೀನಱಿಯದಂತಿದ್ದೆ.
ನೀನು ಪೂರ್ವದ್ವಾರದಲ್ಲಿ ಅಕ್ಷರದ್ವಯದ
ವಾಹನವೇಱಿಬಪ್ಪಲ್ಲಿ ಆನೊಡನೆ ಬಂದೆ.
ನೀ ಪಶ್ಚಿಮದ್ವಾರದಲ್ಲಿ ಅವ್ವೆಯ ಮನದ
ಕೊನೆಯ ಮೇಲೆ ಅವ್ಯಕ್ತಶೂನ್ಯನಾಗಿ ಬಪ್ಪಾಗ
ಒಡನೆ ಬಂದೆ ಎಲೆ ಅಯ್ಯಾ.
ಎನ್ನನು ಅನ್ಯಕ್ಕೊಪ್ಪಿಸುವ, ಎನ್ನನು.
ಶುದ್ಧ ನಾನು ನಿನ್ನವನಲ್ಲಾ.
ಆನು ಬಂದ ಬರವ, ಇದ್ದ ಇರುವ
ಆನಱಿಯೆನಲ್ಲದೆ ನೀ ಬಲ್ಲೆ.
ಅಱಿದು ಕಾಡುವುದುಚಿತವೆ?
ಕಪಿಲಸಿದ್ಧ ಮಲ್ಲಿಕಾರ್ಜುನ. ॥೧೯೯॥

ಕಾಡದೆ ಎನ್ನ ಮನದಿಚ್ಛೆಯ ಮಾಡಯ್ಯಾ.
ನಿನ್ನ ಧರ್ಮ.

ಕಾಡುವುದುಚಿತವೆ ಅಯ್ಯಾ?
ನಿಮ್ಮ ಕರುಣದ ಕಂದ ನಾನು,
ನಿನ್ನ ಧರ್ಮ
ಎಂದು ತನಕ ಕಾಡುವೆ,
ಅಂದು ತನಕ ನೋಡುವೆ.
ಹಿಂದು ಮುಂದುಗೆಟ್ಟವನೆಂದು ಏಡಿಸಿದೊಡೆ
ವಸುಧೀಶ ನಿಮ್ಮ ಬಿಡುವೆನೆ? ಅಯ್ಯಾ.
ಈ ಪಶುಪತಿಯ ಸ್ವರೂಪ ಬಸವಣ್ಣ
ಬಂದು ದೆಸೆಗೆಡಲೀಯದೆ ಗುರುವಾದ.
ಶಶಿಧರ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.
ನಿನ್ನ ಹೊಸ ಪರಿಯಲ್ಲೆನ್ನ ವಶವಾಯಿತು. ॥೨೦೦॥[I-೩೩೫]

ದಾಯವ ನುಂಗಿದ ಬಣ್ಣ, ಬಣ್ಣವ ನುಂಗಿದ ದಾಯ,
ರಂಜನ ಪ್ರವೇಶವಾದಲ್ಲಿ ಲೀಯವಾದೆನಯ್ಯಾ.
ನಿನ್ನೊಡನೆ ಲೀಯವಾದೆ.
ಸಂಯೋಗಸ್ಥಾನದಲ್ಲಿ ನೀ ಸಹಿತ ವಿಯೋಗಿಯಾದೆ.
ಶುದ್ಧ ಸಿದ್ಧ ಪ್ರಸಿದ್ಧದಲ್ಲಿ ಪ್ರವೇಶಿಸಿದೆ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಸೀಮೆಯ ಮೀಱಿ ಸಂಬಂಧಿಯಾದೆನು. ॥೨೦೧॥

ಆನು ನೀನೆಂಬ ಭೇದವುಳ್ಳನ್ನಬರ ಎಂತಪ್ಪುದಯ್ಯಾ.
ಶಿವಭಕ್ತಿ ಸಂದು ಸವೆದು ಒಂದಾಗದನ್ನಬರ ಎಂತಪ್ಪುದಯ್ಯಾ.
ಸಮಯ ಭಕ್ತಿ ಆಯತರಲ್ಲದೆ ಸ್ವಾಯತರಲ್ಲ,
ಸ್ವಾಯತರಲ್ಲದೆ ಸಂಬಂಧಿಗಳಲ್ಲ.
ಸಂಬಂಧಿಗಳಿಗಲ್ಲದೆ ಸದಾಚಾರವಿಲ್ಲ.
ಸದಾಚಾರಿಗಳಿಗಲ್ಲದೆ ಸ್ವಾನುಭಾವವಿಲ್ಲ.
ಸ್ವಾನುಭಾವಿಗಳಿಗಲ್ಲದೆ ನೀ ಸಿಕ್ಕೆ.
ಸೂಱೆಯೆ? ಎಲ್ಲರಿಗೆ ಸದಾಚಾರದ ಮಾತು,
ಸೂಱೆಯೆ? ಎಲ್ಲರಿಗೆ ಗಣಾಚಾರದ ಮಾತು,

ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣ ಬಸವಣ್ಣಂಗಲ್ಲದೆ. ॥೨೦೨॥[I-೧೪೭]

ಜಲದೊಳಗೆ ಹುಟ್ಟಿದ ಬುದ್ಬುದಂಗಳು
ಜಲದೊಳಗಡಗುವಂತೆ
ನಿನ್ನವರೊಳಗೆ ನೀನಿಪ್ಪ ಭೇದವ ಬಲ್ಲವರಾರಯ್ಯಾ?
ನೀನು ಶರಣದೇಹಿಕ ದೇವನಾಗಿ
ಮಹವನೊಡಗೂಡಿಪ್ಪ ಭೇದವ ಬಲ್ಲವರಾರಯ್ಯ?
ಕೊಡನೊಳಗಣ ಚಂದ್ರ ಹಲವಱೊಳಗೆ ವರ್ತಿಸುವಂತೆ
ನಿನ್ನವಱೊಳಗೆ ನೀನಿಪ್ಪುದನು
ನಿನ್ನವರಲ್ಲದೆ ಬಲ್ಲವರಾರೈ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೦೩॥[I-೪೧೮]

ಬಾರಯ್ಯ, ಎನ್ನ ಸರ್ವಾಂಗದ ಗಂಡನೇ,
ಬಾರಯ್ಯ, ಎನ್ನ ಹೃದಯ ಮನ ಸಾಸನನೆ,
ಬಾರಯ್ಯ, ಎನ್ನ ವಿಚಿತ್ರದ ಸೌಂದರನೆ,
ಬಾರಯ್ಯ, ಎನ್ನ ಶುದ್ಧ ಸಿದ್ಧ ಪ್ರಸಿದ್ಧ ಪ್ರಾಣೇಶ್ವರನೆ,
ಬಾರಯ್ಯ ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನ ಸಂದಿಲ್ಲದೆ. ॥೨೦೪॥[I-೬೦೨]

ಮುಕ್ತ್ಯಂಗನೆಯ ಸಂಯೋಗದಿಂದ
ಶುದ್ಧ ಮುಗ್ಧನಾದೆ.
ಭಕ್ತ್ಯಂಗನೆಯ ಸಂಯೋಗದಿಂದ
ಉರುತರ ನಿಷ್ಕಳವನೆಯ್ದಿದೆ.
ಜ್ಞಾನಾಂಗನೆಯ ಸಂಯೋಗದಿಂದ
ತತ್ವಾರ್ಥವನಱಿದೆ.
ಕಪಿಲಸಿದ್ಧ ಮಲ್ಲಿಕಾರ್ಜುನನ ಸಂಯೋಗದಿಂದ
ತ್ವಮಸಿಯಾದೆ. ॥೨೦೫॥

ಕೂಟದ ಸುಖದಲ್ಲಿ ತನ್ನ ಮರೆಯದ
ಕೂಟವೇತಕಯ್ಯಾ?

ಪ್ರಾಣಲಿಂಗದ ಸಂಬಂಧದಲ್ಲಿ ಕರಣಂಗಳನಱಿಯದ
ಪ್ರಾಣಲಿಂಗ ಸಂಬಂಧವೇತಱಿದಯ್ಯಾ?
ಹಂಗುಳ್ಳನ್ನಬರ ಶರಣನಲ್ಲ.
ವ್ಯಾಕುಳದ ಹಂಗು ಹಱಿದಡೆ ಆತ ಲಿಂಗೈಕ್ಯ
ಕಪಿಲಸಿದ್ಧ ಮಲ್ಲಿಕಾರ್ಜುನ ಸಹಗಮನಿ. ॥೨೦೬॥

ಒಡಗೂಡಿದ ಒಚ್ಚತವ ಬಡಮನದವರು ಬಲ್ಲರೆ?
ಮೃಡ ನಿನ್ನ ಶರಣರಲ್ಲದೆ.
ಕಡಲೊಳಗಣ ಮುತ್ತಿಪ್ಪ ಕಡುಘಾತ ಭೇದವನು
ಮೃಡ ನಿಮ್ಮ ಶರಣರಲ್ಲದೆ,
ಜಡಜೀವಿಗಳು ಬಲ್ಲರೆ?
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೦೭॥[I–೨೭೯]

ಲೋಕದ ಲೌಕಿಕಗಳು ಯಾಕಯ್ಯಾ ನುಡಿವರು?
ಲೋಕದ ಲೌಕಿಕಗಳು ಲೋಕನಾಥನಿಪ್ಪ ಠಾವನಱಿಯರು.
ಕಲ್ಲೊಳಗೆ ಹೇಮ, ಕಾಷ್ಠದೊಳಗಗ್ನಿ,
ಜಲದೊಳಗೆ ಮುತ್ತು, ಸ್ಥಳದೊಳಗೆ ರತ್ನಯಿಪ್ಪ ಪರಿಯಲಿ
ಶರಣರೊಳಗೆ ನೀನಿಪ್ಪ ಬೇಧವ ನರರಱಿಯರು.
ನೀನಿಪ್ಪ ಶರಣರ ಮನುಜರೆಂದರೆ
ಅಘೋರ ನಾಯಕ ನರಕ
ಕಪಿಲಸಿದ್ಧ ಮಲ್ಲಿಕಾರ್ಜುನ. ॥೨೦೮॥[I–೭೧೪]

ಶಿವಯೋಗ, ಶ್ರೀ ರಾಮನಾಥ ಭಾಷೆ:

ಸಂಯೋಗದಲ್ಲಿ ವಿಯೋಗಿಯಾದೆ.
ವಿಯೋಗದಲ್ಲಿ ಸಂಯೋಗಿಯಾದೆ.
ವಿಯೋಗ ಸಂಯೋಗವ ಕೂಡಿದ
ಶುದ್ಧ ತಾತ್ಪರ್ಯವಾದೆ.
'ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ
ಮಹಾಸುಖವ ನಚ್ಚಿ ಶುದ್ಧ ಮರುಳಾದೆನು. ॥೨೦೯॥

ಶುದ್ಧ ಪದ್ಮಾಸನದಲ್ಲಿ ಮುಗ್ಧ ಕುಳ್ಳಿದ್ದು
ಅರ್ಧೋದಯವೆನ್ನುತ್ತೈದಾನೆ.
ಹೊದ್ದಿದ ಪ್ರಪಂಚುಗಳೆಲ್ಲವ ಸುಟ್ಟು
ಅರ್ಧೋದಯವೆನ್ನುತ್ತೈದಾನೆ.
ಅರ್ಧೋದಯದಲ್ಲಗ್ನಿ ಶುದ್ಧ ತನ್ನ ಪ್ರವೇಶಿಸಿದೊಡೆ
ಮುಗ್ಧತ್ವ ಹೋಯಿತು ಕಾಣಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೧೦॥[I-೭೪೧]

ಮುಗ್ಧೆಯ ಸಂಯೋಗದಿಂದ ಮುಕ್ತಿವಡೆದೆನೆಂದು
ಅರ್ಧೋದಯ ಗಿರಿಯಲ್ಲಿ ಆನಂದದಿಂದಿದ್ದೆ.
ಮುಗ್ಧೆಯ ಮೂಲಕ ಹೊದ್ದುವ ತತ್ವವನು
ನಾ ಮಧ್ಯದಲ್ಲಿ ಕಂಡೆ ಕಾಣಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೧೧॥[I-೬೭೨]

ಮಧ್ಯಮದ ಸುಖವನು ಹೊದ್ದುವ ತತ್ವವನು
ಅರ್ಧಬಿಂಬಗಳ ಕಿರಣಂಗಳ
ಈ ಹೊದ್ದುವ ಪ್ರಾಪಂಚಿಕದ ನಿತ್ಯದ ತತ್ವವನು
ಮಧ್ಯಮದಲ್ಲಿ ಕಂಡೆ ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ, ॥೨೧೨॥[I-೬೪೪]

ಪ್ರಾಪಂಚಿಕ ಸೀಮೆಯ ಮೀರಿದ ಭೇದವ,
ಆನಂದ ಸ್ಥಾನದ ಆಂದೋಳವ,
ಆಱು ಕರಣಂಗಳ ತೋಱುವ ಅಜ್ಞಾನವ ಮೀಱಿದೆ ಮಧ್ಯಮದಲ್ಲಿ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೧೩॥

ಹೊಲವೆರೆಯಿಂ ಮೇರೆ ಹೊಲಬುದಪ್ಪಿದ
ನಾದಕಳೆಗಳ ಮೀರಿದ್ದು
ತುರಿಯಂಗಳ ಗುರುವಿನ ಕರುಣದ ಅನುಮಿಷ ಮನೆಯಲ್ಲಿ
ಹೊಲಬುದಪ್ಪಿ ಕಂಡೆ, ಮಧ್ಯಮವನು.
ಆನಂದಸ್ಥಾನದಲ್ಲಿ ಆಂದೋಳವಾಗಿಪ್ಪ
ಮೂಱು ಕಳೆಗಳ ಭೇದಂಗಳ

ಮೀರಲೀಯದ ಬ್ರಹ್ಮತೋಱಲೀಯದ ಸರ್ವ ನೀನಾನಾದೆನ್ನೈ
ಕಪಿಲಸಿದ್ಧ ಮಲ್ಲೇಶ್ವರಾ. ॥೨೧೪॥[I-೮೪೭]

ಕಂಬುವಿನ ಭೇದದಲ್ಲಿ ಅಂಬಿತ್ತು.
ಅಜಕೋಟಿ ಕಂಬುವಿಂ ಭವಿಸಿತ್ತು.
ಜಗವೆಲ್ಲವೂ ಆ ಕಂಬು ಯೋಗಕ್ಕೆ ತಾನಿಂಬಪ್ಪ ತಾತ್ಪರ್ಯ
ಶಂಭು ನೀನಿಪ್ಪ ಶುದ್ಧ ನೆಲೆ ತಾನದು.
ಈ ಸಂಭ್ರಮದ ಬಿಂಬದಿಂದೊಂಬತ್ತು ನಾಳದಲಿ
ತುಂಬಿಯಾಳಾಪದಾ ಮಧು ಪುಷ್ಪದ
ಸಂಭ್ರಮದ ಖೇಚಕರ ಆನಂದ ರಚನೆಯ
ಶಂಭು ನೀನಾದೆ ಕಪಿಲಸಿದ್ಧ ಮಲ್ಲೇಶ್ವರಾ. ॥೨೧೫॥[I-೩೦೫]

ಬಹುಪರಿಯ ಪುಷ್ಪದಲಿ
ಹೊಸಪರಿಯ ಜಲದಲ್ಲಿ ಎಸೆದಿಪ್ಪ
ಲೋಕ ಬ್ರಹ್ಮಾಂಡಗಳ ಮುಸುಕಿಪ್ಪ
ಶಕ್ತಿಯ ಹಸಿಯ ಮಸ್ತಕದಲ್ಲಿ
ಒಸೆದು ಅರ್ಚಿಪನಾತ ಪರಮಯೋಗಿ.
ಸಾಗರದ ಮೇಲಿಪ್ಪ ಯೋಗಪಂಚಮದಲ್ಲಿ
ಭೋಗಿಪನು ನಿತ್ಯತೃಪ್ತನಾಗಿ.
ಮೇಲಿಪ್ಪ ಕಳೆಗಳಲಿ
ತೋಱಿಪ್ಪ ಸತ್ವದಲಿ
ತಾನಿಪ್ಪನ್ನೈ ಗುರು ಶ್ರೀ ಕಪಿಲಸಿದ್ಧ ಮಲ್ಲೇಶ್ವರಾ. ॥೨೧೬॥

ಕಥನ ಬ್ರಹ್ಮಾಂಡದಲ್ಲಿ ಮಥನಿಸುವ ಭೇದವನು
ಸುಚಿತ್ತದಿಂದವೆ ಕಂಡೆ.
ಸಾಕ್ಷಾತ ಉರುತರ ಕೈವಲ್ಯ ಪರಮ ಸೀಮೆಯ ಮೀಱಿ
ಒಡಲಿಪ್ಪುದದು ನಿತ್ಯ ಸಾನಂದದಾ ಆನಂದಸ್ಥಾನದಲ್ಲಿ.
ಆನಿಪ್ಪ ಲೋಕದಲ್ಲಿ ತಾನಿಪ್ಪ
ನಿಷ್ಕಳದ ಪುಷ್ಕರದಲ್ಲಿ ಸ್ವಾನುಭಾವ ದೀಕ್ಷೆ

ನಾನಿಪ್ಪ ಸಂಯೋಗ ಮೂಱಱ ಮೇಲಿಪ್ಪ
ಮುಕ್ತ್ಯಾಂಗನೆಯರ ಕೂಟ
ನೀನು ನಾನಾದೆ ಕಪಿಲಸಿದ್ಧ ಮಲ್ಲೇಶ್ವರ. ॥೨೧೭॥

ಪ್ರಾಪಂಚಿಕವ ಮೀರಿ ಪರಮಾಣನತಿಗಳೆದು
ನಾದ ಬಿಂದುವಿನಲ್ಲಿ ಆದಿಯಾಗಿ
ಮೋದದೊಂದಾಮೋದ ಆನಂದ ಮಧ್ಯಮದ ಭೇದವನು ಭೇದಿಸುವ
ತಾನು ತಾನೆ ಸೂಕ್ಷ್ಮದ ಘನತೆಯಲು
ಆನಂದದಾಂದೋಳ ಭೇದಿಸಿಯೆ ಕಂಡೆ ನಾ,
ಶುದ್ಧ ಮಧ್ಯಮದಲಿ ಭೇದಕ್ಕತೀತನಾ
ಕಪಿಲಸಿದ್ಧ ಮಲ್ಲೇಶ್ವರನು
ನಾದ ಬಿಂದುವಿನಲ್ಲಿ ಪೂರ್ಣನಾಗಿ. ॥೨೧೮॥

ಆಮೋದ ತುಂಬಿದ ಭೇದಂಗಳಂ ಭೇದಿಸಿ
ಮೋದದಿಂದೊಪ್ಪಿರ್ದ ಮಧ್ಯಮದಲಿ
ಆಧಾರ ಸ್ವಾಧಿಷ್ಟ ಆನಂದ ಪಂಚಮದ
ತೋಱಿಪ್ಪನತಿಶಯದ ವರ್ಗವಾಱಾ
ಮೀರಿಪ್ಪ ತತ್ವದಲಿ ತೋಱಿಪ್ಪ ಬೊಮ್ಮದಲಿ
ತಾನು ತಲ್ಲೀಯ ಕಪಿಲಸಿದ್ಧ ಮಲ್ಲೇಶ್ವರನು. ॥೨೧೯॥

ತತ್ವವಾಱಾಱಱಲಿ ಮುತ್ತಿಪ್ಪ ಸೀಮೆಯನು
ಹೊತ್ತಿಪ್ಪುದದು ಒಂದು ಬಿಂಬ ನೋಡಾ.
ಮೂಱಱಂ ಮುಕ್ತಿಯಲಿ ಆಱಱಂ ಸತ್ವದಲಿ
ಮೀಱಿಪ್ಪುದದು ಭಕ್ತಿಶಕ್ತಿ ನೋಡಾ.
ಕ್ರಿಯೆ ಮೂಱನು ಮೀಱಿ ನಿಃಕ್ರಿಯೆ ಮನೆಯಾಗಿ
ಸ್ವಾನುಭಾವವು ಶುದ್ಧಜ್ಯೋತಿಯಾಗಿ
ರಂಜನೆಯ ಭೇದದಲಿ ರಂಜಿಸುವ ಪ್ರಕಟದಲಿ
ಕಂಜಕರ್ಣಿಕೆಯ ಸುಮಧ್ಯದಲ್ಲಿ
ಅಂಜದೆ ಆನಂದ ಕುಂಜರನ ಮಸ್ತಕದ

ರಂಜಿಸುವ ಶುದ್ಧಪ್ರಭಾ ಕೋಟೆಯಲಿ
ಅಜಲೋಕದಾ ಸುದ್ದಿ ತ್ರಿಜಗವ ಮೂಱಱಲೊಪ್ಪಿ
ನಿಜದಿಂದ ಕಂಡೆ ಕಪಿಲಸಿದ್ಧ ಮಲ್ಲೇಶ್ವರನ. ॥೨೨೦॥

ನಾದಬಿಂದುವಿನಲ್ಲಿ ಆದಿಬ್ರಹ್ಮನ ಕೂಟವಾದ
ಸಾದಾಖ್ಯಗಳನೊಡಗೂಡಿದಾ
ಆಮೋದ ತುಂಬಿಗಳು ಭೇದ ಭೇದಿಯ ಕೂಟ.
ಮೋದ ಮೂವತ್ತಾಱು ತತ್ವಂಗಳ
ಭೇದಂಗಳಂ ಭೇದಿ ಅಕ್ಷರದ್ವಯದಲ್ಲಿ
ತಾನು ಸಂಗಮನಾದ ನಿಶ್ಚಯದಲಿ.
ತವಕಿಸುವ ಕರುಣವನು ಹರಿವ ಪ್ರಾಪಂಚುವನು
ಒಸರುವ ಬಿಂದುವನು ಪಸರಿಸುವ ಭೇದವ
ದೆಸೆಗೆಟ್ಟು ಕಂಡೆ ಕಪಿಲಸಿದ್ಧ ಮಲ್ಲೇಶ್ವರನಾ. ॥೨೨೧॥[I-೫೧೧]

ತಾಮಸಿಯ ಕೂಟದಲಿ ತಾಮಸಿ ನಾನಾದೆ,
ಸಾಮಪ್ರಭೆಯಲ್ಲಿ ಶುದ್ಧ ಮುಗ್ಧನಾದೆ,
ನಾನಾ ಕಳಾಭೇದ ತಾನು ನೀನಾಗಿ
ಊರು ಆಱಱ ಅತಿ ಸಂಬಂಧದ
ಹಲವು ಮೂಱನೆ ಬಿತ್ತಿ
ಫಲವು ಮತ್ತೊಂದಾಗಿ ಒದವಿತ್ತು.
ತುರಿಯದಾ ಸಂಯೋಗಕೆ ಸಾನಂದಜ್ಯೋತಿಯಲಿ
ತಾನು ತಾನೊಂದಾಗಿ ಭಾನುವಿನ ಉದಯದಲಿ
ಅನುಭವಿಸಿದ ಸಾಮ ಶುದ್ಧಾಂಗದಲಿ
ನಾನಾ ಧವಳ ಮನೆಯ ಕಾರಣದಲಿ
ಮುಕ್ತಿ ಮೂರ್ಛೆವೋಗಿ ಪರಮ ಹರುಷದಲೀಗ
ಉರುತರಂ ಕೈವಲ್ಯ ಒದವಿ ನಾ ನೀನಾದೆ.
ಸದುಹೃದಯದಾ ಕಪಿಲಸಿದ್ಧ ಮಲ್ಲಿಕಾರ್ಜುನ
ಗುರುವಾಗಿ ಬಂದೀಗ
ಭವದ ಬೇರನು ಹಜಿದ ನಿಶ್ಚಯಾರ್ಥದಿಂ. ॥೨೨೨॥

ಮೂಱಱ ಫಲ ನೋಡಾ
ಆಱಱಲ್ಲಿ ಭವಿಸಿತ್ತು.
ತೋಱುತ್ತೈದೂದೆ ಶುದ್ಧಲೋಕದಲಿ.
ಆ ಲೋಕದವರೆಲ್ಲ ಆಲೋಕನವ ಮಾಡಿ
ಆದಿಮಧ್ಯಾವಸಾನಂಗಳಲ್ಲಿ ಭೇದಿಸುವ ಅವ್ವೆಯನು
ನಾನೆಂಬ ಬಿಂದುವನು
ತಾನು ತನ್ನಲ್ಲಿಯ ಒಂದಂಗದಲಿ
ಅಱಿತಿಹ ಭೇದವನು ಅಱಿಯಲೀಯದೆ ಕೂಡಿ
ತೆಱಹುಗೆಟ್ಟ ಕಪಿಲಸಿದ್ಧ ಮಲ್ಲೇಶ್ವರನು. ॥೨೨೩॥

ಅಱಿದೆನು, ನಾನೇನ ಅಱಿವಡೆ ಶೂನ್ಯನೆ
ತೆಱಹಿಲ್ಲದೊಂದು ಶುದ್ಧ ಘನತರವನು
ನೆನಹಿನ ಮನೆಯಾಗಿ,
ಅವನ ನೋಟವೆ ಕೂಟ
ಅವನೆನ್ನ ಕಾಯಕ್ಕೆ ಪ್ರಾಣನಾಗಿ,
ಪ್ರಾಣಪ್ರತಿಷ್ಠೆಯನು ತಾನು ಮಾಡುವ ರೂಪ
ಶೂನ್ಯಕಾಯರು ಕಾಣಬಲ್ಲರೆ ಕಪಿಲಸಿದ್ಧ ಮಲ್ಲೇಶ್ವರನ? ॥೨೨೪॥

ಆಱಱಲಿ ಅನುಮಿಷವು
ಮೂಱಱಲ್ಲಿ ಮುನಿಮುಕ್ತಿ
ತೋಱುವ ಪ್ರಾಪಂಚು ಸೀಮೆಯಲಿ ಗಾಱಪ್ಪ ವರ್ಗವನು
ಮೀಱಿಪ್ಪ ಸೀಮೆಯ ತೋಱಿಪ್ಪ ಅತಿಶಯದ ತತ್ವಂಗಳನು,
ಸೊಮ್ಮಿನ ಹಮ್ಮಿನ ಕರ್ಮದ ಕ್ರೀಯುವನು,
ನಿಃಕರ್ಮವೊಳಗಾದ ಸಾದಾಖ್ಯವಾ
ಅವ್ವೆಯ ಮನದಲಿ ಆನಂದ ಸಾತ್ವಿಸಲು
ತಾನೊಂದು ರೂಪಾಗಿ ತೋಱುತಿರಲು
ಅಯ್ಯನಜಲೋಕದಲಿ ಒಯ್ಯನಕ್ಷರದ್ವಯದ
ಸ್ವೇಯ ಹೇಯಯೆಂಬ ಬೀಜಂಗಳ
ದಮರುಗದ ಸಿಂಹಾಸನದೊಳಗಿಪ್ಪ

ಕೇಶರದ ಹಲವು ಬಣ್ಣದಲಿಪ್ಪ
ಅಣುಮಾತ್ರ ಮಥನದಲ್ಲಿ
ಮಥನಿಸುವ ಕಥನದಿಚ್ಛೆಯ ನೋಡ
ಸುಚಿತ್ತದಿಂದರ್ಚಿಸೈ ಕಪಿಲಸಿದ್ಧ ಮಲ್ಲೇಶ್ವರನ. ॥೨೨೫॥

ಇದ್ದೆಸೆಯಿಂದಾನುನಿದ್ದೆಸೆಯಾದೆನ್ನೈ
ಹೊದ್ದಿದ ಪ್ರಾಪಂಚ ಜಱಿದೆ ನೋಡಾ.
ಮುಗ್ಧೆಯ ಕೂಟದಲ್ಲಿ ಹೊದ್ದಿ ನೀ ನಾನಾದೆ
ಸಧ್ಯ ಫಲ ನೀನೆನ್ನ ಕಾಡುತಿಪ್ಪೆ.
ಶಿಶು ಕಂಡ ಕನಸುವನು ದೆಸೆಗೆಟ್ಟ ಮೋಹವನು
ಪಸರಿಸಿತು ಲೋಕಕ್ಕೆ ಅತಿ ಹರಷದಿಂ.
ದೆಸೆಗೇಡಿ ಮಾನವರು ದೆಸೆಯನಱಿಯರು
ವಸುಧೆ ಪತಿ ಕಪಿಲಸಿದ್ಧ ಮಲ್ಲೇಶ್ವರನ. ॥೨೨೬॥

ಕಂಡೆನು ಎಂದೆಂಬೆ, ಉಂಡುಂಡು ಕಾಬಡೆ
ಖಂಡಜ್ಞಾನಿಗಳಾದ ಪಾಪವೇನು?
ಮಂಡಳದ ಸುದ್ದಿಯನು ಕಂಡ ಶಿಶುಲೋಕಕ್ಕೆ
ಉಂಡುತಿಲ್ಲದೆ ಎಯ್ದಿತಾನಂದದ
ಖಂಡೆಂದುಶೇಖರನ ಕಂಡಿದ್ದ ಕೂಟವನು
ಕಂಡವರು ಹೇಳಿರೈ ಕಪಿಲಸಿದ್ಧ ಮಲ್ಲೇಶ್ವರನ. ॥೨೨೭॥

ಅಯ್ಯ ನೀನಾಡುವ ಹೊಲನ, ನೀನಿಪ್ಪ ಇರವ
ಕಂಡೆನೆಂಬ ಸಿದ್ಧರೆನ್ನ ಸಿದ್ಧರಾದರು.
ಆದಿ ಮಧ್ಯಾವಸಾನವನು ಭೇದಿಸುವ ಭೇದವನು
ಸಾಧಿಸುವ ತರ್ಕವನು
ತಂತ್ರಗಳ ತನುಗುಣವನತಿಗಳೆದು
ಮಲತ್ರಯವನತಿಗಳದು ಅನುಗುಣವ ಕೂಡಯ್ಯ
ಕಪಿಲಸಿದ್ಧ ಮಲ್ಲೇಶ್ವರನಾ. ॥೨೨೮॥[I–೭೭]

ಅತ್ಯತಿಷ್ಠದ್ದಶಾಂಗುಲನನರ್ಚಿಸಿ ಕಂಡೆನೆಂಬ
ಬಚ್ಚಬಜೆಯ ಮರುಳೆ ನೀ ಕೇಳಾ:
ಅರ್ಚನೆ ಪೂಜನೆಯಲ್ಲಿ ಸಿಲ್ಕುವನೆ?
ಗುರು ತೋಱಿದ ಸಚ್ಚಿದಾನಂದ ಚಿನ್ಮಯ
ಚರಲಿಂಗವ ನಿಚ್ಚಕರರ್ಚಿಸಿ ಪಡೆಯಿರೋ.
ಪದ ನಾಲ್ಕು ಮೀರಿದ ಪದವ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ
ಉರುತರ ಪರಮ ಸೀಮೆಯ. ॥೨೨೯॥[I-೨೯]

ಅಯ್ಯಾ, ನಿನ್ನ ಸಂಗದಲ್ಲಿ ಸಂಗಿಯಾದೆ.
ಅಯ್ಯಾ, ನಿನ್ನ ಸಂಗದಿಂದ ಕಾಕುತನವ ಬಿಟ್ಟು
ಬೇಕಾದ ಹಾಂಗೆಯಾದೆ.
ಅಯ್ಯಾ, ನಿನ್ನ ಒಲವು ಅನೇಕ ಪ್ರಕಾರದಲ್ಲಿ
ಪಸರಿ ಪರ್ಬಿತ್ತು ಎನ್ನ ಸರ್ವಾಂಗದಲ್ಲಿ.
ನಿನ್ನವರೊಲುಮೆಯ ಆನಂದವನು ಎನಗೆ ಕರುಣಿಸು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ ನಿಮ್ಮ ಧರ್ಮ. ॥೨೩೦॥

ಪದ ಫಲ ಭವಕೆ ತಾರದಿರಯ್ಯ ನಿನ್ನ ಧರ್ಮ.
ಪದದಿಂದ ಫಲದಿಂದ ಭವ,
ಆ ಭವದಿಂದ ನರಕ.
ಇಂತಪ್ಪವನೆನಗೆ ತೋಱದಿರಯ್ಯ ನಿಮ್ಮ ಧರ್ಮ.
ಇಂತಪ್ಪವನೆನ್ನವರಿಗೆಯೂ ತೋಱದಿರಯ್ಯಾ.
ನಾನೂ ಎನ್ನವರೂ ಕೂಡಿ ನಿನ್ನ ಬೇಡಿಕೊಂಬೆವಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೩೧॥

ಅಯ್ಯಾ ಹಿಂದೆ ಬಂದ ಹಲವು ಭವವ ಸಾಲದೆ
ಯಾಕೆ ಕಾಡುವೆಯಯ್ಯಾ ? ಹಿಂದೆ ನಿನ್ನನಱಿಯದೆ ದಾನಿಗಳಾಗಿ
ಹಲವು ಭವದಲ್ಲಿ ಕುದಿದು
ಆನುಂಡ ನರಕವ ನೀನಱಿಯಾ?

ಆನು ಬಂದ ಕೀರ್ತಿಯುಳ್ಳ ನರಕವನೂ ನೀನಱಿಯಾ?
ಅಱಿದಱಿದೆನ್ನ ಕಾಡುವರೆ?
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ನಾನುಂಬ ಸುಖಂಗಳಲ್ಲಿ ನಿನ್ನನಱಿಯದ ಕಾರಣ
ನೀನಿಕ್ಕಿದ ನರಕದಲ್ಲಿ ಅದನುಣ್ಣದಿದ್ದರೆ
ಎನ್ನ ವಶವೆ? ||೨೩೨||[I–೯೬]

ಅಯ್ಯ ನಾನು ಹಿಂದೆ ಬಂದ ಭವಂಗಳ
ನೀನೂ ಬಲ್ಲೆ ನಾನೂ ಬಲ್ಲೆ.
ಅಯ್ಯ ನೀನೆನ್ನನರಿಸಿದ ಪರಿಯ
ನೀನೂ ಬಲ್ಲೆ ನಾನೂ ಬಲ್ಲೆ.
ತಲೆಯೊಡೆಯಂಗೆ ಕಣ್ಣ ಬೈಚಿಡುವ ಹಾಂಗೆ ||೨೩೩||[I–೯೭]

ವಂಚನೆಯ ಮಾಡಿ*[ಹೆ]*ನಯ್ಯ, ನಿನಗಾನು.
ನೀ ಬರಹೇಳಿದ ಹಾಂಗೆ ಬಂದೆ,
ಇರ ಹೇಳಿದ ಹಾಂಗೆ ಇದ್ದೆ,
ನೀ ಮಾಡ ಹೇಳಿದ ಹಾಂಗೆ ಮಾಡಿದೆ.
ನೀನು ಗುರುವಾಗಿ ಬಂದು
ಪರಮ ಸೀಮೆಯಿದೆಂದಱಿದೆ
ಅಲ್ಲಿಯೆ ಇದ್ದೇನೆ.
ನೀನಿದ್ದಲ್ಲಿಗೆ ಬಂದೆನಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ||೨೩೪||[I–೯೭]

ಒಡೆಯರುಳ್ಳ ತೊತ್ತಾನು, ತಾಯುಳ್ಳ ಶಿಶುವಾನು.
ಸ್ವತಂತ್ರವೇಕಯ್ಯ ನಿನ್ನವರ ನಡುವೆ ಎನಗೆ?
ನಿನ್ನವರು ಎನ್ನನೊಲ್ಲದಿದ್ದ ದುಃಖವನು
ಮಱೆದೆನೆ ನಾನು?
ನಿನ್ನವರಾಜ್ಞೆಯ ಮೀರಿವೋದೆನಾಯಿತ್ತಾದೊಡೆ
ನಿನ್ನಾಣೆಯಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ. ||೨೩೫||[I–೯೮]

– ನೆನ (ಮೂ)

ಅಯ್ಯಾ ನಿನ್ನವರ ಕಂಡಡೆ ನೀನೆಂಬೆ.
ಕಾದುಕೊಂಡಿಪ್ಪಿ ಕೀಳಿಲ.
ಎನ್ನ ಮಾನಸಾ ವಾಚ ಕಾಯಿಕದಲ್ಲಿ
ಹುಸಿಯಾಯಿತ್ತಾದೊಡೆ ನರಕದಲಿಕ್ಕು
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೩೬॥

ಅಂದು ಬಸವಣ್ಣ ಬಂದು
ಜಱಿದು ಹೋ[ದು]ದ ಮಱಿದೆನೆ? ಆ ನೋವೆ
ಆ ಜಱಿದುದೆ
ಎನಗೆ ದೀಕ್ಷೆಯಾಯಿತು.
ಆ ದೀಕ್ಷೆಯ ಗುಣದಿಂದ ಫಲಪದಕ್ಕೆ ದೂರವಾದೆ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಬಸವಣ್ಣನೆನ್ನ ಪರಮಾರಾಧ್ಯ. ॥೨೩೭॥[I–೧೬]

ಶುದ್ಧವೆ ತದ್ರೂಪಾಗಿ ಬಾರನೆ ಅಂದು?
ಅನಾಹತ ಗಣೇಶ್ವರನು ಬಂದೆನ್ನ ಜಱಿಯನೆ?
ಜಱಿದಡೆ ನೀನು ಕೊಟ್ಟ ತಲೆಯ
ಹುಣ್ಣ ಕಣ್ಣೆಂದು ತೆಱಿದು ಲಜ್ಜೆಗೆಡೆನೆ?
ಅನಾದಿ ಗಣೇಶ್ವರನ ಕೈಯಲ್ಲಿ
ಶುದ್ಧಕ್ಕಾತನೊಡೆಯ, ಸಿದ್ಧಕ್ಕಾತನೊಡೆಯ,
ಪ್ರಸಿದ್ಧಕ್ಕಾತನೊಡೆಯ
ಒಪ್ಪಿಪ್ಪಾಱಾತನ ಸೀಮೆ!
ಮೂವತ್ತಾಱಱ ಮೇಲಿಂದಾತನ ಸಂಯೋಗ
ಇಂತಪ್ಪಾತನ ನೀನೆನಲಱಿಯದೆ ನೊಂದೆ ಕೆಲವು ದಿನ.
ಆ ನೋವ ಮಾಣಿಸಿದಾತನೂ ಆತನೇ,
ಎನ್ನ ಭವವ ತಪ್ಪಿಸಿದಾತನೂ ಆತನೇ.
ಆತನಿಂದ ಉರುತರ ಕೈವಲ್ಯ ಕಾರಣಿಕನಾದೆ,

---

* ಗ (ಮೂ)

ಶುದ್ಧ ಸಿದ್ಧ ಪ್ರಸಿದ್ಧ ಕಾರಣಿಕನಾದೆ,
ಆತನ ಪ್ರಸಾದದಿಂದ
ನಿನ್ನವರ ಪಾದೋದಕ ಪ್ರಸಾದಕ್ಕೆ ಯೋಗ್ಯನಾದೆ,
ಫಲಪದಕ್ಕೆ ದೂರವಾದೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಬಸವಣ್ಣನಿಂದ ಪರಮಸೀಮನಾದೆ. ॥೨೩೮॥[I–೨೪೩]

ಆನಂದಸ್ಥಾನ ಅಪರಸ್ಥಾನ ಮಧ್ಯಮಸ್ಥಾನದ
ಭೇದಂಗಳ ಹೇಳುವೆ:
ಆನಂದಕ್ಕೆ ಅನೇಕ ಪರಿಯ ಬಣ್ಣ,
ಅಱುವತ್ತೆಸಳಿನ ಕಮಳ,
ಹದಿನಾಱಕ್ಷರ ವಿಪರೀತ,
ಬಹುಶ್ರುತನೆಂಬಾತನಧಿದೇವತೆ.
ಅಪರಸ್ಥಾನದಲ್ಲಿ ಅಕ್ಷರವೆರಡಱ ಸಿಂಹಾಸನ,
ಆದಿಮಧ್ಯಸ್ಥಾನವಿಲ್ಲದ ಕಮಲವೊಂದು ಎಸಳು ಎರಡು,
ಅಪರಸ್ಥಾನಕ್ಕೆ ಅಜಲೋಕ ಪರಿಯಂತ ವೇಧಿಸುತಿಪ್ಪ ಕಮಳ
ಶುದ್ಧ ಸ್ಫಟಿಕ ಸಂಕಾಶವರ್ಣ,
ಅವ್ವೆಯ ಆಂದೋಳದ ಕ್ರಿಯಾಕಾರ
ತ್ವಮಸಿಯೆಂಬ ನೀಲಾಸಂಗಮ,
ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಅಧಿದೇವತೆ. ॥೨೩೯॥

ಸ್ಫಟಿಕದ ಘಟದಲ್ಲಿ ಭೇದಿಸುವ ಮಹಾಪ್ರಭೆಯ
ಸಾರಾನ್ಮತ ಹೇಂಗೆಂದೊಡೆ:
ಇತ್ತೆಱನಾಗಿ ಇಬ್ಬೀಡದಲ್ಲಿ ಭವಿಸಿ,
ಇಹಪರವೆಂಬ ಇದ್ದೆಸೆಯಲ್ಲಿ ನಿದ್ದೆಸೆಯಾಗಿ,
ಇಪ್ಪೆ ಎಲೆ ಅಯ್ಯಾ.
ನಿನ್ನ ಪರಿಯನು ಅಱಿಯಲಹುದೆ? ಮಲಭಾಂಡದೇಹಿಗಳಿಗೆ
ಸಂಗಸುಖದಲ್ಲಿ ಸಂಗಿಸುವ ಕ್ರೀಯನಱಿಯದೆ ರುಚಿಯಿಸುವ
ಅಜ್ಞಾನ ಜಡರಿಗೆ ಎಂತಪ್ಪುದಯ್ಯಾ?

ಅಜ್ಞಾನ ಜಡರಿಗೆ, ನಿಜಭಕ್ತಿ ನಿಜಜಂಗಮ ನಿಜಪ್ರಸಾದವೆಂಬ
ಮಹಾನುಭಾವರಿಗಲ್ಲದೆ,
ಲಿಂ[ಗಾ], ನಿಮ್ಮ ಸಂಗ ಸಮನಿಸದು
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೪೦॥[I-೮೦೮]

ಶುದ್ಧದಲ್ಲಿ ಪ್ರವೇಶಿಸಿ, ಸಿದ್ಧದಲ್ಲಿ ಪ್ರಕಟಿಸಿ,
ಪ್ರಸಿದ್ಧದಲ್ಲಿ ಭೇದಿಸಿಯಿಪ್ಪ ಸಜ್ಜನ ಶುದ್ಧಶಿವಾಚಾರಂಗೆ
ನಿತ್ಯ ಲಿಂಗಾರ್ಚನೆ, ನಿತ್ಯ ಜಂಗಮಾರ್ಚನೆ,
ನಿತ್ಯ ಕೊಂಬುದು ಪಾದೋದಕ,
ನಿತ್ಯ ಕೊಂಬುದು ಪ್ರಸಾದ.
ತಾಂ ನಿತ್ಯನಾಗಿ ಅನ್ಯದೈವಕ್ಕೆಱಗ,
ಅನನ್ಯತವ ಬಗೆಯ,
ಪಾದೋದಕಕ್ಕಲ್ಲದೆ ಬಾಯ್ದೆಱೆಯ,
ಪ್ರಸಾದವನಲ್ಲದೆ ಗ್ರಹಿಸ,
ಪಾದೋದಕ ಪ್ರಸಾದವಲ್ಲದೆ ಕೊಂಡಡೆ
ಅನಾಚಾರ ಹೊದ್ದೀತೆಂದು ಅಂಜಿ,
ಕಪಿಲಸಿದ್ಧ ಮಲ್ಲಿಕಾರ್ಜುನನ ಏಕೀಭವಿಸಿದ
ಲಿಂಗತ್ರಯದಲ್ಲಿ ನಿತ್ಯ ಪ್ರಸಾದಿ. ॥೨೪೧॥

ತನುಗುಣಂಗಳನತಿಗಳೆದ ಪ್ರಸಾದಿ
ತಾಮಸಂಗಳ ಮೀಟಿದ ಪ್ರಸಾದಿ,
ವರ್ಗಂಗಳ ದಾಟಿದ ಪ್ರಸಾದಿ,
ಇಂದ್ರಿಯಂಗಳೆಸೆವ ಮುಖವುಳ್ಳ ಪ್ರಸಾದಿ,
ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡಿದ್ದ
ತ್ವಮಸಿ ಪ್ರಸಾದಿ. ॥೨೪೨॥[I-೪೪೩]

ಲಿಂಗೋದಕದಿಂದ ಅಂಗರಕ್ಷಣಂಗಳ ಮಾಡುವೆ,
ಲಿಂಗೋದಕದಿಂದ ಸರ್ವ ಪವಿತ್ರವ ಮಾಡುವೆ,
ಪ್ರಸಾದೋದಕದಿಂದ ಪ್ರಾಣನ ನೆಲೆಯನಱಿವೆ.

ಇಂತೀ ತ್ರಿವಿಧೋದಕದಿಂದ ಶುದ್ಧನಹೆ,
ಕಪಿಲಸಿದ್ಧ ಮಲ್ಲಿಕಾರ್ಜುನ ತಾನಹೆ. ॥೨೪೩॥[II–೩೩]

ಸಜ್ಜನದಲ್ಲಿ ಸದಾಚಾರ ಸಮನಿಸಬೇಕಾಯಿತ್ತಾದರೆ
ಲಿಂಗತ್ರಯದ ನೆಲೆಯನಜಿ,
ಪಾದೋದಕ ಬ್ರಹ್ಮದ ಪ್ರಮಾಣವನಜಿ,
ಮಜ್ಜನಕ್ಕೆಜಿವ ಭೇದವನಜಿ,
ಅಲ್ಲದಿದ್ದಡೆ ನಿನಗನಿಮಿಷತ್ವವನಜಿ,
ಅಟಿಯದಿದ್ದರೆ ಅಭ್ಯಾಸದಲ್ಲಿ ಎಲ್ಲರಂತಪ್ಪೆ,
ಕಪಿಲಸಿದ್ಧ ಮಲ್ಲಿಕಾರ್ಜುನನಿಪ್ಪಿರವ ಕಾಣೆ. ॥೨೪೪॥

ಲಿಂಗತ್ರಯವಾವುದೆಂದಡೆ ಹೇಳುವೆ
ಅಪರಸ್ಥಾನದಲ್ಲಿಯಿಪ್ಪಾತ ಇಷ್ಟ,
ಮಧ್ಯಮಸ್ಥಾನದಲ್ಲಿಪ್ಪಾತ ಗುರು,
ಆನಂದಸ್ಥಾನದಲ್ಲಿಪ್ಪಾತ ಅಭೇದ್ಯ
ಇದಕ್ಕೆ ಮೂಲಾಧಾರಂಗಳು,
ಸರ್ವಸತ್ವದಿಂದ ಕಾಬುದು ಗುರುವ,
ಕಂಡು ಮಚ್ಚೂದು ಲಿಂಗವ,
ಅವಿರಳವಿಲ್ಲದೆ ನಚ್ಚೂದು ಜಂಗಮವ
ಕಪಿಲಸಿದ್ಧ ಮಲ್ಲಿಕಾರ್ಜುನನನ ಕೂಡೂದು. ॥೨೪೫॥

ಆ ಪಾದೋದಕ ಕ್ರಮ :

ಅಂಗಲಿಂಗ ಸಂಬಂಧಿಯಾದ ಬಳಿಕ
ಗುರುವಿನ ಅನುಮತದಿಂದ ಸ್ವಾನುಭಾವ ಲಿಂಗಸಂಬಂಧಿಯಾಗು,
ಸ್ವಾನುಭಾವಲಿಂಗ ಸಂಬಂಧಿಯಾದ ಬಳಿಕ ಪ್ರಾಣನಿಪ್ಪ ನೆಲೆಯನಜಿ,
ಆ ಲಿಂಗನ ಮಜ್ಜನೋದಕ
ನಿನ್ನ ಅವಯವ ಶುದ್ಧಿ,
ಆ ಲಿಂಗನ ಪ್ರಸಾದೋದಕ

ನಿನ್ನ ಪರಮಪದವು,
ಇಂತು ಪಾದೋದಕ ತ್ರಯಲ್ಲಿ ಸುಖಿಯಾಗಿ
ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡಿ
ನಿತ್ಯವಾಗು ಸಂದಿಲ್ಲದೆ, ॥೨೪೬॥[I–೪]

ಆಚಾರ ಪ್ರಾಣವಾದ ಬಳಿಕ ಅನ್ಯಕ್ಕೆಱಗದಿರಬೇಕು
ಅರಿಷಡ್ವರ್ಗಂಗಳು ಒಳಗಾದ ಕರಣಂಗಳೆ ಕರುವಾಗಿ ಅರ್ಚಿಸಬೇಕು
ಆತನೀಗ ಲಿಂಗೈಕ್ಯ
ಆತನೀಗ ಪಾದೋದಕ ಪ್ರಮಾಣನಱಿದಾತ
ಭಕ್ತಿಯ ತಾತ್ಪರಿಯವನಱಿದಾತ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿ ತಾತ್ಪರ್ಯವಾದಾತ. ॥೨೪೭॥

ಮರ್ಮವನಿಱಿತು ಅಯ್ಯಾ ನಿಮ್ಮ ಕಾಬವರು
ಸುಲಭವೆ ಲೋಕದಲ್ಲಿ ?
ಲಿಂಗಭಕ್ತಿ ಜಂಗಮಭಕ್ತಿ ಗುರುಭಕ್ತಿ ಸುಲಭವೆ ?
ಲಿಂಗಭಕ್ತ ಪ್ರಭುದೇವರು,
ಜಂಗಮಭಕ್ತ ಬಸವಣ್ಣ,
ಗುರು ಮೊದಲಾದ ಪ್ರಸಾದ ಸರ್ವಕ್ಕೂ,
ಅನುಭವಿ ಚೆನ್ನಬಸವಣ್ಣ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ,
ಇವರ ಪಾದಕ್ಕೆ ನಮೋ ನಮೋಯೆಂಬೆ. ॥೨೪೮॥

ಇವರೆಂದ ಮಹಾವಸ್ತುವಿನ ಪ್ರಮಾಣವನಱಿದೆ,
ಶುದ್ಧವಿದೆಂದಱಿದೆ.
ಪಾದೋದಕ ಪ್ರಸಾದ ಭಕ್ತಿಯೆಂಬ ನಿಶ್ಚಯವನಱಿದೆ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಪರತತ್ವನಱಿದೆ ಇವರಿಂದ. ॥೨೪೯॥

ಸ್ಥಳವೊಂದರಲ್ಲಿ ಕೂಪಂಗಳು ಹಲವಾಗಿ ಭವಿಸುತ್ತೈದಾವೆ.
ಮೊದಲಲ್ಲಿ ಮೂಱು, ಅಂತರದಲ್ಲಿ ಆಱು,
ಪರಸ್ಥಾನದಲ್ಲಿ ಒಂಬತ್ತು.
ವೈನ್ಯೆಯೆಂಬ ಅಕ್ಷರದ ಮೊದಲ ಬಹುಶ್ರುತವಪ್ಪ ಕಮಲ
ವಿಚಿತ್ರಾಂದೋಳನೆಂಬ ಭ್ರಮರ
ಪರಿಮಳವ ಸೂಸಿ ಬೀಸರವೋಗಲೀಯದೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಗೆ
ಸರ್ವಸ್ವವನರ್ಪಿಸಿ ಸುಖಿಯಾಯಿತು. ॥೨೫೦॥

ನಿಷ್ಕಳಾತ್ಮನನು ಅರ್ಚಿಸೇನೆಂದೆಂಬೆ,
ಆ ನಿಷ್ಕಳವನರ್ಚಿಸುವ ಪರಿ ಹೇಂಗೊ? ಎಲೆ ಅಯ್ಯಾ:
ನೀನು ಸಕಲದೊಳಗೆ ಇದ್ದು ನಿಷ್ಕಲವ ಭೇದಿಸಿ ಪೂರತನಾದೆನೆಂಬೆ.
ನೀನೀ ಬೀಡಲಿರದಿದ್ದು
ಒಬ್ಬಳ ಸಂಗವನ್ನೈವರು ಮಾಡುವಲ್ಲಿ
ಕಾಬ ಪರಿಯ ಹೇಗೊ? ಗುರು ಕರಣವುಳ್ಳವಂಗಲ್ಲದೆ.
ಅನಾಹತಲೋಕದಲ್ಲಿ ವಿಶ್ರಮಿಸುವಲ್ಲಿ
ಮೂಲ ತೊಡಗಿ ಸಾದಾಖ್ಯಪರಿಯಂತರ ಹೊಲಬುದಪ್ಪಿ ಬಪ್ಪಾಗ
ಕಂಡವರಾರೊ ನಿನ್ನ ಪರಿಯ, ಗುರು ಕರುಣವುಳ್ಳವಂಗಲ್ಲದೆ.
ಆಧಾರ ಮೂಲ ಮಧ್ಯ ಅಪರಸ್ಥಾನ
ಹೃತ್ಸರೋಜದೊಳಿರ್ದ ಕನ್ನಿಕೆ
ಬೆಳಗುಗೊಡನಂ ಹೊತ್ತು ಸೂಸಲೀಯದೆ
ಮೂವತ್ತಾಱು ಮನೆಯನು ನೋಡಿ
ಸಾವಿರಂಗ ಪ್ರತಿಷ್ಠೆಯ ಮಾಡಿ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ
ಇದ್ದೆಸೆಯನಿದ್ದೆಸೆಯಾದಳು. ॥೨೫೧॥

ಪ್ರಥಮಸ್ಥಾನದಲ್ಲಿ ಒಡಗೂಡಿದಳು,
ಪಂಚಬ್ರಹ್ಮನ ಅಪರಸ್ಥಾನದಲ್ಲಿ ಒಡಗೂಡಿದಳು,
ಸಹಸ್ರದಳದ ಕಂಜಕರ್ಣಿಕೆಯ ಮಧ್ಯಮಸ್ಥಾನದಲ್ಲಿ

ಶಕ್ತಿ ಪಂಚಕವನತಿಗಳೆದಳು,
ಅವಱ ಹಣೆಯಲ್ಲಿ ಲಿಕ್ತವ ಬರೆದು,
ಅಜಲೋಕದಲ್ಲಿ ಆನಂದ ಪ್ರಕಾಶವನೊಡಗೂಡಿದ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಆನಂದಸ್ಥಾನದಾದಿಶಕ್ತಿ. ॥೨೫೨॥

ಪರಮಶಕ್ತಿಯಾದಿ ಐದನೊಡಗೂಡಿದ
ಪರತತ್ವದ ಪ್ರಮಾಣವನಱಿತೆನೆಂಬ ಯೋಗಿ ಕೇಳಾ:
ನಿನ್ನ ಚಿತ್ತ ಬುದ್ಧಿ ಮನ ಅಹಂಕಾರವೆಂಬಲ್ಲಿ
ತಪ್ಪದೆ ಪ್ರವೇಶಿಸಿಪ್ಪಾಕೆ ಐದಱೊಳಗೊಬ್ಬಳು.
ಇನಿತು ಸಂಬಂಧಿಯೈಸಿ ನೀನು
ಇದಱೊಳಗಾತು ಸಿಲುಕುವನಲ್ಲ.
ಪರಬ್ರಹ್ಮದ ಸೊಮ್ಮು ಹಮ್ಮಳಿದು
ಬ್ರಹ್ಮಸ್ಥಾನದಲ್ಲಿ ನಿರ್ಮಳಜ್ಞಾನಿಯಾಗಿಪ್ಪ,
ಆತನಿದಕ್ಕೆ ಸಿಕ್ಕ, ನೀನಿದಱೊಳಗಣವನು,
ಅಯ್ಯ ವಾಙ್ಮನಸಾಗೋಚರನು
ಕಪಿಲಸಿದ್ಧ ಮಲ್ಲಿಕಾರ್ಜುನನ ಪ್ರಮಾಣನು. ॥೨೫೩॥

ಅಂತರಾತ್ಮ ಪರಮಾತ್ಮ ಭೂತಾತ್ಮ
ಒಳಗಾದ ಆಧ್ಯಾತ್ಮಿ ಕೇಳಾ:
ನೀನು ಯೋಗದ ಪ್ರಮಾಣ ಬಲ್ಲ ಅಯ್ಯನು.
ಶ್ರೋತ್ರೆಯ ಮನೆಯಲ್ಲಿ, ನೇತ್ರೆಯ ಚಿಹ್ವೆಯಲ್ಲಿ,
ಆನಂದ ಪಾತ್ರೆಯಲ್ಲಿ
ಸುಗತಿ ಸದಾಚಾರ ನಿಷ್ಕಳ ಪರಮಸೀಮೆಯೆಂಬ ಪಾತ್ರೆಯಲ್ಲಿ
ಪಂಚಬ್ರಹ್ಮವನೊಡಗೂಡಿದ ಪಂಚಮ ಸ್ತ್ರೀಯರಿಗೆ
ಪ್ರಸಾದವನಿಕ್ಕುವಾಗ
ಪ್ರಸನ್ನತೆಯೆಂಬ ಪ್ರಸಾದವನು ಗ್ರಹಿಸಲಜೆಯದೆ ಇದ್ದ ಕಾರಣ
ಅಂತರಿಸಿದೆ ಅಯ್ಯಾ.

೧-೧ ವೈ(ಮೂ)

ಆದ್ಯಂತ ಪ್ರಸಾದವ ಕೊಂಡ ಕಾರಣದಲ್ಲಿ ಅನೂನನಾದೆ,
ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡಿ ಸಂದಳಿದೆ. ॥೨೫೪॥ [I–೧೫]

ಸಂದು ಸವಯಿತ್ತು, ಹಂಗು ಹಱಿಯಿತ್ತು,
ಆಜ್ಞಾದೀಕ್ಷೆ ಪ್ರಬಲವಾಯಿತ್ತು,
ಸ್ವಾನುಭಾವ ದೀಕ್ಷೆ ಸಂಬಂಧಿಸಿತ್ತು,
ನಿತ್ಯ ಬೋಧಾದೀಕ್ಷೆ ಭೇದಿಸಿತ್ತು,
ಕಪಿಲಸಿದ್ಧ ಮಲ್ಲಿಕಾರ್ಜುನನ ಸಾರಿಸಿತ್ತು,
ಒಳಗು ಮಾಡಿತ್ತು, ಅರಿದು ಇನ್ನೊಂದೂ ಇಲ್ಲ. ॥೨೫೫॥ [I–೭೫೪]

ದೀಕ್ಷಾತ್ರಯದಲ್ಲಿ ಮುಕ್ತನಾದೆ,
ಶಿಕ್ಷೆ ಸಂಬಂಧಿಸುವಲ್ಲಿ ಭೀತನಾದೆ,
ಮುಗ್ಧೆಯ ಕನಸಿನಲ್ಲಿ ಮುಕ್ತನಾದವನ,
ತಮಂಗಳು ಮೂರು ಮಱಿದವನ,
ತಾಮಸಂಗಳು ಹಲವನಳಿದವನ,
ರಜಂಗಳು ಕೆಲವನುಳಿದವನ ಭೇದಿಸಿ ಕಂಡೆ,
ಅದೇನು ಗುಣ?
ಅ⌒[ವ್ಯ]⌒ಯನನಾಮಯ ಸ್ಥಾನದಲ್ಲಿ
ಶುದ್ಧ ಸಂಗಮ ಪ್ರಯೋಗಿಸಿದ ಕಾರಣ ಶಿಕ್ಷೆಯಾಯಿತು,
ತಮ್ಮ ಗುಣಂಗಳಿಗೆ ದೀಕ್ಷೆಯಾಯಿತು,
ಕಾಯ ಸರ್ವಾಂಗಕ್ಕೆ ಸ್ವಾನುಭಾವವಾಯಿತು,
ಕರಣೇಂದ್ರಿಯ ಸರ್ವಕ್ಕೆ
ಇಂತು ದೀಕ್ಷಾತ್ರಯವು ಸಂಬಂಧಿಸಿದ ಕಾರಣ
ನೀನಾದೆ ಕಾಣೈ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೫೬॥[I–೪೭೮]

ಪರಮಪದದಲ್ಲಿ ಅರಿದಪ್ಪ ಆಳಾಪವ
ಅಜಲೋಕದಲ್ಲಿ ಮಾಡುವೆ,
ಎಲೆ ಭ್ರಮರಾ, ಬಲ್ಲಾ ಅಯ್ಯನ ಸುದ್ದಿಯ?
ಅಯ್ಯ ಎದೆಗೆ ಚರ್ಮವಂ ಹೊದೆದು ಶುದ್ಧ ಧವಳಿತವೆಂಬ ಮನೆಯಲ್ಲಿ

ಕಾಮ್ಯಲಂಪಟಿಯ ಸಂಗವ ಮಾಡುವಾಗ ಬಲ್ಲಾ.
ಉರುತರ ದಿವ್ಯಜ್ಞಾನ ಪ್ರವೇಶಿಸುವಾಗ
ಆ ಕಾಮ್ಯಲಂಪಟಿ ಅಯ್ಯನೊಳು ಸಂದು ಸವದು
ಒಂದಾದುದ ಬಲ್ಲಾ.
ನಿತ್ಯಗುರು ನಿತ್ಯಲಿಂಗ ನಿತ್ಯಜಂಗಮವಲ್ಲದೆ
ಅನಿತ್ಯನೆಂಬವರಿಗೆ ಅಪ್ಪುದೆ ಭಕ್ತಿ?
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೫೭॥

ಸೀಮೆಯ ಮೀಱಿದ ಸಂಬಂಧಿಯ,
ಗ್ರಾಮವ ಮೀಱಿದ ಅನಾಮಿಕನ,
ಆದ್ಯಕ್ಷರದ ಭೇದ ತಾನಾದ ಅನ್ಯಯಕಾರಿಯ,
ನಾದದೊಳಗಣ ಬಿಂದು,
ಬಿಂದುವಿನೊಳಗಣ ಭೇದ,
ಭೇದದೊಳಗಣ ಕಳೆ,
ಕಳೆಯೊಳಗಣ ಸಂಯೋಗ,
ಸಂಯೋಗದಲ್ಲಿ ಸಂಬಂಧಿ, ವಿಯೋಗದಲ್ಲಿ ನಿತ್ಯ,
ತಾತ್ಪರ್ಯವರ್ಮ ಕಳೆಗಳನಱಿದಂಥ ಮುಕ್ತ
ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡಿದ
ಉರುತರ ತಾತ್ಪರ್ಯ. ॥೨೫೮॥

ಆನಂದದಗ್ನಿಯ ಆನು ತರಹೋದರೆ
ಸಾಧಿಸಿದವಯ್ಯ ಎನ್ನ ಕರ್ಮಂಗಳು,
ಭೇದಿಸಿದವಯ್ಯ ಎನ್ನ ಕರಣಂಗಳು,
ಆಮೋದವಾದವಯ್ಯ ಎನ್ನ ಅವಯವಂಗಳು.
ಆನಂದಸ್ಥಾನದ ಆದ್ಯಕ್ಷರಂಗಳ ಭೇದಿಸಿ[ಹೆ]ನೆಂದರೆ
ಅದು ಸಾಧ್ಯವಿಲ್ಲ.
ಆಧಾರದ ಆನತದ ಭೇದವನಱಿದಾತ ಸಾಧಿಸಿದನೌ
ಎನ್ನ ಕಪಿಲಸಿದ್ಧ ಮಲ್ಲೇಶ್ವರನ. ॥೨೫೯॥

ಮೂಱಱಿಂದ ಮುನ್ನಾದ,
ಮೂಱು ಮತ್ತೆ ತಾನಾದ.
ಆಱನತಿಗಳೆದ ತತ್ವ ಸೀಮೆಯಾದ,
ಆಱು ತಾನಾಗಿ ಆಱಾಱನತಿಗಳೆದ
ಸಂಬಂಧದ ಮೇಲಣ ಕ್ರಿಯಾಳಾಪ ತವಕಿಸುವ ಸಂಯೋಗ
ಅದಱೊಳಗೆ ವಿಯೋಗಿ ಕಪಿಲಸಿದ್ಧ ಮಲ್ಲೇಶ್ವರ. ॥೨೬೦॥

ತತ್ವ ಪ್ರಾಪಂಚಿಕದ ಅತ್ತಲಾದ ಸೀಮೆಯನು
ಮತ್ತೆ ಸಂಗಮರೆಲ್ಲ ಅಱಿವುತಿಪ್ಪರು.
ಭಕ್ತ್ಯಂಗನೆಯ ಕ್ರೀಯ, ಮುಕ್ತ್ಯಂಗನೆಯ ಕೂಟ,
ತತ್ವಮಸಿಯಲ್ಲಱಿತೆ ಕಪಿಲಸಿದ್ಧ ಮಲ್ಲೇಶ್ವರಾ. ॥೨೬೧॥

ಕೂಟದ ತುರಿಯದಲಿ ಬೇಟ ಮತ್ತೆರಡಾಗಿ
ಆಟವನು ಆಡಿದೆನು ಚಿತ್ರತರದಾ.
ಕೂಟವೂ ಬೇಟವೂ ಆಟ ಮತ್ತೊಂದಾಗಿ
ನೋಟಂಗಳನಿಮಿಷದ ದೃಷ್ಟಿ ನಟ್ಟು,
ತಾನು ತಾನಾಗೀಗ ಸಾನಂದ ಸಂಬಂಧ
ಆನಂದ ಮುಕ್ತ್ಯಂಗನೆ ಏಕವಾಗಿ
ಲೋಕದೊಳಗೆಯಿದ್ದು ಲೌಕಿಕ ತಾನಲ್ಲದೆ
ಏಕೈಕನಾದೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೬೨॥ [I–೩೫೯]

ಆಱ ಮುನ್ನತಿಗಳೆದು ತೋಱಿದ್ದ ಸೀಮೆಯನು
ಆಱನೊಯ್ಯೆದಲ್ಕೆ ಏಳೆಂಟನತಿಗಳೆದು
ತೋಱಿರ್ದನೆರಡಱಲಿ ಮುಕ್ತ್ಯಂಗನೆ.
ಸಂಗಸುಖವನೆ ಅಳಿದು ಹಂಗುಹಱಿದಿಹ ಬ್ರಹ್ಮ
ಅಂಗನೆಯ ಅಕ್ಷರತ್ರಯದ ಕಂಗಳಲ್ಲಿ
ಏವುಂಟು ಕಾನನದಲೋಲಾಡಿ
ಲಿಂಗ ನಿಮ್ಮ ಬೆರಸಿದ ಕಪಿಲಸಿದ್ಧ ಮಲ್ಲೇಶ್ವರಾ. ॥೨೬೩॥

ಶುದ್ಧ ಕಾನನದೊಳಗೆ ಸಿದ್ಧ ವಾಯುವು ಬೀಸಿ
ಪ್ರಸಿದ್ಧ ಕಮಲದಲ್ಲಿ, ಬಹು ಛಾಯದಾ ಹಲವು ಪರಿಯಲ್ಲಿ

ಎಸೆವ ತೆಱಹಿಲ್ಲದಿಹ ಗಮನ
ಕುಱುಹಿಂಗೆ ಬಾರದಿಹ ಶೂನ್ಯಾಂಗನ
ಸ್ವಾನುಭಾವದ ಮನೆಯ ನಾನೊಡನೆ ಓಲಾಡಿಸಿ
ನೀನು ನಾನದೆ ಕಪಿಲಸಿದ್ಧ ಮಲ್ಲೇಶ್ವರಾ. ॥೨೬೪॥

ತತ್ವಮಸಿಯೊಳಗೆ ನಿತ್ಯ ಹೊಕ್ಕಿಪ್ಪುದನು
ಮತ್ತೆ ಶೂನ್ಯಾಂಗರಿಗೆ ಅಱಿಯಲಹುದೆ?
ಕಡಲ ಒಳಗಿಹ ಕಿಚ್ಚಿ ಕಡಲ ಸುಡದಿಹ ಭೇದ
ಒಡಗೂಡಿದಾ ಭೇದ, ಶರಣರಿಗಾ
ಕಡಲ ದಾಂಟಿಯೆ ನಿಂದು
ತಡಿಯೊಳಗೆ ತಾ ಮಿಂದು ಒಡಗೂಡಿದನು.
ಶುದ್ಧಧವಳಾಂಗನ ಹಲವು ಚಿತ್ತವು ಬಿಟ್ಟು
ಗುರುವಿನ ಅನುಮತ ಅನುಮಿಷಲಿಂಗದ ಭೇದವಱಿದು,
ತನುತ್ರಯದ ಮಲತ್ರಯದ
ಅನುಭೇದವನು ಸುಟ್ಟು,
ತನುಜ್ಞಾನಿ ಸಂಬಂಧಿಲಿಂಗ ಮೂಱಱೊಳಗೆ
ಅಂಗಸುಖವನೆ ಬಿಟ್ಟು ಲಿಂಗಸುಖಿ ತಾನಾಗಿ
ಮಂಗಳಾಂಗನಾದಿ ಕಪಿಲಸಿದ್ಧ ಮಲ್ಲೇಶ್ವರ. ॥೨೬೫॥

ತನುಗುಣದ ಪಾತ್ರೆಯಲಿ ತವಕಿಸುವ ಭೇದವನು
ಅನುನಯದ ಮಲತ್ರಯದ ದುರ್ವಾಕ್ಯವನು
ಘನತರದ ಸುದ್ದಿಯನು ಐದೈದುವೊಂದಾಗಿ
ತನುಗುಣವನತಿಗಳೆದು ಪ್ರಾಪಂಚಿಕಾತತ್ವದಿಂದತ್ತತ್ತ ಮತ್ತೆ
ತ್ವಮಸಿಯಾಗಿ ಭಕ್ತಿ ಕಾರಣ ಲೋಕರೂಪನಾಗಿ
ಐಕ್ಯೈಕ ಸಂಬಂಧಿ ಆಕಾರ ನಿರ್ವಿಘ್ನ
ಆನಂದದವ್ಯಯದ ಅಂತ್ಯದಲ್ಲಿ
ಅಪ್ಪೆಯ ಮುಖಕಮಳ ಐಯನಜಾತಸ್ಯ

೧-೧ ವ್ಯಾ(ಮೂ)

ಸಂಯೋಗಕದು ಶುದ್ಧ ಮುಗ್ಧನಾಗಿ
ಮೂಱ ಮತ್ತೊಂದೆಂದು ಒಂದು ಮೂಱಱ ತೃಪ್ತಿ ಸಂದಳಿದೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ||೨೬೬||

ಇಷ್ಟಲಿಂಗದ ಭೇದ ದೃಷ್ಟವಪ್ಪೀ ಮುಕ್ತಿ
ಬಚ್ಚಬಜೆಯಾನತದ ನಿರ್ಗುಣದಲಿ
ಒಪ್ಪಿಪ್ಪ ಕಮಳದಲಿ ತಪ್ಪದಿಹ ದೀಪ್ತಿಯಲಿ
ಒಪ್ಪಿಪ್ಪ ನಿತ್ಯದಿಂದಿಪ್ಪತ್ತಱಲ್ಲಿ
ಮನೆಗಳಾ ಮಧ್ಯದಲಿ
ಮನಸಿಜನ ಎಣಿಕೆಯನು ಹುಗಲೀಯದೆ
ಶುದ್ಧ ತಾತ್ಪರ್ಯದಾ ಕಾ[ಮ್ಯಾ]ರ್ಥದಿಂದಲ್ಲಿ
ನಿಃಕಾಮ ಸಂಗವ ಮಾಡಿ
ಸೋಮ ಕೊಳದಲ್ಲಿ ಶುದ್ಧ ನೀರ ಮಿಂದು
ತಾನು ತಾನೊಂದಾಗಿ ನಾನಾ ಗುಣಂಗಳ ಭೇದವನು
ಅಱದೀಗ ಮುಗ್ಧನಾದ.
ಮೋಹಿಸುವ ಮಲತ್ರಯದ
ಮಿಸುವ ಸಂಗಮವನು ಬೇಗದಲಿ ಸುಟ್ಟು,
ನೀನು ನಾನಾದೆ ಕಪಿಲಸಿಧ್ಧ ಮಲ್ಲಿಕಾರ್ಜುನಾ. ||೨೬೭||

ಅತಿಗಳೆವೆ ವರ್ಗವನು, ಮಥನಿಸುವೆ ಮುಕ್ತಿಯನು,
ಸದಮದವ ನಿಲಿಸುವೆನು
ದಿಗ್ವಳಯದಾ ಕರಣ ಸಂತತಿಗಳ ತನುಗುಣದ ಭೇದವನು,
ಮನದಲ್ಲಿ ಒಪ್ಪಿಪ್ಪ ತತ್ವಂಗಳಾ ಮನೆ ಐದಱ ಭೇದ
ಮನಸಿಜನಿಂಬಿಲ್ಲ ಘನತರ ಮನೆ.
ಐದನೊಂದ ಮಾಡಿ
ತನುತ್ರಯದ ಮನತ್ರಯವ ಮಲತ್ರಯವ ಎಯ್ದದೆ
ಘನತರದ ಭೇದವನು ಅನುವಾಗಿ ಎಯ್ದಿ
ಗಮನವನಿರಿಸಿ ಮಧ್ಯಸ್ಥಾನದಲ್ಲಿ.
ಕುಶಲತೆಯ ಬಿಟ್ಟೀಗ ಎಸೆವ ಕಮಳದೊಳಗೆ

ಶಶಿಧರನ ಸಾಯುಜ್ಯ ಮಂಚದಲ್ಲಿ
ಕುಸುಮನೇತ್ರೆಯ ಕಂಡು ಪಸರಿ ಪರ್ಬಿದ ಸ್ನೇಹ
ಒಸರುತಿರ್ದುದು ಗಿರಿಯ ಕಂದರದಲಿ.
ಮಧುರದೊಂದಾಳಾಪ ಒದವಿರ್ದ ಕ್ರೀಯದಲಿ
ಅನಿಮಿಷದ ಶಕ್ತಿ ಶುದ್ಧ ಪಂಚಮದಲಿ ಒದಗದೆ
ಎಯ್ದಿಪ್ಪ ಪರಶಕ್ತಿ ಮಸ್ತಕದ
ಅನುನಯದ ಬೀಜಾಕ್ಷರಂಗಳೆರಡಾ ಬಳಸುತ್ತ
ಚಿತ್ತವನು ಹರಿಯದೆ ನಿಲಿಸಿ,
ತನುವ ವೇಧಿಸುತಿರ್ದುದಾನತದಲಿ
ಶುದ್ಧ ಸಂಗಮದೊಳಗಿದ್ದು ಮೂರ್ಛೆಯನೆಯ್ದಿ
ಅರ್ಧೋದಯದಲ್ಲಿ ಆನತದಲಿ ತಾನು ತನ್ನವನಜಿತು
ಭಾನುವಿನುದಯದಲಿ ತಾರೆಗಳ ತವಕದಲಿ
ವಿಯೋಗದಾ ಅಂಗಸಂಗವ ಮಱೆದು,
ಲಿಂಗಸುಖಸಂಯೋಗಿ ಭಂಗವಿಲ್ಲದೆ
ಶುದ್ಧ ಧವಳತೆಯಲಿ ಅನುಗುಣವನತಿಗಳೆದು
ಮನದ ಮಲಿನವ ಕಳೆದು,
ಮನ ನಿಮ್ಮನೆಯ್ದಿತ್ತೈ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೬೮॥

ಅಕ್ಕಟಾ, ತನು ನೀನುಯೆಂಬ ನೀನು ನಾನೆಂಬ ಕಾನನದಲ್ಲಿ
ಕಾಮಿಸಿದೆನು ಕರುಣರಸ ಕಂಬನಿಯ
ಕರಣಗುಣ ಸಂಗಮದ
ಅನುನಯದಲೊಪ್ಪಿಪ್ಪ ತಾತ್ಪರ್ಯವಾ
ಮನಸಿಜನ ಬಾಣಕ್ಕೆ ಒಳಗಾದ
ಮಾನಸಾಗುಜೆಗಳೆತ್ತ ಬಲ್ಲರೈ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೬೯॥

ಶುದ್ಧ ತತ್ವದೊಳಗೆ ಸಿದ್ಧ ಬ್ರಹ್ಮದೊಳಗೆ
ಪ್ರಸಿದ್ಧವೂ ತನುಮನ ತಮಕದಲ್ಲಿ.
ಶುದ್ಧ ಸಿದ್ಧ ಭೇದ ಪ್ರಸಿದ್ಧದನುಮತವು ನಿರ್ದೈವರಿಗುಂಟೆ?
ಕಪಿಲಸಿದ್ಧ ಮಲ್ಲೇಶ್ವರಾ. ॥೨೭೦॥

ಅಯ್ಯಾ, ಬಾರಯ್ಯ,
ಅಯ್ಯಾ, ನೀ ಬಂದು ಅನಾಹತಜ್ಞಾನದಲ್ಲಿ ಅನುದಿನ ಪ್ರವೇಶಿಸಾ.
ಎಲೆ ಅಯ್ಯಾ, ನಿನ್ನ ಧರ್ಮ,
ಅಯ್ಯಾ, ಅನ್ಯರಿಗೆ ಕೈಯಾನಲಾಜೆ.
ಅಯ್ಯಾ, ಅನ್ಯರಿಗೆ ಅಣ್ಣಾ ಎನಲಾಜೆ
ಅಯ್ಯಾ, ನಿನ್ನವ ನಾನಿದ್ದು ಅನ್ಯರನು ಆಶ್ರಯಿಸುವ ಅನ್ಯಾಯ ನಿನ್ನದು
ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೭೧॥

ಹಲಬರಿಗೆಳೆಯ ನೀನು, ಮೂವರಿಗೆ ಮುಗ್ಧ ನೀನು,
ನಿನ್ನನರ್ಚಿಸುವ ಪರಿಯೆಂತಯ್ಯಾ?
ಅಳಿದುಳುಕದಾ ಕಮಳ ಘನತರದಲಳವಟ್ಟು
ತನು ನಿನಗೆ ನೈವೇದ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೭೨॥

ತಾಮಸಿ ಎಲ್ಲೆಲ್ಲಿ ತಾಮಸಿ ಅಲ್ಲಲ್ಲಿ,
ಸೋಮಕಳೆಯಿಂದಲ್ಲಿ ಸುಖತರದಲಿ,
ಕಾಮ್ಯಾರ್ಥವಂ ಬಿಟ್ಟು, ಪದ ನಾಲ್ಕನುಂ ಮೀಜೆ
ನಾ ನಿಮ್ಮನೆಯ್ದಿದೆ ಕಪಿಲಸಿದ್ಧ ಮಲ್ಲಿನಾಥಯ್ಯ. ॥೨೭೩॥

ತತ್ವ ತುರೀಯಂಗಳಿಂದತ್ತ ಮೀಜಿದ ಸೀಮೆ
ಕತ್ತಲೆಯ ಒಳಗಿಪ್ಪ ಕರ ರೂಪಿನಾ,
ಎರಡು ಮತ್ತೊಂದಾಗಿ ಎರಡಿಲ್ಲದೊಂದಾಗಿ,
ಐದೆಯರು ಐವರಾ ಸಂಗಂಗಳಾ.
ಆಜಜಿಲ್ಲಿಯೆ ನಿಂದು, ತೋಜಲೀಯದೆ ಸಂದ
ಕರ್ಮಂಗಳಾ ಮೀಜೆ ಏಳಜ ಒಳಗೆ
ತೋಜೆ ಮತ್ತೊಪ್ಪಿಪ್ಪ, ತೋಜದಿಹ ಸಾರೂಪ್ಯ ಅಷ್ಟಮದಲಿ
ಆಜು ಮೂಜನು ಎಂಟು ಐದು ಆಜನು ಹತ್ತ
ಹವಣಿಸಿದೆ ತತ್ವದಲಿ ಏಕಮಾಡಿದ
ಬ್ರಹ್ಮಲೋಕದಲಿ ಗುರುವಾಗಿ ಶಕ್ತಿಯ ಘನತರದ
ಮಸ್ತಕದ ಒದವಿಪ್ಪ ಅಕ್ಷರದ್ವಯರೂಪು
ನೀನೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೭೪॥

ಪ್ರಸಾದತತ್ವದಲಿ ಪ್ರಾದೇಶಿಕನು ನೀನೆ,
ಸಾದಾಖ್ಯತತ್ವಗಳ ಸಮನಿಸದಿಹ
ನಾದಬಿಂದುಕಳೆಯ ಆದಿಮಾಧ್ಯಾವಸಾನ
ಮೂದೇವರಿಗೆ ತಾನು ಶಕ್ತವಲ್ಲಾ.
ಅವ್ವೆಯ ಕರದಲ್ಲಿ ಅವ್ವಯ ತಾನಿಪ್ಪ
ಒಯ್ಯನೆ ನಡೆಯಯ್ಯ ಮಠದೊಳಯಿಂಕೆ.
ಮಠದೊಳಗಣ ಭೇದ ಕುಟಿಲಕ್ಕೆ ಇಂಬಿಲ್ಲ
ಮಠವ ಶುದ್ಧಿಯ ಮಾಡೆಲೆ ಮರುಳು ತಾಯೆ.
ಅಡಿಗಡಿಗೆ ಸಂಗಮದ ನುಡಿಯ ನೀನಾಡಿ
ಒಡಗೂಡವ್ವಾ ಕಪಿಲಸಿದ್ಧ ಮಲ್ಲಿಕಾರ್ಜುನನಾ. ॥೨೭೫॥

ನೀಲಬಿಂದುವಿನಲ್ಲಿ ಲೋಲುಪ್ತರೆಲ್ಲರೂ
ಆಲಸ್ಯವೇನವ್ವ ಅವನೆಡೆಗಳಲ್ಲಿ
ಬಾಲಕನ ಕನಸಿನ ಲೀಲೆ ತಾನಾದೊಡೆ
ಆಲಸ್ಯವಿಲ್ಲವದು ಮುಂದೆ ತತ್ವಂಗಳ
ಎರಡು ಮೂಱನು ಐದನಾಲ್ಕು
ಏಳನು ಎಂಟ ಏಕಮಾಡಿ ಕೂಡುವ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೭೬॥

ಶಿಶುಕಂಡ ಕನಸು ತಾ ಪಸರಿ ಪರ್ಬಿತು,
ಮೂಱು ದೆಸೆದೆಸೆಯ ಬಣ್ಣಗಳು ಹಲವಾಗಿ
ಆಲಿ ಬೆಳಕನೆ ನುಂಗಿ, ಆಲಿಸುತ ಕಂಬನಿಯ
ಲೋಲನ್ನ ಕಂಡು ತಾ ಮುಗ್ಧೆಯಿಂದೂ
ಸಾನುವಿನ ಕೊಡನ ಹೊತ್ತಾನತದ ಲೋಕದೊಳು
ತಾನು ತಾನಾಗಿ
ತತ್ವದ ತುದಿಯಲಿ ಹಮ್ಮಡಗಿದಕ್ಷರದ ಸೊಮ್ಮ ಮೀಱಿದ
ಬ್ರಹ್ಮಕರ್ಮಿಗಳಿಗದು ತಾನು ವಶವಲ್ಲದೆ
ಇನ್ನು ಕಪಿಲಸಿದ್ಧ ಮಲ್ಲಿನಾಥನೆಂದೆಂಬ
ಸೊಮ್ಮಿನ ಬ್ರಹ್ಮಕ್ಕೆ ಸೇರಿತ್ತಯ್ಯ. ॥೨೭೭॥

ಕಪ್ಪರದ ಕರದಲ್ಲಿಪ್ಪ ಮೂಜಗವೆಲ್ಲ
ತಪ್ಪದಲೆ ಸಿದ್ಧಾಂತವನು ಭೇದಿಸಿ
ಶಬ್ದಬ್ರಹ್ಮವ ಮೀಱಿದತ್ತ ಬ್ರಹ್ಮಾಂಡವು
ಇತ್ತೆಱನು ಕಂದೊಳಲು ಮೂಲೋಕಕ್ಕೆ.
ಅಯ್ಯಾ, ಕೇಳಯ್ಯ ನಿನ್ನಮೃತ ಹಸ್ತವನು ಒಯ್ಯನೆ ನೀಡಿ,
ಪರಮಪದದಲ್ಲಿಕ್ಕೈ ಐದಱಿಲಿ ಮುಖವು
ನಯನದಲಿ ಜಿಹ್ವೆ ತಾ ಅಯ್ಯ ನೀನುಣುತಿಪ್ಪೆ
ಕರಮುಖದಲ್ಲಿ ಚೊದ್ಯವಂ ಬೆಳಗಿನಲಿ
ಗುರುಕರುಣವಿಡಿದಿಪ್ಪ ಭಾವ ಸಜ್ಜನಶುದ್ಧ ಸದ್ಭಕ್ತರಾ
ಇಂದ್ರಿಯವೈದು ನೀನುಂಬ ಜಿಹ್ವೆಯಾಗಿ
ಸಂದಣಿಪ ಕರಣ ನಿನ್ನಯ ಚೇತನ.
ಇಂತು ಸದ್ಭಕ್ತರಿಗೆ ಪ್ರಾಣವು ಶೂನ್ಯ
ನಿನಗೀಗ ಅಂತರಿಪ ಕಾಯವಿಲ್ಲದ ಪರಿಯೇನು?
ಇಂತು ವಿಚಾರಿಸುವೊಡೆ ಭಕ್ತ ಕಾರಣ ಪರಶಿವನು
ಸಂತತಂ ಕಪಿಲಸಿದ್ಧ ಮಲ್ಲೇಶ್ವರಾ. ॥೨೭೮॥ [I-೩೧೭]

ಅನುಪಮನ ನಿನ್ನೀಗ ಹವಣಿಸಲಕರಿದಯ್ಯ.
ಘನತರವು ಎನಿಸುವ ಸಾಯುಜ್ಯದಾ ಪದವ ಮೀರಿದ,
ಶಬ್ದ ಹಲವ ಮೀರಿದ ಬ್ರಹ್ಮ
ಗುರುಕರುಣದಿಂದ ಕಂಡೆ ಪರಮಪದವ.
ಗುರುವೆ ಮದ್ಗುರುವೆ ಸದ್ಗುರುವೆ ತ್ರಿಜಗದ್ಗುರುವೆ ಗುರುವೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೭೯॥ [I-೨೯]

ಮೂಱು ವೃಕ್ಷವು ಶುದ್ಧ, ಆಱು ಫಲವೂ ಸಿದ್ಧ,
ಆಱಾಱು ಕೋಟಿಯದು ಪ್ರಸಿದ್ಧದಾ ತೆನೆಗಡದ ಸೀಮೆಯಲಿ,
ತನುವಿನ ಮಂಟಪದ ಘನ ಮಸ್ತಕದಲಿಪ್ಪ
ಹೊಂಗಳಸದಾ ಮೂಱು ಮತ್ತೊಂದಾಗಿ
ಆಱಱಾಹುತಿಯಿಂದ ಆಱಾಱು ಕೋಟಿಯಿಂದತ್ತಲಾಗಿ
ಮೀಱಿನಿಂದಾ ತ್ವಮಸಿ
ಕಪಿಲಸಿದ್ಧ ಮಲ್ಲಿನಾಥನ ಸಾರಹೃದಯನ ಭಕ್ತಿ ಫಲವಿತುಂಟು. ॥೨೮೦॥

ಫಲವ ಮೀಜೆದ ಪದವು, ಪದವ ಮೀಜೆದ ಸೀಮೆ,
ಫಲಪದಕೆ ದೂರವಾಗಿಯೆ ಚಿತ್ರಿಸಿ ಕರುಣವ ಹಿಡಿದಾಚಾರ್ಯ
ಕರಣಶುದ್ಧತೆಯಿಂದ ತರುಣಿಯ ಮಸ್ತಕದ
ಸಿಂಹಾಸನಾ ಕಾಲಕರ್ಮವ ಕಳೆದು,
ಬೆಳಗು ಬೆಳಗಿನಲೀಗ ತಿಳಿದ ಬ್ರಹ್ಮಾಂಡದಾ ಸೊಮ್ಮು
ಭಕ್ತಿ ವೀರಮಾಹೇಶ್ವರವು ಆರಿಗಾಗದು ದೇವ
ಸೋಹಮೆಂಬುದಕ್ಕತ್ಯತಿಷ್ಠಕಾನನದ ಕಾನನದ
ಕಾವೋದ ಕಂಬನಿಯ ಭಾನು ತಾ ಕಪಿಲಸಿದ್ಧ ಮಲ್ಲೇಶ್ವರಾ. ॥೨೮೧॥

ರಜತಗಿರಿಯ ಮೇಲೆ ಅಜಪಯೋಗದಲಿ ಭಜಿಸುವೊಡೆ
ಅದಕೆ ಹಲವು ಬೆಟ್ಟದಾ ಶೂಲಾಕೃತಿಯ ಮೇಲೆ
ಭಾಳಲೋಚನನಿಪ್ಪ ಭಾವದಲಿ
ಗಿಜೆಗಳಾಱೇಳೆಂಟಱಾನೀಲ ಕಂಬುವಿನಲ್ಲಿ
ಬಾಲಕನು ನಿಂದೀಗ ಬಾಲ್ಯವನು ಕಳೆದು
ತನ್ನಯ ರೂಪಿನಾ ಭಾವದಾ ಬೆಳಗಿನಲಿ
ಗುರುವಿನಾ ಶುದ್ಧತೆಯ ಸಾಯುಜ್ಯವನು ಮೀಜೆ
ಸಂಬಂಧವಾತನು ತಾನೊಂದಾಗಿ
ತವಕ ತವಕವ ಕೂಡಿ
ಕಪಿಲಸಿದ್ಧ ಮಲ್ಲಿಕಾರ್ಜುನನನ ತದ್ರೂಪಾದ. ॥೨೮೨॥

ಘಟ್ಟಣೆಯ ಲೋಕದಲಿ
ಬೆಟ್ಟಗಳಾಱಾಗಿ ಇಕ್ಕೆಲದಲೀರಾಱು ಸೂರಿಯನನೂ
ಮತ್ತೆ ಪ್ರಭೆಯನು ಮಾಡಿ
ಹೊತ್ತಿಪ್ಪ ತತ್ವಕ್ಕೆ ಸೀಮೆ ತಾನೂ
ಒತ್ತೆಱನು ಮುತ್ತೆಱನು, ಮುತ್ತೆಱನು ಒತ್ತೆಱನು
ಮತ್ತೆ ತ್ವಮಸಿಯ ರೂಪು ತಾನು ವಿಚಿತ್ರ
ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ
ಭಕ್ತಿತಾತ್ಪರ್ಯದ ಪರಿಯಿಂತುಟು. ॥೨೮೩॥

ಜಲದ ಸಿಂಹಾಸನದ ಕೆಲದಲಷ್ಟಮ ಬೆಟ್ಟ
ಕುಲಗಿರಿಗಳೆರಡು ಮತ್ತಿಕ್ಕೆಲದಲಿ,
ನೆಲೆಯನಱಿಯರು ಬ್ರಹ್ಮಕುಲವನಱಿಯರು
ಯೋಗದಲಿಗೆಟ್ಟರು ಯೋಗ ಸಿದ್ಧರೆಲ್ಲ.
ಈರಾಱನೊಂದೆಂದು ಹಿಡಿದಾತ
ನಿಷ್ಕಳಯೋಗಿ ತಾ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೮೪॥ [I–೪೧೩]

ಆನಂದಲೋಕದಲಿ ತಾನೊಂದು ರೂಪಾಗಿ
ಸಾನಂದವನು ಬೆಳಸಿ ಹಲವವಱೊಳು
ಹಲವು ಬಣ್ಣದ ಹಕ್ಕಿ ಶೂನ್ಯ ನುಂಗಿದ ಬಣ್ಣ
ಕುಱುಹಿಲ್ಲ, ಯೋಗಕೆ ನೆಲೆ ಮುನ್ನಿಲ್ಲ,
ಅನುಮಿಷನು ಅನುಮಿಷನು ಎಂಬಾತನ
ಕರದ ಸಕಲ ಯೋಗವಡಗಿತ್ತು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೮೫॥ [I–೧೪೩]

ಮಾನಸದ ಯೋಗಕ್ಕೆ ಏನೊಂದು ಉಪಮೆಯ
ತಾನು ತಾನೊಂದಾಗಿ ಮಱಹು ಮಱಹನ್ನತಿಗಳೆದು
ಕುಱುಹುಯಿಲ್ಲದಿಪ್ಪುದು ನೋಡಾ ಅಯ್ಯಾ,
ನಾಮವೆಂಬ ಧೇಯದಲ್ಲಿ ಕಾಮ್ಯವೆಂಬ ಅಮೃತವನೆ ಕಱೆದು
ನಿರ್ನಾಮಂಗೆ ಅರ್ಪಿಸುವೆನು.
ಸೋಮಪ್ರಭೆಯಲ್ಲಿ ಪಂತಿ ಪಸರವಾಗದ ಮುನ್ನ
ಆ ನಿಮ್ಮನೈದುವೆ ಕಂಡಾ.
ನಾಮ ನಿರ್ನಾಮವೆಂಬ ನಿಜವನತಿಗಳೆಯದ ಮುನ್ನ
ನಾ ನಿಮ್ಮನೈದುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೨೮೬॥

ಕಾಮಿನಿಯಂಬಾಯಕನ ಕರದಲ್ಲಿ ಒಪ್ಪಿಹ
ಲೋಕಂಗಳು ಹಲವು ಕಂಡಾ, ಅವ್ವ
ಶೂಲದಾಕೃತಿಯಲ್ಲಿ ಮುನ್ನೂಱು ದಳದಲ್ಲಿ
ಮೋಹಿಸುತ್ತಿರ್ದವು ಕಂಡಾ,

ನಾಮಂನಾಮವೆಂಬುದಱೊಳಗೆ ನಿರ್ನಾಮವಾಗಿದ್ದ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೨೮೭॥

ಇಹಪರವೆಂಬ ಇದ್ದೆಸೆಯನಱಿತು ನಿದ್ದೆಸೆಯಾದನಾತ

ಗುರುವಿನ ಚರಣವಿಡಿದು.
ಇಹವೆಂದೂ ಅಱಿಯ ಪರವೆಂದೂ ಅಱಿಯ
ಭಕ್ತನ ತನುವೆ ಶಿವನಿಪ್ಪ ಆಲಯವಾಗಿ,
ಇಹಲೋಕವೆ ಪರಲೋಕ ಪರಲೋಕವೆ ಇಹಲೋಕ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಭಕ್ತಗೆ ॥೨೮೮॥

ಆದಿರುದ್ರ ಆತನ ಭೇದಿಸೇನೆಂದೆಂಬಡೆ
ವಾದಿಗಳಿಗೆ ಆಗದು ಕಂಡಾ.
ಸಾಧಾರಣ ತನುವ ಕಳೆದು ಭೇದಿಸುವ ರೀತಿ ಆಱಿ,
ಈ ಮಾಧವ ಗೀಧವನೆಂಬವರನಾದಿಬ್ರಹ್ಮವನಯರು
ಕಪಿಲಸಿದ್ಧ ಮಲ್ಲಿನಾಥದೇವ. ॥೨೮೯॥

ಹಲವು ಪರಿಯಲೆನ್ನ ದಲವ ಸಾಧಿಸೇನೆಂದಡೆ
ಬಲ್ಲಿದನಾ ನಿನಗೆ ಕಂಡಾ ಅವ್ವ,
ಕುಲವನುಳಿದೆ ದಲವನುಳಿದೆ
ಗುರುವಿನ ಬಲುಹೆ ನೆಲೆಮನೆಯಾಯಿತ್ತು.
ದಲವ ಸಾಧಿಸುವ ಇಷ್ಟ ಗುರು ಚರ ತ್ರಯದಲ್ಲಿ
ಕಪಿಲಸಿದ್ದ ಮಲ್ಲಿನಾಥನ ಕೂಡುವೆ ಅವ್ವಾ. ॥೨೯೦॥

ನೆನಹಿನ ನಲ್ಲನೆ ಮನೆಗೆ ಬಂದೆಯಾದಡೆ
ಮನೆಯಲ್ಲಿ ಗುಡಿಗಟ್ಟುವೆ[1][ನ][1]ಯ್ಯಾ.
ತೋರಣ ತೋರಣ ಮಾಮರ ಮಾಮರ
ತೋರಣಂಗಟ್ಟುವೆನಯ್ಯಾ.

೧-೧ ಯ (ಮೂ)

ಕಾಮಸಂಗವನ್ನು ಕಳೆದ ನಿಃಕಾಮ ಸಂಗಕ್ಕೆಳಸುವೆ
ಕಪಿಲಸಿದ್ಧ ಮಲ್ಲಿನಾಥನ ಕೂಡುವೆನವ್ವಾ. ॥೨೯೧॥ [-೫೫೦]

ನೋಟವೆ ಕೂಟವಾಗಿ ಕೂಟವೆ ಜೀವನವಾಗಿ
ನಿರ್ದಾಟಿಸುವ ಗಂಡನೆನಗೆ ಎಂದಪ್ಪನಯ್ಯಾ ಎಂದಪ್ಪನಯ್ಯಾ.
ಇಂದಪ್ಪನು, ಅಪ್ಪುವನು ಗುರುಕರುಣದಿಂದ
ಕಪಿಲಸಿದ್ಧ ಮಲ್ಲಿನಾಥಯ್ಯದೇವ. ॥೨೯೨॥ [I-೫೫೯]

ಮಾಮರದ ಮೇಲೆ ಹೂಗಳು ಹಲವಾಗಿ
ನಾನಾ ತುಂಬಿಗಳು ಬಂದು
ಅಯ್ಯ ಕಾಮಕ್ಕೆ ಇಚ್ಛೈಸುವಾ,
ಕ್ರೋಧಕ್ಕೆ ಇಚ್ಛೈಸುವಾ,
ಆಮಿಷಕ್ಕೆ ಇಚ್ಛೈಸುವಾ,
ತಾಮಸ ತನ್ನ ರೂಪಾಗಿ
ಈ ಸೋಮಶಿಖರದಲಿಪ್ಪ ನಾಮಾಮೃತವನುಂಡು
ತುಂಬಿಯ ತುಂಬಿಯ ತಗುಳವೆಯಿಂ ಬಪ್ಪ
ಸರದಿಯನೊಡಗೂಡುವೆ ಶಂಭುವೆ
ಕಪಿಲಸಿದ್ಧ ಮಲ್ಲಿಕಾರ್ಜುನದೇವ. ॥೨೯೩॥

ಸಂಭ್ರಮದ ಸರದಿಯೊಳು ಇಂಬಿನಲಿ ಪರಿತಪ್ಪಾಗ
ಗಂಭೀರವುಳ್ಳುದನೊಂದನೂ ಕಾಣೆ.
ಎನ್ನಬಿಡು, ತನ್ನಬಿಡು[ಎಂಬುದು]
ತನುಗುಣ ಸಂಬಂಧ.
ಎನ್ನಬಿಡು ತನ್ನ ಬಿಡು[ಎಂಬುದು]
ಕಾಯವಿಕಾರ. ದೆಸೆ ದೆಸೆವರಿದು.
ಈ ಪಸರಿಸುವ ಮನವನು ನಿಮ್ಮ ವಶಕ್ಕೆ ತಂದಿ[ರಿಸಯ್ಯ]
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೨೯೪॥ [I-೭೫೫]

ದೆಸೆದಿಕ್ಕು ವಳಯದಲಿ ಹೆಸರಿಡಬಾರದದೊಂದು
ಪಸರಿ ಪರ್ಬಿತ್ತು ನೋಡಾ ಅಯ್ಯ.
ಮೂಲವೊಂದು ಫಲ ಮೂಱು
ಲೀಲೆಯಿಂದಲಾಱಾಱು ತೋಱಿದವು.
ಬೇಱೆ ಅನ್ಯದಾ ಅವು ತೋಱಿದ್ದೊಂದರಲಿ
ಬೇಱೆ ಮಾಡಿ ಕಂಡೆನೆಂದಡೆ ತೋಱಿತ್ತು
ಮೂಲಕ್ಕೆ ಮೂಲ ಕಂಡಾ ವಿಚಿತ್ರಮೂಲ
ಕಪಿಲಸಿದ್ಧ ಮಲ್ಲೇಶ್ವರನ ಹತ್ತೆಸಾರಿದ ರೂಪು. ॥೨೯೫॥ [I–೪೮೨]

ಕಂಗಳ ಮಂಗಳಕ್ಕೊಂದು ಹಬ್ಬವುಂಟೆ?
ಶೃಂಗಾರದ ರೂಪಿಂಗೆ ಸಮಯವುಂಟೆ?
ಅಂಗವಾಱಱಲಿ ಹಿಂಗಿ ಹಿಂಗದಿಪ್ಪಾತಂಗೆ
ಭಂಗವಿನ್ನುಂಟೆ? ಶ್ರೀ [ಕಪಿಲಸಿದ್ಧ]ಮಲ್ಲಿಕಾರ್ಜುನಾ. ॥೨೯೬॥

ನೀಲಕಂಧರನೆಂಬಾತ
ಬಾಲತ್ವದಲ್ಲಿ ಭಾಮಿನಿಯೊಡಗೂಟ ಸಂದು ಸವೆದು
ಇದು ಕ್ರಿಯೆ, ಇದು ನಿಃಕ್ರಿಯೆ, ಇದು ಭಾವ, ಇದು ನಿರ್ಭಾವ,
ಇದು ಸಿದ್ಧ, ಇದು ಪ್ರಸಿದ್ಧವೆಂದು ಅಱುಪುವಾಗ
ಅಂಡಾಂಡಗಳಿಲ್ಲ, ಅಷ್ಟಮೂರ್ತಿ ಕೂಡಿದ ರುದ್ರನಿಲ್ಲ,
ಆನಂದವೆ ಒಡಲಾಗಿಪ್ಪ ಮಹಾತ್ಮನ ನಿಜವ ಕಂಡ ಬಸವಣ್ಣ
ಎನಗಱುಪಿದ ಶುದ್ಧ ನಾನು ತಾನೆಯಾದ ಕಾಣಾ.
ಅಱುಪಿದ ಗುಣದಿಂದ ಕಪಿಲಸಿದ್ಧ ಮಲ್ಲಿಕಾರ್ಜುನಾ
ಬಸವಣ್ಣನೆನ್ನ ಪರಮಾರಾಧ್ಯನು. ॥೨೯೭॥ [I–೫೪೭]

ಪಾವನವಾದೆ ನಾನು ಬಸವಣ್ಣಾ
ನಿನ್ನ ಪಾವನಮೂರ್ತಿಯ ಕಂಡು,
ಪರ್ರತತ್ವವನೆಯ್ದಿದೆ ಬಸವಣ್ಣಾ
ನಿನ್ನ ಪರಮಸೀಮೆ ಕಂಡು,
ಪದ ನಾಲ್ಕ ಮೀರಿದೆ ಬಸವಣ್ಣಾ
ನಿನ್ನ ಪರುಷಪಾದವ ಕಂಡು,

ಕಪಿಲಸಿದ್ಧ ಮಲ್ಲಿಕಾರ್ಜುನನ
ಕೂಡಿದೆ ಬಸವಣ್ಣಾ ಬಸವಣ್ಣಾ
ನೀನು ಗುರುವಾದೆಯಾಗಿ. ॥೨೯೮॥ [I–೫೭೨]

ಅಪ್ಯಾಯವನಱತು ಪರಿಣಾಮ ನೆಲೆಗೊಂಡು
ಅಱಿವಱತು ಮರಹು ನಷ್ಟವಾದವರ,
ಕುಱುಹುಗೆಟ್ಟು ಪದವ ಮೀರಿ
ಸೀಮೆಯ ದಾಂಟಿದವರ
ತಂದು ತೋಱಾ, ಅಯ್ಯ ನಿಮ್ಮ ಧರ್ಮ.
ಎನ್ನ ಭವದ ಬೇರ ಹಱಿವೊಡೆ
ತಂದು ತೋಱಾ, ಇವರ ತಂದು ತೋಱು.
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನನ
ಹತ್ತೆ ಸಾರಿಸಾ ಬಸವಣ್ಣಾ. ॥೨೯೯॥

ಹಿಂದೆ ಪರೀಕ್ಷಿಸಿ ನೋಡುವೊಡೆ
ಪರ್ಯಾಯ[೧]ದಿಂದ ಬಂದ ಅಂಗವನು ನೀ ಬಲ್ಲೆ.
ನಾ ನೊಂದ ನೋವನೂ ನೀ ಬಲ್ಲೆ.
ನಾನಂದು ಕಾಲನ ಕಮ್ಮಟಕ್ಕೆ ಗುಱಿಯಾಗಿ ಇಪ್ಪಾಗ
ನೀವು ಶೂಲರುದ್ರನು.
ನಾನು ಅಂದು ಹಲವು ಪರಿಯ ಬಹುರೂಪನಾಡುವಲ್ಲಿ
ನೀನು ವಿಚಿತ್ರವಿನೋದನೆಂಬ ಗಣೇಶ್ವರನು.
ಎನ್ನ ಆದ್ಯಂತವ ನೀ ಬಲ್ಲೆ.
ಬಲ್ಲ ಕಾರಣ ಎನ್ನ ಪಾಲಿಸಿದೆ,
ನೀ ಪಾಲಿಸಿದ ಗುಣದಿಂದ ಪಾವನನಾದೆ,
ಶುದ್ಧ ಸಿದ್ಧ ಪ್ರಸಿದ್ಧವನಱಿದೆ ಎಲೆ ಗುರುವೆ,
ಬಸವಣ್ಣ, ನೀನು ಪಾಲಿಸಿದ ಗುಣದಿಂದ ಜೀವನ್ಮುಕ್ತನಾದೆ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿ
ನಿನ್ನವರಿಗೆಯೂ ನಿನಗೆಯೂ ಯೋಗ್ಯನಾದೆ. ॥೩೦೦॥

---

೧ +ರಿಯಾಯ (ಮೂ)

ಹಿಂದೆ ಹಲವು ಯುಗಂಗಳು ತಿರುಗಿ ಬಪ್ಪಾಗ
ಅವನ್ನು ನೀ ಮಾಡಿದೆಯಲ್ಲದೆ ತಮ್ಮಾಜ್ಞೆಯಲಿ ಬಂದುದಿಲ್ಲ.
ಅಯ್ಯ, ನಿನ್ನಾಜ್ಞೆಯಲಿ ಬಂದ ಯುಗಂಗಳು
ಭವಭವದಲ್ಲಿ ಎನ್ನನೆ ಕಾಡಿದುವು,
ಸಂಸಾರವಾಗಿ ಎನ್ನನೆ ಕಾಡಿದುವು,
ಹೊನ್ನು ಹೆಣ್ಣು ಮಣ್ಣು ತ್ರಿವಿಧವಾಗಿ
ಎನ್ನನೆ ಕಾಡಿದುವು,
ಆಶಾಪಾಶಂಗಳಾಗಿ ಗುರುವೆ ಬಸವಣ್ಣ
ಅವೆಲ್ಲಾ ನಿಮ್ಮ ಅಧೀನದವು ಮಾಡಿದಡಾದವು,
ಬೇಡಾಯೆಂದಡೆ ಮಾದವು.
ಅವಕ್ಕೆ ಎನ್ನನೊಪ್ಪಿಸದೆ, ನಿನ್ನವ ನಿನ್ನವನೆನಿಸಾ
ಕಪಿಲಸಿದ್ಧ ಮಲ್ಲಿಕಾರ್ಜುನನ ತೋಱಿದ
ಗುರು ಬಸವಣ್ಣಾ. ॥೩೦೧॥

ಅತಿಮಥನವೆಂಬ ಯೋಗವೆನ್ನ ಗತಿಗೆಡಿಸಿತ್ತಯ್ಯಾ,
ಧೃತಿಗೆಟ್ಟೆ ನಾನು ಅವಱಿಂದ.
ಅತಿಶಯದ ತಾತ್ಪರ್ಯ ಗುರುಭಕ್ತಿ ಅಱಿಯದೆ
ಧೃತಿಗೆಟ್ಟೆನಯ್ಯ.
ತಾತ್ಪರ್ಯವನಱಿಯದೆ ತವಕಿಸುವ ಮನವನು
ನಿಮ್ಮ ಕಡೆಗೆ ತೆಗೆದುಕೊಂಡು
ಅತಿಶಯ ಗುರುಭಕ್ತಿಯೀಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೦೨॥

ಆಯಿತ್ತಾಯಿತು ಮನದಂತೆ ಮಂಗಳ,
ಆಯಿತ್ತಾಯಿತು ನೆನೆದಂತೆ ಕುಱುಹು,
ಆಯಿತ್ತಾಯಿತು ಸೀಮೆ ಅಳವಟ್ಟ
ಸಂಬಂಧ ಸ್ವಾನುಭಾವ ಸ್ವಯವಾದ ದೀಕ್ಷೆ
ಆಯಿತ್ತಾಯಿತು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಲ್ಲಿ
ಸಂದು ಸವದು ಒಂದಾದ ಗೀರ್ವಾಣ ಪದವು. ॥೩೦೩॥ [I-೧೫೭]

ಹೆಸರಿಡಬಾರದ ಘನತರಲಿಂಗವ ಹೆಸರಿಟ್ಟು,
ವಾಙ್ಮನಸಾಗೋಚರನಪ್ಪ ಲಿಂಗವ ವಾಕ್ಯಕ್ಕೆ ತಂದು,
ಅತ್ಯತಿಷ್ಠದ್ದಶಾಂಗುಲನೆಂಬ ಲಿಂಗವ ಚಿತ್ತಕ್ಕೆ ತಂದು,
ಹೊತ್ತಿದ್ದ ಮಾಯಾಪ್ರಪಂಚವ ಬಿಡಿಸಿದ,
ಎನ್ನ ಚಿತ್ತ ಶುದ್ಧಿಯ ಮಾಡಿದ.
ಎನ್ನ ಮನದ ಮಲತ್ರಯಂಗಳ ಹಜೆದು
ಶುದ್ಧ ತಾತ್ಪರ್ಯ ಮುಕ್ತನ ಮಾಡಿದ.
ಗುರು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕಾರಣ
ಬಸವಣ್ಣ ಧರೆಗೆ ಬಂದ. ॥೩೦೪॥ [I–೮೩೯]

ಸೀಮೆಯ ಮೀಱಿದ ಸಂಬಂಧನೆ,
ಸಂಬಂಧದಲ್ಲಿ ಸಮನಿಸದ ಸಂಯೋಗನೆ,
ಎನ್ನ ಸಲಹುವ ಗುರುಲಿಂಗ ಜಂಗಮ,
ಪಾದೋದಕ ಪ್ರಸಾದಕ್ಕೆ ಅರುಹನ ಮಾಡಿದೆ.
ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನೀ ಬಸವಣ್ಣನಾಗಿ ಬಂದು
ನಿನ್ನವರಿಗೆ ಯೋಗ್ಯವ ಮಾಡಿ ಭವವ ತಪ್ಪಿಸಿದೆ. ॥೩೦೫॥ [I–೧೩೭]

ಅಯ್ಯಾ, ಸಂಸಾರದುಪಟಳವು ಕಾಡಿತ್ತು,
ಅಯ್ಯಾ ಸಂಸಾರದುಪಟಳವು ಕಾಡಿತ್ತು, ಇನ್ನೇವೆನಿನ್ನೇವೆ.
ಕಾಮಕಿಚ್ಚೈಸಿತ್ತು ಇನ್ನೇವೆನಿನ್ನೇವೆ,
ಕ್ರೋಧಕಿಚ್ಚೈಸಿತ್ತು ಇನ್ನೇವೆನಿನ್ನೇವೆ,
ನಿಮ್ಮ ಮಚ್ಚಲೀಯದು ಇನ್ನೇವೆನಿನ್ನೇವೆ,
ಭಕ್ತಿ ತಾತ್ಪರ್ಯವ ಅಮನ್ನಣೆಯ ಮಾಡಿತ್ತು
ಶ್ರೀ ಮಲ್ಲಿಕಾರ್ಜುನಯ್ಯಾ. ॥೩೦೬॥ [I–೮೯]

ಕಾಮ ಕಾಡಿತು, ಕ್ರೋಧ ಕೊಂದಿತು,
ಆಮಿಷವೆನ್ನನೆಳೆವುತ್ತಿದೆ.
ಕರುಣಮಾಡಾ ಹರಹರ ಮಹಾದೇವಾ,

ಕರುಣ ಮಾಡಾ ಶಿವಶಿವ ಮಹಾದೇವಾ.
ಕರುಣ ಮಾಡಾ ದೆಸೆಗೆಟ್ಟ ಪಶುವಿನೊಮ್ಮೆ,
ಕರುಣ ಮಾಡಾ ವಶವಲ್ಲದ ಶಿಶುವಿಂಗೊಮ್ಮೆ.
ಕರುಣ ಮಾಡಾ ಅನ್ಯವನು ನಾನಱಿಯೆ
ನಿಮ್ಮ ಪಾದವನುರೆ ಮಚ್ಚಿದೆನು,
ಎನ್ನ ಕಪಿಲಸಿದ್ಧ ಮಲ್ಲಿನಾಥಯ್ಯ ತಂದೆ. ॥೩೦೭॥

ಅಯ್ಯಾ, ನಿಮ್ಮ ಶ್ರೀಪಾದವ ಹಱಿದು ಹತ್ತುವ
ನೆನೆವ ಮನವ ಕೆಡಿಸಲೆಂದು
ಮೋಹದ ಗಾಳಿ ಕೈಬೀಸಲೊಡನೆ
ಕೋಪದ ಕಿಚ್ಚು ಹೊತ್ತಿ ಬೇವೆನಯ್ಯಾ.
ಅಯ್ಯಾ, ನಿಮ್ಮ ನೆನೆವ ಮನವ ಕಾಡುವ ವಿಧಿಯ ಕೊಂದು
ನೆಲಸೆನ್ನ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರದೇವಾ. ॥೩೦೮॥

ಕಾಮಸಂಗವ ಕಳೆದು, ಹೇಮದಿಚ್ಛೆಯ ತೊಱೆದು,
ನಿಮ್ಮ ನಾಮವೆ ನೆಲೆಯಾಗಿ ಇಪ್ಪವರ ತೋಱಯ್ಯ.
ನಿಮ್ಮ ಧರ್ಮ, ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಅವರ ಪಾದವ ತೋಱಿಸಿ ಎನ್ನ ಬದುಕಿಸಾ. ॥೩೦೯॥

ಸಂಸಾರವೆಂಬ ವಿಪರೀತ ರೂಪು ಕಾಡಿಹಿತಯ್ಯ.
ಎನ್ನ ಭವಭವದಲ್ಲಿ ಕಾರ್ಪಣ್ಯದಿಂದ ನೆನೆಯಲಱಿಯದೆ
ಕಾಮುಕನಾಗಿ ಕರ್ಮಕ್ಕೊಳಗಾದೆನಯ್ಯಾ.
ಕಪಿಲಸಿದ್ಧ ಮಲ್ಲಯ್ಯನೆಂಬ ಗುರುವಿನ ಕರುಣವಿಡಿದು
ಇವ ಕಳೆದುಳಿದೆನು. ॥೩೧೦॥

ಶ್ರೀ ಗುರುಮಹಾತ್ಮೆ:

ಕಾಲಜ್ಞಾನಿ ಕರ್ಮದೂರ ನಿತ್ಯತೃಪ್ತ
ನಿಮ್ಮ ಭೇದಿಸುವರಾರೆಲೆ ಅಯ್ಯಾ.
ಲೋಕ ಲೌಕಿಕಿಗಳ ಪಾಪವ ಕಳೆಯಲ್ಕೆಂದು

ಏಕೋರೂಪನಾಗಿ ಬಂದೆಯಯ್ಯಾ.
ನಿಮ್ಮ ಪಾದಂಗಳು ಲಿಂಗವಾಗಿ
ನಿಮ್ಮ ಕರಂಗಳು ಗುರುವಾಗಿ
ನಿಮ್ಮ ಉರುತರ ಜಿಹ್ವೆ ಜಂಗಮವಾಗಿ ಬಂದೆಯಯ್ಯಾ.
ನೀನು ಶಿಷ್ಯ ಕಾರಣ ಪರಶಿವಮೂರ್ತಿಯಾದುದನು
ನಾನಿಂದು ಕಂಡೆ ಕಾಣಾ, ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೩೧೧॥ [I–೩೪೮]

ಗುರುವೆ, ನಿಗಮಕ್ಕಭೇದ್ಯನೆ,
ಅಕ್ಷರ ಮೂಱಱ ರೂಪನೆ,
ಅಕ್ಷರ ಎರಡಱ ನಿತ್ಯನೆ,
ಅಕ್ಷರ ನಾಲ್ಕಕ್ಕೆ ಸಿಕ್ಕದನೆ,
ಅಕ್ಷರ ಐದಕ್ಕಿಂದತ್ತಲಾದವನೆ,
ಅಕ್ಷರ ಏಳ ಮೀಱಿದವನೆ,
ಅಕ್ಷರವಾಱ ನೀ ಜಱಿದವನೆ,
ಅಕ್ಷರವಾಱಱ ರೂಪನೆ,
ಆರಕ್ಷಕ್ಕೆ ಅನಾಮಯನೆ,
ಅಕ್ಷರವೆಂಟಱ ರೂಪನೆ,
ಹದಿನಾಱಕ್ಷರಕ್ಕೆ ಸಂಪೂರ್ಣನೆ,
ಇವು ಮೊದಲಾದ ಅಕ್ಷರ ಹಲವನು
ಏಕವ ಮಾಡಿ ತೋಱಬಲ್ಲ ರೂಪನೆ,
ಆನಂದಮಯನ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ತೋಱಿದ ಪರಮಗುರುವೆ. ॥೩೧೨॥

ಬ್ರಹ್ಮಾಂಡಂಗಳಿಂದತ್ತಲಾದ ಆದ್ಯಕ್ಷರದ ಭೇದವಂ ಭೇದಿಸಿ,
ಸಾದಾಖ್ಯ ತತ್ವತನುವನತಿಗಳೆದು,
ಶುದ್ಧ ಸಿದ್ಧ ಪ್ರಸಿದ್ಧ ಪಂಚಮಹಾಬ್ರಹ್ಮಕ್ಕೆ ಸೊಮ್ಮಾದಾತ ಗುರು.
ವರ್ಣಂಗಳೆಲ್ಲವನೂ ದಾಹಕವ ಮಾಡಿ
ತನ್ನ ವರ್ಣವ ಮಾಡಬಲ್ಲಾತ ಗುರು.
ಐವತ್ತೆರಡಕ್ಷರದ ಆನಂದಸ್ಥಾನವ ಬಲ್ಲಾತ ಗುರು.

ಇಪ್ಪತ್ತೈದಕ್ಷರದ ಹತ್ತೆ ಪೊದ್ದದಾತ ಗುರು.
ಮೂವತ್ತೆರಡಕ್ಷರದ ಮಾಯ ಬಲ್ಲಾತ ಗುರು.
ಕಾರಣ ತನುವ ಮಱೆದು ಕಾಲಜ್ಞಾನವಾದಾತ ಗುರು.
ಇಂತಪ್ಪಾತನೀಗ ಪರಮಗುರು.
ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಶಿಷ್ಯ ಕಾರಣ ಪರಶಿವಮೂರ್ತಿಯಾದಿರಿ. ॥೩೧೩॥

ಚರಣ ಲಿಂಗವಾಗಿ, ಕರ ಜಿಹ್ವೆಯಾಗಿ,
ಮಸ್ತಕದಲಿ ಸಕಲಬ್ರಹ್ಮಾಂಡಗಳ ವ್ಯಾಪ್ತಿಯನು
ಅಕ್ಷರವೆರಡಱಲ್ಲಿ ಆಂದೋಳವಂ ಮಾಡಿ
ಹರಿಯಲೀಯದೆ ಹದುಳಮಾಡಿದಾತ ಗುರು.
ಎನ್ನ ಶಬ್ದ ಸ್ಪರ್ಶ ರೂಪ ರಸ ಗಂಧ
ಧಾರಣ ಧ್ಯಾನ ಮೌನ ಸಮಾಧಿ ಸನ್ನಿಹಿತ ಗುರು.
ದೀಕ್ಷೆ ಶಿಕ್ಷೆ ಸ್ವಾನುಭಾವ ಸಂಪನ್ನತೆಯುಳ್ಳಾತ ಗುರು.
ಆದ್ಯಂತದಲ್ಲಿ ಸಹಸ್ರಕಮಲದೊಳಗೆ ಒಪ್ಪಿಪ್ಪ
ಕಂಜಕರ್ಣಿಕೆಯ ಮಸ್ತಕದಲ್ಲಿ ಒಪ್ಪಿಪ್ಪ
ಅಕ್ಷರದ್ವಯದ ಆಂದೋಳವನುಳ್ಳಾತ ಗುರು.
ಅನಾಮಯ ಸ್ಥಾನದಲ್ಲಿ ಬಹುದಳದ ಕಮಲದೊಳಗೆ ಒಪ್ಪಿಪ್ಪ
ಹಮ್ಮೆಂಬ ಬಿಂದುವಿನ
ಆನಂದ ಮಧ್ಯಸ್ಥಾನದ ಶುದ್ಧ ಸಿಂಹಾಸನವನಿಕ್ಕಿ
ಅದೆ ಮನೆಯೊಳಗಿರಲುಳ್ಳಾತೆ ಗುರು.
ನಿತ್ಯ ನಿರಂಜನರೂಪಿ ತದ್ರೂಪಾಗಿ
ಶಕ್ತಿಪಂಚಕದ ಆಜ್ಞೆಯ ಹೊದ್ದದಿದ್ದಾತ ಗುರು.
ಅನುಮಿಷ ಸ್ಥಾನದಲ್ಲಿಪ್ಪ ಶಕ್ತಿತ್ರಯದ
ಕ್ರಿಯಾಕಾರವ ನಡೆಸುವಾತ ಗುರು.
ತನು ಗುಣ ಪ್ರಾಪಂಚಿಕವನತಿಗಳೆದು,
ಸೀಮೆಯ ಮೀಱಿದ ಸಂಬಂಧಿ ಗುರು.
ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಾ
ಪ್ರಮಾಣಿಲ್ಲದ ಪರಮಗುರುವೆ. ॥೩೧೪॥ [I–೪೦೪]

ಅಯ್ಯಾ, ನೀನು ಅನಾಹತ ಲೋಕದಲ್ಲಿ ಪ್ರವೇಶಿಸುವಾಗ
ಅಕ್ಷರವೆರಡಱ ತದ್ರೂಪಾಗಿದ್ದೆ.
ಅಯ್ಯಾ, ನೀನನಾದಿ ಬ್ರಹ್ಮವನಱಿವಾಗ
ಶಕ್ತಿತ್ರಯದ ಶಾಖೆಯಾಗಿದ್ದೆ.
ಅಯ್ಯಾ, ನೀನು ಸಕಳದಲಿ ನಿಷ್ಕಳದಲ್ಲಿ
ಸ್ವಾನುಭಾವ ಸಂಬಂಧದಲ್ಲಿ
ಅಕ್ಷರವೆರಡರ ಆಂದೋಳದಲ್ಲಿ ಪ್ರವೇಶಿಸುವಾಗ
ಶುದ್ಧನಾಗಿದ್ದನಾಗಿ, ಪ್ರಸಿದ್ಧ ನೀನಾಗಿ
ಪಂಚ ಮಹಾವಾಕ್ಯವೆ ನಿನ್ನ ಮನೆಯಾಗಿ,
ಐ ಆ ಏ ಯೆಂಬ ಅಕ್ಷರವೆ ನಿನ್ನ ರೂಪಾಗಿ,
ಆನಂದವೆ ನಿನ್ನಂಗವಾಗಿ
ಅಕ್ಷರದ್ವಯವೆ ನಿನ್ನ ಮುಖವಾಗಿ
ಪರಾತ್ಪರ ರೂಪವೆ ನಿನ್ನವಯವಂಗಳಾಗಿ ಇಪ್ಪಿಯಯ್ಯ.
ನೀನು ನಿತ್ಯಮಂಗಳರೂಪನಾಗಿ
೧[ಸ್ವ]೧ತಂತ್ರ ಪರಮಸೀಮೆಯ ಮೀಱಿಪ್ಪಾತ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಏಕತ್ರಯವಾದ ಗುರು. ॥೩೧೫॥ [I–೧೭೯]

ಮೂಱು ಲಿಂಗಕ್ಕೆ ಮೂಲಮಂತ್ರವಾದಾತ ಗುರು,
ಮೂಱು ವಿದ್ಯಕ್ಕೆ ವಿದ್ಯರೂಪಾದಾತ ಗುರು,
ಹೊದ್ದಿದ ಪ್ರಪಂಚ ಅತಿಗಳೆದು ರೂಪಿ ಅಪರೂಪಾದಾತ ಗುರು,
ಲೋಕತ್ರಯಕ್ಕೆ ಕಪಿಲಸಿದ್ಧ ಮಲ್ಲಿನಾಥಯ್ಯ ಗುರು. ॥೩೧೬॥ [I–೧೨೭]

ಸಕಲ ನಿಷ್ಕಳದಲ್ಲಿ, ಬ್ರಹ್ಮಾಂಡ ತತ್ವದಲಿ,
ಕರ್ಮದ ಸೊಮ್ಮಿನ ಸೀಮೆಯನತಿಗಳೆದು
ಆದ ಲಿಂಗವೆಂದು ತೋಱಬಲ್ಲಾತ ಗುರು.
ತನುಗುಣ ಸಂಬಂಧವ ತಾನೆಯೆಂದು
ಹಾರಲೀಯದೆ ನಿಶ್ಚಯವ ಮಾಡಿ,

೧–೧ ಸ್ವಾ (ಮೂ)

ತಾತ್ಪರ್ಯ ಕಳೆಯನಿರಿಸಿ,
ಸಕಲದಲ್ಲಿ ನಿಷ್ಕಳದಲ್ಲಿ
ರೂಪಿನಲ್ಲಿ ಅರೂಪಿನಲ್ಲಿ
ಭಾವದಲ್ಲಿ ನಿರ್ಭಾವದಲ್ಲಿ
ಅವೆ ಅವಾಗಿ ತೋಱಬಲ್ಲಾತ ಗುರು.
ಈ ಪರಿಯಲೆ ತೋಱ
ಎನ್ನ ಭವವ ತಪ್ಪಿಸಿದ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆನ್ನ ಪರಮಗುರು. ॥೩೧೭॥ [I–೨೬]

ಗುರುವಾಗಿ ಬಂದೆನಗೆ ದೀಕ್ಷೆಯ ಮಾಡಿದಿರಿ,
ಲಿಂಗವಾಗಿ ಬಂದೆನ್ನ ಮನದ ಮಲಿನವ ಕಳೆದಿರಿ,
ಜಂಗಮವಾಗಿ ಬಂದೆನ್ನ ಪ್ರಾಪಂಚಿಕ ತನುವ ಕಳೆದು
ಪರಮಸೀಮೆಯ ಮಾಡಿದಿರಿಂತಿವೆಲ್ಲವು
ಬಸವಣ್ಣನಾಗಿ ಎನಗೆ ಪ್ರಸಾದವ ಸಲಹಿದ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಎನಗತಿಶಯವೇನೂಯಿಲ್ಲ. ॥೩೧೮॥ [I–೧೩೮]

ಲಿಂಗಮಹಾತ್ಮೆ :

ಅಯ್ಯಾ, ಬ್ರಹ್ಮದಲ್ಲಿ ಅಯ್ಯಾ ನೀನು
ಅತಿಶಯ ಜ್ಯೋತಿರ್ಮಯನು.
ಆನಂದ ಸ್ಥಾನದಲ್ಲಿ ಅಯ್ಯಾ ನೀನು
ಅತಿಶಯ ನಿತ್ಯಮಯನು.
ಬಾಹ್ಯಾಭ್ಯಂತರದಲ್ಲಿ ಪರಿಪೂರ್ಣನು.
ನಿನ್ನಾಧಿಕ್ಯವನಱಿಯಲ್ಕೆ ನಿಗಮಕ್ಕಭೇದ್ಯ
ಗುರುವಿನ ಕರುಣದಿಂದ ಎನ್ನ ಕರಸ್ಥಳದಲ್ಲಿ ಸಿಕ್ಕಿ ಒಳಗಾದೆ
ಶಿವನೆ ಮಹಾಲಿಂಗ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೧೯॥

ಮಹಾವಿಂಧ್ಯಪರ್ವತದಲ್ಲಿ
ಜ್ಯೋತಿರ್ಮಯವೆಂಬ ಪ್ರಜ್ವಲ ಸ್ಫಟಿಕದಲ್ಲಿ
ಒಪ್ಪಿ ತೋಱುವ ಜ್ಯೋತಿರ್ಮಯ ಲಿಂಗವೆ ನೀನು,

ಸೂಕ್ಷ್ಮನೆ ನೀನು
ಉರುತರ ಸಕಲ ಬ್ರಹ್ಮಾಂಡಗಳೆಲ್ಲವೂ
ನಿನ್ನ ರೋಮಕೂಪದ ಕೊನೆಯ ಮೊನೆಯ ಮೇಲೆ.
ಸಕಲ ವ್ಯಾಪ್ತಿಯನಡಗಿಪ್ಪಂಥ
ಬ್ರಹ್ಮಾಂಡಗಳನುದ್ಧರಿಸಿಪ್ಪಿ.
ನಿನ್ನ ಅನಂತ ವೇದಂಗಳೆಲ್ಲವೂ ನಿನ್ನೊಳಗೆ,
ನೀನು ಸರ್ವವ್ಯಾಪ್ತಿಗೆ [೧]ಒಳಗಾದುದಿಲ್ಲ.
ನಿನ್ನ ಮೀಱಿದ ಆಧಿಕ್ಯವೊಂದೂ ಇಲ್ಲ.
ಘನತರ ಲಿಂಗವೆ,
ಗುರುಕರುಣದಿಂದ ಸೂಕ್ಷ್ಮವಾದೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೩೨೦॥[I–೬೫೮]

ಜನಿತವಿಲ್ಲ ನಿನಗೆ ನಿಜ ಸಯವಾದೆ,
ಸ್ಥೂಲ ಸೂಕ್ಷ್ಮ ಮಧ್ಯಮಾಧಮದಲ್ಲಿ ನಿತ್ಯನಾದೆ.
ಅಯ್ಯಾ, ನಿನ್ನ ಘನವ ನೋಡಲ್ಕೆ ನಿಗಮಕ್ಕಭೇದ್ಯ,
ಗುರುವಿನ ಕರುಣದಿಂದ ಎನ್ನ ಕರಕ್ಕೆ ಬಂದು ಚುಳುಕಾದೆಯಯ್ಯ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೨೧॥[I–೪೧೦]

ಸಂಗಸುಖದಲ್ಲಿ ಸಂಗಿ ಆಗಿಯೂ ಅಲ್ಲದಿಪ್ಪೆ,
ನಿಸ್ಸಂಗಸುಖದಲ್ಲಿ ಸುಖಿಯೆಂದೆಂಬೆನೆ?
ಸಂಗಕ್ಕೆ ಕಾರಣವಪ್ಪಿ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿನ್ನಂಗ ಅನಂಗ. ॥೩೨೨॥[I–೭೫೨]

ಸೇವ್ಯನಾಗಿ ಸಯವಾದೆ,
ಸಂಗಿಯಾಗಿ ನಿಸ್ಸಂಗಿಯಾದೆ,
ಆನಂದವಾಗಿ ಅನಾಮಯನಾದೆ,
ಸರ್ವದೊಳಗೂ ಆಡಿ ಸಾದಾಖ್ಯ ತತ್ವವ ಮೀಱಿದೆ.

---

೧ + ನೀನು (ಮೂ)

ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿಜಸ್ವರೂಪನಱುಹಿ ಎನಗೆ ಚುಳುಕಾದೆ. ॥೩೨೩॥[I–೮೦೧]

ಭೇದಿಸಬಾರದಿಪ್ಪ ಅಭೇದ್ಯ ಶಿವನೆ,
ನಿನ್ನ ಭೇದಿಸಿ ತಂದು ಕೊಟ್ಟ ಎನ್ನ ಗುರು.
ಇನ್ನು ನಾ ನಿನ್ನ ಬಿಡುವೆನೆ? ಬಿಡೆ ಬಿಡೆ.
ಮಚ್ಚಿದೆ ಪಾದೋದಕವ, ನಚ್ಚಿದೆ ಪ್ರಸಾದವ
ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೨೪॥[I–೧೨೯]

ಬಾಲೇರಿನಿದ ಮಚ್ಚಿದಂತೆ ನಾ ನಿನ್ನ ಮಚ್ಚಿ ಬಿಡುವೆನೆ?
ಮಚ್ಚಿದ ಮನಕ್ಕೆ ಮಹೋತ್ಸವವ
ನೀ ಕಂಡಾ, ಎಲೆ ಅಯ್ಯಾ.
ಮಚ್ಚಿದ ಮನಕ್ಕೆ ತುತ್ಸ ಬಾರದಂತೆ
ಮಾಡು ಕಂಡಾ, ಎಲೆ ಅಯ್ಯಾ.
ಅಯ್ಯಾ ನಿನ್ನ ಧರ್ಮ.
ಸರ್ವರೆಲ್ಲರೂ ಆ ನಿನ್ನವನೆಂದೆಂಬರು.
ಎನ್ನ ಮನಸಾ ವಾಚ ಕಾಯಿಕದಲ್ಲಿ
ನಿನ್ನನಲ್ಲದೆ ಅನ್ಯವನಱಿಯೆ.
"ಭೃತ್ಯಾಪರಾಧ ಸ್ವಾಮಿನೋ ದಂಡ"ವೆಂದುಂಟು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿನ್ನ ಬಲ್ಲಂತೆ ಸಲಹು. ॥೩೨೫॥[I–೬೦೪]

ಸಂಗವ ಮಾಡುವೆ ನಿನ್ನವರಲ್ಲಿ,
ಸ್ನೇಹವ ಮಾಡುವೆ ನಿನ್ನವರಲ್ಲಿ,
ನೀನಲ್ಲದನ್ಯಕ್ಕೆ ಒಡಂಬಡದೆನ್ನ ಮನಸ್ಸು
ನೀನಲ್ಲದನ್ಯ ಸಂಗವ ಮಾಡಿದಡೆ
ನರಕ ತಪ್ಪದೈ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೨೬॥[I–೭೫೧]

ಎನ್ನ ಪಾತಕ ಜನ್ಮವ ಕಳೆದಿರಿ,
ಎನ್ನ ಭೂತಪ್ರಾಣವ ಕಳೆದು
ಲಿಂಗಪ್ರಾಣಿಯ ಮಾಡಿದಿರಿ,
ಎನ್ನ ನಿಮ್ಮ ಶರಣರ ಸಂಗಕ್ಕೆ ಸಲಿಸಿದಿರಿ.
ಭವಿಯ ಮನೆಯಲ್ಲಿ
ಅನ್ನ ಸುರಾಪಾನವೆಂದೆಂಬೆ,
ಎನ್ನದಿದ್ದಡೆ ನಾಯಕ ನರಕ
ನಿನ್ನಾಣೆ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೨೭॥ [I–೨೩೯]

ಸಮನಿಸದಯ್ಯಾ, ಭವಿಸಂಗ ಭಕ್ತಂಗೆ.
ಸಮನಿಸದಯ್ಯಾ, ಲಿಂಗಪ್ರಾಣಿಗೆ ಅನರ್ಪಿತ.
ಸಮನಿಸದಯ್ಯಾ, ಪ್ರಾಣಲಿಂಗ ಸಂಬಂಧಿಗೆ ಬಹುಲಿಂಗ ಪ್ರಸಾದ.
ಇಂತೀ ಮೂಱಕ್ಕಳುಕದಿದ್ದೆನಾದೊಡೆ
ನಾಯಕ ನರಕದಲ್ಲಿಕ್ಕು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೨೮॥ [I–೭೭೨]

ಪ್ರಾಣಲಿಂಗ ಸಂಬಂಧಿಯಾದ ಬಳಿಕ
ಪರಸ್ತ್ರೀ ಪರದ್ರವ್ಯವ ಮುಟ್ಟದಿರಬೇಕು.
ಅಂಗಲಿಂಗ ಸಂಬಂಧಿಯಾದ ಬಳಿಕ
ಸ್ತ್ರೀಸಂಗವ ತೊಱೆಯಲೇ ಬೇಕು.
ಪ್ರಸಾದಲಿಂಗ ಸಂಬಂಧವಾದ ಬಳಿಕ
ಆಪ್ಯಾಯನವಱೆಯಲೇ ಬೇಕು.
ಸರ್ವಾಂಗಲಿಂಗ ಸಮ್ಮತ ಸಂಬಂಧಿಯಾದ ಬಳಿಕ ಸರ್ವವೂ ತಾವಾಗಿರಬೇಕು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಇಂತಪ್ಪವರು ಸುಲಭರೆ? ಎತ್ತಾನಕೊಬ್ಬರಲ್ಲದೆ. ॥೩೨೯॥

ನೀಲಕಂಧರ ಗಿರಿಯ ಮೇಲಿಪ್ಪನಿವನಲ್ಲ,
ಆಲಸ್ಯವಿಲ್ಲದೆ ಅತಿಶಯದಲಿ
ಬಾಲಕನ ಕನಸಿನ ಲೀಲೆ ಆಯಿತು,
ಹೇಳಲ್ಕೆ ಆರಿಗೆಯೂ ಉಪಮೆಯಿಲ್ಲ.

ಭಾಳನಯನದ ಮೇಲೆ ಬಾಲೆಯ ಸಂಯೋಗ
ಈರಾಱು ಬೆಳಕವಱ ಕೆಲದಲಿ
ಸ್ಥೂಲ ಸೂಕ್ಷ್ಮದಲಿ ಮೇಲಪ್ಪ ಘನವದಱ
ಆಱೇಳಱ ಘಟಿಸುವ ಲೋಕಕ್ಕೆ
ದಿಕ್ಕರಿಗಳೆಂಟಾಗಿ ಬೆಟ್ಟವೆಂಟಾಗಿಪ್ಪ
ಘನತರದಲಿ ನಿಜವ ಬಲ್ಲವರಾರು?
ಹೊಲಬನಱಿವವರಾರು?
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ನಿಜಭಕ್ತಿಯ. ॥೩೩೦॥ [I–೫೪೬]

ಪರಿಯ ಬಲ್ಲವರಾರು? ಹವಣನಱಿವವರಾರು?
ತನುತ್ರಯವನತಿಗಳೆದು
ಸತ್ಯದಾ ತೆಱನ ಬಲ್ಲವರಾರು?
ನಿಜವನಱಿದವರಾರು?
ನಿಷ್ಕಳದಲಾನಂದ ಸಂಯೋಗದಾ
ಪೂರತೆಯ ನಾಳದಲಿ ಆನಂದ ಮಣಿಗಟ್ಟಿ
ಆನು ನೀನಾದೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೩೧॥

ಮಂಗಳದ ಸಂಗಕ್ಕೆ ಅಂಗಕ್ಕೆ ಮಚ್ಚಿದುದ
ಹಿಂಗಿ ಹೇಳಲ್ಕದಕೆ ಜಿಹ್ವೆವುಂಟೆ?
ಈರಾಱು ಸುಖಗಳನು ಮೇಲಾದ ಮಧುರವನು
ಓರಂತೆ ಉಂಡುದಕೆ ಪ್ರಳಯವುಂಟೆ?
ನಿಗಮಂಗಳಱಿಯದಿಹ ಅಗಣಿತದ ಮೆಟ್ಟದಾ
ಶ್ರುತಿಯ ತಪ್ಪಲಲಿಪ್ಪ ನಿತ್ಯ ತೃಪ್ತಾ,
ಮೂಱಾಱು ಆಱಾರು ತೋಱಿಪ್ಪ ನಿಶ್ಚಯದ
ಆಱಾಱಱಿಂದ ಮೇಲೆ ಸಂಯೋಗವು,
ಸ್ವಾನುಭಾವದ ದೀಕ್ಷೆ ತಾವು ತನಗಳವಟ್ಟು
ಹೇಳದೆ ಹೋದ ನಾಯಿದ್ದ ಮನೆಗೆ.
ಮೂಱನೂ ಮುಟ್ಟದೆ ಆಱನೂ ತಟ್ಟದೆ

ಮೀಱಿ ಉರವಣಿಸಿದನು ಸಾಯುಜ್ಯದಾ
ಪದಫಲವನತಿಗಳೆದು ನಿಗಮಭೇದ್ಯನ ಕಂಡ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೩೨॥[I-೬೩೪]

ತತ್ವ ಸಂಗದಿಂದತ್ತಲಾಗಿಹ ಬ್ರಹ್ಮ
ಸುತ್ತಿಪ್ಪ ಕ್ರೀ ತಾವು ಭಕ್ತಿಯಾಗಿ,
ತ್ವಮಸಿ ಸಂಗಮದಂಗ ಪ್ರಾಸಾದ ತದ್ರೂಪು
ಈಷಣತ್ರಯಗಳನು ಮೀಱಿಪ್ಪುದು.
ಬಂದ ಬಟ್ಟೆಯ ಬಾರ, ಉಂಡ ಊಟವನುಣ್ಣ,
ಹಿಂದು ಮುಂದಱಿದಾತ ಸಂದಿಸಿ
ಶಿವಭಕ್ತಿಯನಱಿದಾತ ಬಂದ
ಕಪಿಲಸಿದ್ಧ ಮಲ್ಲಿಕಾರ್ಜುನನಿಪ್ಪೆಡೆಗೆ. ॥೩೩೩॥[I-೪೪೦]

ಕಾಲಕರ್ಣಿಕೆಯನ್ನು ಮೀಱಿಪ್ಪನೆಮ್ಮ ನಲ್ಲ
ತೋಱಿ ಬಿಡನಾಕೆಯ ಸಂಗಂಗಳಾ.
ಕ್ರೀಗಳನು ನೀಕರಿಸಿ ನಿಃಕ್ರಿಯೆ ನೆಲೆಗೊಳಿಸಿ,
ಆಱು ವರ್ಗದಲಾತನೈಕ್ಯನಾಗಿ,
ಸಂಬಂಧ ಸಮನಿಸಿಯು ಕರ್ಮವನು ಅತಿಗಳೆದು
ಸೊಮ್ಮಾತನಿಹತತಾ ಪರತತ್ವದಾ ನಿಃಕರ್ಮಿ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ
ಕರ್ಮದೊಳಗೆ ತಾ ಕರ್ಮಿಯಾದ. ॥೩೩೪॥

ಎಸಳ ಮಂಟಪದಲ್ಲಿ ಕುಸುಮನಾಳದ ಭೇದ
ಶಶಿಧರನ ಮಸ್ತಕದ ಧವಳಗಿರಿಯ
ಒಸರುವ ಆನಂದ ವಿಪರೀತ ಬಾಷ್ಪುವಿನ
ಎಸೆದಿರ್ದುದೈ ಸದ್ಭಕ್ತಿ ಕ್ರಿಯಾ
ಶಶಿಧರನು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ವಶದಲಿಪ್ಪಂಗಲ್ಲದೆ ಕಾಣಲರಿದು. ॥೩೩೫॥[I-೨೩೯]

ಮೂಱಾಱಿಂ ಮುನ್ನ ತೋಱಿಪ್ಪ ಸದ್ಭಕ್ತಿ
ಮೀಱಿಪ್ಪ ಕ್ರೀ ಅದಕೆ ಶಾಖೆ ಮೂಱು,
ಪಲ್ಲ[ವ]ವು ಹಲವಾಗಿ ಪಲ್ಲೈಪ ಫಲವಾಱು
ಸಲ್ಲದದು ಕರ್ಮಿಗಳ ಯೋಗಕ್ಕದು.
ಸ್ವಾತಂತ್ರ ಸೀಮೆಯನು
ತೋಱಿಪ್ಪ ತತ್ವದ ಸೀಮೆ ತಾನು,
ಅನಾಹತನು ಸ್ವಾತಂತ್ರ ಸೀಮ
ಕಪಿಲಸಿದ್ಧ ಮಲ್ಲಿಕಾರ್ಜುನನು
ಸ್ವಾತಂತ್ರ ಸದ್ಭಕ್ತಿಗೊಲಿವು ತಾನು. ॥೩೩೬॥[I–೬೮೧]

ಅಯ್ಯಾ, ನಿಮ್ಮಾಜ್ಞೆಯಲ್ಲಿಪ್ಪುದು ಕಂಡಾ
ಸಕಲ ಲೋಕಂಗಳು.
ಅಯ್ಯಾ, ನಿಮ್ಮ ಇಚ್ಛಾಮಾತ್ರದಲ್ಲಿಪ್ಪುದು ಕಂಡಾ
ಕೋಟಿ ಹರಿ ವಿರಿಂಚಾದಿಗಳು.
ಅಯ್ಯಾ, ನಿನ್ನ ಮೀಱಿದಾಧಿಕ್ಯವೊಂದೂ ಇಲ್ಲ.
ಎಲೆ ಅಯ್ಯಾ, ಸಮಸ್ತ ಬ್ರಹ್ಮಾಂಡಂಗಳು
ನಿಮ್ಮ ರೋಮಕೂಪದಲ್ಲಿಪ್ಪವು.
ಉರುತರ ಶಿವನೆ ನಿಮ್ಮನಱಿಯದೆ
ಏಕೆ ಕೆಡುವರಯ್ಯಾ ನರರು?
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೩೭॥[I–೭೬]

ಇಂತಪ್ಪ ಘನತರ ಲಿಂಗವ
ಕರದಲ್ಲಿ ಬಿಜಯಂಗೈಸಿಕೊಂಡು
ಗುರು ತೋಱಿದ ಸದ್ಭಕ್ತಿ ಕ್ರೀಯಲ್ಲಿರದೆ,
ಪಾದೋದಕ ಪ್ರಸಾದವ ಕೊಳದೆ,
ಯೋಗವೆಂದು ಅದ್ವೈತವೆಂದು
ಭಂಡನೆ ಬಳಸುತ್ತಿಪ್ಪ ಮಿಟ್ಟೆಯ ಭಂಡರನೇನೆಂಬೆನೈ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೩೮॥[I–೧೮೮]

ಗುರು ತೋಱಿದನು ಲಿಂಗವ, ಜಂಗಮವ.
ಪಾದೋದಕ, ಪ್ರಸಾದವ ಕೊಳ ಹೇಳಿದನಲ್ಲದೆ,
ಇವ ತೊಱೆಯ ಹೇಳಿದನೆ?
ಅಹಮ್ಮೆಂದು ಪ್ರಸಾದದ್ರೋಹಿಗಳಾಗಿ,
ನಾನೆಯೆಂದು, ಲಿಂಗದ್ರೋಹಿಗಳಾಗಿ,
ವಿಭೂತಿ ರುದ್ರಾಕ್ಷಿ ಸಾಕ್ಷಾತ ಶಿವನೆಂದೆನಲಱಿಯದೆ,
ಅವರಾಚರಣೆಯ ನೋಡಿ ನಿಂದಿಸಿ ಜಂಗಮದ್ರೋಹಿಗಳಾಗ ಹೇಳಿದನೆ?
ಜಂಗಮದಲ್ಲಿ ಜಾತಿಯನ್ನು
ಪ್ರಸಾದದಲ್ಲಿ ರುಚಿಯ
ಲಿಂಗದಲ್ಲಿ ಮೃದುವನಱಸುವ ಸಮಯದಲ್ಲಿ
ವಿಶ್ವಾಸವಿಲದ ಮಿಟ್ಟೆಯ ಭಂಡರ ತೋಱದಿರಯ್ಯಾ ಎನಗೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೩೯॥[I–೩೭೮]

ಆಚಾರ ಪ್ರಾಣವಾದ ಬಳಿಕ
ಅನಾಹತವಿದೆಂದಱಿಯಬೇಕು.
ಅನಾಹತವಿದೆಂದಱಿದ ಬಳಿಕ
ಶುದ್ಧ ಸಿದ್ಧ ಪ್ರಸಿದ್ಧವಿದೆಂದಱಿಯಬೇಕು.
ಶುದ್ಧ ಸಿದ್ಧ ಪ್ರಸಿದ್ಧವಿದೆಂದಱಿದ ಬಳಿಕ
ಸರ್ವವೂ ತಾನೆಯಾಗಿರಬೇಕು.
ಸರ್ವವೂ ತಾನೆಯಾದ ಬಳಿಕ
ಅಪ್ಪುದೊಂದಱಿದುಂಟೆ?
ಕಪಿಲಸಿದ್ಧ ಮಲ್ಲಿಕಾರ್ಜುನ ಆತನು ಸ್ವಾತಂತ್ರ್ಯನಲ್ಲದೆ. ॥೩೪೦॥

ಅನ್ಯೋನ್ಯವೆಂಬುದು ತನ್ನತ್ತಲಿಲ್ಲ
ಅನ್ಯ ಬಂದಡೆ ಅಯ್ಯನತ್ತಲೆ,
ಮುಖವ ಬೆರಸುವ ಭೇದ
ಅಯ್ಯನ ಮುಖವೆ ಮುಖವಾದನೊ.
ಇಂದ್ರಿಯಂಗಳೈದು ಆತನ ಇಂಬಪ್ಪ
ಮುಖವಾಗಿ ಬಂದ ಪ್ರಸಾದವ ಕೊಂಬ

ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಲ್ಲಿ
ಗುರುಭಕ್ತ ಪ್ರಸಾದಿಯ ಪರಿಯಂತು. ॥೩೪೧॥

ತೃಪ್ತವ ಮಾಡಿ ಮಾಡಿ ತನಗೆ ಬೇಕೆನ್ನ ಪ್ರಸಾದಿ,
ಬಂದುದನತಿಗಳೆದು ಅಲ್ಲವೊಲ್ಲೆನೆನ್ನ ಪ್ರಸಾದಿ,
ತಾನೆಂಬ ರೂಪ ಅಯ್ಯನೆಂಬ ರೂಪಿನಲ್ಲಿ ಬಪ್ಪನೆಂಬ ರೂಪಿನಲ್ಲಿ
ಲೋಪವ ಮಾಡಿದ ಪ್ರಸನ್ನ ಪ್ರಸಾದಿ ಕಾಣಾ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಬಸವಣ್ಣನು. ॥೩೪೨॥

ಎಲ್ಲರ ಪರಿಯಲ್ಲ, ಅವನ ಪತಿ ಹೊಸತು.
ಆಱಱಲ್ಲಿ ನಡೆವ, ಕಿವಿಯಲ್ಲಿ ಉಂಬ,
ಮೂಗಿನಲ್ಲಿ ನೋಡುವ, ಬಂದುದನತಿಗಳೆವ,
ಬಾರದ್ದನ್ನು ತನ್ನದೆಂಬ.
ಇಂಥಾ ವಿಚಿತ್ರ ವಿನೋದನ್ನೈ ಕಪಿಲಸಿದ್ಧ ಮಲ್ಲಿಕಾರ್ಜುನ. ॥೩೪೩॥[I–೨೫೧]

ತಟ್ಟುವ ಮುಟ್ಟುವ ಭೇದವನೊಲ್ಲ,
ಅದೇನು ಕಾರಣ?
ಐದಾಱು ಪ್ರಸಾದದಲ್ಲಿ
ಈರೈದು ಪಾದೋದಕದಲ್ಲಿ ಸಂಪನ್ನನಾಗಿ
ಅವನ ಲಿಂಗ ತನುವೆಂದೆನ್ನದಿರಿ,
ಕಂಡಿರೆ ಅದು ಪ್ರಸಾದ ತನು.
ಆತನ ಮಸ್ತಕದಲ್ಲಿ ಒಪ್ಪಿಪ್ಪ ಲಿಂಗದ ಗುಣದಿಂದ
ಆತನು ಲಿಂಗತನುವಾದನ್ನೈ.
ಸಲ್ಲದೆ ಆತನು ಸಾಕ್ಷಾತ ಪ್ರಸಾದತನು
ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನ. ॥೩೪೪॥[I–೪೩೭]

ಲಿಂಗದಲ್ಲಿ ಸಂಪನ್ನನಾಗಿ ಗುರುವಾದ,
ಗುರುವಿನಲ್ಲಿ ಸಂಪನ್ನನಾಗಿ ಜಂಗಮವಾದ,
ಜಂಗಮದಲ್ಲಿ ಸಂಪನ್ನನಾಗಿ ತ್ರೈವಿದ್ಯಕ್ಕೆ ವಿದ್ಯರೂಪಾದ.

ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಲ್ಲಿ
ಬಸವಣ್ಣ ಸಾಕ್ಷಾತ್ ಸಂಪನ್ನನಾದ. ॥೩೪೫॥ [I–೭೦೭]

ಮಹವನೊಡಗೂಡಿದೆವೆಂದೆಂಬಿರಿ.
ಮಹವೇನು ಉತ್ತಮದಲ್ಲಿಪ್ಪುದೋ?
ಇಪ್ಪುದಿಪ್ಪುದು ಉತ್ತಮದಲ್ಲಿ,
ಇಪ್ಪುದಿಪ್ಪುದು ಮಧ್ಯಮದಲ್ಲಿ,
ಇಪ್ಪುದಪ್ಪುದು ಅಧಮದಲ್ಲಿ.
ಮಹಾಪ್ರಸಾದ ಸಂಪನ್ನತೆಯಾದವರಿಗೆ
ಮಹವು ಸರ್ವಾಂಗದಲ್ಲಿ ಇಪ್ಪುದೈ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೪೬॥ [I–೬೫೪]

ಐ ನಾ ಎಯೆಂಬ ಅಕ್ಷರದ ಭೇದವನಜಿತಡೆ
ಅಪ್ಪುದರಿದೊಂದೂ ಇಲ್ಲ.
ಸೀಮೆಯ ಮೀಜಿದ ಸಂಬಂಧ,
ಸಂಬಂಧವ ಮೀಜಿದ ಸೀಮೆ, ಅನುಮತವ ಮೀಜಿದ ಆಧಿಕ್ಯ,
ಅಕ್ಷರವೆರಡಜಿ ಅಧಿಕಾರ
ಕಪಿಲಸಿದ್ಧ ಮಲ್ಲಿಕಾರ್ಜುನನ ಸಂಯೋಗ. ॥೩೪೭॥

ದಾಯವ ನುಂಗಿದ ಬಣ್ಣ,
ಬಣ್ಣವ ನುಂಗಿದ ದಾಯ,
ಆನಂದ ಪ್ರವೇಶಿಸಿದಲ್ಲಿ ತಾನೆಯಾದಳವ್ವೆ.
ಅನಾಹತ ಸ್ವರವನರ್ಪಿತವ ಮಾಡಿ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಲ್ಲಿ ನಿತ್ಯಳಾದಳವ್ವೆ. ॥೩೪೮॥

ಗಿರಿ ಗಹ್ವರದೊಳಗರಸಿ ತೊಳಲಿ ಬಳಲಿದೆನವ್ವಾ,
ನೋಡಿ ನೋಡಿ ಕಣ್ಣು ನಟ್ಟಾಲಿ ಬಿದ್ದುವವ್ವಾ,
ನೀನು ಗುರುವಾಗಿ ಬಂದು ಎನ್ನ ಭವವ ಹಜಿದೆ,
ನೀನು ಭಕ್ತ ಕಾರಣ ಪರಶಿವಮೂರ್ತಿಯೆಂದಜಿದೆ
ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೩೪೯॥[I–೩೭೫]

ಆದ್ಯಕ್ಷರದ ಭೇದವನಱಿತೆನೆಂಬ ಯೋಗಿ ನೀ ಕೇಳಾ,
ಆದಿಗೆ ನಾದ ಅಂತವಾಗಿ ಇಪ್ಪುದು
ನಿತ್ಯವು ತಾ, ನಿನಗೆ ಅಱಿಯಲಪ್ಪುದೆ?
ಆದಿಯನಾದಡೆ ಆಮೋದವನು ಭೇದಿಸಿ ಹಿಡಿದಾತ
ಸಾಧಕ ಸಿದ್ಧನೆ? ಅಲ್ಲಾತ ಸುಸಿದ್ಧ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ಅನಾಹತ ಬ್ರಹ್ಮದಲ್ಲಿ ಆನಂದನು. ॥೩೫೦॥[I–೧೩೦]

ತನುತ್ರಯದ ಗುಣದಲ್ಲಿ ತಾಮಸಿಯಲ್ಲ,
ಮನತ್ರಯದ ಭೇದದಲ್ಲಿ ಮತ್ತನಲ್ಲ,
ಮಲತ್ರಯದಲ್ಲಿ ಮಗ್ನನಲ್ಲ.
ಲಿಂಗತ್ರಯದಲ್ಲಿ ನಿಪುಣ,
ಐದಾಱು ಪ್ರಸಾದದಲ್ಲಿ ಸಂಪನ್ನ,
ಎರಡೈದು ಪಾದೋದಕದಲ್ಲಿ ಪ್ರಭಾವಿ,
ಎರಡು ಮೂಱು ಭಕ್ತಿಯಲ್ಲಿ ಸಂಪನ್ನ.
ತತ್ವ ಮೂವತ್ತಾಱಱಿಂದತ್ತ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿ
ಫಲ ಪದಕ್ಕೆ ದೂರವಾದ ನಮ್ಮ ಬಸವಣ್ಣನು. ॥೩೫೧॥[I–೪೪೬]

ಸೀಮೆಯುಳ್ಳನ್ನಬರ ತಾನು ತನ್ನಂಗವಾಗಿರಬೇಕು,
ಅನ್ಯಂಗವಾಗದೆ.
ಅನ್ಯಂಗ ಅನ್ಯಂಗವೆ?
ಗುರುಕರುಣದಿಂದ ತನ್ನಂಗ ಅನ್ಯಂಗವಾದಡೆ
ಸೀಮೆಯ ಸಂಬಂಧಿ ತಾನಲ್ಲ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಲ್ಲಿ ಅಚ್ಚಶರಣನು. ॥೩೫೨॥

ತಟ್ಟುವ ಮುಟ್ಟುವ ಭೇದವುಳ್ಳನ್ನಬರ ಶರಣನಲ್ಲ,
ಅದೇನು ಕಾರಣವೆಂದೊಡೆ ಮುಟ್ಟದೆ ಕೊಂಬನಾಗಿ.
ತಟ್ಟುವ ಭೇದಂಗಳೆಲ್ಲಾ ತನು ಗುಣಕ್ಕೀಡಾಗಿ,
ತಟ್ಟದೆ ಮುಟ್ಟದೆ ಬಟ್ಟಬಯಲಾಗಿ ಕೊಂಬಾತ

ನೀನೆ ತತ್ವಮಸಿಯಾಗದೆ ಮಾಣ,
ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೩೫೩॥[I–೪೩೮]

ಮುಖವಱಿಯದೆಂತರ್ಪಿಸುವೆ ಅಯ್ಯಾ.
ಅದು ಭವ ಹಱಿಯದು.
ಅವಯವದ ಪರಿಯಾಣದಲ್ಲಿ ಅನುಮಿಷವೆಂಬೋಗರವನಿಕ್ಕಿ
ತನುತ್ರಯದಿಂ ಮೇಲಣ ಆನಂದ ಕೋಣೆಯಲ್ಲಿ
ಅನುಮಿಷ ಲಿಂಗಾರ್ಚನೆಯ ಮಾಡಿಸಬಲ್ಲಡೆ
ಆತನನುಪಮ ಲಿಂಗಾರ್ಚಕನೆಂಬೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ ನೀನೆಂಬೆ. ॥೩೫೪॥ [I–೭೧]

ಮೋಹಿಸುವಲ್ಲಿ ಮೋಹಿಸದೆ ಇಪ್ಪಾತ,
ಕಾಮಿಸುವಲ್ಲಿ ಕಾಮಿಸದೆ ಇಪ್ಪಾತ,
ಆತನಿಪ್ಪಿಪ್ಪೆಡೆಯಲ್ಲಿ ಇರದಿಪ್ಪಾತ.
ಆತನ ವಾಙ್ಮನಸಾಗೋಚರನೆಂಬೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನೀ ಸಾಕ್ಷಿಯಾಗಿ ನೀನೆಂಬೆ. ॥೩೫೫॥[I–೬೮೮]

ಆದ್ಯಕ್ಷರದ ಭೇದವ,
ನಾದದಾಮೋದದ ಆನಂದವ,
ನಾನು ನೀನೆಂಬ ಸಂದು ಸವೆದ ಭೇದವ,
ಅದನೇನೆಂಬೆನಯ್ಯಾ? ಅದು ವಾಙ್ಮನಸಾಗೋಚರವ.
ಅದು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ ನೀ ಬಂದು ತೋಱಿ
ನೀ ಸಾಕ್ಷಿಯಾಗಿ ನೀನೆಯೆಂಬೆ. ॥೩೫೬॥

ಕಳೆಯೊಳಗಣ ಭೇದ ಕಳೆಯ ನಾದದ ಭೇದ
ಕಳೆವಿದರಿಗಲ್ಲದದು ವೇದ್ಯವಲ್ಲ.
ಮಧುಕರನು ಉಂಡಿರ್ಪ ಸದಮದದ ಪರಿಮಳವ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣನೆ ಬಲ್ಲ. ॥೩೫೭॥[I–೩೩೪]

ಒಪ್ಪಿಪ್ಪ ಭೇದವನು, ಅಪ್ಪು ರೂಪಾದುದನು,
ತಪ್ಪದೆ ತ್ವಮಸಿಯೆನಿಸುವ ಭೇದವ,
ಗುರುವಿನ ಒಪ್ಪದಲಿ ಕಂಡೆ ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೫೮॥

ಒಪ್ಪ ಮೂಱಾಱಱಲಿ
ಅಪ್ಪು ತಾನೆಂಟರಲಿ
ತಪ್ಪದೆ ತುರಿಯದನುಮಿಷವನಾದಾ.
ತತ್ವ ತ್ವಮಸಿಯಪ್ಪ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೫೯॥

ಸೀಮೆಯನು ದಾಟಿಪ್ಪ ಸಂಬಂಧಿ ತಾನಲ್ಲ
ಆನತದೊಳಗೆ ತನು ಬ್ರಹ್ಮ ತಲ್ಲೀಯ.
ಶುದ್ಧ ಸಾನಂದ ತಾನೆ
ಕಪಿಲಸಿದ್ಧ ಮಲ್ಲಿಕಾರ್ಜುನ. ॥೩೬೦॥

ತನುವೈದು ತಮ ಮೂಱು
ಕ್ಷಮೆ ನಾಲ್ಕು ಭ್ರಮೆಯೆಂಟು.
ಅನುನಯದ ಗುರುವಿನ ಕರುಣವಿಡಿದಾತಂಗೆ
ತನು ಬ್ರಹ್ಮ ಕಾಣಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೬೧॥[I-೪೫೮]

ಏಳೆಂಟು ಸೀಮೆಯನು ದಾಟಿಪ್ಪಳವ್ಯಯದ
ಸೋಮ ಕುಂಭವನು ಹೊತ್ತು ನಿತ್ಯತ್ವದಾ
ಸ್ವಾನುಭೂತ್ಯೈಕ್ಯದಲಿ ತಾನು ಸಂಗಮವಾಗೆ
ಸೋಮ ಕೊಡ[೧][ನೊಡೆ][೧]ದುದ್ಯೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೬೨॥

ಅಡಿಗಡಿಗೆ ಅಮೃತದ ಕೊಡನೊಡೆಯೆ
ನಿನ್ನಯ ನುಡಿ ಬ್ರಹ್ಮವು ತಾನು ನಿತ್ಯವಾಗಿ,

೧-೧ x (ಮೂ)

ಮಾಡಿ ಒಳಗೆ ಭಕ್ತಿಯನು
ಅಡಿಯೊಳಗೆ ನಿತ್ಯವನು
ಕಡಲ ಕಂಡೆನು ಭಕ್ತಿಸಮುದ್ರದಾ,
ಕೊಡನೊಡಲು ಒಡೆದೀಗ ಕಡಲೊಳಗೆ ಬೆರಸಲ್ಕೆ
ಅಡಿಗಡಿಗೆ ದೀಕ್ಷತ್ರಯದ ಸೊಮ್ಮು.
ನಿತ್ಯ ಮೃಡನೀಗ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ನುಡಿಯ ಬ್ರಹ್ಮದೊಳಗೆ ಒಡನೆ ಬ್ರಹ್ಮಾ. ॥೩೬೩॥

ಆನಂದ ಬ್ರಹ್ಮದಲಿ ತಾನೊಂದು ರೂಪಾಗಿ
ತಾನು ತನ್ನೊಳಗೆ ತುರಿಯಾ ತುರಿಯದಾ
ಭಾನುವಿನುದಯದೊಳು ಆನತವು ಕಮಳಕ್ಕೆ
ಸ್ವಾನುಭೂತ್ಯೈಕ್ಯದೊಳು ಲಿಂಗದಾ ಸೀಮೆಯನು
ಪರದಲ್ಲಿ ಭಾವವನು ಮನದಲ್ಲಿ ಆನತದ ದೀಕ್ಷೆ
ತಾ ತನುತ್ರಯದಲಿ ಸೋಮಧರ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬವನ
ಕಾಮ್ಯಾರ್ಥದಲಿ ತಾನು ಕಾಣಲರಿದು. ॥೩೬೪॥[I–೧೪೨]

ಸ್ಫಟಿಕದಾ ಘಟದಲ್ಲಿ ಶಿಶು ಪ್ರಾಣವನು ಹಡೆಯೆ
ನಿಟಿಲಾಕ್ಷ ನೋಡಿ ತಾ ನಗುತಿರ್ದನು.
ಘಟ ಭಿನ್ನವಾಗದೆ ಅಕ್ಷರದ್ವಯದಲ್ಲಿ
ತನು ತಾನೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೬೫॥

ವೇದ್ಯ ಸಾಧಿಸುವಲ್ಲಿ ನಾದಬ್ರಹ್ಮದ ಮುಂದೆ
ಆದಿಯಾದಕ್ಷರದ ಆಮೋದದಾ
ನಾದ ಬಿಂದು ಕಳೆಯ ಭೇದಕ್ಕೆ ಅವ ದೂರ ಮುಕ್ತ್ಯಾಧಾರ
ಕಪಿಲಸಿದ್ಧ ಮಲ್ಲಿಕಾರ್ಜುನನು. ॥೩೬೬॥

ಅಕ್ಷರತ್ರಯದಲ್ಲಿ ಆನಂದ ಬ್ರಹ್ಮದಲಿ
ಅಕ್ಷರತ್ರಯದಲ್ಲಿ ನಿತ್ಯರೂಪು.
ಅಕ್ಷರಾಕ್ಷರವೆಂಬ ಆನಂದ ಬ್ರಹ್ಮದಲಿ
ಅಕ್ಷರವು ಆಉಮಲಿ

ಭಕ್ತಿ ಶಕ್ತಿ ನಿತ್ಯಂಗನೆಯ ಹಸ್ತ
ತತ್ವಮಸಿಯಿಂದತ್ತ
ಭಕ್ತಿ ಕಾರಣ ಶಿವನು ಕಪಿಲಸಿದ್ಧ ಮಲ್ಲಿಕಾರ್ಜುನ. ॥೩೬೭॥ [I–೧೯]

ಸ್ವಾಧಿಷ್ಠಸ್ಥಾನದಲ್ಲಿ ಆದಿ ಅಕ್ಷರ ರೂಪು
ನಾದ ಬಿಂದುವಿನಲ್ಲಿ ದಳೆಯಗೊಟ್ಟು,
ಭೇದಿಸುವಭೇದ್ಯ ಪ್ರಣವಕ್ಕೆ ತಾನಾನಂದ
ಸಾನಂದ ದೀಕ್ಷೆಯಲ್ಲಿ ತಾನು ತಾನೊಂದಾಗಿ
ನೀನಪ್ಪುದೇನರಿದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೬೮॥

ಧ್ಯೇಯಕ್ಕೆ ಅತಿರೂಪು ದಾಯನುಂಗಿಪ್ಪುದೀ
ತಾನೊಂದು ರೂಪಾಗಿ ದಾಯವಿಲ್ಲದೆ ಇಪ್ಪುದು.
ಅದು ನಿಹಿತ ತಾನು ದಾಯವು
ವಾಯವು ಕಾಯಕ್ಕೆ ಅತಿ ಬ್ರಹ್ಮವಾಯದಿಂದಜೆಯಲ್ಕೆ
ಸುಲಭ ತಾನೆ ಕಾಳದಲಿ ಧವಳತೆಯ
ಸಾನಂದದನ್ವತೆಯ
ಸಾಯದೆ ಸತ್ತಾತ ಕಂಡನಿದನು.
ಕಂಡು ಬ್ರಹ್ಮಾಂಡವನು ಉಂಡನದನನ್ವಯದ ಮಂಡಲಕ್ಕದು ಕರ ಚೋದ್ಯ.
ತಾನು ಕಂಡ ಕಾಣದೆ ಈಗ ಉಂಡು ಉಣ್ಣದೆ
ಈಗ ಕಂಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೬೯॥

ಸುಜನ ಸಂಗದೊಳಗೆ ಅವ್ವಯನು ತಾನೀಗ,
ಭಜಿಸಿ ಅಱಸುವರಿಂಗೆ ತಾನು ಸಿಕ್ಕ.
ತನ್ನವನು ಬೇಡದೆ ಅನ್ಯವನು ಈಕ್ಷಿಸದೆ,
ಉನ್ನತವು ಸದ್ಭಕ್ತಿ ಸೊಮ್ಮು ಸೊಮ್ಮಾದಾತ,
ಎಲೆ ಅವ್ವಾ ಕೇಳಾ ಕರವನು ಮೀಜೆದನು.
ಅತಿಶಯದ ಭಕ್ತಿಯಲಿ ದಿಟ ಘಟಿತ
ಸಂಪನ್ನ ನಿಟಿಲಾಕ್ಷ ನಿತ್ಯದಲಿ ಭಕ್ತಿ ಸಹಿತಾ,
ನಿಟಿಲಾಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನನು
ಕುಟಿಲಗಳ ದಾನಿಗ ಕಂಡು ಸುಖಿಯೆ. ॥೩೭೦॥ [I–೭೯೪]

ಆಜ್ಞೆಯನು ಮೀಱಿಪ್ಪುದಾನತದ ಸಂಬಂಧ
ತಾನು ಅಜಲೋಕದಲಿ ನಿತ್ಯ ಸುಖಿಯೆ.
ಸ್ವಾನುಭಾವೈಕ್ಯದಲಿ ಆನತದ ಸಂಬಂಧ
ಸೋಮರೀತಿಯ ದೀಪ್ತಿ
ಸಾಮಜನೊಡನಾಟ ನಾಮಲೀಯನ ಕೂಟ
ಕಾಮ್ಯಾರ್ಥಿಗಳಿಗಿಲ್ಲ ಕಪಿಲಸಿದ್ಧ ಮಲ್ಲಿಕಾರ್ಜುನನು. ॥೩೭೧॥

ಸೊಲ್ಲಡಗಿದ್ದೆನೆಲೆಯಯ್ಯ,
ಅಲ್ಲಲ್ಲಿಗೆ ಹದುಳಿಗನಾಗಿದ್ದೆನೆಲೆ ಅಯ್ಯ,
ಎಲ್ಲಾ ಠಾವಿನಲಿ ನೀನಿಪ್ಪನೆಂದು ತೊಳಲಿ ಬಳಲಿದೆನು.
ಸಲ್ಲಲಿತದ ಗುರುವೆನ್ನ ಸೊಲ್ಲನಱುಪಿ
ಬ್ರಹ್ಮದಲಿಪ್ಪನೆಂದಱಿದೆ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೭೨॥[I–೮೦೨]

ಎಲ್ಲರೊಳಗಿಪ್ಪರೆ ಅಲ್ಲಲ್ಲಿ ರಚಿಸುವೊಡೆ
ಎಲ್ಲರೋಪಾದಿಯೆ ಎಲೇ ಅಯ್ಯ, ನೀನು.
ಸಲ್ಲಲಿತ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಭಕ್ತರಲ್ಲಿಯಲ್ಲದೆ ನೀನು ಸುಲಭನಲ್ಲ. ॥೩೭೩॥

ಎಂಟು ಮೂರ್ತಿಯಲ್ಲಾದ ಆನಂದ ತಾ ನೀನಲ್ಲ
ಎಂಟಱಿಂತಿಪ್ಪೆ ಎಲೆ ಸದ್ಬೋಧದಾ
ಮೂಱಱಲಿ ಭವಿಸೀಗ, ಆಱಱಲಿ ಪ್ರಭವಿಸಿ,
ಆಱಾಱನತಿಗಳೆದ
ಶುದ್ಧ ರೂಪ ಮೀಱಿಪ್ಪ ಸೀಮೆಯಲಿ
ತಾನೊಂದು ರೂಪಾಗಿ ತೋಱಿಪ್ಪ
ಕಪಿಲಸಿದ್ಧ ಮಲ್ಲಿಕಾರ್ಜುನ. ॥೩೭೪॥

ಮಹಾಬೆಳಗಿನಲ್ಲಿ ಬೆಳಸಿದಳವ್ವೆ,
ಮಹಾ ಬೆಳಗಿನಲ್ಲಿ ಪ್ರಬಲವಾಗಿ
ಮಹಾ ಬೆಳಗಿನ ಬೆಳಗ ಭಕ್ತರಲ್ಲಿಯೆ ತೋಱಿ,
ಮಹಾ ಬೆಳಗಿನ ಬೆಳಗ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೭೫॥ [I–೬೫೭]

ಮುಟ್ಟೆನು ನಾನೇನ ಮುಟ್ಟಿದಡೆ ನಷ್ಟವೆ,
ಮುಟ್ಟುವ ಮೂರ್ತಿ ನಷ್ಟವಾದಡೆ
ಆ ಮುಟ್ಟಿ ಪೂಜಿಸುವ ಕಷ್ಟ ತಾನೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೭೬॥

ಅಯ್ಯ, ನಿನ್ನಾಳಾಗಿ ಆಱೆನಯ್ಯ
ಕೆಲಬರ ಬೋಧಿಸಲು.
ಅಯ್ಯ, ನಿನ್ನಾಳಾಗಿ ಆಱೆನಯ್ಯ
ಕೆಲಬರ ಸ್ತುತಿಸಲು.
ಅಯ್ಯ, ನೀನೆ ನಿತ್ಯನೆಂದಾ ನಿನ್ನ ಮೊರೆವೊಕ್ಕಡೆ
ಸೀಯದಂತಿಪ್ಪರೆ ಶಿವನೆ ಅಯ್ಯ!
ಕಾಮ್ಯಾರ್ಥವ ಬೇಡಿ ನಿನ್ನ ಭಾಗೆಯ ಬಿಡಿಸಿ
ನಿನಗೇನುಂಟಯ್ಯ?
ನೀನು ನಿಃಕಾಮಿ ಅಂಜದಿರು ಅಂಜದಿರು
ಫಲಪದವ ಬೇಡೆ.
ನೀನಿಹ ಲೋಕದಲ್ಲಿ ನಿನ್ನಂತಾದೆನೆಂಬೆ
ಕುಡದೆ ಕರುಣಿಸು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೭೭॥ [I–೬೫]

ಪಂಚೇಂದ್ರಿಯವೆಂಬ ಸೊಣಗ ಮುಟ್ಟದ ಮುನ್ನ
ಮನವ ನಿಮ್ಮನೆಯ್ದುವಂತೆ ಮಾಡಯ್ಯ,
ಮೀಸಲು ಬೀಸರವೋಗದ ಮುನ್ನ
ನೀನೆ ನಿತ್ಯನಾಗಿ ಪ್ರಯೋಗಿಸಯ್ಯ,
ಎನ್ನಾಸರದ ಸ್ನೇಹ ಅಂಬಿ ಹೋಗದ ಮುನ್ನ
ಈಶನ ಕೂಡಿಕೊಳ್ಳಾ ಕಪಿಲಸಿದ್ಧ ಮಲ್ಲಿಕಾರ್ಜುನ. ॥೩೭೮॥[I–೫೬೩]

ಕಂಗಳ ಬೇಂಟೆಯನಾಡುವ ಕಾಮನ ಸಂಗಕೆನ್ನ ಸಲಿಸದೆ
ಮಂಗಳ ಮಯವಪ್ಪ ಉರುತರ ಭಕ್ತಿಯ
ಸಂಗಕ್ಕೆನ್ನ ಸಲಿಸಯ್ಯಾ,
ಅನಂಗವಿದಾರಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಲಿಂಗ ನಿಮ್ಮ ಬೇಡುವೆ ಸೆಱಗೊಡ್ಡಿ. ॥೩೭೯॥[I–೨೯೮]

ಆವಾಗಳು ನಿನ್ನವರುಗಳ ನೀನೆಂಬ ಮನವ
ಅತಿ ಉನ್ನತೋನ್ನತವ ಕುಡು ಕಂಡಾ,
ಎಲೆ ಅಯ್ಯ ನಿನ್ನ ಧರ್ಮ.
ಅಯ್ಯಾ, ನಿನ್ನ ಲಾಂಛನವ ಕಂಡು ತಾತ್ಪರ್ಯವೆಂದು ನಂಬುವ
ಮನಸಿಂಗೆ ಮಂಗಳವನೀಯಯ್ಯಾ.
ನಿನ್ನವರ ಸಹಲೋಕದಲ್ಲಿ ಅವರ ಕೀಳಲ ಕಾಯ್ದು
ಇಪ್ಪ ಸುಕೃತವನು ತಪ್ಪದೆ ಕುಡು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ, ನಿನ್ನ ಧರ್ಮ. ॥೩೮೦॥[II–೯೯]

ತಟ್ಟುವ ಮುಟ್ಟುವ ಭೇದವನು,
ತಟ್ಟದೆ ಮುಟ್ಟದೆ ಅರ್ಪಿಸುವ ಆನಂದವನು,
ಅರ್ಪಿತವಿಲ್ಲದೆ ಎಯ್ದುವ ತೃಪ್ತಿಯನು,
ತೃಪ್ತಿಯಲಾದ ಪರಿಣಾಮವನು,
ಪರಿಣಾಮದಲಾದ ಪ್ರಸನ್ನತೆಯನು,
ಪ್ರಸನ್ನತೆಯಲಾದ ಪ್ರಸಾದವನು ಕೊಂಡು
ನಿತ್ಯರಾಗಿಪ್ಪವರ ಎನಗೆ ತೋಱಾ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ, ನಿನ್ನ ಧರ್ಮ. ॥೩೮೧॥[I–೪೩೬]

ಐ ಬ್ರಹ್ಮದಿಂದತ್ತಲಾದ ಸೀಮೆಯ,
ಆ ಸೀಮೆಯ ಮೀಱಿದ ಸಂಬಂಧ,
ಆ ಸಂಬಂಧ ಅಯ್ಯನ ರೂಪು,
ಆ ಅಯ್ಯ ವಾಙ್ಮನಸಾಗೋಚರನೆಂಬರು.
ಆ ಅಯ್ಯ ಭಕ್ತ ಕಾರಣ ಪರಶಿವಮೂರ್ತಿಯೆಂದೆಂಬರು.
ಆವುದು ಹುಸಿ? ಆವುದು ದಿಟ?
ಈ ಉಭಯದ ಸಂಸಿದ್ಧವ ನಿನ್ನವರು ನೀವು ಬಲ್ಲಿರಿ,
ಆನೇಕೆಂದಱಿಯೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೮೨॥

ತನುತ್ರಯದಲ್ಲಿ ಪ್ರವೇಶಿಸುವಾತ,
ಮನತ್ರಯದಲ್ಲಿ ಸರ್ವವಹಂತ,

ಲೋಕ ಲೋಕಂಗಳೆಂಬಂಥ ಸೀಮೆಯಲ್ಲಿ ದಾತ
ಸ್ವಾತಂತ್ರನೆ ತಾನೆ ಸಲೆಯಾರಾಧ್ಯವಾದಾತನೆಂದೆಂಬೆ.
ಆತನೆ ಶರಣನೆಂದೆಂಬೆ,
ಆತನೆ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬೆ. ॥೩೮೩॥

ಮೂರ್ತಿ ಮೂಲಕ್ಕೆ ತಾನೆ ಮುಖ್ಯನಾದಾತ,
ಸಕಲಕ್ಕೆ ತಾನೆ ಕಾರಣಿಕನಾದಾತ,
ಸರ್ವವನೂ ತನ್ನೊಳಗಡಗಿಸಿ ಮೀಱಿಲೀಯದಾತ.
ಆತನು ಅಜ್ಞಾತನೆಂಬೆ, ಆತನು ಶರಣನೆಂಬೆ,
ಆತನು ಸಕಲನಿಷ್ಕಲ ಪರಿಪೂರ್ಣನೆಂದೆಂಬೆ,
ಅಚ್ಚ ಲಿಂಗೈಕ್ಯನೆಂದೆಂಬೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ತಾನೆಂದೆಂಬೆ. ॥೩೮೪॥

ತನುತ್ರಯದಲ್ಲಿ ಮನಲಿಂಗ ಪ್ರಾಣಸಂಬಂಧಿಯಾದವರ
ತೋಱಯ್ಯ, ನಿನ್ನ ಧರ್ಮ,
ಅವಯವಂಗಳೆ ವದನಂಗಳಾಗಿ ಅರ್ಪಿತವಲ್ಲದೆ
ಅನರ್ಪಿತವ ಕೊಳ್ಳದರ
ಐದಾಱು ಪ್ರಸಾದದಲ್ಲಿ
ಅನುಮಾನವಲ್ಲದೆ ನಿತ್ಯವಪ್ಪವರ
ಈರೈದು ಪಾದೋದಕದಲ್ಲಿ
ಅವಿರಳವಿಲ್ಲದೆ ವಿಮಲವಪ್ಪವರ
ನೋಡಿ ಕಂಡಿಹೆನೆಂದರೆ ಎನಗೆ ಕಾಣಬಾರದು.
ಅವರ ಇಚ್ಛಾಮಾತ್ರದಲ್ಲಿ
ನೀನಿದ್ದೆಯಾಯಿತ್ತಾದಡೆ ನಿನಗೆ ಕಾಣಲಹುದು.
ಅಲ್ಲದಿರ್ದೊಡೆ ನಿನಗೆಯೂ ಅಭೇದ್ಯ ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೮೫॥[I–೪೪೭]

ಆಜ್ಞಾಸಿದ್ಧನನರ್ಚಿಸುವ
ಆನಂದಮಯರ ಧ್ಯಾನ ಮೌನ ಸಮಾಧಿಗಳ[೧][ದ್ದೆಂ][೧]ಗೆಂದೊಡೆ:
ಪ್ರಸಾದವ ಬಯಸಿ ಪರವನಱಿಯದಿಹುದೆ ಧ್ಯಾನ,
ಶಿವನಲ್ಲದೆ ಅತಃಪರವಿಲ್ಲೆಂದು
ಅನ್ಯರ ಕೂಡೆ ನುಡಿಯದಿಪ್ಪುದೆ ಮೌನ,
ವ್ರತವಾಱಿಱಿಲ್ಲಿ ತದ್ಗತವಾಗಿಪ್ಪುದೀಗ ಸಮಾಧಿ,
ಇಂತಪ್ಪುದೀಗ ಶಿವಯೋಗ.
ಇಂತಪ್ಪವರ ತೋಱು, ನಿನ್ನರ್ಚನೆಯನೊಲ್ಲೆ.
ಅವರ ದರ್ಶನ ಮಾತ್ರ ನಿನ್ನ ಪದವಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೮೬॥

ಆಯಿತಾಯಿತು ಫಲವಿಲ್ಲದ ವೃಕ್ಷ,
ಆಯಿತಾಯಿತು ಪದವಿಲ್ಲದ ಫಲ,
ಆಯಿತಾಯಿತು ಸೀಮೆಯ ಮೀಱಿದ ಸಂಬಂಧ,
ಆಯಿತಾಯಿತು ಅನ್ವಯದಲ್ಲಿ ಆಂದೋಳ,
ಆಯಿತಾಯಿತು ನಿತ್ಯದಲ್ಲಿ ಭಕ್ತಿ,
ಆಯಿತಾಯಿತು ಭಕ್ತಿಯಲ್ಲಿ ವೈರಾಗ್ಯ,
ಆಯಿತಾಯಿತು ವೈರಾಗ್ಯದಲ್ಲಿ ಅನುಗುಣ,
ಆಯಿತಾಯಿತು ಅನುಗುಣದಲ್ಲಿ
ಸ್ವಾನುಭಾವದ ಸಕಲಭಕ್ತಿ.
ಸಕಲಭಕ್ತಿಯಿಂದ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ಸಂಯೋಗ ಬಸವಣ್ಣಂಗೆ. ॥೩೮೭॥

ಅಘವಿಧ್ವಂಸನನರ್ಚಿಸಿ[ಹೆ]ನೆಂದು ಹೋದಡೆ
ಅಘವೆ ಪರಿವೇಷ್ಟಿಸಿತಯ್ಯಾ ಎನ್ನನು.
ಇವನೆ ಹೇಂಗೆ ಕಳೆವೆನಯ್ಯ?
ಇದ ಕಳೆವೆನಿನ್ನು ನಿನ್ನವರ ಸಂಗದಿಂದ,
ಇದ ಕಳೆವೆ ನೀನು ಗುರುವಾಗಿ ಬಂದಡೆ.

೧-೧ ದೆ ಹೇಂ (ಮೂ)

ಎನ್ನವರ ಸಂಗವಿಲ್ಲದೆ
ಅಲ್ಲದಿದ್ದೊಡೆ ನಿನ್ನ ದೈವತ್ವದಿಂದ ಕಳೆದೆನೆಂದಡೆ
ಎನ್ನ ಸುತ್ತಿ ಮುತ್ತಿತ್ತೈ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೮೮॥

ನಿನ್ನನಾರು ಬಲ್ಲರಯ್ಯಾ? ಎನ್ನವರಲ್ಲದೆ.
ಅಂದು ನೀನು ಅನಾಹತಲೋಕದಲ್ಲಿ ದೇಶಿಕನಾಗಿ ಇರಲಾಗಿ
ನಿನ್ನ ಎನ್ನವರು ಸಲಹರೆ?
ನೀನು ಶುದ್ಧ ದಳದಲ್ಲಿ ಬಂದಡೆ
ನನಗೆ ಮುಂದೆ ದಾರಿತೋಜಿ ಎನ್ನವರು ಬಾರರೆ?
ನೀನು ಸಿದ್ಧ ದಳದಲ್ಲಿ ಬಂದಡೆ
ನಿನಗೆ ಮುನ್ನವೆ ದಾರಿದೋಜಿ ಎನ್ನವರು ಬಾರರೆ?
ಪ್ರಸಿದ್ಧ ದಳದಲ್ಲಿ ಬಂದರೆ
ಎನ್ನವರು ನಿನಗೆ ಊಡಿ ⁽[ಊ]⁾ ಡಿಸರೆ?
ಎನ್ನವರು ನಿನಗೆ ಬೇಡಿತ್ತ ಕೊಟ್ಟು, ಹೇಳಿತ್ತ ಮಾಡಿ
ಎನ್ನವರಿದ್ದರಲ್ಲದೆ,
ನಿನ್ನಲೊಂದು ಎಳ್ಳಷ್ಟು ಹಂಗು ಎನ್ನವರಿಗಿಲ್ಲ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಎನ್ನ[ವ]ರಿಲ್ಲದೆ ನೀ ಬದುಕುವ ಪರಿ ಹೇಗೆ? ॥೩೮೯॥[I–೫೨೮]

ಫಲಪದಾದಿಗಳ ಕೊಟ್ಟೆನೆಂದೆಂಬೆ
ಅವರವನೊಲ್ಲರು.
ಅವರು ನಿನಗೆಯೂ ನಿನ್ನ ರೂಪಿಗೆ
ತನು ಮನ ಧನಾದಿಗಳನು ಕೊಡುವರು.
ಎಲೆ ವಂಚಕನಾದ ಶಿವನೇ, ನಿರ್ವಂಚಕರೆನ್ನವರು ಎನ್ನುವರು,
ನಿನ್ನನೇನ ಬೇಡಿಹರು?
ನೀನೆನ್ನವರಿಗೇನ ಕೊಟ್ಟಿಹೆ?
ನಿನ್ನ ಕೊಡನೆನ್ನವರೊಲ್ಲರು, ಕಾಣಾ
ಕಾಡದೆ ಹೋಗು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೯೦॥ [I–೫೮೬]
ಜೂಥಿಯಜಿಯಲ್ಕೆ ಗಾಡಿಗನೆಂಬುದನು

ನಾನೂ ಬಲ್ಲೆ ಎನ್ನವರೂ ಬಲ್ಲರು.
ನಿನ್ನಲೇನ ಬೇಡಿಯರೆಲೆ ಅಯ್ಯಾ.
ನೀನು ಕೂರ್ತು ಕೊಡುವ ಸ್ವರ್ಗವನೊಲ್ಲರು
ನಿನ್ನಲುಳ್ಳ ಫಲಪದಾದಿಗಳನ್ನವರೊಲ್ಲರು.
ಬೇಡಿ ಅರ್ತಿಸುವುದಾದಡೆ ಹುಸಿ,
ಕೊಡು ಕೊಡದಡೆ ಮಾಣು.
ಬೇಡುವ ಹೀನ ನಿನಗಲ್ಲದೆ ಎನ್ನವರಿಗುಂಟೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೩೯೧॥ [I–೭೦೪]

ವೃಕ್ಷಛಾಯೆದಲ್ಲಿಹಂಗೆ ನೀನು,
ಸಕಲರಿಗೆ ಸ್ವಾತಂತ್ರ ಪದವನೀವೆ? ನಿನಗಿಲ್ಲ.
ನೀನು ನಿಷ್ಕಲದಲ್ಲಿ ನಿರ್ಣೈಸಿ
ಸಕಲದಲಿ ಸ್ವಾತಂತ್ರಿಸಿ ಇಪ್ಪಿ.
ಆನಂದವೆಂಬ ಗತಿಯಲ್ಲಿ,
ಸಾನಂದವೆಂಬ ತಾಳವಿಡಿದು ಆಡಲಾಗಿ
ಕೊಟ್ಟೆನೆಂಬ ಪದವ ಅವರೊಲ್ಲದಿದ್ದಡೆ
ನೀನೆ ಒಚ್ಚತ ಹೋಹೆ
ಕಪಿಲಸಿದ್ಧ ಮಲ್ಲಿಕಾರ್ಜುನಾ ನಿನಗಿದು ಸಹಜ. ॥೩೯೨॥

ಸುಗತಿಯೆಂಬ ಮಂಟಪದಲ್ಲಿ
ನಿತ್ಯವೆಂಬ ತಾಳತ್ರಯದೊಳಗೆ
ಆಱು ಗತಿ ತಪ್ಪದೆ ಆಡುತ್ತಿರಲಿ,
ಮೂವತ್ತಾಱು ರೂಪುಗಳೆಂಬವನು ಮೀಱಿ,
ಮೂವತ್ತೇಳಱಲ್ಲಿ ಜವನಿಕೆ ಉಡುಗೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಕೊಡುವುದಕೆ ಏನೂಯಿಲ್ಲದಿರೆ
ನಿನ್ನೊಚ್ಚತಗೊಟ್ಟಡೆ, ನಾ ಕರ ಬೆಱಗಾದೆ. ॥೩೯೩॥ [I–೭೯೨]

ಕರವೆ ಭಾಂಡವಾಗಿ, ಜಿಹ್ವೆಯ ಕರವಾಗಿ,
ಇಂದ್ರಿಯಂಗಳೈಮುಖವಾಗಿ ಇಪ್ಪ
ಪ್ರಸಾದಿಯ ಪರಿಯನೆಂತೊ!
ಆನಂದದಲ್ಲಿ ಸಾನಂದವನರ್ಪಿಸಿ,
ಸಾನಂದದಲ್ಲಿ ಸ್ವಯವಾಗಿಪ್ಪ
ಪ್ರಸಾದಿಯ ಪರಿಯಿನ್ನೆಂತುಟು!
ತನುತ್ರಯಂಗಳ ಮೀಱಿ ಮನತ್ರಯಂಗಳ ದಾಂಟಿಪ್ಪ
ಪ್ರಸನ್ನ ಪ್ರಸಾದಿಗೆ ಆವುದು ಸರಿಯೆಂಬೆ!
ಬಂದುದನತಿಗಳೆಯ ಬಾರದುದ ಸಮಯವೆನ್ನ.
ತನು ಮುಖವೆಲ್ಲವು ಲಿಂಗ ಮುಖ,
ಸ್ವಾದಿಸುವವೆಲ್ಲವು ಲಿಂಗಾರ್ಪಿತ,
ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ
ಲಿಂಗಾರ್ಪಿತವಲ್ಲದೆ ಅನರ್ಪಿತವ ನೋಡ.
ತಟ್ಟುವ ಮುಟ್ಟುವ ಭೇದಂಗಳೆಲ್ಲವು ಸರ್ವಾರ್ಪಿತ.
ಆತನುರುತರ ಸಮ್ಯಜ್ಞಾನಿಯಾದ ಕಾರಣ ಪ್ರಸನ್ನತೆಯಾಯಿತು.
ಪ್ರಸನ್ನ ಪ್ರಸಾದತೆಯಲ್ಲಿ ನಿತ್ಯನಪ್ಪಾತ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಲ್ಲಿ
ಉರುತರ ಮಹಾಜ್ಯೋತಿರ್ಮಯನು. ॥೩೯೪॥ [I–೩೧]

ತನುಗುಣ ಪ್ರಾಪಂಚಿಕವ ಹೊದ್ದ,
ಸೀಮಾ ಸಂಬಂಧಿಗಳಲ್ಲಿ ನಿಲ್ಲ, ಎರಡೆಂಟೆಂದಱಿಯ
ತನು ಮುಖವೆಲ್ಲವೂ ಲಿಂಗಮುಖವಾಗಿಪ್ಪ,
ಪ್ರಾಣವೆಲ್ಲವು ಲಿಂಗಪ್ರಾಣವಾಗಿಯೆ ಸಮನಿಸುವ,
ಅರ್ಪಿತಾವಧಾನಂಗಳ ಭೇದವನು
ಕಾಯದ ಕರದಿಂದ ಅರ್ಪಿಸದೆ
ಸ್ವಾನುಭಾವ ಸಮ್ಯಜ್ಞಾನಂಗಳಲ್ಲಿ ಅರ್ಪಿಸುವ,
ನಿತ್ಯಪ್ರಸಾದವ ಕೊಂಬ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ
ಪರಮ ಸೀಮೆಯ ಒಳಗು ಮಾಡಿಕೊಂಡಿಪ್ಪ
ಬಸವಣ್ಣನ ಪದವಿಂತುಟು. ॥೩೯೫॥[I–೪೪೪]

ಆಧಾರಸ್ಥಾನದಲ್ಲಿ ಅರ್ಪಿತವಾಱಱಲ್ಲಿ ಅರ್ಪಿಸುವ ಭೇದ,
ಅನುಮಿಷವೆಂಬ ಆನಂದ ಸ್ಥಾನದಲ್ಲಿ ನಿತ್ಯರ್ಪಿತದ ತೃಪ್ತಿಯ ಭೇದ,
ಸಂಯೋಗ ಸಮನಿಸಿ ಅರ್ಪಿಸುವ ಮುಖದಲ್ಲಿ ಆಱು ವಿಧದಾನಂದ.
ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ತ್ವಕ್ಕು ಸ್ಪರ್ಶ
ಪಂಚೇಂದ್ರಿಯಂಗಳ ಭೇದ,
ತನು ಪ್ರಾಣವಾಹಿಯಲ್ಲದೆ ಲಿಂಗ ಪ್ರಾಣವ ಮಾಡಿ
ನಿಜ ಪ್ರಸಾದವ ನೆಲೆಗೊಳಿಸುವ ಭೇದ,
ಅಱುವತ್ತುನಾಲ್ಕು ಅನುಬಂಧಂಗಳಿಂದವೆ
ನೂರೆಂಟು ಕರಣಂಗಳಲ್ಲಿ
ಸ್ವಾದಿಸುವ ಸುಖಿಸುವ ಭೇದವನಾರು ಬಲ್ಲರಯ್ಯಾ?
ದೀಕ್ಷೆಯಲ್ಲಿ ದಿವ್ಯಜ್ಞಾನಿ,
ಶಿಕ್ಷೆಯಲ್ಲಿ ಸಮ್ಯಜ್ಞಾನಿ,
ಸ್ವಾನುಭವದಲ್ಲಿ ತಾನೆ ರೂಪು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ಅವಗ್ರಹಿಸಿದ ಪ್ರಸನ್ನ ಪ್ರಸಾದಿಯ ಆರು ಬಲ್ಲರಯ್ಯಾ,
ನೀನು ನಿನ್ನ ಶರಣರಲ್ಲದೆ? ॥೩೯೬॥[I–೧೩೮]

ಹೆಸರಿಡಬಾರದನುಭವಸುಖದ ಸಾಯುಜ್ಯದಲ್ಲಿ
ಅರ್ಪಿತಾವಧಾನಂಗಳ ಮುಖಂಗಳ ಭೇದಂಗಳ ಭೇದಿಸುವೆ,
ಈಡಪಿಂಗಳ ಸುಷಮ್ನನಾಳಂಗಳಂ ಭೇದಿಸುವೆ,
"ಏಕ ಏವ ರುದ್ರನದ್ವಿತೀಯಾಯ"
ಎಂಬ ಭೇದವಂ ಭೇದಿಸುವೆ.
ನಿತ್ಯಪ್ರಸಾದದಿಂದ ನಿಪುಣನಪ್ಪೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡುವೆ. ॥೩೯೭॥ [I–೮೪೦]

ಶುದ್ಧ ಸಂಯೋಗದಲ್ಲಿ ನಿನ್ನ ನೆರೆವೆ,
ಸಿದ್ಧ ಸಂಯೋಗದಲ್ಲಿ ನಿನ್ನ ಸಂಯೋಗಿಸುವೆ,
ಪ್ರಸಿದ್ಧ ಸಂಯೋಗದಲ್ಲಿ ನಿನ್ನನೆ ಕೂಡುವೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ತಾತ್ಪರ್ಯದಿಂದ ನಿನ್ನ ನೆರೆವೆ. ॥೩೯೮॥ [I–೭೪೪]

ನೆನೆದೆನೆಂದೆಂಬಡೆ ನಾನೇನು ಎರೆವೆ?
ಶ್ರೀ ಗುರುಸ್ವಾಮಿ ನಿನ್ನನೆನ್ನ ಕರದಲ್ಲಿ ಸ್ಥಾಪ್ಯಂಗೊಳಿಸಿದ ಬಳಿಕ
ಮಹಾಜ್ಯೋತಿರ್ಮಯದಲ್ಲಿ ತಮಂಧವುಂಟೆ?
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ
ಮಹಾಸಮುದ್ರವನೊಡಗೂಡಿದ ಬಳಿಕ
ಬೇಱೆ ನಾನೊಂದು ನದಿಯೆನಲುಂಟೆ. ॥೩೯೯॥ [I–೫೫೩]

ಇಂಬಪ್ಪ ಸರದಿಯ ಸಂಭ್ರಮದ ಮೊರಹಿನಲ್ಲಿ
ಶಂಭುವೆ ನಿನ್ನೊಡಗೂಡಿದೆನಯ್ಯಾ.
ಬೇಱೊಂದು ಕೇಳೆ, ಬೇಱೊಂದು ಕಾಣೆ,
ಮಹಾ ಉಲುಹೆ ಒಡಮನೆಯಾದೆಯಾದೆನಯ್ಯಾ.
ಅನುಮಿಷವೆಂಬ ಸರದಿಯ ಮಹಾ ಉಲುಹಿನಲ್ಲಿ ಉಲುಹುಗೆಟ್ಟೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ ನೀನೆಂಬ ಸಮುದ್ರದಲ್ಲಿ ಆನಿದ್ದೆನು. ॥೪೦೦॥ [I–೧೯೩]

ಆನಂದವೆಂಬ ತರತರಂಗಳಲಿ
ಒಡನೆ ಆಡಿದೆನಯ್ಯಾ,
ಆಡಿದ ಚಿತ್ರವು ವಿಚಿತ್ರವಾಯಿತಯ್ಯಾ,
ನಿನ್ನ ಕೂಟದ ಸಂಗಮ ಆಱಱಲ್ಲಿ ಮೀಱದಿದ್ದ ಕಾರಣ
ಎನಗೆ ಸಮನಿಸಿತು ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೪೦೧॥

ಅಂಗನೆಯರು ಮೂವರ ಸಂಗವ ಮಾಡಿದ ಕಾರಣ
ಇತರ ಸಂಗಕ್ಕೆ ಸಮನಿಸದಾದೆ.
ಅಂಗನೆಯ ಮೂವರನೊಂದು ಮಾಡಿ ಕೂಡಿದಡೆ
ಲಿಂಗ ನೀನಾದೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೦೨॥

ತನುವೆಂಬ ಮಹಾಪರ್ವತದಲ್ಲಿ
ಒಸರುತಿರ್ಪ ನಿರ್ಜರಂಗಳಿರಾ
ಆವ ಘನವನೊಡಗೂಡುವಿರಿ, ಹೇಳಿರೇ.
ಸ್ಥೂಲಸಮುದ್ರ ಅಱುವತ್ತುನಾಲ್ಕು ಕೋಟಿಯು

ಮೂವತ್ತೆರಡು ಲಕ್ಕವೂ ಮೂವತ್ತೆರಡು ಸಾವಿರದ
ಪರಿಪ್ರಮಾಣವಾಗಿಪ್ಪುದಾಗಿ,
ಅವು ತಮ್ಮ ತಮ್ಮ ಘನತೆಗೆ
ತಾವೆ ಘನವೆಂದು ಮೊರೆವುತ್ತೈದಾವೆ.
ಅವು, ನೀವು ಸಿಡಿದು ಬೀಳುವ ತಂತು ಮಾತ್ರಕ್ಕೆ ಸಮವಪ್ಪವೆ?
ಅಂತಪ್ಪ ಸಮುದ್ರಂಗಳು ಸವಾಲಕ್ಕಗೂಡಿ
ನೀನೆಯ್ದುವ ಮಹಾಸಮುದ್ರದ
ಒಂದು ಬಿಂದುವಿಂಗೆ ಸರಿಯೆ?
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ ಮಹಾಸುಧಾಸಮುದ್ರಕ್ಕೆ. ॥೪೦೩॥[I–೪೫೭]

ಸ್ಥಳ ಹದಿನಾಲ್ಕಕ್ಕೆ ಜಲಂಗಳೇಳಾಗಿ
ಪರಿವೇಷ್ಟಿಸಿಕೊಂಡಿಪ್ಪವು.
ಈ ಸ್ಥಳ ಜಲಾದಿಗಳು ಇಪ್ಪವು ಒಂದು ವಟವೃಕ್ಷದ ಪತ್ರದಲ್ಲಿ.
ಇಂಥಾ ವಟವೃಕ್ಷಂಗಳು ಹದಿನಾಲ್ಕನು
ಅವಗ್ರಹಿಸಿಕೊಂಡಿಪ್ಪುದು ನಿನ್ನ ಸೀಮೆ.
ಸರ್ವಾಂಗವನವಗ್ರಹಿಸಿಕೊಂಡಿಪ್ಪುದು
ಎಮ್ಮ ಶರಣರ ಕರಸ್ಥಲ.
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ,
ಆವುದ ಘನವೆಂಬೆ? ಆವುದ ಕಿಱಿದೆಂಬೆ? ॥೪೦೪॥[I–೮೦೪]

ವೇದ ಹದಿನಾಲ್ಕು ಸಾವಿರಂಗಳು
ನಿನ್ನನಱಸಿ ಕಾಣದಿಱ್ ಕಾಣದೆ ಹೋದವು.
ನಿನ್ನ ಆಧಿಕ್ಯವ ಕಾಬವರಾರಯ್ಯ? ನಿನ್ನವರಲ್ಲದೆ.
ಉರುತರದ ಪರಮಜ್ಞಾನಿ ಘನತರದ ಸಂಯೋಗಿ
ನಿನ್ನ ಪ್ರಮಾಣನಱಿಯಲ್ಕೆ ಆರ ವಶ ಹೇಳಾ?
ಸೀಮೆಯ ಮೀರಿದ ಸಂಬಂಧ
ಲೆಕ್ಕವ ಮೀಱಿದ ಅಪ್ರಮಾಣ
ಗುರುಕರುಣವುಳ್ಳ ಶರಣರ ಕರಸ್ಥಳಕ್ಕೆ ಬಂದು
ಕರ ಚುಳುಕಾದೆ, ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೦೫॥[I–೭೩೦]

ಮಹಾಜ್ಯೋತಿಯನೊಡಗೂಡಿಪ್ಪ
ಉರುತರ ಪರಮಜ್ಞಾನಿ,
ನಿನ್ನ ದೀಪ್ತಿಯ ಸಕಲಬ್ರಹ್ಮಾಂಡಂಗಳು
ನಿನ್ನ ಮಱೆಸಲಱಿಯವು.
ಸಕಲಬ್ರಹ್ಮಾಂಡಂಗಳನೊಳಗುಮಾಡಿ
ಮೇಲೆ ತೊಳಗಿ ಬೆಳಗುತ್ತಿಪ್ಪ
ಎಮ್ಮ ಶರಣರ ಕರಸ್ಥಲದಲ್ಲಿ ಸಿಕ್ಕಿ.
ಮಹಾದೀಪ್ತಿಯಗೊಂಡಂಥ ಕರಸ್ಥಳವು.
ಆ ಕರಸ್ಥಳಕ್ಕೆ ಆವ ಬ್ರಹ್ಮಾಂಡಂಗಳು ಸರಿಯೆಂದೆಂಬೆ?
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಶರಣರ ಕರಸ್ಥಳ[೧][ವೆ][೧] ಪ್ರಮಾಣು. ॥೪೦೬॥[I-೬೫೫]

ತವಕಿಸುವೊಡೆ ತಾಮಸಿಯೆ?
ಕೂಡುವೊಡೆ ಭೇದಿಯೆ?
ಸಂದು ಸವೆದು ಒಂದಾದ ಬಳಿಕ ಕೂಡಿಹೆನೇನ? ತವಕಿಸಿಹೆನೇನ?
ಶ್ರೀಗುರುಸ್ವಾಮಿ
ಉರುತರ ಶಿವಲಿಂಗವ ಕರಸ್ಥಳದಲ್ಲಿ ಬಿಜಯಂಗೈಸಿದ ಬಳಿಕ
ತವಕಿಸಿ ಕೂ[೨][ಡೆ][೨]ನೆಂಬ ಜಡಮತಿಗಳ ತೋಱದಿರಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೦೭॥ [I-೪೬]

ದೃಷ್ಟವಪ್ಪ ಗುರುಕರುಣದಲ್ಲಿ
ಇಷ್ಟಲಿಂಗ ಸಂಬಂಧಿಸಿದ ಬಳಿಕ ಮತ್ತೆ ಯೋಗವುಂಟೆ?
ಸರ್ವಯೋಗಕ್ಕೆ ಶಿವಯೋಗ ಮಹಾಯೋಗವಾದ ಬಳಿಕ
ಮತ್ತೆ ಕಿಱಿದು ಯೋಗಂಗಳೆಂದು
ಪಾದೋದಕ ಪ್ರಸಾದಕ್ಕೆ ಹೊಱಗಾಗಿ ಗುರುವಾಜ್ಞೆಯ ಮೀಱಿದ
ಲಿಂಗದ್ರೋಹಿಗಳ, ಜಂಗಮ ದೂರರ
ಎನ್ನತ್ತ ಹೊದ್ದಿಸದಿರಯ್ಯಾ, ನಿನ್ನ ಧರ್ಮ.

೧-೧ ವ (ಮೂ) ೨-೨ ಡಿ (ಮೂ)

ದೀಕ್ಷತ್ರಯದಲ್ಲಿ ಸಂಪನ್ನರಾಗಿ, ಪ್ರಸಾದ ಲೋಲುಪ್ತರಾಗಿ
ಜಂಗಮವೆ ಲಿಂಗವೆಂಬವರ
ಸಂಗದೊಳೆನ್ನನಿರಿಸಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗಾ, ನಿಮ್ಮ ಧರ್ಮ. ॥೪೦೮॥[I–೪೮೧]

ನೀನು ಸಕಳದಲ್ಲಿ ಸಾತ್ಮಿಸುವ ಭೇದವ,
ನೀನು ನಿಷ್ಕಳದಲ್ಲಿ ಪ್ರವೇಶಿಸುವ ಭೇದವ,
ನೀನು ಸಕಲನಿಷ್ಕಳಾತ್ಮಕವಾಗಿ ತೊಳಗಿ ಬೆಳಗುತಿಪ್ಪ ಭೇದವನು
ಅಱಿಯಲಹುದೆ? ಎಲ್ಲರಿಗೆ.
ಆನಂದಸ್ಥಾನದಲ್ಲಿ ತೊಳಗಿ ಬೆಳಗುತಿರ್ಪ
ಅಕ್ಷರದ್ವಯದ ಭೇದವ ಅನ್ಯರಿಗೆಂತಱಿಯಲಹುದಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೦೯॥[I–೫೪೧]

ಭ್ರೂಮಧ್ಯದಲ್ಲಿ ಒಪ್ಪಿಪ್ಪ ಕರ್ಣಿಕೆಗೆ
ನಿನ್ನ ಜ್ಯೋತಿರ್ಮಯದ ಬೆಳಗ ತೋಱಾ.
ಆ ಬೆಳಗಿನ ಬಳಗಂಗಳು
ಶುದ್ಧ ಸಿದ್ಧ ಪ್ರಸಿದ್ಧ ಪ್ರವೇಶಿಸಿಪ್ಪವು.
ನಿನ್ನ ಆನಂದಸ್ಥಾನದಲ್ಲಿ ಅತಿಶಯವಪ್ಪ
ಬೀಜಾಕ್ಷರದ್ವಯಂಗಳುಂಟು.
ಅದರ ಮಹಾಪ್ರಭೆಯಲ್ಲಿ ಒಪ್ಪಿಪ್ಪ
ಅವ್ಯಯ ವಾಙ್ಮನಸಾಗೋಚರನಾಗಿಪ್ಪ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ನೋಡೆನೆಂಬ ಭರವಸೆ ಘನ ತೋಱಾ ಎಲೆ ಅವ್ವಾ. ॥೪೧೦॥ [I–೬೩೩]

ಎಂದಡೆ ಅವ್ವೆ, ಅತ್ಯತಿಷ್ಠದ್ದಶಾಂಗುಲ ಆನಂದರೂಪ ತಾಳು,
ಗುರುವಾಗಿ ಶುದ್ಧದಲ್ಲಿ ತಾನೆ ಬಂದು,
ಸಿದ್ಧದಲ್ಲಿ ತಾನೆ ಬಂದು, ಪ್ರಸಿದ್ಧದಲ್ಲಿ ತಾನೆ ಬಂದು,
ಎನ್ನ ಮನದ ಮಹಾಕಾಂಕ್ಷೆಯನು ಮಾಣಿಸಿ
ಉರುತರ ತಾನೆ ಬಂದು,

ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಎನ್ನ ಮನದ ಮಸ್ತಕದಲ್ಲಿ ನೆಲೆಮನೆಯಾದ. ॥೪೧೧॥

ನಾನಾ ಭವದಲ್ಲಿ ಬಂದು, ಮಾಡಿದುದನುಂಬ
ಲೋಕದ ಲೌಕಿಕಿಗಳಿರಾ ಕೇಳಿರಿ, ನೀವು:
ಏಕೋ ದೇವನರ್ಚಿಸಿರೇ,
ಜನ್ಮಕರ್ಮವೆಂಬ ಕಾನನದೊಳಗೆ ಬೀಳದೆ,
ಐದಾಱೇಳೆಂಟೆಂದೆಂಬ ಮೃಗದ ಕೈಯ್ಲಿ ತಿನಿಸಿಕೊಳ್ಳದೆ,
ಐದು ಬಾಣವನುಳ್ಳವಂಗೆ ನೀನು ಗುಱಿಯಾಗದೆ,
ನೆನೆಯಾ ಶಿವನ ವಿಚಿತ್ರಮೂಲ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ಹತ್ತೆ ಸಾರಿ ನೀನು ಸುಖಿಯಾಗು. ॥೪೧೨॥

ಬಂದೆನಯ್ಯಾ, ಬಾರದ ಭವವ,
ಉಂಡೆನಯ್ಯಾ, ನಾನು ಮಾಡಿದುದನು.
ಇನ್ನು ಭವಕ್ಕೆ ಬಾರದಂತೆ ಮಾಡು ತಂದೆ.
ಉಣ್ಣದಂತೆ ನಿರೂಪಿಸಯ್ಯ, ಅಯ್ಯಾ ನಿನ್ನ ಧರ್ಮ.
ವಿಚಿತ್ರತರ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿನ್ನ ಹತ್ತೆ ಸಾರುವ ಮನಸಿಂಗೆ ಮಂಗಳವನೀಯಾ. ॥೪೧೩॥[I–೫೮೭]

ತನುವಿನ ಕ್ರಿಯಾಕಾರದಲ್ಲಿ ಒಡಲುಗೊಂಡು ಇಹವರು
ಉಣ್ಣೆನೆಂದಡೆ ಅವರ ವಶವೆ?
ತನುಗುಣ ನಾಸ್ತಿಯಾದವರಲ್ಲದೆ
ಉಣ್ಣೆನೆಂದಡೆ ಸಲುವುದಲ್ಲದೆ.
ಕಾಮವಿಕಾರದಲ್ಲಿ ಸಂದು,
ತಾಮಸಕ್ಕೆ ಮೈಗೊಟ್ಟು ಇಪ್ಪವರೆಲ್ಲ
ಉಣ್ಣೆನೆಂದಡೆ ಹಱಿಯದೆ
ನಿಜಲಿಂಗ ನಿಜಜಂಗಮ
ನಿತ್ಯಪ್ರಸಾದವ ಗುರು ಕರುಣದಿಂದ ಕೊಂಡು.

ಅಱಿದವರಿಗಲ್ಲದೆ ಭವವ ತಪ್ಪಿಸಬಾರದು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೪೧೪॥[I–೪೫೬]

ನಾಭೋಕ್ತವೆಂಬ ಭಾಳದಕ್ಷರವ
ತೊಡೆಯಲ್ಕಾರಳವಯ್ಯ? ಗುರು ಕರುಣವುಳ್ಳವರಿಗಲ್ಲದೆ.
ಗುರುವೆ, ಎನ್ನ ಭವಕ್ಕೆ ತಾರದೆ ತಪ್ಪಿಸಿದೆ ಅಯ್ಯಾ.
ತೋಱಿಸಿದೆ ಅಯ್ಯಾ,
ಉರುತರ ಪಾದೋದಕ ಪ್ರಸಾದವ.
ನಿನ್ನ ಗುಣದಿಂದ ತನುಗುಣ ನಾಸ್ತಿಯಾದೆ.
ನಾಭೋಕ್ತವೆಂಬುದ ಮೀಱಿ ಶಿವಭೋಕ್ತವಾದೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ ನಿನ್ನ ಕೂಡಿದೆ. ॥೪೧೫॥

ಆನೆತ್ತಲಯ್ಯಾ,
ಕ್ರಿಮಿಕೀಟಕನಾಗಿ ಹುಟ್ಟುವವನ ಹುಟ್ಟು ಕೆಡಿಸಿದೆ.
ಇನ್ನಹುದಾನೇನರಿದು ಹೇಳಾ, ಎಲೆ ಅವ್ವಾ
ನೀನು ಶುದ್ಧ ಸಿದ್ಧ ಪ್ರಸಿದ್ಧವನು ತೋಱಿ,
ಪ್ರಾಪ್ತಭೋಕ್ತಭುಕ್ತಿಯೆಂಬುದಕ್ಕೆ ಹೊಱಗುಮಾಡಿದೆ.
ಇನ್ನು ನಾನಿಪ್ಪುದೇನರಿದ್ಯೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೧೬॥[I–೧೫೨]

ಸ್ಥೂಲ ಸೂಕ್ಷ್ಮ ಕಾರಣವೆಂಬ
ತನುಗುಣಗಳ ಭೇದಿಸುವ ಪರಿಯ ಅಱಿದೆನಯ್ಯಾ, ನಿಮ್ಮಲ್ಲಿ.
ನೀ ಕಾರಣತನುವಾಗಿಪ್ಪಲ್ಲಿ
ಅಱಿದೆ ಮಹಾಕಾರಣವ.
ಅಱಿದೆನನಾಮಯನಾದೆ.
ಸೂಕ್ಷ್ಮದಲ್ಲಿ ಶುದ್ಧನಾದೆ,
ಕಾರಣದಲ್ಲಿ ಪ್ರಸಿದ್ಧನಾದೆ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿನ್ನ ಕರುಣ ಕಾನನದಲ್ಲಿ ಕಂಗೆಟ್ಟೆ. ॥೪೧೭॥[I–೮೦೭]

ಅಯ್ಯಾ, ನಿನ್ನ ಕರವೆಂಬ ಉರುತರ ಗರ್ಭದಲ್ಲಿ
ಭವಿಸಿದೆನಯ್ಯಾ.
ನಿನ್ನ ಕರುಣವೆ ಎನಗೆ ಮಹಾಕಾನನವಾಯಿತು.
ಲೋಕದ ಲೌಕಿಕಗಳು ಉಂಡಂತೆ ಉಂಡೆನಾದಡೆ,
ಬಂದಂತೆ ಬಂದೆನಾದಡೆ ನಿಜ ನಿಮ್ಮಾಣೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೧೮॥ [I–೬೧]

ಅತ್ತಲಿತ್ತ ಸುತ್ತಿ ಬಳಲಿ ವ್ಯರ್ಥವಪ್ಪ, ಮನಸ,
ನಿಮ್ಮ ಚಿತ್ತದತ್ತ ಧ್ಯಾನಿಸಿರಿಸಯ್ಯಾ.
ಇನ್ನು ನಿಮ್ಮತ್ತಲಲ್ಲದೆ
ಅತ್ತಲಿತ್ತ ಸುತ್ತಿ ಬಂದಡೆ
ವಿಚಿತ್ರ ಮೂಲ ಕಪಿಲಸಿದ್ಧ ಮಲ್ಲಿಕಾರ್ಜುನಾ ನಿಮ್ಮಾಣೆ. ॥೪೧೯॥ [I–೨೮]

ವಚನ ಪಾತಕಗಳಿಂದ ದೆಸೆಗೆಟ್ಟರು,
ಕೆಲಬರು ವಚನದಿಂದಲೈದುವರಯ್ಯ ಐಕ್ಯವನು.
ವಚನವೆ ನೆಲೆಯಾಗಿ ಚಿತ್ತ ದೊರಕೊಂಡಡೆ ಭಜಿಸುವ ಹಂಗು ಹಜಿವುದೈ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೨೦॥

ದಾಯವೆಂಬ ಕುಳಿಯಲ್ಲಿ ಅದ್ದರು,
ಅನಂತಕೋಟಿ ಜನರು.
ಆಳುತ್ತ ಮುಳುಗುತ್ತೈದಾರೆ,
ಕೋಟಿ ಕೋಟಿ ಬ್ರಹ್ಮಾದಿಗಳು.
ಆಳುತ್ತೇಳುತ್ತೈದಾರೆ ಅನೇಕ ಕೋಟಿ ವಿಷ್ಣ್ವಾದಿಗಳು.
ಗುರುಕರುಣದಿಂದ ಅಯ್ಯನಾಜ್ಞೆವಿಡಿದು
ಅಕ್ಷರದ್ವಯದ ಆಧಾರವಿಡಿದವರೆಲ್ಲಾ
ಆ ಕುಳಿಗೆ ಹೊಱಗಾದರು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂಬ
ಮಹಾಬೆಳಗಿನಲ್ಲಿ ಬಯಲಾದರು. ॥೪೨೧॥

ಕಪ್ಪಿನ ಬಣ್ಣದಾಕೆ ಇಪ್ಪಿರವನಱಿಯರು,
ಆಬೆಯ ಕೈಯೊಳಗಾದರು,
ಕೋಟಿ ಹರಿವಿರಿಂಚಾದಿಗಳು.
ಗುರುವಾಜ್ಞೆಯಿಂದ ಅಯ್ಯನಿಪ್ಪ ಅಕ್ಷರದ್ವಯವನಱಿದಡೆ
ಆಬೆಯ ಕೈಗೆ ತಾವು ಹೊಱಗಪ್ಪರು,
ಕಪಿಲಸಿದ್ಧ ಮಲ್ಲಿಕಾರ್ಜುನನ ಕಾಬರು. ॥೪೨೨॥

ಸಮನಿಸದಯ್ಯ ಭಕ್ತಿ,
ಸೀಮೆಯ ಮೀಱಿದ ಸಂಬಂಧಿಗಲ್ಲದೆ.
ಸಮನಿಸದಯ್ಯ ಐಕ್ಯವು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿನ್ನ ಭಕ್ತಿನಿಧಾನ ಎಲ್ಲರಿಗೆ ಸುಲಭವೆ? ॥೪೨೩॥

ಆಜ್ಞಾಸಿದ್ಧನರ್ಚಿಸೇನೆಂದರೆ
ಎಂತರ್ಚಿಸಲಹುದಯ್ಯ?
ಐವೆರಡನತಿಗಳೆದಲ್ಲದೆ,
ಮೂಱಾಱ ಜಱಿದಲ್ಲದೆ,
ಏಳೆಂಟನತಿಗಳೆದಲ್ಲದೆ,
ಆಱಾಱ ಮೀಱಿದಲ್ಲದೆ,
ಎಂತರ್ಚಿಸಲಹುದಯ್ಯ?
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಆನಂದವನೆಯ್ದಿದ ಆಜ್ಞಾಸಿದ್ಧರಿಗಲ್ಲದೆ
ಎಂತರ್ಚಿಸಲಹುದಯ್ಯಾ? ॥೪೨೪॥

ತಾಳಬ್ರಹ್ಮಾಂಡದಲ್ಲಿ ಆಱಿಸಳಿನಾ ಕಮಳ
ಮೇಲಿಪ್ಪನಾನತದ ಸುಖತರದಲಿ,
ಆಱಾಱನೆ ನುಂಗಿ
ಆಱು ಮತ್ತತಿಶಯವ ಮೀಱಿ
ಬ್ರಹ್ಮಾಂಡವನು ಸೂಕ್ಷ್ಮದಲ್ಲಿ

ಅತಿಶಯದ ಭೇದ ನಾನಾ ಗುಣದ ಸಂಬಂಧ
ಕಪಿಲಸಿದ್ಧ ಮಲ್ಲಿಕಾರ್ಜುನನ ಕರತಳದಲ್ಲಿ. ॥೪೨೫॥

ಗ್ರಾಮ ಪಟ್ಟಣವೈದು ಐದೈದು ನಾಯಕರು
ತೋಱಿಪ್ಪರದಕದಕೆ ಪ್ರತ್ಯಾಯವ.
ಸೀಮೆ ಸಂಬಂಧವನು ಮೀಱಿಪ್ಪ ನಾಯಕರು ನಿಂದರು.
ಗಡಿಯ ಸಂಬಂಧದಾ ಪರದಳವು ಬರಲಾಗಿ,
ಅಱಿಯದೆ[೧][ಯ್ದು][೧]ಯೆ ಕಾದಿ ಅಱಿತು ಬಿಟ್ಟರು.
ವೀರ ಧೀರವಾಗಿ, ಅಱಿವು ಮಱಹನೆ ನುಂಗಿ,
ಕುಱುಹುಗೆಟ್ಟಾ ಸೀಮೆ ತೆರಹಿಲ್ಲದಾತ ಪರಮಯೋಗಿ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನೆಂದೆಂಬ
ತೆಱಹಿನ ಪಟ್ಟಣದ ಪ್ರಭೆಯಂತುಟು. ॥೪೨೬॥ [I–೩೯೯]

ಮೇಲುಗೆಟ್ಟಾ ಸೀಮೆ, ತೆಱಹುಗೆಟ್ಟಾ ಬ್ರಹ್ಮ,
ಐದಾಱು ಕಣೆಯದಿಂ ಮೇಲೆ ದುರ್ಗ,
ಕಾಲಾಳ ನಾಯಕರು ಮೇಲೆ ರಥ ಪಾಯಕರು,
ಆರೈದು ಓರಂತೆ ದುರ್ಗದಲ್ಲಿ,
ಧಾರುಣಿಯ ಕಳ್ಳರಿಗೆ ತಾನಂಜಿ ದುರ್ಗದೊಳು
ಓರಂತೆ ಅಡಗಿರ್ದ ಕಪಿಲಸಿದ್ಧ ಮಲ್ಲಿಕಾರ್ಜುನ. ॥೪೨೭॥ [I–೬೮೬]

ತುರಗವೆಪ್ಪತ್ತಱ ಖುರಪಟದ ಘಲ್ಲಣೆಗೆ
ಹರಿದು ಎಯ್ದಿತು ರೇಣು ಬ್ರಹ್ಮಾಂಡಕೆ.
ಬ್ರಹ್ಮಾಂಡದವರೆಲ್ಲ ತಮ್ಮೊಳಗೆ ಧೃತಿಗೆಟ್ಟು
ತಮ್ಮ ಲೋಕದೊಳಿಪ್ಪ ಕೂಪ ಜಲದಾ,
ಸೊಮ್ಮಿನೊಳು ಮತಿಗೆಟ್ಟು
ನಿರ್ಮಳಜ್ಞಾನಿಯ ಸೊಮ್ಮು ತಾವಾದರೈ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೨೮॥

೧–೧ ಯಿಡಿ (ಮೂ)

ಅಜಲೋಕದೊಳಗಿಪ್ಪ ಬಹುಪರಿಯ ಕುಸುಮಕ್ಕೆ
ಮಧುಕರಂಗಳು ಬಂದು ಪೀಡಿಸುತ್ತಾ
ಬಂಡುಂಬ ತುಂಬಿಯನು ಇಂಬಪ್ಪ ಕುಸುಮವನು
ಸಂಭ್ರಮದಿ ನುಂಗಿ ತಾ ಜ್ಯೋತಿ ಬಂದು
ಜ್ಯೋತಿಯನು ಸೂಕ್ಷ್ಮಿಸಿ ದೀಪ್ತಿಯನು ಹಲವೆನಿಸಿ
ರೀತಿಯಾದುದು ದೇಸಿಯ ಪ್ರಬಲಕ್ಕಾಗಿ,
ಅಜಾತನಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ರೀತಿವಿಡಿದವರೆಲ್ಲ ನಿತ್ಯರಾಗಿ. ॥೪೨೯॥ [I-೨೪]

ಆನೆಂಬ ಕುಸುಮಕ್ಕೆ ನಾನೆಂಬ ಮಧುಕರನು
ಭಾನುವಿನುದಯದಲ್ಲಿ ವಿಕಾಸವಾಗಿ
ಸೋಮವೀಧಿಯ ಬೆಳಗಿ ಹೇಮಶೈಲದುದಯ
ಕಾಮದಂಡೆಯ ಹಿಡಿದು ಮನೆ ಮನೆಗಳಾ
ಸೀಮೆಯನು ಸಂಬಂಧ ಗ್ರಾಮಗಳನು ಮನೆ ಮನೆಗಳನು
ಆನಳದು ಕಂಡೆ ನಾ ಹವಣು ಹಲವ,
ನಿಸ್ಸೀಮನಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಸೀಮೆಯನು ಕಾಬವರು ಹಲಬರಿಲ್ಲ. ॥೪೩೦॥[I-೧೪೯]

ಬಾವಿಯೊಳಗೊಂದು ಬಾಲಚಂದ್ರನ ಜನನ
ಸ್ಥೂಲಸೂಕ್ಷ್ಮಕ್ಕೆ ತಾನು ಮೂಲನಾಗಿ,
ಆರೈದುವೋರಂತೆ ಧಾರುಣಿಯ ಸಮನವನು
ತಾನು ನಡೆಸುತ್ತಿಕ್ಕು ಸುಚಿತ್ತದಿಂದ,
ಆ ಚಿತ್ತವನು ಮನವನು ಮತ್ತೆ ಸ್ವಸ್ಥಾನದಲಿ
ಹತ್ತೆ ಸಾರಿಸಿದಾತ ನಿತ್ಯನಾ ಮತ್ತೆ,
ಕಪಿಲಸಿದ್ಧ ಮಲ್ಲಿಕಾರ್ಜುನ ಕೂಡಿ
ಚಿತ್ತವೆಲ್ಲವೂ ನಿಶ್ಚಿತ್ತವಾಗಿ. ॥೪೩೧॥

ತರುಣ ಬೆಟ್ಟದ ನಡುವೆ ತಪಸಿ ಕುಳ್ಳಿದ್ದಹನೆ,
ತಱಗೆಲೆಗಳೂ ತನಗೆ ಆಧಾರವು.

ಆದಿ ಆಧಾರ ಆಧೇಯ ಮುನ್ನಲ್ಲ
ಮೂದೇವರಿಗೆ ದೀಕ್ಷಗುರು ತಾನೆಯಾಗಿ,
ನಾನಾ ವಿಧದ ಗುಣದ ಸ್ವಾನುಭಾವದ ಮನೆಯ
ಭಾನುವಿನ ಉದಯದಲಿ ವಿಕಸವಾಗಿ,
ನಾನಾ ಗುಣರೂಪ ಕಪಿಲಸಿದ್ಧ ಮಲ್ಲಿಕಾರ್ಜುನನ
ಕೂಡಿದಾ ಸುಖತರದ ಅರೂಪುವಾಗಿ. ॥೪೩೨॥

ಮಂಗಳದ ಮನೆಯಲ್ಲಿ ಸಂಗ ತನಗಾನಂದ
ಸಂಗವೆ ನೆಲೆಮನೆಯು,
ನಿತ್ಯವಾಗಿಪ್ಪ ಶ್ವೇತ ಜಲದಲಿಪ್ಪ
ರೀತಿ ಸಂಖ್ಯೆಯನಜಿದು, ಧಾತುವನು ಅತಿಗಳದು,
ತೂಗಿ ತೂಗಿ ಆಡಿವೋದಾತನು ಮೀಜಿ ಕಂಡನು.
ಒಂದ ತೋಜಿದನು ಅತಿಶಯವ ಲೋಕಕೆಲ್ಲಾ,
ನಿರ್ಲೋಕ ನಿರ್ನಾಮ ನಿತ್ಯನು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ತೋಜಿದನು
ಸಾಯುಜ್ಯಪದವ ಮೀಜಿ. ॥೪೩೩॥

ಫಲಪದವನತಿಗಳದು ಹಲವು ಸೀಮೆಯ ಮೀಜಿ
ಹೊಲಬುಗೆಟ್ಟಾತನತಿ ಬ್ರಹ್ಮವಾದ.
ತನ್ನೊಳಗೆ ಜಗವಾಗಿ ಜಗದೊಳಗೆ ತಾನಾಗಿ
ತನುಗುಣಕೆ ತಾ ದೂರವಾಗಿ,
ಕುಜುಹುಗೆಟ್ಟಾ ಸೀಮೆ ಹಲಬರೊಳಗಿದ್ದು
ಒಲವು ನೀನಾದೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೩೪॥

ನೆಲದೊಳಗೆ ಭವಿಸಿತ್ತು ಹಲವು ಪರಿಯ ಬಣ್ಣ
ಉಲಿದಾಡುವುದು ದಾಯದಾಯದೊಳಗೆ.
ಸ್ಥೂಲ ಮೂಜಾಕೃತಿಯ ಮೇಲೆ ಸೂಕ್ಷ್ಮ ನಿಂದು
ಆ ಸ್ಥೂಲಕ್ಕೆ ಸೂಕ್ಷ್ಮಕ್ಕೆ ಅಂತ ತಾನೆ.
ಆಜೂಥದಾ ಘನವ ಆರು ಬಲ್ಲವರಯ್ಯ,

ಆಲಯುವ ಮೀಱಿಪ್ಪ ಸಂಬಂಧಿಯಾ.
ಭಾಳದಿಂ ಮೇಲಿಪ್ಪ ಕಾರಣದ ಸನುಮತ್ಯ
ಆಜ್ಞಾಱಿಂದತ್ತ ಆದನಾ ತಾ ತೋಱಿಪ್ಪ
ನಿಸ್ಸೀಮ ಆನಂದ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೩೫॥

ಜಲದೊಳಗೆ ಭವಿಸಿತ್ತು ಜಲಕೆ ನಂದದ ಕಿಚ್ಚು.
ಆ ಜಲಗಳೂ ಹಲವು ಮತ್ತೆ ತನ್ನೊಳಗೆ ಜನನವು.
ಆ ಸ್ಥಳ ಜಲಕ್ಕೆ ನೆಲೆಯಾದ ಸೀಮೆ ತಾನೆ.
ಆ ಸ್ಥಳವು ಸೀಮೆಯ ಮೀಱಿ
ಒಲವೆ ಒಡಮನೆಯಾನೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೩೬॥[I–೪೧೪]

ಎಂದಪ್ಪುದಯ್ಯ ಶಿವಭಕ್ತಿರಸವೆನಗೆ,
ಎಂದಪ್ಪುದಯ್ಯ ನಿಮ್ಮ ಕರುಣವೆನಗೆ,
ಕ್ರಿಯಾಕಾರಕ್ಕೆ ತಾನೆ ಮೂಲಿಗನಾದೆ.
ಮೊದಲುಗೆಟ್ಟೆನು ಶುದ್ಧಮೂಲದಲ್ಲಿ,
ನಿರ್ವಾಣದೀಕ್ಷೆಯಲ್ಲಿ ಒಯ್ಯನೆ ಮುಖದೋಱಿ
ಅಯ್ಯ ನೀನೆಯ್ದಿಕೋ, ಮನ ಮಧ್ಯವಾ
ಮಥನದಲ್ಲಿ ಸಂಗಮಿಸಿ, ಯಥಾ ಕಥನಕೆ ತಾನಾಗಿ,
ಸದಮಳಜ್ಞಾನಕ್ಕೆ ಮಾತೆಯಾಗಿ,
ಅತಿಶಯದ ರೂಪ ಕಪಿಲಸಿದ್ಧ ಮಲ್ಲಿಕಾರ್ಜುನನ
ನೆನಹಿನಾ ನಿರ್ಮಳದಲ್ಲಿ ಲೀಯವಾಗಿ. ॥೪೩೭॥[I–೨೨೮]

ತಾಮಸವಾದಲ್ಲಿ ತಾಮಸಿಯಾಗಿ,
ಸೀಮೆಗೆಟ್ಟಲ್ಲಿ ಸಂಬಂಧಿಯಾಗಿ,
ಅನುಮಿಷ ಮೀಱಿದಲ್ಲಿ ಆಂದೋಳವಾಗಿ,
ಸೀಮೆಗೆಟ್ಟಲ್ಲಿ ಕುಱುಹು ತಾನಾಗಿ,
ಮಹಾರ್ಣವದಲ್ಲಿ ಮಧ್ಯ ತಾನಾಗಿ,
ಎಲ್ಲಾ ಭೂತಕ್ಕೆ ದಯವುಳ್ಳ ಮಹಾಭೂತಿ ತಾನಾಗಿ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಲ್ಲಿ
ನಿತ್ಯ ಲಿಂಗಾರ್ಚನೆಯ ಮಾಡುವ
ಶಿವಯೋಗಿಯ ಪರಿಯಿಂತುಂಟು. ॥೪೩೮॥

ಪೂರ್ವಸಿಂಹಾಸನದಲ್ಲಿ,
ಮಹಾಪರ್ವತದ ಮಸ್ತಕದಲ್ಲಿ,
ಆ ಪರ್ವತಕ್ಕೆ ಕಾವಲು ಒಂಬತ್ತಾಗಿ,
ಆ ಒಂಬತ್ತ ಕೂಡಿದ ದ್ವಾರ ಕೆಳಗಾಗಿ,
ಅದಱಿಂದ ನಡೆಯುತಿದ್ದು ಸಕಲ ವ್ಯವಹಾರಂಗಳು.
ಆ ಪೂರ್ವದ್ವಾರದಲ್ಲಿ ಮಹಾಜಲ,
ಮಹಾಜಲದಲ್ಲಿ ಗಂಭೀರ ಕಮಲ,
ಗಂಭೀರ ಕಮಲದಲ್ಲಿ ಭವಿಸಿದಗ್ನಿ,
ಪೂರ್ವದ್ವಾರವ ತಾಗೆ ಅಲ್ಲಿದ್ದ ವಾಯುರಾಜನು
ದುರ್ಗ ಒಂಬತ್ತಕ್ಕೆ ಒಂದೇ ದ್ವಾರದಲ್ಲಿ ದಾಳಿಯನಿಟ್ಟು,
ನಾಯಕ ದುರ್ಗದಲ್ಲಿದ್ದ ಸುಗುಣ ಸುಜ್ಞಾನವೆಂಬ ಸರೋವರ ಹೊಕ್ಕು,
ಮೂಱು ಮೆಟ್ಟಿನ ಭಾವಿಯನ್ನಿಳಿದು,
ಆ ಜಲವ ಕದಡಲಾಗಿ,
ಬಪ್ಪ ಬಾಹತ್ತರ ನಿಯೋಗದ ಧಾಳಾಧಾಳಿಯಂ ಕಂಡು,
ಅಯ್ಯ, ಜಲವ ಹೋಗೆ, ಇವರು ಕದಡಿದ ಜಲದೊಳಗೆ
ಹೋದವರೆಲ್ಲಾ ಮುಕ್ತರಾ,
ನೀನೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಹಿಡಿಗೊಳಗಾದ. ॥೪೩೯॥

ಪರಿಭವಕ್ಕೆ ಬಪ್ಪ ಪರಮಾಣು ನೀನಲ್ಲ,
ಕುಱುಹಿಂಗೆ ಬಂದ ಸೀಮೆ ನೀನಲ್ಲ,
ಏಕಯ್ಯ ನಿನಗೆ ಪ್ರಾಪಂಚಿಕವು?
ಆನಂದಮಧ್ಯದಲಿ ಅಪರನಾಗಿ,
ಅಪರಮಧ್ಯದಲಿ ಪೂರ್ವನಾಗಿ,
ಆ ಪೂರ್ವಕ್ಕೆ ಒಡೆಯ ನೀನೆಯಾಗಿಪ್ಪೆ,
ಆರಯ್ಯಾ ಬಲ್ಲರು ನಿನ್ನ ಪರಿಯ?
ಶರಣಸತಿ ಲಿಂಗಪತಿಯಾಗಿದ್ದವರು ಬಲ್ಲರು.
ಏಕಲಿಂಗನಿಷ್ಠಾಪರರು ಅವರು ಬಲ್ಲರು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ, ಏಕಯ್ಯಾ
ಓಡಿದೆಯೆಂದು ನಂಬುಗೆಗೊಡುವಂತೆ ಕರಂಗೊಟ್ಟರು. ॥೪೪೦॥

ಹಿಡಿಗಟ್ಟಿಗೊಳಗಾದನೆಂಬ ಸುದ್ದಿಯ ಗುರು ಕೇಳಿದ.
ಕೇಳಿ ಸೈರಿಸಲಾರದೆ ಕಂಡು ಕಂಡು,
ಇರಿಸುವ ಠಾವಂ ತೋಱಿದ.
ಅಲ್ಲಲ್ಲಿಯಿದ್ದಡೆ ಎಲ್ಲಿಯೂ ಇರನೆಂದು
ಅಜಲೋಕಕ್ಕೆ ಕಳುಹಿದ.
ಅಜಲೋಕದಲ್ಲಿ ಆನಂದವೆಂಬ ಮನೆಯಲ್ಲಿ,
ಭಕ್ತಿಯೆಂಬ ಬಂಧನವಂ ಮಾಡಿ,
ಜ್ಞಾನವೆಂಬ ಕಾವಲಂ ಕೊಟ್ಟಿರಲಾಗಿ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಇನಿತು ಬಂಧನಕ್ಕೊಳಗಾದೆ. ॥೪೪೧॥

ಪಟ್ಟಣವೈದು ವಳೆಯ ಹದಿನಾಲ್ಕು
ಅಗಳೆ ಕೆಸರು ಘಾತ ಗಾಜರು ಮೂವರು
ಇಪ್ಪತ್ತೈದು ಮಂದಿ ತಳವಾರರು
ಸಮಗೂಡದೆ ಹೋರುತ್ತೈದಾರೆ.
ಗಾಜರು ಮೂವರು ಒಬ್ಬರಾಗಿ
ಕೋಟೆ ಬಿದ್ದು ಕೆಸಱಱಿತು
ಇಪ್ಪತ್ತೈದು ಮಂದಿ ತಳವಾರರ
ಮೂಲ ನಾಶವಂ ಮಾಡಿದರೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಗೆ ಕಟ್ಟುವೆ ಸ್ಥಿರಪಟ್ಟ. ॥೪೪೨॥

ಆಜ್ಞಾಸಿದ್ಧನ ಆನಂದಸ್ಥಾನದಲ್ಲಿ ಕಂಡೆ,
ಒಪ್ಪಿರ್ದ ಶುದ್ಧ ಸಿಂಹಾಸನಾಱೂಢನಾಗಿ,
ಒಪ್ಪಿರ್ದ ಅಪರ ಮಧ್ಯ ಪೂರ್ವವೆಂಬ
ಹೋಬಳಿಗೆ ತಾನೆ ಹೊಲಬಿಗನಾಗಿ,
ಬಂದವರನೊಳಕೊಂಡು ಬಹವರನು ಕರೆವುತ್ತ
ಬಾರದವರನೇಡಿಸುತ್ತ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಅಜ್ಞಾನಭರಿತನಾಗಿ ಇದ್ದಾನು. ॥೪೪೩॥

ಹಲವು ದಳವ ಮೆಟ್ಟಿ ಪರೀಕ್ಷಿಸುವ
ಪ್ರಭಾಕರನ ಪರಿಯ ನೋಡಾ!
ಅಜ್ಞಾನಕ್ಕೆ ತಾನೆ ಹೊಲಬಿಗನಾಗಿ
ಕಿಱಿಕಿಱಿದಱಲ್ಲಿ ಹಿರಿಹಿರಿದಾಗಿ
ನೀನೆರವ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ವಿಚಿತ್ರ ವಿನೋದಿ. ॥೪೪೪॥

ಮನೆಮನೆಯ ಮುಂದೆ ಹರಿಹರಿದು ಹಲವು
ಕ್ಷುಧೆಯೆಂಬವಳ ಪರಿಯಿಂದ
ತಾನಾ ಪರಿ ವಿಪರೀತನಾದ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಮೂವರಿಂದ ಮೂಲನಾದೆ. ॥೪೪೫॥

ಸ್ತ್ರೀಯರು ಮೂವರ ಮುಂದುಗೆಡಿಸಿತ್ತು ಮೋಹ,
ಅಱಿಯರಯ್ಯ ತಾವೊಂದು ದೇಹವುಂಟೆಂಬುದ.
ಅಱಿಯರವ್ವಾ ತಾವೊಂದು ರೂಪುಂಟೆಂಬುದ.
ತ್ರಿಗುಣಾತ್ಮಕ ಏಕವಾಗಿ ರೂಪು ಅರೂಪವಾದರೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ನೆರವ ನೆನಹಿನಲ್ಲಿ ಲೀಯವಾದಳು. ॥೪೪೬॥[I–೮೦೫]

ಪೃಥುವಿಯ ಪ್ರಮಾಣಗಳನಿರ್ದಾಟಿಸಿ
ಪ್ರಮಾಣ ಕಟ್ಟಿದ ನೆಲೆಮನೆ ಅಯ್ಯಾ ನಿನ್ನದು.
ಬಳಸುತ್ತಿಪ್ಪಿ ಹಲವು ವ್ಯವಹಾರವ
ಕೊಂಡ ಭಂಡಂಗಳೆಲ್ಲಾ ತೀರಿ ನಿನ್ನ ಮೇಲುವಾಯ್ದರೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಭಕ್ತಿ ಜ್ಞಾನ ವೈರಾಗ್ಯನಾದಾ. ॥೪೪೭॥

ಮರುಳುನತದಲ್ಲಿ ಭ್ರಮಿಸಿ
ಫಲಪದಕ್ಕೊಳಗಪ್ಪವನ ಎತ್ತಿದ ಗುರು.
ಆ ಜ್ಞಾನಸಿದ್ಧನನರ್ಚಿಸಲ್ಕೆ

ಪರ್ಯಾಯವಿದೆಂದು ತೋಱಿದ ಗುರು ಬಸವಣ್ಣ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಸರ್ವಸ್ವವನೊಪ್ಪಿಸಿ
ಎನ್ನ ತನ್ನಂತೆ ಮಾಡಿದ ಗುರು ಬಸವಣ್ಣನು. ॥೪೪೮॥[I–೬೬೧]

ನೀರು ನೀರನೆ ಕಡಿದು,
ನೀರೊಳಗೆ ವುತ್ಪತ್ಯ ನಿರಾಲಂಬರೂಪ.
ಅರಣ್ಯದೊಳಗೆ ಮತ್ತೋರಂತೆಯಿದ್ದಡೆ,
ಕಾರಣವ ಹೇಳುವೆ:
ಭಕ್ತಿರೂಪ ಮೂಱು ತಾನೆಯಾಗಿ,
ಆಱುಱಲಿ ಅನುಕರಿಸಿ, ಆಱಾಱನೆ ಮೀಱಿ,
ಗುರುಕರುಣದಾ ತೋಱುವ ಶಿವಭಕ್ತಿ ಮೀಱಿಪ್ಪ ವೈರಾಗ್ಯನಿರು
ನಿರ್ಮಲವಜ್ರ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೪೯॥[I–೫೪೪]

ಮಠದಲ್ಲಿ ಮೂವರು ಮಠದಲ್ಲಿ ಹೊಱನೈವರು,
ಕುಟಿಲವನು ಬೆಳಸುತ್ತಲನುಪಮದಾ
ನಿಟಿಲಾಕ್ಷ ಸೀಮೆಯನು ದಾಟೆವು ಎಂದೀಗ
ಕುಟಿಲವೆ ತಮಗೊಂದು ಅಂಗವಾಗಿ,
ನಿಟಿಲಾಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನು
ಅಟಮಟವ ತೋಱಿ ತಾನೆ ಅಗಲಿದಾ. ॥೪೫೦॥ [I–೬೩೭]

ಆಜ್ಯಲೋಕದಲ್ಲಿ ಅಬಲೆ ಅಮೃತಕೊಡನನೆ ಹೊತ್ತು
ಸದಮದಜ್ಞಾನಿಯಾಗಿ ತಂ ರೂಪಿನಾ
ದಾಯೆ ದಾಯವ ನುಂಗಿ
ಬಣ್ಣ ಬಣ್ಣವ ನುಂಗಿ
ಸರದಿ ಸರದಿಯ ಮೇಲೆ ಉತ್ಕೃಷ್ಟದಾ,
ಐಲೋಕದಿಂ ಮೇಲೆ ಆ ಕೊಡನನಿಳುಹಲ್ಕೆ
ಕೊಡನೊಡದು ಅತ್ಯಂತ ಪ್ರವಾಹದಾ ನುಡಿಯ ಗಡಣವ ಮೀಱಿ
ಅಕ್ಷರದ್ವಯದಲಿ ಮೃಡನೊಡನೆ ಓಲಾಡಿದೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೫೧॥

ಕಂಜಕರ್ಣಿಕೆ ನಿನ್ನ ರಂಜನೆಯ ಪರಿ ಹೊಸತು,
ಭಂಜಿಸುತ್ತದೆ ಲೋಕವಿರೇಳನು,
ಕಂಜನಾಳದ ಒಳಗೆ ಕುಂಜರನ ಗಮನದಲಿ
ರಂಜಿಸುತ್ತದೆ ಸ್ಥೂಲಸೂಕ್ಷ್ಮದಲ್ಲಿ.
ಅಯಂಜನಾನಾಯೆಂಬ ಅಕ್ಷರದ ಹತ್ತಾಱ
ರಂಜಿಸಲ್ಕೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೫೨॥

ಹದಿನಾಱು ಅಕ್ಷರದ ಹವಣ ಬಲ್ಲವರಾರು
ಅಜಲೋಕದಿಂ ಕೆಳಗೆ ತಾನೆ.
ಅರಸೂಸದ ಮದದ ಹದಿನಾಱು ಕಳೆಯ
ಮತ್ತೆರಡೆಂಟು ಉಳಿಯಬಲ್ಲಡೆ
ಆತ ಬ್ರಹ್ಮನಾದಾ ನಾದಬಿಂದುವಿನಲ್ಲಿ,
ಸಾಧಿಸಿದ ಸುಧೆಯದು
ಆದ ಹರಿವಿಷ್ಣುಗಳಿಗಳವಲ್ಲದು
ಮೂದೇವರೊಡೆಯ ಕಪಿಲಸಿದ್ಧ ಮಲ್ಲಿಕಾರ್ಜುನನ
ಭೇದಿಸಿದ ಭಕ್ತಂಗೆ ಪಥ್ಯ ತಾನು. ॥೪೫೩॥

ಬಿಂದು ಮೂವತ್ತಱೊಳು ಸಂದ ಅಕ್ಷರವಾಱು
ಒಂದಕ್ಕೆ ಅಕ್ಷರವು ಆಱು.
ಆಱೂನೆಲ್ಲ ಘಟ್ಟಣೆಗೆ ಮುನ್ನ
ಫಲಿತವಾಯಿತು ಮಠವು.
ಮಠದಿಂದ ಮೇಲೆ ತಾಣಕಂಬನಿಱುಗೆ
ಕಂಬದಿಂ ಮೇಲೊಪ್ಪಿ ಇಂಬಪ್ಪ ತುಂಬಿಯ
ಶಂಭುವೆಂಬಾ ಕುಸುಮ ವಿಕಸವಾಗೆ,
ಅಂಬರದ ಮೇಲೀಗ ಬಿಂಬವೆಸೆದುದ ಕಂಡೆ,
ಶಂಭುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೫೪॥

ಮೂಱು ಮಠ ಮೂವತ್ತು ಆಱಾಱ ತೋಱುತಿದೆ
ಮೀಱಿಪ್ಪ ಬೊಮ್ಮ ತಾ ಹಮ್ಮಡಗಿತು.

ಮಠವು ತಾನೊಂಬತ್ತು ಕುಟಿಲವು ಹಲವಾಗಿ
ನಿಟಿಲನೇತ್ರನ ರೂಪು ಅಜಲೋಕದ
ಆದಾಖ್ಯದೇಹದವರಾರು ಹೊಗಲಿಲ್ಲ.
ಮೂದೇವರಿಗೆ ತಾನು ಶಕ್ಯವಲ್ಲ,
ನಾದಬಿಂದು ಕಳಾತೀತ ಕಪಿಲಸಿದ್ಧ ಮಲ್ಲಿಕಾರ್ಜುನನ
ಆದಿ ಮಧ್ಯವನಜೆವ ಯೋಗಿ ಯಾರು? ॥೪೫೫॥[I–೬೮೩]

ಸಾಗರದ ಮಧ್ಯದಲಿ ಭಾವಿಸುವ ಬಹಿರಂಗ
ಆಗಮಂಗಳಿಗದು ಹೊಱಗು ತಾನು.
ಯೋಗಕ್ಕೆ ಮೂಲವದು, ಯೋಗಕ್ಕೆ ಸಿದ್ಧವದು
ಯೋಗಕ್ಕೆ ಅತ್ಯಂತ ಪರಮಸೀಮೆ.
ಆದಾಖ್ಯ ತತ್ವದಲಿ ಸಂದು ಸವೆದರಿಗಿಲ್ಲ
ಆದಿ ಅಕ್ಷರದ್ವಯದ ಪರಿಯಿಂತುಟು.
ಮೂದೇವರೊಡೆಯ ಕಪಿಲಸಿದ್ಧ ಮಲ್ಲಿಕಾರ್ಜುನನ
ಭೇದಿಸುವ ಯೋಗಿಯನು ಕಂಡು ನಗುವೆ. ॥೪೫೬। [I–೭೮೦]

ಸದಮದ ಚಿದ್ರೂಪ ಒದವಿಪ್ಪ ಪ್ರಾಪಂಚ
ಮಥನಕ್ಕೆ ಮಂಗಳದ ಸಂಗವೆರಡ
ಮೀಱಿಪ್ಪ ಸಂಬಂಧ ಆಱಱಿಂದಂ ಮೇಲೆ
ಅತ್ಯತಿಷ್ಠ ಸೀಮೆಯನು
ಸಂಬಂಧ ಹೊಲಬನಾರಯ್ಯ ಬಂದ
ನಿಸ್ಸೀಮ ಕಪಿಲಸಿದ್ಧ ಮಲ್ಲಿಕಾರ್ಜುನ. ॥೪೫೭॥

ಗಡಣ ಸಂಗಮದಲ್ಲಿ ಮೃಡನನರ್ಚಿಸ ಬಂದೆ
ಮೃಡ ಸಿಲುಕುವನುವಲ್ಲ ನಿನ್ನ ಕರದ,
ಕರ ಕರದ ಸಂಬಂಧ ಸಿಲುಕುವನ
ಸಾಯುಜ್ಯ ಕರದಿಂದ ಮೇಲೆ ತಾ
ಮಂಗಳಾಂಗ ಬೆಳಗುವಂ ದೀಪ್ತಿಯಲಿ.
ನೆನಹು ಅಕ್ಷರದ್ವಯದ ಅನುಮಿಷದ ಸಿದ್ಧ ಆದ್ಯಂತ

ಶೂನ್ಯ ಕಪಿಲಸಿದ್ಧ ಮಲ್ಲಿಕಾರ್ಜುನನ
ಭೇದ ಭೇದಿಗೆ ಅಲ್ಲದೆ ವೇದ್ಯವಲ್ಲ. ॥೪೫೮॥

ಸಾದಾಖ್ಯ ದೇಹದಲಿ ಭೇದಿಸೇನೆಂದೆಂಬೆ
ಆದಿ ಅಕ್ಷರದ್ವಯದ ಪರಿಯಿಂತುಟು.
ಮೋದವಾಮೋದದಲಿ ಆನಂದದತಿಶಯದ ಸಂಗವಿಂತು
ನಾದಬಿಂದುಕಳಾತೀತ
ಕಪಿಲಸಿದ್ಧ ಮಲ್ಲಿಕಾರ್ಜುನನ
ಭೇದ ಭೇದಿಗೆ ಅಲ್ಲದೆ ವೇದ್ಯವಲ್ಲ. ॥೪೫೯॥

ಆದ್ಯಕ್ಷರದ್ವಯವು ಅಜಲೋಕದ
ಹೆಸರಿಡಲಿಕಳವಲ್ಲ ಹೆಸರುಗೆಟ್ಟಾ ಸೀಮೆ ಪಸರಿಸುತಿಕ್ಕು
ಮತ್ತಾನಂದದ ಹೆಸರಿಡುವ ಸೀಮೆಯನು ಗುರುವಾಗಿ ಪಸರಿಸಲು
ವಸುಧಿ ಕಂಡಿತು ಒಂದು ಲಿಂಗರೂಪ.
ಆನಂದರೂಪ ಕಪಿಲಸಿದ್ಧ ಮಲ್ಲಿಕಾರ್ಜುನಾ
ಸೀಮೆಯೊಳಗಡಗಿಪ್ಪನಂತ ಬ್ರಹ್ಮಾಂಡವು. ॥೪೬೦॥

ನೀರೊಳಗೆ ಯಂತ್ರವನೆ ಹೂಡಿ
ನಿರಾಮಯವ ತುಂಬುವಿರಿ.
ತುಂಬಿದ ನೀರೊಳಗೊಲೆಯ ಹೂಡಿ
ಆಡುವೆ ಸುಡುವಿರಂತರಂಗವ.
ನೀವು ನೋಡಲೊಡನೆ ಎಲ್ಲ ಉತ್ಪತ್ಯವಾಯಿತು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೪೬೧॥[I–೫೪೫]

ಸಜ್ಜನವಾಳವೆ ತಾನಿತೆಂಬೆ
ಅಲಸಿದಡೆ ಹಜಿವುದೆ ಅಯ್ಯ ಐಕ್ಯಪದವು?
ಐನಾನಾಕ್ಷರದ ಅಂತಪೂರ್ವವನಜಿದಡೆ
ಐಕ್ಯನಿನಗರಿದಿಲ್ಲ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೬೨॥

ಮೂಱಱಿಂದಂ ಮುನ್ನ,
ಮೂಱಱಿಂದಂ ಹಿಂದೆ,
ತೋಱಿಪ್ಪುದಾಱಾಱು ಅತ್ಯತಿಷ್ಠ.
ಐದಾಱು ಏಳೆಂಟತಿಗಳೆಯ ಬಲ್ಲಡೆ,
ತಾನು ಚಿದ್ರೂಪ ಕಪಿಲಸಿದ್ಧ ಮಲ್ಲಿಕಾರ್ಜುನ. ॥೪೬೩॥

ಅರ್ಪಿಸೇನೆಂದೆಂಬೆ? ಅರ್ಪಿತವೇತಕ್ಕೆ?
ಅರ್ಪಿತವಾರಿಗೆ? ಅರ್ಪಿತದ ಪರಿಯೆಂತುಟಯ್ಯ?
ಅರ್ಪಿತದ ಮುಖವ ಬಲ್ಲವರಾರು? ಚನ್ನಬಸವಣ್ಣನಲ್ಲದೆ.
ಅರ್ಪಿತವುಳ್ಳಡೆ ಕಲ್ಪಿತವೇಕಯ್ಯ ಕಾಡಿ[ಹ]ವು?
ಅರ್ಪಿಸುವ ಭೇದವ ಚನ್ನಬಸವಣ್ಣ ಬಲ್ಲ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಅರ್ಪಿಸಿ ಸುಖಿ ಚನ್ನಬಸವಣ್ಣ, ಸಾವಧಾನಿ ನಿರಂತರಂ. ॥೪೬೪॥

ಅಭ್ಯಾಸದಲ್ಲಿ ಅನುಭವಿಗಳೆಲ್ಲರೂ
ಅಧಿಕ ಭಕ್ತಿಯೆಂದಪ್ಪುದಯ್ಯ? ಎಲ್ಲರಿಗೆ.
ವಾಕ್ಯದಲ್ಲಿ ನುಡಿದೀಗ, ಕಾಯಕದಲ್ಲಿ ಮಾಡೀಗ,
ಭಕ್ತಿಯಪ್ಪುದೆ ಮಾನಸವು ಮುಟ್ಟದನ್ನಕರ?
ಮಾನಸಭಕ್ತಿ ಸಂಪನ್ನರಾದರೆ ತಾವು,
ನೀನಪ್ಪುದೇನರಿದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೬೫॥ [I–೩೪]

ಇಚ್ಛೆಯ ನಡೆವ, ಅಚ್ಚಿಗ ಬಡುವ,
ತುಚ್ಛರಿಗೆಂತಪ್ಪುದಯ್ಯ? ಶಿವಭಕ್ತಿ ಸಾಕ್ಷಾತ್,
ಇದು ನಿಶ್ಚಯವೆಂದು ಅಱಿಯದನ್ನಬರ.
ಮಾತಿನ ಬೂತುಗಳಿಗೆ, ಭ್ರಾಂತುಳ್ಳ ಚಿತ್ತರಿಗೆ,
ರೀತಿ ಶಿವಭಕ್ತಿಯೆಂತಪ್ಪುದೈ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೬೬॥[I–೧೯೫]

೧–೧ ಯ (ಮೂ)

ನಿಜವ ನಂಬಿದ ಬ್ರಹ್ಮ ಅಜಲೋಕದಲ್ಲಿಪ್ಪ.
ಭಜನಾಕ್ಷರದ್ವಯದ ಸಿಂಹಾಸನದ
ನೆಲೆಯ ಮೇಲಿಟ್ಟು ಕುಱುಹುಗೆಡಬಲ್ಲಡೆ,
ತೆಱಹಿಲ್ಲ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೬೭॥

ಮೇರುವಿನ ಮಧ್ಯದಲಿ ಓರಂತೆ ಸುಧೆವರಿದು
ಆರಾರು ಆಱುವರ್ಗೈ ಆತ್ಯತಿಷ್ಠ.
ಧಾರುಣಿಗೆ ವರಿಯದಾ ಮೇಲಪ್ಪ ಪಸರದ
ಮೂಱು ಮಸ್ತಕದಲ್ಲಿ ಅಱಿತು ಅಱಿತ,
ಓರಂತೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ಅಹೋರಾತ್ರಿಯಲಿ ಅಱಿಸಿ ಕಂಡೆ ನಾನು. ॥೪೬೮॥

ಆಱೂಢದೈಕ್ಯವನು, ತೋಱಿಪ್ಪ ಸೀಮೆಯನು,
ಮೀಱಿಪ್ಪದೊಂದೊಂದು ಬಿಂದು ರೂಪು.
ಬಿಂದುವನು ಕಳೆಗಳನು ಸಂಧಿಸುವ ಭೇದವನು
ಚಂದ್ರಮಂಡಲದಲ್ಲಿ ಒಪ್ಪಿ ತೋಱ್ಯೈ
ಆನಂದದಕ್ಷರಂಗಳೆಂದದವಿದೆಂದಡೆ
ಹಿಂದು ಮುಂದುಗೆಡುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೬೯॥[I-೧೬೩]

ಮೂಱಾಱ[೧]ಮೇಲೆ[೧] ಆಱೂಢದದು ಸಮತೆ,
ಆಱು ಬಣ್ಣವ ಮೀಱಿದದು ಅಚಳ ಸಮತೆ,
ತೋಱಿಪ್ಪ ತಮಗಳನು ಮೀಱಿಪ್ಪುದದು ಸಮತೆ,
ಗಾಱು ಮಾಡದು ಸಮತೆ.
ಜ್ಞಾನಮೂಲದಿಂ ಮೀಱಿಪ್ಪುದದು
ತತ್ವ ಮೂವತ್ತಾಱರ ಮೇಲೆ ತೋಱಿಪ್ಪುದದು
ನೀನು ಮೀರಿಪ್ಪ ಸಮತೆ ಸಂಯೋಗ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೭೦॥

೧-೧ ಜೆಮ್ಮೇಲೆ(ಮೂ)

ವರ್ಗ ಪಟ್ಟಣದಲ್ಲಿ ಎರಡೆಂಟು ಕಳೆಗಳನು
ಹದುಳ ಪಟ್ಟಣಮಾಡಿ ಒಪ್ಪಿತೋಜಿ
ಸಮತೆ ಅಧಿಕಾರದಲಿ ಸುಮತಿಯಾದುದು.
ಗ್ರಾಮ ಭ್ರಮೆಗೆಟ್ಟುದ್ದೈ ಬಿಡು ಜ್ಯೋತಿರ್ಮ[ಯ]ಯವ್ವೆ.
ಆನಂದ ಪಾತ್ರೆಯಲಿ ಸಮತೆ ತೈಲವನೆಱೆಯೆ
ಬೆಳಗು ಪ್ರಭೆಯಾಗಿ ದೆಸೆದೆಸೆಗೆವರಿದು,
ಅತಿಶಯದ ನಿತ್ಯ ಕಪಿಲಸಿದ್ಧ ಮಲ್ಲಿಕಾರ್ಜುನನ
ಎಯ್ದಿದ ಬೆಳಗು ಸಮತೆಯಾದೆ. ॥೪೭೧॥

ಹೊಲಬು ಸೀಮೆಯೊಳಗೆ ಹೊಲಬ ಮೀಱಿದ ಅಸೀಮ
ಕುಲಗೆಟ್ಟ ಸಮತೆ ಸೀಮೆಯ ಸೀಮೆಯಾ.
ಈ ದೆಸೆಗೇಡಿ ಸೀಮೆಯನು ವಶಮಾಡಬಲ್ಲಡೆ
ಸಮತೆಗಲ್ಲದೆ ಮತ್ತೆ ವೇದ್ಯವಲ್ಲ.
ಆನಂದಸ್ಥಾನದಲಿ ಸಮತೆ ಸುಮತಿಯ ಭೇದ
ಆಱೂಢ ಕೂಟ ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡಿದ
ಆನಂದ ದಾರಿ ತಾ ಸಮತೆ ರೂಪ. ॥೪೭೨॥

ಎರಡೆಂಟು ಗ್ರಾಮದಲಿ ಮಡಿದಿಪ್ಪ ಬ್ರಹ್ಮಾಂಡದತಿಶಯದ
ಕುಳ ತಾನು ಸಮತೆ ರೂಪುಯೆನ್ನು ನೀ.
ಸಮತೆಯನು, ಮುನ್ನಾದ ಸಮತೆಯನು ಮನ್ನಣೆಯ ಸಮತೆ
ದ್ವಾದಶ ಗ್ರಾಮದ ಸೀಮೆ ಸಾಹಿತ್ಯದಲಿ
ಸೋಮಪ್ರಭೆಯೊಂದಱಲಿ ತಾಮಸವಾದಲ್ಲಿ
ತನು ತನ್ನಯ ಗ್ರಾಮಸೀಮೆಯನಱಿದು
ನಿತ್ಯಸಾಯುಜ್ಯದಲಿ ಸಮತೆಸಾಯುಧನಾದೆನಯ್ಯ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೭೩॥

ಎನ್ನದಿರು ಅನ್ಯವನು
ಅನ್ಯ ತಾ ತನ್ನೊಳಗೆ ಬಿನ್ನಾಣವೇನು.
ಲೋಕದ ಹೊಱಗೆಯೂ ಅನ್ಯತವು ಬೇಡ,

ತಾ ತನ್ನೊಳಗೆ ಬಿನ್ನಾಣದಿಂ ತಿಳಿದು ನೋಡು.
ಸಮತೆಯೊಳಗೆ ಬೇಱನ್ಯವೆ ಇಲ್ಲ
ತನ್ನೊಳಗೆ ಸರ್ವವೂ ಬಿನ್ನಾಣವೇನದಱ
ಪರಿ ಬೇಱೇನು ಹೇಳಾ,
ಸನ್ನುತವು ಸಮತೆಯ ಅನನ್ಯತವು ಆದರೆ
ತನ್ನೊಳಗೆ ಸರ್ವವೂ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೭೪॥

ಯೋಗಮೂರುತಿ ಸಮತೆ,
ನಾದಬ್ರಹ್ಮದ ಸಮತೆ, ಆದಿಯಾಧಾರಕ್ಕೆ ಮಾತೆ ಸಮತೆ.
ಮೂದೇವರಿಗೆ ಕುಲಗುರು ತಾನು.
ಸಮತೆಯನು ಭೇದಿಸಿದ ಸಿದ್ಧ
ಸುಮತಿಯ ಸಂಗಮಾ ಆದಿಯಕ್ಷರದಲ್ಲಿ
ಆಮೋದ ಬಿಂದುವಿನ ಆನಂದ ಧಾತು ತಾ ಸಮತೆರೂಪು.
ಸುಜ್ಞಾನಭರಿತನು ಕಪಿಲಸಿದ್ಧ ಮಲ್ಲೇಶ್ವರನ
ರೂಪು ಮಾಡಿದ ಗುರು ಸಮತೆರೂಪು. ॥೪೭೫॥

ಸಕಲಶ್ರುತಿಗಳು ನಿನ್ನ ಅನುಮಿಸಿದ ವಾಸನೆಗೆ
ಮುಸುಕಲಮ್ಮದೆ ತೊಲಗಿ ಹೊಗಳುತಿರಲು,
ನಾನೆ ಅಭೇದ್ಯಯೆಂದು ಹೊಗಳುವ ವೇದ
ಸಮತೆ ಸಾಯುಜ್ಯದಲಿ ದೀಕ್ಷೆಯವಕೆ.
ದೃಷ್ಟವಪ್ಪವ ನೀನು ಶ್ರುತವೆಂದು ಹೇಳುವೆ,
ಅತಿಶಯದ ಶ್ರುತ ದೃಷ್ಟಕೆ ಒಡೆಯನಾದವನೆ
ಹದುಳದಿಂದರ್ಚಿಸಾ ಸಮತೆ ಪದವಾ.
ಸಮತೆ ಸಜ್ಜನರೊಂದು ನೆನಹಿನಲಿ ಮೂರ್ತಿಯ್ಯೆ,
ಕರುಣ ವಾರುಧಿಗಳದಱ ಕೆಲಬಲದಲಿ.
ಕರುಣಾಕರನು ಕಪಿಲಸಿದ್ಧ ಮಲ್ಲೇಶ್ವರನು
ಸಮತೆ ಸಂಯೋಗದಲಿ ಸುಖಿಯಾದನು. ॥೪೭೬॥

ಶ್ರೀಕರ ಬ್ರಹ್ಮಾದಿಗಳೇನು ಕಾರಣ
ಯೋನಿ, ನಾನಾ ಭವಂಗಳಲಿ ಬಂದರಯ್ಯ.
ಧ್ಯಾನ ಮೌನ ಸಮಾಧಿಕಾರಣದ ಸಮತೆಯನು
ಭೇದಿಸಲು ಅಜಿಯದೆ, ನಾನಾ ಭವಂಗಳಲಿ ಮಗ್ನವಾಗಿ,
ಅನಾದಿ ಸಂಸಿದ್ಧ ಕಪಿಲಸಿದ್ಧ ಮಲ್ಲಿಕಾರ್ಜುನ
ಆದಿಯಕ್ಷರ ಸಮತೆ ಸಮಗೂಡದು. ॥೪೭೭॥

ಕರಣಾದಿ ಗುಣಗಳನು ಕಳೆಯಲೀಯದೆ ಕಳೆದು,
ಹದುಳವಿರಿಸಿದ ಮನದ ಮಧ್ಯದಲ್ಲಿ.
ತನುತ್ರಯದ ಮಲತ್ರಯವ ಅಜಲೋಕದಲು ಸುಟ್ಟು,
ಹದುಳವಿರಿಸಿದ ಸಮತೆ ಸಂಗಮದಲಿ.
ಕರುಣಾಕರನೆ ಕಪಿಲಸಿದ್ಧ ಮಲ್ಲೇಶ್ವರನ
ನೆನಹ ತೋಱುವ ಮುಕುರ ಸಮತೆ ರೂಪು. ॥೪೭೮॥

ನಿತ್ಯಲಿಂಗಾರ್ಚನೆಯ ಅತ್ಯಂತದಿಂ ಮಾಡಿ
ಮತ್ತೆ ಸಮತೆಯ ಕೈಯಲನುಜ್ಞೆ ತೊಡದು
ನಿತ್ಯಗುರು ಶ್ರೀ ಕಪಿಲಸಿದ್ಧ ಮಲ್ಲೇಶ್ವರನ
ಅರ್ಚಿಸುವ ಭಕ್ತರಿಗೆ ಭವದೂರವೈ. ॥೪೭೯॥

ಬೇಕು ಬೇಡೆನ್ನದೆ, ಸಾಕು ಸವಿಯೆನ್ನದೆ,
ಆಕಾರವಿದು ತಾನು ಒಲ್ಲೆನೆನದೇಕೈಕ ರುದ್ರ ನಾನಾದೆನು ಎನ್ನದೆ,
ಅನೇಕ ಪರಿಯಿಂ ಭಜಿಸು ಸಮತೆ ಪದವಾ.
ಆ ಪದದ ಫಲದಿಂದ ನೀ ತಾನೆ ಅಪ್ಪೆಯೈ
ಏಕೆ ಭ್ರಾಂತಪ್ಪೆಯೈ.
ಗುರು ಕರುಣವು ತನ್ನ ಪದವನೆಯ್ದಿತ್ತು.
ನಿನ್ನ ಭವನಾಶವನು ಮುನ್ನವೆ ಮಾಡೂದು
ನಂಬು ಕಪಿಲಸಿದ್ಧ ಮಲ್ಲೇಶನಾ. ॥೪೮೦॥

ಬಿಳಿಯ ತತ್ತಿಯೊಳಗೆ ಹಲವು ಬ್ರಹ್ಮಾಂಡವೈ,
ಒಲವಿಂದಲಿಪ್ಪವವು ಸಮತೆ.
ತಾಯಿ ಹಲವು ತತ್ತಿಯನಿಟ್ಟು
ಮರಳಿ ಆಡುತ್ತಿಪ್ಪುದದು ಕರುಣ ಸಮತೆಯ ಸಾಕ್ಷಿಯೆನಿಪ ಭಕ್ತಿ.
ಕರುಣಾಕರನು ಕಪಿಲಸಿದ್ಧ ಮಲ್ಲೇಶ್ವರನು
ಇಂಥ ಸಕಲವನು ಧರಿಸಿ ಶರಣರ ಕರದಲಿ. ॥೪೮೧॥

ಕರದ ಮಹಾತ್ಮೆಯನು ಹೊಗಳುವರೆ
ಎನ್ನಳವೆ ಕರುಣಾಕರನೆ ಬಲ್ಲ.
ಗುರುರಾಯನು ಹಲವು ಬ್ರಹಾಂಡವನು
ಒಳಗಿಟ್ಟು ಘನವನು ಧರಿಸಿರ್ಪಡದು
ಭಕ್ತಿ ಕರವು ನೋಡಾ.
ಕರುಣಾಳು ಕಪಿಲಸಿದ್ಧ ಮಲ್ಲೇಶ್ವರನು,
ಶರಣರ ಕರವನು ಹೊಗಳವವು ವೇದಂಗಳು. ॥೪೮೨॥[I-೩೧೩]

ಅರ್ಚಿಸಲು ಬೇಡವದು, ಪೂಜಿಸಲು ಬೇಡ,
ನಿತ್ಯ ಜಪತಪವೇನು ನಿನಗೆ ಬೇಡ.
ಸಚ್ಚಿದಾನಂದ ಗುರು ಕಪಿಲಸಿದ್ಧ ಮಲ್ಲಿಕಾರ್ಜುನನ
ಬಸವಾಕ್ಷರತ್ರಯವ ನೆನೆ ನಿತ್ಯಪದವು. ॥೪೮೩॥

ಬಸವನನು ನೆನೆಯದರ। ಬಸವನನು ಹಾಡದರ।
ಬಸವಾಕ್ಷರತ್ರಯದ ಜಪವಿಲ್ಲದ॥
ದೆಸೆಗೇಡಿ ಮನುಜರನು। ತೋಱಿಸದಿರೈ ತಂದೆ।
ವಿಸಮಾಕ್ಷ ಕಪಿಲಸಿದ್ಧ ಮಲ್ಲೇಶ್ವರಾ॥ ॥೪೮೪॥[I-೫೯೪]

ಬಸವನನು ಹಾಡುವರ। ಬಸವನನು ಹೊಗಳುವರ।
ಬಸವನನು ಗುರು ಚರವು ಇಷ್ಟವೆನಿಪ॥
ಸದಮದಜ್ಞಾನ ಸದ್ಭಕ್ತರ।
ಹೊರೆಯಲಿರಿಸೈ ಯೋಗಿನಾಥಾ॥ ॥೪೮೫॥ [I-೫೯೬]

ಭಸಿತ ರುದ್ರಾಕ್ಷಿಯನು ಧರಿಸಿ
ಸಂಪ್ರೀತಿಯಲಿ ಬಸವಾಕ್ಷರತ್ರಯವ ನೆನೆವುತಿರ್ಪ
ಶರಣರೆ ಇಹಲೋಕ ಪರಲೋಕದ ಭ್ರಮೆಗೆಟ್ಟು ಇರುತಿರ್ಪ.
ಇಹಲೋಕವೆ ರುದ್ರಲೋಕ ತಾನು.
ಕರುಣಾಕರನು ಕಪಿಲಸಿದ್ಧ ಮಲ್ಲೇಶ್ವರನ
ಶರಣರಿಪ್ಪುದೆ ರುದ್ರಲೋಕ ತಾನು. ॥೪೮೬॥ [I–೬೨೬]

ಬಸವಸ್ತುತಿ – ಪ್ರಸಾದಸ್ಥಳ :

ಅರ್ಪಿತ ಅವಧಾನ ಮುಖಂಗಳು ಎಲ್ಲರಿಗೆ ಸುಲಭವೆ?
ಅನಾದಿ ಸಂಸಿದ್ಧವಾಗಿ ಬಂದ ಬಸವಣ್ಣಂಗಲ್ಲದೆ.
ತ್ರೈಲಿಂಗಮೂಲಕ್ಕೆ ಮಂತ್ರಾದಿ ರೂಪ ಬಸವಣ್ಣ,
ತ್ರೈಲಿಂಗಪ್ರಸಾದಕೆ ಆನತ ಅರುಹ ಬಸವಣ್ಣ,
ಮೂಱು ಲಿಂಗ ಒಂದಾದ ಮೂರುತಿ ಬಸವಣ್ಣ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನೀ ಸಾಕ್ಷಿಯಾಗಿ ಬಸವನ ನೆನೆವರು ನೀನಹರು. ॥೪೮೭॥[I–೧೩೯]

ಪ್ರಥಮನಾಮಕ್ಕೀಗ ಬಸವಾಕ್ಷರವೆ ಬೀಜ,
ಗುರುನಾಮಮೂಲಕ್ಕೆ ಅಕ್ಷರಾಂಕ ಬಸವಣ್ಣ.
ಬಸವಣ್ಣ ಬಸವಣ್ಣನೆಂದೀಗ
ಇದ್ದೆಸೆಗೆಟ್ಟೆನೈ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೮೮॥[I–೧೪೦]

ಕತ್ತಲೆಯ ಕಾನನದಿ ಇತ್ತಱದ ಮಧ್ಯದಲಿ,
ಸುತ್ತಿಪ್ಪುದದು ಅಖಿಲಲೋಕಕಾಗಿ.
ಬೇರು ನಾಶವು ಆಗಿ, ದೀಪ್ತಿ ಅತಿ ಪ್ರಜ್ವಲ್ಯ
ಮೂಲಾಧಾರಕ್ಕೆ ಮುನ್ನ ಬಸವಣ್ಣನು,
ಬಸವಣ್ಣನ ಕರುಣ ಸದಮಲಜ್ಞಾನಕ್ಕೆ
ದೆಸೆ ನಾನು ಆದೆನೈ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೮೯॥

ಇಂದೆನ್ನ ಮನದೊಡೆಯ ಬಂದ ತಾ ಕರಸ್ಥಳಕೆ,
ಹಿಂದು ಮುಂದಿಲ್ಲದ ಪದವನಿತ್ತ.
ಗಂಧವಾಸನೆ ಚಂದವೊಂದಾದ ಬಸವನ
ಬಂಧುವಾದೆನು ಗುರುವೆ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೯೦॥

ಆದಿ ಆಧಾರಕ್ಕೆ ಮೂಲ ತಾ ಬಸವಣ್ಣ,
ಹೋದನ್ಯೆ ಭಕ್ತಿಯೊಳಗೆ ಹೊಲಬುದಪ್ಪಿ.
ಊರನಱಿಯದ ಗ್ರಾಮ, ಹೊಲಬುದಪ್ಪಿದ ಸೀಮ,
ಆತನಾನತದಿಂದ ನೀನಾದೆನ್ಯೆ.
ಬಸವಣ್ಣ ಬಸವಣ್ಣಯೆಂಬ ನಾಮದೊಳಗೆ
ದೆಸೆಗೆಟ್ಟೆನಯ್ಯ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೯೧॥[I–೧೪೧]

ಭಕ್ತಿ ರೂಪನು ಬಸವ। ನಿತ್ಯ ರೂಪನು ಬಸವ, ಬಸವ।
ಮತ್ತೆ ಪ್ರಸಾದಿಕನು ಬಸವಣ್ಣನು॥
ನಿತ್ಯಾಕ್ಷರದ ರೂಪ। ಬಸವಣ್ಣನಿಂದ ನಿಮ್ಮ।
ಹತ್ತೆ ಸಾರಿದೆ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೪೯೨॥[I–೬೨೨]

ಸಕಲ ನಿಷ್ಕಲಕೆಲ್ಲ। ಬಸವನಾಮಾಕ್ಷರದ।
ದೆಸೆ ತಾನು ತ್ರೈಲಿಂಗ ಮೂಲವಾಗಿ॥
ಬಸವನನುಮಿಷಗಂದು। ಗುರುವಾದ ಸಂಬಂಧ।
ದೆಸೆಯೆನಗೆ ಆಯಿತ್ಯೆ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೪೯೩॥

ಮೂಱಕ್ಕೆ ಮುನ್ನಾಱು, ಆಱಕ್ಕೆ ಬೀಜವ್ಯೆ,
ಬೀಜ ಮೂಱೊಂದಾಗಿ ಪ್ರಾಸಾದದಾ ರೂಪು.
ಪಂಚಬ್ರಹ್ಮ ಮೇಲೆ ಪ್ರಸನ್ನದ ಆಮೋದವಾದೆನ್ಯೆ
ಬಸವಣ್ಣ, ನಿನ್ನ ಕರುಣವು ಇನ್ನು ಮುನ್ನಿನಂತಲ್ಲವ್ಯೆ,
ಇನ್ನು ನಿನ್ನಂತಾದೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೯೪॥

ಶುದ್ಧದೀಕ್ಷೆಯೊಳಾನು ಸಿದ್ಧನಾದೆನು ತಂದೆ,
ಸಿದ್ಧದೀಕ್ಷೆಯಲಾನು ಸಯವಾದೆನ್ಯೆ.
ಶುದ್ಧ ಸಿದ್ಧವು ಕೂಡೆ ಪ್ರಸಿದ್ಧ ದೀಕ್ಷೆಯಲಿ ಹೊದ್ದಿ ನಡೆದೆನು.
ನಿನ್ನವರ ಹೊಲಬಿಗಾಗಿ ಮತ್ತೆ
ಪ್ರಸಾದವನು ಐದಾಜಿನೆ ಗ್ರಹಿಸಿ ಮತ್ತೆ,
ಪಾದೋದಕವ ಈರೈದ ಧರಿಸಿಯಾನು
ಹುಟ್ಟುಗೆಟ್ಟೆನು ಬಸವಣ್ಣ ನಿಮ್ಮ ಕರುಣದಿಂದ,
ಆನಂದ ಗುರು ಕಪಿಲಸಿದ್ಧ ಮಲ್ಲೇಶ್ವರನ
ಕಾರಣದ ಶರಣರಿಗೆ ಶಿಶುವಾದೆನು. ॥೪೯೫॥[I–೭೪೦]

ಅಧ್ಯಾತ್ಮ ಅಧ್ಯಾತ್ಮ ಅಧ್ಯಾತ್ಮವೆಂಬಿರಿ
ಅಧ್ಯಾತ್ಮವೆಂಬುದದು ಏನು ಹೇಳಾ?
ವಾಯುಪ್ರಾಣಿಯ ಕೊಂದು, ಅಕ್ಷರವೈದಜಿಲಿ
ಎತ್ತಿ ತೋಜಿದನು ಶ್ರೀಗುರುರಾಯನು.
ಬಹಳ ಲಿಂಗವ ತಂದು ಸೂಕ್ಷ್ಮವ ಮಾಡೀಗ ಕೊಟ್ಟು,
ಬಳಿಕ ಯೋಗವುಂಟೆ?
ಅಟ್ಟುದನು ಮರಳಡುವ ಮಿಟ್ಟೆಯ ಭಂಡರ,
ಏನೆಂಬೈನ್ಯೆ ಗುರುವಾಜ್ಞೆ ಜಡರ.
ಆನಂದರೂಪ ಕಪಿಲಸಿದ್ಧ ಮಲ್ಲಿಕಾರ್ಜುನನ
ಯೋಗವಾದಲ್ಲಿ ಯೋಗವುಂಟೆ? ॥೪೯೬॥

ಶುದ್ಧವನಜಿತೆ ಚೆನ್ನಬಸವಣ್ಣ ನಿಮ್ಮಿಂದ,
ಸಿದ್ಧವನಜಿತೆ ಚೆನ್ನಬಸವಣ್ಣ ನಿಮ್ಮಿಂದ,
ಪ್ರಸಿದ್ಧವನಜಿತೆ ಚೆನ್ನಬಸವಣ್ಣ ನಿಮ್ಮಿಂದ,
ಫಲಪದಕ್ಕೆ ಹೊಜಗಾದೆ ಚೆನ್ನಬಸವಣ್ಣ ನಿಮ್ಮಿಂದ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಚೆನ್ನಬಸವಣ್ಣ ಗುರುವಾಗಿ ಬಂದು
ಜನ್ಮಕರ್ಮ ನಿವರ್ತನೆಯ ಮಾಡಿದನಯ್ಯಾ. ॥೪೯೭॥[I–೧೨೧]

ಕರಂಗಳೆ ಮನೆಯಾಗಿ, ಕಂಗಳೆ ಕರುಳುಗಳಾಗಿ,
ಅರ್ಪಿಸುವ ಭೇದವನಾರು ಬಲ್ಲರಯ್ಯ ಚೆನ್ನಬಸವಣ್ಣನಲ್ಲದೆ?
ತನು ಪ್ರಾಣ ಇಷ್ಟಲಿಂಗ ಸಂಬಂಧಿಯಾಗಿ
ಇಂದ್ರಿಯಂಗಳು ಐದು ಮುಖವಾಗಿ ಅರ್ಪಿಸುವ
ಭೇದವ ಆರು ಬಲ್ಲರೈ ಚೆನ್ನಬಸವಣ್ಣನಲ್ಲದೆ?
ಆನಂದಸ್ಥಾನದಲಿ ಅನುಮಿಷಾಕ್ಷರದ ಸಂಯೋಗ
ಅರ್ಪಣೆಯ ಭೇದವ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಲ್ಲಿ ಚೆನ್ನಬಸವಣ್ಣನಲ್ಲದೆ
ಮಿಕ್ಕಿನವರಿಗೆ ಸಾಮಾನ್ಯವೆಂಬೆನೆಂಬೆ? ॥೪೯೮॥[I–೧೨೫]

ಮಹವನೊಡಗೂಡಿದ ತನು ನಿನ್ನಕ್ಷರತ್ರಯವು
ಕರುಣಾಮೃತ ಸಹಿತಲಿರುತಿರ್ಪವೈ,
ಕಾನನದೊಳಗೆ ಬೆಳಗುತಿಹವೈ.
ಸಮತೆ ಸಾಯುಜ್ಯದ ಅನುಮಿಷಾಕ್ಷರಕ್ಕಿಂತ
ಬಸವಾಕ್ಷರ ಮಧುರ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೪೯೯॥ [I–೬೫೩]

ಸೀಮೆ ಸಂಬಂಧಗಳ ಮೀಱಿಪ್ಪ ಮಂತ್ರಕ್ಕೆ
ರಾಜಮಂತ್ರನು ತಾನು ಪಂಚಾಕ್ಷರಿ.
ಪಂಚಾಕ್ಷರಿಯ ಗುಣದ ಬಸವಾಕ್ಷರತ್ರಯದ
ಧ್ಯಾನ ಮೌನದ ಗುಣದ ಸತ್ವವಿಡಿದು,
ಆನಂದ ತ್ರೈಲಿಂಗ ಮೂಲಮಂತ್ರಕ್ಕೀಗ
ಬಸವಾಕ್ಷರವು ಮಾತೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೦೦॥

ಷಷ್ಠಮ ಬ್ರಹ್ಮಕ್ಕೆ ಪಟ್ಟಗಟ್ಟಿತು ಮಾತೆ
ಹೆತ್ತು ಹೆಸರಿಟ್ಟುದೈ ಅಕ್ಷರಾಂಕ.
ಅಱುವನು ಐದುವನು ಮೇಲಿಪ್ಪ ಮೂಱುವನು ಕೂಡಿ
ಹದಿನಾಲ್ಕಱೊಳು ಲೋಕವಾಗಿ.
ಏಕೈಕ ರುದ್ರ ನಿನ್ನಾಕಾರ ಚತುಷ್ಟಯಕೆ
ಅನೇಕ ಪರಿಯಿಂ ಮಾತೆ ಬಸವಾಕ್ಷರ.

ನೀನಾದಿಮುಖ ಶೂನ್ಯನಾಗಿಪ್ಪಲ್ಲಿ
ನಿನ್ನುವನು ಖ್ಯಾತಿಮಾಡಿದ ಬಸವ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೦೧॥

ಬಸವನೆ ಮಾತೆಯ್ಯೆ ಬಸವನೆ ದಾತನ್ಯೆ
ಬಸವನೆ ಇಹಪರಕೆ ದಾತನಾತ.
ಬಸವಾಕ್ಷರತ್ರಯದ ಸೋಪಾನವಿಡಿದೀಗ
ಅನುಮಿಷತ್ರಯಲಿಂಗ ತಾನು ಮೂಲನಾದೆ.
ಬಸವ ಚೆನ್ನಬಸವಪ್ರಭುವಿನ ಕರುಣದಿಂದಾನು
ದೆಸೆಯೆರಡುಗೆಟ್ಟೆ ಶ್ರೀ ಮಲ್ಲಿಕಾರ್ಜುನಾ. ॥೫೦೨॥[I–೫೯೬]

ದೆಸೆದಿಗ್ವಳಯದಲಿ ಪಸರಿ ಪರ್ಬಿತು ನಿನ್ನಯ ನಾಮ
ವಸುಧೆಯೆಲ್ಲವು ಹೆಣ್ಣು, ನೀನೆ ಗಂಡು.
ಬಸವಾಕ್ಷರತ್ರಯದ ಬೀಜಂಗಳಿಂ ಭವಿಸಿ
ಸಕಲ ಬ್ರಹ್ಮಾಂಡಂಗಳಾದವ್ಯೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೦೩॥[I–೧೩೧]

ಮೂಱಱಿಂದವೆ ಮುನ್ನ, ಮೂಱು ನಿನ್ನಯ ಸೀಮೆ,
ಮೂಱು ತಾನೊಂದಾಗಿ ಅತಿ ಪದದಲಿ,
ಆಱು ಭಕ್ತಿಯು ತನಗೆ ಆಱಾಱು ತತ್ವದಿಂ
ಮೇಲಿಪ್ಪ ಸೀಮೆಗದು ನಿಚ್ಚಣಿಗೆಯ್ಯೆ.
ಆನತದ ಗುರು ಕರುಣದಾಜ್ಞೆಯನುವಿಡಿದು
ಆನೆಯ್ದೆನು ಗುರುವೆ ಶ್ರೀ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೦೪॥

ಎಂಟು ಬೆಟ್ಟದ ಮೇಲೆ ಎಂಟು ಸುಡೆಯರು ಬಂದು,
ನಂಟುಗಂಡೆವೆಂದು ವರ್ಗಂಗಳಾ
ಕಂಠಸ್ವರದಿಂದವೆ ಮಧುರಗೀತವ ಮಾಡೆ,
ನಂಟು ಮುಱಿಯಿತ್ತೀಗ ಆ ಪರಲೋಕ.
ತನುತ್ರಯದ ಮಲತ್ರಯವ ಸುಟ್ಟು
ಲಿಂಗತ್ರಯವ ನೆಲೆಗೊಳಿಸಿದಾತ
ಗುರು ಕಪಿಲಸಿದ್ಧ ಮಲ್ಲಿಕಾರ್ಜುನ. ॥೫೦೫॥

ಅಯ್ಯ, ನಾನೆಂಬುದನು ಒಯ್ಯನೊಯ್ಯನೆ ಮಱೆದೆ,
ಅಯ್ಯ, ನೀ ಗುರುವಾದ ಕರುಣದಿಂದ.
ಒಯ್ಯನೆ ಬಂದೆನ್ನ ಅಯ್ಯ ಮಗನೇ ಎಂದು,
ಕಯ್ಯ ನೀಡಿಯೆ ತೆಗೆದು
ಅಯ್ಯ ಎನ್ನನು ಸಲಹಿದಿರಿ ಕರುಣದಿಂದ.
ಅಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ ನಿಮ್ಮ
ಅವ್ಯಯದ ಪದಕಾನು ಮೂಲನಾದೆ. ॥೫೦೬॥[I–೫೬]

ಶ್ರೀ ಗುರುವೆ ಬಸವಯ್ಯ ಶ್ರೀಚರವೆ ಬಸವಯ್ಯ
ಶ್ರೀ ಮಹಾ ಇಷ್ಟಲಿಂಗವೆ ಬಸವಯ್ಯ.
ಆರೈದು ಎನ್ನುವನು ಓರಂತೆ ಸಲಹಿದಾ
ಕಾರುಣ್ಯ ಸುರತರುವೆ ಬಸವಲಿಂಗಾ.
ಭಾವಿಸಿ ಎನ್ನುವನು ಅಜಾತನನು ಮಾಡಿದಾತ
ಗುರು ಬಸವಣ್ಣ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೦೭॥ [I–೭೪೭]

ಶಮೆದಮೆಶಾಂತಿಯ ನಡುವೆ
ಜ್ಞಾನಾಗ್ನಿಯೊಡನೊಡನೆ ಬೆಳಗುತಿಪ್ಪುದಗ್ನಿ ತಾ.
ನುಡಿಯ ಬ್ರಹ್ಮದವರಿಗೆ ಬಿಡದೆ ಸುಟ್ಟಿತ್ತು ಅಗ್ನಿ,
ಮೃಡಕರುಣವುಳ್ಳವರಿಗೆ ಶಾಂತವಾಗಿ,
ಎನ್ನೊಡೆಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ
ಒಡಗೂಡಿದಾತಂಗೆ ಶಾಂತವಾಗಿ. ॥೫೦೮॥

ಮುಖದಿಂದ ಹುಟ್ಟಿಪ್ಪ ಮೂಱಱರ್ಪ್ಯದ
ತೊಡಕದ ಒಳಗೆ ಹುಟ್ಟಿತ್ತು ಶುದ್ಧ ಪ್ರಸಾದೋದಕ,
ಸದಮಲಜ್ಞಾನದಂಘ್ರಿಯ
ಹುಟ್ಟಿದೊಂದುದಕವದನೈದಱಲಿ ಭವಿಸಿದವು ತಾನು.
ಕರಣೇಂದ್ರಿಯಂಗಳನು ಅತಿಗಳೆದು
ಹತ್ತನೆಯ ಪಾದೋದಕ ಕ್ರಮವಿಂತುಟೈ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೦೯॥ [I–೩೬]

ಮೇಖಲಾ ಮೂಱಱೊಳು ಸಾಕಲ್ಯ ಪ್ರಸಾದ
ಏಕದಶವೂ ತಾನೊಪ್ಪುತಿಹುದು.
ಆಕಾರ ಚತುಷ್ಟಯದ ಮೇಲಿಪ್ಪ
ಹತ್ತನೆಯ ನಿರಾಕಾರ ನಿರ್ಮಳದ ನಿತ್ಯ ತಾನು
ಕರಣ ನಿರ್ಮಳತೆಯನು ವಿಮಳದಾನಂದವನು ಕರುಣಿಸುತಿಪ್ಪವೈ.
ಜನನ ಮರಣ ದೂರವಾಗಿ
ಕರುಣಾಕರನು ಕಪಿಲಸಿದ್ಧ ಮಲ್ಲೇಶ್ವರನ
ಕರುಣವುಳ್ಳಂಗಲ್ಲದೆ ಇವು ಅಱಿಯಲರಿದು. ॥೫೧೦॥

ಬಯಸದಿರು ಬಯಸದಿರು ಅನ್ಯೋನ್ಯವನು
ನೀನು ಬಯಸಿದಂತಾಗದದು.
ನಿಬ್ಬಯಕೆಯು ತನುವಿನೊಳಗಳವಡಲು
ಮನ ಮಹಾ ಸಾಯುಜ್ಯಪದವ ಮೀಱಿಪ್ಪುದೈ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೧೧॥

ಪ್ರಾಣದ ತತ್ವದಲಿ ಪ್ರಾಪಂಚುವಿಲ್ಲದಿರು,
ಏಕ ಏಕಾರ್ಥವೆಂದು ನಿರ್ವಾಣದ
ಆಕಾರಧ್ಯಾನವು ಬೇಕು ಮನ ಕರದಲ್ಲಿ.
ಸಾಕಾರದಿಂದತ್ತ ಶೂನ್ಯಭೇದ
ಅನೇಕ ರೂಪನು ಕಪಿಲಸಿದ್ಧ ಮಲ್ಲಿಕಾರ್ಜುನನ
ಬೇಕಾದವೀ ಪರಿಯ ತಪ್ಪದಿಹುದು. ॥೫೧೨॥

ಅಯ್ಯ ಒಯ್ಯನೆ ಕರಕ್ಕೆ ಬಂದಿರಾಗಿ
ತನು ಪ್ರಾಣ ಇಷ್ಟಲಿಂಗಿಯಾದೆ.
ಪ್ರಸಾದ ಪಾದೋದಕಕ್ಕೆ ಯೋಗ್ಯನಾದೆ.
ಅಜಾತನೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಆನು ನೀನೆಂಬ ಕನ್ನಡ ಕಳೆಯಿತ್ತು. ॥೫೧೩॥ [I–೪೭]

ಜಲದೊಳಗೆ ಭವಿಸಿಪ್ಪ ಜಲದ ನಾದದ ಭೇದ
ಜಲಶಿಲೆಯಪ್ಪುದೊಂದಾನತದಲಿ.
ಕರುಣಾಕರನು ಕಪಿಲಸಿದ್ಧ ಮಲ್ಲೇಶ್ವರನ
ನೆನಹುವಿಡಿದಾತಂಗೆ ನಿತ್ಯಪದವು. ॥೫೧೪॥[I–೪೧೫]

ಅಕ್ಕಟಾ ಅವನ ನೆನಹಿನ ಮನೆಯೊಳಗೆನ್ನ ನಿಲಿಸಿ
ಅವನನೆ ಮೂಲ ನಾಶವ ಮಾಡಿರವ್ವಾ
ನೆನಹಿನ ಮನೆಯೊಳಗೆ ಅವನನೊಡಗೂಡಿ
ಲೀಯವ ಮಾಡು ಕಪಿಲಸಿದ್ಧ ಮಲ್ಲಿನಾಥಯ್ಯನಾ. ॥೫೧೫॥

ನೆರೆಮನೆಯ ಕೇರಿಯೊಳಗೆ ಗುರುಕರುಣ ಪಾತ್ರೆಯಲಿ
ಹರುಷದಿಂದ ಭಿಕ್ಷವ ತಂದೆ ಅವ್ವಾ,
ಕರಣ ಶುದ್ಧಮಾಡಿ ಉಣ್ಣ ಬಾರಾ.
ನೆನಹಿನ ಗುಣದಲ್ಲಿ ಕರುಣ ಕಾನನದಲ್ಲಿ
ತೆಱಹುಗೆಟ್ಟು ಇದ್ದೆನು ಕಂಡಾ.
ಕರುಣಾಕರನೆ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ
ನೆನಹಿನಲ್ಲಿ ಲೀಯವಾದೆನು. ॥೫೧೬॥

ಮೂಱೂರು ಗ್ರಾಮದಲ್ಲಿ ತೋಱಿಪ್ಪ ಶಕ್ತಿಧಾತು
ಆಱುವರ್ಗದಿಂದತ್ತಲಿ,
ಆಱಾಱನೊಂದು ಮಾಡಿ ತೋಱಬಲ್ಲರೆ ಗುರು ಯೋಗಕ್ಕೆ ಮೂಲ,
ಭಕ್ತಿಯ ಸೀಮೆಯಲ್ಲಿ ಲೀಯವಾದೆ.
ಕಪಿಲಸಿದ್ಧ ಮಲ್ಲಿಕಾರ್ಜುನನ
ನೆನಹಿನ ಬ್ರಹ್ಮಾಂಡ ಒಳಗಾದವು. ॥೫೧೭॥

ಸೂಕ್ಷ್ಮನೈ ನೀನು
ಲೋಕವೀರೇಳನು ಧರಣಾ ರೋಮದಂತ್ಯದಲ್ಲಿ ಬಹಳವಪ್ಪ
ಅಯ್ಯಾ, ನಿಮ್ಮ ಸೂಕ್ಷ್ಮವಂ ದೂಡಿತ್ತಾ
ಗುರು ಕಪಿಲಸಿದ್ಧ ಮಲ್ಲಿನಾಥಯ್ಯ. ॥೫೧೮॥ [I–೭೯]

ಶಿಖರ ಶಿರಸದಂತ್ಯದಲ್ಲಿ ಕಳಸ ಕೆಲಸ ರಚಿಸಿದ
ಪರಿಯ ನೋಡು, ಎಲೆ ಕಮ್ಮಟ,
ತರುಣ ಬಂದು ಕೂಪಂಗಳ ತೆಱಹಿಲ್ಲದ
ಬ್ರಹ್ಮಾಂಡ ತರುಣಿಯ ಮಸ್ತಕದಲೊಕ್ಕೆ,
ಅತಿವೃಷ್ಟಿ ಪ್ರವಾಹದ ಒಳಗೆ ಬಿದ್ದು
ಅದ್ದೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೧೯॥

ತುಂಬಿ ತುಳುಕಿ ಅಂಬರಕೆ
ಗಂಭೀರ ತೆರೆ ಹಾಯುತ್ತಿರಲು,
ಸಂಭ್ರಮದ ಶರಿಧಿ ಹೆಚ್ಚಿತೇ
ಕಾಡುತ್ತಿದ್ದೆ ನಾನೂ ಎಲೆ ಅಯ್ಯಾ,
ಆಕಾರವ ಮೀಱಿದ ನಿರಾಕಾರ ಭಕ್ತಿ
ಏಕೋದೇವ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೨೦॥

ಒಂದೊಂದು ಮಠದಲ್ಲಿ
ತುಂಬಿ ಒಂಬತ್ತಱಾಳಾಪ
ಸಂಭ್ರಮದಿ ಮೊರೆವುತದೆ ಅಯ್ಯಾ.
ಆನತದ ಮೀಱಿಪ್ಪ
ಮೇಣು ಆದಿಯ ಆಧಾರದಿಂದತ್ತಲಿ
ತುಂಬಿದಾ ಕೊಡದಲಿ ಒಂದು ಬಿಂದು ಭವಿಸಲು
ಸಂದುದಖಿಳ ಬ್ರಹ್ಮಾಂಡವು
ಎನ್ನ ತಂದೆ, ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ನಿಮ್ಮ ಭಕ್ತಿಯಾದಂದ ವಾರುಧಿಯ ಪರಿಯಾಯ. ॥೫೨೧॥

ಎಸಳ ಕುಸುಮದಿಂದಲತ್ತ ಪಸರಿಸಿತು
ಪಂಕವೆಂಬ ದೆಸೆ ಇದ್ದೆಸೆಗೆಟ್ಟರಾಡುವ
ಪರಿಯನೆನಗೆ ತೋಱದಿರಯ್ಯ.
ಇದ್ದೆಸೆಯ ಮುದ್ದೆಸೆಯನೊದ್ದೆಸೆಯ ಮಾಡಿ
ಸಲಹು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೨೨॥

ಅಕ್ಷರವೈದಜಿಹ್ಮೇಲೆ ಒಪ್ಪಿಪ್ಪೆ ನೀನು,
ಶಿವ ಅಕ್ಷರಾಂಕನು ನೀನು,
ಪೂರ್ವಕ್ಕೆ ಮೂಱು ಅಕ್ಷರ
ಆನತದಿಂದ ಮೇಲೆ ನೀನಯ್ಯಾ.
ಅನಾದಿ ಮೂಲಶೂನ್ಯ
ಕಪಿಲಸಿದ್ಧ ಮಲ್ಲಿನಾಥ
ಆದಿಯಾಧಾರಕ್ಕೆ ಮೂಲ ನೀನು. ॥೫೨೩॥

ಮುನ್ನಾದ ಫಲವನೂ ಇನ್ನು
ಸೀಮೆಕ್ಷೇತ್ರದ ಭಕ್ತಿ ಮುನ್ನಿನಂತೆ
ಫಲವಾಯಿತೊ ಅಯ್ಯ,
ಅಂದಾದಿಯಲ್ಲಿ ಬಸವಣ್ಣ ತಂದಾನು
ಹಿಂದು ಮುಂದುಗೆಟ್ಟ ಫಲವಾ ಫಲವೂ
ಆಫಲವಾದರೆ ಸಫಲವಾಯಿತು ಸದ್ಭಕ್ತಿ
ಒಲವಿಂಗೆ ನೀ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೨೪॥

ಗ್ರಾಮ ಚೌಗ್ರಾಮದಲಿ ಸೀಮೆಗೆಟ್ಟಿತದು
ಸಿದ್ಧಗ್ರಾಮವ ಮುಜಿದೊತ್ತುತ್ತೈದೂದೆ.
ಗ್ರಾಮಬಲ ನಾಶವಾಗೆ ಸೀಮೆಗೆಡಲು,
ಸಾನಂದದ ಆನಂದಕ್ಕೆ
ತನ್ನನು ಕಳೆದು, ನಾನಾ ಗುಣದಲ್ಲಿ
ಭಾನು ವಿಕಸ ಪ್ರಬಲವನೆಯ್ದಿದೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೨೫॥

ಆದಿ ಮಧ್ಯವಸಾನದ
ನಾದ ಭವಿಸಿತಯ್ಯ,
ಬ್ರಹ್ಮನಾದವೆ ಆನಂದವಾಗಿ
ಆಮೋದದಾ ನಾದ
ನಿನ್ನ ಆದಿಯ ರೂಪಾಗಲಿಕೆ

ನಾನು ಬೆಱಗಾದೆ ಕಂಡಾ,
ಅಭೇದ್ಯನೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿಮ್ಮ ನಾಮದಲ್ಲಿ ಲೀಯವಾದೆ. ॥೫೨೬॥

ಆದಿ ವಿರಳದಲಿ, ಪೂರಕ ಮಣಿಯಲ್ಲಿ,
ಕಂಜ ಕರ್ಣದವರನಾದಿ ಪುರನ ತಟಾಕದಲ್ಲಿ
ಆರೂಢದಲಾ ನೀನಾದೆ ಅಭೇದ್ಯನೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಆಱಱಿಂದಲನುಮಿಷನಾದೆ. ॥೫೨೭॥

ತೋಱಿಪ್ಪ ಒಳಗೊಂದು ಮೀಱಿವೌ ಎಂಟು,
ಗಾಱು ಮಾಡುತ್ತವೆ ವರ್ಗವಾ ಮೀಱಿ ಮೀಱಿ,
ನೂಱೆಂಟಱ ಕಳಾಪ್ರವೇಶದಲ್ಲಿ
ತೋಱಿಪ್ಪುದು, ಧಾತುವೇಳು
ಅನಾದಿ ಮೂರುತಿ
ಕಪಿಲಸಿದ್ಧ ಮಲ್ಲೇಶ್ವರಯ್ಯ
ನಿನ್ನ ನೆನಹಿನ ಮೂರುತಿಯ ಮೂಲ. ॥೫೨೮॥

ಅಯ್ಯಾ, ನಿಮ್ಮ ಕಯ್ಯ ಬಿಚ್ಚಲೊಯ್ಯನೆ
ಬ್ರಹ್ಮಾಂಡಗಳು ಅಯ್ಯಯ್ಯ ತಱತಳಿಸುತ್ತಿವೆ.
ಬ್ರಹ್ಮ ಮಱದನು, ವಿಷ್ಣು ತಾನೊಱಗಿದ,
ವೇದಂಗಳು ದೆಸೆ ಬಾಯಿ ಬಿಡಲು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿಮ್ಮ ಕೈಯ ಶಬ್ದದ ಹವಣಿಂತುಟು. ॥೫೨೯॥ [I–೩೧]

ಖರಕರ ಕೋಟಿ ಪ್ರಭೆ
ಪ್ರಭೆಯಂ ಮೀಱಿಪ್ಪ ತೆಱಹುಗೆಟ್ಟ ಸೀಮೆಯಲ್ಲಿ
ಬಿಂದು ಭೇದವಾದ
ಅಯ್ಯದಂದವನಾರು ಬಲ್ಲರು?

ಆನಂದ ಸಚ್ಚಿದಾನಂದ ಸ್ಥಾನದಲ್ಲಿ
ಶೂನ್ಯ ಕಾನನದೊಳಪ್ಪಿರವ್ವಾ
ಆಜೀವ ನಿನ್ನುವನು
ಎಲೆ ಕುರುಹಿಲ್ಲದ ಸೀಮನೆ,
ಕಪಿಲಸಿದ್ಧ ಮಲ್ಲಿಕಾರ್ಜುನನ
ನೆನಹಿನ ಬ್ರಹ್ಮಾಂಡವಡಗುವವೆ ಅಯ್ಯಾ. ॥೫೩೦॥

ಐದಕ್ಷರ ಆದಿಯಾದ, ಇಪ್ಪತ್ತೈದಕ್ಷರ ಸಂಯೋಗದ,
ಮೂವತ್ತಾಱಕ್ಷರವಾನಂದದ,
ಆನಂದ ಸಾನಂದ ಶೂನ್ಯ ತನ್ನಯ ಅಂಗ
ಭಾನುವಿನ ಪ್ರಭೆಯಲಿಪ್ಪ
ಹೇಮ ಕಲಶಕ್ಕೆಲಸದಿಂದ ಮೇಲೆ
ಆದಿಯಾಧಾರ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೩೧॥

ಚೌಗ್ರಾಮಕೊಳದಲ್ಲಿ ಎಸೆವ ಚಾದಗವಕ್ಕಿ
ಒಸರುವಮೃತವನು ಕೊಳ್ಳಾ.
ಸೀಮೆಗೆಟ್ಟ ಅಮೃತವನು ಆರೈದು ಕೊಳಬಲ್ಲಡೆ
ಇದ್ದೆಸೆಯ ಸೀಮೆಗೆಡುವೆ ನೀನು ಕಂಡಾ.
ಮರಾಳ ಮರಾಳನೆಂಬ ಹಕ್ಕಿ ಹಾಱದ ಮುನ್ನ
ನೀನೆಯ್ದು ಅವ್ಯಯ ಪದವ
ಕಪಿಲಸಿದ್ಧ ಮಲ್ಲಿನಾಥವೆಂಬ
ಸುಖಸಮುದ್ರದಲಾಳಾ ॥೫೩೨॥

ಪ್ರಥುವಿಯ ಮೇಲಪ್ಪ ಬಿಗಿದ ಪಾದಶಿಲೆ
ದಾಯದ ಚಲನೆಯಾಗದಿರು ಕಂಡಾ, ಎಲೆ ಅಯ್ಯಾ.
ಅಯ್ಯ, ಅವ್ಯಯಪದವ
ಅಯ್ಯನೊಯ್ಯನೆಯಿದಯ್ಯ ಎಲೆ ಅಯ್ಯ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ಅಯ್ಯನತ್ತ ಶುದ್ಧನಾಗಯ್ಯ. ॥೫೩೩॥

ಘಟಸರ್ಪನ ಫಣಿಯ ಮಣಿಯ
ಬೆಳಗಿನ ಪ್ರಭೆ ಅತಿ ಹಿರಿದು.
ಸ್ಥಿರವಾಗಿರಬಲ್ಲಡೆ ನಿಸ್ತಾರ ನಿಸ್ತಾರವು.
ಅಯ್ಯ, ನಿಸ್ತಾರ ನಿಸ್ತಾರವು
ಸತ್ಯ ಪ್ರಭೆಯಿಂದಲಿ ವಿಚಿತ್ರ ಸ್ಥಾನವಾದಡೆ
ಮತ್ತೆ ನಿತ್ಯವಪ್ಪುದು
ಕಪಿಲಸಿದ್ಧ ಮಲ್ಲಿನಾಥಯ್ಯಾ. ॥೫೩೪॥[I–೪೦೧]

ದೆಸೆದಿಕ್ಕುವಳೆಯಕ್ಕೆ ಹೆಸರುಳ್ಳ ಗ್ರಾಮಕ್ಕೆ
ವಸುಧೆಯೆಂಟು ದ್ವಾರ ಒಂಬತ್ತು.
ದ್ವಾರಪಾಲಕರೆಲ್ಲ ಅಯ್ಯ,
ನಿಮ್ಮ ಹೋಬಳಿಯ ಹೊರುತ್ತೈದಾರೆ.
ಕಾನನ ಕಂಬನಿಯೊಳಗಾಳುತ್ತೇಳುತ್ತೈದಾರೆ
ಕಪಿಲಸಿದ್ಧ ಮಲ್ಲಿನಾಥಯ್ಯ. ॥೫೩೫॥

ಕಾಲಿನಿಯೆಂಬ ಮಾನಿನಿ
ಕಾನನ ಕಂಬನಿಯೊಳಗಾಳುತ್ತ ಮುಳುಗುತ್ತೈದಾಳೆ,
ತನ್ನೊಳಗೆ ಆಳುತ್ತ ಮುಳುಗುತ್ತೈದಾಳೆ.
ಆಋೂಢದಾ ಕೂಟದಲ್ಲಿ ಲೀಯವಱಿತು
ಬತ್ತಿದಡೆ ಆನು ನೀನಪ್ಪೆ ಕಂಡಾ.
ಎನ್ನದೇವ ಕಪಿಲಸಿದ್ಧ ಮಲ್ಲಿಕಾರ್ಜುನ
ಕಾಲಿನಿಯ ಪರಿ ವಿಪರೀತ. ॥೫೩೬॥

ನಸುನಗೆಯ ಥಾಳದಾ ಎಸೆದಿಪ್ಪ ಎಮ್ಮ ನಲ್ಲ.
ಪೊಸ ಕುಸುಮವ ಕಾಣಿಕೆಯ ತಂದೆಸೆಸುವೆಂದು,
ಮನ್ನಿಸಿದನಯ್ಯ ಎನ್ನ ಶಿಶುವೆಂದು.
ಮನ್ನಿಸಿದಾ ಶಿಶು ಸಸಿಯ ಪಸರಕ್ಕೆ
ಮೂಲಸ್ವಾಮಿಯಾಯಿತ್ತಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೩೭॥[I–೫೧೦]

ಅಂದು ಅನಾದಿಯಲ್ಲಿ ತಂದು ಬಿತ್ತಿದ ಬೀಜ
ಮುಂದಕ್ಕೆ ಮೂಲ ನಾಶವೈ.
ಸಾಧಿಸುವ ನಿಜವ ಮೂಲನಾಶವ ಮಾಡಿದರೆ
ತಾನೆ ಫಲ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೩೮॥

ಭೂಮಿ ಒಂದಜಿಕೊಳಗೆ
ಒಂದು ನಾಮಸಾಮ್ಯ ವೃಕ್ಷ ಹುಟ್ಟಿ,
ಮೂಲನಾಶವಪ್ಪ ಫಲ ಮೂಱು
ಸೀಮೆಗೆಟ್ಟಿತು ಬ್ರಹ್ಮಾಂಡ.
ಅಪರಾಹ್ನದ ಆದಿಯಲ್ಲಿ
ಅಡಗಿದವು ಸಕಲ ಬ್ರಹ್ಮಾಂಡ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೩೯॥

ಗರ್ಭದಾದಿ ಅಂತ್ಯದಲಿ ಒಬ್ಬನೆಯಿದ್ದ
ಅಯ್ಯಾ, ಸರ್ಬಗತ ನೀನೆ ಕಂಡಾ ಅಯ್ಯಾ.
ಒಂದೊಂದು ಪರಿಯಲ್ಲಿ
ಆಡುವಾನಂದ ಗುಣವ ನೋಡಯ್ಯಾ.
ಶೂನ್ಯ ಶೂನ್ಯ ಕಾಯನಾ
ಕರಸ್ಥಳಕೆ ದೇವನಾದೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೪೦॥

ಮುಕ್ತ್ಯಂಗನೆಗೆ ಚಿತ್ತಶುದ್ಧಿಯಪ್ಪ ವೃಕ್ಷವ
ಚಿತ್ತದಲ್ಲಿ ಬಿತ್ತಿದನಲ್ಲಾ.
ಆ ವೃಕ್ಷ ಆ ಫಲಕರ್ಮಕ್ಕೆ
ಆ ಫಲವಾಗುತ್ತೈದೂದೆ ನೋಡಾ.
ನಿಃಕರ್ಮಕ್ಕೆ ಸಫಲವಪ್ಪ ವೃಕ್ಷ ನೀನೆ ಅಯ್ಯಾ,
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೪೧॥

ಮೂಗ ಕಂಡ ಕನಸಿನಂತಾಯಿತ್ತಯ್ಯಾ,
ಎನ್ನ ಭಕ್ತಿ ಹೇಳಲಾರಿಗೆ ಅರಿದು ಅಯ್ಯಾ,
ಮತ್ತೆ ತೋಱಲಾರಿಗೆ ಅರಿದು ಅಯ್ಯಾ.
ಶೂನ್ಯಕಾಯಕ್ಕೆ ಬಂದಡೆ
ಸರ್ವರಿಗೆ ಕರತಳಾಮಳಕ
ಕಪಿಲಸಿದ್ಧ ಮಲ್ಲಿಕಾರ್ಜುನ ಅಯ್ಯಾ. ॥೫೪೨॥

ಅಱುವತ್ತಾಱಕ್ಷರದ ಕುರುಹುಗೆಟ್ಟ
ಸೀಮೆಯ ತೆಱಹಿಗೆ ಬಂದವರಿನ್ನಾರೊ.
ಮೇಲೆ ಬ್ರಹ್ಮಾಂಡವನು ಧರಿಸಿ
ಇಲ್ಲದಂತೆಯಿಪ್ಪವರಾರೊ.
ಆನಂದದಾದಿಯಲಿ ಅಪರ ಶೂನ್ಯನಾದೆ
ಅಯ್ಯ, ಕಪಿಲಸಿದ್ಧ ಮಲ್ಲಿಕಾರ್ಜುನ ಅಯ್ಯಾ. ॥೫೪೩॥

ತುರಿಯ ತುರಿಯದ ತವಕ ತವಕ,
ಕರುಣಿ ಕರುಣಿ
ನಿನ್ನ ಮನದ ಕೊನೆಯಲ್ಲಿ ಎನ್ನುವನಿರಿಸಾ
ಸಂದು ಸವದು ಒಂದು ಮಾಡಾ ಅಯ್ಯ.
ಎನ್ನ ಹಿಂದು ಮುಂದುವ ಕೆಡಿಸಾ
ಆನಂದ ಶೂನ್ಯದಲ್ಲಿ ಆದಿ ಮಧ್ಯವಸಾನದಲ್ಲಿ,
ಶೂನ್ಯನನ್ನು ಮಾಡಿಸು ಕಪಿಲಸಿದ್ಧ ಮಲ್ಲಿನಾಥಯ್ಯ. ॥೫೪೪॥

ಫಲ ಪದವನತಿಗಳೆದು
ಹೊಲೆಗಲಸಿ ದಲಗೆಟ್ಟು
ಕುಲವನಳಿದವರಾರೊ ಅಯ್ಯಾ,
ನೀ ಸಲ್ಲದಿನ್ನು ನೆಲೆಗೆಟ್ಟು ಬ್ರಹ್ಮದೊಳಗೆ,
ಅಯ್ಯ, ನಿನ್ನ ಹೊಲೆಗಲಸಿ ಹೊಱಗಾದೆ.
ಅಯ್ಯಾ, ದಲವೆ ಫಲವಾಗಿ
ಹೊಲೆಯ ನೆಲೆಯಾದಡೆ
ಒಲವು ತಪ್ಪದು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೪೫॥

ತನು ಮುಖ ತಾನೆ
ನಿನ್ನಾದಿಯಾಧಾರವಯ್ಯಾ,
ನೆಲೆಗೆಟ್ಟ ಶೂನ್ಯ ನೀನೆ ಅಯ್ಯಾ,
ಫಲಪದನತಿಗಳೆದ ಲೀಯ ಲೀಯಾ,
ಸ್ಥಾನದಲಿ ನೆಲೆಮನೆ ನೀನು ಕಂಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ
ಉರುತರ ಸ್ವಾತಂತ್ರ ನೀನೆ ಅಯ್ಯಾ. ॥೫೪೬॥

ನೀಲಕಂಧರ ನಿನ್ನ ಶೂಲ ಮಸ್ತಕದಲ್ಲಿ
ತೋಱಿಪ್ಪ ಬೆಟ್ಟವೆಂಟು,
ಹರಿದು ಹಬ್ಬಿತ್ತು
ನಿನ್ನಯ ನಾಮದ ಪರಿಣತೆಯ ಸುಧೆಯ ಬಳ್ಳಿ ಫಲವಾಯಿತು.
ಮೂಱಱಲ್ಲಿ ಮರಳಿ ಬಿತ್ತಿದಡಿಲ್ಲದಂತೆ
ಕುಱುಹುಗೆಟ್ಟು ಹೋಯಿತ್ತಯ್ಯಾ.
ಕಪಿಲಸಿದ್ಧ ಮಲ್ಲಿಕಾರ್ಜುನಾ
ನಿನ್ನ ನುಂಗಿದ ಫಲಕ್ಕೆ ಭವವಿಲ್ಲ ಕಂಡಾ. ॥೫೪೭॥

ದಾಯ ಬಣ್ಣ ಲೀಯವಾಗಿ
ಮೇಲೆ ಮುಗ್ಧೆಯ ಕೂಟ.
ಆಱೂಢದಾಧಿಕ್ಯ ಸ್ಥಾನ ಆಱಾಱಲ್ಲಿ ಅನುಮಾನಿಸದೆ
ಮೀಱಿ ಮೂವತ್ತಾಱ ಕಳೆದು ತೋಱಿದ-
ಸಂಯೋಗಕ್ಕಾನು ಬೆಱಗಾದೆನಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೪೮॥

ನೆನಹು ಮುಕ್ತಾಫಳವಾಗಿ ತರುಣಿ ನಿನ್ನ ಗಳದಲ್ಲಿ
ಚಲನೆಯಿಲ್ಲದೆ ದಾಯವಾದವೊ ಅವ್ವಾ,
ಆದಿ ಮಧ್ಯಬಿಂದುವಿನೊಳು
ಭೇದಿಸಿದ ನಾದ ಕಳೆಯ ದಾಯವ ನೋಡಾ.
ದಾಯಂ ಮಣಿಯ ಆಭರಣದಲ್ಲಿ ಆಬೆ ಒಪ್ಪಿದಳಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೪೯॥

ನೆನಹಿನ ಸಂಯೋಗದಾ ನೆಲೆಮನೆಯಲ್ಲಿಪ್ಪೆ ಕಂಡವ್ವಾ,
ಚಲನೆಯಿಲ್ಲದೆ ಕೂಡವ್ವಾ,
ಅವ್ವಾ, ನೀನು ಚಲನೆಯಿಲ್ಲದೆ ಕೂಡಾ.
ಚಿತ್ತ ವಿಚಿತ್ತವಾದಡೆ ಮತ್ತೆ ಒಲಿಯನವ್ವಾ,
ಕಪಿಲಸಿದ್ಧ ಮಲ್ಲಿನಾಥಯ್ಯ. ॥೫೫೦॥

ಎಲ್ಲರ ಪರಿಯಲ್ಲ ಕಾಣವ್ವಾ ಅವನು
ಕಾಲಾಟಿಟಿಲ್ಲಿ ನಡೆವನು, ಕಿವಿಯಲ್ಲಿ ಉಂಬನು, ಅವ್ವಾ ಅವ್ವಾ,
ಅವನು ಮೂಗಿಂದಲ್ಲಿ ನೋಡುವ ಕಾಣಾ,
ಬಾಯಿಂದಾ ಭವಿಸುವ, ಕಣ್ಣಿಂದ ಮೂರ್ಛೆ ಹೋಹ,
ಕಪಿಲಸಿದ್ಧ ಮಲ್ಲಿನಾಥಯ್ಯ ವಿಚಿತ್ರ ವಿನೋದನವ್ವಾ. ॥೫೫೧॥[I–೨೫೦]

ತನುಗುಣವನತಿಗಳೆದು ನಿನ್ನ ಕೂಡಿದಲ್ಲಿ ಅವ್ವೆ,
ತಾಮಸಿ ತಾಮಸಿಯಾದಳು ಅವ್ವೆ,
ಸೋಮಪ್ರಭೆಯ ಪ್ರಭೆಯಂ
ಒಳಗೆ ಕೂಡಿ ಅವ್ವೆ, ನಿರ್ನಾಮವಾದಳು.
ಆನಂದದಾ ಆದಿಗೆ ತಾನೆ ಮೂಲಸ್ವಾಮಿಯಾದಳು
ಕಪಿಲಸಿದ್ಧ ಮಲ್ಲಿಕಾರ್ಜುನನ ಅವ್ವೆ. ॥೫೫೨॥

ಮತ್ತೆ ಮತ್ತೆ ತನ್ನ ಚಿತ್ತ ಮುಟ್ಟಿದಲ್ಲಿಗೆ
ಹೊತ್ತು ಹೊತ್ತು ತೊಳಲುತಿರ್ದಳವ್ವೆ.
ಚಿತ್ತ ಪರಿಪಕ್ವವಾದಡೆ
ಅವನ ಅಂಗದಲ್ಲಿ ಭೇದಿಸಿಹೆನೆಂದು
ಅಂಗ ಅನ್ಯಂಗವಾಗದ ಮುನ್ನ,
ಲಿಂಗ ನೀನೆ ಆದಳು ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನನವ್ವೆ. ॥೫೫೩॥

ಪರಸ್ತ್ರೀಯರಾದಿಯನ್ನು ಆಬೆ ತಾನು ಬೆರಸಿ ಬೆರೆಯಳೈ.
ಬಾರನು ಅವರಪರಸ್ಥಾನಕ್ಕೆ.

ಬಂದಡೆ ಮೂಲಸ್ವಾಮಿಯಪ್ಪಳವರ
ಮೂಲ ನಾಶಮಾಡುವಳು.
ಮಾಡಿದಾನಂದದಲ್ಲಿ ನೋಡಿ ತನ್ನಮಯವಪ್ಪಳು,
ಕಪಿಲಸಿದ್ಧ ಮಲ್ಲಿನಾಥಯ್ಯನವ್ವೆ. ॥೫೫೪॥

ಎರಡು ಸಾದಾಖ್ಯದಲ್ಲಿ ಒದವಿದ ಬ್ರಹ್ಮವನು
ಪದಚ್ಛೇದವ ಮಾಡುತ್ತಿದ್ದಳವ್ವೆ.
ಮೂಱಾಱಱಲ್ಲಿ ಹುಟ್ಟಿ ಆಱಾಱನತಿಗಳೆದಳವ್ವೆ.
ಮೀಱಿದಾನಂದದ ನೆಲೆಮನೆಯಾಗಿದ್ದಳವ್ವೆ.
ಕಪಿಲಸಿದ್ಧ ಮಲ್ಲಿನಾಥನ ಕೂಡಿ ಅವ್ವೆ. ॥೫೫೫॥

ಕೂಟದ ಸುಖದಲ್ಲಿ ನೋಟಕ್ಕಂ ಬೆಳಗಾಗಿ
ಬೇಟದಿಂ ದೆಸೆದೆಸೆವರಿದಳವ್ವೆ.
ಅವನಿಪ್ಪ ಗಾಢವನು ನಿರ್ದಾಟಿಸುತ್ತ
ಎಲವೊ ನೀನೆನ್ನ ಅಂಗದಲ್ಲಿ
ಕೊಲ್ಲದಿದ್ದಡೆ ನಿನ್ನಾಣೆಯೆಂದಳು,
ಕಪಿಲಸಿದ್ಧ ಮಲ್ಲಿನಾಥಯ್ಯನಾ ಹಾ! ॥೫೫೬॥[I–೩೬೧]

ಆದಿಯಕ್ಷರದಂತೆ ಆದವು ನಿನ್ನಾಗೆ
ಆಮೋದದಾಹಾರವಯ್ಯ.
ಹುಟ್ಟುಗೆಟ್ಟ ಭವನೆ ಕೇಳಾ ಅಯ್ಯಾ,
ನೀನು ಹುಟ್ಟಿದಡೆ ಲಜ್ಜೆ ನಿನಗೆ.
ಮುಕ್ತಿ ಪುದಿದಾ ಲೋಕದಲ್ಲಿ ಹುಟ್ಟಿದೆಯಾದೊಡೆ
ನಿಷ್ಠೆ ನಿನ್ನ ಹೊಱವುದು.
ಕಪಿಲಸಿದ್ಧ ಮಲ್ಲಿನಾಥಯ್ಯಾ
ನೀ ಹೊತ್ತ ಹೊಱೆಯನಿಳುವವರಿಲ್ಲ. ॥೫೫೭॥

ಏಕೋದೇವಾಯೆಂದು ಮನೆಮನೆದಪ್ಪದೆ
ಗಿರಿಯ ತಡಿಯ ಕಡಲ ಮುಡಿಯ ಜಡೆಯನೆಂಬರು.
ಅಯ್ಯಾ, ಎಂದಡಾನು ನಗುತ್ತಲಿರ್ದೆ,
ಆದಿ ಆಧಾರದಲ್ಲಿ ರೂಪುಯೆಂಟು ಇಲ್ಲದಂದು
ಹೆಸರು ನಿನಗೇನು ಹೇಳಾ?
ಕಪಿಲಸಿದ್ಧ ಮಲ್ಲಿಕಾರ್ಜುನಾ
ನೀನು ಆದಿಮುಖಶೂನ್ಯ ಕಾಣಾ. ॥೫೫೮॥

ಎಲ್ಲರ ನೆನಹಿನ ಆಯುಷ್ಯದ ಪುಂಜವೇ,
ಅವಧಾರು ಅವಧಾರು ಅಯ್ಯಾ.
ಎನ್ನ ನೆನಹಿನ ಮಂಗಳನೇ,
ಅವಧಾರು ಅವಧಾರು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೫೫೯॥[I–೨೫೦]

[ಅ] ರೂಪ ರೂಪ ಭಾವನೆ,
ರೂಪಾರೂಪ ಭಾವನೆ,
ಸಾರೂಪ ಲಿಂಗವೆ, ಶರಣು ಅಯ್ಯಾ.
ಅವಧಾರು ಅವಧಾರು ಅಯ್ಯಾ,
ಎನ್ನ ಕರಣವ ಶುದ್ಧವ ಮಾಡುವನೇ,
ಕರುಣಾ, ಕಾರುಣ್ಯರೂಪನೇ
ತನು ಮನ ಧನಕ್ಕೆ ಒಡೆಯನೇ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೬೦॥[I–೧೧೧]

ಕರುಣ ಕಂಬನಿಯ ದೆಸೆದೆಸೆಗೆಟ್ಟ
ವಾರುಧಿಯೊಳಗೆ ಮುಸುಕಿ ಮುಸುಕಿ
ಮೋಹಿಸುತ್ತಿರ್ದೆಯಯ್ಯಾ.
ದೆಸೆಗೆಟ್ಟ ಪಶುವಾನಿದ್ದೆ
ಪಶು ಪಾಶಮೋಚನನು ನೀನಾದೆ.
ಈ ಹಸುಳೆಯ ತೆಗೆದು ನಿನ್ನ ವಶಕ್ಕೆ

ಇತ್ತ ಬಾಯೆಂದೆ,
ಕರುಣಿ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೬೧॥

ಮೂಱು ಮುಕ್ತಿ ಮೂಲಾಧಾರಕೆ
ಆಱು ಶಕ್ತಿ ಅಂತ್ಯಕ್ಕೆ
ಮೇಲೆ ಇದ್ದಳವ್ವೆ ಒಬ್ಬಳು.
ಆಳಾಪವ ನಡೆಸಿ ಅವ್ವೆ,
ಕ್ರಿಯಂ ನಿಃಕ್ರಿಯಾಗುತ್ತಿದ್ದಳು.
ಶೂಲಹಸ್ತನೆಂಬ ಬಾಲಕನ ಜನನಿಯಾದಳು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಅವ್ವೆ. ॥೫೬೨॥

ಹೆತ್ತಳವ್ವೆ, ಸಕಲ ಬ್ರಹ್ಮಾಂಡಗಳ,
ಅವ್ವೆ ಹೆತ್ತು ಹೆಸರಿಡಲಱಿಯಳು.
ಅವ್ವೆ ಚಿತ್ತ ವಿಚಿತ್ತವಾಗಿ
ಅವ್ವೆ ಮತ್ತೆ ತನ್ನ ಹೆಸರಿಟ್ಟಳು.
ಚಿತ್ತದಾ ಕಥನದಿಂದ ಮತ್ತೆ ಶುದ್ಧವಾಗೆಂದಳು
ಕಪಿಲಸಿದ್ಧ ಮಲ್ಲಿನಾಥನವ್ವೆ. ॥೫೬೩॥

ತನು ಭ್ರೂಮಧ್ಯದಲ್ಲಿ,
ಮನವನಾನಂದಲ್ಲಿ,
ಲೋಕ ಲೋಕಂಏಕವಾದವ್ವೆ,
ಅಯ್ಯಾ ನೀನು ತನು ಮನ ನೀನೆ ಅಪ್ಪಿ ಕಂಡಾ,
ಆದಿಯಾಧಾರಕ್ಕೆ ಸ್ವಾಮಿ ನೀನೆ ನೀನೆ,
ಕಪಿಲಸಿದ್ಧ ಮಲ್ಲಿನಾಥಯ್ಯ. ॥೫೬೪॥

ಹಿರಿದಪ್ಪ ಶರಧಿಯ ಮಡುವಿನೊಳಗೆನ್ನ
ಕಡಲ ಕಾನನವಾದುದವ್ವಾ,
ಕಡಲು ಅಮೃತವಾಗಿ ಹರಿಯೆ
ಅವ್ವ, ನಾನು ದೆಸೆಗೆಟ್ಟು ಲೀಯವದಱಿಕೊಳು.
ಮೃಡನೆ ನಿನ್ನುವಾನೊಡಗೂಡಿದ

ಕಡಲಿಂಗೆಡೆವಿಡದೆ ನಮೋಯೆಂಬೆ
ಕಪಿಲಸಿದ್ಧ ಮಲ್ಲಿನಾಥಯ್ಯ. ॥೫೬೫॥

ದೀಪವಖಿಲಲೋಕದಲ್ಲಿ ಏಕವಾಗಿಪ್ಪಳೆ
ಏಕಯ್ಯಾ ಮರುಗುತಿಪ್ಪರು?
ಅಯ್ಯಾ, ಆಕಾರವನು ನಂಬದೆ
ಅಯ್ಯಾ, ನಿರಾಕಾರದೊಳಗೆ ಇಹರು.
ಏಕದೇವನೆಂದು ಹೊಗಳುವ
ಶ್ರುತಿಯ ಆದಿಯಱಿದು ಜಪಿಸಿದೆ,
ಕಪಿಲಸಿದ್ಧ ಮಲ್ಲಿನಾಥನಾ ಅವ್ವೆ. ॥೫೬೬॥

ಕೂಟದ ಸುಖದಲ್ಲಿ ನೋಟ ಕಂಬೆಳಗಾದರೆ
ಬೇಟ ಬೇಱುಂಟೆ ಹೇಳಾ? ಅವ್ವಾ.
ನೋಡಿದ ದೃಷ್ಟಿ ಎವೆ ಕುಂದಿದಡೆ
ಮೋಹದ ಪರಿಯೆಂತುಟು ಹೇಳಾ?
ನೋಟ ಬೇಟ ಕೂಟ
ಸಮಸುಖ ಸಮರತಿಯಾದರೆ ಕಪಿಲಸಿದ್ಧ ಮಲ್ಲಿನಾಥಯ್ಯ
ಬೇಱಿಲ್ಲವವ್ವಾ. ॥೫೬೭॥

ಮೆಚ್ಚಿದೆ ಮೆಚ್ಚಿದೆ ನಲ್ಲನೆ,
ಅಯ್ಯಾ ನಿನ್ನ ಮೆಚ್ಚಿ ನಾನು ಅಗಲಲಾಱೆ
ಮೆಚ್ಚಿದಾ ಮನಕೆ ಇನ್ನು ಮಂಗಳವನೀಯಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೫೬೮॥[I–೬೩೫]

ಸಮನಿಸುವ ಸುಖಕೆ ಇನ್ನು ಸಮನಿಸೂದಾವುದಯ್ಯಾ?
ಕರುಣ ಕಾನನದೊಳಗೆ ಹೊಲಬುದಪ್ಪುವೆನಯ್ಯಾ?
ದೆಸೆಗೆಟ್ಟವ ನಾನು ಅಯ್ಯಾ,
ಎನ್ನ ನಿನ್ನಂತೆ ಮಾಡಯ್ಯಾ.
ಮೂಱಱಿಂದ ಮುಕ್ತಿಯಾದ

ಆಜೂಥದ ಬೇಟವನೀಯಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೫೭೯॥ [I–೭೭೩]

ಎಸಳ ಸಸಿ ಕುಸುಮಭೂಷಣನೆ,
ಅಯ್ಯಾ, ದೆಸೆಯಿದ್ದೆಸೆಗೆಟ್ಟೆ ನಾನಯ್ಯಾ.
ಶಶಿಧರಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಎನ್ನ ವಶಕೆ ತಂದಿರಿಸು ಕಂಡಾ ಅಯ್ಯಾ. ॥೫೭೦॥

ಆಜೂಥದೈಕ್ಯದಲಿ ಆನು ನೀನಪ್ಪೆನೆ ಹೇಳಾ ಅಯ್ಯಾ?
ತೋಱಿಪ್ಪ ಬ್ರಹ್ಮಾಂಡದ ಅಯ್ಯಾ
ಮೇಲೆ ನಿನ್ನ ಸಂಯೋಗವೊ,
ವಿಕಲ ವಿಯೋಗದಲ್ಲಿ ಸಕಲ ನೀನೆ ಅನಾದಿ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೫೭೧॥[I–೧೬೨]

ನಾದ ಬಿಂದು ಕಳೆಗಳಲ್ಲಿ ಆದಿಯಾಮೋದವಾದ
ಭೇದಾದಿ ಭೇದವನ್ನು
ಭೇದಿಸಿಹೆನೆಂದಾನು, ಅಯ್ಯಾ
ವೇಧೆ ವಿಕಳನಾದೆನು ಕಂಡಾ,
ಸಾದಾಖ್ಯ ದೇಹದ ಮೀಱಿದ ಬ್ರಹ್ಮವಾದೆನು
ಕಪಿಲಸಿದ್ಧ ಮಲ್ಲಿನಾಥಯ್ಯಾ. ॥೫೭೨॥

ಕರುಣ ಕಾನನದೊಳಗೆ ಹೊಲಬುಗೆಟ್ಟೆನಯ್ಯಾ,
ನೆನಹೆಂಬ ಮಠದೊಳಗೆ ನಿರ್ಮಳನಾದೆನಯ್ಯ,
ಘನತರ ಸಂಯೋಗದಲ್ಲಿ ನೀನು ನಾನಾದೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಸಂದು ಸವೆದು ಒಂದಾದೆ. ॥೫೭೩॥[I–೩೨೨]

ಹಡಗನೇಜಿದವ[೧][ರ][೧] ಮುಂದೆ ಕಳಿಹಿ
ಮರಳಿ ಹೋದೆನೆಂದರೆ ಹಡಗುಂಟೆ?
ಮಚ್ಚಿದಲ್ಲಿ ಮಹೋತ್ಸಾಹವನೆಯಿದ ಬಳಿಕಜಿಸಿದರುಂಟೆ ಅಯ್ಯಾ?
ಅಯ್ಯನ ಸಂಗ ಅನಾದಿ ಸಂಸಿದ್ಧಯೋಗ ಮೂರ್ತಿ
ಕಪಿಲಸಿದ್ಧ ಮಲ್ಲಿಕಾರ್ಜುನ ಸಿಕ್ಕಿದಲ್ಲಿಯ ಕೂಡಾ, ಮನವೇ. ॥೫೭೪॥[I–೮೧೧]

ನೋಡಿ ನೋಡಿ ಕರಗ[೨][ದಿ][೨]ದ್ದಡೆ
ಕೂಡಿ ಕೂಡಿ ಲೀಯವಾಗದಿದ್ದಡೆ
ಆ ನೋಟ ಕೂಟವೇತಕ್ಕೆ ಹೇಳಾ, ಅವ್ವಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ, ನಾ ನಿನ್ನ ಕೂಡಿ ನೀನಾಗದಿದ್ದಡೆ
ಆ ನೋಟ ಕೂಟವೇತಕ್ಕೆ ಹೇಳಾ ಅವ್ವಾ. ॥೫೭೫॥[I–೫೬೧]

ಹೆಸರಿಡಬಾರದ ಭವಗೇಡಿ,
ನಿನ್ನ ಕೂಡಿದವರು ನಿನ್ನಂತೆ ಹೆಸರುಗೆಡುವರಲ್ಲದೆ
ಮರಳಿ ಹೆಸರುಂಟೆ?
ಎಲೆ, ಭವಗೇಡಿ ಹರನೆ,
ನಿನ್ನನರ್ಚಿಸಿದವರು ನಿನ್ನಂತೆ ಭವಗೆಡುವರಲ್ಲದೆ
ಮರಳಿ ಭವವುಂಟೆ?
ಅನಾದಿ ಸಂಸಿದ್ಧಯೋಗಮೂರ್ತಿ
ಕಪಿಲಸಿದ್ಧ ಮಲ್ಲಿಕಾರ್ಜುನಾ
ಇದ್ದೆಸೆಗೇಡಿ ನೀನು,
ನಿನ್ನವರು ನಿನ್ನಂತೆ ಇದ್ದೆಸೆಗೆಟ್ಟರಯ್ಯಾ. ॥೫೭೬॥

ಘಾತವಪ್ಪ ಶರಧಿಯ
ಪ್ರೀತವಪ್ಪ ಅಡವಿಯ
ಪಾತಕ ಭಾವಕೆ ಬಪ್ಪ ಕೂಪದೊಳಗೆ ಮರೆತರೆ ಬೀಳುವೆನೆ?
ಬೀಳೆ, ಬೀಳೆ, ನಿನ್ನ ಆಧಾರವುಂಟು.

೧–೧ ರು (ಮೂ) ೨–೨ ದೆ (ಮೂ)

ಅನಾದಿ ಸಂಸಿದ್ಧಯೋಗಮೂರುತಿ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿನ್ನ ಒಡನಾಡಿ ಆ ನಿನ್ನ ಠಕ್ಕನಜೆಯೆನೆ? ॥೫೭೭॥ [I–೪೦೩]

ಎನ್ನ ಭವಕೆ ತರಿಸಿ
ನರಕವನೂಡಿಸಿಹೆನೆಂದರೆ ಉಂಡೆನೆ ನಾನು?
ಉಣ್ಣೆನುಣ್ಣೆ, ನಿನ್ನ ಕರುಣವುಂಟು.
ನಿನ್ನ ಬಸವಣ್ಣನ ಕರುಣದಿಂದ ನೀನೆ ಅಪ್ಪೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ
ನಿನ್ನ ಕಕ್ಕುಲಿತೆ ಉಳಿವುದು. ॥೫೭೮॥[I–೨೪೦]

ತ್ರಿಭುವನದಲ್ಲಿ ನಿನ್ನ ಹೊಲಬು ನಿತ್ಯವಾಯಿತ್ತು,
ಭಕ್ತಿ ಗಂಭೀರವೆಂಬ ಹೊಳೆ ಹರಿಯಿತ್ತು.
ಸುಲಭವೆ ಎಲ್ಲರಿಗೆ ಲೋಕದವರು?
ಉಂಬಂತೆ ಉಂಬವರಿಗೆ
ಲೋಕದವರು ಬಹಂತೆ ಬಪ್ಪುವರಿಗೆ.
ಭಕ್ತಿಶರಧಿಯಲಿ ಬಿದ್ದು ಮಜ್ಜನ ಮಾಡಬಹುದೆ?
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೭೯॥

ಆದಿ ಆಧಾರ ಶೂನ್ಯನೇ,
ವೇದ ಹದಿನಾಲ್ಕಕತೀತನೆ,
ನಿನ್ನ ಭೇದಿಸುವರಾರಯ್ಯಾ
ಸ್ವತಂತ್ರ ಏಕೋದೇವ, ನೀನೆ ಕಾಣಾ ಯೋಗಿನಾಥಾ. ॥೫೮೦॥

ಕರುಣರಸ ಹರಿಯುವಲ್ಲಿ,
ಮಹಾಕಾರುಣ್ಯ ಸುಧಾಪ್ರವಾಹವಪ್ಪಲ್ಲಿ,
ಆರಯ್ಯಾ ನಿನ್ನನಜೆಯದವರು?
ಲೋಕಾದಿ ಲೋಕಂಗಳಿಗೆ
ಏಕೋ ದೇವ ನೀನು.

ಅನಾದಿಮೂಲಕ್ಕೆ ಮೂಲಸ್ವಾಮಿ ಕಾಣಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೮೧॥

ಎಮ್ಮ ನಲ್ಲನ ಬೆನ್ನಲ್ಲಿ ಹೋಗಿ
ಎಂಟು ನಾಡ ಗಡಿಯ ಕಂಡೆ.
ಉರಿಗಳ ಪರಿಗಳು ಉದಕದೆರೆಗಳು
ಅವು ಧಗಿ ಭುಗಿಲು ಭೋರೆನ್ನುತ್ತೈದಾವೆ, ಎಲೆ ಅವ್ವಾ
ಅಲ್ಲಿಂದತ್ತ ರೂಪಿಲ್ಲ, ಮೇಲೆ ತಾನು ತಾನೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನು. ॥೫೮೨॥

ಕರುಣಾಕರನೆ ನಿನ್ನ ವಶವಾದ
ಪೈರಯ್ಯಾ ಸಕಲ ಬ್ರಹ್ಮಾಂಡವು.
ನಾನು ಸಹಿತ
ವಸುಧೀಶ ಕಪಿಲಸಿದ್ಧ ಮಲ್ಲಿಕಾರ್ಜುನಾ
ನಿನ್ನ ಕರುಣ ಕಾನನದೊಳಗೆ ಲೀಯವಾದೆ. ॥೫೮೩॥[I–೩೨೭]

ಸೀಮೆ ಸಂಬಂಧವನು ಮೀಜಿಪ್ಪ ಎನ್ನುವನು,
ಕಾಮ್ಯಾರ್ಥದಿಂದಲೊಲಿದು ಆರ್ಚಿಸದಿರಾ.
ನಿಷ್ಕಾಮ್ಯ ಆಜೂಢ ಕಪಿಲಸಿದ್ಧ ಮಲ್ಲಿಕಾರ್ಜುನ
ನಿಷ್ಪೃಹತಿಗಿವರನ್ನ ಪದವ. ॥೫೮೪॥

ಮಲತ್ರಯದ ಕೆಸಜೊಳಗೆ ಒಸೆದು ಬಿದ್ದವ ನಾನು,
ವಸುಧಿಪತಿಯೇ, ಎನ್ನ ತಡಿಗೆ ಬಾಚಾ,
ವಸುಧೀಶ ಕಪಿಲಸಿದ್ಧ ಮಲ್ಲಿಕಾರ್ಜುನನೆ
ಕರುಣ ಕಾನನದೊಳಗೆ ಸಂತತವಿರಿಸಾ. ॥೫೮೫॥[I–೬೫೨]

ಕಾಮನನು ನೋಡಿದಾ ಕಂಗಳಲಿ ನೋಡದೆ,
ಸೋಮನಯನದಿ ನೋಡಿ ಸಲಹು ತಂದೆ.
ಕಾಮಾರಿ ಕಪಿಲಸಿದ್ಧ ಮಲ್ಲಿಕಾರ್ಜುನ ತಂದೆ,

ಕಾಮಂಗೆ ಒಪ್ಪಿಸದಿರೆನ್ನ ತಂದೆ.
ಅನ್ಯಾಯದಿಂದೈದು ನಾಯಕಟ್ಟಿ
ಅವನು ಬಿನ್ನಾಣದಿಂ ಬೇಂಟೆಯಾಡುತಿಪ್ಪಾ.
ಎನ್ನ ಕಂಡಡೆ
ತನ್ನ ಹೋ! ಮೃಗವು ಎಂದೆನಿಸುವ
ಇನ್ನೇವೆನ್ನೈ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೮೬॥ [I–೩೩೭]

ಎಸುಗೆ ಕಂಗಳಲಿಕ್ಕು ಕುಸುಮದಂಬಿನ ಗಾಯ,
ದೆಸೆಗೆಟ್ಟು ಮೀಹರೈ ಮೂಜಗದವರು.
ವಸುಧೀಶ ಕಪಿಲಸಿದ್ಧ ಮಲ್ಲಿಕಾರ್ಜುನ
ನಿಮ್ಮ ದೆಸೆಗವನು ಹೊದ್ದನ್ನೈ, ಸಲಹುದೆನ್ನಾ. ॥೫೮೭॥[I–೨೭೧]

ಕರುಣಾಕರನೆಯೆಂದು ಹೊಗಳುತ್ತೈದವೆ ಶ್ರುತಿಯು
ಎಯ್ದಿದಡೆ ಹೋಗಿ ಬಿರಿದಿಗಯ್ಯ.
ಕಾರುಣ್ಯಕರ, ಕಪಿಲಸಿದ್ಧ ಮಲ್ಲೇಶ್ವರಾ
ಓರಂತೆ ಮಾಡಿ ಸಲಹೈ ಎನ್ನನು. ॥೫೮೮। [I–೩೨೫]

ಭಜಿಸುವೊಡೆ ನಾನೀಗ ಭಜಕನೇ?
ಅಯ್ಯಾ, ನಿಜ ನಿರ್ಮಲಾಂಗ ನೀ,
ಆನಂದದಾನತದ ಕರುಣ ಕಾನನದೊಳಗೆ ಹೊಲಬುದಪ್ಪಿದ ಸೀಮೆ.
ತನುತ್ರಯವ ಮಲತ್ರಯವ ದಹನಮಾಡಿ,
ಮನದ ಮಧ್ಯದೊಳಗೆ ಪಂಚಮಾಳಾಪಕ್ಕೆ
ತನು ಸೃಷ್ಟಿ ಸಾಯುಜ್ಯಪದವೆಯ್ದಿತು.
ಅನುನಯದ ಪುರಾತ ಚರಿತವಂ ಹಾಡೀಗ ಹರುಷಿತನುವಾದೆನ್ನೈ.
ಸಕಲದೊಳಗೆ ಕರುಣಾಕರನೆ
ಎನ್ನ ಕರಣ ನಿರ್ಮಳತೆಯನು ಹರುಷದಿಂ ಮಾಡಿದೈ.
ಭಕ್ತಿಯಿತ್ತು ಎರಡೆಂಟು ಗ್ರಾಮದೊಳು ಕಳೆಯನಿರಿಸಿದೆ.
ನಿಮ್ಮ ಮನದ ಮಧ್ಯದೊಳಗೆ ಮುಖವೈದ್ಯನೂ ರಚಿಯಿಸಿದ
ಭೇದವನು ಹದುಳ ಮಾಡಿಯೆ ಅಜಿತೆ,

ಒದವಿದೆನು ತತ್ವ ಮೂವತ್ತಾಱನೂ.
ತನುವೆ ಮಹಾತವಕ ಘನ ಪಾಶದಿಂದತ್ತ
ಮನವ ಶುದ್ಧವ ಮಾಡಿದಯ್ಯಾ,
ಗುರುವೆ, ಕರುಣಾಕರನೆ ಕಪಿಲಸಿದ್ಧ ಮಲ್ಲೇಶ್ವರಾ
ಶರಣದೇಹಿಕ ದೇವ ಶರಣು ತಂದೆ. ॥೫೮೯॥

ಮುನ್ನಾದಿಯಲ್ಲಾದ ಉನ್ನತ ಜ್ಞಾನವನು
ಇನ್ನು ಭೇದಿಸುವರಾರು ಹೇಳು ತಂದೆ.
ಎನ್ನ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ
ನಿಮ್ಮ ಸೊಮ್ಮನಱಿದಾತಂಗೆ ಅಱಿಯಲಾಯಿತು. ॥೫೯೦॥ [I–೬೭೭]

ಬೇಡ ಬೇಡಯ್ಯ ಕಾಡಲಾಗದು ಎನ್ನ,
ಋಷೀಶ ನೀನೆನ್ನ ತಡಿಗೆ ಚಾಚಾ.
ಗಾಡಿಗತನದಿಂದ ಕಾಡಿ ನೋಯಿಸಿದೊಡೆ
ನೋಡಿ ಮೊಱೆಯಿಡುವೆನ್ನೈ ಬಸವಣ್ಣಗೆ.
ಋಷೀಶ ಕಪಿಲಸಿದ್ಧ ಮಲ್ಲಿಕಾರ್ಜುನಾ,
ನಿಮ್ಮ ಗಾಱು ಮಾಡಿಸುವರೆನ್ನುವರಯ್ಯ. ॥೫೯೧॥ [I–೬೦೯]

ಲಿಂಗ ಲಿಂಗಾಯೆಂಬ ಸಂದೇಹವುಳ್ಳನಕ
ಸಂದಳಿಯದೆಂಬರೈ ನಿನ್ನವರೆನ್ನ.
ಮನ್ನಣೆಯ ಕರಸ್ಥಳಕೆ ಇನ್ನು ನೀ ಬಂದಡೆ
ಉನ್ನತೋನ್ನತನಪ್ಪೆ ಸಂದಿಲ್ಲದೆ.
ಎನ್ನ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ
ನಿಮ್ಮ ಸೊಮ್ಮಿನೊಳಗಾನೀಗ ಲೀಯವಪ್ಪೆ. ॥೫೯೨॥ [I–೭೦೮]

ಅಯ್ಯಾ, ಬಾರಯ್ಯಾ ಬಾರಾ,
ಆನಂದದಾದಿಯಲ್ಲಿ ಅಯ್ಯಾ.
ಒಯ್ಯನೇ ಕೈಗೊಡಯ್ಯ.
ಅಯ್ಯಾ, ಕಂಗೆಟ್ಟು ಪಶುವಾದೆನು
ಎಲೆ, ಅಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೯೩॥

ಅಯ್ಯಾ, ಆನಂದದಾನಂದದಲ್ಲಿ ಎಂದಿಪ್ಪೆನೋ.
ಆದಿ ಅಕ್ಷರದೊಳಗೆ ಅಯ್ಯಾ,
ನಾನು ಭೇದಾದಿ ಭೇದವೆಂದಱಿದೆನಯ್ಯಾ.
ಹೋದ ಹೋದ ಬಟ್ಟೆಯ ನೋಡಿ ನೋಡಿ
ಬೆಱಗಾದೆನಯ್ಯಾ.
ವಿಚಿತ್ರಮೂಲ ಕಪಿಲಸಿದ್ಧ ಮಲ್ಲಿಕಾರ್ಜುನಾ,
ಎನ್ನ ಚಿತ್ತ ವಿಚಿತ್ತವ ಮಾಡದಿರು ತಂದೆ. ॥೫೯೪॥

ಅಯ್ಯಾ, ನಿನ್ನ ಕೂಟದ ಸುಖದಲ್ಲಿ
ನೀ ನಾನೆಂಬ ಸಂದಳಿದೆ ಅಯ್ಯಾ.
ಮೇಲೆ ಬಿದ್ದ ಮಸಿಯನ್ನು ಅಱಿಯದೆ
ಕೂಟದಲ್ಲಿ ತಾಮಸಿಯಾದೆನಯ್ಯಾ.
ಕಾರುಣ್ಯಕರನೆ, ಕಪಿಲಸಿದ್ಧ ಮಲ್ಲಿನಾಥಯ್ಯಾ,
ನಿರ್ನಾಮವಾಗಿ ನಿತ್ಯವೆಯ್ದಿದೆ ತಂದೆ. ॥೫೯೫॥

ಅಂಗ ಅಂಗದಲ್ಲಿ ಎನ್ನ ಅಂಗವಿಸದಂತೆ ಇರಿಸಯ್ಯಾ.
ಅಯ್ಯಾ ಸಂಗ ಸಂಗಸುಖದಲ್ಲಿ ಬಳಲಿಸದೆ,
ಅಂಗವನೆ ಈಯಯ್ಯಾ.
ಕಾರುಣ್ಯಕರನೆ, ಕಪಿಲಸಿದ್ಧ ಮಲ್ಲಿನಾಥಯ್ಯಾ
ನಿಮ್ಮ ಸಂಗವ ಹಿಂಗದಂತಿರಿಸು. ॥೫೯೬॥

ಬಯಸುವೆನಯ್ಯಾ ನಿಮ್ಮ ಸಂಗವ,
ಎಳಸುವೆನಯ್ಯಾ ನಿಮ್ಮವರ ಸಂಗಕೆ.
ಬಯಕೆ ಬೇಱಿಲ್ಲದಂತೆ, ಅನ್ಯಕ್ಕಾನೆಲಸದಂತೆ
ಹರುಷಿತನ ಮಾಡು ಭಕ್ತಿಯೊಳಗೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೫೯೭॥ [I–೫೮೮]

ಅಯ್ಯಾ, ಬಾರಯ್ಯಾ ಎನ್ನ ಕರದೊಳಿಪ್ಪನೆ,
ನಿನ್ನ ಆನತದ ಕರದೊಳಿಪ್ಪೆನೆ,

ಅಯ್ಯಾ, ನಿನ್ನ ಕರದಲ್ಲಿ ಹಿಡಿಯೆಯ್ದಿದೆ ಪದವ,
ಕರುಣಾಕರನೆ, ಕಪಿಲಸಿದ್ಧ ಮಲ್ಲಿನಾಥಾ
ಶರಣದೇಹಿಕ ದೇವನೇ ಶರಣು. ॥೫೯೮॥

ಕಾಯದ ಕರದಲ್ಲಿ ನೀನು ಶೂನ್ಯನಾಗಿಪ್ಪೆ ಅಯ್ಯಾ,
ಆನಂದಸ್ಥಾನದಲ್ಲಿ ಅನುಮಿಷನಾಗಿಪ್ಪೆ ಅಯ್ಯಾ,
ಆದಿಯಾಧಾರ ನಿನಗೆ ತಥ್ಯವಪ್ಪುದಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೫೯೯॥ [I–೩೪೩]

ತನುಮನದ ಮಧ್ಯದಲ್ಲಿ ಘನಸಿಂಹಾಸನವನಿಕ್ಕಿ
ಮನವನೇಣಿಸುತಿಪ್ಪೆಯಯ್ಯಾ.
ಒಂದೊಂದು ಒಂದೊಂದುವೆನುತ
ಅನಂತ ಪದವನೇಣಿಸುತಯ್ಯಾ.
ಆನಂದಮಯ ಕಪಿಲಸಿದ್ಧ ಮಲ್ಲಿಕಾರ್ಜುನಾ
ನಿನ್ನ ಸಂದು ಸವೆದು ಬೆರೆಸುವೆ ಕಂಡಯ್ಯಾ. ॥೬೦೦॥[I–೪೫೧]

ಭೇದಾಭೇದವನು ವಾದಿಸುವರೆ? ವಾದಿಸದಿರಯ್ಯಾ,
ಏಕೋ ದೇವನೆಂಬರಾ ಸಂಗದಲ್ಲಿ ಅನೇಕ ವಿಧದಿಂದಿರಿಸಯ್ಯಾ.
ನಿರಾಕಾರವೆಂಬವರ ಹಂಚುಮಾಡಿ ಕಳೆ,
ಏಕೋದೇವನೆಂಬನೀ ಕಪಿಲಸಿದ್ಧ ಮಲ್ಲಿನಾಥಯ್ಯ. ॥೬೦೧॥[I–೬೩೧]

ತನುಮನ ಒಡೆಯನೆ,
ಮನದ ಮಹಾದೇವಾ,
ಈ ಮನವ ಕದ್ದು ಎಲ್ಲಿ ಬೈಚಿಡುವೆ?
ಎನ್ನ ಮಾನಸಾ ವಾಚಾ ಕಾಯಿಕದ ಒಡೆಯ ನೀನೆ,
ಶರಣು ಶರಣು ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೬೦೨॥[I–೪೫೦]

ಚಿಂತೆ ನಿಶ್ಚಿಂತವಾಗದಯ್ಯಾ,
ನಿಶ್ಚಿಂತ ನೆಲೆಮನೆಯಯ್ಯಾ, ಎನಗೆಂದಪ್ಪುವುದು ಹೇಳಾ.

ಆನಂದಸ್ಥಾನದಲ್ಲಿ ತಾತ್ಪರಿಯದಿಂದ
ನೀ ನಾನೆಂದಪ್ಪೆನು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೬೦೩॥

ವರ್ಮವಜಿತೆನ್ನುವ ನಿಃಕರ್ಮಿಯ ಮಾಡಯ್ಯಾ,
ಕರ್ಮಕ್ಕಾನಾಜೀನು ಗುರುವೆ,
ಅಯ್ಯಾ, ನಿಃಕರ್ಮಿಯನು ಮಾಡಯ್ಯಾ, ಎನ್ನನು.
ಉನ್ನತ ಘನಗುರು ಕಪಿಲಸಿದ್ಧ ಮಲ್ಲಿನಾಥಾ
ಎನ್ನ ನಿನ್ನವರಂತೆ ಮಾಡಯ್ಯಾ. ॥೬೦೪॥

ಹಾಡಿ ಹಂಬಲಿಸಿದೆನಯ್ಯಾ,
ಅಯ್ಯಾ, ನಿಮ್ಮ ಬೇಡಿ ಬೇಡಿ ಬಾಯಿ ಬೋಡಾದೆನಯ್ಯಾ.
ನುಡಿಗೆಟ್ಟ ಬ್ರಹ್ಮದಲ್ಲಿ ನಡೆದೆನೆಂದರೆ
ಎನ್ನ ಒಡಲ ಆಮಿಷ ಕಾಡುತ್ತಲಿದೆ.
ಮೃಡನೇ, ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ಬೇಕು ಬೇಡೆಂಬುದ ಕಳೆಯಯ್ಯಾ. ॥೬೦೫॥

ಎನ್ನ ಮನ ಶುದ್ಧವಲ್ಲ, ನಿನ್ನ ಪೂಜಿಸಿ ಏವೆ?
ಎನ್ನ ತನು ಶುದ್ಧವಲ್ಲ, ನೀನೆಂತು ಇಂಬುಗೊಂಬೆಯಯ್ಯಾ?
ಮನದೊಡೆಯ ಮಹಾದೇವನೇ
ಎನ್ನ ತನು ಮನ ಶುದ್ಧವ ಮಾಡಿ,
ಮಧ್ಯಮಸ್ಥಾನ ಸಿಂಹಾಸನಾಋೂಢನಾಗು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ, ನಿಮ್ಮ ಧರ್ಮ. ॥೬೦೬॥

ಮುಟ್ಟಿ ಪೂಜಿಸುವೆನಯ್ಯಾ,
ಮುಟ್ಟಿದ ಬಳಿಕ ಇದು ನಷ್ಟವಾಗಬಹುದೆ?
ಈ ಹುಟ್ಟುವ ಹೊಂದುವವರ ಮುಟ್ಟಲೀಯದಾರಯ್ಯ.
ಮುಟ್ಟಿದ ಬಳಿಕ ಹುಟ್ಟುವ ಹೊಂದುವ
ಕಷ್ಟವ ಮಾಣಿಸಯ್ಯಾ, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೬೦೭॥

ಕಬ್ಬುನ ಪರುಷವ ಮುಟ್ಟಿ ಪರುಷವಾಗದಿದ್ದರೆ
ಕೊಱತೆಯಯ್ಯಾ
ನಿನ್ನ ಪೂಜಿಸಿ ನೀನೆಯಾಗದಿದ್ದರೆ
ನಿನ್ನ ದೇವತನಕ್ಕೆ ಹಾನಿ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೬೦೮॥[I-೩೧೦]

ಪರುಷಲಿಂಗಾ, ನಿನ್ನ ಕರದಲ್ಲಿ ಹಿಡಿದು,
ಏಕಯ್ಯಾ ಸರ್ವಫಲವನೀಯಯ್ಯಾಯೆಂಬರು?
ಶ್ರೀಗುರು ಸ್ವಾಮಿಯಿತ್ತುದು ಹುಸಿಯೆ?
ಅಯ್ಯೋ, ಇವದಿರು ಕೆಟ್ಟ ಕೇಡಿಂಗೆ ಕಡೆಯಿಲ್ಲ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಮುಟ್ಟಿಯೂ ಮಟ್ಟಲಱಿಯದವರನೇನೆಂಬೆ! ॥೬೦೯॥ [I-೫೬೬]

ಅಟ್ಟಿ ಮುಟ್ಟಿ, ಆತುರದಿಂದ ಹಿಡಿದು,
ಮುಟ್ಟಿ ನಂಬಲಱಿಯದ ಕಷ್ಟರನೇನೆಂಬೆನಯ್ಯಾ!
ನಿಶ್ಚಯವಿದೆ ಲಿಂಗ, ಸಧ್ಯವಿದೆ ಪ್ರಸಾದ, ಪ್ರಸಿದ್ಧವಿದೆ ಜಂಗಮ.
ಕಪಿಲಸಿದ್ಧ ಮಲ್ಲಿಕಾರ್ಜುನಾ
ಇನಿತನಱಿಯದವರ ಹೊದ್ದಿಸದಿರಯ್ಯಾ, ಎನ್ನತ್ತಲಿ. ॥೬೧೦॥

ಜಪತಪವ ಮಾಡಿದರೇನಯ್ಯಾ?
ಹೋಮ ನೇಮ ಸಮಾಧಿಯ ಮಾಡಿದರೇನಯ್ಯಾ?
ಪಾದೋದಕ ಪ್ರಸಾದ ವರ್ಮವಱಿಯದನ್ನಕ.
ಮುಂಡೆಯ ಬದಿಕಿಂಗೆ,
ಮೂಲಸ್ವಾಮಿಗೆ ಕರುವಿಡಬಹುದೆ?
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೬೧೧॥[I-೪೧೧]

ಆದಿಯಕ್ಷರದ ಭೇದವನಱಿಯದವರೆಂತಯ್ಯಾ
ಭಕ್ತರೆಂದೆಂಬೆ?
ಆನಂದ ತನುಮನದ ಕರಸ್ಥಳದ

ಬಹಳವಱಿಯದವರ ಏಕೊಲಿವೆಯಯ್ಯಾ?
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೬೧೨॥[I–೧೩೨]

ಸೂಕ್ಷ್ಮಮಕರದಲ್ಲಿ ಶುದ್ಧಸಿಂಹಾಸನವನಿಕ್ಕಿ,
ಆಕಾರವನರ್ಚಿಸಿ ಆನಂದವನೆಯ್ದುವರ
ತೋಱಯ್ಯಾ ಎನಗೆ, ನಿನ್ನ ಧರ್ಮ.
ಅವರನೈಕ್ಯತ್ರಯದಲ್ಲಿ ಅನುಮಿಷರೆಂಬೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನಿನ್ನಾಣೆ ನೀನೆಯೆಂಬೆ. ॥೬೧೩॥[I–೭೬೮]

ಮನ ಮಹಾಮಂಗಳವನೆಯ್ದಿಹದೆಂದು
ಮುಂದಱಿತು ಬಂದ ಬಟ್ಟೆಯಂ ಮುಚ್ಚಿಸಿ,
ಬಾರದಂತೆ ಹೋದವರು ನಿನ್ನವರಯ್ಯಾ.
ನೀ ಸತಿಕಾಱ, ನಿನ್ನಿಂದೂರು ಹಾಳಾಯಿತ್ತು.
ಎನ್ನನವರಂತೆ ಮಾಡದಿದ್ದರೆ, ನಿನ್ನ ಬೈವುದೇ ಸತ್ಯ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೬೧೪॥[I–೬೪೯]

ಎರಡೆಂಟು ಗ್ರಾಮದಲ್ಲಿ ಚೌಮಠವ ಮನ್ನಿಸಿ,
ಆನಂದದಿಂದವರು ನಿತ್ಯರಯ್ಯಾ.
ಧ್ಯಾನಸಮಾಧಿ ತಾನು ರೂಪಾದೊಡೆ
ಅವರ ನೀನು ನೀನೆಯೆಂಬೆ ಕಾಣಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೬೧೫॥

ತಾತ್ಪರಿಯ ವರ್ಮ ಕಳೆಯನಱಿತು,
ಶುದ್ಧ ಸಿದ್ಧ ಪ್ರಸಿದ್ಧದಲ್ಲಿ ಪ್ರಭಾಮುಖದಲಿಪ್ಪವರ ಅವರನೇನೆಂಬೆ?
ಅವರ ಸಿದ್ಧರೆಂಬೆನೋ? ಅವರ ಶುದ್ಧರೆಂಬೆನೋ?
ಅವರ ಪ್ರಸಿದ್ಧರೆಂಬೆನೋ?
ಅವರ ಸರ್ವಾಂಗ ಸನುಮತರೆಂಬೆ ಕಾಣಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೬೧೬॥

ಈರೇಳು ಸೀಮೆಯಿಂದಾರಯ್ಯ ಬಂದರೆ
ಓರಂತೆ ಅವರುವನು ನೀನುಯೆಂಬೆ.
ಕಾರುಣ್ಯಕರ ಕಪಿಲಸಿದ್ಧ ಮಲ್ಲೇಶ್ವರಾ
ಅವರ ದ್ವಾರಕಿಂಕರನುವಾಗಿ ಆನು ಇಪ್ಪೆ. ॥೬೧೭॥[I–೨೧೬]

ಆದಿ ಅಕ್ಷರವನೂ ಭೇದಿಸುವ ಭಕ್ತರನು
ಆನಂದದಿಂದವರ ನೀನುಯೆಂಬೆ.
ಧ್ಯಾನಜಪದಿಂದವರ ಆನಂದವಂ ನೆನವೆ
ಕಾರುಣ್ಯಕರ ಕಪಿಲಸಿದ್ಧ ಮಲ್ಲೇಶ್ವರಾ. ॥೬೧೮॥[I–೧೩೪]

ಸುರಭಿ ಮಧ್ಯದೊಳಿರ್ದು,
ವಿರಳ ಕೂಪವ ನೋಡಿ,
ಅರಿದಯ್ಯ ಅರಿದಯ್ಯ ಭಕ್ತಿಪದವು.
ಕರುಣಾಕರನೆ, ಕಪಿಲಸಿದ್ಧ ಮಲ್ಲೇಶ್ವರಾ
ತೆಱಹಿಲ್ಲದ ಭವನೆ ಕುಱುಹುಗೆಡಿಸಾ. ॥೬೧೯॥ [I–೭೫೫]

ನಾಮ ನಿರ್ನಾಮ ತಾನೇನಾದಡಪ್ಪುದೈ
ಕಾಮ್ಯರ್ಥವಂ ಕಳೆದಡಲ್ಲದಿಲ್ಲ।
ನಾಮಾಕ್ಷರದ್ವಯದ। ನಾಮ ತಾನಾದೊಡೆ
ಕಾಮ್ಯದೂರನುವಪ್ಪ ಮಲ್ಲಿಕಾರ್ಜುನಾ॥ ॥೬೨೦॥

ಮಸ್ತಕದ ಮಸ್ತಕದ। ಹಸ್ತನ್ಯಸ್ತವು ಭಕ್ತಿ
ತತ್ವಮಸಿಯಿಂದತ್ತ ಮುಕ್ತಿ ಮೂಱು।
ಇತ್ತೆರದ ಭಕ್ತಿಯನು। ಹೊತ್ತು ನಿಂದಾ ಸೀಮೆ
ಮುಕ್ತಿ ನೀನಪ್ಪನ್ಯೆ ಯೋಗಿನಾಥಾ॥ ॥೬೨೧॥

ಅಂಕುಶದಲರಳಿದ್ದು। ಸಂಖೆಯಿಂ ಮುಕುಳಿಸಲು
ಪಂಕವಿಲ್ಲದೆ ಜಲವು ಪರಿವುತಿರಲು।
ಶಂಕರಾ ಶ್ರೀ ಮಲ್ಲಿಕಾರ್ಜುನಯ್ಯ, ನಿಮ್ಮ ನಿ
ಶ್ಶಂಕೆಯಿಲ್ಲದೆ ಬೆರೆಸಿದವನು ನಾನು॥ ॥೬೨೨॥

ವಚನ ಸಂಕರದಿಂದ ಹಸಗೆಟ್ಟಿತ್ತೈ ಬ್ರಹ್ಮ,
ನುಡಿಯ ಗಡಣವನಳಿದು,
ಒಡಲ ಕಳವಳವಿಲ್ಲದಾರೈವ ಬ್ರಹ್ಮಕ್ಕೆ
ನುಡಿಯೆ ತಥ್ಯವೈ ಶ್ರೀ ಮಲ್ಲಿಕಾರ್ಜುನಾ. ॥೬೩॥

ಮನದ ಕಾರ್ಪಣ್ಯವನು। ಕಳೆಯಯ್ಯ ಶ್ರೀ ಗುರುವೆ
ತನು ಮನದ ಒಡೆಯ ನೀ
ಮನದ ಕೊನೆಯಲ್ಲಿ ನೆಲಸು ಯೋಗಿನಾಥಾ ॥೬೪॥

ಆಧಾರಸ್ಥಾನಕ್ಕೆ। ಆದಿ ಅಕ್ಷರ ಮೂಲ
ಭೇದಕ್ಕೆ ಮೂಲವದು ಧ್ಯಾನ ಮೌನ।
ಸಾದಾಖ್ಯ ದೇಹಕ್ಕೆ। ಕಾಣಲಱಿಯದ ತತ್ವ
ತಾನೆನ್ನ ರೂಪಾಯಿತ್ತೈ ಯೋಗಿನಾಥಾ॥ ॥೬೫॥

ಅಕ್ಷರಾಂಕ-ಶಿವಯೋಗ ಮುದ್ರೆ:

ಎರಡು ಬೆಟ್ಟದ ನಡುವೆ । ಕರಡೆದ್ದ ಅಕ್ಷರದ।
ನುಡಿಯ ಬ್ರಹ್ಮದ ನದಿಯು ಸುತ್ತಿ ಮುತ್ತಿ।
ಥರಥರದಿ ಪರಿತಪ್ಪ। ತೆರೆನೊರೆಯ ಸಂಭ್ರಮಕೆ
ಮೃಡನಿಮ್ಮನೆಯ್ದಿದೆನು ಯೋಗಿನಾಥಾ॥ ॥೬೬॥

ಭೀಮಾಕೃತಿಯ ಲೋಕ। ಸಾಮಸಮವಾಯೆಂಬ।
ನಾಕನದಿಯಿಂದತ್ತ ಅಕ್ಷರಾಂಕ।
ಏಕೋ ಕಲಾ ಮಲಾ। ಯೆಂಬ ಆಱಕ್ಷರದ
ನಾಮವಿಡಿದಾನಾದೆ ಯೋಗಿನಾಥ॥ ॥೬೭॥

ಮುಯ್ಯೂರ ಮಧ್ಯದಲ್ಲಿ। ಮುನ್ನೂಱು ಅಕ್ಷರದ
ಮೂಱು ಬೆಟ್ಟದ ಮೇಲೆ ಅಮೃತವೊಸರೆ।
ಆಱೂಥದಾ ಕೂಟ। ದಾನತವ ಕಂಡೀಗ
ಆನು ಬೆಱಗಾದೆನ್ನೈ ಯೋಗಿನಾಥಾ॥ ॥೬೮॥

ಅಕ್ಕರವು ಒಂದಱಲಿ। ಸಿಕ್ಕಿತ್ತು ಸಕಲವೈ
ನಿಷ್ಕಲಕ್ಕೆಯಿದಿತ್ತು ಅದಱ ಶಾಖೆ।
ಅಕ್ಷರಾನತದಲ್ಲಿ। ಲೆಕ್ಕಿಸದೆ ಇದ್ದರೆ ಆನದಕೆ
ತಕ್ಕುದನು ಹೇಳುವೆನು ಯೋಗಿನಾಥಾ॥ ॥೬೨೯॥

ಎರಡಕ್ಷರದ ಶಾಖೆ। ಮೃಡನಿದ್ದ ಸ್ಥಫಲ ಹೇಱಿ
ಈ ನುಡಿಯ ಬ್ರಹ್ಮಕ್ಕಿಂದಲ ಪ್ರಮಾಣು।
ಏಕೋಹಮೆಂಬ ಅಕ್ಷರ। ಮೂಱನಱಿದರೆ
ಆಕಾರ ಲೀಯವ್ಯೆ ಯೋಗಿನಾಥಾ॥ ॥೬೩೦॥

ಮೂಱಕ್ಷರದ ಭೇದ। ಮೂರ್ತ್ಯಂಗನೆಯ ಶಾಖೆ
ಆಱಱಿಂದತಿಶಯವ ಬೆಳಗುತಿರ್ಪ।
ತೋಱುವ ಭಕ್ತಿಯನು। ಅತಿಗಳೆಯದಿದ್ದೀಗ
ಆನು ನಿನ್ನ ರೂಪು ಯೋಗಿನಾಥಾ॥ ॥೬೩೧॥

ನಾಕಕ್ಷರದ ಭೇದ। ಧಾತಿ ಸಕಲವ ಮೀಱಿ
ಜಾತನಿಪ್ಪೆಡೆಗೇಕ ಶಾಖೆವರಿದು।
ನೀತಿ ನಿಜ ನಿಂದಲ್ಲಿ। ಸಾತ್ಮಿಸಲು ಬಲ್ಲಡೆ
ಭೂತ ದಯ [೧][ತಾ][೧] ನಕ್ಕು ಯೋಗಿನಾಥಾ॥ ॥೬೩೨॥

ಐದಕ್ಷರದ ಭೇದ। ಐಬ್ರಹ್ಮದಿಂದತ್ತ।
ಶಾಖೆವರಿದು ನೀತಿ ನಿಜ ನಿಂದಲ್ಲಿ।
ಶಾಖೆ ಫಲವಾದರೆ
ಅಜಾತ ಸಂಗಮವಕ್ಕು ಯೋಗಿನಾಥಾ॥ ॥೬೩೩॥

ಆಱಕ್ಷರದ ಭೇದ। ಮೂವತ್ತಾಱನು ಮೀಱಿ
ಆನಂದ ತ್ವಮಸಿಯಲಿ ಮೂಲವರಿದು।

೧-೧ ಶಾ (ಮೂ)

ಆಫಲವು ನಿಸ್ಥಾರ। ದಿಂದಲ್ಲಿ ನಿಂದಡೆ
ಅಜಾತಗುರು ತಾನಕ್ಕು ಯೋಗಿನಾಥಾ॥ ॥೬೩೪॥

ಏಳಕ್ಷರದ ಭೇದ। ಎಪ್ಪತ್ತೆರಡು ಸಾವಿರ ನಾಡಿಗಲ್ಲಿ।
ತಾ ಮುಖ್ಯನಾದಿ ಕೋಹಂ ಪದಾರ್ಥವನು॥
ಎಯ್ದಿಪ್ಪುದೈ ಅನ್ಯನ್ಯ। ವನು ತಾನು ನಿಂದಿಸಿ
ಸಕಲಕ್ಕೆ ತನ್ನ ರೂಪಾಯಿತ್ತೈ ಯೋಗಿನಾಥಾ॥ ॥೬೩೫॥

ಎಂಟಕ್ಷರದ ಭೇದ। ನಂಟುಗೊಂಡುತ್ತು
ಬ್ರಹ್ಮ ಟೆಂಟನಿರಿಸುತ್ತೈಕ್ಯ।
ತಾವರ್ಗಂಗಳ ಈ ನಂಟುಗೆಟ್ಟ। ಬ್ರಹ್ಮ ಚಿಂತೆ ಮೂಱಾದರೆ
ನಿಶ್ಚಿಂತ ಪದವಕ್ಕು ಯೋಗಿನಾಥಾ॥ ॥೬೩೬॥

ಒಂಬತ್ತು ಅಕ್ಷರದ। ಕಂಬ ಮೂಱಾಱಱೊಳು
ಗಂಭೀರ ಶಾಖೆ ತಾ ಬ್ರಹ್ಮ ಫಲವೈ।
ಹಮ್ಮಿಲ್ಲದಾ ಫಲದ। ಸೊಮ್ಮ ನೀನೆಯ್ದಿದರೆ।
ಕರ್ಮನಿರ್ಮಳವಕ್ಕು ಯೋಗಿನಾಥಾ॥ ॥೬೩೭॥

ಹತ್ತಕ್ಷರದ ಭೇದ। ತತ್ವಮಸಿಯಿಂದತ್ತ
ಭಕ್ತಿ ಕಾರಣ ತನ್ನ ಸುಫಲಫಲವೈ।
ಅತ್ಯುತ್ಕಟದ ಸುಪಥ। ಮತ್ತೆ ತೆಱಹಾದರೆ
ತತ್ವಕ್ಕೆ ಎಡೆಯಿಲ್ಲ ಯೋಗಿನಾಥಾ॥ ॥೬೩೮॥

ಹನ್ನೊಂದು ಅಕ್ಷರದ। ಮುನ್ನಾದ ಭೇದವನು
ಇನ್ನಾರಿಗಱಿಯಲಹುದಾದಿ ಐದಾ।
ಸನ್ನುತದ ಧ್ಯಾನಕ್ಕೆ। ನಿನ್ನ ಫಲವಾದರೆ
ನಿನ್ನ ಪದ ನೀ ನಾನು ಯೋಗಿನಾಥಾ॥ ॥೬೩೯॥

ಹನ್ನೆರಡು ಅಕ್ಷರದ। ಮುನ್ನಾದ ಮುಕ್ತಿಯನು
ಬಿನ್ನಾಣದಿಂದದನು ಭೇದಮಾಡಿ।
ಆದ್ಯಂತರವನೆಯ್ದಿ। ಹೋದ ಸಾಯುಜ್ಯಕ್ಕೆ
ಅನಾದಿಸಿದ್ಧನು ತಾನೆ ಯೋಗಿನಾಥಾ॥ ॥೬೪೦॥

ಹತ್ತು ಮೂಱಕ್ಷರದ। ಭಕ್ತಿ ಜ್ಞಾನದ ವೀರ
ಮತ್ತೆ ಪ್ರಪಂಚಕ್ಕೆ ಸಿಕ್ಕ ದಿಕ್ಕು।
ಮುಕ್ತ್ಯಂಗನೆಯ ಕೂಟ। ಮುನ್ನ ನೀನಾದರೆ।
ಮತ್ತೆ ನೀನೆ ಶಿವನು ಯೋಗಿನಾಥಾ॥ ॥೬೪೧॥

ಮುನ್ನಾದಿಯಿಂದ ಹದಿ। ನಾಲ್ಕಕ್ಷರದ ಭೇದ।
ತನ್ನ ಲೋಕಂವೆರಡುವೇಳಱಲ್ಲಿ।
ಬಿನ್ನಾಣದಿಂದದು। ತನ್ನ ರೂಪಾದರೆ।
ಸನ್ನುತವು ನೀ ನಾನೆ ಯೋಗಿನಾಥಾ॥ ॥೬೪೨॥

ಹದಿನೈದು ಅಕ್ಷರದ। ಹದುಳವಾಯಿತು ತತ್ವ
ತುರಿಯ ತುರಿಯಕ್ಕಿಂದತ್ತ ರೂಪು।
ಅತಿಶಯದ ಸಂಗಮದ। ಗತಿಗೆಟ್ಟ ಬ್ರಹ್ಮದಲಿ।
ಅತಿಯೋಗಸಿದ್ಧನೈ ಯೋಗಿನಾಥಾ॥ ॥೬೪೩॥

ಕಳೆಯ ಮೀಱಿದ ಅಕ್ಷರ।ಐದಾಱು ಐದಱಲ್ಲಿ
ಎಯ್ದೆ ಬ್ರಹ್ಮಾಂಡವನು ತಾನೆ ನುಂಗಿ।
ಐ ವೇದದಿಂದಿತ್ತ।ಲಯಿದು ಬ್ರಹ್ಮವನಱಿತು।
ಅಯ್ಯ ತಾನೇ ನೀನು ಯೋಗಿನಾಥಾ॥ ॥೬೪೪॥

ಬಿಂದು ಭೇದವಭೇದ। ಸಂದ ಕಲೆ ತಾ ಭೇದ
ಆನಂದ ಗುಣ ಸಂಪನ್ನ ಅವ್ವ, ನಿನ್ನಾ।
ವಿಂದಾವನ ವನದೆ।ಯವನೋನ್ನತವಾಗೆ।
ಸಂದು ಸವದುದು ಗುರುವೆ ಯೋಗಿನಾಥಾ॥ ॥೬೪೫॥

ಅಕ್ಷರಾಂಕವ ಹೇಳಿ।ದಕ್ಷಯನೆ ನಾ ನಿನ್ನ।
ದಕ್ಷಿಣತನದಿಂದಲರ್ಚಿಸೀಗಾ॥
ಮಿಕ್ಕ ಬ್ರಹ್ಮಾಂಡವನು। ಹೊತ್ತಿರ್ದಡಾನತದ॥
ಅಕ್ಷರಕ್ಕತೀತ ನೀ ಯೋಗಿನಾಥಾ॥ ॥೬೪೬॥

ಇಂತು ನಿನ್ನಯ ಭವದ ಚಿಂತೆಗೆಟ್ಟಿತು,
ಬ್ರಹ್ಮ ನಿಶ್ಚಿಂತನಾದೆನೈ.
ಸಕಲದಲಿ ವಸ್ತು ಹಲವನು ಜಳಿದು,
ತತ್ವ ಮೂವತ್ತಾಱ ವ್ಯರ್ಥವೆಂದೆ ಕಳೆದು,
ಸುಚಿತ್ತದಿಂದಾ ಮತ್ತೆ
ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ
ತತ್ವ, ತುರಿಪದೊಳಗೆ ಲೀಯವಾದೆ. ॥೬೪೭॥

ಅಯ್ಯಾ, ನಿನ್ನನೆನ್ನ ಕರದಲಿಟ್ಟು,
ಆ ಅಕಾಯದ ಕಳೆಯಿಂದತ್ತಲಿ,
ಅಯ್ಯಾ, ಜೀವ ಸಂಭೋಗನಾದೆನು.
ವಾಯಕಾಯವೆಂಬವಾ ಮೀಜಿ ನೀನಾದೆ,
ಕಪಿಲಸಿದ್ಧ ಮಲ್ಲಿನಾಥಯ್ಯ. ॥೬೪೮॥

ಕರ ಮನದಲ್ಲಿ ತನುವಾದೆ ಅಯ್ಯಾ,
ಮನದ ಮಧ್ಯಸ್ಥಾನ ನೀನು.
ತನು ಪ್ರಾಣವಿಷ್ಟವಾದೆ ಅಯ್ಯಾ
ಎನ್ನ ಮನದ ಮಂಗಳನೆ.
ಅವಧಾರು! ಕರುಣಾಕರನೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ತನುಗುಣ ದೂರನೇ ನಮೋ. ॥೬೪೯॥[I–೩೧೪]

ಆಮೋದದಿಂದಲಯ್ಯಾ,
ನಿನ್ನ ಆದಿಯಾಧಾರವಜೆದೆನಯ್ಯಾ.

ತಂದು ಒಂದು ನಾದದ ಬ್ರಹ್ಮವದೂಗಿ,
ಕೋಟಿ ಕಟ್ಟಳೆ ಪರುಷದಿಂದತ್ತಲಾದರೆ
ಮುಕ್ತಿ ಬೇಱೆನಲುಂಟೆ ಶ್ರೀ ಮಲ್ಲಿಕಾರ್ಜುನಾ. ॥೬೫೦॥

ಎಲೆ, ಭವಗೇಡಿ
ನಿನ್ನುವನು ತೋಱದೆ ಕಾಡಿದೆ ಹಿಂದೆ ಅಯ್ಯಾ.
ತನು ಗುಣಸಾಹಿತ್ಯ ನೀನೆ,
ನೀನೆನ್ನ ಮನದ ಮಹೋತ್ಸಾಹನೆ ಅಯ್ಯಾ.
ಅವ್ವೆಯ ಅಯ್ಯನಾಗಿಪ್ಪೆ,
ಎನ್ನ ಕಪಿಲಸಿದ್ಧ ಮಲ್ಲಿನಾಥಯ್ಯಾ. ॥೬೫೧॥[I–೨೬೩]

ಎಸಳ ಕುಸುಮ ನಿವ್ವಾರಿಸಲು ಅಯ್ಯಾ,
ನಾಮ ದೆಸೆಗೆಟ್ಟ ಕಂಬೇಟದಿಂದಯ್ಯಾ,
ಪಶು ಪಾಶವಿನ ಮೋಚನಯ್ಯಾ,
ನಿನ್ನ ದೆಸೆಯಿದ್ದೆಸೆಯಾಗಯ್ಯಾ,
ಶಶಿಧರ ಕಪಿಲಸಿದ್ಧ ಮಲ್ಲಿನಾಥಯ್ಯಾ,
ನಿನ್ನ ವಶಕೆ ತೆಗೆದುಕೊಳ್ಳಯ್ಯಾ, ಎನ್ನನು. ॥೬೫೨॥ [I–೨೬೮]

ವಿಷಮ ವಿಷಯ ಗಾಳಿಯಲ್ಲಿ,
ದೆಸೆಗೆಟ್ಟೆ ನಾನು ತಂದೆ, ಅಯ್ಯಾ.
ಆಮಿಷಂಗಳೆನ್ನುವ ಕಾಡಿಹವು,
ರೋಷ ಹರುಷಂಗಳೆನ್ನ.
ಶಾಶ್ವತ ನಿತ್ಯನೆ ನಿಜಪದವನೀಯಯ್ಯಾ
ಕಪಿಲಸಿದ್ಧ ಮಲ್ಲಿನಾಥಯ್ಯಾ. ॥೬೫೩॥ [I–೭೨೫]

ಸಜ್ಜನನೆ, ಎನ್ನ ಗಂಡನೆ, ನೀನು.
ಮತ್ತನ್ಯಕ್ಕೆಳಸಲಾಪೆನೆ? ಅಯ್ಯಾ.
ಕಾಮ ಕ್ರೋಧ ಲೋಭ ಮೋಹವು ಅಯ್ಯಾ,
ಎನ್ನ ಆಮಿಷ ವಿಕಾರಂಗಳು ಆನಂದವಾಗಿ

ಎನ್ನ ತಮ್ಮ ಪ್ರಭೆಯನೆಯ್ದದ ಮುನ್ನ,
ನಿನ್ನ ರೂಪನೀಯಯ್ಯಾ
ಕಪಿಲಸಿದ್ಧ ಮಲ್ಲಿನಾಥಯ್ಯಾ. ॥೬೫೪॥ [I–೭೬೯]

ಕಡದ ಕಂಬದ ನಡುವೆ
ಮೃಡ ನಿನ್ನ ಒಡಲಾಗಿ ಕಂಬ ನೀರಾಯಿತಯ್ಯಾ.
ಅಯ್ಯಾ, ಸಾಕಲ್ಯವ ನಿಃಕರಿಸಿ
ಅನೇಕ ನಿರವಯವನೆಯ್ದಿ,
ಆಕಾರಕ ಸಿದ್ಧ ದೇವರ ದೇವನೆ ಕೇಳು
ಕಪಿಲಸಿದ್ಧ ಮಲ್ಲಿನಾಥಯ್ಯಾ. ॥೬೫೫॥

ಒಡಲು ಪ್ರಾಣವನ್ನು ಇಕ್ಕಿ ಒಡಗೂಡಿದ
ಶರಣರ ಒಡಗೂಡಿರಿಸಾ ಎನ್ನನು.
ನುಡಿಯ ಬ್ರಹ್ಮಕ್ಕಾನಾಱೆನು ಅಯ್ಯಾ, ಎನ್ನ.
ಅಡಿಗಡಿಗೆ ಎನ್ನ ಜಱಿಯದೆ
ಎಲೆ ಮೃಡನೆ, ಶೂನ್ಯ ತಾನಾದ ಕರುಣನಾಗು
ಕಪಿಲಸಿದ್ಧ ಮಲ್ಲಿನಾಥಯ್ಯಾ. ॥೬೫೬॥

ಭಕ್ತಿಯಿಲ್ಲದ ಬೇಗೆಯಲ್ಲಿ ಬೆಂದೆ ನಾನಯ್ಯ,
ನಿತ್ಯವಪ್ಪ ಭಕ್ತಿಯ ಪಥ ಮಾಡಿಕೊಡು ತಂದೆ.
ತತ್ವ, ಕಾಮ್ಯಾರ್ಥವ ಒಲ್ಲೆ ಅಯ್ಯಾ,
ಎನ್ನ ಭಕ್ತಿಯೊಳಗೆ ಇರಿಸೈ.
ನಿತ್ಯ ನಿಗಮಗೋಚರ ಕಪಿಲಸಿದ್ಧ ಮಲ್ಲಿಕಾರ್ಜುನಾ
ಭಕ್ತ ಸಂಗದೊಳಗಿರಿಸಯ್ಯಾ. ॥೬೫೭॥ [I–೬೨೦]

ಹಾಡುವೆ ಹೊಗಳುವೆ, ಬೇಡುವೆ ಸೆಱಗೊಡ್ಡಿಯಾನು,
ಕಾಡದಿರು ನಿನ್ನವರ ಸಂಗವನು ಅಯ್ಯಾ.
ನಿನ್ನ ಬೇಡುವ ಪದವೆನಗಿಂತುಟೆ ಅಯ್ಯಾ.
ಕರುಣಾಕರನೆ, ಕಪಿಲಸಿದ್ಧ ಮಲ್ಲಿನಾಥಾ
ಒಲಿದು ಈವಡೀಯಯ್ಯಾ ತಂದೆ. ॥೬೫೮॥ [I–೮೨೬]

ಸಂಗದವರ ಕಂಡು ಅಂಜಿ ನಿಸ್ಸಂಗನಾದೆ,
ಕಾಮಿಗಳ ಕಂಡು ಅಂಜಿ ನಿಃಕಾಮಿಯಾದೆ.
ಕಾರುಣ್ಯ ಸಿಂಧುವೆ ಕೇಳಯ್ಯಾ,
ಅನಾದಿಯಾಧಾರಕ್ಕೆ ಮೂಲ ನೀನೆ ಕಾಣಾ.
ಕಪಿಲಸಿದ್ಧ ಮಲ್ಲಿನಾಥಯ್ಯಾ
ಮಾತುಗಾಱರ ಕಂಡು ಮೌನಿಯಾದೆ. ॥೬೫೯॥

ಧಾತುವ ಮೀಱಿದ್ದ ಬಣ್ಣವ,
ಅಜಾತ ನಿನ್ನ ಕೂಟವ,
ಆರಿಗಯ್ಯಾ ಭೇದಿಸಲಕ್ಕು?
ಅಭೇದ್ಯ ಕಾರಣ ಶಿವನೇ,
ಆದಿ ಅಕ್ಷರದಲ್ಲಿ ಆಮೋದದಾನತದ ಭೇದವ
ಆ ಭೇದವ ಭೇದಿಸಲಹುದೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೬೬೦॥

ತತ್ವ ಬ್ರಹ್ಮಾಂಡದಿಂದತ್ತಲಾದ ಸೀಮೆ
ಭಕ್ತಿ ಕಾರಣ ನೀನು ಚುಳುಕಾದೆಯಯ್ಯ।
ಸತ್ವರಜ ತಮಗಳನು। ಮೀಱಿದಾ ಭಕ್ತರ।
ಹಸ್ತ ನಿನ್ನಯ ನೆಲೆಯು ಯೋಗಿನಾಥಾ॥ ॥೬೬೧॥ [ಅ-೫೯]

ಮೂಱೊಂದುಯೆಂದವರ। ಮೂಱು ತಾವಾದವರ
ಆಱೂಢದೈಕ್ಯವನು ಎಯ್ದಿದವರಾ।
ತೋಱಿದ ಪ್ರಾಪಂಚ। ಮೀಱಿದ ಶರಣರಾ
ಆಱೂಢರೂಪು ನೀ ಯೋಗಿನಾಥಾ॥ ॥೬೬೨॥

ಸಕಳ ನಿಷ್ಕಳವೆನ್ನದೆಲ್ಲವು ನೀವೆಂದು,
ಇಹಲೋಕ ಪರಲೋಕವೆಂದೆನ್ನದ ಶರಣರಲಿ,
ನೆಲೆ ಮನೆಯ ರಚಿಸಿರ್ಪೆ ನೀನಯ್ಯಾ.
ಕರುಣಾಕರನೆ ಗುರುವೆ ಶ್ರೀ ಮಲ್ಲಿಕಾರ್ಜುನಾ. ॥೬೬೩॥

ಲಿಂಗ, ನಿನ್ನಯ ಶರಣ। ಅನಂಗವನು ಚಿಂತಿಸನು
ಮಂಗಳಾತ್ಮನುವಪ್ಪ ತನುತ್ರಯದಲಿ।
ಅನಂಗ ಸಂಗಕ್ಕೆಳಸ। ಲಿಂಗವೆ ಒಡಲಪ್ಪ
ಮಂಗಳಾತ್ಮನು ಭಕ್ತ ಯೋಗಿನಾಥಾ॥ ॥೬೬೪॥

ಭವಿಸಂಗವನು ಮಾಡ। ಭಕ್ತಿಸಂಗದೊಳಿಪ್ಪ
ಅನ್ಯಕ್ಕೆ ತೆಱಹುಗುಡ। ತಾನು ಶಿವನೂ।
ಮನ್ನಣೆಯ ಭಕ್ತಿಯೊಳು। ಚೆನ್ನಾಗಿಪ್ಪ ಶಿವ
ನಿನ್ನ ರೂಪೈ ಭಕ್ತ ಯೋಗಿನಾಥಾ॥ ॥೬೬೫।

ವೇದನಾಲ್ಕರ ಮೇಲೆ ಆದ ಪಂಚಮವಾಕ್ಯ,
ಆದ ಷಷ್ಠಮ ಬ್ರಹ್ಮವನು ಜಪಿಸುವಾ.
ಆಮೋದವನು ಮೀಱಿ ಹೋಯಿತ್ತೈ
ಕೈವಲ್ಯದಾರಿ ಪದಕಾಗಿ.
ತಾ ನಿತ್ಯಾನಿತ್ಯ ಅನಾದಿ ಸಂಸಿದ್ಧ
ಕಪಿಲಸಿದ್ಧ ಮಲ್ಲೇಶ ಮೂದೇವರಿಗೆ ದೀಕ್ಷೆಮಾಡಲೆಂದು. ॥೬೬೬॥ [I-೭೨೯]

ಮುನ್ನಾದ ಫಲವನು, ಮುನ್ನಾದ ಸಂಯೋಗ,
ಇನ್ನು ವಿವರಿಸಲುಂಟೆ ಹೇಳಾ ಮರುಳೆ?
ಕಣ್ಣುಂಡ ಬೊಮ್ಮನನು ಇನ್ನು ವಿವರಿಸಲುಂಟೆ?
ತತ್ವಮ[ಸಿ] ಬ್ರಹ್ಮಕ್ಕೆ ಪರಿಚಾರ ತಾ,
ಸೊಮ್ಮು ಸಾಯುಜ್ಯದಲಿ ಕರ್ಮಗೊಟ್ಟಡೆ ತಾನು
ನಿನ್ನ ರೂಪಪ್ಪನೈ ಯೋಗಿನಾಥಾ. ॥೬೬೭॥[ಸಂ-೧೦೭]

ಗ್ರಾಮ ಚೌಗ್ರಾಮ[ವ] ಎಯ್ದಿಪ್ಪ
ಎಮ್ಮ ನಲ್ಲ ಎಯ್ದಲೀಯನು.
ಕರ್ಮವಾಱನೆಯ್ದೆ ಅಯ್ಯಾ,
ನಿನ್ನಯ ಕರ್ಮವಾಱು ಅಯ್ಯಾ,
ನಿನ್ನಯ ಕರ್ಮವಾಱು ವಿಹಿತವಾಗಿ

ಒಯ್ಯನೆ ಎಯ್ದುವನು ನಿಷ್ಕಲವನು.
ಅಯ್ಯ, ನಿನ್ನಯ ರೂಪು ಆನಂದವಾದೊಡೆ
ಅಯ್ಯ ತಾನೆ ನೀನು ಯೋಗಿನಾಥಾ. ॥೬೬೮॥

ಸುಚಿತ್ತದಿಂದಲು। ನಿಮ್ಮ ನೆನೆವ ಸದ್ಭಕ್ತರ
ಕರುಣದೊಳಗಿರಿಸೂದು ಎನ್ನನಯ್ಯಾ।
ಫಲಬೇಡ ಪದಬೇಡ। ಭವಬೇಡ ಜನನದಾ
ಗೊಡವೆ ತಾ ಬೇಡ ಯೋಗಿನಾಥಾ॥ ॥೬೬೯॥

ನಿತ್ಯಪ್ರಸಾದವನು ಪಥ್ಯ ಮಾಡೈ ಗುರುವೆ,
ಭಕ್ತಿತ್ರಯದ ನಿತ್ಯನಿರುಪಮ
ಕಪಿಲಸಿದ್ಧ ಮಲ್ಲೇಶ್ವರನೆ
ಭಕ್ತಿಪದವನು ಕೊಡುವುದೊಲಿದು ತಂದೆ. ॥೬೭೦॥ [I–೫೨೪]

ವಾರಾಸಿಯಿಂದತ್ತಲಾರು ಬಲ್ಲರು ದೇವ,
ಈರೇಳನತಿಗಳೆದ ನಿತ್ಯ ನಿತ್ಯ ಕಾರುಣ್ಯಭಾವದಲಿ
ಆ ಮರುಳುಗೊಂಡಡೆ ಆರುವೆ ವಿಧಿಯಾದಡೆನಗೇನಯ್ಯಾ.
ಕಾರುಣ್ಯಕರ ಕಪಿಲಸಿದ್ಧ ಮಲ್ಲೇಶ್ವರಾ
ಓರಂತೆಯಾದ ಬಳಿಕಾನಂದನು. ॥೬೭೧॥

ಧರೆಯಗಲದ ಜಲವು। ಕರಣೇಂದ್ರಿಯದ ಗುಣವು
ಥರಥರದ ತೇಜದಾದೆರೆಯ ಬಂದು।
ಪರಿಭವದ ಪರಿಭವದ। ತಡಿಗೆ ಹಾಕದ ಮುನ್ನ
ಮೃಡನನೊಡಗೂಡಯ್ಯಾ ಮಲ್ಲಿಕಾರ್ಜುನಾ॥ ॥೬೭೨॥ [I–೪೯೭]

ಸಂಗಸುಖದಿಂದ ಹಲರು। ಭಂಗಬಟ್ಟರು ಕೇಳ
ಲಿಂಗ ನಿನ್ನಯ ನೆಲೆಯನಜಿಯದೀಗ ಅ
ನಂಗನಾ ಬಾಣದಲ್ಲಿ । ಭಂಗಿತರಾದವರು
ಲಿಂಗ ನಿನ್ನನು ಬಲ್ಲರೈ ಯೋಗಿನಾಥಾ॥ ॥೬೭೩॥ [ಸಂ–೭]

ದೇಶ ಪರಿಭಾಷೆಯಲ್ಲಿ। ಆಸುರದಲಾಂದ್ಯನದ
ಘಾಸಿಯಪ್ಪವರೆಲ್ಲರಜೆಯಲಹುದೆ? ಸ।
ರ್ವೇಶ ಕಪಿಲಸಿದ್ಧ। ಮಲ್ಲಿಕಾರ್ಜುನನ
ಭಕ್ತಿಭಾಷೆವೋದಂಗಲ್ಲದಜೆಯಲಿಲ್ಲ॥ ॥೬೭೪॥

ಸುಚಿತ್ತದಿಂದಲಿ ನಿಮ್ಮ । ನೆನೆವ ಸದ್ಭಕ್ತರ
ನೆನೆವಂತೆ ಮಾಡಯ್ಯ ಕರುಣದಿಂದ।
ಅತಿಶಯದ ಭಕ್ತಿಯಲಿ। ಕರುಣ ನೀನಾದೊಡೆ
ತೆಱಹಿಲ್ಲದಿಪ್ಪೆನ್ನೈ ಯೋಗಿನಾಥಾ॥ ॥೬೭೫॥

ಶರಣಜನಸುರಭೂಜ, ಕರುಣಾಕರನೆ,
ನಿಮ್ಮ ಭರದಿಂದ ಒಡಗೂಡಿದಾನಂದದಾ,
ಶರಣಸಂಗತ್ಯವನು ಹರುಷಮಾಡಿಯೆ ಕೂಡಿ,
ಅತಿಶಯದ ಸದ್ಭಕ್ತಿ, ಶರಣ ರೀತಿ,
ಗುರುಸ್ತವದ ಕೀರ್ತಿಯನು,
ಶರಣ ಮಹಾತ್ಮೆಯನು,
ಬಸವಕೃಪೆಯಿಂ ಪೇಳ್ವೆ ಯೋಗಿನಾಥಾ. ॥೬೭೬॥

ಗುರುಮಹಾತ್ಮೆ :

ಗುರು ಪರವೆ ಗುರು ಚರವೆ। ಗುರು ಇಷ್ಟ ಲಿಂಗವೆ
ಗುರು ಶುದ್ಧಪ್ರಸಾದ ಪರಂಜ್ಯೋತಿಯೆ।
ಕರುಣಾಕರನೆ ಎನ್ನ। ತಡಿಗೆ ಬಾಚಿದ ಶ್ರೀ
ಗುರುವೆ ನೀನೆ ಶರಣು ಯೋಗಿನಾಥಾ॥ ॥೬೭೭॥ [ಅ-೨೪]

ಅಘಕುಳನಾಶನ ಗುರುವೆ। ಕರಣ ನಿರ್ಮಳ ನೆಲೆಯನೆ ಗುರುವೆ
ವಿಮಲ ಶುದ್ಧಾತ್ಮನೆ ಗುರುವೆ।
ತನು ಪ್ರಾಣ ಇಷ್ಟಲಿಂಗ। ಸಂಬಂಧವ ಮಾಡಿದ
ಕರುಣಾಕರನೆ ಗುರುವೆ ಯೋಗಿನಾಥಾ॥ ॥೬೭೮॥ [ಅ-೨೫]

ಶುದ್ಧಪ್ರಸಾದದಲ್ಲಿ। ಸಿದ್ಧಮಾಡಿದ ಗುರುವೆ
ಸಿದ್ಧಪ್ರಸಾದದಲ್ಲಿ ನಿತ್ಯನಾದೆ ಪ್ರ।
ಸಿದ್ಧಪ್ರಸಾದದಲ್ಲಿ। ಇದ್ದೆಸೆಗೆಟ್ಟೆನೈ
ಅರ್ಧೇಂದುಶಿಖನೆ ಯೋಗಿನಾಥಾ॥ ॥೬೭೯॥

ತನು ಮಲತ್ರಯಗಳನು। ಸುಟ್ಟೀಗ ಭಕ್ತಿಯಾ
ಘನ ನಿಧಾನಕ್ಕೆನ್ನ ಪಟ್ಟಗಟ್ಟಿ।
ಇಹಪರಲೋಕಕ್ಕೆ। ಅರಸನ ಮಾಡಿದ
ಘನ ಗುರುವೆ ನೀನಯ್ಯ ಯೋಗಿನಾಥಾ॥ ॥೬೮೦॥ [ಅ-೩೪]

ಪಂಚಮಬ್ರಹ್ಮವನು। ವಂಚಿಸದೆ ತೋಜಿದೈ
ಪಂಚಾಕ್ಷರದ ಭೇದವಜಿಹಿದಿರಿ।
ಪಂಚಭೂತಾತ್ಮವನು। ಕಳೆದು ಶಿವಲಿಂಗನು
ಪಂಚಮದೊಳಿರಿಸಿದೈ ಯೋಗಿನಾಥಾ॥ ॥೬೮೧॥ [ಸಂ-೬೫]

ಐದು ಸೀಮೆಯು ತಾನು। ಪಾತಾಳದಿಂದತ್ತ
ಹದಿನಾಲ್ಕು ಲೋಕದಿಂ ಉತ್ತಮಾಂಗ।
ವಿದಳ ತ್ರೈದಳದಲ್ಲಿ। ಒದವಿರ್ದ ಜ್ಯೋತಿಯನು
ಪ್ರಬಲಮಾಡಿದ ಗುರುವೆ ಯೋಗಿನಾಥಾ॥ ॥೬೮೨॥

ಸಂಗಮದ ಸ್ಥಾನದಲಿ। ಮಂಗಳಾಂಗನ ಬೆಳಗು
ಹಿಂಗದಂತೆನ್ನ ಮನಮಧ್ಯದೊಳಗೆ।
ಶುದ್ಧಾಕ್ಷರದ ಭೇದ। ನಿತ್ಯನನು ಮಾಡಿದೊಡೆ
ಆತ್ಮ ಶುದ್ಧನುವಾದೆ ಯೋಗಿನಾಥಾ॥ ॥೬೮೩॥

ಮಂಗಳಾಂಗದ ದೀಪ್ತಿ। ಕಂಗಳಲಿ ಹೊತ್ತಿಸಲು
ಹಿಂಗದೆ ಕಂಡೆ ನಾ ಲಿಂಗತ್ರಯವ।
ಆದಿ ಆಧಾರದಲ್ಲಿ। ಭೇದಿಸುವ ಭೇದವನು
ಆನಂದದಿಂ ಕಂಡೆ ಯೋಗಿನಾಥಾ॥ ॥೬೮೪॥ [ಅ-೩೮]

ಏಳು ಗ್ರಾಮದೊಳಗೆ। ಏಳು ಸೀಮೆಯ ಮೀಱ
ಆಱಾಱು ತತ್ವದಲಿ ನಿಪುಣನಾಗಿ।
ತೋಱಿಪ್ಪ ಬ್ರಹ್ಮಾಂಡ। ಮೀಱಿಪ್ಪ ಸೀಮೆಯಲಿ
ತೋಱಿ ನೀ ನಾನಾದೆ ಯೋಗಿನಾಥಾ॥ ॥೬೮೫॥

ಶ್ರೀಗುರುವೆ ಸಕಲಕ್ಕೆ। ಶ್ರೀಗುರುವೆ ನಿಷ್ಕಲಕೆ
ಶ್ರೀಗುರುವೆ ಸಕಲ ತಾತ್ಪರ್ಯಕ್ಕೆಲ್ಲ।
ಶ್ರೀಗುರುವೆ ಆರೈದು। ಓರಂತೆ ಮಾಡಿದೊಡೆ
ಆನು ನೀನಾದೆನೈ ಯೋಗಿನಾಥಾ॥ ॥೬೮೬॥ [ಅ-೩೮]

ನಾದ ಬಿಂದುವಿನಲ್ಲಿ। ಆದಿಬ್ರಹ್ಮಾನಂದ
ಆಮೋದದಿಂದತ್ತ ನಿತ್ಯರೂಪು।
ಭೇದಿಸುವ ಆನಂದ। ನನು ತಂದು ಇತ್ತಡೆ
ಆನು ಕೈವಲ್ಯನೈ ಯೋಗಿನಾಥಾ॥ ॥೬೮೭॥ [ಅ-೫೫]

ಕ್ರಿಮಿಕೀಟಕನುವಾಗಿ। ನರಕ ಶರೀರದಿ
ಹುದಿದು ಭವಭವದಿ। ಬರುತಿರ್ಪ ನರಕಿಯಾಗಿ।
ಪುದಿವ ಮನುಜನ ತಂದು। ಶುದ್ಧಾತ್ಮನನು ಮಾಡಿ
ವಿಮಲದೇಹಿಯ ಮಾಡಿದಾತ ಗುರು ಯೋಗಿನಾಥಾ॥ ॥೬೮೮॥ [ಸಂ-೬೦]

ನರಮನುಜ ನಾನೆತ್ತ। ಕರುಣ ಕಾನನವೆತ್ತ
ಬಗೆಗೊಳ್ಳದಾನಂದ ಬ್ರಹ್ಮವೆತ್ತ।
ಕರುಣಾಕರನೆ ಭಕ್ತಿ। ವಿಧದೊಳಗೆ ತಂದಿರಿಸಿ
ಪರಿಭವವ ತಪ್ಪಿಸಿದೆ ಯೋಗಿನಾಥಾ॥ ॥೬೮೯॥ [ಸಂ-೬೧]

ಉರುತರಂ ಕೈವಲ್ಯ। ಪದವನಿತ್ತೈ ಗುರುವೆ
ಕರುಣದಿಂ ಸಲಹಿ ಸಾಲೋಕ್ಯ।
ಪದವನತಿಗಳೆದ। ಸದ್ಭಕ್ತಿ ಪದವನಿತ್ತೈ
ಗುರುವೆ ಕರುಣಾಕರನೆ ಶರಣು ಯೋಗಿನಾಥಾ॥ ॥೬೯೦॥ [ಅ-೨೯]

ನರನ ಪರಿ ತಾನೆತ್ತ। ಕರುಣ ಕಾನನವೆತ್ತ
ಉರುತರಂ ಕೈವಲ್ಯ ಪದವೆತ್ತಲೈ।
ನರನ ಪರಿಯನು ಮಾದು ಉರುತರಂ। ಶ್ರೀ ರುದ್ರಪದವನಿತ್ತೈ
ಗುರುವೆ ಕರುಣಾಕರನೆ ಶರಣು ಯೋಗಿನಾಥಾ॥ ॥೬೧॥ [ಅ-೩೦]

ಹದಿನಾಲ್ಕು ಲೋಕವನು। ಭರದಿಂದ ಹೊತ್ತಾತ
ಘನತರವ ಕಿಚಿದು ಮಾಡೆನ್ನ।
ಕರದ ನೆಲೆಮನೆಯ ಮಾಡಿ। ಕರುಣದಿ ನೋಡಿದಾತ ಗುರು
ಗುರು ಮಹಾತ್ಮೆಗೆ ಸರಿಯೆ ಯೋಗಿನಾಥಾ॥ ॥೬೨॥ [ಅ-೪೯]

ಗುರುವೆ ಇಹಪರ ಗುರುವೆ। ಗುರುವೆ ಕರುಣಾಕರನೆ
ಗುರುವೆ ಶುದ್ಧಾತ್ಮನೆ ನಿರ್ಮಾಲಾಂಗ।
ಗುರುವೆ ನಿನ್ನಂತೆ। ಎನ್ನುವನು ಮಾಡಿದಾ
ಪರಮ ಗುರುವೆ ನೀನು ಯೋಗಿನಾಥಾ॥ ॥೬೩॥ [I-೨೮] [ಅ-೩೬]

ಐದಕ್ಕೆ ಆನಂದ। ಅಪ್ರಮಾಣನುವಪ್ಪ
ಸಾದಾಖ್ಯ ದೇಹಿಗಳ ಮೀಚಿ ಮೀಚಿ।
ತೋಚಿಪ್ಪ ಬ್ರಹ್ಮಾಂಡ। ಆದಿ ಅಕ್ಷರವನು।
ಭೇದಿಸಿದಾತ ಪರಮಾನಂದ ಗುರು ತಾನು ಯೋಗಿನಾಥಾ॥ ॥೬೪॥

ಕರ್ಮೇಂದ್ರಿಯವ ಕಳೆದು। ನಿರ್ಮಲಾಂಗನ ಮಾಡಿ
ಸೊಮ್ಮನಿತ್ತೈ ಭಕ್ತಿಸಾಯುಜ್ಯದಾ।
ವರ್ಮವಚಿತಾ ಭಕ್ತಿ। ನಿನ್ನ ಸೊಮ್ಮಾದ ಈ
ವರ್ಮವಾರಿಗೆ ಹೇಳುವೆ ಯೋಗಿನಾಥಾ॥ ॥೬೫॥

ಶ್ರೀ ಗುರುವೆ, ದಿವ್ಯ ಮಹಾಮುನಿಯೆ,
ಶ್ರೀ ಗುರುವೆ, ಹೆತ್ತಾ ಆನಂದಮಯ,
ಚಿನ್ಮಯ ಮಹಾಗುರುವೆ, ದೇವೇಶ,
ಶಿಷ್ಯಕಾರಣ ನೀನು ಶಿವನಾದೆಯ್ಯೆ.

ನಿತ್ಯಪ್ರಸಾದದಲಿ ಮುಕ್ತನನು ಮಾಡಿದಾ,
ನಿತ್ಯ ಜ್ಯೋತಿರ್ಮಯನೆ ಯೋಗಿನಾಥಾ. ॥೯೬॥ [I–೨೭]

ನರಜನ್ಮದಲಿ ಹುಟ್ಟಿ ಇಹಪರದ ಇರವನು
ಅಱಿಯಲ್ಕೆ ಎನಗೇನು ಪ್ರಾಪ್ತಿವುಂಟೈ
....
ಕರುಣಾಕರನೆ ನೀನು ಯೋಗಿನಾಥಾ॥ ॥೯೭॥

ಅನುಪಮನೆ ಅಪ್ರಮೇಯ। ಆನಂದ ನಿತ್ಯನೇ
ಕರುಣಾಕರನೆ ನಿನ್ನ ನಾಮದಿಂದ।
ಇಹಪರದ ಆನತದ। ಸುಖವಱಿದೆನ್ನೈ ಗುರುವೆ।
ಕರುಣಾಕರನೆ ಶರಣು ಯೋಗಿನಾಥಾ॥ ॥೯೮॥

ಹಸ್ತ ಮಸ್ತಕದೊಳಗೆ। ನ್ಯಸ್ತವಾಗಲು ನಾನು
ತತ್ವ ತುರಿಯಾರ್ಥದಿಂದತ್ತಲಾದೆ।
ಮತ್ತೆ ಭಕ್ತಿ ಜ್ಞಾನ। ವೈರಾಗ್ಯದಿಂದತ್ತ
ಮತ್ತೆಱನು ಒಂದಾದೆ ಯೋಗಿನಾಥಾ॥ ॥೯೯॥ [ಸಂ–೬೪]

ಅಱುವತ್ತನಾಲ್ಕು ಭಕ್ತಿಯ
ಕ್ರೀಯದಾಳಾಪ ತೆಱಹಿಲ್ಲದೆನ್ನ
ಆಱುವತ್ತನಾಲ್ಕು ಮಠದೊಳಗೆ
ಜೀವಕಳೆಯನು ಇರಿಸಿದ
ಕರುಣಾಕರನೆ ಗುರುವೆ ಶರಣೆಂದಡಾನತದ
ಪರಿಗೊಯ್ದು ಇಕ್ಕಿದೈ ಯೋಗಿನಾಥಾ. ॥೨೦೦॥

ಆನತದಲಾನಂದ। ಆದಿ ಆಧಾರದಲಿ
ಸಾಧಿಸುವ ಪರಬ್ರಹ್ಮದಾನಂದವ।
ತೋಱಿಸಿದ ಗುರು ಕಪಿಲ। ಸಿದ್ಧ ಮಲ್ಲೇಶ್ವರನ
ತೋಱಿಸಿದ ಗುರು ಮತ್ತೆ ಅಪ್ರಮೇಯನೈ॥ ॥೨೦೧॥

ಎರಡೆಂಟು ಗ್ರಾಮದಲಿ। ಕಳೆಯನಿರಿಸಿದ ಗುರು
ಕರುಣ ಕಾನನದೊಳಗೆ ಲೀಯವಾಗಿ।
ಐದಾಱು ತತ್ವದಿಂ।ದತ್ತಲಾಗಲಿಕಾಗಿ
ಕಳೆಯೆಲ್ಲ ಒಂದಕ್ಕು ಯೋಗಿನಾಥಾ॥ ॥೭೦೨॥

ಮುಕ್ತಿ ಮೂಱಱೊಳಗೆ। ಭಕ್ತಿ ನೆಲೆಗೊಂಬುದೈ
ತತ್ವಮಸಿಯಪ್ಪನೈ ಯೋಗಂಗಳ।
ಆದಿ ಆಧಾರದ। ಆನಂದವಱೆದಾತ
ತಾನು ನೀನಪ್ಪನೈ ಯೋಗಿನಾಥಾ॥ ॥೭೦೩॥

ಸಯ್ಯಾ ಸಯ್ಯಾ ಎಂಬು।ದಯ್ಯ ನಿನ್ನಯ ರೂಪು
ಅಯ್ಯಾ ನೀನಿಪ್ಪ ಮಠ ಅಘಟಿತವಲ್ಲೈ।
ಅಯ್ಯಾ ಒಂದು। ಮಠದ ಆನತದ
ಭೇದವನಱೆಯದವ ಯೋಗಿನಾಥಾ॥ ॥೭೦೪॥

ಮಧುಕರನ ಆಳಾಪ। ಒದವಿತ್ತು ಬ್ರಹ್ಮಾಂಡ
ಐದಕ್ಷರಂಗಳಿಂದ ಅದನು ಅಱೆಪಿ।
ಅಯ್ಯಾ ನಿನ್ನಯ ಭೇದ। ಐ ನಾನಾ ಬ್ರಹ್ಮದಲ್ಲಿ
ಸೈಗೆಡದುದೈ ಗುರುವೆ ಯೋಗಿನಾಥಾ॥ ॥೭೦೫॥

ಸಾಯುಜ್ಯ ಪದ ಮೀಱೆ,
ಸಾಮೀಪ್ಯ ಪದ ಮೀಱೆ,
ಸಾಲೋಕ್ಯ ಪದ ಮೀಱೆ,
ಸಾರೂಪ್ಯದಾ ಪದ ನಾಲ್ಕನತಿಗಳೆದು,
ಭವವೆಲ್ಲವಂ ಕೆಡಿಸಿ,
ಭಕ್ತಿ ಪದದ ಪರಿಯಸೆಲ್ಲವ ವಿಧಿಸಿ,
ಭವವ ತಪ್ಪಿಸಿ ಎನ್ನ ಕರುಣದಿಂ ಹೊಱೆದಾತ
ಗುರುವೆ ಯೋಗಿನಾಥ. ॥೭೦೬॥

ಭವಪಾಶದೂರ। ಗುರುಕರುಣಹಸ್ತನು
ಗುರುಶಿಷ್ಯಕಾರಣ ಶಿವನು ಪರಮಗುರುವೈ।
ನಾನಾ ಮಹಾಲೋಕ।ದಿಂದತ್ತಲಾದುದನು।
ತೋಱಿ ಹೋದಾತ ಗುರು ಯೋಗಿನಾಥಾ॥ ॥೨೦೭॥

ಜಗದಗಲದಲಿ ಹಬ್ಬಿ। ಉಲಿವುತ್ತೈದುದೆ ಮಾಯೆ
ಅದ ಕೆಡಿಸಿ ಎನ್ನ ಹರುಷಿತನ ಮಾಡಿ।
ಉರುತರ ಕೈವಲ್ಯ। ಪದವನಿತ್ತಾ ಗುರು ನೀನು
ಕಪಿಲಸಿದ್ಧ ಮಲ್ಲಿಕಾರ್ಜುನ ದೇವ ಗುರುವಾದಿರಲೈ॥ ॥೨೦೮॥

ಆತ್ಮ ಶುದ್ಧಾನಂದ। ಮಕ್ತಿ ಮೂಱಱ ಕೂಟ
ಮತ್ತೆ ಲೋಕಂಗಳನು ಅವಗ್ರಹಿಸಿದ।
ತತ್ವಧಾತುಗಳನು। ಒತ್ತಿ ಆಳಿದ ಸೀಮೆ
ಮತ್ತೆ ನಿನ್ನಲ್ಲಿದಾರೈ ಯೋಗಿನಾಥಾ॥ ॥೨೦೯॥

ಜವನಿಕೆಯ ಮಱೆಯಲ್ಲಿ। ನೆಳಲು ಕುಣಿಯುತ್ತೈತೆ
ನೆಳಲ ನಿಃಕರಿಸುವವರೊಬ್ಬರಿಲ್ಲ।
ಕರುಣಾಕರನೆ ಗುರುವೆ ನೆಳಲ ಬೊಮ್ಮವೆ ನೀನು
ಅಱಿದೆಯಾಗಿ ಆನುಳಿದೆ ಯೋಗಿನಾಥಾ॥ ॥೨೧೦॥

ಉಳಿದ ಫಲದಿಂದಾನು। ಪ್ರಳಯಕ್ಕೆ ಹೊಱಗಾದೆ
ನಳನಳಿಸುತಿರ್ದೆನೈ ನಿನ್ನ ಪದದ।
ನುಡಿಯ ಬ್ರಹ್ಮದ ಒಳಗೆ। ಅಕ್ಷರಾಂಕನುವಾದೆ
ಶಿವನೆ ನೀ ಗುರುವಾದ ಫಲದಿಂದ ಯೋಗಿನಾಥಾ॥ ॥೨೧೧॥ [ಅ-೪೧]

ಶ್ರೀಗುರುವೆ ಶ್ರೀಗುರುವೆ। ಭವಪಾಶದೂರನೆ
ಶ್ರೀಗುರುವೆ ಆದಿ ಅಂತರ ಶೂನ್ಯನೆ।
ಶ್ರೀಗುರುವೆ ಆನಂದಮಯರೂಪ ನೀ ಗತಿಯೆಂದಾತ
ಆನತವನೈದುವನು ಯೋಗಿನಾಥಾ॥ ॥೨೧೨॥ [ಅ-೧]

ಆನಂದದಾದಿಯಕ್ಷರ। ಗುರುವೆ ಶ್ರೀ ಗುರುವೆ
ಆದ್ಯಂತ ಶೂನ್ಯ ಶಿವಮಧ್ಯ ಹೃದಯ।
ನಾನಾ ಭವದ ಬೇರ। ಮುನ್ನವೆ ಹರಿದಾತ
ತಾನು ನೀನಕ್ಕೆ ಯೋಗಿನಾಥಾ॥ ॥೭೧೩॥ [ಅ-೧೭]

ಭಾನುವಿನ ಉದಯಕ್ಕೆ। ಕಮಲ ಪಸರಿಸುವಂತೆ
ನೀನೆನ್ನ ಕರದೊಳಗೆ ಪಸರಿಸುತ್ತ।
ಜ್ಞಾನಭಾನುವಿನುದಯ। ದೇಹಾದ್ರಿಯಲ್ಲಿ ಹುಟ್ಟೆ
ನಾನು ನೀನಕ್ಕಯ್ಯ ಯೋಗಿನಾಥಾ॥ ॥೭೧೪॥ [ಅ-೮೫]

ಕಮಲ ಕಂಜರ ಕುಂಜ। ಪಂಜರದ ಒಳಗೀಗ
ಪ್ರಭೆಯ ಮೀಱುತಿರ್ಪುದೊಂದು ಪಂಸೆ।
ಪರಿಣತದ ಆನತದ। ಪ್ರಭೆಯ ಮೀಱಿಲ್ಲಾಗಿ
ಪಂಸೆ ಹಾಱಿತ್ತೈ ಗುರುವೆ ಯೋಗಿನಾಥಾ॥ ॥೭೧೫॥

ಧವಳ ಮಂಟಪದೊಳಗೆ। ಅವನಿಪ್ಪ ಎಮ್ಮ ನಲ್ಲ
ಅವನ ಕೃಪೆಯಿಂ ಮಠವು ಪ್ರಬಲವಾಗೆ।
ಕರುಣಾಕರನೆ ಕಪಿಲಸಿದ್ಧ ಮಲ್ಲೇಶ್ವರನ
ನೆನಹಿನ ಮಠಕಾನು ನಿತ್ಯವಕ್ಕೈ॥ ॥೭೧೬॥

ಆದಿಯಕ್ಷರ ಸೊಮ್ಮಿ। ನಾನತದ ಭೇದವನು
ನಾದಮಧ್ಯದೊಳಗೆ ಭೇದಿಸಿತ್ತು।
ಆದ್ಯಂತ ಶೂನ್ಯ ಕಪಿಲಸಿದ್ಧ ಮಲ್ಲೇಶ್ವರನ
ಆಮೋದದಾ ಮನೆಯಲಿತ್ತು ತೋಱೆ॥ ॥೭೧೭॥

ವಿಮಲಮಧ್ಯದ ಮಠವು। ಈ ಠಾವಿನಲ್ಲಿಕ್ಕುಯೆಂಬ
ಅನುಪಮದ ಭೇದವನು ಭೇದ್ಯಮಾಡಿ।
ದಳದ ಕುಂಡಲಿಯಲ್ಲಿ। ತೊಡಕಿ ನಿಂದುದ ಕಂಡು
ಗುರು ಶರಣೆಂದೆನ್ನೈ ಯೋಗಿನಾಥಾ॥ ॥೭೧೮॥

ಇತ್ತೆಱನು ಪಾಯಿಯಲಿ। ಒತ್ತೆಱನು ನಾಭಿಯಲಿ
ಅಂತರಸ್ಥಾಣು ಮತ್ತಾ ಪರದಲ್ಲಿ।
ಚಿಂತೆಗೆಟ್ಟಾ ಬ್ರಹ್ಮ। ಅಪರ ಪರನಜೆಯಲ್ಕೆ
ನಿಶ್ಚಿಂತನಾದ ಗುರು ಯೋಗಿನಾಥಾ॥ ॥೭೯॥

ಶೂನ್ಯಹೃದಯಾನಂದ। ಮಂಟಪದ ಮಧ್ಯದಲಿ
ಅನೇಕ ಕೋಟಿ ಪ್ರಭೆಯ ತೇಜ ತೇಜ।
ಅದು ಗುರುವಿನ ಪಾದ। ದಣುನಾನತ ಪ್ರಭೆಯು
ಕರುಣಾಕರನು ಗುರು ಯೋಗಿನಾಥಾ॥ ॥೭೦॥ [ಅ-೩೨]

ಸಾಹಿತ್ಯ ಸಂಯೋಗ। ವಾದಾಗ ವಿರೋಗಿ
ಬೇಱ್ ಮತ್ತೇನು ಯೋಗಕ್ಕೆ ತೆಱಹು।
ಇಲ್ಲ ಇಲ್ಲಾಯೆಂದು ಸಾರುತ್ತೈದುದೆ ಚಾಟು
ಭಕ್ತಿಕ್ರಮಕೆಂತಯ್ಯ ಯೋಗಿನಾಥ॥ ॥೭೧॥

ಭಾವಿಸುವೊಡಾವ ತ। ರ್ಕಕ್ಕೆ ತಾನು ಪ್ರತಿಯಲ್ಲ
ಭಾಳೀಕ್ಷಣನ ಭಕ್ತಿಪದದ ಸುಖವು।
ಆರಯ್ಯ ಬೇಡೆನ್ನ। ಕರುಣ ಕಾನನದಲ್ಲಿ
ನಿಶ್ಚಿಂತವಿತ್ತೆನ್ನ ಪರಿಭವವ ತೊಡೆದಾತ ಗುರು ಯೋಗಿನಾಥ॥ ॥೭೨॥

ಇಂತು ಮಾಡಿದನು। ಗುರುತರಂ ಕೈವಲ್ಯ
ದಂತೆ ಮಾಡಿದನೆನ್ನ ಪರಮಗುರು।
ನಿಶ್ಚಿಂತತತ್ವದಲಿ। ಇಟ್ಟ ಶ್ರೀಗುರುವನು
ನಿಷ್ಠೆಯಿಂದಲಿ ನೆನವೆ ಯೋಗಿನಾಥಾ॥ ॥೭೩॥ [ಅ-೨೮]

ವಿಭೂತಿಪಟ್ಟವನು। ಕಟ್ಟಿ ಶಿವಭಕ್ತಿಯ
ಲೋಕಕ್ಕೆ ನೀನರಸುಯೆಂದುವೆಂದು।
ಎನ್ನ ಆಸೆ ಆಮಿಷವೆಂಬ। ಚೋರಭಯ ಮಾಣಲ್ಕೆ
ಪಟ್ಟ ಸ್ಥಿರವಾಯಿತ್ತೈ ಯೋಗಿನಾಥಾ॥ ॥೭೪॥]

ಆದಿಯಾಕಾರದಲಿ। ಆದ ಚಾತುಷ್ಟಯವ
ಆಮೋದದಿಂ ಪಿಡಿದು ಆಱೀಳಱಾ।
ಮೇಲೆಂಟಱೊಂಬತ್ತು। ನೆಲೆಗೆ ನಿಲಿಸಿದ ನಿತ್ಯ
ಪರಮ ಗುರುವೆ ಶರಣು ಯೋಗಿನಾಥಾ॥ ॥೭೨೫॥ [ಅ-೨೭]

ನರರೂಪು ತಾನೆತ್ತು। ಪರಮೇಶನಿರವೆತ್ತ
ಪರೀಕ್ಷಿಸುವ ತತ್ವ ಸಾಯುಜ್ಯವೆತ್ತು।
ಕರುಣಾಕರನು ನೀನು। ತ್ರಯವೊಂದು ಆಗಲ್ಕೆ
ಪರಿಭವಿಸಿತಿನಿದಯ್ಯ ಯೋಗಿನಾಥಾ॥ ॥೭೨೬॥

ಜನನಸ್ಥಾನವುಯೆತ್ತ, ಪರಮಾಣಿನಿರವೆತ್ತ,
ಪರೀಕ್ಷಿಸುವಡಂತರಂತರವುಂಟೆಲ್ಯೆ.
ತರಣಿ ಅರುಣನ ಮಸ್ತಕದಲಡಗಿಯಿಪ್ಪಂತೆ
ಗುರುವಾಜ್ಞೆಯಿಂದಿಪ್ಪ
ಕರುಣಾಕರನು ಶಿವನು ಯೋಗಿನಾಥ. ॥೭೨೭॥

ಲೋಕ ಹದಿನಾಲ್ಕನು। ಅನೇಕ ದೈವಂಗಳನು
ಒಂದಾಕಾರ ಕಿಂಚಿತನು ಹುಟ್ಟಿಸಿದನು।
ಇಂತಪ್ಪ ಘನಲಿಂಗ।ವನು ತಂದು ಸವಮಾಡಿದ
ನಿಶ್ಚಿಂತಮಯನ್ನೈ ಗುರು ಯೋಗಿನಾಥಾ॥ ॥೭೨೮॥ [ಅ-೪೮]

ಪರಮೇಶನಿರವೆತ್ತು। ನರಚರ್ಮ ಗೃಹವೆತ್ತ
ಪರೀಕ್ಷಿಸಲಿ ಅತಿವೀರನ್ನೈ ಗುರುವೆ।
ಆನಂದರೂಪ ಅತಿಶಯ। ನಿನ್ನಾಜ್ಞೆಯ ಶಿವ ಮೀಱಲಾಱನ್ನೈ
ಕರುಣಾಕರನೆ ಗುರುವೆ ಯೋಗಿನಾಥಾ॥ ॥೭೨೯॥ [ಅ-೩೧]

ಕರ್ಮದಾರಿದ್ರವನು। ಸೊಮ್ಮಗೆಡಿಸಿದ ಗುರುವೆ
ನಿರ್ಮಲಜ್ಞಾನಮಯಗೆನ್ನ ಮಾಡಿ।
ಕರ್ಮಗೆಟ್ಟ ಬೊಮ್ಮ।ಸೊಮ್ಮ ನೀನಜೆಹಿದ
ನಿರ್ಮಳಾಂಗನು ನೀನು ಯೋಗಿನಾಥಾ॥ ॥೭೩೦॥

ಶಿವಭಕ್ತಿ ಶರಧಿಯೊಳು। ನೆಲೆಗೊಳಿಸಿದಾತ ಗುರು
ಪರೀಕ್ಷಿಸಿ ಎನ್ನ ಭವವ ಹಱಿದಾತ ಪರಮಗುರುವೈ।
ಶ್ರೀಗುರುವೆಯೆಂಬ। ನಾಮಾಕ್ಷರತ್ರಯದಲ್ಲಿ
ಆನು ಪ್ರಜ್ವಲ್ಯನ್ಯೆ ಯೋಗಿನಾಥಾ॥ ॥೭೩೧॥ [ಅ-೧೮]

ಸ್ಫಟಿಕಭೂಷಣ ನಿಮ್ಮ। ನಿಟಿಲಾಕ್ಷ ತಪ್ಪಲಲಿ
ಒಡಮೂಡಿತ್ತಯ್ಯ ಸಕಲಲೋಕ।
ಇಂತಪ್ಪ ಘನತರದ। ನಿಶ್ಚಿಂತಲಿಂಗವನು
ತಂದು ಕೈಯೊಳಗಿಟ್ಟ ಗುರು ಯೋಗಿನಾಥಾ॥ ॥೭೩೨॥ [ಅ-೪೭]

ನೋಡಿ ನೋಡಿ ಕಂಗ। ಳಾನತವನೆಯ್ದಿದ
ಕೂಡಿ ಕೂಡಿ ತುರಿಯ ತನುಗುಣಂಗಳ।
ನೋಡದಂತೆ। ಕೂಡದಂತೆ
ಮಾಡಿದೆ ಗುರುವೆ ಯೋಗಿನಾಥಾ॥ ॥೭೩೩॥

ಕಾಯದ ಕರದಲ್ಲಿ। ಕಾಯಲಿಂಗವನಿತ್ತು
ಅಕಾಯಲಿಂಗವು ಪ್ರಾಣವೇಧಿಸುವ।
ಇತ್ತೆಱನ ಮುತ್ತೆಱನ। ನಾಲ್ಕು ತೆಱ ಭೇದವನು
ಚಿತ್ತಶುದ್ಧಿಯಿಂದಱಿತೆ ಯೋಗಿನಾಥ॥ ॥೭೩೪॥ [ಅ-೭೭]

ಮುಖವೈದಱರ್ಪಣೆಯ। ಪರಿಯನೆಂತಱಿವರಯ್ಯ
ಪರೀಕ್ಷಿಸಲ್ಕದು ಮತ್ತೆ ಅಪ್ರಮಾಣ್ಯೆ।
ಪರಿಭವದ ಆತ್ಮ ನಾ ನೆಲೆಯಱಿದು ನಿಲಿಸಿದರೆ
ಮುಖವೈದರ್ಪಣೆಯು ಯೋಗಿನಾಥಾ॥ ॥೭೩೫॥

ಸಪ್ತಮ ಬ್ರಹ್ಮಾಂಡ। ದತ್ತಲದರ್ಪಣೆಯ
ತತ್ವಭೇದವನಱಿತು ವೇಧೆಮಾಡಿ।
ಸಪ್ತಧಾತುವ ಮೀಱಿದತ್ತ ಸಂಗಮವಾಗೆ
ಅರ್ಪಣಾನತ ಭೇದ ಯೋಗಿನಾಥಾ॥ ॥೭೩೬॥

ಮುನ್ನೂರು ಕರದಲ್ಲಿ। ವದನ ಹನ್ನೊಂದಾಗಿ
ಚಿನ್ನಾರ್ಪಣೆಯ ಭೇದ ಸಮನವಾಗಿ।
ಇನ್ನು ಪ್ರಸಾದ ಹ। ನ್ನೊಂದಕ್ಕೆ ತೆಱನಿಂತು
ಎನ್ನ ಶ್ರೀ ಗುರುವಱುಪಿದನು ಯೋಗಿನಾಥಾ॥ ॥೭೩೭॥

ದ್ವಿದಳ ವಳಯದಲೆರಡು। ಸದಮಳದಲೊಂದಾಗಿ
ಒದವಿ ಲಿಂಗತ್ರಯದ ಮೂಱುವಾಗಿ।
ವದನಾಕ್ಷರಂವ್ಯೆದಱಲಿ। ಐದು ಭವಿಸಿದವು ಪ್ರ
ಸಾದ ಹನ್ನೊಂದು ಯೋಗಿನಾಥಾ॥ ॥೭೩೮॥ [ಅ–೯೬]

ಶುದ್ಧಪ್ರಸಾದ ಮೂ। ಱಚ್ಚ ಪ್ರಸಾದ
ಮೂಱುತ್ತಮ ಪ್ರಸಾದ ಮತ್ತೈದು ಭವಿಸಿ।
ಇಂತು ಪ್ರಸಾದ ಹ।ನ್ನೊಂದಕ್ಕೆ ಜನನವ್ಯೆ
ಇವಗ್ರಹಿಸಿ ನಿಶ್ಚಿಂತಮಯನಕ್ಕು ಯೋಗಿನಾಥಾ॥ ॥೭೩೯॥ [ಅ–೯೩]

ಉಪಮೆಗೊಡದೊಂದಯ್ಯ। ಉಪಮೆಯಿಲ್ಲದ ಮೂಱು
ಉಪಮೆಗಪ್ರಮಾಣು ಐದಾಱಲ್ಯೆ।
ಉಪಮೆ ಸೃಷ್ಟಿಯಂ। ದಾನಂದ ಪ್ರಸಾದ
ಪ್ರಮಾಣವಱಿವವರಾರು ಯೋಗಿನಾಥಾ॥ ॥೭೪೦॥ [ಅ–೯೪]

ಅರ್ಪಿಸುವ ಅರ್ಪಣೆಯ। ತಪ್ಪದಿಹ ಭೇದವನು
ಮುಟ್ಟಿ ಮುಟ್ಟದೆ ಇಹ ಮೂರ್ತಿತ್ರಯದಾ।
ತಪ್ಪದಿಹ ಪ್ರಸಾದದಲಿ। ಒಪ್ಪ ಬಲ್ಲರೆ ಮತ್ತೆ
ಮೂಱಿಕೊಂದಕ್ಕು ಯೋಗಿನಾಥಾ॥ ॥೭೪೧॥

ಘಂಟಾನಾದದಲ್ಲಿ। ಉಂಟುಂಟುವೆನುತಿಕ್ಕು ನಿ
ಗಂಟುವಾದರೆ ಅದು ತನುಗುಣವಲ್ಯೆ।
ಟೆಂಟಣಿಸು ವರ್ಗವನು। ಗಂಟಾಗಲೀಯದೊಡೆ
ನಂಟ ಶಿವಗಾತನ್ಯೆ ಯೋಗಿನಾಥಾ॥ ॥೭೪೨॥

ಎಸಳಿಂದ ಪರಿಭವದ। ಪದ ಪಸರವಾಯಿತು ನೋಡ
ಪರೀಕ್ಷಿಸುವ ಪ್ರಸಾದವಲ್ಲಿ ರೂಪೈ।
ಆ ರೂಪನಾರೂಪ ನೊಂದು ಮಾಡಿದ ಬಳಿಕ
ಪಸನ್ನಪ್ರಸಾದ ಯೋಗಿನಾಥಾ॥ ॥೭೪೩॥

ಇಂತು ಗುರುಪ್ರಸಾದವನು। ಚಿಂತೆಯಿಲ್ಲದೆ ಕೊಂಡು
ನಿಶ್ಚಿಂತನಾಗಿಪ್ಪ ಲೋಕ ಸಕಲದೊಳಗೆ।
ಅಂತರಿಸದಿರು ನೀನು। ವರ್ಗ ಹದಿನಾಲ್ಕಱೊಳು
ನಿಶ್ಚಿಂತನಾಗಿಯಿರು ಚಿಂತೆಗೆಟ್ಟಾತ ನೀನಪ್ಪೆ ಯೋಗಿನಾಥಾ॥ ॥೭೪೪॥[ಅ-೧೦೨]

ವಳಯ ಹದಿನಾಲ್ಕಱೊಳು। ಬೆಳಗುತಿಹ ನಿಷ್ಕಳದ
ನಿಳಯ ನಿರ್ಮಳಜ್ಯೋತಿ ನಿನ್ನ ಹವಣ।
ಅಱಿಯಲಾರಿಗೆ ತಾನು। ಅಳವಲ್ಲ ಶ್ರೀ ಗುರು
ಕರುಣದಿಂದಱಿದೆನ್ನೈ ಯೋಗಿನಾಥಾ॥ ॥೭೪೫॥ [ಅ-೪೫]

ಇಂದುಕೊಳ ಲೋಕದಲಿ। ಆನಂದ ಮತಿಯಾಡುತಿರೆ
ಬಂದು ತಾರೈಸುತಿರೆ ಮಧುರಕಳಾಹಿ।
ಸಂದ ಪ್ರಸಾದ ಹನ್ನೊಂದು ನೆಲೆಗೊಳಲಿಕೆ
ನಿಂದ ನಿತ್ಯವಕ್ಕು ಯೋಗಿನಾಥಾ॥ ॥೭೪೬॥ [ಅ-೯೭]

ತಾರೈಸುವ ಮಧುರ। ಕಾಳೆಯಾಳಾಪಕ್ಕೆ
ರೀತಿ ಧಾತುಗಳಾಗೆ ನಿತ್ಯ ನಿತ್ಯ।
ಆನತದ ಪ್ರಸಾದ। ಏಕಾಶವನರಿಯೆ
ಗೀತ ಪಾತ್ರವುವಕ್ಕು ಯೋಗಿನಾಥಾ॥ ॥೭೪೭॥ [ಅ-೯೮]

ಉಕ್ಕಡದ ಕಹಳೆಗಳು। ಮತ್ತೆ ಊರನು ಸುತ್ತೆ
ಎಚ್ಚತ್ತುಯಿದ್ದಡವನರಸು ನಿತ್ಯ।
ಮತ್ತೆ ಪ್ರಸಾದವನು । ಹನ್ನೊಂದನಱಿಯಲ್ಕೆ
ನಿತ್ಯಮಯ ಹಂಸ ಶಿವಯೋಗಿನಾಥ॥ ॥೭೪೮॥ [ಅ-೯೯]

ಅಂಗರಿಕರುಕ್ಕಡದ। ಮಂಗಳಾಂಗದ ದ್ವಾರ
ಹಿಂಗದಂತದ ನೋಡಿ ಪ್ರಸಾದದ।
ಮಂಗಳಾಂಗವನಜಿದ। ನರರಾಜ ನಿತ್ಯನ್ಕೆ
ಹಿಂಗುವನೆ ಭಕ್ತಿಯೊಳು ಯೋಗಿನಾಥಾ॥ ॥೭೪೯॥[ಅ-೧೦೦]

ಅಲೋಕ ಪಾದದಳ। ಆಜೂಥ ಪ್ರಸಾದ
ಆದಿ ಅಕ್ಷರದ್ವಯಕೆ ಗುರುವು ತಾನೆ।
ಆನಂದಾದಿ ಆ।ಧಾರಕ್ಕೆ ಆಮೋದ
ಗುರುಪ್ರಸಾದ ಯೋಗಿನಾಥ॥ ॥೭೫೦॥ [ಅ-೧೦೩]

ಶುದ್ಧಕ್ಕೆ ಪ್ರಸಾದ। ಸಿದ್ಧಕ್ಕೆ ಪ್ರಸಾದ
ಪ್ರಸಿದ್ಧಕ್ಕೆ ಪ್ರಸಾದ ಗುರು ಮುಖ್ಯವೈ।
ಇದ್ದೆಸೆಯ ಪ್ರಸಾದ। ಕ್ಯಾನಂದ ಗುರು ಮುಖ್ಯ
ಸದ್ಯೋಮುಕ್ತನುವಪ್ಪ ಯೋಗಿನಾಥಾ॥ ॥೭೫೧॥ [ಅ-೯೨]

ಆಪಾದ ಮಸ್ತಕದ। ಮೇಲೆ ವದನಂಗಳಾಗಿ
ಕೂಪ ಹದಿನಾಲ್ಕಾಗಿ ಪ್ರಸಾದದ।
ಆ ಜ್ಯೋತಿಪ್ರಸಾದ। ದಾನತವನಜಿದಾತ
ಆಜೂಥದೈಕ್ಯನೈ ಯೋಗಿನಾಥಾ॥ ॥೭೫೨॥ [ಅ-೧೦೪]

ಮಲ ಮದವನತಿಗಳೆದು। ತನುತ್ರಯವನೆ ಜಜಿದು
ಮನೆಯ ಶುದ್ಧವ ಮಾಡು ವಿಮಲಜ್ಯೋತಿ।
ಕರಣೇಂದ್ರಿಯ ಶುದ್ಧ। ಹವಣನಜಿದು ಹೇಳಿದಡೆ
ತನು ಪ್ರಸಾದವು ಇಷ್ಟ ಯೋಗಿನಾಥಾ॥ ॥೭೫೩॥ [ಸಂ-೬೩]

ನದಿಯ ಮೀಜಿದ ನೀಲಗಳನ ಮಸ್ತಕದಲ್ಲಿ
ಒದವಿ ಪಾದೋದಕವು ಹತ್ತು ಮತ್ತೆ।
ಇತ್ತೆರದಿಭವಿಸಿರ್ದ ಕ್ರಮನರಿದಾತನು
ನಿತ್ಯ ಮುಕ್ತನು ಅಕ್ಕು ಯೋಗಿನಾಥಾ॥ ॥೭೫೪॥ [ಅ-೧೦೭]

ಹತ್ತು ಪಾದೋದಕದ। ಹಟ್ಟ ನಾನೇ ಪೇಳ್ವೆ
ಮತ್ತೆ ಮೂಱು ಸ್ಥಾನದಲ್ಲಿ ಜನನ।
ಒಪ್ಪಿಪ್ಪ ಸೀಮೆ ಏಳಱೊಳಗೆ ಭವಿಸಿಪ್ಪ
ತತ್ವ ಪಂಚಾಕ್ಷರಿಗೆ ಯೋಗಿನಾಥಾ॥ ॥೭೫೫। [ಅ-೧೦೬]

ವದನ ಹದಿನಾಲ್ಕಱಲಿ। ವಳೆಯ ಮೀಱಿತು ಸೀಮೆ
ತೆಱಹುಗೆಟ್ಟುದು ನಿತ್ಯ ಕುಱುಕು ಕುಱುಕು।
ಅತಿಶಯದ ಪಾದೋದ।ಕವನಱಿತ ಮಹಾತ್ಮ
ನಿಗಮಕ್ಕಭೇದ್ಯನ್ನೈ ಯೋಗಿನಾಥಾ॥ ॥೭೫೬॥ [ಅ-೧೦೮]

ಏನೊಂದನಱಿದೆನು। ತಾನೆನ್ನ ಮಧ್ಯಕ್ಕೆ
ಆದಿ ಅಂತರವಾಗಿ ತೋಱುತಿರ್ಪ।
ಪಾದೋದಕವು ಹತ್ತು । ಪ್ರಸಾದ ಹನ್ನೊಂದು ಕೂಡಿ
ಗ್ರಹಿಸಿದಾತ ಗುರು ಯೋಗಿನಾಥಾ॥ ॥೭೫೭॥

ಪ್ರಸಾದ ಪಂಚಮ। ಬ್ರಹ್ಮಕ್ಕೆ ಮೀಱಿಪ್ಪುದ
ತೋಱಿಪ್ಪುದಾ ಜ್ಯೋತಿ ಈರೈದು ಪಾದೋದಕ।
ಪ್ರಜ್ವಲ ಸಕಲ ಸೀ।ಮೆಯ ನುಂಗಿದಾನಂದ
ರೀತಿಯಱಿದಾತ ಗುರು ತಾನು ಯೋಗಿನಾಥಾ॥ ॥೭೫೮॥ [ಅ-೧೦೫]

ಮಠದ ಮಂಗಳದಲ್ಲಿ । ನಿಟಿಲಾಕ್ಷರದ ಭೇದ
ಕುಟಿಲ ವ್ಯಾಕೀರ್ಣವನು ಮೀಱುತಿರ್ಪಾ।
ಅಕ್ಷರದ ಸಂಯೋಗ। ಅಕ್ಷರವನೆಯ್ದಿದಡೆ
ಸಾಕ್ಷರನು ತಾನಕ್ಕು ಯೋಗಿನಾಥಾ॥ ॥೭೫೯॥

ನೇಮಾಕ್ಷರ ಭಾಷೆ:

ಓಂಕಾರದಲಿ ಬಿಂದಿ ಅತ್ಯುತ್ತರಂಗಳಲಿ
ಮೇಲು ಪಂದಿಯಾಗಿಕ್ಕು ಯೋಗಿನಾಥಾ॥ ॥೭೬೦॥

ಮಕಾರದಲಿ ಬಿಂದು ಆಱು ವರ್ಗವಾಗಿ
ತೋಱೆಯಿಪ್ಪುದು ಶಿವನೆ ಯೋಗಿನಾಥಾ॥ ॥೭೬೧॥

ಬಿಂದು ಭೇದಂಗಳಲಿ [1][ಛ][1]ಂದದಾನಂದದಲ್ಲಿ
ಸಂದಳಿದು ಒಂದಕ್ಕು ಯೋಗಿನಾಥಾ॥ ॥೭೬೨॥

ಹ್ರೀಂಕಾರದಲಿ ಇಕ್ಕು। ಓಂಕಾರ ಮೂರ್ವವು
ಆಕಾರ ಸರ್ವಕ್ಕೆ ಶ್ರೀಗುರು ತಾನೈ।
ಅನತಾಕ್ಷರ ಭೇದ। ಅಜೀವ ಸುದ್ದಿಯ ನಾನು
ತೋಱೆಹೆನು ಶ್ರೀ ಗುರುವೆ ಯೋಗಿನಾಥಾ॥ ॥೭೬೩॥

ಆಕಾರ ಹ್ರಾಕಾರ। ಶ್ರೀಕಾರ ಶಿವಂಕಾರ
ಓಂಕಾರದಲಿ ಕೂಡಿ ನೀನಕ್ಕು। ಉನ್ನತಕೆ
ಮಾತೆ ಪಿತ ನೀನಯ್ಯ ಯೋಗಿನಾಥಾ॥ ॥೭೬೪॥

ಗಾಕಾರದಲಿ ಸತ್ವ ಶಕ್ತಿ ಉನ್ನತವಕ್ಕು
ಮಾಕಾರ ಮೈತ್ರರ್ಕಯೆಂಬ ರೀತಿಯಲಿ
ಓಂಕಾರಂ ಮಾತಾಕ್ಷರಂ ಯೋಗಿನಾಥಾ॥ ॥೭೬೫॥

ಓಂ ಘ್ರಾಯೆಂಬವು ಆಱಕ್ಷರದ ಶಾಖೆ
ಅನ್ವಯಕ್ಕೆ ಮೀಱಪ್ಪ ಬಿಂದು ಭೇದ
ದಕ್ಷರವು ತೋಱೆದಾತ ಗುರು ಯೋಗಿನಾಥಾ॥ ॥೭೬೬॥

ಒಂದಕ್ಷರವು ಅಂತ್ಯ । ಎರಡಕ್ಷರವು ಮಧ್ಯ
ಮೂಱಕ್ಷರವು ತನ್ನ ಮುಕ್ತಿ ತಾನು।
ಓಂ ಘ್ರಾಂ ಹ್ರೀಂ। ಸೇಷಾಯಯೆಂದಡೆ
ಓಂಕಾರ ರೂಪನೈ ಯೋಗಿನಾಥಾ॥ ॥೭೬೭॥

೧-೧ ದ (ಮೂ)

ಹಾಷಾಯ ಹೇಷಾಯ। ಜೌಷಟುಯೆಂಬ
ಅಕ್ಷರಾಂಕನವನಱಿಯೆ ಸರ್ವಾಕ್ಷರಕ್ಕೆ।
ತಾನು ಗುರು ಯೋಗಿನಾಥಾ॥ ॥೨೬೮॥

ಐದಕ್ಷರವು ಮುಖ। ಆಱಕ್ಷರವು ರೂಪು
ನಾದಾಕ್ಷರಕ್ಕೆ ಮೂಱು ಜೀವಗುರು।
ತ್ರೈಯಕ್ಷರಾ ಜೀವ। ಕಳೆಯಱಿದಾತ
ನಿತ್ಯ ಯೋಗಿನಾಥಾ॥ ॥೨೬೯॥

ಲಿಕ್ತಭೋಕ್ತವ ಮೀಱಿ। ದತ್ತಲಕ್ಷರದಾದಿ
ಮತ್ತೆ ತಮಗುಣಗಣನು ಮೀಱಿಪ್ಪ। ಅಕ್ಷರವು
ಭಕ್ತಿಲೋಕಕ್ಕೆ ಪಥವು ಯೋಗಿನಾಥಾ॥ ॥೨೭೦॥

ಮೂಲ ಮೂಱಕ್ಷರದ। ಭೇದವಾಗಿಯೆ ಇಕ್ಕು
ಆಱಕ್ಷರವು ತನ್ನ ಅಂತ್ಯಶಾಖೆ।
ಬೀಜಾಕ್ಷರಕ್ಕೆ ಗುರು। ನಾಮವೆ ಮುನ್ನಯ್ಯ।
ಓಂಕಾರ ಸ್ವೈಪ ಯೋಗಿನಾಥಾ॥ ॥೨೭೧॥

ಕರ್ಣಕುಂಡಲವಾಗಿ। ಉನ್ನತಾಕ್ಷರವಿರಲು
ಸನ್ನುತದ ೧[ಧ್ಯಾ]೧ನದಲಿ ಮೌನವಾಗಿ।
ಇನ್ನು ಬಿನ್ನಣವಾಗಿ। ಉನ್ನತಾಕ್ಷರವಾಗಿ
ನಿನ್ನ ರೂಪಕ್ಕಯ್ಯ ಯೋಗಿನಾಥಾ॥ ॥೨೭೨॥

ಪೃಥಕವಪ್ಪಕ್ಷರದ। ಸದಮಲವನಱಿಯಲ್ಕೆ
ಒದವಿಪ್ಪುದೈ ಮುಕ್ತಿ ಯೋಗಿನಾಥಾ॥ ॥೨೭೩॥

ಮೂಲಸಂಭವ ಸ್ಥಾನ। ಆಱಕ್ಷರದ ಭೇದ
ಆಱಕ್ಷರಕೆ ನಾಮವಾಱು॥

೧-೧ ಧಾ (ಮೂ)

ಒಂದೊಂದು ನಾಮಾಕ್ಷರದ ನೇಮ ಹಂಸ
ಪೀಠದೊಳಿರಲು ಆಜ್ಞೂಢ ತಾನಕ್ಕು ಯೋಗಿನಾಥಾ॥ ॥೭೭೪॥

ಕಪ್ಪಿನೆರಡಕ್ಷರವು। ಒಪ್ಪಿಕ್ಕು ವಳೆಯದಲಿ
ಮಿಕ್ಕ ನಾಮಕ್ಕೆ ಹದಿನಾಲ್ಕು ಸೀಮೆ।
ಮಿಕ್ಕಾಕ್ಷರದ್ವಯದ। ಕಪ್ಪ ಕಳೆಯಲ್ಕಾತ
ಅಕ್ಷರಾಂಕನುವಕ್ಕು ಯೋಗಿನಾಥಾ॥ ॥೭೭೫॥

ಮುನ್ನೂಱು ವಳೆಯಕ್ಕೆ। ಇನ್ನೂರು ಅಕ್ಷರವು
ಸನ್ನುತಕ್ಷರವವಕೆ ಐದು ಮತ್ತೆ।
ಎನ್ನನನ್ಯೋನ್ಯನೆನ್ನದಡೆ ತಾ
ಮುನ್ನ ಸಮ್ಯಗನಕ್ಕು ಯೋಗಿನಾಥಾ॥ ॥೭೭೬॥

ಶುದ್ಧಪ್ರಸಾದವೈ। ಸಿದ್ಧಪ್ರಸಾದವೈ
ಪ್ರಸಿದ್ಧಪ್ರಸಾದ ಪರಮಾಕ್ಷರಗಳಾ।
ಅಣುಮಾತ್ರವಜಿಯಲ್ಕೆ
ವಳೆಯ ಹದಿನಾಲ್ಕಕ್ಕೊಡೆಯ ಯೋಗಿನಾಥಾ॥ ॥೭೭೭॥

ಶ್ರೀ ಸದಾಶಿವ ಸರ್ವ। ಯೋಗಾಕ್ಷರದ್ವಯದ
ರೂಪು ತಾನು।
ಆದಿ ಅಕ್ಷರವೈದು। ಮುಖವಾಗಿ ಒಪ್ಪಿದೊಡೆ
ಆಮೋದ ತಾನಕ್ಕು ಯೋಗಿನಾಥಾ॥ ॥೭೭೮॥

ತನುವಕ್ಷರವು ಮೂಱು। ಅನುಪಮಾಕ್ಷರವೈದು
ಇನಿತಾಕ್ಷರಂಗಳೊಳು ಎಂಟು ತಾನು।
ತನು ಮಧ್ಯಮಂಟಪ।ದೊಳಗಕ್ಷರವನಜಿಯೆ
ಘನಭಕ್ತಿ ತನಗಕ್ಕು ಯೋಗಿನಾಥಾ॥ ॥೭೭೯॥[ಸಂ–೭೨]

ನಿತ್ಯಾಕ್ಷರವು ಮೂಱು। ತತ್ವಾಕ್ಷರವು ಐದು
ಭಕ್ತ್ಯಾಕ್ಷರವು ತಾನು ವರ್ಗವಾಱು।
ತತ್ವಮಸಿಯಿಂ ಮೇಲೆ। ನೇಮಾಕ್ಷರದ್ವಯದ
ನಿತ್ಯಪ್ರಸಾದವೈ ಯೋಗಿನಾಥಾ॥ ॥೭೮೦॥ [ಸಂ-೭೭]

ಮುಕ್ತ್ಯಂಗನೆಯ ಹಣೆಯ ಭಕ್ತಿ। ವಿಧಿವಶವೆನಲು
ಮತ್ತೆ ಅಕ್ಷರವೊಂದು ಓಂಕಾರವೈ।
ಸತ್ಯಸಾಯುಜ್ಯದ ಅಕ್ಷರವ। ತಾನಱಿಯೆ
ತತ್ವಾರ್ಥದಿಂದತ್ತ ಯೋಗಿನಾಥಾ॥ ॥೭೮೧॥

ಆಸನಕ್ಷರವೆರಡು। ಭಾಷಣಿಸುವವು ಮೂಱು
ದೋಷವನು ಕೆಡಿಸುವವು ಐದಕ್ಷರ।
ಈಸಕ್ಷರದ ಭೇದ।ದಾಶ್ರಯವ ಬಲ್ಲಡೆ
ಪಾಶ ಮಲ ಮದ ದೂರ ಯೋಗಿನಾಥಾ ॥೭೮೨॥ [ಅ-೧೩೬]

ಉನ್ನತಾಕ್ಷರವೆಂಟು। ಸನ್ನುತವು ಹದಿನಾಱು
ತನ್ನ ನಾಭಿಕ್ಷದಲಿ ಎರಡು ತ್ರಯ।
ಇಂದಾದ ಸುದ್ದಿಯನು। ಹಿಂದಱಿಯುಬಲ್ಲಡೆ
ಸಂದಿಲ್ಲದಿಪ್ಪ ಭಕ್ತಿಯಲಿ ಯೋಗಿನಾಥಾ॥ ॥೭೮೩॥

ಎರಡಕ್ಷರದ ಮೇಲೆ। ಕಡಲು ಹರಿಯಿತ್ತಯ್ಯ
ನುಡಿಯ ಬ್ರಹ್ಮದ ಒಳಗೆ ಲೀಯವಾಗಿ।
ನಡೆಯು ನುಡಿಯೂ ಧಾತು।ವೊಡನೊಡನೆ ಸಂದಡೆ
ಮೃಡ ನಿನ್ನ ರೂಪಕ್ಕು ಯೋಗಿನಾಥಾ॥ ॥೭೮೪॥

ಸಾದಾಖ್ಯ ದೇಹದಲಿ। ಆದ್ಯಂತ ಶೂನ್ಯದಲಿ
ಆಮೋದದಕ್ಷರವು ಕಂಗಳಾಗಿ ।
ಆನಂದ ರೂಪು ಕಪಿಲಸಿದ್ಧ । ಮಲ್ಲಿಕಾರ್ಜುನನ
ನೇಮಾಕ್ಷರದ ರೂಪಕಳೆಯ ಪೇಳುವೆನಯ್ಯಾ॥ ॥೭೮೫॥

ಬಿಂದು ಮುಂದೊಂದಾಗಿ। ಸಂದಾಕ್ಷರವು ಎಂಟು
ಪೂರ್ವದ ಹದಿನಾಱು ಶಕ್ತಿ ಮತವಾಗಿಕ್ಕು।
ಬಹುಚ್ಛಾಯದಾ ಬಣ್ಣ । ಮುಬ್ಬಣ್ಣದಲಿ ಅಣ್ಣ
ದಾಕ್ಷರವಱೆಯೆ ಮುಕ್ಕಣ್ಣ ತಾನೆಯಕ್ಕು ಯೋಗಿನಾಥಾ॥ ॥೭೮೬॥

ಐಬ್ರಹ್ಮ ಸೂಕ್ಷ್ಮದ। ಐದಕ್ಷರದ ಶಾಖೆ
ಅಪರಲೋಕಕ್ಕೆ ಕೊಳನೆಂಟು ತಾನು।
ಕಮಲವೊಂದಾಗಿರಲು। ನನುನಧಾನ್ಯದ ಅಕ್ಷೆ
ಆಧಾರನೀಕ್ಷಿಸಲು ಫಲ ಪ್ರಮಾಣೀರಕ್ಷರವು ಯೋಗಿನಾಥಾ॥ ॥೭೮೭॥

ಲೋ ಲೋ ವಲಾಹಲನೆ ತಾಮಸದ ಸನುಮತವು
ವಾಹಾವನಂವ್ಯೆ ರಾಜಸಕ್ಕೆ
ಓಂಕಾರವ್ಯೆನ್ಯೆಯೆನೆ ಬ್ರಹ್ಮ ಸಾತ್ವಿಕಕ್ಕೆ
ಓಂಕಾರವುತ್ಪತ್ಯ ಐಬ್ರಹ್ಮ ಮಧ್ಯದೊಳು
ಇಂತು ಗುಣ ಮೂಱಕ್ಕೆ ಯೋಗಿನಾಥಾ॥ ॥೭೮೮॥

ರಾಜಸಕ್ಕೆ ವರ್ಣ। ಕೃಷ್ಣಾಂಗವಾಗಿಪ್ಪುದೈ
ತಾಮಸಕ್ಕೆ ವರ್ಣ ಬಹು ರೇತ ವರ್ಣ।
ಸಾತ್ವಿಕಕ್ಕೆ ವರ್ಣ ಶ್ವೇತ। ಸನುಮತವಪ್ಪ
ಆತ್ಮವಿಚಾರವಿದು ಯೋಗಿನಾಥಾ॥ ॥೭೮೯॥

ಪರುಷ ತನ್ನಲ್ಲಿಕ್ಕು। ಪಾಯಾಳು ತಾನಪ್ಪ
ಅಂಜನವು ಎಂಟು ನಿಕ್ಷೇಪ ಸುಲಭ।
ಮುಟ್ಟಿ ಪ್ರಯೋಗಿಸಲು। ಇಟ್ಟು ತೆಗೆಯಲು ಅಱಿಯ
ಕಷ್ಟ ತಾಮಸದ ಗುಣ ಯೋಗಿನಾಥಾ॥ ॥೭೯೦॥

ಮುಗ್ಗುಡ್ಡೆಯಲ್ಲಿಕ್ಕು। ಮುನ್ನಾದಿಯಿಂದತ್ತ
ಸಪ್ತಧಾತುಗಳನೊಡಗೂಡಿಯಿಕ್ಕು।
ಮತ್ತೆ ಅಹಮ್ಮೆಂದು। ಭಕ್ತಿಗೆ ದೂರವದು
ಮತ್ತೆ ರಾಜಸದ ಗುಣ ಯೋಗಿನಾಥಾ॥ ॥೭೯೧॥

ಪಂಕವಿಲ್ಲದ ಕಮಲ ಸಂಖೆಗೆಟ್ಟಿತು ಬ್ರಹ್ಮ
ಅಂಕ ಮಾಡುತ್ತಿಕ್ಕು ತನುವಿನೊಡನೆ
ಹಲವನೆಲ್ಲವನೀಗ ತೊಲಗಲಿಕ್ಕುತ್ತಿಕ್ಕು।
ಮಲತ್ರಯ ತ್ರಯವ ಸುಡುವುದಕೇಕೆ ಕಿಚ್ಚು ತಾನೆ
ಮಥನದಾ ಅಕ್ಷರವ ನೆನವುತಿರ್ಪಾ ಶಕ್ತಿ
ಗುಣ ಸಾತ್ವಿಕವಿದು ಯೋಗಿನಾಥಾ॥ ॥೭೯೨॥

ಆತ್ಮಗರ್ಭದಲೀಗ। ಭೂತ ಉನ್ನತವಾಗೆ
ಪ್ರೇತ ಭೂಮಿಯಿಕ್ಕು ತನುವಿನೊಳಗೆ।
ಭೂತವೆಬ್ಬಟ್ಟಿದಾ। ನೀತಿಯಕ್ಷರವಜೆಯ
ಅಜಾತ ಶಿವಲೋಕನಕ್ಕು ಯೋಗಿನಾಥಾ॥ ॥೭೯೩॥

ಮನ್ನಣೆಯ ಲೋಕದೊಳು । ಉನ್ನತ ಕ್ರೀಗಳೊಳು
ಸನ್ನುತವಾಗಲದು ಗುರುಕರುಣವೈ।
ಆ ಮನ್ನಣೆಯ ಪ್ರಾಪಂಚಿಕವ ಮೀಱಬಲ್ಲಡವು
ತನ್ನ ರೂಪೈ ಸಕಲ ಯೋಗಿನಾಥಾ॥ ॥೭೯೪॥

ಸಾರಾಕ್ಷರದ ಭೇದು। ಆರೈದು ಕೇಳುವೊಡೆ
ಓರಂತೆ ಹೇಳುವೆನು ನಿನಗೆ ನಾನು।
ಧಾರುಣಿಯೊಳಗೆ ಭೂತಂಗಳಿಗೆ ದಯಗಳನು
ಮಾಡುವರು ನೀನಯ್ಯ ಯೋಗಿನಾಥಾ॥ ॥೭೯೫॥

ಶಿವಭಕ್ತನು ಸಕಲ।ದಯಗಳನು ಮಾಡುವನು
ಸಕಳ ನಿಷ್ಕಳಗಳನು ಸಮಗಾಬನು।
ಸರ್ವಾಂಗ ಶಿವಲಿಂಗ। ಸಂಪನ್ನನಪ್ಪವಗೆ
ಇಹಪರವುವೊಂದಯ್ಯ ಯೋಗಿನಾಥಾ॥ ॥೭೯೬॥

ಮುನ್ನಾದಿಯಲಿ ಆದ। ಉನ್ನತೋನ್ನತ ಭೇದ
ಸನ್ನುತದ ಬ್ರಹ್ಮಾಂಡದಿಂದಲತ್ತ।

ಮನ್ನಣೆಯ ಅಕ್ಷರದ। ಉನ್ನತವನಱಿಯಲ್ಕೆ
ಇನ್ನು ಶಿವಭಕ್ತನ್ನೈ ಯೋಗಿನಾಥಾ॥ ॥೭೯೭॥ [ಅ-೧೩೦]

ಮಹದಕ್ಷರದ ಭೇದ। ಮಥನವಾಱಿಲಿ ಭವಿಸಿ
ಮಹ ಪ್ರಸಾದಕ್ಕೆ ಮೂಲ ತಾನು।
ಆನಂದ ಮೂರುತಿಯನು। ನಾದಮಧ್ಯದಲಿಪ್ಪ
ಆತ ಮಾಹೇಶ್ವರನು ಯೋಗಿನಾಥಾ॥ ॥೭೯೮॥

ತನುಲಿಂಗ ಇಷ್ಟದಲಿ। ಘನಶುದ್ಧ ಪಂಚಮದ
ತನುತ್ರಯದ ಮಧ್ಯಮದ ಇಷ್ಟವರಿದು।
ಕರಸ್ಥಲವ ಪಿಡಿದು ಸಂ।ಗಮದಲ್ಲಿ ಸಮನಿಸಲು
ಆತ ಲಿಂಗೈಕ್ಯನ್ನೈಯೋಗಿನಾಥಾ॥ ॥೭೯೯॥ [ಅ-೮೪]

ಸಕಲ ನಿಷ್ಕಲದೊಳಗೆ। ಶಮೆ ತಾನೆ ಅಪ್ಪ
ಮುಕ್ತ್ಯಂಗನೆಯ ಕೂಟಕೆಳಸನಾತ।
ಭಕ್ತ್ಯಂಗನೆಯ ಕೂಟ। ಸರ್ವಾಂಗದಲ್ಲಿರಲು
ಮುಕ್ತಿ ಶರಣನ ಗುಣವು ಯೋಗಿನಾಥಾ॥ ॥೮೦೦॥

ಆನಂದ ಪ್ರಸಾದ ಆಜೂಢದಲಿಪ್ಪ
ಸರ್ವವನು ಅರ್ಪಿಸುವ
ಮುಖವೈದ ರಚಿಸುವ ಪ್ರಸಾದಿ ರೂಪು ಯೋಗಿನಾಥಾ॥ ॥೮೦೧॥

ಎರಡು ಸೋಕಿಸುವಲ್ಲಿ। ನುಡಿಯ ಬ್ರಹ್ಮದಲಿಪ್ಪ
ನಡೆಯಲೊಲ್ಲನು ತಾನು ಅನ್ಯೋನ್ಯಕೆ।
ಕಡಲ ದಾಟಿದ ಕೋಲು। ಗುಜಿಯ ತಾಗದ ಮುನ್ನ
ನುಡಿದು ಸುಖಿಯಪ್ಪನ್ನೈ ಪ್ರಾಣಲಿಂಗಿಯ ತಾನು ಯೋಗಿನಾಥಾ॥ ॥೮೦೨॥

ಎಂಬತ್ತು ದಳದೊಳಗೆ। ತುಂಬಿಪ್ಪುದೈ ಅಣು
ಶಂಭುವಿನ ಮಸ್ತಕಕೆ ಯೋಗ್ಯವಾಗಿ।

ತುಂಬಿಪ್ಪ ಕುಂಭದೊಳು। ಇಂಬಪ್ಪ ಅಮೃತವನು
ಕೊಂಡಾತ ಶಿವಯೋಗಿ ಶ್ರೀ ಮಲ್ಲಿಕಾರ್ಜುನಾ॥ ॥೮೦೩॥

ಕಡಲೊಳಗೆ ಖಚ ಹುಟ್ಟಿ ಕಡಲ ಕೂಡುವ ಪರಿಯ
ಮೃಡಭಕ್ತರೊಳಗೆ ತಾನೊಡಗೂಡಿದಾ ಪರಿಯ।
ಪರಮಾಣುವನು ನುಡಿ।ಗಾಜಿರಿಗೆಯಿಲ್ಲ
ಮೃಡಭಕ್ತರನು ಬೇಜಿ ಮಲ್ಲಿಕಾರ್ಜುನಾ॥ ॥೮೦೪॥

ಸಂಗದೊಳಗಿಪ್ಪರಾ। ಸಂಗಕ್ಕೆ ಹೊಜಿಗಾಗಿ
ಲಿಂಗ ನಿನ್ನ ಮೇಲೆ ತಾತ್ಪರಿಯವ್ಯೆ।
ವರ್ಮಕಳೆಗಳನಜಿ। ನಿರ್ಮಳಾಂಗನ ರೂಪು
ನಿನ್ನ ಪರಿಯಪ್ಪುದ್ಯೆ ಯೋಗಿನಾಥಾ॥ ॥೮೦೫॥

ಬೇಟ ಪೂರ್ವಕಾಗಿ। ಸ್ಯೆಗೆಡದುದ್ಯೆ ಬ್ರಹ್ಮ
ಬೇಟವಿತ್ತೆಜಿನಾಗಿ ಪಶ್ಚಿಮದಲಿ।
ಬೇಟ ಉತ್ತರ ಬೇಟ। ಬಟ್ಟೆಯೊಳಗೂಡಲ್ಕೆ ಬಂದ
ಬಟ್ಟೆಗ್ಯೆದುವವನು ಯೋಗಿ ಮಲ್ಲಿಕಾರ್ಜುನ॥ ॥೮೦೬॥

ಇದ್ದೆಸೆಯ ಕಟ್ಟಿದನು। ಯಿಬ್ಬೀಡ ಸುಟ್ಟವನು
ಸರ್ವವೆಲ್ಲವು ತನ್ನ ಮಯವಪ್ಪನು।
ಸತ್ವಧಾತುಗಳನು।ಮೀಜಿದಾನತ ರೂಪ
ತತ್ವದಿಂದತ್ತ ಶಿವಯೋಗಿ ಶ್ರೀ ಮಲ್ಲಿಕಾರ್ಜುನಾ॥ ॥೮೦೭॥

ಮುಟ್ಟಿ ಮೂಜಿಜಿ ಒಳಗೆ ಹುಟ್ಟಿ ಗತಿಯಿಲ್ಲವಗೆ
ಬಟ್ಟೆಗೊಡನಿದ್ದೆಸೆಗೆ ತನುಗುಣಕ್ಕೆ।
ಮುನ್ನಾದಿಯಲ್ಲಾದ। ಆನತಕ್ಷರದ ಭೇದ
ನಿನ್ನ ವಂಶಿಕವವನು ಯೋಗಿನಾಥಾ॥ ॥೮೦೮॥

ಬೇಱಿಂದು ತೋಱಿಪ್ಪ ಆಱೂಢವನು ಹೇಳಾ
ಆಱು ವರ್ಗಂಗಳಿಗೆ ಎಯ್ದಲೀಯ।
ಆಱಿನತಿಗಳೆದ। ಆನಂದರೂಪವನು।
ಆದಾರ ಸರಿಯೆಂಬೆನೈ ಮಲ್ಲಿಕಾರ್ಜುನಾ॥ ॥೮೦೯॥

ತರ್ಕವನು ಮೀಱಿಪ್ಪ, ತತ್ವ ಕ್ರೀಯಾಗಿಪ್ಪ,
ಮತ್ತೆ ತ್ವಮಸಿಯ ಸೀಮೆ ಒಡಲಪ್ಪನೈ.
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿಯ
ಮುಟ್ಟಿದ್ದ ಆಱಱ ಪರಿಯಿಂತುಟೈ.
ಕಪಿಲಸಿದ್ಧ ಮಲ್ಲಿಕಾರ್ಜುನನ
ಭಕ್ತಿಕ್ರೀಯನು ಕೂಡಿದಾತ ನಾನು. ॥೮೧೦॥

ಬಂದುದನು ಅತಿಗಳೆಯ। ಬಾರದುದ ಬಯಸನೈ
ಹಿಂದು ಮುಂದೆಂದಱಿಯ ಪ್ರಸಾದದಲ್ಲಿ।
ಸಂದಳಿದ ಬಣ್ಣವನು। ಒಂದುಮಾಡಿದ ಬಳಿಕ
ಹಿಂದು ಮುಂದಱಿವನೈ ಯೋಗಿನಾಥ॥ ॥೮೧೧॥

ಮಥನಕ್ಕೆ ಮೋಹಿಸುವ। ಮನೆಯ ಸುಟ್ಟಾ ಪರಿಯ
ಹದುಳದಿಂ ಬಲ್ಲವರು ಆರು ಹೇಳಾ।
ಕರುಣಾಕರನು ಕಪಿಲಸಿದ್ಧ ಮಲ್ಲೇಶ್ವರನ
ಕರುಣವುಳ್ಳವರಿಗಲ್ಲದೈಕ್ಯವಿಲ್ಲ॥ ॥೮೧೨॥

ಊರೊಳಗೆ ಕಳ್ಳರನು। ಬೇರುದಱಿಯದೆ ಕೊಲುವ
ವೀರಭದ್ರಾಳಾಪ ತಮ್ಮ ಮಯ್ಯಾ।
ಈ ಧಾರುಣಿಯಲೊಪ್ಪುವ। ಪಂಚ ಬ್ರಹ್ಮಾಂಡವನು
ಮೀಱಿಪ್ಪ ಶಿವಯೋಗಿ ಯೋಗಿನಾಥಾ॥ ॥೮೧೩॥

ಎಪ್ಪತ್ತನಾಲ್ಕು ಸಾವಿರ। ಪಟ್ಟಣದೊಳಗೆ
ಎಪ್ಪತ್ತ ಎರಡು ಸಾವಿರ ದ್ವಾರವೈ।
ಇಚ್ಛಾನಾದಿಯ ಕಳೆದು । ಪರಮನಾದಿಯನರಿಯೆ।
ತತ್ವಮಸಿಯಪ್ಪನೈ ಮಲ್ಲಿಕಾರ್ಜುನಾ॥ ॥೮೧೪॥

ಆದ್ಯಂತ ಶೂನ್ಯನಾ। ಆದಿಮಧ್ಯವಸಾನ ಭೇದಿಸಲು
ಹರಿಬ್ರಹ್ಮರಿಗೆ ಸಾಧ್ಯವಲ್ಲ।
ಆಮೋದದ ಕ್ರೀಯ। ಆನಂದದಲ್ಲಿಡಲು
ಆತ ನಿನ್ನ ರೂಪ ಮಲ್ಲಿಕಾರ್ಜುನಾ॥ ॥೮೧೫॥

ಅಂಗವಿಸನನ್ಯಕ್ಕೆ । ಲಿಂಗವಲ್ಲದೆ ಪೆಱತ
ಮಂಗಳಾಂಗನ ರೂಪು ಚಿತ್ರತರವ್ಕೆ।
ಸಂಗಮಸ್ಥಾನದಲಿ। ಆನಂದವಾದರೆ
ಲಿಂಗ ನಿನ್ನಯ ರೂಪು ಯೋಗಿನಾಥಾ॥ ॥೮೧೬॥ [ಸಂ-೯೩]

ಅನುನಯದ ಅನ್ಯಕ್ಕೆ। ತೆಱಹುಗುಡದೆ ಇಪ್ಪ
ಕರುಣ ಸಾಗರದೊಳಗೆ ಮುಳಿಗಾಡುವಾ।
ಕರುಣಾಕರನು ಕಪಿಲಸಿದ್ಧ ಮಲ್ಲೇಶ್ವರನು
ತೆಱಹಿಲ್ಲದೊಡಗೂಡಿ ಇಪ್ಪ ಸುಖದಿಂ॥ ॥೮೧೭॥

ಹರಹರ ಮಹಾದೇವ। ಅಱಿಯಬಹುದೆ ಶರಣ
ರೊಳಗೆ ನೀ ಗೋಪ್ಯವಾಗಿದ್ದ ಪರಿಯ।
ಉರಿಯ ಕರ್ಪುರದೊಳಗೆ। ದಹಿಸಿ ಕರಿಯಿಲ್ಲದಾ
ಪರಿಯಿಂದ ಇಪ್ಪನೈ ಯೋಗಿನಾಥಾ॥ ॥೮೧೮॥

ವಾಯು ಕರ್ಪೂರವನು। ಕೂಡಿಪ್ಪುದೆ ಇರದು
ವಾಯು ಪರಿಮಳವ ಕೂಡುವಂತೆ।
ಭಾವದಿಂ ಶರಣರೊಳ।ಗೊಡಗೂಡುವಾ ಭೇದ।
ಆರು ಬಲ್ಲರು ಗುರುವೆ ಯೋಗಿನಾಥಾ॥ ॥೮೧೯॥

ಬಲ್ಲವರು ಅಪ್ರಮಾಣರು। ಆದ್ಯಂತದಾ ಸೊಲ್ಲು
ವಿಡಿದಪ್ಪರೈ ಸದ್ಯದಲ್ಲಿ।
ಬಲ್ಲೆನೆಂಬರ ಕಾ।ಡುವ ಬಲೆಯ ಹುಟ್ಟೀಗ
ಬಲ್ಲಿದರು ಆರೈ ಯೋಗಿನಾಥಾ॥ ॥೮೨೦॥

ಮೂ ಬಲೆಯನಿಕ್ಕಿ। ಜಾಜಿ ಕೆಡಹುದು ಮಾಯೆ
ಆಜೂಥವೆಂಬವರ ಏಡಿಸುವದು।
ಕರುಣಾಕರನು ಕಪಿಲ। ಸಿದ್ಧ ಮಲ್ಲೇಶ್ವರನ
ಶರಣರಿಗೆ ಅಂಜಿ ನಿಂದಿತ್ತು ಮಾಯೆ॥ ॥೮೨೧॥[।-೬೮೨]

ಲೋಕ ಹದಿನಾಲ್ಕಜೊಳು। ಕುಟ್ಟಿ ಕೆಡಹುತ್ತಲದೆ
ಅನೇಕ ಪರಿಯಿಂದಲೈ ಮಾಯೆಗಜವು।
ಭಾವಯೋಗಿಗಳ। ನಿಧಿ ನಿಳಕೆ ನುಂಗಿ
ಈ ಮಾಯೆಯ ನೋಡ್ಕೆ ಯೋಗಿನಾಥಾ॥ ॥೮೨೨॥ [ಸಂ-೧]

ಹರಿ ಹತ್ತು ಭವಬಂದ। ಸಿರಿಯಾಗಿ ತೊಳಲಿತ್ತೈ
ಉರಗಖೇಚರರನು ಒರಸಿತಯ್ಯಾ।
ಕರುಣಾಕರನು ಕಪಿಲ। ಸಿದ್ಧ ಮಲ್ಲೇಶ್ವರನ
ಶರಣಂಗೆ ಅಂಜಿ ಓಡಿದುದು ಮಾಯೆ॥ ।೮೨೩॥ [।-೮೨೨]

ದೆಸೆ ವೀರಭಕ್ತಿಯ। ಎಸೆವ ಸುರಗಿಯ ಹಿಡಿದು
ದೆಸೆಗೆಡಿಸಿ ಕೊಲುವೆನೀ ಮಾಯೆಯನ್ನು।
ವಸುಧೀಶ ಕಪಿಲಸಿದ್ಧ । ಮಲ್ಲಿಕಾರ್ಜುನನ ಮುಂದೆ
ಹೊಸ ಪರಿಯವ ಮಾಡುವೆನು ನೋಡು ಸಾಕು॥ ॥೮೨೪॥

ಆಚಾರಲಿಂಗಕ್ಕೆ । ಪ್ರಾಣ ಭಕ್ತಿಯ ಪಥದ
ಲೋರಂತೆ ಆರೈದ ನಡೆವುತಿರಲಿ।
ಆಮಿಷದ ತಾಮಸದ। ಹುಸಿ ವಿಷಯ ಕಳ್ಳರನು
ದೆಸೆಗೆಡಿಸಿ ಕೊಲುವೆನಯ್ಯ ಯೋಗಿನಾಥಾ॥ ॥೮೨೫॥

ಪಸರ ಪರ್ಬಿ^೧[ತು]^೧ಯೆಂದು। ದೆಸೆವರಿವುದೈ ಮಾಯೆ
ವಿಷಮಾಕ್ಷನಾದರೆಯು ಗೆಲುವೆನೆನುತ।
ವಸುಧೀಶ ಕಪಿಲಸಿದ್ಧ। ಮಲ್ಲಿಕಾರ್ಜುನಯ್ಯನ
ಶರಣಂಗೆ ಅಂಜಿ ಓಡಿದುದು ಮಾಯೆ॥ ॥೮೨೬॥ [I-೫೬೭]

ರುದ್ರಂಗೆ ಪಾರ್ವತಿಯು, ವಿಷ್ಣುವಿಗೆ ಲಕ್ಷುಮಿ,
ಮತ್ತೆ ಬ್ರಹ್ಮಂಗೆ ಸರಸ್ವತಿಯು,
ಮತ್ತೆ ತೃಣದಾಸನದ ಫಲದಾಹಾರದರ
ಸುತ್ತಿ ಮುತ್ತಿತು ನೋಡಾ ಮಾಯೆಯು
ಈ ಸತ್ವ ಧಾತುವ ಮೀಜಿ
ಐವರನು ಜಜಿದವರ ಭಕ್ತಗಂಜಿತು ಮಾಯೆ ಯೋಗಿನಾಥಾ ॥೮೨೭॥ [I-೭೦೩]

ಮುನ್ನಾರ ಮನ್ನಣೆಯನು ಕೆಡಿಸದೈ ಮಾಯೆ!
ಇನ್ನೇನ ಹೇಳುವೆನು ಇದರ ಪರಿಯ
ಚೆನ್ನಾಗಿ ಗುರುಕರುಣವುಳ್ಳವರಿಗಂಜುವುದು
ಇನ್ನು ಈ ಮಾಯೆಯ ಪರಿ ವಿಪರೀತ
ಶ್ರೀ ಮಲ್ಲಿಕಾರ್ಜುನಾ. ॥೮೨೮॥

ಹೊನ್ನು ಹೆಣ್ಣು ಮಣ್ಣು। ಮುನ್ನ ತಾನೆಯಾಗಿ
ಮನ್ನಣೆಯಗೆಡಿಸುವದು ಯೋಗಿಗಳನು।
ಇನ್ನು ಗುರುಕರುಣ। ವುಳ್ಳವರು ಜಜಿಯಲ್ಕಾಗಿ
ಕುನ್ನಿಯಾಗಿಕ್ಕು ಮಾಯೆ ಯೋಗಿನಾಥಾ॥ ॥೮೨೯॥[ಸಂ-೬೨೮]

ಆಲಸ್ಯವೇಕಯ್ಯ। ಆರಾರ ಕೆಡಿಸದೈ
ಧ್ಯಾನಜೂಥನುವಾಗು ಗುರು ಕರುಣದಲ್ಲಿ।
ಆಲಸ್ಯ ಕಿಂಚಿತ್ತು। ಅಳವಟ್ಟುತಾದರೆ
ಮಾಯೆ ತನ್ನ ಮಠವೆನ್ನು ಅದನು ಯೋಗಿನಾಥಾ॥ ॥೮೩೦॥[ಸಂ-೧೨೮]

೧-೧ ತ (ಮೂ)

ಇಂತು ಮಾಯೆಯ ಮುಖವ। ಸಂತತಂ ಗೆಲುವಾತ
ನಿಶ್ಚಿಂತನಕ್ಕು ತಾನಿಹಪರದಲಿ।
ನಿಶ್ಚಿಂತ ಕಪಿಲಸಿದ್ಧ। ಮಲ್ಲಿಕಾರ್ಜುನಯ್ಯನಲ್ಲಿ
ಸಂತತಂ ಇಪ್ಪ ತಾನು ಆತನಾಗಿ॥ ॥೮೩೧॥

ಪೂಜಿಸುವ ಪೂಜಕನ। ಏಡಿಸಿತ್ತೈ ಮಾಯೆ
ಆರೈದು ರುದ್ರಪದವಱಸುವವಱ।
ಏಡಿಸಿಯೆ ಕಾಡಿತ್ತು। ಮಾಯೆಗಜಕಂಜುವನು
ಕಾಯಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೮೩೨॥

ಆಜಿಯೆನಯ್ಯೋ ಶಿವನೆ। ತೆಱಹುಗೆಡಿಸುತ್ತಲಿದೆ
ಕುಱುಹೆಂದು ತೋಱಿ ಇದಕೆನ್ನ ನೀವು।
ಉಸುರದಂತಿದ್ದರೆ। ನರಕಕ್ಕೆ ಒಯ್ಯೂದು।
ಶಶಿಧರಾ ಕಾಯಯ್ಯ ಮಲ್ಲಿಕಾರ್ಜುನಾ॥ ॥೮೩೩॥

ಇಹಪರದ ಪರಿಯನು। ಅಯ್ಯ ನೀನೆ ಬಲ್ಲೆ
ನಿಮ್ಮ ಶರಣನು ಬಲ್ಲ ಪ್ರಭುರಾಯನು।
ಆತನನುಮತದಿಂ। ಮಾಯೆಯ ಗೆಲುವೀ ಪರಿಯ
ನೀವೆನಗೆ ಕಲಿಸುವುದು ಮಲ್ಲಿಕಾರ್ಜುನಾ॥ ॥೮೩೪॥ [।–೨೦೮]

ಲೋಕ ಹದಿನಾಲ್ಕಱೊಳು। ಹೋಗಿ ಅಡಗಿಹೆನೆಂದಡಾ
ಪರಿಯ ತಾಮಸವು ತನ್ನ ಮಯವೇ।
ಅನೇಕ [೧][ರೀತಿ][೧]ಯಲಿ ಕೊಂದು। ಕೂಗಿತ್ತು ಈ ಮಾಯೆ
ಕಾಯಯ್ಯಾ ಕಪಿಲಸಿದ್ಧ ಮಲ್ಲೇಶ್ವರಯ್ಯಾ॥ ॥೮೩೫॥ [।–೭೧೫]

ಬ್ರಹ್ಮಯೋಗದವರನು। ನಿರ್ಮೂಲಮಾಡಿತ್ತೈ
ಘಮ್ಮನೆ ಮುಱಿಯಿತ್ತೈ ಹಿರಿಯರನು।

೧–೧ ರಿ (ಮೂ)

ಚೆನ್ನ ಪ್ರಭುರಾಯಂಗೆ। ಅಂಜಿ ಬಂದೀ ಮಾಯೆ
ಎನ್ನ ಕಾಡಿಹಿತ್ತೈಸೆ ಯೋಗಿನಾಥಾ॥ ॥೮೩೬॥ [ಸಂ-೩]

ಎನ್ನ ಕಾಡದ ಮುನ್ನ। ನಿನ್ನ ಮತವೀಯಯ್ಯ
ನಿನ್ನ ಪ್ರಭುರಾಯಂಗೆ ಹೇಳಿ ಕಳೆಯೆ।
ಎನ್ನ ಗುರು ಕಪಿಲಸಿದ್ಧ। ಮಲ್ಲಿಕಾರ್ಜುನಾ
ಮನ್ನಣೆಗೆಡಿಸಿತ್ತು ಮಾಯೆ ಗಜವು॥ ॥೮೩೭॥ [I-೨೩೪]

ಆಚೆನ್ನಯ್ಯೋ ಭವನೆ। ಗಾಉಗೆಡಿಸಿತ್ತೆನ್ನ
ಕಾಣಲೊಡನಂಜಿ ಕೊಕ್ಕರಿಸಿಹಿತು।
ಕಾರುಣ್ಯಕರನೆ ಕಪಿಲ। ಸಿದ್ಧ ಮಲ್ಲೇಶ್ವರನೆ
ಮಾಯೆವಿದಾರಣನೆ ಸಲಹು ತಂದೆ॥ ॥೮೩೮॥ [I-೧೬೪]

ಗೀರ್ವಾಣ ಪುರುಷರಿಗೆ। ಕ್ಷುಧೆಯಾಗಿ ಕಾಡಿತ್ತು ಅಯ್ಯಾ
ಮಹಾಯೋಗಿಗಳಿಗೀಗಲೀ।
ಕರ್ಮ ತಾತ್ಪರಿಯಕ್ಕೆ। ತನ್ನವಯವಿತ್ತುತೈ
ಇನ್ನೇವೆನ್ನೈ ಗುರುವೆ ಮಲ್ಲಿಕಾರ್ಜುನಾ॥ ॥೮೩೯॥

ಹೆಣ್ಣನೊಲ್ಲೆನುಯೆಂದಡೆ। ನಗೆ ಹೆಣ್ಣಾಯಿತ್ತು
ಮನ್ನಣೆಯ ದಾನಕ್ಕೆ ಗುಜೆಯಾದೆನು।
ಎನ್ನನಿತ್ತೆನು ಎನ್ನನೊಲ್ಲೆನು। ಎಂದು ಎಂಬವನ।
ಇನ್ನು ಭವಕೆ ತಂದೆನೆಂದೆನುತದೆ ಮಾಯೆ ಮಲ್ಲಿಕಾರ್ಜುನಾ॥ ॥೮೪೦॥ [I-೮೩೭]

ನಾನಿಲ್ಲದಾವ ದಾನವ ಮಾಡಿಹೆನುಯೆಂಬ
ದಾನಿಯ ತಾಯಿ ಹುಸಿಯೆಂದು ಬಾಹಪ್ಪಳಿಸಿ
ತಾನು ಬಂದೆನ್ನುವನು ಹಲ್ಲಣಿಸಿದಾ,
ಆ ಮುನ್ನ ಎನ್ನುವನು ದಾನಿಯೆಂದೆನಿಸದಿರು
ಕಾರುಣ್ಯಕರನೆ ಶ್ರೀ ಮಲ್ಲಿಕಾರ್ಜುನಾ. ॥೮೪೧॥

ಕೆಱೆ ಬಾವಿ ದೇವಾಲ್ಯ। ಹಸನುವಾಯಿತ್ತಯ್ಯ
ಹೆಸರುವ೧[ಡೆ]೧ದ್ದೈ ಲೋಕಕ್ಕೆ ನಿರ್ಮಾಯನೆಂದು।
ಈ ಪಸರಿಸುವ ದಾನದ। ಫಲವನುಂಬರೆ ಭವಕೆ
ಹರಿದು ಬಾಯೆಂದಳ್ಳೆ ಮಲ್ಲಿಕಾರ್ಜುನಾ॥ ॥೮೪೨॥

ಎಂದಡಾ ಮಾಯೆಯನು। ಕರೆದಿಂತೆಂದೆ
ಬಂದಡೇನನು ಮಾಳ್ಪೆಯೆಂದು ನುಡಿಯ ನೀ।
ಬಂದುಂಬ ಸುಕೃತದೊಳು। ತಂದಿಕ್ಕುವೆನು ತಮವ ಬಳಿಕೆನ್ನ
ದಂದವನು ನೋಡೆಂದಳು ಮಾಯೆ ಮಲ್ಲಿಕಾರ್ಜುನಾ॥ ॥೮೪೩॥

ಜಾಗರದ ಸ್ವಪ್ನದಾ। ಆತುರೆಯ ಸುಷುಪ್ತಿಯೊಳು।
ಲೇಸಾಗಿ ತನ್ನ ತಾಮಸವ ಹರಹಿ।
ಈ ಒಂದು ಒಱೆಯಲ್ಕೆ। ಆ ಮೂಱು ನಾಶವ್ವೆ
ಮಾಯ ಗೆಲುವೆನು ಬಳಿಕ ಮಲ್ಲಿಕಾರ್ಜುನಾ॥ ॥೮೪೪॥

ಅಂಗವಿಸದಿರುಯಿನ್ನು, ಹಿಂಗಿ ಹೋಗೆಂದೆನುತ,
ಮಂಗಳಾತ್ಮನು ನುಡಿದ ಗುರುಕರುಣದಾ,
ಅಂಗವಿಸದಿರುವೆಂದು,
ಅನಂಗಹರ ಪ್ರಭುರಾಯ ಬಂದು
ನೂಕಿದನೆನ್ನನೇಡಿಸುವ ಮಾಯೆಯನ್ನು,
ಮಂಗಳಾತ್ಮಕ ಕಪಿಲಸಿದ್ಧ ಮಲ್ಲೇಶ್ವರಲಿಂಗ
ನಿಮ್ಮನುವಱೆದೆ ಮಾಯೆನನು ಗೆಲುವೆ ಪ್ರಭುವಿಂದಲೆ. ॥೮೪೫॥ [I–೯]

ದಾನಿಯೆಂದೆನಿಸದಿರು। ಅಯ್ಯಾ ಮಹಾದೇವ
ಈವೊಡೆನಗೇನುಂಟು ಎಲೆ ಪರಶಿವಾ।
ಈವ ದೇವನು ನೀನೆ। ಕಾವ ದೇವನು ನೀನೆ
ಮಾಯೆಯನು ಮಾಣಿಸೈ ಮಲ್ಲಿಕಾರ್ಜುನಾ॥ ॥೮೪೬॥

೧–೧ ಡ (ಮೂ)

ನಿರ್ಮಳನ ಸಲಹಲ್ಕೆ। ನಿರ್ಮಾಯ ಬಂದನೈ
ಎನ್ನನುದ್ಧರಿಸಿದನು ಚೆನ್ನಬಸವ।
ಎನ್ನ ಗೆಲಿದೇನೆಂಬ। ಈ ಖಿನ್ನ ಮಾಯೆಯ ನಾನು
ಮುನ್ನ ಗೆಲುವೆನು ಗುರುವೆ ಮಲ್ಲಿಕಾರ್ಜುನಾ॥ ॥೮೪೭॥

ದಾನಿ ಮುನ್ನಾನಲ್ಲ, ಏನು ಗುಣವೆನ್ನಲ್ಲಿ?
ನೀ ಕಾಡಲ್ಕೆ ಎನಗೆ ತೆಱಹಿಲ್ಲವ್ವಾ
ದಾನವನು ಬೇಡಿದೆನು
ಭಕ್ತಿ ಭಿಕ್ಷವ ನೀಡಿ
ಅನಾದನಾದನು ಚೆನ್ನಬಸವಣ್ಣನು.
ಕೇಳೆಲೆಗೆ ಮಾಯೆ, ನೀನೆನ್ನತ್ತ ಹೊದ್ದದಿರು
ಗಾಱುಮಾಡುವರು ನಿನ್ನನೆನ್ನ ನಿರ್ಮಾಯರು.
ಕಾರುಣ್ಯಕರ ಕಪಿಲಸಿದ್ಧ ಮಲ್ಲೇಶ್ವರನ
ಭಾವಶುದ್ಧದ ಸತ್ವವನುವಿಡಿದು. ॥೮೪೮॥

ಕರಸ್ಥಳಕ್ಕೆ ಕರುಣದಾ ಸುಧಾಪ್ರಸಾದ ಬರೆ,
ಅದು ಲಿಂಗವಾಯಿತ್ತೈ ಎನ್ನ ಒಳಗು ಹೊಱಗು,
ಎಲೆ ಮಾಯೇ, ನೀನೆನ್ನ ಒರೆದು ನೋಡೇನೆನಲು, ಹುರುಳುಗೆಡುವೆ
ನೀನೆನ್ನ ಒಡೆಯ ಪ್ರಭುವಿಂದಲೂ ಕಾಡದೆ,
ನೀಹೋಗು ನಾ ಕೂಡುವೆನು ಎನುತ
ಆಱೂಢದಿಂ ಶ್ರೀ ಯೋಗಿನಾಥ ಪದವ. ॥೮೪೯॥[ಸಂ-೨೭]

ಆ ಪದದಲ್ಲಿಲ್ಲ ಮಾಯೆಯ ಮೋಹದಾಮಿಷದ
ಹೇಮದಿ[೧][ಚ್ಛೆ][೧]ಯ ಭವದ ರೀತಿ ಪದವು.
ಆಱೂಢದೈಕ್ಯದಲಿ ಆನೆಯ್ದಿದೆನು ಗುರುವೆ,
ಪ್ರಭುರಾಯ ನಿಮ್ಮಿಂದ ಮಾಯೆಯನು
ಗೆಲಿದೆನೈ ಮಲ್ಲಿಕಾರ್ಜುನಾ. ॥೮೫೦॥

೧-೧ ತ್ಸ (ಮೂ)

ಪ್ರಸಾದ ಲಿಂಗದಲಿ। ಪ್ರಸನ್ನತೆಯಾಗಿ
ಜ್ಯೋತಿರ್ಮಯನು ತಾನು ಬೆಳಗುತಿಹನು।
ಅನೇಕ ವಿಧದ ಸುಕೃತ। ಮಾಡಿದರಿಗಲ್ಲದೆ
ಈ ಪದವು ಇಲ್ಲಯ್ಯ ಮಲ್ಲಿಕಾರ್ಜುನಾ॥ ॥೮೫೧॥

ನಿತ್ಯ ಲಿಂಗಾರ್ಚನೆಯು। ನಿತ್ಯ ಭಕ್ತರ ಸಂಗ
ನಿತ್ಯ ಗುರುಭಜನೆಯಲಿ ಪ್ರಸಾದವ।
ನಿತ್ಯ ಚರಲಿಂಗದಲಿ। ಪ್ರಸಾದವ ಕೊಂಬ ಪದ
ವ್ಯರ್ಥಕಾಯರಿಗುಂಟೆ ಯೋಗಿನಾಥಾ॥ ॥೮೫೨॥[ಸಂ-೩೯]

ಸಕಲ ಮಂತ್ರಕ್ರೀ। ಮುಕುರವಾಗಿಯೆ ತೋಜಿ
ಸಕಲ ಮಂತ್ರಗಳಿಂದ ಶರಣೆನಿಸಿಕೊಂಬ।
ಸುಕೃತ ಮಹರಾಜ। ಪಂಚಾಕ್ಷರಿ ಜಪದ।
ಪರಿಣತದ ಪದವು ಉಳಿದವರಿಗುಂಟೆ ಯೋಗಿನಾಥಾ॥ ॥೮೫೩॥[ಅ-೧೪೧]

ವಿಭೂತಿ ರುದ್ರಾಕ್ಷಿ। ಧಾರಣದೊಳಪ್ಪವರ
ಶ್ರೀಪಾದವ ತೆಗೆದೆನ್ನ ಭಾಳದಲ್ಲಿ।
ಒತ್ತಿ ಮುಂಡಾಡುವ। ನಿತ್ಯ ನಿಜದಾನಂದ
ವ್ಯರ್ಥಕಾಯರಿಗುಂಟೆ ಯೋಗಿನಾಥಾ॥ ॥೮೫೪॥

ಶಿವಕಥೆಯ ಹಾಡುವ। ಶಿವನೊಡಗೂಡುವ
ಶಿವಭಕ್ತರೊಡನೆ ನಲಿದಾಡುತಿರ್ಪ।
ಅಡಿಗಡಿಗೆ ಪುಳುಕಿಸುವ। ಆನಂದಭಕ್ತಿಯ
ಸುಖವು ಅಳಿವವರಿಗುಂಟೆ ಯೋಗಿನಾಥಾ॥ ॥೮೫೫॥

ಶರಣಾರಾಳಾಗಿ। ಶರಣ ಸೇವೆಯ ಮಾಡಿ
ಶರಣರಿಗೆ ಕೆರಹು ಕೆರ್ಪಾಗಿ ನಾನು।
ಇರುತಿರ್ದು ಭವವ। ತಪ್ಪಿಸಿಕೊಂಡ ಸುಕೃತದಾ
ಪರಿ ನಿಮ್ಮ ಸರಿಯೇನು ಯೋಗಿನಾಥ॥ ॥೮೫೬॥[ಸಂ-೪೩]

ಹಾಡುತ್ತ ಹೊಗಳುತ್ತ। ನೋಡುತ್ತ ಲಿಂಗವನು
ಕೂಡೆ ಪುಳಕ ಪ್ರತತಿಯೆಸವುತಿರ್ಪಾ।
ಆಱೂಢ ಭಕ್ತಿ। ಕ್ರಿಯಾಳಾಪದಾನತವು
ಆವುದಕೆ ಸರಿ ಹೇಳಾ ಯೋಗಿನಾಥಾ॥ ॥೮೫೭॥ [ಆ-೭೦]

ಅನ್ಯವನು ಹಾಡರವ। ರನ್ಯವನು ನೋಡರವ
ರನ್ಯಕ್ಕೆ ತೆಱಹಿಲ್ಲದಂತೆ ಇರ್ಪಾ।
ಸನ್ನುತ ಶಿವಜ್ಞಾನಿ। ಸಂಬಂಧಿಗಳ ಕೂಟ
ಕ್ಕಿನ್ನೇನು ಸರಿಯಯ್ಯ ಯೋಗಿನಾಥ॥ ॥೮೫೮॥[ಸಂ-೪೭]

ಸಮರಸವು ಸಮಸುಖವು। ಸಮಭಕ್ತಿಯಾದಲ್ಲಿ
ಸಮನಿಸುವ ಸುಖಕಿನ್ನು ಸರಿಯಾವುದೈ।
ಕರುಣಾಕರನೆ ನಿನ್ನ। ನೆಲೆಯಱಿದ ಭಕ್ತರಿಗೆ
ಸಮವಾರು ಲೋಕದೊಳು ಯೋಗಿನಾಥ॥ ॥೮೫೯॥[ಸಂ-೪೧]

ಶಿವಭಕ್ತಿ ನೀತಿಯೊಳು। ಖ್ಯಾತಿವಡೆದಂತಿಪ್ಪ
ಎರಡೆಂಟು ಹೊದ್ದದಾನಂದ ಪದವ।
ಅತಿಗಳೆದ ಜ್ಯೋತಿ।ರ್ಮಯ ಮಹಾಭಕ್ತರಾ
ಪದಕಿನ್ನುಯೇನು ಸರಿ ಯೋಗಿನಾಥ॥ ॥೮೬೦॥

ಶುದ್ಧಪ್ರಸಾದವನು। ಸಧ್ಯ ಫಲವಾಗಿ ತಾ
ಮತ್ತೆ ಇಹಲೋಕ ಪರಲೋಕವೆಂದಡೆ।
ಎಲ್ಲವನು ತನ್ನೊಳಗೆ। ಅಡಗಿದ ಮಹಾತ್ಮರಾ
ಸೊಲ್ಲು ಪರುಷವು ತಾನು ಯೋಗಿನಾಥ॥ ॥೮೬೧॥

ಬಲ್ಲವರೆನ್ನವರು। ನಿಲ್ಲರೆಲ್ಲಿಯು ಭಕ್ತಿಯಿಲ್ಲದಲ್ಲಿ
ಸೊಲ್ಲ ಸಣ್ಣಿಗವರ ತಾ ಬಲ್ಲಿಹ।
ಕ್ರೀಯವರ ನುಡಿ।ಯ ಗಡಣಕ್ಕಾನು
ಅದೆಲ್ಲಿ ಸರಿಯೆಂಬೆನ್ನೈ ಯೋಗಿನಾಥ॥ ॥೮೬೨॥

ಮುನ್ನಲಾದಿಯಲಿ। ತಂದು ಬಿತ್ತಿದ ಬೀಜ।
ಚೆನ್ನನಾಗಿಪ್ಪರೈ ನಿನ್ನ ಪರಿಯಾ।
ಎನ್ನೊಡೆಯ ಕಪಿಲಸಿದ್ಧ। ಮಲ್ಲಿಕಾರ್ಜುನ ತಂದೆ
ಇನ್ನಾ ಪದಕ್ಕಿನ್ನು ಏನು ಸರಿಯೈ। ॥೮೬೩॥

ಇಂತು ಹಲವು ಪರಿಯ। ನಿಶ್ಚಿಂತರಪ್ಪರೈ
ಚಿಂತೆಗೆಟ್ಟಿಪ್ಪರಿಹಪರ ಲೋಕವಾ।
ನಿಶ್ಚಿಂತ ಕಪಿಲಸಿದ್ಧ। ಮಲ್ಲಿಕಾರ್ಜುನನ
ಸಚ್ಚಿದಾನಂದಮಯರಪ್ಪರಯ್ಯ॥ ॥೮೬೪॥

ಪದವ ಬಯಸರು ಅವರು। ಫಲವ ಬಯಸರು ಅವರು
ಹದುಳದಿಂದಿಪ್ಪರೈ ಫಲಪದವು ಹೊದ್ದದೆ।
ಶಶಿಧರನೆ ಕಪಿಲಸಿದ್ಧ। ಮಲ್ಲಿಕಾರ್ಜುನಯ್ಯ
ಸಹಲೋಕವೆ ಅವರು ಇದ್ದ ಲೋಕ॥ ॥೮೬೫॥

ಒಂದೊಂದು ಪರಿಯ ಐ। ಬೊಂಬೆಗಳು ಆಡಲ್ಕೆ
ಕಂಡು ಕಾಣದಂತೆಸೆಯರವರ।
ಗಂಡಾಳು ಕಾಮನನು। ಬಂಡುಮಾಡಿಯೆ ತಗುಳಿ
ಗಂಡುಗಲಿ ಶರಣರೈ ಯೋಗಿನಾಥ॥ ॥೮೬೬॥ [I–೨೮೭]

ಇಂತು ಶರಣ ಸ್ತವವ। ಸಂತತಂ ನೆನೆದೀಗ
ನಿಶ್ಚಿಂತನಾದೆನ್ಕೆ ಸುಖತರದಲಿ।
ಸಚ್ಚಿದಾನಂದ ಗುರು। ಬಸವಣ್ಣನಾಣತಿಯಲ್ಲಿ
ಒಚ್ಚಿತ ನಿನಗಾನು ಯೋಗಿನಾಥ॥ ॥೮೬೭॥

ಅಂಡಜದ ಪರಿಭವವು। ಪಿಂಡಜದಲೊಪ್ಪುತಿರೆ
ಪಿಂಡವ ಬಿಚ್ಚಿ ಬ್ರಹ್ಮಾಂಡಮಾಡಿ।
ಖಂಡೇಂದುಶೇಖರಗೆ। ನೆಲೆಯ ಮಾಡಿದನೆನ್ನ
ಗಂಡ ಬಸವಣ್ಣನೈ ಯೋಗಿನಾಥ॥ ॥೮೬೮॥[ಬ–೧೦೯]

ಬಸವಣ್ಣನೇ ಶರಣು। ಬಸವಣ್ಣನೇ ಶರಣು
ಬಸವಣ್ಣನೇ ಎನ್ನ ಪರಮಬಂಧು।
ವಸುಧೀಶ ಕಪಿಲಸಿದ್ಧ। ಮಲ್ಲಿಕಾರ್ಜುನ ನಿಮ್ಮ
ಹೆಸರಿಟ್ಟ ಪರಮಗುರು ಬಸವಣ್ಣನೈ॥ ॥೮೬॥

ಗುರುಲಿಂಗ ಬಸವಣ್ಣ। ಚರಲಿಂಗ ಬಸವಣ್ಣ
ಕರುಣಾಕರನು ಎನ್ನ ಬಸವಣ್ಣನು।
ಶರಣಸ್ಥಳದ ಕಲ್ಪ। ಸುರಭೂಜ ಫಲವಿತ್ತ
ಕರುಣಾಕರನು ಚೆನ್ನಬಸವಣ್ಣನು।
ಆ ಬಸವನ ಕೃಪೆಯಿಂದ। ಆದಿ ಅಕ್ಷರವಜಿತೆ
ಸಾಧಿಸಿದೆ ನಿಮ್ಮವನು ಮಲ್ಲಿಕಾರ್ಜುನಾ॥ ॥೮೭॥ [॥೨೮೧]

ಮನ್ನಣೆಯ ತನ್ನ ಗುಣ। ಉನ್ನತದ ಆಳುವನು
ಚೆನ್ನಾಗಿ ಒರೆದೊರೆದು ನೋಡಿ ತಿಳಿದ।
ಇನ್ನು ಸದ್ಭಕ್ತರಿಗೆ। ಭವವಿಲ್ಲವೆಂಬುದನು
ಎನ್ನ ಬಸವಣ್ಣನಿಂದಜಿತೆ ಮಲ್ಲಿಕಾರ್ಜುನಾ॥ ॥೮೭॥

ಶ್ರೀ ಗುರುವೆ ಬಸವಣ್ಣ। ಆ ರೂಪು ನೀನಾಗಿ
ಕಾರುಣ್ಯದಿಂದ ಸಲಹಿದಿರಿ ಎನ್ನ।
ಧಾರುಣಿಯ ಫಲಕಾನು। ಓರಂತೆ ಬಾರದಲಾ
ಪರಿಯ ಮಾಡಿದಿರಿ ಯೋಗಿನಾಥಾ॥ ॥೮೨॥

ತವರೆಸುವ ತುರಿಯದಾ। ಪರಿಯಾಯಿತೆಲೆ ದೇವ।
ಹರುಷವಾಯಿತೆನ್ನ ಮನಕಿನ್ನು ತಾ॥
ಉರವಣೆಯ ಶಿವಭಕ್ತಿ। ರಸದಲೋಲಾಡುವ।
ಪದವೆನಗೆ ಆಯಿತ್ಕೆ ಯೋಗಿನಾಥಾ॥ ॥೮೩॥

ಕಂಗಳದಲಿಪ್ಪ ಮಂ।ಗಳಮಯ ರೂಪು।
ಹಿಂಗದಂತಾಯಿತ್ಯೆ ಸರ್ವದೊಳಗೆ॥

ಮಂಗಳಾತ್ಮನೆ ಕಪಿಲಸಿದ್ಧ ಮಲ್ಲೇಶ್ವರಾ
ಲಿಂಗಸುಖದಿಂದ ಶುದ್ಧ ನಾನು॥ ॥೮೭೪॥ [I-೨೯೭]

ಘನಸುಖದ ಸಂಪನ್ನನಾಗಿ
ನಿಮ್ಮ ಕರುಣಕಾವುದು ಕಡೆಯು,
ಮನಸಿಜನ ಮದವ ಮಾಯೆಯನೆಲ್ಲವ ಹಜಿದು
ನಿಮ್ಮ ಪದದಿ ಹದುಳವಿರಿಸಿದಿರಯ್ಯಾ,
ಕರುಣಾಕರನೆ ಕಪಿಲಸಿದ್ಧ ಮಲ್ಲೇಶ್ವರಾ. ॥೮೭೫॥

ಮಂಗಳಾತ್ಮನೆ ನಿನ್ನ। ಮಂಗಳದ ಮೂರ್ತಿಯ
ಕಂಗಳಲಿ ನೋಡುವ ಸುಕೃತವಿತ್ತು।
ಹಿಂಗಿ ಹಿಂಗದ ನಿತ್ಯ। ಸಂಗಸುಖಕಾನಾದೆ
ಮಂಗಳಾತ್ಮನೆ ಕಪಿಲಸಿದ್ಧ ಮಲ್ಲೇಶ್ವರಾ॥ ॥೮೭೬॥

ಜಲದೊಳಗಣ ಕಲ್ಲು। ನೆನೆದು ಮೃದುವಪ್ಪುದೆ
ಒಲವಿಲ್ಲದವಗೆ ಭಕ್ತಿ ನೆಲೆಗೊಂಬುದೆ।
ಸಲಹಿದರಿಗುಂಟು ಪದ। ನಾಲ್ಕು ಮೀಜಿದ ಪದವು
ಕರುಣಾಕರನೆ ಗುರುವೆ ಯೋಗಿನಾಥಾ॥ ॥೮೭೭॥

ಬಯಸದಿರು ಪಥ ನಾಲ್ಕು। ಬಳಸದಿರು ಅದ್ವೈತ
ದ್ವೈತದಿಂದಲ್ಲಿ ಅಜಿ ಭಕ್ತಿಯನ್ನು।
ಬಯಸಿ ಪೂಜಿಸಿದದು। ಭವಕೆ ತಪ್ಪದದು ತಥ್ಯ
ಬಯಸದೆ ನೆರವುದೈ ಶ್ರೀ ಗುರುವೆ ಯೋಗಿನಾಥ ಪದವ॥ ॥೮೭೮॥

ಬಯಕೆಯಿಂದಾನತದ ಬಯಕೆಗೆಟ್ಟುದು ಕೊಂಡು
ಬಯಸದೆ ಶ್ರೀ ಗುರುವೆ ಪದವ,
ದಿವ್ಯ ಸಾಸಿರವರುಷ ಸರ್ವಜ್ಞನಾದಡೂ
ಮೋಕ್ಷತನಗಳುವಿಲ್ಲಯೇನಾದಡೂ,
ಭಕ್ತರೊಲ್ಲರು ಅವರ ಮತ್ತೆ ಶಿವನೊಲಿಯನೈ
ಶಿವತತ್ವಸಾರಕ್ಕಿಲ್ಲ ಯೋಗಿನಾಥಾ ॥೮೭೯॥

ಚಿತ್ತದಲಿ ಶಿವನಿರಲು। ಮತ್ತೆ ಶಿವನ ನುಡಿಯೆ
ಭಕ್ತರಲ್ಲದರ ನುಡಿಯ ಕೇಳರವರು।
ಭಕ್ತರಾದವರಿಗೆ। ಕಾಯದಲಿ ಕಳೆಯುಳ್ಳವರ
ನಿತ್ಯರೆಂಬುದು ತಥ್ಯ ಯೋಗಿನಾಥಾ॥ ॥೮೮೦॥[ಸಂ-೪೬]

ಶಾಖಿಯಾ ಶೀಲಕ್ಕೆ। ಆಕಾರದರ್ಪಿತಕೆ
ಬೇಕಾದ ಪರಿಯ ಮುಯ್ಯಾಂತಿಪ್ಪರ।
ಏಕೋ ರುದ್ರನುಯೆಂಬ। ಪರಿಯವರು ತಪ್ಪದೆನೆ ಆ
ನೇಕ ಪರಿಯಿಂ ಶಿವಭಕ್ತರು ಯೋಗಿನಾಥಾ॥ ॥೮೮೧॥

ಅನೇಕ ಪುರಾತರ ಅನುಮತದಿಂ ಬಸವಣ್ಣನೆನ್ನನಾಗುಮಾಡಿದ ಪರಿಯನು ಹೇಳುವೆನು:

ಮುನ್ನಲಾದಿಯಲಾದ। ಸನ್ನುತದ ಧ್ಯಾನವನು
ತನ್ನ ತಿಳಿಪಿದಿ ಅಕ್ಷರಾನಂದವಾ।
ಸನ್ನುತ ಧ್ಯಾನ ಮೌ।ನಾದಿ ಸಮ್ಯಜ್ಞಾನ
ಎನ್ನನಱುಪಿದ ಗುರು ಬಸವನ್ಕೆ ಯೋಗಿನಾಥ॥ ॥೮೮೨॥

ಆ ಬಸವನಾನಂದ। ಆ ಬಸವನತ್ಯಂತ
ಆ ಬಸವ ಸಕಲಸಕಲಾದಿ ಸಿದ್ಧ।
ಆ ಬಸವನ ಪದ । ಮಸ್ತಕವ ನೆನೆಯಲ್ಕೆ
ಆನು ನೀನಾದೆನ್ಯೆ ಯೋಗಿನಾಥಾ॥ ॥೮೮೩॥ [ಬ-೫೦]

ಎನ್ನ ಸಕಲಕ್ಕೆ ಗುರು ಬಸವ, ನಿಷ್ಕಲಕ್ಕೆ ಗುರು ಬಸವ,
ಸಕಲನಿಷ್ಕಲ ಕೂಡಿದಾನಂದದಾ
ಪದವಿನೀತನಾಗೆನಿಸಿ, ಪದವ ಮೀಱಿದಾತನು
ಸದಮಲಜ್ಞಾನ ಜ್ಯೋತಿರ್ಮಯನಲ್ಕೆ ಬಸವಣ್ಣನೆ.
ಶರಣು ಬಸವಣ್ಣನೆ, ಶರಣು ಬಸವಣ್ಣನೆ,
ಭಕ್ತಿ ಮುಕ್ತಿಗೆ ಮೂಲನು ಬಸವಣ್ಣನಾ
ನೆನೆದ ಅನುಮಿಷಾಕ್ಷರದಿಂದ
ಬಸವ ಪದವಾಯಿತ್ಕೆ ಮಲ್ಲಿಕಾರ್ಜುನಾ ॥೮೮೪॥

ಶ್ರೀ ಗುರುವೆ ಸಕಲ। ಲೋಕಾರಾಧ್ಯ ನೀನೆನ್ನ
ನಾರೈದು ಓರಂತೆ ಮಾಡಿದಿರಿ ಅಯ್ಯಾ॥
ಗಾಱಪ್ಪ ಎನ್ನ ಭ್ರಮಿ।ತಾನಂದ ಪದವನು
ಗಾಱು ಮಾಡಿಯೆ ಕಳೆದೆ ಯೋಗಿನಾಥಾ। ॥೮೮೫॥

ಜಲದೊಳಗೆ ಇಪ್ಪುದದು। ಜಲವನಾಶ್ರಯಿಸದು
ಕರುಣಾಕರಾ ಸದುಗುರುವಿನೊಲವು ನೋಡಾ।
ಪರೀಕ್ಷಿಸಿ ಪಂಚಾಕ್ಷರಿಯ। ಕರುಣಿ ಕರುಣಸಲು
ಜಱಿದು ಗೆಲಿದೆನು ಮಾಯೆಯನು ಯೋಗಿನಾಥ॥ ॥೮೮೬॥

ಅಯ್ಯಯ್ಯ, ಎನ್ನ ಮನ್ನಣೆಯಿಂದ
ನಿಮ್ಮ ಪದವನಿತ್ತಿರಯ್ಯಾ,
ಇನ್ನು ಬಾರೆನಯ್ಯಾ, ಹಿಂದೆ ಬಂದಂತೆ
ಬಂದೆನಾದೊಡೆ ಕುಂದು ನಿನಗಪ್ಪುದೈ.
ಶ್ರೀ ಗುರುವೆ ಮಲ್ಲಿಕಾರ್ಜುನಾ
ಹಿಂದು ಮುಂದಱಿತಂತೆ ಮಾಡು ಎನ್ನ. ॥೮೮೭॥

ಪರಿಭವಕೆ ಬರುತಾನು। ತೊಲಗಿ ನಿಂದೆ ಗುರುವೆ
ಕರ ಹಿಮ್ಮೆಟ್ಟಿದೆನು। ಅದರ ಘಾತ ಹಿರಿದು।
ಪರೀಕ್ಷಿಸುವ ವಿಷಯದ। ಕೆಮ್ಮಡುವಿನಲಿ ಬೀಳೆ
ಮರಳಿ ಏಳಲಿಯಿಲ್ಲ ಯೋಗಿನಾಥ॥ ॥೮೮೮॥

ಇದಕಂಜಿ ಮಱವೊಕ್ಕೆ। ಪರುಷಲಿಂಗವೆ ನಿನ್ನ
ಪರಿಭವಗಳನು ಎನಗೆ ತೋಱಿಸದಿರ್ಕೆ।
ಮನದ ಮಧ್ಯಸ್ಥಾನ। ನೆಲೆಗೊಳ್ಳು ಎಲೆ ಗುರುವೆ
ಕರುಣಾಕರನೆ ಶ್ರೀ ಮಲ್ಲಿಕಾರ್ಜುನಾ॥ ॥೮೮೯॥

ಮನದ ಮಲಿನವನು ಕಳೆಯಾ ಅಯ್ಯಾ,
ಮನವೇ ಶುದ್ಧನಾಗು, ಮನವೇ ಸಿದ್ಧನಾಗು,

ಮನವೆ ಪ್ರಸಿದ್ಧನಾಗಯ್ಯಾ,
ಮನದೊಡೆಯ ಮಹಾದೇವ ಕಪಿಲಸಿದ್ಧ ಮಲ್ಲಿನಾಥಾ
ಮನದ ಸರ್ವಾಂಗ ನೀನಾಗಯ್ಯಾ. ॥೮೯೦॥

ತಾಮಸದಿಂದ ನಿನ್ನ ನೆನೆವವರಿಗೆ,
ಸಾಮಸಪದವನೀವಿರಯ್ಯಾ,
ಆರೈದು ನಿನ್ನುವನು ಓರಂತೆ ನೆನವವರಿಗೆ
ಕಾರುಣ್ಯ ಪದವನೀವೆ ಅಯ್ಯಾ,
ಅನಾದಿ ಮೂರುತಿ ಕಪಿಲಸಿದ್ಧ ಮಲ್ಲಿನಾಥಯ್ಯಾ. ॥೮೯೧॥

ಆರೇನು ಮಾಡಿದುದನಂತಿರೆ
ಅಂತಕ್ಕು ಇಂತಕ್ಕುಯೆಂತಕ್ಕುಯೆನಬೇಡ,
ಚಿಂತಿಸದಿರು ಎಲೆ ಮನವೆ,
ಅಂತಹಕರ ಕಪಿಲಸಿದ್ಧ ಮಲ್ಲಿನಾಥಯ್ಯ
ಮಾಡಿದಂತಲ್ಲದೆ ತಾನು ಅಪ್ಪುದಿಲ್ಲ. ॥೮೯೨॥

ನಡೆ ನುಡಿವೊಂದಾದವರಿಗೆ ಒಲಿವೆ ಕಂಡಯ್ಯಾ,
ನುಡಿಯ ಬ್ರಹ್ಮದವರ ನೀನೊಲ್ಲೆ.
ಎಲೆ ಮೃಡನೆ, ಕಪಿಲಸಿದ್ಧ ಮಲ್ಲಿಕಾರ್ಜುನಾ
ನುಡಿಯ ಬೊಮ್ಮಗಳಿಂದಪ್ಪುದೇನ್ನೈ. ॥೮೯೩॥ [I-೫೦೨]

ಅಡಿಗಡಿಗೆ ಸಜ್ಜನರ। ನುಡಿಗೇಳುವುದು ಜಪವು
ಮೃಡ ನಿಮ್ಮ ಅರ್ಚನೆಯ ಕ್ರಮವೇಳುವೆ।
ಸಡಗರದಿ ಸದ್ಭಕ್ತರಡಿಗೆಱಗಿ ನಮೋಯೆನಲು
ಮೃಡ ನೀನು ತೃಪ್ತನ್ಕೆ ಯೋಗಿನಾಥಾ॥ ॥೮೯೪॥[ಸಂ-೪೨]

ಇಂತು ಹಲವರ್ಥಱಲಿ। ಸಂತುಷ್ಟನಾದೆನ್ನೈ
ಸಂತುಷ್ಟನಾದೆನ್ನೈ ಭಕ್ತಿಯಲ್ಲಿ।
ಚಿಂತೆಗೆಟ್ಟೆ ಸಕಲ।ನಿಷ್ಕಲದ ಪದವಱಿಯೆ
ಮುಂತೊಂದು ಅಱಿದುಂಟೆ ಯೋಗಿನಾಥಾ॥ ॥೮೯೫॥

ಮೃಡ ನಿಮ್ಮ ಷಡುಸ್ಥಳದ। ಎಡೆಯ ನಾ ಪೇಳುವೆನು।
ನುಡಿಯ ಬ್ರಹ್ಮವ ನಾನು ಮೀಱೆ ಮೀಱೆ।
ಕಡಲೊಡೆಯ ಪರಿಯಂತೆ।ನುಡಿಯ ಭಕ್ತಿಯ ಸುಧೆಯ
ರಚಿಸುವೆ ಗುರುವೆ ಯೋಗಿನಾಥಾ॥ ॥೯೬॥

ಗುರುಲಿಂಗ ಪ್ರಸಾದ। ಚರಲಿಂಗನಿರಲು
ಚರಲಿಂಗದೊಳಗೆ ಇರೆ ಸಕಲವೆಲ್ಲ॥
ಉರುತರದ ಷಡುಸ್ಥಳದ। ಕ್ರಮವನಿತು ಪೇಳುವೆ
ಬಸವ ಕೃಪೆಯಿಂದಲ್ಯೆ ಶ್ರೀ ಗುರುವೆ ಮಲ್ಲಿಕಾರ್ಜುನಾ॥ ॥೯೭॥

ಆದಿ ಮಧ್ಯವಸಾನ। ಹೇಳುವುದಕದು ಮತ್ತೆ
ಭೇದ ಭೇದಾಗಿಂದತ್ತಲಿಕ್ಕು।
ಆದಿಮಧ್ಯವಸಾನ। ಆರಯ್ಯ ಬಲ್ಲರೆ
ಓರಂತೆ ಸಕಲದೊಳು ತಾನೆ ಯೋಗಿನಾಥಾ॥ ॥೯೮॥

ಆದಿ ಅಕ್ಷರದಾನು ಭೇದಕ್ಕೆ ಅಱೆಯನು,
ಅದಱಿಂದಲಾದ ಬಿಂದುಗಳೆಲ್ಲ ಅನ್ನರೂಪು.
ಆಮೋದದಕ್ಷರದ ಭೇದವನು
ಅಱುಹಿದಾತನೆ ಗುರುವಕ್ಕು
ಅಯ್ಯಾ, ಶ್ರೀ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೯॥

ಗ್ರಾಮವೆಂಟಱ ಒಳಗೆ। ಆನಂದದಾಳಾಪ
ಸ್ವಾನುಭೂತ್ರೈಕದಲಿ ಸೌಖ್ಯವಾಗಿ॥
ಭಾನುವಿನುದಯದ। ಪ್ರಭೆಯ ನುಂಗಿದ ದೀಪ್ತಿ
ಅಜಾತ ಗುರುವಿನ ರೂಪು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೧೦೦॥

ಕರಗಳಾನತವಾಗೆ। ಮುಖಗಳು ಹಲವಾಗೆ
ತನುಪ್ರಾಣಯಿಷ್ಟಕೆ ತನ್ನ ರೂಪು।
ಆನೀ ನೆನಹಿನ ಹಲವ।ನುಂಗಿ ಬೆಳಗ ನೆಲೆಯ
ತೋಱಬಲ್ಲಡೆ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೧೦೧॥

ಎರಡೆಂಟನತಿಗಳೆದು। ಮೂನ್ನೂಱ ಮೂವತ್ತು
ಕರದರ್ಪಣೆಯ ಭೇದವೊಂದು ಮಾಡಿ।
ಜಗವ ಸುತ್ತಿದ ಸೀಮೆ। ಹದುಳವಿಡಬಲ್ಲರೆ
ಪರಬ್ರಹ್ಮ ಗುರು ತಾನು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೦೨॥

ತನುವೈದು ದಳವೈದು। ಘನ ಮಂತ್ರವೈದನು
ಅನುವಿಂದಲವಕವಕ ದೀಕ್ಷೆಮಾಡಿ।
ಒಳಗು ಹೊಱಗೆನ್ನದೆ । ಜ್ಯೋತಿಲಿಂಗವ ಪಡೆವ
ಪರಮಗುರುವಿನ ಪರಿಯು ಕಪಿಲಸಿದ್ಧ ಮಲ್ಲಿಕಾರ್ಜುನ॥ ॥೯೦೩॥

ರೂಪಂಗೆ ರೂಪು। ಜ್ಞಾನಕೆ ಸುಜ್ಞಾನ
ಪ್ರಾಣಕ್ಕೆ ಪ್ರಸಾದ ಲಿಂಗತ್ರಯವ।
ವೇಧೆಯಿಂದವೆ ತಂದು। ಅವಱವಱ ಕರದಲ್ಲಿ
ದೀಕ್ಷೆಮಾಡಿದನು ಗುರು ಕಪಿಲಸಿದ್ಧ ಮಲ್ಲಿಕಾರ್ಜುನ॥ ॥೯೦೪॥ [I–೧೨೨]

ಬಿಂದು ಕೂಟವು ತಾನು। ಒಂಬತ್ತು ಪರಿಯಾಗೆ
ಒಂಬತ್ತು ವಿಧದಲ್ಲಿ ಒಸರಿವರಿದು।
ಶಂಭುವಿನ ಮಸ್ತಕದ। ಇಂಬಪ್ಪ ಸಸಿಗವು
ತುಂಬಿ ಒಸರುವರೆ ಗುರು ಕಪಿಲಸಿದ್ಧ ಮಲ್ಲಿಕಾರ್ಜುನ॥ ॥೯೦೫॥

ಸೀಮೆಗೆಟ್ಟಾ ಬ್ರಹ್ಮದಾನತದ ಸಂಬಂಧ
ಆದಿ ಅಕ್ಷರವೈದು ಮುಖವ ಮಾಡಿ।
ಭಾವದಾ ಕರದಲ್ಲಿ। ಹೊರಗಿಟ್ಟು ಸವಾಂಗವನು।
ವೇಧಿಸಿದಾತ ಗುರು ಕಪಿಲಸಿದ್ಧ ಮಲ್ಲಿಕಾರ್ಜುನ॥ ॥೯೦೬॥ [I–೭೮೮]

ಏಳೆಂಟು ಠಾವಿನಲಿ।ಮಠವ ಶುದ್ಧವ ಮಾಡಿ
ಧಾರುಣಿಯ ಸುದ್ದಿಯನು ಹದುಳಮಾಡಿ।
ಆರೈದು ಸಕಲ ।ನಿಷ್ಕಲದೊಳಗೆ ವೇದ್ಯ
ಗೊಟ್ಟಾತ ಗುರು ಕಪಿಲಸಿದ್ಧ ಮಲ್ಲಿಕಾರ್ಜುನ॥ ॥೯೦೭॥

ಸೀಮೆಗೆಟ್ಟಾ ಹೊಲಬ।ನಾರಯ್ಯ ಬಲ್ಲರೆ
ಅವನೋರಂತೆ ನಿಸ್ಸೀಮನಾಗಿ ಇಪ್ಪ।
ದ್ವಾರಪಾಲಕರಂತೆ। ಕಾಡಿಪ್ಪ ಹಂಸನನು
ಪ್ರಾಣಲಿಂಗವ ಮಾಡಿದಾತ ಗುರು ಮಲ್ಲಿಕಾರ್ಜುನಾ॥ ॥೯೦೮॥

ತನುವೇಳು ಸೀಮೆಯಿಂ।ದನುಮತವಾಗಿಪ್ಪ
ತನುವೇಳು ಸೀಮೆಯೆನುತ ತವೆ ದಹಿಸಿ।
ಘನಲಿಂಗ ಸ್ಥಾಪ್ಯವನು। ತನುತ್ರಯದ ಒಳಗಿರಿಸಿ
ಮನವ ಬೆಳಗುವವನು ಗುರು ಯೋಗಿನಾಥಾ॥ ॥೯೦೯॥ [ಅ-೨೬]

ಕರಣಂಗಳೆಲ್ಲವನು। ಹದುಳದಿಂದವೆ ಬೆಳಗಿ
ಕರುಣದಿಂದಿರಿಸಿದನು ತೂಗಿ ತೂಗಿ।
ಕರಣಹರಣುಪಕರಣ।ವಾಗಿಪ್ಪ ಗಿರ್ವಾಣ ಪದವ
ನಜಿದಾತ ಶ್ರೀ ಗುರು ಕಪಿಲಸಿದ್ಧ ಮಲ್ಲಿಕಾರ್ಜುನ॥ ॥೯೧೦॥

ಅಂಗವಿಸನನ್ಯಕ್ಕೆ। ಸಂಗಮಾಡನು ತತ್ವ
ಯೆಂಬ ಮಠಕವನು ತಾನಪ್ರಮಾಣ।
ಮಂಗಳಾತ್ಮನ ತೆಱುಹು। ಹಿಂಗದಿಹ ಸೀಮೆಯ
ತಂದಱುಪಿದಾತ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೧೧॥

ದಾಯ ಬಣ್ಣಗಳನು। ಓರಂತೆ ಮನೆಮಾಡಿ
ಜೀವಗಳೆಗಳನವಱ ಮನೆಯಲಿರಿಸಿ।
ಸಾವಧಾನ ನಿರಂತರವೆಂಬ।ಸಮ್ಯಜ್ಞಾನ ರೂಪನು
ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೧೨॥

ಎಸಳ ಕೊನೆ ಮೊನೆಯಲ್ಲಿ। ದೆಸೆಗ್ರಾಮವಱುವತ್ತು
ಪಸರಿ ಪರ್ಬಿತು ಮಾಯೆ ದೆಸೆವರಿದು।
ವಿಷಮಾಕ್ಷನಕ್ಷಯದ । ಆನತವನಜಿದಾತ
ದೆಸೆಗೆಟ್ಟ ಗುರುವಯ್ಯ ಶ್ರೀ ಮಲ್ಲಿಕಾರ್ಜುನಾ॥ ॥೯೧೩॥

ಸೀಮೆ ಸಾಹಿತ್ಯದಲಿ। ರೀತಿ ಧಾತುವ ನುಂಗಿ
ಪಾತಾಳದಿಂದತ್ತ ಪ್ರಮಾಣನಳಿದು।
ಸೋತು ನಿಂದಲ್ಲಿ ಸುಜ್ಞಾನ ಭರಿತನುವಾದ
ಅಜಾತ ಗುರುವಿನ ನಿಲವು ಶ್ರೀ ಮಲ್ಲಿಕಾರ್ಜುನಾ॥ ॥೯೧೪॥

ಎಲ್ಲ ಮರಂಗಳೊಳು ಅಯ್ಯಾ। ಸೊಲ್ಲಿಡಬಲ್ಲಡೆ ಅಯ್ಯ
ಬಲ್ಲತನವೆಂಬುದೇನರಿದು ಹೇಳು।
ಸಲ್ಲಲಿತವೆಂಬ ಸತ್ಯದ। ನೆಲೆಯನಳಿದರೆ
ಬಲ್ಲಹ ಇಹಪರಕೆ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೧೫॥

ಬಿಂದುದಂದವನೊಂದು। ದಂದಗೆಡಿಸಿಯೆ ಶಿವನ
ಅಂದವನು ಮನದ ಮಧ್ಯದಲಿ ಇರಿಸಿ।
ಸಂದ ಕ್ರಿಯಾಳಾಪನೊಂದು ಮಾಡಿದರೆ
ಆನಂದ ಗುರು ತಾನಯ್ಯ ಶ್ರೀ ಮಲ್ಲಿಕಾರ್ಜುನಾ॥ ॥೯೧೬॥

ಕರ ಕಂಗಳನು ಮನೆಯ।ತೆಱಹು ಮಾಡಿಯೆ
ಶ್ರೋತ್ರ ಕರದೊಳಗೆ। ಶಿವಲಿಂಗ ಸ್ಥಾಪ್ಯಗೊಳಿಸಿ।
ನೆನಹುಗೆಟ್ಟಾ ಸೀಮೆ। ನಿಷ್ಕಳದ ಪದವುವನು
ಅಱಿಹಿದಾತ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೧೭॥

ಮುನ್ನೂಱ ಮೂವತ್ತು। ಸನ್ನುತವು ನಾಭಿಯೂ
ಉನ್ನತ ಗ್ರಾಮಕೆ ಅವು ಶಾಖೆ।
ಚೆನ್ನಾಗಿ ಗ್ರಾಮಕ್ಕೆ। ತನ್ನಮಯವಾದರೆ
ಉನ್ನತೋನ್ನತಮಯನು ಗುರುರಾಯ ಯೋಗಿನಾಥಾ॥ ॥೯೧೮॥

ಕಮನೀಯ ಕಾನನದ। ವಿಮಲ ಶುದ್ಧಾಂಗನನು
ಅನುಪಮದ ಮನೆಯೊಳಗೆ ನಿತ್ಯನೆನಿಸಿ।
ಘನ ಪಂಚಮಕ್ಷರದ। ಕಡವಡದು ಇರಿಸಿದಾ
ಘನಗುರು ಮಹಾ ಮಹಿಮ ಶ್ರೀ ಗುರು ಮಲ್ಲಿಕಾರ್ಜುನಾ॥ ॥೯೧೯॥

ನಾದ ಬಿಂದು ಕಳಾತೀತ। ಆದಿ ಮಧ್ಯವಸಾನ
ಭೇದಿಸುವ ಬ್ರಹ್ಮಾಂಡ ಹಲವ ಹೆತ್ತಾ।
ಆತನನು ಹೆತ್ತ। ಅಜಾತ ಶ್ರೀ ಗುರುವ।
ರೀತಿಯಱಿಯಲ್ಕರಿದು ಮಲ್ಲಿಕಾರ್ಜುನಾ॥ ॥೯೨೦॥

ಚವುವೀಸ ಗ್ರಾಮದೊಳು। ಆನತದ ಪಟ್ಟಣದ
ಕಾಳುಗರು ಅರಸು ತಳವಾರರಾಗಿ।
ಊರಿಂಗೆ ಧಾಳಿವರಿ।ದವರ ಕೆಡಿಸಿದ
ನಿರ್ಮಾಯನೆನಿಸುವನು ಗುರು ಯೋಗಿನಾಥಾ॥ ॥೯೨೧॥

ನಿತ್ಯದಲಿ ಸತ್ಯದಲಿ। ಭಕ್ತಿಯಿದು ವಿಹಿತವೆಂದು
ಚಿತ್ತವನು ಪರಿಪಾಕಕ್ಕೆ ತಂದು।
ಮತ್ತೆ ಶಿವಲಿಂಗ ಕರ। ಸ್ಥಾಪನೆಯ ಮಾಡಿದ
ಸತ್ಯ ಶುದ್ಧನು ಗುರು ಮಲ್ಲಿಕಾರ್ಜುನಾ॥ ॥೯೨೨॥

ಮಥನಿಸುವ ಕಮ್ಮಟದ। ನೆಲೆಗೊಳಿಸಿದ ಸೀಮೆ
ಪರಮಹಂಸನ ನಿಲವಧಿಕ ಪಿಡಿದು।
ಆಕಾರಕ್ಕಾನಂದ। ನಾನಾ ಗುಣವನಿತ್ತ
ಅಭೇದ್ಯ ಗುರುವೈ ಶಿವನೆ ಮಲ್ಲಿಕಾರ್ಜುನಾ॥ ॥೯೨೩॥

ಅಱು ತನ್ನಯ ರೂಪು। ಆಗಬಲ್ಲಾತ ಗುರು
ಆಱಱಿಮ್ಮೀಱಿ ಆನಂದಮಯವ ತೋಱಿ।
ಆಱೆಂಟ ಗಾಱು। ಮಾಡದವರ್ಗೆ
ಆನಂದಮಯರೂಪ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೨೪॥

ಕರಣೇಂದ್ರಿಯಂಗಳನು। ಹರಕಲಿಸಲೀಯದೆ
ಒದವಿದ ಆನಂದಕರವಿಡಿದು।
ಪರಿಸ್ರುತದ ದ್ರುಷ್ಟವನು। ಪರಮಾಣಿನಂಗವನು
ತಿಳುಹಿದಾತ ಗುರು ಶ್ರೀ ಮಲ್ಲಿಕಾರ್ಜುನಾ॥ ॥೯೨೫॥

ಕಮಲ ಸಿಂಹಾಸನದ। ವಿಮಲಾತ್ಮನನುಯಿಟ್ಟು
ಸುಮನ ಗುರುಲಿಂಗ ಜಂಗಮುವನೊಂದು ಮಾಡಿ।
ಪರಮ ಜ್ಞಾನೋದಯದ। ಚೇತನದೊಳಿಟ್ಟಾತ ಗುರು
ಪರಂಜ್ಯೋತಿಮಯನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೨೬॥

ಆನೆತ್ತ ಪರಮ ಸೂಕ್ಷ್ಮದ ನೆಲೆ ತಾನೆತ್ತ
ನಾನಾ ಗುಣದ ಅತ್ಯಧಿಕ ಲಿಂಗವನ್ನು।
ಭಾನು ಮಂಡಲದೊಳಗೆ। ನೆಲೆಗೊಳಿಸಿದಾತನು
ಸುಜ್ಞಾನಭರಿತನು ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೨೭॥[I-೧೫೧]

ನಾನಾ ವಿಧದ ಶುದ್ಧ। ಸಿದ್ಧ ಪ್ರಸಿದ್ಧದಾ
ಸಾರವನು ಉಂಡು ತಾ ಗುರುವಾದನೈ।
ಧಾರುಣೋದ್ಧಾರದಲಿ। ಅತ್ಯಂತ ಕಳೆಯ ಇರಿಸಿ
ದಾತ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೨೮॥

ಮುಟ್ಟದಿರು ಮೂಱುವನು। ಮುಟ್ಟಿಸದಿರಾಱುವನು
ಬಟ್ಟ ಬಯ[ಲಾ]ಗು ಗುರುಹಸ್ತದಿಂದ।
ಮುಟ್ಟು ಮೂಱಱ ಅಸುವ। ಬಿಟ್ಟು ಕಳೆ ಆಱಲಿ ತತ್ವಕೆ
ತವಕಿಸದೆ ಗುರುವಾಗು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೨೯॥

ಸೀಮೆ ಸಂಗಮದಲ್ಲಿ। ಲೀಯವಪ್ಪಾತ ಗುರು
ಆಱೂಢದೈಕ್ಯದಲಿ ಲೀಯವಾಗಿ।
ಆಱನತಿಗಳೆದ। ಆನಂದಮೂರ್ತಿಯನು
ತೋಱಬಲ್ಲಾತ ಗುರು ಕಪಿಲಸಿದ್ಧ ಮಲ್ಲಿಕಾರ್ಜುನ॥ ॥೯೩೦॥

ಅಂಗವಿಸನನ್ಯಕ್ಕೆ। ಹಿಂಗಿಹ ಮಾಯಕ್ಕೆ
ಸಂಗಸುಖವೆ ಶಿವನ ಅಂಘ್ರಿಗಾಗಿ।
ಮಂಗಳಂ ಉರುತರ। ಬೆಳಗು ಪ್ರಕಾಶಿಸುವ
ನಿಸ್ಸಂಗ ಗುರುವಪ್ಪಾ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೩೧॥ [I-೧೦]

ಐಗ್ರಾಮ ಚೌಗ್ರಾಮ। ಅಯ್ಯ ನಿನ್ನಯ ಸೀಮೆ
ಅತ್ಯೋನ್ನತದ ಫಲಕ್ಕೊಸರುತಿಹುದು।
ಒಸರುತಿಹ ಲಿಂಗವನು। ವಶಕೆ ತಂದು ಶಿಷ್ಯಂಗೆ
ಹೆಸರಿಟ್ಟು ಕೊಟ್ಟಾತ ಗುರು ಕಪಿಲಸಿದ್ಧ ಮಲ್ಲಿಕಾರ್ಜುನ॥ ॥೯೩೨॥

ಮುನ್ನಾದಿಯಲ್ಲಾದ। ಸನ್ನುತದ ಶಿವಲಿಂಗ
ಇನ್ನು ವಾದಿಸಿದ ವಾದಂಗಳಿಂದ।
ಎನ್ನ ಕರಮನದಲ್ಲಿ । ತನ್ನ ಪದ ಬೆಳಗಿಸುವ
ಉನ್ನತೋನ್ನತ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೩೩॥ [I–೬೭೮]

ಬಿನ್ನಣದ ದೇಹವನು। ತನ್ನಮಯ ಮಾಡಿದನು
ಉನ್ನತೋನ್ನತ ಲಿಂಗವನು ತೋಜಿದ।
ಎನ್ನ ಫಲ ಪದಕೀಗ। ಹೊಂದಲೀಯದ ಹಾಗೆ
ಮಾಡಿದನವ್ವಾ ಎನ್ನ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೩೪॥ [I–೬೦೫]

ಬಲ್ಲಲ್ಲಿ ಲಿಂಗವನು। ಸೊಲ್ಲುಗೊಳಿಸಿದನವ್ವಾ
ಎಲ್ಲಾ ಕಳಜ್ಞನು ತಾನೆನಿಸಿ
ಸೊಲ್ಲಿನ ಬ್ರಹ್ಮಾಂಡ। ಅಲ್ಲಿ ಆವರ್ಚಿಸಲು
ಸಲ್ಲಲಿತ ಜ್ಞಾನಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೩೫॥

ದಿಟ್ಟ ಲಿಂಗವ ತನ್ನ । ಇಷ್ಟ ಕರಸ್ಥಳದಲ್ಲಿಟ್ಟು
ಬಟ್ಟೆಗಟ್ಟಿದನೆರಡು ದೆಸೆದೆಸೆಗಾಗಿ।
ಅವ್ವ ನೀನೊಳಗಾಗಿ। ಸೀಮೆ ಸಾಯುಜ್ಯದಲ್ಲಿ
ಸೊಲ್ಲನಿಟ್ಟಾತ ಗುರುವವ್ವಾ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೩೬॥

ನೇಮಾಕ್ಷರದ ರೀತಿ। ನಾಮ ಪ್ರಸಾದದಲಿ
ಸಾಮ ಮಂಡಲದಲ್ಲಿ ಭವಿಸುತಿಹುದು।
ನಾಮ ನಿರ್ನಾಮ ನಿತ್ಯದ ನಿಜದ ಐಕ್ಯದೊಳು
ಮೂಲ ಲಿಂಗತ್ರಯವು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೩೭॥

ಮುನ್ನಾದಿಯಲಿ ಮೂಱು। ಸನ್ನುತದ ಕಳೆ ಆಱು
ಪನ್ನಗಾಂಗಗೆ ಭೀತಿ ಧಾತು ಹಲವು।
ಎನ್ನ ಪರಸ್ಥಾನದಲ್ಲಿರಿಸಿ। ಸೊಲ್ಲನಿರಿಸಿದನವ।
ಶ್ರೀ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೩೮॥

ಆಱೂಥದೈಕ್ಯವನು। ತೋಱಿಬಲ್ಲಡೆ
ಪರಮ ಜ್ಯೋತಿರ್ಮ್ಮಯನುವಪ್ಪ।
ಪ್ರಾಸಾದಲಿಂಗವನು। ಅಜಾತನಱಿಹಿದ
ಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೩೯॥

ಲೋಕವೀರೇಳುವ ಅನೇಕ ಪರಿಯಿಂ ಭವಿಸಿ
ಆಕಾರದಿಂದದನು ನಿತ್ಯವೆಯ್ದಿ॥
ನಿರಾಕಾರ ಸಂಗಮದ। ಸಾಯುಜ್ಯ ಪದಮೀಱಿ
ಜಾತ ಲಿಂಗೈಕ್ಯ ಗುರು ಯೋಗಿನಾಥಾ॥ ॥೯೪೦॥ [ಅ-೬]

ಶಿವಲಿಂಗವನು ತನ್ನ। ಕರದೊಳಗೆ ಜನಿಯಿಸಿಯು
ಕರುಣವಿತ್ತನು ಮನದ ಮಲಿನವ ಕಳೆದು।
....
ಘನ ಮಹಾ ಜ್ಯೋತಿರ್ಮಯನು ಯೋಗಿನಾಥಾ॥ ॥೯೪೧॥

ಸಂಸಾರದಿರವನು। ಹೊಸೆದು ಬಿಟ್ಟೈ ತಂದೆ
ವಶಮಾಡಿಕೊಟ್ಟೆಯ್ಯೆ। ತ್ರೈಲಿಂಗ ಮೂಲಮತವ।
ಜಗದೀಶ ಕಪಿಲಸಿದ್ಧ। ಮಲ್ಲಿಕಾರ್ಜುನಯ್ಯ
ಭವದೂರನಪ್ಪನೈ ಇಹಪರವೆಲ್ಲಱಲ್ಲಿ॥ ॥೯೪೨॥

ಸಾಲೋಕ್ಯ ಪದ ಮೀಱಿ। ಸಾಮಿಪ್ಯ ಪದ ಮೀಱಿ
ಸಾಯುಜ್ಯ ಪದವೀವ ಆತನನು।
ವಶಮಾಡಿ ತಂದೆನ್ನ। ಕರದೊಳಿತ್ತಾ ಗುರು
ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೪೩॥

ದೇಹ ಸಂಗವ ಕಳೆದು, ವಾಯು ಪ್ರಾಣಿಯ ತೊಱೆದು,
ಕಾಯ ನಿರ್ಮಳತೆಯನು ಮಾಡಿ,
ಎನ್ನ ವಾಯದಲೋನ್ನತದ ವ್ಯಾಕುಲವ ಬಿಡಿಸೀಗ
ಏಕಾಕ್ಷರದ ಭೇದವಱೆಪಿ,
ಎನ್ನ ಈ ನಾಲ್ಕು ಪದವನತಿಗಳೆದ
ಶುದ್ಧಾನಂದಭಾವ ತ್ರೈಲಿಂಗ ಮೂಲವನು ಮಾಡಿ ಭಾವಿಸುತ,
ಸಕಲ ನಿಷ್ಕಲ ತತ್ವ ತುರಿಯವನ್ನು
ಓರಂತೆ ಅಱುಹಿದ, ತತ್ವಾರ್ಥವನ್ನು ಅಱುಹಿದ,
ಆನಂದ ತತ್ವರಿತನು ಶ್ರೀ ಗುರು ಮಲ್ಲಿಕಾರ್ಜುನ. ॥೯೪೪॥

ಚಾತುಷ್ವ ಬ್ರಹ್ಮದಲಿ
ಅನೇಕ ವಿಧ ಸಂಗಮದ
ಸಾಕಲ್ಯ ದೇಹವನು ಕಳೆದು,
ಸತ್ಯಾನಂದ ಏಕಮಯನೆನಿಪ ಭವದೂರನು.
ಆತನನು ತಂದು ಮನಮಧ್ಯದೊಳಿರಿಸಿದ
ಅಜಾತ ಗುರುವೈ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೪೫॥

ಶುದ್ಧಾತ್ಮನನು ಮಾಡಿ। ಪರಿಭವವ ತಪ್ಪಿಸಿದೆ।
ಹೊದ್ದಲೀಯೆ ಎಲೆಯಯ್ಯಾ ಎನ್ನತ್ತ ಸುಖ ದುಃಖವ॥
ಸಧ್ಯ ಮುಕ್ತಿ[ಯ]ನಿತ್ತು। ನಿನ್ನ ಪದ ತೋಱೆಸಿದ
ಅತ್ಯಧಿಕ ನಿರ್ಮಳ ಶ್ರೀ ಗುರು ಮಲ್ಲಿಕಾರ್ಜುನಾ. ॥೯೪೬॥ [I–೩೪]

ಸೋಹಂ ಪದಾಜ್ಞೆಯಲಿ। ಆನತವನಱುಹಿಸದೆ
ದಾಸೋಹಮಿತಿ ಸಂಗಮದೊಳತಿಭಕ್ತಿಯಿಂ।
ಆನಂದ ಬ್ರಹ್ಮಲೋಕವ। ಲೋಕಿಸಿದಿರೆನ್ನ
ಚೇತನವು ಸಕಲಕ್ಕೆ ಶ್ರೀ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೪೭॥

ಆದಿ ಅಕ್ಷರವನು ಆರೈದು ತೋಱೆದಿರಿ,
ಓರಂತೆ ಎನ್ನ ಸದುಹೃದಯನೆನಿಸಿ,

ನಾದಕಳೆಗಳನೆನ್ನ ಆದಿ ಕರಣದೊಳಗಿಟ್ಟ,
ಅಭೇದ್ಯ ಪರಮಾನಂದ ನಿತ್ಯರೂಪನವ್ವಾ,
ಅಭೇದ್ಯ ನಿತ್ಯಾನಂದ
ಶ್ರೀ ಗುರುವಿನುನ್ನತವನಾರು ಬಲ್ಲರು ಹೇಳಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೪೮॥[I–೧೩೩]

ಆನೆತ್ತ ಪರಬ್ರಹ್ಮದಿರವೆತ್ತ ಎಲೆ ಶಿವನೆ,
ನೀವೆತ್ತಲೆನ್ನ ಕರ ನಿವಾಸವು.
ಆನತದ ಶ್ರೀ ಗುರುವಿನಾಜ್ಞೆವಿಡಿದೀಗ
ನಾ ನಿಮ್ಮ ಹೋಬಳಿಯನಜಿತೆನಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೪೯॥[I–೧೫೦]

ಆ ಲಿಂಗನತ್ಯಂತ ಉನ್ನತೋನ್ನತನಪ್ಪ,
ಭಾವಿಸುವ ಭಾವಕ್ಕೆ ಇಂಬುಗೊಡನು.
ಆವಾವ ಪರಿಯಲ್ಲಿ ನೋಡಿ ಕೂಡುವೊಡವನೆ
ನಾಮವಲ್ಲದೆ ರೂಪಿನಿರವು ಇಲ್ಲ.
ಶ್ರೀ ಗುರುವಿನಾಜ್ಞೆಯಲಿ ಶಿಷ್ಯ ಹಸ್ತಕೆ ಬಂದು,
ನಾಮರೂಪಾದ್ಯೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೫೦॥ [I–೧೬೭]

ಜಲವಿಡಿಯ ಪರಿವಿಡಿಯ ಪದವಿಡಿಯ ಭವವಿಡಿಯ
ಒಲವನೊಲ್ಲನು ಅವನು ಕಾಂಕ್ಷೆಯಿಲ್ಲ.
ಗುರುಕರಣದಾಜ್ಞೆಯಲಿ ಪರುಷ ಲಿಂಗವಿಡಿದು
ಒಳ ಹೊಱಗೆಯೆನ್ನದೆ ಭೇದಿಸುವನು.
ಶ್ರೀ ಗುರುವಿನಾಜ್ಞೆಯಲಿ ಸಹರೂಪನಪ್ಪನೈ
ಭಾವಶುದ್ಧನು ಶಿಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೫೧॥[I–೪೧೯]

ಮನದ ಮಂಟಪದೊಳಗೆ। ಅವ ಬಂದು ಕುಳ್ಳಿರಲು
ಮನದಿಂದಲಾನಂದಕರವು ಹುಟ್ಟಿ।
ಒಲಿದು ಅರ್ಚಿಸುವಾಗ। ಫಲ ಪದವ ಬೇಡದೆ
ಛಲಿಯಪ್ಪನೈ ಶಿಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನ॥ ॥೯೫೨॥

ಕರದಲ್ಲಿ ಲಿಂಗವನು ಗುರುಕುಡಲಿಕಾನಂದ
ತನುವಿನೊಳು ಭೇದಿಸುವ ಪರಿಯ ನೋಡಾ.
ಉರುತರವು ಕೈವಲ್ಯಪದ ದೀಕ್ಷತ್ರಯದಿ
ಭವಿಸುವಾತನು ತಾನು ಪರಮಜ್ಞಾನಿ ಶಿಷ್ಯನು
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೫೩॥

ಒಂದ ತೋಱಿದಡದರ। ಹಿಂದು ಮುಂದಱಿದನ್ನೈ
ಸಂದುಗೆಟ್ಟಾನಂದ ಸಕಲನಿಷ್ಕಲದಲ್ಲಿ।
ಮುಂದಿಪ್ಪ ಬ್ರಹ್ಮಾಂಡ।ದಂತರವನು ಅಱಿದಾತ
ಆನಂದಮಯ ಶಿಷ್ಯನೈ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೫೪॥

ಪರಿಶ್ರುತದ ಭಕ್ತಿಯಲಿ। ಸವೆದು ಮಾಡಿದ ಚಿತ್ತ
ತನು ಮುಖದ ಯೋಗಕ್ಕೆ ತಮವ ಕಳುಹಿ।
ಭ್ರಮೆಗೆಟ್ಟ ಸದ್ಭಕ್ತಿ। ಅನುವನು ಅಱಿದಾತ
ಕರುಣಾಕರನು ಶಿಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೫೫॥

ಏಕೈಕನೆಂ................................[೧]
ಅನೇಕ ವಿಧ ಸದ್ಭಕ್ತಿ ಪದವನಱಿದು।
ಆ ಗುರುವಿನಾ ಮನದ। ಮತಿಯ ಬೆಳಗುವ
ನಿರ್ಮಳಾಂಗನು ಶಿಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೫೬॥

ನೀರಪಟ್ಟಣದೊಳಗೆ। ನಿರವಯವ ತಂದಿರಿಸಿ
ತೋಱಿದನು ಒಂದು ಸೂಚನೆ ಮಾತ್ರವ।
ಆನಂದ ಗುರುವಿನ। ಆಜ್ಞೆ ಮೀಱಿದಡೆ
ಗುರುವ ಪಾಲಿಸಿದನ್ನೈ ಶಿಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೫೭॥

೧–೧ ಮೂಲದಲ್ಲಿ ಸ್ಥಳ ಬಿಡಲಾಗಿದೆ.

ಇರಿಸಿದಂತೆ ಇಪ್ಪ। ಬಳಸ ಬೊಮ್ಮದ ಮಾತ
ಎಳಸುವನು ಭಕ್ತಿ ಆಱಱ ಸೀಮೆಯ।
ತರಿಸುವನು ಘನವೆನಿಪ। ಮನದ ಮಧ್ಯದ ನಡುವೆ
ಒಳಗಿಟ್ಟ ಶಿಷ್ಯನೈ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೫೮॥

ಅನುಪಮನೆ, ಅಪ್ರಮೇಯನೆ, ನಿತ್ಯತೃಪ್ತನೆ,
ಇರವು ನಿನಗೆಲ್ಲಿ ಹೇಳೆಂದು ನುಡಿದು,
ಪರೀಕ್ಷಿಸುವ ಇರವಿಲ್ಲ ಇತ್ತ ಬಾಯೆಂದು
ಲಿಂಗತ್ರಯವ ಕರದಲ್ಲಿ ಪಿಡಿದು,
ಒಳ ಹೊಱಗುಯೆಂದೆನ್ನದಾನತದ ನಿಷ್ಕಲದ
ಪರಿಯಱುಹಿದ ಶಿವನು ಶಿಷ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೫೯॥

ಸಕಲ ಸಾದಾಖ್ಯದಲಿ । ಮುಖಲಿಂಗವೆಂದಿರಿಸಿ
ಸಕಲಲಿಂಗಕ್ಕೆ ಸನುಮತವಾದನು।
ಮುಖಲಿಂಗ ತ್ರೈಲಿಂಗ।ವೆಂದು ಅರ್ಚಿಸಿದಾತ
ಭವದೂರ ಶಿಷ್ಯನ್ಕೆ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೬೦॥

ಆಧಾರದಿಂದಿಡಲು। ವೇಧೆವರಿಯಿತ್ತಯ್ಯ
ಸಾಧಿಸುತೈತೆ ಸಕಲ ನಿಃಕ್ರಿಯವ।
ಆದಿ ಅಕ್ಷರವನು। ಭೇದಿಸಿತ್ತಡೆ ಅದನು
ರೂಪು ಮಾಡಿದ ಶಿಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೬೧॥

ಸಂಗಸುಖದಿಂದಲದು। ಸಂಗವಾಗದು ನೋಡ
ಮಂಗಳಾಂಗನ ಬೆಳಗು ಚಿತ್ರತರವೈ।
ಆಕಾಶವಡೆಯೆಂದ।ಡದ ಹಿಡಿದನಾಜ್ಞೆಯಿಂ
ಸಾಹಸಿಗನೈ ಶಿಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೬೨॥

ಇದ್ದೆಸೆಯನಜಿದಾತ । ತತ್ವವಾದನು ತನ್ನ
ಸಪ್ತ ಧಾತುವನು ಗುರುವಿಗಿತ್ತು।
ಮತ್ತೆ ಕಳೆಯೆಂದಡೆ। ತತ್ವಪದ ಮೀಜಿದನು
ಸತ್ಯಶುದ್ಧನು ಶಿಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೬೩॥

ಮಂಗಳಾಂಗನ ಬೆಳಗು। ಹೊಂಗದಿಹ ಭೇದವನು
ಜಂಗಮ ಸ್ಥಾವರದೊಳೇಕವೆಂದು।
ಲಿಂಗ ಸಂಗದಲಿದ್ದು। ಮಂಗಳ ಪ್ರಸಾದ
ತೈಲಿಂಗ ಮೂಲನು ಶಿಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೬೪॥

ಮುನ್ನಾದಿಯಲಿ ಆದ ಸನ್ನುತದ ವಸ್ತುವನು
ಬಿನ್ನಾಣದಿಂದಲದ ತಂದು ಕುಡಲೂ
ಇನ್ನಿದನು ಇರಿಸಲ್ಕೆ ಠಾವಾವುದೆಂದು
ಮನ ತನ್ನಮಯ ಮಾಡಿದಾ ರಾಜನ ಶಿಷ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೬೫॥

ರಾಜಲಿಂಗವ ತಂದು। ಪೂಜೆ ಕರದೊಳಗಿಟ್ಟು
ಭೇದಿಸಲಿ ಬಾರದದ ಆನಂದವ।
ಅಭೇದ್ಯಕರನಿತ್ಯವೆಂದಾ। ಗುರುವ ಪಾಲಿಸಿದ
ಅಭೇದ್ಯ ಶಿಷ್ಯನು ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೬೬॥

ಸುಚಿತ ಕರದಲಿ ಗುರುವ। ಪ್ರಾಣಾಂತದಲಿ ಚರವ
ಭೇದಾದಿ ಭೇದದಲಿ ಶುದ್ಧಲಿಂಗವ ಮಾಡಿ।
ಏಕವಿಕವೆಂದು ಅರ್ಚಿಸಿ। ಪ್ರಸನ್ನ ಪ್ರಸಾದವ ಕೊಂಡು
ಗುರುವಿನ ಪೂರ್ವಾಶ್ರಮದ ಕಳೆದ ಶಿಷ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೬೭॥

ಕರುಣದಿಂದವನ।ರಕ್ಷಿಸಿಯಾಸೆಯಂ
ಭವನಿವಾಸನೆನಲು।

ಮಾಟ ಶುದ್ಧಲಿಂಗವನಿತ್ತ ಗುರು।
ಪರಂಜ್ಯೋತಿಯೈ ಯೋಗಿನಾಥಾ॥ ॥೯೭೮॥

ಶುದ್ಧ ಲಿಂಗವನು ಪ್ರಸಿದ್ಧ ಕರದಲಿಟ್ಟು,
ಶುದ್ಧ ಸಿದ್ಧ ಪ್ರಸಿದ್ಧ ಪಾವನಾಂಗನ ಮಾಡಿ,
ಹೊದ್ದಿದ ಪ್ರಪಂಚ ಕಳೆದು ನಿತ್ಯನೆನಿಸಿ,
ಸಧ್ಯಮುಕ್ತನ ಮಾಡಿ ಎನ್ನ ಕೈವಲ್ಯ ಪದಕ್ಕಿರಿಸಿದಡೆ,
ಆತನನು ಆನತಾಕ್ಷರದಲ್ಲಿ ಅಜೆಪಿದಡದ ನಿಸ್ತಾರವೆಂದು,
ಆ ಗುರುವಿನ ಜನ್ಮಕರ್ಮ ನಿವೃತ್ತನೆಯ ಮಾಡಿದಾತ ಶಿಷ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೭೯॥ [I–೭೪೨]

ಆತ ಬಂದಾನಂದ ಅಕ್ಷರ ದೀಕ್ಷೆಯನು
ಗೋಪ್ಯ ತರದಿಂದದನು ಸಂಭವಿಸಲು,
ಖ್ಯಾತ ಮೂವತ್ತಾಱು ಬೆರಸಿ ಬೆರೆಯದ ತತ್ವ,
ಆ ಗುರುವ ಪಾಲಿಸಿದ ಶಿಷ್ಯ ಜ್ಯೋತಿರ್ಮಯನೈ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೭೦॥

ತನುವೆಂಬ ಹೇಳಿಗೆಗೆ ಮನಸರ್ಪನಾವರಿಸಿ,
ಇನಿದು ಬಂದಡೆ ಅದಕ್ಕಿಂಬುಗೊಡದೆ,
ಇರುತಿರ್ಪ ಸರ್ಪನನು ತೆಗದು
ಶಿವಲಿಂಗವನು ನೆಲೆಗೊಳಿಸಿದ ಶ್ರೀ ಗುರುವೆ ಶರಣು ಶರುಣೆಂಬ,
ವಾಕ್ಯಂಗಳಲ್ಲಿ ಆಕಾರ ಚತುಷ್ಟಯಮಾನಂದದಲ್ಲಿರಿಸಿದ
ಏಕೋ ರುದ್ರ ಶಿಷ್ಟ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೭೧॥

ನರವೇಷ ತಾನೆತ್ತ, ಘನಚರದ ಒಲವೆತ್ತ,
ಮನಬುದ್ಧಿ ಚಿತ್ತ ಅಹಂಕಾರಂಗಳ ಹರಿಯಲೀಯದೆ,
ಉರುತರನು ಮಾಡಿದನು ಶ್ರೀ ಗುರು ತಾನು.
ಆ ಗುರುವಿನಾಜ್ಞೆಯಲಿ ಆನಂದ ಸ್ಥಳವಜೆದು, ನೀತಿ ನಿಜ ನಿಂದಾತ
ಗುರುವಿನ ಆಜ್ಞೆವಿಡಿದಾ ಆತನನು

ಅತ್ಯಂತ ಜ್ಯೋತಿರ್ಮ್ಮಯನು ಎಂದು,
ಅಜಾತ ಶಿಷ್ಯನು ಗುರುವೆ ಯೋಗಿನಾಥ. ॥೯೨೨॥

ತನುಮಧ್ಯ ಮಂಟಪದ ಒಳಗೆ ದಾಯಂಗೊಳಿಸಿ,
ತನು ಮಲತ್ರಯವ ದಹಿಸಿ,
ಜ್ಯೋತಿರ್ಮ್ಮಯ ಲಿಂಗವನು ತನ್ನ ಮನದ ಕೊನೆಯಲ್ಲಿತ್ತ ಗುರು,
ಅದ ನಿಸ್ತಾರವೆಂದು ಹಿಡಿದ,
ಆದಿಯ ಇದಱಲ್ಲಿ ಆಜ್ಞಾವಿಲೋಕನದ ಆನಂದ ಶಿಷ್ಯನು,
ಅಪ್ರಮಾಣನವ್ವಾ ಕಪಿಲಸಿದ್ಧ ಮಲ್ಲಿಕಾರ್ಜುನ. ॥೯೨೩॥

ಪರಿಪರಿಯ ಬಿಂದುಗಳ। ಒಳಗೆ ಅಡಗಿಸಿದನು
ಜಲವ ಬಿತ್ತಿಸಿ ಮಳಲಮಯನಾದನು।
ಮಳಲ ದೀಪ್ತಿಯ ತಾನು। ಹಿರಿದು ಪರಿಯಲಿ ಭವಿಸಿ
ಗುರುಪಾಲಕನು ಶಿಷ್ಯನೈ ಯೋಗಿನಾಥಾ॥ ॥೯೨೪॥

ಅಪ್ರಮಾಣನು ಗುರು। ಅನಪ್ರಮಾಣನು ಶಿಷ್ಯ
ಅತ್ಯತಿಷ್ಠಾನಂದ ಜ್ಯೋತಿರ್ಮಯ।
ಇಂತಪ್ಪ ಗುರುವಿನ। ಆನಂದ ಮಠದೊಳಗೆ
ನಿಶ್ಚಿಂತನಾದ ಶಿಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೨೫॥

ನರವೇಷವನು ಕಳೆದು। ಶಿವವೇಷವನು ಮಾಡಿ
ಉರುತರವು ಪ್ರಸನ್ನ ಪ್ರಾಸಾದವ।
ಪರಿಯನಱುಪಿ ಭವ।ತಪ್ಪಿಸಿದ ಗುರು
ಅದ ನಿಸ್ತಾರವೆಂದಾತ ಶಿಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೯೨೬॥

ಗುರುಶಿಷ್ಯ ಸಂಬಂಧ। ಜಲ ಹಾಲಿನಂತಿಕ್ಕು
....
ಜಲವು ಹಾಲೊಳಗೆ ಬೆರಸಿ। ರೂಪುಗೆಟ್ಟಂತೆ।
ಗುರುಶಿಷ್ಯನೊಂದಕ್ಕು ಯೋಗಿನಾಥಾ॥ ॥೯೨೭॥

ನಾನಾ ಭವದಿ ಬಂದ। ಕೀಟಕ ನರನೆನ್ನ
ತನ್ನಾಕಾರವನು ಮಾಡಿ ನಿತ್ಯವಿತ್ತು।
ಅನೇಕ ವಿಧದಿಂದೆನ್ನ। ರಕ್ಷಿಸಿದ ಶ್ರೀ ಗುರುವಿ
ನಾಜ್ಞೆಯಿಂ ಬದುಕಿದೆನು ಯೋಗಿನಾಥಾ॥ ॥೯೭೮॥

ಅನಂಗಸುಖದಲ್ಲಿ। ಹೊಂದುವವನ ತಂದೆನ್ನ
ಲಿಂಗಸುಖದಲ್ಲಿ ಕರ ನಿತ್ಯನೆನಿಸಿ।
ಮಂಗಳ ಪ್ರಸಾದ। ಆನಂದ ಪದವಿತ್ತ
ನಿಸ್ಸಂಗ ಗುರುವಿಂ ಬದುಕಿದೆನು ಯೋಗಿನಾಥಾ॥ ॥೯೭೯॥

ವೇದ ಹಲವಱಿಯದ। ಆದಿಮುಖಶೂನ್ಯನು
ಭೇದಿಸಿಯೆ ತಂದೆನ್ನ ಕರದಲಿತ್ತು।
ಆದಿ ಅಕ್ಷರದಲ್ಲಿ। ಹಿಂಗದಿರುವೆಂದೆನ್ನ
ಅನೇಕ ವಿಧದಿಂ ಪೇಳಿದಾತ ಗುರು ಯೋಗಿನಾಥ॥ ॥೯೮೦॥

ಆ ಗುರುವಿನಾ ಮಾತು। ಎನಗೆ ಕರಣ ಸೊಗಸಾಗಿ
ಧಾತು ಸಪ್ತಕಗಳನು ಮೀಱಿ ಮೀಱಿ।
ಆತನತ್ಯಂತ ಅನು।ಪಮದಲಿರಿಸಲ್ಕೆ
ಮೀಱಿದಂತಿದ್ದನೈ ಯೋಗಿನಾಥಾ॥ ॥೯೮೧॥

ಆ ಪದವು ನಿಸ್ತಾರವೆಂದು ಅನುಪಮನಾದೆ,
ಆ ಪದವು ನಿಸ್ತಾರವೆಂದು ನಿತ್ಯಾನಂದನಾದೆ,
ಆ ಪದವು ಭವಪಾಶ ದೂರವೆಂದಱಿದಾನು,
ದೀಪ ದೀಪದೊಳಗೆ ಭವಿಸಿದಂತೆ
ಜ್ಯೋತಿರ್ಮಯನು ಬಂದು ಮುಟ್ಟಲ್ಕೆ
ಆ ಶುದ್ಧಜ್ಯೋತಿರ್ಮಯನುವಾದೆ ಯೋಗಿನಾಥಾ. ॥೯೮೨॥

ಪರುಷ ಶ್ರೀಗುರು ಬಂದು। ಒರೆಸಿ ನೋಡಿಯು ಎನ್ನ
ಹರುಷದಿಂ ಪಂಚಾಕ್ಷರಿಯ ಮನದ ಮಧ್ಯದಲಿ।

ಬರೆದು ಘನತರ ಶ್ರೀ। ಗುರುವಿನಾಜ್ಞೆಯನು
ಮೀಱದೆ ಆ ಶುದ್ಧಪರುಷಾಂಗನಾದೆನ್ನೈ ಮಲ್ಲಿಕಾರ್ಜುನಾ॥ ॥೯೮೩॥

ಬಲ್ಲಹನೆ ನಿನ್ನಯ। ಸೊಲ್ಲಿನ ಕಥದಿಂದ
ಎಲ್ಲ ಕಳೆಗಳೊಳಗೆ ನಿಪುಣನಾದೆ।
ಈ ಬಲ್ಲಿಹ ಮೋಹ ಮಲ। ಮದವ ವಿದಾರಿಸಿದೆ
ಸಲ್ಲಲಿತ ಗುರುವಿನಾಜ್ಞೆಯಿಂ ಯೋಗಿನಾಥಾ॥ ॥೯೮೪॥ [ಆ-೩೩]

ಮುಟ್ಟಿ ಮುಟ್ಟುವನಲ್ಲ,
ಮುಟ್ಟದೆಯು ಮುಟ್ಟುವನು,
ಹುಟ್ಟು ಹೊಂದೆಂಬುದನು ಕಳೆದು ಕಳೆದು,
ನಿಷ್ಠೆಯಿಂ ಗುರುವಿನ ಬಿಗಿದು ಹಿಡಿಯಲಿಕಾ ಗುರು,
ಹುಟ್ಟು ಹೊಂದಿಲ್ಲದೆ ಹೋಗೆಂದ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೮೫॥

ಕುಂಡಲಿ ಸ್ಥಾನದಲಿ। ದಂಡನಾಳದ ನಡುವೆ
ಉಂಡುಂಡು ಹೋಹವರಿಗಿಂಬು ಇಲ್ಲ।
ಉಣ್ಣದೆ ಹುಟ್ಟದೆ। ಹೊಂದದೆ ಹೋಹಡವರಿಗೆ
ಮನ್ನಣೆಯ ಆಶ್ರಯವು ಯೋಗಿನಾಥಾ॥ ॥೯೮೬॥[ಸಂ-೧೦೬]

ಸೀಮೆ ಸಂಯೋಗದಲ್ಲಿ। ಆನಂದದಕ್ಷರವು
ಸಾಮ ಬಣ್ಣವು ಆಗಿ ಒಪ್ಪುತಿಹುದು।
ನಾಮು ನಿಜ ನಿಂದಲ್ಲಿ ನಿಸ್ಪೃಹನು ತಾನಪ್ಪ
ಆ ಬಣ್ಣನಿಬ್ಬಣ್ಣ ಯೋಗಿನಾಥಾ॥ ॥೯೮೭॥

ಬಣ್ಣ ಮೂವತ್ತಾಱು। ಹಣ್ಣಿದವು ನಿಗಮದಲಿ
ಅಣ್ಣದಕ್ಷರವೆರಡನಱಿಯರಾರು।
ಮುಕ್ಕಣ್ಣ ನಿನ್ನ ನೇ।ಮಾಕ್ಷರವನಱಿದಾತ
ತಪ್ಪದೆ ನೀನಕ್ಕು ಯೋಗಿನಾಥಾ॥ ॥೯೮೮॥[ಅ-೧೩೭]

ಅಜಲೋಕದಿಂದತ್ತಲಾದಿಯೈದಱ ಪೀಠ
ಅದರ ಮೇಲಿಕ್ಕಕ್ಷರಂಗಳೆರಡು।
ಸದಮಲ ಜ್ಞಾನ ಪ್ರಕಾಶ ಪ್ರಭೆಯಲ್ಲಿ
ಒದವಿದಾತನು ಸಿದ್ಧ ಯೋಗಿನಾಥಾ॥ ॥೯೯॥

ಮೂಱು ಮುನ್ನಾದಿಯಲಿ। ತೋಱಿಪ್ಪ ಸೀಮೆಯಲಿ
ಮೀಱಿಪ್ಪುದದು ಮತ್ತೆ ಧಾತವೀಚು ಮಾಡಿ।
ಆನಂದ ಸ್ಥಾನದಲಿ। ಅನಿಮಿಷ ಪ್ರಭೆ ಮುಟ್ಟಿ
ಧಾತು ಸಿದ್ಧವು ಬಣ್ಣ ಲೋಪ ಯೋಗಿನಾಥಾ॥ ॥೯೦॥

ಅದಱ ಮಧ್ಯದಲೀಗ ಕೊಳನಾಕೃತಿಯ ರೀತಿ,
ಅದಱೊಳಗೆ ವಳೆಯ ಹದಿನಾಲ್ಕ ರಚಿಸಿ,
ತೆಹಿಲ್ಲದ ಸೀಮೆ ತಾನು ತಾನಾಗಿ,
ಅದಱೊಳಗೆ ಅತ್ಯಂತ ಮಲಮದವ ತೊಳೆಯಲ್ಕೆ
ಶಿವಪದವು ತನಗಕ್ಕು ಯೋಗಿನಾಥಾ. ॥೯೧॥

ಪಟ್ಟಣ ಪ್ರಭೆಯಲ್ಲಿ। ಸೃಷ್ಟಿಯಾಕೃತಿ ಕಮಲ
ಮೆಟ್ಟದೆ ಮೆಟ್ಟುವನು ಯೋಗಿ ತಾನು।
ಬಟ್ಟೆಯಿಬ್ಬಟ್ಟೆಯನು। ಕಟ್ಟ ಬಲ್ಲಾತನು
ಸುಖಿಯಾತ ಅನುಭವದ ಯೋಗಿನಾಥಾ॥ ॥೯೨॥

ಇಹಪರವುಯೆಂಬಲ್ಲಿ। ಎರಡು ದೆಸೆಗೆಡುವನ್ನೈ
ಎಯ್ದಲೀಯನು ಸಕಲ ಪ್ರಾಪಂಚನು।
ಸದಮಲ ಜ್ಞಾನಾನುಭವ ನೆಲೆಯಪ್ಪನು
ಸರ್ವಾಂಗಶಿವ ಯೋಗಿನಾಥಾ॥ ॥೯೩॥

ಎಲ್ಲಱೊಳಗೆಯು ತನ್ನ। ಸೊಲ್ಲ ನಿಸ್ತರಿಸಿದನು
ಬಲ್ಲಿದನು ಆ ಗುರು ಭವಕ್ಕೆ ಬಾರ।
ಸೊಲ್ಲ ಮನ್ನಿಸಿದವರನು। ತನ್ನ ಪದವನೆ ಮಾಳ್ಪ।
ನಿಲ್ಲಲೀಯನು ಅನ್ಯಕ್ಕವರ ಯೋಗಿನಾಥಾ॥ ॥೯೪॥

ತನುಮನದ ಮಂಟಪದ ಹೊಳಲಾಕೃತಿಯ ಬೆಟ್ಟ,
ತನು ಮಧ್ಯವೈದಱಲಿ ಬೀಜ ಭವಿಸಿ,
ಹಿರಿದಪ್ಪ ವೃಕ್ಷಮದು, ಅದಱ ಶಾಖೆಯು ತಾನು,
ಸಕಲ ಬ್ರಹ್ಮಾಂಡವನು ಅವಗ್ರಹಿಸಿ,
ಮೇಲೆ ಹಂಬಲಿಸುತ್ತೈತೆ.
ತುದಿ ಪದದ ಮೂಲಕ್ಕೆ ನಾಶಮಾಡಿದ
ಪದವ ಬಯಸಿರ್ಪಾ ವೃಕ್ಷ ಯೋಗಿನಾಥಾ. ॥೯೯೫॥

ನಾದ ಬಿಂದುವಿನಲ್ಲಿ। ಆದಿಯಕ್ಷರ ಸೀಮೆ
ವೇಧೆಯಿಂದಲಿ ಅದನು ತಿಳಿದು ನೋಡಾ।
ಆದಿ ಅಕ್ಷರದ ಆ।ನತದ ಬಯಕೆಗೆ
ಪಂಚಾಕ್ಷರಿ ನಿಚ್ಚಣಿಗೆಯ್ಕೆ ಯೋಗಿನಾಥಾ॥ ॥೯೯೬॥[ಅ-೧೩೪]

ಇಂತು ಗುರುಶಿಷ್ಯ। ಸಂಬಂಧನು ರಚಿಸೀಗ
ನಿಶ್ಚಿಂತನಾದೆನ್ನೈ ಬಸವ ತಂದೆ।
ಅಂತಕಾಂತಕನೆಂಬ। ಅನ್ಯೋನ್ಯಕಾನೀಗ
ಪಂಚಬ್ರಹ್ಮನುವಾದೆ ಶ್ರೀ ಗುರುವೆ ಯೋಗಿನಾಥ॥ ॥೯೯೭॥ [ಬ-೩೪]

ಗುರು ಶಿಷ್ಯಾನಂದವ ಮನಸಿಗೆ ಬಂದಂತೆ
ಹೇಳುವೆನು ಎಲೆ ಅವ್ವಾ,
ಬಾಲನ ಮಾತಿಗೆ ಮಾತೆಪಿತರಿಗೆ ಪ್ರೀತಿಯಪ್ಪಂತೆ
ಎನ್ನ ಮಾತ ಆಲಿಸುವವರು ಶಿವಭಕ್ತರು,
ಎನ್ನ ಮಾತಾ ಪಿತರು ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೯೯೮॥

[೧]ಲಿಂಗೋದಯ:

ತನುಮನದ ಮಧ್ಯದಲಿ। ಬೆಳಗುತಿಪ್ಪುದುವೊಂದು
ಘನತರದ ದೀಪ ಶಾಖಾದಿಪರಿಯ।

---

೧ + ಶ್ರೀಗುರುಭ್ಯೋನಮಃ(ಮೂ)

ತೊಳಗಿ ಬೆಳಗುವ ನಿತ್ಯ। ಘನತರಾಕ್ಷರದಲ್ಲಿ।
ಶಿವಲಿಂಗ ಜನನ ಯೋಗಿನಾಥ॥ ॥೯೯॥

ಶ್ರೀ ಗುರುವೆ ನಿಮ್ಮಯ। ಶ್ರೀ ಹಸ್ತದೊಳಗೊಂದು
ನಿರೀಕ್ಷಣೆಯ ಮಾಡಲ್ಕೆ ಭವಿಸುತಿರ್ಪ।
ಜ್ಞಾನಪ್ರಕಾಶ ರಂ।ಜನೆಯ ಆದ್ಯಂತದಲಿ
ಶೂನ್ಯಲಿಂಗನು ದೃಷ್ಟ ಯೋಗಿನಾಥಾ॥ ॥೧೦೦೦॥[ಅ-೪೪]

ಅನೇಕ ಕಿರಣಂಗಳಿಂ।ದೊಪ್ಪಿಪ್ಪ ಲಿಂಗವನು
ನಾಮಾಕ್ಷರದ ಮಱೆಯ ಒಳಗೆ ಮುಸುಕಿ।
ಆ ಶಿಷ್ಯನಾ ತೆರೆಯ।ತೆಱೆದು ತೋಱಿಯೆ ಮರಳಿ
ಅಜೆಯಬಾರದು ಶೂನ್ಯ ಯೋಗಿನಾಥಾ॥ ॥೧೦೦೧॥

ಗುರು ಶಿಷ್ಯ ಸಂಬಂಧ।ವಱಿಯಬಾರದು ನೋಡ
ಜನಿತವಿಲ್ಲದ ನಿಜಯ ರೂಪನಾ।
ಜನಿಸೆಂದಡಾತನದ ಗುರುಕರದಿ ಜನಿಸಿದ
ಪರಲಿಂಗ ಪರಿಯಿನಿತು ಯೋಗಿನಾಥಾ॥ ॥೧೦೦೨॥[ಅ-೫೦]

ಆದಿಯಾಧಾರದಲಿ। ಆದಿಲಿಂಗವುಯಿರಲು
ಆಲಿಂಗವನು ಹೊತ್ತ ಮಾತೆ ಗುರುವೈ।
ಶ್ರೋತೇಂದ್ರಿಯಂಗದಲಿ। ಭವಿಸಿ ನಿಷ್ಕಳನಾದ।
ಅಜಾತ ಶಿವ ಜನನವೈ ಯೋಗಿನಾಥ॥ ॥೧೦೦೩॥ [ಅ-೪೬]

ಅಂದುವಾದಿಯಲಾದ ಆನಂದ ಬೀಜವನು,
ತಂದೆನ್ನ ಕರಭೂಮಿಯಲ್ಲಿ ಬಿತ್ತಿ,
ಅಂಕುರವು ಮೂಱಾಗಿ ಫಲವು ಅಱಾಗಲ್ಕೆ,
ಚಿಂತೆಗೆಟ್ಟವು ಆಱ ಆಱ ಮೀಱೆ,
ನಿಶ್ಚಿಂತ ಪದದಲ್ಲಿ ಲಿಂಗೋದಯವಾಗೆ,
ಸಚ್ಚಿದಾನಂದ ತಾ ಯೋಗಿನಾಥಾ. ॥೧೦೦೪॥ [ಅ-೮೧]

ಅನುಪಮನೆ ಅಪ್ರಮೇಯನೆ
ನಿಗಮಕಭೇದ್ಯ[1][ವ][1]ನು ಘನತರದ ಆನಂದ ಪರಿಯನಱುಹಿ,
ಉರುತರವು ಶುದ್ಧ ತಾತ್ಪರಿಯದಲಿ ಪರಿಭವಿಸಿ,
ಲಿಂಗವ ನೆಲೆಯನಱುಹಿದ
ಅನುಪಮಂಗಾನೇನ ಸರಿಯೆಂಬೆ? ಯೋಗಿನಾಥಾ. ॥೧೦೦೫॥

ನಿತ್ಯ ನಿರುಪಮನೆ ಶಿವ। ಭಕ್ತ ಕಾರಣ ನೀನು
ಹುಟ್ಟಿಲ್ಲದವ ಮರಳಿ ಹುಟ್ಟಿದೆಯೆಲ್ಲೈ।
ಬಟ್ಟೆಗೆಟ್ಟಾತನಿ। ಬ್ಬಟ್ಟೆಯನು ಕಟ್ಟಲ್ಕೆ।
ಕರವೆಂಬ ಹೊಟ್ಟೆಯಲಿ ಹುಟ್ಟಿದ್ಕೆ ಯೋಗಿನಾಥಾ॥ ॥೧೦೦೬॥[ಅ-೫೪]

ಜನಿತವಿಲ್ಲದ ನಿಜ। ಸ್ವಯವೆಂಬ ಹರನೆ ನೀ
ಜನಿಸಿದೆಯಲ್ಲೈ ಗುರುವಿನಾನಂದ ಕರಗಳಿಂದ।
ಜನಿಸಿದ ಜನನವನು। ಅಱಿದ ಮಹಾಂತರಿಗೆ
ಜನನ ಮರಣಗಳಿಲ್ಲ ಯೋಗಿನಾಥಾ॥ ॥೧೦೦೭॥[ಸಂ-೭೦]

ತನುಮಧ್ಯ ವಿದಳದ ಒಳಗೆ
ಭಾಸ್ಕರ ಭವನೆ ಬೆಳಗುತಿಪ್ಪುದು.
ಲೋಕ ಹದಿನಾಲ್ಕಱ ಅಜ ಲೋಕದೊಳಗೆ ತಾ ಬೆಳಗು,
ಪ್ರಜ್ವಲ್ಯದ ಪ್ರಭೆಯ ಮಂಟಪವು ತಾ ಎರಡಾಗುತ
ದಿವರಾತ್ರೆವೊಡಗೂಡಿ ಭರಿತ ಪರಿವಳವಾಗೆ,
ವಳೆಯ ಹದಿನಾಲ್ಕಱೊಳು ಬೆರಸಿಪ್ಪ ಜ್ಯೋತಿಯನು
ತಿಳಿದು ನೋಡಿದಡತ್ಯಧಿಕ ಸರ್ವಜ್ಞನೆನಿಪ.
ಈ ಲೋಕವಾಲೋಕ ಏಕ ಮಾಡಲಿಕಾತ
ಆಕಾರ ಚತುಷ್ಟಯವ ಮೀಱಿದಾತ.
ವರ್ಣಾಶ್ರಯವ ಮೀಱಿ
ನಿರ್ಮಳಾನಂದದೊಳು ಸೊಮ್ಮುಗೆಟ್ಟಾತ ಶಿವ
ಕಪಿಲಸಿದ್ಧ ಮಲ್ಲಿಕಾರ್ಜುನ. ॥೧೦೦೮॥[।-೪೫೩]

೧-೧ ನ (ಮೂ)

ಸಕಲ ನಿಷ್ಕಲದೊಳಗೆ
ಮುಖಲಿಂಗ ಮೂಱಱಲಿ ಕುಱುಹುಗೆಟ್ಟಿಪ್ಪುದಾ
ಸಕಲದಲಿ ಅಖಿಳ ಲೋಕಾರಾಧ್ಯ
ಗುರುಕರುಣದಿಂದಲಾ ತ್ರೈಲಿಂಗವೊಂದಾದೆ
ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಗುರುವಿನಾನಂದದಿಂ. ॥೧೦೦೯॥[I-೭೬೪]

ತ್ರೈಲಿಂಗಕಾನಂದ। ಬೀಜಮಂತ್ರವು ನೀನು
ತ್ರೈವಿಧ್ಯ ಮೂಱಾಱು ವಿಧ ನೀನೆ।
ತ್ರೈಲಿಂಗಮೂಲಕ್ಕೆ। ಮುನ್ನಾದ ಮೂಱೊಂದು
ಪ್ರಸಾದಲಿಂಗ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೧೦೧೦॥ [I-೪೭೬]

ಆಱು ಸೀಮೆಯೊಳಗೆ ಅನ್ಯವಪ್ಪುದೆ ಹೇಳ,
ಆಱಱಿಂದಱಿವೆ ನಾ ಐಕ್ಯಪದವ.
ಮೂಱೊಂದು ಮಾಡಿದ,
ಅನು ಮುಮ್ಮಲಕೆ ದೂರವ್ಕೆ.
ಮೂವತ್ತಾಱ ಮೀಱುವೆನಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೧೧॥

ಗಾಱಪ್ಪ ವರ್ಗವನು। ತೋಱಬಲ್ಲಡೆ ಯೋಗಿ
ತೋಱಿ ತೋಱಿಯೆ ಮೀಱಿ ಸಾದಾಖ್ಯದ।
ದೇಹ ಪ್ರಪಂಚವ।ಯೆಯ್ದಿಯೆಯ್ದದ ಆತ
ಆನಂದ ಶಿವಯೋಗಿ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೧೦೧೨॥

ಕರದಲ್ಲಿ ಶಿವಲಿಂಗ
ಉದರದಲ್ಲಿ ಅಗ್ನಿ ಪರಿಯಂತೆ ಪ್ರಾಸಾದಲಿಂಗ ಭವಿಸಿ,
ತನುಮಲತ್ರಯವನು, ಘನಪಾಶವರ್ಗವನು,
ನೆನಹಿಂದ ಸುಟ್ಟುದದು ಪರಿಯಂತರವುಯೆಯ್ದಿ.
ಸಕಲವನು ತೋಱುವಾ ಅಪ್ರಮಾಣ ಪ್ರಸಾದಲಿಂಗ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೧೩॥

ದೀಪ್ತಿ ಮೂರ್ತಿಗಳೊಳಗೆ। ಮೂಲವಪ್ಪಡೆ ತಾನು
ರೀತಿ ಧಾತುಗಳನು ಅವಗ್ರಹಿಸಿತ್ಕೆ।
ಮಾತಿನ ಬ್ರಹ್ಮಾಂಡ। ಮಾತೆಯಾಗಲಿಕಾನು
ನೀತಿ ನಿಜನೆಂದನ್ನೈ ಕಪಿಲಸಿದ್ಧ ಮಲ್ಲಿಕಾರ್ಜುನಾ॥ ॥೧೧೧೪॥

ಆಧಾರಸ್ಥಾನದಲಿ ಅನುಮಿಷ ಲಿಂಗವನು
ವಾಯದ ಕರದಲ್ಲಿ ಭೇದಮಾಡಿ,
ಆಧಾರ ಸ್ಥಾನದಲಿ ಒಳಹೊಕ್ಕಡದು ತಾನು
ವಾಯಾಕರ ನಿತ್ಯಕರವಯ್ಯಾ.
ಕಪಿಲಸಿದ್ಧ ಮಲ್ಲಿಕಾರ್ಜುನಾ
ಸೋಹಂ ಪದಾರ್ಥಕ್ಕೆ ಬೀಜ ತಾನು. ॥೧೧೧೫॥

ಹರುಣಿ ಹರುಣನನೆ ಜರೆದು ಮಱಿವಂತೆ
ಎನ್ನಯ ಕರಣ ನಿಮ್ಮನೆ ನೆನೆದು ನೀವಾದವೈ.
ಈ ಪರವಶದ ಕೂಟಕ್ಕೆ ಉರವಣಿಸಲಾನೀಗ
ಕರಣೇಂದ್ರಿಯವಱಿತ ಭೂಮಿ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೧೧೬॥

ಕರಣ ಕಂದೆಱಿವುದನು ಆರಯ್ಯ ಅಱಿವರು?
ಕರಣೇಂದ್ರಿಯಂಗಳಱಿತ ನಿತ್ಯರಲ್ಲದೆ.
ನೆನಹಿನ ಬ್ರಹ್ಮಾಂಡವೊಳಕೊಂಡ ಸೀಮೆಯನು
ತನು ಮಧ್ಯಕರದಲಿ ಕಂಡೆ.
ಪ್ರಸಾದ ತ್ರೈಲಿಂಗವ ಮರಳಿ ಸಕಲಕ್ಕಾನೆ ನಿಷ್ಕಲಕೆ ನಿತ್ಯನೈ
ಅಜಾತರೂಪ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೧೧೭॥

ದೇವ ನಿನ್ನಯ ಪರಿಯನಾರಯ್ಯಲರಿದಯ್ಯ!
ಆರೈದ ಶರಣರು,
ನಿನ್ನ ಪದದಲ್ಲಿ ಓರಂತೆ ಆನಂದ ಸ್ಥಾನದಲ್ಲಿ
ತಾವು ನಿನ್ನಯ ರೂಪು.
ಭಾವತಪ್ಪದೆಯಿಪ್ಪ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೧೧೮॥ [I–೪೮೪]

ಮುನ್ನ ಮುನ್ನ!
ರವಿಶಶಿಗಳು ಇಲ್ಲದ ಮುನ್ನ,
ಬ್ರಹ್ಮ ವಿಷ್ಣ್ವಾದಿಗಳು ಭವಿಸದ ಮುನ್ನ ಮುನ್ನ,
ಮೂರ್ತಿ ಯೆಂಟು ಒಂದಾಗದ ಮುನ್ನ ಮುನ್ನ,
ತನುಮಧ್ಯವಳಯದಲಿ
ಸಕಲಬ್ರಹ್ಮಾಂಡ ಜಲಮಯವಾಗಿಪ್ಪಲ್ಲಿ,
ಅದೆತ್ತಲಿದ್ದೆ? ಅದ ನೀ ಬಲ್ಲೆ ಅಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ಕುಱುಹುಗೆಟ್ಟ ನಿಶ್ಚಿಂತನು. ॥೧೦೧೯॥[II-೧೩೨]

ಇಂದ್ರಾದಿ ದೇವತಾ ಸಂಕುಲಕ್ಕೆ
ಅಂತಪ್ಪ ಪದವಿತ್ತಾತ ಬಸವಣ್ಣಯ್ಯ.
ಬ್ರಹ್ಮ ವಿಷ್ಣ್ವಾದಿ ಮೊದಲಾದ ದೇವತಾ ಮೊತ್ತಕ್ಕೆ
ಇಂತಪ್ಪ ಪದವನಿತ್ತಾತ ಬಸವಣ್ಣನಯ್ಯಾ.
ಶಿವಲಿಂಗ ಭಕ್ತರಿಗೆ ಚರಲಿಂಗಧಾರಣೆಯ
ಪರಿಯಾಯದಿಂದಲೊರೆದಾತ ಗುರು,
ಇಹಲೋಕ ಪರಲೋಕದನುಮಿಷದ ಸುದ್ದಿಯನು
ಅಱಿದಾತ ಗುರು ಬಸವಣ್ಣ ನೀನಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೨೦॥ [II-೧೩೩]

ಸರ್ವಾತ್ಮ ನೀನೆನ್ನ। ಸರ್ವನನು ಮಾಡಿದೆ
ಉರ್ವಿಯೊಳಗಣ ಸುದ್ದಿ ಅಱುಹಿಸಿದಿರಿ।
ಸರ್ವಾತ್ಮ ಕಪಿಲಸಿದ್ಧ। ಮಲ್ಲಿಕಾರ್ಜುನಯ್ಯಾ
ಗೀರ್ವಾಣ ಪದವಿತ್ತಾತ ಗುರು ಬಸವಣ್ಣನೈ॥ ॥೧೦೨೧॥ [I–೭೭೯]

ಅಂದು ಆದಿಯಲಾದ ಆನಂದ ರೂಪಿನ ನಿಜವನು
ತಂದೆನ್ನ ಕರಕ್ಷೇತ್ರದಲ್ಲಿ ಬಿತ್ತಿದ, ಸದ್ಗುರುಸ್ವಾಮಿ.
ಕೊಂಬು ಬೇರಾಗಿ ಬೇರು ಕೊಂಬಾಗಿ ಫಲಂಗಳಾಱಾದವು.
ಆ ಫಲ ಗುರುವಿಂಗೊಂದು ಲಿಂಗಕ್ಕೊಂದು
ಉಳಿದ ನಾಲ್ಕ ಜಂಗಮಕ್ಕಿತ್ತು
ಹಿಂದು ಮುಂದುಗೆಟ್ಟ ಕಪಿಲಸಿದ್ಧ ಮಲ್ಲಿಕಾರ್ಜುನ. ॥೧೦೨೨॥

ಸೋಂಕಿನ ಸುಖವ ಮೊದಲಾದವನೆಲ್ಲವನು
ಚರಲಿಂಗಕ್ಕೆ ಅರ್ಪಿಸಿ,
ಅರ್ಪಿತ ಮುಖದಲ್ಲಿಯಿಪ್ಪ ಲಿಂಗವೆಂದಱಿಯದೆ
ಚರಲಿಂಗಕ್ಕರ್ಪಿಸುವೆನು.
ಚರಲಿಂಗಕ್ಕರ್ಪಿಸಿ ಮಿಕ್ಕ ಶೇಷವನು ಇಷ್ಟಲಿಂಗಕ್ಕೆ ಓಗರವಾಗಿ ನೀಡಿ,
ಪ್ರಸಾದವ ಕೊಂಬೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೧೦೨೩॥[I–೮೦೩]

ಲಿಂಗಪೂಜಕರಿಗೆ ಭವವುಂಟೆಂದು ಹೇಳುತ್ತಿದ್ದೇನೆ.
ಬ್ರಹ್ಮ ವಿಷ್ಣ್ವಾದಿಗಳು ಲಿಂಗಾರ್ಚನೆಯ ಮಾಡಿ
ಭವಕ್ಕೆ ಬಂದುದನಱಿಯಾ.
ಬಸವಣ್ಣ ಮೊದಲಾದ ಪುರಾತರೆಲ್ಲ
ಪ್ರಸಾದಲಿಂಗ ಗ್ರಹಿಸಿ ಸಂದಿಲ್ಲದ ಕೂಟವ ಮಾಡಿದ
ಗುರು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ. ॥೧೦೨೪॥

ಅಚ್ಚೊತ್ತಿದಂತೆ ಒಚ್ಚತಗೊಂಡರು
ಬಸವಣ್ಣ ಮೊದಲಾದ ಪುರಾತರೆಲ್ಲ.
ಸೂಱೆಗೊಂಡರಯ್ಯಾ ನಿಮ್ಮ ಪ್ರಸಾದ ಭಂಡಾರವ.
ಅಲ್ಲಿಯ ಶೇಷವೆನಗಾದರೆ ಅವರಂತೆ ಆನಪ್ಪೆನು.
ಇಲ್ಲದಿದ್ದಡೆ ಮುನ್ನಿನಂತೆ ಅಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೨೫॥

ಬ್ರಹ್ಮ ಪೂಜಿಸುವ, ವಿಷ್ಣು ಪೂಜಿಸುವ,
ಇಂದ್ರ ಪೂಜಿಸುವ, ಚಂದ್ರ ಪೂಜಿಸುವ,
ಅಂದಂದಿಂಗೆ ಬಂದ ಸುಖ ದುಃಖಂಗಳ ಉಣುತಿಪ್ಪರು.
ಅಂತು ಕಾರಣ ಲಿಂಗಪೂಜಕರಿಗೆ
ಭವವುಂಟೆಂದು ಹೇಳುತ್ತಿದ್ದೇನೆ.
ಪ್ರಸಾದಲಿಂಗಪ್ರಾಣಿಗಳಿಗೆ
ಭವವಿಲ್ಲ, ಸಂದಿಲ್ಲ, ಇದು ನಿಶ್ಚಯ ನಂಬು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಾಣೆ. ॥೧೦೨೬॥[I–೬೧೦]

ತನುಮಧ್ಯದಲ್ಲಿ ಲಿಂಗತ್ರಯವ ನೆಲೆಗೊಳಿಸಿದ ಶ್ರೀಗುರು.
ಪ್ರಸಾದಲಿಂಗ ತ್ರಯಕ್ಕೆ ಲೋಭವಿಲ್ಲದವರನೇನೆಂಬೆನಯ್ಯಾ?
ಲಿಂಗತ್ರಯ ನೆಲೆಗೊಂಡ ಹಾಂಗೆ
ಪ್ರಸಾದ ಲಿಂಗತ್ರಯ ನೆಲೆಗೊಳ್ಳದಿದ್ದಡೆ
ಅವರು ಗುರುವಾಜ್ಞೆಗೆ ದೂರರೆಂಬೆ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಎನಗೆ ನಿಮ್ಮ ತೋಱಿದ ಬಸವಣ್ಣನಾಣೆ. ॥೧೦೨೭॥[I-೪೫೨]

ಲಿಂಗವ ಪೂಜಿಸುವೆ ಕ್ಷುಧೆ ನಿಮಿತ್ತ,
ಗುರುವ ಪೂಜಿಸುವೆ ಲಿಂಗವ ಕೊಟ್ಟ ಹಂಗಿಗೆ,
ಲಿಂಗಾರ್ಪಣೆಯಲ್ಲಿ ಆನೆ ತೃಪ್ತ,
ಗುರುವಾರ್ಪಣೆಯಲ್ಲಿ ಗುರು ಲಿಂಗತ್ರಯ ತೃಪ್ತ,
ಜಂಗಮಾರ್ಪಣೆಯಲ್ಲಿ ಹಿಂಗದೆ ತ್ರಿವಿಧವು ತೃಪ್ತ,
ಭವವಿಲ್ಲ ನಂಬು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಾಣೆ. ॥೧೦೨೮॥

ಶುದ್ಧದಿಂದ ಸಿದ್ಧವನಱಿತೆ,
ಸಿದ್ಧದಿಂದ ಪ್ರಸಿದ್ಧವನಱಿತೆ,
ಒಂದಱಿಂದ ಒಂದನಱಿದೆ,
ಎರಡರಿಂದ ಮತ್ತೊಂದನಱಿದೆ.
ಆ ಒಂದಱೊಳಗೆ ಎರಡೆನ್ನದಿದ್ದಡೆ
ನಿಮ್ಮಾಜ್ಞೆಗೆ ದೂರ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೨೯॥

ಇಷ್ಟಲಿಂಗವ ಕರಕ್ಕೆ, ಪ್ರಸಾದಲಿಂಗವ ತನುವಿಂಗೆ
ಒಳ ಹೊಱಗೆನ್ನದೆ ಸರ್ವಾಂಗದೊಳಗೆ
ಚರ ಪ್ರಸಾದಲಿಂಗವನಿತ್ತ ಶ್ರೀಗುರು.
ಆನಂದಸ್ಥಾನದಲ್ಲಿ ಅಕ್ಷರಲಿಂಗವನು ತಂದಿತ್ತ ಕಾರಣ
ತನ್ನಂತೆ ಆನಾದೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೩೦॥

ಸೀಮೆಗೆಟ್ಟ ಸಂಬಂಧಸ್ಥಾನದಲ್ಲಿ
ಆನು ನೀನಾದ ಪರಿ ತಾನೆಂತುಟೊ?
ಇಷ್ಟಲಿಂಗದ ಪೂಜೆ ಮತ್ತೆ ಭವದಾಗರಕೆ
ತಂದಿಳುಹಿತ್ತು ನೋಡು ನೋಡಾ.
ಮತ್ತೆ ಚರಲಿಂಗ ಪೂಜೆಯ ಮಾಡಲಿಕ್ಕಾನು
ಮುತ್ತೆಱನು ಆದೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೩೧॥

ಮೂಱಱ ಸೀಮೆಯಲ್ಲಿ ತೋಱಿದಾತ ಗುರುವೆಂಬೆನಯ್ಯಾ.
ತೋಱಿದುದೆ ನಿಸ್ತಾರವೆಂದಿದ್ದಡಾತನನು
ಆಱೂಢದೈಕ್ಯನೆಂಬೆ ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೩೨॥

ಅಯ್ಯಾ, ನಿನ್ನ ಆಜ್ಞೆಯಲ್ಲಿರದವರಾರು?
ಬ್ರಹ್ಮೇಂದ್ರಾದಿ ದೇವತೆಗಳೆಲ್ಲ.
ಅಯ್ಯಾ, ನಿಮ್ಮ ಆಜ್ಞೆಯಲ್ಲಿ ಆಗದವರಾರು?
ವಿಷ್ಣು ಮೊದಲಾದ ಮನುಜರೆಲ್ಲ.
ಸರ್ವರ ಚೈತನ್ಯಾತ್ಮಕ ಲಿಂಗವೇ
ಅವಧಾರು, ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೩೩॥[I–೬೦]

ಹರಿಯು ಬ್ರಹ್ಮರು ನೆರೆದು ಕಾವರು ಧರೆಯ ಹಿರಿಯ ಕೊಠಾರವ.
ಬಂದರೆಲ್ಲರ ಬಂಧನಕೆ ತಂದುಯಿಕ್ಕು.
ಬೀಯವನಿಕ್ಕಿ ಸಾಕುವಿರಯ್ಯ
ನೀವು ನೋಡಲೊಡನೆ ಇಂತು ಸಕಲವೆಲ್ಲಪ್ಪವು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೧೦೩೪॥ [I–೮೨೦]

ದೇವಿಯರಿಬ್ಬರು ಇಲ್ಲದಂದು,
ಪ್ರಧಾನಿ ಮಂತ್ರಿಗಳಿಲ್ಲದಂದು,
ಆರೂ ಆರೂ ಇಲ್ಲದಂದು,
ನೀನಾದಿಮುಖ ಶೂನ್ಯನಯ್ಯಾ.

[1][ನೀನೆನ್ನ][1]ನಾಹತ ಕರದಲ್ಲಿ ಸಿಲುಕಿ ಚುಳುಕಾದೆ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೩೫॥ [I-೪೮೯]

ಅಯ್ಯಾ, ನೀವು ಕೈಯ ಬಿಚ್ಚಲೊಡನೆ
ಅಣ್ಣ ಕೇಳಿರಣ್ಣಾ, ಬ್ರಹ್ಮ ತಾ ಮೈ ಮುಱಿದು,
ವಿಷ್ಣು ತಾ ಮಱಿದೊಱಗಿ,
ವೇದಂಗಳು ತಮತಮಗೆ
ದೆಸೆಗೆ ಬಾಯ ಬಿಟ್ಟವಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೈಯ ಶಬ್ದಕ್ಕೆ. ॥೧೦೩೬॥ [I-೮೦]

ಅಯ್ಯಾ, ನಿಮ್ಮ ಶ್ರೀಪಾದವ ಹರಿದು ಹತ್ತುವ ನೆನೆವ
ಮನವ ಕೆಡಿಸಲೆಂದು ಮೋಹದ ಗಾಳಿ ಕೈವೀಸಲೊಡನೆ,
ಕೋಪದ ಕಿಚ್ಚು ಹತ್ತಿ ಬೇವೆನಯ್ಯಾ.
ಅಯ್ಯಾ, ನಿಮ್ಮ ನೆನೆವ ಮನವ-ಕಾಡುವ ವಿಧಿಯ ಕೊಂದು ನೆಲಸೆನ್ನ
ಕಪಿಲಸಿದ್ಧ ಮಲ್ಲಿನಾಥದೇವರ ದೇವಾ. ॥೧೦೩೭॥ [I-೭೩]

ನೆನಹಿನ ಮನೆಯೊಳಗೆ ಆನಿದ್ದೇನೆಂದಡೆ
ಮನವು ಮತ್ತನ್ಯಕ್ಕೆ ಹರಿವುದಯ್ಯಾ.
ಮನಕಿನ್ನೇವೆ! ಮನಕಿನ್ನೇವೆ!
ಎನ್ನ ಮನದೊಡೆಯ ಮಹಾದೇವನೆ
ಮನವ ನಿಮ್ಮಡಿಗಳ ಮಚ್ಚಿಸಿ
ಎನ್ನ ಶುದ್ಧಾತ್ಮನ ಮಾಡು,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೧೦೩೮॥ [I-೫೫೧]

ಶಿವಪೂಜೆಯನು ಮಾಡುವ ಕಾಲಕ್ಕೆ
ಅವಿತಥವಲ್ಲದೆ ಬಯಸದೀ ಮನವು,
ಇನ್ನೇವೆ ಇನ್ನೇವೆನಯ್ಯಾ.
ಕಾಮಕಿಚ್ಚೈಸೂದು ಕ್ರೋಧಕಿಚ್ಚೈಸೂದು

೧-೧ ನಿನ್ನನ (ಮೂ)

ಇನ್ನೇವೆ, ಇನ್ನೇವೆನಯ್ಯಾ.
ನಿನ್ನ ಮನದಲು ಇರಲೀಯದು
ತನ್ನ ಮಯವ ಮಾಡೂದು.
ಈ ಮಾಯದ ಮನಕ್ಕಂಜುವೆ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೧೦೩೯॥

ಆರಾದಡೆನ್ನುವನು ಹೊಗಳಿದುದನು
ಆ ಕಾಲದಲ್ಲಿಯೆ ನೆನವುತಿಪ್ಪುದು.
ಆ ಕಾಲದಲ್ಲಿ ಎನ್ನ ಜಜೆದವರ
ಆ ಕಾಲದಲ್ಲಿ ಪ್ರಾಣವಧೆ ಮಾಡಿಹೆನೆಂಬುದು.
ಅಯ್ಯೋ, ಸಂಸಾರ ಮಾಯಾ ಮನಕಂಜುವೆನು,
ಅಯ್ಯ ನೀ ಕೂಡಿಕೋ
ಕಪಿಲಸಿದ್ಧ ಮಲ್ಲಿಕಾರ್ಜುನಾ. ॥೧೦೪೦॥

ಎಂತೆಂತು ನೋಡಿದಡೀ ಮನವು
ಸಂತವಿಡಲೀಯದಯ್ಯಾ, ನಿಮ್ಮುವ.
ಚಿಂತೆಗೊಳಗಾಗಿದೆ, ದೆಸೆದೆಸೆವರಿವುದು,
ಕಾಮಕಿಚ್ಚೈಸೂದು ಕ್ರೋಧಕಿಚ್ಚೈಸೂದು,
ಆಮಿಷ ತಾಮಸಕೆ ತಾನೆ ಮುಂದಾಗಿ.
ಇದ ಮೂಲನಾಶ ಮಾಡಿ
ನೀನೆ ಮುಂದಾಗು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೧೦೪೧॥ [I–೨೨೬]

ವಾಯುವೆನ್ನುವಾನತಿ ಮುದದಿಂದ
ಕಾಯಶೂನ್ಯವ ಮಾಡಿಹೆವೆನುತಿಹವಯ್ಯಾ.
ವಾಯದ ಕಾಯವು ಕೆಡದ ಮುನ್ನ
ದೇವ ನಿಮ್ಮ ನೆನೆಯಲೀಯವು.
ಅಯ್ಯೋ, ಮಹಾದೇವ
ಮನವೇ ನೀವಾಗಿ ಕೈಕೊಟ್ಟು ತೆಗೆಯಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ. ॥೧೦೪೨॥ [I–೭೨೩]

ಕಾಮವಿಕಾರಕ್ಕೆ ಕಳವಳಿಸಿ ಮನವು
ಹೇಮದಿಚ್ಛೆಗೆ ಹೆಚ್ಚಿ ಹೆಚ್ಚಿ,
ಕಾಮಾರಿ ನಿಮ್ಮುವ ನೆನೆಯದೀ ಮನವು.
ಓರಂತೆ ನರಕಕ್ಕೆ ಇಳಿದೇನೆಂಬುದು
ಕಾರುಣ್ಯಕರ ಕಪಿಲಸಿದ್ಧ ಮಲ್ಲಿಕಾರ್ಜುನಾ
ಆರೈದು ಎನ್ನನೋರಂತೆ ಮಾಡು. ॥೧೦೪೩॥ [I–೩೩೮]

ಧರೆಯಗಲದೊಳಗೊಂದು ಹಿರಿದಪ್ಪ ಲೋಭವು
ತನುವೆಂಬುದನು ತಾನು ಲೀಯಮಾಡಿ,
ಮನಮಧ್ಯದೊಳಗೆ ನೀ ನೆಲೆಗೊಂಡೆನೆಂದೊಡೆ
ನೆಲೆಗೊಳಲೀಯದೆ ತನ್ನ ಮಯವ ಮಾಡಿ,
ಕರುಣಾಕರನೆ ಕಪಿಲಸಿದ್ಧ ಮಲ್ಲಿಕಾರ್ಜುನಾ
ಕರುಣದಿಂದ ಕಳೆದು ಕಾಯಿ ತಂದೆ. ॥೧೦೪೪॥ [I–೪೯೮]

ಎಂದೋ ದಂದುಗ ಮಾಬುದು ಎನಗೆ,
ಎಂದೋ ದಂದುಗ ಮಾಬುದು ಎನಗೆ,
ಇನ್ನೆಂದೋ ಪರಮಾನಂದವೆಂದಪ್ಪುದೋ,
ಎನಗೆಂದೋ ಪರಮಾನಂದವೆಂದಪ್ಪುದು,
ಎಂದೋ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ಆನಂದ ಪರಮಸುಖದ ಪದವೆನಗಪ್ಪುದು. ॥೧೦೪೫॥ [I–೨೩೦]

ತನ್ನ ಮಱೆದು ನಿನ್ನ ರೂಪಾದವ[ರ]
ನಿನ್ನವರೆ ಪ್ರಾಣವೆಂದೆಂಬವರ,
ನಿನ್ನ ಮೂರ್ತಿಧ್ಯಾನದಲ್ಲಿ ಮೂರ್ಛೆವೋದವರ,
ನಿನ್ನ ಕೀರ್ತಿಸುವವರ, ನೀನೆಂಬವರ ಸಂಗದೊಳೆನ್ನನಿರಿಸಯ್ಯಾ.
ಅನಂಗವಿದಾರಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಲಿಂಗಾ
ನಿಮ್ಮ ಧರ್ಮ. ॥೧೦೪೬॥ [I–೪೪೨]

ಮಲತ್ರಯವನತಿಗಳೆದು ಮದವಿದಾರಣರಪ್ಪವರ
ಎನಗೆ ತೋಱಾ,

ಶುದ್ಧದಲ್ಲಿ ಪ್ರವೇಶಿಸಿ ಸಿದ್ಧದಲ್ಲಿ ಪ್ರಕಟಿಸಿ,
ಶುದ್ಧ ಸಿದ್ಧ ಪ್ರಸಿದ್ಧದಲ್ಲಿ ಪರಮಾಣ್ವಾದವರ ಎನಗೆ ತೋಱಾ.
ನೆನಹಿನ ಮನೆಯಾಗಿ ಆ ಮನೆಯ ತಮಗೆ ಮಾತೆಯಾಗಿ,
ಆ ಮಾತೆ ಮಹಾ ಬೆಳಗಿನ ಕೂಟವಾಗಿಪ್ಪವರ
ಎನಗೆ ನೀ ತೋಱಾ,
ಅನಂಗವಿದಾರಣ ಕಪಿಲಸಿದ್ಧ ಮಲ್ಲಿಕಾರ್ಜುನಾ. ||೧೦೪೭|| [II–೮೭]

ತನುಗುಣವೆಂಬವೆಲ್ಲ ನೀ ಮಾಡಲ್ಕಾದವು.
ಆ ಮನವ, ಪ್ರಾಣವ ನೆನಹಿನ ಸಂಗಮದಲ್ಲಿ
ಸಮನಿಸಾ ಎಲೆ ಅಯ್ಯಾ, ನಿನ್ನ ಧರ್ಮ.
ಸ್ಥೂಲ ಸೂಕ್ಷ್ಮ ಕಾರಣವೆಂಬವು ನೀ ಮಾಡಲ್ಕಾದವಲ್ಲದೆ
ನಿನ್ನ ಮೀಱಿದ ಆಧಿಕ್ಯವುಂಟೆ?
ಸರ್ವದಲ್ಲಿ ಸಿದ್ಧ ನೀನು,
ಎನ್ನ ಹೊದ್ದಿಯೂ ಹೊದ್ದದಂತಿಪ್ಪರೆ?
ಎನ್ನ ಸರ್ವಾಂಗದಲ್ಲಿ ನೀನೆಯಾಗಿ ತೋಱಯ್ಯಾ.
ಅನಂಗವಿದಾರಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಲಿಂಗ
ನಿಮ್ಮ ಧರ್ಮ. ||೧೦೪೮||[I–೪೫೩]

ಹೊದ್ದಿಯೂ ಹೊದ್ದದಂತಿಪ್ಪವನ ಹೊದ್ದಿ
ನಾನು ಸಂಯೋಗವ ಮಾಡುವ ಪರಿಯೆಂತಯ್ಯಾ?
ಇಬ್ಬಟ್ಟೆಯಾಗಿಪ್ಪ ನೀಲಕಂಧರನ ಮಸ್ತಕದಲ್ಲಿ
ಲೀಲೆಯಿಂದಪ್ಪವನ ಸಂಗವ ಮಾಡುವ ಪರಿಯೆಂತಯ್ಯಾ?
ಎಲೆ ಗುರುವೆ, ನೀನು ಸರ್ವಾಂಗ ಪ್ರವೇಶಿಸುವಲ್ಲಿ
ಎನ್ನನೊಡನೆ ಪ್ರವೇಶಿಸಿದೆಯಾದ ಕಾರಣ
ಆನು ಸಂಯೋಗವ ಮಾಡಿದನಲೆಯೆಂದಡೆ
ಮಿಕ್ಕಿನವರಿಗೆ ಎಂತು ಸಮನಿಸುವುದಯ್ಯಾ?
ನಿನ್ನ ಕರುವ ಪರಿಯೆಂದಲ್ಲಿ ಬಡವರಿಗೆ
ಅನಂಗವಿದಾರಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಲಿಂಗಾ
ನಿನ್ನ ಕರುಣವುಳ್ಳವರಿಗಲ್ಲದೆ. ||೧೦೪೯||[I–೮೪೪]

ಕರುಣ ಕರತಳಾಮಳಕವೆಂದಪ್ಪುದಯ್ಯಾ?
ನಿನ್ನ ನೆನಹಿನ ಮಹಾಸಮುದ್ರದಲ್ಲಿ ಎಂದಾಳುವೆನಯ್ಯಾ?
ಬಂದುದು ಬಾರದೆಂಬ ಸಂದೇಹವನೆಂದು ಸವೆವೆನಯ್ಯಾ?
ಅನಂಗವಿದಾರಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ಎಂದಯ್ಯಾ ಕರುಣ ಕಂದೆಱವುದೋ. ॥೧೦೫೦॥[I-೩೨೪]

ಕರುಣಿ, ಮಹಾದಾನಿ,
ನಿನ್ನವರಿಗೆ ನೀನು ಕರುಣ ಕಂದೆಱವ ಭೇದವ,
ಅವರ ಮನದ ಮಸ್ತಕದಲ್ಲಿ ನಿನ್ನ ಮಹಾಜ್ಯೋತಿ ಬೆಳಗುವ ಭೇದವ,
ಅಱಿಯಲಹುದೆ ಎಲ್ಲರಿಗೆ?
ಅನಂಗವಿದಾರಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಲಿಂಗಾ
ನಿನ್ನ ಕರುಣವುಳ್ಳವರಿಗಲ್ಲದೆ. ॥೧೦೫೧॥[I-೩೨೯]

ಆಜ್ಞಾಸಿದ್ಧನನರ್ಚಿಸಿ[ಹೆ]ನೆಂದೆಂಬ
ಆದಿ ಅಕ್ಷರದ ಪವಣೆಂತುಟು?
ಮುನ್ನ ಮೂವತ್ತಾಱು ತನ್ನ ಸ್ಥಲದೊಳಗೊಪ್ಪಿ
ಇನ್ನು ನಾ ನೀನೆಂದೆಂಬ ಸಂದಿಲ್ಲವಯ್ಯಾ.
ಅನಂಗವಿದಾರಣ ಕಪಿಲಸಿದ್ಧ ಮಲ್ಲಿಕಾರ್ಜುನ
ಮಂಗಳದ ಬಯಲೊಳಗೆ ಬೆಳಗುತಾನೆ. ॥೧೦೫೨॥

[ಯೋಗಮುದ್ರೆ]
ಸಸಿ ವಸುಧೆಯೊಳಗೀಗ। ಪಸರಿ ಪರ್ಬಿತು ಲೋಕ।
ಶಿಶುವಿನ ಮಸ್ತಕದಲ್ಲಿ ನಿಯಮಾಕ್ಷರ॥
ಫಲ ಪ್ರಬಲವಾಗದೆ। ಕುಸುಮಕ್ಕೆ ತೆಱಹಿಲ್ಲ।
ಪಸರಿಸುವ ಸಂಬಂಧ ಸಂಬಂಧದ॥
ಹಸಿಯ ಮಸ್ತಕದಲ್ಲಿ। ಒಸರಿದುದ ಕಂಡಾನು।
ದೆಸೆದೆಸೆಗೆಟ್ಟೆನ್ನೈ ಲಿಂಗ ಯೋಗಿನಾಥಾ॥ ॥೧೦೫೩॥

ಬಾಲಕನ ಮಸ್ತಕದ। ಶೂಲಾಕೃತಿಯ ಬೆಟ್ಟಲೀ
ಲಾಳಾಪವನು ಮೀಱಿಪ್ಪವು।
ಸ್ಥೂಲ ಸೂಕ್ಷ್ಮವೊಂದು। ಕಾರಣವ ಕಂಡೀಗ
ನೀಲಗಳ ಸಾನಾದೆ ಯೋಗಿನಾಥಾ॥ ॥೧೦೫೪॥

ಎಸಳ ಕುಸುಮಂಗಳಲಿ। ಪಸರಿಸಿತು ಪೂರ್ವದಲಿ
ದೆಸೆಗೆಟ್ಟೆ ದೆಸೆಗೆಟ್ಟೆನಿದ್ದೆಸೆಯಲಿ।
ಪಸರಿಸುವ ಮಸ್ತಕದ।ಲೊಸರುವ ಅಮೃತದಲ್ಲಿ
ದೆಸೆಗೆಟ್ಟೆನ್ನೈ ಲಿಂಗ ಯೋಗಿನಾಥಾ॥ ॥೧೦೫೫॥

ಮೂಱಱಿಂದವೆ ಹುಟ್ಟಿ। ಮೂಱು ಮತ್ತಾನಾಗಿ
ಆಱು ಮಠವೆ ಎನಗೆ ನಿತ್ಯವಾಗಿ।
ಆಱಾಱಱಿಮ್ಮೇಲೆ। ಮೀಱಿಪ್ಪ ಸೀಮೆಯನು
ತೋಱಿದಾತನು ಲಿಂಗ ಯೋಗಿನಾಥಾ॥ ॥೧೦೫೬॥

ಅವ್ಯಯದೊಳತ್ಯಂತ। ಆನಂದವನು ಮೀಱಿ
ನಿತ್ಯಕ್ಕೆ ನಾನೆ ತಾ ನೆಲೆಯಾದೆನು।
ಹತ್ತೆ ಸಾರುವ ಚಿತ್ತ। ನಿನ್ನತ್ತ ಸಾರಿದಡೆ
ತತ್ವಮಸಿಯಾದೆನ್ನೈ ಯೋಗಿನಾಥಾ॥ ॥೧೦೫೭॥

ಸಾಲೋಕ್ಯ ಸಾಮೀಪ್ಯ ಸಾಯುಜ್ಯ ಪದಗಳನು ಬಯಸಿ,
ಅರ್ಚಿಸಿದಡೆ ನಿನ್ನ ಸಂಗವಿಲ್ಲ.
ಅಂಗ ಅಭ್ಯಂತರದ ಸಂಗವಿಲ್ಲದೆ ತಾನು
ಹಂಗುಹರಿದರ್ಚಿಸುವ ಸಂಗಿಗಳಿಗೆ ಸಂಗದಕ್ಕು.
ಮಂಗಳಾಂಗನೆ ನಿನ್ನ ಹಂಗಿಲ್ಲದಿದ್ದವರ
ಸಂಗ ನಿನ್ನ ರೂಪು ಯೋಗಿನಾಥ. ॥೧೦೫೮॥[I–೧೦೫]

ಲಿಂಗತ್ರಯದೊಳಗೆ ದೀಕ್ಷೆ ಸಂಗಮವಾದ
ಸಂಗಿಗಳ ಆರವರು ನಿಷ್ಕಳರು.

ಮೂಱಱಿಂದ ಮುನ್ನ ಮುಕ್ತಿಯನು ಅತಿಗಳೆದು
ಆರಿಪ್ಪರವರ ಸದ್ಭಾವದಲ್ಲಿ.
ನೀನು ನೆಲೆಮನೆಯಾದ ಆನಂದದಂದವನು
ನಾ ಕಂಡೆನೈ ಲಿಂಗ ಯೋಗಿನಾಥ. ॥೧೦೫೯॥

ಮುಟ್ಟುವ ಮೂರ್ತಿಯ। ನಷ್ಟವಪ್ಪಾ ದ್ರಷ್ಟು
ಕಟ್ಟುಗ್ರದಿಂದ ತಾ ನೋಡಲಹುದು॥
ನಷ್ಟವಪ್ಪಾ ಕುಸುಮ। ಪೂಜೆಯಂ ಬಿಟ್ಟವರು।
ಬಟ್ಟ ಬಯಲಾದರೈ ಯೋಗಿನಾಥಾ॥ ॥೧೦೬೦॥

ದ್ವಾರಕನ ಪಟ್ಟಣದ ನಾಡಿ ಭೇದವನಱಿದು
ದ್ವಾರವೊಂಬತ್ತರಲ್ಲಿ ಉಪದ್ವಾರದ ಭೇದ ಭೇದವ ತಿಳಿದು,
ಆಧಾರ ಮೊದಲಾದ ಸ್ವಾದಿಷ್ಠತೊಡಗಿ ತಾ ನಿತ್ಯ ನಿತ್ಯ.
ಆದಿ ಅಕ್ಷರದ ಭೇದವನಱಿದಡೆ
ಮೂದೇವರಿಂಗೊಡೆಯ ಯೋಗಿನಾಥಾ. ॥೧೦೬೧॥

ಖಂಡಜ್ಞಾನಿಗಳೆಲ್ಲ। ಉಂಡುಂಡು ಹೋದರೈ
ಮಂಡಲದ ಒಳಗೀಗ ವಿಷವು ಪ್ರಬಲವೆಂದು।
ಅಂಡಾಂಡವಂ ಮೀಱಿ। ಅಜಾಂಡದೊಳಗೀಗ।
ಉಂಡಾತ ನೀನಯ್ಯ ಯೋಗಿನಾಥಾ॥ ॥೧೦೬೨॥

ಮೋದವಾಮೋದದಲಿ। ಮೀಱಿಪ್ಪ ಬ್ರಹ್ಮವನು
ಸಾದಾಖ್ಯ ತತ್ವದಲಿ ಕಾಣಲಿಲ್ಲ।
ಆದಿ ಆಧಾರವನು। ಆಧೇಯದಲಿ ಕಂಡೆ।
ಮೂದೇವರಿಗೆ ಒಡೆಯ ಯೋಗಿನಾಥಾ॥ ॥೧೦೬೩॥

ಮುಕ್ತ್ಯಂಗನೆಯ ಸಂಗ। ತೆಱಹಿಲ್ಲ ಊರೊಳಗೆ
ಕರಣ ಅಂಗಂಗಳು ಪ್ರಬಲವಾಗಿ।
ಅನ್ಯ ಅವ್ಯವನಾಗಿ। ಅಜಲೋಕಕೆಯಿದಲ್ಕೆ
ಸಂಗ ಸಮನಿಸಿತಯ್ಯ ಯೋಗಿನಾಥಾ॥ ॥೧೦೬೪॥

ಮೂಜೆ ಬೆಟ್ಟದ ಶಾಖೆ।ಮುನ್ನೂರು ಪರಿಯಂತ
ವೇದ ಸಿದ್ಧಗೆಲ್ಲ ಕಾಣಲರಿದು।
ನಾದ ಬಿಂದುವಿನಲ್ಲಿ। ಆದಿಬ್ರಹ್ಮನು ಇಪ್ಪ
ಆದಿ ಆಧಾರದ ಪರಿ ಹೊಸ ಪರಿ।
ಸಾದಾಖ್ಯ ದೇಹಿಗಳಿ।ಗಿಲ್ಲಿಲ್ಲ ಎಂದಾನು
ಸಾಜೆ ನಿಂದೆನು ಲಿಂಗ ಯೋಗಿನಾಥಾ॥ ॥೧೦೬೫॥[ಸಂ-೮೯]

ತನುಗುಣವನತಿಗಳೆದು। ಮನವ ಮಧ್ಯದಲಿರಿಸಿ
ನೆನವುತಿರ್ಪುದು ಶುದ್ಧಜ್ಯೋತಿ ತಾನೆ।
ಜ್ಯೋತಿ ಮಸುಳದ ಮುನ್ನ। ದೀಪ್ತಿ ಹಲವಾದಡೆ
ನೀತಿವಂತನು ತಾನೆ ಯೋಗಿನಾಥಾ॥ ॥೧೦೬೬॥[ಸಂ-೭೧]

ತತ್ವಬ್ರಹ್ಮಾಂಡದಲಿ। ಸುತ್ತಿಪ್ಪ ಸೀಮೆಯನು
ಇತ್ತೆಱನು ಆಗಿಪ್ಪುದಾ ಬೆಟ್ಟದ।
ಮಸ್ತಕದ ಘಂಟಿಕೆಯನ್ನು। ಮತ್ತೆ ನೇಮಾಕ್ಷರದ
ಚಿತ್ತಶುದ್ಧನುವಾಗಿ ಕಂಡೆ ಶಿವಯೋಗಿನಾಥಾ॥ ॥೧೦೬೭॥

ಕಾನನದ ಕಾನನದ। ಕಂಗೆಡದ ಭೇದವನು
ಸ್ವಾನುಭೂತ್ರೈಕ್ಯದಲಿ ದೀಕ್ಷೆಯಾಗಿ।
ಮೇಲಪ್ಪ ದೀಕ್ಷೆಯು। ತಾನೆರಡುವೊಂದಾದ
ಆನಂದವನು ಕಂಡೆ ಯೋಗಿನಾಥಾ॥ ॥೧೦೬೮॥[ಸಂ-೧೦೪]

ಸ್ಫಟಿಕಘಟದೊಳಗೀಗ। ಕುಟಿಲ ಸಂಗನ ಬಿಡು
ದಿಟ ಪುಟವನತಿಗಳೆಯಲುಂಟೆ ಹೇಳಾ।
ವಟವೃಕ್ಷ ವಟಕೋಟಿ। ಫಲ ನುಂಗಿದ ತೆಱನು
ಶರಣದೇಹಿಕ ದೇವ ಯೋಗಿನಾಥಾ॥ ॥೧೦೬೯॥[ಸಂ-೫೫]

ಲಿಂಗ ಕರದೊಳಗಿರಲು। ಅಂಗವಿಸಲೇಕನ್ಯ
ಸಂಗಕ್ಕೆ ಒಳಗಾಗಿ ಲಿಂಗವುಂಟೆ।

ಸಂಗವೆಲ್ಲವು ನಿನ್ನ। ಸಂಗವಾಗಿಪ್ಪವರ
ಲಿಂಗ ನೀನೆಂಬೆನ್ನೆ ಯೋಗಿನಾಥಾ॥ ॥೧೦೭೦॥[ಸಂ-೯೭]

ಸಾವಿರ ಕುಸುಮದಲಿ। ಸಾವಿರಾಕ್ಷರವೀಗ
ಮೂಲ ಮೂಲಂವಾಗಿ ಮೂಲದಲ್ಲಿ
ಎಸೆವಗ್ನಿ ತಾನೀಗ। ಅಜಲೋಕವನೆಯ್ದಿ।
ಪಸರಿ ಪರ್ಬಿತು ಕ್ರೀಯ ಕ್ರೀಯ ಮೀಜಿ
ಶಿಶು ಕಂಡ ಕನಸಿನಂ।ತಾಯಿತ್ತೈ ಶಿವಭಕ್ತಿ
ನಿಜಗುರುವೆ ಸ್ವತಂತ್ರ ಯೋಗಿನಾಥಾ॥ ॥೧೦೭೧॥

ಸಾಗರದ ಮೇಲಿಪ್ಪ। ಆನಂದ ಕಮಲದಲಿ
ಸಾನಂದ ತಾನೊಂದು ರೂಪವಾಗಿ।
ಭಾನುವಿನುದಯಕ್ಕೆ। ಕತ್ತಲೆಯ ಪ್ರಬಲವನು
ಕಾಣದಂತಿರಿಸಯ್ಯ ನಿಜಗುರುವೆ ಯೋಗಿನಾಥಾ॥ ॥೧೦೭೨॥

ಸ್ತಂಭ ಮೂಜಿಜಿ ಶಾಖೆ। ಅಂಬರವನೆಯ್ದಿರಲು
ಶಂಭುವಿದ್ದೆಡೆಯ ಮನೆಗೆ ಪ್ರಬಲವಾಗಿ।
ಉಂಬುವರು ಏರಲ್ಕೆ। ಕೊಂಬು ಮುಜಿದು ಬೀಳೆ
ಈ ಸಂಭ್ರಮವ ನೋಡಯ್ಯ ಯೋಗಿನಾಥಾ॥ ॥೧೦೭೩॥

ಸಡಗರದ ನುಡಿಯವರ। ಒಡಲ ಕುದಿಹಕ್ಕೀಗ
ಮೃಡ ನೀನು ಸಿಲುಕುವಾ ಅತ್ಯತಿಷ್ಠ।
ಆನಂದ ಆನಂದ। ತಾನೊಂದು ರೂಪಾಗೆ
ಸಾನಂದದೊಳಗದು ಸಮನವಾಗೆ।
ಅಜಲೋಕದಲಿಪ್ಪ। ಒಸರುವ ಅಮೃತವನು
ಭಜಿಸಿಗ್ರಹಿಸಿಯೆ ಕಂಡೆ ಯೋಗಿನಾಥಾ॥ ॥೧೦೭೪॥

ಏಳೆಂಟು ಕೋಣಗಳು। ತಾನೊಂದು ರಥವಾಗಿ
ಹೋಗಿ ಹೋಯಿತು ಸ್ಥಾಣುಮೂಲಕಾಗಿ।

ಭಾನುವಿನುದಯಕ್ಕೆ। ಕೋಣ ಸತ್ತುದ ಕಂಡು
ಆನು ನೀನಾದೆನ್ನೈ ಯೋಗಿನಾಥಾ॥ ॥೧೦೭೫॥[I-ಸಂ-೧೧೪]

ಸೀಮೆಯನು ಮೀಱಿದೆನು। ಸಂಬಂಧಿಯಾನಲ್ಲ
ಸೋಮಪ್ರಭೆಯಿಂದ ರಸವೊಸರುತಿರಲು।
ಸೀಮಾಕ್ಷರದ ಕುಂಭ। ತುಂಬಿ ಸೂಸಲ್ಕಾಗಿ
ಆನದ್ದೆನದಱೊಳಗೆ ಯೋಗಿನಾಥಾ॥ ॥೧೦೭೬॥

ಅಂಗನೆಯರೈವರನು। ಭಂಗಬಡಿಸಿತು ಬ್ರಹ್ಮ
ಸಂಗಕ್ಕೆ ಗುರುವಾದಳವ್ವೆ ತಾನು।
ಹಿಂಗಿ ಹಿಂಗುವ ಸಂಗ। ಭಂಗವೆಂದಱಿದೀಗ
ಹಿಂಗದಂತಾದೆನ್ನೈ ಯೋಗಿನಾಥಾ॥ ॥೧೦೭೭॥

ಎಸಳಂ ನಿವಾರಿಸಲ್ಕೆ। ವಶವಲ್ಲವೆನಗೆ ಅದು
ಪಸರಿ ಪರ್ಬಿತು ಲೋಕ ಲೋಕಕಾಗಿ।
ಅತಿಶಯದ ಲೋಕವನು। ಅದು ಎಯ್ದದಾ ಮುನ್ನ
ಮನ ನಿಮ್ಮನೆಯ್ದಿತ್ತೈ ಯೋಗಿನಾಥಾ॥ ॥೧೦೭೮॥

ಭಕ್ತಿ ಮುಕ್ತ್ಯಂಗನೆಯ। ಚಿತ್ತಗಳ ಸಮತೆಯನು
ಕಂಡು ಕಂಡೂ।
ಮತ್ತೆ ಮನಸಿನ ಜಲವು ಹತ್ತೆ ಸಾರದ ಮುನ್ನ।
ತತ್ವಮಸಿಯಾದೆನ್ನೈ ಯೋಗಿನಾಥಾ॥ ।೧೦೭೯॥[ಸಂ-೧೦೧]

ಅಧ್ಯಾತ್ಮ ಅಧ್ಯಾತ್ಮವೆಂದೆಂಬಿರಿ
ಅಧ್ಯಾತ್ಮವೇತಕೆ ಹೇಳಿರೈ? ಅಧ್ಯಾತ್ಮವಾರಿಗೆ?
ಶ್ರೀ ಗುರುಸ್ವಾಮಿ ಬಹಳವಪ್ಪ ಶಿವಲಿಂಗವ
ಸೂಕ್ಷ್ಮವಮಾಡಿ ಕೈಯಲು ಕೊಟ್ಟ ಬಳಿಕ ಯೋಗವುಂಟೆ?
ತನ್ನ ಹಸ್ತಮಸ್ತಕದಲು ಇಟ್ಟು,
ವಾಯುಪ್ರಾಣವಾಗಿಯಿದ್ದುದ ಕೊಂದು,

ಲಿಂಗಪ್ರಾಣಿಯ ಮಾಡಿ,
ಅಕ್ಷರವೈದಜಿಲಿ ಮುಕ್ತನ ಮಾಡಿದ ಬಳಿಕ
ಮರಳಿ ಯೋಗವುಂಟೆ? ಶಿವಯೋಗವಲ್ಲದೆ.
ಲಿಂಗಾರ್ಚನೆಯಂ ಮಾಡಿ ಗುರುಲಿಂಗಜಂಗಮ
ಪ್ರಸಾದವಂ ಕೊಂಡ ಬಳೀಕ
ಮರಳಿ ಬಜು ಕಾಯಯೋಗಕೆ ಒಡಂಬಡುವುದೆ? ತಾತ್ಪರಿಯ.
ಇಂತಪ್ಪವನತಿಗಳದು
ಶುದ್ಧ ಶಿವಯೋಗಿಯ ಮಾಡಿದಾದ ಚೆನ್ನಬಸವಣ್ಣ.
ಮಹಲೋಕದಲಿಯಿಪ್ಪ, ಆದ್ಯಕ್ಷರದ್ವಯದ ಭೇದವಂ ಭೇದಿಸಿ,
ಇದು ಉರುತರ ಪದವೆಂದು ತೋಱಿಕೊಟ್ಟು,
ಎನ್ನ ತನ್ನಂತೆ ಮಾಡಿದ,
ಗುರು ಚೆನ್ನಬಸವಣ್ಣ ಕರುಣದಿಂದ.
ಅಭ್ಯಾಸಯೋಗವನತಿಗಳೆದು, ಶಿವಯೋಗದಲಿ ನಿತ್ಯನಾಗಿ
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ
ಶರಣನೈಕ್ಯರೆಂಬ ಷಡುವರ್ಣಕ್ಕೆ ಆನೆ ಅಧಿಕಾರಿಯಾದೆ.
ನಿನ್ನವರ ಸಲಿಕೆಗೆ ಸಂದೆ.
ಚೆನ್ನಬಸವಣ್ಣನ ಕೃಪೆ ಎನ್ನನಿಂತು ಮಾಡಿತು ಕಾಣಾ
ಶ್ರೀ ಗುರು ಯೋಗಿನಾಥಾ. ॥೧೦೮೦॥

ಆಜ್ಞಾಸಿದ್ಧನನರ್ಚಿಸುವಲ್ಲಿ ಆರಯ್ಯಾ ಬಲ್ಲರು?
ಚನ್ನಬಸವಣ್ಣನಲ್ಲದೆ.
ಮೂರ್ತಿಯೆಂಟು ಆಗದ ಮುನ್ನ
ಮುಖಲಿಂಗವಾಗಿಯಿದ್ದ ಸುದ್ದಿ ಆರಯ್ಯಾ ಬಲ್ಲರು?
ಚೆನ್ನಬಸವಣ್ಣನಲ್ಲದೆ.
ಸದಮಳಜ್ಞಾನದಲಿ ಒಪ್ಪಿಪ್ಪ
ಅಕ್ಷರದ್ವಯದ ಭೇದಾದಿ ಭೇದವಂ ಭೇದಿಸಿ
ಲೋಕಕೆ ಭಕ್ತಿಯನು ಸಾಧಿಸಿಕೊಟ್ಟು
ಲೋಕಕೆ ಉರುತರ ಗುರುವಾದ ಕಾಣಾ
ಚೆನ್ನಬಸವಣ್ಣನು, ಯೋಗಿನಾಥಾ. ॥೧೦೮೧॥

ಆದಿಯಾಧಾರವಿಲ್ಲದಂದು,
ಸಾದಾಖ್ಯ ದೇಹವಿಲ್ಲದಂದು,
ಸೀಮಾ ಸಂ[ಬ]ಧಗಳಿಲ್ಲದಂದು,
ಅನಾದಿ ಸಂಸಿದ್ಧನ ಆಗುಮಾಡಿ,
ಹೆಸರಿಟ್ಟು ಕರಕೆ ತಂದುಕೊಟ್ಟಾತ
ಚೆನ್ನಬಸವಣ್ಣನೈ ಶ್ರೀಗುರುವೆ ಯೋಗಿನಾಥಾ. ॥೧೦೮೨॥

ಬಿಂದು ತಾನೆಯಾಗಿ, ಸಂದಳಿದ ಭೇದವನು
ಹಿಂದು ಮುಂದಳಿದ ನಿಜಯೋಗ ತಾತ್ಪರಿಯದ ಯೋಗವನು
ತಂದೆ ಬಲ್ಲ ಚೆನ್ನಬಸವಣ್ಣ.
ಚೆನ್ನಬಸವಣ್ಣನ ಮನ್ನಣೆಯಿಂ ನೆನೆದರೆ
ನಿನ್ನ ರೂಪಪ್ಪರೈ ಯೋಗಿನಾಥ. ॥೧೦೮೩॥[ಸಂ-೮೧]

ಭೂತಿ ರುದ್ರಾಕ್ಷಿಯನು। ಧಾತಪ್ಪ ಅಕ್ಷರವ
ಆರಯ್ಯಾ ಅಱಿದಾರು ಅವರಂಘ್ರಿಯ।
ನಾದಬ್ರಹ್ಮದಲ್ಲಿ। ತಾನು ತಾನಾಗಿಪ್ಪ
ಆಮೋದ ತಾನಯ್ಯ ಯೋಗಿನಾಥಾ॥ ॥೧೦೮೪॥

ಏಳೆಂಟಱಿಮ್ಮೇಲೆ। ರೂಪು ಕಂಚ್ಯಾನನೆಯ
ಮೇಲಿಪ್ಪ ಶಕ್ತಿ ಸಾಹಿತ್ಯವೈದ।
ಆರಯ್ಯ ಅಱಿದಾರು। ಅವರು ಅಕ್ಷರರೂಪ
ಆಗದೆ ಮಾಣರೈ ಯೋಗಿನಾಥಾ॥ ॥೧೦೮೫॥

ಅತಿಶಯದ ಜ್ಞಾನದಲಿ। ಮನೆಯಾಗಿ ಇಪ್ಪುದನು
ಶ್ರುತಿತತಿಯ ತಲೆಯಲ್ಲಿ ಇಪ್ಪನಱಿದ।
ಅವನ ಮಧ್ಯಸ್ಥಾನ ಅತಿಶಯದ ಭೇದವನು
ಪರಮಸೀಮನು ಬಲ್ಲ ಯೋಗಿನಾಥಾ॥ ॥೧೦೮೬॥

ಕೆಱೆಯೊಳಗೆ ಬಾವಿಯನು। ಅಗಳುವವ ಮುನ್ನೆಗ್ಗ
ಅಖಿಳ ಬ್ರಹ್ಮಾಂಡದೊಂದಗ್ರದಲ್ಲಿ।
ಬೆರಸಿಪ್ಪ ಧಾತುವನು। ಅಱಿದೆನೆಂಬಾತ
ಕುಱಿಯಲ್ಲದೆ ಮಾಣ ಯೋಗಿನಾಥ॥ ॥೧೦೮೭॥[ಸಂ-೫೧]

ತಾನು ತನ್ನೊಳಗಾಗಿ। ಸೀಮೆಯನು ಮೀಱಿಪ್ಪ
ಆನಂದದೊಳಗಿಪ್ಪ ಅತ್ಯತೃಪ್ತ।
ಭಾನುವಿನ ಉದಯದಲಿ। ಸಾಮಪ್ರಭೆ ಮಿಗಿಲಾಗಿ
ಕಂಡು ಬೆಱಗಾದೆ ಯೋಗಿನಾಥಾ॥ ॥೧೦೮೮॥

ಮೂಲಾಧಾರದ ಮುನ್ನಾದ ಯೋಗವನು। ಆರಯ್ಯಾ ಬಲ್ಲರು
ಬಾಲ ಕಂಡ ಕನಸಿನಂತಾಗಿ।
ಆದಿಯಾಧಾರದಾ। ಭೇದವನು ಅಱಿಯಲ್ಕೆ
ಮೂದೇವರಿಗೆ ಅರಿದು ಯೋಗಿನಾಥಾ॥ ॥೧೦೮೯॥

ಕರುಣ ಕಾನನವಾಗಿ। ನೆನಹು ತಾಮಸಿಯಾಗಿ
ತನುಗುಣಂಗಳು ಎಲ್ಲ ಲೀಯವಾಗಿ।
ಮನ ಪಂಚಮ ಸೀಮೆ। ಅನುವನಱಿದಾ ಭೇದ
ಘನಯೋಗಿ ಬಲ್ಲನೈ ಯೋಗಿನಾಥಾ॥ ॥೧೦೯೦॥

ಐದೈದು ಬಿಂದು ತಾನೈದೈದು ರೂಪು
ಮತ್ತೈದೈದನತಿಗಳದ ಆನಂದನ।
ಸೀಮೆಯಂ ಮೀಱಿಪ್ಪ। ಸಂಬಂಧಿಯ ಭೇದ
ಆರು ಬಲ್ಲರು ಗುರುವೆ ಯೋಗಿನಾಥಾ॥ ॥೧೦೯೧॥

ಕುಂಭಿನಿಯ ಮಸ್ತಕದ। ಇಂಬಪ್ಪ ಅಕ್ಷರವ
ಶಂಭು ಕಂಡನು ತನ್ನ ಅಂತರಲದಲ್ಲಿ।
ಕರಿಯ ಕೂಪದ ಒಳಗೆ। ಬಿಳಿಯ ಜಲ ಪ್ರಜ್ವಲಿಸಿ
ಅದ ಕಂಡು ಮುಕ್ತನೈ ಯೋಗಿನಾಥ॥ ॥೧೦೯೨॥[ಅ-೧೪೪]

ಜನಿಸುತಿಹ ಜನಕರನು। ಹೊಂದುತಿಹ ಅನಿತ್ಯರನು
ದಂದಗಳ ನೋಡುತಿಹ ಯೋಗಿಗಳನು।
ಏಡಿಸಿಯೆ ಕಾಡುತಿಹ। ಕಾನನದ ಸತಿಯನು
ಕಾಣಲೀಯದೆ ಕೊಲುವೆ ಯೋಗಿನಾಥಾ॥ ॥೧೦೯೩॥[ಸಂ–೨]

ಮುಕ್ತಿ ನಿನ್ನಯ ವೈರಿ। ಎನಿಸಿಪ್ಪ ಶಕ್ತಿಯ
ಇಚ್ಛೆಯೊಳಗಿಪ್ಪನೈ ಐದು ಸರನು।
ಭಕ್ತ್ಯಂಗನೆಯ ವಾಯು। ಎನ್ನತ್ತ ಬೀಸಲ್ಕೆ
ವಿಚಿತ್ರ ತರವ ಮಾಡುವೆನು ಯೋಗಿನಾಥಾ॥ ॥೧೦೯೪॥[ಸಂ–೩೮]

ಕಂಜ ಕನ್ನಿಕೆ ನಿನ್ನ। ಅಂಜನದ ನೇತ್ರವನು
ಕುಂಜರನ ಮಸ್ತಕದ ಸುಧೆಯ ಕೂಪ।
ಭಂಜಿಸುವ ಮಧುಕರನ। ಕಂಜನಾಳದ ಸುದ್ದಿ
ಅಜಲೋಕದಾ। ಆರೈದು ಸುದ್ದಿಯನು ಓರಂತೆ ಅಱಿದಾತ।
ತಾನು ನೀನಪ್ಪನೈ ಯೋಗಿನಾಥ॥ ॥೧೦೯೫॥[I–೨೯೯]

ಹಣೆಯಕ್ಷರವ ತೊಡೆದು। ಭಸಿತವಂ ಭೂಷಣಿಸಿ
ವಶವೃತ್ತಿ ಮಾಡಿದನು ಶಿವಲಿಂಗವ।
ಈ ದೆಸೆಗೇಡಿಯೆನಿಸುವ। ಹೊಸ ಬಂಟ ಕಾಯವನು
ಭಸ್ಮವನು ಮಾಡುವೆ ಯೋಗಿನಾಥಾ॥ ॥೧೦೯೬॥[ಸಂ–೩೩]

ಎರಡೆರಡು ನಾಡಿಯಲಿ। ಎರಡೆರಡು ಬಿಂದುವಿಲಿ
ಎರಡೆರಡು ಮಂಟಪವು ಸದರವಾಗಿ।
ಐದಾಱನತಿಗಳೆದು। ತನುಗುಣವ ತಾವೇಱಿ
ಘನ ಮಹಿಮರೆನಿಸುವರು॥
ನಿನ್ನ ರೂಪು ಮಲತ್ರಯದ ಪಂಕದಲಿ ಆಳುತ್ತಲಿಪ್ಪವರು,
ಯೋಗಿಗಳು ಎಂಬುದಕೆ ಲಜ್ಜೆಯಿಲ್ಲ.
ಅಜ್ಞಾನ ಜಡರೀಗ ನಿಮ್ಮಂತುವನಱಿಯದವರು
ನೀನಪ್ಪರೆ ಗುರುವೆ ಯೋಗಿನಾಥಾ. ॥೧೦೯೭॥

ನೀನಪ್ಪರೈ ನಿನ್ನ। ಆದಿಯಕ್ಷರವಜಿತು
ಆಜಾಱನತಿಗಳದು ಸಾಯುಜ್ಯದ।
ಸೀಮೆಯನು ಅತಿಗಳೆದು। ಫಲಪದವ ಹೊಱಗಾದೆ
ಅಜಾತರಪ್ಪರು ನೀನು ಯೋಗಿನಾಥಾ॥ ॥೧೦೯೮॥

ಯೋಗಭೂಷಣ ದಿವ್ಯನಾದ ಬ್ರಹ್ಮದಲಿಪ್ಪ
ಆದಿ ಅಕ್ಷರ ತನ್ನ ಕರಗಳಾಗಿ।
ಮೂದೇವರು ತನ್ನ। ಭೇದಿಸಿ[ಹೆ]ನೆಂದರೆ
ಅಭೇದ್ಯನಾಗಿಪ್ಪನೈ ಯೋಗಿನಾಥಾ॥ ॥೧೦೯೯॥

ಜಗವ ನುಂಗಿದ ಬ್ರಹ್ಮ। ಕರದೊಳಗೆ ಸಯವಾಗಿ
ಎರಡೆಂಟನತಿಗಳೆದ ಸಾಯುಜ್ಯದ।
ಪದದ ತತ್ವಾರ್ಥವನು। ಒಡಗಲೀಯದೆ ಬಂದು
ತುದಿ ಪದವನೆಯ್ದಿದೆನು ಯೋಗಿನಾಥಾ॥ ॥೧೧೦೦॥[ಅ-೫೮]

ಬಣ್ಣ ಹಲವಪ್ಪಲ್ಲಿ। ಬಣ್ಣ ತಾನೊಂದಾಗಿ
ಬಣ್ಣ ಮೂಜಗಕೆ ಮುಕ್ಕಣ್ಣ ತಾನು।
ಬಣ್ಣಕರು ಬಣ್ಣದೊಳ।ದಾಳುವುದನೆ ಕಂಡು
ಅಣ್ಣ ನಗುತಿರ್ದನೈ ಯೋಗಿನಾಥಾ॥ ॥೧೧೦೧॥[ಸಂ-೧೪]

ಆಱಾಱನೆ ಮೀಱಿ। ಮೂಱು ಮತ್ತಾಱಾಗಿ
ಆಱನತಿಗಳದನೈ ನಿಶ್ಚಿಂತದ।
ತೋಱಿಪ್ಪ ಏಳೆಂಟು। ಗಾಱು ಮಾಡಿಯೆ ಜಱಿದು
ಮೇಲೆ ನಿಂದಾತ ಗುರು ಯೋಗಿನಾಥಾ॥ ॥೧೧೦೨॥[ಸಂ-೫೯]

ಛಾಯಾವೆಂಬಾ ಬೊಂಬೆ। ಆನಂದಕೊಡವೊತ್ತು
ಭಾನುವಿನುದಯಕ್ಕೆ ವಿಕಸವಾಗಿ।
ಸೋಮವೀಧಿಯವೊಳಗೆ ಆ ಕೊಡನು ಒಡೆಯಲ್ಕೆ
ಆನು ನೀನಾದೆನೈ ಯೋಗಿನಾಥಾ॥ ॥೧೧೦೩॥

ನಾದಬ್ರಹ್ಮದೊಳಗೆ। ಆದಿಯಕ್ಷರ ಶಿರವು
ಮೂದೇವರಿಗೆ ಜನನ ಮರಣ ಸ್ಥಾನ।
ಆದಿಯಾಧಾರವನು। ಭೇದಿಸಲು ತಾನಪ್ಪ
ವೇದಕ್ಕೆ ಅತೀತ ಯೋಗಿನಾಥಾ॥ ॥೧೧೦೪॥

ತರಳ ನಿನ್ನಯ ಶಿರದ। ಹಲವು ಪರಿಯಾಳಾಪ
ಮಧುಕರಂಗಳು ಮತ್ತೆ ಹಲವುವಾಗಿ।
ಒದವಿದ ಪರಿಮಳವ। ಪರಿಯಾಯದಿಂದುಂಡು।
ಫಲಪದವ ಸುಟ್ಟವೈ ಯೋಗಿನಾಥಾ॥ ॥೧೧೦೫॥[ಸಂ-]

ತುಂಬಿಯಿಂಬಿನ ಕೊಳದ। ಸಂಭ್ರಮದ ಬಂಡುಂಡು
ಅಂಬರವ ತೋಱಿ ತೋಱಿಸಾನಂದದ।
ಸಂಭ್ರಮದೊಳೊಪ್ಪಿಪ್ಪ। ಆನಂದ ಮಧುಕರನು।
ಶಂಭು ನೀನಾದನೈ ಯೋಗಿನಾಥಾ॥ ॥೧೧೦೬।[ಸಂ-]

ದಾಯ ದಾಯವ ಮೀಱಿದಾ ವೃಕ್ಷ ಫಲ ನಾಶ
ಆ ಫಲಂಗಳು ಸಕಲ ಅಫಲವಾಗಿ।
ಆಱಾಱನತಿಗಳೆದ। ಮೀಱಿಪ್ಪ ಸೀಮೆಯನು
ನೋಡಿದಾತನು ಗುರು ಯೋಗಿನಾಥಾ॥ ॥೧೧೦೭॥

ಎರಡೂರ ಸುದ್ದಿಯನು। ಅಱಿದಾತ ಹರಿಕಾಱ
ಎರಡು ಇಲ್ಲದೆ ಮತ್ತೆ ಒಂದುವಾಗಿ।
ಆ ಊರಲಾನಂದ। ಭಾನುಪ್ರಕಾಶದಲಿ।
ಆನು ನೀನಾದೆನೈ ಯೋಗಿನಾಥಾ॥ ॥೧೧೦೮॥

ಕಡಲ ಕಡೆದಾತನು। ಕಡುಗೂಪ ತಾನಾದ
ನುಡಿಯ ಬ್ರಹ್ಮದವೊಳಗೆ ಸದೆಸತ್ತನೈ।
ಎರಡೂರು ಸೀಮೆಯನು। ಕರುಣದಿಂದವೆ ದಾಟಿ
ತನುತ್ರಯವ ಮೀಱಿದನು ಯೋಗಿನಾಥಾ॥ ॥೧೧೦೯॥

ಒಂಬತ್ತು ಮನೆಯೊಳಗೆ। ಒಂಬತ್ತು ಕೊಳನಾಗಿ
ಎಂಬತ್ತು ಎಸಳಿನ ಕಮಳವಾಗಿ।
ಅಂಬಿಕೆಯ ಮಸ್ತಕದ। ತುಂಬಿಪ್ಪ ಅಮೃತವನು
ಸಂಭ್ರಮದಿ ದಣಿಯೆ ಎಂಬತ್ತು ಕಮಳಗಳು।
ಕುಂದಿ ಹರಿವ ಹತ್ತುವ। ಭೇದ ಶರಧಿಗಳು
ಮೊರಹುತಾ ತರಣಿಯಲ್ಲಿ ಲೀಯ ಯೋಗಿನಾಥಾ॥ ॥೧೧೧೦॥

ತನುತ್ರಯವ ಮೀಱಿದಳು। ಮಲತ್ರಯವನತಿಗಳೆದು
ತ್ರೈಲಿಂಗಕೆ ತಾನು ಆದಿಯಾಗಿ।
ಕರ್ಮ ಭಕ್ತಿ ಜ್ಞಾನ। ಸೊಮ್ಮು ತಾನೇಯಾಗಿ
ಪರಬ್ರಹ್ಮದಿಂದತ್ತಲೈ ಯೋಗಿನಾಥ॥ ॥೧೧೧೧॥[ಸಂ-೧೧೮]

ನೀರು ನೀರೆಯಾಗಿ। ನೀರು ಮುತ್ತಾನಾಗಿ
ಲೀಯಕೆ ಮತ್ತೆ ತಾ ನೀರೆಯಾಗಿ।
ಆಱೂಢದಕ್ಷರದ। ಮಱುಜವಣಿಯ ಹಿಂದೆ
ನೀರು ವಜ್ರಂಅಕ್ಕು ಯೋಗಿನಾಥಾ॥ ॥೧೧೧೨॥[ಸಂ-೫೩]

ಆನಂದ ವಜ್ರದಲಿ। ತಾನೊಂದು ರೂಪಾಗಿ
ಅವಯವು ಕಂಗಳ ಭರಿತವಾಗಿ।
ಕಂಗಳೊಡೆದಲ್ಲಿ ಸುಧೆ। ಮಂಗಳಕ್ಕೊಸರಲಿ
ಸಂಗದಿಂದವು ಸುಧೆಯು ಮುತ್ತವಾಗಿ।
ನಾಮಧಾರಂಗಳಿಂ।ದಿದಕೆ ವಣವ ಮಾಡಿ
ನಾಮವಿಲ್ಲದ ಕೊಳದಲದ ಬಚ್ಚಿಡು।
ತಾಯಿಲ್ಲದವಳಿಗೆ। ತವಕ ಮುನ್ನಾದುದನು।
ಆನು ನಿನ್ನಲಿ ಕಂಡೆ ಯೋಗಿನಾಥಾ॥ ॥೧೧೧೩॥

ಶರಧಿಯೇಳಱ ನಡುವೆ। ತರಳೆ ಕುಳ್ಳಿರ್ದಿರಲು
ಶರಧಿ ಅಱತು ಮಳಲು ಕಾಣ ಬರಲು।
ಮಳಲ ರಸವನೆ ತಂದು। ತರಳೆ ಯೋಗಕ್ಕಿರಲು

ಕರ ಹಸುರುವಾಯಿತ್ತೈ.
ನಾದಬ್ರಹ್ಮ ಶರಧಿ ಶರಧಿ ತಮ್ಮ ಪರೀಕ್ಷಿಸಿ
ಸ್ಥಾನದಲಿ ಅಱಿತು ನೀವಾದವೈ ಯೋಗಿನಾಥಾ॥ ॥೧೧೧೪॥

ಅಪರಾಂಧದೊಳಗೊಂದು। ವಿಪರೀತವನು ಕಂಡೆ
ತಪನ ಶತಕೋಟಿ ಪ್ರಭೆ ವಿಪರೀತದ।
ಸ್ಫಟಿಕ ಪ್ರಜ್ವಲ ಘಟದ। ತಟವು ಮತ್ತೆರಡಾಗೆ
ಘಟ ಭಿನ್ನವಾಯಿತ್ತೈ ಯೋಗಿನಾಥಾ॥ ॥೧೧೧೫॥[ಸಂ-೧೧೧]

ಮುಕ್ತಿ ಮೂಱಾಱಱಲಿ। ಭಕ್ತಿ ಎರಡೊಂದಱಲಿ
ತತ್ವ ಮೂವತ್ತಾಱಱಮ್ಮೇಲಣ।
ತತ್ವಮಸಿಗಂಗಮದ। ಮುಕ್ತಾಫಳದಾಹಾರ
ಭಕ್ತದೇಹಿಕ ಶಿವನು ಯೋಗಿನಾಥಾ॥ ॥೧೧೧೬॥[ಸಂ-೫೭]

ಎರಡೆಂಟನತಿಗಳೆದು। ಐದಾಱನೆ ಮೀಱ
ಶರಧಿಯೇಳನು ದಾಟಿ ಸಾಯುಜ್ಯದ॥
ಫಲಪದವ ಜನನವನು। ಕರುಣದಿಂದವೆ ಮೀಱ।
ತವಕಿಸಿದ ರೂಪಯ್ಯ ಯೋಗಿನಾಥಾ॥ ॥೧೧೧೭॥

ಅಂದ ಅಕ್ಷರಗಳಲಿ। ಚಿಂತೆಯಿಲ್ಲದ ಬ್ರಹ್ಮ
ಮುಂತೆಯಿದ್ದಕ್ಷರದ ವೈನ್ಯೆಗಳಾ॥
ಕಂತುವಿನ ಮಸ್ತಕದ। ಆನಂದ ಕೊಡನೊಡೆಯಲ್ಕೆ
ಚಿಂತೆಗೆಟ್ಟೆನು ಗುರುವೆ ಯೋಗಿನಾಥಾ॥ ॥೧೧೧೮॥

ಶ್ರುತಿತತಿಯ ಮಸ್ತಕದ। ಅತಿಶಯದ ಬೆಳಗಿನೊಳು
ಸಕಲಲೋಕಂಗಳು ಬೆಟ್ಟವಾಗಿ।
ಒಸರುವ ಸಾನಂದ। ಬೆಳಗು ಬಿಂದುಗಳಾಗೆ
ಬೆಳಗುತಿದ್ದಿತು ಬ್ರಹ್ಮ ಯೋಗಿನಾಥಾ॥ ॥೧೧೧೯॥

ನೀಲಕನ್ನಿಕೆ ನಿನ್ನ। ಅಲೋಕ ಮಸ್ತಕದ
ಶೂಲಾಕೃತಿಯಂತೆ ಇಪ್ಪ ಬೆಟ್ಟ।
ಅವ್ಯಯದ ಅವ್ಯಯದ ಸಾನಂದವೊಯ್ಯನೆ ಬೇಟಕಾ
ಅಕ್ಷರಾದಿ ಆದಿ ಆಧಾರವನು ಸಾದಾಖ್ಯಮಾ ಕ್ರೀಯನು
ಆಮೋದ ಆನಂದ ಯೋಗಿನಾಥಾ॥ ॥೧೧೨೦॥

ಕಂಜದೊಳಗಣ ಹಳದಿ। ರಂಜಿಸುವ ಭೇದಕ
ಅಂಜಿತ್ಯೆ ಧರೆ ಸಕಳಯೋಗವೆಲ್ಲ।
ಧಾತುಗೆಟ್ಟು ಹಳದಿ। ರೀತಿ ಧಾತುವ ಮೀಱಿ
ಯೋಗಿ ನಿಷ್ಕಳವಯ್ಯ ಯೋಗಿನಾಥಾ॥ ॥೧೧೨೧॥[I–೩೦೦]

ಒಂದೊಂದು ಪರಿಯಲ್ಲಿ। ಬಂದು ಬಾರದ ಭೇದ
ಕಂದನೊಳಗಡಗಿಪ್ಪ ಕನಸಿನಂತೆ।
ಮುಂದುದೋಱದ ಬ್ರಹ್ಮ। ಆನಂದವಪ್ಪದ್ವೈತ
ಕಂಜದೊಳಗಿಕ್ಕು ಶಿವಯೋಗಿನಾಥಾ॥ ॥೧೧೨೨॥[ಸಂ–೪೪]

ಮೂಱಾಱು ಸೀಮೆ। ಹೊಲಬುಗೆಟ್ಟಿತು ಬ್ರಹ್ಮ
ಆಱಾಱು ಸೀಮೆಯೊಳಗಾಳಾಪವ್ಯೆ।
ತೋಱಿ ತೋಱದ ಪರಿಯ। ದ್ವೈತಿಗಳಿಗಳವಲ್ಲ
ಆಱು ಸೀಮೆಯ ಭಕ್ತವಿಹಿತವಾಗಿ।
ಸಾದಾಖ್ಯ ದೇಹದಲಿ। ಆರೈದು ಓರಂತೆ
ಆದ ಭಕ್ತ್ಯಂಗನೆಯ ಸಂಗಸುಖಧಾತು।
ನೀ ತಾಗಿಯೆ ಕಟ್ಟಿದಾಮೋದ ಬ್ರಹ್ಮವು ಅದು
ದೈವ ಭಕ್ತಿಗದು ಯೋಗಿನಾಥಾ॥ ॥೧೧೨೩॥

ಮೂಱು ಕಂಬದ ಮೇಲೆ। ಯೋಗಸಿಂಹಾಸನವು
ಸಾಗರಂಗಳು ಮೇಲೆ ದೀಪವೇಳು।
ಭೋಗಿ ಕುಲಮಂಡನದ। ಸುದ್ದಾಗಮದ
ಯೋಗವನು ಯೋಗಿನಾಥಾ॥ ॥೧೧೨೪॥

ಕೇಶಪಾಶಾಗ್ರದಲಿ। ಸಾಸಿರಂ ಮುಖದಲಿ
ದೇಶವಿದ್ದೇಶವಾಗಿಪ್ಪ ಹದನ।
ಸಾಸಿರ ಮುಖದಲ್ಲಿ। ಬ್ರಹ್ಮಲೋಕದ ಮಂತ್ರ
ಆನು ನೀನಾಹೆನ್ನೈ ಯೋಗಿನಾಥಾ॥ ॥೧೧೨೩॥[ಸಂ-೫೮]

ಕೂಟ ಸಂಯೋಗಿಯಾ। ಯೋಗಕೆ ನಾ ಹೋಗೆ
ಕೂಟ ಸಿಲಿಕಿತು ಮನದ ಮಧ್ಯದಲ್ಲಿ।
ನೋಟವಾಲೋಕನದ। ಬೇಟೆ ಆಡುವ ಹೊಲನ
ಲೀಯಕೆ ಭಕ್ತಿಯಿದು ಯೋಗಿನಾಥ॥ ॥೧೧೨೬॥

ಆದಿ ಆಧಾರದಲಿ। ವೇದ ಹದಿನಾಱಱಲಿ
ನಾನಾ ಪರಿಯು ಶುದ್ಧ ಧವಳದಲಿ।
ಧವಳ ಒಸರುವ ಬಿಂದು। ಪಸರಿಸುವಕ್ಷರ
ಎರಡಱೊಳಗಣ ಸಸಿಯು ಯೋಗಿನಾಥಾ॥ ॥೧೧೨೭॥

ಕರ್ಮ ಭಕ್ತಿ ಆಱಾಗೆ। ಸೊಮ್ಮುಗೆಟ್ಟಿತು ಮೂಱು
ಕರ್ಮ ಜ್ಞಾನಿಗಳಿಗೆ ಕಾಣಲರಿದು।
ನಿರ್ಮಳದ ಗುರುಕರುಣ
ಸೊಮ್ಮು ಕರ್ಮಕ್ಕಿಲ್ಲ ಯೋಗಿನಾಥಾ॥ ॥೧೧೨೮॥

ದಶವಿಧದ ಭಕ್ತಿಯಲಿ । ಒಸರಿತ್ತು ಭಕ್ತ್ಯಾಮೃತ
ಪಸರಿ ಪರ್ಬಿತು ಸಕಲ ಲೋಕಕಾಗಿ।
ಕುಡಿವಱಿದು ಕುಡಿಮುಱಿದು। ಮೃಡನಲ್ಲಿಗೆಯಿದಲೈ
ನುಡಿಯ ಬ್ರಹ್ಮವು ನೀನೆ ಯೋಗಿನಾಥಾ॥ ॥೧೧೨೯॥[ಸಂ-೬೭]

ನೀರು ಮುತ್ತಿನಲಿ ಹುಟ್ಟಿ। ಮುತ್ತು ತಾ ನೀರಾಗಿ
ಓರಂತೆ ಸಮಹೃದಯ ಸೌಖ್ಯ ದೀಪ್ತಿ।
ತಾನು ತನ್ನೊಳಗಾದ। ನಾನಾ ವಿಧದ ಭಕ್ತಿಯೇನೆಂದು
ಹೇಳಲದ ಉಪಮೆಗರಿದು॥

ಆನು ನೀನಾದುದನು। ಮೂಱಿೊಂದನೆಯ್ದಿದುದ
ಏನೆಂದು ಹೇಳುವೆನು ಯೋಗಿನಾಥಾ॥ ॥೧೧೩೦॥

ಆಱನೆಯ ಅನ್ಯರಿಗೆ। ತೋಱಬಾರದು ಸತ್ವ
ಮೀಱಿಯಿಪ್ಪುದು ಸಕಲ ಪ್ರಾಪಂಚಿಕಾ।
ಮೀಱಿಪ್ಪ ಅಕ್ಷರವ। ಆ ಕಂಡೆ ಅತ್ಯಂತ
ಸೀಮೆ ಸಂಬಂಧನೈ ಯೋಗಿನಾಥಾ॥ ॥೧೧೩೧॥

ಅಕ್ಷರದ್ವಯದಲ್ಲಿ। ಅಕ್ಷರತ್ರಯದಲ್ಲಿ
ಅಕ್ಷರಂತೈದಱಲಿ ಆನಂದದಾ।
ಅಕ್ಷರಾಕ್ಷರವೀಗ। ಅಕ್ಷಯನ ಮಸ್ತಕದ।
ಸಾಕ್ಷರಂ ಆದುದೈ ಯೋಗಿನಾಥಾ॥ ॥೧೧೩೨॥

ವರ್ಣಾಕ್ಷರವೆಂಟು। ತನ್ನ ಗುಣ ಹದಿನಾಱು
ಉನ್ನತೋನ್ನತ ಬಿಂದು ಮೂಱು ಮೂಱು।
ಸನ್ನುತ ಆಱಱೊಳಗೆ। ಲೀಯವಾದ ಅಂಗವನು
ಇನ್ನು ಶಿವಯೋಗಿ ಬಲ್ಲ ಗುರುವೆ ಯೋಗಿನಾಥಾ॥ ॥೧೧೩೩॥[ಸಂ-೮೬]

ಕಂಗಳೆಂಬಾವಿಂದೆ। ಇಂಬಪ್ಪ ಕರಬೆಟ್ಟ
ಒಂಬತ್ತು ದ್ವಾರವದಱ ಕೆಲಬಲದಲ್ಲಿ।
ಸಂಭ್ರಮದ ಬೆಟ್ಟದಲಿ। ಕುಂಭಿನಿಯ ಮಸ್ತಕದ
ಶಂಭು ನಿನ್ನ ವಿಯೋಗ ಯೋಗಿನಾಥಾ॥ ॥೧೧೩೪॥

ಕೆಲಬಲದ ಮಧ್ಯದಲಿ। ಹವಣು ನಾದ ಬಿಂದು
ಕಳೆಯ ಮೀಱಿಪ್ಪುದದು ಶ್ವೇತವಾಗಿ।
ಧಾತು ಬಣ್ಣವ ನುಂಗಿ। ಮಾತು ಮಾತೆಯ ಕಂಡು
ನೀತಿ ಮುಕ್ತನಾದೆ ಯೋಗಿನಾಥಾ॥ ॥೧೧೩೫॥

ಬಂದುದಾ ಮಧ್ಯದಲಿ। ಸಂದಳಿಪ ಸಾನಂದ
ಮುಂದುದೋಱದು ಮುಕ್ತಿ ಮೂಱಱಲ್ಲಿ।
ಒಂದೊಂದು ಪರಿಯವು। ಬಂದು ಬಂದಾಡಲ್ಕೆ
ಕಂಡು ಹರುಷಿತನಾದೆ ಯೋಗಿನಾಥಾ॥ ॥೧೧೩೬॥[ಸಂ–೮೮]

ದೇಹ ದೇವಾಲಯವು। ಮೇಲೆ ರತ್ನದ ಕಳಶ
ಆಳುಪರಿವಾರಕ್ಕೆ ಇಂಬುಗುಡದೆ।
ಅರಮನೆಯ ಒಳಗೊಂದು । ಎಸಳ ಮಂಟಪಕ್ಕೆ
ಸಸಿಮುಖಿಯ ಸಂಗದೊಳಗಯ್ಯನಿರಲು॥
ಸಂಗಕಂಗಳ ತೆಱೆದು। ಸಂಗಮತ್ತೊಂದಾಗಿ
ಲಿಂಗ ನಿನ್ನಯ ರೂಪು ಯೋಗಿನಾಥ॥ ॥೧೧೩೭॥[ಸಂ. ೮೮]

ಕೋಳುವಾಯಿತು ದುರ್ಗ। ಆಳು ಸಿಕ್ಕಿದ ಧೀರ
ಏಳೆಂಟು ದುರ್ಗವದಱೊಡನೆ ಹೋಗೆ॥
ಕಾನನದ ಕಾನನದ। ಕಾರುಣ್ಯ ಕಂಗೆಡಲು
ಆನೆಂಬುದೇನೊಂದು ರೂಪು ಹೇಳಾ।
ಸ್ವಾನುಭಾವದ ದೀಕ್ಷೆ। ತಾನು ತನ್ನೊಳಗಾಗಿ
ಏನು ಅರಿದಿಲ್ಲವೈ ಯೋಗಿನಾಥಾ॥ ॥೧೧೩೮॥[ಸಂ–೧೧೩]

ಕರಸ್ಥಳಕೆ ಲಿಂಗ ಬರೆ। ಕರಣೇಂದ್ರಿಯಂಗಳಾ
ಕರಗಳೆ ಅಯ್ಯ ನಾ ಪರಿವಾರವೈ।
ಪರಿಯಾನು ಪರಿಯಾಯ। ಒರದು ನೋಡುವ ಲೀಲೆ
ಪರೀಕ್ಷಿಸುವುದೇವುದು ಸುದ್ಧಸಿದ್ಧ ಪ್ರಸಿದ್ಧದ।
ಪರಿಣಾಮವಱೆವರೆ। ತವಕಿಗಳಿಗದು ದೂರ
ಗುರು ಕರುಣವುಳ್ಳವರ ಧಾರುಣಿಯ ಸುದ್ದಿ ಹೊಲಬು ತಾನು।
ಕರುಣ ಮಹಾದಾನಿ। ಕಪಿಲಸಿದ್ಧನ ಜ್ಞಾನ
ಕರಣೇಂದ್ರಿಯಗೆ ಶುದ್ಧ ಯೋಗಿನಾಥಾ॥ ॥೧೧೩೯॥ [I–೩೧೬]

ಕಾಯದಲ್ಲಿಯ ಕಳೆಯು। ಲೀಯವಾಗದ ಮುನ್ನ
ವೀರಮಾಹೇಶ್ವರರ ಪರಿಯೆಂತುಟೈ।

ಧಾರುಣಿಯ ಸುದ್ದಿಯನು।ಓರಂತೆ ಅಱಿದರೆ
ತಾನು ಸದ್ಭಕ್ತನೈ ಯೋಗಿನಾಥಾ॥ ॥೧೧೪೦॥[ಸಂ-೪೮]

ಮಂಗಳದ ಸದ್ಭಕ್ತಿ। ಲಿಂಗ ನೀನಾಗಿರಲು
ಕಂಗಳೆರಡೂ ಅದಕೆ। ಉಭಯಾರ್ಥವೈ।
ಲಿಂಗ ನಿನ್ನಯ ದೀಕ್ಷೆ। ಸ್ವಾನುಭಾವದಲಾಗೆ
ಲಿಂಗ ನಿನ್ನಯ ಮನವು ಯೋಗಿನಾಥಾ॥ ॥೧೧೪೧॥[ಸಂ-೯೧]

ಭಕ್ತ್ಯಂಗನೆಯ ಅಂಗ। ಸಪ್ತಧಾತುವಿನ ಮನೆ
ಅಷ್ಟಾಂಗ ಅವು ನಿಮ್ಮ ಪರಿವಾರವು।
ಅಷ್ಟ ಮದ ನಷ್ಟವನು। ಪುಷ್ಟಿಯಪ್ಪಾ ಬ್ರಹ್ಮ
ಕೆಟ್ಟು ದೈವಭಕ್ತಿಯಲಿ ಯೋಗಿನಾಥಾ॥ ॥೧೧೪೨॥[ಸಂ-೪೫]

ಭಕ್ತಿಯೆಂಬಾ ಗಜವು। ಉನ್ನತವಾಗಿ ಬರೆ।
ವಿಚಿತ್ರತರನೆಂದೆನಿಪ ಮಾವತಿಗನು॥
ಅಷ್ಟಾಂಗ ಯೋಗದಲಿ। ಮೆಟ್ಟಿ ನಡೆಸುವ ಭೇದ
ಮತ್ತಾರು ಬಲ್ಲರೈ ಯೋಗಿನಾಥಾ॥ ॥೧೧೪೩॥[ಸಂ-೭೮]

ಗುರುಲಿಂಗಜಂಗಮದ। ಹವಣುಗೆಟ್ಟಿತು ಸೀಮೆ।
ಹವಣನಱಿವವರಾರು।ಶಿವಯೋಗ ಮತದ।
ತನುತ್ರಯವ ಮಲತ್ರಯವ।ನತಿಗಳದು ಸ್ವಹಾದೀಕ್ಷೆ।
ಪರಿಯಾತನಱಿವನೈ ಯೋಗಿನಾಥಾ॥ ॥೧೧೪೪॥[ಸಂ-೮೦]

ಭಕ್ತ ಮಾಹೇಶ್ವರನು। ಚಿತ್ತವಿಪ್ಪಾ ಭೇದ।
ಮತ್ತೆ ಸದ್ಭಕ್ತಿಗಜ ಮಸ್ತಕದಲಿ।
ಒಪ್ಪಿ ನಡಸುವ ಭೇದ। ಆಱಾಱಱಿಮ್ಮೀಱಿ
ಮೇಲೆ ನಿಂದಿತು ಗುರುವೆ ಯೋಗಿನಾಥಾ॥ ॥೧೧೪೫॥[ಸಂ-೭೯]

ಕರಸ್ಥ[ಲ]ದ ಅಚಲದಲಿ। ಸಕಲವ್ಯಾಪ್ತಿಯ ಕೂಡಿ
ಅನುಕರಿಸಿಯಿಪ್ಪುದದು ಭೇದ ನೋಡಾ।
ಬಹಳ ಘನತೆಯನೊಂದು। ಮಾಡಿ ಕರದೊಳಗಿಟ್ಟ
ಭೇದ ನಿನ್ನಯ ರೂಪು ಯೋಗಿನಾಥಾ॥ ॥೧೧೪೬॥[ಅ-೫೭]

ಐದಾಱುಯೇಳೆಂಟು। ಸೀಮೆ ಮಾಡಿಯೆ ನಿಲಿಸಿ
ಅಯ್ಯ ನಿನ್ನಯ ಮಠವು ಘಟಿತ ಘಟಿತ।
ತತ್ವ ಪದದತ್ತಲಿ। ಮಂಟಪದ
ಹತ್ತೆ ಸಾರಿದ ಚಿತ್ತ ಯೋಗಿನಾಥಾ॥ ॥೧೧೪೭॥

ಹಾಲುಂಡ ಬಳಿಕ। ಮತ್ತೆ ಆನೇನುಂಬೆನ್ನೈ
ಹಾಲಿಂದ ಇನಿದುಂಟೆ ಎಲೆ ಪರಶಿವಾ॥
ಆ ನಿನ್ನ ಕೂಡಿದ। ಆನಂದ ಸುಖಕೆ ಮತ್ತೇನು।
ಪ್ರತಿ ಹೇಳುವೆನು ಯೋಗಿನಾಥಾ॥ ॥೧೧೪೮॥

ಅಜಹರಿಗಳಜೆಯರ್ರೈ। ನಿಗಮಗಳು ಕಾಣವ್ಯೆ।
ಮುಸುಕಿ ಮೀಱುತಿಪ್ಪ ಅಂಗ ಪರಿಯ॥
ಪರೀಕ್ಷಿಸುವ ಪರಿಯಿನ್ನು। ಸಮವ ಕಾಣೆನು ಶಿವನೆ।
ಗುರುವೆ ನೀನೆ ಬಲ್ಲೆ ಯೋಗಿನಾಥಾ॥ ॥೧೧೪೯॥

ಯೋಗಭೂಷಣ ನಿಮ್ಮ ಆದಿಯಕ್ಷರಭೇದ
ಆದಿ ಆಧಾರಂಗಳಿಲ್ಲದಂದು,
ಆನಂದಸ್ಥಾನದಲಿ ಇಪ್ಪ ಗುರುಬಸವಣ್ಣ
ತಾನೆನ್ನ ಕರುಣದಿಂ ನಿತ್ಯನೆನಿಸಿ,
ಯೋಗಸಿದ್ಧಾಂಗದಲಿ ಆದ ಪಂಚಬ್ರಹ್ಮದಿಂದಾದ
ಆಗಾದೆನ್ನೈ ಚೆನ್ನಬಸವತಂದೆ.
ಯೋಗಮೂರುತಿನಾಥ ನೀನೆನ್ನ ಗುರುವಾಗಿ
ಶಿವಯೋಗಿ ಆನಾದೆನ್ನೈ.
ನಿನ್ನವರ ಹೊರಗೆಯ್ದಿದೆಯಾಗಿ ಗುರು ಪ್ರಭುರಾಯ ನಾ ನಿಮ್ಮ

ಕರುಣದಲಿ ಶಿವಯೋಗಮುದ್ರೆಯ ನೆನದು ಸುಖಿಯಾದೆನು.
ಆಗಮಕ್ಕೊಳಗಾದ, ಮತ್ತಾಗಮಕ್ಕೆ ಹೊಱಗಾದ,
ಆನಂದಸ್ಥಾನದಲಿ ಸಯವಾದೆನ್ನೈ ದೇವ.
ಯೋಗಜ್ಞಾನ ಯೋಗಿನಾಥನ ಕರುಣ
ನಿಮಗಾಯಿತು ಶ್ರೀಗುರುವೆ ಚೆನ್ನಬಸವತಂದೆ. ॥೧೧೫೦॥[II–೨೮೨]

ಕರುಣ ಕಾನನಗೊಳಗೆ ಇರಿಸಯ್ಯ ಎನ್ನುವನು,
ಕರುಣಸುಧೆ ಸಾಮುದ್ರದೊಳಗೆನ್ನುವ,
ಓಲಾಡುವಂತೆ ಚಿತ್ತಲೀಲೆಯಾನಂದದಲಿ
ಏಕೇಕವೆನಿಸುವ ಮನದ ಮಧ್ಯದ ಗ್ರಾಮ
ಹೊಲಬುಗೆಟ್ಟೆನ್ನುವನು ಹೊಲಬುಗೆಟ್ಟಂತಿರಿಸು ಯೋಗಿನಾಥಾ॥ ॥೧೧೫೧॥[ಸಂ–೨೨]

[ಯೋಗಮುದ್ರೆ ಸಮಾಪ್ತ]

ಸಮತೆ:

ಸರ್ವವೆಲ್ಲವು ನೀನು। ಎನುತಿರ್ಪುದದು ಸಮತೆ
ಸರ್ವಜೀವಂಗಳು ತಾನೆಯೆಂದು।
ಏಕಏಕವೆಂದು ಭೇದಿಸಿ ವಾದಿಸದೆ
ಸರ್ವವೂ ತಾ ಸಮತೆ ಯೋಗಿನಾಥಾ॥ ॥೧೧೫೨॥

ಎಸಳ ಕುಸುಮದ ಒಳಗೆ ಸಸಿವ ಖೇಚರದಲ್ಲಿ,
ಸಮತೆವೊಂದಾನಂದದಣುವು ನೋಡಾ.
ಸ್ಫಟಿಕವರ್ಣದ ಅಣುವು ಪ್ರಕಟವಾಗಿಯೆ ಈಗ,
ಘಟಿಸಿತ್ತು ಲೋಕ ಲೋಕದ ಮೇಲಕೆ.
ಆನಂದ ಲೋಕದ ಮೇಲಕೆ ಅಕ್ಷರದ ಅನುಮಿಷದ ದೃಷ್ಟಿ
ತನ್ನಯ ತತ್ವ, ಮುಟ್ಟಲೀಯದ ಬೊಮ್ಮ ಬ್ರಹ್ಮಾಂಡದ
ಆದಿಯಾಮೋದವನು ಭೇದಿಸಬಲ್ಲಡೆ
ಸಮತೆ ಸತ್ಯದ ರೂಪು ಯೋಗಿನಾಥ. ॥೧೧೫೩॥

ಮೂಱಕೆ ಮುನ್ನಾದದತಿಶಯದ ಸಮತೆಯನು,
ಮೂಱೊಂದು ರೂಪಾದ ತಾಮಸಿ ಸಮತೆ,
ಆಱೂಢದ ಕೂಟ ಆಱಾಱಱಿಮ್ಮೇಲೆ ತೋಱಿಪ್ಪ ಬಿಂದುವಿನ
ಆಱೂಢ ಸಮತೆಯಲು ಯೋಗಿನಾಥಾ. ॥೧೧೫೪॥

ಹರಿ ಬ್ರಹ್ಮರು ನಿಮ್ಮ ಆದ್ಯಂತವಱಿತೆವೆಂದೀಗ
ಹವಣಿಸದೆ ಕೊಂಡರ್ರೈ ಸಮತೆದೀಕ್ಷೆ.
ಅದಱ ಗುಣಮತಿಸಾರ ಹವಣಿಸದೆ ತಮಗೀಗ
ಭವಗಳು ಹಲವುವಾಗಿ ಸುಮತೆಯನು,
ಮನವನು ಅಜಲೋಕದಲಿಯಿಟ್ಟು, ಪ್ರಕಟಿಸದೆ
ದೀಕ್ಷೆಯನು ಹಡೆದವರು ಪುರಾತರ್ರೈ, ಭವದೂರರು.
ಆದಿಯಕ್ಷರ ಭೇದ ಆಮೋದ ಸಮತೆಯು ಶ್ರೀ ಮಲ್ಲಿನಾಥಾ॥ ॥೧೧೫೫॥

ಒಂದೊಂದು ಪರಿಯಲ್ಲಿ। ಬಂದು ಬಂದಾಡಲ್ಕೆ
ಹೊಂದಿಯಾಡುದು ಮತ್ತೆ ಭೇದ ಬೇಱಿ ಎನ್ನ।
ತಂದೆ ಸುಜ್ಞಾನದ। ಮಾತೆ ಸಮತೆಯ ಗುಣ
ಹಿಂದು ಮುಂದಱಿತೆನ್ರೈ ಯೋಗಿನಾಥಾ॥ ॥೧೧೫೬॥[ಸಂ-೧೬]

ಸಮತೆ ದೀಕ್ಷೆಯು ಭವಿಸಿ। ಸುಮತಿಯಾದುದು ದಿವ್ಯ
ವಿಮಲ ಧವಳಾಂಗಗೆ ನೆಲೆಯು ಆಗಿ।
ಆನಂದಕೂಟದಲಿ। ಆನಂದಸಂಯೋಗ
ಆಱೂಢ ಸಮತೆಯನು ಕೂಡಿ ನೀನಾದೆನ್ರೈ ಯೋಗಿನಾಥಾ॥ ॥೧೧೫೭॥

ನೇಮಾಕ್ಷ[ರ]ಕೆ ನಿನ್ನಯ ನಾಮವೆ ಸಮತೆ,
ಕಾವ್ಯಾರ್ಥಕಿವು ನಿನ್ನ ನೆನಹು ಸಮತೆ,
ಸೋಮಪ್ರಭೆಯೊಳಗೆ ಮತ್ತಾಡುತಿಪ್ಪುದು ಸಮತೆ,
ನಾಮಲಿಂಗಾನುಸಾರಣ ಸಾರಣದಿಮ್ಮೇಲೆ
ತೋಱಿಪ್ಪ ವರ್ಣ ಬಹುರೂಪು ರೂಪು.
ಆದಿಯಾಧಾರದ ವಿಭೇದಿಸುವ ಸಮತೆಯನು
ಸಾಧಿಸಿದವ ನೀನೆ ಯೋಗಿನಾಥಾ. ॥೧೧೫೮॥

ಎರಡೆಂಟನತಿಗಳದು ಐದಾಱನೆ ಮೀಱಿ,
ಅಯ್ಯ ನಿನ್ನಯ ಗ್ರಾಮ ಚೌಗ್ರಾಮವೈ.
ಐದಾಱು ಮಂಟಪದ ಐಗೋಣೆಯಿಮ್ಮೇಲೆ
ಐವರಂ ಪುಲಿ-ಕರು ಸಮತೆ ರೂಪು.
ಅಯ್ಯ ನಿನ್ನಯ ರೂಪು ಸ್ಥಿರ ಬದುಕು ಆನಂದ
ಸಮತೆಯಲಿ ತೋಱಿಪ್ಪುದೈ ನಿನ್ನ ರೂಪು
ಸಮತೆಯ ಶಾಖೆ ಯೋಗಿನಾಥಾ. ॥೧೧೫೯॥

ಸತ್ವರಜತಮದಲ್ಲಿ। ಹೊತ್ತಿಪ್ಪುದದು ಬೀಜ।
ಸುತ್ತಿ ರೂಪಪ್ಪುದೀ ಸಮತೆಶಾಖೆ॥
ಸುತ್ತಿಪ್ಪ ಪ್ರಪಂಚ ಮುತ್ತಲೀಯದೆ ಸಮತೆ।
ತತ್ವಮಸಿಯಪ್ಪುದೈ ಗುರುವೆ ಯೋಗಿನಾಥಾ॥ ॥೧೧೬೦॥
ಎರಡೂರ ಮಧ್ಯದಲಿ ಕಡಲು ಹಿರಿಯಿತು ಬೊಮ್ಮ
ನಡುವೆ ತೇಕಾಡಿದರು ಹರಿ ಬೊಮ್ಮರು.
ಆದಿಯಾಧಾರವನು ಭೇದಿಸಿ[ಹೆ]ವೆಂದೀಗ
ಮೂಬಣ್ಣವಾದರೈ ದೈವ ಕುಲವು,
ಕಡಲ ಕೂಡಿದ ಬೊಮ್ಮ ಕರುಣ ಕಾನನದೊಳಗೆ
ನೆನಹು ನಿನ್ನ ಶಾಖೆ ಸಮತೆ ಮುಕ್ತಿ ಯೋಗಿನಾಥಾ. ॥೧೧೬೧॥

ಲೋಕ ಹದಿನಾಲ್ಕಱಲಿ ಐಕ್ಯೈಕ ಸಮತೆಯನು
ಠಾವಱಿದು ಗ್ರಾಮವನು ನೋಡಿ ರಚಿಸಿ,
ಸೀಮೆ ಸಾಯುಜ್ಯದಲಿ ತರಳ ನದಿ ಹರಿವುತಿರೆ,
ತರುಣಿಯ ಮಸ್ತಕದ ನದಿಯು ಅಱಿತು,
ಅತಿಶಯದ ಆನಂದಗಾಳಿ ಬೀಸಲು ತಂದ ಪರಿಮಳವು
ನೇತ್ರದಿ ಊರ್ಧ್ವವಾಗಿ
ಅತಿಶಯದ ರೂಪ ಕಪಿಲಸಿದ್ಧ ಮಲ್ಲಿಕಾರ್ಜುನನ
ಅವಗ್ರಹಿಸಿದ ರೂಪು ಸಮತೆ ತಾನೆ. ॥೧೧೬೨॥

ಆರೇನನೆಂದರೆಯು। ಮೌನಗೊಂಬುದು ಸಮತೆ
ಧ್ಯಾನಾಜೂಢರು ಆಗಿ ಶಿವಜ್ಞಾನದ।
ನಾನಾ ಪ್ರಕಾಶದಲಿ। ದೀಪ್ತಿ ಸಂಚಲಿಸಲ್ಕೆ
ಯೋಗವಪ್ಪುದು ಸಮತೆ ಯೋಗಿನಾಥ॥ ॥೧೧೬೩॥[ಸಂ-೯೦]

ಆರೆನ್ನನತಿ ದುರ್ಜನಾದಿತನವೆಂಬ
ಅವರೆನ್ನ ಮನದ ಮತಿಗಳ ಬೆಳಗುವವರೆಂದು,
ನಾನೆನ್ನೆ ಎನಗೆ ಸಮತೆಯು ಆಗೆ
ಯೋಗಿನಾಥಂಗೆ ನಾನೆಲೆ ಸಮತೆಯೈ. ॥೧೧೬೪॥

ಸಂಗಮದಲನುಭಾವಿ, ಸಂಯೋಗದಲಾನಂದ,
ಲಿಂಗ ನಿಮ್ಮಯ ರೂಪು ಸಮತೆ ರೂಪು.
ಮಂಗಳಾನಂದಮಯ ಯೋಗಿನಾಥನ ಕರುಣ
ಲಿಂಗ ಸಮತೆಗಲ್ಲದೆ ಒಪ್ಪುತಿರದು.
ಮೂಜಿಜೆಮ್ಮೂರ್ತಿಯದು
ಮೂಜಾರು ಮೀಜುತಿರೆ ತಾತ್ಪರಿಯದ
ಆಜಾಜಿಜೆಮ್ಮೇಲೆ ಮೀಜೆಪ್ಪ ಸಮತೆಯನು
ಆರು ಬಲ್ಲರು ಹೇಳ, ಅಪ್ರಮಾಣ!
ಆನಂದ ಸಮೆಗಳು ತಾನು ಸಮೆಯಾದರೆ
ಯೋಗಿನಾಥನ ಕರುಣ ಸಮತೆ ಪದವು. ॥೧೧೬೫॥

ಕರುಣರಸ ಕಾನನದ। ಹೊಲಬುದಪ್ಪಿದ ಸಮತೆ
ತನುತ್ರಯವನೀಕ್ಷಿಸುತ ಟೇಕರಿಗಳದು।
ಮನದ ತನುಗುಣಗಳನು। ಹದುಳದಲಿರಿಸಿದ ಬ್ರಹ್ಮ
ಕರುಣ ಸಮತೆಯ ರೂಪ ಯೋಗಿನಾಥಾ॥ ॥೧೧೬೬॥

ಬಹುಭ್ಯಾಯದ ಬಣ್ಣ। ಭವಿಸುತಿಹುದು ಯೋಗಿ
ಪರಿಭವಕೆ ಬಾರದೆ ಗುರುಕರುಣದ।

ಪರಿಯಾಯ ಸಮತೆಯನು। ಪರೀಕ್ಷಿಸಿ ಪಡೆದರೆ
ಪರಬ್ರಹ್ಮದತ್ತ ನೀ ಯೋಗಿನಾಥಾ॥ ॥೧೧೬೮॥

ಮೂಱು ಮುನ್ನಾದಲ್ಲಿ। ತೋಱುತಿಪ್ಪುದು ಸಮತೆ
ಮೂಱೆಂದು ಆದರದು ಮಾತೆ ಸಮತೆ।
ಆಱಱ್ಮೇಲೆ। ಆಱು ವರ್ಗದಲೊಪ್ಪಿ
ತೋಱುತಿರ್ಪುದು ಸಮತೆ ಯೋಗಿನಾಥಾ॥ ॥೧೧೬೯॥

ಕಡಲ ದಾಟಿದ ಸಮತೆ। ನಡುವೆ ಬಿದ್ದುದು ಬ್ರಹ್ಮ
ನುಡಿಯ ಬ್ರಹ್ಮವನೀಗ ನುಂಗಿ ನುಂಗಿ।
ನುಡಿಯ ಬ್ರಹ್ಮದ ಸಮತೆ।ಓಂಕಾರ ಕೂಡಿದರ
ಅಡಿಗೆಱಗಿ ನಮೋ ಎಂಬೆ ಯೋಗಿನಾಥಾ॥ ॥೧೧೭೦॥

ಪಾಪಿಕೋಪಿಯ ಪೂಜೆ। ಅನೇಕ ಪರಿ ನಿರ್ಬಂಥ
ತಾಪತ್ರೆ ಹಿಂಗಿದ ಸಮತೆವಿಡಿದ।
ಸಾತ್ವಿಕ ಶರಣರ। ಸರ್ವಾಂಗದೊಳಗಿಪ್ಪೆ
ನಿಹಿತಮನೆ ನಿನಗಪ್ಪುದದು ಗುರುವೆ ಯೋಗಿನಾಥ॥ ॥೧೧೭೧॥[ಸಂ-೫೪]

ಮತ್ತೆ ಲಿಂಗಾರ್ಚನೆಯ। ಭಕ್ತಿಯಿಂದವೆ ಮಾಡಿ
ನಿತ್ಯಪ್ರಸಾದವನು ಸ್ವೀಕರಿಸಿ।
ಮತ್ತೆ ಫಲಪದಗಳು। ಭವನೊಲ್ಲೆನುಯೆಂದು
ಮುಕ್ತಿ ಸಮತೆ ನೀನೆಂದೆನಿಪಾ।
ಭಕ್ತರ ಸಂಗವದು। ಮತ್ತೆ ತುದಿಯಾರ್ಥಪದ
ತತ್ವಮಸಿಯಿಂದತ್ತ ಯೋಗಿನಾಥಾ॥ ॥೧೧೭೨॥

ಐವರಿಂದ್ಯೆ ಗ್ರಾಮ। ಅತ್ತ ನಿನ್ನಯ ಸೀಮೆ
ತತ್ವ ಆಱಾಱೆಂದತ್ತ ಮಠವ್ಯೆ।
ಮುಕ್ತ್ಯಂಗನೆಯ ಕೂಟ। ಭಕ್ತ್ಯಂಗನೆಯ ನೋಟ
ಮತ್ತೆ ಸಮತಾಂಗನೆಯ ದೀಕ್ಷತ್ರಯವ್ಯೆ।

ರೂಪ ನೀಕರಿಸದೆ। ಅರೂಪ ಕೊಂಡಾಡದೆ
ಏಕಭಾವವುಯೆಂದು ಅರ್ಚಿಸುವ ಶರಣರ
ಶ್ರೀಪಾದದೊಳಗಿರಿಸು ಯೋಗಿನಾಥಾ॥ ॥೧೧೭೩॥[ಸಂ-೪೪]

ಅಕ್ಷರವು ಅಪ್ರಮಾಣವು। ಸದಾಕಾಲದಲಿ
ಏಕೋ ದೇವನ ಹಿಡಿದು ನಿತ್ಯವಾಗಿ।
ಆ ಹಸ್ತ ಆವೊತ್ತು। ಆ ಹಸ್ತ ಶಿವವಾಸ
ಆ ಹಸ್ತ ಸಕಲದೈವಾದಿ ಶ್ರೇಷ್ಠ।
ಅನೇಕ ರೂಪನು ಏಕೋ। ರೂಪಾಗಿ ಹಿಡಿದುದ್ದೈ
ಯೋಗಿನಾಥಾ ನಿಮ್ಮ ಶರಣರ ಸಮತೆ ಹಸ್ತ॥ ॥೧೧೭೪॥[ಸಂ-೭೩]

ಲಿಂಗ ನಿನ್ನಯ ಸಂಗ। ಲಿಂಗ ನಿನ್ನಯ ನೋಟ
ಲಿಂಗ ನಿನ್ನಯ ಹಾಡಿ ಹೊಗಳುತಿರ್ಪ।
ಮಂಗಳಾತ್ಮಕ ಭಕ್ತರೆಲ್ಲಪ್ಪರವರಲ್ಲಿ
ಲೆಂಗಿಯಾಗಿರಿಸೈ ಯೋಗಿನಾಥಾ॥ ॥೧೧೭೫॥[ಅ-೭೧]

ಅಕ್ಷರವು ಐದಕ್ಕೆ। ಅಕ್ಷರವು ಆಱಕ್ಕೆ ಮತ್ತೆ
ಅಕ್ಷರವು ಮೂಱು ಶಿವಭಕ್ತಿ ಪದವು।
ಬಸವ ಚನ್ನಬಸವ। ಶ್ರೀ ಗುರು ಶರಣೆಂದರೆ
ಮನ ಶುದ್ಧವಪ್ಪುದೈ ಯೋಗಿನಾಥಾ॥ ॥೧೧೭೬॥[ಮಿ-೬೯]

ಶ್ರೀ ಗುರುವೆ ಬಸವಣ್ಣ। ಪ್ರಸಾದ ಬಸವಣ್ಣ
ಆನಂದದಾದಿ ಚೆನ್ನಬಸವಣ್ಣ ತಂದೆ।
ನೀನೆನಗೆ ಗುರುವಾಗಿ। ಅನೇಕ ದುಃಖ ಕರ್ಮವನು
ನಿಮ್ಮ ನಾಮಾಕ್ಷರತ್ರಯದ ನೇಮದಿಂ ಗೆದ್ದೆನೈ ಯೋಗಿನಾಥಾ॥ ॥೧೧೭೭॥[ಮಿ-೪೪]

ಯೋಗಭೂಷಣ ನಿನ್ನ ಬೇಗ ನೆರೆಯಲು ಬೇಕು,
ಬೇಕುಬೇಕೆಂದೆಂಬ ಸದ್ಭಕ್ತ
ಮನದ ಕೊನೆಯಲಿ ನಾನು ತಿಳುಹುವೆನು ಅಕ್ಷರವ

ಬಸವ ಬಸವಾಯೆಂಬ ಮಧುರಾಕ್ಷರತ್ರಯದೊಳಗೆ
ತಾನೀಗ ತ್ರೈಲಿಂಗವೊಪ್ಪಿಕ್ಕು,
ಘನಗುರು ಬಸವಣ್ಣ ಯೋಗಿನಾಥಾ. ॥೧೧೭೮॥[ಸಂ-೭೫]

ವಸುಧೆಯಿಲ್ಲದೆ ಮುನ್ನ। ದೆಸೆಯೆಂಟ ನಿರ್ಮಿಸದೆ
ಶಶಿರವಿಗಳೆಂಬವರ ನಾಮವಿಲ್ಲ।
ವಶವಲ್ಲದಾನತದ। ದೆಸೆಗೆಟ್ಟ ಲಿಂಗವನು
ಹೆಸರಿಟ್ಟ ಗುರುಬಸವ ಯೋಗಿನಾಥಾ॥ ॥೧೧೭೯॥[ಬ-೨]

ನಿನ್ನಾಜ್ಞೆಯಿಂ ಲೋಕ। ಒಪ್ಪಿಪ್ಪುದೈ ತಂದೆ
ಬಸವಣ್ಣನಾಜ್ಞೆಯಿಂ ನೀನು ಇಪ್ಪೆ।
ಅನುಮಿಷಾನಂದದಲಿ । ಅಕ್ಷರತ್ರಯ ಗುರು
ಬಸವಮೂರ್ತಿಯು ಸಿದ್ಧ ಶ್ರೀ ಮಲ್ಲಿಕಾರ್ಜುನಾ। ॥೧೧೮೦॥[I-೫೩೧]
ಆದಿಯಾಧಾರದಲಿ । ಆದ ಪಂಚಮ ಸೀಮೆ।
ಗ್ರಾಮವೆಂಟನು ನೋಡಿ ಹತ್ತ ನೋಡಿ॥
ಸೀಮೆ ಸಾಯುಜ್ಯದಲಿ । ಸಂಘಮವು ಆದೊಡೆ
ಆ ಬಸವಪುತ್ರನೈ ಯೋಗಿನಾಥಾ॥ ॥೧೧೮೧॥[ಬ-೫]

ಆಜ್ಞೂಢದಲಿ ಆರು । ಐಕ್ಯವನು ಐದಿಹರು
ಅವರು ಬಸವಾಕ್ಷರತ್ರಯದಿ ಭವಿಸಿದವರು।
ಶಿಶು ಸಸಿಯನೆ ನುಂಗಿ। ಸಸಿಯೊಳಗೆ ಬ್ರಹ್ಮಾಂಡ
ಪಸರಿಸಿಪ್ಪುದನು ಕಂಡೆ ಯೋಗಿನಾಥಾ॥ ॥೧೧೮೨॥[ಬ-೧೦೮]

ನೀಲಕಂಧರದಲ್ಲಿ। ಭಾಳಲೋಚನನಿರ್ಪ।
ಪ್ರಾಣಲಿಂಗಕ್ಕೆ ತಾ ಸಂಬಂಧವೈ।
ಆಜ್ಞೂಢದತಿಶಯದ। ಪ್ರಸಾದ ತತ್ವವನು।
ತೋಱಿದಾತನು ಬಸವ ಮಲ್ಲಿಕಾರ್ಜುನಾ॥ ॥೧೧೮೩॥

ಮೂಱಕ್ಕೆ ಮುನ್ನಾಗಿ। ಮೂಱು ತನ್ನಯ ಸೀಮೆ
ಮೂಱೊಂದು ಆದನೈ ಬಸವಣ್ಣನು।
ಆಱು ಮನೆಯಲ್ಲಿದ್ದು। ಆಱಾಱಱಿಮ್ಮೇಲೆ
ಮೀಱಿಪ್ಪ ಭಕ್ತಿಯಲಿ ತೋಱಿಪ್ಪುದೀಗ।
ತನ್ನ ರೂಪು ರೂಪರೂಪು। ಚೆನ್ನಬಸವಣ್ಣನಿಂದಲಿ
ಆನು ನೀನಾದೆನೈ ಮಲ್ಲಿಕಾರ್ಜುನಾ॥ ॥೧೧೮೪॥

ತಪ್ಪದೆ ಒಪ್ಪಿಪ್ಪ। ಅಕ್ಷರದ್ವಯದಲ್ಲಿ
ತತ್ವ ತುರಿಯಕೆ ತಾ ಮೂಲವಾಗಿ।
ಮತ್ತೆ ನೇಮಾಕ್ಷರದ। ಹತ್ತೆ ಸಾರಿದ ಸೀಮ
ಭಕ್ತಿ ಕಾರಣ ಬಸವ ಮಲ್ಲಿಕಾರ್ಜುನ॥ ॥೧೧೮೫॥

ಆಱು ವ್ರತವೂ ತನಗೆ। ನಿಹಿತವಾಗಿಯೆ ತೋಱಿ
ಮೀಱಿಪ್ಪುದೈ ತತ್ವ ತನುಗುಣಗಳ।
ಭಕ್ತಿಯೆಂಬಾನತದ। ತಥ್ಯವಾದಲ್ಲೀಗ।
ಮತ್ತೆ ವಿಹಿತನು ಬಸವ ಮಲ್ಲಿಕಾರ್ಜುನಾ॥ ॥೧೧೮೬॥

ಆದಿ ಆಧಾರದಲಿ ಆದುದೈ,
ಅನುಮಿಷಗೆ ತೋಱಿಸಿದರೈ ಗುರು ಚರಲಿಂಗವ.
ಮೂಱು ದೀಕ್ಷೆಗೆ ಮೂಲ ಸ್ಥಾಣು ನೀನೈ ತಂದೆ,
ಆಱು ಭಕ್ತಿಯು ನಿನ್ನ ಶಾಖೆಯಾಗಿ.
ಕಾರುಣ್ಯಕರ ಚೆನ್ನಬಸವಣ್ಣ ಭಕ್ತಿಯನು,
ತೋಱಿಸಿದನೈ ಎನಗೆ ಮಲ್ಲಿಕಾರ್ಜುನಾ. ॥೧೧೮೭॥

ಪ್ರಸಾದವೈದಾಱು। ಪಾದೋದಕವೆರಡೈದು
ಆದಿ ಅಕ್ಷರದಲ್ಲಿ ದೀಕ್ಷತ್ರಯವ।
ನಾದದಿಂದವೆ ತೂಗಿ। ಬಿಂದು ಸಮನಿಸದೀಗ
ಆಧಾರಸ್ಥಾನಕೆ ಅತ್ಯತಿಷ್ಠಾ।
ಮೂಲಸ್ಥಾನದಲ್ಲಿರ್ದ। ಮೂನ್ನೂಱು ಕಮಲಕ್ಕೆ
ಆದ ಭ್ರಮರನು ಬಸವ ಮಲ್ಲಿಕಾರ್ಜುನಾ॥ ॥೧೧೮೮॥

ಅನ್ಯವೆಂಬುದು ತನ್ನ। ಬಿನ್ನಾಣವಾಗಿಕ್ಕು।
ಅನ್ಯಕ್ಕೆ ಹೊದ್ದನೈ ಅತಿಭಕ್ತಿಯಿಂ॥
ಮನ್ನಣೆಯ ಪ್ರಸಾದ। ತನ್ನ ರೂಪಾಗಿಪ್ಪ।
ಚೆನ್ನಬಸವಗೆ ಶರಣು ಮಲ್ಲಿಕಾರ್ಜುನಾ॥ ॥೧೧೮೯॥

ಪಂಚಬ್ರಹ್ಮದಿಂ। ಪಂಚಶಕ್ತಿಯ ಮೀಜಿ
ವಂಚಿಸುವ ಕಳೆಗಳಿಗೆ ತಾತ್ಪರಿಯವೈ।
ಸಂಚೈವ ನೇಮಾಕ್ಷರಂಚು ತನ್ನಯ ನಾಮ
ಸಂಚಿತಾರ್ಥವು ಎನಗೆ ಪರಲೋಕಕೆ।
ನಾಮ ತನ್ನಯ ನಾಮ। ನಾಮ ಕಾಮಧೇನು
ನಾಮದಿಂ ನೀನಾದೆ ಮಲ್ಲಿಕಾರ್ಜುನ॥ ॥೧೧೯೦॥

ಸ್ಫಟಿಕ ಘಟದೊಳಗೀಗ। ನಿಟಿಲಾಕ್ಷನನು ಮಾಟ
ಸ್ಫಟಿಕ ದೀಪ್ತಿಸಿತಯ್ಯ ದೆಸೆಯು ದೆಸೆಗಾಗಿಯು।
ಶಿಶುವಿನ ಮಸ್ತಕದಿ ಒಸರುತಿದ್ದುದು ಭಕ್ತಿ
ದೆಸೆದೆಸೆಯಲಿ ಬಸವ। ಚೆನ್ನಬಸವ ಪ್ರಭು
ಶರಣು ಶರಣೆಂದು ಇದ್ದೆಸೆಗೆಟ್ಟೆ ನಾನೀಗ ಮಲ್ಲಿಕಾರ್ಜುನಾ॥ ॥೧೧೯೧॥[II-೨೮೩]

ಮುಟ್ಟಿ ಮೂರ್ತಿತ್ರಯದ। ಮುಟ್ಟದಿಹ ಭೇದವನು।
ದೃಷ್ಟವಾಗಿಯೆ ಕಂಡವರಾರು ಹೇಳಾ॥
ಸೃಷ್ಟೀಶ ರೂಪು। ಬಸವಣ್ಣ ತಾ ಕಂಡೀಗ।
ಪಟ್ಟಕ್ಕರುಹನುವಾದ ಯೋಗಿನಾಥ॥ ॥೧೧೯೨॥[ಬ-೬೫]

ಎರಡೆಂಟು ಗ್ರಾಮದಲಿ। ನುಡಿಯ ಬ್ರಹ್ಮದ ಶಬ್ದ
ನುಡಿಗೆ ಎಡೆಗುಡದಾತ ಪರಮಯೋಗಿ।
ಕಡಲ ದಾಂಟಿದ ಸೀಮೆ। ನುಡಿಯಿಂದಲತ್ತತ್ತ
ಒಡಲುಗೊಂಡವರಿಗೆ ಕಾಣಲರಿದು॥
ತಡಿಯ ತಡಿಯೊಳಗಿದ್ದು। ನುಡಿಯ ಬ್ರಹ್ಮಕೆ ನಾಚಿ
ಮೃಡ ನಿನ್ನೊಡಗೂಡಿದರು ಗುರುವೆ ಯೋಗಿನಾಥಾ॥ ॥೧೧೯೩॥[ಸಂ-೧೧೨]

ಬಸವ ಕಾರಣ ಬಸವ। ಬಸವ ಕಾರಣ ವಸುಧೆ।
ಬಸವ ಕಾರಣ ಚೆನ್ನಬಸವ ಬಂದ।
ಬಸವ ಚೆನ್ನಬಸವ ಪ್ರಭು ಶಿವಮಾತೆಯಲಿ
ಶಿಶುವಾಗಿ ಜನಿಸಿದನು ಯೋಗಿನಾಥ॥ ॥೧೧೯೪॥

ಇನ್ನು ಜನನವು ಇಲ್ಲ। ಮುನ್ನವೆ ಸಂದಳಿದೆ
ಮನ್ನಣೆಯಿಂದ ನೀ ಕಳುಹಿದಂತೆ।
ಉನ್ನತೋನ್ನತನಾದೆ । ಚೆನ್ನಬಸವನ ಕರುಣ
ನಿನ್ನ ರೂಪಾದೆನೈ । ಇನ್ನೆನಗೆ ಅರಿದುಂಟೆ ಶ್ರೀ ಮಲ್ಲಿಕಾರ್ಜುನಾ॥ ॥೧೧೯೫॥

ಬಸವನೆಂಬಾರಣ್ಯದೊಳಗಾನು ತಪಿಸಿದ್ದೆ
ಪರುಷವೆ ದೊರಕಿತ್ತು ಪ್ರಸಾದದ।
ಬಸವ ಚೆನ್ನಬಸವ।ನೆಂಬನುಮಿಷಾಕ್ಷರದಿಂ
ಹಸನಾದೆನೈ ಗುರುವೆ ಶ್ರೀ ಮಲ್ಲಿಕಾರ್ಜುನಾ॥ ॥೧೧೯೬॥

ಎಪ್ಪತ್ತು ಗ್ರಾಮದೊಳ।ಗೊಪ್ಪಿಪ್ಪ ನಿನ್ನುವನು
ಉತ್ತಮಾಂಗಕೆ ತಂದು ಕರಸ್ಥಳದಲಿ।
ತತ್ವ ತೂರ್ಯಾರ್ಥದಿಂ।ದತ್ತಲಾಗಿಹ ಬ್ರಹ್ಮ
ಮತ್ತೆ ನಾ ನೀನಾದೆ ಯೋಗಿನಾಥಾ॥ ॥೧೧೯೭॥[ಅ-೫೬]

ಮೂಱು ಸೀಮೆ ಮೀಱಿ। ಮೂಱು ಗ್ರಾಮವ ಮೀಱಿ
ಮೂಱು ಲಿಂಗದ ಬೀಡನೆಯ್ದೆ ಹೊಕ್ಕು।
ಸಾಱಿ ಸಾಱಿಯೆ ತತ್ವದಾನತವನೆಯ್ದಿದಡೆ
ಮೂಱು ತಾನೊಂದಕ್ಕು ಯೋಗಿನಾಥಾ॥ ॥೧೧೯೮॥[ಸಂ-೧೦೩]

ಮುನ್ನಾದಿಯಲಿ ಆದ। ಉನ್ನತೋನ್ನತ ವೃಕ್ಷ
ತನ್ನ ಗುಣದಿಂದಲವು ಮೂಱಾದವು।
ಬಿನ್ನಣದಲಾಱಾಗಿ। ಆಱಾಱಱಿಮ್ಮೀಱಿದಡೆ
ಇನ್ನು ನಿಬ್ಬೆಱಗಾದೆ ಯೋಗಿನಾಥಾ॥ ॥೧೧೯೯॥[ಅ-೮೨]

ಗ್ರಾಮ ಸುಟ್ಟಲ್ಲಿಯು। ಗ್ರಾಮ ಮೂಲವುವಾಗಿ
ಗ್ರಾಮ ಮೂಱೊಂದಾಗಲತಿ ಮಧುರವೈ।
ಗ್ರಾಮದಿಂ ಮೇಲಿಪ್ಪ ಅಮೃತ ಕೊಳಕಾನೀಗ
ಜಾತಕನುವಾದೆನ್ನೈ ಯೋಗಿನಾಥ॥ ॥೧೨೦೦॥

ಆ ಗ್ರಾಮ ಸಕಲಕೆ। ಆ ಗ್ರಾಮ ನಿಷ್ಕಲಕೆ
ಆ ಗ್ರಾಮ ತುರಿಯ ತುರಿಯಾತೀತಕೆ।
ಆ ಗ್ರಾಮ ವೀಧಿಯೊಳು ಸೋಮಪ್ರಭೆಯನು ನುಂಗಿ
ದಾ ಗ್ರಾಮಕೊಡೆಯ ಯೋಗಿನಾಥಾ॥ ॥೧೨೦೧॥

ದೆಸೆದಿಕ್ಕು ವಳೆಯದಲಿ। ಪಸರಿಸಿದ ಗ್ರಾಮವನು
ದೆಸೆಗಳೆಂಟೆಂಟಾಗಿ ಕೇರಿ ಆಱು।
ಬಾಗಿಲುಗಳೊಂಬತ್ತು। ಮೇಲಿಪ್ಪರಂಗರಿಕರ
ಬಾಗಿಲೊಂದುವನು ಅಱಿಯದೀಗ।
ಹೋದ ಸುದ್ದಿಯನಱಿಯರಾ ಹರಿಬ್ರಹ್ಮರು
ಹೋದರೈ ತಮ್ಮಯ ಪೂರ್ವಕಾಗಿ।
ಹೋಗಿ ಬಪ್ಪುದು ಕಂಡು। ಗುರುವಿನಾಜ್ಞೆ ಬಡವೆಂದೀಗ
ಆ ನಗುತ್ತಿರ್ದೆನ್ನೈ ಶ್ರೀ ಮಲ್ಲಿಕಾರ್ಜುನ॥ ॥೧೨೦೨॥

ಪಂಚಾಗ್ನಿಯಲ್ಲೀಗ। ಭವಿಸಿರ್ಪ ಭಕ್ತಿ ಸಸಿ
ಹಂಚುಮಾಡಿತು ಸಕಲಯೋಗಂಗಳ।
ತಮವೇಳನತಿಗಳೆದು। ಮದವೆಂಟನೆ ಸುಟ್ಟು
ಒದವಿಕೊಂಡಿತ್ತು ಹನ್ನೊಂದು ಪ್ರಸಾದವ।
ಸದಮಲಜ್ಞಾನ ಈರೈದು। ಪಾದೋದಕದ
ಚೈತನ್ಯರೂಪು ಯೋಗಿನಾಥಾ॥ ॥೧೨೦೩॥

ಲಿಂಗಮುಖದಲಿ ಮೂಱು। ಲಿಂಗ ಅಂಗದಲೈದು
ಲಿಂಗ ಸರ್ವಾಂಗದಲಿ ಮೂಱುವೊಂದು।
ಆಗುತ್ತ ಹಿಂಗದಿಹ। ಹತ್ತೊಂದು ಪ್ರಸಾದವು

ಅನಂಗವಿದಾರಣ ಶ್ರೀ। ಮಲ್ಲಿಕಾರ್ಜುನ ನಿಮ್ಮ
ಮಂಗಳೋನ್ನತ ಪ್ರಸಾದ ಪ್ರಮಾಣಿಂತುಟು॥ ॥೧೨೦೪॥

ಕಲ್ಪಿತೋದಕವೊಂದು, ಅರ್ಪಣೋದಕ ಮೂಱು,
ಮತ್ತೆ ಅಂಗೋದಕವು ತ್ರಯವಾಗಿಯು,
ಮಿಕ್ಕ ಪ್ರಸಾದೋದಕ ಅವು ಮೂಱು ತಾ
ಸತ್ವರಜತಮವನತಿಗಳದವರಲ್ಲದೆ ಹತ್ತೋದಕವನಱಿಯಲರಿದು.
ತಾನು ಚಿತ್ತಶುದ್ಧಿಯಾಗಿ ಗುರುಕರುಣದಿಂದವೆ
ಹತ್ತು ಪಾದೋದಕವ ಗ್ರಹಿಸುವ ಭಕ್ತರಿಗೆ
ಮತ್ತೆ ಸಂದಿಲ್ಲದಿಹೆ ಅವರು ನೀನು.
ಮುತ್ತು ನೀರಲು ಕೂಡಿದಾನಂದ ಭೇದದೊಲು
ತತ್ವಮಸಿಯಪ್ಪನೈ ಶರಣ ಶ್ರೀ ಮಲ್ಲಿಕಾರ್ಜುನಾ. ॥೧೨೦೫॥[II–೩೫]

ಈರೈದು ಗ್ರಾಮದಲಿ। ಓರಂತೆ ತೊಳಲುತಿಹ
ಆದಿತ್ಯಕೋಟಿ ದೀಪ್ತಿಯ ಬೆಳಗನು।
ಮೀಱಿಪ್ಪ ನಿರ್ಮಳ। ಜ್ಞಾನ ನಿರ್ನಾಮನನು
ನಾಮವಾದುದು ಭಕ್ತಿ ಯೋಗಿನಾಥಾ॥ ॥೧೨೦೬॥

ಒಸರಿಪ್ಪ ಕುಂಭದಲಿ ಪಸರಿ ಪರ್ಬಿತು ಬಳ್ಳಿ
ದೆಸೆದೆಸೆಯ ಬೆಟ್ಟಗಳು ಎಂಟುವಾಗಿ,
ಹರಿದುರವಣಿಯ ಭರದಿ ಬೆಟ್ಟ ಪರ್ಬಿತು ಬಳ್ಳಿ
ಹರುಷದಿಂದಿಂಪೊಡದು ಹೂ ಫಲವಾದವು.
ಫಲವಿಲ್ಲದೆ ಹಣ್ಣು ತೊಟ್ಟುಬಿಟ್ಟು
ಪರೀಕ್ಷಿಸುವ ಹಣ್ಣಿನ ಹವಣವನಱಿದಾತ
ತೆಱಹಿಲ್ಲದಂತಾದೆ ಶ್ರೀ ಮಲ್ಲಿಕಾರ್ಜುನಾ. ॥೧೨೦೭॥

ಕುಱುಹುಗೆಟ್ಟಾನಂದ। ಅದಱ ಮೇಲಜಾಂಡ
ಅದಱೊಳಗೆ ಅಕ್ಷರದ್ವಯವು ತಾನು।
ತ್ರೈಲಿಂಗ ಮೂಲಕ್ಕೆ। ಮಾತೆಯಪ್ಪಕ್ಷರದ
ಹವಣನಱಿದವನು ಶಿವ ಯೋಗಿನಾಥ॥ ॥೧೨೦೮॥[ಅ–೧೩೧]

ಸೀಮೆ ಸಂಬಂಧವನು। ಮೀಱಿಪ್ಪ ಬ್ರಹ್ಮಾಂಡ
ಆಱು ಬೆಟ್ಟವು ಮುಟ್ಟಿತಾ ಗಗನದ।
ಮೇಲೆ ಈರೇಳುವನು। ಮೀಱಿಪ್ಪ ಭಕ್ತಿಗಿನ್ನೇನ।
ಸರಿಯೆಂಬೆನ್ನೈ ಯೋಗಿನಾಥಾ॥ ॥೧೨೦೯॥

ತನು ಮಧ್ಯ ಮಂಟಪದ, ಘನ ಧವಳ ಸೂಕ್ಷ್ಮದ,
ತನುಗುಣವನಾರೈದು ಓರಂತೆ ತಾ,
ತನುತ್ರಯವನತಿಗಳೆದು ಮಲತ್ರಯವನೆ ದಹಿಸಿ,
ತ್ರೈಲಿಂಗ ಮೂಲಕ್ಕೆ ತಾನೆಯಾಗಿ,
ಲಿಂಗಮೂಱುವನೊಂದು ಮಾಡಿಪ್ಪ
ಭೇದವನೂ ಅಱಿಯೆ
ಮಂದಚಿತ್ತರಿಗರಿದು ಶ್ರೀ ಮಲ್ಲಿಕಾರ್ಜುನಾ. ॥೧೨೧೦॥

ಅಱಿದಾತ ಕುಱುಹಿಂಗೆ ಬರುತಿಪ್ಪನೆ? ಬಾರ,
ತೆಱಹಿಲ್ಲದಿಪ್ಪನಾ ಲಿಂಗರೂಪರೂಪ
ಘನತರದ ಭಕ್ತಿಯೊಳು ಚಿನುಮಯನು ಎನಿಸುವನ
ಬಱಿಯ ಯೋಗಿಗೆ ಅರಿದು,
ಅಱಿಯಲೀಗ ತೆಱಹಿಲ್ಲದ ಘನತ[ರ]ದ ಪುರುಷರಿಗೆ
ಅಱಿಯಲ್ಲಪ್ಪರೆ ಅಕ್ಕು
ಕುಱುಹಿಲ್ಲದಾ ಭಕ್ತಿ ಯೋಗಿನಾಥಾ. ॥೧೨೧೧॥

ಫಲಪದವ ಬಯಸದಿರು। ಒಲವ ಬಯಸಿಯೆ ನೀನು
ಬಱಿದೆ ಗಾಱಾಗದಿರು ಸಾಯುಜ್ಯದಾ।
ಪದ ನಾಲ್ಕು ಬಯಸದಿರು। ಫಲವಿಲ್ಲ ಭೂರ
ಕರುಣಾಕರನ ಭಕ್ತಿ ಯೋಗಿನಾಥಾ॥ ॥೧೨೧೨॥

ನಿತ್ಯಲಿಂಗಾರ್ಚನೆಯ। ಭಕ್ತಿಯಿಂದವೆ ಮಾಡು
ತತ್ವಾರ್ಥವೆಂಬವನು ಕಳೆದು ನೀನು
ಸತ್ಯಶುದ್ಧಾತ್ಮ। ಕೇವಲಜ್ಞಾನದೊಳು
ತತ್ವಮಸಿಯಪ್ಪನ್ನೈ ಯೋಗಿನಾಥ॥ ॥೧೨೧೩॥[ಸಂ-೪೦]

ಭಕ್ತಿಸಂಯೋಗದಲಿ। ನಿತ್ಯನಾದೆನು ನಾನು
ತತ್ವಫಲಪದಗಳನು ಮೀಱಿ ಮೀಱಿ।
ಅಚ್ಚೊತ್ತಿದಾನಂದ। ಭಕ್ತಿಯೊಳಗೋಲಾಡಿ
ತತ್ವಮಸಿಯಾದೆನ್ನೆ ಯೋಗಿನಾಥಾ। ॥೧೨೧೪॥

ಇಬ್ಬೀಡಿನೊಳಗೀಗ। ಇಮ್ಮತವ ಕಟ್ಟಿ ಅದ
ಕಿಬ್ಬಟ್ಟೆ ಅಪ್ಪುವಿಂದುತ್ಪನ್ನವು।
ಹೊತ್ತಿಪ್ಪ ಸೀಮೆಯಲಿ। ತತ್ವಾರ್ಥವಂ ಕಳೆದು
ತತ್ವಮಸಿಯಪ್ಪುದದು ಯೋಗಿನಾಥಾ॥ ॥೧೨೧೫॥

ಐದಕ್ಷರಕ್ಕಂತ್ಯ। ಆದಿಮಧ್ಯವಸಾನ
ಐವೇದಕಿಂದತ್ತಲದ ರೂಪು।
ಅನುಮಿಷದ ಕೊನೆಯಲ್ಲಿ। ನೆನಹಿನಕ್ಷರ ದ್ವಯದ
ಒಡಗೂಡಿ ನೀನಾದೆ ಶ್ರೀ ಮಲ್ಲಿಕಾರ್ಜುನಾ॥ ॥೧೨೧೬॥

ಚೌಕೋಣೆ ಚೌಗ್ರಾಮ।ದಿಂ ಮೇಲೆ ಕಳಸವೈ
ಕಳಸಕ್ಕೆ ಕೆಲಸ ಗತಿಯಿಂದ ಸವೆದು।
ಕಳಶ ಸಾಲೋಕ್ಯದಿಂ।ದಖಿಲ ಬ್ರಹ್ಮಾಂಡವನು।
ಮುಸುಕಿಪ್ಪ ಬಹಳವನು ರಚಿಸಿದಾತನು ಶಿವನು ಯೋಗಿನಾಥಾ॥ ॥೧೨೧೭॥

ಸಂಗಮಸ್ಥಾನದಲಿ। ಮಂಗಳಾಂಗನ ಬೆಳಗು
ಹಿಂಗದಿಹುದಾದಿಮಧ್ಯಾವಸಾನ।
ತುಂಗ ಗಿರಿಯೊಳಗಿಪ್ಪ। ಮಂಗಳಾನತ ರೂಪ
ಸಂಗಮಂಗಳಕೆ ತಾ ಸಕಲಸುಖವೂ।
ಹಿಂಗದಿಹ ಪ್ರಪಂಚ।ನೊಂದು ಮಾಡಿದಡಾತ
ಹಿಂದು ಮುಂದಱಿದನ್ನೆ ಯೋಗಿನಾಥಾ॥ ॥೧೨೧೮॥

ಮುಟ್ಟುವುದಕೆಯು ಮುನ್ನ। ಹುಟ್ಟಲೆಂದಾನಿದ್ದೆ
ಮುಟ್ಟಿದಂತಾಗಿ ನಾ ಹುಟ್ಟುಗೆಟ್ಟೆ।

ಬೆಟ್ಟ ಎರಡರ ಭೇದ। ಹುಟ್ಟುಗೆಂಟ್ಟಂಗಕ್ಕು ಇಬ್ಬಟ್ಟೆ
ಗೆಟ್ಟಾತಂಗೆ ಇಹಪರವು ಸರಿಯೆ।
ಕಟ್ಟುಗ್ರದಿಂದ। ಬಟ್ಟೆಯಜಿದರೆ ತಾನು
ಬಟ್ಟಬಯಲಪ್ಪನೈ ಶ್ರೀ ಮಲ್ಲಿಕಾರ್ಜುನಾ॥ ॥೧೨೧೯॥

ಆಜಾಖು ಓರಂತೆ। ಏನೇನನೆಂದಹರು
ಆರೈದುಯೆನ್ನುವನು ಸಲಹುತಿರ್ಪ।
ಸಾಲೋಕ್ಯ ಫಲಪದವಿ। ಮೀಜಿಪ್ಪ ಭ್ರಾಂತಂಗೆ
ಆರೆಂದರೇನನೇನು ಯೋಗಿನಾಥಾ॥ ॥೧೨೨೦॥

ಹುಟ್ಟುಗೆಟ್ಟಾ ಸೀಮೆ। ಬಟ್ಟ ಬಯಲಾಯಿತ್ತು
ಇಷ್ಟಲಿಂಗವು ಎನ್ನ ಕರಕೆ ಬರಲು।
ಕಷ್ಟ ಸಂಸಾರಕೆ। ಹುಟ್ಟುವುದ ಮೀಜೀಗ।
ನಿತ್ಯಪದ ನೀನಾದೆ ಯೋಗಿನಾಥ॥ ॥೧೨೨೧॥[ಅ-೬೨]

ಕರುಣ ಕಾನನದೊಳಗೆ। ಹೊಲಬುದಪ್ಪಿದೆ ಗುರುವೆ
ತೆಜಿಹಿಲ್ಲದಿದ್ದೆ ನಾ ನಿನ್ನ ಒಳಗೆ।
ಪರೀಕ್ಷಿಸಿ ಎನ್ನುವನು। ಪರಿಭವಕೆ ತಂದರೆ।
ಕೊಜಿತೆ ನಿನಗಪ್ಪುದೈ ಯೋಗಿನಾಥಾ॥ ॥೧೨೨೨॥

ನೀನೆನ್ನ ಮನದಲ್ಲಿ। ಓರಂತೆ ಇದ್ದುದನು
ಆರೈದು ಬಲ್ಲರೆ ಎನ್ನ ಗುಣವ।
ಸ್ವಾನುಭೂತ್ಯೈಕ್ಯ ನೀ।ನೆನ್ನ ಒಳಗಿರಲು
ಅದನಾರು ಬಲ್ಲರು ಗುರುವೆ ಯೋಗಿನಾಥ॥ ॥೧೨೨೩॥

ನಾ ಬಲ್ಲೆನೈ ನಿನ್ನ। ನೀ ಬಲ್ಲೆಯೈ ಎನ್ನ
ಆರಯ್ಯ ಬಲ್ಲನೈ ಬಸವಣ್ಣನು।
ಭಾನುವಿನುದಯದಲಿ। ಆದಿ ಅಕ್ಷರ ಭೇದದಾನತದ
ನೀನಾಗೆ ಬಸವಣ್ಣ ತಂದೆ॥

ಸೀಮೆಗೆಟ್ಟಾಲೋಕ।ವೇನಾದರೇನಯ್ಯ
ಆನು ನಿನ್ನೊಳಗಡಗಿ ಐಕ್ಯಪದದಾ।
ಆನತವನೆಯ್ದಿ ನಾ। ಕೂಡೆ ಸುಖಿಯಾದ ಬಳಿ
ಕೇನಾದರೇನಯ್ಯ ಯೋಗಿನಾಥಾ॥ ॥೧೨೨೪॥[I–೫೧೫]

ಹವಣಿಸುವ ಬ್ರಹ್ಮಾಂಡ। ಹವಣನಳಿವುದೆ ಯೋಗ
ವಿಮಲದೇಹವ ಮಾಳ್ಪುದದು ಪ್ರಸಾದವು।
ಕಮನೀಯ ಕಂದರರದ। ತೆಱಹುಗೆಟ್ಟಾ ಕುಱುಹು
ವಿಮಲ ದೇಹನುವಕ್ಕು ಯೋಗಿನಾಥಾ॥ ॥೧೨೨೫॥[ಅ–೧೧೧]

ಆರಣ್ಯದೊಳಗಿದ್ದೆ। ಆದಿಯಾಯಿತು ಎನಗೆ
ಆರಣ್ಯವೆ ನಿತ್ಯ ಮನೆಯು ಆಗಿ।
ಆರ್ಯೆದಿರ್ಯೆ ಗುರುವೆ। ಸಾಲೋಕ್ಯ ಪದದಿಂದ
ಮೀಱಿಸಿದಿರೆನ್ನುವನು ಯೋಗಿನಾಥಾ॥ ॥೧೨೨೬॥

ಕರುಣಾಕರನೆ ನಿನ್ನ।ನೆನಹಿನ ಮನೆಯೊಳಗೆ
ತೆಱಹಿಲ್ಲದೆಂದಿಪ್ಪೆ ಎಲೆ ಲಿಂಗಯ್ಯಾ।
ಒಲವಿಂದ ಶರಣರ। ಕರುಣ ಪಾದುಕೆಯನ್ನು
ಮನದ ಮಸ್ತಕದಲ್ಲಿ ಹೊತ್ತು ನಾನು।
ತೆಱಹಿಲ್ಲದಿಪ್ಪ ನಿರ್ವಾಣ ನಿತ್ಯಾನತದ।
ಕುಱುಹು ಮೀಱೂದೆಂದು ಯೋಗಿನಾಥಾ॥ ॥೧೨೨೭॥

ಅಭೇದ್ಯ ಕಾರಣನೆ। ಕರುಣರಸ ಸಂಗಮನೆ
ವಿಮಲ ನಿತ್ಯಜ್ಞಾನ ನಿಗಮತೀತ।
ಕರುಣಾಕರನೆ ಎನ್ನ। ಶರಣರ ಸಂಗದೊಳು
ನೆಲೆಯಾಗಿ ಇರಿಸಯ್ಯ ಯೋಗಿನಾಥಾ॥ ॥೧೨೨೮॥

ಎನ್ನ ನಿನ್ನವರೊಳಗೆ। ಮನ್ನಣೆಯಿಂದೀಗ
ಉನ್ನತೋನ್ನತ ಪದವ ನಾನು ಬಯಸಿ।

ಎನ್ನವರ ಶಿಶುಯೆಂದು। ಮನ್ನಣೆಯಿಂದ
ಸದು ಹೃದಯನ ಮಾಡು ಯೋಗಿನಾಥಾ॥ ॥೧೨೨೯॥

ದಾಯ ಮೀಜಿತು ಬಣ್ಣ। ಒಲವ ಮೀಜಿತು ಎನ್ನ
ಸಾಯುಜ್ಯ ಪದವನಾನತಿ ಮೀಜಿದೆ।
ಆರ್ಯೆದುಯೆನ್ನುವನು। ಓರಂತೆ ಮಾಡಿದಿರಿ
ಕಾರುಣ್ಯಕರನೆ ಶ್ರೀ ಮಲ್ಲಿಕಾರ್ಜುನಾ॥ ॥೧೨೩೦॥

ಹಸುಳೆಯಾಗಿಯು ನಾನು। ಕೆರೆ ಬಾವಿ ದೇವಾಲ್ಯವ
ರಚಿಸಿ ಭವಕೆ ಬಂದು ಫಲವನುಂಡು।
ನರಕಕ್ಕೆ ಬೀಳುವನು। ಕರುಣಕರದಿಂದೆತ್ತಿ
ಹೊರೆಯೊಳಗೆ ಇರಿಸಿದ ಗುರು ಬಸವ ಮಲ್ಲಿಕಾರ್ಜುನಾ॥ ॥೧೨೩೧॥

ದಾನಿಯೆಂದೆಂಬರು। ದಾನಕರನೆಂದೆನ್ನ
ಓರಂತೆ ನುಡಿವರ್ಯೆ ನಿನ್ನವರೆಲ್ಲರು।
ನಾನಾ ಗುಣವಡೆದವ। ದೇವತಾರಾಧ್ಯನೆ
ದಾನಕರಶೀಲನೆ ಶ್ರೀ ಮಲ್ಲಿಕಾರ್ಜುನಾ॥ ॥೧೨೩೨॥

ಅಕ್ಕಟಾ ನೀನೆನ್ನ। ತತ್ವ ಪದದೊಳಗಿರಿಸೆ
ತತ್ವಾರ್ಥವನು ಮೀಜಿದೆನು ನಿನ್ನವರ।
ಚಿತ್ತವಿಡಿದೋಲೈಸಿ। ಭಕಿಯೆನಗಾಯಿತ್ತೈ
ತತ್ವಮಸಿಯಾದೆನ್ಯೆ ಶ್ರೀ ಮಲ್ಲಿಕಾರ್ಜುನಾ॥ ॥೧೨೩೩॥

ಚಿತ್ತಶುದ್ಧಿಯಿಂದ। ಚಿತ್ತಶುಚಿಯಾದುದ್ಯೆ
ಅತ್ಯತಿಶುದ್ಧನೆ ನಿನ್ನನರ್ಚಿಸಲಿಕೆ।
ಚಿತ್ತದೊಳಗಿಂದಂದ। ಮತ್ತೆ ಕರ ಭವಿಸಲ್ಕೆ
ಅರ್ಚಿಸೂದಡಗಿತ್ತೈ ಶ್ರೀ ಮಲ್ಲಿಕಾರ್ಜುನಾ॥ ॥೧೨೩೪॥

ನುಡಿಯು ಬ್ರಹ್ಮದ ಒಳಗೆ। ಮರುಳಾದೆನಕ್ಕಟಾ
ನಡೆಯುಗೆಟ್ಟೆನು ಶುದ್ಧ ಸಾಯುಜ್ಯದಾ।
ಫಲವೊಲವ ಮೀಱಿದರೆ। ನೆಲೆಗೊಂಡುದ್ಯೆ ಭಕ್ತಿ
ತೆಱಹುಗೆಟ್ಟೆನು ಗುರುವೆ ಯೋಗಿನಾಥಾ॥ ॥೧೨೩೫॥

ಆದಿಯಾಧಾರ ಶೂನ್ಯನೆ। ವೇದ ಹದಿನಾಲ್ಕಕ್ಕತೀತನೆ
ಭೇದಿಸುವರಾರಯ್ಯ ಸ್ವತಂತ್ರ ಏಕೋದೇವ
ನೀನೆ ಕಾಣಾ ಯೋಗಿನಾಥ॥ ॥೧೨೩೬॥

ಆದಿ ಆಧಾರಂಗಳಿಲ್ಲದಂದು,
ಭೇದಿಸಿ ಹಿಡಿವ ಬ್ರಹ್ಮವಿಲ್ಲದಂದು,
ಮೂರ್ತಿಯೆಂಟಕ್ಕೆ ಮೂಲಸ್ವಾಮಿ
ನೀನೆ ಕಾಣಾ ಯೋಗಿನಾಥಾ. ॥೧೨೩೭॥

ನಾದ ಬಿಂದುವಿನೊಳಗೆ। ಸಾಧಿಸುವ ಬ್ರಹ್ಮಾಂಡ
ಆದಿ ಆಧಾರಕ್ಕೆ ಅಂತ್ಯ ನೀನೆ।
ಸೋಹಂ ಬ್ರಹ್ಮಾಂಡಕ್ಕೆ। ಕೋಹಂತು ಶೀಲನ್ಯೆ
ಆದಿಗನುಪಮ ನೀನೆ ಯೋಗಿನಾಥ॥ ॥೧೨೩೮॥

ಮುಟ್ಟಿದಂತೆ ಇರಿಸು। ಮರಳಿ ಮುಟ್ಟದಂತೆ ಮಾಡಾ
ಈ ಮುಟ್ಟೆಯು ಹುಟ್ಟಿ ಹೊಂದುತ್ತ ಎಂಬ
ಕಷ್ಟವನೇನೆಂಬೆನ್ಯೆ ಯೋಗಿನಾಥಾ॥ ॥೧೨೩೯॥

ಹಂಸೆ ಹರಿಣನನೇಱಿ। ಹಂಶೆಯ ನೀನೇಱರಿ
ಮರಣ ಕಾಲಕ್ಕೆ ಮತ್ತೆ ಮಂಗಳಾಂಗವಾಗಿ
ಕರುಣ ಕಾನನದೊಳಗೆ। ಓಲಾಡಿದುದ ಕಂಡು।
ಕರ ಹರುಷನಾದೆನ್ಯೆ ಯೋಗಿನಾಥಾ॥ ॥೧೨೪೦॥

ಎಂಟು ಮಠದಿಂದತ್ತ। ಘಂಟಾನಾದದ ಭೇದ
ಟೆಂಟಣಿಸುತಿಕ್ಕು ಮತ್ತೆ ಯುಗಪ್ರಳಯಕೆ।
ಪಂಚಮಠ ಮೂವತ್ತ। ಆಱ ಮೀಱಿದರೆ ಅದು ನಿನಗೆ
ನಿಶ್ಚಿಂತ ಮಠವಪ್ಪುದೈ ಯೋಗಿನಾಥಾ॥ ॥೧೨೪೧॥

ಎಂಟು ನಾಡಗಡಿಯಿಂದ। ಕಂಟಣಿಸುತೈದೆನೆ ಕಮಠ
ನಂಟಯಿಪ್ಪರ ಮನೆಯಲಿರಲೀಯನು॥
ಈ ಬಂಟುಮಾಡುವನು। ಕಮಠನಾ ಗತಿಯನೆ ಕಂಡು
ನಂಟಜ[ರು] ನಷ್ಟವಾದರೈ ಯೋಗಿನಾಥಾ॥ ॥೧೨೪೨॥

ಘಾತಕೂಪದ ಒಳಗೆ। ಅನೇಕ ಬ್ರಹ್ಮಾಂಡವೈ
ಪಾತಾಳದಿಂದತ್ತ ಮೂಲವರಿದು।
ಆನಂದಲೋಕದಲಿ। ನಿನ್ನನಱಿದರ್ಚಿಸಿದ
ಆತ ನೀನೆ ಕಾಣಾ ಯೋಗಿನಾಥಾ॥ ॥೧೨೪೩॥

ಎಂಟು ಮಠದಿಂದತ್ತ। ನಂಟನಾಯಿತು ಬ್ರಹ್ಮ
ಟೆಂಟಣಿಸುತೈತೆ ಕಾಲನ ಕಾಲನ।
ಗಂಟಲನು ಮುಱಿದು। ಕಾಲನ ಕೆಳಗೆ ಹಾಯಿಕಿದ ಆ
ನಂಟರವರೆ ನಿನಗೆ ಯೋಗಿನಾಥಾ॥ ॥೧೨೪೪॥

ಆನಂದಲೋಕದಲಿ। ಇಪ್ಪ ಅಕ್ಷರದ್ವಯವ
ಆರಿಗೆಯು ಭೇದಿಸಲು ಶಕ್ಯವಲ್ಲ।
ಆಮೋದ ಅಮೃತವನು। ಗುರು ಕರದಲಿಟ್ಟರೆ
ಆನು ನೀನಾದೆನೈ ಯೋಗಿನಾಥಾ॥ ॥೧೨೪೫॥

ಅಕ್ಷರಕ್ಕನ್ವಯವ। ಅಕ್ಷರಾಂಕದ ಭೇದ
ಅಕ್ಷರಕ್ಷರವು ನಿನ್ನಕ್ಷರವಲ್ಲೈ।
ಅಕ್ಷರದ್ವಯದಲ್ಲಿ। ಗ್ರಾಮ ಮೂಱನು ರಚಿಸಿ ನೀನು
ಸಾಕ್ಷರನು ಆದಯ್ಯ ಶ್ರೀ ಮಲ್ಲಿಕಾರ್ಜುನಾ॥ ॥೧೨೪೬॥

ಮೂಱು ಮೂಱೀ ಭವಿಸಿ। ಮೂಱು ಮತ್ತೆ ತಾನು
ಮೂಱು ಶಾಖಾತತ್ವಕಂತ್ಯ ತಾನು।
ಈ ಮೂಱು ತಾನೊಂದಾಗೆ। ಆದಿರುದ್ರನು ನೀನೆ ವಿಹಾದ
ಬಳಿಕ ಅಜೀವರಾರೊ ಶ್ರೀ ಮಲ್ಲಿಕಾರ್ಜುನಾ॥ ॥೧೨೪೭॥

ಮಣಿಯ ವಿರಳದ ಒಳಗೆ। ಸಕಲ ಬ್ರಹ್ಮಾಂಡವೈ
ಸಕಲಕೆ ತಾನೆಯದು ಬಹಳವಾಗಿ।
ವಿಕಳಗೆಟ್ಟಾ ಬ್ರಹ್ಮ। ತಾನಂತ್ಯವಾದರೆ
ಸಕಲ ನಿಷ್ಕಲ ನೀನೆ ಶ್ರೀ ಮಲ್ಲಿಕಾರ್ಜುನಾ॥ ॥೧೨೪೮॥

ಮುನ್ನಾದಿಯಲಿ ತಂದ। ಉನ್ನತೋನ್ನತವನು
ಇನ್ನಾರಿಗೆಯು ತಾನು ಅಱಿಯಲರಿದು
ಸನ್ನುತದ ಮನ್ನಣೆ। ಆದರೆ ಇನ್ನು।
ಎನಗೇನರಿದು ಯೋಗಿನಾಥಾ॥ ॥೧೨೪೯॥

ಮನ್ನಣೆಯ ಬ್ರಹ್ಮಾಂಡ। ಎನ್ನ ಮೇಗಾಗಲ್ಕೆ
ಇನ್ನು ಸಕಲಕ್ಕೆ ಗುರು ನಾನು ನಾನ್ಯೆ।
ಉನ್ನತ ಶಕ್ತಿ ತಾ। ಸಾಹಿತ್ಯವಾದರೆ
ಇನ್ನೆನಗೆ ಅರಿದೇನು ಯೋಗಿನಾಥಾ॥ ॥೧೨೫೦॥

ಯೋಗಭೂಷಣ ನಿಮ್ಮ। ಆದಿ ಅಕ್ಷರಭೇದ
ಸಾದಾಖ್ಯ ದೇಹಿಗಳಿಗವರಿಗರಿದು।
ಆದಿಬ್ರಹ್ಮಾಂಡವನು। ಮೇದಿನಿಯ ಒಳಗಿಟ್ಟು
ನೋಡಬಲ್ಲಡೆ ಯೋಗ ಯೋಗಿನಾಥಾ॥ ॥೧೨೫೧॥

ಬೆರಳನೂಱಿದ ಬ್ರಹ್ಮ। ಸಕಲ ನಿಷ್ಕಲಕಾಗಿ
ದೆಸೆದೆಸೆವರಿವುತಿರ್ದುದೈ ಸಕಲವಾಗಿ।
ಈ ಕಾಲು ಬ್ರಹ್ಮಾಂಡ।ವನು ಮೀಱಿಪ್ಪ ಭೇದವನು
ಆರು ಬಲ್ಲರು ಗುರುವೆ ಯೋಗಿನಾಥಾ॥ ॥೧೨೫೨॥

ಬಿಂದು ಭೇದವನಜಿತು। ದಂದ ದಂದವನಜಿತು
ಹಿಂದು ಮುಂದುಗೆಟ್ಟೆ ಅನುವನಜಿದು।
ಈ ಹಿಂದೆ ಮುಂದುಗೆಟ್ಟು ಅವು ಬಂದು ಆಡಲ್ಕೆ
ದಂದಗೆಡುವೆನು ಯೋಗಿನಾಥಾ॥ ॥೧೨೫೩॥

ಎಲವೆಲವೊ ಮೂಜಗದ। ಪರಿಯಲ್ಲ ಶಿವಯೋಗ
ಒಡವಿರ್ದ ಬ್ರಹ್ಮಾಂಡದಂತ್ಯವಲ್ಲ।
ಒದವಿರ್ದ ಸಾಯುಜ್ಯ। ಪದವ ಮೀಜಿದ ಭಕ್ತಿ
ಮದಕರಿಗೆ ಅಪ್ಪುದೈ ಯೋಗಿನಾಥಾ॥ ॥೧೨೫೪॥[ಸಂ-೯೧]

ಎರಡೆಂಟು ಗ್ರಾಮದಿಂ। ನಡುವಿಪ್ಪ ಭಕ್ತಿಯನು
ಈ ನುಡಿಯ ಬೊಮ್ಮದವರಿಗೆ ಕಾಣಲರಿದು।
ಸದಮಲದ ಸಾಯುಜ್ಯ। ಜ್ಞಾನ ಸಾನಂದರಿಗೆ
ಅಜಿಯಲಹುದೈ ಯೋಗಿನಾಥಾ॥ ॥೧೨೫೫॥

ಒಲಿದು ಅರ್ಚಿಸದಿರೈ। ಒಲುಮೆಯವನವನಲ್ಲ
ಮುನ್ನಲಾದಿಯಲದ ಆನಂದವ।
ತನ್ನ ಮೇಲಿಕ್ಕಿದರೆ । ಮನ್ನಿಸುವನೆ ಶಿವನು
ತನ್ನ ಧ್ಯಾನಾನಂದ ಆಜೂಢದ।
ಉನ್ನತದ ಫಲಪದವ। ಬಯಸದೆ ನೆನೆವರಿಗೆ
ತನ್ನ ಪದವೀವನೈ ಯೋಗಿನಾಥಾ॥ ॥೧೨೫೬॥

ಸೀಮೆಗೆಟ್ಟಾನಂದ। ಸಾಯುಜ್ಯ ಪದ ಮೀಜಿ
ಕಾಮ್ಯಾರ್ಥವನುವಾಗೆ ಪ್ರಸಾದಕೆ।
ಆನು ನೀನುಯೆಂಬ। ಭೇದ ಸಂದಳಿದರೆ
ಸೋಮಧರ ನೀನಪ್ಪೆ ಯೋಗಿನಾಥಾ॥ ॥೧೨೫೭॥

ತನುಮನದ ಮಧ್ಯದಲಿ। ನೆನಹುಗೆಟ್ಟವ ಯೋಗಿ
ಅನುಕರಿಸದಿಪ್ಪವನು ದಿವ್ಯಯೋಗಿ।

ನೆನಹಿನ ಬ್ರಹ್ಮಾಂಡ। ತನ್ನೊಳಗೆ ಅಡಗಿದರೆ
ಸಕಲ ನಿಷ್ಕಲಯೋಗಿ ಯೋಗಿನಾಥಾ॥ ॥೧೨೫೮॥

ಈರೈದು ಗ್ರಾಮದಲಿ। ಓರಂತೆ ಇದ್ದರೆ
ಆತನನು ಸ್ವತಂತ್ರ ಸೀಮನೆಂಬೆ।
ಸ್ಥೂಲ ಬ್ರಹ್ಮಾಂಡದಿಂ। ಮೇಲೆ ಕೆಸಱಾದರೆ
ಆತನನು ಸ್ಥೂಲ ರುದ್ರನುಯೆಂಬೆ ಯೋಗಿನಾಥ॥ ॥೧೧೫೯॥

ಆಱು ಮಠದಾಳಾಪ। ಮೀಱಿ ತನ್ನಲಿ ಇಕ್ಕೆ
ತೋಱಿಪ್ಪುದೈ ಸಕಲತತ್ವ ರೂಪು।
ಆಱಾಱನತಿಗಳೆದು। ಮೇಲಾಱನಱಿದರೆ
ಆಱೂಢದಾ ಶರಣನಾತ ಯೋಗಿನಾಥಾ॥ ॥೧೨೬೦॥

ಸದ್ಭಕ್ತಿ ಸಾಹಿತ್ಯ ಎಲ್ಲರಿಗೆ ಅಪ್ಪುದೆ
ಮಧ್ಯವಹ ಮುಖದಲ್ಲಿ ರೀತಿಯೈಸೆ।
ಆಧ್ಯಾತ್ಮವನು ಮೀಱಿ। ಸದ್ಭಕ್ತಿಯಾದರೆ
ನಿತ್ಯ ಮುಕ್ತನುವಾತ ಯೋಗಿನಾಥ॥ ॥೧೨೬೧॥

ನದನಾತಿಯೆಂದೆಂಬ। ಏಳಕ್ಷರದ ಭೇದ
ಎಯ್ದಿತ್ತು ಈರೇಳು ಲೋಕಕಾಗಿ।
ಅಯ್ಯೇನವ್ಯಯದ ಪದದಲೊಪ್ಪಿಪ್ಪ ಭೇದವನು
ಒಯ್ಯನೆ ಕಂಡನೈ ಯೋಗಿನಾಥಾ॥ ॥೧೨೬೨॥

ಮುನ್ನ ಮೂವತ್ತಾಱು। ಮನ್ನಣೆಯ ತತ್ವವನು
ಬಿನ್ನಾಣದಿಂದಱಿತು ಮಱೆದೆ ನಾನು।
ಎನ್ನನೆ ಮನ್ನಿಸಿಯೆ। ನಿನ್ನಂತೆ ಮಾಡಿದರೆ
ಸೊಮ್ಮ ಮೀಱಿದ ತತ್ವ ಯೋಗಿನಾಥಾ॥ ॥೧೨೬೩॥

ತವಕಿಸುವ ತತ್ವದ। ಹೆಸರ ಹೇಳಲಿಕಾನು
ದೆಸೆಗೆಟ್ಟೆನಯ್ಯಾ ಯೋಗದ ಬಳಿಯಲಿ॥
ಹೆಸರಿಲ್ಲದೂರಿನಲಿ। ಹೊಸ ಬಂಟ ನಾ ಹೋಗೆ
ಹಿಡಿದು ಕಟ್ಟಿದ ಯೋಗ ಯೋಗಿನಾಥಾ॥ ॥೧೨೬೪॥

ಪಂಚಮ ಬ್ರಹ್ಮಾಂಡ। ಹಂಚುಮಾಡಿತು ಯೋಗ
ಸಂಚಲಿಸುತ್ತೈದೂತೆ ನಿತ್ಯಕಾಗಿ।
ಪಂಚಾಕ್ಷರಿಯ ಭೇದ। ಚಿಂತೆಗೆಟ್ಟಿದ್ದರೆ
ಸಂಚಳವು ಹಿಡಿದನ್ನೈ ಯೋಗಿನಾಥಾ॥ ॥೧೨೬೫॥

ಅಕ್ಷರಾಂಕದ ಭೇದ। ಒಪ್ಪಿಪ್ಪ ಚಿಂತೆಯನು
ಸಚ್ಚಿದಾನಂದ ಮುಖ ಕಾಣಲರಿದು।
ಪಶ್ಚಿಮಮುಖದಲ್ಲಿ ಒಸರುವ ಅಮೃತವನುಂಡು
ನಿಶ್ಚಿಂತನಾದೆನ್ನೈ ಯೋಗಿನಾಥಾ॥ ॥೧೨೬೬॥

ತನು ಮನ ಧನದಲ್ಲಿ। ವಂಚನೆಯಿಲ್ಲದೆ
ನಿರ್ವಂಚನ ಮಾಡು ಯೋಗಿನಾಥಾ।
ಮನದ ಮಧ್ಯಾತ್ಮನನು। ಆನಂದದಲ್ಲಿರಿಸಿ
ಮನವ ನಿರ್ಮಳಮಾಡು ಯೋಗಿನಥಾ॥ ॥೧೨೬೭॥

ನಾದಬ್ರಹ್ಮದ ಒಳಗೆ। ಆದಿ ಅಕ್ಷರಭೇದ
ಆದ ಸಾದಾಖ್ಯರಿಗೆ ಕಾಣಲರಿದು।
ಭೇದಿಸುವ ತತ್ವಾರ್ಥ।ವಜೆದಾತ ತಾನೀಗ
ಆದಿ ಬ್ರಹ್ಮನುವಾತ ಯೋಗಿನಾಥಾ॥ ॥೧೨೬೮॥

ಹಮ್ಮಿನ ಬ್ರಹ್ಮಾಂಡ। ತನ್ನೊಳಗೆ ಅಡಗಿದರೆ
ಸೊಮ್ಮಿಲ್ಲ ಕಾಣಾ ಸದ್ಯೋ ಮುಕುತಿಯಾ।
ಸೊಮ್ಮು ಸಾಯುಜ್ಯದ। ಕರಗೆಟ್ಟು ಬೊಮುನಿ
ಇನ್ನು ನೀ ನಾನಯ್ಯ ಯೋಗಿನಾಥಾ॥ ॥೧೨೬೯॥

ಆದಿ ಅಕ್ಷರಭೇದ। ಆದ ಸಾದಾಖ್ಯದಲಿ
ಮೋದ ಆಮೋದದಿಂದನುಕರಿಸುವಾ॥
ನಾದ ಪಂಚಮಬ್ರಹ್ಮ। ಆದಿ ಅಕ್ಷರಭೇದ
ಭೇದಿಸುವೊಡರಿದಯ್ಯ ಭಕ್ತಿಯೋಗ ಶ್ರೀ ಮಲ್ಲಿಕಾರ್ಜುನಾ॥ ॥೧೨೭೦॥

ನಿರ್ಮಳ ಜ್ಞಾನದಲಿ। ಸೊಮ್ಮುಗೆಟ್ಟಾ ಸೀಮೆ
ಕರ್ಮವಾಜಿಜಿ ತುದಿಯೊಳಂತ್ಯವದಕೆ।
ನಿರ್ಮಳಜ್ಞಾನದಲಿ ಸೊಮ್ಮುಗೆಟ್ಟಾನಂದ
ನಿಃಕರ್ಮಿಯಾದೆನ್ನೈ ಯೋಗಿನಾಥಾ॥ ॥೧೨೭೧॥

ಮದದಿಂದ ಮದಕರಿಯ। ಹದುಳ ಮಾಡಿಯೆ ಕಟ್ಟಿ
ವದನ ಸುದ್ದಿಯ ಮಾಡು ಸಂಯೋಗದಾ।
ಸದಮಲಜ್ಞಾನ। ಚಿನ್ಮಯ ಚಿತ್ಪ್ರಕಾಶನೆ
ಶ್ರೀ ಮಲ್ಲಿಕಾರ್ಜುನಾ॥ ॥೧೨೭೨॥

ಇಂಬಪ್ಪ ಕೋಣೆಯಲಿ। ಸಂಭ್ರಮದ ಸಂಯೋಗ
ಶಂಭು ನಿನ್ನಯ ಕೂಟವಿತ್ತೆಜಿನಾಗಿ।
ಕಂಬನಿಯ ಕಾನನದ। ಇಂಬುಗೆಟ್ಟು ಕೂಟ
ಶಂಬರಾರಿಯ ವೈರಿ ಯೋಗಿನಾಥಾ॥ ॥೧೨೭೩॥

ಹೊನ್ನು ಹೆಣ್ಣು ಮಣ್ಣು। ಅಣ್ಣದವರುಂಟೆ ಹೇಳಯ್ಯಾ
ಕಣ್ಣ ಕಾನನದೊಳಗೆ ಮುಕ್ಕಣ್ಣನಾದರೆಯು
ಕಣ್ಣಗೆಡುವುದು ಸಿದ್ಧ ಯೋಗಿನಾಥಾ॥ ॥೧೨೭೪॥

[1][ಚೆನ್ನೆಯರ][1] ಬಲೆಯೊಳಗೆ। ಎನ್ನನಿಕ್ಕಿದೆ ತಂದೆ
ಇನ್ನು ಮನಸಿಜಾತನು ಬೇಂಟೆಕಾಜಿ।
ಈ ಮನ್ನಣೆಯ ನಾಯಿಗಳು। ಐದೆನ್ನ ಕಚ್ಚದ
ಮುನ್ನ ನೀ ಕೂಡಿಕೊ ಯೋಗಿನಾಥಾ॥ ॥೧೨೭೫॥

೧-೧ ರಿಂಗೆಯದ(ಮೂ)

ಹೆಣ್ಣೆಂಬ ದುರ್ಗದಲಿ ಎನ್ನ ನಾ ಮಱೆದೆನ್ನೆ
ಕರ್ಮವಾಱಱವೊಳಗೆ ದಗ್ಧವಾದೆ।
ನಿರ್ಮಲ ಜ್ಞಾನಾನಲ ಪ್ರಕಾಶನೆ
ಎನ್ನ ನಿನ್ನಂತೆ ಮಾಡು ಯೋಗಿನಾಥಾ॥ ॥೧೨೭೬॥

ಕಾಯ ಹೊಮ್ಮೃಗಕೀಗ। ನಾಮವಾದುದು ಮೂಱು
ಆಱೂಢದಾ ಬಲೆಯು ಎನ್ನ ಮೀಱಿ।
ತೋಱಿಪ್ಪ ಸೀಮೆಯನು। ಮೀಱೀನೆಂದಡೆ
ಗಾಱಾದೆನ್ನೆ ಗುರುವೆ ಯೋಗಿನಾಥಾ॥ ॥೧೨೭೭॥

ತನು ತನಗೆಂದಡೆ। ಮನದಾಜ್ಞೆಯಾಗೀಗ
ತನುವಿಂಗೆ ವಿಧಿಯ ಹೇಳುವೆ ಶಿವನೆ।
ಮನಸಿಜನ ಬಾಣಕ್ಕೆ। ಸಿಕ್ಕಿ ಮಱುಗುವೆ
ಮನಕೆ ಕರುಣರಸವೀಯಯ್ಯ ಯೋಗಿನಾಥಾ॥ ॥೧೨೭೮॥

ಕಂಗಳಿಂ ಬೇಟೆಯಲಿ। ಇಂಬಾಗಿರ ಬಯಸಿದ
ಶಂಭು ನಿನ್ನಯ ವೈರಿಗೆನ್ನುವನ್ನು।
ಒಪ್ಪಿಸದೆ ನಿನ್ನಯ। ಕಂದನೆಂದಾನತದ
ಸೊಮ್ಮಿನೊಳಗಿರಿಸಯ್ಯ ಯೋಗಿನಾಥಾ॥ ॥೧೨೭೯॥

ಅಯ್ಯೋ ಮಹಾದೇವ। ಆಱೆನಯ್ಯಾ ಸುಕೃತ
ದುಃಕೃತಂಗಳನು ಉಂಡು ಭವಕೆ ಬಂದು।
ಅಯ್ಯಾ ಕಾಮನ। ಕಾಲನ ಕಾರ್ಪಣ್ಯಕೆ
ಅಯ್ಯ ನಾನಱಿ[ಯೆ]ನ್ನೆ ಯೋಗಿನಾಥಾ॥ ॥೧೨೮೦॥

ದೆಸೆದೆಸೆಗೆ ಪಸರಿಸಿತು। ಹರುಷವಾಯಿತು ನಿನ್ನ
ಬಿರಿದುವಾನತವೆಂದು ಕರುಣಕರನೆ।
ದೆಸೆಗೆಟ್ಟ ಸಾಯುಜ್ಯ। ಪದದೊಳಗೆ ಇರಿಸಿದ್ಯೆ
ದೆಸೆಗೆಟ್ಟ ಪದವಿಯ್ಯೆ ಯೋಗಿನಾಥಾ॥ ॥೧೨೮೧॥

ಅನುಪಮನೆ ಅಪ್ರತಿಮ। ಕುಱುಹಿಲ್ಲದ ಭವನೆ
ತೆಱಹುಗೆಟ್ಟೆನು ನಾನು ನಿನ್ನ ಪದಕೆ।
ಅನುಪಮನೆ ನಾ ನಿನ್ನ। ನಾಮ ಡಿಂಗರಿಗನು
ಘನ ತಾಪವನು ಕೆಡಿಸು ಮಲ್ಲಿಕಾರ್ಜುನಾ॥ ॥೧೨೮೨॥

ಬಲ್ಲಹನೆ ಆ ನಿನ್ನ। ಸೊಲ್ಲ ನಂಬಿದೆನಯ್ಯ
ನಿಲ್ಲೆ ನಿಲ್ಲೆನು ಸಕಲ ಕರ್ಮಂಗಳಾ।
ಬಲ್ಲಿಹ ಬಗೆಗಳನು। ಹಱಿದು ನಿನ್ನಂಗಕೆ
ಉಳ್ಳವನು ಆನಪ್ಪೆ ಯೋಗಿನಾಥಾ॥ ॥೧೨೮೩॥

ಸಂದು ಸವೆದೊಂದಾದ। ದಂದವನು ನೋಡಿರೆ
ಹಿಂದು ಮುಂದಿದ್ದೆಸೆಯುಗೆಟ್ಟು ಒಂದು।
ಬಂದು ಬಾರನುಯೆಂಬ। ಸಂದೇಹವನು ಕಳೆದು
ಹಿಂದು ಮುಂದಱಿಯಿಸೈ ಯೋಗಿನಾಥಾ॥ ॥೧೨೮೪॥

ಕರುಣಾಕರನೆ ಎನ್ನ। ದೆಸೆಗೆಟ್ಟ ಪಶುವನು
ಹಸಗೆಡಿಸುವುದು ನಿನಗೆ ಉಚಿತವೆ ಹೇಳಾ।
ಸಕಲ ಸಾನಂದನೆ। ಆನಂದ ರೂಪನೆ
ವಿಕಲವನು ಮಾಣಿಸೈ ಯೋಗಿನಾಥಾ॥ ॥೧೨೮೫॥[ಸಂ–೧೯]

ಅನ್ಯಾಯದಿಂದೈದು। ನಾಯ ಕಟ್ಟಿ ಅವನು
ಬಿನ್ನಾಣದಿಂ ಬೇಂಟೆಯಾಡುತಿರ್ಪ।
ಎನ್ನ ಕಂಡಡೆ ತನ್ನ ಹೊ।ಮೃಗವು ಎಂದೆಸುವ
ಇನ್ನೇವೆನೈ ಗುರುವೆ ಮಲ್ಲಿಕಾರ್ಜುನಾ॥ ॥೧೨೮೬॥[ಸಂ–೨೪]

ನೀನೆಂದಡವನೀಗ। ಆಱು ಬೇಲಿಯ ಕಳೆವ
ಆಱೂಢವನು ಮಾಳ್ಪ ನಿನ್ನ ಪದಕೆ।
ಆರೈದು ಎನ್ನುವನು। ಓರಂತೆ ನೋಡದಡೆ
ಆನವಗೆ ಗುಱಿಯಪ್ಪೆ ಮಲ್ಲಿಕಾರ್ಜುನಾ॥ ॥೧೨೮೭॥

ಇತ್ತಜಿದ ಸೀಮೆಯನು। ಹೊತ್ತಿಪ್ಪ ಬ್ರಹ್ಮಾಂಡ
ತತ್ವಮಸಿಯಿಂದತ್ತಲಾದ ಸೀಮಾ।
ಮತ್ತೆ ತಮಂಧದಲಿ। ಹೊತ್ತಿ ಹೋಗುವುತ್ತಿಹೆನೆ
ಭಕ್ತಿಯೀಯ್ಯೆ ಗುರುವೆ ಮಲ್ಲಿಕಾರ್ಜುನಾ॥ ॥೧೨೮೮॥

ತನು ಮನದ ಮಂಟಪದ ನಡುವಿಪ್ಪ ಗಂಡನೆ
ಮಲತ್ರಯದ ಮದನು ಕೆಡಿಸುವೆನ್ನ।
ಘನವಾದ ಶಿಲೆ ಬಿಗಿದು। ನೀನಿಪ್ಪ ಅಂಗಳವ
ತೆಜಿಹು ಮಾಡ್ಯೆ ಗುರುವೆ ಮಲ್ಲಿಕಾರ್ಜುನ॥ ॥೧೨೮೯॥

ಈ ಕಲ್ಮಷದ ಅಜ್ಞಾನ। ಕಸವು ಬೀಳದ ಮುನ್ನ
ನಿರ್ಮಳಜ್ಞಾನದಿಂ ಪುಟ್ಟಿಸಯ್ಯಾ।
ಕರ್ಮ ವೈರಾಗ್ಯ ಭಕ್ತಿ ಜ್ಞಾನ॥ ಗೋಮಯಲು ಘನಮನೆಯ
ಶುದ್ಧಮಾಡು ಮಲ್ಲಿಕಾರ್ಜುನಾ॥ ॥೧೨೯೦॥

ಅಯ್ಯೋ ಮಹಾದೇವ। ಸುಮ್ಮನೇಕಿರ್ದಪೆ ಕರುಣ
ಮುಂಬಾಗಿಲಲು ಬಿದ್ದ ಪಶುವೈ॥
ಓರಂತೆ ಎನ್ನುವನು। ಆರೈಯದಿದ್ದಡೆ।
ಹಾನಿ ನಿನಗಪ್ಪುದೈ ಮಲ್ಲಿಕಾರ್ಜುನಾ॥ ॥೧೨೯೧॥

ಆರೈದು ಎನ್ನುವನು। ಇತ್ತ ಬಾಯೆಂದೆನ್ನು
ಓರಂತೆ ಮಾಡಯ್ಯ ನಿನ್ನವರೊಳು।
ದ್ವಾರ ಕಿನ್ನರನಾಗಿ। ಇರಿಸಯ್ಯ ಭಕ್ತರ
ದ್ವಾರದೊಳಗೆನ್ನುವನು ಮಲ್ಲಿಕಾರ್ಜುನಾ॥ ॥೧೨೯೨॥

ಎನ್ನ ಘನ ಪಾಶವು। ನಿನ್ನ ಬೆರಸಲೀಯದೆ
ಎನ್ನನೆಳತಟಮಾಡಿ ಕಾಡುತಿಹವೈ॥
ಎನ್ನ ಗುರು ನಿನಗಾಗಿ। ಎನ್ನ ಹಾನಿ ವೃದ್ಧಿ।
ನಿನ್ನನೆಯಿದುವುದಯ್ಯ ಯೋಗಿನಾಥಾ॥ ॥೧೨೯೩॥ [ಅ-೧೦]

ದಂದವಾಯಿತು ಮಠವು। ಮಂದಮತಿ ಅದಱೊಳಗೆ
ಮುಂದಱೆಯದಾನೀಗ ವರ್ಗಂಗಳಾ।
ಆನಂದಪದವನು ಬಯಸಿ। ಮಂದಮತಿಯಾದೆನೈ
ತಂದೆ ಎನ್ನುವನು ಸಲಹು ಯೋಗಿನಾಥಾ॥ ॥೧೨೯೪॥

ನಾದ ಬ್ರಹ್ಮಾಂಡದಿಂ।ದಾದಿಯಪ್ಪುದು ನಿನ್ನ
ನಾಮ ಬ್ರಹ್ಮಾಂಡದಲಿ ಸಕಲವೆಲ್ಲ।
ಸಾದಾಖ್ಯ ಚಿತ್ತವನು । ಶುದ್ಧಮಾಡೈ ಗುರುವೆ
ಮೂದೇವರೊಡೆಯನೆ ಯೋಗಿನಾಥಾ॥ ॥೧೨೯೫॥ [ಅ-೭]

ತನು ಮನದ ಮಲವನು। ಕಳೆದು ಎನ್ನುವ ನಿಮ್ಮ
ಘನ ಪದದೊಳಗೆ ಇರಿಸು ತಂದೆ।
ಘನಪಾಶದೂರ ಶ್ರೀ। ಗುರುವೆ ಮನ್ನಣೆಯಿಂದ
ಸಲಹು ಎನ್ನನು ಸಿದ್ಧ ಯೋಗಿನಾಥಾ॥ ॥೧೨೯೬॥ [ಅ-೯]

ಶುದ್ಧಸಾಹಿತ್ಯವನು। ಮಾಡಿರಿ ಗುರುವೆ ನೀವು
ಸಿದ್ಧಸಾಹಿತ್ಯಕೆ ಮಠವಿತ್ತಿರಿ।
ಪ್ರಸಿದ್ಧಸಾಹಿತ್ಯದಾ।ನತವನೈದಿದ
ಶುದ್ಧ ಗುರು ನೀನಯ್ಯ ಯೋಗಿನಾಥಾ॥ ॥೧೨೯೭॥ [ಅ-೨೨]

ಎರಡೆಂಟನತಿಗಳೆದು। ಮನಮಧ್ಯದಲಿರಿಸಿ
ನೆನಹಿನ ಜ್ಞಾನ ನಯನದಲಿ ನಿಮ್ಮ
ಘನ ಪ್ರಭೆಯನೀಕ್ಷಿಸುವ। ಪದವೀವುದೈ ಗುರುವೆ
ವಿಮಲ ಶುದ್ಧಾತ್ಮನೆ ಯೋಗಿನಾಥಾ॥ ॥೧೨೯೮॥ [ಅ-೧೩]

ದೇವ ನಿಮ್ಮಯ ನಾಮ। ಕಾಹಲ್ಲದೆನಗೀಗ
ದೇಹಿಕವಾನೆನ್ನಲೇನುವುಂಟು।
ಆರೈದು ಎನ್ನುವನು। ಓರಂತೆ ಮಾಡಿದಡೆ
ಹಾನಿ ನಿನಗಪ್ಪುದೈ ಯೋಗಿನಾಥಾ॥ ॥೧೨೯೯॥[ಸಂ-೨೧]

ಶರಣ ದೇಹಿಕ ದೇವ। ಕರುಣಾಕರನೆ ನಿಮ್ಮ
ಹೊರೆಯನೆಯ್ದಿನೆಂಬ ಭರವು ಎನಗೆ।
ಕರುಣಾಕರನೆ ನಿಮ್ಮ।ನಮರ್ಚಿಸಿಯೆಯ್ದುವೊಡೆ
ಮುಯಿನಂತನೆ ನಾನು ಯೋಗಿನಾಥಾ॥ ॥೧೩೦೦॥

ಧಾರುಣಿಯ ಒಳನೀಗ। ಓರಂತೆ ಭಕ್ತಿ ಗಂಭೀರ
ವಾರುಧಿ ಹೆಚ್ಚಿ ಪರಿವುತಿರಲು।
ನಾರಿ ನಿನ್ನಯ ಮಸ್ತಕದ ಮಹಾಕುಂಭದೊಳು
ವಾರುಧಿಯು ಅಱತಡೆ ಬೆಱಗಾದೆನ್ನೈ।
ನಾರಿ ನಿನ್ನಯ ಕೂಡಿ।ದಾಱೂಢ ಕೂಟವನು
ಆರು ಬಲ್ಲರು ಗುರುವೆ ಯೋಗಿನಾಥಾ॥ ॥೧೩೦೧॥

ಮೂಱು ಮುನ್ನಾದವರು। ಮೂಱೊಂದುವಾದವರು
ಆಱೂಢದೈಕ್ಯಕ್ಕೆ ತಾವೆ ತಾವೆ।
ಆನಂದದವ್ಯಯದ। ಕೂಟ ಸಂಯೋಗದ
ಸ್ವಾನುಭಾವನಱಿದಾತ ಗುರು ಯೋಗಿನಾಥಾ॥ ॥೧೩೦೨॥

ಏಳೆಂಟು ಸೀಮೆಯನು। ಮೀಱಿದಾತನು ತಾನು
ಆಱೇಳನತಿಗಳೆದ ನಿತ್ಯ ತಾನು।
ಆಱೂಢದ ಭಕ್ತಿ। ಊರ ದಾರಿಯ ಕೆಡಿಸಿದಾತ
ಗುರು ತಾನಯ್ಯ ಯೋಗಿನಾಥಾ॥ ॥೧೩೦೩॥

ಸೀಮೆ ಸಾಯುಜ್ಯವನು। ಮೀಱಿದಾತನು ಗುರು
ನಾಮ ನಿರ್ನಾಮವಾದಾತ ಗುರುವೈ।
ಸೋಮ ಪ್ರಭೆಯಿಂದತ್ತ।ಲಾದ ಪಾವನನಾತ
ಆದಿ ಅಕ್ಷರವಱಿದ ಆತ ಗುರುವೈ।
ನಾದ ಬಿಂದು ಕಳೆ।ಯಾಗಿಯಱಿದಾತನು
ಅಭೇದ್ಯ ಗುರು ಬಸವಣ್ಣ ಮಲ್ಲಿಕಾರ್ಜುನಾ॥ ॥೧೩೦೪॥

ತತ್ವ ಪ್ರಾಪಂಚಿಕವ। ಸುತ್ತಲೀಯದೆ ನಿಂದು
ತತ್ವಾರ್ಥದಿಂದತ್ತ ತುರಿಯನಾಗಿ।
ಮುಕ್ತಿ ಮೂಱಱ ಒಳಗೆ। ಮುನ್ನಾದಿ ಕೂಡಿದಡೆ
ತತ್ವಮಸಿಯಪ್ಪೆನೈ ಯೋಗಿನಾಥಾ॥ ॥೧೩೦೫॥

ಅಂತರಿಕ್ಷಣ ನಿನ್ನ। ಚಿಂತೆಗೆಟ್ಟಿತು ಬೊಮ್ಮ
ಸಂತುಷ್ಟನಾದೆನೈ ಸಂಯೋಗದ।
ಕಂತುವಿದಳನದಳದ। ಕರ್ಣಿಕಾ ಮಸ್ತಕದ
ಚಿಂತೆಗೆಟ್ಟಾ ಬೊಮ್ಮ ಯೋಗಿನಾಥಾ॥ ॥೧೩೦೬॥

ಸಾಕಲ್ಯ ತತ್ವದಲಿ। ಸಾಧಾರಣನುವಾದೆ
ಅನೇಕ ವಿಧದಿಂದಲಾನು ನಿತ್ಯನಾದೆ।
ಆಧಾರಸ್ಥಾನ। ಆದಿಗೆಟ್ಟಾ ಬ್ರಹ್ಮ
ಹೋದುದೈ ನಿಃಕ್ರೀಗೆ ಮಲ್ಲಿಕಾರ್ಜುನಾ॥ ॥೧೩೦೭॥

ಸತ್ವರಜಧಾತುವನು। ನಿಷ್ಠೆಯಿಂದವೆ ಮೀಱ
ಸುಟ್ಟು ಕಳೆಯಿತ್ತಯ್ಯಾ ತನುಗುಣಗಳ ಈ।
ಹುಟ್ಟುವ ಹೊಂದುವ। ಕಷ್ಟತನವಂ ಕಂಡು
ಬಟ್ಟ ಬಯಲಾದೆನೈ ಯೋಗಿನಾಥಾ॥ ॥೧೩೦೮॥

ತನುವೆ ಮಹಾದೇವ। ಮನದೊಡೆಯನೆ ನೀವು
ಘನಪಾಶವನು ಹಱಿಯಿಸಯ್ಯ ತಂದೆ।
ಮನದ ಮಲಿನವ ಕಳೆದು। ಕರುಣ ಕಾರುಣ್ಯದಾ
ಪದ ರಸದೊಳಗದ್ದು ಯೋಗಿನಾಥಾ॥ ॥೧೩೦೯॥

ಆರು ಬಲ್ಲರು ದೇವ। ಮೂಱೊಂದುವಾದುದನು
ಆಱೂಢದಿಂದತ್ತಲಾದ ಶರಣ।
ಈರೈದು ಪಟ್ಟಣವ। ಓರಂತೆ ಆರೈಯೈ
ಆಱೂಢದವರೀಗ ಯೋಗಿನಾಥಾ॥ ॥೧೩೧೦॥

ತತ್ವಮಸಿಯಿಂದತ್ತ। ಮಿಥ್ಯವಾಯಿತು ಯೋಗ
ತಥ್ಯವಾಯಿತ್ತಯ್ಯ ಭಕ್ತಿಯೋಗ।
ವ್ಯರ್ಥವಪ್ಪೀ ದೇಹ ನಿತ್ಯವಾದುದ ಕಂಡು
ಮತ್ತೆ ನಂಬಿದೆನಯ್ಯ ಯೋಗಿನಾಥಾ॥ ॥೧೩೧೧॥[I-೪೩೯]


ಅನುಪಮನೆ ನಾ ನಿನ್ನ। ಹವಣನಱಿಯಲಿಕೆನಗೆ
ಘನಮತಿಯೆ ಪ್ರಜ್ವಲ್ಯವೆ ಹೇಳಯ್ಯ ಎನ್ನ।
ಮನದೊಡೆಯ ನೀನಱಿಯ। ತನುವಿನಂಗದ ಪರಿಯ
ಕರುಣಾಕರನೆ ಸಲಹು ಮಲ್ಲಿಕಾರ್ಜುನಾ॥ ॥೧೩೧೨॥

ಸಂಸಾರಸಾಗರಕೆ। ಹಡಗು ನೀನ್ನೆ ಗುರುವೆ
ತಡಿಗೆ ಬಾಚೈಯೆನ್ನ ನಿಷ್ಕಳದಲಿ।
ಕರುಣ ಕಾನನದೊಳಗೆ। ಈಡಾಡದಿರ್ದಡೆ
ಕೊಱತೆ ನಿನಗಕ್ಕಯ್ಯ ಯೋಗಿನಾಥಾ॥ ॥೧೩೧೩॥

❖❖

ವಚನಗಳ ಅಕಾರಾದಿ

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ:97390 67359